


ವಿಶ್ವ ಕೊಂಕಣಿ ಸಾಹಿತ್ಯ - 20
ಶ್ರೀ ಬಸ್ತಿ ವಾಮನ ಶೆಣೈ ಆತ್ಮಕಥನ
ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ
ಅನುವಾದ
ಡಾ ಗೀತಾ ಶೆಣೈ

ಶ್ರೀ ಬಸ್ತಿ ವಾಮನ ಶೆಣೈಯವರು ಮೂಲತಃ ಗಾಂಧಿವಾದಿಗಳು. ಅವರ ನಡೆ-ನುಡಿಯಲ್ಲಿ ಗಾಂಧಿವಾದದ ನೈಜ ಆದರ್ಶದ ಛಾಪು ಗೋಚರವಾಗುತ್ತದೆ. ಹಿಂದೆ ಖಾದಿ ಬಟ್ಟೆಗಳ ಮಾರಾಟ ಆಂದೋಲನದಲ್ಲಿ ಮುಂಚೂಣಿಯಲ್ಲಿದ್ದ ಅವರು, ಸಿಂಡಿಕೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿದ್ದಾಗ ಮುಖ್ಯವಾಗಿ ಬಡವರಿಗೆ ಮತ್ತು ರೈತರಿಗೆ ವಿಶೇಷ ನೆರವು, ಸಾಲ ಸೌಲಭ್ಯಗಳನ್ನು ನೀಡಿ ಮಾನವೀಯತೆ ಮೆರೆದಿದಾರೆ. ಕೊಂಕಣಿ ಭಾಷೆಯನ್ನು ಉಳಿಸಿ, ಬೆಳೆಸುವ ಕಾಯಕದಲ್ಲಂತೂ ಶ್ರೀ ಶೆಣೈ ಅವರು ಸದಾ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಆರ್. ವಿ. ದೇಶಪಾಂಡೆ

The most thrilling and the most visually commanding task Basti undertook with such unparallel success is setting up the World Konkani Centre built on a 3-acre plot called World Konkani Centre at Shakti Nagar, Mangalore. It is a master-stroke. What has struck me in all these years has been Vamanbab's humility.

M.V. Kamath

It may not be an exaggeration to say that, but for the selfless service of our Vishwa Konkani Sardar Shri Basti Vaman Shenoy, no building or any activities would have come into existence. Even at this advanced age, he will go from place to place.

Dr. P. Dayananda Pai

Basti Vaman Shenoy brings an uncommon passion in everything he does, and his enthuisiasm is both infectious and inspiring. He is dedicated to the cause of bringing inspiration, a strong spirit of kinship and joy.

K.V. Kamath

Shri Bastu Vanan Shenoy is a National Treasure and a living legend of the Konkani speaking people. Throughout his life he has striven to preserve and protect the Konkani language and culture. A man of great foresight and vision, tireless in his approach, dedicated and committed to the cause of Konkani.

T.V. Mohandas Pai

The contribution of Shri Basti Vaman Shenoy to Konkani language is colossal. The World Konkani Centre and the Konkani Language and Cultural Foundation with its singular objective of preserving and promoting Konkani language, art, culture, literature and folklore.


Madam Grace Pinto

Basti Vamanmam has wide ranging contacts which have helped him to execute schemes for the welfacre of Konkani- speaking youth and for building the grand edifice of Vishwa Konkani Kendra, which today is a hub of activities ranging from Information Technology to culture.

Adv. Uday L. Bhembre


It is a true honor to convey my deepest appreciation to you through this letter. Your attendance at the First Konkani Sammelan in 1996 rekindled the Konkani spirit in North America. On behalf of the North American Konkani Community, I can say that we are really indebted to your humble service.

Vasanth Bhat



An inscription in Konkani at the foot of one of the largest monolithic statue in the world. The statue of Lord Gomateshwara was created around 983 A.D. by Chamundaraya, a Minister of the Ganga King, Rajamalla.

ಶ್ರೀ ಬಸ್ತಿ ವಾಮನ ಶೆಣೈ ಆತ್ಮಕಥನ



ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ

ಕೊಂಕಣಿಯಿಂದ ಕನ್ನಡಕ್ಕೆ

ಡಾ. ಗೀತಾ ಶೆಣೈ

ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ
ವಿಶ್ವ ಕೊಂಕಣಿ ಕೇಂದ್ರ, ಶಕ್ತಿನಗರ, ಕೊಂಕಣಿಗಾಂವ
ಮಂಗಳೂರು – 575016

VISHWA KONKANI SAHITYA - 20
Orva Bhikshuka Chakravarthiya Kathe (Kannada)
The autobiography of Basti Vaman Shenoy
Translated from Konkani by Dr. Geetha Shenoy

First Edition : 2016

Pages : XX+280

Copies : 1000

Paper used :

Size:

Price: Rs. 400/-

Cover Design : Sowmya Kalyankar

ಮೂಲ ಕೊಂಕಣಿ : ಬಸ್ತಿ ವಾಮನ ಶೆಣೈ

ಕನ್ನಡಕ್ಕೆ : ಡಾ. ಗೀತಾ ಶೆಣೈ

ಮೊದಲ ಮುದ್ರಣ : ೨೦೧೬

ಪುಟಗಳು : xx + 280

ಪ್ರತಿಗಳ ಸಂಖ್ಯೆ : ೧೦೦೦

ಬೆಲೆ : ರೂ. ೪೦೦/-

ISBN : 978-83-82582-08-3


ಮುಖಪುಟ : ಸೌಮ್ಯ ಕಲ್ಯಾಣ್‌ಕರ್

ಪ್ರಕಾಶಕರು :

ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ
ವಿಶ್ವ ಕೊಂಕಣಿ ಕೇಂದ್ರ, ಶಕ್ತಿನಗರ, ಕೊಂಕಣಿಗಾಂವ
ಮಂಗಳೂರು – ೫೭೫೦೧೬

ಅಕ್ಷರ ಜೋಡಣೆ ಮತ್ತು ಮುದ್ರಣ

ಸ್ನೇಹಾ ಪ್ರಿಂಟರ್ಸ್
ನಂ. 16, 1ನೇ ಬಿ ಮುಖ್ಯರಸ್ತೆ, ಶ್ರೀ ರಾಘವೇಂದ್ರ ಮಠದ ರಸ್ತೆ,
ಪಾಪರೆಡ್ಡಿಪಾಳ್ಯ 11ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು - ೭೨



ಡಿ. ವೀರೇಂದ್ರ ಹೆಗ್ಗಡೆಯವರು

ಶ್ರೀ ಧರ್ಮಸ್ಥಳ - 574 216
ದಕ್ಷಿಣ ಕನ್ನಡ, ಕರ್ನಾಟಕ
✆ : ಕಛೇರಿ : (08256) 277121
Fax : 277116
E-Mail : [illegible]@gmail.com

ಸಂದೇಶ

ಶ್ರೀ ಬಸ್ತಿ ವಾಮನ ಶೆಣೈ ಅವರು ಕೊಂಕಣಿ ಭಾಷೆಯಲ್ಲಿ ಬರೆದ ಆತ್ಮ ಚರಿತ್ರೆಯನ್ನು ಖ್ಯಾತ ಸಾಹಿತಿ ಡಾ. ಗೀತಾ ಶೆಣೈಯವರು ಕನ್ನಡಕ್ಕೆ ಭಾಷಾಂತರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.

ಶ್ರೀ ಶೆಣೈಯವರು ನನಗೆ ಅನೇಕ ವರ್ಷಗಳಿಂದ ಚಿರಪರಿಚಿತರು. ಸದಾ ಹಸನ್ಮುಖಿಯಾಗಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಅವರು ಅನುಪಮ ಸೇವೆ ಸಲ್ಲಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ಅವರು ಕೊಂಕಣಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ಉತ್ತಮ ಸೇವೆ ಮಾಡಿದ್ದಾರೆ.

ನನ್ನ ಪೂಜ್ಯ ತಂದೆಯವರಾದ ಕೀರ್ತಿಶೇಷ ರತ್ನವರ್ಮ ಹೆಗ್ಗಡೆಯವರು ಅನೇಕ ವರ್ಷ ಬಂಟ್ವಾಳದಲ್ಲಿ ವಾಸ್ತವ್ಯ ಇದ್ದರು. ಅಂದು ಅವರ ಹೆಚ್ಚಿನ ಸ್ನೇಹಿತರು ಗೌಡ ಸಾರಸ್ವತ ಬ್ರಾಹ್ಮಣ (ಜಿ.ಎಸ್.ಬಿ.) ಸಮಾಜದವರು. ಅಂದಿನಿಂದಲೂ ಆ ಸಮಾಜದವರಿಗೆ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಾರ ಭಕ್ತಿ, ಗೌರವ, ವಿಶ್ವಾಸವಿದೆ.

ಶ್ರೀ ಬಸ್ತಿ ವಾಮನ ಶೆಣೈ ಅವರು ತಮ್ಮ ಆತ್ಮ ಕಥನವನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಬಳಿಕ ಕಳೆದ 60 ವರ್ಷಗಳಲ್ಲಿ ಅಪಾರವಾದ ಪ್ರಗತಿ ಆಗಿದೆ. ಶಿಕ್ಷಣ, ಆರೋಗ್ಯ, ಕೃಷಿ, ಉದ್ಯಮ ಮೊದಲಾದ ರಂಗಗಳಲ್ಲಿ ಅನೇಕ ಸುಧಾರಣೆಗಳಾಗಿವೆ. ಈ ಎಲ್ಲಾ ಬೆಳವಣಿಗೆ, ಪ್ರಗತಿ, ಸುಧಾರಣೆಗಳನ್ನು ಕಂಡ ಹಿರಿಯ ಅನುಭವಿಗಳು ಶ್ರೀ ಶೆಣೈಯವರು. ಅವರಿಗೆ ಸಾಹಿತಿಗಳು, ರಾಜಕಾರಣಿಗಳು, ಸಮಾಜ ಸುಧಾರಕರುಗಳು ಹಾಗೂ ಶ್ರೀ ಸಾಮಾನ್ಯರ ಪರಿಚಯ ಚೆನ್ನಾಗಿ ಇದೆ. ಸಂಪರ್ಕವೂ ಇದೆ. ತಮ್ಮ ಅಪೂರ್ವ ಜೀವನಾನುಭವವನ್ನು ಶ್ರೀ ಶೆಣೈಯವರು ಆತ್ಮ ಕಥನದಲ್ಲಿ ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಅಭಿನಂದನೆಗಳು.

ಸಾಹಿತ್ಯ ಕ್ಷೇತ್ರಕ್ಕೆ ಇದೊಂದು ಅಮೂಲ್ಯ ಕೊಡುಗೆಯಾಗಿದೆ.

ಕೃತಿ ಪ್ರಕಾಶನಾ ಕಾರ್ಯ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಡಿ. ವೀರೇಂದ್ರ ಹೆಗ್ಗಡೆ

(ಡಿ. ವೀರೇಂದ್ರ ಹೆಗ್ಗಡೆಯವರು)



ಮೊದಲ ಮಾತು

೧೯೯೫ರಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಪರಿಕಲ್ಪನೆ ಮಂಗಳೂರಿನಲ್ಲಿ ಮೂರ್ತರೂಪವನ್ನು ತಾಳಿದ ಸಂದರ್ಭದಲ್ಲಿ ನಾನು ಗೌರವಪೂರ್ವಕವಾಗಿ 'ಶೆಣ್ಯೈಮಾಮ'ರೆಂದು ಕರೆಯುವ ಶ್ರೀ ಬಸ್ತಿ ವಾಮನ ಶೆಣ್ಯೈಯವರ ನಿಕಟ ಸಂಪರ್ಕಕ್ಕೆ ನಾನು ಬಂದೆ. ಕೊಂಕಣಿ ಸಮುದಾಯ, ಕೊಂಕಣಿ ಭಾಷೆ, ಕೊಂಕಣಿ ಸಂಸ್ಕೃತಿ ಮತ್ತು ಕೊಂಕಣಿ ಪರಂಪರೆಯನ್ನು ವೃದ್ಧಿಗೊಳಿಸುವ ಕುರಿತು ಅವರಲ್ಲಿದ್ದ ಉತ್ಸಾಹ ಮತ್ತು ಉನ್ನತ ಆದರ್ಶಗಳನ್ನು ನೋಡಿ ಅವರ ಸರಳ ವ್ಯಕ್ತಿತ್ವದ ಕುರಿತು ನನ್ನ ಮೆಚ್ಚುಗೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಯಿತು.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ವೈಭವೋಪೇತ ಮತ್ತು ಉಲ್ಲಾಸದಾಯಕ ಆಚರಣೆಯು ದಾಖಲಿಸಿದ ಅಭೂತಪೂರ್ವ ಯಶಸ್ಸಿಗಾಗಿ ನಾನು ಅವರಲ್ಲಿದ್ದ ದೃಢಸಂಕಲ್ಪ, ದಣಿವರಿಯದ ಸೇವೆ, ಮತ್ತು ಸಮರ್ಥ ಮುಂದಾಳುತನದ ಗುಣಧರ್ಮ ಹಾಗೂ ಅವರ ಸಮರ್ಪಣಾಭಾವದ ಯುವಜನರ ಪಂಗಡಕ್ಕಾಗಿ ಹಾರ್ದಿಕ ಅಭಿನಂದನೆಯನ್ನು ಸಲ್ಲಿಸಿದ್ದೆ. ವಿಶ್ವ ಕೊಂಕಣಿ ಸಮ್ಮೇಳನದ ಯಶಸ್ಸಿನ ದೊಡ್ಡಪಾಲು ಮತ್ತು ಕೀರ್ತಿ ಶ್ರೀ ಶೆಣ್ಯೈಮಾಮರಿಗೆ ಸಲ್ಲಬೇಕಾಗಿದೆ. ಅವರನ್ನು 'ವಿಶ್ವ ಕೊಂಕಣಿ ಸರದಾರ'ರೆಂದು ಹೆಸರಿಸಿ ಕರೆಯುವುದು ಅತ್ಯಂತ ಸಮರ್ಥನೀಯವಾಗಿದೆ. ಸಮ್ಮೇಳನದ ನಂತರ ಶೆಣ್ಯೈಮಾಮರ ಉತ್ಸಾಹ ಕುಂದಲಿಲ್ಲ. ಈ ದೊಡ್ಡ ಸಮಾರಂಭವು ಮುಗಿದ ಕೂಡಲೇ, ಅವರು ತಮ್ಮ ಕೆಲವು ಆಪ್ತ ಸ್ನೇಹಿತರೊಂದಿಗೆ ಹಿಂದು, ಕ್ರೈಸ್ತ ಮತ್ತು ಮುಸ್ಲಿಮ್ ಸಮುದಾಯಗಳ ಬಹುಪಾಲು ಕೊಂಕಣಿ ಭಾಷಿಕರ ಕೇಂದ್ರವಾಗಿ ಮಂಗಳೂರಿನಲ್ಲಿ ವಿಶ್ವ ಕೊಂಕಣಿ ಕೇಂದ್ರವನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡರು. ಈ ಕಾರ್ಯದಲ್ಲಿ ಶೆಣ್ಯೈಮಾಮರಿಗೆ ನನ್ನದೇ ಆದ ಸಣ್ಣ ರೀತಿಯ ಬೆಂಬಲ ಒದಗಿಸುವ ಸದವಕಾಶ ನನಗೆ ದೊರೆತಿದೆ. ಅವರು ಇನ್ನೂ ಅನೇಕ ಕೊಂಕಣಿ ಭಾಷಿಕ ವ್ಯಕ್ತಿಗಳ ಬೆಂಬಲದೊಂದಿಗೆ ತಮ್ಮ ಕನಸುಗಳನ್ನು ನನಸಾಗಿಸಲು ಶಕ್ತರಾಗಿ, ಮಂಗಳೂರಿನ ಶಕ್ತಿನಗರದಲ್ಲಿ 'ವಿಶ್ವ ಕೊಂಕಣಿ ಕೇಂದ್ರ'ದ ಸಾಕಾರವಾಗಿದೆ. ಈ ವಾಸ್ತುಶಿಲ್ಪದ ವರ್ಚಸ್ವೀ ಅದ್ಭುತವು(ಕೇಂದ್ರವು) ಶ್ರೀ ಟಿ.ವಿ ಮೋಹನದಾಸ ಪೈ ಮತ್ತು ಶ್ರೀ ಯು. ರಾಮದಾಸ ಕಾಮತ್ ಅವರಂತಹ ಅನೇಕ ವ್ಯಕ್ತಿಗಳ ಆಕರ್ಷಣಾ ಕೇಂದ್ರವಾಗಿ ಪರಿಣಮಿಸಿ, ಅವರು ವಿಶ್ವ ಕೊಂಕಣಿ ಕೇಂದ್ರದ ಚಟುವಟಿಕೆಗಳು ಎಲ್ಲಾ ದಿಕ್ಕುಗಳಲ್ಲಿ ಪಸರಿಸಲು ಬೆಂಬಲ ನೀಡುವಂತಾಗಿದೆ.

ನಮ್ಮ ಈ 'ಕೊಂಕಣಿ ಸರದಾರ'ರ ನಿಸ್ವಾರ್ಥ ಸೇವೆ ದೊರೆಯದೇ ಹೋಗಿದ್ದರೆ ಕೊಂಕಣಿಗೆ ಸಂಬಂಧಿಸಿದ ಯಾವುದೇ ಕಟ್ಟಡವಾಗಲೀ, ಚಟುವಟಿಕೆಗಳಾಗಲೀ ಅಸ್ತಿತ್ವಕ್ಕೆ ಬರುವುದು ಸಾಧ್ಯವಿರಲಿಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇಂದಿನ ಮತ್ತು ಮುಂದಿನ ಪೀಳಿಗೆಯ ಕೊಂಕಣಿ ಭಾಷಿಕರು ಈ ಶ್ರೇಷ್ಠ ವ್ಯಕ್ತಿತ್ವಕ್ಕೆ ಎಂದೆಂದಿಗೂ ಋಣಿಯಾಗಿ ಇರಬೇಕು.

ಕೆಲವರಿಗೆ ಶ್ರೇಷ್ಠತೆಯನ್ನು ಆರೋಪಿಸಲಾಗುತ್ತದೆ. ಇನ್ನು ಕೆಲವರು ಶ್ರೇಷ್ಠತೆಯನ್ನು ಸಾಧಿಸಿಕೊಳ್ಳುತ್ತಾರೆ. ಪ್ರೀತಿಯ ಶೆಣೈಮಾಮರು ಎರಡನೆಯ ಗುಂಪಿಗೆ ಸೇರುವ ಅಸಾಮಾನ್ಯ ವ್ಯಕ್ತಿಯಾಗಿದ್ದಾರೆ. ಅವರು ಮನವೊಲಿಸುವ ವ್ಯಕ್ತಿತ್ವದವರು ಮತ್ತು ಅಗಾಧ ಶಕ್ತಿಯ ಚಲನಶೀಲ ವ್ಯಕ್ತಿ. ತನ್ನ ಗಮನಾರ್ಹ ಸಾಧನೆಯಿಂದ ಎಲ್ಲರಿಗಿಂತ ಎತ್ತರದಲ್ಲಿರುವವರು. ದೈವಭಕ್ತಿಯುಳ್ಳವರಾಗಿ ತನ್ನ ಹುಟ್ಟೂರು ಬಂಟವಾಳದ ಶ್ರೀ ವೆಂಕಟರಮಣ ದೇವರಲ್ಲಿ ದೃಢನಿಷ್ಠೆಯನ್ನು ಹೊಂದಿರುವವರು.

ಒಟ್ಟಿನಲ್ಲಿ ಹೇಳುವುದಾದರೆ, ಶೆಣೈಮಾಮರನ್ನು ಹತ್ತಿರದಿಂದ ತಿಳಿಯಲು ಮತ್ತು ಅವರೊಂದಿಗೆ ಕಾರ್ಯ ನಡೆಸಲು ಮತ್ತು ಅದ್ಭುತ ವ್ಯಕ್ತಿಯಾಗಿ ಅವರ ಎಲ್ಲಾ ಗುಣಲಕ್ಷಣಗಳನ್ನು ಮೆಚ್ಚಿಕೊಳ್ಳುವ ಸುಯೋಗ ನನಗೆ ಒದಗಿ ಬಂದಿದೆ. ಈ ಮಾಗಿದ ವಯಸ್ಸಿನಲ್ಲಿಯೂ ಅವರು ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ಸಂಬಂಧಿಸಿದ ವ್ಯಕ್ತಿಗಳನ್ನು ಭೇಟಿಯಾಗಿ ಕೊಂಕಣಿ ಭಾಷಿಕರು, ಕೊಂಕಣಿ ಭಾಷೆ ಮತ್ತು ಪರಂಪರೆಯ ಕುರಿತಾಗಿ ಮನವೊಲಿಸಬಲ್ಲವರಾಗಿದ್ದಾರೆ.

'ನಾವು ನಮಗಾಗಿ ಮಾಡಿರುವುದು ನಮ್ಮೊಂದಿಗೆ ಅಳಿದು ಹೋಗುತ್ತದೆ, ನಾವು ಬೇರೆಯವರಿಗಾಗಿ ಮಾಡಿರುವುದು ಶಾಶ್ವತವಾಗಿ ಉಳಿಯುತ್ತದೆ' ಎಂಬ ಅಪ್ಪಟ ಸತ್ಯದ ಮಾತಿದೆ. ಇನ್ನು, 'ಒಬ್ಬ ವ್ಯಕ್ತಿ ಎಷ್ಟು ವರ್ಷಗಳ ಕಾಲ ಬದುಕಿದ್ದಾನೆ ಎನ್ನುವುದು ಮುಖ್ಯವಲ್ಲ, ಅವನು ಹೇಗೆ ಬದುಕಿದ್ದ ಎನ್ನುವುದು ಮುಖ್ಯ'ವೆಂದು ಹೇಳುವುದುಂಟು. ಈ ಎರಡೂ ಹೇಳಿಕೆಗಳು ನನ್ನ ಪ್ರೀತಿಯ ಶೆಣೈಮಾಮರಿಗೆ ಅನ್ವಯಿಸುತ್ತವೆ. ನಮ್ಮ ಕೊಂಕಣಿ ಭಾಷಿಕ ಸಮುದಾಯದಲ್ಲಿ ಅವರು ಅಪರೂಪದ ಪ್ರಕಾಶಮಾನ ರತ್ನವಾಗಿದ್ದಾರೆ.

ಸರಳ ಮತ್ತು ಶ್ರೇಷ್ಠ ವ್ಯಕ್ತಿತ್ವದ ಶೆಣೈಮಾಮರಿಗೆ ಎಂಬತ್ತು ವರ್ಷ ಎಂದು ಕೇಳಿ ಮನಸ್ಸು ತುಂಬಿಬಂದಿದೆ. ಶೆಣೈಮಾಮರಿಗೆ ವಯಸ್ಸು ಬರೀ ಸಂಖ್ಯೆ ಮಾತ್ರ, ಅವರಲ್ಲಿ ಇಪ್ಪತ್ತರ ಹರೆಯದ ಉತ್ಸಾಹ ಮತ್ತು ಹುರುಪು ತುಂಬಿದೆ. ನಾನು ಅವರಿಗೆ ಉತ್ತಮ ಆರೋಗ್ಯ, ಸಂತೋಷ ಮತ್ತು ಮನಶ್ಶಾಂತಿಯನ್ನು ಹಾಗೂ ಇನ್ನೂ ಹೆಚ್ಚಿನ ಅದ್ಭುತವಾದ ಮತ್ತು ಸಂಕಲ್ಪದ ವರ್ಷಗಳನ್ನು ಹಾರೈಸುತ್ತೇನೆ. ಭವಿಷ್ಯದ ದಿನಗಳಲ್ಲಿ ಕೊಂಕಣಿ ಭಾಷೆ ಮತ್ತು ಕೊಂಕಣಿ ಸಾಹಿತ್ಯದ ಬೆಳವಣಿಗೆಗೆ ಅವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ದೇವರು ಅವರಿಗೆ ಸ್ಫೂರ್ತಿ ನೀಡಲಿ.

ಬೆಂಗಳೂರು

ಡಾ. ಪಿ. ದಯಾನಂದ ಪೈ

ಪ್ರಸ್ತಾವನೆ

ನನ್ನ ಆತ್ಮಕಥನಕ್ಕೆ 'ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ' ಎಂಬ ಹೆಸರು ಯಾಕೆ ಎಂಬ ಪ್ರಶ್ನೆ ಕಾಣಿಸಿಕೊಳ್ಳುವುದು ಸಹಜ. ನಾನು ಹುಟ್ಟಿದ ಬಳಿಕ ನಾನು ಬೆಳೆದು ಬಂದ ರೀತಿ, ನಡೆದು ಬಂದ ದಾರಿಯ ಅವಲೋಕನವನ್ನು ನಡೆಸಿದರೆ ಶ್ರೀಮಂತನಾಗಿರದ ಓರ್ವ ಬಸ್ ಏಜೆಂಟರ ಮಗ, ಒಂದು ಸಾಮಾನ್ಯ ಕುಟುಂಬದಿಂದ ಬಂದವನು, ನ್ಯಾಯವಾದಿ, ವೈದ್ಯ ಅಥವಾ ಇಂಜಿನಿಯರ್ ಆಗಿರದೆ ಬರೀ ಮೆಟ್ರಿಕ್ ತರಗತಿ ಮಾತ್ರ ಉತ್ತೀರ್ಣನಾದವನು, ಮನೆತನದ ಹೆಸರು ಅಥವಾ ಅದರ ಪ್ರಭಾವಲಯವಿಲ್ಲದವನು, ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬೆಳೆದು ಬಂದಿದ್ದರೂ, ಒಟ್ಟು ಕೊಂಕಣಿ ಸಮಾಜದಲ್ಲಿ ಮಾತ್ರವಲ್ಲ, ಇತರ ಸಮಾಜದಲ್ಲಿಯೂ ಉನ್ನತ ಸ್ಥಾನ ಪಡೆದು, ದೊಡ್ಡ ವ್ಯಕ್ತಿಗಳಾಗಲೀ, ಚಿಕ್ಕ ವ್ಯಕ್ತಿಗಳಾಗಲೀ 'ಈತ ನಮ್ಮವನು, ಈತ ನನ್ನವನು' ಹೀಗೆ ಹೃದಯದಲ್ಲಿ, ಮನಸ್ಸಿನಲ್ಲಿ ತಿಳಿದುಕೊಳ್ಳುವ ಹಾಗಿನ ಬದುಕು ದೊರೆತದ್ದು ನನ್ನ ವಿಶೇಷ ಭಾಗ್ಯ. ನನ್ನ ಆರಾಧ್ಯ ದೇವರು ಶ್ರೀ ವೆಂಕಟರಮಣ ಸ್ವಾಮಿ, ಧರ್ಮಗುರು ಕಾಶೀ ಮಠಾಧೀಶರಾದ ಶ್ರೀಮದ್ ಸುಧೀಂದ್ರತೀರ್ಥ ಸ್ವಾಮೀಜಿಯವರ ಆಶೀರ್ವಾದ ಮತ್ತು ನನ್ನ ತಂದೆ, ತಾಯಿ ಮತ್ತು ನನ್ನ ಜೀವನದ ಉತ್ಕರ್ಷಕ್ಕೆ ಮೂಲರಾದ ಶ್ರೀ ಟಿ.ಎ.ಪೈ ಅವರು ಇದಕ್ಕೆ ಕಾರಣರೆಂದು ನನ್ನ ನಂಬಿಕೆ. ಇದೇ ರೀತಿ ನನಗೆ ನಿರಂತರ ಮಾರ್ಗದರ್ಶನ ನೀಡಿದ ಮಣಿಪಾಲದ ಶ್ರೀ ಕೆ.ಕೆ. ಪೈ ಮತ್ತು ನನ್ನ ಬದುಕಿನ ಬೇರೆ ಬೇರೆ ಕಾಲಾವಧಿಗಳಲ್ಲಿ ನನ್ನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾಕಾರ್ಯಗಳಿಗೆ ಬೆಂಬಲ ನೀಡಿದ, ಆರ್ಥಿಕ ಬಲ ನೀಡಿದ ಶ್ರೀ ಬಂಟವಾಳ ನಾರಾಯಣ ನಾಯಕ್, ಶೀ ಅಹಮ್ಮದ ಹಾಜಿ ಮೊಹಿಯುದ್ದೀನ (ತುಂಬೆ), ಶ್ರೀ ಬಂಟವಾಳ ದಾಮೋದರ ಪ್ರಭು, ನನ್ನ ಬದುಕಿನ 'ಶಿಖರ ದರ್ಶನ'ವಾಗಿ ಘಟಿಸಿದ ವಿಶ್ವ ಕೊಂಕಣಿ ಕೇಂದ್ರ ಕಾರ್ಯರೂಪಕ್ಕೆ ಬರಲು ವಿಶೇಷ ಬೆಂಬಲ ನೀಡಿದ ಶ್ರೀ ಆರ್.ವಿ. ದೇಶಪಾಂಡೆ, ಡಾ. ಪಿ. ದಯಾನಂದ ಪೈ, ಶ್ರೀ ರೊನಾಲ್ಡ್ ಕೊಲಾಸೊ ಅವರಿಗೆ ನಾನು ಹೃದಯಪೂರ್ವಕವಾಗಿ, ಮನಃಪೂರ್ವಕವಾಗಿ 'ನಮೋ' ಎನ್ನುತ್ತೇನೆ.

ಸುಮಾರು ಮೂರು ಕೋಟಿ ವೆಚ್ಚದಲ್ಲಿ "ಪಿ.ದಯಾನಂದ ಪೈ, ಪಿ. ಸತೀಶ್ ಪೈ ವಿಶ್ವ ಕೊಂಕಣಿ ಕೇಂದ್ರ"ದ ನಿರ್ಮಾಣ ಕಾರ್ಯ ಮುಗಿದು ನನ್ನ ದರ್ಶನ ಮೂರ್ತ ಸ್ವರೂಪ ಪಡೆದ ಬಳಿಕ ದೇವಮಾನವರಾಗಿ ಬಂದ ದಾರ್ಶನಿಕ ಶ್ರೀ ಟಿ.ವಿ. ಮೋಹನದಾಸ ಪೈ ಅವರು ವಿಶ್ವ ಕೊಂಕಣಿ ಕೇಂದ್ರಕ್ಕೆ ತಮ್ಮದೇ ಆದ ಹೊಸದೊಂದು 'ಟಿವಿಎಮ್-೨೦೩೦ ದರ್ಶನ'ವನ್ನು ಕಾಣಿಸಿ, ವಿಶ್ವ ಕೊಂಕಣಿ ವಿದ್ಯಾರ್ಥಿವೇತನ ನಿಧಿ ಯೋಜನೆಯ ಮೂಲಕ ಕೊಂಕಣಿ ಭಾಷಿಕ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ದೊರೆಯಬೇಕು ಮತ್ತು ನಮ್ಮ ತರುಣರು, ತರುಣಿಯರು ದೇಶ, ಪರದೇಶಗಳಲ್ಲಿ ಸಮಾಜದ ಭವಿಷ್ಯದ ನೇತಾರರಾಗಿ ಮೂಡಿ ಬರಬೇಕು ಎನ್ನುವ ಅವರ ಒಂದು ಮಹಾನ್ ಯೋಜನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ ಮತ್ತು ಆ ಯೋಜನೆಯಿಂದ ವಿಶ್ವ ಕೊಂಕಣಿ ಕೇಂದ್ರವು ೩-೪ ವರ್ಷಗಳೊಳಗೆ ಜಗದ್ವಿಖ್ಯಾತವಾಗಲು ಕಾರಣವಾಗಿದೆ. ವಿಶ್ವ ಕೊಂಕಣಿ ವಿದ್ಯಾರ್ಥಿವೇತನ ನಿಧಿಯ ಅಧ್ಯಕ್ಷರಾದ ಶ್ರೀ ರಾಮದಾಸ ಕಾಮತ್ ಯು. ಮತ್ತು ಕಾರ್ಯದರ್ಶಿಗಳಾದ ಶ್ರೀ ಪ್ರದೀಪ ಜಿ. ಪೈ, 'ಟಿವಿಎಮ್-೨೦೩೦ ದರ್ಶನ' ಯಶಸ್ವಿಯಾಗಲು ಶ್ರಮ ಪಡುತ್ತಿದ್ದಾರೆ. ಇದಲ್ಲದೆ, ನನ್ನ ವಿಶ್ವ ಕೊಂಕಣಿ ಕಾರ್ಯಗಳಲ್ಲಿ ನನ್ನ ಮೇಲೆ

ಅಭಿಮಾನವಿಟ್ಟುಕೊಂಡಿರುವ ಶ್ರೀ ಕುಡ್ವಿ ಜಗದೀಶ ಶೆಣೈ, ದಿ. ಶ್ರೀ ಎಂ. ರಘನಾಥ ಶೇಟ್, ಶ್ರೀ ವೆಂಕಟೇಶ್ ಎನ್. ಬಾಳಿಗಾ ಇವರು ಬಹಳಷ್ಟು ಕಷ್ಟ ಅನುಭವಿಸಿ ಶ್ರಮಪಟ್ಟಿದ್ದಾರೆ.

ಬಂಟವಾಳದಲ್ಲಿ ನನ್ನ ಸಾಮಾಜಿಕ, ಧಾರ್ಮಿಕ ಕಾರ್ಯಗಳು ಮತ್ತು ಯಶವಂತ ವ್ಯಾಯಾಮ ಶಾಲೆಯ ಕಾರ್ಯಕ್ರಮಗಳು ಯಶಸ್ವಿಯಾಗಿ ನನ್ನ ಜನ್ಮ ಸಾರ್ಥಕತೆಯನ್ನು ತಲುಪುವುದರಲ್ಲಿ ನನ್ನ ಜೊತೆಗಿದ್ದ ಶ್ರೀ ಏರ್ಯ ಲಕ್ಷ್ಮಿನಾರಾಯಣ ಆಳ್ವ, ಶ್ರೀ ಬಿ. ಜನ್ನ ಶೆಟ್ಟಿ, ಶ್ರೀ ಬಿ. ಶ್ರೀನಿವಾಸ ನಾಯಕ, ಮುಂಡ್ಕೂರ ವೇದವ್ಯಾಸ ಪ್ರಭು, ಬೊಳಂತೂರು ರವಿದಾಸ ಪೈ, ಪೈಲೋಡಿ ನಾರಾಯಣ ಕಾಮತ, ಮಾಣೂರ ಅಚ್ಯುತ ಕಾಮತ ಮತ್ತು ನನ್ನ ಮೇಲೆ ಪಿತೃಸಮಾನ ಭಾವನೆಯನ್ನು ಇಟ್ಟು ನನ್ನ ಕಷ್ಟಸುಖಗಳಲ್ಲಿ ಭಾಗಿಯಾದ ಶ್ರೀ ಬೊಳಂತೂರು ಪ್ರಭಾಕರ ಪ್ರಭು (ವಿಕ್ಟೋರಿಯಾ ಪ್ರೆಸ್) ಇವರನ್ನು ನಾನು ಮರೆಯುವಂತಿಲ್ಲ.

ಮೇಲೆ ಉಲ್ಲೇಖಿಸಿದ ಮಹನೀಯರು ನನ್ನ ಜೀವನಕ್ಕೆ ಸಾರ್ಥಕತೆಯನ್ನು ಒದಗಿಸಿದ್ದಾರೆ; ನನಗೆ ಜೀವನದಲ್ಲಿ ಸುಖ, ಮನಕ್ಕೆ ಶಾಂತಿ ದೊರಕಿಸಿದ್ದಾರೆ; ಮತ್ತು ಮುಂದಿನ ಜನ್ಮವಿದ್ದರೆ 'ನನ್ನನ್ನು ಬಂಟವಾಳದಲ್ಲಿಯೇ ಹುಟ್ಟಿಸು' ಎಂದು ಶ್ರೀ ವೆಂಕಟರಮಣ ಸ್ವಾಮಿಯಲ್ಲಿ ನಾನು ಬೇಡಿಕೊಳ್ಳುವಂತೆ ಮಾಡಿದ್ದಾರೆ.

ನಾನು ಬರೆಯುತ್ತಾ ಬಂದಿರುವ ದಿನಚರಿಯತ್ತ ಕಣ್ಣು ಹಾಯಿಸಿದಾಗ ನನ್ನೂರು ಬಂಟವಾಳದಲ್ಲಿ ಅಥವಾ ಮಂಗಳೂರಿನಲ್ಲಿ ಮಾತ್ರವಲ್ಲ ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ವೃತ್ತಿನಿರತನಾಗಿದ್ದಾಗ ವಾಸವಾಗಿದ್ದ ಬೇರೆ ಬೇರೆ ಊರುಗಳಲ್ಲಿಯೂ, ಬ್ಯಾಂಕ್ ಕೆಲಸ ಮಾಡುತ್ತಿರುವಾಗಲೇ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ಕೈಗೊಳ್ಳುವುದು. ಅದರಲ್ಲಿಯೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಮುಂದೆ ತರುವ ಕಾರ್ಯವನ್ನು ನಡೆಸುತ್ತಾ ಬಂದಿದ್ದೆ. ಇದೇ ರೀತಿ ಸಾಂಸ್ಕೃತಿಕ ಮತ್ತು ಕಲಾಕ್ಷೇತ್ರಗಳಲ್ಲಿ ನಾಟಕಗಳು, ಶಾಸ್ತ್ರೀಯ ಸಂಗೀತ, ಲಘು ಸಂಗೀತ, ಭಜನೆ-ಲೋಕವೇದ ಸಾಹಿತ್ಯ, ಬರೆವಣಿಗೆ ಮತ್ತು ಪ್ರಕಾಶನ ನಡೆಸಿ ಸಾಹಿತಿಗಳಿಗೆ, ಲೇಖಕರಿಗೆ ಪ್ರೋತ್ಸಾಹ ನೀಡುವುದು; ಸಂಗೀತ, ಸಾಹಿತ್ಯ ಸಮ್ಮೇಳನ ಸಂಘಟಿಸುವುದು ಮತ್ತು ಅನೇಕ ಕಡೆಗಳಲ್ಲಿ ಕಟ್ಟಡ ನಿರ್ಮಾಣ, ಜೀರ್ಣೋದ್ಧಾರ ಕಾರ್ಯಗಳಲ್ಲಿ ಸ್ಥಳೀಯ ಮುಖಂಡರ ಜೊತೆಯಲ್ಲಿ ದುಡಿಯುವುದು ಇತ್ಯಾದಿ ಇತ್ಯಾದಿ ವಿಚಾರಗಳಲ್ಲಿ ಮುಖಂಡನಾಗಿ ಅಥವಾ ಪಾಲುದಾರನಾಗಿ ಕೊಂಕಣಿ ಭಾಷಿಕರ ಹಾಗೂ ಇದೇ ರೀತಿ ಅನ್ಯ ಭಾಷಿಕರ ಶ್ಲಾಘನೆಗೆ ಪಾತ್ರನಾಗುವ ಭಾಗ್ಯ ನನಗೆ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ಮತ್ತು ಶ್ರೀ ಕಾಶೀಮಠದ ಗುರು ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಆಶೀರ್ವಾದದಿಂದ ದೊರೆತದ್ದೆಂದು ನನಗೆ ತೋರುತ್ತದೆ. ಈ ರೀತಿಯ ಒಂದು ಸಮರ್ಪಣಾ ಭಾವ ಅಥವಾ ನಿರಪೇಕ್ಷ ಭಾವದಿಂದ ನಿರಂತರವಾಗಿ ಸಮಾಜದ ಸೇವೆಯನ್ನು ಕೈಗೊಳ್ಳುವ ಅವಕಾಶ ನನಗೆ ನನ್ನ ಸಣ್ಣ ವಯಸ್ಸಿನಿಂದಲೇ ದೊರೆತಿದ್ದು, ನಂತರದ ವಯಸ್ಸಿನಲ್ಲಿಯೂ ಅದನ್ನು ಮುಂದುವರಿಸಿ ಬರುವ ಸುಸಂಧಿ ನನಗೆ ಪ್ರಾಪ್ತವಾಗಿದೆ ಮತ್ತು ಇದರಿಂದ ಸಮಾಜದಲ್ಲಿ ಒಂದು ಪ್ರತೀಕವಾಗಿ ಬದುಕು ಸಾಗಿಸುವ ಭಾಗ್ಯ ನನ್ನದಾಗಿದೆ. ಈ ವಿಧದ ಅತಿ ದೀರ್ಘಕಾಲದ ಜೀವನ ಬೇರೆಯವರಿಗೆ, ಅದರಲ್ಲಿಯೂ ಮುಂದಿನ ಪೀಳಿಗೆಯವರಿಗೆ ಗೊತ್ತಾಗಬೇಕು ಮತ್ತು ಅದರಿಂದ ಸಾಮಾಜಿಕ ಪ್ರಕ್ರಿಯೆ ಅನಂತರವೂ ಮುಂದುವರಿಯಬೇಕು ಎನ್ನುವ ದೃಷ್ಟಿಯಿಂದ ನನ್ನ ಜೀವನದ ಕಥೆಯನ್ನು ಬರೆಯಲಾಗಿದೆ. ಅಲ್ಲದೆ ಈ ಜೀವನವನ್ನು ರೂಪಿಸಿದ ಉನ್ನತ ಮತ್ತು ಆದರ್ಶದ ಹಿರಿಯರನ್ನು ನೆನಸಿ ಅವರಿಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವ ಒಂದು ಉತ್ತಮ ಅವಕಾಶವು ನನಗೆ ಈ ಬರೆವಣಿಗೆಯ ಮೂಲಕ ಲಭಿಸುತ್ತದೆ ಎಂಬ ಉದ್ದೇಶದಿಂದ ಈ ಗ್ರಂಥವನ್ನು ಬೆಳಕಿಗೆ ತರಲಾಗಿದೆ.

ಈ ಆತ್ಮಕಥನವನ್ನು ಬರೆಯುತ್ತಿರುವಾಗ ನನಗೆ ಸಹಕಾರ ಮತ್ತು ಪ್ರೋತ್ಸಾಹ ನೀಡಿದ ಶ್ರೀ ಬೊಳಂತೂರ ಪ್ರಭಾಕರ ಪ್ರಭು, ಶ್ರೀ ಪಿ. ನಾರಾಯಣ ಕಾಮತಿ, ಮಾಣೂರು ಲಕ್ಷ್ಮಣ ಕಾಮತಿ, ಡಾ. ಗೀತಾ ಶೆಣೈ ಇವರಿಗೆ, ಮೂಲ ಕೊಂಕಣಿ ಗ್ರಂಥವನ್ನು ಪ್ರಕಟಿಸುವಾಗ ಸಲಹೆ, ಸೂಚನೆ ನೀಡಿದ ಶ್ರೀ ಗೋಕುಲದಾಸ ಪ್ರಭು, ಶ್ರೀ

ಮೆಲ್ವಿನ್ ರೊಡ್ರಿಗಸ್, ಚಿ. ದಿನೇಶ ಮತ್ತು ಚಿ. ಗುರು ಅವರಿಗೆ ಮತ್ತು ಆ ಗ್ರಂಥದ ರಕ್ಷಾಕವಚದ ವಿನ್ಯಾಸ ಮಾಡಿದ ಕಲಾವಿದ ರಘು ಅಪಾರ ಅವರಿಗೂ ದೇವರು ಒಳ್ಳೆಯದು ಮಾಡಲಿ.

ಸಾರ್ವಜನಿಕ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಬೇಕಾದರೆ ತುಂಬಾ ದುಡ್ಡು, ಆಸ್ತಿಪಾಸ್ತಿ ಇರಬೇಕಾಗುತ್ತದೆ ಅಥವಾ ದೊಡ್ಡ ವ್ಯಾಪಾರ, ವಹಿವಾಟುಗಳು ಅಥವಾ ಉನ್ನತ ಅಧಿಕಾರ ಇರಬೇಕಾಗುತ್ತದೆ. ಆದರೆ ಇದ್ಯಾವುದೂ ಇಲ್ಲದಿದ್ದರೂ ಸದಾಕಾಲ ಸಾಮಾಜಿಕ ಸೇವಾ ಕೈಂಕರ್ಯ ನಡೆಸಲು ಸಾಧ್ಯವಾಗುವುದೇ? ನನ್ನ ಪ್ರಕಾರ, ಇದು ಯಾವುದೂ ಇಲ್ಲದ ಒಬ್ಬ ವ್ಯಕ್ತಿ ನಾನಾಗಿದ್ದೆ. ಸಮಾಜದಲ್ಲಿರುವ ಬಡವರ ಹೆಣ್ಣುಮಕ್ಕಳಿಗೆ ನೆಂಟಸ್ತಿಕೆ ಹುಡುಕಿ ಲಗ್ನಕಾರ್ಯ ನಡೆಸುವುದಕ್ಕೆ, ಬಡವರ ಶವದಹನ ಕಾರ್ಯಕ್ಕೆ, ವೈದ್ಯಕೀಯ ಸಹಾಯ ನೀಡುವುದಕ್ಕೆ ತುಂಬಾ ದುಡ್ಡು ಬೇಕಾಗುತ್ತದೆ. ಆದರೆ ಅದು ಯಾವುದೂ ಇಲ್ಲದೆ, ಅವರಿವರು ಹೇಳಿದರೆಂದು ಕೆಲಸ ಮಾಡುವುದಕ್ಕೆ ಮುಂದೆ ಬರುವಾಗಲೂ ಹಣದ ಪ್ರಶ್ನೆ ಎದುರಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನನಗೆ ಅವರಿವರಲ್ಲಿ ಹಣ ಬೇಡುವ ಆವಶ್ಯಕತೆ ಬರುತ್ತಿತ್ತು. ಹೀಗೆ ನನಗೆ ೧೦-೧೫ ರೂಪಾಯಿಗಳಿಂದ ಹಿಡಿದು ಶಾಲಾಕಾಲೇಜು ಕಟ್ಟಡಗಳ ನಿರ್ಮಾಣದಲ್ಲಿ ಲಕ್ಷಗಟ್ಟಳೆ ಹಣವನ್ನು, ಅನಂತರ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣಕ್ಕಾಗಿ ಕೋಟಿ ಕೋಟಿ ರೂಪಾಯಿ ಬೇಡುವ ಅಗತ್ಯ ಬಿದ್ದಿತ್ತು. ಈ ಎಲ್ಲಾ ಸೇವಾ ಕಾರ್ಯಗಳಿಗಾಗಿ ಮುಂದುವರಿದು ಹೋಗುವ ಕರ್ಮವನ್ನು ದೇವರು ನನ್ನ ಪಾಲಿಗೆ ನೀಡಿದ್ದಾರೆ. ಭಾರತದ ಅಗ್ರಗಣ್ಯ ಹಿರಿಯರಾದ ಪಂಡಿತ ಮದನ ಮೋಹನ ಮಾಲವಿಯಾ ಅವರಿಗೆ ಕಾಶಿಯಲ್ಲಿ ಬನಾರಸ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ರಾಜಮಹಾರಾಜರ ಬಳಿ ಹೋಗಬೇಕಾಗಿ ಬಂದಿತ್ತು. ಆಗ ಅವರು I am beggar among Kings and King among beggar ಎಂದು ಬರೆದಿದ್ದಾರೆ. ಆ ವಾಕ್ಯವನ್ನು ನನಗೂ ಅನ್ವಯಿಸಿಕೊಂಡು ಈ ಗ್ರಂಥಕ್ಕೆ "ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ" ಎಂಬ ಶೀರ್ಷಿಕೆಯನ್ನು ನೀಡಿದ್ದೇನೆ.

ನನ್ನ ಮೂಲ ಕೊಂಕಣಿ ಗ್ರಂಥ "ಏಕ ಭಿಕ್ಷುಕ ಚಕ್ರವರ್ತಿಲಿ ಕಾಣಿ"ಯನ್ನು ಕನ್ನಡ ಭಾಷೆಗೆ ಅನುವಾದಿಸಿದ ಡಾ. ಗೀತಾ ಶೆಣೈಯವರಿಗೆ ನಾನು ಕೃತಜ್ಞನಾಗಿರುತ್ತೇನೆ. ನನ್ನ ಕೋರಿಕೆಯನ್ನು ಮನ್ನಿಸಿ ಈ ಗ್ರಂಥಕ್ಕೆ 'ಬೆನ್ನುಡಿ' ಬರೆದಿರುವ ನನ್ನ ಆತ್ಮೀಯರೂ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಆಗಿರುವ ಮಾನ್ಯ ಶ್ರೀ ಡಾ. ಪ್ರಧಾನ್ ಗುರುದತ್ತ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಬಂಟವಾಳ

ಬಸ್ತಿ ವಾಮನ ಶೆಣೈ

ಅನುವಾದಕರ ನುಡಿ

ಇದು ಎಂಬತ್ತರ ವಯಸ್ಸಿನಲ್ಲಿ ಮೂವತ್ತರ ಜೀವನೋತ್ಸಾಹವನ್ನು ಉಳಿಸಿಕೊಂಡು ಬಂದಿರುವ ಅಸಾಧಾರಣ ವ್ಯಕ್ತಿಯೊಬ್ಬರ ಅಪರೂಪದ ಆತ್ಮಕಥಾನಕ. ಈ ಕೃತಿ ಪ್ರಾರಂಭಗೊಳ್ಳುವುದು ತನ್ನ ಹುಟ್ಟೂರನ್ನು ಅಭಿಮಾನದಿಂದ ನೆನಪಿಸಿಕೊಳ್ಳುವ ಸಿಹಿ ನೆನಪುಗಳೊಂದಿಗೆ. ಊರಿನ ಇತಿಹಾಸದೊಂದಿಗೆ ಅಲ್ಲಿಯ ಜನರು, ಅವರ ಬದುಕಿನ ವೈವಿಧ್ಯತೆ, ಕ್ರೀಡೆ, ಕಲೆ, ಧಾರ್ಮಿಕ ಸನ್ನಿವೇಶಗಳು ಒಂದೊಂದಾಗಿ ಅನಾವರಣಗೊಳ್ಳುತ್ತಾ ಹೋಗುತ್ತವೆ. ಇಲ್ಲಿ ಯಾವುದೇ ವಿವರಗಳನ್ನಾಗಲೀ, ವ್ಯಕ್ತಿಗಳನ್ನಾಗಲೀ ವೈಭವೋಪೇತವಾಗಿಯಾಗಲೀ, ಉತ್ಪ್ರೇಕ್ಷೆಯಿಂದಾಗಲೀ ಕಾಣಿಸುವ ಪ್ರಯತ್ನವನ್ನು ಆತ್ಮಕಥಾನಕದ ಲೇಖಕರಾದ ಶ್ರೀ ಬಸ್ತಿ ವಾಮನ ಶೆಣೈಯವರು ಮಾಡುವುದಿಲ್ಲ. ಆಮೇಲೆ ಅವರ ಬಾಲ್ಯ, ತಂದೆ, ತಾಯಿ, ಸೋದರ ಸೋದರಿಯರು ಮತ್ತು ಪತ್ನಿಯ ಉಲ್ಲೇಖ ಬರುತ್ತದೆ. ಪ್ರತಿಯೊಬ್ಬರೂ ತಮ್ಮ ಶಾಲಾ ದಿನಗಳನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳುವ ಹಾಗೆ ಬಸ್ತಿಯವರು ಕೂಡ ಬಹಳ ಚೇತೋಹಾರಿಯಾಗಿ ತಮ್ಮ ಶಾಲಾ ದಿನಗಳ, ತಮ್ಮ ಬಾಲ್ಯ ಸ್ನೇಹಿತರ ವಿವರಗಳನ್ನು ನೀಡುತ್ತಾರೆ. ಆದರೆ ಹರೆಯಕ್ಕೆ ಕಾಲಿಡುತ್ತಿದ್ದಂತೆ ತಂದೆಯ ಅನಿರೀಕ್ಷಿತ ಸಾವು ಅವರನ್ನು ಮತ್ತು ಅವರ ಕುಟುಂಬವನ್ನು ಎಷ್ಟು ಕಂಗೆಡಿಸುತ್ತದೆ ಎಂದರೆ, ಈ ಕಟು ಅನುಭವದ ಕುರಿತು ಅವರು ನೀಡುವ ವಿವರಣೆಯಿಂದ ಓದುಗರ ಕಣ್ಣು ತುಂಬಿ ಬರುವಂತಾಗುತ್ತದೆ. ಆದರೆ ಇನ್ನೊಂದು ರೀತಿಯಲ್ಲಿ ನೋಡಿದಾಗ ಬಸ್ತಿಯವರು ತಮ್ಮ 'ಕಷ್ಟದ ದಿನಗಳಲ್ಲಿ' ಅನುಭವಿಸಿದ ದುಃಖ ಪರಂಪರೆಗಳೇ ಅವರ ಇಂದಿನ ಈ ಅಸಾಮಾನ್ಯ ವ್ಯಕ್ತಿತ್ವವನ್ನು ರೂಪಿಸಿದೆ ಎನ್ನುವ ಭಾವನೆ ಬರುವುದು ಸಹಜ. 'ಉಪವಾಸವಿದ್ದರೂ ಚಿಂತಿಲ್ಲ, ಯಾರ ಮುಂದೆಯೂ ಕೈ ಒಡ್ಡದಂತೆ, ಕಷ್ಟದ ದಿನಗಳಲ್ಲಿ ಯಾರ ಮನೆಬಾಗಿಲಿಗೂ ಹೋಗದಂತೆ, ತನ್ನಲ್ಲಿ ಏನೂ ಇಲ್ಲದಿದ್ದರೂ ದೇಹಿ ಎಂದು ಬಂದವರಿಗೆ ನೀಡುವಂತೆ' ಅವರ ತಾಯಿ ಕಲಿಸಿದ ಬೀಜಮಂತ್ರವನ್ನು ಅವರು ತಮ್ಮ ಜೀವನದುದ್ದಕ್ಕೂ ಅನುಸರಿಸಿ ಬಂದದ್ದರಿಂದ ಇಂದು ಅವರಿಗೆ ತನಗಾಗಿ ಅಲ್ಲ, ಬೇರೆಯವರಿಗಾಗಿ ಮಾಡುವುದರಲ್ಲಿ ತೃಪ್ತಿ ಸಿಗುತ್ತದೆ.

ಅವರ ಈ ಆತ್ಮಕಥನದಲ್ಲಿ ತನ್ನ ತಂದೆಯ, ತನ್ನ ಗುರುಗಳ, ತನ್ನ ಸಮುದಾಯದ ಮಠಾಧೀಶರ, ತನಗೆ ನೆಲೆ ಕಾಣಿಸಿದ ಸಂಸ್ಥೆಯ ಉನ್ನತಾಧಿಕಾರಿಗಳ ಉಲ್ಲೇಖಗಳು ಪದೇಪದೇ ಕಾಣಿಸಿಕೊಳ್ಳುತ್ತವೆ. ನಿನ್ನೆ ನೆರವು ನೀಡಿದವರನ್ನು ಇಂದು ಮರೆಯುವ ಹಂತದಲ್ಲಿರುವ ನಮಗೆ ಇದು ವಿಚಿತ್ರ ಸ್ವಭಾವವಾಗಿ ಕಾಣಬಹುದು. ಆದರೆ ಬಸ್ತಿಯವರ ತಲೆಮಾರಿನ ಜನರು ತಮ್ಮನ್ನು ಕುಟುಂಬದಿಂದ, ಸಮಾಜದಿಂದ ಪ್ರತ್ಯೇಕವಾಗಿ ಕಾಣುವವರೇ ಅಲ್ಲ. ಅವರಿಗೆ 'ನಾನು' ಎನ್ನುವ ಪದದಲ್ಲಿ ತನ್ನ ತಂದೆ, ತಾಯಿ, ಗುರು, ಸ್ವಾಮಿ, ಪೋಷಕ ಎಲ್ಲರೂ ಕಾಣಿಸಿಕೊಂಡರೇ ತೃಪ್ತಿ. ನಾನು ಅಥವಾ ನನ್ನ ವ್ಯಕ್ತಿತ್ವ ರೂಪುಗೊಳ್ಳಬೇಕಾದರೆ ಈ ಹಿರಿಯರ ದೇಣಿಗೆ ಎಷ್ಟಿದೆ ಎಂಬುದನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಂಡು, ಆಮೇಲೆ ಮುಂದಿನ ಹೆಜ್ಜೆ ಇಡಬೇಕು ಎನ್ನುವ ಒಂದು ವಿನೀತ ಭಾವ ಇದೆಯಲ್ಲ ಅದರ ಉತ್ಕೃಷ್ಟ ಮಾದರಿ ನಮಗೆ ಬಸ್ತಿಯವರ ಈ ಆತ್ಮಕಥನದಲ್ಲಿ ಕಾಣಲು ಸಿಗುತ್ತದೆ. ಈ ಕೃತಿಯನ್ನು ಓದಿದರೆ, ನಾವು ಉಪಕಾರ ಸ್ಮರಣೆಯ ಭಾವದಲ್ಲಿ ಎಲ್ಲಿ ಎಡವಿದ್ದೇವೆ, ಯಾವ ತಪ್ಪು ಮಾಡುತ್ತಿದ್ದೇವೆ, ಯಾರನ್ನೆಲ್ಲಾ ಮರೆತುಬಿಟ್ಟಿದ್ದೇವೆ ಎನ್ನುವ ಪಶ್ಚಾತ್ತಾಪದ ಭಾವನೆ ಉಂಟಾಗದೇ ಇರದು. ಒಂದು ವಿಧದಲ್ಲಿ 'ನಾವೇ ಸರ್ವೋತ್ತಮರು' ಎಂದು ಬೀಗುವ ನಮಗೆಲ್ಲರಿಗೂ ಇದು ಒಂದು ಎಚ್ಚರಿಕೆಯ ಗಂಟೆಯೆಂದೇ ತಿಳಿಯಬಹುದು.

ಕೆಲವೊಮ್ಮೆ ಬದುಕು ಕಾಣಿಸುವ ತಿರುವುಗಳು ಅತ್ಯಂತ ಅನಿರೀಕ್ಷಿತವಾಗಿರುತ್ತವೆ. ಬಸ್ತಿಯವರ ಬದುಕಿನಲ್ಲಿಯೂ ಅಂತಹ ಅನೇಕ ತಿರುವುಗಳು ಕಾಣಿಸಿಕೊಳ್ಳುತ್ತವೆ. ತಾನು ಬಡ ಬಸ್ ಏಜೆಂಟ ಒಬ್ಬರ ಮಗನಾಗಿದ್ದೂ, ತಂದೆಯ ಪ್ರೀತಿ, ವಾತ್ಸಲ್ಯ, ಕಾಳಜಿಯಲ್ಲಿ ಮಹಾರಾಜನ ಮಗನಂತೆ ಬೆಳೆದೆ ಎಂದು ಹೇಳುತ್ತಾ, ತಂದೆಯ ಸಾವು ತನ್ನನ್ನು ಏಕಾಂಗಿಯಾಗಿಸಿ ಯಾವ ಪ್ರಪಾತಕ್ಕೆ ತಳ್ಳಿತು ಎನ್ನುವುದನ್ನು ಅವರು ಬಹಳ ಕಳಕಳಿಯಿಂದ ವಿವರಿಸುತ್ತಾರೆ. ಆದರೆ ಬದುಕಿನಲ್ಲಿ ಭರವಸೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾಗ ಟಿ.ಎ. ಪೈ ಅವರಂತಹ ಮಹಾನ್ ವ್ಯಕ್ತಿತ್ವದ ಪರಿಚಯವಾಗಿ ಅವರು ಜೀವನ್ಮುಖಿಯಾಗುತ್ತಾರೆ. ಟಿ.ಎ.ಪೈ ಅವರನ್ನು 'ತನ್ನ ಪಾಲಿನ ದೈವ'ವೆಂದೇ ತಿಳಿದುಕೊಳ್ಳುವ ಬಸ್ತಿಯವರು, ಸಮಯಕ್ಕೆ ಸರಿಯಾಗಿ ಅವರು ನೀಡಿದ ಸಹಾಯವನ್ನು ಇಲ್ಲಿ ಪ್ರಾಂಜಲ ಮನಸ್ಸಿನಿಂದ ನೆನಪಿಸಿಕೊಂಡಿದ್ದಾರೆ.

ಬಸ್ತಿ ವಾಮನ ಶೆಣ್ಯೆಯವರ ಬದುಕಿನಲ್ಲಿ ಅತ್ಯಂತ ಮಹತ್ವದ ತಿರುವು ಅವರು ಉದ್ಯೋಗದಲ್ಲಿ ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಕಾಣಿಸಿಕೊಂಡಿದೆ. ಬದುಕಿನ ಈ ನಿರ್ಣಾಯಕ ಘಟ್ಟದಲ್ಲಿ ವಿಧಿ ಅವರನ್ನು ಬ್ಯಾಂಕ್ ಸೇವೆಯಿಂದ ಭಾಷಾ ಸೇವೆಗೆ ಸೆಳೆದದ್ದು, ಅವರ ಪಾಲಿಗೆ ಪುನರ್ಜನ್ಮವೆಂದೇ ಹೇಳಬಹುದು. ಉದ್ಯೋಗದಿಂದ ನಿವೃತ್ತಿ ಹೊಂದಿದ ಬಳಿಕ ಇವತ್ತಿನವರೆಗೆ ತಮ್ಮ ಮಾತೃಭಾಷೆ ಕೊಂಕಣಿಗಾಗಿ ಅವರು ನಡೆಸಿದಂತಹ ವೈವಿಧ್ಯಮಯ ಕಾರ್ಯಗಳು ಅದೇ ತಾನೇ ಪದವಿ ಮುಗಿಸಿ ಕೆಲಸಕ್ಕೆ ಸೇರಿದ ಯುವಕನೊಬ್ಬನು ಅತ್ಯುತ್ಸಾಹದಿಂದ ನಡೆಸಬಹುದಾದ ಕಾರ್ಯ ಚಟುವಟಿಕೆಗಳಂತೆ ಗೋಚರವಾದರೆ ಆಶ್ಚರ್ಯ ಪಡಬೇಕಾಗಿಲ್ಲ. ಅದೇ ಉತ್ಸಾಹ, ಅದೇ ಕ್ರಿಯಾಶಕ್ತಿ. ಇವತ್ತು ಕರಾವಳಿ ಜಿಲ್ಲೆಗಳಲ್ಲಿ ಕೊಂಕಣಿ ಭಾಷೆಗೆ ಮಾನ್ಯತೆ ಸಿಕ್ಕಿರುವುದು ನಿಜವಾದರೆ ಅದಕ್ಕೆ ಕಾರಣ ಮಾನ್ಯ ಶ್ರೀ ಬಸ್ತಿ ವಾಮನ ಶೆಣ್ಯೆ ಅವರು ಮತ್ತು ಅವರು ಕಟ್ಟಿ ಬೆಳೆಸಿದ ಕಟ್ಟಾಳುಗಳ ಪಡೆ ಎಂದರೆ ಅತಿಶಯೋಕ್ತಿಯಲ್ಲ. ಅವರ ಸಾಧನೆ ಕರಾವಳಿಯ ವ್ಯಾಪ್ತಿಯನ್ನು ಮೀರಿ ಬೇರೆ ಬೇರೆ ಪ್ರದೇಶಗಳ, ಬೇರೆ ಬೇರೆ ಭಾಷಿಕರಿಗೆ ತಿಳಿಯಬೇಕಾದ ಅಗತ್ಯವನ್ನು ಈ ಆತ್ಮಕಥಾನಕ ಪೂರೈಸಿದೆ ಎಂದು ಹೇಳಬಹುದು. ಇಲ್ಲಿ ಅವರು ತಮ್ಮ ಸಾಧನೆಯ ಪ್ರತಿಯೊಂದು ಮೈಲಿಗಲ್ಲನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ವಾಸ್ತವಪ್ರಜ್ಞೆಯೊಂದಿಗೆ ನಿರೂಪಿಸಿದ್ದಾರೆ.

ಈ ಕೃತಿಯ ಶೀರ್ಷಿಕೆಯಲ್ಲಿ ಪರಸ್ಪರ ವಿರೋಧಾಭಾಸದ ಗುಣಲಕ್ಷಣಗಳನ್ನು ಹೊಂದಿರುವ ಎರಡು ವ್ಯಕ್ತಿತ್ವದ ಉಲ್ಲೇಖವಿದೆ. ಇದರಲ್ಲಿ ಒಬ್ಬ ಭಿಕ್ಷುಕನಾದರೆ, ಮತ್ತೊಬ್ಬ ಚಕ್ರವರ್ತಿ. ಶ್ರೀ ಬಸ್ತಿ ವಾಮನ ಶೆಣ್ಯೆಯವರು ಈ ಎರಡೂ ವ್ಯಕ್ತಿತ್ವವನ್ನು ತಮ್ಮೊಳಗೆ ಆವಾಹನೆ ಮಾಡಿಕೊಂಡು ತಾವು ನಡೆದು ಬಂದ ದಾರಿಯ ಅವಲೋಕನವನ್ನು ನಡೆಸುತ್ತಾರೆ. ಭಿಕ್ಷುಕ ಪದಕ್ಕೆ ಯಾಚಕನೆಂಬ ಪರ್ಯಾಯ ಪದವನ್ನು ಕೂಡ ಬಳಸಲಾಗುತ್ತದೆ. ಈ ಅರ್ಥದಲ್ಲಿ ಬಸ್ತಿಯವರು ನಿಜವಾಗಿಯೂ ಯಾಚಕರೇ. ಯಾಕೆಂದರೆ ಅವರು ತಮ್ಮ ಜೀವನದುದ್ದಕ್ಕೂ ಮಾಡಿರುವುದು ಈ ಯಾಚನೆಯ ಕೆಲಸವನ್ನೇ. ಅದೂ ಈ ಯಾಚನೆ ಯಾರಿಗಾಗಿ? ತಮ್ಮ ಸ್ವಂತಕ್ಕಾಗಿಯಾಗಲೀ ತನ್ನ ಕುಟುಂಬದವರ ಏಳಿಗೆಗಾಗಿಯಾಗಲೀ ಖಂಡಿತ ಅಲ್ಲ. ಅವರು ಕೈಯೊಡ್ಡುವುದು ತಾನು ಕಲಿತ ಶಾಲೆಗಾಗಿ, ತನಗೆ ಪೋಷಣೆ ನೀಡಿ ಬೆಳೆಸಿದ ತನ್ನ ಊರಿನ ಜನರಿಗಾಗಿ, ತನಗೆ ಉದ್ಯೋಗ ನೀಡಿ ಸಮಾಜದಲ್ಲಿ ಸ್ಥಾನ ಕಲ್ಪಿಸಿದ ಸಂಸ್ಥೆಗಾಗಿ, ಇವೆಲ್ಲಕ್ಕಿಂತಲೂ ಕಿರೀಟಪ್ರಾಯವಾಗಿ ತನ್ನ ಮಾತೃಭಾಷೆಗಾಗಿ.

ಒಬ್ಬ ಮನುಷ್ಯ ತನಗೆ ಜನ್ಮ ನೀಡಿದವರಿಗೆ, ತನ್ನನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸಿದ ಸಮಾಜಕ್ಕೆ ಋಣಿಯಾಗಿರಬೇಕೆಂದು ಹೇಳಲಾಗುತ್ತದೆ. ಆದರೆ ಬಸ್ತಿಯವರು ಋಣಿಯಾಗಿರುವುದು ಮಾತ್ರ ಸಾಕಾಗುವುದಿಲ್ಲ. ಆ ಋಣವನ್ನು ತೀರಿಸುವ ದಾರಿಗಳನ್ನು ಕಂಡುಕೊಂಡರೆ ಮಾತ್ರ ಮನುಷ್ಯನ ಬದುಕು ಸಾರ್ಥಕವೆನ್ನುವ ಒಂದು ಉನ್ನತ ಸ್ತರದ ಆಲೋಚನೆಯನ್ನು ಹೊಂದಿದವರಾಗಿದ್ದಾರೆ. ಹೀಗೆ ಯೋಚಿಸುವವರು ಇಂದಿನ ಸಮಾಜದಲ್ಲಿ ಬಹಳ ಕಡಿಮೆ ಇರುವುದರಿಂದಲೇ ಬಸ್ತಿಯವರು ನಮ್ಮಲ್ಲಿ ಕುತೂಹಲವನ್ನು, ವಿಸ್ಮಯವನ್ನು ಹುಟ್ಟಿಸುತ್ತಾರೆ. ತಮ್ಮ ಕಾರ್ಯಚಟುವಟಿಕೆಗಳಿಂದ ನಮ್ಮಲ್ಲಿ ಬೆರಗನ್ನು ಮೂಡಿಸುತ್ತಾರೆ.

ಇಲ್ಲಿ ಕುತೂಹಲಕಾರಿ ವಿಚಾರವೆಂದರೆ ಬಸ್ತಿಯವರು ತಮ್ಮನ್ನು ರಾಜ, ಮಹಾರಾಜರೆಂದು ಕರೆಯಿಸಿಕೊಳ್ಳದೆ ಚಕ್ರವರ್ತಿಯೆಂದು ಗುರುತಿಸಿಕೊಳ್ಳುತ್ತಾರೆ. ರಾಜ, ಮಹಾರಾಜರೆಂದರೆ ಸುಖ ಭೋಗಗಳಲ್ಲಿ ತೊಡಗಿಕೊಂಡಿರುವ ವ್ಯಕ್ತಿತ್ವದ ಕಲ್ಪನೆ ಮನಸ್ಸಿಗೆ ಹೊಳೆಯುವುದು ಸಹಜ. ಆದರೆ ಚಕ್ರವರ್ತಿಯ ಸ್ಥಾನವೇ ಬೇರೆ. ಚಕ್ರವರ್ತಿಯ ವ್ಯಾಪ್ತಿ ವಿಶಾಲವಾದುದು. ಆದರೆ ಅಷ್ಟೇ ಜವಾಬ್ದಾರಿಯುತವಾದುದು. ನಮ್ಮಲ್ಲಿ ಹರ್ಷವರ್ಧನ, ಪುಲಿಕೇಶಿ, ಅಕ್ಬರ್ ಮೊದಲಾದವರೆಲ್ಲಾ ಚಕ್ರವರ್ತಿಗಳೇ. ಇಂದು ನಾವು ಅವರನ್ನು ನೆನಪಿಸಿಕೊಳ್ಳುವುದು ಅವರ ರಾಜಕೋಶಗಳಿಂದ ಅಲ್ಲ; ಅವರ ಸರ್ವಧರ್ಮ ಸಮನ್ವಯದ ಪ್ರತಿಪಾದನೆಯಿಂದ, ಅವರ ಅಪ್ಪಟ ಜನಾನುರಾಗಗಳಿಂದ. ಅವರಿಗೆ ತಮ್ಮ ಸ್ಥಾನಮಾನಕ್ಕಿಂತಲೂ, ತಾನು ಮೆಟ್ಟುವ ನೆಲದ ಸಂಸ್ಕೃತಿಯ ಸುರಕ್ಷೆ ಮುಖ್ಯವಾಗಿತ್ತು. ಅವರಿಗೆ ಪ್ರಜೆಗಳು ಮುಖ್ಯವಾಗಿದ್ದರು. ಹೀಗಾಗಿ ಅವರು ಕಲೆಗಳನ್ನು ಪೋಷಿಸಿದರು. ನೆಲದ ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ಕಾರ್ಯಗಳನ್ನು ನಡೆಸಿದರು. ಜನರಲ್ಲಿ ಭಾಷೆ, ಸಂಸ್ಕೃತಿ, ಕಲೆಗಳ ಪ್ರೀತಿಯನ್ನು ಬೆಳೆಸುವ ಪ್ರಯತ್ನವನ್ನು ನಡೆಸಿದರು. ಇಂದು ಬಸ್ತಿ ವಾಮನ ಶೆಣೈಯವರು ಮಾಡುತ್ತಿರುವುದು ಕೂಡ ಇದನ್ನೇ. ಅವರು ಒಂದು ಭಾಷೆಯನ್ನು, ಒಂದು ಭಾಷಾ ಸಮುದಾಯವನ್ನು ಉಳಿಸಿ ಬೆಳೆಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರ ಈ ಆತ್ಮಕಥಾನಕದಲ್ಲಿ ಅದರ ಸ್ಪಷ್ಟ ಚಿತ್ರಣ ನಮಗೆ ದೊರೆಯುತ್ತದೆ.

ಕಳೆದ ಹಲವು ವರ್ಷಗಳಿಂದ ಶ್ರೀ ಬಸ್ತಿ ವಾಮನ ಶೆಣೈಯವರ ಕಾರ್ಯ ಚಟುವಟಿಕೆಗಳನ್ನು ಹತ್ತಿರದಿಂದ ನೋಡುವ, ಅವರು ಸ್ಥಾಪಿಸಿದ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ಸಾಹಿತ್ಯಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವ ಅವಕಾಶ ನನಗೆ ದೊರೆತಿರುವುದು ನನ್ನ ಅದೃಷ್ಟವೆಂದು ನನ್ನ ಭಾವನೆ. ಈಗ ಕೊಂಕಣಿ ಭಾಷೆಯಲ್ಲಿರುವ ಅವರ ಈ ಅದ್ಭುತ ಆತ್ಮಕಥಾನಕವನ್ನು ಕನ್ನಡಕ್ಕೆ ಅನುವಾದಿಸುವ ಸದವಕಾಶವೂ ನನಗೆ ದೊರೆತಿದೆ. ಬಹಳ ಹಿಂದೆ ಕನ್ನಡದಲ್ಲಿ ಸಣ್ಣಕತೆಗಳನ್ನು, ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ, ಗ್ರಂಥ ರೂಪದಲ್ಲಿ ಪ್ರಕಟಿಸಿ ಕನ್ನಡದ ಲೇಖಕರಾಗಿಯೂ ಪರಿಚಿತರಾಗಿರುವ ಶ್ರೀ ಬಸ್ತಿ ವಾಮನ ಶೆಣೈ ಅವರ ಈ ಆತ್ಮಕಥಾನಕವನ್ನು ಕನ್ನಡ ಸಾರಸ್ವತ ಲೋಕ ಪ್ರೀತಿಯಿಂದ ಸ್ವೀಕರಿಸುತ್ತದೆ ಎಂಬುದು ನನ್ನ ಆಶಯ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಪ್ರಕಟಿಸಿರುವ ಸ್ನೇಹಾ ಪ್ರಿಂಟರ್ಸ್ ಮುದ್ರಣಾಲಯದ ಶ್ರೀ ವಿ. ಮಹೇಶ್ ಹಾಗೂ ಶ್ರೀ ವಿ. ಕಾರ್ತಿಕ್ ಅವರಿಗೆ, ಸುಂದರವಾಗಿ ಅಕ್ಷರ ಜೋಡಣೆ ಮಾಡಿರುವ ವರ್ಷಿಣಿ ಗ್ರಾಫಿಕ್ಸ್‌ನ ಶ್ರೀಮತಿ ಪ್ರಿಯದರ್ಶಿನಿಯವರಿಗೆ ಆಕರ್ಷಕ ಮುಖಪುಟ ರಚಿಸಿದ ಕಲಾವಿದೆ ಸೌಮ್ಯ ಕಲ್ಯಾಣ್‌ಕರ್‌ಗೆ ಮತ್ತು ಗ್ರಂಥ ಪ್ರಕಾಶನದ ಹೊಣೆಹೊತ್ತು, ಅದನ್ನು ಸಮರ್ಥ ರೀತಿಯಿಂದ ನಿಭಾಯಿಸಿರುವ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನ ಸಂಸ್ಥೆಯ ಆಡಳಿತ ಸದಸ್ಯರಿಗೆ, ಸಲಹಾ ಸಮಿತಿಯ ಸದಸ್ಯರಿಗೆ, ಸಿಬ್ಬಂದಿವರ್ಗದವರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಗ್ರಂಥದ ಕರಡು ತಿದ್ದುವಿಕೆಯಲ್ಲಿ ಸಹಕಾರ ನೀಡಿದ ಶ್ರೀಮತಿ ಶಕುಂತಲಾ ಕಿಣಿಗೆ ಸಸ್ನೇಹ ನೆನಕೆಗಳು.

ಬೆಂಗಳೂರು

ಡಾ. ಗೀತಾ ಶೆಣೈ

ಅನುಕ್ರಮಣಿಕೆ

ಭಾಗ – ೧ ಪೂರ್ವರಂಗ

ಭಾಗ – ೨ ಕಾರ್ಯರಂಗ

ಭಾಗ – ೩. ಭಾಷಾರಂಗ

ಭಾಗ – ೪ ಸಾಧನಾರಂಗ

ಭಾಗ – ೫ ಮಾನ್ಯತಾರಂಗ

ಭಾಗ - ೧

ಪೂರ್ವರಂಗ

೧. ನನ್ನ ಊರು ಬಂಟವಾಳ

ಬಂಟವಾಳ ನನ್ನ ಊರು ಎಂದು ಹೇಳಲು ನನಗೆ ಬಹಳ ಅಭಿಮಾನ ಮತ್ತು ಸಂತೋಷವಾಗುತ್ತದೆ. ನನ್ನ ಊರಿನ ಚರಿತ್ರೆ ಹಾಗಿದೆ. ಕೊಂಕಣಿಗರ ತವರೂರು ಗೋವೆಯಿಂದ ದಕ್ಷಿಣದ ತುಳುನಾಡಿಗೆ(ಪಶ್ಚಿಮ ಕರಾವಳಿ) ಬಂದು ನೆಲೆಸಿದ ನಮ್ಮ ಪೂರ್ವಜರಲ್ಲಿ ಬಂಟವಾಳದ ಕೊಂಕಣಿ ಜನರು ಅನೇಕ ಚಾರಿತ್ರಿಕ ಸಂಗತಿಗಳನ್ನು ದಾಖಲಿಸಿದ್ದಾರೆ. ಅವರು ವ್ಯಾಪಾರ, ವಹಿವಾಟುಗಳಲ್ಲಿ ನಿಪುಣರಾಗಿದ್ದುದು ಮಾತ್ರವಲ್ಲ, ದಾನಧರ್ಮ ನೀಡುವುದರಲ್ಲಿ, ನ್ಯಾಯ ಪಕ್ಷಪಾತಿಗಳಾಗಿ ಯ:ಕಶ್ಚಿತ್ ಒಬ್ಬ ಬಡವನ ಅಥವಾ ಮಹಿಳೆಯರ ಗೌರವವನ್ನು ಕಾದುಕೊಂಡು ಬರುವುದರಲ್ಲಿ, ಅವರಿಗೆ ರಕ್ಷಣೆ ನೀಡುವುದರಲ್ಲಿ, ಅವರ ಕಷ್ಟಸುಖಗಳಲ್ಲಿ ಭಾಗಿಯಾಗುವುದರಲ್ಲಿ ಪ್ರಾಂಜಲ ಮನಸ್ಸನ್ನು ಹೊಂದಿದ ಧೀರ, ಶೂರ, ಧೈರ್ಯವಂತರೂ ಆಗಿದ್ದರು. ಸಂಗೀತ, ನಾಟಕ, ಯಕ್ಷಗಾನದಂತಹ ಸಾಂಸ್ಕೃತಿಕ ಕಲಾಕ್ಷೇತ್ರಗಳಲ್ಲಿ, ಕುಸ್ತಿ ಮತ್ತು ದೇಶೀಯ ವ್ಯಾಯಾಮ ಕ್ಷೇತ್ರದಲ್ಲಿ ಅಭಿರುಚಿ ಉಳ್ಳವರಾಗಿದ್ದು, ಸ್ಥಳಿಯ ಕಲಾವಿದರಿಗೆ ಹಾಗೂ ಬಂಟವಾಳಕ್ಕೆ ಭೇಟಿ ನೀಡುವ ಕಲಾವಿದರಿಗೆ, ಅವರ ತಂಡದವರಿಗೆ ಆದರ, ಅಭಿಮಾನದಿಂದ ಪ್ರೋತ್ಸಾಹವನ್ನು ನೀಡುತ್ತಿದ್ದರು. ಹೀಗಾಗಿ ಊರಿನಲ್ಲಿ ಒಂದಲ್ಲ ಒಂದು ಕಾರ್ಯಕ್ರಮ ಜರಗುತ್ತಿದ್ದುದು ಸಾಮಾನ್ಯ ಸಂಗತಿ. ಇದರಿಂದ ಹೊಸ ಪೀಳಿಗೆಗಳಿಗೆ ಕ್ರಮೇಣ ಸಾಂಸ್ಕೃತಿಕ, ಕಲಾ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಅಭಿರುಚಿ ಬೆಳೆಯುತ್ತಾ ಬಂತು. ಬಂಟವಾಳದ ಹಿರಿಯರು ಸಂಸ್ಕಾರ ವಂತರಾಗಿದ್ದರಿಂದ ಅನ್ಯಜಾತಿ, ಮತದ ಜನರು ಅವರಿಗೆ ಆದರ, ಗೌರವ ನೀಡುವುದಿತ್ತು.

ಬಹಳ ಹಿಂದಿನ ಕಾಲದಿಂದಲೂ ಕರ್ನಾಟಕದಲ್ಲಿ ಬಂಟವಾಳವು ವ್ಯಾಪಾರ, ವಹಿವಾಟು, ಚಿನ್ನ ಮತ್ತು ಬೆಳ್ಳಿ ಅಂಗಡಿಗಳಿಂದ 'ಬಂಗಾರದ ಪೇಟೆ' ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಚಿಕ್ಕಮಗಳೂರು, ಮಡಿಕೇರಿ, ಹಾಸನ ಮೊದಲಾದ ಊರುಗಳಿಂದ ಅಕ್ಕಿ, ಭತ್ತ, ಬೆಲ್ಲ ಮತ್ತು ಧಾನ್ಯಗಳನ್ನು ನೂರಾರು ಎತ್ತಿನ ಬಂಡಿಗಳಲ್ಲಿ ತುಂಬಿಸಿ ಬಂಟವಾಳದ ಬಡ್ಡಕಟ್ಟೆ ಗಾಡಿ ಮೈದಾನದಲ್ಲಿ ತಂದು ನಿಲ್ಲಿಸುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಗೆ ಬೆಲೆ ನಿಗದಿಯಾಗುತ್ತಿದ್ದದ್ದು ಬಂಟವಾಳದಲ್ಲಿ. ಮೈಸೂರು ರಾಜರ ಕಾಲದಿಂದಲೇ ಮುಖ್ಯರಸ್ತೆಗೆ ಮೈಸೂರು-ಬಂಟವಾಳ ರಸ್ತೆ ಎಂಬ ಹೆಸರು ಬಂದಿತ್ತು.

ನಮ್ಮ ಸಮಾಜದ ದೇವಸ್ಥಾನಗಳಲ್ಲಿ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಸ್ಥಾನವು ಪ್ರಾಚೀನ ಮತ್ತು ಶ್ರೀಮಂತ ದೇವಸ್ಥಾನವಾಗಿದೆ. ಈ ದೇವಸ್ಥಾನಕ್ಕೆ ದೊಡ್ಡ ಇತಿಹಾಸವಿದೆ. ಇಲ್ಲಿಯ ಜನರು ವ್ಯಾಪಾರ, ವಹಿವಾಟುಗಳನ್ನು ನಡೆಸಿ, ಆಸ್ತಿ ಹಂಚಿಕೆ ಮಾಡಿಕೊಂಡು ಶ್ರೀ ದೇವಸ್ಥಾನಕ್ಕೆ ಕಾಣಿಕೆಯಾಗಿ ನೀಡಿದ ಜಮೀನುಗಳು, ಚಿನ್ನ, ಬೆಳ್ಳಿಯ ಆಭರಣಗಳು ಅಪಾರ ಪ್ರಮಾಣದಲ್ಲಿ ಇದ್ದುದರಿಂದ, ಆಗಿನ ಮೈಸೂರು ಮಡಿಕೇರಿ ಪ್ರದೇಶದ ಪಾಳೆಗಾರರು ಈ ದೇವಸ್ಥಾನದ ಮೇಲೆ ಆಕ್ರಮಣ ನಡೆಸಿ ಲೂಟಿ ನಡೆಸಿದ್ದು ಇದೆ. ಅಂತಹ ಆತಂಕಕಾರಿ ಸನ್ನಿವೇಶದಲ್ಲಿ ಸಮಾಜದ ಸದ್ಗೃಹಸ್ಥರು ತಮ್ಮ ಜೀವದ ರಕ್ಷಣೆಯ ಕಡೆಗೆ ಗಮನವನ್ನು ಹರಿಸದೆ, ದೇವರನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ ಸಲುವಾಗಿ ದೇವರ ವಿಗ್ರಹ, ಪೀಠ, ಪ್ರಭಾವಳಿಗಳನ್ನು ಹೊತ್ತುಕೊಂಡು ಹೋಗಿ ಕಾರ್ಕಳ, ಮೂಲ್ಕಿ ದೇವಸ್ಥಾನಗಳಲ್ಲಿ ಇಟ್ಟಿದ್ದರು. ಪಾಳೆಗಾರರು ಊರು ಬಿಟ್ಟು ಹೋದ ಬಳಿಕ ದೇವರ ವಿಗ್ರಹ, ಪ್ರಭಾವಳಿಗಳನ್ನು ಮತ್ತೆ ಬಂಟವಾಳಕ್ಕೆ ತಂದು ಅದರ ಪ್ರತಿಷ್ಠೆ ನಡೆಸಿದ ಐತಿಹ್ಯವಿದೆ. ಇದೇ ರೀತಿ ಒಮ್ಮೆ ಬಂಟವಾಳ ದೇವರ ಕಟ್ಟೆಯ ಹತ್ತಿರದ ಕೆರೆಯಲ್ಲಿ ದೇವರ ವಿಗ್ರಹ ಇತ್ಯಾದಿಗಳನ್ನು ಮುಳುಗಿಸಿಟ್ಟಿದ್ದರಂತೆ. ಆಮೇಲೆ ಕೆರೆಯ ನೀರಿನಿಂದ ದೇವರ ವಿಗ್ರಹ, ಪೀಠ ಪ್ರಭಾವಳಿಗಳನ್ನು ಹೊರತೆಗೆಯುವಾಗ ಒಂದು ವಿಗ್ರಹ ಕೆರೆಯಲ್ಲಿಯೇ ಉಳಿದುಬಿಟ್ಟಿತೆಂದು ಹೇಳುತ್ತಾರೆ. ಹೀಗಾಗಿ ಈ ಕೆರೆಯಲ್ಲಿ ಈಗಲೂ ಬಟ್ಟೆ ಒಗೆಯುವುದಕ್ಕೆ ಮತ್ತು ಹೆಂಗಸರು ಸ್ನಾನ ಮಾಡುವುದಕ್ಕೆ ಅವಕಾಶ ಇಲ್ಲ.

೧೯೭೪ರಲ್ಲಿ ಭೂಕಾಯಿದೆ(ಉಳುವವನಿಗೆ ಭೂಮಿ) ಜಾರಿಗೆ ಬರುವುದಕ್ಕಿಂತ ಮೊದಲು ಭಕ್ತಜನರು ಈ ದೇವಸ್ಥಾನಕ್ಕೆ ಸುಮಾರು ೪೫೦೦ ಮುಡಿ ಅಕ್ಕಿಗೇಣಿ ಬರುವ ಭೂಮಿಯನ್ನು

ದಾನ ಶಾಸನವಾಗಿ(ಉಂಬಳಿಯಾಗಿ) ನೀಡಿದ್ದರು. ಇದರಿಂದ ಶ್ರೀ ದೇವರ ಉತ್ಸವ, ಬ್ರಾಹ್ಮಣ ಸೇವೆ ಇತ್ಯಾದಿ ಧಾರ್ಮಿಕ ಕಾರ್ಯಗಳು ಅತಿ ಉತ್ತಮ ರೀತಿಯಿಂದ ನಡೆಯುವ ಹಾಗಾಯಿತು. ದೇವಸ್ಥಾನಕ್ಕೆ ಭೇಟಿ ನೀಡುವ ಯಾತ್ರಿಕರು, ಸ್ಥಳೀಯ ಶಾಲಾ ವಿದ್ಯಾರ್ಥಿಗಳು ಮತ್ತು ಬಡವರೆಂದು ಸುಮಾರು ಐವತ್ತು ಮಂದಿಗೆ ಮಧ್ಯಾಹ್ನದ ಊಟ ನೀಡುವ ಕ್ರಮ ಬಹಳ ಹಿಂದಿನ ಕಾಲದಿಂದಲೇ ಜಾರಿಯಲ್ಲಿ ಇದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ದೇವಾಲಯಗಳಲ್ಲಿ ಅತೀ ಸುಂದರವಾದ ಮತ್ತು ಮಜಬೂತಾದ ಬೆಳ್ಳಿ ಲಾಲಕಿ ಬಂಟವಾಳ ದೇವಾಲಯದ್ದು ಎಂಬ ಖ್ಯಾತಿ ಇದೆ. ಅದಲ್ಲದೆ ಬೆಳ್ಳಿ ಪಾಲಕಿ ಮತ್ತು ಉತ್ಸವದ ವಾಹನಗಳೂ ಇವೆ. ಶ್ರೀ ದೇವರಿಗೆ ಲಾಲಕಿ ಅಥವಾ ಇತರ ವಾಹನಗಳಲ್ಲಿಟ್ಟು ಉತ್ಸವವನ್ನು ನಡೆಸುವಾಗ, ಹೆಗಲು ನೀಡುವ ತರುಣರು(ಹಿರಿಯರು ಕೂಡ) ವಾಹನವನ್ನು ತೂಗುತ್ತಾ, ತೂಗುತ್ತಾ, ಹೆಜ್ಜೆ ಹಾಕುವ ಒಂದು ವಿಶಿಷ್ಟ ಹಾಗೂ ಆಕರ್ಷಕ ಶೈಲಿ ಇದೆ. ಆ ದೃಶ್ಯವನ್ನು ಕಾಣಲು ಅದರಲ್ಲಿಯೂ ಮುಖ್ಯವಾಗಿ ರಥೋತ್ಸವದ ದಿನದಂದು ಪರಊರಿನ ಜನರು ಬಹಳ ಸಂಖ್ಯೆಯಲ್ಲಿ ಬರುತ್ತಾರೆ ಮತ್ತು ಉತ್ಸವದ ಚೆಂದವನ್ನು ಕಣ್ಣಿನಲ್ಲಿ ತುಂಬಿಕೊಂಡು ತಮ್ಮ ಊರಿಗೆ ಹಿಂತಿರುಗುತ್ತಾರೆ.

ಆರು ದಿನಗಳ ರಥೋತ್ಸವದ ಆಚರಣೆಯಲ್ಲಿ ನಾಲ್ಕನೆಯ ದಿನವು ಬಂಟವಾಳ ಶ್ರೀ ದೇವರ ಪ್ರತಿಷ್ಠೆಯ ದಿನ. ಅಂದು ಊರ ಪರವೂರಿನ ಸುಮಾರು ೪೦೦-೫೦೦ ಭಕ್ತಜನರಿಂದ 'ಪುಳಕಾಭಿಷೇಕ' ಸೇವಾಕಾರ್ಯ ನಡೆಯುತ್ತದೆ. ರಾತ್ರಿ ನೇತ್ರಾವತಿ ನದಿಯ ನೀರಿನಲ್ಲಿ ಶೃಂಗರಿಸಿದ ದೋಣಿಯ ಮೇಲೆ ಶೇಷ ವಾಹನದಲ್ಲಿ ಕುಳಿತ ಶ್ರೀ ದೇವರ ಉತ್ಸವ. ಇದು ಬಂಟವಾಳದ ಒಂದು ಪ್ರತ್ಯೇಕ ವಿಶೇಷವಾಗಿದೆ. ಆಮೇಲೆ ಅಲಂಕೃತ ಬೆಳ್ಳಿ ಲಾಲಕಿಯಲ್ಲಿ "ಮೃಗಬೇಟೆ' ನಡೆಯುತ್ತದೆ. ಅನಂತರ ನಡೆಯುವ ಬೆಳ್ಳಿತೇರಿನಲ್ಲಿ ಕುಳಿತ ಶ್ರೀ ದೇವರ ಉತ್ಸವವು ಜಿಲ್ಲೆಯಲ್ಲಿಯೇ ವಿಶಿಷ್ಟವಾದುದು. ಮರುದಿನ ಬ್ರಹ್ಮ ರಥೋತ್ಸವವನ್ನು ನೋಡಲು ಕಿಕ್ಕಿರಿದು ನೆರೆಯುವ ಭಕ್ತಗಣ, ಆಮೇಲೆ ಧನ್ಯತಾ ಭಾವದಿಂದ ಊರಿಗೆ ಹಿಂತಿರುಗುತ್ತಾರೆ. ಬಂಟವಾಳದ ವೆಂಕಟರಮಣನಿಗೆ ಮಂಗಳೂರಿನ 'ಕಸ್ತೂರಿ ಮಲ್ಲಿಗೆ' ತುಂಬಾ ಪ್ರೀತಿ ಎನ್ನುವ ಕಾರಣಕ್ಕಾಗಿ, ಭಕ್ತಜನ ಬುಟ್ಟಿಗಳಲ್ಲಿ ಮಲ್ಲಿಗೆ ಹೂ ತುಂಬಿ ತಂದು ಬ್ರಹ್ಮರಥದಲ್ಲಿ ಆಸೀನನಾಗಿರುವ ಶ್ರೀ ವೆಂಕಟರಮಣ ಸ್ವಾಮಿಗೆ ಸಮರ್ಪಿಸುತ್ತಾರೆ. ಅದು ನೋಡಲೇ ಬೇಕಾದ ವಿಶೇಷ ದೃಶ್ಯವಾಗಿರುತ್ತದೆ.

ಶ್ರೀ ದೇವಸ್ಥಾನದ ಭಂಡಾರದಿಂದ ೧೮೮೨ರಲ್ಲಿ ಒಂದು ಪ್ರಾಥಮಿಕ ಶಾಲೆ ಮತ್ತು ೧೯೩೭ರಲ್ಲಿ ಪ್ರೌಢಶಾಲೆ ಪ್ರಾರಂಭವಾಗಿ ಬಂಟವಾಳದಷ್ಟೇ ಅಲ್ಲ ಧರ್ಮಸ್ಥಳ, ಬೆಳ್ತಂಗಡಿ, ಪುತ್ತೂರು, ಮೂಡುಬಿದಿರೆ, ಉಪ್ಪಿನಂಗಡಿ, ಆರ್ಕುಳ ಇತ್ಯಾದಿ ಊರುಗಳ ವಿದ್ಯಾರ್ಥಿಗಳಿಗೂ ಶಿಕ್ಷಣ ಸಿಗುವ ಹಾಗಾಯಿತು. ಪ್ರಾಯಶಃ ಮಂಗಳೂರಿನಲ್ಲಿ ಅಮ್ಮೆಂಬಳ ಸುಬ್ರಾಯ ಪೈಯವರು ೧೮೮೨ರಲ್ಲಿ ಕೆನರಾ ಪ್ರೌಢಶಾಲೆಯನ್ನು ಸ್ಥಾಪಿಸಿದ ಬಳಿಕ ಬಂಟವಾಳದಲ್ಲಿ ೧೯೩೭ರಲ್ಲಿ ಶ್ರೀ ದೇವಾಲಯದ ಆಡಳಿತದಾರರಾದ ಶ್ರೀ ಬಾಬ ಕಾಮತಿಯವರು ಪ್ರೌಢ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಧರ್ಮಸ್ಥಳದ ಹಿಂದಿನ ಧರ್ಮಾಧಿಕಾರಿಗಳಾದ ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಈಗಿನ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಗಣೇಶ ಬೀಡಿ ಸ್ಥಾಪಕರು ಮತ್ತು ಮಹಾದಾನಿ ಶ್ರೀ ಬಿ. ರಘುರಾಮ ಪ್ರಭು, ಬಂಟವಾಳ ಮಾಧವ ಶೆಣೈ, ಕರ್ನಾಟಕ ರಾಜ್ಯಸರ್ಕಾರದ ಸಚಿವರು ಮತ್ತು ಸಭಾಪತಿಗಳಾಗಿದ್ದ ವೈಕುಂಠ ಬಾಳಿಗಾ, ಇಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್ ಆಫ್ ಇಂಡಿಯಾ ಸಂಸ್ಥೆಯ ಸ್ಥಾಪಕರಾದ ಪಿ.ಎ. ಭಟ್ ರಂತಹ ಪ್ರಸಿದ್ಧ ಮಹನೀಯರು ಬಂಟವಾಳದ ವೆಂಕಟರಮಣ ದೇವಸ್ಥಾನದ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದವರು.

ಶ್ರೀ ಕಾಶೀಮಠದ ಯತಿಗಳಿಗೆ ಬಂಟವಾಳ ಊರಿನ ಶಿಷ್ಯವರ್ಗದ ಮೇಲೆ ಬಹಳ ಪ್ರೀತಿ, ಅಭಿಮಾನ ಮತ್ತು ವಿಶ್ವಾಸ. ಕಾಶೀಮಠ ಗುರುಪರಂಪರೆಯ ಆರನೆಯ ಯತಿಗಳಾದ ಶ್ರೀ ದೇವೇಂದ್ರತೀರ್ಥ ಸ್ವಾಮಿಗಳು ಬಂಟವಾಳದಲ್ಲಿಯೇ ಗತರಾಗಿದ್ದರು. ಅನಂತರ ಬಂಟವಾಳದಲ್ಲಿ ಕಾಶೀಮಠದ ಸ್ಥಾಪನೆಯಾಗಿ, ಅಲ್ಲಿ ಅವರ ವೃಂದಾವನ ಇದೆ. ಕಾಶೀಮಠಕ್ಕೆ ಸಂಬಂಧಿಸಿದ ಬಹಳಷ್ಟು ಆಸ್ತಿ ದಾಖಲೆಗಳು, ಗ್ರಂಥಗಳು ಬಂಟವಾಳದ ಮಠದಲ್ಲಿದ್ದವು. ಹೀಗಾಗಿ ಇತ್ತೀಚೆಗಿನವರೆಗೆ ಗುರು ಪರಂಪರೆಯ ಯತಿಗಳು ಆಗಾಗ ಬಂದು ಬಂಟವಾಳದ ಮಠದಲ್ಲಿ ಇರುವುದಿತ್ತು. ಇದರಿಂದ ಬಂಟವಾಳ ಪೇಟೆಯ ಶಿಷ್ಯವರ್ಗಕ್ಕೆ, ಅದೇ ರೀತಿ ಪೇಟೆಯ ಜನರಿಗೆ ಪೂಜ್ಯ ಸ್ವಾಮಿಜಿಯವರೊಂದಿಗೆ ನಿಕಟ ಸಂಬಂಧ ಮುಂದುವರಿದು ಬಂದಿದೆ. ಇದರಿಂದ ಬಂಟವಾಳಕ್ಕೆ 'ಕಾಶೀಮಠದ ಯತಿಗಳ ತವರು' ಎಂಬ ಹೆಸರೂ ಬಂದಿದೆ.

ಧರ್ಮಸ್ಥಳ ಹೆಗ್ಗಡೆಗಳ ಭಂಡಸಾಲೆ

ಬಂಟವಾಳದ ಪರಂಪರೆಯ ವೈಭವದ ಮತ್ತೊಂದು ದ್ಯೋತಕ ಧರ್ಮಸ್ಥಳದ ಹೆಗ್ಗಡೆಗಳ ಭಂಡಸಾಲೆ. ಬಂಟವಾಳದ ನೇತ್ರಾವತಿ ನದಿತೀರದ ಬಸ್ತಿಪಡ್ಪಿನಲ್ಲಿ ನೂರಾರು ವರ್ಷಗಳ ಹಿಂದಿನ ಒಂದು ಜೈನರ ಬಸದಿ ಮತ್ತು ಹೆಗ್ಗಡೆಗಳ ಭಂಡಸಾಲೆಗಳು ಇವೆ. ಹಲವು ವರ್ಷಗಳ ಹಿಂದೆ ಶ್ರೀಕ್ಷೇತ್ರದ ಹೆಗ್ಗಡೆಗಳು ಕೋರ್ಟು, ಕಚೇರಿ ಕೆಲಸ ಮತ್ತು ಇತರ ಕಾರ್ಯಗಳಿಗಾಗಿ ಬೆಳಗ್ಗೆ ಧರ್ಮಸ್ಥಳದಿಂದ ಮಂಗಳೂರಿಗೆ ಹೊರಟವರು (ಮೇನೆಯಲ್ಲಿ ಅಥವಾ ಕುದುರೆ ಸಾರೋಟಿನಲ್ಲಿ) ಸೂರ್ಯ ಮುಳುಗುವ ಹೊತ್ತಿನಲ್ಲಿ ಬಂಟವಾಳ ತಲುಪಿ ಇಲ್ಲಿ ಭಂಡಸಾಲೆಯೆಂದು ಕರೆಯಲ್ಪಡುವ ನಿವೇಶನದಲ್ಲಿ ತಂಗಿ ರಾತ್ರಿ ವಿಶ್ರಾಂತಿ ಪಡೆದು ಮರುದಿನ ಮಂಗಳೂರಿಗೆ ಹೊರಡುತ್ತಿದ್ದರು. ಇದೇ ರೀತಿ ಮಂಗಳೂರಿನಲ್ಲಿ ಕೆಲಸ ಮುಗಿದ ಬಳಿಕ ಅವರು ಭಂಡಸಾಲೆಗೆ ಮರಳುವುದು ಇತ್ತಂತೆ; ಅಲ್ಲದೆ ಬಂಟವಾಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಭೂಗೇಣಿಯಾಗಿ ಬರುತ್ತಿದ್ದ ಅಕ್ಕಿ, ಭತ್ತಗಳನ್ನು ಇದೇ ಭಂಡಸಾಲೆಯಲ್ಲಿ ಸಂಗ್ರಹಿಸಲಾಗುತ್ತಿದ್ದು ಇಲ್ಲಿಂದಲೇ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅದರ ಸರಬರಾಜು ನಡೆಯುತ್ತಿತ್ತು ಎಂದು ನಮ್ಮ ಹಿರಿಯರು ಹೇಳುತ್ತಿದ್ದರು.

ನಾನು ಶಾಲೆಗೆ ಹೋಗುವ ದಿನಗಳಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದ ಈಗಿನ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗ್ಗಡೆಯವರ ಪೂಜ್ಯ ತಂದೆಯವರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಮತ್ತು ಮಾತೋಶ್ರೀ ರತ್ನಮ್ಮ ಹೆಗ್ಗಡೆಯವರು ಬಂಟವಾಳದ ಭಂಡಸಾಲೆಯ ಕಟ್ಟಡದಲ್ಲಿಯೇ ವಾಸವಾಗಿದ್ದು, ಶ್ರೀ ವೀರೇಂದ್ರ ಹೆಗ್ಗಡೆಯವರ ಮತ್ತು ಅವರ ತಮ್ಮಂದಿರ ಬಾಲ್ಯದ ಶಿಕ್ಷಣವು ಬಂಟವಾಳದಲ್ಲಿಯೇ ನಡೆದಿತ್ತು. ಹೀಗಾಗಿ ಧರ್ಮಸ್ಥಳದ ಹೆಗ್ಗಡೆಗಳಿಗೆ ಬಂಟವಾಳವೆಂದರೆ ವಿಶೇಷ ಅಭಿಮಾನ. ಬಂಟವಾಳದ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಹೆಗ್ಗಡೆಗಳ ಹೆಚ್ಚಿನ ಒಲವು ಮತ್ತು ವರದ ಹಸ್ತ ಯಾವಾಗಲೂ ಮುಕ್ತ ರೀತಿಯಿಂದ ತೆರೆದಿರುತ್ತದೆ.

ಕಳೆದ ಶತಮಾನಗಳಲ್ಲಿ ಧರ್ಮಸ್ಥಳಕ್ಕೆ ಬೇಕಾದ ದವಸಧಾನ್ಯಗಳು, ಎಣ್ಣೆ, ಜವುಳಿ ಇತ್ಯಾದಿ ಬಂಟವಾಳದ ವ್ಯಾಪಾರಿಗಳಿಂದಲೇ ಸರಬರಾಜು ಆಗುತ್ತಿತ್ತು. ಈಗಿನ ದಿನಗಳಲ್ಲಿ ಶ್ರೀಕ್ಷೇತ್ರದ ದೈನಂದಿನ ಆವಶ್ಯಕತೆಗಳ ಬೇಡಿಕೆಯನ್ನು ಪೂರೈಸಲು ಬಂಟವಾಳ, ಮಂಗಳೂರು ಮಾತ್ರವಲ್ಲ ಕರ್ನಾಟಕ ರಾಜ್ಯದ ಇತರ ಜಿಲ್ಲೆಗಳ ಗಿರಣಿಗಳೂ ಸಾಲದಾಗಿವೆ. ಇತ್ತೀಚೆಗೆ ಸಮಾಜದ ಸಮಾರಂಭವೊಂದರಲ್ಲಿ ನಾನು ಬಂಟವಾಳದ ಮತ್ತು ಶ್ರೀಕ್ಷೇತ್ರದ ಕುರಿತು ಪ್ರಸ್ತಾಪಿಸುವಾಗ ಈ ವಿಚಾರವನ್ನು ಉಲ್ಲೇಖಿಸಿದ್ದೆ. ಆಗ ಶ್ರೀ ವೀರೇಂದ್ರ ಹೆಗ್ಗಡೆಯವರು ಈಗಲೂ ಶ್ರೀ ಕ್ಷೇತ್ರದ ಧವಸಧಾನ್ಯಗಳ ಪೂರೈಕೆಯಲ್ಲಿ ಗೌಡಸಾರಸ್ವತ ವ್ಯಾಪಾರಿಗಳ ಪಾಲು ಹೆಚ್ಚು ಇದೆ ಎಂದು ಹೇಳಿದ್ದರು. ಹೀಗೆ ಶತಮಾನಗಳಿಂದ ಧರ್ಮಸ್ಥಳ ಹೆಗ್ಗಡೆಗಳ ವಿಶೇಷ ಪ್ರೀತ್ಯಾದರಗಳಿಗೆ ಪಾತ್ರವಾಗಿರುವುದು ಬಂಟವಾಳದ ವಿಶೇಷ ಹಿರಿಮೆ, ಗರಿಮೆ.

ದೇಶದಲ್ಲಿ ಗಾಂಧಿಯುಗ ಪ್ರಾರಂಭವಾಗಿ ಸ್ವಾತಂತ್ರ್ಯ ಚಳವಳಿ ನಡೆಯುತ್ತಿದ್ದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟವಾಳದ ಜನರು ಇದರಲ್ಲಿ ಮುಖ್ಯಪಾತ್ರ ನಿರ್ವಹಿಸಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಎರಡು ಬಾರಿ, ಅನಂತರ ಪಂಡಿತ ಜವಾಹರಲಾಲ್ ನೆಹರೂ, ಆಚಾರ್ಯ ಕೃಪಲಾನಿ, ಇಂದಿರಾಗಾಂಧಿ, ಕಾಮರಾಜ ನಾಡಾರ ಮೊದಲಾದ ದೇಶದ ಪ್ರಮುಖ ಧುರೀಣರು ಬಂಟವಾಳಕ್ಕೆ ಭೇಟಿ ನೀಡಿದ್ದಾರೆ. ಮಹಾತ್ಮಾ ಗಾಂಧೀಜಿಯವರ ತತ್ವ ಆಚರಣೆಗಾಗಿ ಚರಕದಲ್ಲಿ ನೂಲು ತೆಗೆದು ಅದರ ಬಟ್ಟೆ ತಯಾರಿಕೆಗಾಗಿ ಖಾದಿ ಕೇಂದ್ರದ ಸ್ಥಾಪನೆಯಾದ ಬಳಿಕ ಇಲ್ಲಿ ತಯಾರಾದ ಖಾದಿ ಉಡುಪನ್ನು ಧರಿಸುವುದು ಬಂಟವಾಳದ ಜನರಿಗೆ ರೂಢಿಯಾಯಿತು. ೧೯೪೨ನೇ ಇಸವಿಯ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಜೈಲಿಗೆ ಹೋದವರು ಬಂಟವಾಳದ ನಂದಾವರ ವಾಸುದೇವ ಶೆಣೈ. ಆ ದಿನಗಳಲ್ಲಿ ಮಂಗಳೂರಿನಲ್ಲಿ ಹುಟ್ಟಿ ಆಮೇಲೆ ಇಡೀ ದೇಶದಲ್ಲಿಯೇ ಪ್ರಸಿದ್ಧರಾದ ಹುಂಡಿ ವಿಷ್ಣು ಕಾಮತ, ಉಳ್ಳಾಲ ಶ್ರೀನಿವಾಸ ಮಲ್ಯರಂತಹ ನೇತಾರರು ಆಗಾಗ ಬಂಟವಾಳಕ್ಕೆ ಭೇಟಿ ನೀಡುತ್ತಿದ್ದರು. ಇದಲ್ಲದೆ ಗಾಂಧೀಜಿಯವರ ಹರಿಜನ ಚಳವಳಿಯಲ್ಲಿಯೂ ಬಂಟವಾಳ ಮುಂಚೂಣಿಯಲ್ಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವಪ್ರಥಮವಾಗಿ ಹರಿಜನರಿಗೆ ದೇವಾಲಯ ಪ್ರವೇಶ ಮತ್ತು ಹೋಟೇಲುಗಳಿಗೆ ಪ್ರವೇಶ ದೊರಕಿದ್ದು ಬಂಟವಾಳದಲ್ಲಿ.

ಬಂಟವಾಳದ ಹಿರಿಯರು ೧೯೩೯ರಲ್ಲಿ ಪ್ರಾರಂಭಿಸಿದ ಶ್ರೀ ಯಶವಂತ ವ್ಯಾಯಾಮ ಶಾಲೆಯು ಈಗ ದೇಶದಾದ್ಯಂತ 'ಮಲ್ಲಕಂಬ ಶಾಲೆ' ಎಂದೇ ಹೆಸರು ಪಡೆದಿದೆ. (ಈ ಕುರಿತು ಪ್ರತ್ಯೇಕ ಅಧ್ಯಾಯ ಇದೆ.) ಇತ್ತೀಚಿಗಿನವರೆಗೆ ಮಂಗಳೂರಿಗೆ

ಭೇಟಿ ನೀಡುತ್ತಿದ್ದ ಜಗತ್ಪ್ರಸಿದ್ಧ ಪೈಲ್ವಾನರು ಬಂಟವಾಳಕ್ಕೆ ಬಂದು ಜಂಗೀ ಕುಸ್ತಿ ಮಾಡುತ್ತಿದ್ದರು. "ಕಿಂಗಕಾಂಗ್", ಪೈಲ್ವಾನ್ ಧಾರಾಸಿಂಗ್, ಚೋಟಾ ಪಜ್ಲು ಹೀಗೆ ಪ್ರಸಿದ್ಧ ಕುಸ್ತಿಪಟುಗಳು ಅವರಾಗಿ ಇಷ್ಟಪಟ್ಟು ಬಂಟವಾಳಕ್ಕೆ ಬರುತ್ತಿದ್ದರು. ಆಗ ಕುಸ್ತಿ ಪಂದ್ಯಗಳ ಉಮೇದುವಾರರಾಗಿದ್ದ ಶ್ರೀ ಎನ್. ದಾಸ ಭಟ್ಟರು (ಮಂಗಳೂರಿನ ಮಾಜಿ ಶಾಸಕರಾದ ಶ್ರೀ ಎನ್. ಯೋಗೀಶ್ ಭಟ್ಟರ ಚಿಕ್ಕಪ್ಪ) ತುಂಬಾ ಹಣ ಖರ್ಚು ಮಾಡಿ ಕುಸ್ತಿಪಂದ್ಯಾಟಗಳನ್ನು ಆಯೋಜಿಸುತ್ತಿದ್ದರು. ಇದನ್ನು ನೋಡಲು ಬಂಟವಾಳ ಪರಿಸರದ ಸಾವಿರಾರು ಕುಸ್ತಿಪ್ರೇಮಿಗಳು ಬಂಟವಾಳಕ್ಕೆ ಬರುತ್ತಿದ್ದರು.

ಕ್ರೀಡಾ ಕ್ಷೇತ್ರದಲ್ಲಿಯೂ ಕ್ರಿಕೆಟ್, ವಾಲಿಬಾಲ್ ಆಡುವ ಉತ್ತಮ ತಂಡಗಳು ಇದ್ದವು. ಮಂಗಳೂರಿನ ಕೆನರಾ ಪ್ರೌಢಶಾಲೆ, ಅಲೋಶಿಯೇಸ್ ಕಾಲೇಜ್ ತಂಡಗಳೊಂದಿಗೆ ಪಂದ್ಯ ನಡೆಯುತ್ತಿದ್ದವು. ಇದರಲ್ಲಿ ನಾನೂ ಭಾಗವಹಿಸುತ್ತಿದ್ದೆ.

ತಾಳ ಮದ್ದಳೆ

ಕಳೆದ ಇನ್ನೂರು ವರ್ಷಗಳಿಂದ ಬಂಟವಾಳದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷ ಶ್ರಾವಣ ಮಾಸದಲ್ಲಿ ತಾಳಮದ್ದಳೆ(ಯಕ್ಷಗಾನ ತಾಳಮದ್ದಳೆ) ಕಾರ್ಯಕ್ರಮ ನಡೆಯುತ್ತದೆ. ಈ ಒಂದು ತಿಂಗಳ ಕಾರ್ಯಕ್ರಮಕ್ಕಾಗಿ ಸಾವಿರಾರು ಸಂಖ್ಯೆಯಲ್ಲಿ ಯಕ್ಷಗಾನ ಪ್ರೇಮಿಗಳು ದ.ಕ. ಜಿಲ್ಲೆಯ ವಿವಿಧ ಭಾಗಗಳಿಂದ ಕಾರು, ಟ್ಯಾಕ್ಸಿ, ಬಸ್ಸುಗಳಲ್ಲಿ ಬರುವುದಿತ್ತು. ಇತ್ತೀಚೆಗೆ ಅಲ್ಲಲ್ಲಿ ಯಕ್ಷಗಾನ ತಾಳಮದ್ದಳೆ ನಡೆಯುತ್ತಿರುವುದರಿಂದ ಅಷ್ಟು ಜನಪ್ರವಾಹ ಕಂಡುಬರುವುದಿಲ್ಲ. ಆದರೂ ನೂರು, ಇನ್ನೂರು ವರ್ಷಗಳ ಇತಿಹಾಸವಿರುವ ಬಂಟವಾಳ ದೇವಸ್ಥಾನದಲ್ಲಿ ಜರಗುವ ಈ ಕಾರ್ಯಕ್ರಮಕ್ಕೆ ಮೂವತ್ತು ದಿನಗಳಲ್ಲಿಯೂ ಅದು ಒಂದು ವ್ರತವೆಂದು ಬಗೆದ ಹಾಗೆ ಜಿಲ್ಲೆಯ ಬೇರೆಬೇರೆ ಊರಿನ ಯಕ್ಷಗಾನ ತಂಡಗಳು ದೇವಸ್ಥಾನಕ್ಕೆ ಬಂದು ತಾಳಮದ್ದಳೆ ಸೇವೆ ನೀಡಿ ತೆರಳುತ್ತವೆ. ಅವರಿಗೆ ಯಾವುದೇ ಸಂಭಾವನೆ ದೊರೆಯುವುದಿಲ್ಲ. ಅವರಿಗೆ ಸಿಗುವುದು ದೇವರ ಪ್ರಸಾದ ಮಾತ್ರ. ತುಳುನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ಬಂಟವಾಳದಲ್ಲಿ ನಡೆಯುತ್ತಿರುವ ಶ್ರಾವಣಮಾಸದ ಈ ಕಾರ್ಯಕ್ರಮವು ಬಹು ದೊಡ್ಡ ದೇಣಿಗೆಯಾಗಿದೆ.

ಬಂಟವಾಳದ ವಿಶೇಷ ಹೆಸರು ಪಡೆದ ಮತ್ತೊಂದು ಕ್ಷೇತ್ರವೆಂದರೆ ಅದು ಭಜನಾ ಕ್ಷೇತ್ರ. ನಾನು ಸಣ್ಣವನಿರುವಾಗ, ಬೊಳಂತೂರು ಮಂಜುನಾಥ ಪೈ, ಸುಬ್ಬಣ್ಣ ಪೈ, ದಾಸ ಮಾಸ್ತರ, ಮತ್ತು ಗೋಪಾಳ ಮಾಸ್ತರರು ಭಜನೆಯಾಗಿ ಭಕ್ತಿಪ್ರಧಾನ ಹಾಡುಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. ಅನಂತರದ ಪೀಳಿಗೆಯಲ್ಲಿ ಶ್ರೀ ಬಿ. ಶಾಂತಾರಾಮ ಬಾಳಿಗಾ, ಬಿ. ರಾಧಾಕೃಷ್ಣ ಬಾಳಿಗಾ, ಜಕ್ರಿಬೆಟ್ಟು ಸುರೇಶ ಶೆಣೈ, ಪಿ. ವಸಂತ ಪ್ರಭು ಇವರು ತಮ್ಮ ಉತ್ತಮ ಕಂಠದಿಂದ ಜಿಲ್ಲೆ, ಪರಜಿಲ್ಲೆಗಳಲ್ಲಿಯೂ ಹೆಸರು ಪಡೆದಿದ್ದಾರೆ. ಭಜನಾ ಕ್ಷೇತ್ರದಲ್ಲಿ ಶ್ರೀ ರಾಧಾಕೃಷ್ಣ ಬಾಳಿಗಾ ಎಷ್ಟು ಪ್ರಸಿದ್ಧರಾಗಿದ್ದರೆಂದರೆ, ಧರ್ಮಸ್ಥಳದಲ್ಲಿ ಪದ್ಮವಿಭೂಷಣ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ವರ್ಷಾವಧಿ ನಡೆಸಿಕೊಂಡು ಬರುವ 'ಭಜನಾ ಕಾರ್ಯಾಗಾರ ಮತ್ತು 'ಭಜನಾ ಸಪ್ತಾಹ ದ ಮುಖಂಡತ್ವವು ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಶ್ರೀ ರಾಧಾಕೃಷ್ಣ ಬಾಳಿಗಾ ಅವರದ್ದೇ ಆಗಿತ್ತು (ಇತ್ತೀಚೆಗೆ ಅವರು ನಿಧನ ಹೊಂದಿದ್ದಾರೆ). ಈಗ ಶ್ರೀ ಪಿ. ದೇವದಾಸ ಪ್ರಭು ಅವರು ಭಜನೆ ಕಲಿಸಲು, ಭಜನೆಯ ತರಗತಿಗಳನ್ನು ನಡೆಸಲು ಅನೇಕ ಊರುಗಳಿಗೆ ಹೋಗಿಬರುತ್ತಿದ್ದಾರೆ. ಹೋದಲ್ಲೆಲ್ಲಾ ಅವರನ್ನು ತುಂಬಾ ಪ್ರೀತಿ, ವಿಶ್ವಾಸದಿಂದ ಆದರಿಸುತ್ತಾರೆ.

ಬಂಟವಾಳದಲ್ಲಿ ನಾಗಸ್ವರ ಮತ್ತು ಕ್ಲಾರಿಯೋನೆಟ್ (ಈಗ ಸೆಕ್ಸೊಫೋನ್) ವಾದಕರು, ನಟರು, ನಾಟಕಕಾರರು ಮತ್ತು ಕರ್ನಾಟಕಿ ಮತ್ತು ಹಿಂದೂಸ್ತಾನಿ ಗಾಯಕರು ಇದ್ದರು.

ಮುಂಬಯಿಗೆ ಹೋಗಿ ಅಲ್ಲಿ ಮರಾಠಿ ನಾಟಕ ಮತ್ತು ನಾಟ್ಯಸಂಗೀತಗಳಲ್ಲಿ ಪ್ರಾವೀಣ್ಯ ಪಡೆದು ಊರಿಗೆ ಬಂದ ಎನ್.ಆರ್. ಬಂಟವಾಳಕಾರ್(ನಾಟಕಾ ನಾಣ್ಣು), ಮತ್ತು ಎನ್.ಎಲ್. ಬಂಟವಾಳಕಾರ್(ಬಿ. ನರಸಿಂಹ ಲಕ್ಷ್ಮಣ ಬಾಳಿಗಾ) ಇವರು ಬಂಟವಾಳ ಮತ್ತು ಸುತ್ತುಮುತ್ತಲಿನ ಊರುಗಳ ತರುಣರಿಗೆ ನಾಟಕ ಕ್ಷೇತ್ರದಲ್ಲಿ ಅಭಿರುಚಿ ಬೆಳೆಸಿ ಜನಪ್ರಿಯರಾದರು. ಅವರ ಪರಿಶ್ರಮದ ಕಾರಣವಾಗಿ ಒಂದು ಹೊಸ ಪೀಳಿಗೆಯೇ ತಲೆಯೆತ್ತಿ, ಈ ಪ್ರದೇಶದಲ್ಲಿ ನಾಟಕರಂಗ ಜೀವಂತವಾಗಿ ಉಳಿಯುವಂತೆ ಆಯಿತು. ಇನ್ನು ಮಂಗಳೂರಿಗೆ ಬರುತ್ತಿದ್ದ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದ ವಿದ್ವಾಂಸರು ನಾಟಕಾ ನಾಣ್ಣು ಅವರನ್ನು ಅರಸಿ ಬಂದು, ಅವರ ನೇತೃತ್ವದಲ್ಲಿ ಬಂಟವಾಳ ಮತ್ತು ಹತ್ತಿರದ ಊರುಗಳಲ್ಲಿ ಸಂಗೀತ ಕಚೇರಿ, ಅದೇ ರೀತಿ ವಾದ್ಯ ಸಂಗೀತದ

ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಬಂಟವಾಳದ ಸಂಗೀತ ಪ್ರೇಮಿಗಳು ವಾದ್ಯ ಕಲಾಕಾರರಿಗೆ ನೀಡುವ ಪ್ರೋತ್ಸಾಹವನ್ನು ಕೇಳಿ ತಮಿಳು ನಾಡು, ಕೇರಳಗಳಿಂದ ಮತ್ತು ಮೈಸೂರು ಕಡೆಗಳಿಂದ ವಾದ್ಯ ಸಂಗೀತಗಾರರು ಬಂದು ನಾಗಸ್ವರ ಇತ್ಯಾದಿ ಕಾರ್ಯಕ್ರಮಗಳನ್ನು ನೀಡಿ ಹೋಗುತ್ತಿದ್ದರು.

ಬಂಟವಾಳದಲ್ಲಿ 'ಹರಿಕಥಾ' ಕಲೆಗೂ ತುಂಬಾ ಆಶ್ರಯವಿತ್ತು. ಮೈಸೂರು, ಉಡುಪಿ ಪ್ರದೇಶದಿಂದ ಪ್ರಸಿದ್ಧ ಹರಿದಾಸರು ಬಂಟವಾಳಕ್ಕೆ ಬಂದು ಅವರ ಹರಿಕಥಾ ಕಾರ್ಯಕ್ರಮ ನೀಡುತ್ತಿದ್ದರು. ನಮ್ಮ ಹಿರಿಯರು ಅವರಿಗೆ ಆಶ್ರಯ ನೀಡಿ ದಿನ, ವಾರ, ತಿಂಗಳುಗಟ್ಟಳೆ ಅವರ ಹರಿಕಥಾ ಕಾರ್ಯಕ್ರಮ ನೀಡಲು ಅವಕಾಶ ಮಾಡಿಕೊಡುತ್ತಿದ್ದರು ಮತ್ತು ಉತ್ಸಾಹದಿಂದ ಹರಿಕಥೆ ಕೇಳಿ ಹರಿದಾಸರಿಗೆ ಯುಕ್ತ ಸಂಭಾವನೆ ನೀಡಿ ಕಳುಹಿಸಿಕೊಡುತ್ತಿದ್ದರು. ನಾಟಕಾ ನಾಣ್ಣು ಮಾಮನವರು ಊರಿಗೆ ಬಂದ ಹರಿದಾಸರನ್ನು ಹತ್ತಿರದ ಊರಿಗೆ ಕರೆದುಕೊಂಡು ಹೋಗಿ ಅವರ 'ಹರಿಕಥಾ' ಶ್ರವಣ ಕಾರ್ಯಕ್ರಮದ ವ್ಯವಸ್ಥೆ ಮಾಡುತ್ತಿದ್ದರು. ೧೯೫೩-೫೪ನೇ ಇಸವಿಯಲ್ಲಿ ಶ್ರೀ ಹಂಡೆ ವೇದವ್ಯಾಸ ಆಚಾರ್ಯ ಎಂಬ ಖ್ಯಾತ ಹರಿದಾಸರ 'ಶ್ರೀ ರಾಮ ಅವತಾರ ಹರಿಕಥೆ' ಒಂದು ತಿಂಗಳ ಕಾಲ ನಡೆದಿತ್ತು. ಊರಿನ ಪರವೂರಿನ ಭಾವುಕ ಜನರು ಬಂದು ಶ್ರೀ ದೇವಸ್ಥಾನದ ಹೊರಗಿನ ಅಂಗಳದಲ್ಲಿ ತುಂಬಿಕೊಳ್ಳುತ್ತಿದ್ದರು. ಆ ರೀತಿಯ ಕಲಾಪ್ರಿಯ ಜನರು ಊರಿನಲ್ಲಿ ಇರುತ್ತಿದ್ದರು.

೧೯೭೭ರಲ್ಲಿ ಬಂಟವಾಳದ ಕಾಶೀಮಠದಲ್ಲಿ ಶ್ರೀ ಕಾಶೀಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಚಾತುರ್ಮಾಸ್ಯ ಆಚರಣ ಮಾಡುವ ದಿನಗಳಲ್ಲಿ ಭದ್ರಗಿರಿ ಕೇಶವದಾಸಜಿ ಅವರು ತಮ್ಮ ೫೦ ಮಂದಿ ಅಮೇರಿಕನ್ ಶಿಷ್ಯಂದಿರನ್ನು ಕರೆದುಕೊಂಡು ತನ್ನ ಗುರುವರ್ಯರ ಆಶೀರ್ವಾದ ಪಡೆಯಲು ಬಂದಿದ್ದರು. ಆ ದಿನಗಳಲ್ಲಿ ನಾನು ಸಿಂಡಿಕೇಟ್ ಬ್ಯಾಂಕ್‌ನ ಬಂಟವಾಳ ಶಾಖೆಯ ಮೆನೇಜರ್ ಆಗಿದ್ದು ಚಾತುರ್ಮಾಸ್ಯ ಸಮಿತಿಯಲ್ಲಿ ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದೆ. ನಾನು ಶ್ರೀ ಕೇಶವದಾಸರ ಬಳಿ ಸಣ್ಣದೊಂದು ಹರಿಕಥಾ ಕಾರ್ಯಕ್ರಮವನ್ನು ಶ್ರೀ ದೇವಸ್ಥಾನದಲ್ಲಿ ನಡೆಸಲು ಅವರ ಒಪ್ಪಿಗೆ ಪಡೆದು, ಊರು ತುಂಬಾ ಧ್ವನಿವರ್ಧಕದಲ್ಲಿ ಕಾರ್ಯಕ್ರಮಕ್ಕೆ ಪ್ರಚಾರ ನೀಡಿದ್ದೆ. ಶ್ರೀ ಕೇಶವದಾಸಜಿ ತಮ್ಮ ೧೭-೧೮ನೇ ವಯಸ್ಸಿನಲ್ಲಿ ಹರಿಕಥೆ ಕಾರ್ಯಕ್ರಮ ನೀಡುವುದನ್ನು ಪ್ರಾರಂಭಿಸಿದಾಗ ಪ್ರಥಮ ಬಾರಿ ಬಂಟವಾಳದ ಹೆಸರನ್ನು ಕೇಳಿ, ಬಂದು ನಾಟಕಾ ನಾಣ್ಣುಮಾಮರನ್ನು ಭೇಟಿಯಾಗಿದ್ದರು. 'ಅವರು ನನ್ನನ್ನು ತಿಂಗಳು, ಒಂದೂವರೆ ತಿಂಗಳುಗಳ ಕಾಲ ಬಂಟವಾಳ ಪರಿಸರದ ಪೇಟೆ, ಹಳ್ಳಿವಾಡಗಳಿಗೆ ಕರೆದುಕೊಂಡು ಹೋಗಿ ಹರಿಕಥೆ ಕಾರ್ಯಕ್ರಮ ನೀಡುವಂತೆ ಮಾಡಿ ಪ್ರೋತ್ಸಾಹ ನೀಡಿದ್ದರು' ಎಂದು ಹೃದಯ ತುಂಬಿ ಹೇಳಿದ ಕೇಶವದಾಸರು, 'ಆ ದಿನಗಳಲ್ಲಿ ನಾನು ಇದೇ ನೇತ್ರಾವತಿ ನದಿಯಲ್ಲಿ ಮಿಂದು ಶ್ರೀ ದೇವಸ್ಥಾನದ ಅಗ್ರಸಾಲೆಯಲ್ಲಿ ಉಂಡು, ರಾತ್ರಿ ಹೊತ್ತು ಇದೇ ದೇವಸ್ಥಾನದ ಅಂಬಲದಲ್ಲಿ ಮಲಗಿಕೊಳ್ಳುತ್ತಿದ್ದೆ. ಬಂಟವಾಳ ಮತ್ತು ನಾಣ್ಣು ಮಾಮನವರನ್ನು ನಾನು ಎಲ್ಲಿದ್ದರೂ, ಯಾವಾಗಲೂ ಮರೆಯುವಂತೆಯೇ ಇಲ್ಲ'ವೆಂದು ಹೇಳಿ ಅವರು ಕಣ್ಣಿನಲ್ಲಿ ನೀರು ತಂದುಕೊಂಡು ಉದ್ಗಾರ ತೆಗೆದದ್ದು ನನಗೆ ಈಗಲೂ ನೆನಪಾಗುತ್ತದೆ. ಸಂತ ಕೇಶವದಾಸಜೀಯವರ ತಮ್ಮ ಸಂತ ಅಚ್ಯುತದಾಸಜೀಯವರೂ ಪ್ರತಿವರ್ಷ ಬಂಟವಾಳಕ್ಕೆ ಬಂದು ಹರಿಕಥಾ ಪ್ರಸಂಗ ಕಾರ್ಯಕ್ರಮವನ್ನು ನೀಡುವುದಿತ್ತು.

ಪಂಡಿತ ಭೀಮಸೇನ್ ಜೋಶಿಯವರು ಇನ್ನೂ ಪ್ರಸಿದ್ಧಿಗೆ ಬಾರದ ದಿನಗಳಲ್ಲಿ ಅವರು ೧೯೪೬ರಲ್ಲಿ ಮಂಗಳೂರಿಗೆ ಬಂದಾಗ, ಬಂಟವಾಳಕ್ಕೂ ಬಂದು ಊರಿನ ಎಸ್.ವಿ.ಎಸ್. ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿದ್ದ ಶ್ರೀ ಶಾರದಾ ಪೂಜೆಯ ದಿನದಂದು ಸಂಗೀತ ಕಾರ್ಯಕ್ರಮ ನೀಡಿದ್ದು ನನಗೆ ನೆನಪಿದೆ. ಆಗ ಅವರಿಗೆ ನಾಣ್ಣು ಮಾಮನವರು ಬರೀ ೨೫ ರೂಪಾಯಿ ನೀಡಿದ್ದರಂತೆ. ಆಮೇಲೆ ಅವರು ಜಗದ್ವಿಖ್ಯಾತ ಸಂಗೀತಗಾರರಾಗಿ ಅವರಿಗೆ ಭಾರತರತ್ನ ಬಿರುದೂ ದೊರೆಯಿತು. ಅದೇ ಪರಂಪರೆಯನ್ನು ಮೈಗೂಡಿಸಿಕೊಂಡು ಬಂದು ನಾವು ೧೯೫೭ರಲ್ಲಿ ಪ್ರಾರಂಭಿಸಿದ ಸರಸ್ವತಿ ಕಲಾ ಪ್ರಸಾರಕ ಸಂಘ ಮತ್ತು ಸರಸ್ವತೀ ಸಂಗೀತ ಶಾಲೆ ಇವತ್ತಿನವರೆಗೆ ಕ್ರಿಯಾಶೀಲವಾಗಿ ಇರುವುದು ಸಾಧ್ಯವಾಗಿದೆ.

ನವರಾತ್ರಿ ಮತ್ತು ವೇಷಧಾರಣೆ

ನಾನು ಚಿಕ್ಕವನಿರುವಾಗ ನವರಾತ್ರಿ ದಿನಗಳಲ್ಲಿ ಬಹಳ ಮಂದಿ ವೇಷಧಾರಿಗಳು ಬರುತ್ತಿದ್ದರು. ಕಂದಾರಿ (ಕಂದಹಾರಿ), ಜೆಕಿನಬಾಯ್(ನೃತ್ಯ), ಕೊರಗ, ಕರಡಿ, ಸಿಂಹ, ಹುಲಿ ಇತ್ಯಾದಿ ವೇಷ ಹಾಕಿ ಬರುತ್ತಿದ್ದರು. ಅದರಲ್ಲಿ ಹುಲಿ ವೇಷ ಬಹಳ ಪ್ರಸಿದ್ಧ. ನಮ್ಮ ದೇವಪ್ಪಜ್ಜನವರು ವೇಷಧಾರಿಗಳ ಮೈಗೆ ಬಣ್ಣ

ಹಚ್ಚಿ ವೇಷ ಹಾಕುವುದಿತ್ತು. ವೇಷ ಹೊರಗೆ ಹೋಗುವ ಮೊದಲು ಹುಲಿಯ ಬಾಲದ ಗೊಂಡೆಯ(ಕುಚ್ಚು) ಮೆರವಣಿಗೆ ಶ್ರೀ ದೇವಸ್ಥಾನಕ್ಕೆ ಬಂದು ಮತ್ತೆ ಹೋಗುವ ಕ್ರಮ ಇದೆ. ಆಮೇಲೆ ವೇಷಧಾರಿಗಳು ಕುಣಿಯುತ್ತಾ ಬರುವುದು. ಅವರಲ್ಲಿ ಒಬ್ಬಾತ(ನಾಯಕ) ಕೋಲಿನ ಮೇಲೆ, ಭುಜದ ಮೇಲೆ ಮೆರವಣಿಗೆಯಲ್ಲಿ ಬರುವುದು ರೂಢಿ. ಅದೊಂದು ಚೇತೋಹಾರಿ ದೃಶ್ಯ. ಶಾಲೆಗೆ ನವರಾತ್ರಿ ರಜೆ ಇದ್ದುದರಿಂದ ನಮಗೆ ಈ ಮೆರವಣಿಗೆಯಲ್ಲಿ ಹೋಗುವುದು ಸಾಧ್ಯವಿತ್ತು.

ಬಂಟವಾಳದ ಹುಲಿವೇಷದ ಕುಣಿತ ವಿಶಿಷ್ಟವಾದುದು. ಹುಲಿ ವೇಷಧಾರಿಗಳು ಇಡೀ ದೇಹವನ್ನು ಬಗ್ಗಿಸಿ ಕುಣಿಯುತ್ತಾರೆ. ಅವರು ಹೆಜ್ಜೆ ಹಾಕುವ ರೀತಿ ಮತ್ತು ಅವರ ಹುಲಿಯ ನಟನೆ ಯಾವುದೇ ಊರಿನಲ್ಲಿ ಕಾಣಲು ಸಿಗುವುದು ಸಾಧ್ಯವಿಲ್ಲ. ಗಲ್ಲ ಮೀಸೆಯ ಸೊಂಪಾ, ದೇರಪ್ಪು, ಗುರುವಪ್ಪಾ ಮತ್ತು ಕೆಪ್ಪ ಬಾಬು ಎಂಬ ಪ್ರಖ್ಯಾತ ಹುಲಿ ವೇಷಧಾರಿಗಳಿದ್ದರು. ಅವರಲ್ಲಿ ಕೆಪ್ಪೊ(ಕಿವುಡ) ಬಾಬುವಿನ ಹುಲಿ ವೇಷಕ್ಕೆ ಮಂಗಳೂರಿನ ಶಾರದಾ ಮೆರವಣಿಗೆಯಲ್ಲಿ 'ಶಾರದಾ ಹುಲಿ' ಎಂಬ ಬಿರುದು ಮತ್ತು ಚಿನ್ನದ ಪದಕ ದೊರೆತಿತ್ತು. ಅವರ ಹುಲಿ ಕುಣಿತ, ಮೈ ಬಗ್ಗಿಸುವಿಕೆ, ಮುಖದಲ್ಲಿ ಹಾವಭಾವ ತೋರಿಸುವುದು ವಿಶಿಷ್ಟ ಶೈಲಿಯದ್ದಾಗಿದ್ದು ಬಂಟವಾಳಕ್ಕೆ ಹೆಸರು ತರುವ ಕುಣಿತವಾಗಿತ್ತು. ಅವರು ಸಾಮಾಜಿಕವಾಗಿ ವಿದ್ಯಾವಿಹೀನ-ರಾಗಿದ್ದರೂ, ಹುಲಿಯ ಬದುಕು ಅವರದೇ ದೃಷ್ಟಿಯಲ್ಲಿ ಅಭಿವ್ಯಕ್ತಗೊಳ್ಳುವುದಕ್ಕೆ ಅವರಲ್ಲಿ ಕಲ್ಪನೆ ಮತ್ತು ಕಲಾಭಿಜ್ಞ ಗುಣ ಹೇಗೆ ಇತ್ತು ಎನ್ನುವುದನ್ನು ತಿಳಿಸುವ ಉದ್ದೇಶದಿಂದ ನಾನು ಇದನ್ನು ಬರೆಯುತ್ತಿದ್ದೇನೆ. ನಾವು ಮಕ್ಕಳು ಆ ವೇಷಗಳ ಹಿಂದೆಯೇ ಹೋಗುವುದಿತ್ತು.

ನಾವು ಚಿಕ್ಕವರಿರುವಾಗ ನವರಾತ್ರಿಯ ಬಳಿಕ ಬರುವ ದೀಪಾವಳಿ ಹಬ್ಬದಲ್ಲಿ ಹಂಡೆ ತುಂಬಿಸುವುದು, ಮೈಗೆ ಎಣ್ಣೆ ಹಚ್ಚುವುದು, ಹುಲಿವೇಷ ಹಾಕಿ ಅವರ ಹಾಗೆಯೇ ಕುಣಿಯುವುದು ಇತ್ತು. ಈಗ ಆ ಶೈಲಿಯ ಕುಣಿತ ಇಲ್ಲ. ಸರಕಾರ ಸಾಮಾಜಿಕ ವೇಷಗಳನ್ನು ಅಂದರೆ ಕೊರಗ ವೇಷ, ಡೋಬಿ ವೇಷಗಳನ್ನು ಹಾಕುವುದರ ಮೇಲೆ ನಿರ್ಬಂಧ ಹೇರಿದೆ.

ಹೀಗೆ ಧಾರ್ಮಿಕ, ರಾಜಕೀಯ ಮತ್ತು ಉಚ್ಚ ಸಾಂಸ್ಕೃತಿಕ ಕಲಾಪೂರ್ಣ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡುತ್ತಿದ್ದ ಬಂಟವಾಳದ ನಮ್ಮ ಸಮಾಜದ ಹಿರಿಯರು ಒಂದು ಉನ್ನತ ಪರಂಪರೆಯನ್ನು ನಮಗೆ ಬಳುವಳಿಯಾಗಿ ನೀಡಿದ್ದಾರೆ. ಅವರು ಹಾಕಿಕೊಟ್ಟ ಕಾಲ್ದಾರಿಯಲ್ಲಿ ಹೆಜ್ಜೆ ಹಾಕುತ್ತಾ ನಡೆದ ನಾನು ಏನಾದರೂ ಕಾರ್ಯ ಮಾಡಿ, ಕೊಂಕಣಿ ಜಗತ್ತಿನಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದಿದ್ದರೆ, ನನ್ನ ಆರಾಧ್ಯ ದೇವರಾದ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ಮತ್ತು ನಿರಂತರವಾಗಿ ನನ್ನ ಕಾರ್ಯಗಳಿಗೆ ಆಶೀರ್ವಾದ ನೀಡುತ್ತಿರುವ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿ ಮತ್ತು ನನ್ನ ತಾಯಿ, ತಂದೆಯವರ ಆಶೀರ್ವಾದವೇ ಕಾರಣ. ನಾನು ಅವರಿಗೆ ಚಿರಋಣಿಯಾಗಿದ್ದೇನೆ. 'ಮರುಜನ್ಮವೇನಾದರೂ ಇದ್ದರೆ ನನಗೆ ಬಂಟವಾಳದಲ್ಲಿಯೇ ಜನ್ಮ ನೀಡು ದೇವರೇ ಎಂದು ನಾನು ಯಾವಾಗಲೂ ಬೇಡಿಕೊಳ್ಳುತ್ತಿರುತ್ತೇನೆ.'

ಶ್ರೀ ದೇವೇಂದ್ರತೀರ್ಥ ಸ್ವಾಮೀಜಿ

ಶ್ರೀ ಶ್ರೀ ದೇವೇಂದ್ರತೀರ್ಥ ಸ್ವಾಮೀಜಿಯವರು ಶ್ರೀ ಕಾಶೀಮಠ ಸಂಸ್ಥಾನದ ಪರಂಪರೆಯ ಆರನೆಯ ಸ್ವಾಮೀಜಿಯವರಾಗಿದ್ದಾರೆ. ಅವರು ಬಂಟವಾಳದಲ್ಲಿ ವಾಸ್ತವ್ಯ ಹೂಡಿದ ಸಮಯದಲ್ಲಿ ಗತರಾದರು. ಅವರ ಸಮಾಧಿ ಮೊದಲು ನೇತ್ರಾವತಿ ನದಿಯ ದಂಡೆಯ ಮೇಲೆ ಇತ್ತಂತೆ. ನದಿಯಲ್ಲಿ ಪ್ರವಾಹ ಬಂದಾಗ ನೀರಿನ ಸೆಳೆತದಲ್ಲಿ ಆ ಸಮಾಧಿ ಕೊಚ್ಚಿ ಹೋಗಿತ್ತಂತೆ. ಆ ಕಾರಣಕ್ಕಾಗಿ ಸಮಾಧಿಯಲ್ಲಿನ ಮೃತ್ತಿಕೆಯನ್ನು ತಂದು ಶ್ರೀ ದೇವಸ್ಥಾನದ ಮುಂದೆ ಪ್ರತ್ಯೇಕ ವೃಂದಾವನವನ್ನು ನಿರ್ಮಿಸಿ ಶ್ರೀ ಹನುಮಂತ ಸ್ವಾಮೀ ವಿಗ್ರಹದ ಪ್ರತಿಷ್ಠೆಯನ್ನು ನಡೆಸಲಾಯಿತೆಂದು ಬಂಟವಾಳದ ಹಿರಿಯರು ಹೇಳುತ್ತಾರೆ. ವೃಂದಾವನಸ್ಥ ಸ್ವಾಮೀಜಿಯವರು ಈಗಲೂ ಜೀವಂತ ಇದ್ದಾರೆ ಎಂಬುದು ಅವರ ಕಾರಣಿಕದಿಂದ ಕಂಡುಬರುತ್ತದೆ. ಮಠದ ವಠಾರದಲ್ಲಿ ಕೆಟ್ಟ ಆಚಾರವೇನಾದರೂ ನಡೆದರೆ ಶ್ರೀ ಸ್ವಾಮಿ ತಮ್ಮ ಅದ್ಭುತ ಕಾರಣಿಕದ ಅಸ್ತಿತ್ವವನ್ನು ತೋರಿಸಿದ ಪ್ರಸ್ತಾಪವನ್ನು ನಾನು ಸಣ್ಣವನಿರುವಾಗ ಭಜಕರಿಂದ ಕೇಳಿದ್ದೇನೆ. ಬಂಟವಾಳದ ಜನಸಮುದಾಯ ಜಾತಿ, ಮತ ಭೇದವಿಲ್ಲದೆ ಭಕ್ತಿ, ಶ್ರದ್ಧಾಪೂರ್ವಕವಾಗಿ ವೃಂದಾವನಕ್ಕೆ ಭೇಟಿ ನೀಡುತ್ತದೆ. ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನಕ್ಕೆ ಹೋಗುವ ಭಜಕರು ಶ್ರೀ ದೇವೇಂದ್ರತೀರ್ಥ ಸ್ವಾಮಿಜಿಯವರ ವೃಂದಾವನಕ್ಕೆ ಭೇಟಿ ನೀಡದೆ ಬರುವುದಿಲ್ಲ.

ಇತ್ತೀಚಿಗೆ, ೧೦ ಡಿಸೆಂಬರ್, ೨೦೦೯ರ ಗುರುವಾರ ಶ್ರೀ ಕಾಶೀ ಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿ ಹಾಗೂ ಅವರ ಪಟ್ಟ ಶಿಷ್ಯ ಶ್ರೀ ಸಂಯಮೀಂದ್ರತೀರ್ಥ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಭಜಕರು ಸ್ವಂತ ಕಾಣಿಕೆ ನೀಡಿ ಕಟ್ಟಿಸಿದ ಶ್ರೀ ದೇವೇಂದ್ರತೀರ್ಥ ಸಭಾಗೃಹದ ಉದ್ಘಾಟನೆಯಾಯಿತು. ಬಂಟವಾಳದ ಕಾಶೀಮಠ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾದ ಶ್ರೀ ಮಾಣೂರ ಲಕ್ಷ್ಮಣ ಕಾಮತರು (ಮಾಣೂರ ಅಚ್ಚು) ಮತ್ತು ಸಂಗಡಿಗಳು ಶ್ರಮಪಟ್ಟು ನಿರ್ಮಿಸಿದ ಸುಂದರ, ಸುಶೋಭಿತ ಸಭಾಗೃಹ ಬಂಟವಾಳದ ಕಾಶೀಮಠಕ್ಕೆ ಒಂದು ಉತ್ಕೃಷ್ಟ ಕೊಡುಗೆಯೆಂದು ಹೇಳಬಹುದು.

●●

೨. ನನ್ನ ಬಾಲ್ಯ

ನಾನು ಸಣ್ಣವನಿರುವಾಗ ದೇಹದಲ್ಲಿ ತೆಳ್ಳಗಿದ್ದೆ. ಇಬ್ಬರು ಹಿರಿಯಕ್ಕನವರ ನಂತರ ಹುಟ್ಟಿದವನು ನಾನು. ನನ್ನ ಅನಂತರ ಮೂರು ಹೆಣ್ಣುಮಕ್ಕಳು ಹುಟ್ಟಿದ್ದರಿಂದ ಮನೆಯಲ್ಲಿ ಬೇರೆ ಗಂಡುಮಕ್ಕಳು ಇಲ್ಲದೆ ಎಲ್ಲರಿಗೂ ನನ್ನ ಮೇಲೆ ತುಂಬಾ ಪ್ರೀತಿ ಇತ್ತು. ತನ್ನ ಕುಟುಂಬದವರ ತಿರಸ್ಕಾರದ ಮಾತುಗಳಿಂದ ಮತ್ತು ನನ್ನ ತಂದೆಯವರು ಅವರಿಗೆ ಸರಿಯಾದ ಗಮನವನ್ನು ನೀಡುತ್ತಿರಲಿಲ್ಲವಾದ್ದರಿಂದ, ನನ್ನ ತಾಯಿ ತನಗೆ ಗಂಡುಮಗು ಹುಟ್ಟಬೇಕೆಂದು ದೇವರಲ್ಲಿ ಬಹಳ ಭಕ್ತಿ, ಶ್ರದ್ಧೆಯಿಂದ ಬೇಡಿಕೊಳ್ಳುತ್ತಿದ್ದರಂತೆ. ಹೀಗಾಗಿ ಅವರ ಮೂರನೆಯ ಮಗು ನಾನು ಗಂಡಾಗಿ ಹುಟ್ಟಿದೆನೆಂದು ಅವರು ಹೇಳುವುದಿತ್ತು. ನಮ್ಮ ಮನೆಗೆ ಬರುತ್ತಿದ್ದ ನೆಂಟರಿಷ್ಟರು ನನ್ನನ್ನು ಹೆಮ್ಮೆಯ ದೃಷ್ಟಿಯಿಂದ ನೋಡುತ್ತಿದ್ದರು ಎಂದು ಹೇಳಬಹುದು.

ನಾನು ಸಣ್ಣವನಿರುವಾಗ ತುಂಬಾ ಭಯಭೀರುವಾಗಿದ್ದೆ; ನನ್ನ ನೆರಳನ್ನು ನೋಡಿದರೂ ಹೆದರಿಕೊಳ್ಳುವಷ್ಟು ಪುಕ್ಕಲು. ಅದರಲ್ಲಿಯೂ ಮನೆಯ ಹೊರಗೆ ಮಾತ್ರವಲ್ಲ ಮನೆಯ ಒಳಗೆ ಕೂಡ ಅತ್ತ ಇತ್ತ ಹೋಗಲು ಭಯಪಡುತ್ತಿದ್ದೆ. ರಾತ್ರಿ ಹೊತ್ತು ರಮಣಿಯಕ್ಕನ ಬಳಿ ಕೂತು ಅವಳು ಹೇಳುತ್ತಿದ್ದ ರಾಕ್ಷಸರ, ಭೂತಪ್ರೇತಗಳ ಕತೆಗಳನ್ನು ಕೇಳಿ ನನಗೆ ನಿದ್ದೆಯಲ್ಲಿ ಮೂತ್ರ ವಿಸರ್ಜನೆ ಮಾಡುವಷ್ಟು ಹೆದರಿಕೆಯಾಗುತ್ತಿತ್ತು. ನಾನು ಎಂಟು, ಒಂಭತ್ತನೆಯ ಕ್ಲಾಸಿನಲ್ಲಿದ್ದಾಗ, ಅಂದರೆ ಹದಿಮೂರು ಹದಿನಾಲ್ಕು ವಯಸ್ಸಿನವನಾಗಿದ್ದಾಗಲೂ ಮುಸ್ಸಂಜೆಯ ಬಳಿಕ ಮನೆಯಿಂದ ಹೊರಗೆ ಬರಲು ಹೆದರಿಕೊಳ್ಳುತ್ತಿದ್ದೆ. ಆಮೇಲೆ ಕತ್ತಲೆ ಕವಿದ ಬಳಿಕ ನನ್ನ ಸಹಪಾಠಿಗಳೊಂದಿಗೆ ಆಟವಾಡುವುದು, ಮಾತುಕತೆ ನಡೆಸುವುದು, ಜಗಳವಾಡುವುದು ಪ್ರಾರಂಭವಾಗಿ ಕ್ರಮೇಣ ಆ ಹೆದರಿಕೆ ಕಡಿಮೆಯಾಗುತ್ತಾ ಬಂತು. ಮುಂದೆ ನಾನು ಮುಂಜಾನೆ ಐದು ಗಂಟೆಗೆ ಮನೆಯಿಂದ ಒಬ್ಬನೇ ಹೊರಟು ಹೋಗಿ ನಮ್ಮ ಹೊಟೇಲಿನ ಬಾಗಿಲು ತೆರೆಯಲು ಹಿಂದೆ ಮುಂದೆ ನೋಡುತ್ತಿರಲಿಲ್ಲ.

ನನ್ನ ತಂದೆಯವರು ತಾವೇ ಸ್ವತಃ ಗಾಂಧಿ ಚರಕದಲ್ಲಿ ತೆಗೆದ ನೂಲಿನ ಖಾದಿ ವಸ್ತ್ರದಿಂದ ನನ್ನ ಮತ್ತು ಅವರ ಉಡುಪುಗಳನ್ನು ಹೊಲಿಸುತ್ತಿದ್ದರು. ನನ್ನ ಉಡುಪನ್ನು ನಾನು ಸ್ವಚ್ಛವಾಗಿ ಇಡಬೇಕಿತ್ತು. ತಂದೆಯವರೇ ಬಟ್ಟೆ ಒಗೆಯುತ್ತಿದ್ದುದರಿಂದ ಬಟ್ಟೆಗೆ ಮಣ್ಣು ಅಥವಾ ಕಲೆಯಾಗದಂತೆ ಜಾಗ್ರತೆ ವಹಿಸಬೇಕಿತ್ತು. ಇಲ್ಲದಿದ್ದರೆ ಬೆನ್ನಿಗೆ ಏಟು ಬೀಳುವುದು ಖಂಡಿತ. ಸಣ್ಣ ವಯಸ್ಸಿನಲ್ಲಿ ನನಗೆ ಪಂಡಿತ ನೆಹರೂ ಅವರು ಧರಿಸುತ್ತಿದ್ದಂತಹುದೇ ಬಿಳಿ ಜುಬ್ಬಾ ಮತ್ತು ನೆಹರೂ ಕೋಟು (ವೆಸ್ಟ್ ಕೋಟ್) ಹೊಲಿಸಿ, ತಲೆಗೆ ಖಾದಿಯ ಗಾಂಧಿ ಟೋಪಿ ಇಡುತ್ತಿದ್ದರು.

ನಮ್ಮ ಮನೆಯಲ್ಲಿ ಊಟ, ತಿಂಡಿಗೆ ಕೊರತೆ ಇರಲಿಲ್ಲ. ನನ್ನ ತಂದೆಯವರಿಗೆ ಚೆನ್ನಾಗಿ ಉಣ್ಣಬೇಕು. ಅವರಿಗೆ ಪ್ರತಿದಿನ ಮೀನಿನ ಪಲ್ಯ ಬೇಕೇ ಬೇಕು. ತಾನೂ ತಿನ್ನಬೇಕು, ಹಾಗೇ ಬೇರೆಯವರೂ ತಿನ್ನಬೇಕು. ಅವರ ಜೊತೆ ತಿಂಡಿಗೆ ಅಥವಾ ಊಟಕ್ಕೆ ಕುಳಿತವರು ಅವರು ತಿಂದ ಹಾಗೆ ಚೆನ್ನಾಗಿ ತಿನ್ನಬೇಕು. ಇಲ್ಲದಿದ್ದರೆ ಅವರಿಗೆ ಸಿಟ್ಟು ಬರುತ್ತಿತ್ತು. ನನ್ನ ತಾಯಿ ಮತ್ತು ಅವರ ಬಳಿ ತರಬೇತಿ ಪಡೆದ ನನ್ನ ಪತ್ನಿ ಸಾವಿತ್ರಿ ಮೀನು ಪಲ್ಯ ತಯಾರಿಸುವುದರಲ್ಲಿ ನಿಸ್ಸೀಮರಾಗಿದ್ದರು. ಅವರ ಅಡುಗೆಯ ಕೈರುಚಿಯೇ ಬೇರೆ. ಅದು ನನ್ನ ಅಜ್ಜಿಯಿಂದ ಅವರಿಗೆ ಬಂದ ವರದಾನವಿರಬೇಕೆಂದು ನನ್ನ ಅನಿಸಿಕೆ. ನನ್ನ ಅಮ್ಮನಿಗೆ ದೇವರ ಭಜನೆ ಎಂದರೆ ತುಂಬಾ ಇಷ್ಟ. ಹೀಗಾಗಿ ನನ್ನಲ್ಲಿ ಸಾಂಸ್ಕೃತಿಕ ಕ್ಷೇತ್ರದ ಆಸಕ್ತಿ, ಅಂದರೆ ಗಾಯನ, ಸಂಗೀತ, ನಾಟಕ ಇತ್ಯಾದಿ ಕಲೆಗಳಲ್ಲಿ ವಿಶೇಷ ಆಸಕ್ತಿ ಬೆಳೆದು ಬಂತು. ನಾನು ಸಣ್ಣವಯಸ್ಸಿನಿಂದಲೇ ಗೋದೆಶಾಲೆಗೆ(ಬಂಟವಾಳದ ಯಶವಂತ ವ್ಯಾಯಾಮ ಶಾಲೆ) ಹೋಗುತ್ತಿದ್ದೆ. ಹೀಗಾಗಿ ಸುಮಾರು ಹತ್ತುವರ್ಷ ಪ್ರಾಯದ ಬಳಿಕ ನನ್ನ ದೇಹಕ್ಕೆ ಉತ್ತಮ ಬೆಳವಣಿಗೆ ಬಂತು. ನಾನು ದಷ್ಟಪುಷ್ಟನಾಗುತ್ತಾ ಹೋದೆ.

ಆ ದಿನಗಳಲ್ಲಿ ನಮ್ಮ ತಂದೆಯವರು "ಮೊಡರ್ನ್ ಕೆಫೆ" ಹೆಸರಿನಲ್ಲಿ ಒಳ್ಳೆಯ ಹೊಟೇಲೊಂದನ್ನು ಪ್ರಾರಂಭಿಸಿದರು.

ಹೊಟೇಲಿನಲ್ಲಿ ಬೇಕಾದುದನ್ನು ಹೊಟ್ಟೆ ತುಂಬಾ ತಿನ್ನುವುದು, ಬೆಳಗ್ಗೆ ನೇತ್ರಾವತಿ ನದಿಯಲ್ಲಿ ಈಜುವುದು; ಸಂಜೆ ಹೊತ್ತು ಶಾಲೆಯ ಮೈದಾನಿನಲ್ಲಿ ಅಥವಾ ಗೋದೆಶಾಲೆಯಲ್ಲಿ ವ್ಯಾಯಾಮ ಮಾಡುತ್ತಿದ್ದರಿಂದ ದೇಹದ ಬೆಳವಣಿಗೆ, ಅಂಗಾಂಗದ ಸ್ನಾಯು, ಮೂಳೆಗಳು ಪುಷ್ಟಿಗೊಂಡವು. ಶಾಲೆಯ ಆಟದ ಮೈದಾನಿನಲ್ಲಿ ನಾನು ಆಡದ ಆಟವೇ ಇರಲಿಲ್ಲ. ಪ್ರತಿಯೊಂದು ಆಟದಲ್ಲಿಯೂ ನಾನೇ ನಾಯಕನಾಗಿ ಇರುತ್ತಿದ್ದೆ. ವಿಕ್ಟರಿ, ಉಪ್ಪು(ಈ ಆಟಗಳು ಈಗ ಚಾಲ್ತಿಯಲ್ಲಿಲ್ಲ), ಕಬಡ್ಡಿ (ಆಗ ಊರಿನಲ್ಲಿ ಈ ಆಟಕ್ಕೆ ಕಿತ್ಕಿತ್ ಎನ್ನುತ್ತಿದ್ದರು), ಕ್ರಿಕೆಟ್, ಹಾಕಿ, ಫುಟ್ಬಾಲ್, ವಾಲಿಬಾಲ್, ಬ್ಯಾಡ್ಮಿಂಟನ್, ರಿಂಗ್ ಟೆನ್ನಿಸ್, ಹೈಜಂಪ್, ಲಾಂಗಜಂಪ್, ಪೋಲ್ವಾಲ್ಟ್ ಹೀಗೆ ಬೇರೆ ಬೇರೆ ಆಟಗಳಲ್ಲಿ ನಾನು ಮುಂದೆ ಇರುತ್ತಿದ್ದೆ. ನನ್ನ ಪಾಲಿಗೆ ನಾನು ಕೇಳದೆ ಶಾಲೆಯ ಕ್ರೀಡಾಕ್ಷೇತ್ರದ ನಾಯಕತ್ವ ಬರುತ್ತಿತ್ತು.

ಯಶವಂತ ವ್ಯಾಯಾಮ ಶಾಲೆಯಲ್ಲಿ ದೇಸಿ ವ್ಯಾಯಾಮ, ದಂಡ, ಬೈಠಕ್, ಸರ್ವಾಂಗ ಸುಂದರ ವ್ಯಾಯಾಮ, ಯೋಗಾಸನ, ಡಂಬೆಲ್, ಲೇಜಿಮ್, ಮಲ್ಲಕಂಬ ಇತ್ಯಾದಿ, ಮನಸ್ಸಿಗೆ ಮತ್ತು ಶರೀರದ ಬೇರೆ ಬೇರೆ ಅಂಗಗಳಿಗೆ ಸಿಗಬೇಕಾದ ವ್ಯಾಯಾಮ ಮತ್ತು ಖಡ್ಗ, ಲಾಠಿ ಬೀಸುವುದು ಇದ್ದದ್ದರಿಂದ ನನ್ನಲ್ಲಿ ಉತ್ತಮ ಮನೋಬಲ, ಅದಕ್ಕಿಂತ ಹೆಚ್ಚಾಗಿ ಸಾಂಘಿಕ ಮನೋಧರ್ಮ ಬೆಳೆದು ಬಂದು, ಜೀವನದಲ್ಲಿ ಹತ್ತು ಜನರೊಂದಿಗೆ ಬೆರೆಯಲು ಮತ್ತು ಒಬ್ಬ ಮುಖಂಡನಾಗಿ ಸಂಗಾತಿಗಳನ್ನು ಮುಂದೆ ತರಲು ಉಪಯುಕ್ತವೆನಿಸಿದ ಶಿಕ್ಷಣ ದೊರೆಯಿತು. ವ್ಯಾಯಾಮ ಶಾಲೆಯಲ್ಲಿ ಗುರುವಾರ ಮತ್ತು ಶನಿವಾರದ ದಿನಗಳಲ್ಲಿ ನಡೆಯುತ್ತಿದ್ದ ನೀತಿ ಬೋಧೆ, ದೇಶಭಕ್ತಿ ಕುರಿತಾದ ವಿಚಾರ ವಿನಿಮಯಗಳಿಂದ ನನ್ನ ಜೀವನದಲ್ಲಿ ಸಾಂಘಿಕ ಜೀವನವೆನ್ನುವುದು ಮೀನಿಗೆ ನೀರಿನಲ್ಲಿ ಇರುವಷ್ಟು ನೈಸರ್ಗಿಕವಾಗಿ ಹೋಯಿತು. ನನ್ನ ತಂದೆ ನಡೆದು ಬಂದ ದಾರಿ ನನಗೆ ಈಗಲೂ ಪ್ರತಿನಿತ್ಯ ಮಾರ್ಗದರ್ಶಕ ಮತ್ತು ಸ್ಫೂರ್ತಿ ನೀಡುವ ಹಾಗೆ ಇದೆ.

ನನ್ನ ದೇಹವು ೧೧ರಿಂದ ೨೧ರವರೆಗಿನ ಬೆಳವಣಿಗೆಯ ವಯಸ್ಸಿನಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ಪಡೆಯಿತು. ವ್ಯಾಯಾಮದಿಂದಾಗಿ ನನಗೆ ಇವತ್ತಿನವರೆಗೆ ಯಾವುದೇ ಕಾಯಿಲೆ ಕಾಡಿದ್ದು ಇಲ್ಲ. ಎಷ್ಟೇ ತಿರುಗಾಡಲಿ ಅಥವಾ ಪ್ರವಾಸ ನಡೆಸಲಿ, ಮಳೆ, ಬಿಸಿಲು ಅಥವಾ ಚಳಿಯ ದಿನಗಳಿರಲಿ, ಯಾವ ಋತುಭೇದದಲ್ಲಿಯೂ ನನಗೆ ಆಯಾಸ, ಕೆಮ್ಮು, ಸೀನು, ವಾಂತಿ ಬಂದದ್ದಿಲ್ಲ. ವಿಶ್ವಕೊಂಕಣಿ ಸಮ್ಮೇಳನ, ವಿಶ್ವಸಾರಸ್ವತ ಸಮ್ಮೇಳನ ಅಥವಾ ವಿಶ್ವ ಕೊಂಕಣಿ ಕೇಂದ್ರಕ್ಕಾಗಿ ಅನೇಕ ಪ್ರವಾಸಗಳನ್ನು ಮಾಡುವಾಗಲೂ ನನ್ನ ದೈಹಿಕ ಆರೋಗ್ಯ ಮತ್ತು ಮನೋಸ್ಥೈರ್ಯದಿಂದಾಗಿ ಅದರ ಲಾಭ ದೊರೆತಿದೆ. ಬೆಳವಣಿಗೆಯ ಹಂತದಲ್ಲಿ ನನಗೆ ದೊರೆತ ಆಹಾರ ಮತ್ತು ವ್ಯಾಯಾಮ ಇದಕ್ಕೆ ಕಾರಣವೆಂದು ತಿಳಿಸಲು ಸಂತೋಷವಾಗುತ್ತದೆ. ಅಂತಹ ಭಾಗ್ಯ ನೀಡಿದ ನನ್ನ ತಾಯಿ ತಂದೆ ಮತ್ತು ಶ್ರೀ ಯಶವಂತ ವ್ಯಾಯಾಮ ಶಾಲೆಗೆ ನಾನು ಋಣಿಯಾಗಿದ್ದೇನೆ.

ನನ್ನ ತಂದೆ ಮೋಟಾರು ಮಾಧವ ಶೆಣೈ

ನನ್ನ ತಂದೆ ಬಸ್ತಿ ಮಾಧವ ಶೆಣೈ, ದೇಹದಲ್ಲಿ ಸದೃಢರು ಮತ್ತು ಬಲಿಷ್ಠರಾಗಿದ್ದ ಧಡೂತಿ ವ್ಯಕ್ತಿ. ಆದರೆ ಅವರದು ಉದಾರವಾದ ಮನಸ್ಸು. ಅವರೊಬ್ಬ ಸಾಮಾಜಿಕ ಕಾಳಜಿಯಿದ್ದ ವ್ಯಕ್ತಿಯಾಗಿದ್ದರು. ಅವರ ದೇಹಾಕೃತಿ ಮತ್ತು ಗಾಂಭೀರ್ಯದಿಂದ ಅವರನ್ನು ನೋಡಿದವರು ಮಾತನಾಡಿಸಲು ಹೆದರಿಕೊಳ್ಳುತ್ತಿದ್ದರು. ಅವರೊಬ್ಬ ಸಂಘಜೀವಿ. ಅವರಿಗೆ ಸಣ್ಣ ಬುದ್ಧಿ, ಸಣ್ಣ ಕೆಲಸಗಳನ್ನು ಮಾಡುವುದು ಎಂದಿಗೂ ಹಿಡಿಸುತ್ತಿರಲಿಲ್ಲ. ಹತ್ತು ಜನರ ನೆರವಿಗೆ ಒದಗಿ ಬರುವ ಆಲೋಚನೆ ಮತ್ತು ಕಾರ್ಯಗಳನ್ನು ನಡೆಸುವ ವ್ಯಕ್ತಿ. ಅವರ ಜೊತೆ ಅವರದೇ ವಯೋಮಾನದ ಬಂಟವಾಳದ ತರುಣರ ಸೈನ್ಯವೇ ಇತ್ತು. ನನ್ನ ತಂದೆಯವರ ಯಾವುದೇ ಆಜ್ಞೆಯನ್ನು ಶಿರಸಾವಹಿಸಿ ಮಾಡುವಂತಹ ಯುವಕರು ಅವರು.

ನನ್ನ ತಂದೆ ವೃತ್ತಿಯಲ್ಲಿ ಒಬ್ಬ ಬಸ್ ಏಜೆಂಟರಾಗಿ ಹಣದ ಬಲ ಇಲ್ಲದಿದ್ದವರು. ಕೇವಲ ಎರಡನೆಯ ತರಗತಿಯವರೆಗೆ ಕಲಿತವರು. ಹಾಗಿದ್ದರೂ ಅವರದು ವಿಶಾಲದೃಷ್ಟಿ; ಸಹಾಯ ಅಪೇಕ್ಷಿಸಿ ಬಂದವರಿಗೆ ಆಪತ್ಕಾಲದಲ್ಲಿ ನೆರವು ನೀಡುವ ಸೇವಾ ಮನೋಭಾವ. ಅವರು ಶ್ರೀ ವೆಂಕಟರಮಣ ದೇವಸ್ಥಾನದ ಮತ್ತು ಶ್ರೀ ಕಾಶೀಮಠ ಸಂಸ್ಥಾನದ ಗುರುಗಳ ಸೇವೆಯನ್ನು ಸ್ವಯಂಸ್ಫೂರ್ತಿಯಿಂದ, ಅರ್ಪಣಾ ಭಾವನೆಯಿಂದ ನಡೆಸಿದ್ದರಿಂದಾಗಿ ಸಮಾಜದಲ್ಲಿ ಶ್ರೀಮಂತರಿಂದ ಹಿಡಿದು ಬಡವರವರೆಗೆ, ಮೇಲ್ಜಾತಿಯವರಿಂದ ಹಿಡಿದು ದಲಿತರವರೆಗೆ ಪ್ರತಿಯೊಬ್ಬರೂ ಅವರನ್ನು ಗೌರವದ ಭಾವನೆಯಿಂದ, ಒಬ್ಬ ಬಂಧುವಾಗಿ ಕಾಣುತ್ತಿದ್ದರು. ಊರಜನರಿಗೆ ಅವರು ತುಂಬಾ ಪ್ರೀತಿಪಾತ್ರರಾಗಿದ್ದರು.

ನನ್ನ ತಂದೆ ಧನಿಕರಲ್ಲ, ಅವರು ಸಿಪಿಸಿ ಬಸ್ ಕಂಪನಿಯ ಏಜಂಟರಾಗಿದ್ದರು. ಹಾಗಿದ್ದರೂ, ಅವರು ನಮ್ಮ ಮನೆಯ ಅಂಗಳದಲ್ಲಿ ಚಪ್ಪರ ಹಾಕಿ ಸಮಾಜದ ಬಡ ಹುಡುಗಿಯರ ಮದುವೆಗಳನ್ನು ಮಾಡಿಸಿದ್ದುಂಟು. ಹೀಗೆ ವರ್ಷದಲ್ಲಿ ಒಂದೆರಡು ಮದುವೆಗಳನ್ನು ನಮ್ಮ ಅಂಗಳದಲ್ಲಿ ನನ್ನ ತಾಯಿ ಮತ್ತು ತಂದೆಯವರು ಮಾಡಿಸಿದ್ದರು. ಬಡಜನರಿಗೆ ಅವರ ಕಷ್ಟಕಾಲದಲ್ಲಿ ಸಹಾಯಕ್ಕೆ ಒದಗುವ ಮನೋವೃತ್ತಿ ನನ್ನ ಹಿರಿಯರಲ್ಲಿ ಇತ್ತು. ಅದು ನನ್ನ ರಕ್ತದಲ್ಲಿ ಹರಿಯುತ್ತಿದೆ ಎಂಬುದು ನನ್ನ ಭಾವನೆ. ಅದು ನನ್ನ ಪೂರ್ವ ಜನ್ಮದ ಪುಣ್ಯವೆಂದು ನಾನು ತಿಳಿಯುತ್ತೇನೆ.

ನನ್ನ ತಂದೆಯವರಿಗೆ ಮಹಾತ್ಮಾ ಗಾಂಧೀಜಿಯವರ ತತ್ವ ಮತ್ತು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಗಳು ಆದರ್ಶವಾಗಿದ್ದವು. ಭಾರತದೇಶದ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಅವರು ಕರ್ನಾಟಕ ಕಾಂಗ್ರೆಸ್ ಸಮಿತಿಯ (ಕೆ.ಪಿ.ಸಿ.ಸಿ.) ಸದಸ್ಯರಾಗಿದ್ದರು. ಬಂಟವಾಳದ ಮಂಡಲ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ಅವರು ಖಾದಿ ವಸ್ತ್ರಧಾರಿ. ಸ್ವತಃ ಅವರೇ ಚರಕದಲ್ಲಿ ತೆಗೆದ ನೂಲಿನಿಂದ ತಯಾರಿಸಿದ ಖದ್ದರ್ ಉಡುಪನ್ನು ಅವರು ಮತ್ತು ನಾನು ಧರಿಸುವುದಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿ ಹರಿಜನರಿಗೆ ಪ್ರವೇಶ ದೊರೆತದ್ದು ಬಂಟವಾಳದ ಶ್ರೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ. ಈ ಕಾರ್ಯದಲ್ಲಿ ನನ್ನ ತಂದೆ, ನನ್ನ ಚಿಕ್ಕಪ್ಪ ಶ್ರೀ ಬಸ್ತಿ ಪುಂಡಲೀಕ ಶೆಣೈ, ಮತ್ತು ಕಾಂಗ್ರೆಸ್ ಪುಡಾರಿ ಬಿ. ಕೇಶವ ಬಾಳಿಗಾ ಅವರು ಮುಖಂಡತ್ವ ವಹಿಸಿದ್ದರು.

ಬಂಟವಾಳದ ಶ್ರೀ ದೇವಸ್ಥಾನದ ಎಲ್ಲಾ ಕಾರ್ಯಕ್ರಮಗಳಲ್ಲಿ ನನ್ನ ತಂದೆಯವರೇ ಮುಂದೆ ನಿಂತು ತನ್ನ ಸಂಗಾತಿಗಳಿಂದ ಉತ್ಸವ, ಸಮಾರಾಧನೆ ಇತ್ಯಾದಿಗಳನ್ನು ನಡೆಸುತ್ತಿದ್ದರು. ವಿದ್ಯುಚ್ಛಕ್ತಿ ಇಲ್ಲದ ಆ ದಿನಗಳಲ್ಲಿ ರಥೋತ್ಸವದ ಆರು ದಿನಗಳಲ್ಲಿ ಪೇಟೆಯ ಬೀದಿಗಳ ಹತ್ತಿಪ್ಪತ್ತು ಕಡೆಗಳಲ್ಲಿ ಕಂಬಗಳನ್ನು ಊರಿ ಅಲ್ಲಿ ಪೆಟ್ರೋಮೆಕ್ಸ್ ದೀಪಗಳನ್ನು ಉರಿಸುವ ಕ್ರಮ ಇತ್ತು. ಆ ಎಲ್ಲ ಕಾರ್ಯಗಳ ಉಸ್ತುವಾರಿ ನನ್ನ ತಂದೆಯವರದು. ದೇವಸ್ಥಾನಕ್ಕೆ ತಾಗಿಕೊಂಡೇ ಒಂದು ದೊಡ್ಡ ಕೋಣೆ ಇತ್ತು. ಅದಕ್ಕೆ ರಥೋತ್ಸವದ ದಿನಗಳಲ್ಲಿ ಲೈಟ್ ಕೋಣೆ ಎಂಬ ಹೆಸರಿತ್ತು. ಶ್ರೀ ದೇವಾಲಯದ ರಥೋತ್ಸವದ ಆರು ದಿನಗಳಲ್ಲಿಯೂ ಅಲ್ಲಿ ನನ್ನ ತಂದೆಯವರ ವಾಸ್ತವ್ಯವಿರುವುದಿತ್ತು. ಸಂಜೆ ಹೊತ್ತು ಪೇಟೆಯಲ್ಲಿ ಉರಿಸುವ ಪೆಟ್ರೋಮೆಕ್ಸ್ ದೀಪಗಳನ್ನು ರಾತ್ರಿ ಉತ್ಸವ ಮುಗಿದ ಬಳಿಕ ಆರಿಸಿ ಲೈಟ್ ಕೋಣೆಗೆ ತಂದಿಡುವುದು ರೂಢಿ. ತಂದೆಯವರು ರಥೋತ್ಸವದ ಆರು ದಿನಗಳು ಮುಗಿದ ನಂತರವೇ ಮನೆಗೆ ಬರುವುದು.

ಆ ದಿನಗಳಲ್ಲಿ ಕಾಶೀಮಠದ ಗುರುವರ್ಯರು ರಥೋತ್ಸವಕ್ಕೆ ಮಾತ್ರವಲ್ಲ ಇತರ ದಿನಗಳಲ್ಲಿಯೂ ಆಗಾಗ ಬಂಟವಾಳಕ್ಕೆ ಬಂದು ಕಾಶೀ ಮಠದಲ್ಲಿ ಇರುತ್ತಿದ್ದರು. ಶ್ರೀ ಸ್ವಾಮೀಜಿಯವರು ಬಂಟವಾಳಕ್ಕೆ ಬರುವುದಿದ್ದರೆ ಶ್ರೀ ಶ್ರೀಯವರ ಪ್ರಯಾಣದ ಎಲ್ಲ ಜವಾಬ್ದಾರಿ ನನ್ನ ತಂದೆಯವರ ಮೇಲೆ ಇರುತ್ತಿತ್ತು. ಅದಕ್ಕಾಗಿ ಸಿಪಿಸಿ ಕಂಪೆನಿಯ ಮ್ಯಾನೆಜಿಂಗ್ ಡೈರೆಕ್ಟರ್ ಶ್ರೀ ವಿ.ಎಸ್. ಕುಡ್ವ ಅವರ ಬಳಿಯಿಂದ ಕಾರು ತೆಗೆದುಕೊಂಡು ಹೋಗಿ ಶ್ರೀ ಶ್ರೀ ಗುರುವರ್ಯರನ್ನು ಬಂಟವಾಳಕ್ಕೆ ಕರೆತರುವುದು, ಶ್ರೀ ಸ್ವಾಮಿಜಿಯವರ ದಿಗ್ವಿಜಯ ಮುಗಿದ ಬಳಿಕ ಮುಂದಿನ ಊರಿನ ವಾಸ್ತವ್ಯಕ್ಕಾಗಿ ಅವರನ್ನು ಬಿಟ್ಟುಬರುವುದು ನನ್ನ ತಂದೆಯವರ ಕೆಲಸವೇ ಆಗಿರುತ್ತಿತ್ತು. ನಾನು ಚಿಕ್ಕಂದಿನಲ್ಲಿ ಕಾಶೀಮಠದ ಶ್ರೀ ಸುಕೃತೀಂದ್ರ ಸ್ವಾಮೀಜಿಯವರ ಸೇವೆಯಲ್ಲಿ, ಅನಂತರ ಕೆಲವು ವರ್ಷ ಶ್ರೀ ಸುಧೀಂದ್ರ ಸ್ವಾಮೀಜಿಯವರ ಸೇವೆಯಲ್ಲಿಯೂ ಅವರ ಕಾರನ್ನು ಡ್ರೈವ್ ಮಾಡಿಕೊಂಡು ಬಂಟವಾಳಕ್ಕೆ ಕರೆತರುವ ಕೆಲಸವನ್ನು ನನ್ನ ತಂದೆಯವರು ಮಾಡುತ್ತಿದ್ದುದನ್ನು ನೋಡಿದ್ದೇನೆ. ಹೀಗೆ ಶ್ರೀ ಸುಕೃತೀಂದ್ರ ಸ್ವಾಮೀಜಿಯವರಿಗೆ, ಅನಂತರ ಶ್ರೀ ಸುಧೀಂದ್ರ ಸ್ವಾಮೀಜಿಯವರಿಗೆ ನನ್ನ ತಂದೆಯವರು ಸೇವೆ ಸಲ್ಲಿಸುತ್ತಿದ್ದುದನ್ನು ನೋಡಿದ್ದೇನೆ. ಅದನ್ನು ಈಗಲೂ ಗುರುವರ್ಯರು ಹೇಳುವುದುಂಟು. ಅನಂತರ ನನಗೂ ದೇವಸ್ಥಾನದ ಮತ್ತು ಗುರುವರ್ಯರ ಸೇವೆ ಮಾಡುವ ಭಾಗ್ಯ ದೊರೆತದ್ದು ಇದೆ. ಆ ಕಾಲದ ಜಮೀನ್ದಾರರು ನನ್ನ ತಂದೆಯವರಿಗೆ ಹಳ್ಳಿಯಿಂದ ಗೌರವಪೂರ್ವಕವಾಗಿ ಒಂದೊಂದು ಬುಟ್ಟಿ ಪಾಯರಿ, ಮುಂಡಪ್ಪ ಮಾವಿನಹಣ್ಣುಗಳನ್ನು, ಸ್ವಾದಿಷ್ಟ ಹಲಸಿನ ಹಣ್ಣುಗಳನ್ನು ಕಳುಹಿಸುವುದಿತ್ತು. ಅದನ್ನು ಅವರು ತಮ್ಮ ಸಂಗಾತಿಗಳಿಗೆ, ಮಿತ್ರರಿಗೆ ಹಂಚಿ, ಆಮೇಲೆ ಉಳಿದಿರುವುದನ್ನು ಮನೆಗೆ ತರುತ್ತಿದ್ದರು. ಅವರೇ ಮಾವಿನಹಣ್ಣುಗಳ ಸಿಪ್ಪೆ ತೆಗೆದು, ತುಂಡು ಮಾಡಿ ಮನೆಯವರಿಗೆಲ್ಲರಿಗೂ ಹಂಚುತ್ತಿದ್ದರು. ಪೇಟೆಯಲ್ಲಿ ಮಾರಾಟಕ್ಕೆ ಬಂದಿರುವ ಒಳ್ಳೆಯ ಮಾವಿನ ಕಾಯಿಗಳನ್ನು ಖರೀದಿಸಿ, ಮನೆಗೆ ತಂದು, ಹುಲ್ಲಿನಲ್ಲಿ ಇಟ್ಟು ಹಣ್ಣು ಮಾಡಿ ನಮಗೆ ತಿನ್ನಲು ನೀಡುತ್ತಿದ್ದರು.

ಮತ್ಸ್ಯ ನಾರಾಯಣ ವ್ರತ

ನನ್ನ ತಂದೆಯವರಿಗೆ ಮೀನು ಪಲ್ಯವೆಂದರೆ ತುಂಬಾ ಪ್ರೀತಿ. ಬೆಲೆ ಎಷ್ಟಾದರೂ, ಅವರು ಮೀನು ಖರೀದಿಸಿ ಮನೆಗೆ ತರುತ್ತಿದ್ದರು. ಆಗ ದೇವಸ್ಥಾನದ ಬಳಿ ನೇತ್ರಾವತಿ ನದಿಯ ನೀರಿನಲ್ಲಿ ತುಂಬಾ ಮೀನುಗಳು ಇರುತ್ತಿದ್ದವು. ಬೆಂಕಿ ಹಚ್ಚಿ ತೋಟೆಗಳನ್ನು ನದಿಗೆ ಹಾಕುವುದು, ಆಗ ತೋಟೆ ಒಡೆದು ದೊಡ್ಡ ಸದ್ದಾಗಿ ನೀರಿನಲ್ಲಿದ್ದ ಮೀನುಗಳು ಸತ್ತುಹೋಗುತ್ತವೆ. ಹೀಗೆ ಸತ್ತುಹೋದ ಮೀನುಗಳು ನೀರಿನ ಮೇಲೆ ತೇಲಿಬರುತ್ತವೆ. ನಾವು ನದಿಯಲ್ಲಿ ಈಜಿಕೊಂಡು ಅದನ್ನು ಹಿಡಿದು ತರುವುದು. ಈ ಕ್ರಮವನ್ನು ಪ್ರಾರಂಭಿಸಿದವರು ನಮ್ಮ ತಂದೆ. ಆ ದಿನ ಅವರ ಸ್ನೇಹಿತರಿಗೆ ನಮ್ಮ ಮನೆಯಲ್ಲಿಯೇ ಊಟ. ಮುಂದಿನ ದಿನಗಳಲ್ಲಿ ಬೇರೆಯವರು ಕೂಡ ತೋಟೆ ಹಾಕಿ ಮೀನುಗಳನ್ನು ಹಿಡಿದರೂ, ಅವರು ನನ್ನ ತಂದೆಯವರಿಗಾಗಿ ಮೀನುಗಳನ್ನು ಮನೆಗೆ ಕಳುಹಿಸಿಕೊಡುತ್ತಿದ್ದರು.

ಅಲ್ಲದೆ ಬಹಳ ಮಂದಿ ಬ್ಯಾರಿಗಳೂ ಬೇರೆಡೆ ನದಿಗಳಲ್ಲಿ ಮೀನು ಹಿಡಿಯುತ್ತಿದ್ದರು. ನದಿಯಲ್ಲಿ ದೊಡ್ಡ ಮುಡಾವು, ಕೇವಜಿ ಮೀನುಗಳು ಸಿಕ್ಕಿದರೆ ಮೊದಲು ನನ್ನ ತಂದೆಯವರ ಬಳಿ ತರುತ್ತಿದ್ದರು. ಆಗ ನದಿಯಲ್ಲಿ ರೆಪ್ಪೆ, ಅಬ್ರೋಣಿ, ಕಿಜನ, ಮುಗುಡು, ಮರಿ ಮುಗುಡು, ಕುಚ್ಚಿ ಇತ್ಯಾದಿ ಮೀನುಗಳು ಸಿಗುತ್ತಿದ್ದವು. ದೊಡ್ಡದಾಗಿರುವ ಉತ್ತಮ ಮೀನು ಸಿಕ್ಕಿದರೆ ಅವರ ಸ್ನೇಹಿತರನ್ನು ಅಥವಾ ಪರವೂರಿನಿಂದ ಬಂದಿರುವ ಅವರ ಬಂಟವಾಳದ ಮಿತ್ರರನ್ನು ಮನೆಗೆ ಊಟಕ್ಕೆ ಕರೆದುಕೊಂಡು ಬರುವುದಿತ್ತು.

ಬೇಸಿಗೆ ದಿನಗಳಲ್ಲಿ ನೇತ್ರಾವತಿ ನದಿಯಲ್ಲಿ ನೀರು ಕಡಿಮೆಯಾಗಿ ನದಿಯ ಈ ದಂಡೆಯ 'ಬಿರಿಕಲ್ಲಿ'ನಿಂದ ಆ ದಂಡೆಯ 'ಪಿಲಿಕಲ್ಲಿ'ನ ನಡುವೆ ಮರಳು ಕಾಣಿಸಿಕೊಂಡಾಗ, ಸೀತಾದೇವಿಯ ಪಾದದ ಗುರುತಿನ ಜಾಗವನ್ನು ದಾಟಿ ಮುಂದಕ್ಕೆ ಮರಳಿನ ಮೇಲೆ ಮತ್ಸ್ಯ ನಾರಾಯಣ ವ್ರತವೆಂಬ ಹೆಸರಿನಲ್ಲಿ ರಾತ್ರಿ ಸುಮಾರು ೨೫–೩೦ ಜನರಿಗೆ ಮೀನಿನ ಊಟದ ವ್ಯವಸ್ಥೆ ನಡೆಸುವುದು ನನ್ನ ತಂದೆಯವರಿಗಿದ್ದ ಶೋಕಿ. ಅದಕ್ಕಾಗಿ ಅವರು ಮಂಗಳೂರಿನಿಂದ ಒಳ್ಳೆಯ ಮೀನುಗಳನ್ನು ತರಿಸುತ್ತಿದ್ದರು. ರಾತ್ರಿ ಗ್ಯಾಸ್‌ಲೈಟ್ ಬೆಳಕಿನಲ್ಲಿ ನದಿಯಲ್ಲಿ ಹೊಡೆದ ಮೀನುಗಳೊಂದಿಗೆ ಅವುಗಳ ವಿವಿಧ ಪಲ್ಯಗಳು, ಈರುಳ್ಳಿ ತಂಬಳಿ, ಅನ್ನ ಇತ್ಯಾದಿ ತಯಾರಿಸಿ ಊಟ ಮಾಡುವುದು. ವರ್ಷಕ್ಕೆ ಈ ರೀತಿಯ ೨–೪ ವ್ರತಗಳು ನಡೆಯುತ್ತಿದ್ದವು. ಮುಂದೆ ನನ್ನ ತಾರುಣ್ಯದಲ್ಲಿ ನಾನೂ ಈ ರೀತಿಯ ಊಟದ ವ್ಯವಸ್ಥೆಯನ್ನು ಮಾಡಿದ್ದುಂಟು. ಈಗ ಮಂಗಳೂರು ನಗರಕ್ಕೆ ನೀರು ಪೂರೈಕೆಗಾಗಿ ತುಂಬೆ ಅಣೆಕಟ್ಟನ್ನು ಕಟ್ಟಿದ್ದರಿಂದ ನದಿಯಲ್ಲಿ ಮಣಿಹಳ್ಳದವರೆಗೆ ನೀರು ತುಂಬಿಕೊಂಡಿದೆ, ಮರಳು ಕಾಣುವುದಿಲ್ಲ ಮತ್ತು ಈಗಿನ ತರುಣರಿಗೆ ಈ ವ್ರತಗಳಲ್ಲಿ ಆಸಕ್ತಿ ಇದೆಯೋ ಇಲ್ಲವೋ ಎಂಬ ಮಾಹಿತಿ ನನಗೆ ಇಲ್ಲ.

ನನ್ನ ತಂದೆಯವರ ಸ್ನೇಹಿತರ ಪಟ್ಟಿಯಲ್ಲಿ ಪೆರಂಗಾಯ ಹಿತ್ತಿಲ ಬಾಳಿಗರ (ಮಂತ್ರವಾದಿ) ವಾಸು ಬಾಳಿಗ, ಸೋಡಾ ಕಿಟ್ಟಿ ಮಲ್ಯ, ಅರ್ಲಾ ರಾಮ ಪ್ರಭು, ನಂದಾವರ ವಾಸುದೇವ ಶೆಣೈ, ಬಿ.ಹೆಚ್. ರಮಾನಾಥ ಪೈ, ಪ್ರಭುಗಳ ಮನೆಯ ಕೇಶವ ಪ್ರಭು (ಕೆಚ್ಚಾ) ಹೀಗೆ ಸಮವಯಸ್ಕರು ಮತ್ತು ಅವರ ತಮ್ಮ (ನನ್ನ ವಾಸು ಚಿಕ್ಕಪ್ಪ), ಬಡ್ಡಕಟ್ಟೆ ಮಂಜುನಾಥ ಪ್ರಭು (ಮೈನಾಥ್‌ಮಾಮ್), ನಂದಾವರ ವರದರಾಯ ಶೆಣೈ, ನಿತ್ಯಾನಂದ ಹೆಗ್ಡೆ (ನಿತ್ಯಾ), ಮಾಣೂರು ನರಸಿಂಹ ಶೆಣೈ (ನಚ್ಚಾ) ಹೀಗೆ ಸಣ್ಣವರು, ದೊಡ್ಡವರು, ತರುಣರು ಎಂದೆಲ್ಲಾ ಇರುತ್ತಿದ್ದರು.

ಇವರಲ್ಲಿ ಮೈನಾಥ ಮಾಮ್ ಎಂದು ಜನಪ್ರಿಯರಾಗಿದ್ದ ಬಡ್ಡಕಟ್ಟೆ ಮಂಜುನಾಥ ಪ್ರಭು ಅವರು ನನ್ನ ತಂದೆಯವರ ಜೊತೆಯಲ್ಲಿ ಸಿಪಿಸಿ ಏಜಂಟರಾಗಿ ಇದ್ದವರು. ನನ್ನ ತಂದೆಯವರು ತೀರಿಕೊಂಡ ಅನಂತರ ನಮ್ಮ ಕುಟುಂಬಕ್ಕೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಆಧಾರ ಸ್ತಂಭವಾಗಿದ್ದವರು ಇದೇ ಮೈನಾಥ ಮಾಮ್.

ಆಗಿನ ಕಾಲದಲ್ಲಿ ಧರ್ಮಸ್ಥಳದ (ಗೌಡಸಾರಸ್ವತರಲ್ಲಿ ಧರ್ಮಸ್ಥಳಕ್ಕೆ 'ವ್ಹಳ್‌ಕಡೆ ಅಥವಾ ದೊಡ್ಡಕ್ಷೇತ್ರ ಎಂದು ಹೇಳುವ ಕ್ರಮ ಇತ್ತು.) ದೀಪೋತ್ಸವಕ್ಕಾಗಿ ಬಂಟವಾಳದಿಂದ ಸಿಪಿಸಿಯ ೧೦–೧೨ ವಿಶೇಷ ಬಸ್ಸುಗಳು ಹೊರಡುತ್ತಿದ್ದವು. ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯ ಹುಡುಗರಿಂದ ದೀಪೋತ್ಸವದ ರಾತ್ರಿ ವ್ಯಾಯಾಮ ಪ್ರದರ್ಶನ ನಡೆಯುವುದಿತ್ತು. ಇದರಲ್ಲಿ ಡಂಬೆಲ್, ಲೇಜಿಮ್, ಯೋಗಾಸನಗಳು, ಲಾಠಿ, ಭಾಲಾ ಖಡ್ಗವರಸೆ, ಬೆಂಕಿಯಾಟ ಮತ್ತು ವಿಶೇಷ ಆಕರ್ಷಣೆಯಾದ ಮಲ್ಲಕಂಬ ಪ್ರದರ್ಶನಗಳು ಇರುತ್ತಿದ್ದವು.

ಧರ್ಮಸ್ಥಳದಲ್ಲಿ ಆ ಕಾಲದಲ್ಲಿ ಗೌಡ ಸಾರಸ್ವತರಿಗೆ ಪ್ರತ್ಯೇಕ ಚಪ್ಪರದಲ್ಲಿ ಊಟ ತಿಂಡಿಯ ವ್ಯವಸ್ಥೆ, ತಂಗಲು ಛತ್ರದ ವ್ಯವಸ್ಥೆ

ಇರುತ್ತಿತ್ತು. ಅಲ್ಲಿಗೆ ಶ್ರೀ ಕ್ಷೇತ್ರದಿಂದ ಅಕ್ಕಿ, ಧಾನ್ಯ ಮತ್ತು ಸಂಬಾರ ಜೀನಸುಗಳನ್ನು ಸರಬರಾಜು ಮಾಡಲಾಗುತ್ತಿತ್ತು. ಅದರ ಉಸ್ತುವಾರಿ ನನ್ನ ತಂದೆಯವರದು. ಭಕ್ತಜನರಿಂದ 'ಮಾತನಾಡುವ ಮಂಜುನಾಥ'ನೆಂದು ಕರೆಯಿಸಿಕೊಳ್ಳುತ್ತಿದ್ದ ಋಷಿ ಸಮಾನರಾಗಿದ್ದ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ನನ್ನ ತಂದೆಯವರ ಮೇಲೆ ತುಂಬಾ ಅಭಿಮಾನ. ನನ್ನ ತಂದೆಯವರ ಚಿಕ್ಕಪ್ಪ ಬಸ್ತಿ ದೇವಪ್ಪ ಶೆಣೈಯವರು ಪ್ರತಿ ವರ್ಷ ದೀಪೋತ್ಸವದ ದಿನಗಳಿಗಾಗಿ ಮಿಠಾಯಿ, ತಿಂಡಿಗಳನ್ನು ಅಲ್ಲಿಯೇ ತಯಾರಿಸಿ 'ಹೆಗ್ಗಡೆ ಬೀಡಿ'ಗೆ ನೀಡುತ್ತಿದ್ದರು. ಹೀಗಾಗಿ ದೇವಪ್ಪಜ್ಜ ಮತ್ತು ನನ್ನ ತಂದೆಯವರ ಮೇಲೆ ದಿವಂಗತ ಮಂಜಯ್ಯ ಹೆಗ್ಗಡೆಯವರಿಗೆ ತುಂಬಾ ಪ್ರೀತಿ, ವಿಶ್ವಾಸಗಳಿದ್ದವು.

ನನ್ನ ತಂದೆಯುವರ ಮರಣದ ನಂತರ ಮೈನಾಥಮಾಮ ಸಿಪಿಸಿ ಬಸ್ ಕಂಪನಿಯ ಮುಖ್ಯ ಏಜೆಂಟರಾದರು. ನಾನು ಸಬ್ ಏಜೆಂಟ್ ಆಗಿ ಬಸ್ಸಿನ ಟಿಕೇಟ್ ಕೊಡುವ ಕೆಲಸ ಮಾಡುತ್ತಿದ್ದೆ. ಆಗ ಸಿ.ಪಿ.ಸಿ., ಶಂಕರವಿಟ್ಠಳ, ಶ್ರೀ ದುರ್ಗಾಪರಮೇಶ್ವರಿ, ಪಿ.ವಿ.ಎಮ್.ಎಸ್., ಪಿ.ವಿ.ಎಸ್. ಹೀಗೆ ವಿವಿಧ ಬಸ್ ಕಂಪನಿಗಳು ಇದ್ದವು. ಅವರೊಳಗೆ ಸ್ಪರ್ಧೆ ನಡೆಯಬಾರದೆಂದು ಈ ಬಸ್ ಕಂಪನಿಗಳ ಆಡಳಿತಗಾರರು ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮತ್ತು ಜಾಯಂಟ್ ಬುಕ್ಕಿಂಗ್ ಏಜೆನ್ಸಿಯ ವ್ಯವಸ್ಥೆ ಮಾಡಿದ್ದರು. ೧೯೬೭-೬೮ರಲ್ಲಿ ಕರ್ನಾಟಕ ರಾಜ್ಯ ಸರಕಾರವು ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಈ ವ್ಯವಸ್ಥೆ ನಿಂತು ಹೋಯಿತು.

ನನ್ನ ತಾಯಿ ಗೌರಿ ಯಾನೆ ಭಾಗೀರಥಿ

ನನ್ನ ತಾಯಿಯವರು ವಿವಿಧ ವ್ರತ, ಉಪವಾಸಗಳನ್ನು ನಿಯಮಬದ್ಧವಾಗಿ ನಡೆಸುತ್ತಿದ್ದರು. ಅವರಿಗೆ ಸೋಮವಾರ, ಗುರುವಾರದಂದು ಒಪ್ಪತ್ತು ಊಟ. ಆ ದಿನ ಅಕ್ಕಿಯಿಂದ ಮಾಡಿದ ಖಾದ್ಯಗಳನ್ನು ತಿನ್ನುವಂತಿಲ್ಲ. ಏಕಾದಶಿ, ಶಿವರಾತ್ರಿಗಳಂದು ಉಪವಾಸ ವ್ರತ. ಅವರು ನಮ್ಮನ್ನು ಕಾರ್ತಿಕ ಮಾಸದಲ್ಲಿ 'ಪಶ್ಚಿಮ ಜಾಗರಣೆ'ಗೆ ನದಿ ಸ್ನಾನಕ್ಕೆ ಕರೆದೊಯ್ಯುತ್ತಿದ್ದರು. ಮುಂಜಾನೆ ವಿಪರೀತ ಚಳಿ, ದೇಹ, ತುಟಿಗಳು ಕಂಪಿಸುವಷ್ಟು ಚಳಿ. ಆ ಚಳಿಯಲ್ಲಿ ನದಿಯಲ್ಲಿ ಸ್ನಾನ ಮಾಡುವುದೆಂದರೆ ಅದು ದೊಡ್ಡ ಶಿಕ್ಷೆ. ಆದರೂ ಅಮ್ಮ ನಮ್ಮನ್ನು ನಿದ್ದೆಯಿಂದ ಎಬ್ಬಿಸಿ ನದಿಯ ಹತ್ತಿರ ಕರೆದುಕೊಂಡು ಹೋಗುತ್ತಿದ್ದರು. ಮಂಜುಗಡ್ಡೆಯಷ್ಟು ತಣ್ಣಗಿನ ನೀರಿನಲ್ಲಿ ನಮ್ಮ ಸ್ನಾನ. ಆಮೇಲೆ ನಾವು ದೇವಸ್ಥಾನಕ್ಕೆ ಹೋಗಿ ಅಲ್ಲಿ ಮುಂಜಾನೆ ಐದು ಗಂಟೆಗೆ ನಡೆಯುವ 'ಪಶ್ಚಿಮ ಜಾಗರ'ದ ಪೂಜೆ ನೋಡಿ, ಆರತಿ ತೆಗೆದುಕೊಂಡು, ತೀರ್ಥ ಪ್ರಸಾದ ಸ್ವೀಕರಿಸಿ, ಅಮ್ಮನ ಜೊತೆ ಮನೆಗೆ ಹಿಂತಿರುಗುವುದು. ಇದು ಅವರ ನಿಯಮ. ಅನಂತರ ಶಾಲೆಗೆ ಹೋಗುವ ವಯಸ್ಸಿನಲ್ಲಿಯೂ ನಾನು ಅಮ್ಮನೊಂದಿಗೆ ನದಿಸ್ನಾನಕ್ಕೆ ಹೋಗುತ್ತಿದ್ದೆ.

ಆ ಕಾಲದಲ್ಲಿ ಶನಿವಾರದಂದು ಬಡಜನರು ಮನೆಮನೆಗೆ ಭಿಕ್ಷೆ ಬೇಡಲು ಬರುತ್ತಿದ್ದರು. ನಮ್ಮಮ್ಮ ಒಂದು ಬೆತ್ತದ ಬುಟ್ಟಿಯಲ್ಲಿ ಅಕ್ಕಿ ತುಂಬಿಟ್ಟು, ಅದರಲ್ಲಿ ಒಂದೊಂದು ಮುಷ್ಟಿ ಅಕ್ಕಿಯನ್ನು ಮನೆಬಾಗಿಲಿಗೆ ಬರುವ ಭಿಕ್ಷುಕರಿಗೆ ನೀಡಲು ನನ್ನನ್ನು ಹೊರಗಿನ ಜಗಲಿಯಲ್ಲಿ ಕುಳ್ಳಿರಿಸುತ್ತಿದ್ದರು. ಭಿಕ್ಷೆಗೆ ಬರುವವರ ಸಂಖ್ಯೆ ನೂರರ ಸಂಖ್ಯೆಯನ್ನು ದಾಟಿದ್ದೂ ಇದೆ. ಅಮಾವಾಸ್ಯೆಯ ದಿನದಂದು ಅಮ್ಮ ಒಂದು ಗೆರಸೆ ತುಂಬಾ ಅನ್ನ, ಹುರುಳಿ ಪಲ್ಯವಿಟ್ಟು, ಒಂದು ಪುಟ್ಟ ಮಿಳ್ಳೆಯಲ್ಲಿ ತೆಂಗಿನೆಣ್ಣೆ ತುಂಬಿ, ಅದನ್ನು ಮನೆಮಕ್ಕಳಿಗೆ ನಿವಾಳಿಸಿ, ಆಮೇಲೆ ಕೊರಗರಿಗೆ ನೀಡುತ್ತಿದ್ದಳು. ಅದೂ ಅವಳ ಒಂದು ವ್ರತ.

ಆ ದಿನಗಳಲ್ಲಿ ಯಾವುದಾದರೂ ಕುಟುಂಬದಲ್ಲಿ ಗಂಡು ಮಗು ಹುಟ್ಟಿ ಅದು ಸಣ್ಣವಯಸ್ಸಿನಲ್ಲಿಯೇ ತೀರಿಕೊಂಡಿದ್ದರೆ, ಆಮೇಲೆ ಹುಟ್ಟಿದ ಗಂಡುಮಗುವನ್ನು ಕೊರಗರ ಕೈಯಲ್ಲಿಟ್ಟು, ಮತ್ತೆ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆ ಮಗುವಿಗೆ 'ಕೊರಗ'ನೆಂದು ನಾಮಕರಣ ಮಾಡುವ ಕ್ರಮವಿತ್ತು. ಅಂತಹ ಸಂದರ್ಭದಲ್ಲಿ ಮನೆಗೆ ಬಂದ ಕೊರಗರಿಗೆ ಅಕ್ಕಿ, ಎಣ್ಣೆ, ಬಟ್ಟೆ, ಹಣ ನೀಡಿ ಖುಷಿ ಪಡಿಸುವುದು ರೂಢಿ. ಹೀಗೆ ನಮ್ಮ ಊರಿನಲ್ಲಿ 'ಕೊರಗ' ಹೆಸರಿನ ೪-೫ ಮಂದಿ ಇದ್ದರು. ಈ ಪದ್ಧತಿಯ ಹಿನ್ನೆಲೆ ಏನೆಂಬುದು ನಾನರಿಯೆ. ಆದರೆ ಹೀಗೆ ಹೆಸರಿಟ್ಟ ಗಂಡುಮಕ್ಕಳು ಬದುಕಿ ಉಳಿಯುತ್ತಾರೆ ಎನ್ನುವ ಖಾತರಿ ಮಾತ್ರ ಹಿರಿಯರಲ್ಲಿ ಇತ್ತು.

ಸಣ್ಣಂದಿನಲ್ಲಿ ನನಗೆ ನನ್ನ ತಾಯಿ ಜಗತ್ತಿನ ಅತಿ ಚೆಲುವೆಯಾಗಿ ಕಾಣುತ್ತಿದ್ದರು. ಹೀಗೆ ಎಲ್ಲಾ ಮಕ್ಕಳಿಗೂ ಕಾಣಿಸಬಹುದೇನೋ. ಅವರು ಗೌರವರ್ಣದ ಲಕ್ಷಣವಾದ ಹೆಂಗಸು. ಅವರು ಶಾಲೆಗೆ ಹೋಗಿ ಒಂದೆರಡು ತರಗತಿಯ ಶಿಕ್ಷಣವನ್ನು ಪಡೆದಿದ್ದರೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಮ್ಮ ನೆರೆಮನೆಯ ಹೆಣ್ಣುಮಕ್ಕಳನ್ನು ಮನೆಗೆ ಕರೆಯಿಸಿಕೊಂಡು

ಅವರಿಗೆ ಮರಾಠಿ ಭಾಷೆಯ ಭಾಗವತ, ಪುರಾಣಗಳನ್ನು ಓದಿ ಅರ್ಥ ವಿವರಿಸುತ್ತಿದ್ದರು. ಅವರಿಗೆ ಅಪಾರ ದೈವ ಭಕ್ತಿ ಇತ್ತು. ಹತ್ತಿರದಲ್ಲಿಯೇ ಇದ್ದಂತಹ ಬಂಟವಾಳ ಶ್ರೀ ಮಹಾಲಿಂಗೇಶ್ವರ ದೇವರಲ್ಲಿ ಬಹಳ ಭಕ್ತಿ ತೋರುತ್ತಿದ್ದರು. ನನ್ನ ಚಿಕ್ಕ ತಂಗಿಯಂದಿರಿಗೆ ಅಥವಾ ತಮ್ಮಂದಿರಿಗೆ ಅಥವಾ ಮನೆಯಲ್ಲಿರುವ ಎಮ್ಮೆ, ಹಸು, ಕರುಗಳಿಗೆ ಅಸೌಖ್ಯವಾದರೆ ಅವರು ಶ್ರೀ ಮಹಾಲಿಂಗೇಶ್ವರ ದೇವರಿಗೆ ಎಣ್ಣೆ ಮತ್ತು ಧಾರಾಪಾತ್ರಾಭಿಷೇಕದ ಹರಕೆ ಹೊರುತ್ತಿದ್ದರು. ಇನ್ನು ಆ ದೇವರು ಕೂಡ ಅವರ ಭಕ್ತಿ ವಿಶ್ವಾಸಗಳಿಗೆ ಗೌರವ ನೀಡಿ ಅವರ ಮನಸ್ಸಿನ ಹಾರೈಕೆಯನ್ನು ಇಲ್ಲವಾಗಿಸಿದ ನಿದರ್ಶನ ನನಗೆ ತಿಳಿದಿಲ್ಲ.

ನನ್ನ ತಾಯಿಗೆ ಸನ್ಯಾಸಿ, ಭಿಕ್ಷಾರ್ಥಿಗಳೆಂದರೆ ವಿಶೇಷ ಭಾವನೆ ಇತ್ತು. ನಮ್ಮ ಮನೆ ಬಾಗಿಲಿಗೆ ಯಾವುದೇ ಸನ್ಯಾಸಿ ಅಥವಾ ಭಿಕ್ಷೆ ಬೇಡುವವರು ಬಂದರೆ ಅವರಿಗೆ ಸ್ವಲ್ಪ ಹಣ, ಬಟ್ಟೆ, ಏನೂ ಇಲ್ಲದಿದ್ದರೆ ಒಂದು ಮುಷ್ಟಿ ಅಕ್ಕಿಯನ್ನಾದರೂ ನೀಡದೆ ಕಳುಹಿಸುತ್ತಿರಲಿಲ್ಲ. ನಮ್ಮಲ್ಲಿ ಏನೂ ಹಣವಿಲ್ಲದ ದಿನಗಳಲ್ಲಿಯೂ, ನಮ್ಮ ಸಂಬಂಧಿಕರು ಅಥವಾ ನೆಂಟರಿಷ್ಟರು 'ದೇಹಿ' ಎಂದು ಬಂದಿದ್ದಾಗ ಅವರನ್ನು ಖಾಲಿ ಕೈಯಲ್ಲಿ ಅಥವಾ ಅವರಿಗೆ ಊಟ ತಿಂಡಿ ನೀಡದೆ ಅವರು ಕಳುಹಿಸಿಲ್ಲ. ಅಂತಹ ಧರ್ಮಿಷ್ಠ ಮನಸ್ಸು ಮತ್ತು ಕೈಗುಣ ಅವರದು. ನಮ್ಮ ಸಮಾಜದವರಿಗೆ ಮಾತ್ರವಲ್ಲ, ಮನೆಗೆಲಸಕ್ಕೆ ಬರುವವರಿಗೂ ಅವರ ಉದಾರ ಹಸ್ತ ಯಾವಾಗಲೂ ಇದ್ದೇ ಇರುತ್ತಿತ್ತು. ಅವರು ಮದುವೆಗೆ ಬೆಳೆದು ನಿಂತ ಹುಡುಗರಿಗೆ ಮತ್ತು ಹುಡುಗಿಯರಿಗೆ ನೆಂಟಸ್ತಿಕೆ ಮಾಡುವುದಿತ್ತು. ಸಾಧಾರಣವಾಗಿ ಅವರು ಹೇಳಿದ ಮಾತಿಗೆ ಯಾರೂ ನಕಾರ ಸೂಚಿಸುತ್ತಿರಲಿಲ್ಲ. ಅವರ ಮೇಲೆ ಬಹಳ ಜನರಿಗೆ ಉದಾತ್ತ ಭಾವನೆ ಇತ್ತು.

ನಾನು ಮತ್ತು ನನ್ನ ತಂಗಿಯಂದಿರು ಬೆಳಗ್ಗೆ ಬೇಗನೆ ಎದ್ದು ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನಕ್ಕೆ ಹೋಗಿ ತೀರ್ಥ ಪ್ರಸಾದ ತೆಗೆದುಕೊಂಡು, ಅಮ್ಮ ಸ್ನಾನ ಮಾಡುವ ಮೊದಲೇ ಮನೆಗೆ ಹಿಂತಿರುಗಿ ಬರಬೇಕು. ಇಲ್ಲದಿದ್ದರೆ ನಮಗೆ ಬೆಳಗ್ಗಿನ ಗಂಜಿ ನೀಡುತ್ತಿರಲಿಲ್ಲ. ಸಂಜೆ ಹೊತ್ತು ನಾವು ಶಾಲೆಯಾದ ಬಳಿಕ ವ್ಯಾಯಾಮ ಶಾಲೆಯಲ್ಲಿ ಅಥವಾ ಶಾಲಾ ಮೈದಾನಿನಲ್ಲಿ ಆಟೋಟಗಳನ್ನು ಮುಗಿಸಿ ಬಂದ ಬಳಿಕ ಕೈಕಾಲು ತೊಳೆದು ದೇವರ ಕೋಣೆಯಲ್ಲಿ ಭಜನೆಗೆ ಕುಳಿತುಕೊಳ್ಳುವುದು ರೂಢಿ. ನಾವು ಭಜನಾರಂಭಿ ಎಂದು ಅಭಂಗ ಶುರು ಮಾಡುವಾಗ ಅಮ್ಮ ಬಂದು ಕುಳಿತುಕೊಳ್ಳುತ್ತಿದ್ದರು. ಆಮೇಲೆ ಮರಾಠಿ ಅಭಂಗ, ಪುರಂದರದಾಸರ ಕೀರ್ತನೆಗಳನ್ನು ಹಾಡುವ ಮೂಲಕ ಭಜನೆ ಮುಂದುವರಿಯುವುದು. ಆರತಿಯಾದ ಬಳಿಕ ರಾತ್ರಿಯೂಟ. ಇದು ಬಾಲ್ಯದಿಂದ ನಾವು ಅನುಸರಿಸಿ ಬಂದಂತಹ ಅಮ್ಮನ ಪದ್ಧತಿಯಾಗಿದೆ. ಇದೇ ಕಾರಣದಿಂದಾಗಿ ನನಗೆ ಭಜನೆ ಸಂಗೀತದಲ್ಲಿ ಅಭಿರುಚಿ ಹುಟ್ಟುವಂತಾಯಿತು.

ನನ್ನ ತಂದೆ ೧೯೫೭ರಲ್ಲಿ ತೀರಿಕೊಂಡರು. ನನ್ನ ತಾಯಿ ೧೯೭೭ರಲ್ಲಿ ತೀರಿಕೊಂಡರು. ಅಮ್ಮ ಅವರ ಕೊನೆಯ ದಿನಗಳವರೆಗೆ ನನ್ನೊಂದಿಗೆ ನನ್ನ ಸಂಸಾರದ ಜೊತೆಯಲ್ಲಿಯೇ ಇದ್ದರು. ನಾನು ಸಿಂಡಿಕೇಟ್ ಬ್ಯಾಂಕಿನ ಉದ್ಯೋಗದಲ್ಲಿ ಪಾಣೆ ಮಂಗಳೂರು, ರಾಯಭಾಗ ಊರಿಗೆ ಹೋದರೂ, ಅವರು ನನ್ನ ಜೊತೆಯಲ್ಲಿಯೇ ಇದ್ದರು. ನಾನು ೧೯೭೭ರಲ್ಲಿ ನನ್ನೂರು ಬಂಟವಾಳದ ಶಾಖೆಯಲ್ಲಿ ಮ್ಯಾನೇಜರ್ ಆಗಿದ್ದೆ. ಆಗ ಎಲ್.ಎಫ್.ಸಿ.ಸೌಲಭ್ಯದಲ್ಲಿ ಹದಿನೈದು ದಿನ ರಜೆ ಹಾಕಿ ಮೈಸೂರು, ಬೆಂಗಳೂರು ತಿರುಗಾಡುವುದೆಂದು ಕುಟುಂಬಸಮೇತ ಹೋಗಿದ್ದೆ. ಅಮ್ಮನಿಗೆ ಪ್ರಯಾಣ ಆಗುವುದಿಲ್ಲವೆಂಬ ಕಾರಣಕ್ಕಾಗಿ ಅವರನ್ನು ಕಾರ್ಕಳದಲ್ಲಿರುವ ನನ್ನ ತಂಗಿ ಆಮ್ಮುವಿನ (ಶಾಲಿನಿ) ಮನೆಯಲ್ಲಿ ನಿಲ್ಲಿಸಿದ್ದೆ. ನಾವು ಮೈಸೂರಿನಲ್ಲಿ ಮೂರು ದಿನಗಳನ್ನು ಕಳೆದು ಬೆಂಗಳೂರಿಗೆ ಹೋದೆವು. ಆಗಲೇ ಅಮ್ಮ ತೀರಿಕೊಂಡರು. ನನ್ನ ಭಾವನವರು ಕಾರ್ಕಳದಿಂದ ದೂರವಾಣಿಯ ಮೂಲಕ ಈ ಸುದ್ದಿಯನ್ನು ತಿಳಿಸಿದರು. ಹೀಗಾಗಿ ನಾವು ಕಾರಿನಲ್ಲಿ ರಾತೋರಾತ್ರಿ ಕಾರ್ಕಳಕ್ಕೆ ಬಂದು ಮುಟ್ಟಿದೆವು. ಆದರೆ ರಾತ್ರಿಯೇ ಶವಸಂಸ್ಕಾರ ನಡೆಸಿದ್ದರಿಂದ ಅವರ ಕೊನೆಗಾಲದಲ್ಲಿ ನಾನು ಹತ್ತಿರವಿರುವುದು ಸಾಧ್ಯವಾಗಲಿಲ್ಲ. ಅವರ ಅಂತ್ಯದರ್ಶನವೂ ಸಿಗಲಿಲ್ಲವೆನ್ನುವುದು ನನ್ನ ಮನಸ್ಸನ್ನು ಈಗಲೂ ಚುಚ್ಚುತ್ತಲಿದೆ.

ಅಮ್ಮನ ತೌರಿನ ಕಡೆಯವರು ಶ್ರೀಮಂತರಲ್ಲ. ಆದರೆ ಹೃದಯದ ಶ್ರೀಮಂತಿಕೆ ಮತ್ತು ಆತ್ಮಗೌರವವಿದ್ದ ಕುಟುಂಬ ಅವರದು. ನನ್ನ ತಂದೆಯೊಂದಿಗೆ ಮದುವೆ ಮಾಡಿ ಕರೆತಂದ ಬಳಿಕ ಅವರಿಗೆ ಗಂಡನ ಮನೆಯಲ್ಲಿ ಸುಖವಾಗಲೀ, ಹಿರಿಯ ಸೊಸೆಯಾಗಿ ಸಿಗಬೇಕಾಗಿದ್ದ ಗೌರವವಾಗಲೀ ಸಿಗಲಿಲ್ಲ. ನನ್ನ ತಂದೆ ಅವರ ಸಾಮಾಜಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಬೇರೆಯವರಿಗೆ ದುಃಖ, ದುಮ್ಮಾನ, ಅವಮಾನವಾಗಿದ್ದರೆ ಸಹಾಯ ಮಾಡುತ್ತಿದ್ದರೇ ವಿನಹ, ಮನೆಯಲ್ಲಿ ಅವರ ತಾಯಿ

ಅಥವಾ ಅವರ ಸೋದರರು ಮತ್ತು ಅವರ ಪತ್ನಿಯರು, ಸೋದರಿಯರು ನನ್ನ ತಾಯಿಗೆ ನೀಡುತ್ತಿದ್ದ ಕಿರುಕುಳ, ಮಾಡುತ್ತಿದ್ದ ಅವಮಾನದ ವಿಚಾರವಾಗಿ ನಿರ್ಲಿಪ್ತ ಮನೋಭಾವ ತೋರಿಸುತ್ತಿದ್ದರಂತೆ. 'ಒಂದು ಹೊಡೆತ ಎರಡು ತುಂಡು' ಎಂಬಂತಹ ಸ್ವಭಾವದವರಾಗಿದ್ದ ಅವರು ಮನೆಯ ವಿಷಯದಲ್ಲಿ ಬಾಯಿ ಹಾಕಿ, ಪತ್ನಿಯ ಪರವಾಗಿ ಮಾತನಾಡಿದರೆ, ಕುಟುಂಬದ ಏಕತೆಗೆ ಭಂಗ ಬರಬಹುದೆಂದು ಸುಮ್ಮನೆ ಇರುತ್ತಿದ್ದರೆಂದು ಕಾಣುತ್ತದೆ. ಅವರು ಮಧ್ಯಾಹ್ನ ಮನೆಗೆ ಬರುವುದು, ಸ್ನಾನ ಮಾಡಿ, ಊಟ ಮುಗಿಸಿ ಮತ್ತೆ ಸಿಪಿಸಿ ಕಚೇರಿಗೆ ಹೋಗುವುದು. ಆಮೇಲೆ ಹಿಂತಿರುಗಿ ಬರುವುದು ರಾತ್ರಿಯೇ. ನನ್ನ ರಮಣಿ ಅಕ್ಕ ಹುಟ್ಟಿದ ಏಳು ವರ್ಷಗಳ ಬಳಿಕ ಅನಸೂಯ ಅಕ್ಕ ಹುಟ್ಟಿದರು. ಆಮೇಲೆ ಮನೆಯ ವಿಚಾರದಲ್ಲಿದ್ದ ಕಿರಿಕಿರಿಯನ್ನು ಸಹಿಸಲಾಗದೆ ತಂದೆಯವರು ಮಧ್ಯಾಹ್ನದ ಊಟಕ್ಕೆ ಮಾತ್ರ ಮನೆಗೆ ಬಂದು ರಾತ್ರಿ ಶ್ರೀ ದೇವಸ್ಥಾನದ ಮುಖಮಂಟಪದಲ್ಲಿ ಮಲಗುತ್ತಿದ್ದರಂತೆ. ಹೀಗೆ ೭-೮ ವರ್ಷಗಳು ಕಳೆದವು. ಒಮ್ಮೆ ನನ್ನ ತಾಯಿ ಉಪವಾಸ ವ್ರತ ಕೈಗೊಂಡು ಮಧ್ಯಾಹ್ನ ಊಟಕ್ಕೆಂದು ಮನೆಗೆ ಬಂದ ನನ್ನ ತಂದೆಯವರ ಕಾಲಿಗೆರಗಿ, "ನನಗೆ ಬೇರೆ ಮನೆ ಮಾಡಿಕೊಡಿ, ಇಲ್ಲದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ. ನನಗೆ ಆಶೀರ್ವಾದ ಮಾಡಿ" ಎಂದು ಅಂಜಲೀಬದ್ಧರಾಗಿ ಬೇಡಿಕೊಂಡರಂತೆ. ನನ್ನ ತಾಯಿಗೆ ಅವರ ಅತ್ತೆ, ನಾದಿನಿಯರು, ಮತ್ತು ಓರಗಿತ್ತಿಯರು ನೀಡುತಿದ್ದ ಕಿರುಕುಳ, ಮಾಡುತ್ತಿದ್ದ ಅವಮಾನವನ್ನು ತಿಳಿದೂ ಇಷ್ಟು ವರ್ಷ ಸುಮ್ಮನಿದ್ದ ನನ್ನ ತಂದೆಯವರು ಆ ಕ್ಷಣವೇ ಅವರನ್ನು ಮನೆಯಿಂದ ಹೊರಗೆ ಕರೆತಂದು ಅವರ ಹಿರಿಯಕ್ಕನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ನಿಲ್ಲಿಸಿದರು. ಆಮೇಲೆ ಒಂದೆರಡು ದಿನ ಕಳೆಯುವುದರೊಳಗೆ ಬಂಟವಾಳದಲ್ಲಿ ಬೊಂಬಾಯಿ ಯಮುನಾ ಬಾಳಿಗ ಎಂಬವರ ವಠಾರದಲ್ಲಿ ಪ್ರತ್ಯೇಕ ಮನೆ ಮಾಡಿ ಹೊಸದಾಗಿ ಸಂಸಾರ ಪ್ರಾರಂಭಿಸಿದರು ಮತ್ತು ಒಂದು ವರ್ಷ ಕಳೆದ ಬಳಿಕ ನಾನು ಜನ್ಮ ತಾಳಿದೆ. ಇದು ತನ್ನ ಆತ್ಮಗೌರವಕ್ಕೆ ದೇವರು ನೀಡಿದ 'ವರ'ವೆಂದು ಅಮ್ಮ ಯಾವಾಗಲೂ ನಮಗೆ ಹೇಳುವುದಿತ್ತು. ಇದೇ ರೀತಿ ಒಂದೆರಡು ವರ್ಷಗಳು ಕಳೆದ ಅನಂತರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕೆಳಗೆ ನೇತ್ರಾವತಿ ನದಿತೀರದಲ್ಲಿ ಕಂಪನಿ ಸುಬ್ರಾಯ ಬಾಳಿಗ ಅವರಲ್ಲಿ ಸ್ಥಳಬಾಡಿಗೆಗೆ ಜಾಗ ತೆಗೆದುಕೊಂಡು ನನ್ನ ತಂದೆ ಮನೆ ಕಟ್ಟಿಸಿದರು.

ನನ್ನ ತಂದೆಯವರ ಆದರ, ಗೌರವದ ದಿನಗಳಲ್ಲಿಯೂ ನನ್ನ ತಾಯಿಯವರು ಮನೆಯಲ್ಲಿ ಹಸು, ಎಮ್ಮೆ ಸಾಕಿ, ಹಾಲು ಮಾರಿ, ದುಡ್ಡು ಸಂಗ್ರಹಿಸಿ ಬಂಗಾರ ಸಿಂಗಾರ ಮಾಡಿದ್ದುಂಟು. ಅವರ ತಂಗಿಯ ಮಕ್ಕಳಿಗೂ ನಮ್ಮ ಹಾಗೆ ಊಟ ತಿಂಡಿ, ಶಿಕ್ಷಣಕ್ಕೆ ಸಹಾಯ, ತೇರಿನ ದಿನಗಳಲ್ಲಿ ಬಟ್ಟೆಬರೆ ಖರೀದಿಸಿ ನೀಡಿದ್ದುಂಟು.'ಭಾಗೀರಥೀ..' ಎಂದು ತಮ್ಮ ಕಷ್ಟ ಹೇಳಿಕೊಳ್ಳಲು ಬಂದವರಿಗೆ ಅವರದು ಯಾವಾಗಲೂ ಉದಾರ ಹಸ್ತವಿರುತ್ತಿತ್ತು.

ನನ್ನ ತಂದೆಯವರ ಹೊಟೇಲು ಚೆನ್ನಾಗಿ ನಡೆಯುತ್ತಿದ್ದಾಗಲೂ, ನನ್ನ ತಾಯಿ ಯಾರ ಮುಂದೆಯೂ ಶ್ರೀಮಂತಿಕೆಯ ಪ್ರದರ್ಶನ ಮಾಡಿದವರಲ್ಲ. ಅದು ದೇವರ ಕೃಪೆ ಎಂದು ಅವರ ಭಾವನೆ. ಆಮೇಲೆ ನನ್ನ ತಂದೆಯವರ ಅಂತಿಮ ದಿನಗಳಲ್ಲಿ ನಮ್ಮ ಹೊಟೇಲನ್ನು ಮುಚ್ಚುವ ಪರಿಸ್ಥಿತಿ ಉಂಟಾಗಿ ನಾವು ಕಷ್ಟದಲ್ಲಿ ಸಿಕ್ಕಿಕೊಂಡೆವು. ನನ್ನ ತಂದೆಯವರಿಗೆ ಸಾಡೇಸಾತಿ. ನನಗೂ ಸಾಡೇಸಾತಿ. ತಂದೆಯವರ ಮರಣಕಾಲಕ್ಕೆ ನಮ್ಮ ಮನೆಯಲ್ಲಿ ಊಟಕ್ಕೆ ಅಕ್ಕಿ ತರುವುದಕ್ಕೆ ಕಾಸಿಲ್ಲದ ದಿನಗಳೂ ಬಂದಿದ್ದವು. ಆಗಲೂ ನನ್ನ ತಾಯಿ ತನ್ನ ದಾನಧರ್ಮಗಳನ್ನು ಬಿಡಲಿಲ್ಲ.

ನನ್ನ ತಂದೆಯವರ ಮರಣದ ನಂತರ ನನಗೆ ಸಿ.ಪಿ.ಸಿ. ಏಜೆನ್ಸಿ ಸಿಕ್ಕಿತು. ಮದುವೆ ಬೆಳೆದು ನಿಂತ ತಂಗಿ ವಸಂತಿ ಮತ್ತು ಶಾಲೆಗೆ ಹೋಗುತ್ತಿದ್ದ ಮೂವರು ತಮ್ಮಂದಿರು. ಅಷ್ಟು ಕಷ್ಟದ ದಿನಗಳಲ್ಲಿಯೂ ನಾವು ಯಾರ ಬಳಿಯೂ ಬೇಡಲು ಹೋಗದೆ ಮರ್ಯಾದೆಯಿಂದ ದಿನಗಳನ್ನು ಕಳೆಯುವಂತಾದುದು ನನ್ನ ತಾಯಿಯವರ ಆತ್ಮಾಭಿಮಾನದಿಂದ ಮಾತ್ರ. ಅವರ ಕೊನೆಯ ದಿನಗಳಲ್ಲಿ ಅವರಿಗೆ ಕಾಲಿನ ವಾತದ ತೊಂದರೆ ಕಾಣಿಸಿ, ಬೇರೆಯವರ ಕೈಹಿಡಿದು ನಡೆಯುವಂತಾದರೂ, ಅವರು ಸ್ನಾನ ಮುಗಿದ ಬಳಿಕ ದೇವರ ಕೋಣೆಯಲ್ಲಿ ಕುಳಿತು ಸುಮಾರು ಒಂದು ಗಂಟೆ ಕಾಲ ಭಕ್ತಿಯಿಂದ ದೇವರ ಪ್ರಾರ್ಥನೆ, ಪೂಜೆ, ಆರತಿ ಮಾಡಿ ಅನಂತರ ಊಟ, ತಿಂಡಿ ಮಾಡುವುದಿತ್ತು. ಇದು ಅವರ ದಿನನಿತ್ಯದ ಅಭ್ಯಾಸ.

ಅವರು ಭಾದ್ರಪದ ತಿಂಗಳಲ್ಲಿ ಗೌರೀಪೂಜೆಯನ್ನು ಬಹಳ ಭಕ್ತಿ ಶ್ರದ್ಧೆಯಿಂದ ನಡೆಸುತ್ತಿದ್ದರು. ಸ್ವತಃ ಅವರೇ ಕೈಯಾರೆ ದೇವರನ್ನು ಶೃಂಗರಿಸುತ್ತಿದ್ದರು. ಆ ದಿನ ಉಪ್ಪು ಹಾಕದ ದೋಸೆ, ಪಲ್ಯ ಮಾಡುವ ಸಂಪ್ರದಾಯವಿದೆ. ಅದು ಅವರಿಗೆ ತುಂಬ ಇಷ್ಟವಾದುದು. ನನ್ನ ತಂದೆಯವರು ತೀರಿಕೊಂಡು ಅವರಿಗೆ ವೈಧವ್ಯ ಬಂದ ಕಾರಣ, ಆ ವರ್ಷ ನಮ್ಮ ಮನೆಯಲ್ಲಿ ಗೌರೀಪೂಜೆ ನಡೆಸುವುದು ಸಾಧ್ಯವಾಗಲಿಲ್ಲ. ಅದು ಅವರ

ಮನಸ್ಸಿಗೆ ತುಂಬಾ ದುಃಖವನ್ನು ಉಂಟುಮಾಡಿತು. ಹೀಗಾಗಿ ಅವರು ನನಗೆ ವಯಸ್ಸು ಸಣ್ಣದಿದ್ದರೂ, ಮನೆಯಲ್ಲಿ ಬೆಳೆದ ಹೆಣ್ಣುಮಗಳು, ಶಾಲೆಗೆ ಹೋಗುವ ಚಿಕ್ಕ ಹುಡುಗರು ಇದ್ದರೂ, ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದಿದ್ದರೂ, ನನಗೆ ಹುಡುಗಿ ನೋಡಿದರು. ಹೀಗಾಗಿ ನನಗೆ ಬೇಗನೆ ಮದುವೆಯಾಯಿತು. ಆ ವರ್ಷ ನಮ್ಮ ಮನೆಯಲ್ಲಿ ಸಂಭ್ರಮ, ಆಡಂಬರಗಳಿಂದ ಗೌರಿ ಹಬ್ಬ ಮತ್ತೆ ಪ್ರಾರಂಭವಾಯಿತು.

ನನ್ನ ಸಹೋದರಿಯರು ಮತ್ತು ಸಹೋದರರು

ಮನೆಯಲ್ಲಿ ನಾವು ನಾಲ್ಕು ಮಂದಿ ಸಹೋದರರು ಮತ್ತು ನಾಲ್ಕು ಮಂದಿ ಸಹೋದರಿಯರು. ಎಲ್ಲರಿಗಿಂತ ಹಿರಿಯಾಕೆ ರಮಣಿ ಅಕ್ಕ. ಅವರಿಗೆ ವಿದ್ಯಾಭ್ಯಾಸ ಇರಲಿಲ್ಲ(ಆ ಕಾಲದಲ್ಲಿ ಹುಡುಗಿಯರನ್ನು ಶಾಲೆಗೆ ಕಳುಹಿಸುವುದು ಬಹಳ ಕಡಿಮೆ). ಆದರೆ ಅವರು ಸಾಂಸಾರಿಕ ಜ್ಞಾನ ಮತ್ತು ಮನೆವಾಳ್ತೆಯನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ನನ್ನ ತಾಯಿಗೆ ನಾನು ಹುಟ್ಟಿದ ನಂತರ ಎರಡು ವರ್ಷಕ್ಕೊಮ್ಮೆ ಹೆರಿಗೆ. ಹುಟ್ಟಿದ ಮಗುವಿಗೆ ಸ್ನಾನ ಮಾಡಿಸುವುದು, ಅದರ ಲಾಲನೆಪಾಲನೆ ಎಲ್ಲಾ ರಮಣಿ ಅಕ್ಕನದು. ರಾತ್ರಿ ಭಜನೆಯಾದ ಅನಂತರ ಅವರಿಗೆ ಬಿಡುವು ಇದ್ದರೆ ರಮಣಿ ಅಕ್ಕ ನಮಗೆ ರಾಕ್ಷಸರ, ರಾಜಕುಮಾರರ, ಭೂತಪ್ರೇತಗಳ ಕಥೆ ಹೇಳುವುದಿತ್ತು. ಅದನ್ನು ಕೇಳಿ ನಮಗೆ ರಾತ್ರಿ ನಿದ್ದೆ ಬೀಳುತ್ತಿರಲಿಲ್ಲ. ತುಂಬಾ ಭಯವಾಗುತ್ತಿತ್ತು. ರಮಣಿ ಅಕ್ಕನ ವೈವಾಹಿಕ ಬದುಕು ಅವರ ಪತಿಯ ಕಾರಣದಿಂದಾಗಿ ಸುಖಕರವಾಗಿರಲಿಲ್ಲ. ಅವರು ವಯಸ್ಸಾಗಿ ಹಾಸಿಗೆ ಹಿಡಿದು ನೋವು ತಿನ್ನುತ್ತಾ ತೀರಿಕೊಂಡರು.

ಎರಡನೆಯವರು ಅನಸೂಯ ಅಕ್ಕ. ಅವರಷ್ಟು ಚೆಲುವೆಯಾದ ಹೆಣ್ಣುಮಗಳು ಬಂಟವಾಳದಲ್ಲಿ ಅಥವಾ ಸುತ್ತಮುತ್ತ ಊರಿನಲ್ಲಿ ಯಾರೂ ಇರಲಿಲ್ಲ. ಅವರದು ಉದಾರ ಮನಸ್ಸು, ಉದಾರ ಕೈ. ಅವರಿಗೆ ಎಲ್ಲರೂ ಬೇಕು. ಯಾರ ಕುರಿತೂ ಕೆಡುಕು ಎಣಿಸಿದವರೇ ಅಲ್ಲ. ತನ್ನ ಬದುಕಿನಲ್ಲಿ ನಮಗೆ ಅಂದರೆ ಅವರ ತೌರಿನವರಿಗೆ ಎಲ್ಲಾ ವಿಧದ ಸಹಾಯ ನೀಡಿ ಆಧಾರವಾಗಿದ್ದವರು. ಅವರ ಪತಿ, ಅಂದರೆ ನಮ್ಮ ಭಾವನವರೂ ಧರ್ಮರಾಯನ ಹಾಗೆ. ಅವರ ಪಾಲಿಗೆ ಎಲ್ಲರೂ ಒಳ್ಳೆಯವರೇ. ಹೀಗಾಗಿ ಅವರ ಸಂಸಾರ ಆದರ್ಶಮಯವಾಗಿತ್ತು. ಮನೆಬಾಗಿಲಿಗೆ ಬಂದವರನ್ನು ಒಳ ಕರೆದು ಊಟ ನೀಡಿ, ಕೇಳಿದ ಸಹಾಯ ಮಾಡಿ ಆಧಾರವಾಗುವ ಮನೆ ಅವರದು. ನನ್ನ ಅಕ್ಕನವರಿಗೆ ನೆಂಟಸ್ತಿಕೆ ಕೂಡಿಸುವುದು ಇಷ್ಟದ ಕೆಲಸ. ಹೀಗಾಗಿ ಎಷ್ಟೋ ನೆಂಟಸ್ತಿಕೆಗಳು, ನಿಶ್ಚಯ ತಾಂಬೂಲಗಳು ಅವರ ಮನೆಯಲ್ಲಿಯೇ ನಡೆಯುತ್ತಿದ್ದವು. ಅವರು ಇತ್ತೀಚಿಗೆ ಜುಲೈ, ೨೦೦೫ರಲ್ಲಿ ತನ್ನ ಎಂಭತ್ತನೆಯ ವಯಸ್ಸಿನಲ್ಲಿ ತೀರಿಕೊಂಡರು.

ಅನಸೂಯಕ್ಕನ ಅನಂತರ ಸುಮಾರು ಎಂಟು ವರ್ಷಗಳ ಬಳಿಕ ನಾನು ಹುಟ್ಟಿದೆ. ನನ್ನ ನಂತರ ಶಾಲಿನಿ, ನಿರುಪಮ (ಇವಳು ತನ್ನ ೧೪ನೇ ವಯಸ್ಸಿನಲ್ಲಿ ತೀರಿಕೊಂಡಳು), ವಸಂತಿ, ಆಮೇಲೆ ವೆಂಕಟರಮಣ, ಗಣಪತಿ (ಇವನು ಅಮೇರಿಕೆಯ ಲಾಸ್ ವೇಗಾಸ್‌ನಲ್ಲಿದ್ದಾನೆ.) ಅನಂತರ ಪ್ರಭಾಕರ. ಇವರೆಲ್ಲರೂ ತಮ್ಮ ಮಕ್ಕಳೊಂದಿಗೆ ಇದ್ದಾರೆ. ಅವರವರ ಮಟ್ಟಿಗೆ ಒಳ್ಳೆಯವರಾಗಿದ್ದು, ಬೇರೆಯವರಿಗೂ ಉಪಕಾರಿಗಳಾಗಿ ಇದ್ದಾರೆ.

ನನ್ನ ಪತ್ನಿ ಸಾವಿತ್ರಿ

ನನ್ನ ವಿವಾಹ ಮೂಡುಬಿದ್ರೆಯ ಶ್ರೀ ಚರ್ಡಪ್ಪಯ್ಯ ಭಟ್ ಅವರ ಮಗಳು ಯಶವಂತಿಯ ಜೊತೆಯಲ್ಲಿ ೨೭ ಏಪ್ರಿಲ್, ೧೯೫೫ರಲ್ಲಿ ನಡೆದ ವಿಚಾರವನ್ನು ಈಗಾಗಲೇ ತಿಳಿಸಿದ್ದೇನೆ. ಅವಳೊಂದಿಗೆ ನನ್ನ ಸಂಸಾರ ಚೆನ್ನಾಗಿ ನಡೆಯಿತು. ಮಾರ್ಚ್ ೪, ೧೯೬೦ರಲ್ಲಿ ಅಂದರೆ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಬ್ರಹ್ಮರಥೋತ್ಸವದ ದಿನ ಸಾವಿತ್ರಿಯ ಹೆರಿಗೆಯಾಗಿ ನಮ್ಮ ಮಗಳು ವಿದ್ಯಾ ಹುಟ್ಟಿದಳೆನ್ನುವ ಸುದ್ದಿ ಬಂತು.

ನಮ್ಮದು ಆರ್ಥಿಕವಾಗಿ ಹೇಳುವಷ್ಟು ಉತ್ತಮ ಸ್ಥಿತಿ ಅಲ್ಲದಿದ್ದರೂ ನಮ್ಮ ಮನೆಯಲ್ಲಿ ಪ್ರೀತಿ, ವಾತ್ಸಲ್ಯದ ವಾತಾವರಣಕ್ಕೆ ಯಾವ ಕೊರತೆಯೂ ಇರಲಿಲ್ಲ. ನನ್ನ ಸಹೋದರಿಯರಿಗೆ ಹಾಗೂ ಸಹೋದರರಿಗೆ ಸಾವಿತ್ರಿಯ ಕುರಿತು (ಅವರ ಅತ್ತಿಗೆ) ತುಂಬಾ ಪ್ರೀತಿ. ಗೌರವ ಮತ್ತು ಪೂಜ್ಯ ಭಾವನೆ. ಅವರು ಅತ್ತಿಗೆಯನ್ನು ತಾಯಿಯ ಹಾಗೆ ಗೌರವದಿಂದ ಕಾಣುತ್ತಿದ್ದರು. ಸಾವಿತ್ರಿಯೂ ಅಷ್ಟೇ ತನಗಾಗಿ ಏನಾದರೂ ಬೇಕು ಎನ್ನುವ ಆಶೆಯನ್ನು ವ್ಯಕ್ತಪಡಿಸಿದ್ದು ಇಲ್ಲವೇ ಇಲ್ಲ. ಅವಳು ಮದುವೆಯಾಗಿ ಮನೆಗೆ ಬಂದಾಗ ನನ್ನ ತಮ್ಮಂದಿರಿಗೆ ಬರೀ ೧೦-೧೨ ವರ್ಷ ವಯಸ್ಸು. ಅವರನ್ನು ತನ್ನ ಮಕ್ಕಳ ಹಾಗೆ ಅವಳು ನೋಡಿಕೊಳ್ಳುತ್ತಿದ್ದಳು ಎಂದು ಹೇಳಬಹುದು. ಹೀಗಾಗಿ ನನಗೆ ಮನೆ, ಸಂಬಂಧಗಳ ಕುರಿತು ಯಾವುದೇ ತಲೆನೋವು ಇರಲಿಲ್ಲ. ನನ್ನ ಅಮ್ಮನೂ ಅಷ್ಟೇ, ಅವರು ಬದುಕಿದ್ದಾಗ ಸಾವಿತ್ರಿಯ ಕುರಿತು ಯಾವುದೇ ತಕರಾರು,

ದೂರು ನೀಡಿದ್ದು ಅಥವಾ ದೂಷಿಸಿದ್ದು ಇಲ್ಲವೇ ಇಲ್ಲ. ಅವರ ಕೊನೆಯ ದಿನಗಳಲ್ಲಿ ದೈಹಿಕ ಶಕ್ತಿ ಕಡಿಮೆಯಾಗಿ ನಡೆದಾಡುವುದು ಕಷ್ಟವಾಗಿದ್ದಾಗಲೂ, ತನ್ನ ಅತ್ತೆ ಸುಖವಾಗಿ ಇರುವಂತೆ ನೋಡಿಕೊಂಡವಳು ಸಾವಿತ್ರಿ.

ನನ್ನ ಸಹೋದರಿಯರಿಗೆ ಅಥವಾ ಸಹೋದರರಿಗೆ ತಮ್ಮ ಅತ್ತಿಗೆಯು ಮೇಲೆ ನನಗಿಂತಲೂ ಹೆಚ್ಚಿನ ಪೂಜ್ಯಭಾವನೆ. 'ಅತ್ತಿಗೆ ಒಳ್ಳೆಯವರಾಗಿದ್ದರಿಂದ ನಮಗೆ ತೌರುಮನೆ ಅನ್ನುವುದು ಉಳಿದ ಹಾಗಾಯಿತು' ಎಂದು ನನ್ನ ತಂಗಿಯರು ಹೇಳುವುದಿದೆ. ಅನಸೂಯಕ್ಕನ ಮಕ್ಕಳಾದ ದೇವದಾಸ (ದೇವು), ವಿವ್ಲು, ಗೋಕುಲದಾಸ (ಗೋಕುಲು)ರು ಸಣ್ಣಂದಿನಲ್ಲಿ ಬಂಟವಾಳ ಶಾಲೆಯಲ್ಲಿ ಕಲಿಯಲು ನಮ್ಮಲ್ಲಿಯೇ ಇರುತ್ತಿದ್ದರು. ಹಿರಿಯಕ್ಕ ರಮಣಿಯಕ್ಕ ಮತ್ತು ಇಂದಿರಾ ಅವರೂ ನಮ್ಮಲ್ಲಿಯೇ ಇರುತ್ತಿದ್ದರು. ಅವರಲ್ಲಿ ಯಾವ ಬೇಧಭಾವವನ್ನೂ ತೋರಿಸದೆ ಸಾವಿತ್ರಿ ಎಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಇವರೆಲ್ಲಾ ಹೆಚ್ಚಾಗಿ ನಮ್ಮ ಮನೆಯಲ್ಲಿಯೇ ಇರುವುದು ಭಾರ ಎಂಬ ಭಾವನೆಯನ್ನು ಎಂದೂ ವ್ಯಕ್ತಪಡಿಸುತ್ತಿರಲಿಲ್ಲ.

ನಮ್ಮ ಮದುವೆಯಾಗಿ ಆರು ವರ್ಷ ಕಳೆದು, ನಾನು ಸಿಂಡಿಕೇಟ್ ಬ್ಯಾಂಕ್‌ನ ಅಧಿಕಾರಿಯಾಗಿ ನೇಮಕಗೊಂಡ ಬಳಿಕವೇ ಸಾವಿತ್ರಿಗೆ ನಾನು ಹೊಸ ರೇಶ್ಮೆ ಸೀರೆ ಖರೀದಿಸಿ ನೀಡಿದ್ದೆ. ಅದುವರೆಗೆ ಅಥವಾ ಅದರ ಅನಂತರವೂ ನನ್ನಲ್ಲಿ ಬೆಲೆಬಾಳುವ ಸೀರೆ ಅಥವಾ ಚಿನ್ನದ ಒಡವೆ ಬೇಕೆಂದು ಕೇಳಿದವಳೇ ಅಲ್ಲ. ಇನ್ನು ಅವಳಲ್ಲಿ ಇರುವುದನ್ನು ನನ್ನ ತಂಗಿಯಂದಿರಿಗೆ ಅಥವಾ ಸೋದರಸೊಸೆಯರಿಗೆ ಬೇಕೇ ಎಂದು ಅವಳು ಕೇಳುವುದಿತ್ತು. ನಾನು ಊರು, ಪರವೂರು, ಪರದೇಶಗಳಿಗೆ ಪ್ರವಾಸಕ್ಕೆ ಹೋಗುವಾಗ, ನಾಲ್ಕು ದಿನ ಸುತ್ತಾಡಿ ಬರೋಣವೆಂದು ಕರೆದರೆ ಬೇಡವೆಂದು ಹೇಳುತ್ತಿದ್ದಳೇ ವಿನಹಾ ಹೊರಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದವಳೇ ಅಲ್ಲ. ಇಂತಹ ಒಬ್ಬ ಸಹಧರ್ಮಿಣಿ ಸಿಕ್ಕಿದ್ದರಿಂದಲೇ ನನಗೆ ನನ್ನ ವೃತ್ತಿಜೀವನ ಮತ್ತು ಸಾಮಾಜಿಕ ಕೆಲಸಗಳಲ್ಲಿ ಚಿಂತೆ ಇರುತ್ತಿರಲಿಲ್ಲ.

●●

೩. ಶಾಲಾ ದಿನಗಳು

ನನ್ನನ್ನು ದೇವಸ್ಥಾನದ ಪ್ರಾಥಮಿಕ ಶಾಲೆಯಲ್ಲಿ ಒಂದನೆಯ ತರಗತಿಗೆ ದಾಖಲಿಸಿದರು. ನಾನು ಕಲಿಯುವುದರಲ್ಲಿ ಜಾಣನಾಗಿರಲಿಲ್ಲ. ನನ್ನ ಮನಸ್ಸು ಆಟದಲ್ಲಿ, ಸಹಪಾಠಿಗಳೊಂದಿಗೆ ತಮಾಷೆಯಾಡುವುದು, ಹರಟೆ ಹೊಡೆಯುವುದರಲ್ಲಿ ಮಗ್ನವಾಗಿರುತ್ತಿತ್ತು. ನನಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವಷ್ಟು ಮಾತ್ರ ಅಂಕಗಳು ದೊರೆಯುತ್ತಿದ್ದವು. ಮೇಷ್ಟ್ರು ಹೇಳಿದ್ದು ಮನಸ್ಸಿಗೆ ನಾಟಿದರೂ, ಅದು ನೆನಪಿನಲ್ಲಿ ಉಳಿಯುತ್ತಿರಲಿಲ್ಲ. ಕಲಿಯುವುದರಲ್ಲಿ ಜಾಣರಾಗಿದ್ದ ಸಂಗಾತಿಗಳು ಕೂಡ ನನಗೆ ಸಿಕ್ಕಿರಲಿಲ್ಲ. ಸಿಗಲೇ ಇಲ್ಲವೆಂದು ಹೇಳುವ ಹಾಗಿಲ್ಲ, ನನಗೆ ಪಾಠಗಳಲ್ಲಿ ಮಾರ್ಗದರ್ಶನ ನೀಡುತ್ತಿದ್ದವನು ನನ್ನ ಸಹಪಾಠಿ ಪದ್ಮನಾಭ ಪೈ. ಸಣ್ಣವಯಸ್ಸಿನಲ್ಲಿಯೇ ಲಾರಿ ಕೆಳಗೆ ಬಿದ್ದು ಕಾಲು ಕಳೆದುಕೊಂಡಿದ್ದ ಪದ್ಮನಾಭ ತನ್ನ ಅಂಗವಿಕಲತೆಯನ್ನು ತೋರಗೊಡದೆ ಜಿದ್ದಿನಿಂದ ಸೈಕಲ್ ಓಡಿಸುವುದು, ನದಿಯಲ್ಲಿ ಈಜುವುದು, ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್ ಇತ್ಯಾದಿ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದ. ಮುಂದೆ ಮದ್ರಾಸ್ ನಗರದಲ್ಲಿ ಉಚ್ಚ ಶಿಕ್ಷಣ ಪಡೆದು ಅಮೇರಿಕೆಗೆ ಹೋದನು. ಅಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವನ್ನು ರೂಪಿಸಿಕೊಂಡು ಶಿಕಾಗೋ ನಗರದ ಶ್ರೀಮಂತರು, ಪ್ರಸಿದ್ಧ ಸಿನೆಮಾ ತಾರೆಯರು ವಾಸಿಸುತ್ತಿರುವ ಬ್ರೆವರಿ ಹಿಲ್ಸ್ ನಲ್ಲಿ ಮನೆ ಮಾಡಿಕೊಂಡಿದ್ದ. ಊರಿಗೆ ಬಂದಾಗ ನನಗೆ ಮಾತನಾಡಲು ಸಿಗುತ್ತಿದ್ದ (ಇತ್ತೀಚಿಗೆ ಅವನ ದೇಹಾಂತ್ಯವಾಯಿತು),

ನನ್ನ ಇಬ್ಬರು ಖಾಸಾ ಗೆಳೆಯರೆಂದರೆ ಜನಾರ್ದನ ಭಂಡಾರಿ ಮತ್ತು ಅವನ ತಮ್ಮ ಸರ್ವೋತ್ತಮ ಭಂಡಾರಿ. ಇದರಲ್ಲಿ ಜನಾರ್ಧನ ಭಂಡಾರಿ (ಜನ್ನಪ್ಪ ಭಂಡಾರಿ) ನನ್ನ ಕಷ್ಟ ಸುಖದಲ್ಲಿ ಸಹಭಾಗಿಯಾಗಿದ್ದವನು. ನನ್ನ ಬದುಕಿನಲ್ಲಿ ಅತ್ಯಂತ ಸ್ಮರಣಾರ್ಹ ವ್ಯಕ್ತಿ. ನನ್ನ ಸಹೋದರರಿಗೆ ಮತ್ತು ಸಹೋದರಿಯರಿಗೂ ಕಷ್ಟ ಬಂದ ಸಂದರ್ಭದಲ್ಲಿ ತುಂಬಾ ಸಹಾಯ ನೀಡಿ ಮನಃಸ್ಥೈರ್ಯ ಒದಗಿಸಿದ ಪ್ರಾಮಾಣಿಕ ಬಂಧು. ನಮ್ಮಿಬ್ಬರ ತಂದೆಯವರು ಕೂಡ ಒಳ್ಳೆಯ ಸ್ನೇಹಿತರಾಗಿದ್ದರು. ಅದೇ ಬಂಧುತ್ವ ನಮಗೂ ಬಂದಿತ್ತು. ಅವನ ಸಾವಿನವರೆಗೆ(ಐವತ್ತು ವರ್ಷ ವಯಸ್ಸಿನಲ್ಲಿ ಅವನು ಮರಣ ಹೊಂದಿದ) ನನ್ನ ಮೇಲೆ ತುಂಬಾ ಅಭಿಮಾನ ಮತ್ತು ವಿಶ್ವಾಸವನ್ನು ಆತ ಇಟ್ಟಿದ್ದ. ಅವನದು ಬಹು ಕಷ್ಟದ ಬದುಕು. ಹಾಗಿದ್ದರೂ ನಾನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಮ್ಯಾನೆಜರ್ ಆಗಿ ನೇಮಕಗೊಂಡಾಗ ತುಂಬಾ ಅಭಿಮಾನ ಮತ್ತು ಸಂತೋಷಪಟ್ಟುಕೊಂಡು ನನಗೆ ಶುಭ ಹಾರೈಸಿದ ಜನ್ನಪ್ಪ ಭಂಡಾರಿಯನ್ನು ನಾನು ಮರೆಯುವುದು ಸಾಧ್ಯವಿಲ್ಲ.

ಒಂಬತ್ತು-ಹತ್ತನೆಯ ತರಗತಿಯಲ್ಲಿ ಓದುತ್ತಿರುವಾಗ ನಾನು ಮತ್ತು ಸರ್ವೋತ್ತಮ ಭಂಡಾರಿ ಸೇರಿ ಶಾಲೆಯ ವಿದ್ಯಾರ್ಥಿಗಳಿಗಾಗಿ ಕೈಬರೆಹದ ಕನ್ನಡ ಮಾಸಿಕ ಪತ್ರಿಕೆ 'ಶಶಿಕಿರಣ'ವನ್ನು ಬೆಳಕಿಗೆ ತಂದಿದ್ದೆವು. ಅದರಲ್ಲಿದ್ದ ಕತೆ, ಕವನ, ಚಕ್ರಬಂಧ ಇತ್ಯಾದಿ ಶೀರ್ಷಿಕೆಗಳು ವಿದ್ಯಾರ್ಥಿವೃಂದಕ್ಕೆ ಅತ್ಯಂತ ಪ್ರೀತಿಯದ್ದಾಗಿದ್ದವು. ಇದು ದೊಡ್ಡವರೂ ಓದಲು ಬಯಸುವಂತಹ ಗುಣಮಟ್ಟದ ಪತ್ರಿಕೆಯಾಗಿತ್ತು. ಸರ್ವೋತ್ತಮ ಭಂಡಾರಿಯ ಕೈಬರೆಹ ಸುಂದರವಾಗಿತ್ತು. ಅವನು ಕಲಾಕಾರನೂ ಆಗಿದ್ದ. ನಮ್ಮ ಶಶಿಕಿರಣ ಪತ್ರಿಕೆ ವರ್ಣಮಯವಾಗಿ ಸುಂದರವಾಗಿ ಬರುತ್ತಿತ್ತು. ನಾನು ಕಥೆ ಬರೆಯುತ್ತಿದ್ದೆ. ಶಶಿಕಿರಣದಲ್ಲಿ ಹರಟೆ, ಹಾಸ್ಯ ಮತ್ತು ಲೇಖನಗಳನ್ನೂ ಬರೆಯುತ್ತಿದ್ದೆ. ಬೇರೆ ವಿದ್ಯಾರ್ಥಿಗಳಿಗೂ ಕಥೆ, ಲೇಖನ ಬರೆಯಲು ಶಶಿಕಿರಣ ಸ್ಫೂರ್ತಿಯಾಯಿತು.

ನಾವು ಮಕ್ಕಳು ಕಾರ್ತಿಕ ಏಕಾದಶಿಯ ದಿನ, ಹುಣ್ಣಿಮೆಯ ದಿನ, ಬಂಟವಾಳ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನದ ರಥೋತ್ಸವದ ಮೃಗಬೇಟೆ ಮತ್ತು ಬ್ರಹ್ಮ ರಥೋತ್ಸವದ ದಿನಗಳಲ್ಲಿ ರಾತ್ರಿಯೆಲ್ಲಾ ನಿದ್ದೆಗೆಟ್ಟು ಉತ್ಸವದಲ್ಲಿ ಭಾಗಿಯಾಗುತ್ತಿದ್ದೆವು. ನಾನು ಮತ್ತು ನನ್ನ ಸ್ನೇಹಿತರು ಪರಸ್ಪರ ಕತೆಗಳನ್ನು ಹೇಳಿಕೊಳ್ಳುವುದು, ಆಮೇಲೆ ಸರ್ವೋತ್ತಮ ಅದೇ ಕತೆಗಳಿಗೆ

ಉಪ್ಪುಕಾರ ಹಚ್ಚಿ, ಅದನ್ನೇ ಮತ್ತೆ ನಮ್ಮ ಮುಂದೆ ಹೇಳುವುದು, ಹೀಗೆ ರಾತ್ರಿ ಕಳೆದದ್ದೇ ನಮಗೆ ಗೊತ್ತಾಗುತ್ತಿರಲಿಲ್ಲ.

ನಮಗೆ ರಥೋತ್ಸವ ಅಥವಾ ಕಾರ್ತಿಕ ಹುಣ್ಣಿಮೆಯ ಉತ್ಸವದ ಖರ್ಚಿಗೆ ನಾಲ್ಕಾಣೆ ನೀಡುತ್ತಿದ್ದರು. ಅದು ತುಂಬಾ ಕಡಿಮೆ ಮೊತ್ತವಾಗಿದ್ದರೂ, ಅದನ್ನು ನಮ್ಮ ಕೈಯಲ್ಲಿಡುವಾಗ "ಎಲ್ಲಾ ದುಡ್ಡು ಖರ್ಚು ಮಾಡುವುದಲ್ಲ, ಅದರಲ್ಲಿ ಉಳಿಸಿ ತಂದು ಡಬ್ಬಿಗೆ ಹಾಕಬೇಕು" ಎಂದು ಹಿರಿಯರ ಆಜ್ಞೆಯೂ ಇರುತ್ತಿತ್ತು. ಈಗಿನ ಹಾಗೆ ಐಸ್‌ಕ್ರೀಮ್, ಗೋಬಿ ಮಂಚೂರಿಯನ್ನು ಆಗ ಮಾರುತ್ತಿರಲಿಲ್ಲ. ಕಾರ್ಕಳ, ವೇಣೂರು ಕಡೆಯಿಂದ ಸಂತೆವ್ಯಾಪಾರಿಗಳು ಬರುತ್ತಿದ್ದರು. ಕರಿದ ಹಲಸಿನ ಕಾಯಿ ಹಪ್ಪಳ, ಗೆಣಸಿನ ಹಪ್ಪಳಗಳು, ಮಂಡಕ್ಕಿ ಉಪ್ಕರಿ, ಬೆಲ್ಲದ ಅಕ್ರೂಟು, ಐಸ್‌ಕ್ಯಾಂಡಿಗಳಿರುವ ತಳ್ಳುಗಾಡಿಗಳನ್ನು ದೇವಸ್ಥಾನದ ಬಳಿ ನಿಲ್ಲಿಸುತ್ತಿದ್ದರು. ಹೊಟೇಲಿಗೆ ಹೋಗಿ ಬಿಸ್ಕೂಟ್ ಅಂಬಡೆ, ಬೇಯಿಸಿದ ಕಡಲೆ ಮತ್ತು ಅವಲಕ್ಕಿ ಒಗ್ಗರಣೆಯ ಮಿಕ್ಸ್ಚರ್ ಮತ್ತು ರೊಟ್ಟಿ ತಿಂದು, ಕಾಫಿ ಕುಡಿದರೆ ಖರ್ಚಾಗುತ್ತಿದ್ದುದು ಒಟ್ಟು ಒಂದಾಣೆ ಅಥವಾ ಒಂದೂವರೆ ಆಣೆ. ಹೀಗಾಗಿ ಉತ್ಸವದ ಖರ್ಚಿಗೆಂದು ನೀಡಿದ ಹಣದಲ್ಲಿ ಒಂದೆರಡು ಮುಕ್ಕಾಲುಗಳನ್ನು ಉಳಿತಾಯ ಮಾಡುವುದು ಸಾಧ್ಯವಿತ್ತು.

ಸರ್ವೋತ್ತಮನ ಹತ್ತಿರ ಅಥವಾ ನನ್ನ ಹತ್ತಿರ ಬರೀ ಒಂದಾಣೆ ಇದ್ದಾಗ ನಾವಿಬ್ಬರೂ ದೇವಸ್ಥಾನದ ಬಳಿ ಇರುವ ಕಿಣಿಮಾಮರ ಹೊಟೇಲಿಗೆ ಹೋಗಿ ಒಂದು ಪ್ಲೇಟ್ ಇಡ್ಲಿಸಾಂಬಾರ್ ತೆಗೆದುಕೊಂಡು ಹಂಚಿ ತಿನ್ನುತ್ತಿದ್ದೆವು. ಸರ್ವೋತ್ತಮ ಅವನ ಅಣ್ಣ ಜನ್ನಪ್ಪನ ಹಾಗೆ ಸೀದಾಸಾದಾ ಮನುಷ್ಯನಲ್ಲ. ಅವನಾಯಿತು ಅವನ ಶೀಂತ್ರಿಯಾಯಿತು. ಧೂರ್ತ ಬುದ್ಧಿ ಅವನದು. ನನ್ನಲ್ಲಿರುವ ಹೊಸ ಬ್ಯಾಡಮಿಂಟನ್ ಬ್ಯಾಟ್ ತೆಗೆದುಕೊಂಡು ಅವನು ಆಡುವುದು ಮತ್ತು ಅವನ ಹಳೆ ಬ್ಯಾಟನ್ನು ನನಗೆ ನೀಡಿ ನನ್ನಿಂದ ಆಟವಾಡಿಸುವುದು. ಅವನು ಆಡುತ್ತಿದ್ದ ಸಿಹಿಮಾತುಗಳಿಂದ ಅವನ ಈ ಕುಟಿಲತೆ ನನಗೆ ತಿಳಿಯುತ್ತಿರಲಿಲ್ಲ.

ನಮಗೆ ಶಾಲೆಯಲ್ಲಿ ಒಳ್ಳೊಳ್ಳೆಯ ಶಿಕ್ಷಕರಿದ್ದರು. ವಿದ್ಯಾರ್ಥಿಗಳನ್ನು ಸ್ವಂತ ಮಕ್ಕಳ ಹಾಗೆ ಪ್ರೀತಿಯಿಂದ ಕಾಣುವ ಶಿಕ್ಷಕರು. ತಮ್ಮ ವಿದ್ಯಾರ್ಥಿಗಳು ಜೀವನದಲ್ಲಿ ಪ್ರಗತಿಯನ್ನು ಸಾಧಿಸಬೇಕು ಎನ್ನುವ ಉದ್ದೇಶದಿಂದ ಅವರು ಮನೆಪಾಠ ನೀಡದೆ, ಶನಿವಾರ, ಭಾನುವಾರಗಳಲ್ಲಿಯೂ ತರಗತಿಗಳನ್ನು ನಡೆಸುತ್ತಿದ್ದರು. ಪ್ರಾಥಮಿಕ ಶಾಲೆಯಲ್ಲಿ ಶ್ರೀ ಗೋವಿಂದ ಮಾಸ್ತರ (ಪ್ರಭು), ಶ್ರೀಧರ ಪೈ ಮಾಸ್ತರ ಮತ್ತು ಪ್ರೌಢಶಾಲೆಯಲ್ಲಿ ಲಕ್ಷ್ಮಣರಾವ್ ಮಾಸ್ತರ, ಮಾಧವ ಬಾಳಿಗ, ಅಪ್ಪುರಾಯ ಶೆಣೈ ಮತ್ತು ಮುಖ್ಯೋಪಾಧ್ಯಾಯರಾಗಿದ್ದ ಕುಡ್ಗಿ ಮಾಧವ ಶೆಣೈ ಮಾಸ್ತರರಿಗೆ ತಮ್ಮ ವಿದ್ಯಾರ್ಥಿಗಳು ಎಷ್ಟು ಕಲಿತರೂ ತೃಪ್ತಿ ಇರುತ್ತಿರಲಿಲ್ಲ.

ವಿದ್ಯಾರ್ಥಿಗಳನ್ನು ಮನಃಪೂರ್ವಕವಾಗಿ, ಹೃದಯ ಪೂರ್ವಕವಾಗಿ ಪ್ರೀತಿಸುತ್ತಿದ್ದ ಶಿಕ್ಷಕರು ಇವರು. ಶಾಲೆಯ ಹಳೇ ವಿದ್ಯಾರ್ಥಿಗಳಲ್ಲಿ ಯಾರಿಗಾದರೂ ಬಹುಮಾನ ಅಥವಾ ಪ್ರಶಸ್ತಿ ಸಿಕ್ಕಿದ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾದರೆ, ಇಡೀ ಶಾಲೆಗೆ ಅದನ್ನು ತಿಳಿಸಿ ಸಂಭ್ರಮ ಪಡುತ್ತಿದ್ದರು. ನಾವು ಶಾಲೆ ಬಿಟ್ಟು ಇಪ್ಪತ್ತೈದು ವರ್ಷ ಕಳೆದ ನಂತರವೂ, ಅಕಸ್ಮಾತ್ ಎಲ್ಲಿಯಾದರೂ ಭೇಟಿಯಾದರೆ ಅಷ್ಟೇ ಪ್ರೀತಿ, ವಿಶ್ವಾಸ ತೋರಿಸಿ ಆಶೀರ್ವಾದ ಮಾಡುತ್ತಿದ್ದರು. ನಾನು ಸಿಂಡಿಕೇಟ್ ಬ್ಯಾಂಕ್‌ನ ಮೆನೇಜರ್ ಆದ ಸುದ್ದಿ ಕೇಳಿ ಶ್ರೀ ಕುಡ್ಗಿ ಮಾಧವ ಶೆಣೈಯವರು ನನ್ನನ್ನು ತಮ್ಮ ಮನೆಗೆ ಕರೆದು ಕಾಫಿ ನೀಡಿ ಆಶೀರ್ವಾದ ಮಾಡಿದ್ದು ಇವತ್ತಿಗೂ ನನ್ನ ನೆನಪಿನಲ್ಲಿದೆ.

ನಮಗೆ ಶ್ರೀ ಬಿ.ವಿ. ಸೋಮಯಾಜಿ ಹೆಸರಿನ ಒಬ್ಬ ಡ್ರಿಲ್ ಮೇಷ್ಟ್ರು ಇದ್ದರು. ಮಳೆಗಾಲದಲ್ಲಿ ಮಕ್ಕಳು ಮೈದಾನಿನಲ್ಲಿ ಆಟವಾಡುವುದು ಸಾಧ್ಯವಿಲ್ಲದಾದಾಗ, ಅವರು ತರಗತಿ ಕೋಣೆಯಲ್ಲಿ ನಮಗೆ ರಾಮಾಯಣ, ಮಹಾಭಾರತ ಮತ್ತು ಪಂಚತಂತ್ರದ ಕತೆಗಳನ್ನು ಹೇಳುತ್ತಿದ್ದರು; ಪುಣ್ಯಪುರುಷರ ವಿಶೇಷ ವ್ಯಕ್ತಿಚಿತ್ರಣವನ್ನು ನೀಡುತ್ತಿದ್ದರು. ಅವರು ತೊಂಭತ್ತೈದು ವರ್ಷದವರಾಗಿದ್ದಾಗಲೂ, ನಾನು ಅವರನ್ನು ಬಂಟವಾಳದ ಪೇಟೆಯಲ್ಲಿ ಭೇಟಿಯಾಗಿದ್ದಾಗ ಅವರು ನನ್ನನ್ನು ಗುರುತಿಸಿ ನನ್ನ ತಲೆಯ ಮೇಲೆ ಕೈಇಟ್ಟು ಆಶೀರ್ವಾದ ಮಾಡುತ್ತಿದ್ದುದುಂಟು.

ನಮ್ಮ ಶ್ರೀ ಪಾಂಡುರಂಗ ಬಾಳಿಗ ಮೇಷ್ಟ್ರು ಅಪ್ಪಟ ಗಾಂಧಿವಾದಿ. ಅವರ ಉಡುಪು ಖಾದಿಯ ಬಿಳಿ ಧೋತ್ರ, ಅಂಗಿ ಮತ್ತು ಭುಜದ ಮೇಲೆ ಖಾದಿಯ ಬಿಳಿ ಅಂಗವಸ್ತ್ರ. ಅವರು ಮಳೆಗಾಲದಲ್ಲಿ ತೆಂಗಿನಗರಿಯ ಗಾಂಧಿ ಛತ್ರಿಯನ್ನು ಹಿಡಿಯುವುದು. ನಾವು ಹೈಸ್ಕೂಲ್‌ನಲ್ಲಿದ್ದಾಗ ಅವರಿಂದ ಗಾಂಧೀನೀತಿಯನ್ನು ಕಲಿತೆವು. ಅದನ್ನೇ ಅನುಸರಿಸಿ ಸರಳ ಜೀವನ ನಡೆಸಿದವರು ಅವರು. ಈ ಎಲ್ಲಾ ಗುರುಗಳು ಅವರ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಶಾಶ್ವತ ಸ್ಥಾನವನ್ನು ಪಡೆದಿದ್ದಾರೆ.

ನಾನು ಒಂಬತ್ತನೆಯ ತರಗತಿಯಲ್ಲಿದ್ದಾಗ, ಬಂಟವಾಳದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೆಲಸಗಳನ್ನು ನಿರ್ವಹಿಸುತ್ತಿದ್ದ ನಮ್ಮ ಶಾಲೆಯ ಹಳೇವಿದ್ಯಾರ್ಥಿಗಳಾಗಿದ್ದ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ದಿ. ಬಿ. ಜನಾರ್ದನ ಶೆಟ್ಟಿ(ಜನ್ನ ಶೆಟ್ರು), ಮತ್ತು ನಾವೂರ ಧರ್ಮಪಾಲ ಶೆಟ್ಟಿಯವರು ಶ್ರೀ ಬಿ. ಪಾಂಡುರಂಗ ಬಾಳಿಗಾರ ನೆರವು ಪಡೆದು ಶಾಲೆಯ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಸಂಘವನ್ನು ಪ್ರಾರಂಭಿಸಿದರು. ನಾನು ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದೆ. ಈ ಮಹನೀಯರು ಪ್ರತಿ ತಿಂಗಳು ಶಾಲೆಗೆ ಬಂದು ಆಸಕ್ತಿಯಿದ್ದ ವಿದ್ಯಾರ್ಥಿಗಳ ಸಭೆ ಸೇರಿಸಿ ಸಾಹಿತ್ಯ, ಸಂಸ್ಕೃತಿ, ರಾಷ್ಟ್ರೀಯತೆಯ ಕುರಿತಾದ ವಿಚಾರಗಳನ್ನು, ಗಾಂಧಿ, ನೆಹರೂ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಮೊದಲಾದ ಮಹಾಪುರುಷರ ವಿಚಾರಧಾರೆಯನ್ನು ವಿವರಿಸುತ್ತಿದ್ದರು. ನಾವು ಸಾಮಾಜಿಕ ವಿಚಾರಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ನಮ್ಮ ನಡೆನುಡಿಗಳಲ್ಲಿ, ದಿನನಿತ್ಯದ ವ್ಯವಹಾರಗಳಲ್ಲಿ ಸ್ವಂತಕ್ಕೆ ಕಡಿಮೆ ಸಮಾಜಕ್ಕೆ ಹೆಚ್ಚು ಎಂಬ ತತ್ವವನ್ನು ಹೇಗೆ ಅಳವಡಿಸಿ ಕೊಳ್ಳಬೇಕು ಎಂಬ ಜೀವನದೃಷ್ಟಿಯ ವ್ಯಾಪ್ತಿಯನ್ನು ಒದಗಿಸಿಕೊಟ್ಟವರೇ ಈ ಮಹನೀಯರು. ಹೀಗಾಗಿ ನನಗೆ ಚಿಕ್ಕಂದಿನಲ್ಲಿಯೇ ರಾಷ್ಟ್ರೀಯ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ವಿಚಾರಗಳಲ್ಲಿ ಮೂಲಭೂತ ಶಿಕ್ಷಣ ದೊರೆಯುವಂತಾಯಿತು. ನನ್ನ ಹೆತ್ತವರು ಕೂಡ ಉನ್ನತ ವಿಚಾರಗಳನ್ನು ಮೈಗೂಡಿಸಿಕೊಂಡವರು. ಇನ್ನು, ನನ್ನ ಬದುಕು ಅರಳುವ ದಿನಗಳಲ್ಲಿ ಶ್ರೀ ಪಾಂಡುರಂಗ ಬಾಳಿಗ ಮೇಷ್ಟ್ರಂತಹ ಶಿಕ್ಷಕರು ನನಗೆ ದೊರೆತದ್ದು ನನ್ನ ಭಾಗ್ಯ. ಈ ಕಾರಣದಿಂದಾಗಿ ನಾನು ಸಮಾಜದಲ್ಲಿ ಒಂದು ಜಡವಸ್ತುವಾಗಿ ಉಳಿಯದೆ, ಹರಿಯುವ ನೀರಾಗಿ ಬೆಳೆದು ಬಂದೆ.

ಬಸ್ಸು, ಟ್ಯಾಕ್ಸಿಗಳು ಇಲ್ಲದ ಆ ಕಾಲದಲ್ಲಿ ಶಾಲಾ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗುವುದೆಂದರೆ ಅದು ಕಾಲ್ನಡಿಗೆಯಲ್ಲಿಯೇ. ಹೀಗೆ ನಮ್ಮನ್ನು ಮೂಡುಬಿದ್ರಿ, ಜಮಾಲಗಡ ಕೋಟೆ ಇತ್ಯಾದಿ ಸ್ಥಳಗಳಿಗೆ ಶ್ರೀ ಪಾಂಡುರಂಗ ಬಾಳಿಗಾ, ಶ್ರಿ ಬಿ. ರಘುನಾಥರಾವ್ (ಇವರ ಕಂಠ ತುಂಬಾ ಮಧುರವಾಗಿತ್ತು) ಇವರು ಕಾಲ್ನಡಿಗೆಯಲ್ಲಿ ಪ್ರವಾಸಕ್ಕೆ ಕರೆದೊಯ್ದಿದ್ದರು. ಪ್ರವಾಸದಲ್ಲಿ ವಿದ್ಯಾರ್ಥಿಗಳು ಸ್ವತಃ ಅಡುಗೆ ಮಾಡಬೇಕಾಗಿದ್ದರಿಂದ, ಅಕ್ಕಿ, ಬೆಲ್ಲ, ಅವಲಕ್ಕಿ ಮೊದಲಾದುವುಗಳನ್ನು ನಾವು ಹೊತ್ತುಕೊಂಡು ಹೋಗುವುದು ಅನಿವಾರ್ಯವಾಗಿರುತ್ತಿತ್ತು. ಇಂತಹ ಅನೇಕ ತೊಂದರೆಗಳಿದ್ದರೂ, ಪ್ರವಾಸಕ್ಕೆ ಹೋಗುವುದೆಂದರೆ ಆಗ ನಮಗೆ ಎಲ್ಲಿಲ್ಲದ ಉಮೇದು. ಗೋದೆ ಶಾಲೆಯ ವತಿಯಿಂದ ಪಿ. ಅನಂತರಾಮಯ್ಯ ಮೇಷ್ಟ್ರ ನೇತೃತ್ವದಲ್ಲಿ ನಾವು ಕಾರಿಂಜೆ, ನರಹರಿ ಪರ್ವತ ಇತ್ಯಾದಿ ಸುತ್ತಮುತ್ತಲಿದ್ದ ಬೆಟ್ಟಗಳನ್ನು ಹತ್ತಿ ಅಲ್ಲಿರುವ ದೇವಾಲಯಗಳನ್ನು ಸಂದರ್ಶಿಸಿದ್ದು ಇದೆ.

ಬೇಸಿಗೆಯ ದಿನಗಳಲ್ಲಿ ಅಂದರೆ ಶಾಲೆಗೆ ರಜೆ ಇದ್ದಾಗ ನಾನು, ಜನ್ನಪ್ಪ ಭಂಡಾರಿ, ಮತ್ತು ಮೋಹನದಾಸ ಬಾಳಿಗ ಸೇರಿ ಸಂಜೆ ಹೊತ್ತು ನೇತ್ರಾವತಿ ನದಿಯ ಆಚೆ ತೀರಕ್ಕೆ ಹೋಗುತ್ತಿದ್ದೆವು ಅಥವಾ ಊರ ಹತ್ತಿರದ ಗೇರುಮರಗಳ ಹಾಡಿ ಇರುವ ಭಂಡಾರಿ ಬೆಟ್ಟು, ಸೊಸೆಕಾನ, ಮೈರಣಪಾಜ, ಗಿರಿಗುಡ್ಡಕ್ಕೆ ತೆರಳಿ ಅಲ್ಲಿಯ ಮರಗಳಿಗೆ ಕಲ್ಲುಬೀರಿ ಗೇರುಹಣ್ಣು, ಮಾವಿನಕಾಯಿ ಕಿತ್ತು ತಿನ್ನುತ್ತಿದ್ದೆವು. ಅಲ್ಲಿಗೆ ಹೋಗುವುದಿದ್ದರೆ ಕೊಬ್ಬರಿಯೆಣ್ಣೆ, ಉಪ್ಪು, ಮೆಣಸು, ಹಿಂಗು ಮತ್ತು ಒಂದು ಚೂರಿ ಕೊಂಡುಹೋಗುತ್ತಿದ್ದೆವು. ಅಲ್ಲಿನ ಪಾದೆಕಲ್ಲಿನ ಮೇಲೆ ಕುಳಿತುಕೊಂಡು ಮಾವಿನಕಾಯಿ ತುಂಡು ಮಾಡಿ ಅದರ ಪಚ್ಚಡಿ ತಯಾರಿಸಿ ತಿನ್ನುವ ರುಚಿಯೇ ಬೇರೆ. ಊರಿನಲ್ಲಿ ಮಾವಿನ ಮರಗಳು ತುಂಬಾ ಇದ್ದವು. ಇನ್ನು ಹಣ ನೀಡಿದರೆ ಗೇರುಹಣ್ಣೂ ಸಿಗುತ್ತಿತ್ತು. ಆದರೆ ಸಂಜೆಹೊತ್ತು ಭಂಡಾರಿ ಬೆಟ್ಟಿಗೆ ಹೋಗಿ ಬೇರೆಯವರ ಮರಗಳಿಗೆ ಕಲ್ಲು ಬೀರುವಾಗ, ಅವರು ಬೈಯುತ್ತಾ ಓಡಿಸಿಕೊಂಡು ಬರುವಾಗ, ಅಲ್ಲಿಯೇ ಅಡಗಿ ಕುಳಿತು ಸ್ವತಃ ತಯಾರಿಸಿದ ಮಾವಿನಕಾಯಿ ಪಚ್ಚಡಿ ತಿನ್ನುವ ರುಚಿಯೆ ಬೇರೆ. ಅದನ್ನು ನೆನೆದರೆ ಈಗಲೂ ಬಾಯಲ್ಲಿ ನೀರೂರುತ್ತದೆ.

ಆ ದಿನಗಳಲ್ಲಿ ಬಿ. ದಾಸ ಕಾಮತ ಎಂಬ ಮೇಷ್ಟ್ರು ಒಬ್ಬರಿದ್ದರು. ಅವರಿಗೆ ಶಾಲಾ ಮಕ್ಕಳಿಂದ ನಾಟಕಗಳನ್ನು ಆಡಿಸುವುದು, ಸಂಗೀತ ಕಲಿಸುವುದು ಇತ್ಯಾದಿಗಳಲ್ಲಿ ತುಂಬಾ ಉತ್ಸಾಹ. ಶಾಲೆಯ ವಾರ್ಷಿಕೋತ್ಸವಕ್ಕೆ ಅವರೇ ನಾಟಕ ಬರೆದು, ಅದಕ್ಕೆ ಸಂಗೀತ ನೀಡಿ, ಅದರ ನಿರ್ದೇಶನವನ್ನೂ ಮಾಡಿ ಬಹಳ ಕಷ್ಟಪಟ್ಟು ನಮ್ಮಿಂದ ಆ ನಾಟಕವನ್ನು ಆಡಿಸುತ್ತಿದ್ದರು. ಈ ಕಾರಣದಿಂದಾಗಿ ನನಗೆ ಸಂಗೀತ ಮತ್ತು ನಾಟಕಗಳಲ್ಲಿಯೂ ಆಸಕ್ತಿ ಬೆಳೆದು ಬಂತು. ಆಗ ಶ್ರೀ ಅನಂತ ಮಾಸ್ತರ, ಲಕ್ಷ್ಮಣ ಆಚಾರಿ, ರಮಾನಂದ ಬಾಳಿಗ ಮೊದಲಾದವರು ರಂಗಸಜ್ಜಿಕೆ ಮತ್ತು ಮೇಕಪ್ ಮಾಡಲು ಬರುತ್ತಿದ್ದರು.

ಶಾಲೆಯ ದಿನಗಳು ಮುಗಿದ ಬಳಿಕವೂ ನಾನು ಮತ್ತು ಸರ್ವೋತ್ತಮ ಭಂಡಾರಿ ಸೇರಿ ಹಳೆವಿದ್ಯಾರ್ಥಿ ಸಂಘದ

ಪರವಾಗಿ ಶಾಲೆಯ ವಾರ್ಷಿಕೋತ್ಸವ ದಿನಗಳಲ್ಲಿ ಕನ್ನಡ ಮತ್ತು ಕೊಂಕಣಿ ನಾಟಕಗಳನ್ನು ಆಡಿದ್ದುಂಟು. 'ನಮ್ಮ ಅಭಿಪ್ರಾಯದಲ್ಲಿ ತಪ್ಪಿದರೆ' ಎಂಬ ನಾಟಕ ಬಹು ಜನಪ್ರಿಯವಾಗಿತ್ತು. ಅದರಲ್ಲಿ ನಾನು ಹೀರೋ, ನನ್ನ ಪತ್ನಿಯಾಗಿ ಸರ್ವೋತ್ತಮ ನಟಿಸಿದ್ದ. ಆಮೇಲೆಯೂ ನಾವು ಬಹಳಷ್ಟು ಕನ್ನಡ, ಕೊಂಕಣಿ ನಾಟಕಗಳನ್ನು ಆಡಿದ್ದೆವು.

ಆಗ ಬಂಟವಾಳದಲ್ಲಿ ನಾಟಕಾ ನಾಣ್ಣು (ಎನ್.ಆರ್. ಬಂಟ್ವಾಳಕಾರ್) ಎಂಬ ಒಬ್ಬ ಮಹಾನ್ ಕಲಾಕಾರ, ರಂಗಕರ್ಮಿ ಮತ್ತು ಸಂಗೀತ ತಜ್ಞರಿದ್ದರು. ಅವರು ಕೋಟ ಶಿವರಾಮ ಕಾರಂತರೊಂದಿಗೆ ಹಳೇಮೈಸೂರು ಸಂಸ್ಥಾನದಲ್ಲಿ ನಾಟಕ ಕಂಪನಿ ನಡೆಸಿಕೊಂಡಿದ್ದರಂತೆ. ಸಣ್ಣವಯಸ್ಸಿನಲ್ಲಿಯೇ ಮುಂಬೈಗೆ ಹೋಗಿ ಅಲ್ಲಿಯ ನಾಟಕಕ್ಷೇತ್ರದಲ್ಲಿ ನಡೆದ ಹೊಸ ಆವಿಷ್ಕಾರಗಳನ್ನು, ಅಲ್ಲಿಯ ನಾಟಕಕರ್ಮಿಗಳ ಉನ್ನತ ಪ್ರತಿಭೆ, ನಾಟ್ಯಸಂಗೀತ ಇತ್ಯಾದಿಗಳನ್ನು ತಿಳಿದುಕೊಂಡು ಊರಿಗೆ ಬಂದವರು. ಮರಾಠಿಯ ಪ್ರಸಿದ್ಧ ನಾಟಕ "ಏಕಚ ಪ್ಯಾಲಾ"ವನ್ನು ಕನ್ನಡ ಭಾಷೆಗೆ ಅನುವಾದಿಸಿ ರಂಗಪ್ರದರ್ಶನ ನೀಡಿದ್ದರು. ಈ ನಾಟಕದ ಮುಖ್ಯ ಪಾತ್ರಧಾರಿ ವಕೀಲ ಸುಧಾಕರ. ಅವನು ಕುಡಿತ ಪ್ರಾರಂಭಿಸಿದ ನಂತರ ತನ್ನ ಜೀವನದಲ್ಲಿ ಅನುಭವಿಸಿದ ಕಷ್ಟನಷ್ಟಗಳು, ಅವನ ಮಾನನಷ್ಟ, ಅವನು ತನ್ನ ಪತ್ನಿಯ ಮಂಗಳಸೂತ್ರವನ್ನು ಮಾರಿ, ಕುಡಿದು ಜೀವನ ಹಾಳು ಮಾಡಿಕೊಳ್ಳುವ ದೃಶ್ಯ ಈಗಲೂ ನನ್ನ ಕಣ್ಣ ಮುಂದೆ ಇದೆ.

ನಾಟಕಾ ನಾಣ್ಣು ಒಬ್ಬ ಉತ್ತಮ ಗಾಯಕರು. ಅವರಿಗೆ ಹಿಂದುಸ್ತಾನೀ, ಕರ್ನಾಟಕಿ ಶಾಸ್ತ್ರೀಯ ಸಂಗೀತ ಮತ್ತು ಲೋಕಸಂಗೀತದ ಉತ್ತಮ ಜ್ಞಾನವಿತ್ತು. ತಬಲಾ, ಹಾರ್ಮೋನಿಯಂಗಳಲ್ಲಿ ಪರಿಣತಿ ಇದ್ದ ಕಲಾವಿದ. ಮಹಾತ್ಮಾ ಗಾಂಧಿಯವರ ಸಮ್ಮುಖದಲ್ಲಿ ವಂದೇ ಮಾತರಂ ಹಾಡುವ ಸದವಕಾಶ ಅವರಿಗೆ ದೊರೆತಿತ್ತು. ಆದರೆ ಅವರ ಕಲಾಜೀವನ ಉಕ್ಕಿ ಹರಿದ ಹಾಲಿನಂತಾಗದಿರಲು ಅವರ ಅಶಿಸ್ತಿನ ಜೀವನವೇ ಕಾರಣವಾಯಿತು. ಅವರು ಸಂಬಂಧದಲ್ಲಿ ನನಗೆ ಮಾವನಾಗಬೇಕು.

ನಾಟಕಾ ನಾಣ್ಣುಮಾಮರ ತಮ್ಮ ಅನಂತ ಕಾಮತ್ (ಅನಂತ ಮಾಸ್ತರ). ಇವರು ಹಾಸ್ಯ ಕಲಾವಿದರು. ನಾಣ್ಣುಮಾಮರ ಹಾಗೆ ತಬಲಾ, ಹಾರ್ಮೋನಿಯಂ ತಜ್ಞರು. ಇವರು ಬರೆದ ಕೊಂಕಣಿ ನಾಟಕ 'ನಾಂಕುಟಾಲೆ ಲಗ್ನ' ಆ ಕಾಲದಲ್ಲಿಯೇ ಕರ್ನಾಟಕದಲ್ಲಿ ೨೦-೩೦ ಪ್ರದರ್ಶನಗಳನ್ನು ಕಂಡಿತ್ತು. ಅವರ ಮತ್ತು ದಾಸ ಮಾಸ್ತರರ ನಿರ್ದೇಶನದಲ್ಲಿ ನಾನು ಕೆಲವು ಕನ್ನಡ ಮತ್ತು ಕೊಂಕಣಿ ನಾಟಕಗಳಲ್ಲಿ ಪಾತ್ರ ನಿರ್ವಹಿಸಿ ಅವರಿಂದ ಶಭಾಸಗಿರಿ ಪಡೆದಿದ್ದೇನೆ. ನಾನೂ ಒಂದೆರಡು ನಾಟಕಗಳನ್ನು ಬರೆದು, ಪ್ರದರ್ಶನ ನೀಡಿದ್ದು ಇದೆ. ಆಗ ನನ್ನ ಸಂಗಾತಿಗಳಾಗಿ ಇದ್ದವರು ಸರ್ವೋತ್ತಮ ಭಂಡಾರಿ, ಪುಂಡಳೀಕ ಕಾಮತಿ ಮತ್ತು ವಸಂತ ಮಾಧವ ಪ್ರಭು.

ಶಾಲಾ ದಿನಗಳು -೨

ನಾನು ೯-೧೦ನೇ ತರಗತಿಯಲ್ಲಿ ಓದುತ್ತಿದ್ದಾಗಲೇ(ಆಗ ಮೆಟ್ರಿಕ್ ಎಂದರೆ ಹನ್ನೊಂದನೆಯ ತರಗತಿ) ಸಾರ್ವಜನಿಕ ಬದುಕಿನಲ್ಲಿ ಪ್ರವೇಶವನ್ನು ಪಡೆದೆ. ನನ್ನ ತಂದೆಯವರಿಗೆ ಊರು, ಹೊರಊರುಗಳ ಸಾಮಾಜಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇದ್ದಂತಹ ಸ್ಥಾನಮಾನ, ಕೀರ್ತಿ, ಅಭಿಮಾನಗಳು ನನ್ನ ವ್ಯಕ್ತಿತ್ವದ ಮೇಲೆಯೂ ಪ್ರಭಾವ ಬೀರಲಾರಂಭಿಸಿದವು. ಅವರಿಗೆ ಸಮಾಜದಲ್ಲಿ ದೊರೆತ ಗೌರವದ ಸ್ಥಾನಮಾನಗಳಿಂದಾಗಿ, ನಾನು ಅಪೇಕ್ಷೆ ಪಡೆಯದೇ ನನ್ನ ಶಾಲಾ ಜೀವನದಲ್ಲಿ ನನಗೂ ಉನ್ನತ ಸ್ಥಾನಮಾನ ದೊರೆತವು. ಶಾಲೆಯ ಮಾಸ್ತರರು, ನನ್ನ ಸಹಪಾಠಿಗಳು ನನಗೆ ಗೌರವ ನೀಡುತ್ತಿದ್ದರು. ಶಾಲೆಯ ವಿದ್ಯಾರ್ಥಿ ಸಮೂಹದಲ್ಲಿ ಮತ್ತು ಬೇರೆ ವಿಚಾರಗಳಲ್ಲಿಯೂ ನನಗೆ ಮಹತ್ವದ ಸ್ಥಾನವಿರುತ್ತಿತ್ತು. ನನ್ನ ಮಾಸ್ತರರು ನನಗೆ ಪ್ರೋತ್ಸಾಹ ನೀಡುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ ದಿನ ನಾನು ಎಂಟನೆಯ ತರಗತಿಯಲ್ಲಿದ್ದೆ. ಆ ಸಂಭ್ರಮದ ದಿನ ನಡೆದ ಸಭಾ ಕಾರ್ಯಕ್ರಮದಲ್ಲಿ ನಾನು ಸಕ್ರಿಯವಾಗಿ ಪಾಲುಗೊಂಡಿದ್ದೆ. ಆಗಿನಿಂದಲೇ ನಾನು ಒಬ್ಬ ನಾಯಕನಾಗಿ ಗುರುತಿಸಿಕೊಂಡಿದ್ದೆ. ನಮಗೆ ಸ್ವಾತಂತ್ರ್ಯ ದೊರೆತ ಬಳಿಕ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಚಾರದಲ್ಲಿ ತರಬೇತಿ ನೀಡಲು ಮತ್ತು ಶೈಕ್ಷಣಿಕ ಹಂತದಲ್ಲಿಯೇ ಅವರಲ್ಲಿ ದೇಶಭಕ್ತಿ, ಶಿಸ್ತು, ಉನ್ನತ ವಿಚಾರ, ಗಾಂಧೀ ವಿಚಾರಧಾರೆ, ತ್ಯಾಗ ಮನೋಭಾವ ವ್ಯಕ್ತಗೊಳ್ಳುವ ಸಲುವಾಗಿ ಶಾಲೆಯಲ್ಲಿ ರಾಷ್ಟ್ರೀಯ ಸೇವಾದಳ ಸ್ಥಾಪನೆಯಾಗಿತ್ತು. ಅದರಲ್ಲಿ ನಾನು ಸದಸ್ಯನಾಗಿ ಭಾಗವಹಿಸುತ್ತಿದ್ದೆ.

ಇದರಿಂದ ನನಗೆ ರಾಷ್ಟ್ರೀಯ ವಿಚಾರಗಳ ಕುರಿತು ತಿಳಿದುಕೊಳ್ಳುವುದು, ಸ್ವಾತಂತ್ರವೀರರ ಭಾಷಣಗಳನ್ನು ಕೇಳುವುದು ಇಷ್ಟವಾಗಲಾರಂಭಿಸಿತು. ಆ ಕಾಲದಲ್ಲಿ ಸುಸಂಸ್ಕೃತ ಉನ್ನತ ಶೈಲಿಯಲ್ಲಿ ಭಾಷಣ ನೀಡುತ್ತಿದ್ದವರೆಂದರೆ ಎನ್.ಎಸ್. ಕಿಲ್ಲೆ,

ಯು. ನರಸಿಂಹ ರಾವ್, ಕೆ.ಕೆ.ಶೆಟ್ಟಿ ಮೊದಲಾದವರು. ಇವರು ಭಾಗವಹಿಸುತ್ತಿದ್ದ ಕಾರ್ಯಕ್ರಮಗಳಿಗೆ ನಾನು ತಪ್ಪದೆ ಹೋಗುತ್ತಿದ್ದೆ. ಎನ್.ಎಸ್. ಕಿಲ್ಲೆ ಗಾಂಧೀವಾದಿ, ಖಾದಿಧಾರಿ, ಸ್ವಾತಂತ್ರವೀರರು; ಅಪ್ರತಿಮ ವಾಗ್ಮಿ. (ಯಕ್ಷಗಾನ, ತಾಳ ಮದ್ದಳೆಯಲ್ಲಿ ಅವರು 'ಕರ್ಣ' ಪಾತ್ರಧಾರಿಯಾಗಿ ಪ್ರಸಿದ್ಧರಾಗಿದ್ದರು.) ಅವರ ಕರ್ಣನ ಮಾತುಗಳು ಪ್ರೇಕ್ಷಕರ ಕಣ್ಣಿನಲ್ಲಿ ನೀರು ಉಕ್ಕಿಸುತ್ತಿದ್ದವು. ಅವರಿಗೆ ಉಳ್ಳಾಲ ಶ್ರೀನಿವಾಸ ಮಲ್ಯರು ಅಸೆಂಬ್ಲಿ ಟಿಕೇಟ್ ನೀಡುವೆನೆಂದಾಗ ನಿರಾಕರಿಸಿದ ನಿಸ್ವಾರ್ಥಿ. ತನ್ನ ಕೊನೆಯ ದಿನಗಳಲ್ಲಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರ ನಾಲಗೆಯು ಮೇಲೆ ಕೊನೆ ಗಳಿಗೆಯಲ್ಲಿಯೂ 'ಕರ್ಣ' 'ಕರ್ಣ' ಎಂದೇ ಬರುತ್ತಿತ್ತಂತೆ. ಅವರ ಕನ್ನಡ, ತುಳು ಭಾಷಣಗಳು ಅತೀ ರಂಜಕ, ರೋಚಕ ಮತ್ತು ಭಾಷಾಪ್ರಭುತ್ವದಿಂದ ತುಂಬಿರುವಂತಹವು.

ಇದೇ ರೀತಿ ಮತ್ತೊಬ್ಬ ರಾಜಕೀಯ ಪುಡಾರಿಯಾಗಿ ದ್ದವರು ಎಸ್.ಎನ್. ಹೊಳ್ಳ. ಅವರು ಕಮ್ಯುನಿಸ್ಟ್ ಪಕ್ಷದವರು. ಶ್ರೀ ಕಿಲ್ಲೆಯವರ ಹಾಗೆ ಅವರು ಕೂಡ ಸಮರ್ಥ ಭಾಷಣಕಾರರು; ಸಭಿಕರನ್ನು ನಗಿಸುವುದರಲ್ಲಿ ಪ್ರವೀಣರು. ಕಾರ್ಮಿಕರಿಗೆ ಒಪ್ಪುವಂತಹ ಶೈಲಿಯಲ್ಲಿ ಮಾತನಾಡುತ್ತಿದ್ದ ಅವರಿಗೆ ಕನ್ನಡ, ಕೊಂಕಣಿ, ತುಳು ಭಾಷೆ ತಿಳಿದಿತ್ತು. ಅವರು ಕಾಂಗ್ರೆಸ್ ಜನರಿಂದ ಹಣ ಪಡೆದು ತಮ್ಮ ಭಾಷಣದಲ್ಲಿ ಅವರನ್ನೇ ಟೀಕೆ ಮಾಡುವುದು, ಹಾಸ್ಯ ಮಾಡುವುದು ಇತ್ತು. ಹಾಗಿದ್ದರೂ ಪ್ರತಿಯೊಬ್ಬರೂ ಅವರ ಭಾಷಣ ಕಲೆಗಾಗಿ ಹಣದ ನೆರವು ನೀಡುತ್ತಿದ್ದರು.

ನಮ್ಮ ಶಾಲೆಯಲ್ಲಿ ವೀರಪ್ಪ ಸಾಲಿಯಾನ ಎಂಬ ಒಬ್ಬ ವಿದ್ಯಾರ್ಥಿ ಇದ್ದರು. ಅವರು ಕಮ್ಯುನಿಸ್ಟ್ ತತ್ವಗಳಿಗೆ ಆಕರ್ಷಿತರಾಗಿ ಶಾಲೆಯಲ್ಲಿ ಕಮ್ಯುನಿಸ್ಟ್ ತತ್ವವನ್ನು ಪ್ರಚಾರ ಮಾಡುವ ಕಾರ್ಯವನ್ನು ಪ್ರಾರಂಭಿಸಿದರು. ನಾನು ಅವರಿಂದ ರಷ್ಯಾದಿಂದ ಬರುತ್ತಿದ್ದ ಗ್ರಂಥಗಳನ್ನು ಖರೀದಿಸುತ್ತಿದ್ದೆ. ಆ ಹಣ ಕಮ್ಯುನಿಸ್ಟ್ ಪಕ್ಷಕ್ಕೆ ಸಂದಾಯವಾಗುತ್ತಿದ್ದ ವಿಚಾರ ನಮಗೆ ಗೊತ್ತಿರಲಿಲ್ಲ. ಅದು ತೆಲಂಗಾಣಾ ಕ್ರಾಂತಿಯ ದಿನಗಳು. ಕಮ್ಯುನಿಸ್ಟ್ ಪಕ್ಷದ ಮೇಲೆ ನಿಷೇಧವಿತ್ತು. ಹೀಗಾಗಿ ವೀರಪ್ಪ ಸಾಲಿಯಾನರನ್ನು ಶಾಲೆಯಿಂದ ಹೊರಹಾಕಲಾಯಿತು. ಅವರು ತರಗತಿಯಲ್ಲಿ ಹಾಜರಾಗಿದ್ದು ಪ್ರತಿಭಟಿಸಿದರು. ಪೊಲೀಸರು ಶಾಲೆಗೆ ಬಂದು ಅವರನ್ನು ಬಂಧಿಸಿ ಪೊಲೀಸ್ ವ್ಯಾನಿನಲ್ಲಿ ಕರೆದುಕೊಂಡು ಹೋದರು. ಜೈಲುವಾಸ ಮುಗಿಸಿದ ನಂತರ ವೀರಪ್ಪ ಸಾಲಿಯಾನ ಕಾರ್ಮಿಕ ಚಳವಳಿಯ ಒಬ್ಬ ದೊಡ್ಡ ಮುಖಂಡರಾದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳೆಯುವುದಕ್ಕೆ ಎಸ್.ಎನ್.ಹೊಳ್ಳ, ಕೃಷ್ಣ ಶೆಟ್ಟಿ, ಶಾಂತಾರಾಮ ಪೈ, ಮತ್ತು ವೀರಪ್ಪ ಸಾಲಿಯಾನರ ಕೊಡುಗೆ ಬಹಳ.

ಆ ದಿನಗಳಲ್ಲಿ ನಾನು ಯುವ ಕಾಂಗ್ರೆಸ್ ಸಂಘಟಕನಾಗಿದ್ದೆ. ಸಾರ್ವಜನಿಕ ಸಭೆಗಳಲ್ಲಿ ವೀರಪ್ಪ ಸಾಲಿಯಾನ್ ನಮ್ಮ ಕಾಂಗ್ರೆಸ್ ಪಕ್ಷದ ನಾಯಕರನ್ನು, ನನ್ನನ್ನು ಬಹಳ ಟೀಕೆ ಮಾಡುವುದು, ತೆಗಳುವುದು ಮಾಡುತ್ತಿದ್ದರು. ಆದರೆ ಹಣದ ಸಹಾಯ ಬೇಕಿದ್ದರೆ, ಉದ್ದರಿ ಚಹ ಕಾಫಿ ಕುಡಿಸುವುದಿದ್ದರೆ ಅವರ ಪಕ್ಷದ ನಾಯಕರನ್ನು ಕರೆದುಕೊಂಡು ನನ್ನ ಬಳಿಯೇ ಬರುತ್ತಿದ್ದರು. ಬಂಟವಾಳದಲ್ಲಿ ಕಾಂಗ್ರೆಸ್ ಚಳವಳಿಯು ಹೇಗೆ ವ್ಯಾಪಕವಾಗಿ ಬೆಳೆಯಿತೋ, ಅದೇ ರೀತಿ ಕಮ್ಯುನಿಸ್ಟ್ ಚಳವಳಿ ಕೂಡ ಮಂಗಳೂರಿನ ಬಳಿಕ ಬಂಟವಾಳದಲ್ಲಿಯೇ ಬೆಳೆದು ಬಂತು. ವೀರಪ್ಪ ಸಾಲಿಯಾನರ ಸಂಪರ್ಕದಿಂದ ನನಗೆ ರೈತರು ಮತ್ತು ಕಾರ್ಮಿಕರ ದೈನಂದಿನ ಕಷ್ಟ ಕಾರ್ಪಣ್ಯಗಳು ತಿಳಿದುಬಂದವು. ನನ್ನ ಚಿಂತನೆಯ ವ್ಯಾಪ್ತಿ ವಿಸ್ತಾರಗೊಂಡಿತು.

ಕಾಂಗ್ರೆಸ್ ಪಕ್ಷದ ಜನಾರ್ದನ ಶೆಟ್ಟಿಯವರು (ಜನ್ನ ಶೆಟ್ಟಿ) ಕಾಂಗ್ರೆಸ್ ಪಕ್ಷದ ಪ್ರಚಾರ ನಡೆಸುತ್ತಿದ್ದರೂ, ಅವರಿಗೆ ಸಮಾಜವಾದಿ ಪಕ್ಷದ ತತ್ವದ ಕಡೆಗೆ ಆಕರ್ಷಣೆ ಇತ್ತು. ಅವರು ಆ ಪಕ್ಷದ ಪುಸ್ತಕಗಳನ್ನು ತರಿಸುತ್ತಿದ್ದರು. ಅವರಿಂದಾಗಿ ನನಗೆ ಜಯಪ್ರಕಾಶ ನಾರಾಯಣ್, ರಾಮಮನೋಹರ ಲೋಹಿಯಾ, ಆಚಾರ್ಯ ನರೇಂದ್ರದೇವ, ಅಶೋಕ ಮೆಹತಾ ಮೊದಲಾದವರ ವ್ಯಕ್ತಿತ್ವ, ಅವರ ದೇಶಭಕ್ತಿ, ಅವರ ಚಿಂತನೆಗಳು, ಬಡರೈತರ ಮತ್ತು ಕಾರ್ಮಿಕ ಕ್ಷೇತ್ರದಲ್ಲಿ ಅವರು ಮಾಡಿದ ತ್ಯಾಗ ಇತ್ಯಾದಿ ವಿಚಾರಗಳ ಮಾಹಿತಿ ದೊರೆತವು. ಒಮ್ಮೆ ಜನ್ನ ಶೆಟ್ಟರು ಮಂಗಳೂರಿಗೆ ಭೇಟಿ ನೀಡಿದ್ದ ಅಶೋಕ ಮೆಹತಾರನ್ನು ಬಂಟವಾಳಕ್ಕೆ ಕರೆಯಿಸಿಕೊಂಡು, ಅವರೊಂದಿಗೆ ಮಾತುಕತೆಯಾಡಲು, ಸಂದರ್ಶನ ನಡೆಸಲು ನಮ್ಮಲ್ಲಿ ಕೆಲವರಿಗೆ ಅವಕಾಶ ನೀಡಿದ್ದರು.

ಆ ದಿನಗಳಲ್ಲಿ ಪಂಡಿತ ಜವಾಹರಲಾಲ್ ನೆಹರೂ ಅವರ ಬಳಿಕ ಜಯಪ್ರಕಾಶ ನಾರಾಯಣರು ದೇಶದ ಪ್ರಧಾನಮಂತ್ರಿಯಾಗುವರೆಂದು ಜನರು ನಂಬಿಕೊಂಡಿದ್ದರು. ಆದರೆ ಹಾಗೆ ನಡೆಯಲಿಲ್ಲ. ಮುಂದೆ ಜೆ.ಪಿ.ಯವರು ಗಾಂಧೀತತ್ವವನ್ನು ಅನುಸರಿಸಿ ಭೂದಾನ ಚಳವಳಿಯಲ್ಲಿ ವಿನೋಬಾ ಭಾವೆಯವರಿಗೆ ಜೊತೆ ನೀಡಿದರು. ಅಶೋಕ

ಮೆಹತಾ ಕಾಂಗ್ರೆಸ್ ಪಕ್ಷ ಸೇರಿ ನೆಹರೂ ಸರಕಾರದಲ್ಲಿ ಯೋಜನಾ ಆಯೋಗದ ಚೇರಮನ್ ಆದರು. ಭಾರತದ ರಾಜಕೀಯದಲ್ಲಿ ನಡೆದ ಕೆಲವು ವಿಪರ್ಯಾಸಗಳು ನಾನು ಸಣ್ಣವನಿರುವಾಗಲೇ ನನಗೆ ದುಃಖವನ್ನು ಉಂಟು ಮಾಡಿದ್ದವು.

ಹೀಗೆ ನನ್ನ ತಾರುಣ್ಯದ ವಯಸ್ಸಿನಲ್ಲಿ ರಾಜಕೀಯ ಪ್ರವೇಶಕ್ಕೆ ತಕ್ಕಂತಹ ಮನೋಭೂಮಿಕೆ, ವಿಶ್ಲೇಷಣಾ ಶಕ್ತಿ, ಹಾಗೂ ಸಂವೇದನಾ ಶಕ್ತಿ ನನ್ನಲ್ಲಿ ಕೂಡಿಬಂತು. ಸಾಮಾನ್ಯ ಜನರೊಂದಿಗೆ ಸಾಮಾನ್ಯನಾಗಿ ಕಾಲ ಕಳೆಯುವ, ಅವರ ಬದುಕಿನ ಕಷ್ಟನಷ್ಟದ ಸಮಯದಲ್ಲಿ ಅವರಿಗೆ ಭಾವನಾತ್ಮಕ ಮತ್ತು ಕ್ರಿಯಾತ್ಮಕ ಸ್ಪಂದನವನ್ನು ನೀಡುವ ಮನೋಭಾವ ನನ್ನಲ್ಲಿ ಬೆಳೆದು ಬಂತು.

●●

೪. ಶ್ರೀ ಯಶವಂತ ವ್ಯಾಯಾಮ ಶಾಲೆ - ೧

ನನ್ನ ಜೀವನ ಮತ್ತು ಮನೋವೃತ್ತಿಯ ಮೇಲೆ ಬಂಟವಾಳದ ನೇತ್ರಾವತಿ ನದಿ, ಶ್ರೀ ತಿರುಮಲ ವೆಂಕಟರಮಣ ದೇವಾಲಯ, ನಾನು ಶಿಕ್ಷಣ ಪಡೆದ ಎಸ್.ವಿ.ಎಸ್. ವಿದ್ಯಾ ಸಂಸ್ಥೆ, ನನ್ನ ಊರಿನ ಪರಿಸರ ಇವು ಪರಿಣಾಮ ಬೀರಿದ ರೀತಿಯಲ್ಲಿಯೇ, ನನ್ನ ಬದುಕನ್ನು ರೂಪಿಸಿದ್ದು ಶ್ರೀ ಯಶವಂತ ವ್ಯಾಯಾಮ ಶಾಲೆ (ಊರಿನಲ್ಲಿ ಅದು 'ಗೋದೆಶಾಲೆ ಎಂದೇ ಕರೆಯಿಸಿಕೊಳ್ಳುತ್ತಿತ್ತು) ಎಂದು ಹೇಳಬಹುದು. ೧೯೪೦ನೇ ಇಸವಿಯಲ್ಲಿ ಬಂಟವಾಳದ ಯುವಜನರಿಗೆ ಮತ್ತು ಮಕ್ಕಳಿಗಾಗಿ ಪ್ರಾರಂಭವಾದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಭಾರತೀಯ ಪದ್ಧತಿಯ ದೈಹಿಕ ಶಿಕ್ಷಣವನ್ನು-ಸರ್ವಾಂಗ ಸುಂದರ ವ್ಯಾಯಾಮ, ದಂಡ, ಬೈಠಕ್, ಯೋಗವಿದ್ಯೆ, ಲಾಠಿ ಮತ್ತು ಖಡ್ಗವರಸೆ ಇತ್ಯಾದಿ ಶೂರ ಕ್ರೀಡೆಗಳನ್ನು(ಮಾರ್ಶಲ್ ಆರ್ಟ್ಸ್), ಕರ್ನಾಟಕ ಅಥವಾ ದಕ್ಷಿಣ ಭಾರತದಲ್ಲಿ ವಿರಳವಾಗಿರುವ, ಆದರೆ ಮುಖ್ಯವಾಗಿ ರಾಜಸ್ಥಾನ, ಮಹಾರಾಷ್ಟ್ರಗಳಲ್ಲಿ ಪ್ರಚಲಿತವಾಗಿದ್ದ 'ಮಲ್ಲಕಂಭ'ವನ್ನು ಕಲಿಸುತ್ತಿದ್ದರು. ನಾನು ನನ್ನ ಹತ್ತನೆಯ ವಯಸ್ಸಿನಿಂದ ಪ್ರಾರಂಭಿಸಿ, ಸುಮಾರು ಇಪ್ಪತ್ತೈದು ವರ್ಷ ಪ್ರಾಯದವರೆಗೆ ತಪ್ಪದೆ ವ್ಯಾಯಾಮ ಶಾಲೆಗೆ ಹೋಗಿದ್ದೇನೆ. ಮೊದಲು ಬರೀ ದಂಡ, ಬೈಠಕ್, ಲೇಜಿಮ್, ಡಂಬೆಲ್ ಇತ್ಯಾದಿಗಳನ್ನು ಕಲಿತೆ. ಆನಂತರ ಲಾಠಿ, ಜಾಂಬಿಯಾ, ಖಡ್ಗ-ಭರ್ಚಿಯ ಫೈಟಿಂಗ್, ಬೆಂಕಿಯ ಆಟ ಮತ್ತು ಮಲ್ಲಕಂಭ ಇವುಗಳ ಅಭ್ಯಾಸ ಮಾಡಿದ್ದೇನೆ. ಹೀಗಾಗಿ ಮುಂದಿನ ದಿನಗಳಲ್ಲಿ ಮತ್ತು ಇಂದು ಕೂಡ ನನ್ನ ದೈಹಿಕ ಆರೋಗ್ಯ ಸದೃಢವಾಗಿರುವುದಕ್ಕೆ ಮತ್ತು ನಾನು ನಿರ್ಭಿಡೆಯಿಂದ ಜೀವನವನ್ನು ಕಳೆಯುವುದಕ್ಕೆ ಇದುವೇ ನನಗೆ ಶಕ್ತಿಯಾಗಿ ಪರಿಣಮಿಸಿದೆ. ಅನೇಕ ಊರುಗಳಲ್ಲಿ ಬ್ಯಾಂಕ್ ಕೆಲಸ ಮಾಡಿಕೊಂಡಿರುವಾಗ ಯಾವುದೇ ವಿಧದ ಅಡ್ಡಿ ಆತಂಕಗಳಿಲ್ಲದೆ, ಅನಂತರ ಪ್ರಥಮ ವಿಶ್ವಕೊಂಕಣಿ ಸಮ್ಮೇಳನ ಮತ್ತು ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನವನ್ನು ಆಯೋಜಿಸಿದ ದಿನಗಳಲ್ಲಿ ದಿಲ್ಲಿಯಿಂದ ಕೊಚ್ಚಿಯವರೆಗೆ ಅನೇಕ ದಿನಗಳ ತಿರುಗಾಟವಿದ್ದಾಗ, ಆಮೇಲೆ ಅಮೇರಿಕಾ, ಇಂಗ್ಲೆಂಡ್, ದುಬಾಯಿ ಮುಂತಾದೆಡೆ ಪ್ರವಾಸದಲ್ಲಿದ್ದಾಗಲೂ ನನಗೆ ಆರೋಗ್ಯದ ವಿಚಾರದಲ್ಲಿ ಯಾವುದೇ ಸಮಸ್ಯೆ ಕಾಣಿಸಿಕೊಂಡದ್ದಿಲ್ಲ.

ನನಗೆ ಗೋದೆ ಶಾಲೆಯಲ್ಲಿ ಕೇವಲ ಶಾರೀರಿಕ ಶಿಕ್ಷಣ ದೊರೆತದ್ದು ಮಾತ್ರವಲ್ಲ, ನನ್ನಲ್ಲಿ ಆತ್ಮವಿಶ್ವಾಸ, ಆತ್ಮಸ್ಥೈರ್ಯ ತುಂಬಿಕೊಂಡು, ಸಹವಿದ್ಯಾರ್ಥಿಗಳ ಸಹವಾಸದಲ್ಲಿ ಸಾಂಘಿಕ ಮತ್ತು ಸಹಜೀವನ ನಡೆಸುವ ಪರಿಪಾಠ ಬೆಳೆಯುವುದಕ್ಕೂ ಅದು ಸಹಕಾರಿಯಾಗಿದೆ. ಇದರಿಂದ ಹತ್ತು ಜನರ ಜೊತೆಯಲ್ಲಿ ಕೆಲಸ ಮಾಡುವಾಗ ಇರಬೇಕಾದ ಸಂಯಮ, ಸ್ವಾರ್ಥರಹಿತ ಜೀವನ, ನೈತಿಕ ಬಲ ಮತ್ತು ಅನ್ಯಾಯ ಅಥವಾ ಅನೀತಿಯ ವಿರುದ್ಧ ಧ್ವನಿ ಎತ್ತಲು ಅಗತ್ಯವಿರುವ ಮನೋಬಲವನ್ನು ಬೆಳೆಸಿಕೊಳ್ಳುವ ತರಬೇತಿಯೂ ದೊರೆತಿದೆ. ವ್ಯಾಯಾಮ ಶಾಲೆಯಲ್ಲಿ ದೇಶಭಕ್ತಿಯ, ದೇಶದ ಸ್ವಾತಂತ್ರದ ಕುರಿತಾದ ಬೌದ್ಧಿಕ ಶಿಕ್ಷಣವೂ ಲಭ್ಯವಿತ್ತು. ನಮಗೆ ಮುಂಜಾನೆ ಆರು ಗಂಟೆಗೆ ಪ್ರಭಾತಫೇರಿ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಇರುತ್ತಿದ್ದುದರಿಂದ, ನಾವು ಸಾಲಾಗಿ ಹೋಗುವಾಗ ಹೇಳುತ್ತಿದ್ದ ದೇಶಭಕ್ತಿಯ ಹಾಡುಗಳು, ಮಹಾತ್ಮರ ಮತ್ತು ಇತರ ರಾಷ್ಟ್ರ ನಾಯಕರ ಕುರಿತಾದ ಘೋಷಣೆಗಳು ಆಗ ನಮ್ಮ ಮನಸ್ಸಿನಲ್ಲಿ, ಹೃದಯದಲ್ಲಿ ಮೂಡಿಸುತ್ತಿದ್ದ ಸ್ಪಂದನವನ್ನು ನಾನು ಮರೆತಿಲ್ಲ. ಅದು ಈಗಲೂ ನನಗೆ ಸ್ಫೂರ್ತಿದಾಯಕವಾಗಿದೆ. ಇಂತಹ ವಿಚಾರಗಳು, ಜೀವನ ಶೈಲಿ, ನಮಗೆ ಶಾಲೆಯಲ್ಲಿ ಸಿಗುವುದಿಲ್ಲ. ಅದು ನನಗೆ ಚಿಕ್ಕ ವಯಸ್ಸಿನಲ್ಲಿ ಗೋದೆ ಶಾಲೆಯಲ್ಲಿ ದೊರೆತಿತ್ತು. ಅದರಿಂದ ಅನಂತರದ ನನ್ನ ವೃತ್ತಿಪರ ಮತ್ತು ಸಾರ್ವಜನಿಕ ಬದುಕಿಗೆ ತುಂಬಾ ನೆರವು ಒದಗಿ ಬಂದಿದೆ. ಇವತ್ತು ಸಮಾಜದಲ್ಲಿ ನಾನು ಯಾವುದೇ ಸ್ಥಾನಮಾನ, ಗೌರವ ಪಡೆದದ್ದೇ ಆಗಿದ್ದರೆ ಅದರಲ್ಲಿ ಶ್ರೀ ಯಶವಂತ ವ್ಯಾಯಮ ಶಾಲೆಯ ಪಾಲು ಇರುವುದಂತೂ ಖಂಡಿತ.

ಇದೇ ರೀತಿ ಮುಂದೆ ನನ್ನ ೧೯–೨೦ರ ವಯಸ್ಸಿನಲ್ಲಿ, ಅಂದರೆ ನಾನು ಬುದ್ಧಿ ಬಲಿಯುವ ವಯಸ್ಸಿನವನಾಗಿದ್ದಾಗ, ಮುಂಬೈಯಲ್ಲಿದ್ದ ಭಾಮೀ ಜನಾರ್ದನ ಶೆಣೈ(ಭಾಮಿ ಜನ್ನಪ್ಪ) ಕೆಲಸ ಬಿಟ್ಟು ಮತ್ತೆ ಬಂಟವಾಳಕ್ಕೆ ಬಂದು ವ್ಯಾಪಾರ ಶುರು ಮಾಡಿದ್ದು ನೆನಪಿಗೆ ಬರುತ್ತದೆ. ಆ ದಿನಗಳಲ್ಲಿ ನಾವು ಗೋದೆ ಶಾಲೆಯಲ್ಲಿ ದೊಡ್ಡ ಧ್ವನಿ ತೆಗೆದು ಮಾತನಾಡುವುದು, ಪರಸ್ಪರ ತಮಾಷೆ, ಗೇಲಿ ಮಾಡಿಕೊಳ್ಳುವುದು ಇತ್ತು. ಆಗ ಜನ್ನಪ್ಪನವರು ನಮಗೆ ವ್ಯಾಯಾಮ ಶಾಲೆಯಲ್ಲಿ ಹೀಗೆ ನಡೆದುಕೊಳ್ಳುವುದು ಉಚಿತವಲ್ಲ, ನಾವು ಶಿಸ್ತು, ಶಾಂತತೆಯನ್ನು ಕಾಪಾಡಿಕೊಂಡು ಬರಬೇಕು ಎಂಬ ವಿಚಾರವನ್ನು ತಿಳಿಹೇಳಿಕೊಟ್ಟರು. ನಾವೆಲ್ಲರೂ ಅದನ್ನು ಒಪ್ಪಿಕೊಂಡಿದ್ದೆವು ಆದರೆ ದಿನ ಕಳೆದಂತೆ ಹೆಚ್ಚಿನವರು ಅವರು ನೀಡಿದ ಉಪದೇಶವನ್ನು ಮರೆತು ಮೊದಲಿನ ಸ್ಥಿತಿಗೆ ಮರಳಿದರು. ಆದರೆ ಶ್ರೀನಿವಾಸ ನಾಯಕ(ಸತ್ಕಾರ), ವಿಠಲ ನಾಯಕ, ಲಿಪ್ಪನ್ ಕೃಷ್ಣ ಕಾಮತ, ನಾನು ಹೀಗೆ ನಾವು ೫–೬ ಮಂದಿ ತರುಣರು ಮಾತ್ರ ಭಾಮಿ ಜನ್ನಪ್ಪನವರ ಉಪದೇಶಾತ್ಮಕ ಮಾರ್ಗದರ್ಶನವನ್ನು ಮುಂದೆಯೂ ಪಾಲಿಸಿಕೊಳ್ಳುವುದೆಂದು ನಿರ್ಧರಿಸಿದೆವು. ಪ್ರತಿ ಭಾನುವಾರದಂದು ನಿಶ್ಚಿತ ಜಾಗದಲ್ಲಿ ಸೇರಿ ಚಿಂತನ ಮಂಥನ ನಡೆಸುತ್ತಿದ್ದೆವು. ಬೇರೆಯವರೊಂದಿಗೆ, ವಿಶೇಷವಾಗಿ ಗುರು ಸಮಾನರಾದ ಗೌರವಾನ್ವಿತರು, ಹಿರಿಯರೊಂದಿಗೆ, ಮತ್ತು ಇತರ ಜನರೊಂದಿಗೆ ನಾವು ಹೇಗೆ ನಡೆದುಕೊಳ್ಳುವುದು, ಯಾರ ಕುರಿತೂ ನಿಂದೆ, ತಿರಸ್ಕಾರದ ಮಾತುಗಳನ್ನು ಹಿಂದಿನಿಂದ ಆಡದಿರುವುದು, ಹೀಗೆ ಯಾರಾದರೂ ಮಾತನಾಡುತ್ತಿದ್ದರೆ ನಾವು ಅದಕ್ಕೆ ಪ್ರತಿಭಟನೆ ತೋರುವುದು ಇತ್ಯಾದಿ ವಿಚಾರವಾಗಿ ಚರ್ಚೆಗಳನ್ನು ನಡೆಸುತ್ತಿದ್ದೆವು. ಹೀಗೆ ಅನೇಕ ವಿಷಯಗಳಲ್ಲಿ ನಮಗೆ ವ್ಯಕ್ತಿ ಜೀವನದ ಮತ್ತು ಸಮಾಜ ಜೀವನದ ಶಿಕ್ಷಣ ಮತ್ತು ಮಾರ್ಗದರ್ಶನವು ಭಾಮಿ ಜನ್ನಪ್ಪನವರಿಂದ ದೊರೆಯಿತು. ಅದು ನನ್ನ ಭವಿಷ್ಯದ ಜೀವನದಲ್ಲಿ ತುಂಬಾ ನೆರವಿಗೆ ಬಂತು. ಆದರೆ ನಮಗೆ ಬೋಧನೆ ನೀಡಿದ ಜನ್ನಪ್ಪನವರೇ ಮುಂದೆ ಹಾಗೆ ನಡೆದುಕೊಳ್ಳಲಿಲ್ಲ ಎಂಬುದು ಬೇರೆ ವಿಚಾರ. ನಮಗೆ ಮಾತ್ರ ಅಮೃತದಂತಹ ಪುನರ್ಜನ್ಮ ಪ್ರಾಪ್ತಿಯಾದ ಹಾಗಾಗಿತ್ತು.

ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ತಾಲೀಮು ನಡೆಸಿದ್ದರಿಂದ ದೊರೆತ ಆರೋಗ್ಯದ ಋಣವನ್ನು ತೀರಿಸುವ ಸದವಕಾಶ ನನಗೆ ಮುಂದೆ ದೊರೆಯಿತು. ವ್ಯಾಯಾಮ ಶಾಲೆಯ ಆರಾಧ್ಯದೈವ ಶ್ರೀ ಹನುಮಂತ ದೇವರ ದಯೆಯಿಂದ ಹಾಗೂ ಗೋದೆ ಶಾಲೆಯ ಅಧ್ಯಕ್ಷನಾಗಿ, ಮುಖಂಡನಾಗಿ ಹಲವು ಕಾರ್ಯಗಳನ್ನು ನಡೆಸಿದೆ. ಗೋದೆ ಶಾಲೆಯಲ್ಲಿ ಒಂದು ವಿಶಾಲವಾದ ಕಬ್ಬಿಣದ ಮತ್ತು ಕಾಂಕ್ರಿಟಿನ ಸಭಾ ಮಂಟಪ ನಿರ್ಮಾಣಗೊಂಡು, ಅದಕ್ಕೆ ಗೋದೆ ಶಾಲೆಯ ಸ್ಥಾಪಕರಲ್ಲಿ ಒಬ್ಬರಾಗಿ ವಿಶೇಷ ಸೇವೆಯನ್ನು ಸಲ್ಲಿಸಿದ್ದ ನಮ್ಮ ವ್ಯಾಯಾಮ ಗುರು "ಕುಲಪತಿ ಉಳ್ಳಾಲ ವಾಸುದೇವ ಕಿಣಿ" ಅವರ ಹೆಸರನ್ನು ನೀಡಲಾಯಿತು. ಸಭಾಮಂಟಪದಿಂದ ಇಲ್ಲಿ ಮಳೆಗಾಲದಲ್ಲಿಯೂ ಆಟವಾಡುವುದು, ಇತರ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ನಡೆಸುವುದು ಸಾಧ್ಯವಾಯಿತು.

ಗೋದೆ ಶಾಲೆಯ ಸ್ಥಾಪನೆಗೆ ಹೆಚ್ಚು ಶ್ರಮ ಪಟ್ಟವರೆಂದರೆ ಶ್ರೀ ಬಿ. ಗೋವಿಂದ ಪ್ರಭು(ಗೋವಿಂದ ಮಾಸ್ತರ), ಬಿ. ಕೇಶವ ಬಾಳಿಗ, ಮತ್ತು ಉಳ್ಳಾಲ ವಾಸುದೇವ ಕಿಣಿ. ಪ್ರಾರಂಭದಲ್ಲಿ ಶ್ರೀ ಜೆ. ವಾಸುದೇವ ಪೈ, ಆನಂತರ ಶ್ರೀ ಪಿ. ಅನಂತರಾಮಯ್ಯ ಇಲ್ಲಿ ಶಿಕ್ಷಕರಾಗಿದ್ದರು. ಅದೇ ರೀತಿ ಶ್ರೀ ಗೋಪಾಳ ಮಾಸ್ತರ(ಪೈ), ಬಿ. ವಾಸುದೇವ ಭಟ್ ಇವರು ಕೂಡ ಗೌರವ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಗೋದೆ ಶಾಲೆಯ ವ್ಯಾಯಾಮ ಪ್ರದರ್ಶನವು ವಿವಿಧ ನಗರಗಳಲ್ಲಿ ನಡೆಯುವುದಿತ್ತು. ಅದರಲ್ಲಿಯೂ ಮುಖ್ಯವಾಗಿ ಮದ್ರಾಸ್ (೧೯೪೬), ಕೊಚ್ಚಿ (೧೯೪೭), ಮೈಸೂರು ಅರಸರ ಆಸ್ಥಾನದಲ್ಲಿ, ಮಡಿಕೇರಿ, ಬೆಂಗಳೂರು, ದಿಲ್ಲಿ, ಬನಾರಸ್ ಮತ್ತು ಕರ್ನಾಟಕದ ವಿವಿಧೆಡೆಗಳಲ್ಲಿ ನಡೆದದ್ದರಿಂದ ದೇಶದಾದ್ಯಂತ ಇದು'ಮಲ್ಲಕಂಭ ಶಾಲೆ' ಎಂಬ ಹೆಸರಿನಿಂದ ತುಂಬಾ ಪ್ರಸಿದ್ಧವಾಯಿತು.

ಯಶವಂತ ವ್ಯಾಯಾಮ ಶಾಲೆಯು ನನ್ನ ಬದುಕಿಗೆ ಮಾತ್ರವಲ್ಲ, ಬಂಟವಾಳದ ಮೊದಲ ಎರಡು ಪೀಳಿಗೆಯ ಯುವಕರ ನೈತಿಕ, ಸಾಂಘಿಕ ಪ್ರಗತಿಗೂ ಕಾರಣವಾಗಿ ಒದಗಿ ಬಂದಿದೆ. ಅಲ್ಲಿ ದೈಹಿಕ ಶಿಕ್ಷಣ ಪಡೆದ ತರುಣರಲ್ಲಿ ಶೇಕಡಾ ೯೦ರಷ್ಟು ಮಂದಿಗೆ ಬೀಡಿ, ಸಿಗರೇಟ್ ಅಥವಾ ಕುಡಿತದ ಚಟ ಇಲ್ಲವೆಂದು ನನ್ನ ನಂಬಿಕೆ. ಸ್ವನಿಯಂತ್ರಣವಿರುವ ಯುವ ಜನಾಂಗವನ್ನು ರೂಪಿಸಿದ ಹೆಗ್ಗಳಿಕೆ ಈ ಶಾಲೆಯದ್ದಾಗಿದೆ.

ಮೂರು ದಶಕಗಳ ಕಾಲ ನಿಕಟವರ್ತಿಗಳಾಗಿದ್ದು, ವ್ಯಾಯಾಮ ಶಾಲೆಯ ಪ್ರಗತಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿದವರೆಂದರೆ ಬಿ. ವಾಸುದೇವ ಭಟ್, ಪಿ. ಪದ್ಮನಾಭ ಭಂಡಾರಿ, ಶ್ರೀ ಬಿ. ಶ್ರೀನಿವಾಸ ನಾಯಕ್, ಎಂ. ವೇದವ್ಯಾಸ ಪ್ರಭು, ಪಿ. ನಾರಾಯಣ ಕಾಮತಿ, ಮಾಣೂರು ಅಚ್ಯುತ ಕಾಮತಿ, ಬೊ. ಪ್ರಭಾಕರ ಪ್ರಭು, ಬಿ. ನಾಗೇಂದ್ರ ಬಾಳಿಗಾ, ಕಟಪಾಡಿ ಮುಕುಂದ ಕಾಮತಿ ಮತ್ತು ಪಿ. ವಸಂತಪ್ರಭು. ವ್ಯಾಯಾಮ ಶಾಲೆಯು ನಮ್ಮ ಕೃತುತ್ವ ಶಕ್ತಿಯ

ದ್ಯೋತಕವಾಗಿದ್ದು, ಅದು ನಮ್ಮ ಸಾಮಾಜಿಕ ಜೀವನ ಮತ್ತು ಸಂಘಟನೆಗೆ ಒಂದು ಪರೀಕ್ಷಾ ಕೇಂದ್ರವಾಗಿತ್ತು. ಶ್ರೀ ಉಳ್ಳಾಲ ವಾಸುದೇವ ಕಿಣಿ (ಶಿಕ್ಷಕರು)ಯವರ ಮಾರ್ಗದರ್ಶನವು ಅವರು ಬದುಕಿದ್ದಷ್ಟು ಕಾಲ ದೊರೆತಿತ್ತು. ಹೀಗಾಗಿ ೧೯೭೦ನೇ ಇಸವಿಯಲ್ಲಿ ನಾನು ವ್ಯಾಯಾಮ ಶಾಲೆಯ ಹೊಸ ಸಭಾಮಂಟಪಕ್ಕೆ ಅವರ ಹೆಸರನ್ನು ಇಟ್ಟಿದ್ದೇನೆ.

೧೯೪೦ನೇ ಇಸವಿಯಲ್ಲಿ ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ವ್ಯಾಯಾಮ ಶಾಲೆಯ ಮೊದಲ ವ್ಯಾಯಾಮ ಪ್ರದರ್ಶನ ನಡೆದಿತ್ತು. ಅನಂತರ ೧೯೪೪ನೇ ಇಸವಿಯಲ್ಲಿ ಶ್ರೀ ಸ್ವಾಮೀಜಿಯವರು ಮೂಲ್ಕಿಯಲ್ಲಿ ಶ್ರೀ ಸುಧೀಂದ್ರತೀರ್ಥ ಸ್ವಾಮಿಯವರನ್ನು ಶಿಷ್ಯ ಸ್ವೀಕಾರ ಮಾಡುವ ಸಮಾರಂಭದಲ್ಲಿ ವ್ಯಾಯಾಮ ಪ್ರದರ್ಶನವನ್ನು ನೀಡಲು ಮತ್ತು ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಲು ವ್ಯಾಯಾಮ ಶಾಲೆಯಿಂದ ನಾವು ೫೦-೬೦ ಬಾಲಕರು ಮತ್ತು ಯುವಕರು ಮೂಲ್ಕಿಗೆ ಹೋಗಿದ್ದೆವು. ಮುಂದೆ ೧೯೪೯ರಲ್ಲಿ ಶ್ರೀ ಕಾಶೀಕ್ಷೇತ್ರದಲ್ಲಿ ಶ್ರೀ ಸ್ವಾಮೀಜಿಯವರು ಶಿಷ್ಯ ಸ್ವೀಕಾರ ಮಾಡುವ ಸಮಾರಂಭದಲ್ಲಿ ಶ್ರೀ ಬಿ. ಶ್ರೀನಿವಾಸ ನಾಯಕ, ಎಂ. ವೇದವ್ಯಾಸ ಪ್ರಭು ಮತ್ತು ಬೊ. ರವಿದಾಸ ಪೈ ಇವರ ನೆರವಿನಿಂದ ನಾನೇ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳ ಗುಂಪನ್ನು ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ನಾವು ನವದೆಹಲಿಗೆ ತೆರಳಿ ದಿಲ್ಲಿ ಗೌಡಸಾರಸ್ವತ ಸಮಾಜದ ವತಿಯಿಂದ ನಡೆದ ಸಮಾರಂಭದಲ್ಲಿ ವ್ಯಾಯಾಮ ಮತ್ತು ಮಲ್ಲಕಂಭ ಪ್ರದರ್ಶನವನ್ನು ನೀಡಿದೆವು.

೧೯೪೬ರಲ್ಲಿ ಕೊಚ್ಚಿಯಿಂದ ಪ್ರಾರಂಭಿಸಿ ದೆಹಲಿಯವರೆಗೆ ಪ್ರದರ್ಶನ ನೀಡಿದ ಕೀರ್ತಿ ಶ್ರೀ ಯಶವಂತ ವ್ಯಾಯಾಮ ಶಾಲೆಗೆ ಸಲ್ಲುತ್ತದೆ. ೧೯೪೬-೫೦ರಲ್ಲಿ ಮೈಸೂರು ಮತ್ತು ಕೊಚ್ಚಿಯ ಅರಸರ ಆಸ್ಥಾನದಲ್ಲಿ, ಆಮೇಲೆ ಮದ್ರಾಸ್ ಸರಕಾರದ ಮತ್ತು ಮಡಿಕೇರಿ ಸರಕಾರದ ವಿಶೇಷ ಅಹ್ವಾನದ ಮೇರೆಗೆ ಆಯಾ ಪ್ರದೇಶಗಳಲ್ಲಿ ವ್ಯಾಯಾಮ ಪ್ರದರ್ಶನಗಳು ನಡೆದಿವೆ. ಇದೇ ರೀತಿ ೧೯೮೭ನೇ ಇಸವಿಯಲ್ಲಿ ಮೈಸೂರಿನಲ್ಲಿ ನಡೆದ ಕರ್ನಾಟಕ ಸರಕಾರದ ಚಾಮುಂಡಿ ಸ್ಪೋರ್ಟ್ಸ್ ಸ್ಟೇಡಿಯಮ್‌ನ ಉದ್ಘಾಟನಾ ಸಮಾರಂಭದಲ್ಲಿ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳಿಂದ ವ್ಯಾಯಾಮ ಪ್ರದರ್ಶನ, ಅದರಲ್ಲಿಯೂ ಮುಖ್ಯವಾಗಿ ಮಲ್ಲಕಂಭ ಪ್ರದರ್ಶನ ನಡೆದಿತ್ತು. ಭಾರತದ ಯಾವುದೇ ಒಂದು ವ್ಯಾಯಮ ಶಾಲೆಗೆ ಈ ವಿಧದ ಧಾರಾಳ ಅವಕಾಶಗಳು ದೊರೆತ ಉದಾಹರಣೆ ಇಲ್ಲವೆಂದೇ ಹೇಳಬಹುದು.

ಶ್ರೀ ಕಾಶೀಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಚಿತ್ತದಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆ ಸ್ಥಿರವಾಗಿ ಉಳಿದಿದೆ. ಯಾಕೆಂದರೆ ಐವತ್ತರ ದಶಕದಲ್ಲಿ ಮೈಸೂರು ರಾಜ್ಯದಲ್ಲಿ ಶ್ರೀ ಸ್ವಾಮೀಜಿಯವರು ನಡೆಸಿದ ದಿಗ್ವಿಜಯ ಪ್ರವಾಸದಲ್ಲಿ ಮತ್ತು ಅನಂತರದ ಅವರ ವಿಶೇಷ ಪ್ರವಾಸಗಳ ಸಮಯದಲ್ಲಿ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿರುವುದು ಇದೆ.

ಶ್ರೀ ಯಶವಂತ ವ್ಯಾಯಾಮ ಶಾಲೆಯ ಸುವರ್ಣೋತ್ಸವವು ೧೯೯೦, ಜೂನ್ ೧೫ ರಂದು ನಡೆಯಿತು. ಈ ಸಮಾರಂಭಕ್ಕೆ ೧೯೪೦ರಿಂದ ಗೋದೆ ಶಾಲೆಯಲ್ಲಿ ವ್ಯಾಯಾಮ ನಡೆಸುತ್ತಾ ಬಂದಿರುವ, ವ್ಯಾಯಾಮ ಶಾಲೆಯ ಪ್ರಗತಿಗಾಗಿ ದುಡಿದಿರುವ, ಧನ ಸಹಾಯ, ಇತರ ಸಹಾಯಗಳನ್ನು ನೀಡಿದ ೫೦ ಮಂದಿ ಹಿರಿಯರು ಮತ್ತು ಕಿರಿಯರಿಗೆ ವಿಶೇಷ ಆಹ್ವಾನವನ್ನು ನೀಡಿ, ಅವರ ಕೈಯಿಂದ ೫೦ ಹಣತೆಯನ್ನು ಬೆಳಗಿಸಿ ಸಮಾರಂಭದ ಉದ್ಘಾಟನೆಯನ್ನು ನಡೆಸಲಾಯಿತು. ಸ್ಥಾಪಕರಲ್ಲಿ ನಮ್ಮೊಡನೆ ಕೆಲಸ ಮಾಡಿದ ಕುಲಪತಿ ಶ್ರೀ ಉಳ್ಳಾಲ ವಾಸುದೇವ ಕಿಣಿ ಅವರು ಮೊದಲ ಹಣತೆಯನ್ನು ಬೆಳಗಿದರು. ವೈದಿಕರ ಪ್ರಾರ್ಥನೆಯ ಬಳಿಕ ನಾನು ಸ್ವಾಗತ ಭಾಷಣವನ್ನು ನೀಡಿದೆ. ಕಾರ್ಯದರ್ಶಿ ಶ್ರೀ ಪಿ. ನಾರಾಯಣ ಕಾಮತಿಯವರು ಐವತ್ತು ವರ್ಷಗಳ ವರದಿಯನ್ನು ಓದಿದರು. ವ್ಯಾಯಾಮ ಶಾಲೆಯ ಮೊದಲ ಗುರು ಶ್ರೀ ಜೆ. ವಾಸುದೇವ ಪೈ ಅವರ ವರ್ಣಚಿತ್ರದ ಅನಾವರಣವನ್ನು ಶ್ರೀ ಗೋಪಾಳ ಮಾಸ್ತರ(ಭಂಡಾರಿಬೆಟ್ಟು ಬಂಟವಾಳ) ನಡೆಸಿದರು. ಆನಂತರ ಶ್ರೀ ಬಿ. ಶ್ರೀನಿವಾಸ ನಾಯಕ, ಬಿ. ವಾಸುದೇವ ಭಟ್ ಇವರು ಭಾಷಣ ನೀಡಿದರು. ಕುಲಪತಿ ಶ್ರೀ ಕಿಣಿಯವರಿಂದ ಆಶೀರ್ವಚನವಾದ ಬಳಿಕ ಶ್ರೀ ಯಶವಂತ ವ್ಯಾಯಾಮ ಶಾಲೆಯ ಸುವರ್ಣೋತ್ಸವದ ನಿಧಿಸಂಗ್ರಹ ಕಾರ್ಯದ ಉದ್ಘಾಟನೆಯಾಯಿತು. ಅಲ್ಲಿ ಸೇರಿದವರು ವ್ಯಕ್ತಪಡಿಸಿದ ಉತ್ಸಾಹದ ಪ್ರತಿಕ್ರಿಯೆಯಿಂದಾಗಿ ದೊಡ್ಡ ಮೊತ್ತದ ದೇಣಿಗೆ ಸಂಗ್ರಹವಾಯಿತು.

●●

೫. ಆ ಕಷ್ಟದ ದಿನಗಳು

ನನಗೆ ಪ್ರಾಯ ಹದಿನೆಂಟು ವರ್ಷವಾಗುವವರೆಗೆ ಹಣದ ತೊಂದರೆಯ ಅನುಭವವಾಗಿರಲಿಲ್ಲ. ಆ ದಿನಗಳಲ್ಲಿ ನನ್ನ ತಂದೆಯವರ ಹೊಟೇಲು ತುಂಬಾ ಹೆಸರು ವಾಸಿಯಾಗಿತ್ತು. ಅದರಿಂದ ನಮಗೆ ಲಾಭವೂ ಬರುತ್ತಿತ್ತು. ಅಲ್ಲದೆ ನನ್ನ ತಂದೆಯವರಿಗೆ ಸಮಾಜದ ಕೆಳ ಹಾಗೂ ಮೇಲಿನ ಸ್ತರಗಳ ಜನರಿಂದ ದೊರೆಯುತ್ತಿದ್ದ ಆದರ, ಗೌರವಗಳಿಂದ ನಾನು ಒಬ್ಬ ರಾಜನ ಮಗನ ಹಾಗೆ ಬೆಳೆದಿದ್ದೆ. ಈ ಉನ್ನತ ಜೀವನಕ್ಕೆ ಕೊನೆ ಹಾಡುವ ಸಮಯ ಬಂತು.

ನಾನು ೧೯೫೭ರಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣನಾದೆ. ಆನಂತರ ಸ್ವಲ್ಪಸಮಯ ತಂದೆಯವರ ಹೊಟೇಲಿನಲ್ಲಿ ಕುಳಿತುಕೊಳ್ಳುವ ಅಗತ್ಯ ಒದಗಿ ಬಂತು. ನನಗೆ ಶಾಲೆಯ ದಿನಗಳಿಂದಲೇ ಕಾಲೇಜು ಸೇರಿ ಬಿ.ಎ., ಬಿ.ಎಡ್. ಮಾಡಿ ನಮ್ಮ ಶಾಲೆಯಲ್ಲಿ ಶಿಕ್ಷಕನಾಗಬೇಕು, ಪಾಂಡು ಬಾಳಿಗ ಮಾಸ್ತರರ ಹಾಗೆ ಶಾಲೆಗೆ ಮತ್ತು ಊರಿಗೆ ಸೇವೆ ಸಲ್ಲಿಸಬೇಕು ಎಂಬ ಭಾವನೆ ಇತ್ತು. ಆದರೆ ನನ್ನ ಮೆಟ್ರಿಕ್ ಮುಗಿದ ಕೂಡಲೇ ನಮ್ಮ ಹೊಟೇಲ್ ವ್ಯಾಪಾರದಲ್ಲಿ ಪಾಲುದಾರರಾಗಿದ್ದ ಸರ್ವೋತ್ತಮ ಪ್ರಭು(ಅವರು ನನಗೆ ಸೋದರಮಾವನಾಗಬೇಕು) ಮತ್ತು ನನ್ನ ತಂದೆಯವರ ನಡುವೆ ಪಾಲಾಯಿತು. ಹೀಗಾಗಿ ಹೊಟೇಲಿನ ಗಲ್ಲೆಯ ಮೇಲೆ ಕುಳಿತುಕೊಳ್ಳುವ ಪಾಳಿ ನನ್ನ ಪಾಲಿಗೆ ಬಂತು. ಕಾಲೇಜು ಕಲಿತು ಶಾಲೆಯ ಶಿಕ್ಷಕನಾಗುವ ನನ್ನ ಕನಸು, ಕನಸಾಗಿಯೇ ಉಳಿಯಿತು.

ನಮ್ಮ ಹೊಟೇಲಲ್ಲಿ ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದು, ಅದು ಜನಪ್ರಿಯವಾಗಿತ್ತು. ಆದರೆ ಹೊಟೇಲಿನ ಕಟ್ಟಡ ಬಾಡಿಗೆಯದು. ನಮ್ಮ ಗ್ರಹಚಾರಕ್ಕೆ ತಿಂಗಳು ತಿಂಗಳು ಬಾಡಿಗೆ ವಸೂಲು ಮಾಡುತ್ತಿದ್ದವರು ನಮ್ಮ ಕುರಿತು ಕಟ್ಟಡದ ಧನಿಯವರಲ್ಲಿ ಅಲ್ಲಸಲ್ಲದ ವಿಷಯವನ್ನು ತಿಳಿಸಿದ ಕಾರಣವಾಗಿ ಧನಿ ಮುನಿಸಿಕೊಂಡು ನಮಗೆ ಕಟ್ಟಡ ಬಿಟ್ಟುಕೊಡುವಂತೆ ತಿಳಿಸಿದರು. ಆ ಸಮಯದಲ್ಲಿ ನನ್ನ ತಂದೆಯವರು ನ್ಯಾಯಾಲಯದ ಮೂಲಕ ದಾವೆ ಹೂಡಿದ್ದರೆ, ನಾವು ಅದೇ ಜಾಗದಲ್ಲಿ ಸ್ವಲ್ಪ ಕಾಲದವರೆಗೆ ಹೊಟೇಲನ್ನು ಮುಂದುವರಿಸುವುದು ಸಾಧ್ಯವಿತ್ತು. ಆದರೆ ಇಷ್ಟು ವರ್ಷ ನಮ್ಮ ಮೇಲೆ ಪ್ರೀತಿ, ವಿಶ್ವಾಸವನ್ನು ಹೊಂದಿದ್ದ ಧನಿಯವರ ಮನಸ್ಸು ಯಾವಾಗ ನಮ್ಮ ವಿಚಾರದಲ್ಲಿ ಕೆಟ್ಟು ಹೋಯಿತೋ, ನಾವು ಅಲ್ಲಿಂದ ದೂರ ಹೋಗಿ ಬೇರೆಡೆ ಹೊಟೇಲು ವ್ಯಾಪಾರ ಮಾಡುವುದೇ ಸರಿ ಎಂಬ ನಿರ್ಧಾರವನ್ನು ನನ್ನ ತಂದೆ ಕೈಗೊಂಡರು. ಅವರು ಸಿ.ಪಿ.ಸಿ. ಕಂಪನಿಯ ಮ್ಯಾನೆಜಿಂಗ್ ಡೈರೆಕ್ಟರ್ ಶ್ರೀ ವಿ.ಎಸ್. ಕುಡ್ವಾ ಅವರನ್ನು ಭೇಟಿಯಾಗಿ, ಬಂಟವಾಳದಲ್ಲಿದ್ದ ಸಿ.ಪಿ.ಸಿ. ಕಂಪನಿ ಕಚೇರಿ ಇರುವ ಉಪವನದ ಜಾಗದಲ್ಲಿ ನಮ್ಮದೇ ಖರ್ಚಿನಲ್ಲಿ ಹೊಸ ಕಟ್ಟಡ ಕಟ್ಟಿ ಹೊಟೇಲು ಪ್ರಾರಂಭಿಸಲು ಅನುಮತಿ ಪಡೆದರು. ನನ್ನ ತಂದೆಯವರು ಸಿ.ಪಿ.ಸಿ ಕಂಪನಿಯ ಸರ್ವಪ್ರಥಮ ಏಜೆಂಟ್ ಆಗಿದ್ದರಿಂದ ವಿ.ಎಸ್. ಕುಡ್ವಾ ಅವರಿಗೆ ನನ್ನ ತಂದೆಯವರಲ್ಲಿ ತುಂಬಾ ವಿಶ್ವಾಸ ಮತ್ತು ಅಭಿಮಾನವಿತ್ತು. ಇದರಿಂದ ಶ್ರೀ ಕುಡ್ವಾ ಅವರಿಂದ ಪರವಾನಗಿ ಪಡೆಯುವುದು ನನ್ನ ತಂದೆಯವರಿಗೆ ಕಷ್ಟವಾಗಲಿಲ್ಲ. ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಮೂರು ತಿಂಗಳು ಕಳೆಯುವುದರೊಳಗೆ 'ಕೆನರಾ ಕಾಫಿ ಕ್ಲಬ್' ಎಂಬ ಹೆಸರಿನಲ್ಲಿ ನಮ್ಮ ಹೊಟೇಲಿನ ಉದ್ಘಾಟನೆ ಆಯ್ತು. ಆದರೆ ಹೊಟೇಲು ಹೊಸದು. ಅಲ್ಲದೆ ಮುಖ್ಯ ಬೀದಿ ಬಿಟ್ಟು ಸಿ.ಪಿ.ಸಿ. ಆವರಣದ ಒಳಭಾಗದಲ್ಲಿ ಇದ್ದುದರಿಂದ ಹಿಂದಿನ ಮೋಡರ್ನ್ ಕೆಫೆಯಲ್ಲಿ ನಡೆದಷ್ಟು ವ್ಯಾಪಾರ ಇರುತ್ತಿರಲಿಲ್ಲ. ಹೀಗಾಗಿ ಈ ಹೊಟೇಲಿನ ವ್ಯವಹಾರದಿಂದ ನಮ್ಮ ಕಷ್ಟನಷ್ಟದ ದಿನಗಳು ಪ್ರಾರಂಭವಾದವು. ನನ್ನ ಮತ್ತು ನನ್ನ ತಂದೆಯವರ ಗ್ರಹಗತಿಯ ದೋಷದಿಂದ ಹೀಗಾಯಿತೆಂದು ಹೇಳುತ್ತಾರೆ.

ಈ ನಡುವೆ ನಮ್ಮ ಹೊಟೇಲಿನ ಹೊಸ ಕಟ್ಟಡ ತಲೆಯೆತ್ತುವವರೆಗೆ ನಾನು ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುವುದು ಬೇಡವೆಂದು ನನ್ನ ತಂದೆಯವರು ನನ್ನನ್ನು ಮಂಗಳೂರಿನ

ಬಾವುಟೆ ಗುಡ್ಡೆಯಲ್ಲಿರುವ ಕೆನರಾ ಬ್ಯಾಂಕಿನ ಪ್ರಧಾನ ಕಚೇರಿಗೆ ಕರೆದುಕೊಂಡು ಹೋದರು. ಅಲ್ಲಿ ಜನರಲ್ ಮ್ಯಾನೆಜರ್ ಅಮ್ಮೆಂಬಳ್ ದಾಮೋದರ ಪೈ ಅವರ ಬಳಿ ಮಾತನಾಡಿ ನನಗೆ ಕೆನರಾ ಬ್ಯಾಂಕಿನಲ್ಲಿ ಕ್ಲರ್ಕ್ ಕೆಲಸ ದೊರಕಿಸಿಕೊಟ್ಟರು. ನನ್ನ ತಂದೆಯವರು ಎಲ್ಲಿ ಹೋದರೂ ಅವರ ಮಾತಿಗೆ ಯಾರೂ ನಕಾರ ಸೂಚಿಸುತ್ತಿರಲಿಲ್ಲ. ಹೀಗಾಗಿ ನಾನು ೧೯೫೪ನೇ ಇಸವಿ ಜನವರಿ ೨೫ ರಂದು ಕೆನರಾ ಬ್ಯಾಂಕ್‌ನ ಮಂಗಳೂರು ಬಂದರ ಶಾಖೆಯಲ್ಲಿ ಕ್ಲರ್ಕ್ ಆಗಿ ಸೇರಿ ನನ್ನ ವೃತ್ತಿಜೀವನಕ್ಕೆ ನಾಂದಿ ಹಾಡಿದೆ. ಮಂಗಳೂರಿನಲ್ಲಿ ನನ್ನ ವಾಸ ತಂದೆಯವರ ಚಿಕ್ಕಪ್ಪನ ತಂಗಿ ಉಮ್ಮೆಕ್ಕನ ಮನೆಯಲ್ಲಿ. ಅವರ ಪತಿ ಶ್ರೀ ಪಿ. ವಿಠಳ ಶೆಣೈ ಅವರಿಗೆ ನನ್ನ ತಂದೆಯವರ ಮೇಲೆ ತುಂಬಾ ಅಭಿಮಾನ ಮತ್ತು ಪ್ರೀತಿ ಇತ್ತು.

ದಿನ ಕಳೆದಂತೆ ನನ್ನ ತಂದೆಯವರಿಗೆ ಸಿ.ಪಿ.ಸಿ. ಏಜೆನ್ಸಿ ಮತ್ತು ಹೊಟೇಲಿನ ನಿರ್ವಹಣೆ ಎರಡನ್ನೂ ನಿಭಾಯಿಸುವುದು ಕಷ್ಟವಾಯಿತು. ಆಗ ನನ್ನ ತಮ್ಮಂದಿರು ಇನ್ನೂ ಚಿಕ್ಕವರು. ಹೀಗಾಗಿ ಹೊಟೇಲಿನ ಜವಾಬ್ದಾರಿಯನ್ನು ನಾನೇ ವಹಿಸಿಕೊಳ್ಳಬೇಕಾಗಿ ಬಂತು. ಬೇರೆ ದಾರಿಯೇ ಇರಲಿಲ್ಲ. ನಾನು ಆರೇ ತಿಂಗಳಲ್ಲಿ ಕೆನರಾ ಬ್ಯಾಂಕಿನ ನೌಕರಿಗೆ ರಾಜೀನಾಮೆ ನೀಡಿ, ಬಂಟ್ವಾಳದ ನಮ್ಮ ಕೆನರಾ ಕಾಫಿ ಹೌಸ್ ಸೇರಿಕೊಂಡೆ.

ಈಗಾಗಲೇ ತಿಳಿಸಿದಂತೆ, ಹೊಸದಾಗಿ ಶುರುವಾದ ನಮ್ಮ ಹೊಟೇಲಿನಲ್ಲಿ ಹೇಳಿಕೊಳ್ಳುವಷ್ಟು ವ್ಯಾಪಾರ ಇರುತ್ತಿರಲಿಲ್ಲ. ಹೀಗಾಗಿ ನಾನು ಮುಂಜಾನೆಯೇ ಹೊಟೇಲನ್ನು ತೆರೆದು ವ್ಯಾಪಾರ ಶುರು ಮಾಡುತ್ತಿದ್ದೆ. ಗಿರಾಕಿಗಳಿಗೆ ತಿಂಡಿಯನ್ನು ನಾನೇ ಸರಬರಾಜು ಮಾಡಬೇಕಾಗಿ ಬರುತ್ತಿತ್ತು. ನನ್ನ ತಮ್ಮ ಗಣಪತಿ ವಯಸ್ಸಿನಲ್ಲಿ ಸಣ್ಣವನಾಗಿದ್ದರೂ ಹೊಟೇಲಿಗೆ ಬಂದು ನನಗೆ ಸಹಾಯ ಮಾಡುತ್ತಿದ್ದ.

ಅನಂತರದ ದಿನಗಳು ಬಹಳ ಕಷ್ಟಕರವಾಗಿ ಪರಿಣಮಿಸಿದವು. ನನ್ನ ತಂದೆಯವರಿಗೆ ಹೊಟ್ಟೆ ತುಂಬಾ ಉಣ್ಣಬೇಕು. ಅದಕ್ಕೂ ತತ್ವಾರ ಬಂತು. ವ್ಯಾಪಾರ ಕಡಿಮೆಯಾಗುತ್ತಾ ಹೋಯಿತು. ಈ ಕಾರಣಕ್ಕಾಗಿ ನಾನು ಈಗಾಗಲೇ ಇರುವ ಹೊಟೇಲಿನ ಕಟ್ಟಡದಲ್ಲಿಯೇ ಊಟದ ವಿಭಾಗವನ್ನು ಪ್ರಾರಂಭಿಸಿದೆ. ಆ ಕಾಲದಲ್ಲಿ ಶಾಖಾಹಾರಿ ಊಟ ಸಿಗುವ ಹೊಟೇಲು ಬಂಟವಾಳದಲ್ಲಿ ಇರಲಿಲ್ಲ. ಹೀಗಾಗಿ ನಮ್ಮ ಹೊಟೇಲಿನ ಊಟಕ್ಕೆ ಗಿರಾಕಿಗಳೇನೋ ಇದ್ದರು, ಆದರೆ ದುರದೃಷ್ಟವಶಾತ್ ಒಂದಲ್ಲಾ ಒಂದು ಕಾರಣದಿಂದ ವ್ಯಾಪಾರ ಕಳೆಗುಂದಿ ಮತ್ತೆ ಅದು ಚೇತರಿಸಿಕೊಳ್ಳಲೇ ಇಲ್ಲ. ಹೀಗಾಗಿ ೧೯೫೭ರಲ್ಲಿ ನಮ್ಮ ಹೊಟೇಲನ್ನು ಇನ್ನೊಬ್ಬರಿಗೆ ಬಾಡಿಗೆಗೆ ನೀಡಿ ಅದೇ ವರ್ಷ ಜೂನ್ ತಿಂಗಳಲ್ಲಿ ಚಿಕ್ಕಮಗಳೂರಿನಲ್ಲಿದ್ದ ಸಿ.ಪಿ.ಸಿಯ ಅಧೀನ ಸಂಸ್ಥೆ ಮಂಜುನಾಥ ಮೋಟಾರ್ ಸರ್ವಿಸ್‌ಲ್ಲಿ ಮೇನಜರ್ ಆಗಿ ಕೆಲಸಕ್ಕೆ ಸೇರಿಕೊಂಡೆ.

ಆ ದಿನಗಳಲ್ಲಿಯೇ ನನ್ನ ತಂದೆಯವರ ಆರೋಗ್ಯ ಕೆಟ್ಟಿತು. ಅವರ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಈ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಅವರ ಊಟ ತಿಂಡಿ ಕಡಿಮೆಯಾಯಿತು. ಅವರು ದೇಹದಲ್ಲಿ ತೆಳ್ಳಗಾದರು. ಅವರಿಗೆ ಜ್ವರವೂ ಬರುತ್ತಿತ್ತು. ಅದೇನು ಗ್ರಹಚಾರವೋ ಅಗತ್ಯವಿರುವ ಔಷಧೋಪಚಾರ ನಡೆಸಿದರೂ, ಅವರ ಆರೋಗ್ಯ ಮಾತ್ರ ಸುಧಾರಿಸಲೇ ಇಲ್ಲ. ವ್ಯಾಪಾರದಲ್ಲಿ ಉಂಟಾದ ಕಷ್ಟನಷ್ಟಗಳು, ಬರೀ ತಿಂಗಳ ಸಂಬಳದಿಂದ ಸಂಸಾರ ನಡೆಯಬೇಕಾದ ಪರಿಸ್ಥಿತಿ, ಜೊತೆಗೆ ನಾನು ಚಿಕ್ಕಮಗಳೂರಿನಲ್ಲಿ ನೌಕರಿ ಹಿಡಿದ ಕಾರಣ ಅವರಿಂದ ದೂರ ಇರಬೇಕಾಗಿ ಬಂದುದು, ಇವೆಲ್ಲವೂ ಸೇರಿ ಅವರ ಮನಸ್ಸಿನಲ್ಲಿ ವೈರಾಗ್ಯವನ್ನು ಹುಟ್ಟಿಸಿರಬೇಕು. ಇದು ಅವರ ದೇಹ ಮತ್ತು ಮನಸ್ಸಿನ ಮೇಲೆ ಗಂಭೀರ ಪರಿಣಾಮವನ್ನು ಬೀರಿತು. ಅವರ ಶಕ್ತಿ ಕುಂದುತ್ತಾ ಹೋಯಿತು.

ಆಗ ನಮ್ಮಲ್ಲಿ ಹಣದ ಬಲವಿದ್ದವರೆಂದರೆ ಅನಸೂಯಕ್ಕ ಮಾತ್ರ. ನನ್ನ ಭಾವ ವಿಶ್ವನಾಥ ಹೆಗ್ಡೆಯವರಿಗೆ ಚಿಕ್ಕಮಗಳೂರಿನ ಬಸ್ ನಿಲ್ದಾಣದಲ್ಲಿ ಹೊಟೇಲು (ಕೆನರಾ ಕಾಫಿ ಹೊಟೇಲ್) ಇತ್ತು. ಅಲ್ಲಿ ವ್ಯಾಪಾರ ಚೆನ್ನಾಗಿತ್ತು. ಇನ್ನು ವಿಶ್ವನಾಥ ಭಾವನವರ ಮನಸ್ಸು ವಿಶಾಲವಾದುದು. ಅವರು ಧರ್ಮರಾಯನ ಹಾಗೆ, ಉದಾರ ಮನೋಭಾವದವರು. ಅವರಿಗೆ ನನ್ನ ತಂದೆಯವರ ಮೇಲೆ ತುಂಬಾ ವಿಶ್ವಾಸ ಮತ್ತು ಅಭಿಮಾನ ಇದ್ದುದರಿಂದ, ಅವರ ಔಷಧಿ ಮತ್ತು ಇತರ ಅಗತ್ಯಗಳಿಗೆ ತುಂಬಾ ಹಣ ಖರ್ಚು ಮಾಡುತ್ತಿದ್ದರು. ನಾನು ಚಿಕ್ಕಮಗಳೂರಿನಲ್ಲಿ ತಂಗಿ ಶಾಲಿನಿಯ ಮನೆಯಲ್ಲಿ ಇರುತ್ತಿದ್ದೆ. ಅವರ ಪತಿ ಕೆ. ಕೇಶವ ಕಾಮತ್ ಕೆನರಾ ಬ್ಯಾಂಕಿನಲ್ಲಿ ಅಧಿಕಾರಿ. ನಾನು ಅವರಲ್ಲಿದ್ದರೂ, ಅವರಿಗೆ ಹಣ ನೀಡುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನನಗೆ ಮಂಜುನಾಥ ಮೋಟಾರ್ ಸರ್ವಿಸ್‌ನಲ್ಲಿ ಸಿಗುತ್ತಿದ್ದ ಸಂಬಳದ ಹಣವನ್ನು ಮನೆಗೇ ಕಳುಹಿಸುತ್ತಿದ್ದೆ. ಮನೆಯಲ್ಲಿ ನನ್ನ ಅಮ್ಮ, ತಂಗಿ ವಸಂತಿ ಮತ್ತು ತಮ್ಮಂದಿರಾದ ವೆಂಕಟರಮಣ, ಗಣಪತಿ, ಮತ್ತು ಪ್ರಭಾಕರ ಇರುತ್ತಿದ್ದರು. ಹೀಗಾಗಿ ಖರ್ಚು ಬಹಳ

ಇರುತ್ತಿತ್ತು. ತಂದೆಯವರು ಅನಾರೋಗ್ಯದ ಕಾರಣದಿಂದ ರಜೆಯಲ್ಲಿದ್ದುದರಿಂದ ಅವರಿಗೆ ಸಂಬಳ ಸಿಗುತ್ತಿರಲಿಲ್ಲ. ನಮಗೆ ಹಣದ ಸಹಾಯ ನೀಡಲು ನಮ್ಮ ಸಂಬಂಧಿಕರಾಗಲೀ, ಬೇರೆ ನೆಂಟರಿಷ್ಟರಾಗಲೀ ಯಾರೂ ಮುಂದೆ ಬರಲಿಲ್ಲ.

ಆ ಕಷ್ಟದ ದಿನಗಳಲ್ಲಿಯೂ ನನ್ನ ತಾಯಿ ಯಾರ ಮುಂದೆಯೂ ಕೈ ಚಾಚದೆ ದಿನಗಳನ್ನು ಕಳೆದದ್ದು ನನಗೆ ಅಭಿಮಾನವೆನಿಸುತ್ತದೆ. ಹೀಗಿರುವಾಗ ೧೯೫೭ರ ಅಕ್ಟೋಬರ್ ತಿಂಗಳಲ್ಲಿ ನನ್ನ ತಂದೆಯವರ ದೇಹಸ್ಥಿತಿ ವಿಷಮಿಸಿತು. ನಾನು ರಜೆ ಪಡೆದು ಅವರ ಬಳಿ ಇರಬೇಕಾಗಿ ಬಂತು. ನನ್ನ ತಂದೆಯವರ ಪ್ರೀತಿಪಾತ್ರರಾಗಿದ್ದ ಉಳ್ಳಾಲ ಶ್ರೀನಿವಾಸ ಮಲ್ಯ ಅವರು ದೆಹಲಿಯಿಂದ, ಸಿ.ಪಿ.ಸಿ. ಮಾಲೀಕರಾದ ವಿ.ಎಸ್. ಕುಡ್ವಾ, ಜನರಲ್ ಮ್ಯಾನೆಜರ್ ಕೆ. ಶ್ರೀನಿವಾಸ ಭಂಡಾರಕರ್, ಊರು ಪರವೂರಿನ ಹಿರಿಯರು, ರಾಜಕೀಯ ಪುಢಾರಿಗಳು ಬಂದು ನನ್ನ ತಂದೆಯವರನ್ನು ನೋಡಿಕೊಂಡು ಹೋಗುತ್ತಿದ್ದರು. ಆದರೆ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದುದರಿಂದ ಅವರೊಂದಿಗೆ ಮಾತನಾಡುವುದು ಅವರಿಗೆ ಸಾಧ್ಯವಿರಲಿಲ್ಲ. ಕಡೂರಿನಲ್ಲಿ ಸಿ.ಪಿ.ಸಿ ಕಂಪನಿಯ ಏಜೆಂಟರಾಗಿದ್ದ ನನ್ನ ಚಿಕ್ಕಪ್ಪ ಬಸ್ತಿ ವಾಸುದೇವ ಶೆಣೈಯವರು ನನ್ನ ತಂದೆಯ ಸೇವೆ ಕೈಗೊಳ್ಳುವ ಉದ್ದೇಶದಿಂದ ರಜೆ ಹಾಕಿ ನಮ್ಮಲ್ಲಿಯೇ ಉಳಿದುಕೊಂಡಿದ್ದರು. ಅವರು ಬ್ರಹ್ಮಚಾರಿ. ಅಣ್ಣನ ಮೇಲೆ ಅಪಾರ ಪ್ರೀತಿ ಇಟ್ಟುಕೊಂಡವರು. ತಂದೆಯವರ ಔಷಧೋಪಚಾರಕ್ಕೆ ಮತ್ತು ಅವರ ಸಾವಿನ ನಂತರದ ವಿಧಿಕರ್ಮಗಳಿಗೆ ತನ್ನ ಕೈಯಿಂದಲೇ ಖರ್ಚು ಮಾಡಿದರು.

ನನ್ನ ತಂದೆಯುವರು ಕಾರ್ತಿಕ ಕೃಷ್ಣಪಕ್ಷದ ನವಮಿಯಂದು ಅಂದರೆ ೧೬, ನವೆಂಬರ್ ೧೯೫೭ರಂದು ದೈವಾಧೀನರಾದರು. ಅವರ ಅಂತ್ಯದರ್ಶನಕ್ಕೆ ಊರು, ಪರವೂರಿನಿಂದ ಬಹಳ ಜನ ಬಂದು ಸೇರಿದ್ದರು. ಬಂಟವಾಳಕ್ಕೆ ಬಂದು ಹೋಗುವ ಬಸ್ ಪ್ರಯಾಣಿಕರು ಮನೆಗೆ ಬಂದು ತಂದೆಯವರ ಅಂತ್ಯದರ್ಶನ ಮಾಡಿ ಹೋದರು. 'ಇಂದು ಬಂಟವಾಳ ಪೇಟೆಯ ಭವಿಷ್ಯ ಅಳಿಯಿತು' ಎಂಬ ಜನರ ಉದ್ಗಾರದೊಂದಿಗೆ ಬಂಟವಾಳ ಪೇಟೆಯ ವರ್ತಕರು ಅಂದು ವ್ಯಾಪಾರ ನಡೆಸದೆ ಅಂಗಡಿ ಮುಚ್ಚಿದರು. ನಮ್ಮ ತಂದೆಯವರು ಸುಮಾರು ನಾಲ್ಕು ದಶಕಗಳ ಕಾಲ ಬಂಟವಾಳದ ಪೇಟೆಯ ಶಿಸ್ತು, ಗೌರವ ಮತ್ತು ಏಕತೆಯನ್ನು ಕಾಯ್ದುಕೊಂಡು ಬಂದಿದ್ದರು. ಶ್ರೀಮಂತರು, ಬಡವರು, ದೊಡ್ಡವರು ಚಿಕ್ಕವರು, ಈ ಜಾತಿ, ಆ ಜಾತಿ, ಧರ್ಮ ಎಂದು ಭೇದಭಾವ ಮಾಡದೆ ಪ್ರತಿಯೊಬ್ಬರಿಗೂ ನ್ಯಾಯ ದೊರೆಯುವಂತೆ ಶ್ರಮಿಸಿ, ದಾನಧರ್ಮ ಮಾಡಿ, ಎಲ್ಲರಿಗೂ ನೆರವಾಗಿ ಪೇಟೆಯ, ಸಮುದಾಯದ, ಮಾನ, ಮರ್ಯಾದೆ ಕಾಪಾಡಿಕೊಂಡು ಬಂದಂತಹ ಮಹಾನ್ ವ್ಯಕ್ತಿತ್ವ ನನ್ನ ತಂದೆಯವರದು. ಅವರು ಎಲ್ಲರ ಕಾಳಜಿಯಲ್ಲಿ ತನ್ನತನವನ್ನು ಉಳಿಸಿಕೊಂಡು ಬಂದದ್ದರಿಂದಲೇ, ಅವರ ಮರಣ ಯಾತ್ರೆಯಲ್ಲಿ ಜನರು ಊರು, ಪರವೂರು, ಜಾತಿ, ಮತ ಗಣನೆಗೆ ತಾರದೆ ಅಪಾರ ಸಂಖ್ಯೆಯಲ್ಲಿ ನೆರೆದು ಕರ್ಮವಿಧಿಯಲ್ಲಿ ಭಾಗವಹಿಸಿದರು. ಅಂತಹ ಒಂದು ಶವಯಾತ್ರೆ ಆಮೇಲೆ ಬಂಟವಾಳದಲ್ಲಿ ನಡೆಯಲಿಲ್ಲ. ಹೀಗೆ ಅವರು ಬಂಟವಾಳದ ಚರಿತ್ರೆಯಲ್ಲಿ ಸೇರಿಕೊಂಡರು.

ಅವರು ತೀರಿಕೊಂಡ ಅನಂತರ ಮತ್ತು ಈಗಲೂ ಊರಿನ ಜನರು ಅವರ ವಿಷಯದಲ್ಲಿ ಗೌರವ, ಅಭಿಮಾನದಿಂದ ಉದ್ಗಾರ ತೆಗೆಯುವುದಿದೆ. ಹಿರಿಯರು ಹೇಳಿದ್ದನ್ನು ಕೇಳಿ ಈಗಿನ ಪೀಳಿಗೆಯವರು ಅವರ ಸಾಹಸ, ಅವರ ಸಮಾಜಸೇವೆ, ದೇವಸ್ಥಾನದಲ್ಲಿ ಮತ್ತು ಶ್ರೀ ಗುರುವರ್ಯರ ಬಳಿ ಅವರು ಮಾಡಿದ ಸೇವಾ ವಿಚಾರವಾಗಿ ನೆನಪಿಸಿಕೊಂಡು ಗೌರವದ ಭಾವನೆಯಿಂದ ಮಾತನಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ನಾನು ಬೇರೆ ಬೇರೆ ಕೆಲಸಗಳಿಗಾಗಿ ಪರವೂರಿಗೆ ಹೋದಾಗ ಬಸ್ತಿ ಮಾಧವ ಶೆಣೈ ಅವರ (ಮೋಟಾರ್ ಮಾಧವರ) ಮಗನೆಂದು ಹೇಳಿದರೆ ನನಗೆ ಎಲ್ಲಿ ಹೋದರೂ ಸ್ವಾಗತ ಸಿಗುತ್ತದೆ. ಜನರ ಮನಸ್ಸಿನಲ್ಲಿ ನನ್ನ ತಂದೆ ಅಂತಹ ಉನ್ನತಸ್ಥಾನವನ್ನು ಹೊಂದಿದ್ದರು.

ಅನಂತರದ ಐದು ವರ್ಷಗಳು (೧೯೫೭–೧೯೬೨)

ನನ್ನ ತಂದೆಯವರು ತೀರಿಕೊಂಡ ಬಳಿಕ ಸಿ.ಪಿ.ಸಿ. ಕಂಪನಿಯ ಬಂಟವಾಳ ಏಜೆಂಟ್ ಕೆಲಸ ನನಗೆ ಸಿಕ್ಕಿತು. ಸಂಬಳ ೬೦ ರೂಪಾಯಿ. ನಮ್ಮ ಹೊಟೇಲಿನ ಬಾಡಿಗೆಯೆಂದು ದಿನಕ್ಕೆ ೩ ರೂಪಾಯಿ ಕೈಗೆ ಬರುತ್ತಿತ್ತು. ಇಡೀ ಸಂಸಾರದ ಜವಾಬ್ದಾರಿ ನನ್ನ ಮೇಲೆ. ತಿಂಗಳ ಕೊನೆಗೆ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ಬೆಳಗ್ಗೆ ಮತ್ತು ರಾತ್ರಿ ಗಂಜಿಯೂಟ. ಯಾವುದೇ ಕಷ್ಟನಷ್ಟಗಳಿಲ್ಲದೆ, ಮಾನಾಪಮಾನಗಳಿಲ್ಲದೆ ದಿನಗಳು ಕಳೆಯುವಂತೆ ನೋಡಿಕೊಂಡವರು ನನ್ನ ತಾಯಿ. ನಮಗೆ ಯಾರಲ್ಲಿಯೂ ದೇಹಿ ಎನ್ನುವ ಪರಿಸ್ಥಿತಿ ಬರಬಾರದು ಎನ್ನುವ

ಪ್ರಯತ್ನ ಅವರದು. ಅವರೊಬ್ಬ ಆತ್ಮಗೌರವವಿದ್ದ ಮಹಿಳೆ. ಸಮಾಜದಲ್ಲಿ ನಮ್ಮ ತಂದೆಯವರಿಗೆ ಇದ್ದಂತಹ ಗೌರವವನ್ನು ನಾವು ಕಾಪಾಡಿಕೊಂಡು ಬರಬೇಕೆನ್ನುವುದು ಅವರ ಅಚಲ ನಿರ್ಧಾರ.

ನಮ್ಮ ಆದಾಯವನ್ನು ಹೆಚ್ಚಿಸುವ ದಾರಿಯ ಹುಡುಕಾಟದಲ್ಲಿ ನಾನಿದ್ದೆ. ಸಣ್ಣಂದಿನಿಂದ ನಾನು ಧರಿಸುತ್ತಿದ್ದುದು ಖಾದಿಯನ್ನು. ಅದನ್ನು ತಂದೆಯವರೇ ತಂದು ಕೊಡುತ್ತಿದ್ದರು. ಆಗ ಮಂಗಳೂರಿನ ಖಾದಿ ಭಂಡಾರದ ಮುಖ್ಯಸ್ಥರಾಗಿದ್ದವರು ನನಗೆ ಸೋದರ ಮಾವನಾಗಿ ಸಂಬಂಧಿಯಾಗಿದ್ದ ಗುರುಪುರ ಮುಕುಂದ ಪ್ರಭು. ಅವರೂ ನಮ್ಮ ತಂದೆಯ ದೊಡ್ಡ ಅಭಿಮಾನಿ. ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ನನ್ನ ಕರ್ತೃತ್ವವನ್ನು ನೋಡಿದ ಅವರು ನನ್ನನ್ನು ಮಂಗಳೂರಿಗೆ ಕರೆಯಿಸಿಕೊಂಡರು. ಬಂಟವಾಳದಲ್ಲಿ ಖಾದಿ ಭಂಡಾರದ ಶಾಖೆಯನ್ನು ತೆರೆಯುವಂತೆ ಆಹ್ವಾನ ನೀಡಿದರು. ಖಾದಿ ಮಾರಾಟದಿಂದ ೨೫ ಶೇಕಡ ಕಮಿಶನ್ ದೊರೆಯುತ್ತಿತ್ತು. ಆದರೆ ಖಾದಿ ಮಾರಾಟವನ್ನು ನಡೆಸುವುದು ಎಲ್ಲಿ ಎಂಬ ಪ್ರಶ್ನೆ ಬಂತು. ಆಗ ಬಂಟವಾಳದ ಪ್ರಸಿದ್ಧ ವ್ಯಕ್ತಿಗಳಾದ ಬಿ.ಪದ್ಮನಾಭ ವಿಠಲ ಬಾಳಿಗಾ ಅವರ ಸುಪುತ್ರರಾದ ಪುರುಷೋತ್ತಮ ಬಾಳಿಗ(ಗುಂಡಬಾಳೊ), ಪಾಂಡುರಂಗ ಬಾಳಿಗ ಮತ್ತು ಮಾಧವರಾಯ ಬಾಳಿಗ ಇವರು ನನ್ನ ಮೇಲಿನ ಅಭಿಮಾನದಿಂದ ಅವರ ಜವಳಿ ಮಳಿಗೆಯ ಮಹಡಿಯ ಮೇಲೆ ಖಾದಿ ಭಂಡಾರ ಪ್ರಾರಂಭಿಸಲು ಸ್ವಯಂ ಸ್ಫೂರ್ತಿಯಿಂದ ದೇವರ ಹಾಗೆ ಜಾಗ ನೀಡಿದರು. ಅವರದೇ ಬೀರುಗಳು, ಖಾದಿಬಟ್ಟೆ ಅಳೆದು ಕೊಡುವುದು ಅವರೇ. ಹೀಗೆ ಅವರು ನನಗೆ ಖಾದಿ ಭಂಡಾರ ತೆರೆಯುವುದಕ್ಕೆ ಜಾಗ ನೀಡಿ, ಸೂಕ್ತ ಮಾಹಿತಿಯನ್ನು ಒದಗಿಸಿ, ವ್ಯಾಪಾರ ನಡೆಸುವುದನ್ನು ಹೇಳಿಕೊಟ್ಟರು.

ನಾನು ಬಹಳ ಶ್ರಮಪಟ್ಟು ಬಂಟವಾಳ ಮತ್ತು ಅದರ ಸುತ್ತಮುತ್ತಲಿನ ಊರುಗಳಲ್ಲಿ ಪ್ರಚಾರ ಮಾಡಿ ಖಾದಿ ವ್ಯಾಪಾರವನ್ನು ಉತ್ತಮ ರೀತಿಯಲ್ಲಿ ಬೆಳೆಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ನನ್ನ ಖಾದಿ ವ್ಯಾಪಾರ ಅತ್ಯಂತ ಅಧಿಕಗೊಂಡಿತು. ಇದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಖಾದಿ ವ್ಯಾಪಾರದಲ್ಲಿ ನನ್ನ ತಮ್ಮ ಗಣಪತಿ ನನಗೆ ಆಗಾಗ ಸಹಾಯ ನೀಡುತ್ತಿದ್ದ.

ನಮ್ಮಲ್ಲಿ ಭಾದ್ರಪದ ತಿಂಗಳಲ್ಲಿ ಗೌರಿಹಬ್ಬವನ್ನು ಆಚರಿಸುತ್ತೇವೆ. ನನ್ನ ತಾಯಿ ಗೌರಿವ್ರತವನ್ನು ಬಹಳ ಭಕ್ತಿಭಾವದಿಂದ, ಶ್ರದ್ಧೆಯಿಂದ ನಡೆಸುತ್ತಾ ಬಂದವರು. ಹಬ್ಬದ ಎಲ್ಲಾ ತಯಾರಿಗಳನ್ನು ಸ್ವತಃ ಅವರೇ ಮಾಡಿಕೊಳ್ಳುತ್ತಿದ್ದರು. ಅಂದು ಸುಮಂಗಲಿಯರು ನಡೆಸುವ ವಾಯಣಪೂಜೆಯೂ ಇರುತ್ತಿದ್ದರಿಂದ, ಪೂಜೆಗೆ, ಊಟಕ್ಕೆಂದು ನಮ್ಮ ಮನೆಗೆ ಬಹಳ ಮಂದಿ ಹೆಂಗಸರು ಬರುತ್ತಿದ್ದರು. ನನ್ನ ತಂದೆಯವರು ತೀರಿಕೊಂಡ ಬಳಿಕ ನಮ್ಮಮನೆಯಲ್ಲಿ ಗೌರಿಹಬ್ಬ ನಿಂತುಹೋಯಿತು. ಇದರಿಂದ ನಮ್ಮ ತಾಯಿಗೆ ತುಂಬಾ ದುಃಖ ಉಂಟಾಯಿತು. ಈ ಕಾರಣಕ್ಕಾಗಿಯೇ ಅವರು ನನಗೆ ಬೇಗನೇ ಮದುವೆ ಮಾಡುವ ಹಠ ಹಿಡಿದರು.

ಅಂದು ನಾವಿದ್ದ ಸಂಕಷ್ಟದ ಪರಿಸ್ಥಿತಿಯಲ್ಲಿ ಬೇರೆ ಯಾರೇ ಇದ್ದರೂ ಮಗನ ಮದುವೆಯನ್ನು ನಡೆಸಲು ಮುಂದೆ ಬರುತ್ತಿರಲಿಲ್ಲ. ಅದರಲ್ಲಿಯೂ ನಮ್ಮ ಮನೆಯಲ್ಲಿ ಮದುವೆ ವಯಸ್ಸಿಗೆ ಬಂದ ತಂಗಿ ವಸಂತಿ ಇದ್ದಳು. ತಮ್ಮಂದಿರಾದ ವೆಂಕಟ್ರಮಣ, ಗಣಪತಿ ಮತ್ತು ಪಬ್ಬಾ ಇನ್ನೂ ಶಾಲೆಗೆ ಹೋಗುವ ವಯಸ್ಸಿನವರು. ಆದಾಯ ಕಡಿಮೆ. ಈ ಪರಿಸ್ಥಿತಿಯಲ್ಲಿ ನನ್ನ ಮದುವೆ ಮಾಡುವುದೆಂದರೆ? ಈ ಅಮ್ಮನಿಗೇನಾದರೂ ಹುಚ್ಚೇ? ಹೀಗೆ ನಾನು ಯೋಚಿಸುತ್ತಿದ್ದುದು ಅತ್ಯಂತ ಸ್ವಾಭಾವಿಕವಾಗಿತ್ತು. ಆದರೆ ಅಮ್ಮನೇ ಖುದ್ದಾಗಿ ನನ್ನ ಸೀಮಾ ಚಿಕ್ಕಮ್ಮನ ಭಾವನವರ ಮಗಳು ಯಶವಂತಿಯ ಜಾತಕವನ್ನು ತೆಗೆದುಕೊಂಡು ಬಂದರು. ಅವರಲ್ಲಿ ವರದಕ್ಷಿಣೆ ನೀಡುವುದಕ್ಕೆ ಏನೂ ಇರಲಿಲ್ಲ. ನಮ್ಮಲ್ಲಿಯೂ ಏನೂ ಇಲ್ಲ. ಹೀಗಾಗಿ ಪರಸ್ಪರ ತಿಳಿವಳಿಕೆಯಿಂದ ಮತ್ತು ಅದು ನನ್ನ ತಾಯಿಗೆ ತಿಳಿದ ಕುಟುಂಬವಾದ್ದರಿಂದ ನೆಂಟಸ್ತಿಕೆ ಕೂಡಿ ಬಂತು. ಏಪ್ರಿಲ್ ೨೭, ೧೯೫೫ರಲ್ಲಿ ನನ್ನ ಮದುವೆ ಮೂಡುಬಿದ್ರಿಯಲ್ಲಿ ನಡೆದೇ ಹೋಯಿತು. ಮದುಮಗಳು ನಮ್ಮ ಮನೆಗೆ ಬಂದ ಬಳಿಕ ಸಂಪ್ರದಾಯದಂತೆ ಅವಳಿಗೆ 'ಸಾವಿತ್ರಿ' ಎಂಬ ಹೊಸ ಹೆಸರನ್ನು ನೀಡಲಾಯಿತು.

ಈ ನಡುವೆ ನಮ್ಮ ಮನೆಯಿದ್ದ ಜಾಗದ ಮಾಲೀಕರಾದ ಬಿ. ಸರ್ವೋತ್ತಮ ಯಾನೆ ಶೇಷಗಿರಿ ಬಾಳಿಗ ಅವರು ನಮಗೆ ತೊಂದರೆ ನೀಡಲಾರಂಭಿಸಿದರು. ನಾವು ಮನೆ ಕಟ್ಟಿದ ಜಾಗ ಅವರಿಗೆ ಸೇರಿದ್ದು. ನನ್ನ ತಂದೆ ವಾರ್ಷಿಕ ನೂರು ರೂಪಾಯಿ ಸ್ಥಳ ಬಾಡಿಗೆಗೆ ಪಡೆದು ಸ್ವಂತ ದುಡ್ಡಿನಿಂದ ಮನೆ ಕಟ್ಟಿಸಿದ್ದರು. ನನ್ನ ತಂದೆ ಬದುಕಿರುವವರೆಗೆ ಅವರಿಂದ ಯಾವುದೇ ತಕರಾರು ಇರಲಿಲ್ಲ. ಇಪ್ಪತ್ತು ಮೂವತ್ತು ವರ್ಷಗಳ ಕೆಳಗೆ ಬಂಟವಾಳ ಪೇಟೆಯಲ್ಲಿ ದೊಡ್ಡ ವ್ಯಾಪಾರಿಯಾಗಿದ್ದ ಸರ್ವೋತ್ತಮ ಬಾಳಿಗರು

ವ್ಯಾಪಾರದಲ್ಲಿ ನಷ್ಟ ಮಾಡಿಕೊಂಡು ಕಂಗಾಲಾದವರು. ಆಮೇಲೆ ಅವರು ತಮ್ಮ ಮಕ್ಕಳ ಜೊತೆಯಲ್ಲಿ ನಿಷ್ಠುರ ಕಟ್ಟಿಕೊಂಡರು. ತನ್ನ ಮನೆಯಿದ್ದ ಜಾಗವನ್ನು ಮಾರಿ ಕುಟುಂಬ ಸಮೇತ ಮಂಗಳೂರಿಗೆ ಹೋಗಿ ಅಲ್ಲಿ ಮನೆ ಮಾಡಿ ಇರುತ್ತಿದ್ದರು. ನನ್ನ ತಂದೆಯವರು ತೀರಿಕೊಂಡ ನಂತರ ನಮಗೆ ಮನೆ ಬಿಡುವಂತೆ ಅವರು ನೋಟೀಸ್ ಕಳುಹಿಸಿದರು. ಆಗ ನಾನು ಬಹಳ ಕಷ್ಟದಲ್ಲಿದ್ದೆ. ನನ್ನ ಮದುವೆ ನಿಶ್ಚಯವಾಗಿತ್ತು. ನನಗೆ ಕಾನೂನಿನ ಜ್ಞಾನ ಇರಲಿಲ್ಲ. ನನ್ನ ಸ್ನೇಹಿತರು ನನ್ನನ್ನು ನ್ಯಾಯವಾದಿ ಯು. ರಾಮನಾಥ ಕಿಣಿಯವರಲ್ಲಿ ಕರೆದುಕೊಂಡು ಹೋಗಿ ಬಾಳಿಗರ ನೋಟೀಸಿಗೆ ಉತ್ತರ ನೀಡಲು ನೆರವಾದರು. ಆಮೇಲೆ ನಾವು ಸಂಧಾನದಲ್ಲಿ ಇತ್ಯರ್ಥ ಮಾಡಿಕೊಳ್ಳೋಣವೆಂದು ನಮ್ಮೊಂದಿಗೆ ಮಾತನಾಡಲು ಸರ್ವೋತ್ತಮ ಬಾಳಿಗರು ಬಂದರು. ಅಷ್ಟರಲ್ಲಿ ನಾನು ಕೂಡ ಕೋರ್ಟು, ವ್ಯಾಜ್ಯ ಇತ್ಯಾದಿ ರಗಳೆ ಬೇಡವೆಂಬ ನಿರ್ಧಾರವನ್ನು ಕೈಗೊಂಡಿದ್ದೆ. ಅವರು ನಮ್ಮ ತಂದೆ ಕಟ್ಟಿಸಿದ ಮನೆಯ ಬಾಬ್ತು ನಮಗೆ ೮೦೦ ರೂ ನೀಡುವುದು ಮತ್ತು ನಾವು ಮನೆ ಬಿಟ್ಟು ಬೇರೆ ಹೋಗುವುದು ಹೀಗೆ ತೀರ್ಮಾನ ಕೈಗೊಂಡೆವು. ಅವರು ನೀಡಿದ ೮೦೦ ರೂಪಾಯಿಗಳನ್ನು ನಾನು ತಂಗಿ ವಸಂತಿಯ ಮದುವೆ ಖರ್ಚಿಗೆ ಇರಲೆಂದು ಆಲೋಚಿಸಿ ಅವಳ ಹೆಸರಿನಲ್ಲಿಯೇ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟೆ ಮತ್ತು ನಾವು ಮನೆಯನ್ನು ಬಾಳಿಗರಿಗೆ ಬಿಟ್ಟು ಕೊಟ್ಟು ಬಂಟವಾಳದ ಕಾಮ್ತಿಯವರ ಓಣಿಯಲ್ಲಿದ್ದ ಮನೆಯಲ್ಲಿ ಇರತೊಡಗಿದೆವು.

ಹೀಗಿರುವಾಗಲೇ, ನನ್ನ ತಂದೆ ರಾತ್ರಿ ಹಗಲು ನೀಡಿದ ಸೇವೆಗೆ ಮಾನ್ಯತೆ ತೋರಿಸಿ ಸಿ.ಪಿ.ಸಿ. ಕಂಪನಿಯವರು ಪರಿಹಾರವೆಂದು ೮೦೦ ರೂಪಾಯಿ ನೀಡಿದರು. ಆ ಮೊತ್ತವನ್ನು ಕೂಡ ನಾನು ವಸಂತಿಯ ಮದುವೆಯ ಖರ್ಚಿಗೆಂದು ಅವಳ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಇಟ್ಟೆ.

ನನ್ನ ಹೆಗಲ ಮೇಲೆ ವಸಂತಿಗೆ ನೆಂಟಸ್ತಿಕೆ ಹುಡುಕಿ, ಮದುವೆ ಮಾಡುವ ಜವಾಬ್ದಾರಿ ಇತ್ತು. ಅಲ್ಲಿ ಇಲ್ಲಿ ಹುಡುಕಿ ಹೋದರೂ ನೆಂಟಸ್ತಿಕೆ ಕೂಡಿ ಬರಲಿಲ್ಲ. ಆದರೆ ದೇವರ ದಯೆಯಿಂದ ನಮಗೆ ಮುಂಬಯಿಯ ಥಾಣೆ ನಗರದಲ್ಲಿ ವಾಸವಾಗಿದ್ದ ಪಾಣೆಮಂಗಳೂರಿನ ಶ್ರೀ ನಂದಾವರ ರಮೇಶ ಪ್ರಭು ಅವರ ಸಹಾಯದಿಂದ ರಾಘವೇಂದ್ರ ಶಾನಭಾಗರ ಎರಡನೆಯ ಸುಪುತ್ರ ರಮೇಶ ಶಾನಭಾಗರ ಸಂಬಂಧ ಕೂಡಿ ಬರುವ ಹಾಗಾಯಿತು.

ಬಹಳ ವರ್ಷಗಳ ಹಿಂದೆ ಶ್ರೀ ರಾಘವೇಂದ್ರ ಶಾನಭಾಗರು ಕೆನರಾ ಜಿಲ್ಲೆಯಲ್ಲಿ ಸಹಕಾರ ಇಲಾಖೆಯ ಇನ್ಸ್‌ಪೆಕ್ಟರ್ ಆಗಿದ್ದಾಗ ಬಂಟವಾಳದಲ್ಲಿ (ಅದು ಅವರ ಮಾವನ ಊರು) ಇರುತ್ತಿದ್ದರು. ಅವರಿಗೆ ನನ್ನ ತಂದೆಯವರ ಪರಿಚಯವಿತ್ತು ಮತ್ತು ಅವರ ಅಭಿಮಾನಿಗಳಾಗಿಯೂ ಇದ್ದರು. ಶ್ರೀ ರಮೇಶ ಪ್ರಭುಗಳಿಗೆ ಅವರ ಬಾಲ್ಯದಲ್ಲಿ ಎಸ್.ಎಸ್.ಎಲ್.ಸಿ. ಕಲಿತು ಬಂಟವಾಳದಿಂದ ಮುಂಬಯಿಗೆ ಹೋಗಲು ನನ್ನ ತಂದೆಯವರು ಸಹಾಯ ಮಾಡಿದ್ದರಂತೆ. ಅದನ್ನು ನೆನಪಿನಲ್ಲಿ ಇಟ್ಟುಕೊಂಡು ಅವರು ನನ್ನ ತಂಗಿ ವಸಂತಿಯ ನೆಂಟಸ್ತಿಕೆ ಮಾಡಲು ಮುಂದೆ ಬಂದರು. ಅವರು ರಾಘವೇಂದ್ರ ಶಾನಭಾಗರ ಮನೆಗೆ ಹೋಗಿ ಬಂಟವಾಳ ಮೋಟಾರ ಮಾಧವ ಶೆಣ್ಯೆಯವರ ಮಗಳ ಜಾತಕ ತೆಗೆದುಕೊಂಡು ಬಂದಿದ್ದೇನೆ ಎಂದು ಹೇಳಿದರಂತೆ. ಆಗ ರಾಘವೇಂದ್ರ ಶಾನಭಾಗರು ಜಾತಕಗೀತಕ ಏನೂ ನೋಡುವುದು ಬೇಡ, ನಮಗೆ ಸಂಬಂಧ ಆಗಬಹುದು ಎಂದು ಹೇಳಿದರಂತೆ. ಅದು ರಮೇಶ ಮಾಮನವರು ನನಗೆ ಬರೆದ ಪತ್ರದಲ್ಲಿ ಇತ್ತು. ಅನಂತರ ನಾನು ವಸಂತಿಯನ್ನು ಕರೆದುಕೊಂಡು ಚಿಕ್ಕಮಗಳೂರಿನಿಂದ ಅನಸೂಯಕ್ಕನ ಜೊತೆ ರೈಲಿನಲ್ಲಿ ಥಾಣೆಗೆ ಹೋದೆ. ಅವರು ವಸಂತಿಯನ್ನು ನೋಡಿದರು. ರಮೇಶ ಭಾವನವರೂ ಒಪ್ಪಿಕೊಂಡದ್ದರಿಂದ ನೆಂಟಸ್ತಿಕೆಯಾಗುವುದು ಖಚಿತವಾಯಿತು.

ಅದರ ಅನಂತರ ವಿವಾಹಕ್ಕೆ ಸಂಬಂಧಿಸಿದ ಎಲ್ಲಾ ತಯಾರಿಗಳನ್ನು ಶ್ರೀ ರಮೇಶ ಮಾಮ ಮತ್ತು ಅವರ ಪತ್ನಿಯೇ ನಡೆಸಿದರು. ವಸಂತಿಯ ಮದುವೆ ಥಾಣೆಯಲ್ಲಿ ದಶಂಬರ್ ೧೬, ೧೯೬೧ರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ನಮಗೆ ರಮೇಶ ಮಾಮರು ನೀಡಿದ ಸಹಾಯವನ್ನು ನಾವು ಎಂದೂ ಮರೆಯುವ ಹಾಗಿಲ್ಲ. ಅವರು ಬಹಳ ಕಡಿಮೆ ಖರ್ಚಿನಲ್ಲಿ ಮದುವೆ ನಡೆಯುವಂತೆ ನೋಡಿಕೊಂಡರು. ಮದುವೆಗೆ ಮುಂಬಯಿಯಲ್ಲಿದ್ದ ನನ್ನ ತಂದೆಯವರ ಸ್ನೇಹಿತರು ಮತ್ತು ಅಭಿಮಾನಿಗಳು ಬಹು ಸಂಖ್ಯೆಯಲ್ಲಿ ಬಂದಿದ್ದರು. ನಮ್ಮ ವಾಸು ಚಿಕ್ಕಪ್ಪ, ವಿಶ್ವನಾಥ ಭಾವ ಮತ್ತು ಅನಸೂಯಕ್ಕನವರು ತುಂಬಾ ಸಹಾಯ ಮಾಡಿದರು. ಅದನ್ನೂ ನಾವು ಮರೆಯುವಂತಿಲ್ಲ.

ನನ್ನ ಭಾವ ರಮೇಶ ಶಾನಭಾಗ್ ರೈಲ್ವೆಯಲ್ಲಿ ಕ್ಲರ್ಕ್ ಆಗಿದ್ದರು. ಆಮೇಲೆ ರೇಡಿಯೋ ಅಧಿಕಾರಿ (ರೇಡಿಯೋ ಆಫೀಸರ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದೇಶಿ ಹಡಗಿನಲ್ಲಿ ರೇಡಿಯೋ ಅಧಿಕಾರಿಯಾಗಿ ಕೆಲಸಕ್ಕೆ ಸೇರಿಕೊಂಡರು. ನಿವೃತ್ತಿ ಹೊಂದಿದ ಬಳಿಕ ಬೆಂಗಳೂರಿನಲ್ಲಿದ್ದು ಆಮೇಲೆ ಮೂರು

ವರ್ಷಗಳ ಹಿಂದೆ ಮೈಸೂರಿನಲ್ಲಿ ಮನೆ ಮಾಡಿ ಇರುತ್ತಿದ್ದರು. ಇತ್ತೀಚಿಗಷ್ಟೇ ಅವರು ತೀರಿಕೊಂಡಿದ್ದಾರೆ.

ಈ ನಡುವೆ ಸಾಂಸಾರಿಕ ಜವಾಬ್ದಾರಿ, ಸಿ.ಪಿ.ಸಿ. ಕಚೇರಿಯ ಕೆಲಸ ಮತ್ತು ಖಾದಿ ಭಂಡಾರದ ಕೆಲಸವಿದ್ದರೂ, ನನ್ನ ಸಾರ್ವಜನಿಕ ಕ್ಷೇತ್ರದ ಕೆಲಸಕ್ಕೆ ತಡೆ ಬಂದಿರಲಿಲ್ಲ. ಹಣದ ಬಲವಿಲ್ಲದಿದ್ದರೂ, ನನಗೆ ರಕ್ತಗತವಾಗಿ ಬಂದಂತಹ ಸಂಘಟನಾ ಶಕ್ತಿ, ಸೇವಾಭಾವದ ಕಾರಣದಿಂದಾಗಿ ಶ್ರೀಮಂತರು-ಬಡವರು, ಜಾತಿ-ಪರಜಾತಿ, ಮತ್ತು ರಾಜಕೀಯ ಪಕ್ಷಗಳ ಭೇದಭಾವ ಇಲ್ಲದೇ ಊರಿನಲ್ಲಿ ಸಾರ್ವಜನಿಕ ಸೇವೆ ಮಾಡುವ ಉತ್ತಮ ಅವಕಾಶ ದೊರೆಯಿತು.

ಆ ದಿನಗಳಲ್ಲಿ ನಾನು ಮಂಗಳೂರಿನಲ್ಲಿ ಪ್ರಾರಂಭವಾದ ದ.ಕ. ಜಿಲ್ಲಾ ಯುವಕಾಂಗ್ರೆಸ್ ಸಮಿತಿಯಲ್ಲಿ ಸದಸ್ಯನಾಗಿದ್ದೆ. ಶ್ರೀ ಟಿ.ಎ.ಪೈ ಅಧ್ಯಕ್ಷರಾಗಿದ್ದು, ಯುವ ಸ್ವಾತಂತ್ರ್ಯ ಯೋಧ ಲೋಕಯ್ಯ ಶೆಟ್ಟಿ, ರಾಮರಾಜ ಕಿಣಿ ಇವರ ಜೊತೆಯಲ್ಲಿ ನಾನು ಯುವ ಕಾಂಗ್ರೆಸ್ ಸದಸ್ಯನಾಗಿ ಕೆಲಸ ಮಾಡುತ್ತಿದ್ದೆ. ಬಂಟವಾಳ ತಾಲುಕಿನ ಬೇರೆ ಬೇರೆ ಕಡೆಗಳಲ್ಲಿ ಯುವ ಕಾಂಗ್ರೆಸ್ ಶಾಖೆಗಳನ್ನು ಪ್ರಾರಂಭಿಸಿದೆ. ಬಂಟವಾಳದಲ್ಲಿ ಶ್ರೀ ಹಿರಿಯಡ್ಕ ರಾಮರಾಯ ಮಲ್ಯ ಅವರ ನೇತೃತ್ವದಲ್ಲಿ ಖಾದಿ ಆಂದೋಲನ ನಡೆದಾಗ ಸದಸ್ಯನಾಗಿ ಗಾಂಧಿತತ್ವ, ಖಾದಿ ಗ್ರಾಮೋದ್ಯೋಗ, ಹರಿಜನ ಉದ್ಧಾರ ಇತ್ಯಾದಿ ಕೆಲಸಗಳಲ್ಲಿ ಮಗ್ನನಾಗಿದ್ದೆ.

●●

೬. ಸರಸ್ವತಿ ಕಲಾ ಪ್ರಸಾರಕ ಸಂಘ : ಸರಸ್ವತಿ ಸಂಗೀತ ಶಾಲೆ

ಬಹಳ ಹಿಂದಿನಿಂದಲೇ ಬಂಟವಾಳ ಹಿಂದೂಸ್ತಾನಿ ಮತ್ತು ಕರ್ನಾಟಕಿ ಸಂಗೀತಕ್ಕೆ, ಸಂಗೀತದ ಕಾರ್ಯಕ್ರಮಗಳಿಗೆ ಪ್ರಸಿದ್ಧವಾಗಿದ್ದ ಊರು. ಮಂಗಳೂರಿಗೆ ಭೇಟಿ ನೀಡುವ ಪ್ರಸಿದ್ಧ ಸಂಗೀತ ಕಲಾವಿದರು ಬಂಟವಾಳಕ್ಕೂ ಬರುತ್ತಿದ್ದರು. ಶ್ರೀ ಎನ್. ಆರ್. ಬಂಟ್ವಾಳಕರ್ (ನಾಟಕಾ ನಾಣ್ಣು) ಮತ್ತು ಪಂಡಿತ್ ಗುರುಪುರ ಮಾಧವ ಭಟ್ಟ್ ಈ ಮಹನೀಯರು ಬಂಟವಾಳದಲ್ಲಿ ಉತ್ತಮ ಸಂಗೀತ ಕಚೇರಿಗಳ ಆಯೋಜನೆ ಮಾಡಿ ಪ್ರಸಿದ್ಧ ಸಂಗೀತಗಾರರನ್ನು ಕರೆಯಿಸಿಕೊಳ್ಳುವ ವ್ಯವಸ್ಥೆ ಇತ್ಯಾದಿ ಮಾಡುತ್ತಿದ್ದರು. ಹೀಗಾಗಿ ಜಗತ್ಪ್ರಸಿದ್ಧರಾದ, ಸಂಗೀತ ಸಾಮ್ರಾಟ್ ಪಂಡಿತ ಭೀಮಸೇನ ಜೋಶಿಯವರು ಮೊದಲ ಬಾರಿ ಮಂಗಳೂರಿಗೆ ಬಂದಿದ್ದಾಗ, ಬಂಟವಾಳಕ್ಕೆ ಬಂದು ೧೯೪೬ರಲ್ಲಿಯೇ ಸಂಗೀತ ಕಚೇರಿಯನ್ನು ನೀಡಿದ್ದಾರೆ.

ಸಂಗೀತ ಕಲಾವಿದರಿಗೆ ಪ್ರೋತ್ಸಾಹ ನೀಡಲು ಮತ್ತು ಸಂಗೀತ ಕಚೇರಿಗಳ ಆಯೋಜನೆಯನ್ನು ನಡೆಸುವ ಉದ್ದೇಶದಿಂದ ನಾವು ೧೯೫೮ರಲ್ಲಿ ಸರಸ್ವತಿ ಕಲಾ ಪ್ರಸಾರಕ ಸಂಘ'ವನ್ನು ಸ್ಥಾಪಿಸಿದೆವು. ಇದರ ಮುಖಂಡತ್ವವನ್ನು ವಹಿಸಿದ್ದ ಪಂಡಿತ ಗುರುಪುರ ಮಾಧವ ಭಟ್ ಅವರ ಮನೆಯಲ್ಲಿಯೇ ಸಂಗೀತ ಕಚೇರಿಯನ್ನು ನಡೆಸಲಾಗುತ್ತಿತ್ತು. ಅವರು ಸ್ವತಃ ಶಾಸ್ತ್ರೀಯ ಸಂಗೀತದ ವಿದ್ವಾನರು. ಆಮೇಲೆ ಅವರು ಡಾ. ಟಿ.ಎಂ.ಎ.ಪೈ ಸಂಗೀತ ಮಹಾವಿದ್ಯಾಲಯದ ಪ್ರಥಮ ಪ್ರಾಂಶುಪಾಲರಾಗಿ ಉಡುಪಿಗೆ ತೆರಳಿದರು.

ನಾನು ೧೯೫೮ರಲ್ಲಿ ಸರಸ್ವತಿ ಕಲಾ ಪ್ರಸಾರಕ ಸಂಘದ ಕಾರ್ಯದರ್ಶಿಯಾದೆ. ಬಂಟವಾಳದಲ್ಲಿ ಖ್ಯಾತ ಸಂಗೀತಗಾರರ ಕಾರ್ಯಕ್ರಮಗಳನ್ನು ಆಯೋಜಿಸುವುದು ಮಾತ್ರವಲ್ಲ ನಮ್ಮ ಊರಿನ ಮತ್ತು ನೆರೆಯೂರಿನ ಎಳೆಯ ವಿದ್ಯಾರ್ಥಿಗಳಿಗೆ ಸಂಗೀತ ಪಾಠ ಹೇಳಿಕೊಡುವ ಉದ್ದೇಶದಿಂದ ನಮ್ಮ ಸಂಘದ ಆಡಳಿತ ಮಂಡಳಿಯು ಸಂಗೀತ ಶಾಲೆಯನ್ನು ಪ್ರಾರಂಭಿಸಬೇಕೆಂಬ ಠರಾವನ್ನು ನಾನು ಮಂಡಿಸಿದೆ. ಅದು ವಾರ್ಷಿಕ ಸಭೆಯಲ್ಲಿ ಮಂಜೂರಾಗಿ,"ಸರಸ್ವತಿ ಸಂಗೀತ ಶಾಲೆ" ಪ್ರಾರಂಭವಾಯಿತು.

ಈ ಶಾಲೆಯಲ್ಲಿ ಪಂಡಿತ ಮಾಧವ ಭಟ್ ಪ್ರಾಂಶುಪಾಲರಾದರು. ವಿದ್ಯಾರ್ಥಿಗಳಿಗೆ ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಶಿಕ್ಷಣ ದೊರೆಯುವ ವ್ಯವಸ್ಥೆಯನ್ನು ಮಾಡಲಾಯಿತು. ನಾನು ಮಂಗಳೂರಿಗೆ ಹೋಗಿ ಆ ಕಾಲದ ಉನ್ನತ ಸಂಗೀತ ಶಿಕ್ಷಕರಾಗಿದ್ದ ಗುಲ್ವಾಡಿ ರತ್ನಾಕರ ಭಟ್ಟ್, ಪಂಡಿತ ಎಂ. ವೆಂಕಟೇಶ ಭಟ್ಟ್ ಮೊದಲಾದವರನ್ನು ಸಂಪರ್ಕಿಸಿ ಅವರು ವಾರಕ್ಕೆ ಎರಡು ದಿನ ಬಂಟವಾಳಕ್ಕೆ ಬಂದು ಸರಸ್ವತಿ ಸಂಗೀತ ಶಾಲೆಯಲ್ಲಿ ಸಂಗೀತ ತರಗತಿಗಳನ್ನು ನಡೆಸುವ ಏರ್ಪಾಟು ಮಾಡಿದೆ. ಅಧ್ಯಕ್ಷರಾದ ಬೋಳಂತೂರು ಲಕ್ಷ್ಮೀನಾರಾಯಣ ಪ್ರಭು, ಯೋಗೀಶ ಬಾಳಿಗ, ಬಿ. ಕೇಶವರಾಯ ಶೆಣ್ಯೈ, ಬಿ. ವಿಶ್ವನಾಥ ಬಾಳಿಗ ಮೊದಲಾದ–ವರೊಂದಿಗೆ ನಾನು ಕೂಡ ಕೊಳಲು ಮತ್ತು ತಬಲಾ ಕಲಿಯಲು ಸಂಗೀತ ತರಗತಿಗಳಿಗೆ ಸೇರಿದ್ದೆ. ಅಲ್ಲಿ ಗೌರವ ಶಿಕ್ಷಕರಾಗಿದ್ದವರು ಅನಂತ ಮಾಸ್ತರ ಮತ್ತು ದಾಸ ಮಾಸ್ತರರು. ಶ್ರೀಮತಿ ಸುಶೀಲಾ ಬಾಯಿಯವರು ಚಿಕ್ಕ ಮಕ್ಕಳಿಗೆ ಸಂಗೀತ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು.

೧೯೬೨ನೇ ಇಸವಿಯಲ್ಲಿ ಮೈಸೂರು ಸರಕಾರವು ಹಿಂದೂಸ್ತಾನಿ ಸಂಗೀತ ಶಿಕ್ಷಣಕ್ಕೆ ಮಾನ್ಯತೆಯನ್ನು ನೀಡಿತು. ಮಂಗಳೂರಿನಲ್ಲಿ ಹಿಂದೂಸ್ತಾನಿ ಸಂಗೀತದ ಪರೀಕ್ಷಾ ಕೇಂದ್ರವೊಂದು ತೆರೆಯಲ್ಪಟ್ಟಾಗ ಸರಸ್ವತಿ ಸಂಗೀತ ಶಾಲೆಯಿಂದ ೪೮ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು (ಹಿಂದೂಸ್ತಾನಿ ಮತ್ತು ಕರ್ನಾಟಕಿ) ಮಂಗಳೂರಿಗೆ ಹೋಗಿ ಪರೀಕ್ಷೆ ನೀಡಿ ಬಂದರು. ಆಗ ಮಂಗಳೂರಿನಲ್ಲಿ ಅಥವಾ ಬೇರೆ ಯಾವುದೇ ಊರಿನಲ್ಲಿ ಸಂಗೀತ ವಿದ್ಯಾರ್ಥಿಗಳು ಇಷ್ಟು ಸಂಖ್ಯೆಯಲ್ಲಿ ಇರಲಿಲ್ಲ. ಧಾರವಾಡದ ಪ್ರಸಿದ್ಧ ಹಿಂದೂಸ್ತಾನಿ ವಿದ್ವಾಂಸರಾದ ಪಂಡಿತ ಶ್ರೀ ಬಸವರಾಜ ರಾಜಗುರು ಅವರು ಮಂಗಳೂರು ಕೇಂದ್ರದ ಪರೀಕ್ಷಾ ವೀಕ್ಷಕರಾಗಿ ಬಂದಿದ್ದರು. ಬಂಟವಾಳದ ಸರಸ್ವತಿ ಸಂಗೀತ ಶಾಲೆಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪರೀಕ್ಷಾರ್ಥಿಗಳಾಗಿ ಬಂದದ್ದು ನೋಡಿ ಅವರಿಗೆ ತುಂಬಾ ಆಶ್ಚರ್ಯ ಮತ್ತು ಅಭಿಮಾನವೆನಿಸಿತು.

ಅವರು ತಮ್ಮ ಸಂತೋಷ ಮತ್ತು ಪ್ರಶಂಸೆಯನ್ನು ವ್ಯಕ್ತಪಡಿಸಿ ತಾನು ರಾತ್ರಿ ಬಂಟವಾಳಕ್ಕೆ ಬಂದು ಸಂಗೀತ ಕಚೇರಿ ನೀಡುವೆನೆಂದು ತಿಳಿಸಿದರು. ನಾವು ರಾತ್ರಿ ಹೊತ್ತು ಪ್ರಾಥಮಿಕ ಶಾಲೆಯಲ್ಲಿ ಅವರ ಕಚೇರಿಯ ವ್ಯವಸ್ಥೆ ನಡೆಸಿದೆವು. ಸಭೆಯಲ್ಲಿ ಸಂಗೀತ ಪ್ರೇಮಿಗಳು ಕಿಕ್ಕಿರಿದು ತುಂಬಿದ್ದರು. "ನಿಮ್ಮ ಊರಿನ ಸಂಗೀತಶಾಲೆಯ ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಸಂಗೀತ ಪರೀಕ್ಷೆಯಲ್ಲಿ ಹಾಜಾರಿದ್ದುದನ್ನು ನೋಡಿ ನನಗೆ ಸಂತೋಷ ಉಂಟಾಗಿದೆ. ನೀವು ನನ್ನ ಮಾನ ಉಳಿಸಿದಿರಿ" ಎಂದು ಅವರು ಹೊಗಳಿದರು.

ಪ್ರತಿ ವರ್ಷ ಸರಸ್ವತಿ ಸಂಗೀತ ಕಲಾ ಪ್ರಸಾರಕ ಸಂಘದ ವತಿಯಿಂದ ೩ ದಿನಗಳ ಸಂಗೀತ ಸಮಾರಂಭ ನಡೆಯುತ್ತಿತ್ತು. ಅದರ ಜೊತೆಯಲ್ಲಿ ಸಂಗೀತ ಸ್ಪರ್ಧೆಯೂ ನಡೆಯುತ್ತಿತ್ತು. ಕಾಸರಗೋಡಿನಿಂದ ಉಡುಪಿಯವರೆಗೆ ಇದ್ದಂತಹ ಸಂಗೀತ ಶಾಲೆಗಳ ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ಈ ಸಂಗೀತ ಸ್ಪರ್ಧೆಯಲ್ಲಿ (ಕರ್ನಾಟಕಿ ಮತ್ತು ಹಿಂದೂಸ್ತಾನಿ) ಭಾಗವಹಿಸುತ್ತಿದ್ದರು. ಸಂಗೀತ ಸಮಾರಂಭದಲ್ಲಿ ಪ್ರಖ್ಯಾತ ಸಂಗೀತ ಕಲಾವಿದರನ್ನು ಕರೆಯಿಸಿ ಕಚೇರಿ ನಡೆಸಲಾಗುತ್ತಿತ್ತು. ನಾನು ಸರಸ್ವತಿ ಸಂಗೀತ ಕಲಾಪ್ರಸಾರಕ ಸಂಘದ ಕಾರ್ಯದರ್ಶಿಯಾಗಿ, ಆಮೇಲೆ ಅಧ್ಯಕ್ಷನಾಗಿಯೂ ಕಾರ್ಯ ನಿರ್ವಹಿಸಿದ್ದೇನೆ. ಪ್ರತೀ ರಾತ್ರಿ ನಾವು ೮-೧೦ ಮಂದಿ ಸಂಘದ ಮಹಡಿಯಲ್ಲಿ ಕುಳಿತು ರಿಯಾಜ್ ಮಾಡುತ್ತಿದ್ದೆವು. ಶ್ರೀ ದಾಸ ಮಾಸ್ತರ (ಕಾಮತ್)ರು ಮಾಡಿದ ತ್ಯಾಗ, ನಮಗೆ ಸ್ಫೂರ್ತಿದಾಯಕವಾಗಿದೆ.

ಹೀಗೆ ರಾಜಕೀಯ, ಸಾಮಾಜಿಕ ಕಾರ್ಯಕರ್ತನಾಗಿ ಸಂಗೀತ, ನಾಟಕಗಳ ರಂಗಕರ್ಮಿಯಾಗಿಯೂ, ನಾನು ನನ್ನ ತಾರುಣ್ಯದ ದಿನಗಳಲ್ಲಿ ಜನರಿಂದ ಉತ್ತಮ ಪ್ರಶಂಸೆಯನ್ನು ಪಡೆಯುವ ಹಾಗಾಯಿತು.

೧೯೫೪ರಿಂದ ೧೯೬೨ನೇ ಇಸವಿಯವರೆಗೆ, ಎಂಟು ವರ್ಷಗಳ ಕಾಲ ನಾನು ನನ್ನ ಮನೆಯವರು ಬಹಳ ಕಷ್ಟ, ಗಂಡಾಂತರಗಳನ್ನು ಅನುಭವಿಸಿದ್ದೇವೆ. ಆದರೂ ಹಣದ ತಾಪತ್ರಯ ಮಿತಿಮೀರಿ ಹೋಗುತ್ತಿದ್ದಾಗಲೂ, ಆ ಪರಿಸ್ಥಿತಿಯನ್ನು ನಿಭಾಯಿಸಲು ನನ್ನ ತಂದೆಯವರು ತೋರಿಸಿ ಕೊಟ್ಟ ಧೈರ್ಯದ ಹಾದಿಯಲ್ಲಿ ನಾನು ಕ್ರಮಿಸಿದ್ದರಿಂದ ನಮ್ಮ ಮನೆತನದ ಮರ್ಯಾದೆಗೆ ಯಾವ ಊನವೂ ಬರಲಿಲ್ಲ.

ತಂದೆಯವರ ನಂತರ ಮನೆಯ ಜವಾಬ್ದಾರಿ ನನ್ನ ಹೆಗಲಿಗೆ ಬಂತು. ತಂದೆಯವರ ಸತ್ಯದ ಪರವಾದ ಧೀರ ಮನೋಧರ್ಮ, ಯಾವುದೇ ಕೆಡುಕಿನ ಪರಿಸ್ಥಿತಿ ಬಂದರೂ, ಆ ವೆಂಕಟರಮಣ ಸ್ವಾಮಿಯ ಮೇಲೆ ಇಟ್ಟಂತಹ ನಂಬಿಕೆಯನ್ನು, ಸತ್ಯ ಧರ್ಮವನ್ನು ಕೈಬಿಡದೆ, ಕಷ್ಟವನ್ನು ಎದುರಿಸುವ ಮನೋಬಲ -ಇವು ನನಗೆ ಬಳುವಳಿಯಾಗಿ ಬಂದಿದ್ದರಿಂದ, ಭವಿಷ್ಯದಲ್ಲಿ ನಾನು ಎದುರಿಸಿದ ದುಃಖದ ಅಥವಾ ಸುಖದ ದಿನಗಳಲ್ಲಿ ಸತ್ಯ ಮತ್ತು ಧರ್ಮವನ್ನು ಮರೆಯದೆ ಧೈರ್ಯದಿಂದ ಮುಂದೆ ನಡೆಯುವ ದಾರಿಯನ್ನು ದೇವರು ನನಗೆ ತೋರಿಸಿಕೊಟ್ಟಿದ್ದಾನೆ.

●●

೨. ಶ್ರೀ ನಾರಾಯಣ ಕಿಲ್ಲೆ

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾಗಿ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿ, ಭಾಷಣ ಕಲೆಯಲ್ಲಿ ಪ್ರಾವೀಣ್ಯವಿದ್ದ ಮಹಾಪುರುಷರಲ್ಲಿ ಶ್ರೀ ನಾರಾಯಣ ಕಿಲ್ಲೆ ಮುಂಚೂಣಿಯಲ್ಲಿ ಗುರುತಿಸಿಕೊಳ್ಳಬೇಕಾದವರು. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಅಸ್ಖಲಿತ ವಾಕ್ ಚಾತುರ್ಯವನ್ನು ಹೊಂದಿದ್ದ ಅವರ ಭಾಷಣದ ಶೈಲಿ, ಉಚ್ಚಸ್ತರದ ಶಬ್ದಪ್ರಯೋಗ, ಉನ್ನತ ವಿಚಾರಗಳು, ಮತ್ತು ಅವರ ಕಂಠಶ್ರೀ ಹಾಗೂ ಆಂಗಿಕ ಚಲನೆಯ ಶೀವಿಗಳು, ಇವುಗಳಿಗೆ ಯಾವುದೇ ಪಾಮರರನ್ನಾಗಲೀ ಅಥವಾ ಪಂಡಿತರನ್ನಾಗಲೀ ಆಕರ್ಷಿಸುವ ಶಕ್ತಿ ಇತ್ತು. ಅಂತಹ ಭಾಷಣಕಾರರು ಕಿಲ್ಲೆ. ಮಹಾತ್ಮಾ ಗಾಂಧೀಜಿಯವರ ತತ್ವವನ್ನು ಒಪ್ಪಿಕೊಂಡು, ಖಾದಿಧಾರಿಯಾಗಿ, ಭಾರತದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಹರಿಜನ ಉದ್ಧಾರ, ಹರಿಜನರ ದೇವಾಲಯ ಪ್ರವೇಶ ಇತ್ಯಾದಿ ಧೋರಣೆಗಳನ್ನು ಸ್ವೀಕರಿಸಿ ಕ್ರಿಯಾಶೀಲರಾಗಿದ್ದು ಜೈಲುವಾಸ ಅನುಭವಿಸಿದ ಉಚ್ಚ ವ್ಯಕ್ತಿತ್ವದ ನೇತಾರರು ಶ್ರೀ ನಾರಾಯಣ ಕಿಲ್ಲೆ.

ಶ್ರೀ ಕಿಲ್ಲೆಯವರು ಕನ್ನಡ ಯಕ್ಷಗಾನ, ತಾಳಮದ್ದಳೆ ಪ್ರಕಾರದ ಪ್ರಸಂಗಗಳಲ್ಲಿ ಭಾಗವಹಿಸಿ ತಮ್ಮ ಶ್ರೇಷ್ಠ ತರ್ಕ ಸರಣಿಯಿಂದ ಕೇಳುಗರ ಮನಸ್ಸು ಮತ್ತು ಹೃದಯವನ್ನು ಗೆಲ್ಲುತ್ತಿದ್ದರು. ಅವರ ಮಾತು, ವಿಚಾರ ಮತ್ತು ಕಂಠದಿಂದ ಸಭಿಕರು, ಶ್ರೋತೃಗಳು ಆಕರ್ಷಿತರಾಗುತ್ತಿದ್ದರು. ಬಂಟವಾಳದಲ್ಲಿ ಮತ್ತು ಅದರ ಸುತ್ತುಮುತ್ತ ನಡೆಯಲ್ಲಿದ್ದ ಯಾವುದೇ ಸಭೆಯಲ್ಲಿ ಕಿಲ್ಲೆಯವರು ಮಾತನಾಡಲಿದ್ದಾರೆ ಎಂದು ತಿಳಿದುಬಂದರೆ ನಾನು ಕಾಲ್ನಡಿಗೆಯಲ್ಲಿ ಅಥವಾ ಸೈಕಲಿನಲ್ಲಿ ಹೋಗಿ ಅವರ ಭಾಷಣ ಕೇಳಿಬರುತ್ತಿದ್ದೆನು. ಯಕ್ಷಗಾನ, ತಾಳಮದ್ದಳೆಯಲ್ಲಿ ಮಹಾಭಾರತ, ರಾಮಾಯಣದ ಪ್ರಸಂಗ ಇದ್ದರೆ ಕಿಲ್ಲೆಯವರು ಕರ್ಣ, ಕಂಸ ಇತ್ಯಾದಿ ಪಾತ್ರಗಳ ಅರ್ಥಧಾರಿಯಾಗಿ ಇರುತ್ತಿದ್ದರು. ಅವರಿಗೆ ಮಹಾಭಾರತದ ಕರ್ಣನ ಮೇಲೆ ಅಭಿಮಾನ ಎಷ್ಟಿತ್ತೆಂದರೆ, ಅವರು ತಮ್ಮ ಅಂತ್ಯ ಸಮಯದಲ್ಲಿ 'ಕರ್ಣಾ, ಕರ್ಣಾ' ಎಂದು ಹೇಳುತ್ತಾ ಪ್ರಾಣ ಬಿಟ್ಟರಂತೆ.

ಭಾರತದೇಶ ಸ್ವತಂತ್ರವಾದ ಬಳಿಕ ೧೯೫೨ನೇ ಇಸವಿಯಲ್ಲಿ ಮದ್ರಾಸ್ ವಿಧಾನಸಭಾ ಚುನಾವಣೆ ನಡೆಯಲ್ಲಿದ್ದಾಗ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯ ಅವರು ಕಿಲ್ಲೆಯವರಿಗೆ ಜಿಲ್ಲೆಯಲ್ಲಿ ಕಾಂಗ್ರೆಸ್ ಉಮೇದ್ವಾರರಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೇಟ್ ನೀಡುವೆನೆಂದಾಗ, ತನಗೆ ಯಾವ ಅಧಿಕಾರ ಸ್ಥಾನವೂ ಬೇಡವೆಂದು ಹೇಳಿದ ತ್ಯಾಗಿ ಕಿಲ್ಲೆ. ಅವರು ೧೯೫೫ನೇ ಇಸವಿಯಲ್ಲಿ ಕ್ಯಾನ್ಸರ್‌ನಿಂದ ತೀರಿಕೊಂಡರು. ಈಗಲೂ ನನಗೆ ಅವರ ಮೇಲೆ ಅಭಿಮಾನ ಇದೆ. ೨೦೦೧ರಲ್ಲಿ ಅವರ ಜನ್ಮಶತಾಬ್ದಿಯ ಉತ್ಸವವನ್ನು ನಾನು ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಆಚರಿಸಿದ್ದೇನೆ.

●●

ಭಾಗ – ೨
ಕಾರ್ಯರಂಗ

೮. ಶ್ರೀ ಟಿ.ಎ.ಪೈ

ಋಷಿ ಶಾಪದಿಂದ ಸಾವಿರಾರು ವರ್ಷಗಳವರೆಗೆ ಕಲ್ಲಾಗಿ ಬಿದ್ದುಕೊಂಡಿದ್ದ ಅಹಲ್ಯೆ ಶ್ರೀ ರಾಮಚಂದ್ರನ ಪಾದಸ್ಪರ್ಶದಿಂದ ಮಾನವ ರೂಪ ಧಾರಣೆ ಮಾಡಿದ ಕತೆ ಪುರಾಣದಲ್ಲಿದೆ. ನನ್ನ ವಿಚಾರದಲ್ಲಿ ಹೇಳುವುದಾದರೆ, ಶ್ರೀ ಟಿ.ಎ.ಪೈ ಅವರ ಸಂಪರ್ಕ ನನಗೆ ಯಾವಾಗ ಆಯಿತೋ, ಅದೇ ದಿನ ನನ್ನಲ್ಲಿ ವಿಶಿಷ್ಟ ಪರಿವರ್ತನೆ ಕಾಣಿಸಿಕೊಂಡು ನನ್ನ ಬದುಕಿಗೆ ಒಂದು ಹೊಸ ದಿಕ್ಕು ಗೋಚರಿಸಿತು. ಪ್ರವಾಹದ ನೀರಿನಲ್ಲಿ ಚಲಿಸುತ್ತಿರುವ ದೋಣಿಯ ಹಾಗೆ, ಸೂತ್ರ ಕಿತ್ತ ಗಾಳಿಪಟದ ಹಾಗೆ ನಿರ್ದಿಷ್ಟ ಗುರಿಯಿಲ್ಲದೆ ಸಾಗುತ್ತಿದ್ದ ನನ್ನ ಬದುಕಿನ ಪಥವೇ ಬದಲಾಯಿತು. ಅದುವರೆಗೆ ಬೇರೆಯವರ ಚಾಕರಿ ಮಾಡಿಕೊಂಡು ಅವರ ಮನಸ್ಸಿಗೆ ಖುಷಿಯನ್ನು ಉಂಟುಮಾಡುವುದರಲ್ಲಿ ತೃಪ್ತಿ ಕಾಣುವ ಮನಃಸ್ಥಿತಿ ನನ್ನದಾಗಿತ್ತು. ನಮ್ಮ ಊರಿನ, ನಮ್ಮ ಸಮಾಜದ ಪರಿಸ್ಥಿತಿಯೂ ಅದೇ ರೀತಿ ಇತ್ತು.

ಬಂಟವಾಳದಲ್ಲಿ ಎರಡು ವರ್ಗಗಳ ಜನರಿದ್ದರು. ಒಂದು ದೊಡ್ಡ ದೊಡ್ಡ ಮನೆತನಗಳ ಶ್ರೀಮಂತ ವರ್ಗ. ಇನ್ನೊಂದು ಹಣದ ಬಲ ಶಿಕ್ಷಣದ ಬಲವಿಲ್ಲದ ಬಡವರ್ಗ. ಶ್ರೀಮಂತರ ಚಾಕರಿ ಮಾಡುವುದು, ಅವರನ್ನು ಖುಷಿಪಡಿಸುವುದು ಮತ್ತು ಅದರಲ್ಲಿಯೇ ಧನ್ಯತಾ ಭಾವವನ್ನು ಅನುಭವಿಸುವುದು ಬಡಜನರ ಮನಃಸ್ಥಿತಿ. ಶ್ರೀಮಂತ ವರ್ಗದ ಜನರಲ್ಲಿಯೂ ಈ ಅನ್ಯವರ್ಗದ ಜನರನ್ನು ದುಡಿಸಿಕೊಳ್ಳುವುದು ತಮ್ಮ ಹಕ್ಕು ಎನ್ನುವ ಭಾವನೆ ಇತ್ತು. ಉನ್ನತ ವರ್ಗದವರು ಕುಳಿತ ಪಲ್ಲಕಿಯನ್ನು ಹೊರುವುದು ಉಳಿದ ಬಡವರ್ಗದವರ ಕರ್ತವ್ಯವೆಂದು ತಿಳಿಯಲಾಗುತ್ತಿತ್ತು. ಈ ವಿಧದ ಸಾಮಾಜಿಕ ಪರಿಸ್ಥಿತಿ ಇದ್ದಂತಹ ಊರಿನಲ್ಲಿ ದೈನಂದಿನ ಕಷ್ಟದ ಜೀವನಕ್ಕೆ ಹೊಂದಿಕೊಂಡಿರುವ ನಮ್ಮಂತಹವರಿಗೆ ಪೇಟೆಯಲ್ಲಿ ಗೌರವ, ಆದರಗಳು ಇರಲಿಲ್ಲ. ನನ್ನಿಂದ ಹಲವು ಕೆಲಸಗಳನ್ನು ಮಾಡಿಸಿ, ಹೊಗಳಿ ಬೆನ್ನು ತಟ್ಟಿ ಕಳುಹಿಸುತ್ತಿದ್ದವರು ಅನೇಕ ಮಂದಿ.

ನಾನು ಬಂಟವಾಳದಲ್ಲಿ ಯುವ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದಾಗ ೧೯೫೫ರಲ್ಲಿ ಸಭೆಯೊಂದನ್ನು ನಡೆಸುವ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಆ ಸಭೆಗೆ ಅಂದು ಮದ್ರಾಸ್ ಶಾಸನಸಭೆಯ ಸದಸ್ಯರಾಗಿದ್ದ ಶ್ರೀ ಟಿ.ಎ.ಪೈ ಅವರನ್ನು ನಾನು ಸಂಪರ್ಕಿಸಿ ಮುಖ್ಯ ಅತಿಥಿಯಾಗಿ ಬರುವಂತೆ ಆಮಂತ್ರಣ ನೀಡಿದೆ. ಅವರು ಬಂದು ಸಭೆಯಲ್ಲಿ ಅವರದೇ ಮಾತಿನ ಧಾಟಿಯಲ್ಲಿ ಉತ್ತಮವಾಗಿ ಭಾಷಣ ನೀಡಿದರು. ನಾನು ಸಭೆಯನ್ನು ಆಯೋಜಿಸಿದ ರೀತಿ ಅವರಿಗೆ ಇಷ್ಟವಾಯಿತೆಂದು ಕಾಣುತ್ತದೆ. ನನ್ನ ವಿಚಾರವಾಗಿ ಅವರು ಆಗಿನ ಕಾಂಗ್ರೆಸ್ ಪಕ್ಷದ ಪುಢಾರಿ ಶ್ರಿ ಕೇಶವ ಲಕ್ಷ್ಮಣ ಬಾಳಿಗ(ಇವರು ಆಗಿನ ಮದ್ರಾಸ್ ಅಸೆಂಬ್ಲಿ ಶಾಸಕರಾಗಿದ್ದ ಶ್ರೀ ಬಂಟವಾಳ ವೈಕುಂಠ ಬಾಳಿಗಾ ಅವರ ತಮ್ಮ) ಅವರಲ್ಲಿ ವಿಚಾರಿಸಿರಬೇಕು. ನನ್ನ ತಂದೆಯವರು ಕಾಂಗ್ರೆಸ್ ಪಕ್ಷದ ಮತ್ತು ಜನರ ಸೇವೆ ನಡೆಸಿದ್ದು, ಮತ್ತು ಈಗ ನಾನು ಮಾಡುತ್ತಿರುವ ಸಂಘಟನೆಯ ವಿಚಾರವಾಗಿ ಕೇಶವ ಬಾಳಿಗ ಅವರು ಶ್ರೀ ಟಿ.ಎ.ಪೈ ಅವರಿಗೆ ಹೆಚ್ಚಿನ ಮಾಹಿತಿ ನೀಡಿದರೆಂದು ಕಾಣುತ್ತದೆ. ಆ ಮೇಲಿನ ದಿನಗಳಲ್ಲಿ ಟಿ.ಎ.ಪೈ ಅವರು ನನ್ನನ್ನು ಗೌರವದಿಂದ ಕಾಣಲಾರಂಭಿಸಿದರು. ಅವರು ಬಂಟವಾಳ ಅಥವಾ ಬೆಳ್ತಂಗಡಿ ಮೊದಲಾದ ಊರುಗಳಿಗೆ ಹೋಗುವುದಿದ್ದರೆ ಕಾರಿನಲ್ಲಿ ನನ್ನನ್ನೂ ಕರೆದುಕೊಂಡು ಹೋಗಲಾರಂಭಿಸಿದರು. ಅವರಿಗೆ ನನ್ನ ಕಾರ್ಯಕ್ಷಮತೆ, ಸಂಘಟನಾ ಶಕ್ತಿ, ಸಮಾಜದ ಕೆಳಸ್ತರದಲ್ಲಿರುವ ಜನರೊಂದಿಗೆ ನಾನು ನಡೆದುಕೊಳ್ಳುವ ರೀತಿ ಬಹಳ ಇಷ್ಟವಾಗುತ್ತಿತ್ತೆಂದು ನನ್ನ ಭಾವನೆ. ಅವರು ನನ್ನಲ್ಲಿ ತೋರಿದ ವಿಶ್ವಾಸ ಮತ್ತು ಆತ್ಮೀಯತೆ ನನ್ನ ಮುಂದಿನ ಜೀವನದಲ್ಲಿ ಮಹತ್ವದ್ದಾಗಿ ಪರಿಣಮಿಸಿತು. ಈ ವಿಚಾರವಾಗಿ ನಾನು ಮುಂದಿನ ಅಧ್ಯಾಯದಲ್ಲಿ ಹೇಳಲಿದ್ದೇನೆ.

೧೯೬೧-೬೨ರ ಅವಧಿಯನ್ನು ನನ್ನ ಬದುಕಿನ ಅತೀ ಗೊಂದಲದ ವರ್ಷವೆಂದು ನಾನು ತಿಳಿಯುತ್ತೇನೆ. ನನ್ನ ತಂಗಿ ವಸಂತಿಯ ಮದುವೆ ನಿಶ್ಚಿತಾರ್ಥ ಮುಂಬಯಿಯಲ್ಲಿ ನಡೆದು ನಾವು ಬಂಟವಾಳಕ್ಕೆ ಹಿಂತಿರುಗಿ ಬರುವ ಸಮಯದಲ್ಲಿ

ಆಶ್ಚರ್ಯಕರ ಬದಲಾವಣೆ ನಡೆದಿತ್ತು. ಶ್ರೀ ವಿ.ಎಸ್. ಕುಡ್ವಾ ಅವರಲ್ಲಿ ಯಾರೋ ನನ್ನ ವಿಚಾರವಾಗಿ ಚಾಡಿ ಹೇಳಿರಬೇಕು. ಅವರು ನನ್ನ ಮೇಲೆ ಮುನಿಸಿಕೊಂಡಿದ್ದರು. ಇದನ್ನು ತಿಳಿದು ಶ್ರೀ ಟಿ.ಎ.ಪೈ ಅವರು ಕುಡ್ವಾರ ಬಳಿ(ಶ್ರೀ ಕುಡ್ವಾ ಅವರು ಶ್ರೀ ಪೈ ಅವರ ಸೋದರಮಾವ) ನನ್ನ ಪ್ರಸ್ತಾಪ ಎತ್ತಿದರೂ, ಕುಡ್ವಾ ಅವರು ಅದಕ್ಕೆ ಯಾವ ಬೆಲೆಯನ್ನೂ ನೀಡಲಿಲ್ಲ.

ಶ್ರೀ ಟಿ.ಎ.ಪೈ ಅವರು ನನ್ನನ್ನು ಕರೆದು ಹೀಗೆ ಹೇಳಿದರು, "ವಾಮನ್ ಶೆಣೈ, ನಮ್ಮ ಕುಡ್ವಮಾಮರು ತನ್ನ ಮನಸ್ಸಿನಲ್ಲಿ ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಬದಲಾಯಿಸುವ ಮನುಷ್ಯರೇ ಅಲ್ಲ. ಈಗ ನೀನು ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಸಿ.ಪಿ.ಸಿ ಕಂಪನಿ ಬಿಟ್ಟು ನೀನು ಯಾವುದಾದರೂ ವ್ಯಾಪಾರ, ಉದ್ಯಮ ಪ್ರಾರಂಭಿಸುವುದಾದರೆ ನಾನು ನಿನಗೆ ಹತ್ತು ಸಾವಿರ ರೂಪಾಯಿ(ಈಗಿನ ನಾಲ್ಕು ಲಕ್ಷಗಳಿಗೆ ಸಮ) ನೀಡುತ್ತೇನೆ. ಅದಲ್ಲದೆ ನೀನು ಕೆಲಸಕ್ಕೆ ಸೇರುವುದಾದರೆ, ನಿನಗೆ ನಮ್ಮ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕ್ಲರ್ಕ್ ಕೆಲಸ ಕೊಡುತ್ತೇನೆ" ಎಂದು ಹೇಳಿದರು. ನನಗೆ ಸಂದಿಗ್ಧದ ಪರಿಸ್ಥಿತಿ ಎದುರಾಯಿತು. ನಾನು ಶ್ರೀ ಟಿ.ಎ.ಪೈ ಅವರಲ್ಲಿ ಹಣ ಪಡೆದು ವ್ಯಾಪಾರೋದ್ಯಮವನ್ನು ಪ್ರಾರಂಭಿಸುವುದು, ಮುಂದೆ ಅದರಲ್ಲಿ ನಷ್ಟವಾದರೆ ಅವರು ನೀಡಿದ ಹಣವನ್ನು ಹಿಂತಿರುಗಿಸಲಾಗದ ಸ್ಥಿತಿ ಬರುತ್ತದೆ. ಆಗ ಅವರ ಮುಖವನ್ನು ನೋಡುವುದು ಹೇಗೆ? ಅದಕ್ಕಿಂತ ಸಿಂಡಿಕೇಟ್ ಬ್ಯಾಂಕ್ ಸೇರುವುದು ಒಳ್ಳೆಯದಲ್ಲವೇ ಎಂದು ಅನಿಸಿತು.

ನಾನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕ್ಲರ್ಕ್ ಆಗಿ ಜೀವನದಲ್ಲಿ ಮುಂದುವರಿಯುವುದೆಂದು ನಿರ್ಣಯಿಸಿದೆ. ಆ ಕಾಲದಲ್ಲಿ ನನಗೆ ಸಲಹೆಗಾರರಾಗಿ ಶ್ರೀ ಜನ್ನ ಶೆಟ್ಟಿ ಮತ್ತು ತಿಮ್ಮಪ್ಪ ಶೆಟ್ಟಿಯವರಿದ್ದರು. ಟಿ.ಎ.ಪೈ ಅವರನ್ನು ಭೇಟಿಯಾಗಿ ನನ್ನ ಬ್ಯಾಂಕ್ ನೌಕರಿಯ ಕುರಿತು ಮಾತನಾಡಲು ನಮ್ಮ ಊರಿನ ಹಿರಿಯರು ಮತ್ತು ಶ್ರೀ ಟಿ.ಎ.ಪೈ ಅವರ ಅತ್ಯಂತ ವಿಶ್ವಾಸಿ ಮತ್ತು ಬಲಗೈ ಆಗಿದ್ದ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಕ್ಷೇತ್ರದ ಮುಖ್ಯಸ್ಥರು ಮತ್ತು ಕಾಂಗ್ರೆಸ್ ಪುಢಾರಿ ಶ್ರೀ ಬಂಟವಾಳ ನಾರಾಯಣ ನಾಯಕ್‌ಮಾಮರು ನಮ್ಮನ್ನು ತಮ್ಮ ಕಾರಿನಲ್ಲಿ ಉಡುಪಿಗೆ ಕರೆದುಕೊಂಡು ಹೋದರು. ಆಗ ಸಿಂಡಿಕೇಟ್ ಬ್ಯಾಂಕ್‌ನ ಮುಖ್ಯ ಕಚೇರಿ 'ಮುಕುಂದ ನಿವಾಸ'ದಲ್ಲಿ ಇತ್ತು.

ಶ್ರೀ ಬಂಟವಾಳ ನಾರಾಯಣ ನಾಯಕ್‌ಮಾಮರು ನಮ್ಮನ್ನು ಶ್ರೀ ಟಿ.ಎ.ಪೈ ಅವರ ಕ್ಯಾಬಿನ್‌ಗೆ ಕರೆದುಕೊಂಡು ಹೋಗಿ, "ನೋಡಿ ನಮ್ಮ ಬಸ್ತಿ ವಾಮನ ಶೆಣೈಗೆ ನಿಮ್ಮ ಬ್ಯಾಂಕ್‌ನಲ್ಲಿ ಕೆಲಸ ಬೇಕಂತೆ" ಎಂದು ಹೇಳಿದರು. ಆಗ ಶ್ರೀ ಟಿ.ಎ.ಪೈ ಅವರು, "ಹೌದೇನು? ಅರ್ಜಿ ಬರೆದು ತಂದಿದ್ದೀರಾ?" ಎಂದು ಕೇಳಿದರು. ನಾನು "ಇಲ್ಲ"ವೆಂದು ಹೇಳಿದೆ. ಆಗಲೇ ಅವರು ಸಿಬ್ಬಂದಿ ನಿಯಂತ್ರಕರಾದ ಕೆ.ಎಲ್.ರಾವ್ ಅವರನ್ನು ಕ್ಯಾಬಿನಿಗೆ ಕರೆದು, "ನೋಡಿ ರಾಯರೇ, ಇವರು ಬಸ್ತಿ ವಾಮನ ಶೆಣೈ. ಇವರನ್ನು ನಿಮ್ಮ ಕೊಠಡಿಗೆ ಕರೆದುಕೊಂಡು ಹೋಗಿ ಅವರಿಂದ ಕ್ಲರ್ಕ್ ಕೆಲಸಕ್ಕೆ ಅರ್ಜಿ ಬರೆಯಿಸಿಕೊಂಡು ನಮ್ಮ ಪಾಣೆಮಂಗಳೂರು ಶಾಖೆಗೆ ಕ್ಲರ್ಕ್ ಆಗಿ ನೇಮಕ ಮಾಡಿದ ಆರ್ಡರ್ ಕೊಡಿ" ಎಂದು ಹೇಳಿದರು! ಅದೇ ರೀತಿ ಕೆ.ಎಲ್.ರಾವ್ ನನ್ನಿಂದ ಅರ್ಜಿ ಬರೆಯಿಸಿಕೊಂಡು ನನ್ನನ್ನು ಪಾಣೆಮಂಗಳೂರು ಶಾಖೆಗೆ ಕ್ಲರ್ಕ್ ಆಗಿ ನೇಮಕಾತಿ ಪತ್ರವನ್ನು ತಕ್ಷಣ ಅಲ್ಲಿಯೇ ನೀಡಿದರು. ನಾನು ಸೋಮವಾರದ ದಿನ, ಅಂದರೆ ಏಪ್ರಿಲ್ ೯, ೧೯೬೨ರಲ್ಲಿ ಕ್ಲರ್ಕ್ ಆಗಿ ಸಿಂಡಿಕೇಟ್ ಬ್ಯಾಂಕ್ ಸೇರಿದೆ.

ಶ್ರೀ ಟಿ.ಎ.ಪೈ ಅವರು ನನಗೆ ಬ್ಯಾಂಕ್‌ನಲ್ಲಿ ಕೆಲಸ ನೀಡಿದ್ದರಿಂದ, ನನ್ನ ಬದುಕಿನಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ನನ್ನ ಆರ್ಥಿಕ ಮತ್ತು ಸಾಮಾಜಿಕ ಬದುಕಿಗೆ ಹೊಸ ಹಂತ, ಹೊಸ ದಿಕ್ಕು ಹಾಗೂ ಉಚಿತ ಸ್ಥಾನಮಾನ ದೊರೆಯಲಾರಂಭಿಸಿತು. ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯು ನನ್ನಲ್ಲಿ ತುಂಬಿದ ಸಂಘಟನಾ ಶಕ್ತಿ, ಕಾರ್ಯಕ್ಷಮತೆ ಮತ್ತು ನಾಯಕತ್ವದ ಸ್ವಾಭಾವಿಕ ಗುಣ ಪ್ರಜ್ವಲಗೊಳ್ಳಲು ಕಾರಣವಾಯಿತು. ನನ್ನ ಈ ಯಶಸ್ಸಿಗೆ ನಾನು ಮತ್ತು ನನ್ನ ಕುಟುಂಬದವರು, ನನ್ನ ಸಹೋದರ, ಸಹೋದರಿಯರು, ಪತ್ನಿ, ಮಕ್ಕಳು, ಆಪ್ತಬಂಧು ವರ್ಗದವರು ಮತ್ತು ನನ್ನ ಮೇಲೆ ಪ್ರೀತಿ ವಿಶ್ವಾಸ ಇಟ್ಟಂತಹ ನನ್ನ ಆಪ್ತ ಮಿತ್ರರ ಮಂಡಳಿಯವರು ಶ್ರೀ ಟಿ.ಎ.ಪೈ ಅವರ ದಿವ್ಯ ಆತ್ಮಕ್ಕೆ ಚಿರಋಣಿಯಾಗಿರಬೇಕು. ಈ ಕಾರಣಕ್ಕಾಗಿ ನಾನು "ಶ್ರೀ ಟಿ.ಎ.ಪೈ ಅವರಲ್ಲಿ ನನ್ನ ದೇವರನ್ನು ಕಾಣುತ್ತೇನೆ".

●●

೬. ಸಿಂಡಿಕೇಟ್ ಬ್ಯಾಂಕ್‌ನಲ್ಲಿ

ನಾನು ಏಪ್ರಿಲ್ ೬, ೧೯೬೨ರಲ್ಲಿ ಪಾಣೆಮಂಗಳೂರಿನ ಸಿಂಡಿಕೇಟ್ ಬ್ಯಾಂಕ್ ಶಾಖೆಯಲ್ಲಿ ಕ್ಲರ್ಕ್ ಆಗಿ ಕೆಲಸ ಪ್ರಾರಂಭಿಸಿದೆ. ಒಂದೆರಡು ತಿಂಗಳಲ್ಲಿಯೇ ಹೆಬ್ರಿಯ ಶ್ರೀ ಹೆಚ್. ನಾಗೇಶ ಶೆಣೈಯವರು ಇಲ್ಲಿ ಮೆನೇಜರ್ ಆಗಿ ಸೇರಿಕೊಂಡರು. ಅವರು ದೈವಿಕ ಚಿಂತನೆಯುಳ್ಳ ಸೀದಾಸಾದಾ ವ್ಯಕ್ತಿ, ಹೆಬ್ರಿ ಎಂಬ ಒಂದು ಸಣ್ಣ ಹಳ್ಳಿಯಿಂದ ಪಾಣೆಮಂಗಳೂರಿಗೆ ಬಂದವರು. ಪಾಣೆಮಂಗಳೂರು, ಬಂಟವಾಳ ತಾಲೂಕಿನ ಮತ್ತೊಂದು ದೊಡ್ಡ ವ್ಯಾಪಾರಕೇಂದ್ರ. ನಾನು ಬ್ಯಾಂಕಿಗೆ ಹೊಸದಾಗಿ ಸೇರಿಕೊಂಡಿದ್ದರೂ, ನನ್ನ ಹಿಂದಿನ ರಾಜಕೀಯ ಮತ್ತು ಸಾಮಾಜಿಕ ಸಂಪರ್ಕಗಳಿಂದ ನನಗೆ ಪಾಣೆಮಂಗಳೂರು ಮತ್ತು ಸುತ್ತುಮುತ್ತಲಿನ ಊರಿನ ಮುಖ್ಯಸ್ಥರ ಪರಿಚಯವಿತ್ತು. ಶ್ರೀ ನಂದಾವರ ಕೇಶವ ಕುಡ್ವ, ಪಾ. ಮಾಧವ ಪಡಿಯಾರ, ನಂದಾವರ ಉಪೇಂದ್ರ ನಾಯಕ, ಅದೇ ರೀತಿ ನಂದಾವರ ಕುಡ್ವ ಕುಟುಂಬ, ಘಡಾಯ ಪೈ ಕುಟುಂಬದ ಪರಿಚಯ ಇದ್ದದ್ದು ನನಗೆ ಬಹಳ ನೆರವಿಗೆ ಬಂತು. ಅಲ್ಲದೆ ಶ್ರೀ ಶೆಣೈ ಅವರಿಂದ ನನ್ನ ಪದೋನ್ನತಿಗೂ ಸಹಾಯ ದೊರೆಯಿತು. ಶ್ರೀ ಶೆಣೈ ಮತ್ತು ನಾನು ಬ್ಯಾಂಕ್‌ನ ವ್ಯವಹಾರದ ಅವಧಿ ಮುಗಿದ ಬಳಿಕ, ಶನಿವಾರ ಮತ್ತು ಭಾನುವಾರ, ಅದೇ ರೀತಿ ಬ್ಯಾಂಕ್ ರಜಾದಿನಗಳಲ್ಲಿ ಹತ್ತಿರದ ಹಳ್ಳಿಗಳಿಗೆ ಹೋಗಿ ಠೇವಣಿ ಸಂಗ್ರಹ, ಬ್ಯಾಂಕ್ ವ್ಯವಹಾರದ ವಿಸ್ತರಣೆ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದೆವು. ನಮ್ಮ ಪ್ರಯತ್ನದಿಂದ ಠೇವಣಿಯ ಮೊತ್ತ ಹಿಂದಿಗಿಂತ ಹೆಚ್ಚಾಗಿ ಅವಧಿಗಿಂತ ಮೊದಲೇ ನಾವು ವಾರ್ಷಿಕ ಠೇವಣಿಯ ಗುರಿಯನ್ನು ತಲುಪಿದೆವು. ಹೀಗಾಗಿ ಮೆನೇಜರ್ ಶ್ರೀ ನಾಗೇಶ ಶೆಣೈ ಅವರಿಗೆ ಬ್ಯಾಂಕಿನ ವರಿಷ್ಠಾಧಿಕಾರಿಗಳಿಂದ ಪ್ರಶಂಸೆ ದೊರೆಯುವಂತಾಯಿತು. ಅಷ್ಟು ದೊಡ್ಡ ಪ್ರಮಾಣದ ಠೇವಣಿ ಸಂಗ್ರಹ ಕಾರ್ಯದಲ್ಲಿ ನನ್ನ ಪಾಲು ಇರುವುದನ್ನು ಶ್ರೀ ಶೆಣೈ ಅವರು ಬ್ಯಾಂಕ್‌ನ ವರಿಷ್ಠರಿಗೆ ತಿಳಿಸಿದ್ದರು. ನನಗೆ ನೌಕರಿ ನೀಡಿದ ಶ್ರೀ ಟಿ.ಎ.ಪೈ ಅವರಿಗೆ ನನ್ನ ಶ್ರಮ ಮತ್ತು ನನ್ನ ಸಾರ್ವಜನಿಕ ಸಂಪರ್ಕದಿಂದ ಬ್ಯಾಂಕ್‌ಗೆ ಹೆಚ್ಚು ಠೇವಣಿ ಮತ್ತು ಖಾತೆಗಳು ದೊರೆತಿರುವುದು ಸಂತೋಷವನ್ನು ಉಂಟು ಮಾಡಿತು. ಇದರಿಂದಾಗಿ ಕೇವಲ ಇಪ್ಪತ್ತೊಂದು ತಿಂಗಳೊಳಗೆ ನನಗೆ ಆಫೀಸರ್ ಇನ್ ಚಾರ್ಜ್ ಆಗಿ ಮುಂದಿನ ಹಂತಕ್ಕೆ ಭಡ್ತಿ ದೊರೆಯುವಂತಾಯಿತು.

ಅಧಿಕಾರಿ ಹುದ್ದೆಯಲ್ಲಿ ನೇಮಕಗೊಂಡು ವರ್ಷ ಕಳೆಯುವುದರೊಳಗೆ ಬ್ಯಾಂಕ್ ಅಧಿಕಾರಿಯಾಗಿ ಭಡ್ತಿ ದೊರಕಿತು. ಆಗ ಶಾಖೆಯಲ್ಲಿ ಶ್ರೀಮತಿ ಎನ್. ವಸಂತಿ ಪ್ರಭು ಕ್ಲರ್ಕ್ ಆಗಿದ್ದರು. ಅವರು ನನಗಿಂತ ಎರಡು ವರ್ಷ ಮೊದಲೇ ಕೆಲಸಕ್ಕೆ ಸೇರಿದವರು. ಹೀಗಾಗಿ ಅವರು ನನಗೆ ಬ್ಯಾಂಕ್ ಕೆಲಸದಲ್ಲಿ ತಿಳಿಯದಿರುವುದನ್ನು ಹೇಳಿಕೊಡುತ್ತಿದ್ದರು. ಅದಕ್ಕಿಂತಲೂ ಹೆಚ್ಚಾಗಿ ನನಗೆ ಹಣದ 'ಅಡಚಣೆ' ಬಂದಾಗ ಸಾಲ ನೀಡಿ ನನ್ನ ಆಪತ್ಕಾಲದಲ್ಲಿ ನೆರವಾಗುತ್ತಿದ್ದರು. ಆಗ ನನ್ನ ತಮ್ಮ ವೆಂಕಟರಮಣ ಶಾಲಾಭ್ಯಾಸ ಮುಗಿಸಿ, ಬೆಂಗಳೂರಿನಲ್ಲಿ ಪಿ.ಯು.ಸಿ. ಓದಿ ರ್‍ಯಾಂಕ್ ಗಳಿಸಿದ್ದರಿಂದ ಅವನಿಗೆ ಸುರತ್ಕಲ್ ರೀಜಿನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟ್ ದೊರಕಿಸಿಕೊಡುವುದು ನನಗೆ ಕಷ್ಟವಾಗಲಿಲ್ಲ. ಆದರೆ ಅವನು ಸೋಮಾರಿ, ಕಾಲೇಜ್ ಶುಲ್ಕ ಮತ್ತು ಹಾಸ್ಟೆಲ್ ಶುಲ್ಕ ಕಟ್ಟುವುದಿದ್ದರೆ ಹತ್ತು ದಿನ ಮೊದಲೇ ನನಗೆ ತಿಳಿಸುತ್ತಿರಲಿಲ್ಲ, ಬರೀ ಎರಡು ದಿನ ಇರುವಾಗ ಪತ್ರ ಬರೆಯುತ್ತಿದ್ದ. ಅವನ ಪತ್ರ ಬಂದಾಗ ನನ್ನಲ್ಲಿ ಹಣ ಇರುತ್ತಿರಲಿಲ್ಲ. ಆ ಸಮಯದಲ್ಲಿ ಎನ್. ವಸಂತಿಯವರು ನನಗೆ ಹಣ ನೀಡಿ ನನ್ನನ್ನು ತಕ್ಷಣ ಸುರತ್ಕಲಿಗೆ ಕಳುಹಿಸಿಕೊಡುತ್ತಿದ್ದರು. ಇದು ಅನೇಕ ಬಾರಿ ನಡೆಯಿತು. ಇಷ್ಟಾದರೂ, ಅವನ ಸೋಮಾರಿತನದಿಂದಾಗಿ ವೆಂಕಟರಮಣನಿಗೆ ಇಂಜಿನಿಯರಿಂಗ್ ಮುಗಿಸುವುದು ಸಾಧ್ಯವಾಗಲೇ ಇಲ್ಲ.

ಆ ದಿನಗಳಲ್ಲಿ ಸಿಂಡಿಕೇಟ್ ಬ್ಯಾಂಕ್ ದೊಡ್ಡ ಬ್ಯಾಂಕ್ ಎಂಬ ವಿಶೇಷತೆಯನ್ನು ಹೊಂದಿರಲಿಲ್ಲ. ಆದರೆ ಜನಸಾಮಾನ್ಯರ ಮನೆಬಾಗಿಲಿಗೆ ಹೋಗಿ ಪಿಗ್ಮಿ ಖಾತೆಯನ್ನು

ತೆರೆಯುವುದು, ವಿಶೇಷವಾಗಿ ಉಳಿತಾಯ ಖಾತೆ, ಸಂಚಿತ ಖಾತೆಯ ರೀತಿಯ ಸಣ್ಣ ಠೇವಣಿಗಳ ಪ್ರಚಾರಕ್ಕಾಗಿ ವಿವಿಧ ರೀತಿಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು ಇತ್ಯಾದಿಗಳನ್ನು ನಿರಂತರವಾಗಿ ಚಲಾವಣೆಯಲ್ಲಿಟ್ಟು ಗ್ರಾಹಕರನ್ನು ಆಕರ್ಷಿಸುವ ಧೋರಣೆಯನ್ನು ಹೊಂದಿತ್ತು. ಸಿಬ್ಬಂದಿಗಳು ಬ್ಯಾಂಕ್ ಆವರಣದಲ್ಲಿ ಕೆಲಸ ಮಾಡುವುದಷ್ಟೇ ಅಲ್ಲ, ಹೊರಗೆ ಹೋಗಿ ಜನರನ್ನು ಭೇಟಿಯಾಗುವುದು, ಅವರಿಂದ ಠೇವಣಿ ಸಂಚಯ ಮತ್ತು ಹೊಸ ಖಾತೆಗಳ ತೆರೆಯುವಿಕೆಯನ್ನು ನಡೆಸುವುದು ಇತ್ಯಾದಿಗಳಿಗೆ ಬ್ಯಾಂಕ್‌ನ ಆಡಳಿತ ಮಂಡಳಿ ತುಂಬಾ ಪ್ರೋತ್ಸಾಹ ನೀಡುತ್ತಿತ್ತು. ಅಲ್ಲದೆ ಆಗಾಗ ಸ್ಪರ್ಧೆಗಳನ್ನು ಆಯೋಜಿಸಿ ಹೆಚ್ಚು ಠೇವಣಿ ಮತ್ತು ಹೆಚ್ಚು ಖಾತೆಯನ್ನು ಜಮಾ ಮಾಡಿದವರಿಗೆ ಬಹುಮಾನ ನೀಡುವ ಕ್ರಮವನ್ನೂ ಜಾರಿಗೊಳಿಸಿತ್ತು. ಮೊದಲಿಂದಲೂ ಸಾರ್ವಜನಿಕ ಸಂಪರ್ಕದಲ್ಲಿ ಇರುತ್ತಿದ್ದ ನನಗೆ ನನ್ನ ಕರ್ತೃತ್ವ ಶಕ್ತಿಯನ್ನು ತೋರಿಸಲು ಇದು ಉತ್ತಮ ಸಂದರ್ಭವಾಗಿ ಪರಿಣಮಿಸಿತು. ಜೊತೆಗೆ ಶ್ರೀ ದೇವರ ಕೃಪೆಯಿಂದ ಈ ವಿಧದ ಕಾರ್ಯಗಳಲ್ಲಿ ಪಾಲುಗೊಳ್ಳುವ ವಿಶೇಷ ಉಮೇದು ಕೂಡ ನನ್ನಲ್ಲಿ ಇತ್ತು.

ನಾನು ಠೇವಣಿ ಮತ್ತು ಖಾತೆ ಸಂಗ್ರಹ ಕಾರ್ಯಗಳಿಗಾಗಿ ಸಂಜೆ ನಾಲ್ಕು ಗಂಟೆಯ ಅನಂತರ ಯಾವಾಗಲೂ ಬ್ಯಾಂಕಿನಿಂದ ಹೊರಗೆ ಇರುತ್ತಿದ್ದೆ. ನನ್ನ ಜೊತೆ ಮೆನೇಜರ್ ಶ್ರೀ ನಾಗೇಶ ಶೆಣೈ ಅವರೂ ಇರುತ್ತಿದ್ದರು. ಹೀಗಾಗಿ ನನ್ನ ಕೆಲಸ ಇನ್ನೂ ಸುಲಭವಾಗುತ್ತಿತ್ತು. ನಾನು ಮಾಡುತ್ತಿದ್ದ ಉತ್ತಮ ಕೆಲಸಕಾರ್ಯಗಳ ಕುರಿತು ಶ್ರೀ ಶೆಣೈಯವರು ಪ್ರಧಾನ ಕಚೇರಿಗೆ ತಿಳಿಸುವುದಿತ್ತು. ಹೀಗಾಗಿ ನನಗೆ ಶ್ರೀ ಟಿ.ಎ.ಪೈ, ಕೆ.ಕೆ. ಪೈ ಮತ್ತು ಇತರ ವರಿಷ್ಠ ಅಧಿಕಾರಿಗಳಿಂದ ಪ್ರಶಂಸಾ ಪತ್ರ ಬರುತ್ತಿತ್ತು. ಇದರಿಂದ ನಾನು ಮತ್ತೊಮ್ಮೆ ಪದೋನ್ನತಿಯನ್ನು ಪಡೆಯುವ ಹಾಗಾಯಿತು. ನಾನು ಹೆಚ್ಚಾಗಿ ಹೊರಗೆ ಇರುತ್ತಿದ್ದೆನಾದುದರಿಂದ, ಆಫೀಸಿನಲ್ಲಿ ನನ್ನ ಪಾಲಿನ ಕೆಲಸವನ್ನು ಎನ್. ವಸಂತಿಯವರೇ ನೋಡಿಕೊಳ್ಳುತ್ತಿದ್ದರು. ಹೀಗಾಗಿ ನಾನು ಹೊರಗೆ ತಿರುಗಾಡಿಕೊಂಡು ಇರುತ್ತೇನೆ ಮತ್ತು ಬ್ಯಾಂಕ್ ಕೆಲಸ ಬಾಕಿ ಉಳಿಸುತ್ತೇನೆ ಎಂದು ಯಾವುದೇ ತಕಾರಾರು ನನ್ನ ಮೇಲೆ ಬಾರದ ಹಾಗಾಯಿತು.

ರಾಷ್ಟ್ರಮಟ್ಟದಲ್ಲಿ ಸಿಂಡಿಕೇಟ್ ಬ್ಯಾಂಕ್ ನಡೆಸುತ್ತಿದ್ದ ಯಾವುದೇ ಠೇವಣಿ ಸಂಗ್ರಹ ಮತ್ತು ಹೊಸ ಖಾತೆಗಳ ಸ್ಪರ್ಧೆಯಲ್ಲಿ ನನಗೆ ಗ್ರಾಮೀಣ ಶಾಖೆಗಳ ವಿಭಾಗದಲ್ಲಿ ಮೊದಲನೆಯ ಅಥವಾ ದ್ವಿತೀಯ ಬಹುಮಾನ ಬಂದೇ ಬರುತ್ತಿತ್ತು. ೧೯೬೪ರ ಜನವರಿಯಲ್ಲಿ ನನಗೆ ಅಧಿಕಾರಿಯಾಗಿ ಪದೋನ್ನತಿ ದೊರೆತ ಬಳಿಕ ನಾನು ಬಂಟವಾಳ ಕಾಮತಿ ಓಣಿಯಲ್ಲಿದ್ದ ನಮ್ಮ ಸಂಸಾರವನ್ನು ಪಾಣೆಮಂಗಳೂರಿಗೆ ಕರೆತಂದೆ. ಪಾಣೆಮಂಗಳೂರಿನ ಶ್ರೀ ವೀರ ವಿಠಲ ದೇವಸ್ಥಾನದ ಪಕ್ಕದ ರಸ್ತೆಯಲ್ಲಿರುವ ಬಾಡಿಗೆ ಮನೆಯಲ್ಲಿ ನಾವು ಅಂದರೆ ನಾನು, ನನ್ನ ತಾಯಿ, ಸಾವಿತ್ರಿ(ಪತ್ನಿ) ಮತ್ತು ಮಕ್ಕಳು ಇರತೊಡಗಿದೆವು. ಪ್ರತಿದಿನ ಬೆಳಗ್ಗೆ ಬ್ಯಾಂಕಿಗೆ ಹೋಗುವ ಮೊದಲು ನಾನು ಶ್ರೀ ದೇವಸ್ಥಾನಕ್ಕೆ ಹೋಗಿ ದೇವರಿಗೆ ಕೈಮುಗಿದು ಬರುತ್ತಿದ್ದೆ. ನಮ್ಮ ಮನೆಯ ಹತ್ತಿರವೇ ನದಿ ಇದ್ದುದರಿಂದ, ನನ್ನ ತಾಯಿಗೆ ಕಾರ್ತಿಕ ಮಾಸದಲ್ಲಿ ಮತ್ತು ಇತರ ಪವಿತ್ರ ದಿನಗಳಲ್ಲಿ ನದಿಯಲ್ಲಿ ಮಿಂದು ದೇವಸ್ಥಾನಕ್ಕೆ ಹೋಗುವುದು ಸಾಧ್ಯವಾಗುತ್ತಿತ್ತು. ಇದು ಅವರ ಮನಸ್ಸಿಗೆ ಸಂಪೂರ್ಣ ತೃಪ್ತಿಯನ್ನೂ ನೀಡುತ್ತಲಿತ್ತು.

ನನ್ನ ಕರ್ತೃತ್ವ ಶಕ್ತಿಗೆ ಪಾಣೆಮಂಗಳೂರಿನಲ್ಲಿ ತುಂಬಾ ಪ್ರೋತ್ಸಾಹ ದೊರೆಯಿತು. ಅಲ್ಲಿಯ ಸಮಾಜದ ನೇತಾರರಾದ ಶ್ರೀ ಮಾಧವ ಪಡಿಯಾರ, ಉಪೇಂದ್ರ ನಾಯಕ, ಕೇಶವ ಕುಡ್ವ, ಫಡಾಯ ಜೋಗಪ್ಪ ಪೈ ಮತ್ತು ಕೇಶವ ಪೈ, ನಾರಾಯಣ ಕುಡ್ವ, ಪಡುಬಿದ್ರಿ ಸುಂದರ ಶೆಣೈ ಮತ್ತು ದಾಮೋದರ ಶೆಣೈ ಇವರೆಲ್ಲರೂ ನನ್ನನ್ನು ಬಂಟವಾಳದವ ಎಂದು ಕಡೆಗಣಿಸದೆ (ಆ ಕಾಲದಲ್ಲಿ ಬಂಟವಾಳ ಮತ್ತು ಪಾಣೆಮಂಗಳೂರಿನ ಸಮಾಜಗಳ ನಡುವೆ ಯಾವುದೋ ಒಂದು ವಿಧದ ಅಲರ್ಜಿ ಇತ್ತು. ಆದರೆ ಅದು ವ್ಯವಹಾರದಲ್ಲಿ ಅಥವಾ ನೆಂಟಸ್ತಿಕೆಯ ವಿಚಾರದಲ್ಲಿ ಇರಲಿಲ್ಲ.) ನನಗೆ ತೆರೆದ ಮನಸ್ಸಿನಿಂದ ಪ್ರೋತ್ಸಾಹ ನೀಡಿದ್ದಾರೆ. ನನ್ನ ಬ್ಯಾಂಕ್ ವೃತ್ತಿಯಲ್ಲಿ ಪಾಣೆಮಂಗಳೂರಿನ ಎಲ್ಲಾ ಸಮಾಜದವರು ನನ್ನಲ್ಲಿ ಪ್ರೀತಿ, ವಿಶ್ವಾಸವಿಟ್ಟು ನೀಡಿದ ಪ್ರೋತ್ಸಾಹವನ್ನು ನಾನೆಂದೂ ಮರೆಯುವ ಹಾಗಿಲ್ಲ.

ಭಜನೆಯ ಕ್ಷೇತ್ರ

ಪಾಣೆಮಂಗಳೂರಿನ ದೇವಸ್ಥಾನದಲ್ಲಿ ಶನಿವಾರ ರಾತ್ರಿ ಭಜನೆ ನಡೆಯುತ್ತಿತ್ತು. ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ಅಲ್ಲಿ ಕಾರ್ತಿಕ ಏಕಾದಶಿಯ ದಿನ ಏಕಾಹ ಭಜನೆ ನಡೆಯುವ ಸಂಪ್ರದಾಯವಿತ್ತು. ನಾನು ಊರಿನ ಹಿರಿಯರಲ್ಲಿ ಮಾತನಾಡಿ, ಅವರ ಸಹಾಯ ಸಹಕಾರ ಪಡೆದು, ಏಕಾಹ ಭಜನೆಯ ಹಿಂದಿನ ಆರು ದಿನಗಳಲ್ಲಿ ಬೇರೆ ಬೇರೆ ಊರುಗಳ ೩-೪ ಭಜನಾ ಮಂಡಳಿಯವರು ಪಾಣೆ ಮಂಗಳೂರಿಗೆ ಬಂದು ಭಜನೆ ನಡೆಸಿಕೊಡುವ ಹೊಸ

ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಇದರಿಂದ ಆ ದಿನಗಳಲ್ಲಿ ಸಂಜೆ ೬ ಗಂಟೆಯಿಂದ ರಾತ್ರಿ ೧೨ ಗಂಟೆಯವರೆಗೆ ಭಜನೆ ನಡೆಯುಲಾರಂಭಿಸಿತು. ಅದು ಈಗಲೂ ಮುಂದುವರಿಯುತ್ತಿದೆ. ಈ ಭಜನಾ ಕಾರ್ಯಕ್ರಮಕ್ಕೆ ಇಪ್ಪತ್ತೈದು ವರ್ಷ ತುಂಬಿದ ಸಂದರ್ಭದಲ್ಲಿ ಊರಿನವರು ಕಾಶೀಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ದಿವ್ಯಹಸ್ತದಿಂದ ನನಗೆ ಸನ್ಮಾನ ಮಾಡಿಸಿದ್ದರು.

ಶ್ರೀ ಶಾರದಾ ಪ್ರೌಢಶಾಲೆ

೧೯೩೭ನೇ ಇಸವಿಯಲ್ಲಿ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಸ್ಥಾನದ ಆಡಳಿತದಾರರಾದ ಶ್ರೀ ಬಾಬ ಕಾಮತಿಯವರು ಶ್ರೀ ದೇವಸ್ಥಾನದ ವತಿಯಿಂದ ಶ್ರೀ ವೆಂಕಟರಮಣ ಸ್ವಾಮೀ ಪ್ರೌಢಶಾಲೆಯನ್ನು ಪ್ರಾರಂಭಿಸಿದ ಬಳಿಕ ಪಾಣೆಮಂಗಳೂರಿನ ವಿದ್ಯಾರ್ಥಿಗಳು ಬಂಟವಾಳದ ಪ್ರೌಢಶಾಲೆಗೆ ಕಾಲ್ನಡಿಗೆಯಲ್ಲಿ ಬರುವುದಿತ್ತು. ಅವರಲ್ಲಿ ಅನಂತರ ಭಾರತೀಯ ಇಲೆಕ್ಟ್ರಾನಿಕ್ ಉದ್ಯೋಗ ಸಂಘದ ಅಧ್ಯಕ್ಷರಾದ ಶ್ರೀ ಅಪ್ಪುಭಟ್, ಪ್ರಖ್ಯಾತ ನ್ಯಾಯವಾದಿ ಶ್ರೀ ನಂದಾವರ ವಿಶ್ವನಾಥ ಕುಡ್ವ ಅವರೂ ಇದ್ದರು. ಅರುವತ್ತರ ದಶಕದಲ್ಲಿ ಪಾಣೆಮಂಗಳೂರು ಮತ್ತು ಅದರ ಸುತ್ತಮುತ್ತಲಿನ ಊರಿನ ಸುಮಾರು ೧೦೦-೧೫೦ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕಾಗಿ ಕಾಲ್ನಡಿಗೆಯಲ್ಲಿ ಬಂಟವಾಳಕ್ಕೆ ಬರುತ್ತಿದ್ದರು. ಹೀಗಾಗಿ ಶ್ರೀ ಎನ್. ಕೇಶವ ಕುಡ್ವ ಮತ್ತು ಊರಿನ ಇತರ ಹಿರಿಯರು ಸಮಾಲೋಚನೆಯನ್ನು ನಡೆಸಿ, ಬಂಟವಾಳ ಪ್ರೌಢಶಾಲೆಯ ಒಂದು ಶಾಖೆಯನ್ನು ಪಾಣೆಮಂಗಳೂರಿನಲ್ಲಿ ಪ್ರಾರಂಭಿಸಬೇಕು ಮತ್ತು ಅದರ ಎಲ್ಲಾ ಖರ್ಚುವೆಚ್ಚಗಳನ್ನು ನೀಡಿ ಸಹಕಾರವನ್ನು ಒದಗಿಸುತ್ತೇವೆ ಎಂದು ಬಂಟವಾಳದ ಶ್ರೀ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಪ್ರೌಢಶಾಲೆಯ ಆಡಳಿತ ಮಂಡಳಿಗೆ ಮನವಿಯನ್ನು ಸಲ್ಲಿಸಿದರು. ಆದರೆ ಈ ಮನವಿಯನ್ನು ಬಂಟವಾಳದ ನೇತಾರರು ಸ್ವೀಕರಿಸಲಿಲ್ಲ. ಹೀಗಾಗಿ ಪಾಣೆಮಂಗಳೂರಿನಲ್ಲಿ ಪ್ರತ್ಯೇಕವಾಗಿ ಪ್ರೌಢಶಾಲೆಯೊಂದನ್ನು ಪ್ರಾರಂಭಿಸುವುದೆಂದು ನಿರ್ಧಾರವಾಯಿತು.

೧೯೬೮ನೇ ಇಸವಿಯಲ್ಲಿ ಆಗಿನ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಮುಖರೂ ಆಗಿದ್ದ ಶ್ರೀ ಎಸ್. ಮುಕುಂದ ರಾವ್ ಇವರ ಹಸ್ತದಿಂದ ಶ್ರೀ ಶಾರದಾ ಪ್ರೌಢಶಾಲೆಯ ೮ನೇ ತರಗತಿಯನ್ನು ಎಸ್.ವಿ.ಎಸ್. ಹಿರಿಯ ಪ್ರಾಥಮಿಕ ಶಾಲೆಯ ಒಂದು ಕೊಠಡಿಯಲ್ಲಿ ಸ್ಥಾಪಿಸಲಾಯಿತು. ಆದರೆ ಶಾರದಾ ಪ್ರೌಢಶಾಲೆಗೆ ಹೊಸ ಕಟ್ಟಡದ ಆವಶ್ಯಕತೆ ಇತ್ತು. ಅದಕ್ಕಾಗಿ ನರಿಕೊಂಬು ರಾಮರಾವ್ ಎಂಬ ಭೂಮಾಲಿಕರೊಬ್ಬರು ಈಗ ಶಾರದಾ ಪ್ರೌಢಶಾಲೆ ಇರುವ ಜಾಗವನ್ನು ದಾನವಾಗಿ ನೀಡಿದರು. ಆ ಜಾಗದಲ್ಲಿದ್ದ ಕಲ್ಲು,ಮಣ್ಣುಗಳನ್ನು ತೆಗೆದು ನೆಲವನ್ನು ಸಮತಟ್ಟಾಗಿಸಲು ಊರಿನವರು ಸ್ವಯಂಪ್ರೇರಣೆಯಿಂದ ಅನೇಕ ರಾತ್ರಿ ಶ್ರಮಿಸಿದರು. ಈ ಕಾರ್ಯದಲ್ಲಿ ನಾನೂ ಭಾಗವಹಿಸಿದ್ದೆ. ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭವಾದಾಗ ಮಣಿಪಾಲದ ಬ್ರಹ್ಮನೆನಿಸಿಕೊಂಡಿದ್ದ ಡಾ. ಟಿ.ಎಂ.ಎ.ಪೈ ಅವರು ಅಪಾರ ಧನಸಹಾಯ ನೀಡಿದರು. ಇದರಿಂದಾಗಿ ಶಾರದಾ ಪ್ರೌಢಶಾಲೆಯು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಡ್ಯುಕೇಶನ್ನಿನ ಜೊತೆ ಸಂಲಗ್ನಗೊಂಡ ಸಂಸ್ಥೆಯಾಯಿತು.

ಹೊಸ ಕಟ್ಟಡದ ನಿರ್ಮಾಣದ ಸಂದರ್ಭದಲ್ಲಿ ಹಣ ಸಂಗ್ರಹಕ್ಕಾಗಿ ಯಕ್ಷಗಾನವನ್ನೂ ಆಡಿಸುವುದೆಂದು ನಿರ್ಧರಿಸಲಾಗಿತ್ತು. ಇದಕ್ಕಾಗಿ ನಾನು ಊರಿನವರೊಂದಿಗೆ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಮೊದಲಾದ ಮಹನೀಯರನ್ನು ಭೇಟಿಯಾಗಲು ಹೋಗಿದ್ದೆ. ಅಲ್ಲದೆ ಧನಸಂಗ್ರಹಕ್ಕಾಗಿ ಯಕ್ಷಗಾನದ ಟಿಕೇಟ್ ಮಾರಲು ಶ್ರೀ ಕೇಶವ ಕುಡ್ವ ಮೊದಲಾದ ಮುಖಂಡರೊಂದಿಗೆ ಕೆಲಸ ಮಾಡಿದೆ. ನಾನು ಶ್ರೀ ಶಾರದಾ ಪ್ರೌಢಶಾಲಾ ಸಂಸ್ಥೆಯ ಆಜೀವ ಸದಸ್ಯನಾಗಿದ್ದೇನೆ.

೧೯೬೭ರಲ್ಲಿ ನಡೆದ ಸಿಂಡಿಕೇಟ್ ಬ್ಯಾಂಕ್‌ನ ಕ್ಯುಮ್ಯುಲೇಟಿವ್ ಡೆಪಾಸಿಟ್‌ನ ಹೊಸ ಖಾತೆಗಳ ಉದ್ಘಾಟನಾ ಸ್ಪರ್ಧೆಯಲ್ಲಿ ನನಗೆ ಗ್ರಾಮಾಂತರ ಶಾಖೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಮೊದಲ ಬಹುಮಾನ ದೊರೆಯಿತು. ಬಹುಮಾನದ ಮೊತ್ತ ೭೦೦ ರೂಪಾಯಿ. ಈ ಸಂದರ್ಭದಲ್ಲಿ ನನಗೆ ಪ್ರೋತ್ಸಾಹ ನೀಡಿದವರಿಗಾಗಿ ನಾನು ಒಂದು ಸಂತೋಷ ಕೂಟವನ್ನು ಪಾಣೆಮಂಗಳೂರು ಶಾರದಾ ಪ್ರೌಢಶಾಲೆಯಲ್ಲಿ ಆಯೋಜಿಸಿ, ಆ ಸಮಾರಂಭದಲ್ಲಿ ಭಾಗವಹಿಸಲು ಸಿಂಡಿಕೇಟ್ ಬ್ಯಾಂಕ್‌ನ ಚೇರಮನ್ ಶ್ರೀ ಟಿ.ಎ. ಪೈ ಅವರಿಗೆ ಆಮಂತ್ರಣ ನೀಡಿದೆ. ಅವರು ಒಪ್ಪಿ ಸಮಾರಂಭದಲ್ಲಿ ಭಾಗಿಯಾಗಿ ಅವರು ಮಾಡಿದ ಭಾಷಣದಲ್ಲಿ, "ನಾವು ಬ್ಯಾಂಕ್‌ನ ಪ್ರಗತಿಗಾಗಿ ಅನೇಕ ಸ್ಪರ್ಧೆಗಳನ್ನು ನಡೆಸುತ್ತೇವೆ. ಇದರಿಂದ ಅನೇಕ ಜನರಿಗೆ ಬಹುಮಾನ ಮತ್ತು ಹಣ ಎರಡೂ ಸಿಗುತ್ತದೆ. ಆದರೆ ಹಣ ಸಿಕ್ಕಿದ ಸಂತೋಷವನ್ನು ಬ್ಯಾಂಕಿನ ಗ್ರಾಹಕರೊಂದಿಗೆ ಹಂಚುವ ಕ್ರಮವನ್ನು ಬಸ್ತಿ ವಾಮನ ಶೆಣೈ ಅವರು ಮಾತ್ರ ಅನುಸರಿಸಿದ್ದಾರೆ. ಇಂತಹ ಉತ್ತಮ ಪದ್ಧತಿ ನಡೆಯುತ್ತಿರುವುದನ್ನು ನಾನು ಇದೇ

ಮೊದಲ ಬಾರಿ ಕಾಣುತ್ತಿದ್ದೇನೆ" ಎಂದು ಮುಕ್ತಕಂಠದಿಂದ ನನ್ನ ಶ್ಲಾಘನೆ ಮಾಡಿರುವುದು ನನಗೆ ಈಗಲೂ ನೆನಪಿನಲ್ಲಿ ಇದೆ.

೧೯೬೭ರಲ್ಲಿ ಸುಳ್ಯ ಮತ್ತು ಗುರುಪುರ ಶಾಖೆಗಳ ಮೆನೇಜರ್‌ಗಳು ರಜೆಯಲ್ಲಿ ಹೋಗಿದ್ದ ಸಂದರ್ಭದಲ್ಲಿ ನನ್ನನ್ನು ಪ್ರಭಾರ ಮೆನೇಜರ್ ಆಗಿ ಅಲ್ಲಿಗೆ ಕಳುಹಿಸಿದ್ದರು. ಹೀಗಾಗಿ ನಾನು ಸುಳ್ಯ, ಗುರುಪುರ ಮತ್ತು ಹೆಬ್ರಿಯಲ್ಲಿ ಒಂದೊಂದು ತಿಂಗಳು ಪ್ರಭಾರ ಮೆನೇಜರ್‌ನಾಗಿ ಕೆಲಸ ಮಾಡಿದ್ದೇನೆ. ಆ ಒಂದು ತಿಂಗಳಲ್ಲಿಯೇ ಸ್ಥಳೀಯ ಜನಸಮುದಾಯದಲ್ಲಿ ಚಿರಪರಿಚಿತನಾಗಿದ್ದೆ.

ಗುರುಪುರ ಊರೆಂದರೆ ಆಗ ಅದು ಸಣ್ಣ ಪೇಟೆ. ಸೆಂಟ್ರಲ್ ಕ್ಲಾತ್ ಸ್ಟೋರ್ ಅಲ್ಲಿಯ ಪ್ರಸಿದ್ಧ ರಖಂ ಜವುಳಿ ಅಂಗಡಿ. ಅದರ ಮಾಲಿಕರು ಶ್ರೀ ಗುರುಪುರ ವಾಸುದೇವ ಪ್ರಭು. ಸಿಂಡಿಕೇಟ್ ಬ್ಯಾಂಕಿನ ಗುರುಪುರ ಶಾಖೆಯಲ್ಲಿ ಅವರ ವಹಿವಾಟು ದೊಡ್ಡದು. ಆದರೆ ಶ್ರೀ ವಾಸುದೇವ ಪ್ರಭು ಅವರು ಬ್ಯಾಂಕ್‌ಗೆ ಬಂದರೆ ಮೆನೇಜರ್ ಕ್ಯಾಬಿನ್ನಿಗೆ ಬರುತ್ತಿರಲಿಲ್ಲ. ನಾನು ಟೆಂಪರರಿ ಮೆನೇಜರ್ ಆಗಿ ಅಲ್ಲಿಗೆ ಹೋದ ೨-೩ ದಿನಗಳೊಳಗೆ ಅವರನ್ನು ಸಂಪರ್ಕಿಸಿ ಅವರೊಂದಿಗೆ ಆಪ್ತ ಒಡನಾಟವನ್ನು ಪ್ರಾರಂಭಿಸಿದೆ. ಅವರಿಗೆ ನನ್ನ ತಂದೆಯವರ ವಿಚಾರದಲ್ಲಿ ತುಂಬಾ ಅಭಿಮಾನ. ನನ್ನ ಚಿಕ್ಕಪ್ಪ ಶ್ರೀ ಬಸ್ತಿ ಪುಂಡಳೀಕ ಶೆಣೈ ಅವರು ಕೊಂಕಣಿ ಮತ್ತು ಸಂಸ್ಕೃತ ಭಾಷಾಜ್ಞಾನ ಹೊಂದಿರುವುದನ್ನು ಕೂಡ ಅವರು ತಿಳಿದುಕೊಂಡಿದ್ದರು. ರಾತ್ರಿ ಅವರ ವ್ಯಾಪಾರ ಮುಗಿದ ಬಳಿಕ ನಾವು ವಾಕಿಂಗ್ ಮಾಡುತ್ತಾ ಸಾಹಿತ್ಯ, ಸಂಸ್ಕೃತಿ, ಸಂಸ್ಕಾರಗಳ ವಿಚಾರವಾಗಿ ಮಾತುಕತೆ ನಡೆಸುವುದಿತ್ತು. ಒಂದು ತಿಂಗಳು ಕಳೆದ ಬಳಿಕ ನಾನು ಗುರುಪುರದಿಂದ ಮತ್ತೆ ಪಾಣೆಮಂಗಳೂರು ಶಾಖೆಗೆ ಮರಳಿ ಬರುವ ಸಂದರ್ಭದಲ್ಲಿ ವಾಸುದೇವ ಪ್ರಭು ಮಾಮರು ನನಗೆ, ನನ್ನ ಕುಟುಂಬ ಮತ್ತು ನನ್ನ ತಾಯಿಯವರಿಗೆ ತುಂಬಾ ಪ್ರೀತಿ ಮತ್ತು ಅಭಿಮಾನದಿಂದ ಸತ್ಕಾರ ಮಾಡಿದ್ದರು. ಆಮೇಲೆಯೂ ಶ್ರೀ ಪ್ರಭುಮಾಮ ನನ್ನ ಸಾರ್ವಜನಿಕ ಮತ್ತು ಬ್ಯಾಂಕಿನ ಚಟುವಟಿಕೆಗಳ ವಿಚಾರವಾಗಿ ಪ್ರಶಂಸಿಸಿ ನನಗೆ ಪತ್ರ ಬರೆಯುವುದಿತ್ತು.

ರಾಯಭಾಗ ಶಾಖೆ

ಬ್ಯಾಂಕಿನ ವಿವಿಧ ಮೂರು ಶಾಖೆಗಳಲ್ಲಿ ಪ್ರಭಾರ ಪ್ರಬಂಧಕನಾಗಿ ಶಾಖೆಯ ವ್ಯವಹಾರವನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿದ ಕಾರಣವಾಗಿ ಸಿಂಡಿಕೇಟ್ ಬ್ಯಾಂಕ್‌ನ ವರಿಷ್ಠ ಅಧಿಕಾರಿಗಳು ನನಗೆ ಸ್ವತಂತ್ರ ಶಾಖೆಯ ಪ್ರಬಂಧಕನಾಗಿ ಜವಾಬ್ದಾರಿ ನೀಡುವ ಸಂಕಲ್ಪ ಮಾಡಿದರು.

೧೯೬೪ರಲ್ಲಿ ದೇಶದಲ್ಲಿಯೇ ಮೊದಲ ಬಾರಿ ಸಿಂಡಿಕೇಟ್ ಬ್ಯಾಂಕ್ ರೈತರಿಗೆ 'ಕೃಷಿ ಸಾಲ' ನೀಡುವುದನ್ನು ಪ್ರಾರಂಭಿಸಿತ್ತು. ಈ ಕಾರ್ಯಯೋಜನೆಯನ್ನು ಪ್ರಾರಂಭಿಸಿದವರು ಬ್ಯಾಂಕಿನ ಮ್ಯಾನೆಜಿಂಗ್ ಡೈರೆಕ್ಟರ್ ಆಗಿದ್ದ ಶ್ರೀ ಟಿ.ಎ.ಪೈ ಅವರು. ಈ ಕಾರ್ಯಯೋಜನೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಮಂಜೂರಾತಿ ನೀಡದಿದ್ದರೂ, ಶ್ರೀ ಪೈ ಅವರೇ ಇದನ್ನು ಧೈರ್ಯದಿಂದ ಜಾರಿಗೆ ತಂದರು. ಆಗ ಅದು ಒಂದು ವಿಶೇಷತಮ ಕ್ರಾಂತಿಕಾರಕ ಸ್ಕೀಮ್ ಆಗಿತ್ತು. ಸಿಂಡಿಕೇಟ್ ಬ್ಯಾಂಕ್‌ನಿಂದ ರೈತರಿಗೆ ತುಂಬಾ ಸಹಾಯ ಒದಗಬೇಕು ಎಂದು ಬ್ಯಾಂಕ್ ಸಿಬ್ಬಂದಿಗಳ ಮೇಲೆ ಒತ್ತಡವಿತ್ತು. ನಾನು ಪಾಣೆಮಂಗಳೂರು ಶಾಖೆಯ ಉಪ ಪ್ರಬಂಧಕನಾಗಿದ್ದರೂ, ರೈತರ ಕೃಷಿ ಸಾಲದ ಕುರಿತಾಗಿ ಬಹಳ ವಿಸ್ತಾರವಾಗಿ ಕೆಲಸ ಮಾಡಿರುವುದು ಬ್ಯಾಂಕಿನ ವರಿಷ್ಠರ ಗಮನಕ್ಕೆ ಬಂದಿತ್ತು.

ಈ ನನ್ನ ಕಾರ್ಯದಿಂದಾಗಿ, ನನಗೆ ಬೆಳಗಾವಿ ಜಿಲ್ಲೆಯ ರಾಯಭಾಗ ಎಂಬ ಊರಿನಲ್ಲಿ ಹೊಸದಾಗಿ ಪ್ರಾರಂಭವಾಗಲಿರುವ ಶಾಖೆಯ ಪ್ರಬಂಧಕನಾಗಿ ನೇಮಕಾತಿ ಮಾಡಲಾಯಿತು. ಬೆಳಗಾವಿ ಜಿಲ್ಲೆಯ ರಾಯಭಾಗ, ಗೋಕಾಕ, ಚಿಕ್ಕೋಡಿ, ಮತ್ತು ಕುಡಚಿ ತಾಲೂಕುಗಳಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ನಿರ್ಮಾಣಗೊಂಡಿದ್ದರಿಂದ ನೀರಿಲ್ಲದೆ ಪಾಳು ಬಿದ್ದ ಜಮೀನು ಈಗ ಫಲವತ್ತಾಗಿತ್ತು. ಆ ದಿನಗಳಲ್ಲಿ ಅಂದರೆ ೧೯೬೭-೬೮ನೇ ಇಸವಿಯಲ್ಲಿ ಈ ನಾಲ್ಕು ತಾಲೂಕುಗಳ ರೈತರಿಗೆ ಜಮಖಂಡಿ ಮತ್ತು ರಬಕವಿ ಶಾಖೆಯಿಂದ ಕೃಷಿ ಸಾಲ ನೀಡುತ್ತಿದ್ದರು. ರಾಯಭಾಗ ತಾಲೂಕಿನ ಕೇಂದ್ರವಾಗಿರುವ ರಾಯಭಾಗ ಊರಿನಲ್ಲಿಯೇ ಒಂದು ಹೊಸ ಶಾಖೆಯನ್ನು ಪ್ರಾರಂಭಿಸುವ ಮತ್ತು ಆ ಶಾಖೆಯಿಂದ ರೈತ ಸಮೂಹಕ್ಕೆ ಸಾಲ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವ ವಿಚಾರವಾಗಿ ನಮ್ಮ ಸಿಂಡಿಕೇಟ್ ಬ್ಯಾಂಕ್ ನಿರ್ಣಯ ಕೈಗೊಂಡಿತು.

ಆ ಸಂದರ್ಭದಲ್ಲಿ ರಾಯಭಾಗ ಶಾಖೆಯ ಪ್ರಬಂಧಕ ನಾಗಲು ನಾನೇ ಯೋಗ್ಯವ್ಯಕ್ತಿ ಎಂದು ತಿಳಿದು ಶ್ರೀ ಟಿ.ಎ.ಪೈ ಅವರು ನನ್ನನ್ನು ಮಣಿಪಾಲ ಪ್ರಧಾನ ಕಚೇರಿಗೆ ಕರೆಯಿಸಿ 'ರಾಯಭಾಗ ಶಾಖೆಯ ಮೆನೇಜರ್ ಆಗಿ ಹೋಗುವೆಯಾ?' ಎಂದು ಕೇಳಿದರು. ನಾನು 'ಆಯ್ತು' ಎಂದು ನನ್ನ ಸಮ್ಮತಿ

ನೀಡಿದೆ. ಕೃಷಿ ಆರ್ಥಿಕ ವಿಭಾಗದ ಅಧಿಕಾರಿಗಳಾದ ಶ್ರೀ ಕೆ.ವಿ. ಬಿಳಿರಾಯ ಮತ್ತು ಶ್ರೀ ಕೆ.ಎಂ. ಉಡುಪ ಅವರು ನನಗೆ ರಾಯಭಾಗ ತಾಲೂಕಿನ ಕೃಷಿ ಕ್ಷೇತ್ರದ ಕುರಿತು ಮಾಹಿತಿ ನೀಡಿದರು.

ನಾನು ರಾಯಭಾಗಕ್ಕೆ ಹೋಗುವಾಗ ಪಾಣೆ ಮಂಗಳೂರು ಶಾಖೆಯಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ವಸಂತಿಯ ತಮ್ಮ ಬಾಬಣ್ಣ(ಎನ್. ಸುಧಾಕರ ಪ್ರಭು)ನನ್ನು ಜ್ಯೂನಿಯರ್ ಕ್ಲರ್ಕ್(ಕ್ಲರ್ಕ್ ಕಮ್ ಅಟೆಂಡರ್) ಆಗಿ ನನ್ನ ಜೊತೆಯಲ್ಲಿ ಕರೆದುಕೊಂಡು ಹೋದೆ. ಬಾಬಣ್ಣ ನೋಡಲು ಸಣ್ಣವನಾಗಿದ್ದ. ಅವನ ಕೈಬರೆಹವೂ ಚೆನ್ನಾಗಿರಲಿಲ್ಲ. ಹೀಗಾಗಿ ಶ್ರೀ ಟಿ.ಎ.ಪೈ ಅವನನ್ನು ಬ್ಯಾಂಕ್ ಕೆಲಸಕ್ಕೆ ಸೇರಿಸಲು ಮೊದಲು ಇಷ್ಟ ವ್ಯಕ್ತಪಡಿಸಲಿಲ್ಲ. ಆದರೆ ನಾನು ಒತ್ತಾಯಿಸಿದ್ದರಿಂದ ಅವರು ಬಾಬಣ್ಣನಿಗೆ ಕೆಲಸ ನೀಡಲು ಒಪ್ಪಿಕೊಂಡರು. ನಾನು ಹೇಗೆ ಟಿ.ಎ.ಪೈ ಅವರನ್ನು ನನ್ನ ಪಾಲಿನ ದೇವರು ಎಂದು ಹೇಳುವೆನೋ, ಅದೇ ರೀತಿ ಬಾಬಣ್ಣ ನನ್ನನ್ನು ದೇವರೆಂದು ತಿಳಿಯುತ್ತಾನೆ. ಅವನ ಹತ್ತಿರ ಯಾರಾದರೂ ನನ್ನ ಹೆಸರೆತ್ತಿದರೆ ಸಾಕು, "ಬಸ್ತಿ ವಾಮನಮಾಮ ನನ್ನ ಪಾಲಿನ ದೇವರ ಹಾಗೆ, ಅವರು ಆಗಿನ ನನ್ನ ಕಷ್ಟದ ಪರಿಸ್ಥಿತಿಯಲ್ಲಿ ನನಗೆ ಬ್ಯಾಂಕ್ ಕೆಲಸ ಕೊಡಿಸಿದ್ದಲ್ಲದೆ, ನನಗೆ ಬ್ಯಾಂಕಿನಲ್ಲಿ ಚಿಕ್ಕ ದೊಡ್ಡ ಗ್ರಾಹಕರೊಂದಿಗೆ ಹೇಗೆ ವ್ಯವಹರಿಸಬೇಕು ಎನ್ನುವುದನ್ನು ಮತ್ತು ಮುಖ್ಯವಾಗಿ ಮಾನವೀಯ ಸಂಬಂಧವನ್ನು ಕಲಿಸಿದ್ದಾರೆ" ಎಂದು ಈಗಲೂ ಹೇಳುತ್ತಿದ್ದಾನೆ. ಆಮೇಲಿನ ದಿನಗಳಲ್ಲಿ ನಾನು ಬಾಬಣ್ಣನಿದ್ದ ಶಾಖೆಗೆ ಹೋದಾಗಲೆಲ್ಲಾ ಅಲ್ಲಿಯ ಎಲ್ಲ ಸಿಬ್ಬಂದಿ ಮತ್ತು ಗ್ರಾಹಕರಲ್ಲಿ "ನನ್ನ ದೇವರು ಬಂದರು" ಎಂದೇ ಪರಿಚಯ ಮಾಡುತ್ತಿದ್ದನು. ಯಾವಾಗಲೋ ಮಾಡಿದ ಸಹಾಯವನ್ನು ಕೊನೆಯವರೆಗೆ ನೆನಪಿನಲ್ಲಿ ಇಟ್ಟುಕೊಳ್ಳುವ ಜನರು ಇವತ್ತಿನ ದಿನಗಳಲ್ಲಿ ಕಡಿಮೆ. ಅಂತಹವರಲ್ಲಿ ಬಾಬಣ್ಣ ಅಪರೂಪದ ಮನುಷ್ಯನಾಗಿದ್ದಾನೆ. ಆಮೇಲೆ ಅವನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಸಿಸ್ಟೆಂಟ್ ಜನರಲ್ ಮೆನೇಜರ್ ಆಗಿ ಬಡ್ತಿ ಪಡೆದು ದೆಹಲಿ ಮತ್ತು ಮುಂಬೈಯಲ್ಲಿ ಸೇವೆ ಸಲ್ಲಿಸಿ ಈಗ ನಿವೃತ್ತಿ ಹೊಂದಿದ್ದಾನೆ.

ನಾನು ಮತ್ತು ಬಾಬಣ್ಣ ೧೯೬೮ನೇ ಇಸವಿ, ಜೂನ್ ತಿಂಗಳಲ್ಲಿ ರಾಯಭಾಗದಲ್ಲಿ ಕಾಲಿಟ್ಟಾಗ ಅಲ್ಲಿಯ ಪರಿಸ್ಥಿತಿ ನೋಡಿ ಕಂಗಾಲಾದೆವು. 'ಈ ಊರಿಗೆ ಯಾಕಪ್ಪಾ ಬಂದೆವು' ಎಂದುಕೊಂಡು ನಮಗೆ ಅಳು ಬರುವಂತಾಯಿತು. ನೀರು, ಮಳೆಯಿಲ್ಲದ ಊರು. ಕೊಳಕು ಬಟ್ಟೆ ತೊಟ್ಟ ಜನರು. ಊರಿನ ಗಂಡಸರು, ಹೆಂಗಸರೆಲ್ಲರೂ ತಂಬಿಗೆ ಹಿಡಿದು ಶೌಚಕ್ಕಾಗಿ ಹತ್ತಿರದ ಗುಡ್ಡಕ್ಕೆ ಹೋಗುವುದು. ಹಿಂದೆ ರಾಯಭಾಗ ಕೊಲ್ಲಾಪುರ ಅರಸರ ರಾಜ್ಯದಲ್ಲಿ ಅವರ ಜಮೀನು ಇದ್ದಂತಹ ಪ್ರದೇಶವಾಗಿ ಇತ್ತಂತೆ. ಅಲ್ಲಿ ಶಿಕ್ಷಣ ಮಾಧ್ಯಮ ಮರಾಠಿ. ಹೀಗಾಗಿ ಜನರ ಆಡುಭಾಷೆ ಕನ್ನಡ–ಮರಾಠಿ ಮಿಶ್ರಭಾಷೆ: ತರಕಾರಿ, ಬಟ್ಟೆಬರೆ ಇತ್ಯಾದಿಗಳು ಬೇಕಿದ್ದರೆ ಬೆಳಗಾವಿ ಅಥವಾ ಸಾಂಗ್ಲಿ ಕಡೆಗೆ ಹೋಗಿ ತರಬೇಕು. ವ್ಯಾಪಾರ, ವ್ಯವಹಾರಗಳೆಲ್ಲವೂ ಬೆಳಗಾವಿ, ಕೊಲ್ಲಾಪುರ, ಸಾಂಗ್ಲಿ ಶಹರಗಳಲ್ಲಿ. ಆಡು ಭಾಷೆ ಮರಾಠಿ ಮಿಶ್ರಿತ ಕನ್ನಡವಾಗಿದ್ದರೂ, ಬರೆವಣಿಗೆ ಮರಾಠಿ ಭಾಷೆಯಲ್ಲಿ. ಅಂಕೆಸಂಖ್ಯೆಗಳೂ ಮರಾಠಿಯದೇ.

ನಾವು ರಾಯಭಾಗಕ್ಕೆ ಹೋಗುವ ಮೊದಲು ಪ್ರಧಾನ ಕಚೇರಿಯವರು ನಮಗೆ ಅಲ್ಲಿ ಹೊಸ ಕಟ್ಟಡವಾಗಿದೆ, ಮೆನೇಜರ್ ಕ್ವಾಟರ್ಸ್ ಕೂಡ ಇದೆ ಎಂದಿದ್ದರು. ಆದರೆ ರಾಯಭಾಗಕ್ಕೆ ಹೋಗಿ ನೋಡಿದರೆ, ಶಾಖೆ ಮತ್ತು ಮನೆಯ ನಿರ್ಮಾಣ ಕಾರ್ಯ ಅರ್ಧಂಬರ್ಧ ಮಾತ್ರವೇ ಆಗಿತ್ತು. ಅದನ್ನು ನೋಡಿ ನಮ್ಮ ಪರಿಸ್ಥಿತಿ ಅರಿವಿಗೆ ಬಂದು 'ಈ ಊರಿಗೆ ಯಾಕಾದರೂ ಬಂದೆವು?' ಎಂದು ದುಃಖಪಡುವಂತಾಯಿತು. ನಮಗೆ ಮನೆಯ ನಿರ್ಮಾಣದ ಕೆಲಸ ಮುಗಿದಿದೆ ಎಂದು ಮಾಹಿತಿ ನೀಡಿದ್ದರಿಂದ, ನಾನು ಮತ್ತು ಬಾಬಣ್ಣ ಪಾಣೆಮಂಗಳೂರಿನಿಂದ ಹೊರಟು ಬಂದ ಎರಡು ದಿನಗಳಲ್ಲಿಯೇ, ಅಲ್ಲಿಂದ ನನ್ನ ಸಂಸಾರ ಹೊರಡುವುದೆಂದು ನಿಶ್ಚಯಿಸಿದ್ದೆವು. ಅದೇ ರೀತಿ ಎರಡು ದಿನಗಳು ಕಳೆಯುವುದರೊಳಗೆ ನನ್ನ ತಾಯಿ, ಪತ್ನಿ ಮತ್ತು ಮಕ್ಕಳು ರಾಯಭಾಗಕ್ಕೆ ಬಂದು ತಲುಪಿದರು. ನನಗೆ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಆದರೆ ನನ್ನ ಸೋದರಸೊಸೆ ಇಂದಿರಾ ಮತ್ತು ಅವಳ ಪತಿ ವೆಂಕಟ್ರಾಯ ಬಾಳಿಗ ಹತ್ತಿರದ ರಬಕವಿ ಶಾಖೆಯಲ್ಲಿ ಕ್ಲರ್ಕ್ ಆಗಿದ್ದರಿಂದ, ಬಂದವರನ್ನು ಅದೇ ಕಾರಿನಲ್ಲಿ ರಬಕವಿಗೆ ರವಾನಿಸಲಾಯಿತು. ಇಲ್ಲಿಯ ಕಾಮಗಾರಿ ಮುಗಿದ ನಂತರವೇ ಅವರನ್ನು ಕರೆತರಲಾಯಿತು. ಆಮೇಲೆ ವೆಂಕಟ್ರಾಯ ಬಾಳಿಗರನ್ನು ರಾಯಭಾಗ ಶಾಖೆಗೆ ವರ್ಗಾವಣೆ ಮಾಡಿಸಿದೆ. ಹೀಗಾಗಿ ಸಾಂಸಾರಿಕ ಕಷ್ಟಕಾರ್ಪಣ್ಯದಿಂದ ಒಮ್ಮೆ ಮುಕ್ತಿ ದೊರೆತಂತಾಯಿತು. ನಮ್ಮ ಮನೆಯ ಮುಚ್ಚಿದ ಶೌಚಾಲಯ ರಾಯಬಾಗ ಪ್ರದೇಶದಲ್ಲಿ ಹೊಸ ವಿಚಾರವಾಗಿದ್ದರಿಂದ ಅದನ್ನು ನೋಡಲೆಂದೇ ಊರಿನ ಜನರು ಬರುತ್ತಿದ್ದರು. ಅಷ್ಟು ಹಿಂದುಳಿದ ಪ್ರದೇಶವಾಗಿತ್ತು ಆಗ ರಾಯಭಾಗ ತಾಲೂಕು.

ಅಲ್ಲಿಯ ಜನರಿಗೆ ಸಿಂಡಿಕೇಟ್ ಬ್ಯಾಂಕ್ ಬಂದಿರುವುದು ತುಂಬಾ ಸಂತೋಷ ನೀಡಿದ ವಿಚಾರವಾಗಿತ್ತು. ಅದರಲ್ಲಿಯೂ ವಿಶೇಷವಾಗಿ ಅಲ್ಲಿಯ ರೈತಾಪಿ ಜನರಲ್ಲಿ ಉತ್ಸಾಹ ಮೂಡಿ, ಅವರು ತಮ್ಮ ಭವಿಷ್ಯದಲ್ಲಿ ಬೆಳಕು ಕಂಡ ಅನುಭವವಾಗಿತ್ತು. ಮೇಲೆ ತಿಳಿಸಿದಂತೆ, ಘಟಪ್ರಭಾ ಎಡದಂಡೆ ಕಾಲುವೆಯಿಂದಾಗಿ ಮೊದಲು ೨೦೦-೩೦೦ ರೂಪಾಯಿ ಬೆಲೆಬಾಳುತ್ತಿದ್ದ ಜಮೀನಿನ ಮೌಲ್ಯವು ೨೦೦೦೦ ದಿಂದ ೨೫೦೦೦ದವರೆಗೆ ಬೆಲೆ ಬರುವ ಹಾಗಾಯಿತು. ಅಲ್ಲದೆ ಹೈಬ್ರಿಡ್ ಜೋಳದ ಹೊಸತಳಿ ಚಲಾವಣೆಗೆ ಬಂದ ಕಾರಣವಾಗಿ, ಪಾಳು ಬಿದ್ದ ಜಮೀನಿಗೆ ನೀರಿನಾಶ್ರಯ ದೊರೆತು ರೈತರು ಮೆಕ್ಕೆಜೋಳದ ಕೃಷಿ ಪ್ರಾರಂಭಿಸಿದರು. ಹಣದ ಬಲವಿದ್ದವರು ಕಬ್ಬನ್ನು ಬೆಳೆಸಿದರು. ಕಬ್ಬು ಬೆಳೆಯುವ ಜಮೀನುದಾರರು ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ನೀಡುತ್ತಿದ್ದರು ಅಥವಾ ತಮ್ಮ ಜಮೀನಿನಲ್ಲಿಯೇ ಬೆಲ್ಲ ತಯಾರಿಸುತ್ತಿದ್ದರು. ಇದರಿಂದ ಅವರಲ್ಲಿ ಅಪಾರ ಹಣ ಶೇಖರವಾಗತೊಡಗಿತು.

ಹೀಗಿರುವಾಗ ರಾಯಭಾಗದಲ್ಲಿ ನಮ್ಮ ಸಿಂಡಿಕೇಟ್ ಬ್ಯಾಂಕಿನ ಶಾಖೆ ೧೯೬೮ನೇ ಇಸವಿ ಜುಲೈ ೨೧ರಂದು ಪ್ರಾರಂಭವಾಯಿತು. ಬ್ಯಾಂಕ್ ವತಿಯಿಂದ ಊರೂರು ತಿರುಗಾಡಿ ಜನರಿಗೆ 'ಕೃಷಿ ಸಾಲ'ದ ವಿಚಾರವಾಗಿ ಪ್ರಚಾರ ಮಾಡುವ ಕೆಲಸವನ್ನು ಕೈಗೊಳ್ಳಲಾಯಿತು. ಇದಕ್ಕಾಗಿ ನಾವು ಹಗಲು, ರಾತ್ರಿ, ಭಾನುವಾರ ಅಥವಾ ಇತರ ಬ್ಯಾಂಕ್ ರಜಾದಿನಗಳೆಂದು ಲೆಕ್ಕಿಸದೆ ಶ್ರಮಪಟ್ಟೆವು. ನಾನು ಕರ್ತವ್ಯನಿಷ್ಠತೆಯಿಂದ ತುಂಬಾ ಮುತುವರ್ಜಿ ವಹಿಸಿ(ನನ್ನ ಈ ಕೆಲಸಕ್ಕೆ ಶ್ರೀ ಟಿ.ಎ.ಪೈ ಅವರು ನೀಡಿದ ಸ್ಫೂರ್ತಿ ಮತ್ತು ಬೆಂಬಲ ಕಾರಣ) ಬ್ಯಾಂಕ್ ಮೂಲಕ ಸಾಲ ನೀಡಿದ ಕಾರಣವಾಗಿ ರಾಯಭಾಗ ಮತ್ತು ಇತರ ನಾಲ್ಕು ತಾಲೂಕುಗಳ ರೈತಾಪಿ ಜನರು ಸಾವಿರ, ಎರಡು ಸಾವಿರ ಎಕ್ರೆ ಜಮೀನಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಮತ್ತು ಮೆಕ್ಕೆ ಜೋಳವನ್ನು ಬೆಳೆಸುವುದಕ್ಕೆ ಅನುಕೂಲವಾಯಿತು.

ಇದೇ ರೀತಿ ಠೇವಣಿ ಸಂಗ್ರಹ ಕಾರ್ಯದಲ್ಲಿಯೂ ರಾಯಭಾಗ ಶಾಖೆ ಮುಂಚೂಣಿಯಲ್ಲಿ ಇತ್ತು. ಈ ವಿಷಯದಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಶ್ರೀ ಟಿ.ಎ.ಪೈ ಮತ್ತು ಇತರ ವರಿಷ್ಠರು ಯಾವುದೇ ಊರಿಗೆ ಹೋದಾಗಲೂ ನನ್ನ ಕೆಲಸದ ಕುರಿತು ಸ್ತುತಿ ಮಾಡುವುದಿತ್ತು. ರಾಯಭಾಗ ಮತ್ತು ಅದರ ಹತ್ತಿರದ ನಾಲ್ಕು ತಾಲೂಕುಗಳ ಜನಸಂಪರ್ಕ ಮಾಡಿ ಗರಿಷ್ಠ ಠೇವಣಿ ಸಂಗ್ರಹ ಮಾಡಿದ್ದೆ. ಶಾಖೆಯನ್ನು ಪ್ರಾರಂಭಿಸುವಾಗ ಶ್ರೀ ಟಿ.ಎ.ಪೈ ತಿಳಿಸಿದ ವಾರ್ಷಿಕ ಠೇವಣಿಯ ೩ ಲಕ್ಷದ ಗುರಿಯನ್ನು ನಾನು ಶಾಖೆಯ ಪ್ರಾರಂಭದ ದಿನವೇ ಮಾಡಿ ತೋರಿಸಿದ್ದೆ. ಇದೇ ರೀತಿ ನಾಲ್ಕು ಬಾರಿ ಠೇವಣಿ ಗುರಿಯನ್ನು ಪುನರಾವೃತ್ತಿಗೊಳಿಸಿ ಬ್ರಾಂಚ್ ಪ್ರಾರಂಭವಾದ ಆರು ತಿಂಗಳುಗಳ ಒಳಗೆ ಅಂದರೆ ೧೯೬೮ ದಶಂಬರ್ ತಿಂಗಳ ಕೊನೆಯೊಳಗೆ ರೂ ೨೫ ಲಕ್ಷದ ಗುರಿಯನ್ನು ಬರೀ ಐದು ತಿಂಗಳೊಳಗೆ ತಲುಪುವುದು ನಮಗೆ ಸಾಧ್ಯವಾಯಿತು. ಇದು ಸಿಂಡಿಕೇಟ್ ಬ್ಯಾಂಕಿನ ಗ್ರಾಮೀಣ ಶಾಖೆಗಳ ಚರಿತ್ರೆಯಲ್ಲೇ ಒಂದು ದಾಖಲೆಯಾಗಿದೆ.

ಜನವರಿ ೨೮, ೧೯೬೯ರಲ್ಲಿ ಧಾರವಾಡದಲ್ಲಿ ನಡೆದ ಸಿಂಡಿಕೇಟ್ ಬ್ಯಾಂಕ್‌ನ 'ಪ್ರಬಂಧಕರ ಅಧಿವೇಶನ'ದಲ್ಲಿ ಶ್ರೀ ಟಿ.ಎ.ಪೈ ಯವರು ರಾಯಭಾಗ ಶಾಖೆಯ ಪ್ರಗತಿ ಮತ್ತು ನನ್ನ ಕೆಲಸದ ವಿಚಾರವಾಗಿ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ೧೯೬೯-೭೦ ಈ ಎರಡು ವರ್ಷಗಳಲ್ಲಿ ರಾಯಭಾಗದ ಸಮೀಪದಲ್ಲಿರುವ ಇಂಗಳಿ ಎಂಬ ಹೆಸರಿನ ಊರಿನಲ್ಲಿ ನಡೆದ 'ಜಾನುವಾರು ಸಾಲಮೇಳ' ಮತ್ತು ಸಕ್ಕರೆ ಕಾರ್ಖಾನೆಯ ನೌಕರರಿಗಾಗಿ ನಡೆಸಿದ 'ಸೈಕಲ್ ಸಾಲಮೇಳ'ದ ವಿಚಾರವಾಗಿ ಸಿಂಡಿಕೇಟ್ ಬ್ಯಾಂಕ್‌ವತಿಯಿಂದ ಬಹಳ ಪ್ರಚಾರ ನೀಡಲಾಗಿತ್ತು. ಆ ಕಾಲದಲ್ಲಿ ಈ ಎರಡು 'ಮೇಳ'ಗಳು ದೇಶದಲ್ಲಿಯೇ ಹೊಚ್ಚಹೊಸ ಯೋಜನೆಗಳಾಗಿ ಪ್ರಚಾರಕ್ಕೆ ಬಂದಿದ್ದವು. ಆಮೇಲೆ ಎಂಭತ್ತರ ದಶಕದಲ್ಲಿ ಭಾರತ ಸರಕಾರವು ಸಾಲ ಮೇಳ ಎಂಬ ಹೊಸ ಪರಿಕಲ್ಪನೆಯನ್ನು ಜಾರಿಗೆ ತಂದಿತು.

ಘಟಪ್ರಭಾ ಕಾಲುವೆಯಿಂದ ರಾಯಭಾಗ ಪ್ರದೇಶಕ್ಕೆ ನೀರಿನ ಪೂರೈಕೆ ಅಧಿಕಗೊಂಡು, ಸಾವಿರಾರು ಎಕ್ರೆ ಜಮೀನಿನಲ್ಲಿ ಕಬ್ಬಿನ ಬೆಳೆ ಸಮೃದ್ಧವಾಗಿ ಬೆಳೆದದ್ದರಿಂದ, ಅಲ್ಲಿಯ ರಾಜಕೀಯ ಮತ್ತು ಸಾಮಾಜಿಕ ಮುಖಂಡರು ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ನಿರ್ಣಯ ಕೈಗೊಂಡರು. ಆ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಪ್ರವರ್ತಕರು ಪಾಲು ಬಂಡವಾಳದ ಸಂಗ್ರಹ ಕಾರ್ಯಕ್ಕೆಂದು ಹೊರಟಾಗ, ಅವರಿಗೆ ಹಣದ ಸಮಸ್ಯೆ ಕಾಣಿಸಿತು, ಪಾಲು ಬಂಡವಾಳ ಸಂಗ್ರಹವಾಗಲಿಲ್ಲ. ಆ ಸಮಯದಲ್ಲಿ ಅವರು ನನ್ನನ್ನು ಭೇಟಿಯಾಗಿ ನನ್ನ ಸಹಾಯ ಕೋರಿದರು. ಆಗ ನಾನು ಅವರಿಗೆ ಹೇಳಿದೆ, 'ನಿಮ್ಮ ಸಕ್ಕರೆ ಕಾರ್ಖಾನೆಯಲ್ಲಿ ಶೇರುಗಳನ್ನು ಪಡೆಯುವ ಇಚ್ಛೆಯುಳ್ಳ ರೈತರಲ್ಲಿ ಹಣವಿಲ್ಲದಿದ್ದರೆ, ನಾನು ಅವರಿಗೆ ಬ್ಯಾಂಕ್‌ನಿಂದ ಕೃಷಿ ಸಾಲ ನೀಡುತ್ತೇನೆ. ಅದನ್ನು ನೀವು ಅವರ ಹೆಸರಿನಲ್ಲಿ ಕಾರ್ಖಾನೆಯ ಶೇರು ಆಗಿ ತೆಗೆದುಕೊಳ್ಳಿ. ಅದು ನಿಮ್ಮ ಖಾತೆಗೆ ಜಮಾ ಆಗುತ್ತದೆ.' ಇದನ್ನು ಕೇಳಿ ಅವರಿಗೆ ತುಂಬಾ ಸಂತೋಷವಾಯಿತು. ಹೀಗೆ

ರಾಯಭಾಗ ಸಕ್ಕರೆ ಕಾರ್ಖಾನೆಗೆ ೨೫ ಲಕ್ಷ ರೂಪಾಯಿ ಶೇರು ಬಂಡವಾಳ ಜಮಾ ಆಗುವಂತೆ ನಾನು ಅವರಿಗೆ ಸಹಾಯ ನೀಡಿದೆ. ಇದರಿಂದ ಶ್ರೀ ವಸಂತರಾವ್ ಪಾಟೀಲ (ಆಗಿನ ಕರ್ನಾಟಕ ಸರಕಾರದಲ್ಲಿ ಮಂತ್ರಿಯಾಗಿದ್ದವರು), ಎಸ್.ಆರ್. ಬಾಣೆ ಮೊದಲಾದ ನೇತಾರರಿಗೆ ನನ್ನ ಮೇಲೆ ಬಹಳ ವಿಶ್ವಾಸ ಮೂಡಿತು.

ಇದೇ ರೀತಿ ಅಂಕಲಿಯ ಎಸ್.ಎ. ಶಿತೋಳೆ ಅಂಕಲೀಕರ್, ಅವರ ಪುತ್ರ ಪ್ರತಾಪ ಸಿಂಗ್ ಶಿತೋಳೆ ಮತ್ತು ಅಲ್ಲಿಯವರಾದ ಚಿದಾನಂದ ಕೋರೆ ಮತ್ತು ಉಗಾರದ ಸಕ್ಕರೆ ಕಾರ್ಖಾನೆಯ ಶಿರಗಾಂವಕರ ಬಂಧುಗಳ ಪ್ರಶಂಸೆಯೂ ದೊರೆಯಿತು. ನಾನು ಶ್ರೀಮಂತ ಕೊಲ್ಲಾಪುರ ಛತ್ರಪತಿಯವರ ಅರಮನೆಗೆ ಹೋಗಿ ರಾಜರ ಠೇವಣಿ ಖಾತೆಗೆ ಲಕ್ಷ ಲಕ್ಷ ಮೊತ್ತವನ್ನು ತರುವುದಿತ್ತು. ಅವರ ಜೊತೆಯಲ್ಲಿ ಅನೇಕ ಬಾರಿ ನಾನು ಅರಮನೆಯಲ್ಲಿ ಊಟ ಕೂಡ ಮಾಡಿದ್ದೇನೆ.

ರಾಯಭಾಗ ನನ್ನ ಬ್ಯಾಂಕ್ ಪ್ರಬಂಧಕ ಹುದ್ದೆಗೆ ಬಹಳಷ್ಟು ಗೌರವ ಸ್ಥಾನ ದೊರಕಿಸಿದ ಪ್ರದೇಶ. ಅಲ್ಲಿರುವ ನಮ್ಮ ಊರಿನ ಶ್ರೀ ಮಂಜುನಾಥ ಗಣೇಶ ಪುರಾಣಿಕ ಮತ್ತು ಅವರ ಭಾವಮೈದ ಮಂಜುನಾಥ ಉಗ್ರಾಣಿ ಎಂಬ ಕುಟುಂಬ ಈಗಲೂ ನಮ್ಮೊಂದಿಗೆ ಸಂಬಂಧವನ್ನು ಉಳಿಸಿಕೊಂಡು ಬರುವಷ್ಟು ನಿಕಟವಾಗಿತ್ತು. ಅಲ್ಲದೆ ಪುಷ್ಪದಂತ ಕಾಗುಡಿ ಶೆಟ್ಟಿ, ಕುಡಚಿ ಮಾಸ್ತರ ಇವರೂ ನನಗೆ ತುಂಬಾ ಸಹಾಯ ಮಾಡಿದ್ದಾರೆ. ಅದನ್ನು ನಾನು ಎಂದೂ ಮರೆಯಲಾರೆ.

ಪಾಣೆಮಂಗಳೂರು ಶಾಖೆ

ಪಾಣೆಮಂಗಳೂರು ಶಾಖೆ ಪ್ರಾರಂಭವಾಗಿ ೨೫ ವರ್ಷಗಳು ಕಳೆದ ನೆನಪಿಗಾಗಿ ೧೯೭೭ರಲ್ಲಿ ಅಲ್ಲಿಯ ಶ್ರೀ ವೀರ ವಿಠಲಸ್ವಾಮೀ ದೇವಸ್ಥಾನದ ಜಾಗವನ್ನು ಸಿಂಡಿಕೇಟ್ ಬ್ಯಾಂಕ್ ಭೋಗ್ಯಕ್ಕೆ ಪಡೆದು ಹೊಸ ಕಟ್ಟಡವನ್ನು ನಿರ್ಮಿಸಿತು. ಅಲ್ಲಿಯ ನಿರ್ಮಾಣ ಕಾರ್ಯ ಮುಗಿದಾಗ ನನ್ನನ್ನು ರಾಯಭಾಗದಿಂದ ಪಾಣೆಮಂಗಳೂರು ಶಾಖೆಗೆ ವರ್ಗಾವಣೆ ಮಾಡಲಾಯಿತು. ಬ್ಯಾಂಕ್‌ನ ಹೊಸ ಕಟ್ಟಡದ ಉದ್ಘಾಟನೆ ಮತ್ತು 'ಬೆಳ್ಳಿಹಬ್ಬ ಸಮಾರಂಭ' ಬಹಳ ಸಂಭ್ರಮದಿಂದ ನಡೆಯಿತು. ಈ ಕಾರ್ಯಕ್ರಮಕ್ಕೆ ಆಗ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷರಾಗಿದ್ದ ಶ್ರೀ ಕೆ.ಕೆ. ಪೈ ಅವರು ಬಂದಿದ್ದರು. ಶ್ರೀ ನೂಜಿ ನಾರಾಯಣ ಭಟ್ ಅವರು ದೀಪ ಹಚ್ಚಿ ಹೊಸ ಕಟ್ಟಡದ ಉದ್ಘಾಟನೆಯನ್ನು ನಡೆಸಿದರು.

ಪಾಣೆಮಂಗಳೂರಿನಲ್ಲಿ ಮೆನೇಜರ್ ಆಗಿ ಕಾರ್ಯ ನಿರ್ವಹಿಸಿದ್ದ ನಾಲ್ಕು ವರ್ಷಗಳ ಅವಧಿಯಲ್ಲಿ ನನ್ನ ಪ್ರಗತಿ ಮತ್ತು ಕರ್ತೃತ್ವ ಶಕ್ತಿಗೆ ಸಾಮಾಜಿಕ ಮಾನ್ಯತೆ ಸಿಗುವುದು ಪ್ರಾರಂಭವಾಯಿತು. ಅಲ್ಲಿಯವರೆಗೆ, ಅಂದರೆ ಇದುವರೆಗಿನ ವರ್ಷಗಳಲ್ಲಿ ನಾನು ಒಬ್ಬ ಕರ್ತೃತ್ವಶಾಲಿ ಮತ್ತು ನಾಯಕತ್ವದ ಗುಣವನ್ನು ರಕ್ತಗತ ಮಾಡಿಕೊಂಡಿರುವವನು ಎಂದು ಜನರಿಗೆ ತಿಳಿದಿದ್ದರೂ, ನನ್ನಲ್ಲಿ ಶ್ರೀಮಂತಿಕೆಯಾಗಲೀ, ಅಥವಾ ಮನೆತನದ ಹೆಸರಾಗಲೀ ಇಲ್ಲದ್ದರಿಂದ, ನಾನೊಬ್ಬ ಸಾಮಾನ್ಯ ಕೆಲಸಗಾರ ಅಥವಾ ಬಸ್ ಟಿಕೇಟ್ ನೀಡುವ ಏಜೆಂಟ್ ಎನ್ನುವ ಭಾವನೆ ಸಮಾಜದಲ್ಲಿತ್ತು. ಅದು ಸಹಜವೂ ಹೌದು.

ಮಹಾವೀರ ಕರ್ಣನನ್ನು ದುರ್ಯೋಧನನು ಕರೆಯಿಸಿಕೊಂಡು 'ರಾಜ'ನ ಸ್ಥಾನಮಾನ ನೀಡಿದ ಬಳಿಕ ಕರ್ಣನ ಸ್ವಾಮಿಭಕ್ತಿ, ಶೂರತ್ವ, ದಾನಶೀಲತೆಗಳಿಗೆ ಹೇಗೆ ಬೆಲೆ ಬಂತೋ, ಅದೇ ರೀತಿ ಶ್ರೀ ತಿರುಮಲ ವೆಂಕಟರಮಣಸ್ವಾಮಿಯ ದಯೆಯಿಂದ ಉನ್ನತ ಮತ್ತು ಉದಾತ್ತ ಮನೋಭೂಮಿಕೆ ಇದ್ದಂತಹ ಶ್ರೀ ಟಿ.ಎ.ಪೈ ಮತ್ತು ಶ್ರೀ ಕೆ.ಕೆ.ಪೈ ಅವರು ನನ್ನಲ್ಲಿದ್ದ ಕರ್ತೃತ್ವ ಶಕ್ತಿ, ಸಾಮಾಜಿಕ ಕಳಕಳಿ, ನಾಯಕತ್ವದ ಗುಣಗಳಿಗೆ ಮಾನ್ಯತೆಯನ್ನು ನೀಡಿ ಸಿಂಡಿಕೇಟ್ ಬ್ಯಾಂಕ ಮೆನೇಜರ್ ಆಗಿ ಪಾಣೆಮಂಗಳೂರು ಶಾಖೆಗೆ ವರ್ಗಾವಣೆ ಮಾಡಿದ ಬಳಿಕ ನಾನು ಸಾಮಾಜಿಕ ಮಾನ್ಯತೆ ಪಡೆಯುವುದು ಸಾಧ್ಯವಾಯಿತು. ಅದು ಘಟಿಸಿದ್ದು ಹೀಗೆ.

ಬಂಟವಾಳ ರೋಟರಿ ಕ್ಲಬ್

ಪಾಣೆಮಂಗಳೂರು ಶಾಖೆಗೆ ಮೆನೇಜರ್ ಆಗಿ ಸೇರಿದ ಬಳಿಕ ನನಗೆ ಬಂಟವಾಳ ರೋಟರಿ ಕ್ಲಬ್‌ನ ಸದಸ್ಯತ್ವ ಪ್ರಾಪ್ತವಾಯಿತು. ಆಗಲೇ ನನಗೆ ಶ್ರೀ ಪಿ. ದೇವದಾಸ ಶೆಣೈ(ಇವರನ್ನು 'ದತ್ತು' ಎಂದು ಕರೆಯುವುದಿತ್ತು) ಆಪ್ತರಾದರು. ಶ್ರೀ ದತ್ತು ಶೆಣೈ ನೋಡಲು ಗಂಭೀರವಾಗಿದ್ದರೂ, ಅವರ ಮನಸ್ಸು ಒಳ್ಳೆಯದು. ಅವರಲ್ಲಿ ಬಡಜನರಿಗೆ ಸಹಾಯ ಮಾಡುವ ಆಸಕ್ತಿ ಮತ್ತು ಉದಾರ ಮನೋಭಾವ ಎರಡೂ ಇತ್ತು. ನನ್ನಂತೆ ಸಾಮಾಜಿಕ ಕಾರ್ಯಗಳಲ್ಲಿ ಅವರಿಗೂ ಅಭಿರುಚಿ ಇದ್ದುದರಿಂದ, ನಾವು ಹತ್ತಿರದವರಾದೆವು. ರೋಟರಿ ಕ್ಲಬ್ ಸದಸ್ಯನಾಗಿದ್ದೇ ತಡ ನಾನು ಸಮಾಜಸೇವಾ ನಿರ್ದೇಶಕನಾಗಿ(ಸಮುದಾಯ ಸೇವಾ ನಿರ್ದೇಶಕ) ನೇಮಕಗೊಂಡೆ. ಅದು ಬಡವರಿಗೆ ಮತ್ತು ಸಾಮಾನ್ಯ ಜನರಿಗೆ ಸೇವೆ ಸಲ್ಲಿಸುವ ಅವಕಾಶವಿರುವ ಕ್ಷೇತ್ರ. ನನ್ನ ಸಹಜ ಗುಣಕ್ಕೆ ಹೊಂದಿಕೊಳ್ಳುವಂತಹ ಜವಾಬ್ದಾರಿ ಕ್ಷೇತ್ರ.

ನಾನು ಆ ವರ್ಷ (೧೯೭೩-೭೪) ಬಂಟವಾಳ ಮತ್ತು ಪಾಣೆಮಂಗಳೂರು ವ್ಯಾಪ್ತಿ ಪ್ರದೇಶದಲ್ಲಿ ದೃಷ್ಟಿದೋಷವಿರುವ (ಕೆಟರೆಕ್ಟ್ ಇತ್ಯಾದಿ) ಬಡವರು, ಅನಕ್ಷರಸ್ಥರು ಮತ್ತು ಕಷ್ಟದಲ್ಲಿರುವ ಗ್ರಾಮೀಣ ಜನರಿಗಾಗಿ 'ಉಚಿತ ಕಣ್ಣಿನ ಶಿಬಿರ'ವನ್ನು (Rotary Free Eye Camp Project) ಆಯೋಜಿಸಿದೆ. ಮಂಗಳೂರು ಕಸ್ತೂರಿಬಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯಿಂದ ಡಾ. ನಾರಾಯಣ ರಾವ್ ಮತ್ತು ಡಾ. ಸಿ.ಆರ್. ಕಾಮತರ ನೇತೃತ್ವದಲ್ಲಿ ಬಂಟವಾಳ ಪರಿಸರದ ೭೦ ಹಳ್ಳಿಗಳ ಜನರಿಗೆ ಮತ್ತು ಬಂಟವಾಳ ಮತ್ತು ಪಾಣೆಮಂಗಳೂರಿನ ಪೇಟೆಯ ಜನರಿಗಾಗಿ ವ್ಯವಸ್ಥಿತ ರೀತಿಯಿಂದ ರೋಟರಿ 'ನೇತ್ರ ಯಜ್ಞ'ವನ್ನು ಆಯೋಜಿಸಿದೆ. ಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಜನರ ಕಣ್ಣಿನ ಪರೀಕ್ಷೆ ಮಾಡಿ ಅವರಿಗೆ ಔಷಧಿ ಮತ್ತು ಕನ್ನಡಕ ನೀಡಲಾಯಿತು. ಇದಲ್ಲದೆ, ೧೯೭೪ನೇ ಇಸವಿ, ಮೇ ೨೦ರಂದು ಕಣ್ಣಿನ ಶಸ್ತ್ರಚಿಕಿತ್ಸೆ ಅಗತ್ಯವಿದ್ದ ನೂರೈವತ್ತು ಮಂದಿಗೆ ಪಾಣೆಮಂಗಳೂರಿನ ಶ್ರೀ ಶಾರದಾ ಪ್ರೌಢಶಾಲೆಯಲ್ಲಿ ತಾತ್ಕಾಲಿಕವಾಗಿ ಸುಸಜ್ಜಿತ ಕಣ್ಣಿನ ಶಸ್ತ್ರಚಿಕಿತ್ಸಾ ಥಿಯೇಟರನ್ನು ಸಜ್ಜುಗೊಳಿಸಿ ಎರಡು ದಿನಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿತ್ತು. ಆ ಕಾಲದಲ್ಲಿ ರೋಗಿಗಳು ಏಳು ದಿನಗಳ ಕಾಲ ಶಿಬಿರದಲ್ಲಿಯೇ ಇರುವ ಅಗತ್ಯವಿದ್ದುದರಿಂದ, ಅವರ ಊಟ, ತಿಂಡಿ, ಫಲಹಾರ, ಔಷಧಿ, ಗುಳಿಗೆ ಇತ್ಯಾದಿಗಳ ವ್ಯವಸ್ಥೆಯನ್ನು ನಾವೇ ಮಾಡಿದೆವು. ಅದಲ್ಲದೆ ಆಪರೇಶನ್ ಆದವರಿಗೆ ಉಚಿತವಾಗಿ ಕನ್ನಡಕವನ್ನು ಕೂಡ ನಾವು ರೋಟರಿಯಿಂದ ನೀಡಿದ್ದೆವು.

ಅನಂತರ ಆರು ತಿಂಗಳಲ್ಲಿ ದ.ಕ. ಜಿಲ್ಲೆಯ ಡೆಂಟಲ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಡಾ. ಯು.ಎಸ್. ಮೋಹನದಾಸ ನಾಯಕರ ನೇತೃತ್ವದಲ್ಲಿ ನಾನು ಬಂಟವಾಳದಲ್ಲಿ ದಂತ ಪರೀಕ್ಷಾ ಶಿಬಿರವನ್ನು ಆಯೋಜಿಸಿದೆ. ಇದರಿಂದ ಬಂಟವಾಳ ತಾಲೂಕಿನಲ್ಲಿ ರೋಟರಿ ಕ್ಲಬ್‌ನ ಕುರಿತು ಸಾಮಾನ್ಯ ಜನರೂ ತಿಳಿದುಕೊಳ್ಳುವ ಹಾಗಾಯಿತು. ಅದೇ ರೀತಿ ಉತ್ತಮ ಕಾರ್ಯಗಳನ್ನು ನಡೆಸಿದ ಕಾರಣವಾಗಿ ನನ್ನ ಹೆಸರೂ ಪ್ರಚಾರಕ್ಕೆ ಬಂತು.

ನೆರೆ ಪರಿಹಾರ ಮತ್ತು ಗಂಜಿ ಕೇಂದ್ರ

೧೯೭೪ನೇ ಇಸವಿ, ಜುಲೈ ೨೬ರಂದು ನೇತ್ರಾವತಿ ನದಿಯಲ್ಲಿ ಪ್ರವಾಹ ಬಂತು. ೧೯೨೩ನೇ ಇಸವಿಯ ಬಳಿಕ ಇದೇ ಮೊದಲ ಬಾರಿ ನೀರಿನ ಮಟ್ಟ ಅಪಾಯದ ಮಟ್ಟವನ್ನು ತಲುಪಿತ್ತು. ಪಾಣೆಮಂಗಳೂರು ಸೇತುವೆಯ ಮೇಲೆ ಒಂದೆರಡು ಇಂಚಿನಷ್ಟು ಎತ್ತರದಲ್ಲಿ ನೀರು ಹರಿಯುತ್ತಿತ್ತು. ಉಪ್ಪಿನಂಗಡಿಯಿಂದ ಬಂಟವಾಳದವರೆಗೆ ನದಿಯ ತೀರದಲ್ಲಿದ್ದ ಮಣ್ಣಿನ ಮನೆಗಳು, ಅಂಗಡಿಗಳು ನೀರಿನ ಪ್ರವಾಹದಲ್ಲಿ ಕೊಚ್ಚಿ ಹೋದವು. ದೊಡ್ಡ ದೊಡ್ಡ ಭಂಡಸಾಲೆ, ಗೋಡೌನ್‌ಗಳಲ್ಲಿ ಶೇಖರಿಸಿಟ್ಟ ಅಕ್ಕಿ, ಭತ್ತ ನೀರಿನ ಪಾಲಾಯಿತು.

ಇದರಿಂದಾಗಿ ಬಡಜನರು ನಿರಾಶ್ರಿತರಾದರು. ವ್ಯಾಪಾರಿಗಳಿಗೆ ಬಹಳ ನಷ್ಟವಾಯಿತು. ಅಷ್ಟೇ ಅಲ್ಲ ಸಣ್ಣ ವ್ಯಾಪಾರಿಗಳು ಕಂಗಾಲಾದರು. ಆ ಸಮಯದಲ್ಲಿ ಬಹಳಷ್ಟು ಮಂದಿ ಮನೆಬಿಟ್ಟು ನಿರಾಶ್ರಿತರಾಗಿ ಉಟ್ಟ ಬಟ್ಟೆಯಲ್ಲಿ ಓಡಿ ಹೋಗಿ ಹತ್ತಿರದ ಶಾಲೆಗಳಲ್ಲಿ ಮತ್ತು ಇಗರ್ಜಿಗಳಲ್ಲಿ ಆಶ್ರಯ ಪಡೆಯುವಂತಾಗಿತ್ತು. ಕೆಲವು ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳು ಕೂಡ ಕುಸಿದು ಮಕ್ಕಳ ಶಿಕ್ಷಣಕ್ಕೆ ತೊಂದರೆ ಉಂಟಾಗಿತ್ತು. .

ಪಾಣೆಮಂಗಳೂರಿನಲ್ಲಿ ನಮ್ಮ ಬ್ಯಾಂಕ್ ಶಾಖೆಯ ಕಟ್ಟಡ ಮೇಲಿನ ಮಟ್ಟದಲ್ಲಿದ್ದರೂ, ನೀರು ಒಳಗೆ ಹರಿದು ಬಂದಿತ್ತು. ನಾವು ತಳಮಹಡಿಯಲ್ಲಿದ್ದ ರಿಕಾರ್ಡಗಳನ್ನು, ಟ್ರೆಜರಿಯಲ್ಲಿದ್ದ ನೋಟುಗಳ ಕಟ್ಟುಗಳನ್ನು, ಚಿನ್ನದ ಆಭರಣಗಳನ್ನೆಲ್ಲಾ ಒಟ್ಟುಗೂಡಿಸಿ ಮೂಟೆ ಕಟ್ಟಿ, ಅದೇ ಕಟ್ಟಡದ ಮೊದಲನೆಯ ಮಹಡಿಯಲ್ಲಿದ್ದ ನನ್ನ ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿ ಕೋಣೆಯೊಳಗೆ ಸುರಕ್ಷಿತವಾಗಿ ಇಟ್ಟೆವು. ಪಾಣೆಮಂಗಳೂರು ಶ್ರೀ ವೀರ ವಿಠಲಸ್ವಾಮೀ ದೇವಸ್ಥಾನದ ವಠಾರದಲ್ಲಿಯೂ ನೀರು ಬಂದ ಕಾರಣ ನಾವು ದೇವರ ಚಿನ್ನದ ಆಭರಣಗಳನ್ನು, ಮತ್ತು ಪಾತ್ರೆಗಳನ್ನು ಶಾಲೆಯ ಬೀದಿಯಲ್ಲಿ ಎತ್ತರದಲ್ಲಿದ್ದ ಘಡಾಯ ಕೇಶವ ಪೈ ಅವರ ಮನೆಗೆ ತೆಗೆದುಕೊಂಡು ಹೋಗಿ ಇಟ್ಟೆವು. ಈ ಕಾರ್ಯಗಳೆಲ್ಲಾ ನನ್ನ ನೇತೃತ್ವದಲ್ಲಿಯೇ ನಡೆದವು. ನದಿ ಪ್ರವಾಹದ ಕಾರಣವಾಗಿ ಮನೆ ಬಿಟ್ಟು ಹೋಗುವ ಪರಿಸ್ಥಿತಿಯಲ್ಲಿದ್ದ ಜನರಿಗಾಗಿ ಎನ್. ಕೇಶವ ಕುಡ್ವರ ಕುಟುಂಬದವರು ಊಟ, ತಿಂಡಿಯ ವ್ಯವಸ್ಥೆ ನಡೆಸಿ ಅವರು ನೆಮ್ಮದಿಯಲ್ಲಿ ಇರುವ ಹಾಗೆ ಮಾಡಿದ್ದರು.

ಬಂಟವಾಳ ಪೇಟೆಯ ಎಲ್ಲಾ ಕಡೆಗಳಲ್ಲಿ ನೀರು ತುಂಬಿದ್ದರಿಂದ, ಪೇಟೆಯಲ್ಲಿದ್ದ ಜನರೆಲ್ಲರೂ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಸ್ಥಾನಕ್ಕೆ ಬಂದು ನೆಲೆಸಿದರು. ಅಲ್ಲಿ ಅವರಿಗೆ ಊಟ, ತಿಂಡಿಯ ವ್ಯವಸ್ಥೆ ಮಾಡಿ ಸಂಭಾಳಿಸಲಾಗಿತ್ತು.

ಬಂಟವಾಳದಲ್ಲಿ ಪ್ರವಾಹದ ನೀರು ದೇವಸ್ಥಾನದ ತುಳಸಿಕಟ್ಟೆಯವರೆಗೆ ಬಂದಿತ್ತಂತೆ (೧೯೨೩ನೇ ಇಸವಿಯ

ಪ್ರವಾಹದಲ್ಲಿ ದೇವಸ್ಥಾನದ ಗರ್ಭಗುಡಿಯವರೆಗೆ ನೀರು ಬಂದಿತ್ತಂತೆ. ಆಗಿನ ತಪಸ್ವಿಯಂತಹ ವೇದಮೂರ್ತಿ ಶ್ರೀ ಸೀತಾರಾಮ ಭಟ್ಟರು, ಶ್ರೀ ದೇವಸ್ಥಾನದ ಮುಖ್ಯ ಮೊಕ್ತೇಸರ ಶ್ರೀ ಸರ್ವೋತ್ತಮ ಬಾಳಿಗ ಹಾಗೂ ಇತರರು ದೇವಸ್ಥಾನದ ನಡೆಯಲ್ಲಿ ನಿಂತು ದೇವರಿಗೆ ಕೈಮುಗಿದು "ನೀರು ಇನ್ನೂ ಮೇಲೆ ಬಂದರೆ ಊರಿನ ಜನರು ನೀರಿನಲ್ಲಿ ಮುಳುಗಿ ಸಾಯುವಂತಾಗುತ್ತದೆ. ಅದಕ್ಕಿಂತ ಮೊದಲೇ ನಾವು ನಿನ್ನನ್ನು(ದೇವರನ್ನು) ತೆಗೆದುಕೊಂಡು ನದಿಗೆ ಹಾರುವೆವು" ಎಂದು ಕಳಕಳಿಯಿಂದ, ಭಕ್ತಿಭಾವದಿಂದ ಹರಕೆ ಹೇಳಿಕೊಂಡರಂತೆ. ಆಗಲೇ ಆಶ್ಚರ್ಯವೆಂಬಂತೆ ಪ್ರವಾಹ ಕಡಿಮೆಯಾಗಿ ನೀರು ಕೆಳಗಿಳಿಯಿತಂತೆ, ಇದು ನಾನು ಹಿರಿಯರಿಂದ ಕೇಳಿದ್ದು.)

ಜುಲೈ ೨೭ರಂದು ಪ್ರವಾಹದ ನೀರು ಇಳಿಯಿತು. ತಕ್ಷಣವೇ ನಾನು ಶ್ರೀ ಪಿ.ದೇವದಾಸ ಶೆಣೈ(ದತ್ತು)ಯವರನ್ನು ಕೂಡಿಕೊಂಡು ಜೀಪಿನಲ್ಲಿ ಕುಳಿತು ನಂದಾವರ, ಜೈನರ ಪೇಟೆ, ಬ್ರಹ್ಮರಕೂಟ್ಲು, ತುಂಬೆ, ಬಂಟವಾಳ ಪೇಟೆ, ಜಕ್ರಿಬೆಟ್ಟು, ನಾವೂರು, ವಗ್ಗ ಇತ್ಯಾದಿ ಪ್ರದೇಶಗಳಿಗೆ ಭೇಟಿ ನೀಡಿದೆ. ಎಲ್ಲಾ ಕಡೆಗಳಲ್ಲಿ ನಮಗೆ ಪ್ರವಾಹದ ನೀರು ನಡೆಸಿದ ಅವಾಂತರವೇ ಕಣ್ಣಿಗೆ ಗೋಚರವಾಗುತ್ತಿತ್ತು. ನೀರಿನಲ್ಲಿ ಕೊಚ್ಚಿ ಹೋದ ಮಣ್ಣಿನ ಮನೆಗಳು ಮತ್ತು ಹಳೆಯ ಬಂಗ್ಲೆ ಮನೆಗಳು, ಅಂಗಡಿ ಕಟ್ಟಡಗಳು, ಸಣ್ಣಪುಟ್ಟ ವ್ಯಾಪಾರಿಗಳಿಗಾದ ಕಷ್ಟನಷ್ಟಗಳು, ನಿರಾಶ್ರಿತರಾದ ಜನರ ಸಂಕಷ್ಟ ಇಂಥ ದುಃಖಭರಿತ ದೃಶ್ಯಗಳನ್ನು ನಾವು ಕಂಡೆವು. ಜನರು ನನ್ನಲ್ಲಿ ಅವರ ಕಷ್ಟಗಳನ್ನು ಹೇಳಿಕೊಂಡರು, ತಾತ್ಕಾಲಿಕವಾಗಿಯಾದರೂ ಪರಿಹಾರ ಸಿಗುವಂತೆ ಮಾಡಬೇಕು ಎಂದು ದುಃಖ ತುಂಬಿದ ಕಂಠದಿಂದ ಮನವಿ ಮಾಡಿಕೊಂಡರು. ಈ ನಿಟ್ಟಿನಲ್ಲಿ ಏನಾದರೂ ಮಾಡಲೇಬೇಕು ಎನ್ನುವ ವಿಚಾರ ನನ್ನ ಮನಸ್ಸಿಗೆ ಬಂತು.

ನಾನು ತಕ್ಷಣ ಕಾರ್ಯಪ್ರವೃತ್ತನಾದೆ. ಅದೇ ದಿನ ಸಂಜೆ ನನ್ನ ಬ್ಯಾಂಕ್ ಕಚೇರಿಯಲ್ಲಿ ರೋಟರಿಯನ್ನರು ಮತ್ತು ಕೆಲವು ಸಾರ್ವಜನಿಕ ಮುಖಂಡರ ಸಣ್ಣ ಸಭೆಯನ್ನು ಸೇರಿಸಿದೆ. ಸದ್ಯ ನದಿ ಪ್ರವಾಹದಿಂದ ನಿರಾಶ್ರಿತರಾದ ಜನರಿಗಾಗಿ ೮ ಕಡೆಗಳಲ್ಲಿ 'ಗಂಜಿ ಕೇಂದ್ರ'ವನ್ನು ಪ್ರಾರಂಭಿಸುವ ನನ್ನ ಯೋಜನೆಯನ್ನು ಅವರಿಗೆ ತಿಳಿಸಿದೆ. ಅಲ್ಲಿ ಸೇರಿದವರೆಲ್ಲರೂ ಇದಕ್ಕೆ ಒಪ್ಪಿಗೆ ಸೂಚಿಸಿದರು. ಅಲ್ಲಿ ಹಾಜರಿದ್ದ ಶ್ರೀ ಎನ್. ಕೇಶವ ಕುಡ್ವ ಅವರು ತಮ್ಮ ಮಳಿಗೆಯಿಂದ (ಎನ್.ಕೆ. ಜಿ. ಕುಡ್ವಾ ಆಂಡ್ ಪಿ.ವಿ. ಶೆಣೈ) ಬೇಕಾದಷ್ಟು ಪ್ರಮಾಣದಲ್ಲಿ ಅಕ್ಕಿಯನ್ನು ಅಸಲು ಬೆಲೆಗೆ ನೀಡುವುದಾಗಿ ತಿಳಿಸಿದ್ದರಿಂದ ನನ್ನ ಯೋಜನೆಗೆ ಬಲ ಬಂತು.

ನಾವು ಬಂಟವಾಳ ತಾಲೂಕಿನ ೮ ಕಡೆಗಳಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭಿಸಿದೆವು. ಆಯಾಯ ಊರುಗಳ ಶ್ರೀಮಂತ ಜನರಿಗೆ ಅಕ್ಕಿಯನ್ನು ನೀಡಿ ಅವರು ಅದನ್ನು ಬೇಯಿಸಿ ನಿರಾಶ್ರಿತರಿಗೆ ಗಂಜಿ ನೀಡುವ ವ್ಯವಸ್ಥೆ ಮಾಡಿದೆವು.

ಇದೇ ರೀತಿ ಎರಡು ದಿನಗಳು ಕಳೆದ ಬಳಿಕ ಶ್ರೀ ಬಿ. ದಾಮೋದರ ಪ್ರಭುರವರ ನೇತೃತ್ವದಲ್ಲಿ ನಾವು ದ.ಕ. ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ನಮ್ಮ ಈ ಯೋಜನೆಗೆ ಅವರ ನೆರವು ಕೋರಿದೆವು. ಜಿಲ್ಲಾಧಿಕಾರಿಗಳು ಬಂಟ್ವಾಳ ತಹಶೀಲದಾರರ ಮೂಲಕ ನಮ್ಮ ೮ ಗಂಜಿ ಕೇಂದ್ರಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ಅಕ್ಕಿಯನ್ನು ಉಚಿತವಾಗಿ ನೀಡುವ ವ್ಯವಸ್ಥೆ ಮಾಡಿದರು. ಈ ನನ್ನ ಕಾರ್ಯದಿಂದಾಗಿ ಬಂಟವಾಳ ಜಿಲ್ಲೆಯ ಪ್ರವಾಹ ಪರಿಹಾರ ಸಮಿತಿ ರಚನೆಯಾದಾಗ ನನ್ನನ್ನು ಕಾರ್ಯದರ್ಶಿಯಾಗಿ ಮಾಡುವ ಪ್ರಸ್ತಾಪವೂ ಇತ್ತು.

ಉಪ್ಪಿನಂಗಡಿಯಿಂದ ಬಂಟ್ವಾಳ, ಆರ್ಕುಳದವರೆಗೆ ಪ್ರವಾಹದ ನೀರು ನದಿತೀರದಲ್ಲಿದ್ದ ಎಲ್ಲಾ ವ್ಯಾಪಾರಿಗಳ, ಭಂಡಸಾಲೆಗಾರರ ಸರ್ವನಾಶಗೈದಿತ್ತು. ಈ ವ್ಯಾಪಾರಿಗಳಿಗೆ ಪರಿಹಾರ ರೂಪದಿಂದ ಬ್ಯಾಂಕ್ ಸವಲತ್ತು ನೀಡಬೇಕೆಂದು ನಾನು ಸಿಂಡಿಕೇಟ್ ಬ್ಯಾಂಕ್‌ನ ಆಗಿನ ಅಧ್ಯಕ್ಷರಾದ ಶ್ರೀ ಕೆ.ಕೆ. ಪೈ ಅವರಲ್ಲಿ ವಿನಂತಿ ಮಾಡಿದೆ. ಶ್ರೀ ಪೈ ಮಾಮನವರು ಜನರಲ್ ಮ್ಯಾನೇಜರ್ ಶ್ರೀ ಹೆಚ್.ವಿ. ಕಾಮತರ ಜೊತೆಯಲ್ಲಿ ಅದೇ ಭಾನುವಾರದ ದಿನ ಪಾಣೆಮಂಗಳೂರಿನ ನನ್ನ ಶಾಖೆಗೆ ಬಂದರು. ಅವರೊಂದಿಗೆ ನಾನು ಮತ್ತು ಶ್ರೀ ದಾಮೋದರ ಪ್ರಭು ಕಾರಿನಲ್ಲಿ ಉಪ್ಪಿನಂಗಡಿಗೆ ಹೋದೆವು. ಅಲ್ಲಿಯ ವ್ಯಾಪಾರಿಗಳು ಪೈ ಮಾಮರನ್ನು ಭೇಟಿಯಾಗುವಂತೆ ನಾನು ಮೊದಲೇ ವ್ಯವಸ್ಥೆ ಮಾಡಿದ್ದೆ. ಇದೇ ರೀತಿ ಪಾಣೆಮಂಗಳೂರು ಮತ್ತು ಬಂಟವಾಳ ಶಾಖೆಗಳಲ್ಲಿಯೂ ವ್ಯಾಪಾರಿಗಳು ಸೇರಿ ತಮ್ಮ, ತಮ್ಮ ಅಹವಾಲುಗಳನ್ನು ತಿಳಿಸಿದರು.

ಸಂಜೆ ನಾವು ಬಂಟವಾಳ ಶಾಖೆಯಿಂದ ಹಿಂತಿರುಗುವಾಗ ಶ್ರೀ ಕೆ.ಕೆ. ಪೈಯವರು ಸಣ್ಣ ವ್ಯಾಪಾರಿಗಳಿಗೆ ಶೇಕಡಾ ೪ರ ದರದಲ್ಲಿ ಐದು ಸಾವಿರ ರೂಪಾಯಿಯವರೆಗೆ ಸಾಲ ನೀಡುವುದು ಮತ್ತು ಉಳಿದ ವ್ಯಾಪಾರಿಗಳಿಗೆ ಪ್ರವಾಹದಿಂದ ಅವರಿಗೆ ಆಗಿರುವ ನಷ್ಟದ ಅಂದಾಜು ಮಾಡಿ, ಸಿಂಡಿಕೇಟ್ ಬ್ಯಾಂಕ್‌ನ ಗ್ರಾಹಕರಾಗಿದ್ದಲ್ಲಿ ಅವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುವುದಾಗಿ ಘೋಷಿಸಿದರು. ಬ್ಯಾಂಕ್

ಚರಿತ್ರೆಯಲ್ಲಿ ಈ ರೀತಿ ನಡೆದದ್ದು ಬಹುಶಃ ಇದೇ ಮೊದಲ ಬಾರಿ. ಅನಂತರ ಉಳಿದ ಬ್ಯಾಂಕ್‌ಗಳು ಕೂಡ ಸಿಂಡಿಕೇಟ್ ಬ್ಯಾಂಕ್ ನೀಡುವ ಮಾದರಿಯಲ್ಲಿ ಸಾಲ ನೀಡುವ ಘೋಷಣೆ ಮಾಡಿದವು.

ಇದಲ್ಲದೆ ನಾನು, ಶ್ರೀ ದಾಮೋದರ ಪ್ರಭು, ಶ್ರೀ ವಿಶ್ವನಾಥ ಕುಡ್ವ, ಮತ್ತು ಶ್ರೀ ದೇವದಾಸ ಶೆಣೈಯವರನ್ನು ಕರೆದುಕೊಂಡು ಮೈಸೂರಿಗೆ ತೆರಳಿ, ಅಲ್ಲಿ ಗಣೇಶ ಬೀಡಿಯ ವ್ಯಾಲಕರನ್ನು ಭೇಟಿಯಾಗಿ, ನೇತ್ರಾವತಿ ನದಿಯ ಪ್ರವಾಹದಿಂದ ಬಂಟವಾಳ ಮತ್ತು ಅದರ ಪರಿಸರದ ಜನರಿಗೆ ಉಂಟಾಗಿರುವ ಕಷ್ಟನಷ್ಟದ ವಿವರಗಳನ್ನು ನೀಡಿದೆ. ನಮ್ಮ ಮಾತನ್ನು ಆಲಿಸಿದ ಶ್ರೀ ಎಂ. ಗೋವಿಂದ ರಾವ್ ತಕ್ಷಣ ಬಂಟವಾಳ ಪೇಟೆ, ಉಪ್ಪಿನಂಗಡಿ, ಮತ್ತು ಪಾಣೆಮಂಗಳೂರಿನ ನಿರಾಶ್ರಿತ ಸಮಾಜ ಬಾಂಧವರಿಗೆ ಹಂಚಲು ಒಂದು ಲಕ್ಷ ರೂಪಾಯಿಯನ್ನು ನೀಡುವುದಾಗಿ ಮತ್ತು ಗಣೇಶ ಬೀಡಿಯ ನೌಕರರಿಗೆ ಮತ್ತು ಬೀಡಿ ಲೇಬಲ್ ನೌಕರರಿಗೆ ಅವರ ಪರವಾಗಿ ಪ್ರತ್ಯೇಕವಾಗಿ ಪರಿಹಾರವನ್ನು ನೀಡುವುದಾಗಿ ಘೋಷಿಸಿದರು.

ಆಗ ಶ್ರೀ ಟಿ.ಎ.ಪೈ ಕೇಂದ್ರ ಸರ್ಕಾರದಲ್ಲಿ ರೈಲ್ವೇ ಮಂತ್ರಿಯಾಗಿದ್ದರು. ನಾವು ದೂರವಾಣಿಯ ಮೂಲಕ ಅವರಿಗೂ ಈ ವಿಷಯವನ್ನು ತಿಳಿಸಿದೆವು. ಅವರು ಬಂಟವಾಳಕ್ಕೆ ಬಂದು ತುಂಬೆಯಿಂದ ವಗ್ಗ ಬಾಂಬಿಲದವರೆಗೆ ಪ್ರವಾಸ ಮಾಡಿ ನಾವು ಹೇಳಿದ್ದನ್ನು ಪ್ರತ್ಯಕ್ಷವಾಗಿ ಕಂಡರು. ಆಮೇಲೆ ದೆಹಲಿಗೆ ತೆರಳಿ ಮಫತಲಾಲ್ ಕಂಪನಿಯ ವರಿಷ್ಠರಿಗೆ ಪ್ರವಾಹ ಪರಿಸ್ಥಿತಿಯನ್ನು ಮನಗಾಣಿಸಿ ಮಹಿಳೆಯರಿಗಾಗಿ ೭-೮ ಸಾವಿರ ಮಫತಲಾಲ್ ಸೀರೆಗಳು, ಪುರುಷರಿಗೆ ಪ್ಯಾಂಟ್, ಶರ್ಟ್ ಬಟ್ಟೆ ಮತ್ತು ಹೊದ್ದುಕೊಳ್ಳಲು ಕಂಬಳಿಗಳನ್ನು ಕಳುಹಿಸುವ ಏರ್ಪಾಟು ನಡೆಸಿದರು. ಇದೇ ರೀತಿ ಬೇರೆ ಕಂಪನಿಗಳಿಂದಲೂ ಲಾಂಟಾನು ಮತ್ತು ಗುಣಮಟ್ಟದ ಅಲ್ಯುಮಿನಿಯಂ ಪಾತ್ರೆಗಳನ್ನು ಕಳುಹಿಸಿಕೊಟ್ಟರು. ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು ಕೂಡ ಬಂಟವಾಳಕ್ಕೆ ಭೇಟಿ ನೀಡಿ, ಆ ಮೇಲೆ ಮಹಿಳೆಯರಿಗೆ ಸೀರೆ ಮತ್ತು ಪುರುಷರಿಗೆ ಉಡುಪು ಮತ್ತು ಪಾತ್ರೆ ಇತ್ಯಾದಿಗಳನ್ನು ದಾನವಾಗಿ ಕಳುಹಿಸಿಕೊಟ್ಟರು.

ಈ ಜನಸೇವಾ ಕಾರ್ಯಗಳಿಂದ ನಮ್ಮ ಬಂಟವಾಳ ರೋಟರಿ ಕ್ಲಬ್‌ಗೆ "ಅಂತರಾಷ್ಟ್ರೀಯ ವಿಶಿಷ್ಟ ಸೇವಾ ಪ್ರಶಸ್ತಿ"(ರೋಟರಿ ಇಂಟರ್‌ನ್ಯಾಶನಲ್ ಸ್ಪೆಶಲ್ ಸಿಗ್ನಿಫಿಕೆನ್ಸ್ ಅವಾರ್ಡ್) ದೊರೆಯಿತು. ೧೯೭೫ನೇ ಇಸವಿ, ಫೆಬ್ರವರಿ ೯ರಂದು ಮೈಸೂರಿನಲ್ಲಿ ನಡೆದ ೩೧೮ನೇ ರೋಟರಿ ಜಿಲ್ಲಾ ಸಮ್ಮೇಳನದಲ್ಲಿ ಈ ಪ್ರಶಸ್ತಿಯನ್ನು ನಾನು ಸ್ವೀಕರಿಸಿದೆ. ೧೯೭೪ರಲ್ಲಿ ನನ್ನ ಸಾರ್ವಜನಿಕ ಜೀವನದ ರೋಟರಿ ಅಧ್ಯಾಯದಲ್ಲಿ, ಅದೇ ರೀತಿ ನನ್ನ ಊರಿನ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವರ, ದೇವಸ್ಥಾನದ ಮತ್ತು ಸಮಾಜದ ಸೇವೆ ಮಾಡುವ ಹೆಚ್ಚಿನ ಅವಕಾಶ ಸಹಸ್ರ ಕುಂಭಾಭಿಷೇಕದ ಕಾರಣವಾಗಿ ನನಗೆ ದೊರೆಯಿತು.

ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಪ್ರಥಮ ಸಹಸ್ರ ಕುಂಭಾಭಿಷೇಕ

ಬಹಳ ವರ್ಷಗಳ ಲಾಗಾಯ್ತು ಬಂಟವಾಳದ ಹಿರಿಯರು ಶ್ರೀ ತಿರುಮಲ ವೆಂಕಟರಮಣಸ್ವಾಮಿಯ ಸೇವಾರ್ಥವಾಗಿ ಜಮೀನುಗಳನ್ನು ದೇವಸ್ಥಾನಕ್ಕೆ ಉಂಬಳಿಯಾಗಿ ನೀಡಿದ್ದರು. ಈ ಭೂಮಿಯಿಂದ ಸುಮಾರು ೪೦೦೦-೪೫೦೦ ಮುಡಿಯಷ್ಟು (ಆಗಿನ ೪೨ ಸೇರು, ಅಂದರೆ ೪೦ ಕಿಲೊ) ಅಕ್ಕಿಯ ಉತ್ಪನ್ನ ಬರುತ್ತಿತ್ತು. ೧೯೭೪ರಲ್ಲಿ ಕರ್ನಾಟಕ ಸರಕಾರವು "ಉಳುವವನೇ ಭೂಒಡೆಯ"ನೆಂಬ ಕಾಯಿದೆಯನ್ನು ಜಾರಿಗೊಳಿಸಿದ ಬಳಿಕ ಈ ಜಮೀನು ಗೇಣಿದಾರರ ಸ್ವಾಧೀನವಾಯಿತು. ಇದರಿಂದ ದೇವಸ್ಥಾನದ ಆರ್ಥಿಕ ಸ್ಥಿತಿಯು ಕುಸಿಯಿತು. ಅದುವರೆಗೆ ಶ್ರೀ ದೇವಸ್ಥಾನದಲ್ಲಿ ನಡೆದು ಬರುತ್ತಿದ್ದಂತಹ ಧರ್ಮಸೇವಾ ಕಾರ್ಯಗಳು ನಿಂತು ಹೋಗುವ ದಿನಗಳು ಎದುರಾದವು.

ಆಗಲೇ ನಮ್ಮ ಸಮಾಜದ ಧೀಮಂತ ಹಾಗೂ ಶ್ರೇಷ್ಠ ನೇತಾರರಾದ ಶ್ರೀ ಬಂಟವಾಳ ದಾಮೋದರ ಪ್ರಭು ಅವರು ಶ್ರೀ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಅಧಿಕಾರವನ್ನು ಕೈಗೆತ್ತಿಕೊಂಡರು. ದೇವಳದ ತಿಜೋರಿಯಲ್ಲಿ ಹಣ ಇಲ್ಲದಿರುವುದು ಅವರ ಗಮನಕ್ಕೆ ಬಂತು. ಶ್ರೀ ದೇವಸ್ಥಾನದಲ್ಲಿ ದಿನಾಲೂ ವೈದಿಕರಿಗಾಗಿ ೪೦ ಸೇರು ಅಕ್ಕಿಯನ್ನು ಬೇಯಿಸಿ ನೈವೇದ್ಯ ಸೇವೆ ನೀಡುವುದಿತ್ತು; ಇನ್ನು ಪರವೂರಿನ ಪ್ರವಾಸಿಗಳು, ಊರಿನ ಬಡವರು, ವೃದ್ಧರು ಮತ್ತು ಶಾಲೆಗೆ ಹೋಗುವ ವಿದ್ಯಾರ್ಥಿಗಳೆಂದು ಸುಮಾರು ೫೦ ಜನರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇತ್ತು. ಅನೇಕ ಉತ್ಸವಗಳು ನಡೆಯಲಿದ್ದವು. ಶ್ರೀ ದೇವಸ್ಥಾನದ ಆಶ್ರಯದಲ್ಲಿ ಒಂದು ಪ್ರಾಥಮಿಕ ಮತ್ತು ಒಂದು ಪ್ರೌಢಶಾಲೆ ಇತ್ತು. ಜಮೀನು ನಷ್ಟವಾದ ಕಾರಣದಿಂದಾಗಿ ಈ ಎಲ್ಲಾ ವ್ಯವಸ್ಥೆಗಳಿಗೆ ಆರ್ಥಿಕ ತೊಂದರೆಗಳು ಎದುರಾದವು.

ಶ್ರೀ ದೇವಸ್ಥಾನದ ಆಡಳಿತವನ್ನು ಕೈಗೆತ್ತಿಕೊಂಡ ಬಳಿಕ ಶ್ರೀ ದಾಮೋದರ ಪ್ರಭು ಅವರು ಅದರ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು "ಶ್ರೀ ತಿರುಮಲ ವೆಂಕಟರಮಣಸ್ವಾಮೀ ಸೇವಾ ಸಮಿತಿ" ಎಂಬ ಹೆಸರಿನಲ್ಲಿ ಸಮಿತಿಯೊಂದನ್ನು ರಚಿಸಿದರು. ಸ್ವತಃ ಅದರ ಅಧ್ಯಕ್ಷರಾಗಿದ್ದು, ತಮ್ಮೊಂದಿಗೆ ಸಮಿತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುವಂತೆ ಶ್ರೀ ಪ್ರಭು ನನ್ನಲ್ಲಿ ವಿನಂತಿಸಿಕೊಂಡರು.(ನಾನು ರೋಟರಿ ಮತ್ತು ಇತರ ಸೇವಾಕ್ಷೇತ್ರಗಳಲ್ಲಿ ಕೆಲಸ ಮಾಡಿದ ವಿಚಾರ ಅವರಿಗೆ ತಿಳಿದಿತ್ತು ಮತ್ತು ನನ್ನ ಕರ್ತೃತ್ವಶಕ್ತಿಯ ಮೇಲೆ ಅವರಿಗೆ ತುಂಬಾ ಅಭಿಮಾನ ಮತ್ತು ವಿಶ್ವಾಸವಿತ್ತು.)

ಅನಂತರ, ಶ್ರೀ ದೇವಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ನಾವು ಕೆಲವು ದೂರಗಾಮಿ ಮತ್ತು ತಾತ್ಕಾಲಿಕ ಯೋಜನೆಗಳನ್ನು ರೂಪಿಸಿದೆವು. ಅದಕ್ಕೆ ಊರಿನ ಮತ್ತು ಪರವೂರಿನ ಸಮಾಜ ಬಾಂಧವರ ಸಹಕಾರವೂ ದೊರೆಯಿತು.

೧೯೭೪ನೇ ಇಸವಿ ಡಿಸೆಂಬರ್ ೨೩ರಿಂದ ೨೭ರವರೆಗೆ ಶ್ರೀ ದೇವರಿಗೆ ಸಹಸ್ರ ಕುಂಭಾಭಿಷೇಕವನ್ನು ನಡೆಸುವುದು ಮತ್ತು ೨೮ರಂದು ಶ್ರೀ ಶ್ರೀ ಸ್ವಾಮೀಜಿಯವರಿಗೆ ಪ್ರಧಾನ ಕಲಶವನ್ನು ಅರ್ಪಿಸುವುದೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಇದಕ್ಕೆ 'ಕಾಶೀಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಆಶೀರ್ವಾದ, ಆ ಸಮಯದಲ್ಲಿ ಅವರ ಉಪಸ್ಥಿತಿ, ಅವರ ದಿವ್ಯಹಸ್ತದಿಂದ ಶ್ರೀ ದೇವರಿಗೆ ಸಹಸ್ರ ಕುಂಭಾಭಿಷೇಕ ನಡೆಯುವುದು-ಹೀಗೆ' ಆದೇಶ ದೊರೆತಿತ್ತು. ಈ ನಿರ್ಣಯವಾದದ್ದು ೧೯೭೪ನೇ ಇಸವಿ, ಜನವರಿ ತಿಂಗಳಲ್ಲಿ. ಆದರೆ ಅದೇ ವರ್ಷ ಜುಲೈ ತಿಂಗಳಲ್ಲಿ ನೇತ್ರಾವತಿ ನದಿಯಲ್ಲಿ ಪ್ರವಾಹ ಬಂದು ಪೇಟೆಯ ಜನರು ಕಷ್ಟನಷ್ಟಕ್ಕೆ ಒಳಗಾದರು. ಆದರೂ ನಾವು ಸಹಸ್ರ ಕುಂಭಾಭಿಷೇಕವನ್ನು ನಡೆಸುವ ನಿರ್ಧಾರವನ್ನು ಬದಲಿಸಲು ಹೋಗಲಿಲ್ಲ.

ಇದಕ್ಕಿಂತ ಮೊದಲು ಎರಡು ಸಂದರ್ಭಗಳಲ್ಲಿ ನಮ್ಮ ಶ್ರೀ ದೇವಸ್ಥಾನದ ಮೊಕ್ತೇಸರರು ಮತ್ತು ಊರಿನ ಹಿರಿಯರು ಸೇರಿ ಶ್ರೀ ದೇವರ ಸಹಸ್ರ ಕುಂಭಾಭಿಷೇಕವನ್ನು ನಡೆಸುವ ನಿರ್ಣಯ ಕೈಗೊಂಡಿದ್ದರಂತೆ. ೧೯೨೩ನೇ ಇಸವಿಯಲ್ಲಿ ಸಹಸ್ರ ಕುಂಭಾಭಿಷೇಕಕ್ಕಾಗಿ ಮಣ್ಣಿನ ಸಣ್ಣ ಸಣ್ಣ ಕಲಶಗಳನ್ನು(ಕುಂಭ) ಸಿದ್ಧವಾಗಿಟ್ಟಿದ್ದರಂತೆ. ಆದರೆ ಆ ವರ್ಷ ಮಳೆಗಾಲದಲ್ಲಿ ನೇತ್ರಾವತಿ ನದಿಯಲ್ಲಿ ಬಂದ ಪ್ರವಾಹದ ನೀರು ಶ್ರೀ ದೇವಸ್ಥಾನವನ್ನು ಪ್ರವೇಶಿಸಿ ಒಂದೆಡೆ ಕೂಡಿಟ್ಟ ಮಣ್ಣಿನ ಕಲಶಗಳೆಲ್ಲವೂ ನೀರಿನಲ್ಲಿ ಹರಿದುಹೋದವು ಎಂದು ನಮ್ಮ ಹಿರಿಯರು ಹೇಳುತ್ತಿದ್ದರು.

ಆ ಮೇಲೆ ೧೯೪೩-೪೪ನೇ ಇಸವಿಯಲ್ಲಿ ಸಹಸ್ರ ಕುಂಭಾಭಿಷೇಕ ನಡೆಸುವುದೆಂಬ ನಿರ್ಣಯವಾಗಿತ್ತಂತೆ. ಆದರೆ ಅದೇ ಸಮಯದಲ್ಲಿ ಎರಡನೆಯ ಮಹಾಯುದ್ಧ ನಡೆದದ್ದರಿಂದಲೂ ಆ ಕಾರ್ಯ ನೆರವೇರುವುದು ಸಾಧ್ಯ-ವಾಗಿರಲಿಲ್ಲ. ಬಹುಶಃ ದೇವಸ್ಥಾನದ ಆಸ್ತಿಯ ಬಲದಿಂದ ಕುಂಭಾಭಿಷೇಕ ನಡೆಯುವುದು ಬೇಡ, ಆತನ ಸರ್ವ ಭಕ್ತಜನರ ಕಾಣಿಕೆಯಿಂದಲೇ ಸಹಸ್ರ ಕುಂಭಾಭಿಷೇಕ ನಡೆಯಬೇಕೆನ್ನುವುದು ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಇಚ್ಛೆ ಇತ್ತೆಂದು ಕಾಣುತ್ತದೆ.

೧೯೭೪ನೇ ಇಸವಿಯಲ್ಲಿ ರೋಟರಿ ಕ್ಲಬ್‌ವತಿಯಿಂದ ಆಯೋಜಿಸಲ್ಪಟ್ಟ 'ನೇತ್ರಶಿಬಿರಗಳು', 'ದಂತಶಿಬಿರಗಳು', ಆಮೇಲೆ ನೇತ್ರಾವತಿ ನದಿಯ ಪ್ರವಾಹದಿಂದ ಉಂಟಾಗಿದ್ದ ಅನಾಹುತಗಳಿಗೆ ಕೈಗೊಳ್ಳಲಾಗಿದ್ದ ಪರಿಹಾರ ಕಾರ್ಯಗಳು ಮತ್ತು ಶ್ರೀ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟ ಸಹಸ್ರ ಕುಂಭಾಭಿಷೇಕ, ಈ ವಿಧದ ಸಾರ್ವಜನಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನಾನು ವರ್ಷವಿಡೀ ಕ್ರಿಯಾಶೀಲನಾಗಿ ಮತ್ತು ಕಾರ್ಯಮಗ್ನನಾಗಿ ಇರುವಂತಾಯಿತು. ಈ ಸಂದರ್ಭದಲ್ಲಿ ನನಗೆ ನವದೆಹಲಿ, ಮುಂಬಯಿ, ಪುಣೆ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಚಿಕ್ಕಮಂಗಳೂರು, ಮೈಸೂರು, ಮೊದಲಾದ ಹಲವು ದೂರ ದೂರ ಪ್ರದೇಶಗಳಲ್ಲಿ ನೆಲೆ ನಿಂತಿರುವ ನಮ್ಮ ಬಂಟವಾಳ-ಕಾರರನ್ನು ಮುಖತಃ ಭೇಟಿಯಾಗುವ ಅವಕಾಶವು ದೊರೆಯಿತು. ಅದು ನನ್ನ ಭಾಗ್ಯವೆಂದು ನಾನು ತಿಳಿಯುತ್ತೇನೆ.

೧೯೭೫ ನೇ ಇಸವಿ, ಮೇ ೪ ರಂದು (ರಾಕ್ಷಸ ಸಂವತ್ಸರದ ಚೈತ್ರ ಬಹುಳ ನವಮಿ) ಚಿ. ಮಾಧವನ ಉಪನಯನ ಸಮಾರಂಭವು ತಿರುಪತಿ ಕ್ಷೇತ್ರದಲ್ಲಿ ನಡೆಯಿತು. ಇದರಲ್ಲಿ ನಮ್ಮ ಕುಟುಂಬದ ಎಲ್ಲ ಸದಸ್ಯರು ಭಾಗವಹಿಸಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ದರ್ಶನವನ್ನೂ ಪಡೆದೆವು. ಬೆಂಗಳೂರಿನಲ್ಲಿದ್ದ ಶಾಲಿನಿ(ಅಮ್ಮು) ಎಲ್ಲ ವ್ಯವಸ್ಥೆಯನ್ನು ಮಾಡಿದ್ದಳು. ತಿರುಪತಿಯಿಂದ ನಾವು ಬೆಂಗಳೂರಿಗೆ ಬಂದೆವು. ಮೇ ೬ ರಂದು ಶಾಲಿನಿಯ ಮನೆಯಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ನಾವು ಚಿಕ್ಕಮಗಳೂರು ದಾರಿಯಾಗಿ ಊರಿಗೆ ಹಿಂತಿರುಗಿದೆವು.

ಆಮೇಲೆ ಕೆಲವೇ ದಿನಗಳಲ್ಲಿ, ಅಂದರೆ ಜೂನ್ ೪ ರಂದು ನನ್ನ ಸೋದರ ಸೊಸೆ ರವಿಕಲಾಳ ಮದುವೆ ಶ್ರೀ ಎಂ. ರವೀಂದ್ರ ನಾಯಕರೊಂದಿಗೆ ಪಾಣೆಮಂಗಳೂರು ಶ್ರೀ ವೀರ ವಿಠಲ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಅದರ ಸಿದ್ಧತೆ, ಕಾರ್ಯಗಳನ್ನೆಲ್ಲಾ ನಾನೇ ಮಾಡಬೇಕಾಗಿ ಬಂದಿತ್ತು.

ಅದೇ ವರ್ಷ ಜುಲೈ ತಿಂಗಳಲ್ಲಿ ನಾನು ಪಾಣೆಮಂಗಳೂರು ದತ್ತು ಶೆಣೈ ಮತ್ತು ಅನಂತರಾಯ ಶೆಣೈ ಅವರ ಜೊತೆಯಲ್ಲಿ ಆಂಧ್ರಪ್ರದೇಶದ ಪ್ರವಾಸವನ್ನು ಕೈಗೊಂಡೆ. ನಾವು ಜುಲೈ ೧೭ರಿಂದ ೨೬ರವರೆಗೆ ಆಂಧ್ರಪ್ರದೇಶದ ಪ್ರಸಿದ್ಧ ಪ್ರವಾಸಿ ತಾಣಗಳಾದ ಕಮ್ಮಾಮ್, ಹೈದರಾಬಾದ್, ಭದ್ರಾಚಲಮ್(ಇಲ್ಲಿ ಶ್ರೀ ಸಂತ ರಾಮದಾಸ ಇವರು ಕಟ್ಟಿಸಿದ ಶ್ರೀ ರಾಮಚಂದ್ರ ದೇವಸ್ಥಾನ ಬಹಳ ಪ್ರಸಿದ್ಧ), ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಸಾಲರಜಂಗ್ ವಸ್ತು ಸಂಗ್ರಹಾಲಯ, ಗೋಲಕೊಂಡಾ ಕೋಟೆ, ಮೃಗಾಲಯ, ನಾಗಾರ್ಜುನ ಸಾಗರ, ಕೃಷ್ಣಾ ಸೇತುವೆ ಮತ್ತು ಇನ್ನೂ ಅನೇಕ ದೇವಾಲಯಗಳು, ನಿಜಾಮರ ಅರಮನೆಗಳು ಇತ್ಯಾದಿಗಳನ್ನು ನೋಡಿ ಬಂದೆವು.

ಬಂಟವಾಳ ಶಾಖೆ

ನಾನು ೧೯೭೨ರಿಂದ ೧೯೭೬ರವರೆಗೆ ನಾಲ್ಕು ವರ್ಷಗಳ ಕಾಲ ಪಾಣೆಮಂಗಳೂರು ಶಾಖೆಯಲ್ಲಿ ಮೆನೇಜರ್ ಆಗಿ ಕಾರ್ಯನಿರ್ವಹಿಸಿದ್ದೆ. ಆಮೇಲೆ ಬಂಟವಾಳ ಶಾಖೆಯ ಮೆನೇಜರ್ ಆಗಿ ನಿಯುಕ್ತನಾದೆ. ೧೯೭೬, ಜೂನ್ ೧ ನಾನು ಕೆಲಸಕ್ಕೆ ಹಾಜರಾಗುವ ದಿನ. ಅಂದು ಬಂಟವಾಳದ ಎಲ್ಲಾ ನಾಗರಿಕರು ಉದಯವಾಣಿ ಪತ್ರಿಕೆಯಲ್ಲಿ "ಬಂಟವಾಳದ ಸುಪುತ್ರನಿಗೆ ಸುಖಾಗಮನ"ವೆಂದು ಅರ್ಧ ಪುಟದ ಜಾಹೀರಾತು ನೀಡಿ ನನಗೆ ಸ್ವಾಗತ ಬಯಸಿದ್ದರು. ಸರಾಫ್ ಶ್ರೀ ಬಿ. ವಾಮನ ಬಾಳಿಗ, ಬಿ. ದಾಮೋದರ ಪ್ರಭು, ಬಿ. ವಿಠಳ ಪ್ರಭು, ಮೊದಲಾದ ಮಹನೀಯರು ಶ್ರೀ ವೆಂಕಟರಮಣ ಸ್ವಾಮಿಯ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿ ನನಗೆ ಪ್ರಸಾದ ಕೊಡಿಸಿದರು. ಆನಂತರ ನನ್ನನ್ನು ಮೆರವಣಿಗೆಯಲ್ಲಿ ಬಂಟವಾಳ ಶಾಖೆಗೆ ಕರೆತಂದರು. ನಾನು ಆಗ ಶಾಖಾ ಪ್ರಬಂಧಕರಾಗಿದ್ದ ಶ್ರೀ ಹೆಚ್.ಎನ್. ಶೆಣೈ ಅವರಿಂದ ಅಧಿಕಾರ ಸ್ವೀಕರಿಸಿದೆ. ಅಂದು ಸುಮಾರು ೧೦೦-೧೫೦ ಮಂದಿಗೆ ಚಹ ಸತ್ಕಾರವನ್ನು ಏರ್ಪಡಿಸಲಾಗಿತ್ತು. ಅಲ್ಲಿ ನನ್ನ ಹಿತೈಷಿ ಶ್ರೀ ಬಿ. ಅಹಮದ ಹಾಜಿ ಮೊಹಿಯುದ್ದೀನರು ಸ್ವತಃ ಉಪಸ್ಥಿತರಿದ್ದುದು ನನಗೆ ಸಂತೋಷವನ್ನು ಉಂಟು ಮಾಡಿತ್ತು. ಆ ಕಾಲದಲ್ಲಿ ಇದು ವಿಶೇಷ ಘಟನೆಯಾಗಿ ಪರಿಣಮಿಸಿತ್ತು.

ರೋಟರಿ ದಿನಗಳು

ಇದೇ ವರ್ಷ ನಾನು ಬಂಟವಾಳ ರೋಟರಿ ಕ್ಲಬ್‌ನ ಅಧ್ಯಕ್ಷನಾಗಿ ಆಯ್ಕೆಯಾದೆ. ನಾನು ಅಧಿಕಾರ ಸ್ವೀಕರಿಸುವ ಕಾರ್ಯಕ್ರಮದ ದಿನ, ಅಂದರೆ ಜುಲೈ ೪ ರಂದು, ಭಾನುವಾರ ಮುಖ್ಯ ಅತಿಥಿಗಳಾಗಿ ನನ್ನ ಮೇಲೆ ತುಂಬಾ ಅಭಿಮಾನವಿದ್ದ ಭಾರತ ಬೀಡಿಯ ಸ್ಥಾಪಕರು ಹಾಗೂ ಹಿರಿಯರಾದ ಶ್ರೀ ಬಿ. ಮಂಜುನಾಥ ಪೈ ಮತ್ತು ಶ್ರೀ ಬಿ. ದಾಮೋದರ ಪ್ರಭು ಹಾಜರಿದ್ದರು.

ಬಹಳ ಹಿಂದಿನಿಂದ ನಡೆದು ಬಂದಿರುವ ಪ್ರಾಥಮಿಕ ಶಾಲೆಯೊಂದು ಜೋಡುಮಾರ್ಗದಲ್ಲಿತ್ತು. ಅದು ಹಳೆಯ ಕಟ್ಟಡದಲ್ಲಿ ಐಗಳ ಶಾಲೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಅದಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಬೇಕೆಂದು ೧೯೭೦ರಲ್ಲಿಯೇ ರೋಟರಿ ಕ್ಲಬ್‌ಗೆ ಮೋಡರ್ನ್ ಹಂಚು ಕಾರ್ಖಾನೆಯ ಬಳಿ ಅಗರಬಯಲು ಎಂಬ ವಠಾರದಲ್ಲಿ ಖಾಲಿ ನಿವೇಶನವೊಂದು ದೊರೆತಿತ್ತು. ಆದರೆ ಹಿಂದಿನ ಅಧ್ಯಕ್ಷರುಗಳ ಕಾಲದಲ್ಲಿ ಶಾಲಾ ಕಟ್ಟಡದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದು ಸಾಧ್ಯವಾಗಿರಲಿಲ್ಲ. ನಾನು ರೋಟರಿ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಶಾಲಾ ಕಟ್ಟಡದ ಶಿಲಾನ್ಯಾಸವನ್ನು ೧೯೭೬ನೇ ಇಸವಿ ಅಕ್ಟೋಬರ್, ೨೧ ರಂದು ಮುಂಜಾನೆ ಪಿ.ವಿ.ಎಸ್. ಬೀಡಿಯ ಮ್ಯಾನೆಜಿಂಗ್ ಡೈರೆಕ್ಟರ್ ಹಾಗೂ ಮಹಾದಾನಿಗಳಾದ ಶ್ರೀ ಮಧುಸೂದನ ಡಿ. ಕುಶೆಯವರ ದಿವ್ಯಹಸ್ತದಿಂದ ನಡೆಸಿದೆ. ಈ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಶ್ರೀ ಬಿ. ದಾಮೋದರ ಪ್ರಭು ಉಪಸ್ಥಿತರಿದ್ದರು. ವರ್ಷ ಕಳೆಯುವುದರೊಳಗೆ ಎಂಟು ಕೊಠಡಿಗಳ ಸುಂದರ ಶಾಲಾ ಕಟ್ಟಡ ಎದ್ದು ನಿಂತಿತು. ಇದಕ್ಕಾಗಿ ನಾನು ಹಲವಾರು ದಾನಿಗಳಿಂದ ಹಣವನ್ನು ಸಂಗ್ರಹಿಸಿದ್ದೆ. ಅಲ್ಲದೆ ಆ ಸಮಯದಲ್ಲಿ ಜೋಡುಮಾರ್ಗದ ಬ್ಲಾಕ್ ಡೆವಲಪಮೆಂಟ್ ಅಧಿಕಾರಿಯಾಗಿದ್ದ ಶ್ರೀ ಅಹಮದ್ ಕುಟ್ಟಿಯವರು ಸರಕಾರದ ವತಿಯಿಂದ ತುಂಬಾ ಧನಸಹಾಯ ದೊರೆಯುವಂತೆ ನೆರವಾಗಿದ್ದರು. ಜಿಲ್ಲಾಧಿಕಾರಿಯಾಗಿದ್ದ ಶ್ರೀ ಎಸ್.ಬಿ. ಮುದ್ದಪ್ಪನವರು, ಆಮೇಲೆ ಬಂದ ಶ್ರೀ ಬಿ.ಎಸ್. ಪಾಟೀಲರು ಕೂಡ ಸಹಾಯ ನೀಡಿದ್ದರಿಂದ ಶಾಲಾ ಕಟ್ಟಡ ಶರವೇಗದಿಂದ ನಿರ್ಮಾಣಗೊಳ್ಳುವಂತಾಯಿತು.

೧೯೭೭ನೇ ಇಸವಿ ಜನವರಿ ೨ರಂದು ನನ್ನ ಅಧ್ಯಕ್ಷತೆಯಲ್ಲಿ ೩೧೮ನೇ ರೋಟರಿ ಜಿಲ್ಲಾ ಇಂಟರ್ ಸಿಟಿ ಮೀಟ್ ನಡೆಯಿತು.

ಅಂದು ಬೇರೆ ಬೇರೆ ರೋಟರಿ ಜಿಲ್ಲೆಗಳಿಂದ ಅನೇಕ ರೋಟರಿಯನ್ನರು ಬಂದಿದ್ದರು. ಕರ್ನಾಟಕ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆಯುಕ್ತರಾದ ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅವರು ದೇಶದಲ್ಲಿ ನೀರು ಮತ್ತು ಅಗ್ನಿ ದುರಂತಗಳು ನಡೆದ ಸಮಯದಲ್ಲಿ ನಾಗರಿಕ ಸಮಾಜ ನಡೆಸಬೇಕಾಗಿದ್ದ ಕರ್ತವ್ಯದ ವಿಚಾರವಾಗಿ ಮಾತನಾಡಿದರು. ರೋಟರಿ ಜಿಲ್ಲಾ ಗವರ್ನರ್ ಹಾಸನದ ರೊಟೇರಿಯನ್ ಕೆ. ಅನಂತರಾಮಯ್ಯನವರು ಉಪಸ್ಥಿತರಿದ್ದ ಆ ಸಂದರ್ಭದಲ್ಲಿ ನನ್ನ ಕಾರ್ಯ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಈ ಸಮಾರಂಭ ಮುಗಿದ ಬಳಿಕ ಜಿಲ್ಲಾಮಟ್ಟದಲ್ಲಿ, ಭಾರತ ಸೇವಾದಳದ ಹತ್ತು ದಿನಗಳ ಶಿಬಿರವನ್ನು ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಆಯೋಜಿಸಲಾಯಿತು.

ನನಗೆ ೧೯೭೬ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಪಾಣೆಮಂಗಳೂರು ಊರವರ ಒತ್ತಾಯದಿಂದ ಅಲ್ಲಿಯ ಶ್ರೀ ವೀರ ವಿಠಲ ಸ್ವಾಮಿ ದೇವಸ್ಥಾನದ ನಿರ್ಮಾಣ ಕಾರ್ಯಕ್ಕೆ ಧನಸಂಗ್ರಹ ಮಾಡುವ ಉದ್ದೇಶದಿಂದ ಮುಂಬಯಿಗೆ ಹೋಗುವ ಪ್ರಸಂಗ ಬಂತು. ನಾನು ಶ್ರೀ ದತ್ತು (ಪಿ.ಡಿ.ಶೆಣೈ) ಮತ್ತು ಇತರರೊಂದಿಗೆ ಮುಂಬೈಗೆ ಪ್ರಯಾಣಿಸಿದೆ. ಸೆಪ್ಟೆಂಬರ್ ೬ರಿಂದ ೧೭ರವರೆಗೆ ಮುಂಬೈಯಲ್ಲಿದ್ದ ಪಾಣೆಮಂಗಳೂರಿನ ಮಹನೀಯರನ್ನು ವೈಯಕ್ತಿಕವಾಗಿ ಭೇಟಿಯಾಗಿ, ಅವರ ಸಭೆ ನಡೆಸಿ ಧನಸಂಗ್ರಹ ಮಾಡಲಾಯಿತು. ಆಮೇಲೆ ಹಿಂತಿರುಗುವ ದಾರಿಯಲ್ಲಿ ಪುಣೆ, ಬೆಳಗಾವಿ, ಹುಬ್ಬಳ್ಳಿ, ದಾವಣಗೆರೆ, ಶಿವಮೊಗ್ಗ ಮೊದಲಾದ ಊರುಗಳಲ್ಲಿರುವ ಬಂಟವಾಳ ಮತ್ತು ಪಾಣೆಮಂಗಳೂರಿನ ಸಮಾಜಬಾಂಧವರಿಂದಲೂ ವಂತಿಗೆ ಪಡೆದು ಬಂಟವಾಳಕ್ಕೆ ಬಂದು ತಲುಪಿದೆವು. ಹೀಗೆ ನನಗೆ ಪಾಣೆಮಂಗಳೂರಿನಲ್ಲಿ ಶ್ರೀ ಶಾರದಾ ಪ್ರೌಢಶಾಲೆಯ ನಿರ್ಮಾಣ ಕಾರ್ಯ ಮತ್ತು ಶ್ರೀ ವೀರ ವಿಠಲ ವೆಂಕಟರಮಣಸ್ವಾಮಿ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯಗಳಿಗೆ ಹಣ ಸಂಗ್ರಹಿಸುವ ಪವಿತ್ರ ಕೆಲಸದಲ್ಲಿ ಭಾಗಿಯಾಗುವ ಅವಕಾಶ ಮತ್ತು ಪುಣ್ಯ ದೊರೆತಿದೆ.

ನನಗೆ ಬ್ಯಾಂಕ್ ಠೇವಣಿ ಸಂಗ್ರಹ ಕಾರ್ಯದಲ್ಲಿ ಮತ್ತು ರೋಟರಿ ಹಾಗೂ ಇತರ ಸಾರ್ವಜನಿಕ ಸೇವಾಕಾರ್ಯಗಳಲ್ಲಿ ಭಾರತ ಬೀಡಿಯ ಶ್ರೀ ಬಿ. ದಾಮೋದರ ಪೈ(ದಾಮ್ಮಣಿ) ತುಂಬಾ ಸಹಾಯ ನೀಡುತ್ತಿದ್ದರು. ಮುಕ್ತಮನಸ್ಸಿನ ಸದ್ಗೃಹಸ್ಥರಾಗಿದ್ದ ಅವರು ೧೯೭೬ನೇ ಇಸವಿ ಅಕ್ಟೋಬರ್ ೪ರಂದು ಹೃದಯಾಘಾತವಾಗಿ ಮುಂಬೈಯಲ್ಲಿ ನಿಧನರಾದರು. ಅವರ ಮೃತದೇಹವನ್ನು ವಿಮಾನದಲ್ಲಿ ಮಂಗಳೂರಿಗೆ ತರಲಾಗಿತ್ತು. ಅವರ ಅಂತ್ಯದರ್ಶನಕ್ಕಾಗಿ ಬಂಟವಾಳ, ಪಾಣೆಮಂಗಳೂರಿನಿಂದ ನಾವು ಬಹಳ ಮಂದಿ ಅವರ ಮನೆಗೆ ಹೋಗಿದ್ದೆವು. ದಿ. ದಾಮ್ಮಣಿಯವರು ನನಗೆ ನೀಡಿದ ಸಹಾಯ ಮತ್ತು ಪ್ರೋತ್ಸಾಹ ಮರೆಯುವಂತಹದಲ್ಲ. ಆ ವರ್ಷ ಭಾರತಬೀಡಿಯವರು ಶ್ರೀ ದಾಮೋದರ ಪೈ ಅವರ ನೆನಪಿನಲ್ಲಿ ೧೦ ಲಕ್ಷ ಮೊತ್ತದ ಠೇವಣಿಯನ್ನು ಬೇರೆ ಯಾವುದೇ ಮಂಗಳೂರು ಬ್ಯಾಂಕುಗಳ ಮೆನೇಜರುಗಳಿಗೆ ನೀಡದೆ ನನಗೆ ನೀಡಿದ್ದರು. ದಿವಂಗತ ದಾಮೋದರ ಪೈ ಅವರನ್ನು ನಾನು ಮರೆಯುವಂತಿಲ್ಲ.

ಆ ದಿನಗಳಲ್ಲಿ ನಾನು ಬಂಟವಾಳ ಎಸ್.ವಿ.ಎಸ್. ಕಾಲೇಜಿನ ವಿಶ್ವಸ್ಥ ಮಂಡಳಿಯ ಸದಸ್ಯನಾಗಿದ್ದೆ. ಎಸ್.ವಿ.ಎಸ್. ವಿದ್ಯಾವರ್ಧಕ ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮವಿರಲಿಲ್ಲ. ೧೯೭೩ರಲ್ಲಿ ನಮ್ಮ ನಗರದ ವಿದ್ಯಾರ್ಥಿಗಳು ಕಾಲೇಜನ್ನು ಮುಚ್ಚಿ, ಕೆಲವು ಕಟ್ಟಡಗಳನ್ನು ಭಾಗಶಃ ಸುಟ್ಟು ಹಾಕಿದ ಸಂದರ್ಭದಲ್ಲಿ ಆಗ ಪ್ರಾಂಶುಪಾಲರಾಗಿದ್ದ ಶ್ರೀ ಬಿ. ಜನಾರ್ದನ ಬಾಳಿಗರಿಗೆ (ದಾಸಬಾಳೊ) ವಿದ್ಯಾರ್ಥಿಗಳನ್ನು ಡಿಬಾರ್ ಮಾಡಲು ಕಾಲೇಜಿನ ಆಡಳಿತ ಮಂಡಳಿಯವರು ಬೆಂಬಲ ನೀಡದ್ದರಿಂದ ಅವರು ರಾಜೀನಾಮೆ ನೀಡಿ ಮಡಿಕೇರಿಗೆ ತೆರಳಿದ್ದರು. ಆ ಮೇಲೆ ಕಾಲೇಜಿನ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿಗಳ ನಡುವೆ ಭಿನ್ನಾಭಿಪ್ರಾಯ ಮೂಡಿ ಆಗಾಗ ಮುಷ್ಕರ ನಡೆಯುತ್ತಿತ್ತು. ಈ ಕಾರಣದಿಂದಾಗಿ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಇದರಿಂದ ಆರ್ಥಿಕ ಸ್ಥಿತಿ ಕೆಟ್ಟಿತ್ತು. ಅದನ್ನೂ ಸರಿಪಡಿಸಲು ನಾನು ಒಂದು ಯೋಚನೆ ಮಾಡಿದೆ.

ಆಗ ಕಾಲೇಜಿನಲ್ಲಿ ಬ್ಯಾಂಕ್‌ನ ಎಕ್ಸ್‌ಟೆನ್ಶನ್ ಕೌಂಟರ್ ತೆರೆಯುವ ಉದ್ದೇಶದಿಂದ ನಾನು ಮಣಿಪಾಲಕ್ಕೆ ಹೋಗಿ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷರಾಗಿದ್ದ ಶ್ರೀ ಕೆ.ಕೆ. ಪೈ ಅವರನ್ನು ಭೇಟಿಯಾಗಿ ವಿಷಯ ತಿಳಿಸಿದೆ. ಅವರು ತಮ್ಮ ಒಪ್ಪಿಗೆ ನೀಡಿದರು. ಕಾಲೇಜಿನ ಕೊಠಡಿಯೊಂದರಲ್ಲಿ ಎಕ್ಸ್‌ಟೆನ್ಶನ್ ಕೌಂಟರ್ ಮಾಡುವುದೆಂದು ನಿರ್ಧರಿಸಲಾಯಿತು. ಆಗ ಮಂಗಳೂರು ನಗರಪಾಲಿಕೆಯ ಅಧ್ಯಕ್ಷರಾಗಿದ್ದ ಶ್ರೀ ಬ್ಲೇಸಿಯಸ್ ಡಿಸೋಜಾ(ಮುಂದೆ ಅವರು ಕರ್ನಾಟಕ ರಾಜ್ಯದ ಮಂತ್ರಿಗಳಾದರು) ಅವರು ಬಂಟವಾಳಕ್ಕೆ ಬಂದು ಎಕ್ಸ್‌ಟೆನ್ಶನ್

ಕೌಂಟರಿನ ಉದ್ಘಾಟನೆಯನ್ನು ೨೧, ಡಿಸೆಂಬರ್, ೧೯೭೬ರಲ್ಲಿ ನೆರವೇರಿಸಿದರು. ಇದರಿಂದ ಕಾಲೇಜಿನ ಸಮಿತಿಗೆ ವಾರ್ಷಿಕ ೭೨೦೦೦ ರೂ ಆದಾಯ ಬರುವಂತಾಯಿತು.

೧೯೭೭ನೇ ಇಸವಿ

ಹಿಂದಿನ ಅಧ್ಯಾಯಗಳಲ್ಲಿ ನಾನು ತಿಳಿಸಿದಂತೆ, ಶ್ರೀ ಟಿ.ಎ. ಪೈ ಹಾಗೂ ಶ್ರೀ ಕೆ.ಕೆ. ಪೈ ಅವರ ಜೀವನಾ–ದರ್ಶವನ್ನು ಸ್ವೀಕರಿಸಿ ಅವರ ಮಾರ್ಗದರ್ಶನದಲ್ಲಿ ಮತ್ತು ಅವರು ಕ್ರಮಿಸಿದ ದಾರಿಯಲ್ಲಿ ಮುಂದುವರಿಯುವುದಕ್ಕೆ ನನಗೆ ಸ್ಫೂರ್ತಿ ದೊರೆತಿತ್ತು. ಇದೇ ರೀತಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ದಯೆಯಿಂದ ಬೇರೆ ಬೇರೆ ವಿಷಯಗಳಲ್ಲಿ ಸೇವೆ ನಡೆಸುವ ಭಾಗ್ಯ ನನಗೆ ಬದುಕಿನಲ್ಲಿ ದೊರೆತಿದೆ. ನನ್ನ ಅರಿವಿಗೆ ಬಾರದ, ನಾನು ಯೋಚಿಸದ ರೀತಿಯ ಒಳ್ಳೆಯ ಸಂದರ್ಭಗಳು ಒದಗಿ ಬಂದಿವೆ. ಇದರಿಂದ ನನ್ನಲ್ಲಿದ್ದ ಕರ್ತೃತ್ವ ಶಕ್ತಿ ಮತ್ತು ಸಂಘಟನಾ ಚಾತುರ್ಯ ಸಮಾಜಕ್ಕೆ ಮತ್ತು ದೇಶಕ್ಕೆ ತಿಳಿದುಬರುವ ಹಾಗೆ ಎರಡು ಮೂರು ಸಂಗತಿಗಳು ೧೯೭೭ನೇ ಇಸವಿಯಲ್ಲಿ ಘಟಿಸಿದವು. ಅದೇ ವರ್ಷ ಒಂದರ ಹಿಂದೆ ಒಂದರಂತೆ ಮಹತ್ವದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಘಟನೆಗಳು ನಡೆದವು.

ದೇಶದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿದ ಬಳಿಕ, ಇಂದಿರಾಗಾಂಧಿಯ ಕಿರಿಮಗ ಶ್ರೀ ಸಂಜಯಗಾಧಿ ಬಲಶಾಲಿಯಾದರು. ಅವರು ಎಲ್ಲಾ ಕಾಂಗ್ರೆಸ್ ಪುಡಾರಿಗಳನ್ನು ಖಡ್ಗದ ಅಲಗಿನಲ್ಲಿ ನಿಲ್ಲಿಸಿದ್ದರು. ಅವರು ಮಾಡಿದ ಹಾಗೆ ಮತ್ತು ಹೇಳಿದ ಹಾಗೆ ಪರಿಸ್ಥಿತಿ ಇತ್ತು. ರಾಜಕೀಯ ಆಗಸದಲ್ಲಿ ಸಂಜಯಗಾಂಧಿ ಒಂದು ಧೂಮಕೇತುವಾಗಿ ಮೂಡಿ ಬಂದರು ಎಂದು ಹೇಳಬಹುದು. ಅವರು ಮತ್ತು ಅವರ ಯುವಸಂಗಾತಿಗಳು ಉತ್ತರ ಭಾರತದಲ್ಲಿ ನಸಬಂದಿ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಮತ್ತು ಕಠೋರವಾಗಿ ನಡೆಸಿದರು. ಅವರಿಗೆ ನಿಷ್ಠರಾಗಿದ್ದ ಅಧಿಕಾರಿಗಳು ಮತ್ತು ರಾಜ್ಯದ ಕಿರಿಪುಢಾರಿಗಳು ಗಂಡಸರನ್ನು, ಹೆಂಗಸರನ್ನು ಅಲ್ಲದೆ ಚಿಕ್ಕ ಮಕ್ಕಳನ್ನು ಕೂಡ ಅವರ ವಿರೋಧವನ್ನು ಲೆಕ್ಕಿಸದೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಸಬಂದಿ ಮಾಡಿಸಿದರು. ಇದರಿಂದಾಗಿ ಸಾಮಾನ್ಯ ಜನರು ಅದರಲ್ಲಿಯೂ ಕಾಂಗ್ರೆಸ್ ಪಕ್ಷದ 'ಮತಬ್ಯಾಂಕ್' ಆಗಿದ್ದ ಮುಸ್ಲಿಂ ಸಮಾಜವು ಕಾಂಗ್ರೆಸ್ ಪಕ್ಷದ ಕಡು ವಿರೋಧಿಯಾಯಿತು.

೮, ಜನವರಿ, ೧೯೭೭ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ದೇಶದಲ್ಲಿದ್ದ ತುರ್ತುಪರಿಸ್ಥಿತಿಯನ್ನು ರದ್ದುಪಡಿಸಿ, ಅದೇ ವರ್ಷ ಮಾರ್ಚ್ ೧ ರಂದು ಲೋಕಸಭೆಯ ಚುನಾವಣೆ ನಡೆಯುವುದೆಂದು ಘೋಷಿಸಿದರು. ಇದರಿಂದಾಗಿ ದೇಶದಲ್ಲಿ ಸ್ವಾತಂತ್ರ್ಯದ ನವಯುಗ ಪ್ರಾರಂಭವಾಯಿತೆಂದು ಜನರು ತಿಳಿದುಕೊಂಡರು. ಆಮೇಲೆ ದೇಶದ ರಾಜಕೀಯ ವಾತಾವರಣ ಬಹಳ ಬದಲಾಯಿತು. ಬೇರೆ ಬೇರೆ ರಾಜಕೀಯ ಪಕ್ಷಗಳ ನಾಯಕರು ಲೋಕನಾಯಕ ಶ್ರೀ ಜಯಪ್ರಕಾಶ ನಾರಾಯಣರ ಮಾರ್ಗದರ್ಶನದಲ್ಲಿ ಒಟ್ಟಾಗಿ 'ಜನತಾಪಕ್ಷ' ಎಂಬ ಹೆಸರಿನಿಂದ ಒಂದೇ ಪಕ್ಷದೊಳಗೆ ವಿಲೀನ ಹೊಂದಿದರು ಮತ್ತು ಜನತಾ ಪಕ್ಷದ ಹೆಸರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವುದೆಂದು ನಿರ್ಣಯಿಸಿದರು. ಅದುವರೆಗೆ ಶ್ರೀಮತಿ ಇಂದಿರಾಗಾಂಧಿಯವರ ಸರಕಾರದಲ್ಲಿ ಮತ್ತು ರಾಜಕೀಯರಂಗದಲ್ಲಿ ಪ್ರಭಾವಶಾಲಿ ಮಂತ್ರಿಗಳಾಗಿದ್ದ ಶ್ರೀ ಜಗಜೀವನ ರಾಮ ಮತ್ತು ಹೇಮಾವತಿ ನಂದನ ಬಹುಗುಣರು ಮಂತ್ರಿಮಂಡಳಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದರು. ಇದರಿಂದ ಇಂದಿರಾಗಾಂಧಿಯವರ ಪ್ರಭಾವಲಯಕ್ಕೆ ಬಲವಾದ ಹೊಡೆತ ಬಿತ್ತು.

ಈ ಚುನಾವಣೆಯಲ್ಲಿ ಶ್ರೀ ಟಿ.ಎ.ಪೈ ಅವರಿಗೆ ಉಡುಪಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷವು ಟಿಕೇಟನ್ನು ನೀಡಿತು. ಬಂಟವಾಳವು ಉಡುಪಿ ಲೋಕಸಭಾ ಕ್ಷೇತ್ರದಲ್ಲಿ ಬರುವುದರಿಂದ, ಇಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಕಚೇರಿಯನ್ನು ಪ್ರಾರಂಭಿಸಲು ಖಾಲಿ ಜಾಗದ ಆವಶ್ಯಕತೆ ಮತ್ತು ಆ ಚುನಾವಣಾ ಕಚೇರಿಯನ್ನು ನಡೆಸಬಲ್ಲ ವ್ಯಕ್ತಿಯ ಅಗತ್ಯ ಬಿತ್ತು. ಶ್ರೀ ಟಿ.ಎ.ಪೈ ಅವರ ಆಪ್ತಮಿತ್ರ ಮತ್ತು ಬಲಗೈ ಎಂದು ಪ್ರಸಿದ್ಧರಾಗಿದ್ದ ಶ್ರೀ ಬಂಟವಾಳ ನಾರಾಯಣ ನಾಯಕ್ ಮತ್ತು ಶ್ರೀ ಬಿ. ದಾಮೋದರ ಪ್ರಭು ನನ್ನ ಬಳಿ ಬಂದರು. ಚುನಾವಣಾ ಪ್ರಚಾರದ ದಿನಗಳಲ್ಲಿ ಕಾರ್ಯಕರ್ತರ ನಿರ್ವಹಣೆ ಮತ್ತು ಹಣದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ನನ್ನಲ್ಲಿ ವಿನಂತಿಸಿಕೊಂಡರು. ಶ್ರೀ ಟಿ.ಎ.ಪೈ ಅವರ ಮೇಲೆ ನನಗಿದ್ದ ಅಭಿಮಾನ, ಅವರು ನನ್ನ ಬದುಕಿನಲ್ಲಿ ಮಾಡಿದ ಸಹಾಯದ ಸ್ಮರಣೆ ಇದ್ದುದರಿಂದ ನಾನು ಸಮ್ಮತಿ ನೀಡಿದೆ. ಬ್ಯಾಂಕ್ ಮೆನೇಜರ್ ಆಗಿದ್ದು ನಾನು ಯಾವುದೇ ರಾಜಕೀಯ ಪಕ್ಷದ ಚುನಾವಣೆಗಾಗಿ ಕಾರ್ಯ ನಡೆಸುವುದು ನಿಷಿದ್ಧವಿತ್ತು. ಅದನ್ನು ತಿಳಿದುಕೊಂಡೇ, ಆಗುವುದು ಆಗಲಿ ಎಂದುಕೊಂಡು ಶ್ರೀ ಟಿ.ಎ.ಪೈಯವರು ನನಗೆ ಮಾಡಿದ ಸಹಾಯದ ಋಣ

ತೀರಿಸಲು ಇದೊಂದು ನನಗೆ ಒದಗಿ ಬಂದಿರುವ ಚಿನ್ನದ ಸುಸಂಧಿ ಇದು ಎಂದು ನಾನು ತಿಳಿದುಕೊಂಡೆ. ನನ್ನ ಮೇಲೆ ತುಂಬಾ ಅಭಿಮಾನ ಇಟ್ಟುಕೊಂಡಿದ್ದ ಬಂಟವಾಳದ ಜಾತಿ, ಪರಜಾತಿಯ ಮಿತ್ರರು ನನಗೆ ಬೆಂಬಲ ನೀಡುವುದಾಗಿ ತಿಳಿಸಿದರು. ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಿದ್ದ ನನ್ನ ಮಿತ್ರರನ್ನು ನಾನು ಮನೆಗೆ ಕರೆಯಿಸಿಕೊಂಡು ನನ್ನ ಪರಿಸ್ಥಿತಿಯನ್ನು ಅವರಿಗೆ ಸವಿಸ್ತಾರವಾಗಿ ತಿಳಿಸಿದ್ದಲ್ಲದೆ, ಶ್ರೀ ಟಿ.ಎ.ಪೈಯವರು ನನಗೆ ಮಾಡಿದ ಸಹಾಯದ ಋಣ ತೀರಿಸಲು ನನಗೆ ಒದಗಿ ಬಂದಿರುವ ಸುಸಂಧಿ ಎಂದು ಹೇಳಿದೆ. ಅವರಿಗೂ ಶ್ರೀ ಟಿ.ಎ.ಪೈ ಮತ್ತು ಶ್ರೀ ಕೆ.ಕೆ.ಪೈ ಅನೇಕ ರೀತಿಯಲ್ಲಿ ತಮಗೆ ಸಹಾಯ ಮಾಡಿದ ನೆನಪು ಮರುಕಳಿಸಿದ್ದರಿಂದ ಅವರು ನನ್ನ ಕೆಲಸಕ್ಕೆ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಅಲ್ಲದೆ ನಾನು ಇಟ್ಟ ಹೆಜ್ಜೆ ಸರಿಯಾದುದು ಎಂದು ತಿಳಿಸಿದರು.

ನಾನು ಹಳ್ಳಿಹಳ್ಳಿಗೆ ಹೋಗಿ ಕಾರ್ಯಕರ್ತರನ್ನು ತಯಾರು ಮಾಡಿದೆ. ನನ್ನ ಜೊತೆಯಲ್ಲಿ ಶ್ರೀ ಬಿ. ಶ್ರೀನಿವಾಸ ನಾಯಕ(ಸತ್ಕಾರ ಹೊಟೇಲ್), ಶ್ರೀ ಬಿ. ಜನಾರ್ದನ ಶೆಟ್ಟಿ, ಶ್ರೀ ಮಾಣೂರ ವಾಸುದೇವ ಕಾಮತ, ಬಿ. ಮಾಧವ ಭಂಡಾರಿ ಮೊದಲಾದ ಕಾಂಗ್ರೆಸ್ ಪುಢಾರಿಗಳಿದ್ದರು. ಇದರಿಂದಾಗಿ ನನಗೆ 'ಶ್ರೀ ಟಿ.ಎ.ಪೈ ಕಾಂಗ್ರೆಸ್ ಚುನಾವಣಾ ಕಚೇರಿ'ಯನ್ನು ಶಿಸ್ತಿನಿಂದ ಮತ್ತು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಹೋಗುವುದು ಸಾಧ್ಯವಾಯಿತು.

ಶ್ರೀ ಟಿ.ಎ.ಪೈ ಬಹುಮತದಿಂದ ಗೆದ್ದರು. ಆದರೆ ಶ್ರೀಮತಿ ಇಂದಿರಾಗಾಂಧಿಯವರು ಉತ್ತರ ಪ್ರದೇಶದಲ್ಲಿ ಸೋತರು. ಅಲ್ಲದೆ ಉತ್ತರ ಭಾರತದಲ್ಲಿ ಕಾಂಗ್ರೆಸ್ ದಯನೀಯ ಸೋಲು ಅನುಭವಿಸಿತು. ಇದರಿಂದ ಶ್ರೀ ಟಿ.ಎ.ಪೈಯವರಿಗೆ ಎರಡನೆಯ ಬಾರಿ ಭಾರತ ಸರಕಾರದಲ್ಲಿ ಮಂತ್ರಿಯಾಗುವ ಅವಕಾಶ ಸಿಗಲಿಲ್ಲ.

ಸಂಜಯಗಾಂಧಿಯವರ ಸಂಗಾತಿಗಳ ನಿಷ್ಠುರ ಕಾರ್ಯಕ್ರಮಗಳ ಕಾರಣದಿಂದಾಗಿ ಬೇರೆ ಬೇರೆ ಪಕ್ಷಗಳ ನೇತಾರರು ಒಟ್ಟಾಗಿ ಸೇರಿ 'ಜನತಾ ಪಕ್ಷ'ದ ಹೆಸರಿನಲ್ಲಿ ಮತ್ತು ಸಿ.ಪಿ.ಐ(ಮಾರ್ಕ್ಸಿಸ್ಟ್) ಮತ್ತು ಇತರ ಎಡಪಂಥೀಯ ಪಕ್ಷಗಳು ಒಟ್ಟು ಸೇರಿ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ವಿರೋಧ ವ್ಯಕ್ತಪಡಿಸಿದ್ದರಿಂದ ಕಾಂಗ್ರೆಸ್ ಪಕ್ಷ ಉತ್ತರ ಭಾರತದಲ್ಲಿ ಸೋತಿತು. ಇಂದಿರಾಗಾಂಧಿ, ಸಂಜಯಗಾಂಧಿ, ಬನ್ಸಿಲಾಲ್ ಸೋತು ಹೋದರು. ಮೊರಾರ್ಜಿ ದೇಸಾಯಿ, ಜಗಜೀವನರಾಮ್, ವಾಜಪೇಯಿ, ಅಡ್ವಾಣಿ, ಚರಣ ಸಿಂಗ್ ಮೊದಲಾದ ನಾಯಕರು ಗೆದ್ದರು.

ಅನಂತರ ಒಂದೂವರೆ ಎರಡು ವರ್ಷಗಳಲ್ಲಿ ದೇಶದಲ್ಲಿನ ರಾಜಕೀಯ ವಿದ್ಯಮಾನಗಳು ಕ್ಷಿಪ್ರಗತಿಯಿಂದ ಬದಲಾವಣೆ ಹೊಂದಿದವು. ಲೋಕನಾಯಕ ಜಯಪ್ರಕಾಶ ನಾರಾಯಣ ತೀರಿಕೊಂಡರು. ಅನಂತರ ಅವರು ಒಟ್ಟುಗೂಡಿಸಿದ್ದ ರಾಜಕೀಯ ನೇತಾರರು ತಮ್ಮತಮ್ಮದೇ ರಾಜಕೀಯ ಆಟವನ್ನು ಪ್ರಾರಂಭಿಸಿದ್ದರಿಂದ ಜನತಾ ಪಕ್ಷ ಹೋಳಾಗುವಂತಾಯಿತು. ಪ್ರಧಾನಿ ಮೊರಾರ್ಜಿ ದೇಸಾಯಿಯವರು ರಾಜೀನಾಮೆ ನೀಡಿದರು. ಚರಣಸಿಂಗ್ ಪ್ರಧಾನಿಯಾದರು. ಜಗಜೀವನ ರಾಮ್ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಬಂದರು. ಜನತಾ ಪಕ್ಷವನ್ನು ಸೇರಿದ್ದ ಹಿಂದಿನ ಜನಸಂಘದ ನೇತಾರರು 'ಭಾರತೀಯ ಜನತಾ ಪಕ್ಷ' ಎಂಬ ಹೆಸರಿನಿಂದ ಪ್ರತ್ಯೇಕವಾಗಿ ಒಂದು ಪಕ್ಷವನ್ನು ರಚಿಸಿದರು.

ಈ ಎಲ್ಲಾ ಬದಲಾವಣೆಗಳು ಬರಲು ಚಾಣಾಕ್ಷ ರಾಜಕಾರಣಿ ಶ್ರೀಮತಿ ಇಂದಿರಾ ಗಾಂಧಿಯವರು ರಾಜಕೀಯ ದಾಳವನ್ನು ವ್ಯವಸ್ಥಿತ ರೀತಿಯಿಂದ ನಡೆಸಿದ್ದರಿಂದ ಸಾಧ್ಯವಾಯಿತು. ಇದರಿಂದಾಗಿ ಸಾಮಾನ್ಯ ಜನರಲ್ಲಿ ತುರ್ತು ಪರಿಸ್ಥಿತಿಯ ಕಾರಣದಿಂದ ಅವರ ಕುರಿತಾಗಿ ಇದ್ದಂತಹ ಕೆಟ್ಟ ಅಭಿಪ್ರಾಯವು ತೊಡೆದು ಹೋಗಿ ದೇಶವು ಪ್ರಗತಿ ಸಾಧಿಸಬೇಕಾದರೆ ಮತ್ತು ದೃಢ ಸರಕಾರ ಬೇಕಾದರೆ ದೇಶಕ್ಕೆ ಇಂದಿರಾ ಗಾಂಧಿಯವರೇ ಬೇಕು ಎನ್ನುವ ಪರಿಸ್ಥಿತಿಯನ್ನು ನಿರ್ಮಿಸಿ ಕಾಣಿಸಲಾಯಿತು. ಕಾಂಗ್ರೆಸ್ ಪಕ್ಷದ ರಾಜಕೀಯ ಆಟ ಫಲಪ್ರದವಾಯಿತು.

ಆದರೆ, ಈ ಅವಧಿಯಲ್ಲಿ ಶ್ರೀ ಟಿ.ಎ.ಪೈ ಅವರು ಇಂದಿರಾಗಾಂಧಿಯವರ ವಿರುದ್ಧ ಹೋಗಿದ್ದರಿಂದ(ಅವರು ಇಂದಿರಾಗಾಂಧಿಯವರ ಮಗ ಸಂಜಯಗಾಂಧಿಗೆ ವಿರೋಧವಾಗಿದ್ದರು), ಇಂದಿರಾ ಕಾಂಗ್ರೆಸ್‌ನಿಂದ ಹೊರಬಂದರು. ಹೀಗಾಗಿ ರಾಜಕೀಯ ರಂಗದಲ್ಲಿ ಅವರ ಭವಿಷ್ಯ ಮಂಕಾಯಿತು. ೧೯೮೦ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಶ್ರೀ ಟಿ.ಎ.ಪೈ ಅವರು 'ದೇವರಾಜ ಅರಸ್ ಕಾಂಗ್ರೆಸ್' ಪಕ್ಷದ ಟಿಕೇಟಿನಲ್ಲಿ ಚುನಾವಣೆಗೆ ಸ್ಪರ್ಧಿಸಿದರು. ಆ ದಿನಗಳಲ್ಲಿ ದೇಶಾದ್ಯಂತ 'ಇಂದಿರಾ ಅಲೆ' ವ್ಯಾಪಿಸಿ ಕೊಂಡದ್ದರಿಂದ ಶ್ರೀ ಟಿ.ಎ.ಪೈಯವರಿಗೆ ಚುನಾವಣೆಯಲ್ಲಿ ಗೆಲ್ಲುವುದು ಸಾಧ್ಯವಾಗಲಿಲ್ಲ. ಅವರು ಸೋತರು.

ಆಗ(೧೯೮೦) ನಾನು ಶಿವಮೊಗ್ಗದಲ್ಲಿ ಸಿಂಡಿಕೇಟ್ ಬ್ಯಾಂಕ್ ಮೆನೇಜರ್ ಆಗಿದ್ದೆ. ಆದರೂ ರಜೆ ಪಡೆದು 'ಟಿ.ಎ.ಪೈ ಚುನಾವಣಾ ಕಚೇರಿ'ಯನ್ನು ಬಂಟವಾಳದಲ್ಲಿ ನಡೆಸುವ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳ ಬೇಕಾಯಿತು. ನಾನು ಬಂಟವಾಳದಲ್ಲಿ ಶ್ರೀ ವೇದವ್ಯಾಸ ಪ್ರಭುರವರ ಮನೆಯಲ್ಲಿ ತಿಂಗಳ ಕಾಲವಿದ್ದು ಚುನಾವಣೆಯ ಕೆಲಸ ನಡೆಸಿದೆ. ಇದರಿಂದ ಸಿಂಡಿಕೇಟ್ ಬ್ಯಾಂಕ್‌ನ ನನ್ನ ನೌಕರಿಗೆ ತೊಂದರೆ ಉಂಟಾಗಬಹುದಾದ ಭಯವಿದ್ದರೂ, ಬದುಕಿನಲ್ಲಿ ನನಗೆ ಬೆಳಕು ತೋರಿದ ಶ್ರೀ ಟಿ.ಎ.ಪೈ ಅವರಿಗಾಗಿ ಅವರ ರಾಜಕೀಯ ಅಧಃಪತನದ ದಿನಗಳಲ್ಲಿ ನಾನು ಕೆಲಸ ಮಾಡಿದೆ. ನನ್ನ ಜೊತೆಗೆ ಆಗ ಶ್ರೀ ಟಿ.ಎ.ಪೈ ಅವರ ಬೆಂಬಲಕ್ಕೆ ಇದ್ದವರು ಬಂಟವಾಳ ನಾರಾಯಣ ನಾಯಕ, ಬಿ. ದಾಮೋದರ ಪ್ರಭು, ವೇದವ್ಯಾಸ ಪ್ರಭು, ಮಾತ್ರ.

ಇದೇ ಅವಧಿಯಲ್ಲಿ ಬಂಟವಾಳದ ನಮ್ಮ ಶ್ರೀ ಯಶವಂತ ವ್ಯಾಯಾಮ ಶಾಲೆಯ ಸದಸ್ಯರ ಮಾರುತಿ ಕ್ರಿಕೆಟ್ ಕ್ಲಬ್ ಎಂಬ ತಂಡವು ಶ್ರೀ ಮಾಣೂರ ಲಕ್ಷ್ಮಣ ಕಾಮತರ (ಮಾಣೂರ ಅಚ್ಚು) ನಾಯಕತ್ವದಲ್ಲಿ ದ.ಕ.ಜಿಲ್ಲೆಯಲ್ಲಿ ಬಹಳ ಹೆಸರುವಾಸಿಯಾಗಿತ್ತು. ಅವರಿಗೆ ವಿವಿಧ ಕ್ರಿಕೆಟ್ ಪಂದ್ಯಗಳಲ್ಲಿ ಪಾರಿತೋಷಕ ಸಿಗುವುದು ಖಚಿತವಿತ್ತು. ನಾವು ವೆಂಕಟರಮಣ ಸ್ವಾಮಿಯ ದಯೆಯಿಂದ ಮತ್ತು ಗೋದೆ ಶ್ರೀ ಹನುಮಂತ ದೇವರ ಕೃಪೆಯಿಂದ 'ಕ್ರಿಕೆಟ್‌ನಲ್ಲಿ ಮೊದಲ ಬಹುಮಾನ ಗೆಲ್ಲುವುದು' ಎಂಬ ವಿಶ್ವಾಸ ಅವರದ್ದಾಗಿತ್ತು. ತಂಡದಲ್ಲಿ ಪ್ರಶಾಂತ ಭಂಡಾರಿ ಮತ್ತು ಇತರ ಹುಡುಗರಿದ್ದರು. ನಾನು ಯಾವಾಗಲೂ ಅವರಿಗೆ ಬೆಂಬಲ ನೀಡುತ್ತಿದ್ದೆ.

ಬಾಲ ಮಾರುತಿ ಟೆನ್ನಿಸ್ ಕ್ಲಬ್ : ಅಖಿಲ ಭಾರತ ಟೆನ್ನಿಸ್ ಟೂರ್ನ್‌ಮೆಂಟ್

ನನಗೆ ಟೆನ್ನಿಸ್ ಆಟದೊಂದಿಗೆ ಯಾವ ಸಂಪರ್ಕವೂ ಇರಲಿಲ್ಲ. ಆದರೆ ಪಾಣೆಮಂಗಳೂರು ಶ್ರೀ ಪಿ.ಡಿ.ಶೆಣೈ(ದತ್ತು) ಅವರ ಸಹವಾಸದಿಂದ ನಾನು ಮಂಗಳೂರು ಬಾಲಮರುತಿ ವ್ಯಾಯಾಮ ಶಾಲೆಯ ಟೆನ್ನಿಸ್ ಕೋರ್ಟ್‌ಗೆ ಹೋಗುವುದಿತ್ತು. ಇದರಿಂದ ಬಾಲಮಾರುತಿ ಟೆನ್ನಿಸ್ ಕ್ಲಬ್‌ನ ಅಖಿಲ ಭಾರತ ಟೆನ್ನಿಸ್ ಟೂರ್ನ್‌ಮೆಂಟನ್ನು ಸಂಘಟಿಸುವುದರಲ್ಲಿ ನಾನು ಕೂಡ ಭಾಗಿಯಾಗುವ ಹಾಗಾಯಿತು. ೧೯೭೭, ಮಾರ್ಚ್ ಮತ್ತು ೧೯೭೭ನೇ ಇಸವಿಯಲ್ಲಿ ನಡೆದ ಟೆನ್ನಿಸ್ ಟೂರ್ನ್‌ಮೆಂಟ್ ಸಂದರ್ಭದಲ್ಲಿ ನಾನು ಸಕ್ರಿಯವಾಗಿ ಭಾಗವಹಿಸಿದ್ದೆ. ಬಾಲಮಾರುತಿ ಟೆನ್ನಿಸ್ ಕ್ಲಬ್‌ನ ಆಶ್ರಯದಲ್ಲಿ ಎರಡನೆಯ ಅಖಿಲ ಭಾರತ ಟೆನ್ನಿಸ್ ಟೂರ್ನ್‌ಮೆಂಟ್ ಮಂಗಳೂರಿನಲ್ಲಿ ೧೯೭೭ನೇ ಇಸವಿ, ಎಪ್ರಿಲ್ ೭ರಿಂದ ೧೧ರವರೆಗೆ ಬಹಳ ಹುರುಪಿನಿಂದ ಜರಗಿತು. ಆ ಟೂರ್ನ್‌ಮೆಂಟ್‌ಗೆ ರಾಮನಾಥನ್ ಕೃಷ್ಣನ್, ಪ್ರೇಮಜಿತ್ ಲಾಲ್, ಜೈದೀಪ ಮುಖರ್ಜಿ, ಕರ್ನಾಟಕದ ರಘುರಾಮ್, ಗೌರವ ಮಿಶ್ರಾ, ಜೆ. ರಾಯಪ್ಪ ಅವರಂತಹ ಚಾಂಪಿಯನ್‌ಗಳು ಬಂದಿದ್ದರು. ಟೂರ್ನಿಮೆಂಟಿನ ಸಂಘಟನೆಗಾಗಿ ಶ್ರೀ ಪಿ. ದೇವದಾಸ ಶೆಣೈ(ದತ್ತು), ಉಳ್ಳಾಲ ರಮೇಶ ಮಲ್ಯ, ಕಸ್ತೂರಿ ಮಂಗೇಶ ಪೈ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ದೊರೆತಿದ್ದರಿಂದ ನನಗೆ ಮಂಗಳೂರಿನ ಕ್ರೀಡಾಪಟುಗಳ ಪರಿಚಯವಾಯಿತು.

ಈ ರೀತಿಯ ಟೆನ್ನಿಸ್ ಟೂರ್ನ್‌ಮೆಂಟ್ ಮಂಗಳೂರಿನಲ್ಲಿ ನಡೆದಿರುವುದು ಇದೇ ಮೊದಲು. ಇದರ ನಂತರ ನಡೆದದ್ದೂ ನಾನರಿಯೆ. ಆ ಟೂರ್ನ್‌ಮೆಂಟ್‌ನಲ್ಲಿ ಭಾಗಿಯಾಗಿದ್ದ ಕ್ರೀಡಾಪಟುಗಳು ಬಂಟವಾಳ ರೋಟರಿ ಕ್ಲಬ್ಬಿನಲ್ಲಿ ಭಾಷಣ ನೀಡುವಂತೆ ನಾನು ಅವರನ್ನು ವಾರದ ಸಭೆಗೆ ಕರೆದು ತಂದಿದ್ದೆ. ಆಮೇಲೆ ನನ್ನ ಆತ್ಮೀಯ ಸ್ನೇಹಿತರಾದ ಶ್ರೀ ಬಿ. ಅಹಮದ್ ಹಾಜಿ ಮೊಹಿಯುದ್ದೀನರು ತಮ್ಮ ಮನೆಯಲ್ಲಿ ಅವರೆಲ್ಲರಿಗೆ ಮತ್ತು ಬಂಟವಾಳದ ರೋಟರಿ ಸದಸ್ಯರಿಗೆ ಭೋಜನ ವ್ಯವಸ್ಥೆಯನ್ನೂ ಮಾಡಿದ್ದರು.

ಏಪ್ರಿಲ್ ೨೮, ೧೯೭೭ರಲ್ಲಿ ಕಾಶೀಮಠಾಧೀಶರಾದ ಶ್ರೀ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಪಾಣೆಮಂಗಳೂರು ವೀರ ವಿಠಲಸ್ವಾಮಿ ದೇವರ ಪುನರ್‌ಪ್ರತಿಷ್ಠೆಯನ್ನು ನಡೆಸಿದರು. ಪರವೂರಿನಲ್ಲಿ ನೆಲೆಸಿದ ಪಾಣೆಮಂಗಳೂರಕಾರರು ಬಹು ಸಂಖ್ಯೆಯಲ್ಲಿ ಊರಿಗೆ ಬಂದದ್ದು ಅವರಿಗೆ ಸಂತೃಪ್ತಿಯನ್ನು ಉಂಟು ಮಾಡಿತ್ತು. ಆಗ ಸುಮಾರು ೪-೫ ಸಾವಿರ ಮಂದಿ ಸೇರಿದ್ದರು.

ಸಂಜೆ "ಅಸೋಸಿಯೇಶನ್ ಆಫ್ ಇಲೆಕ್ಟ್ರಾನಿಕ್ ಇಂಜಿನಿಯರ್ಸ್ ಆಫ್ ಇಂಡಿಯಾ"ದ ಅಧ್ಯಕ್ಷರಾದ ಶ್ರೀ ಪಿ.ಎ.ಭಟ್ (ಅಪ್ಪು ಭಟ್), ಶ್ರೀ ಘಡಾಯ ಅಪ್ಪು ಪೈ ಮುಂಬಯಿ, ಪಿ. ನಾರಾಯಣ ಪೈ(ತುಮಕೂರು) ಇವರನ್ನು ನಾನು ಬಂಟವಾಳಕ್ಕೆ ಬರಮಾಡಿಕೊಂಡು ನನ್ನ ಮನೆಯಲ್ಲಿ ಸತ್ಕರಿಸಿದ್ದು ಅವರಿಗೆ ತುಂಬಾ ಸಂತೋಷವನ್ನು ಉಂಟುಮಾಡಿತ್ತು. ಮುಂದೆ ನಾನು ಶ್ರೀ ವೆಂಕಟರಮಣಸ್ವಾಮಿ

ಪ್ರೌಢಶಾಲೆಗೆ ಹೊಸದಾಗಿ ಮೂರು ತರಗತಿ ಕೋಣೆಗಳು ಮತ್ತು ಅತಿ ವಿಸ್ತಾರವಾದ ಗ್ರಂಥಾಲಯದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಶ್ರೀ ಪಿ.ಎ. ಭಟ್(ಅವರು ಬಂಟವಾಳ ಪ್ರೌಢಶಾಲೆಯ ಹಳೆವಿದ್ಯಾರ್ಥಿ ಎಂಬುದನ್ನು ಮರೆಯದೆ) ತರಗತಿಯ ಒಂದು ಕೋಣೆಗೆ ಅವರ ಹೆಸರಿನಲ್ಲಿ ಹತ್ತು ಸಾವಿರ ರೂಪಾಯಿ ದೇಣಿಗೆ ನೀಡಿದ್ದರು. ನನ್ನ ಮೇಲೆ ಅವರಿಗೆ ತುಂಬಾ ಪ್ರೀತಿ ಮತ್ತು ವಿಶ್ವಾಸವಿತ್ತು.

೧೯೭೭ರಲ್ಲಿ ಅನೇಕ ದುಃಖದ ಘಟನೆಗಳು ನಡೆದವು. ನನ್ನ ಹಿರಿಯ ಸಹೋದರಿ ರಮಣಿಯಕ್ಕ ಜೂನ್ ೧೬ರಂದು ಅಂದರೆ ನನ್ನ ತಾಯಿ ತೀರಿಕೊಂಡು ಸರಿಯಾಗಿ ತಿಂಗಳು ಕಳೆಯುವುದರೊಳಗೆ ತೀರಿಕೊಂಡರು. ಅವರು ಸ್ವಲ್ಪ ಮಂದ ಬುದ್ಧಿಯವರಾಗಿದ್ದರು. ಅವರಿಗೆ ಶಿಕ್ಷಣವೂ ಇರಲಿಲ್ಲ. ಆದರೆ ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ತುಂಬಾ ಜಾಣೆಯಾಗಿದ್ದರು. ಚಿಕ್ಕಂದಿನಲ್ಲಿ ಅವರು ನಮಗೆ ಸ್ನಾನ ಮಾಡಿಸುವುದು, ಊಟ ಮಾಡಿಸುವುದು, ಭೂತ, ರಾಕ್ಷಸ, ಹುಲಿ, ಸಿಂಹಗಳ ಕತೆ, ಅಜ್ಜಿ ಕತೆಗಳನ್ನು ಹೇಳುವುದಿತ್ತು. ಆ ಕತೆಗಳನ್ನು ನಾನು ಇವತ್ತಿಗೂ ಮರೆತಿಲ್ಲ.

ಅವರಿಗೆ ತಡವಾಗಿ ಮದುವೆಯಾಗಿತ್ತು. ಅವರ ಪತಿ ವಿ.ನಾರಾಯಣ ಪೈ ಮೊದಲು ಪೊಲೀಸರಾಗಿದ್ದು ಹೆಂಡತಿಗೆ ಯಾವಾಗಲೂ ಹೊಡೆಯುವುದು, ಬೈಯ್ಯುವುದು ಮಾಡುತ್ತಿದ್ದರು. ಮದುವೆಯಾದ ಅನಂತರ ಅವರೂ ನಮ್ಮ ಮನೆಯಲ್ಲಿಯೇ ಇರುತ್ತಿದ್ದರು. ಆಮೇಲೆ ಸ್ವಲ್ಪ ವರ್ಷ ಕಳೆದು ಬೇರೆ ಬಿಡಾರ ಮಾಡಿಹೋದರು. ಆದರೂ ರಮಣಿಯಕ್ಕನಿಗೆ ಸುಖ ಸಿಗಲಿಲ್ಲ. ಅವರ ಕೊನೆಯ ದಿನಗಳಲ್ಲಿ, ಗಂಡ ತೀರಿಕೊಂಡ ಬಳಿಕ ಅವರು ತಮ್ಮ ಮಗಳು ಇಂದಿರಾಳೊಂದಿಗೆ ಪಾಣೆಮಂಗಳೂರು ದೇವಸ್ಥಾನದ ಬಿಡಾರದಲ್ಲಿದ್ದರು. ಅಲ್ಲಿಯೇ ಅವರು ತೀರಿಕೊಂಡರು. ಅವರ ಕಡೆಗಾಲದಲ್ಲಿ ಅವರ ಮಗಳು ಇಂದಿರಾ ಹತ್ತಿರ ಇರಲಿಲ್ಲ, ಮುಂಬೈಗೆ ಹೋಗಿದ್ದಳು. ರಮಣಿಯಕ್ಕನಿಗೆ ಗಂಡು ಮಕ್ಕಳು ಇಲ್ಲದ್ದರಿಂದ ಅವರ ಅಂತ್ಯಕ್ರಿಯೆಯನ್ನು ಅವರ ಭಾವನ ಮಗ ವಾಮದಪದವು ಮಂಜುನಾಥ ಪೈ ಮತ್ತು ಅವನ ಸಹೋದರರು ನೆರವೇರಿಸಿದರು.

ನನ್ನ ರೋಟರಿ ಅಧ್ಯಕ್ಷ ಹುದ್ದೆಯು ೩೦ ಜೂನ್, ೧೯೭೭ರಂದು ಮುಗಿಯಿತು. ಜೋಡುಮಾರ್ಗದಲ್ಲಿದ್ದ ಶತಮಾನದಷ್ಟು ಹಿಂದಿನ ಪಾಳುಬಿದ್ದ ಶಾಲಾ ಕಟ್ಟಡವನ್ನು ಸ್ಥಳಾಂತರಗೊಳಿಸಿ, ನವೀನ ಕಟ್ಟಡವನ್ನು ನಿರ್ಮಿಸುವ ಕೆಲಸಕ್ಕೆ ನಾನು ಧೈರ್ಯದಿಂದ ಕೈ ಹಾಕಿದ್ದೆ. ನನ್ನ ಅವಧಿಯಲ್ಲಿ ರೋಟರಿ ಇಂಟರ್ ಸಿಟಿ ಮೀಟ್ ಇತ್ಯಾದಿ ಕಾರ್ಯಕ್ರಮಗಳು ನಡೆದಿದ್ದವು. ಈ ವಿಚಾರವಾಗಿ ಬಂಟವಾಳ ರೋಟರಿ ಕ್ಲಬ್‌ನ ಹಿರಿಯ ಸದಸ್ಯರು ಮತ್ತು ಪ್ರಸಿದ್ಧ ನ್ಯಾಯವಾದಿಗಳಾದ ಶ್ರೀ ಎನ್. ವಿಶ್ವನಾಥ ಕುಡ್ವ ಅವರು ಮುಕ್ತಕಂಠದಿಂದ ನನ್ನ ಶ್ಲಾಘನೆ ಮಾಡಿದ್ದರು.

ಈ ಎಲ್ಲಾ ಕಾರಣಗಳಿಂದಾಗಿ ೧೯೭೭ನೇ ಇಸವಿಯನ್ನು ಮರೆಯದೆ ನೆನಪಿನಲ್ಲಿ ಇಟ್ಟುಕೊಳ್ಳುವಂತಾಯಿತು. ನಾನು ಮೇಲೆ ಉಲ್ಲೇಖಿಸಿದ ನನ್ನ ಬದುಕಿನ ಮತ್ತೊಂದು ಮಹತ್ವದ ಘಟನೆ ನಡೆಯಿತು.

ಎಸ್.ವಿ.ಎಸ್. ಪ್ರೌಢಶಾಲೆಯ ವ್ಯವಸ್ಥಾಪಕ

ನಾನು ಕಲಿತ ಶ್ರೀ ವೆಂಕಟರಮಣಸ್ವಾಮೀ ಪ್ರೌಢಶಾಲೆಯ ವ್ಯವಸ್ಥಾಪಕನಾಗಿ(ಕರಸ್ಪಾಂಡೆಂಟ್) ನಾನು ಜುಲೈ ೧೮, ೧೯೭೭ರಲ್ಲಿ ಚುನಾಯಿತನಾದೆ. ಅದುವರೆಗೆ ಶ್ರೀ ದೇವಸ್ಥಾನದ ಮೊಕ್ತೇಸರರೇ ಶಾಲೆಯ ವ್ಯವಸ್ಥಾಪಕರಾಗಿ ಇರುತ್ತಿದ್ದರು. ಹೀಗೆ ಹೊರಗಿನವರು ವ್ಯವಸ್ಥಾಪಕರಾದವರಲ್ಲಿ ನಾನು ಮೊದಲಿಗನಾಗಿದ್ದೇನೆ. ಇದರಿಂದ ನಾನು ವಿದ್ಯೆ ಪಡೆದ ಸರಸ್ವತಿ ಮಂದಿರದ ಸೇವೆ ಮಾಡಿ ನನ್ನ ಋಣಸಂದಾಯ ಮಾಡುವ ಭಾಗ್ಯ ನನಗೆ ದೊರೆಯಿತು.

ನಾನು ವ್ಯವಸ್ಥಾಪಕನಾಗಿ ಚುನಾಯಿತನಾದ ಸಮಯದಲ್ಲಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ೧೫೦೦ನ್ನು ತಲುಪಿದ್ದರಿಂದ, ಅಲ್ಲಿದ್ದ ತರಗತಿ ಕೋಣೆಗಳು ಸಾಕಾಗುತ್ತಿರಲಿಲ್ಲ. ಗ್ರಂಥಾಲಯವು ಹಳೆಯ ಕೊಠಡಿಯಲ್ಲಿ ಇದ್ದುದರಿಂದ ಪುಸ್ತಕಗಳನ್ನು ಇಡುವುದಕ್ಕೆ ಜಾಗ ಸಾಕಾಗುತ್ತಿರಲಿಲ್ಲ. ನಾನು ಶಾಲೆಯ ಶಿಕ್ಷಕರ ಸಭೆ ಕರೆದು, ಶಾಲೆಯಲ್ಲಿ ವಿದ್ಯಾಭ್ಯಾಸ ಉತ್ತಮ ರೀತಿಯಲ್ಲಿ ನಡೆಯುವುದಕ್ಕೆ ಅವರ ಸಲಹೆ, ಸೂಚನೆ ನೀಡಬೇಕೆಂದು ಕೋರಿದೆ. ಶಿಕ್ಷಕರು ಮೊತ್ತಮೊದಲನೆಯದಾಗಿ ವಿದ್ಯಾರ್ಥಿಗಳು ಆರಾಮವಾಗಿ ಕುಳಿತುಕೊಳ್ಳಲು ಕೋಣೆಗಳ ಆವಶ್ಯಕತೆ ಇದೆ ಎಂದು ಉತ್ತರಿಸಿದರು. ನಾನು ಅದಕ್ಕೆ ಆದ್ಯತೆ ನೀಡಿ ಈ ದಿಕ್ಕಿನಲ್ಲಿ ಕ್ರಮಿಸುವ ನಿರ್ಣಯ ಕೈಗೊಂಡೆ.

ಶಾಲೆಯ ಹೊಸ ಸಮಿತಿಯ ಸಭೆ ಕರೆದು ಶಾಲೆಯಲ್ಲಿ ಹೊಸ ತರಗತಿ ಕೋಣೆಗಳು ಮತ್ತು ವಿಶಾಲವಾದ ಗ್ರಂಥಾಲಯವನ್ನು ಕಟ್ಟಿಸುವ ಪ್ರಸ್ತಾಪವನ್ನು ಮುಂದಿಟ್ಟೆ. ಅದಕ್ಕೆ ಸದಸ್ಯರು ಸಮ್ಮತಿ ನೀಡಿದರು. ತಕ್ಷಣವೇ ಮೂರು ಹೊಸ ತರಗತಿ ಕೋಣೆಗಳನ್ನು ಮತ್ತು ಮಹಡಿಯ ಮೇಲೆ ಒಂದು

ನವೀಕೃತ ವಿಸ್ತಾರವಾದ ಗ್ರಂಥಾಲಯವನ್ನು ಕಟ್ಟಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಇದಕ್ಕೆ ಆಗಿನ ಶ್ರೀ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಬಂಟವಾಳ ದಾಮೋದರ ಪ್ರಭು, ಮಾಣೂರ ವಾಸುದೇವ ಕಾಮತ, ಪಿ. ಪದ್ಮನಾಭ ಭಂಡಾರಕರ್(ಸಮಿತಿಯ ಸದಸ್ಯರು), ಮುಖ್ಯೋಪಾಧ್ಯಾಯರಾದ ಶ್ರೀ ಮೌರೀಸ್ ಡಾಯಸ್ ಮತ್ತು ಪ್ರೌಢಶಾಲೆಯ ಮುಖ್ಯ ಗುಮಾಸ್ತರಾಗಿದ್ದ ಶ್ರೀ ಕುಡ್ಗಿ ಉಮಾನಾಥ ಶೆಣೈಯವರು ಸಂಪೂರ್ಣ ಬೆಂಬಲ ನೀಡಿದರು. ಆಮೇಲೆ ನಿರ್ಮಾಣ ಕಾರ್ಯವು ಉತ್ತಮ ರೀತಿಯಿಂದ ದೋಷರಹಿತವಾಗಿ ನಡೆಯಲು ಹಣ ಸಂಗ್ರಹ ಮಾಡಲು ಅವರು ನನಗೆ ಭುಜಕ್ಕೆ ಭುಜ ನೀಡಿ, ಕೆಲಸ ಕಾರ್ಯಗಳಲ್ಲಿ ನನ್ನ ಜೊತೆಯಲ್ಲಿಯೇ ಇದ್ದರು. ನನ್ನ ಈ ಕೆಲಸದಲ್ಲಿ ನನಗೆ ಪೂರ್ಣ ಸಹಕಾರ, ಮಾರ್ಗದರ್ಶನ ಮತ್ತು ಹಣದ ಭರವಸೆ ನೀಡಿದವರು 'ಬಂಟವಾಳದ ಹಿರಿಯ ವ್ಯಕ್ತಿ' ಎಂದು ಪ್ರಸಿದ್ಧರಾದ ಶ್ರೀ ಬಿ. ವಾಮನ ಅಣ್ಣಪ್ಪ ಬಾಳಿಗ (ಭಾಂಗರಾ ವಾಮನ ಬಾಳೊ). ಇವರ ಉತ್ಸಾಹದಿಂದಾಗಿ ನನ್ನ ಕೆಲಸ ಯಶಸ್ವಿಯಾಯಿತು ಎಂಬುದನ್ನು ನಾನು ನೆನಪಿಸಿಕೊಳ್ಳಬೇಕಾದುದು ಆವಶ್ಯಕವಿದೆ.

ಅದೇ ದಿನಗಳಲ್ಲಿ ಕಾಶೀಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಚಾತುರ್ಮಾಸ ವ್ರತದ ಕಾರಣದಿಂದಾಗಿ ಬಂಟವಾಳದ ಕಾಶೀಮಠದಲ್ಲಿ ಮೊಕ್ಕಾಂ ಹೂಡಿದ್ದರು. ನಾನು ಶ್ರೀ ವಾಮನ ಅಣ್ಣಪ್ಪ ಬಾಳಿಗ ಮತ್ತು ಶ್ರೀ ಬಿ. ದಾಮೋದರ ಪ್ರಭು ಇವರ ಜೊತೆಯಲ್ಲಿ ಶ್ರೀ ಶ್ರೀ ಸ್ವಾಮೀಜಿಯುವರನ್ನು ಭೇಟಿಯಾಗಿ ಶಾಲೆಗೆ ಹೊಸ ಕೋಣೆಗಳನ್ನು ಮತ್ತು ಗ್ರಂಥಾಲಯವನ್ನು ಕಟ್ಟಿಸುವ ವಿಷಯವನ್ನು ನಿರೂಪಿಸಿದೆ ಮತ್ತು ಅವರಲ್ಲಿ ನಿರ್ಮಾಣ ಕಾರ್ಯದ ಶಂಕು ಸ್ಥಾಪನೆಯನ್ನು ನೆರವೇರಿಸಬೇಕೆಂದು ಬೇಡಿಕೆ ಸಲ್ಲಿಸಿದೆ. ಆದರೆ ಶ್ರೀ ಸ್ವಾಮೀಜಿಯವರು ಚಾತುರ್ಮಾಸದ ವ್ರತಾಚರಣೆಯನ್ನು ನಡೆಸುತ್ತಿದ್ದುದರಿಂದ ಅವರು ಮಠದಿಂದ ಹೊರಗೆ ಬರುವ ಹಾಗಿರಲಿಲ್ಲ, ಹೀಗಾಗಿ ಶ್ರೀ ಶ್ರೀ ಸ್ವಾಮೀಜಿಯವರು, 'ನಾವು ಶ್ರೀ ವೆಂಕಟರಮಣ ಸ್ವಾಮಿಯಲ್ಲಿ ಮತ್ತು ಮಠದ ಆರಾಧ್ಯ ದೇವರಾದ ಶ್ರೀ ವೇದವ್ಯಾಸರಲ್ಲಿ ನಿರ್ಮಾಣ ಕಾರ್ಯವು ಸುರಳೀತವಾಗಿ ನಡೆಯುವಂತೆ ಮತ್ತು ಸಮಸ್ತ ಜನರ ಬೆಂಬಲ ಮುಕ್ತವಾಗಿ ದೊರೆಯುವಂತೆ ಬೇಡಿ ಪ್ರಸಾದ ನೀಡುತ್ತೇವೆ, ನೀವು ಪ್ರಸಾದವನ್ನು ಇಟ್ಟು ನಿರ್ಮಾಣ ಕಲ್ಲನ್ನು ಹಾಕಿ ಕಾರ್ಯ ಪ್ರಾರಂಭಿಸಿ, ನಿಮ್ಮ ಬೆಂಬಲಕ್ಕೆ ದೇವರು ನಿಂತು ಒಳ್ಳೆಯದಾಗುತ್ತದೆ' ಎಂದು ಆಶೀರ್ವಾದ ಮಾಡಿದರು.

ಹೀಗೆ ೨೨, ಸೆಪ್ಟೆಂಬರ್ ೧೯೭೭ರಂದು ಗುರುವಾರ ಶ್ರೀ ವೆಂಕಟರಮಣ ಸ್ವಾಮಿ ಮತ್ತು ಶ್ರೀ ವೇದವ್ಯಾಸರಿಗೆ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಿ ಶ್ರೀ ಸ್ವಾಮೀಜಿಯವರು ನೀಡಿದ ಪ್ರಸಾದವನ್ನು ಇರಿಸಿ ಶ್ರೀ ಬಿ. ದಾಮೋದರ ಪ್ರಭು ಅವರು ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಇವರ ಜೊತೆಯಲ್ಲಿ ಹಿರಿಯರಾದ ಶ್ರೀ ಬಿ. ವಾಮನ ಅಣ್ಣಪ್ಪ ಬಾಳಿಗ, ಮುಖ್ಯೋಪಾಧ್ಯಾಯರಾದ ಶ್ರೀ ಮೌರೀಸ್ ಡಾಯಸ್ ಇದ್ದರು. ಶ್ರೀ ದೇವರದಯೆಯಿಂದ ಮತ್ತು ಗುರುವರ್ಯರ ಆಶೀರ್ವಾದದಿಂದ ನಿರ್ಮಾಣ ಕಾರ್ಯವು ಉತ್ತಮ ರೀತಿಯಲ್ಲಿ ಬೇಗನೆ ಮುಗಿಯಿತು. ನಮ್ಮ ಕೋರಿಕೆಯನ್ನು ಮನ್ನಿಸಿ ದೇಶ ವಿದೇಶಗಳಿಂದ ನಮ್ಮ ಶಾಲೆಯ ಹಳೇ ವಿದ್ಯಾರ್ಥಿಗಳು ತುಂಬಾ ಪ್ರೋತ್ಸಾಹ ನೀಡಿ ಹಣ ಕಳುಹಿಸಿಕೊಟ್ಟರು. ನನ್ನ ತಂದೆ ಮತ್ತು ತಾಯಿಯ ಹೆಸರಿನಲ್ಲಿ ನಾನು ಕೂಡ ಒಂದು ಕೋಣೆಗೆ ದೇಣಿಗೆ (ರೂ ೧೦೦೦೦) ನೀಡಿದೆ. ಬೇರೆ ಬೇರೆ ಹಳೇ ವಿದ್ಯಾರ್ಥಿಗಳ ದೇಣಿಗೆಯಿಂದಲೇ ಮೂರು ಕೋಣೆಗಳು ನಿರ್ಮಾಣಗೊಂಡವು. ಹೀಗಾಗಿ ಈ ಕಾರ್ಯವು ಒಂಬತ್ತು ತಿಂಗಳೊಳಗೆ ಪೂರ್ಣಗೊಂಡಿತು

ಹಣಸಂಗ್ರಹ ಕಾರ್ಯಕ್ಕಾಗಿ ಶ್ರೀ ಮಾಧವ ಭಂಡಾರಿ, ಬಿ. ದಾಮೋದರ ಪ್ರಭು, ಕುಡ್ಗಿ ಉಮಾನಾಥ ಶೆಣೈ, ಬಿ. ರಾಮಚಂದ್ರ ಭಂಡಾರಿ ಮತ್ತು ಬಿ. ಗಣೇಶ ಮಲ್ಯ ಇವರು ನನಗೆ ಅನೇಕ ಊರುಗಳಿಗೆ ಹೋಗಲು ಜೊತೆ ನೀಡಿದ್ದಾರೆ. ಈ ಕಾರ್ಯದಲ್ಲಿ ಶ್ರೀ ಮಾಣೂರ ವಾಸುದೇವ ಕಾಮತಿ(ಇವರಿಗೆ ಮುಂದೆ ಎಂ.ಎಲ್.ಸಿ. ಸ್ಥಾನ ದೊರೆಯಿತು)ಯವರು ಬಹಳ ಪರಿಶ್ರಮಪಟ್ಟಿದ್ದಾರೆ. ಶ್ರೀ ಗುರುವರ್ಯರ ಆದೇಶವನ್ನು ಪಡೆದು, ಹೊಸ ಕಟ್ಟಡಕ್ಕೆ "ಶ್ರೀ ಸುಕೃತೀಂದ್ರ ವಿದ್ಯಾಸದನ"ವೆಂಬ ಹೆಸರು ನೀಡಲಾಯಿತು. ೧೯೭೮ನೇ ಇಸವಿ, ಜೂನ್ ೮, ಗುರುವಾರ ದಿನ ಶ್ರೀ ಕಾಶೀ ಮಠಾಧೀಶರಾದ ಪೂಜ್ಯ ಶ್ರೀ ಸುಧೀಂದ್ರತೀರ್ಥ ಸ್ವಾಮಿಜೀಯವರ ದಿವ್ಯಹಸ್ತದಿಂದ ದೀಪ ಬೆಳಗುವ ಮೂಲಕ 'ಶ್ರೀ ಸುಕೃತೀಂದ್ರ ವಿದ್ಯಾಸದನ'ದ ಉದ್ಘಾಟನೆಯಾಯಿತು. ಮಣಿಪಾಲದ ಶ್ರೀ ಕೆ.ಕೆ. ಪೈಯವರು ಸಮಾರಂಭದ ಅಧ್ಯಕ್ಷರಾಗಿದ್ದರು. ಶ್ರೀ ಗುರುವರ್ಯರು ನನಗೆ ಒಳ್ಳೆಯ ಆಶೀರ್ವಾದ ನೀಡಿದರು. ಆ ಹೊಸ ಕಟ್ಟಡದಲ್ಲಿ ಮೂರು ತರಗತಿ ಕೋಣೆಗಳು ಮತು ೧೬೦೦ ಚದರಡಿಯ ಒಂದು ವಿಸ್ತಾರವಾದ ಗ್ರಂಥಾಲಯವಿದೆ.

೧೯೭೮ನೇ ಇಸವಿ ಜುಲೈ ೩೦, ಭಾನುವಾರದಂದು ಬೆಳಗ್ಗೆ ಧರ್ಮಸ್ಥಳದ ಧರ್ಮಾಧಿಕಾರಿ ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ದಿವ್ಯಹಸ್ತದಿಂದ ಗ್ರಂಥಾಲಯ ಸಭಾಂಗಣದ

ಉದ್ಘಾಟನೆ ನಡೆಯಿತು. ರೋಟರಿ ಜಿಲ್ಲಾ ಗವರ್ನರ್ ರೋಟೇರಿಯನ್ ಯು. ರಾಜಾರಾಮ ಮಲ್ಯ ಅಧ್ಯಕ್ಷರಾಗಿದ್ದರು. ಹೊಸ ಗ್ರಂಥಾಲಯ ಸಭಾಂಗಣವು ವಿಶಾಲವಾಗಿ ಆಕರ್ಷಕವಾಗಿತ್ತು. ಶ್ರೀ ಬಿ. ದಾಮೋದರ ಪ್ರಭು, ಶ್ರೀ ಬಿ. ವಾಮನ ಅಣ್ಣಪ್ಪ ಬಾಳಿಗ, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಮತ್ತು ಡಾ. ವಾಸು ಶೆಟ್ಟಿಯವರು ಶುಭಾಶಂಸನೆ ಮಾಡಿದ್ದರು.

ನನ್ನ ಬ್ಯಾಂಕ್. ವ್ಯವಹಾರದ ನಡುವೆಯೇ ನಾನು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ರೋಟರಿ ಕ್ಷೇತ್ರದಲ್ಲಿ ಇಷ್ಟು ದೊಡ್ಡ ಜವಾಬ್ದಾರಿ ತೆಗೆದುಕೊಂಡು ಸೇವಾಕಾರ್ಯ ನಿರ್ವಹಿಸಲು ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಆಶೀರ್ವಾದ ಪೂರ್ಣವಾಗಿ ನನ್ನ ಮೇಲೆ ಇತ್ತು. ಇದರಿಂದಾಗಿ ನಾನು ಯಶಸ್ವಿಯಾಗಿ ಕೆಲಸಗಳನ್ನು ಸಂಪನ್ನಗೊಳಿಸುವುದು ಸಾಧ್ಯವಾಯಿತು. ನನ್ನ ಬ್ಯಾಂಕ್ ಶಾಖೆಯಲ್ಲಿ ನೀಡಿದ ಠೇವಣಿ ಗುರಿಯನ್ನು (ಡೆಪಾಸಿಟ್ ಟಾರ್ಗೆಟ್) ಸಮಯಾವಧಿಗೆ ಮೊದಲೇ ಪೂರೈಸಿ ನಾನು ಹೊಸ ಗುರಿಯನ್ನು ಕೇಳುತ್ತಿದ್ದೆ ಮತ್ತು ಈ ವರ್ಷವೂ ಅದನ್ನೂ ಸಾಧಿಸಿ ತೋರಿಸಿದೆ.

ಬೇರೆ ಬೇರೆ ಕ್ಷೇತ್ರಗಳಲ್ಲಿ ನೇತಾರ ಸ್ಥಾನವನ್ನು ಪಡೆದು ಕೆಲಸ ಮಾಡುವ ಧೀಮಂತಿಕೆಯು ನನಗೆ ನನ್ನ ತಂದೆಯವರಿಂದ ಬಂದಿರುವುದು. ಇದು ಯಾವಾಗಲೂ ಮರೆಯುವಂತಹದಲ್ಲ. ರೋಟರಿ ಕ್ಷೇತ್ರ, ದೇವಾಲಯ, ಮಠ, ಶಾಲೆಗಳ ನಿರ್ಮಾಣ ಕಾರ್ಯ (ಜೋಡುಮಾರ್ಗ ರೋಟರಿ ಶಾಲೆಯ ಕಟ್ಟಡ ಮತ್ತು ಬಂಟವಾಳದ ಪ್ರೌಢಶಾಲೆಯ ಹೊಸ ಕಟ್ಟಡ)ಗಳಿಗಾಗಿ ಜವಾಬ್ದಾರಿಯ ಕೆಲಸವನ್ನೂ ನಾನು ಯಶಸ್ವಿಯಾಗಿ ಪೂರೈಸಿದ್ದೇನೆ.

ಶ್ರೀ ದೇವರಿಗೆ ಚಿನ್ನದ ಪೀಠ–ಪ್ರಭಾವಳಿ

ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಬಂಟವಾಳದ ಸ್ವಮಠದಲ್ಲಿ ನಡೆದ ಚಾತುರ್ಮಾಸ ವ್ರತಾಚರಣೆಯ ೪–೫ ತಿಂಗಳುಗಳು ಹೇಗೆ ಕಳೆಯಿತೆಂಬುದೇ ತಿಳಿಯಲಿಲ್ಲ. ಅದೇ ಸಮಯದಲ್ಲಿ 'ಭಾಂಗರಾ ಬಾಳೊ' ಎಂದು ಹೆಸರು ಪಡೆದಿರುವ ಶ್ರೀ ಬಿ. ವಾಮನ ಅಣ್ಣಪ್ಪ ಬಾಳಿಗ ಅವರಿಗೆ ಶ್ರೀ ವೆಂಕಟರಮಣ ಸ್ವಾಮಿ ಕನಸಿನಲ್ಲಿ ಬಂದು 'ದೇವಸ್ಥಾನದ ಪಟ್ಟದ ಶ್ರೀನಿವಾಸ ದೇವರಿಗೆ ಚಿನ್ನದ ಪ್ರಭಾವಳಿ ಮಾಡುವುದು' ಎಂಬ ಆದೇಶ ನೀಡಿದನಂತೆ. ಇದಕ್ಕೆ ಬಂಟವಾಳ ಪೇಟೆಯ ಭಕ್ತರು ಒಪ್ಪಿಕೊಂಡು ಚಿನ್ನದ ಕಾಣಿಕೆಯನ್ನು (ಬಂಗಾರದ ಪವನುಗಳು ಅಥವಾ ಆಭರಣದ ರೂಪದಲ್ಲಿ) ಪಡೆಯುವುದೆಂದು ನಿರ್ಣಯಿಸಿದರು. ಭಾಂಗರಾ ಬಾಳಿಗರ ಜೊತೆಯಲ್ಲಿ ಬಿ. ದಾಮೋದರ ಪ್ರಭು ಮತ್ತು ನಾನು ಈ ಪುಣ್ಯಕಾರ್ಯದಲ್ಲಿ ಮುಖಂಡತ್ವ ವಹಿಸುವ ಸಂದರ್ಭ ಒದಗಿ ಬಂತು.

ಶ್ರೀ ದೇವರ ಭಕ್ತವೃಂದವು ಸ್ವಯಂಪ್ರೇರಣೆಯಿಂದ ಮುಂದೆ ಬಂದು ಅವರವರಲ್ಲಿದ್ದ ಬಂಗಾರದ ಪವನುಗಳನ್ನು ಮತ್ತು ಚಿನ್ನದ ಒಡವೆಗಳನ್ನು ನೀಡಿದ್ದರಿಂದಾಗಿ, ೨೭ ಸೆಪ್ಟೆಂಬರ್, ೧೯೭೭ರ ಮಂಗಳವಾರ, ಅಂದರೆ ಶ್ರೀ ಗುರುವರ್ಯರ ಚಾತುರ್ಮಾಸ ವ್ರತ ಕೊನೆಗೊಳ್ಳುವ ದಿನದಂದು ಶ್ರೀ ಸ್ವಾಮೀಜಿಯವರ ದಿವ್ಯಹಸ್ತದಿಂದ ಪೀಠ ಪ್ರಭಾವಳಿಯನ್ನು ದೇವರಿಗೆ ಸಮರ್ಪಿಸುವ ಕಾರ್ಯವನ್ನು ಪ್ರಾರಂಭಿಸಲಾಯಿತು ಮತ್ತು ೨೬ ನವೆಂಬರ್, ೧೯೭೭, ಬುಧುವಾರದಂದು ದೇವಸ್ಥಾನದಲ್ಲಿ ನಡೆದ ಶ್ರೀ ಮಹಾವಿಷ್ಣು ಯಜ್ಞದ ಪೂರ್ಣಾಹುತಿ ದಿನವೇ ಶ್ರೀ ಶ್ರೀ ಸ್ವಾಮೀಜಿಯವರ ದಿವ್ಯಹಸ್ತದಿಂದ ಪಟ್ಟದ ಶ್ರೀ ಶ್ರೀನಿವಾಸ ದೇವರಿಗೆ ಚಿನ್ನದ ಹೊಸ ಪೀಠ ಮತ್ತು ಪ್ರಭಾವಳಿಯನ್ನು ಅರ್ಪಿಸಲಾಯಿತು.

ಶ್ರೀ ವೇದವ್ಯಾಸ ೫೦೦೦ ವರ್ಷ–ಜ್ಞಾನಸತ್ರ ಆಚರಣೆ

ಕಾಶೀಮಠದ ಆರಾಧ್ಯ ದೇವರಾಗಿರುವ ಮತ್ತು ಜಗತ್ತಿಗೆ ಜ್ಞಾನ ಮತ್ತು ಅಭಯ ನೀಡಿದ, ವೇದದ ಪರಿಷ್ಕರಣವನ್ನು ನಡೆಸಿದ ಮತ್ತು ಮಹಾಭಾರತ ಮಹಾಕಾವ್ಯವನ್ನು ರಚಿಸಿದ ಶ್ರೇಷ್ಠ ಮಹರ್ಷಿ ಶ್ರೀ ವೇದವ್ಯಾಸರು ಜನಿಸಿ ೫೦೦೦ ವರ್ಷಗಳನ್ನು ಪೂರೈಸಿದ ಪ್ರಯುಕ್ತವಾಗಿ ಬಂಟವಾಳದಲ್ಲಿ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು 'ಶ್ರೀ ವೇದವ್ಯಾಸ ಜ್ಞಾನಸತ್ರ' ಆಚರಣೆಯನ್ನು ನಡೆಸುವುದು ಮತ್ತು ಅದಕ್ಕಾಗಿ ಭಾರತ ದೇಶದ ಮಹಾನದಿಗಳ ತೀರ್ಥ ತಂದು ಶ್ರೀ ವೇದವ್ಯಾಸ ದೇವರಿಗೆ ಅಭಿಷೇಕ ಮಾಡಬೇಕು ಎನ್ನುವ ಆದೇಶ ನೀಡಿದರು. ಹೀಗೆ ೧೯೭೭ರ ಸೆಪ್ಟೆಂಬರ್ ೪–೫–೬, ಈ ೩ ದಿನಗಳಲ್ಲಿ ದೇಶದ ಬೇರೆ ಬೇರೆ ಊರುಗಳಲ್ಲಿರುವ ಶ್ರೀಮಠದ ಶಿಷ್ಯವರ್ಗದವರು ಬಂಟವಾಳದಲ್ಲಿ ಸೇರಿ ಶ್ರೀ ವೇದವ್ಯಾಸ ಜ್ಞಾನಸತ್ರ ನಡೆಸುವುದೆಂದು ತೀರ್ಮಾನವಾಯಿತು.

ಈ ಕೆಲಸದ ಸುವ್ಯವಸ್ಥೆಗಾಗಿ ಶ್ರೀ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಸಂಘಟನಾ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಸಮಾಜದ ಗಣ್ಯಾತಿಗಣ್ಯ ಮುಖಂಡರು, ಶ್ರೀಮಂತರು,

ವಿದ್ವಾಂಸರು ಹಾಗೂ ದಾನಿಗಳ ಸಹಭಾಗಿತ್ವ ಅಪಾರವಾಗಿತ್ತು. ಶ್ರೀ ಕುಡ್ಪಿ ಶ್ರೀನಿವಾಸ ಶೆಣೈ, ಡಾ. ಎಂ. ಪಿ. ಪೈ. ಸಾಹುಕಾರ ಎಂ ಬಾಬಾ ಪೈ, ಕಸ್ತೂರಿ ಮಂಗೇಶ ಪೈ, ಬಂಟವಾಳ ದಾಮೋದರ ಪ್ರಭು, ಪಿ.ಎಮ್. ಶೆಣೈ ಮೊದಲಾದ ಮಹಾ ನೇತಾರರು ಈ ಸಮಿತಿಯ ಪದಾಧಿಕಾರಿಗಳಾಗಿದ್ದರು. ಸಮಿತಿಯ ಜಂಟಿ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಭಾಗ್ಯ ನನಗೆ ದೊರೆತಿತ್ತು. ಮೂರು ದಿನಗಳ ಈ ಸತ್ರದಲ್ಲಿ ಸಮಾಜಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಚರ್ಚೆ ನಡೆಯಿತು. ದೇಶದ ವಿವಿಧೆಡೆಗಳಿಂದ ವಿದ್ವಾಂಸರು ಮತ್ತು ತಜ್ಞರು ಬಂದಿದ್ದರು.

ಜ್ಞಾನಸತ್ರದಲ್ಲಿ ಭಾಗವಹಿಸಲು ಊರು, ಪರವೂರುಗಳಿಂದ ಸಮಾಜ ಬಾಂಧವರು ಮತ್ತು ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ಬಂಟವಾಳಕ್ಕೆ ಬಂದು ನೆರೆದಿದ್ದರು. ಬಂದಿರುವ ಸಮಾಜ ಬಾಂಧವರಿಗೆಲ್ಲರಿಗೂ ಊಟ, ತಿಂಡಿ ಮತ್ತು ತಂಗುವ ವ್ಯವಸ್ಥೆಯನ್ನು ಮಾಡಲಾಗಿತ್ತು. ದೊಡ್ಡ ಚಪ್ಪರವನ್ನು ಹಾಕಲಾಗಿತ್ತು. ಈ ಕಾರ್ಯಕ್ರಮ ನಡೆಸುವುದೆಂದು ನಿರ್ಣಯಿಸಿದ ದಿನದಿಂದ ನಾನು ಶ್ರೀ ವೇದವ್ಯಾಸ ಜ್ಞಾನಸತ್ರದ ಉದ್ದೇಶ, ಕಾರ್ಯಕ್ರಮ, ಅಭಿಷೇಕ ಮತ್ತು ಪರಿಸಂವಾದಗಳ ವಿಚಾರವಾಗಿ ಮಾಹಿತಿ, ಮಾರ್ಗದರ್ಶನ ಪಡೆಯುವುದಕ್ಕಾಗಿ ಶ್ರೀ ಸ್ವಾಮೀಜಿಯವರನ್ನು ಭೇಟಿಯಾಗಿ ಅವರ ವಿಚಾರಧಾರೆ, ಸಮಾಜದ ಉನ್ನತಿಗಾಗಿ ಅವರಲ್ಲಿದ್ದ ಕಾಳಜಿ ಮತ್ತು ಆ ಕಾರಣಕ್ಕಾಗಿ ಸಮಾಜದ ಎಲ್ಲಾ ಸ್ತರಗಳ ಜನರು ಒಟ್ಟು ಸೇರಿ ಚರ್ಚೆ ನಡೆಸಬೇಕೆಂಬ ಅವರ ಬಯಕೆಯನ್ನು ತಿಳಿದುಕೊಂಡೆ. ಈ ಉದ್ದೇಶದಿಂದ ಶ್ರೀ ಸ್ವಾಮೀಜಿಯವರನ್ನು ದಿನಾಲೂ ಭೇಟಿಯಾಗುವ ಮತ್ತು ಅವರ ಮಾರ್ಗದರ್ಶನವನ್ನು ಪಡೆಯುವ ಭಾಗ್ಯ ನನಗೆ ದೊರೆಯಿತು. ಪ್ರತಿ ಭಾನುವಾರ ಮಂಗಳೂರಿನಿಂದ ಸಮಾಜದ ಹಿರಿಯರು ಬರುತ್ತಿದ್ದರು. ಶ್ರೀ ದಾಮೋದರ ಪ್ರಭು ಮತ್ತು ಶ್ರೀ ಕಸ್ತೂರಿ ಮಂಗೇಶ ಪೈಯವರ ಜೊತೆಯಲ್ಲಿ ನಾನು ಕೂಡ ಶ್ರೀ ಸ್ವಾಮೀಜಿಯವರನ್ನು ಭೇಟಿಯಾಗಿ ಸಂವಾದವನ್ನು ನಡೆಸುತ್ತಿದ್ದೆನು.

ದಿನಾಂಕ ೪.೯.೧೯೭೭ರ ಬೆಳಗ್ಗೆ ಶ್ರೀ ಗುರುವರ್ಯರು ಕಾಶೀಮಠದಲ್ಲಿರುವ ತಮ್ಮ ಪೂಜಾ ಕೊಠಡಿಯಿಂದ ಶ್ರೀ ವೇದವ್ಯಾಸ ಮತ್ತು ಇತರ ದೇವರುಗಳ ವಿಗ್ರಹಗಳನ್ನು ಅಭಿಷೇಕಕ್ಕಾಗಿ ಹೊರಗೆ ತಂದಿಟ್ಟದ್ದರಿಂದ, ಶ್ರೀ ಭಾಗೀರಥಿ ಅಭಿಷೇಕ ನೋಡುವ ಭಾಗ್ಯ ಎಲ್ಲ ಪುರುಷರು, ಮಹಿಳೆಯರು ಮತ್ತು ಮಕ್ಕಳಿಗೆ ದೊರೆಯಿತು. ಬೆಳಗ್ಗಿನಿಂದ ಸಂಜೆಯವರೆಗೆ ಅಭಿಷೇಕ ನಡೆದು ದೇವರಿಗೆ ಪೂಜೆಯಾದ ಬಳಿಕ ಶ್ರೀ ಸ್ವಾಮೀಜಿಯವರ ಭಿಕ್ಷಾ ಸೇವೆಯಾಗಿ ಅನಂತರ ಸಮಾರಾಧನೆ ನಡೆಯಿತು.

ಜ್ಞಾನಸತ್ರದ ಮೂರು ದಿನಗಳ ಕಾಲ ಮಹಿಳಾ ಗೋಷ್ಠಿ, ಯುವಗೋಷ್ಠಿ ಮತ್ತು ಪ್ರೌಢ ಗೋಷ್ಠಿಗಳು ಮತ್ತು ಸಮಾರೋಪ ಸಮಾರಂಭ ನಡೆಯುಲಿತ್ತು. ಮುಖ್ಯ ಅತಿಥಿಯಾಗಿ ಮುಂಬೈಯಿಂದ ಫೊರಮ್ ಆಫ್ ಫ್ರೀ ಎಂಟರ್‌ಪ್ರೈಸಸ್‌ನ ಕಾರ್ಯದರ್ಶಿ ಶ್ರೀ ಎಮ್. ಆರ್. ಪೈ ಬಂದಿದ್ದರು.

ಜ್ಞಾನ ಸತ್ರದ ಸಮಾರೋಪ ಸಮಾರಂಭದಲ್ಲಿ ನಾವು ವ್ಯವಸ್ಥಾಪಕ ಸಮಿತಿಯವರು ಸಮಾಜ ಬಾಂಧವರ ವತಿಯಿಂದ ಶ್ರೀ ಗುರುವರ್ಯರು ಹರಿದ್ವಾರದಲ್ಲಿ ಸ್ಥಾಪನೆ ಮಾಡಲಿದ್ದ ಶ್ರೀ ವೇದವ್ಯಾಸ ಮಂದಿರದ ನಿರ್ಮಾಣ ಕಾರ್ಯಯೋಜನೆಗಾಗಿ ರೂ ೧೩೧೦೦೦ ಮೊತ್ತವನ್ನು ಮೊದಲ ಕಾಣಿಕೆಯಾಗಿ ನೀಡಿದೆವು. ಇದರ ನಂತರ ಶ್ರೀ ಗುರುವರ್ಯರು ಹರಿದ್ವಾರದ ಗಂಗಾತೀರದಲ್ಲಿ ಏಳು ಎಕರೆ ವಿಶಾಲ ಜಾಗವನ್ನು ಕ್ರಯಕ್ಕೆ ಪಡೆದು ಅಲ್ಲಿ ಭವ್ಯ ಭವನದ ನಿರ್ಮಾಣವಾಯಿತು. ಈ ಯೋಜನೆಗೆ ಮೂಲ ಬೀಜ ಬಿದ್ದದ್ದು ಬಂಟವಾಳದಲ್ಲಿ ಎನ್ನುವ ಅಭಿಮಾನ ನನಗೆ ಇದೆ.

೨೬ ನವೆಂಬರ್, ೧೯೭೭ರ ಶನಿವಾರ ಶ್ರೀ ತಿರುಮಲ ವೆಂಕಟರಮಣಸ್ವಾಮಿಗೆ ಶ್ರೀ ಮಹಾವಿಷ್ಣು ಹವನ ಮತ್ತು ಅಭಿಷೇಕ ಪ್ರಾರಂಭವಾಯಿತು. ಆ ದಿನ ಬೆಳಗ್ಗೆಯಿಂದಲೇ ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ಮಳೆ ಬಂದು ಸಮಾರಾಧನೆಗೆ ಅಡ್ಡಿಯಾದರೂ, ಜನ ಸಾವಿರದ ಸಂಖ್ಯೆಯಲ್ಲಿ ಬಂದಿದ್ದರು.

ಶ್ರೀ ಸ್ವಾಮೀಜಿಯುವರ ಚಾತುರ್ಮಾಸ ವ್ರತದ ಸಮಾರೋಪವಾಗಿ ರಾತ್ರಿ ದಿಗ್ವಿಜಯ ಕಾರ್ಯಕ್ರಮ ಇತ್ತು. ಈ ಕಾರ್ಯಕ್ರಮಕ್ಕಾಗಿ ಜನರು ಊರು ಪರವೂರುಗಳಿಂದ ಬಂದಿದ್ದರು. ಶಿವಮೊಗ್ಗದ ಅಲಂಕಾರ ತಜ್ಞ ಶ್ರೀ ಕಾರ್ಕಳ ನರಸಿಂಹ ಪೈಯವರು ಬಂಟವಾಳಕ್ಕೆ ಬಂದು ದಿಗ್ವಿಜಯ ರಥದ ಶೃಂಗಾರವನ್ನು ಮಾಡಿದ್ದರು. ರಥದ ಮುಂದೆ ಮರದ ಕುದುರೆಗಳನ್ನು ಕಟ್ಟಿ, ಮೇಲೆ ಹನುಮಂತ, ಸಾರಥಿ ಶ್ರೀಕೃಷ್ಣ ಮತ್ತು ಅರ್ಜುನರ ಮರದ ಬೊಂಬೆಗಳನ್ನಿಟ್ಟು ತುಂಬಾ ಸುಂದರವಾಗಿ ಶೃಂಗಾರ ಮಾಡಲಾಗಿತ್ತು. ಶ್ರೀ ಸ್ವಾಮೀಜಿಯವರ ರಾತ್ರಿ ಪೂಜೆ ಮುಗಿಯುತ್ತಿದ್ದಂತೆ ಮಳೆ ನಿಂತಿತು. ದಿಗ್ವಿಜಯ ಸಮಾರಂಭ ಬಹಳ ಯಶಸ್ವಿಯಾಗಿ ಜರಗಿತು. ಶಿಷ್ಯವೃಂದಕ್ಕೆ ಬಹಳ ಸಂತೋಷವಾಗಿತ್ತು.

ನನ್ನ ದಿನಚರಿ ಬೆಳಗ್ಗಿನಿಂದ ರಾತ್ರಿಯವರೆಗೆ ಬರೀ ಓಡಾಟದಲ್ಲಿಯೇ ಕಳೆದು, ನನಗೆ ಬಿಡುವೆಂಬುದು ಇರುತ್ತಿರಲಿಲ್ಲ. ಬೆಳಗ್ಗೆ ಐದು ಗಂಟೆಗೆ ಪಾಣೆಮಂಗಳೂರು ಶ್ರೀ ದೇವದಾಸ ಶೆಣೈಯವರು ಬಾಲ ಮಾರುತಿ ವ್ಯಾಯಾಮ ಶಾಲೆಯ ಅಂಗಳದಲ್ಲಿ ಟೆನ್ನಿಸ್ ಆಟವಾಡಲು ಸ್ಕೂಟರ್ ಅಥವಾ ಕಾರಿನಲ್ಲಿ ಪ್ರತಿದಿನ ಮಂಗಳೂರಿಗೆ ಹೋಗುವುದಿತ್ತು. 'ಭೂತದ ಜೊತೆ ಬಾವನ' ಎನ್ನುವ ಹಾಗೆ ನಾನೂ ಅವರ ಜೊತೆ ಹೋಗಬೇಕಾಗಿ ಬರುತ್ತಿತ್ತು. ಅಲ್ಲಿ ಮಂಗಳೂರು ಬಂದರಿನ ದೊಡ್ಡ ದೊಡ್ಡ ಶ್ರೀಮಂತ ವ್ಯಾಪಾರಿಗಳು ಮತ್ತು ಕೈಗಾರಿಕೋದ್ಯಮಿಗಳು ಟೆನ್ನಿಸ್ ಆಡಲು ಬರುತ್ತಿದ್ದರು. ನಾನು ಟೆನ್ನಿಸ್ ಆಡುತ್ತಿರಲಿಲ್ಲ. ಆದರೂ ದೇವದಾಸ ಶೆಣೈ(ದತ್ತು ಶೆಣೈ) ಜೊತೆಯಲ್ಲಿ ಇರುತ್ತಿದ್ದುದರಿಂದ ನನಗೆ ಆ ದೊಡ್ಡ ದೊಡ್ಡ ಶ್ರೀಮಂತ ವ್ಯಕ್ತಿಗಳ ಪರಿಚಯವಾಯಿತು. ಇದರಿಂದ ನನ್ನ ಬ್ಯಾಂಕ್ ಠೇವಣಿ ಸಂಗ್ರಹ ಕಾರ್ಯ ಸುಲಭವಾಯಿತು. ನನ್ನ ಸಾರ್ವಜನಿಕ ಕ್ಷೇತ್ರದ ಕಾರ್ಯಗಳಿಂದಾಗಿ ಅವರೆಲ್ಲರಿಗೆ ನನ್ನ ಮೇಲೆ ಅಭಿಮಾನವಿತ್ತು. ಅವರು ಕರೆಕರೆದು ನನಗೆ ಠೇವಣಿ ನೀಡುತ್ತಿದ್ದರು. ಆ ದಿನಗಳಲ್ಲಿ ನನಗೆ ಶ್ರೀ ಉಳ್ಳಾಲ ರಮೇಶ ಮಲ್ಯ ಮತ್ತು ಭಾರತ ಬೀಡಿಯ ದಾಮೋದರ ಪೈಯವರು ತುಂಬಾ ಠೇವಣಿ ನೀಡಿದ್ದಾರೆ. ಶ್ರೀ ದತ್ತು ಶೆಣೈಯವರ ಸಹವಾಸದಿಂದ ನನ್ನ ಠೇವಣಿ ಸಂಗ್ರಹ ಕಾರ್ಯಕ್ಕೆ ತುಂಬಾ ನೆರವು ದೊರೆತಿದೆ.

ನಾನು ಬೆಳಗ್ಗೆ ಶ್ರೀ ದತ್ತು ಶೆಣೈ ಅವರ ಜೊತೆಯಲ್ಲಿ ಹೋಗಿ, ಅವರು ಟೆನ್ನಿಸ್ ಆಡುತ್ತಿದ್ದ ಸಮಯದಲ್ಲಿ ಬ್ಯಾಂಕ್ ಠೇವಣಿ ಬಗ್ಗೆ ಸ್ವಲ್ಪ ಪ್ರಚಾರ ಮತ್ತು ಶಾಲೆಯ ವ್ಯವಸ್ಥಾಪಕನಾಗಿ ಅಧಿಕಾರಿಗಳನ್ನು ಭೇಟಿಯಾಗುವುದು ಅಥವಾ ದೇವಸ್ಥಾನದ ಮತ್ತು ರೋಟರಿ ಕ್ಲಬ್‌ನ ಕೆಲಸಕ್ಕಾಗಿ ಜನರನ್ನು ಭೇಟಿಯಾಗುತ್ತಿದ್ದೆ. ಆಮೇಲೆ ಗಂಟೆ ಹತ್ತರೊಳಗೆ ಬ್ಯಾಂಕ್ ಕೆಲಸಕ್ಕೆ ಹಾಜರಿರುತ್ತಿದ್ದೆ. ಮಧ್ಯಾಹ್ನ ಬ್ಯಾಂಕ್ ಡ್ಯೂಟಿ ಮುಗಿಸಿ ಮತ್ತೆ ಮಂಗಳೂರಿಗೆ ಹೋದದ್ದೂ ಇದೆ. ರಾತ್ರಿ ೮-೯ ಗಂಟೆಗೆ ಮನೆಗೆ ಹಿಂತಿರುವುದು. ಊರಿನಲ್ಲಿ ಇದ್ದಷ್ಟು ಸಮಯ ಶಾಲೆಯ ಬಳಿ ಹೋಗುವುದು, ಕಟ್ಟಡ ನಿರ್ಮಾಣ ಕಾರ್ಯದ ಪ್ರಗತಿಯನ್ನು ಗಮನಿಸುವುದು ಅಥವಾ ಶಾಲೆಯ ಕೆಲಸವನ್ನು ಮಾಡಿ ನಂತರ ವ್ಯಾಯಾಮ ಶಾಲೆಯ ಅಧ್ಯಕ್ಷನಾಗಿ ಅಲ್ಲಿಯೂ ಹೋಗುವುದು ಮತ್ತು ದೇವಸ್ಥಾನದ, ಕಾಲೇಜಿನ ಕೆಲಸಗಳನ್ನು ಮಾಡುವುದು ಮತ್ತು ನಮ್ಮ ಬ್ಯಾಂಕಿನ ಗ್ರಾಹಕರನ್ನು ಮತ್ತು ಪೇಟೆಯ ವ್ಯಾಪಾರಿಗಳನ್ನು ಠೇವಣಿಗಾಗಿ ಭೇಟಿಯಾಗುವುದು ಇತ್ತು. ಇದಲ್ಲದೆ ನೆಂಟಸ್ತಿಕೆ ಮತ್ತು ಇತರ ಸಾಮಾಜಿಕ ಕಾರ್ಯಕ್ರಮಗಳಲ್ಲಿ ದಿನವಿಡೀ ಮಗ್ನನಾಗಿ ನಾನು ತುಂಬಾ ಕೆಲಸ ಮಾಡಬೇಕಾಗುತ್ತಿತ್ತು.

ಆ ಕಾಲದಲ್ಲಿ ನನಗೆ ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ಯೋಗದಲ್ಲಿದ್ದ ಅನಿವಾಸಿ ಭಾರತೀಯರ, ಅದರಲ್ಲಿಯೂ ಮೂಲತಃ ಬಂಟವಾಳ ಪರಿಸರದವರಾಗಿದ್ದವರ ಉಳಿತಾಯ ಖಾತೆಗಳು ದೊರೆತಿದ್ದವು. ಇದರಲ್ಲಿ ಹೆಚ್ಚಿನವರು ನಮ್ಮ ಕೊಂಕಣಿ ಕ್ರೈಸ್ತರು. ಅವರಿಗೆ ನಾನು ಕೊಂಕಣಿ ಭಾಷೆಯಲ್ಲಿಯೇ ಪತ್ರ ಬರೆದು ಅವರ ಸುಖ ದುಃಖಗಳನ್ನು ವಿಚಾರಿಸುವುದಿತ್ತು. ಹೀಗಾಗಿ ಅವರು ಊರಿಗೆ ಬಂದಾಗ ಒಂದೆರಡು ಬಾರಿ ಸುತ್ತಮುತ್ತಲಿನ ಹಳ್ಳಿಗಳಲ್ಲಿದ್ದ ಅವರ ಮನೆಗಳಿಗೂ ಹೋಗಿ ಠೇವಣಿ ಮೊತ್ತವನ್ನು ತರುವ ಸಂದರ್ಭ ನನಗೆ ಒದಗಿಬರುತಿತ್ತು. ನಾನು ಕೊಂಕಣಿಯಲ್ಲಿ ಪತ್ರ ಬರೆಯುವುದು ಅವರಿಗೆ ಸಂತೋಷವನ್ನು ಉಂಟುಮಾಡುತ್ತದೆ ಎಂದು ಆ ಠೇವಣಿದಾರರು ಹೇಳುವುದಿತ್ತು.

೧೯೭೪ರಿಂದ ೧೯೭೮ರವರೆಗಿನ ನನ್ನ ದಿನಚರಿಯನ್ನು ಈಗ ಸ್ಮರಿಸಿಕೊಂಡಾಗ, ನಾನು ದಿನದ ಒಂದು ಗಳಿಗೆಯೂ ಸುಮ್ಮನೆ ಕುಳಿತದ್ದು ಇಲ್ಲವೆಂಬುದು ಗೋಚರವಾಗುತ್ತದೆ. ಬೆಳಗ್ಗೆ ೫ ಗಂಟೆಯಿಂದ ರಾತ್ರಿ ೯-೧೦ ಗಂಟೆಯವರೆಗೆ ಕೆಲಸದ ನಿಮಿತ್ತವಾಗಿ ಇಲ್ಲಿ ಅಲ್ಲಿ ಓಡಾಡಿಕೊಂಡು ಇದ್ದುದು ಕಂಡುಬರುತ್ತದೆ.

ನನಗೆ ೧೯೭೮ರ ಜೂನ್ ತಿಂಗಳಲ್ಲಿ ಬಂಟವಾಳ ಶಾಖೆಯಿಂದ ಶಿವಮೊಗ್ಗದ ಮುಖ್ಯ ಶಾಖೆಗೆ (ಗಾಂಧಿಬಜಾರ ಶಾಖೆ) ವರ್ಗಾವಣೆಯಾಯಿತು. ಆ ಶಾಖೆಯಲ್ಲಿ ಕಳೆದ ೨-೩ ವರ್ಷಗಳಿಂದ ಠೇವಣಿ ಸಂಗ್ರಹಕಾರ್ಯದಲ್ಲಿ ಮತ್ತು ಇತರ ವ್ಯವಹಾರಗಳಲ್ಲಿ ಪ್ರಗತಿ ಇರಲಿಲ್ಲ. ಹೀಗಾಗಿ ಆ ಶಾಖೆಯ ವ್ಯವಹಾರವನ್ನು ವೃದ್ಧಿಗೊಳಿಸುವ ಸಲುವಾಗಿ ನನಗೆ ಅಲ್ಲಿ ವರ್ಗ ಮಾಡಲಾಗಿದೆ ಎಂದು ತಿಳಿದು ಬಂತು. ಅದು ನನಗೆ ಒಳ್ಳೆಯದೇ ಆಯಿತು. ಆದರೆ, ನನಗೆ ಶಿವಮೊಗ್ಗೆಗೆ ವರ್ಗವಾಗಿರುವುದನ್ನು ಕೇಳಿ ಬಂಟವಾಳದ ಹಿರಿಯರಿಗೆ ಮತ್ತು ತರುಣರಿಗೆ ತುಂಬಾ ಬೇಸರವಾಯಿತು. ಅವರು ಸಿಂಡಿಕೇಟ್ ಬ್ಯಾಂಕ್ ಚೇರಮನ ಶ್ರೀ ಕೆ.ಕೆ.ಪೈ ಅವರಲ್ಲಿಗೆ ಹೋಗಿ ನನಗೆ ಇನ್ನೂ ಒಂದು ವರ್ಷಕ್ಕಾದರೂ ಬಂಟವಾಳದಲ್ಲಿ ಇರುವಂತೆ ಮಾಡಬೇಕೆಂದು ಹೇಳಿದರು. ಆದರೆ ನನ್ನ ಭವಿಷ್ಯ ಮತ್ತು ಶಿವಮೊಗ್ಗ ಶಾಖೆಯ ಪ್ರಗತಿಯ ದೃಷ್ಟಿಯಿಂದ ನನಗೆ ವರ್ಗ ನೀಡಲಾಗಿದೆ ಎಂದು ಶ್ರೀ ಪೈಯವರು ಅವರಿಗೆ ತಿಳಿಸಿದರಂತೆ.

ನನಗೆ ೧೯೭೭, ಜೂನ್ ೧೧ರಂದು ಸಂಜೆ ಬಂಟವಾಳ ತಾಲೂಕಿನ ಮುಖಂಡರು ಜೋಡುಮಾರ್ಗದಲ್ಲಿ ಬೀಳ್ಕೊಡುವ ಸಮಾರಂಭವನ್ನು ಆಯೋಜಿಸಿದರು. ಆ ಸಮಾರಂಭದಲ್ಲಿ ಶ್ರೀ ಬಿ.ಎ. ಮೊಹಿಯುದ್ದಿನ್ ಎಂ.ಎಲ್.ಎ.(ಬಂಟವಾಳ), ಶ್ರೀ ಬಿ.ವಿ. ಕಕ್ಕಿಲಾಯ ಎಂ.ಎಲ್.ಎ.(ವಿಟ್ಲ), ಏರ್ಯ ಲಕ್ಷ್ಮೀನಾರಾಯಣ ಆಳ್ವ, ಬರಂಗೆರೆ ಸದಾನಂದ ಪೂಂಜಾ ಮತ್ತು ನನ್ನ ಅಭಿಮಾನಿಗಳು ನನ್ನ ವಿವಿಧ ಸೇವೆಗಳನ್ನು ಮುಕ್ತಕಂಠದಿಂದ ಹೊಗಳಿದರು. ನಾನು ರೋಟರಿ ಕ್ಲಬ್‌ವತಿಯಿಂದ ನಡೆಸಿದ ಉಚಿತ ಕಣ್ಣಿನ ಶಿಬಿರಗಳು, ಉಚಿತ ದಂತ ಶಿಬಿರಗಳು, ೧೯೭೪ನೇ ಇಸವಿಯಲ್ಲಿ ಊರಿಗೆ ಪ್ರವಾಹ ಬಂದಾಗ ಶೀಘ್ರಗತಿಯಿಂದ ನಿರಾಶ್ರಿತರಿಗೆ ನೀಡಿದ ಸಹಾಯ ಮತ್ತು ಸೇವೆ, ಜೋಡುಮಾರ್ಗದ ಹಳೆಯ ಶಾಲೆಗೆ ಹೊಸ ಕಟ್ಟಡವನ್ನು ಕಟ್ಟಿಸಿದ್ದು, ಅದಲ್ಲದೆ ಬಡವರಿಗೆ, ಸಣ್ಣ ಸಣ್ಣ ವ್ಯಾಪಾರಿಗಳಿಗೆ ಸಾಲ ನೀಡಿ ಆರ್ಥಿಕವಾಗಿ ಪ್ರಗತಿ ಸಾಧಿಸಲು ಸಹಾಯ ನೀಡಿದ ಕಾರ್ಯಗಳು ಅವರ ಪ್ರಶಂಸೆಗೆ ಪಾತ್ರವಾಗಿದ್ದವು.

ಅದೇ ದಿನ ರಾತ್ರಿ ೭ ಗಂಟೆಗೆ ಬಂಟವಾಳ ಪೇಟೆಯ ಸಾರ್ವಜನಿಕರು ಶ್ರೀ ಬಿ. ದಾಮೋದರ ಪ್ರಭು, ಬಿ. ವಾಮನ ಅಣ್ಣಪ್ಪ ಬಾಳಿಗ ಮೊದಲಾದ ಮುಖಂಡರೊಂದಿಗೆ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಸ್ಥಾನದಲ್ಲಿ ಸೇರಿ, ನಾನು ಮಾಡಿದ ದೇವರ, ಶ್ರೀ ಸ್ವಾಮೀಜಿಯವರ ಸೇವೆಯ ಪ್ರಶಂಸೆಯನ್ನು ಮಾಡಿ, ಶಿವಮೊಗ್ಗದ ನನ್ನ ಭವಿಷ್ಯದ ವೃತ್ತಿಜೀವನದಲ್ಲಿ ನನಗೆ ಉತ್ತರೋತ್ತರ ಅಭಿವೃದ್ಧಿಯನ್ನು ಕೊಡಬೇಕು ಎಂಬುದಾಗಿ ಶ್ರೀ ದೇವರಲ್ಲಿ ಬೇಡಿ, ಪ್ರಸಾದ ಕೊಡಿಸಿದರು. ಆ ಸಮಯದಲ್ಲಿ ನನ್ನ ಅಭಿಮಾನಿ ಆಲ್ ಇಂಡಿಯಾ ಇಲೆಕ್ಟ್ರಾನಿಕ್ ಅಸೋಸಿಯೇಶನ್‌ನ ಅಧ್ಯಕ್ಷರಾದ ಪಾಣೆಮಂಗಳೂರು ಆಪ್‌ರಾಯ ಭಟ್ ಅವರು ಈ ಸಮಾರಂಭದಲ್ಲಿ ಭಾಗಿಯಾಗಲು ಸ್ವತಃ ದೇವಸ್ಥಾನಕ್ಕೆ ಬಂದಿದ್ದರು. ಆಮೇಲೆ ನನ್ನನ್ನು ಶ್ರೀ ದೇವಸ್ಥಾನದಿಂದ ಮೆರವಣಿಗೆಯಲ್ಲಿ ಬಂಟ್ವಾಳ ಪ್ರಾಥಮಿಕ ಶಾಲಾಭವನಕ್ಕೆ ಕರೆಯೊಯ್ಯಲಾಯಿತು. ಅಲ್ಲಿ ಬಂಟವಾಳ ಪೇಟೆಯ ವತಿಯಿಂದ ನನಗೆ ಮತ್ತು ನನ್ನ ಪತ್ನಿ ಸಾವಿತ್ರಿಗೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿತ್ತು.

ಈ ಸಮಾರಂಭದಲ್ಲಿ ಶ್ರೀ ಬಂಟವಾಳ ವಾಮನ ಬಾಳಿಗ, ಶ್ರೀ ಬಿ. ದಾಮೋದರ ಪ್ರಭು, ಶ್ರೀ ಬಿ. ಶ್ರೀನಿವಾಸ ನಾಯಕ ಮತ್ತು ಇತರ ಗಣ್ಯವ್ಯಕ್ತಿಗಳು ನಾನು ಶ್ರೀ ದೇವರ, ಶ್ರೀ ಸ್ವಾಮೀಜಿಯವರ ಸೇವೆಗಳನ್ನು ನಡೆಸಿದ್ದನ್ನು ನೆನಪಿಸಿಕೊಂಡರು. ಅಲ್ಲದೆ ನಾನು ಶ್ರೀ ತಿರುಮಲ ವೆಂಕಟರಮಣಸ್ವಾಮಿ ಸೇವಾ ಸಮಿತಿಯ ಕಾರ್ಯದರ್ಶಿಯಾಗಿ, ಶ್ರೀ ಯಶವಂತ ವ್ಯಾಯಾಮ ಶಾಲೆಯ ಅಧ್ಯಕ್ಷನಾಗಿ, ದೇವಸ್ಥಾನದ ಶಾಲೆಯ ವ್ಯವಸ್ಥಾಪಕನಾಗಿ ನಡೆಸಿದ ಕಾರ್ಯಗಳನ್ನು, ಶ್ರೀ ಸುಕೃತೀಂದ್ರ ವಿದ್ಯಾಸದನದ ನಿರ್ಮಾಣ ಕಾರ್ಯವನ್ನು ಒಂಭತ್ತು ತಿಂಗಳೊಳಗೆ ಮುಗಿಸಿದ್ದನ್ನು, ಪೇಟೆಯ ಸಣ್ಣ ವ್ಯಾಪಾರಿಗಳಿಗೆ, ಸಮಯಕ್ಕೆ ನೆರವು ನೀಡಿದ್ದನ್ನು ತುಂಬಾ ಪ್ರಶಂಸಿದರು. ಈ ಸಮಾರಂಭದಲ್ಲಿ ಶ್ರೀ ಪಿ.ಎ.ಭಟ್ಟರು ಶಾಲೆಯ ಹೊಸ ನಿರ್ಮಾಣಕಾರ್ಯದ ಒಂದು ಕೋಣೆಯನ್ನು ಕಟ್ಟಿಸುವುದಕ್ಕಾಗಿ ಅವರ ಹೆಸರಿನಲ್ಲಿ ದೇಣಿಗೆಯಾಗಿ ಹತ್ತುಸಾವಿರದ ಚೆಕ್‌ನ್ನು ನೀಡಿದರು.

ಶ್ರೀ ಯಶವಂತ ವ್ಯಾಯಾಮ ಶಾಲೆ

ಶ್ರೀ ಯಶವಂತ ವ್ಯಾಯಾಮ ಶಾಲೆಯು ೧೯೪೦ರಲ್ಲಿ ಸ್ಥಾಪನೆಯಾಗಿ ಸುಮಾರು ೧೯೬೫ರವರೆಗೆ ಬಂಟವಾಳ ಮತ್ತು ಸುತ್ತಮುತ್ತಲಿನ ಪ್ರದೇಶದ ತರುಣರಿಗೆ ದೈಹಿಕ ಶಿಕ್ಷಣ ತರಬೇತಿ ನೀಡುತ್ತಾ ಮದ್ರಾಸು, ಕೊಚ್ಚಿ, ಮೈಸೂರು, ಮಡಿಕೇರಿ ಮತ್ತು ದಕ್ಷಿಣ ಕನ್ನಡಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ವ್ಯಾಯಾಮ ಪ್ರದರ್ಶನ ನೀಡುತ್ತಾ ಪ್ರಸಿದ್ಧವಾಗಿತ್ತು. ಇದರ ವಿವರಗಳನ್ನು ನಾನು ಹಿಂದಿನ ಅಧ್ಯಾಯದಲ್ಲಿ ನೀಡಿದ್ದೇನೆ. ಆದರೆ ೧೯೬೫ರ ನಂತರ ವ್ಯಾಯಾಮ ಶಾಲೆಯಲ್ಲಿ ಯಾವುದೇ ಕ್ರಿಯಾಶೀಲತೆ ಇಲ್ಲದೆ ಅದು ನಿಸ್ತೇಜವಾಗಿತ್ತು. ಸರಿಯಾಗಿ ದೈಹಿಕ ಶಿಕ್ಷಣ ನೀಡುವ ವ್ಯವಸ್ಥೆಯು ಇರಲಿಲ್ಲ. ಅಲ್ಲದೆ ಆಟವಾಡುವ ವಿದ್ಯಾರ್ಥಿಗಳಾಗಲೀ ಅಥವಾ ತರುಣರಾಗಲೀ ಕ್ರಮಬದ್ಧವಾಗಿ ವ್ಯಾಯಾಮ ಶಾಲೆಗೆ ಬಂದು ವ್ಯಾಯಾಮ ಮಾಡುತ್ತಿರಲಿಲ್ಲ. ನಾನು ರಾಯಭಾಗದಿಂದ ವರ್ಗವಾಗಿ ಪಾಣೆಮಂಗಳೂರು ಶಾಖೆಗೆ ಬಂದ ಬಳಿಕ ವ್ಯಾಯಾಮ ಶಾಲೆಯ ದುಃಸ್ಥಿತಿಯನ್ನು ನೋಡಿ ಬಂಟವಾಳ ಪೇಟೆಯ ಶ್ರೀ ಬಿ.ಹೆಚ್. ತ್ರಿವಿಕ್ರಮ ಪೈ, ಬಂಟ್ವಾಳ ಶ್ರೀನಿವಾಸ ನಾಯಕ, ವಾಸುದೇವ ಭಟ್, ಪಿ. ಪದ್ಮನಾಭ ಭಂಡಾರಕರ, ಬಡ್ತೋಡಿ ಶ್ರೀನಿವಾಸ ಶೆಣೈ ಮತ್ತು ಇತರ ಹಿರಿಯ ಸದಸ್ಯರನ್ನು ಭೇಟಿಯಾಗಿ ಸಭೆಯನ್ನು ಕರೆದು ಕ್ರಮಬದ್ಧವಾಗಿ ವ್ಯಾಯಾಮ ತರಬೇತಿಗಳ ಪ್ರಾರಂಭ, ಶಿಸ್ತು ಕಲಿಸುವಿಕೆ ಇತ್ಯಾದಿ ಕ್ರಮಗಳನ್ನು ವ್ಯವಸ್ಥಿತಗೊಳಿಸಿದೆ. ಅದೇ ರೀತಿ ಶ್ರೀ ಪಿ. ನಾರಾಯಣ ಕಾಮತ, ಮಾಣೂರ ಲಕ್ಷ್ಮಣ ಕಾಮತ, ನಾಗೇಂದ್ರ ಬಾಳಿಗ ಮೊದಲಾದ ತರುಣರನ್ನು ಜೊತೆಗೂಡಿಸಿಕೊಂಡು ವ್ಯಾಯಾಮ ಶಾಲೆಯಲ್ಲಿ

ಕ್ರಿಯಾಶೀಲತೆಯನ್ನು ತಂದೆ. ಇದರಿಂದಾಗಿ ಶ್ರೀ ಯಶವಂತ ವ್ಯಾಯಾಮ ಶಾಲೆಗೆ ಪೂರ್ವಕಾಲದ ವೈಭವ ಮತ್ತು ಪ್ರಸಿದ್ಧಿ ಮತ್ತೆ ಬಂತು. ಇದು ಬಹಳ ವರ್ಷಗಳವರೆಗೆ ಮುಂದುವರಿಯಿತು. ಈಗ ಮತ್ತೆ ಅದು ಪಾಳು ಬಿದ್ದಂತೆ ತೋರುತ್ತದೆ. ಆ ವೈಭವದ ಮತ್ತು ಕಾರ್ಯಶೀಲತೆಯ ದಿನಗಳು ಮತ್ತೆ ಬರುವ ಸೂಚನೆ ಗೋಚರಿಸುವುದಿಲ್ಲ.

ಸಾರ್ವಜನಿಕ ಮಾನ್ಯತೆಗಳು

ಈ ಎಲ್ಲ ವೃತ್ತಾಂತಗಳನ್ನು ಇಲ್ಲಿ ತಿಳಿಸುವ ಕಾರಣವೇನೆಂದರೆ, ನನ್ನಲ್ಲಿರುವ ಸಂಘಟನಾತ್ಮಕ ಗುಣ ಮತ್ತು ಕರ್ತೃತ್ವಶಾಲಿತ್ವ ಅಭಿವ್ಯಕ್ತಗೊಳ್ಳಲು ನನ್ನ ಊರಿನಲ್ಲಿ ಅಥವಾ ಪರಿಸರದಲ್ಲಿ ನಡೆದ ಘಟನೆಗಳು ಕಾರಣವಾಗಿವೆ ಮತ್ತು ಈ ಅವಕಾಶಗಳನ್ನು ನಾನು ನಂಬಿಕೊಂಡು ಬಂದಿರುವ ಶ್ರೀ ತಿರುಮಲ ವೆಂಕಟರಮಣಸ್ವಾಮಿಯು ನನಗೆ ನೀಡಿರುವುದೆಂದು ಹೇಳಬೇಕಾಗಿತ್ತು. ಇದರ ಹಿಂದೆ ದೈವಾಧೀನರಾದ ಬಸ್ತಿ ಮಾಧವ ಶೆಣ್ಯೆಯವರ ಮಗ ನಾನು ಎಂಬುದನ್ನು ಗಮನದಲ್ಲಿ ಇಡುವ ಅಗತ್ಯವಿದೆ. ಇದಕ್ಕೆ ಸರಿಯಾಗಿ ಶ್ರೀ ಟಿ.ಎ.ಪೈಯವರು ನನಗೆ ನೀಡಿದ ಬೆಂಬಲವೂ ಒತ್ತಾಸೆಯಾಗಿ ನಿಂತಿದೆ.

ಈ ಎಲ್ಲ ಕಾರಣಗಳಿಂದ ಪಾಣೆಮಂಗಳೂರು, ಬಂಟವಾಳ ಮಾತ್ರವಲ್ಲ ದ.ಕ. ಜಿಲ್ಲೆ ಅಥವಾ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ನನ್ನ ಹೆಸರು ಮತ್ತು ಕಾರ್ಯದ ಪ್ರಸಿದ್ಧಿ ಹರಡಿತು. ಬಂಟವಾಳದ ಶ್ರೀ ವೆಂಕಟರಮಣ ಕಾಲೇಜು ಮತ್ತು ಎಸ್.ವಿ.ಎಸ್. ಪ್ರೌಢಶಾಲೆಯ ಆಡಳಿತ ಮಂಡಳಿ, ಬಂಟವಾಳ ರೋಟರಿ ಕ್ಲಬ್, ಜಿ.ಎಸ್.ಬಿ. ಸೇವಾ ಸಮಿತಿ ಇತ್ಯಾದಿಗಳಲ್ಲಿ ನಾನು ಮುಖಂಡನಾಗಿ ಕೆಲಸ ಮಾಡಿ ಸ್ಥಾನಮಾನಗಳನ್ನು ಗಳಿಸಿದ್ದೆ.

ಸ್ಯಾಂಡೊ ಪುತ್ರನ್

ನಾವು ಸಣ್ಣವರಿರುವಾಗ ಪ್ರೊ. ಬಿ.ಎಲ್. ಪುತ್ರನ್ 'ಸ್ಯಾಂಡೊ' ಎಂದು ಪ್ರಸಿದ್ಧರಾಗಿದ್ದವರು. ಅವರು ಅಂಗಾತ ಮಲಗಿ ಎದೆಯ ಮೇಲೆ ಕಾರನ್ನು ಹಾಯಿಸುವುದು, ತನ್ನ ದೇಹಕ್ಕೆ ಸರಪಳಿಯಿಂದ ಲಾರಿಯನ್ನು ಕಟ್ಟಿ ಅದನ್ನು ಎಳೆಯುವುದು, ವೈಯ ಮಾಂಸಖಂಡಗಳನ್ನು ಪ್ರದರ್ಶಿಸುವುದು ಮುಂತಾದುವುಗಳನ್ನು ಮಾಡುತ್ತಿದ್ದರು. ಮಂಗಳೂರು, ಬಂಟವಾಳ ಮತ್ತು ಪಾಣೆಮಂಗಳೂರಿನ ಪರಿಸರದ ಏಳೆಂಟು ಹಳ್ಳಿಗಳಲ್ಲಿ ಅವರು ವ್ಯಾಯಾಮ ಶಾಲೆಗಳನ್ನು ಪ್ರಾರಂಭಿಸಿ ಯುವಕರಿಗೆ ಮಲ್ಲಯುದ್ಧ, ಕತ್ತಿ(ತಲವಾರ) ವರಸೆ, ತಾಲೀಮು, ಬೆಂಕಿ ಆಟ, ಲಾಠಿ ಬೀಸುವುದು ಇತ್ಯಾದಿಗಳನ್ನು ಕಲಿಸುತ್ತಿದ್ದರು. ಆದರೆ ವಯಸ್ಸಾದ ಬಳಿಕ ಅವರಿಗೆ ಶರೀರದ ಬಲ ಕಡಿಮೆಯಾಗಿ, ಪಕ್ಷವಾತ ಬಡಿದು ನಡೆಯುವುದೇ ಕಷ್ಟವಾಯಿತು. ಅವರ ಶಿಷ್ಯವೃಂದದ ಕೆಲವರು ಮಾರಣಬಯಲು ಶ್ರೀ ಬಾಬು ಪೂಜಾರಿಯವರನ್ನು ಜೊತೆಯಾಗಿಸಿಕೊಂಡು ನನ್ನ ಬಳಿ ಬಂದು, ಪ್ರೊ. ಪುತ್ರನರಿಗೆ ನಾವು ಹಣಸಂಗ್ರಹ ಮಾಡಿಕೊಡಬೇಕೆಂದು ತಿಳಿಸಿದರು. ನಾನು ಅದಕ್ಕೆ ಒಪ್ಪಿಗೆ ತಿಳಿಸಿ, ನಮ್ಮ ಸಮಾಜದ ಮಹನೀಯರಾದ ಶ್ರೀ ಬಿ. ಶ್ರೀನಿವಾಸ ನಾಯಕ, ಎನ್. ಕೇಶವ ಕುಡ್ವ, ಪದ್ಮನಾಭ ಭಂಡಾರಕರ್ ಮೊದಲಾದವರನ್ನು ಜೊತೆಗೂಡಿಸಿಕೊಂಡು ೧೯೭೬, ಏಪ್ರಿಲ್ ೧೮ ರಂದು ಜೋಡುಮಾರ್ಗದಲ್ಲಿ ದೊಡ್ಡ ಸಮಾರಂಭವೊಂದನ್ನು ಆಯೋಜಿಸಿ ಪ್ರೊ. ಪುತ್ರನ್‌ರಿಗೆ ಐದು ಸಾವಿರ ರೂಪಾಯಿಗಳ ನಿಧಿಯನ್ನು ಸಮರ್ಪಿಸಿದೆ.

ಶಿವಮೊಗ್ಗ ಶಾಖೆ (೧೯೭೮-೧೯೮೨)

ಶಿವಮೊಗ್ಗದ ಮುಖ್ಯಶಾಖೆಯಾಗಿರುವ ಗಾಂಧೀಬಜಾರ್ ಶಾಖೆಯು ಶಿವಮೊಗ್ಗದಲ್ಲಿ ಸಿಂಡಿಕೇಟ್ ಬ್ಯಾಂಕ್ ಸ್ಥಾಪಿಸಿದ ಮೊದಲ ಶಾಖೆಯಾಗಿದೆ. ಇದು ಉನ್ನತ ವ್ಯವಹಾರವಿದ್ದ ಶಾಖೆ. ಇಲ್ಲಿಯ ಸಿಬ್ಬಂದಿಗಳ ಸಂಖ್ಯೆ ೭೫. ವ್ಯವಹಾರ ದೊಡ್ಡ ಪ್ರಮಾಣದ್ದಾಗಿದ್ದರಿಂದ ಇಬ್ಬರು ಸಬ್- ಮೆನೇಜರಗಳು, ೮-೧೦ ಅಸಿಸ್ಟೆಂಟ್ ಮೆನೇಜರಗಳು, ಸೂಪರವೈಸರ್, ಕ್ಲರ್ಕ್‌ಗಳು ಮತ್ತು ಅಟೆಂಡರ್‌ಗಳು ಇದ್ದರು. ಡೆಪೊಸಿಟರಗಳು. ಖಾತೆಗಳು, ಸಾಲ, ಮುಂಗಡಗಳು(ಅಡ್ವಾನ್ಸಸ್) ಬಹಳವಿದ್ದರೂ, ಹಿಂದಿನ ಕೆಲವು ವರ್ಷಗಳಿಂದ ಠೇವಣಿಯಲ್ಲಿ ಮತ್ತು ಇತರ ಖಾತೆಗಳಲ್ಲಿ ಯಾವುದೇ ಪ್ರಗತಿ ಅಥವಾ ಬೆಳವಣಿಗೆ ಇರಲಿಲ್ಲ. ಈ ಕಾರಣಕ್ಕಾಗಿ ನನ್ನನ್ನು ಅಲ್ಲಿಗೆ ಮೆನೇಜರ್ ಆಗಿ ನೇಮಕಾತಿ ಮಾಡಲಾಗಿದೆ ಎಂದು ಬ್ಯಾಂಕಿನ ಆಗಿನ ಜನರಲ್ ಮೆನೇಜರ್ ಜಿ.ಎ. ರೇಗೋ ನನ್ನ ಬಳಿ ಹೇಳಿದ್ದರು.

ನಾನು ಬಂಟವಾಳದಿಂದ ಹೊರಟು ಶಿವಮೊಗ್ಗ ತಲುಪಿದ ದಿನದಿಂದಲೇ ನನ್ನ ಪರಿಚಯಸ್ಥರನ್ನು ಭೇಟಿಯಾಗಲು ಪ್ರಾರಂಭಿಸಿದೆ. ಅವರು ಶಿವಮೊಗ್ಗ ಶಾಖೆಯ ವ್ಯವಸ್ಥೆ ಚೆನ್ನಾಗಿಲ್ಲವೆಂದು ತಿಳಿಸಿದರು. ನನ್ನನ್ನು ಮತ್ತು ನನ್ನ ಕುಟುಂಬವನ್ನು ಶಿವಮೊಗ್ಗಕ್ಕೆ ತಂದುಬಿಡಲು ಶ್ರೀ ವೇದವ್ಯಾಸ ಪ್ರಭು ಮತ್ತು ಶ್ರೀ ಪಿ. ದೇವದಾಸ ಶೆಣ್ಯೆಯವರು ತಮ್ಮ ತಮ್ಮ ಕಾರಿನಲ್ಲಿ ಬಂದಿದ್ದರು. ಶ್ರೀ ವೆದ್ದು ಭಾವನವರಿಗೆ ಶಿವಮೊಗ್ಗೆಯಿಂದ ಬಂಟವಾಳದಲ್ಲಿರುವ ಅವರ ಮಾವನ

ಬಂಡಸಾಲೆಗೆ ಅಕ್ಕಿ ಖರೀದಿಸುವುದು ಇದ್ದುದರಿಂದ ಅವರು ಯಾವಾಗಲೂ ಅಲ್ಲಿಗೆ ಹೋಗಿ ಬರುತ್ತಿದ್ದರು. ಅವರು ನನ್ನನ್ನು ಅಕ್ಕಿ ವ್ಯಾಪಾರಿಗಳು ಮತ್ತು ಗಿರಣಿ ಮಾಲಿಕರ ಬಳಿ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟರು. ಅವರ ಜೊತೆ ಅವರ ವ್ಯಾಪಾರ ಸಂಬಂಧ ಚೆನ್ನಾಗಿತ್ತು. ಅಲ್ಲಿಯ ಕೆಲವು ವ್ಯಾಪಾರಿಗಳು ಮತ್ತು ಅಕ್ಕಿ ಗಿರಣಿಯ ಮಾಲಿಕರು ನನಗೆ ತುಂಬಾ ಬೆಂಬಲ ನೀಡುವುದಾಗಿ ಭರವಸೆ ನೀಡಿ ಪೂರ್ಣ ರೀತಿಯಿಂದ ಸಹಕರಿಸುವುದಾಗಿ ಮಾತು ಕೊಟ್ಟರು.

ಇದೇ ರೀತಿ ಕೆಲವೇ ದಿನಗಳಲ್ಲಿ ಶಿವಮೊಗ್ಗ ಗೌಡ ಸಾರಸ್ವತ ಸಮಾಜದ ಮುಖಂಡರಾದ ಶ್ರೀ ಬಂಟವಾಳ ನಾರಾಯಣ ಕಾಮತಿ, ಯು. ಮಾಧವ ನಾಯಕ, ಪಿ.ಪಿ. ನಾಯಕ, ಶ್ರೀ ಪಿ. ಕೇಶವ ಕಾಮತಿ, ಕೆ. ಗೋಪಾಳ ಶೆಣ್ಯೆ, ಕಳಸ ಕೇಶವ ಪ್ರಭು ಮೊದಲಾದ ಸದ್ಗೃಹಸ್ಥರು ನನ್ನ ಮನೆಗೆ ಬಂದು, ಅಲ್ಲಿಯ ಸಂಘದ ಸದಸ್ಯರಲ್ಲಿ ಐಕ್ಯಮತ್ಯ ಮತ್ತು ಪರಸ್ಪರರಲ್ಲಿ ವಿಶ್ವಾಸ ಇಲ್ಲವೆಂದೂ, ಸಂಘದ ಸ್ಥಿತಿಗತಿಗಳು ಚೆನ್ನಾಗಿಲ್ಲವೆಂದು ತಿಳಿಸಿದರು. ನಾನು ಸಂಘವನ್ನು ಸೇರಿ ಅದನ್ನು ಸುಧಾರಿಸಬೇಕೆಂದು ಹೇಳಿದರು. ಅಲ್ಲಿ ಸಂಘ ಸ್ಥಾಪನೆಯಾಗಿ ಬಹಳ ವರ್ಷಗಳು ಕಳೆದಿದ್ದವು. ಶಿವಮೊಗ್ಗದಲ್ಲಿ ಮಂಗಳೂರು, ಉಡುಪಿ, ಕಾರ್ಕಳ, ಉತ್ತರ ಕನ್ನಡ ಜಿಲ್ಲೆ, ನಗರ ಮತ್ತು ಸಾಗರ ಮುಂತಾದ ಊರುಗಳ ಸಮಾಜ ಬಾಂಧವರು ಬಹಳ ಸಂಖ್ಯೆಯಲ್ಲಿದ್ದು, ಅವರು ಉತ್ತಮ ರೀತಿಯಿಂದ ವ್ಯಾಪಾರ, ವಹಿವಾಟು ನಡೆಸುತ್ತಿದ್ದರು.

ನಾನು ಸಮಾಜದ ಮುಖಂಡರ ಮಾತಿಗೆ ಮನ್ನಣೆ ನೀಡಿ ಸಮಾಜ ಸಂಘದ ಕಾರ್ಯ ನಡೆಸುವುದೆಂದು ತೀರ್ಮಾನಿಸಿದೆ. ಮೊದಲು ಸಂಘದ ಕಾರ್ಯಕಾರಿಣಿ ಸದಸ್ಯನಾದೆ. ಆಮೇಲೆ ಕಾರ್ಯದರ್ಶಿಯಾಗಿ, ಅನಂತರ ಅಧ್ಯಕ್ಷನಾದೆ. ಆ ದಿನಗಳಲ್ಲಿ ಸಂಘದ ಸದಸ್ಯರಲ್ಲಿ ಹೊಸ ನಿಯಮ ತಂದು, ಯಾವುದೇ ವರ್ಷದಲ್ಲಿ ಚುನಾವಣೆ ಇಲ್ಲದೆ ಸರ್ವಾನುಮತದಿಂದ ಕಾರ್ಯಕಾರಣಿ ಮಂಡಳಿ ನೇಮಕಗೊಳ್ಳುವಂತಹ ಉತ್ತಮ ಪರಿಸ್ಥಿತಿ ಬಂತು.

ನಾನು ಶಿವಮೊಗ್ಗದಲ್ಲಿದ್ದ ನಾಲ್ಕು ವರ್ಷಗಳಲ್ಲಿ ಸಮಾಜದ ಮೂರೂ ಮಠದ ಸ್ವಾಮಿಜಿಗಳು ಕಲ್ಯಾಣ ಮಂದಿರಕ್ಕೆ ಭೇಟಿ ನೀಡಿದ್ದಾರೆ. ಅದೇ ಸಮಯದಲ್ಲಿ ಸಮಾಜದ ಸೇವೆ ಮಾಡಿರುವ ಹಿರಿಯರಿಗೆ ಸನ್ಮಾನ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ಕಲ್ಯಾಣ ಮಂದಿರಕ್ಕೆ ಹೊಸ ಅಡುಗೆಮನೆ ಮತ್ತು ಊಟಕ್ಕೆ ವಿಸ್ತಾರವಾದ ಕೋಣೆಯನ್ನು ನಿರ್ಮಿಸಲಾಗಿದೆ. ಅದಕ್ಕಾಗಿ ಯಕ್ಷಗಾನ ಬಯಲಾಟವನ್ನು ನಡೆಸಿ ಹಣ ಸಂಗ್ರಹ ಮಾಡಲಾಗಿತ್ತು. ಆ ನವೀನ ಕಟ್ಟಡಗಳ ಉದ್ಘಾಟನೆಗೆ ಶ್ರೀ ಟಿ.ಎ.ಪೈ ಮತ್ತು ಶ್ರೀ ಕೆ.ಕೆ. ಪೈ ಅವರನ್ನು ಕರೆಯಿಸಿಕೊಂಡಿದ್ದೆವು.

ಪ್ರಾರಂಭದಲ್ಲಿ ಶಿವಮೊಗ್ಗ ಶಾಖೆಯ ಸಿಬ್ಬಂದಿಗಳ ನಡುವೆ ಉತ್ತಮ ಮನಃಸ್ಥಿತಿ ಇರಲಿಲ್ಲ. ಇದ್ದ ಎರಡು ಸಿಬ್ಬಂದಿ ಯೂನಿಯನ್‌ಗಳು ಬಲಾಢ್ಯವಾಗಿದ್ದವು. ಆದರೆ, ಅವರೊಳಗೆ ಬಹಳ ವೈಮನಸ್ಸು ಇತ್ತು. ಆದ್ದರಿಂದ ಶಾಖೆಯ ವ್ಯವಹಾರದಲ್ಲಿ ಯಾವುದೇ ಪ್ರಗತಿ ಸಾಧ್ಯವಾಗಿರಲಿಲ್ಲ. ಅದರೆ ನಾನು ಅಲ್ಲಿಗೆ ಹೋದ ಬಳಿಕ ನನ್ನ ಕೆಲವು ಪ್ರಯೋಗಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆಸಿದೆ. ದೇವರ ದಯೆಯಿಂದ ನನಗೆ ಅದರಲ್ಲಿ ಯಶಸ್ಸು ಕೂಡ ದೊರೆಯಿತು. ಹೀಗಾಗಿ ಅವರವರ ಯೂನಿಯನ್‌ನ ಅಭಿವೃದ್ಧಿಯನ್ನು ಅವರವರು ನೋಡಿಕೊಳ್ಳುತ್ತಿರುವಾಗ, ಶಾಖೆಯ ಪ್ರಗತಿಗೆ, ಹೊಸ ಗ್ರಾಹಕರನ್ನು ತರಲು, ಠೇವಣಿ ಹೆಚ್ಚಿಸಲು ನಾನು ಅವರಲ್ಲಿಯೇ ಉತ್ಸಾಹ ಬರುವಂತೆ ಮಾಡಿದೆ. ಆ ವರ್ಷ ನಾನು ಮೆನೇಜರ್ ಆದ ಆರು ತಿಂಗಳೊಳಗೆ ೫೮ ಲಕ್ಷ ರೂ ಠೇವಣಿಯನ್ನು(೧೨೦ ಲಕ್ಷದಿಂದ ೧೭೮ ಲಕ್ಷಕ್ಕೆ) ಹೆಚ್ಚಿಸಿದೆ. ಹೀಗಾಗಿ ನಮ್ಮ ಬ್ಯಾಂಕ್‌ನ ಪ್ರಧಾನ ಕಚೇರಿಯಿಂದ ನನಗೆ ಮತ್ತು ಸಿಬ್ಬಂದಿಗಳಿಗೆ ಶಾಭಾಸಗಿರಿ ದೊರೆಯಿತು.

ಠೇವಣಿ ಹೆಚ್ಚಿಸುವುದಕ್ಕೆ ನನಗೆ ಶ್ರೀ ಕೆ.ವಿ. ರಾಮಸ್ವಾಮಿ, ಹೆಚ್. ಮುರಳೀಧರ ಕಾಮತ ಮತ್ತು ಚಂದ್ರಶೇಖರ(ಚಂದ್ರು) ಇವರಿಂದ ಬೆಂಬಲ ದೊರೆತಿತ್ತು. ಶಾಖೆಯ ಇತರ ಸಾಲಗಳು, ಬಾಕಿ ವಸೂಲಿ, ಪಿಗ್ಮಿ ಸಂಗ್ರಹ ಇತ್ಯಾದಿ ಖಾತೆಗಳಲ್ಲಿಯೂ ತುಂಬಾ ಪ್ರಗತಿ ಉಂಟಾಯಿತು. ನಾನು ಸಿಬ್ಬಂದಿಗಳನ್ನು ಹೊರ ಪ್ರದೇಶಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಿ ನಾಟಕ, ಸಂಗೀತ ಸ್ಪರ್ಧೆ, ವಿವಿಧ ವಿನೋದಾವಳಿ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೆ. ಹೀಗಾಗಿ ಅವರ ನಡುವೆ ಪರಸ್ಪರ ಪ್ರೀತಿ, ಬಾಂಧವ್ಯ ಬೆಳೆಯಿತು.

ಆದರೆ ಶಿವಮೊಗ್ಗದಲ್ಲಿದ್ದಾಗ ನನ್ನ ಬದುಕಿನಲ್ಲಿಯೇ ಮರೆಯಲಾಗದ ಎರಡು ದುರಂತ ಘಟನೆಗಳು ನಡೆದವು. ಮುಂದೆ ಆ ಪರಿಸ್ಥಿತಿ ಶ್ರೀ ದೇವರ ದಯೆಯಿಂದ ನಿವಾರಣೆಯಾಯಿತು. ಅದು ಹೇಗಾಯಿತೆಂದರೆ, ೧೫ ಆಗಸ್ಟ್, ೧೯೭೮ರಂದು ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಬ್ಯಾಂಕ್‌ಗೆ ರಜೆ ಇತ್ತು. ಹೀಗಾಗಿ ಮರುದಿನ ಅಂದರೆ ೧೬ ರಂದು

ಬ್ಯಾಂಕ್‌ನಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿತ್ತು. ಆ ಸಮಯದಲ್ಲಿ ಸ್ಟೇಟ್ ಬ್ಯಾಂಕ್‌ಗೆ ತೆಗೆದುಕೊಂಡು ಹೋಗಬೇಕಾಗಿದ್ದ ಟ್ರೆಶರಿ ರೆಮಿಟೆನ್ಸ್‌ನ ಒಂದೂವರೆ ಲಕ್ಷ ರೂಪಾಯಿಗಳಿದ್ದ ಪೆಟ್ಟಿಗೆಯನ್ನು ಕಳ್ಳರು ಬಂದು ಯಾರಿಗೂ ತಿಳಿಯದಂತೆ ಕದ್ದೊಯ್ದರು. ಅದು ಆ ಹಣವನ್ನು ತೆಗೆದುಕೊಂಡು ಹೋಗಬೇಕಾಗಿದ್ದ ಇಬ್ಬರು ಕ್ಲರ್ಕ್‌ಗಳ ಗಮನಕ್ಕೂ ಬರಲಿಲ್ಲ. ಹೀಗಾಗಿ ಕಳ್ಳರು ಪೆಟ್ಟಿಗೆ ತೆಗೆದುಕೊಂಡು ಹೋದದ್ದು ಯಾರಿಗೂ ಗೊತ್ತಾಗದೆ ಹಣ ಕೈಬಿಟ್ಟು ಹೋಯಿತು. ಆಮೇಲೆ ನಾವು ಪೊಲೀಸರಿಗೆ ದೂರು ನೀಡುವುದು ಇತ್ಯಾದಿ ಕ್ರಮಗಳನ್ನು ಕೈಗೊಂಡೆವು. ಆದರೆ ವಿಮೆ ಇದ್ದುದರಿಂದ ಬ್ಯಾಂಕ್‌ಗೆ ಹಣ ನಷ್ಟವಾಗಲಿಲ್ಲ. ಆದರೆ ನನಗೆ ಮಾತ್ರ ಈ ಕುರಿತು ಹಲವು ವರ್ಷಗಳವರೆಗೆ ತಲೆ ಬಿಸಿ ಇತ್ತು.

ಆಗ ಠೇವಣಿಯನ್ನು ಹೆಚ್ಚಿಸಿದರೆ ಶಾಖೆಯ ಮೆನೇಜರರಿಗೆ ಬಡ್ಡಿಯಿಲ್ಲದೆ ಕಾರಿನ ಸಾಲ ಸುಲಭ ಕಂತುಗಳಲ್ಲಿ ದೊರೆಯುತ್ತಿತ್ತು. ಶಿವಮೊಗ್ಗೆಗೆ ಹೋಗಿ ಐದು ತಿಂಗಳೊಳಗೆ ೧೪೫ ಲಕ್ಷಗಳ ಠೇವಣಿಯ ಗುರಿಯನ್ನು ಸಾಧಿಸಿದ್ದರಿಂದ, ನಾನು ಕಾರ್ ಲೋನ್ ಪಡೆದು ಅಂಬಾಸಡರ ಕಾರು ಖರೀದಿಸಿದೆ. ಇದರಿಂದಾಗಿ ನನಗೆ ಡಿಸೆಂಬರ್ ಕೊನೆಯೊಳಗೆ ಶಾಖೆಯ ಠೇವಣಿಯನ್ನು ೧೭೭ ಲಕ್ಷಕ್ಕೆ ತಲುಪಿಸುವುದು ಸಾಧ್ಯವಾಯಿತು. ನನಗೆ ಶಾಖೆಯಲ್ಲಿ ನನ್ನ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಹಕಾರ ದೊರೆತಿತ್ತು. ಆದರೆ ನಾನು ಖರೀದಿಸಿದ ಈ ಕಾರು ತುಂಬಾ ದಿನ ನನ್ನ ವಶದಲ್ಲಿ ಉಳಿಯಲಿಲ್ಲ. ನಾಲ್ಕೇ ತಿಂಗಳಲ್ಲಿ, ಅಂದರೆ ೧೯೭೭, ಫೆಬ್ರವರಿ ೬ ರಂದು ರಾತ್ರಿ ಮನೆಯ ಹೊರಗೆ ಇಟ್ಟಿದ್ದ ಕಾರನ್ನು ಕಳ್ಳರು ಕದ್ದೊಯ್ದರು. ಆ ದಿನಗಳಲ್ಲಿ ಶಿವಮೊಗ್ಗ ಮತ್ತು ಸುತ್ತುಮುತ್ತಲಿನ ಊರುಗಳಿಂದ ಕಾರುಗಳನ್ನು ಕದ್ದುಕೊಂಡು ಹೋಗಿ ಅರಣ್ಯದ ಗಂಧದ ಮರವನ್ನು ಸಾಗಿಸಿ ಮಾರಾಟ ಮಾಡುವ ಗುಂಪುಗಳು ಇದ್ದುವಂತೆ. ನಾನು ಪೊಲೀಸರಿಗೆ ದೂರು ನೀಡಿದರೂ, ಅದರಿಂದ ಹೆಚ್ಚು ಉಪಯೋಗವಾಗಲಿಲ್ಲ. ಇದೇ ರೀತಿ ಇಪ್ಪತ್ತು ದಿನಗಳು ಕಳೆದ ಬಳಿಕ, ನನ್ನ ಕಾರು ಸಕಲೇಶಪುರದ ಬಳಿ ಕಾಡಿನಲ್ಲಿ ಇದೆ ಎಂದು ಪೊಲೀಸರು ತಿಳಿಸಿದರು. ಅಲ್ಲಿಗೆ ಹೋಗಿ ನೋಡಿದರೆ ಕಾರನ್ನು ಪೂರ್ತಿಯಾಗಿ ಹಾಳು ಮಾಡಲಾಗಿತ್ತು. ಅದಕ್ಕೆ ಕಾವಿ ಬಣ್ಣ ಬೇರೆ ಬಳಿಯಲಾಗಿತ್ತು. ಹೀಗಾಗಿ ಕಾರಿನ ಗುರುತು ತಿಳಿಯುತ್ತಿರಲಿಲ್ಲ. ಆದರೆ ಅದರ ಚೇಸಿಸ್ ಸಂಖ್ಯೆ ಇತ್ಯಾದಿ ನೋಡಿ ಕಾರನ್ನು ಬೇರೆ ವಾಹನದಲ್ಲಿಟ್ಟು ಶಿವಮೊಗ್ಗಕ್ಕೆ ತರಲಾಯಿತು. ದುರಸ್ತಿ ಕಾರ್ಯಗಳಿಗೆ ಮತ್ತು ಹೊಸದಾಗಿ ಬಣ್ಣ ಬಳಿಯಲು(ಪೇಂಟ್ ಹಾಕಲು) ಗ್ಯಾರೇಜಿಗೆ ನೀಡಲಾಯಿತು. ನನಗೆ ಸಿಕ್ಕಿದ ವಿಮೆಯ ಹಣದಿಂದ ಅದಕ್ಕೆ ಕೆಲವು ಹೊಸ ಭಾಗಗಳನ್ನು ಜೋಡಿಸಿ, ಬಣ್ಣ ಹಚ್ಚಿ, ಬಳಕೆಗೆ ತಂದೆ. ಕಾರನ್ನು ಹೊಸದಾಗಿ ಮಾಡಿ ತಂದರೂ, ನನ್ನ ಮಾನಸಿಕ ಚಿಂತೆ ಹೆಚ್ಚಾಗಿದ್ದರಿಂದ ನಾನು ಆ ಕಾರನ್ನು ಮಾರಿ ಬ್ಯಾಂಕ್ ಸಾಲ ತೀರಿಸಿ ನಿಶ್ಚಿಂತನಾದೆ.

ಹೀಗೆ ೧೯೭೭ರಲ್ಲಿ ನಡೆದ ಈ ಎರಡು ದುರದೃಷ್ಟಕಾರಿ ಘಟನೆಗಳನ್ನು ನನ್ನ ಜೀವಮಾನದಲ್ಲಿಯೇ ನಾನು ಮರೆಯುವ ಹಾಗಿಲ್ಲ ಈಗಲೂ ಆ ದಿನಗಳನ್ನು ನೆನೆದರೆ ನನಗೆ ಮನದ ಸ್ಥಿಮಿತ ತಪ್ಪಿದ ಅನುಭವವಾಗುತ್ತದೆ.

ಶಿವಮೊಗ್ಗದಲ್ಲಿ ಇರುವಾಗ ನಾವು ಎರಡು ಮೂರು ಬಾರಿ ಜೋಗದ ಜಲಪಾತವನ್ನು ನೋಡಲು ಹೋಗಿದ್ದೆವು. ಹೆಗ್ಗೋಡಿನಲ್ಲಿ ನೀನಾಸಂ ನಾಟಕ ಸಂಸ್ಥೆ ಕನ್ನಡ ನಾಟಕ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡುವ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ಕಂಡಿದ್ದೆ. ಅಲ್ಲಿ ಕೆ.ವಿ.ಸುಬ್ಬಣ್ಣನವರು ನಾಟಕ ಕ್ಷೇತ್ರದಲ್ಲಿ ದೇಶ ವಿದೇಶಗಳಲ್ಲಿ ಪ್ರಸಿದ್ಧಿಗೆ ಬರುವಂತಹ ತುಂಬಾ ಪ್ರಯೋಗಗಳನ್ನು ನಡೆಸಿದ್ದರು. ಶ್ರೀ ಕೆ.ವಿ. ಸುಬ್ಬಣ್ಣನವರಿಗೆ ದೇಶ ವಿದೇಶಗಳ ಪ್ರಶಸ್ತಿಗಳು ದೊರೆತಿವೆ. ಅವರ 'ನೀನಾಸಂ ತಿರುಗಾಟ'ವು ಕರ್ನಾಟಕರಾಜ್ಯದ ಅನೇಕ ಊರುಗಳಿಗೆ ಹೋಗಿ ೩ ದಿನಗಳ ಕಾಲ ೩ ನಾಟಕಗಳನ್ನು ಆಡಿಸುತ್ತಿತ್ತು. ಅದರಿಂದ ಕರ್ನಾಟಕದ ಜನರಲ್ಲಿ ನಾಟಕ ಕ್ಷೇತ್ರದ ಕುರಿತು ಅಭಿರುಚಿ ಹೆಚ್ಚುವಂತಾಯಿತು.

ಶಿವಮೊಗ್ಗೆಯಲ್ಲಿ ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳು ನಡೆಯುತ್ತಲಿರುತ್ತವೆ. ಅಲ್ಲಿಯ ಸುಸಂಸ್ಕೃತ ಜನರ ಪರಿಚಯವಾದುದು ನನಗೆ ತುಂಬಾ ನೆರವಿಗೆ ಬಂತು. ಅಲ್ಲಿಯ ರೋಟರಿ ಸಂಸ್ಥೆ ಸಮಾಜದ ಪ್ರಗತಿಗಾಗಿ ತುಂಬಾ ಕೆಲಸ ಮಾಡುತ್ತಿತ್ತು.

ಶಿವಮೊಗ್ಗೆಯ ಹತ್ತಿರದ ಹೊಸಳ್ಳಿ ಎಂಬ ಊರು 'ಸಂಸ್ಕೃತ ಗ್ರಾಮ'ವೆಂದು ಪ್ರಸಿದ್ಧವಾಗಿದೆ. ಅಲ್ಲಿ ಸಂಕೇತಿ ಬ್ರಾಹ್ಮಣರ ಕುಟುಂಬಗಳು ಇವೆ. ಸಂಕೇತಿ ಭಾಷೆ ತಮಿಳು ಮತ್ತು ಕನ್ನಡದ ಸಂಕರದ ಭಾಷೆ. ಸಂಕೇತಿ ಬ್ರಾಹ್ಮಣರು ಕಡು ನಿಷ್ಠಾವಂತರು ಮತ್ತು ಆಚಾರವಂತರಾಗಿದ್ದಾರೆ. ಧೋತ್ರ ಉಟ್ಟು, ಮೈಮೇಲೆ ಅಂಗವಸ್ತ್ರ ಹೊದ್ದುಕೊಂಡು ಹೊರಗೆ ಕಾಣಿಸಿಕೊಳ್ಳುವುದು ಅವರ ಸಂಪ್ರದಾಯ.

ಶಿವಮೊಗ್ಗದಲ್ಲಿ ಅರಬಿಂದೋ ಆಶ್ರಮದ ಭಕ್ತರು ಕೂಡ ಇದ್ದಾರೆ. ಪಾಂಡಿಚೇರಿಯ ಅರಬಿಂದೊ ಆಶ್ರಮದ ಮದರ್ ಅವರ ಕಾರ್ಯದರ್ಶಿಯಾಗಿದ್ದ ಮಾಧವ ಪಂಡಿತರು ಶಿವಮೊಗ್ಗದ ಹತ್ತಿರದ ಆಗುಂಬೆಯವರು. ಅವರಿಗೆ ದೇಶವಿದೇಶಗಳಲ್ಲಿ ಅರಬಿಂದೊ ತತ್ವದ ವಿಚಾರವಾಗಿ ಉಪನ್ಯಾಸ ನೀಡಲು ಆಮಂತ್ರಣ ಬರುತ್ತದೆ. ಅವರು ಕೊಂಕಣಿ ಭಾಷಿಕರು. ನಾನು ಶಿವಮೊಗ್ಗಕ್ಕೆ ಹೋದ ನಾಲ್ಕು ತಿಂಗಳಲ್ಲಿಯೇ ಅವರು ಅಲ್ಲಿಗೆ ಉಪನ್ಯಾಸ ನೀಡಲು ಬಂದಿದ್ದರು.

ಡಾ. ಶಿವರಾಮ ಕಾರಂತರಿಗೆ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಘೋಷಣೆಯಾದ ತಿಂಗಳಲ್ಲಿಯೇ ಅವರಿಗೆ ಶಿವಮೊಗ್ಗದಲ್ಲಿ ಅಭಿನಂದನಾ ಸಮಾರಂಭವಿತ್ತು.

ಶಿವಮೊಗ್ಗದಲ್ಲಿ ಹೆಚ್. ಇಬ್ರಾಹಿಂ ಎಂಬ ಸುಶಿಕ್ಷಿತ ಮುಸ್ಲಿಮ್ ವ್ಯಕ್ತಿ ಒಬ್ಬರು ಇದ್ದಾರೆ. ಅವರು ರಖಂ ಎಕ್ಸೈಸ್ ವ್ಯಾಪಾರಿ. ಅವರು ಮುಸ್ಲೀಮರಾದರೂ, ಅವರ ಮದ್ಯದಂಗಡಿಗಳಿಗೆ ಹಿಂದೂ ದೇವರುಗಳ ಹೆಸರು ಇದೆ. ವರ್ಷಕ್ಕೊಮ್ಮೆ ಅವರು ತಿರುಪತಿಗೆ ದೇವರ ಭೇಟಿಗಾಗಿ ಹೋಗುವುದಿತ್ತು. ಅಲ್ಲಿ ಅವರು ದಾನವಾಗಿ ನೀಡಿದ ಒಂದು ಕಾಟೇಜ್ ಇದೆ. ಅವರ ಮನೆಯಲ್ಲಿ ಮಂಗಳವಾರ, ಶುಕ್ರವಾರ ಮತ್ತು ಶನಿವಾರದಂದು ಮಾಂಸ ಸೇವನೆ ಇರುವುದಿಲ್ಲ. ಅವರು ಮತ್ತು ಅವರ ಇಬ್ಬರು ಮಕ್ಕಳೂ ಮದ್ಯದ ವ್ಯಾಪಾರ ಮಾಡುವವರಾದರೂ, ಮದ್ಯಸೇವನೆ ಮಾಡುತ್ತಿರಲಿಲ್ಲ. ಶ್ರೀ ಇಬ್ರಾಹಿಂ ಸಾಹೇಬರ ಮನೆಯಲ್ಲಿ ಶ್ರೀ ತಿರುಮಲ ವೆಂಕಟರಮಣ ದೇವರ ಚಿತ್ರವಿದೆ. ಒಬ್ಬ ಬ್ರಾಹ್ಮಣರು ಬಂದು ಪ್ರತೀ ದಿನ ಆ ದೇವರಿಗೆ ಪೂಜೆ ಕೈಗೊಳ್ಳುವುದಿತ್ತು. ಅವರ ಮನೆಯಲ್ಲಿ ವರ್ಷಕ್ಕೆ ಒಂದು ಬಾರಿ ಶ್ರೀ ಸತ್ಯನಾರಾಯಣ ಪೂಜಾ ವ್ರತ ನಡೆಯುವುದಿತ್ತು. ಆಗ ನೂರು ಮಂದಿ ಸುಶಿಕ್ಷಿತ ಸುಸಂಸ್ಕೃತರಿಗೆ ಆಮಂತ್ರಣವಿದ್ದು, ಒಳ್ಳೆಯ ಊಟವಿರುತ್ತಿತ್ತು.

ಶ್ರೀ ಇಬ್ರಾಹಿಂ ಸಾಹೇಬ್ ಸಾಹಿತ್ಯಪ್ರೇಮಿ. ಅವರ ಮನೆಯಲ್ಲಿ ಎಲ್ಲಾ ರೀತಿಯ ಗ್ರಂಥಗಳು ಇದ್ದವು. ಅವರು ಶಿವಮೊಗ್ಗ ಕರ್ನಾಟಕ ಸಂಘದ ಆಶ್ರಯದಾತರಾಗಿದ್ದಾರೆ. ಅವರು ನಿರ್ಮಿಸಿದ 'ಸಾವಿತ್ರಿ' ಕನ್ನಡ ಚಿತ್ರಕ್ಕೆ ಸ್ವರ್ಣಕಮಲ ಪ್ರಶಸ್ತಿ ದೊರೆತಿದೆ. ಶಿವಮೊಗ್ಗದ ಸುತ್ತುಮುತ್ತ ಇರುವ ದೇವಾಲಯಗಳಿಗೆ, ಧಾರ್ಮಿಕ ಸಂಘಗಳಿಗೆ ಅವರು ದೇಣಿಗೆ ನೀಡಿದ್ದಾರೆ. ಅವರು ಸಂಗೀತಪ್ರೇಮಿ. ಅವರ ಮಗನ ವಿವಾಹದ ಆರತಕ್ಷತೆಯ ಸಮಾರಂಭದಲ್ಲಿ ಹರಿಪ್ರಸಾದ್ ಚೌರಾಸಿಯಾರ ಕೊಳಲು ಮತ್ತು ಎನ್. ರಮಣಿಯವರ ಪಿಟೀಲಿನ ಜುಗಲಬಂಧಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಹೈದ್ರಾಬಾದಿನಿಂದ ಬಾಣಸಿಗರನ್ನು ಕರೆಯಿಸಿ ಒಳ್ಳೆಯ ಊಟ ತಯಾರಿಸಿದ್ದರು. ನಾನು ಅವರ ಕುರಿತು ಇಷ್ಟೆಲ್ಲಾ ವಿವರಗಳನ್ನು ನೀಡಿದ್ದು ಅವರ ಉಚ್ಚಮಟ್ಟದ ಅಭಿರುಚಿಯನ್ನು ಜನರಿಗೆ ತಿಳಿಸುವ ಸಲುವಾಗಿ.

ಶಿವಮೊಗ್ಗೆಯ ಸಾಂಸ್ಕೃತಿಕ ಕ್ಷೇತ್ರ, ಕಲಾಕ್ಷೇತ್ರಕ್ಕೆ, ಅದೇ ರೀತಿ ಔದ್ಯೋಗಿಕೀಕರಣದ ಪ್ರಗತಿಗೆ ತುಂಬಾ ದೇಣಿಗೆಯನ್ನು ನೀಡಿದವರೆಂದರೆ ಶಿವಮೊಗ್ಗದ ಪ್ರಸಿದ್ಧ ನ್ಯಾಯವಾದಿಗಳು, ರೋಟರಿಯ ಮಾಜಿ ಗವರ್ನರರೂ ಆಗಿದ್ದ ವೆಂಕಟರಾಮಾ ಶಾಸ್ತ್ರಿ, ಗುಂಡೂರಾವ್, ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಮಹಿಷಿ ನರಸಿಂಹ ಮೂರ್ತಿ, ಡಿ.ವಿ.ಎಸ್. ಶಾಲೆಯ(ನ್ಯಾಶನಲ್ ಎಡ್ಯುಕೇಶನ್ ಟ್ರಸ್ಟ್) ಶ್ರೀ ನಾಗಪ್ಪ ಸೆಟ್ಟಿ, ಪಿಯರಲ್ಯಾಟ್ ಇಂಡಸ್ಟ್ರಿಯಲ್ ಎಸ್ಟೇಟಿನ ನಾರಾಯಣ ಶಾಸ್ತ್ರಿ, ಪ್ರಗತಿ ಮುದ್ರಣಾಲಯದ ನಾರಾಯಣ ರಾವ್ ಮೊದಲಾದವರು.

ಬಂಟವಾಳದಲ್ಲಿ ನನಗೆ ಮತ್ತು ನನ್ನ ಕುಟುಂಬಕ್ಕೆ ಬಹಳ ಆಪ್ತರಾಗಿದ್ದ ಶ್ರೀ ಸಾಂಗಲಿ ನಾರಾಯಣ ರಾವ್ ಅವರ ಮಾತಿನ ಮೇರೆಗೆ ಶಿವಮೊಗ್ಗೆಗೆ ಬಂದು ನೆಲೆಯೂರಿದ ಅವರ ಸುಪುತ್ರರಾದ ಡಾ.ಬಿ.ವೆಂಕಟರಾವ್ ಅವರು ಒಳ್ಳೆಯ ಹೆಸರು ಮತ್ತು ಒಳ್ಳೆಯ ಶ್ರೀಮಂತಿಕೆಯನ್ನು ಸಂಪಾದಿಸಿದ್ದಾರೆ. ಹೊಸದಾಗಿ ಉಷಾ ನರ್ಸಿಂಗ್ ಹೋಮ್ ಮತ್ತು ದೊಡ್ಡ ಮನೆಯನ್ನು ಕಟ್ಟಿಸಿರುವ ಅವರು ಒಳ್ಳೆಯ ಕೆಲಸಗಳಿಗೆ ಕೊಡುಗೈ ದಾನಿಯಾಗಿದ್ದು, ಸಮಾಜದಲ್ಲಿ ಉನ್ನತಿಯನ್ನು ಹೊಂದಿದ್ದಾರೆ. ಇವರಿಂದಾಗಿ ನನಗೆ ತುಂಬಾ ವೈದ್ಯಕೀಯ ಸವಲತ್ತುಗಳು ಉಚಿತವಾಗಿ ದೊರೆತಿದ್ದವು.

ಶಿವಮೊಗ್ಗದಲ್ಲಿದ್ದ ಬಂಟವಾಳದ ಮತ್ತೊಬ್ಬ ವ್ಯಕ್ತಿಯೆಂದರೆ ಶ್ರೀ ಬಿ.ಎನ್.ಕಾಮತಿ. ಅವರ ಕರ್ತೃತ್ವ ಶಕ್ತಿ, ಕಷ್ಟನಷ್ಟ ಸಹಿಷ್ಣುತೆಯ ಗುಣಗಳಿಂದ ಮತ್ತು ಸಮಾಜದ ಒಳಿತಿನ ಕಾರ್ಯಗಳಲ್ಲಿ ಅವರು ಉದಾರವಾಗಿ ನೀಡುತ್ತಿದ್ದ ದಾನಧರ್ಮಗಳಿಂದಾಗಿ ಗೌಡ ಸಾರಸ್ವತ ಸಮಾಜದವರು ಮಾತ್ರವಲ್ಲ, ಬೇರೆ ಸಮಾಜದ ಜನರು ಕೂಡ ಗೌರವಿಸುವ ಮಟ್ಟವನ್ನು ಅವರು ತಲುಪಿದ್ದಾರೆ. ನನ್ನ ತಂದೆಯವರ ಮೇಲೆ ಅವರಿಗೆ ಇದ್ದಂತಹ ಪ್ರೀತಿ, ವಿಶ್ವಾಸದಿಂದ ನಾನು ಕೂಡ

ಅವರ ಅಭಿಮಾನಿಯಾದೆ. ಶಿವಮೊಗ್ಗೆಯ ನನ್ನ ಎಲ್ಲಾ ಕಾರ್ಯಗಳಲ್ಲಿ ಅವರು ನನಗೆ ಸಹಾಯ ನೀಡಿದ್ದಾರೆ.

ಶಿವಮೊಗ್ಗದಲ್ಲಿದ್ದ ನಾಲ್ಕು ವರ್ಷಗಳಲ್ಲಿ ನಾನು ತಿಂಗಳಿಗೆ ಒಂದೆರಡು ಬಾರಿಯಾದರೂ ಬಂಟವಾಳಕ್ಕೆ ಬರುವುದು ಅನಿವಾರ್ಯವಾಗುತ್ತಿತ್ತು. ನನಗೆ ನನ್ನ ಜಮೀನಿನಲ್ಲಿದ್ದ ಕೃಷಿಕಾರ್ಯದ ವ್ಯವಸ್ಥೆ ನಡೆಸುವ ಆವಶ್ಯಕತೆ ಇರುತ್ತಿತ್ತು. ಊರಿನಲ್ಲಿ ಶ್ರೀ ಬಿ. ನರಸಿಂಹ ಮಲ್ಯ, ಅವರ ಮಗ ಗಣೇಶ ಮಲ್ಯ, ಮೋಹನದಾಸ ಬಾಳಿಗ(ಮೋಹನಣ್ಣ) ಬಂಟವಾಳಕರ್ ಇವರು ನನಗಾಗಿ ಶ್ರಮ ಪಡುತ್ತಿದ್ದರು. ನನಗೆ ಜಮೀನು ಮಾರಿದ ಶ್ರೀ ಮಾರಪ್ಪ ಶೆಟ್ಟಿ ಕೂಡ ಕೃಷಿ ಕೆಲಸಕ್ಕೆ ಜನರನ್ನು ಒದಗಿಸುತ್ತಿದ್ದರು. ಅಲ್ಲಿ ಒಬ್ಬರು ವಾಸಿಸಬಹುದಾದ ೨೦ – ೧೦ ಚದರ ಮೀಟರ್ ಉದ್ದಗಲದ ಒಂದು ಕೋಣೆ ಮಾತ್ರ ಇತ್ತು. ಅದಕ್ಕೆ ಮತ್ತೊಂದು ಕೋಣೆ, ಅಡುಗೆ ಕೋಣೆ ಮತ್ತು ಬಚ್ಚಲು ಕೋಣೆಯನ್ನು ಸೇರಿಸಿ ಕಟ್ಟಿದರೆ ಒಂದು ಕುಟುಂಬಕ್ಕೆ ಇರುವ ವ್ಯವಸ್ಥೆ ಯಾಗುವುದೆಂದು ಅವರೇ ಕಟ್ಟಡ ನಿರ್ಮಾಣ ಕಾರ್ಯದ ಜವಾಬ್ದಾರಿಯನ್ನು ವಹಿಸಿ ನಡೆಸಿಕೊಟ್ಟರು. ಪ್ರಾರಂಭದಲ್ಲಿ ಆ ಮನೆಯಲ್ಲಿ ಒಬ್ಬ ಕೆಲಸದಾಳು ಇರುತ್ತಿದ್ದನು. ಅವನು ಕಳವು ಮಾಡುತ್ತಿದ್ದರಿಂದ ಪೋಲೀಸರ ನೆರವು ಪಡೆದು ಅವನನ್ನು ಹೊರಹಾಕಲಾಯಿತು. ಆಮೇಲೆ ಒಂದು ಮಲೆಯಾಳಿ ಕುಟುಂಬ ಅಲ್ಲಿ ಇರುತ್ತಿತ್ತು. ಆಗ ಮರದಲ್ಲಿ ಇನ್ನೂ ತೆಂಗಿನಕಾಯಿಗಳು ಬೆಳೆಯುತ್ತಿಲ್ಲವಾಗಿದ್ದರಿಂದ ಕಳ್ಳತನದ ಹೆದರಿಕೆ ಇರಲಿಲ್ಲ. ಆದರೂ ಮೂರು ಎಕರೆ ಜಮೀನನ್ನು ನೋಡಿಕೊಳ್ಳಲು ಇರಲಿ ಎಂದು ಅವರಿಗೆ ಮನೆಯನ್ನು ಬಿಟ್ಟುಕೊಟ್ಟಿದ್ದೆ.

ನಾನು ಶಿವಮೊಗ್ಗದಲ್ಲಿರುವಾಗಲೇ ಅಮೇರಿಕೆಯಲ್ಲಿರುವ ನನ್ನ ತಮ್ಮ ಚಿ. ಗಣಪತಿಯ ವಿವಾಹ ೧೯೭೮ ಆಗಸ್ಟ್ ತಿಂಗಳಲ್ಲಿ ಮಂಗಳೂರಿನಲ್ಲಿ ನೆರವೇರಿತು. ಇದೇ ರೀತಿ ನನ್ನ ಮಗಳು ವಿದ್ಯಾಳಿಗೆ ನೆಂಟಸ್ತಿಕೆ ನೋಡಲು ಮುಂಬೈಗೆ ಹೋಗಿದ್ದೆ. ನೆಂಟಸ್ತಿಕೆ ಕೂಡಿ ಬಂದದ್ದರಿಂದ ಮುಂಬೈ ಮತ್ತು ಬಂಟವಾಳಕ್ಕೆ ಹೋಗಿ ಬರುವುದು ನಡೆದಿತ್ತು. ಏಪ್ರಿಲ್ ೨೭, ೧೯೮೭ರಂದು ಮುಂಬಯಿಯಲ್ಲಿ ಶ್ರೀ ಅಲೆವೂರು ಪ್ರಭಾಕರ ಕಿಣಿಯವರೊಂದಿಗೆ ಅವಳ ಮದುವೆ ನೆರವೇರಿತು.

ನಾನು ಬಂಟವಾಳಕ್ಕೆ ಬಂದಾಗಲೆಲ್ಲಾ ಶ್ರೀ ವೆದ್ದು ಭಾವಾಜಿಯವರಲ್ಲಿ ಮತ್ತು ಪಾಣೆಮಂಗಳೂರಿನಲ್ಲಿ ಶ್ರೀ ದೇವದಾಸ ಶೆಣೈ ಅವರ ಮನೆಯಲ್ಲಿ ಇರುತ್ತಿದ್ದೆ. ಹಿಂತಿರುಗುವಾಗ ನನಗಾಗಿ ಶ್ರೀ ವೆದ್ದು ಭಾವಾಜಿಯವರ, ಅಥವಾ ಶಿವಮೊಗ್ಗದ ಶ್ರೀ ಪಿ.ಪಿ.ನಾಯಕರ ಮತ್ತು ಪಾಣೆಮಂಗಳೂರಿನ ಶ್ರೀ ದೇವದಾಸ ಶೆಣೈಯವರ ಕಾರಿನ ವ್ಯವಸ್ಥೆ ಇರುತ್ತಿತ್ತು.

ಬೆಂಗಳೂರು ಶೂಲೆ ಶಾಖೆ

ನಾನು ೧೯೮೨ನೇ ಇಸವಿಯಲ್ಲಿ ವರ್ಗವಾಗಿ ಬೆಂಗಳೂರಿನ ಶೂಲೆ ಶಾಖೆ ಸೇರಿದೆ. ಅದೇ ವರ್ಷ ಅಲ್ಲಿರುವ ಶ್ರೀ ದ್ವಾರಕನಾಥ ಭವನದ ಸಮಿತಿಯ ಸದಸ್ಯನಾಗಿ ಮತ್ತು ಉಪಾಧ್ಯಕ್ಷನಾಗಿ ನನ್ನನ್ನು ಆಯ್ಕೆ ಮಾಡಿದರು. ಆದರೆ ಶಿವಮೊಗ್ಗೆಯಲ್ಲಿ ನಡೆಸಿದ ಹಾಗೆ ಬೆಂಗಳೂರಿನಲ್ಲಿ ಸಮಾಜದ ವಿಚಾರವಾಗಿ ಯಾವುದೇ ಕಾರ್ಯಗಳಲ್ಲಿ ಹೆಚ್ಚು ಬೆರೆಯುವುದು ನನಗೆ ಸಾಧ್ಯವಾಗಲಿಲ್ಲ.

ಬೆಂಗಳೂರು ಶೂಲೆ ಶಾಖೆಯಲ್ಲಿ ಕೆಲಸ ಬಹಳವಿರುತ್ತಿತ್ತು. ಅದು ಬೆಂಗಳೂರಿನಲ್ಲಿರುವ ಸಿಂಡಿಕೇಟ್ ಬ್ಯಾಂಕ್‌ನ ಎರಡನೆಯ ದೊಡ್ಡ ಶಾಖೆಯಾಗಿತ್ತು. ಅಲ್ಲಿ ವಿದೇಶಿ ವ್ಯವಹಾರವೂ ಇತ್ತು. ದೊಡ್ಡದೊಡ್ಡ ಖಾತೆಗಳು, ಓವರ್‌ಡ್ರಾಫ್ಟ್‌ಗಳು, ವಿದೇಶಿ ವಹಿವಾಟಿನ ಮತ್ತು ಬಹು ದೊಡ್ಡ ಕರೆಂಟ್ ಅಕೌಂಟ್‌ಗಳಿದ್ದ ಶಾಖೆ. ನನಗೆ ಹವಾ ನಿಯಂತ್ರಿತ ಕ್ಯಾಬಿನ್ ಇತ್ತು. ದೊಡ್ಡ ದೊಡ್ಡ ಕಂಪನಿಯ ಮಾಲೀಕರು ಅಥವಾ ವರಿಷ್ಠ ಅಧಿಕಾರಿಗಳು ನನ್ನನ್ನು ಭೇಟಿಯಾಗಲು ನನ್ನ ಕ್ಯಾಬಿನ್‌ಗೆ ಬರುತ್ತಿದ್ದರು. ಈ ಶಾಖೆಯಲ್ಲಿ ಐಟಿಐ (ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್)ನ ದೊಡ್ಡ ಖಾತೆ ಇತ್ತು. ನಾನು ಉತ್ತಮ ರೀತಿಯಿಂದ ಕೆಲಸ ಮಾಡಿದ್ದರಿಂದ, ಆ ಶಾಖೆಯು ಡಿವಿಜನಲ್ ಮೆನೆಜರ್ ಮಟ್ಟವನ್ನು ತಲುಪುವ ಹಾಗಾಯಿತು. ಆದರೆ ನನಗೆ ಡಿವಿಜನಲ್ ಮೆನೆಜರ್ ಗ್ರೇಡ್ ಇಲ್ಲದ್ದರಿಂದ ಅಲ್ಲಿ ಮತ್ತೊಬ್ಬ ವರಿಷ್ಠ ಅಧಿಕಾರಿಯ ನೇಮಕವಾಯಿತು. ನಾನು ಅಂದಿನ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಪಿ.ವಿ.ಎಸ್. ಮಲ್ಯರಲ್ಲಿ ವಿನಂತಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ಶಾಖೆಗೆ ಮೆನೇಜರ್ ಆಗಿ ವರ್ಗಾವಣೆ ಪಡೆದುಕೊಂಡೆ.

ನಾನು ೧೯೮೨–೧೯೮೫ರ ಅವಧಿಯಲ್ಲಿ ತುಂಬೆ ಊರಿನಲ್ಲಿದ್ದ ನನ್ನ ಜಾಗದ ಮನೆಯಲ್ಲಿ ನನ್ನ ಸಂಸಾರವನ್ನು ನಿಲ್ಲಿಸಿದ್ದೆ. ಹೀಗಾಗಿ ನನಗೆ ಬೆಂಗಳೂರಿನಲ್ಲಿದ್ದಾಗ ನನ್ನ ಬ್ಯಾಂಕ್ ವ್ಯವಹಾರ ಬಿಟ್ಟು ಬೇರೆ ಯಾವುದೇ ಸಾಮಾಜಿಕ ಕ್ಷೇತ್ರಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗಿರಲಿಲ್ಲ. ತುಂಬೆ ಮನೆಯಲ್ಲಿ ಮಾಡಬೇಕಾಗಿದ್ದ ಕಾಮಗಾರಿ ಕೆಲಸಗಳು ಬಹಳ

ಇದ್ದವು. ಹೀಗಾಗಿ ಆಗಾಗ ತುಂಬೆಗೆ ಬಂದು ಒಂದೆರಡು ದಿನ ಹೆಚ್ಚು ನಿಂತು ಹೋಗುವ ಅಗತ್ಯವಿರುತ್ತಿತ್ತು. ೧೯೮೨ರಲ್ಲಿ ವಿದ್ಯಾ ತನ್ನ ಎರಡನೆಯ ಹೆರಿಗೆಗೆ ಬಂದಿದ್ದಳು. ಅವಳ ಹೆರಿಗೆ ೨೩, ಡಿಸೆಂಬರ್, ೧೯೮೨ರಲ್ಲಿ ಸುಲಲಿತವಾಗಿ ನಡೆದು ಚಿ. ಪ್ರಿಯಾಂಕಾ ಹುಟ್ಟಿದಳು.

೧೯೮೩, ಅಕ್ಟೋಬರ್ ತಿಂಗಳಲ್ಲಿ ಮನೆಗೆ ಎರಡು ಹೊಸ ಕೋಣೆಗಳನ್ನು ಸೇರಿಸುವ ಕೆಲಸವನ್ನು ಪ್ರಾರಂಭಿಸಲಾಯಿತು. ಆಗ ಸಿಂಡಿಕೇಟ್ ಬ್ಯಾಂಕ್‌ನಿಂದ ಸಾಲ ಪಡೆದದ್ದರಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಧ್ಯವಾಯಿತು. ಈಗ ಇರುವ ಎರಡು ಮಲಗುವ ಕೋಣೆಗಳು, ಮತ್ತು ಮನೆಗೆ ಬಂದವರನ್ನು ಕುಳಿತುಕೊಳ್ಳಿಸುವ ಡ್ರಾಯಿಂಗ್ ರೂಮನ್ನು ಕಟ್ಟಿಸುವ ಕಾರ್ಯವನ್ನು ನಡೆಸಲಾಯಿತು. ಹೆಂಚಿನ ತಾರಸಿಯನ್ನು ತೆಗೆದು ಕಾಂಕ್ರಿಟ್ ಸ್ಲಾಬ್ ಹಾಕಿದ್ದರಿಂದ ಮನೆಯಲ್ಲಿ ಜಾಗ ಹೆಚ್ಚಾಯಿತು.

●●

೧೦. ಉತ್ತರ ಹಿಂದುಸ್ಥಾನ ಮತ್ತು ನೇಪಾಳ ಪ್ರವಾಸ

ನನ್ನ ಮಕ್ಕಳು ಚಿ. ಮಾಧವ ಮತ್ತು ಚಿ. ದಿನೇಶನಿಗೆ ಅಕ್ಟೋಬರ್ ತಿಂಗಳಲ್ಲಿ ಶಾಲೆಗೆ ನವರಾತ್ರಿಯ ರಜೆ ಇದ್ದದ್ದರಿಂದ, ನಾನು ಬ್ಯಾಂಕ್‌ನಿಂದ ಎಲ್.ಎಫ್.ಸಿ. ಸೌಲಭ್ಯ ಪಡೆದು ೧೯೮೩ರಲ್ಲಿ ಕುಟುಂಬ ಸಮೇತ ದೆಹಲಿ, ಕಾಶ್ಮೀರ, ರಾಜಸ್ಥಾನ ಮತ್ತು ನೇಪಾಳಕ್ಕೆ ಪ್ರವಾಸ ಹೋದೆನು.

ನಾನು ೫ ಅಕ್ಟೋಬರ್, ೧೯೮೩ರಂದು ಸಾವಿತ್ರಿ, ಮಾಧವ ಮತ್ತು ದಿನೇಶರನ್ನು ಕರೆದುಕೊಂಡು ಬೆಂಗಳೂರಿನಿಂದ ರಾತ್ರಿ ವಿಮಾನದಲ್ಲಿ ದೆಹಲಿಗೆ ಹೋದೆನು. ನಮ್ಮನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ನನ್ನ ತಮ್ಮ ವೆಂಕಟರಮಣ ಬಂದಿದ್ದ. ಆಗ ಅವನು ದೆಹಲಿಯಲ್ಲಿ ಸಿಂಡಿಕೇಟ್ ಬ್ಯಾಂಕ್‌ಶಾಖೆಯ ಮೆನೇಜರ್ ಆಗಿದ್ದನು. ಅಲ್ಲಿ ಅವನು ಕಟ್ಟಿಸಿದ್ದ ಮನೆ 'ಪ್ರೇಮತಾರಾ' ಬಹಳ ಸುಂದರವಾಗಿತ್ತು. ನಾವು ಹೋದಾಗ ಅವನ ಪತ್ನಿ ಸುಗಂಧ ಮತ್ತು ಮಗಳು ವರ್ಷಾ ಮನೆಯಲ್ಲಿದ್ದರು. ದೆಹಲಿಯಲ್ಲಿ ನನ್ನ ಶಿಂಪಾಚ್ಚಿ ಚಿಕ್ಕಮ್ಮನ ಮಗ ಜನಾರ್ದನ ಭಟ್(ಜನ್ನು) ಮತ್ತು ಪಾಣೆಮಂಗಳೂರಿನ ನಂದಾವರ ಸುಧಾಕರ ಪ್ರಭು(ಬಾಬಣ್ಣ) ಕೂಡ ಇದ್ದರು. ಮರುದಿನ ನಾವು ದೆಹಲಿಯಲ್ಲಿರುವ ನೆಹರೂ ಪ್ಲೇಸ್, ಪಾಲಿಕಾ ಬಜಾರ್(ಹವಾನಿಯಂತ್ರಿತ), ಇತ್ಯಾದಿ ನೋಡಿದೆವು. ನಾವು ಮನೆಗೆ ಹಿಂತಿರುಗಿ ಬಂದಾಗ ಚಿ. ಬಾಬಣ್ಣ ನಮಗಾಗಿ ಕಾಯುತ್ತಿದ್ದನು. ಅವನಿಗೆ ನಾವು ದೆಹಲಿಗೆ ಬಂದಿರುವುದು ತುಂಬಾ ಸಂತೋಷ ನೀಡಿದ ವಿಚಾರವಾಗಿತ್ತು(ಹೊಸದಾಗಿ ರಾಯಭಾಗ ಶಾಖೆ ಪ್ರಾರಂಭವಾದಾಗ ಅವನು ನನ್ನ ಜೊತೆ ಬಂದು ಹೊಸದಾಗಿ ಬ್ಯಾಂಕ್ ಸೇರಿದವನು. ಆಗ ನಮ್ಮ ಮನೆಯಲ್ಲಿಯೇ ಇರುತ್ತಿದ್ದ. ಹೀಗಾಗಿ ಅವನಿಗೆ ಸಾವಿತ್ರಿಯ ಮೇಲೆ ತುಂಬ ಪ್ರೀತಿ ಮತ್ತು ವಿಶ್ವಾಸ.)

ನಾವು ೭ ಅಕ್ಟೋಬರ್ ೧೯೮೩ರಂದು ಬೆಳಗ್ಗೆ ೧೦–೫೦ಕ್ಕೆ ವಿಮಾನದಲ್ಲಿ ಕಾಶ್ಮೀರಕ್ಕೆ ಹೊರಟೆವು. ಕಾಶ್ಮೀರ ತಲುಪಿದ ಕೂಡಲೇ ನೇರವಾಗಿ ದಾಲ್ ಸರೋವರಕ್ಕೆ ಹೋಗಿ ಬೋಟ್‌ಹೌಸ್‌ನಲ್ಲಿ ಉಳಿದುಕೊಂಡೆವು. ದಾಲ್ ಸರೋವರದಲ್ಲಿ ತುಂಬಾ ದೋಣಿಗಳು ತೇಲುತ್ತ ಇರುತ್ತವೆ. ಅವುಗಳಿಗೆ ಬೇರೆ ಬೇರೆ ಆಕರ್ಷಕ ಹೆಸರನ್ನು ನೀಡಲಾಗಿದೆ. ಅವುಗಳಲ್ಲಿ ತ್ರಿ ಸ್ಟಾರ್, ಫೈವ್ ಸ್ಟಾರ್ ಹೊಟೇಲ್ ರೀತಿ ವಿವಿಧ ಶ್ರೇಣಿಗಳು ಇರುತ್ತವೆ. ಅದರಲ್ಲಿ ನಮಗೆ ಊಟ, ತಿಂಡಿ, ಚಾ, ಕಾಫಿ ಇತ್ಯಾದಿ ಸಿಗುತ್ತವೆ. ಮಲಗಲು ಉತ್ತಮ ಮಂಚ ದೊರೆಯುತ್ತದೆ. ಪ್ರತೀ ದೋಣಿಯನ್ನು ಮೂರು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಕೋಣೆಯಾಗಿಸಿಕೊಂಡು ಅದರಲ್ಲಿ ಮಂಚ, ಹಾಸಿಗೆ ಇತ್ಯಾದಿ ವ್ಯವಸ್ಥೆ ಮಾಡಲಾಗಿದೆ. ಸರೋವರದ ನೀರಿನ ಮೇಲೆ ತಣ್ಣಗಿನ ಗಾಳಿ ಹಾದು ಬರುವುದರಿಂದ ಕೋಣೆಯೊಳಗೆ ತಂಪು ಹವೆ ಇರುತ್ತದೆ. ಮಧ್ಯಾಹ್ನದ ಊಟ ಮುಗಿಸಿ ನಾವು ವಿಶ್ರಮಿಸಿದೆವು. ಸರೋವರದಲ್ಲಿ ಬಗೆಬಗೆಯ ಹೂಗಳನ್ನು ಮಾರಾಟ ಮಾಡುವ ದೋಣಿಗಳು ಇರುತ್ತವೆ. ಕಾಶ್ಮೀರಿ ಶಾಲು, ಕಂಬಳಿ, ರತ್ನಗಂಬಳಿ ಇತ್ಯಾದಿಗಳನ್ನು ಮಾರಲು ಬರುವ ದೋಣಿಗಳು ನೀರಿನ ಮೇಲೆ ತೇಲಿಕೊಂಡೇ ಇರುತ್ತವೆ. ನಮ್ಮ ದೋಣಿ ತೇಲಿಕೊಂಡು ಇರುವಾಗ ನಮ್ಮ ಸಮೀಪ ಬರುವ ದೋಣಿಗಳಿಂದ ನಾವು ನಮಗೆ ಬೇಕಾದ ವಸ್ತುಗಳನ್ನು ಕ್ರಯಕ್ಕೆ ಕೊಂಡುಕೊಳ್ಳಬಹುದು.

ದಾಲ ಸರೋವರ ಜಗತ್ತಿನಲ್ಲಿಯೇ ಅತಿ ಸುಂದರ ಹಾಗೂ ವಿಶಾಲವಾದ ಅಪೂರ್ವ ಸರೋವರ. ಇದರಲ್ಲಿ ಶಿಖಾರಾಗಳು(ದೋಣಿಗಳು) ಇರುತ್ತವೆ.

ನಮ್ಮ ಪ್ರವಾಸದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಟ್ರಾವೆಲ್ ಕಾರ್ಪೊರೇಶನ್ ಆಫ್ ಇಂಡಿಯಾ ಸಂಸ್ಥೆಯು ನಮ್ಮ ವಿಮಾನ, ರೈಲು, ಬಸ್ ಸೌಕರ್ಯ ಮತ್ತು ದಾಲ ಸರೋವರದ ದೋಣಿ ಸೌಕರ್ಯ, ಕಾಶ್ಮೀರ, ಗುಲಮಾರ್ಗ್, ನೇಪಾಳ(ಕಟ್ಮಂಡು), ಜೈಪುರ ಇತ್ಯಾದಿ ಕಡೆಗಳಲ್ಲಿ ತಂಗಲು ವಸತಿಗೃಹದ ವ್ಯವಸ್ಥೆ ಮಾಡಿರುವುದರಿಂದ ನಮ್ಮ ಮುಂದಿನ ಪ್ರಯಾಣ ಸುಖಕರವಾಯಿತು.

ಮರುದಿನ, ಅಕ್ಟೋಬರ್ ೮ ರಂದು ನಾವು ಕಾರಿನಲ್ಲಿ ಗುಲಮಾರ್ಗಕ್ಕೆ ಹೋದೆವು. ಅಲ್ಲಿ ಸೇಬುಹಣ್ಣಿನ ದೊಡ್ಡದೊಡ್ಡ ತೋಟಗಳು ಇವೆ. ಮರಗಳಲ್ಲಿ ಸೇಬುಹಣ್ಣುಗಳು ತೂಗಿಕೊಂಡಿರುತ್ತವೆ. ನಮಗೆ ಬೇಕಾದಷ್ಟು ಹಣ್ಣುಗಳನ್ನು ನಾವೇ ಸ್ವತಃ ಕಿತ್ತು ತಿನ್ನಬಹುದು. ಗುಲಮಾರ್ಗದ ಸೇಬು ಅತ್ಯಂತ ಪರಿಮಳಭರಿತ ಮತ್ತು ಸ್ವಾದಿಷ್ಟ ರುಚಿಯದು. ಅಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಎತ್ತರದಲ್ಲಿರುವ ಗಾಲ್ಫ್ ಕೋರ್ಟ್ ಇದೆ. ಚಿ. ಮಾಧವ ಮತ್ತು ಚಿ. ದಿನೇಶರು ಚಿಕ್ಕಚಿಕ್ಕ ಕುದುರೆಗಳಲ್ಲಿ(ಪೋನಿ) ಕುಳಿತು ತಿರುಗಾಟ ನಡೆಸಿ ಬಹಳ ಖುಷಿಪಟ್ಟರು. ಅಲ್ಲಿ ಜಗತ್ತಿನ ಅತೀ ಎತ್ತರದ 'ನಂಗ ಪರ್ವತ' ಹತ್ತಿರದಲ್ಲಿಯೇ ಗೋಚರಿಸುತ್ತದೆ. ಎಲ್ಲಿ ಹೋದರೂ ಹೂದೋಟಗಳು, ಪೈನ್ ಮತ್ತು ವರ್ಣಮಯ ವೃಕ್ಷಗಳೇ ಕಾಣಿಸುತ್ತವೆ. ಭೂಮಿಯ ಮೇಲೆ ಸ್ವರ್ಗವಿದ್ದರೆ ಅದು ಇಲ್ಲಿಯೇ ಎಂಬಂತೆ ಕಾಣುತ್ತಿತ್ತು. ಕೆಳಗೆ ನೋಡಿದರೆ ಕಾಶ್ಮೀರ ಕಣಿವೆ.

ರಾತ್ರಿ ಕವಿಯುತ್ತಿದ್ದಂತೆ ಅಸಾಧ್ಯ ಚಳಿ. ಹೊಟೇಲಿನ ಕೋಣೆಯಲ್ಲಿ ಅಗ್ಗಿಷ್ಟಿಕೆ ಇದ್ದರೂ, ಹೊದ್ದುಕೊಳ್ಳಲು ಎರಡೆರಡು ಕಂಬಳಿ ಕೊಟ್ಟರೂ, ಚಳಿ ತಡೆಯಲಾಗುವುದಿಲ್ಲ. ಹೊಟ್ಟೆಯ ಕರುಳಿನಿಂದ ನಡುಕ ಬರುತ್ತದೆ. ಅಷ್ಟು ಚಳಿ ಇರುತ್ತದೆ. ಬೆಳಗ್ಗೆ ಎದ್ದು ಹೊರಗೆ ನೋಡಿದರೆ ಎಡ ಬಲಗಳಲ್ಲಿ ಪರ್ವತಾವಳಿಗಳು. ಸೂರ್ಯಕಿರಣ ಹರಡುತ್ತಿದ್ದಂತೆ ಪರ್ವತ ಶಿಖರಗಳು ಬಂಗಾರದ ವರ್ಣದಿಂದ ಪ್ರಜ್ವಲಿಸುತ್ತವೆ. ಇಡೀ ಪರ್ವತಾವಳಿಗೆ ಚಿನ್ನದ ಮೆರಗು ಬರುತ್ತದೆ. ಮರುದಿನ ೯ನೇ ತಾರೀಖಿನಂದು ನಾವು ಮತ್ತೆ ಕೆಳಗಿಳಿದು ಶ್ರೀನಗರಕ್ಕೆ ಬಂದು ಅಲ್ಲಿ ಒಂದು ದಿನ ಉಳಿದುಕೊಂಡೆವು. ಶ್ರೀನಗರದಲ್ಲಿ ಶ್ರೀ ಶಂಕರಾಚಾರ್ಯರು ಪ್ರತಿಷ್ಠೆ ಮಾಡಿದ ಶ್ರೀ ಶಾರದಾ ದೇವಾಲಯ, ಬೆಲೆವೊರ್ಡ್, ಮಾರ್ಕೆಟ್, ಗಾಲ್ಫ್ ಕೋರ್ಟ್ ಇತ್ಯಾದಿ ನೋಡಿದೆವು. ಅಲ್ಲಿ ಕೇಸರ ದೊರೆಯುತ್ತದೆ. ಕಾಶ್ಮೀರ ಕೇಸರ ಅತ್ಯಂತ ಪರಿಮಳಯುಕ್ತವಾದುದು. ಅಲ್ಲಿಯೇ ಬೆಳೆಯುವುದರಿಂದ ಬೆಲೆಯೂ ಕಡಿಮೆ. ನಾವು ಸ್ವಲ್ಪ ಕೇಸರ ಖರೀದಿಸಿದೆವು.

ಮರುದಿನ, ಅಕ್ಟೋಬರ್ ೧೦ರಂದು ಪಹಲ್ ಗಾಂವ್‌ಗೆ ಹೋದೆವು. ಅಲ್ಲಿ ಹರಿಯುವ ನದಿಯ ನೀರು ನೀಲಿವರ್ಣದ್ದು. ಈ ನದಿ ತೀರದಲ್ಲಿ ನುಣುಪಾದ ಗುಂಡಗಿನ ಕಲ್ಲುಗಳಿವೆ. ನದಿಯು ೩-೪ ಮೈಲಿ ದೂರದಿಂದಲೇ ಗೋಚರಿಸುತ್ತದೆ. ನದಿ ತೀರಕ್ಕೆ ಪ್ರವಾಸಿಗಳು ಬರುತ್ತಾರೆ. ಮೇಲಿರುವ ಆಗಸದ ನೀಲವರ್ಣ ನದಿ ನೀರಿನಲ್ಲಿ ಪ್ರತಿಫಲನಗೊಂಡು, ನೀರು ನೀಲಿ ನೀಲಿಯಾಗಿ ಕಂಡುಬರುತ್ತದೆ. ಅದನ್ನು ನೋಡುವುದೇ ಒಂದು ಆನಂದ ಮತ್ತು ಆಶ್ಚರ್ಯ. ಅಂತಹ ದೃಶ್ಯ ಬೇರೆ ಎಲ್ಲಿಯೂ ಸಿಗಲಿಕ್ಕಿಲ್ಲ.

ಅಲ್ಲಿ ಒಂದೆಡೆ ಕೆಲವು ಯುವಕರು ಕುಳಿತು 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗುತ್ತಿರುವುದನ್ನು ನೋಡಿದೆವು. ಆ ದಿನಗಳಲ್ಲಿ(೧೯೮೩) ಪಾಕಿಸ್ತಾನದ ಪರವಾಗಿ ವಿಪ್ಲವಕಾರಿ ವಿದ್ರೋಹಿ ಚಳವಳಿ ಅಲ್ಲಿ ಇರಲಿಲ್ಲ. ಆಮೇಲಿನ ದಿನಗಳಲ್ಲಿ ಪಾಕಿಸ್ತಾನದ ಮುಖಂಡರು ಅದನ್ನು ದೊಡ್ಡ ರೀತಿಯಿಂದ ಪ್ರೋತ್ಸಾಹಿಸಿ ಬೆಳೆಸಿದರು. ಕಾಶ್ಮೀರಕ್ಕೆ ಹೊರಗಿನವರು ಹೋಗುವುದೇ ಕಷ್ಟವಾಯಿತು. ಅಲ್ಲಿಯವರೇ ಆಗಿದ್ದ ಕಾಶ್ಮೀರಿ ಪಂಡಿತರು ಅವರ ಆಸ್ತಿ, ಜಮೀನು ಬಿಟ್ಟು ದೆಹಲಿ, ಮುಂಬಯಿ, ಬೆಂಗಳೂರು ನಗರಗಳಿಗೆ ಓಡಿಬಂದರು. ಕೊಂಕಣಿ ಜನರು ೪೫೦ ವರ್ಷಗಳ ಹಿಂದೆ ಕೊಂಕಣಿಗರ ಮೂಲ ಆವಾಸಸ್ಥಾನ ಗೋವೆಯನ್ನು ಬಿಟ್ಟು ಕೊಂಕಣ ಪಟ್ಟಿ(ಕೊಂಕಣ ಕರಾವಳಿ-ಥಾಣೆಯಿಂದ ಕೊಚ್ಚಿಯವರೆಗೆ)ಗೆ ಬಂದು ನೆಲೆಸಿದ ಹಾಗೆ ಕಾಶ್ಮೀರಿ ಪಂಡಿತರು ಬೆಂಗಳೂರು, ದೆಹಲಿ, ಮುಂಬಯಿಗೆ ಓಡಿ ಬಂದು ನೆಲೆಸಿದ್ದಾರೆ.

ಪಹಲಗಾಂವ್‌ನಲ್ಲಿ ಪ್ರವಾಸಿಗರಿಗಾಗಿ ನೂರಕ್ಕೂ ಹೆಚ್ಚು ಸರಕಾರಿ ಬಸ್ಸುಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಶ್ರೀನಗರದಿಂದ ಪಹಲಗಾಂವ್‌ಗೆ ಹೋಗುವಾಗ ದಾರಿಯಲ್ಲಿ ಆವಂತಿಪುರ ಎಂಬ ಚಾರಿತ್ರಿಕ ಹೆಸರಿನ ನಗರ ಸಿಗುತ್ತದೆ. ಅಲ್ಲಿ ಆವಂತಿ ರಾಜನು ಕಟ್ಟಿಸಿದ ೧೨೦೦ ವರ್ಷಗಳಷ್ಟು ಹಿಂದಿನ ದೇವಾಲಯವಿದೆ. ಅದರ ವಾಸ್ತು ಇದೀಗ ಕಟ್ಟಿಸಿದಷ್ಟು ನವೀನವಾಗಿ ತೋರುತ್ತದೆ. ಪ್ರಾಕೃತಿಕ ಅನಾಹುತದ ಕಾರಣವಾಗಿ ಈ ದೇವಾಲಯವು ಮಣ್ಣಿನಲ್ಲಿ ಹೂತು ಹೋಗಿತ್ತು. ಬ್ರಿಟಿಷರು ಭೂ ಪರೀಕ್ಷಣ ನಡೆಸಿ ಮಣ್ಣನ್ನು ಅಗೆದು ಶೋಧಿಸಿ ಮೇಲೆ ತೆಗೆದ ದೇವಾಲಯ ಅದು. ಪಹಲಗಾಂವ್‌ನಿಂದ ಹಿಂತಿರುಗುವ ದಾರಿಯಲ್ಲಿ ಅಕ್ರೋಟ್ ಮರಗಳ ಕಾಡು ಸಿಗುತ್ತದೆ. ಅಲ್ಲಿಯ ಜನರು ಇದೇ ಮರಗಳ ಹಲಗೆಯಿಂದ ಆಸನಗಳನ್ನು, ಮಲಗುವ ಮಂಚಗಳನ್ನು, ಕಪಾಟು, ಮೇಜು ಇತ್ಯಾದಿ ಗೃಹೋಪಯೋಗಿ ಪೀಠೋಪಕರಣಗಳನ್ನು ತಯಾರಿಸುತ್ತಾರೆ. ಆ ಮರಗಳಲ್ಲಿ ಬೆಳೆಯುವ ಅಕ್ರೋಟ್ ಕಡಿಮೆ ಬೆಲೆಗೂ ದೊರೆಯುತ್ತದೆ. ಶ್ರೀನಗರಕ್ಕೆ ಬರುವ ದಾರಿಯಲ್ಲಿ ಕೇಸರ ಬೆಳೆಯುವ ಮರಗಳ ತೋಟಗಳು ಕಾಣಸಿಗುತ್ತವೆ. ಅಲ್ಲಿ ಕೇಸರ ಬಹಳ ಅಗ್ಗ ಬೆಲೆಗೆ ಸಿಗುತ್ತದೆ. ನಾವು ಸಂಜೆ ಶ್ರೀನಗರಕ್ಕೆ ಬಂದು 'ಕೊಲೂ ಗೆಸ್ಟ್ ಹೌಸ್'ನಲ್ಲಿ ತಂಗಿದೆವು.

ಅಕ್ಟೋಬರ್ ೧೧ರಂದು ಕಾಶ್ಮೀರದ ಶ್ರೀನಗರದ ಹತ್ತಿರವಿರುವ ಮೊಗಲ್ ಗಾರ್ಡನ್ಸ್ ನೋಡಲು ಹೋದೆವು. ಮೊಗಲ್ ಚಕ್ರವರ್ತಿ ಷಹಜಹಾನನು ನಿಸರ್ಗ ಸೌಂದರ್ಯವನ್ನು ಮತ್ತು ಅದರ ಶೋಭೆಯನ್ನು ನಿರಂತರವಾಗಿ ಆಸ್ವಾದಿಸಿ ಮನದ ಬಯಕೆಯನ್ನು ತಣಿಸುವ ಸಲುವಾಗಿ ಮೂರು ಪುಷ್ಪೋದ್ಯಾನಗಳಾದ ಶಾಲಿಮಾರ, ನಿಶತ ಮತ್ತು ಚಶ-ಮೇ-ಶಾಹಿಗಳನ್ನು ನಿರ್ಮಿಸಿದ್ದಾನೆ. ಈ ಮೂರೂ ಪುಷ್ಪೋದ್ಯಾನಗಳು ಅನುಪಮವಾಗಿವೆ, ಮನೋಹರವಾಗಿವೆ ಮತ್ತು ನಿಸರ್ಗ ಪ್ರೇಮಿಗಳ ಮನಸ್ಸು, ಕಣ್ಣು ಮತ್ತು ಹೃದಯಕ್ಕೆ ಅಪಾರ ಸಂತೋಷವನ್ನು ನೀಡುತ್ತವೆ. ದೇವೇಂದ್ರನ ಸ್ವರ್ಗದಲ್ಲಿಯೂ ಇಂತಹ ಸುಂದರ ವನಶ್ರಿ ಇರಲಿಕ್ಕಿಲ್ಲ.

ಈ ಮೂರೂ ಪುಷ್ಪೋದ್ಯಾನಗಳನ್ನು ನೋಡಿ, ಅಲ್ಲಿ ತಿರುಗಾಡಿ, ಅತ್ಯಂತ ಸಂತೋಷವನ್ನು ಹೊಂದಿ ನಾವು ಮರಳಿದೆವು. ದಾಲ ಸರೋವರ, ಗುಲಮಾರ್ಗ ಮತ್ತು ಮೊಗಲ್ ಗಾರ್ಡನ್ಸ್‌ಗಳಿಂದಾಗಿ ದೇಶವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡುತ್ತಾರೆ. ಇತ್ತೀಚಿಗೆ ಆತಂಕವಾದಿಗಳ ಗಲಭೆಯಿಂದಾಗಿ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ.

ಎಂಟು ಶತಮಾನಗಳಷ್ಟು ಹಿಂದೆ ಪರ್ವತವೊಂದರ ಮೇಲೆ ಶ್ರೀ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಈಶ್ವರ ಲಿಂಗವಿರುವ ಮಠವನ್ನು ನೋಡಲು ನಾವು ಸಂಜೆ ಹೋದೆವು. ಅಲ್ಲಿಯ ವಿಶಿಷ್ಟ ಲಿಂಗವನ್ನು ತ್ರಿವರ್ಣದ ಶಿಲೆಯಿಂದ ನಿರ್ಮಿಸಲಾಗಿದೆ. ಅದನ್ನು ನೋಡಿದರೆ ಶ್ರೀ ಶಂಕರಾಚಾರ್ಯರು ತನ್ನ ಮೂವತ್ತೆರಡು ವರ್ಷದ ವಯಸ್ಸಿನೊಳಗೆ ಕಾಶ್ಮೀರದಲ್ಲಿ ಈ ಅತ್ಯಪೂರ್ವ ಲಿಂಗವನ್ನು ಪ್ರತಿಷ್ಠೆ ಮಾಡಿರುವುದು, ಆಮೇಲೆ ಭರತಖಂಡದ ನಾಲ್ಕು ಕಡೆಗಳಲ್ಲಿ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ ಧರ್ಮಕಾರ್ಯವು ನಿರಂತರವಾಗಿ ನಡೆಯುವ ವ್ಯವಸ್ಥೆಯನ್ನು ಮಾಡಿದ ಮಹತ್ವದ ಅಂಶ ನೆನಪಿಗೆ ಬರುತ್ತದೆ. ಇನ್ನೊಂದು ವಿಷಯ ಯಾವುದೆಂದರೆ ಮೈಸೂರು ಜಯಚಾಮರಾಜ ಒಡೆಯರ್ ಅವರು ೧೯೨೩ನೇ ಇಸವಿಯಲ್ಲಿ ಈ ಮಠಕ್ಕೆ ವಿದ್ಯುತ್ ಅಲಂಕಾರವನ್ನು ಮಾಡಿರುವುದು. ಇದು ಕೂಡ ನಮಗೆ ವಿಶೇಷ ವಿಚಾರವಾಗಿ ಅಲ್ಲಿ ತಿಳಿದು ಬಂತು.

ಆಮೇಲೆ ನಾವು ಕಾಶ್ಮೀರ ಸರಕಾರದ ಹಸ್ತ ಕಲಾ ಪ್ರದರ್ಶನಾಲಯಕ್ಕೆ ಹೋದೆವು. ಅಲ್ಲಿ ಕಾಶ್ಮೀರ ರಾಜ್ಯದ ಹಸ್ತ ಕಲಾಕಾರರ ಕಲಾ ನೈಪುಣ್ಯವು ಕಾಣಲು ಸಿಗುತ್ತದೆ. ತರಹವಾರಿ ಶಾಲುಗಳು, ಮುಖ್ಯವಾಗಿ ಉಣ್ಣೆ ಮತ್ತು ರೇಶ್ಮೆ ಶಾಲುಗಳು, ಸೀರೆಗಳು, ಬೊಂಬೆಗಳು ಇತ್ಯಾದಿಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅದರ ಮಾರಾಟವೂ ಇತ್ತು. ಇಲ್ಲಿ ಶುದ್ಧ ಕೇಸರವು ೧೦, ೧೦೦, ಮತ್ತು ೧೫೦ ಗ್ರಾಂ ಪೊಟ್ಟಣಗಳಲ್ಲಿ ಸಿಗುತ್ತದೆ.

ನಾವು ಅಕ್ಟೋಬರ್ ೧೨ರಂದು ಶ್ರೀನಗರದ ಇತರ ಪ್ರವಾಸಿ ತಾಣಗಳನ್ನು ಮತ್ತು ವಿವಿಧ ಸರಕಾರಿ ಕಟ್ಟಡಗಳನ್ನು ವೀಕ್ಷಿಸಿದೆವು. ಕೇಂದ್ರ ಮಾರುಕಟ್ಟೆಯನ್ನೂ ನೋಡಿದೆವು. ಶಾಲು, ದೀಪ ಇಡುವ ಮರದ ಸ್ಟಾಂಡ್ ಇತ್ಯಾದಿ ಖರೀದಿಸಿದೆವು. ಅಲ್ಲಿ ದೇಶವಿದೇಶಗಳ ಪ್ರವಾಸಿಗರು ಮುಗಿಬಿದ್ದು ಖರೀದಿಸಲು ಬರುತ್ತಿದ್ದರು. ಕಾಶ್ಮೀರದ ವೀಕ್ಷಣೆಗೆ ಶ್ರೀನಗರದ ಟಿ.ಸಿ.ಐ. ಮೆನೇಜರ್ ಶ್ರೀ ದೇಸಾಯಿಯವರು ನಮಗೆ ಕಾರು ನೀಡಿದ್ದರು. ಅವರಲ್ಲಿ ನಾವು ಮಧ್ಯಾಹ್ನ ಊಟವನ್ನೂ ಮಾಡಿದೆವು. ಆಮೇಲೆ ನಾವು ಮಧ್ಯಾಹ್ನ ೨.೩೦ಕ್ಕೆ ಶ್ರೀನಗರದ ವಿಮಾನ ನಿಲ್ದಾಣಕ್ಕೆ ಬಂದು ವಿಮಾನದಲ್ಲಿ ದೆಹಲಿಗೆ ತಲುಪಿ ಚಿ. ವೆಂಕಟರಮಣನಲ್ಲಿಗೆ ಹೋದೆವು.

ಆ ದಿನ ಸಂಜೆ ನಾವಿದ್ದಲ್ಲಿಗೆ ಬಾಬಣ್ಣ ಬಂದ. ನಾವು ದೆಹಲಿಯ ಚಾರಿತ್ರಿಕ ಕೆಂಪುಕೋಟೆಯನ್ನು ನೋಡಲು ಹೋದೆವು. ಅಲ್ಲಿ ರಾತ್ರಿ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮವಿತ್ತು. ಕತ್ತಲೆ ಮತ್ತು ಬೆಳಕಿನಲ್ಲಿ ನಡೆಯುವ ಈ ಪ್ರದರ್ಶನದಲ್ಲಿ ದೆಹಲಿಯನ್ನು ಆಳಿದ ಮೊಘಲ್ ಸುಲ್ತಾನರ ಅರಮನೆಗಳಲ್ಲಿ ನಡೆಯುತ್ತಿದ್ದ ಸಂಗತಿಗಳು, ಯುದ್ಧ ನಡೆಯುವುದು, ಸುಲ್ತಾನನ ಜನಾನಾದಲ್ಲಿ ಮಹಿಳೆಯರ ಹರ್ಷದ ವಾತಾವರಣ, ಸಂಗೀತ, ಆಮೋದ ಪ್ರಮೋದ, ಇವೆಲ್ಲವೂ ನಮ್ಮ ಅನುಭವಕ್ಕೆ ಬರುವ ರೀತಿಯಲ್ಲಿತ್ತು. ತಂತ್ರಜ್ಞಾನದ ನೆರವಿನಿಂದ ಈ ರೀತಿಯ ಕಾರ್ಯಕ್ರಮದ ವ್ಯವಸ್ಥೆಯನ್ನು ಮಾಡಲಾಗಿದೆ.

ನಾವು ಅಕ್ಟೋಬರ್ ೧೩ರಂದು ಗುರುವಾರದ ದಿನ ನಮ್ಮ ಚಿಕ್ಕಮ್ಮನ ಮಗ ಜನಾರ್ದನ ಭಟ್(ಸಿಂಡಿಕೇಟ್ ಬ್ಯಾಂಕ್‌ನ ಅಧಿಕಾರಿಯಾಗಿದ್ದವರು) ಅವರ ಕುಟುಂಬ ಸಮೇತ ದೆಹಲಿಯಿಂದ ಉದಯಪುರಕ್ಕೆ 'ಚೇತಕ್' ಎಕ್ಸ್‌ಪ್ರೆಸ್‌ನಲ್ಲಿ ಹೊರಟೆವು. ರಾಜಸ್ಥಾನದ ಮೇವಾಡದ ಅರಸನಾದ ಮಹಾ ಪರಾಕ್ರಮಿ, ದೇಶಾಭಿಮಾನಿ ರಾಣಾ ಪ್ರತಾಪಸಿಂಗನ ಕುದುರೆ ಚೇತಕ್. ಮಹಾರಾಣಾ ಪ್ರತಾಪಸಿಂಗನು ದಿಲ್ಲಿ ಚಕ್ರವರ್ತಿ ಅಕ್ಬರನ ಸೈನ್ಯಾಧಿಕಾರಿ ರಾಜಾ ಮಾನಸಿಂಗನ ಸೈನ್ಯದೊಂದಿಗೆ ಯುದ್ಧ ಮಾಡುತ್ತಿರುವಾಗ, ಪ್ರತಾಪಸಿಂಗನನ್ನು ಎತ್ತಿಕೊಂಡು

ತುಂಬಿದ ನದಿಯಲ್ಲಿ ಈಜಾಡಿ ಆಚೆ ದಡವನ್ನು ತಲುಪಿಸಿದ ಪ್ರಖ್ಯಾತ ಕುದುರೆ ಇದು. ಆದರೆ ಯುದ್ಧದಲ್ಲಿ ಅದು ಗಾಯಗೊಂಡಿದ್ದರಿಂದ, ರಾಣಾ ಪ್ರತಾಪ ಸಿಂಗನು ಮೊಗಲ್ ಸೈನ್ಯದೊಂದಿಗೆ ಯುದ್ಧ ಮಾಡುತ್ತಿರುವಾಗಲೇ ಚೇತಕ್ ಕುದುರೆ ಜೀವ ಕಳೆದುಕೊಂಡಿತು. ಈ ನಿಷ್ಠಾವಂತ, ಧೈರ್ಯವಂತ ಕುದುರೆಯ ವಿಗ್ರಹವನ್ನು ಕೆತ್ತಿ ಎತ್ತರದ ಬೆಟ್ಟವೊಂದರ ಮೇಲೆ ಸ್ಥಾಪಿಸಿ ಅದಕ್ಕೆ ಗೌರವ ನೀಡಲಾಗಿದೆ. ಅದರ ಪ್ರಸಿದ್ಧ ಶರವೇಗದ ಕುರಿತು ದಂತಕತೆಯಿರುವುದರಿಂದ ಉದಯಪುರ ರೈಲಿಗೆ 'ಚೇತಕ್ ಎಕ್ಸ್‌ಪ್ರೆಸ್' ಎಂದು ಹೆಸರು ನೀಡಲಾಗಿದೆ.

ನಾವು ಮರುದಿನ, ಅಂದರೆ ಅಕ್ಟೋಬರ್ ೧೪ರಂದು ಬೆಳಗ್ಗೆ ೧೦.೩೦ಕ್ಕೆ ಉದಯಪುರ ತಲುಪಿದೆವು. ಅಲ್ಲಿ ಹೊಟೇಲ್ 'ಉದಯಪುರ'ದಲ್ಲಿ ಕೋಣೆ ಬಾಡಿಗೆಗೆ ಪಡೆದೆವು. ಉದಯಪುರದಲ್ಲಿ ಹೋದೆಡೆಗಳಲೆಲ್ಲಾ ಚಾರಿತ್ರಿಕ ತಾಣಗಳು, ಅರಮನೆಗಳು, ಭವನಗಳು, ಉದ್ಯಾನವನಗಳು ಇವೆ. ಮೊಗಲ್ ಸಾಮ್ರಾಜ್ಯದ ವಿರುದ್ಧ ಯುದ್ಧಗಳನ್ನು ನಡೆಸಿ ಧೈರ್ಯ, ಸ್ಥೈರ್ಯವನ್ನು ತೋರಿ, ಆತ್ಮಬಲಿದಾನ ಮಾಡಿದ ಅದೆಷ್ಟೋ ಸಾಹಸಿ ವೀರ ರಾಜರುಗಳ ರಾಜ್ಯ ರಾಜಸ್ಥಾನ. ಅಲ್ಲಿ ಕಣ್ಣು ಹಾಯಿಸಿದ ಕಡೆಗಳಲೆಲ್ಲಾ ಪ್ರಸಿದ್ಧ ತಾಣಗಳಿವೆ. ಅಂತಹ ರಾಜರ ಸಾಹಸ ಕತೆಗಳನ್ನು ಹೇಳುವ ನಾಟಕ, ದೃಶ್ಯ-ಶ್ರಾವ್ಯ ಕಲೆ, ಜಾನಪದ ಸಂಗೀತ, ನೃತ್ಯಗಳು ಇವೆ. ಅರಮನೆಗಳಲ್ಲಿ ಮತ್ತು ವಸ್ತುಪ್ರದರ್ಶನಾಲಯಗಳಲ್ಲಿ ರಾಜರ, ಸಾಹಸಿ ರಾಣಿಯರ ವರ್ಣಚಿತ್ರಗಳು, ಅವರು ಬಳಸಿದ ಖಡ್ಗ, ಭರ್ಚಿ, ಫಿರಂಗಿ, ತೋಪು ಇತ್ಯಾದಿಗಳನ್ನು ಇಡಲಾಗಿದೆ. ಆನೆ. ಕುದುರೆಗಳಿಗಾಗಿ ಕಟ್ಟಿಸಿದ ಲಾಯಗಳು ಇವೆ. ಅಲ್ಲಿ ಇದನ್ನೆಲ್ಲಾ ಪ್ರವಾಸಿಗರಿಗೆ ತೋರಿಸಲು ಗೈಡುಗಳು ಸಿಗುತ್ತಾರೆ ಮತ್ತು ಈ ಮಾಹಿತಿಯನ್ನು ಒಳಗೊಂಡ ಪುಸ್ತಕಗಳು ಕೂಡ ಲಭ್ಯ ಇವೆ.

ಉದಯಪುರಕ್ಕೆ ತಲುಪಿದ ನಂತರ ನಾವು ಮಧ್ಯಾಹ್ನ 'ಬೊಂಬೆ ಮನೆ'ಗೆ ಹೋದೆವು. ಅಲ್ಲಿ ವಿವಿಧ ರೀತಿಯ ಸುಂದರ ಬೊಂಬೆಗಳನ್ನು ನೋಡಿದೆವು. ಆ ಬೊಂಬೆಗಳನ್ನು ರಾಜಸ್ಥಾನದ ಪುರುಷರು, ಮಹಿಳೆಯರು ಮತ್ತು ಚಿಕ್ಕ ಮಕ್ಕಳು ತೊಡುವ ವಸ್ತ್ರ ಒಡವೆಗಳಿಂದ ಶೃಂಗರಿಸಿ ಇಡಲಾಗಿದೆ. ಅಲ್ಲಿ ನಮಗೆ ರಾಜಸ್ಥಾನಿ ಸಂಸ್ಕೃತಿ, ಉಡುಪು ಧರಿಸುವ ಮಾದರಿ ಕಾಣಲು ಸಿಗುತ್ತದೆ. ಅಲ್ಲದೆ ಹಸ್ತಕಲಾ ಚಿತ್ರಪ್ರದರ್ಶನದಲ್ಲಿ ಗೋಡೆಗೆ ತೂಗಾಡಿಸುವ ವರ್ಣಚಿತ್ರಗಳಿದ್ದವು. ಆ ಪ್ರದರ್ಶನಕ್ಕೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ.

ಆಮೇಲೆ ನಾವು 'ಸಹೇಲಿಯೊಂಕಿ ಬಾರಿ' ಅಥವಾ ರಾಣಿವಾಸವನ್ನು ನೋಡಲು ಹೋದೆವು. ರಾಜಸ್ಥಾನದ ರಾಣಿವಾಸದಲ್ಲಿದ್ದ ರಾಣಿಯರು, ರಾಜಕುಮಾರಿಯರು ತಂಪಾದ ವಾತಾವರಣದಲ್ಲಿ ಇರಬೇಕೆಂದು ಚಂದ್ರಕಾಂತ ಶಿಲೆಯ ಗೋಡೆಗಳು, ನಡುವೆ ನೀರು ಚಿಮ್ಮುವ ಕಾರಂಜಿಗಳು, ಹೂಗಿಡಗಳು ಇತ್ಯಾದಿಗಳು ಇರುವುದರಿಂದ, ಆಗ ಮಹಿಳೆಯರಿಗೆ, ಹೆಣ್ಣುಮಕ್ಕಳಿಗೆ ಈಗಿನ ಹವಾನಿಯಂತ್ರಣವಿರುವ ತಂಪು ವಾತಾವರಣ ಸಿಗುತ್ತಿತ್ತು.

'ಸಹೇಲಿಯೊಂಕಿ ಬಾರಿ'ಯನ್ನು ನೋಡಿದ ಬಳಿಕ ನಾವು ರಾಜಸ್ಥಾನದ ಪ್ರಸಿದ್ಧ ನಾಥದ್ವಾರ ದೇವಾಲಯಕ್ಕೆ ಹೋದೆವು. ಅಲ್ಲಿಯ ದೇವರು ಶ್ರೀನಾಥಜೀ. ತಿರುಪತಿ ವೆಂಕಟೇಶ್ವರ ದೇವಾಲಯದ ಹಾಗೆ ತುಂಬಾ ಪ್ರಸಿದ್ಧವಾಗಿರುವ ದೇವಾಲಯ. ಅಲ್ಲಿಗೆ ನಾವು ಹೋದ ದಿನ ನವರಾತ್ರಿಯ ಅಷ್ಟಮಿಯಾಗಿದ್ದರಿಂದ ವಿಶೇಷ ಜನಜಂಗುಳಿ ಇತ್ತು. ಲಕ್ಷೋಪಲಕ್ಷ ಜನ ಶ್ರೀನಾಥಜೀಯ ದರ್ಶನಕ್ಕೆ ಬಂದಿದ್ದರು. ಭಕ್ತಿಯಿಂದ ದೇವರ ದರ್ಶನ ಮಾಡಿ ಹೋಗುತ್ತಿದ್ದರು. ನಮಗೆ ದೇವಾಲಯದ ಒಳಗೆ ಹೋಗಿ ಆ ಜನಜಂಗಳಿಯಲ್ಲಿ ಶ್ರೀನಾಥಜೀಯ ದರ್ಶನ ಮಾಡಿ ಹೊರಗೆ ಬರುವುದಕ್ಕೆ ತುಂಬಾ ಕಷ್ಟವಾಯಿತು.

ನಾವು ಅಲ್ಲಿಂದ ಉದಯಪುರದ ರಾಣಾ ಕಟ್ಟಿಸಿದ ಶ್ರೀ ಏಕನಾಥಜೀ ಮಂದಿರ, ಶ್ರೀ ವಿಷ್ಣು, ಬ್ರಹ್ಮ, ಮಹೇಶ್ವರ ಮತ್ತು ಸೂರ್ಯ ದೇವಾಲಯಗಳಿಗೆ ಭೇಟಿ ನೀಡಿ ಬಂದೆವು. ಈ ಪ್ರವಾಸಕ್ಕಾಗಿ ಒಂದು ಟ್ಯಾಕ್ಸಿ ಗೊತ್ತು ಮಾಡಿದ್ದೆವು.

ನಾವು ಅಕ್ಟೋಬರ್ ೧೫, ಶನಿವಾರದಂದು ಬೆಳಗ್ಗೆ ಹೊಟೇಲಿನಿಂದ ಹೊರಟು ಮೃಗಾಲಯ ನೋಡಲು ಹೋದೆವು. ನಮ್ಮ ಜೊತೆ ಬಂದಿದ್ದ ಮಕ್ಕಳಿಗೆ ಅದು ತುಂಬಾ ಖುಷಿಯ ವಿಚಾರವಾಯಿತು. ಅಲ್ಲಿಂದ 'ಲೇಕ್ ಪ್ಯಾಲೆಸ್' ನೋಡಲು ಹೋದೆವು. ಕಾರ್ಕಳ ರಾಮಸಮುದ್ರದ ಹಾಗೆ ಒಂದು ವಿಶಾಲವಾದ ದೊಡ್ಡ ಸರೋವರ; ಈ ಸರೋವರದ ನಡುಭಾಗದಲ್ಲಿ ರಾಣಾ ಕಟ್ಟಿಸಿದ ಒಂದು ಅರಮನೆ(ಭವನ). ಅಲ್ಲಿ ರಾಣಾ ಕುಟುಂಬದ ರಾಣಾರು, ಮಹಾರಾಣಿ ಮತ್ತು ರಾಣಿಯರು ಬೇರೆ ಬೇರೆ ಸಂದರ್ಭಗಳಲ್ಲಿ, ಸಮಾರಂಭಗಳಲ್ಲಿ, ಹಬ್ಬದ ದಿನಗಳಲ್ಲಿ ಧರಿಸುತ್ತಿದ್ದ ಜರಿ, ರೇಶ್ಮೆ, ಪಿತಾಂಬರಗಳು, ರಾಜದರ್ಬಾರದ ವೇಷಭೂಷಗಳು, ಯುದ್ಧದ ಸಮಯದಲ್ಲಿ ರಾಣಾರು ಬಳಸಿದ ಖಡ್ಗ, ಗುರಾಣಿ, ಎಲ್ಲವನ್ನೂ ಪ್ರದರ್ಶನಕ್ಕೆ

ಇಡಲಾಗಿದೆ. ಚಿನ್ನ, ವಜ್ರ, ವೈಢೂರ್ಯಗಳ ಕಂಠಾಭರಣಗಳು ಮತ್ತು ಬೇರೆ ಬೇರೆ ಒಡವೆಗಳನ್ನು ನಾವು ಪ್ರದರ್ಶನದಲ್ಲಿ ನೋಡಿದೆವು. ಅದು ನಮಗೆ ವಿಶೇಷ ಅನುಭವವಾಯಿತು.

ನಾವು ಅಲ್ಲಿಂದ ರಾಣಾ ಪ್ರತಾಪ ಸ್ಮಾರಕ ಭವನಕ್ಕೆ ಹೋದೆವು. ಅಲ್ಲಿ ಬೆಟ್ಟದ ಮೇಲೆ ರಾಣಾ ಪ್ರತಾಪನು ತನ್ನ ಕುದುರೆ ಚೇತಕ್ ಮೇಲೆ ರಾಜಠೀವಿಯಲ್ಲಿ ಕುಳಿತಿರುವ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಆ ಬೆಟ್ಟದ ಕೆಳಗೆ ವಿಶಾಲವಾದ ದೊಡ್ಡ ಸರೋವರವಿದೆ. ಅದರ ನಡುವೆ ಒಂದು ದ್ವೀಪ. ಅದರ ಹತ್ತಿರ ಸರಕಾರವು ನೆಹರೂ ಪಾರ್ಕನ್ನು ನಿರ್ಮಿಸಿದೆ. ತುಂಬಾ ಜನರು ಸರೋವರ, ಪಾರ್ಕ್, ಮತ್ತು ಬೆಟ್ಟದ ಮೇಲೆ ಇರುವ ರಾಣಾ ಪ್ರತಾಪಸಿಂಗನ ವಿಗ್ರಹ, ಚೇತಕ್ ಕುದುರೆಯ ವಿಗ್ರಹ ನೋಡಲು ಬರುತ್ತಾರೆ.

ಉದಯಪುರದಲ್ಲಿ ರಾಣಾ ಪ್ರತಾಪ್‌ಸಿಂಹನ ಧೈರ್ಯ, ಸ್ಥೈರ್ಯಗಳು ವೀರಗಾಥೆಗಳಾಗಿ ಜನರ ನಾಲಗೆಯ ಮೇಲೆ ಮತ್ತು ಅವರ ತನುಮನಗಳಲ್ಲಿ ಹರಿಯುತ್ತಿವೆ. ಅಕ್ಬರ್ ಚಕ್ರವರ್ತಿಯ ವಿರುದ್ಧ ನಡೆದ ಯುದ್ಧದಲ್ಲಿ ಶರಣಾಗತಿ ಪಡೆದ ರಾಜಸ್ಥಾನದ ಅನೇಕ ರಜಪೂತ ಅರಸರೊಂದಿಗೆ ಸೇರದೆ, ಒಂಟಿಯಾಗಿ ನಿಂತು, ಅಕ್ಬರ ಚಕ್ರವರ್ತಿಯ ಬೃಹತ್ ಸೈನ್ಯದ ವಿರುದ್ಧ ತಲೆತಗ್ಗಿಸದೆ ಅಸೀಮ ಧೈರ್ಯವಂತನಾಗಿ ತನ್ನ ಬದುಕಿನ ಕೊನೆಯುಸಿರು ಇರುವವರೆಗೆ ಹೋರಾಡಿದ ಮಹಾನ್ ವೀರ ರಾಣಾ ಪ್ರತಾಪಸಿಂಹ.

ನಾವು ಅಕ್ಟೋಬರ್ ೧೬ರಂದು ಉದಯಪುರದಿಂದ ಜೈಪುರಕ್ಕೆ ಪ್ರಯಾಣ ಬೆಳೆಸಿದೆವು. ಜೈಪುರ ಸುಂದರವಾದ ನಗರ. ಅಲ್ಲಿಯ ಕಲ್ಲುಗಳ ಗುಲಾಬಿ ಬಣ್ಣದಿಂದಾಗಿ ಅದಕ್ಕೆ ಗುಲಾಬಿ ಪಟ್ಟಣವೆಂಬ(ಪಿಂಕ್ ಸಿಟಿ) ಹೆಸರು ಬಂದಿದೆ. ಅಲ್ಲಿ ನಾವು ಸರಕಾರದ ಗೆಸ್ಟ್ ಹೌಸ್‌ನಲ್ಲಿ ತಂಗಿದೆವು. ಅದು ಚೆನ್ನಾಗಿತ್ತು. ಆರು ಜನರು ಕುಳಿತುಕೊಳ್ಳಬಹುದಾದ ಟ್ಯಾಕ್ಸಿ ಗೊತ್ತುಪಡಿಸಿ ಊರಿನ ವೀಕ್ಷಣೆಗೆ ಹೊರಟೆವು.

ಜೈಪುರದ ಹಿಂದಿನ ಅರಸ ಸವಾಯ್ ಮಾನಸಿಂಹನು ಖಗೋಲ ಶಾಸ್ತ್ರಜ್ಞನಾಗಿದ್ದನು. ಅವನು ಸೂರ್ಯನ ಚಲನೆಯನ್ನು ಆಧರಿಸಿ ಸಮಯವನ್ನು ಕಂಡುಕೊಳ್ಳ ಬಹುದಾದ 'ಜಂತರ ಮಂತರ' ಎಂಬ ಗಡಿಯಾರವನ್ನು ಕಲ್ಲಿನ ಮೇಲೆ ನಿರ್ಮಿಸಿದ್ದಾನೆ. ಅದರಲ್ಲಿ ಗಂಟೆ, ನಿಮಿಷ, ಸೆಕೆಂಡ್‌ಗಳು ಕರಾರುವಾಕ್ಕಾಗಿ ಕಾಣಿಸುತ್ತವೆ. ಆ ಕಾಲದಲ್ಲಿಯೇ ಅವನು ಓರ್ವ ವಿಶೇಷ ಚತುರ ತಂತ್ರಜ್ಞನಾಗಿದ್ದನು. ಈ ಕಾರಣದಿಂದಾಗಿಯೇ ಅವನಿಗೆ ಸವಾಯ ಮಾನಸಿಂಹ ಎಂಬ ಹೆಸರು ಬಂದಿತ್ತು. ಅವನು ಹದಿನೆಂಟನೆಯ ಶತಮಾನದಲ್ಲಿ ಐದು ಪಟ್ಟಣಗಳಲ್ಲಿ ಜಂತರ ಮಂತರ ಗಡಿಯಾರಗಳನ್ನು ನಿರ್ಮಿಸಿದ್ದಾನೆ. ಇದರಲ್ಲಿ ಒಂದು ದೆಹಲಿಯಲ್ಲಿಯೂ ಇದೆ. ಅವನಿಗೆ 'ಸವಾಯ ಮಾನಸಿಂಹ' ಎಂಬ ಬಿರುದು ನೀಡಿದವನು ಅಕ್ಬರ್ ಚಕ್ರವರ್ತಿ.

ಅಲ್ಲಿಂದ ನಾವು 'ಗಾಯತೋರ ಗಾರ್ಡನ್' ನೋಡಲು ಹೋದೆವು. ಜೈಪುರದ ರಾಣಿ ಗಾಯತ್ರೀದೇವಿ ಬಹಳ ಚೆಲುವೆ. ಅವಳ ಸೌಂದರ್ಯ ಜಗದ್ವಿಖ್ಯಾತ. ಜೈಪುರದ ಹೊರಭಾಗದಲ್ಲಿ ಅವಳ ನೇಯ್ಗೆ ಕಾರ್ಖಾನೆ ಇದೆ. ಅಲ್ಲಿ ಅನೇಕ ಆಕರ್ಷಣೀಯ ವಸ್ತುಗಳನ್ನು ಮಾರಾಟಕ್ಕೆ ಇಡಲಾಗಿದೆ. ನಾವು ಕೆಲವು ವಸ್ತುಗಳನ್ನು, ರತ್ನಗಂಬಳಿಯನ್ನು ಖರೀದಿಸಿದೆವು. ಮುಂಗಡವಾಗಿ ಶೇಕಡಾ ೪೦ರಷ್ಟು ಹಣ ನೀಡಿದರೆ, ನಾವು ಖರೀದಿಸಿದ ವಸ್ತುಗಳನ್ನು ನಮಗೆ ವಿಪಿಪಿ ಮೂಲಕ ಅವರು ಊರಿಗೆ ಕಳುಹಿಸಿಕೊಡುತ್ತಾರೆ.

ಅನಂತರ ರಾಜಾ ಜಯಸಿಂಗನು ಕಟ್ಟಿಸಿದ 'ಅಂಬರ' ಅರಮನೆಯನ್ನು ಕಾಣಲು ಹೋದೆವು. ಅಲ್ಲಿ ಬಹು ಸುಂದರವಾದ 'ಶೀಷ್ ಮಹಲ್' ಇದೆ. ಕೆಳಗೆ ಕೇಸರಿಬಾಗ್ ಮತ್ತು ವಿಶಾಲವಾದ ಸರೋವರವೂ ಇದೆ. ಜೈಪುರದಲ್ಲಿ ವಿಶೇಷವಾಗಿ ಪ್ರಸಿದ್ಧವಾಗಿರುವುದು ಹವಾಮಹಲ್. ಈ ಅರಮನೆಯಲ್ಲಿ ಅಸಂಖ್ಯಾತ ಕೋಣೆಗಳು ಇವೆ. ಬೀದಿಗಳಲ್ಲಿ, ಮತ್ತು ಕಾಲುದಾರಿಗಳಲ್ಲಿ ನಡೆದು ಹೋಗುವವರನ್ನು, ಸೈನಿಕರ ಪಥಃಚಲನ, ಮೆರವಣಿಗೆ ಇತ್ಯಾದಿಗಳನ್ನು ನೋಡಲು ರಾಣಿಯರಿಗೆ ಅನುಕೂಲವಾಗುವಂತೆ ಈ ಅರಮನೆಯ ಮಾಳಿಗೆಗಳ ಕೋಣೆಗಳ ಕಿಟಕಿಗಳನ್ನು ನಿರ್ಮಿಸಲಾಗಿದೆ. ಅತೀ ಸುಂದರವಾದ ವಾಸ್ತುಶೈಲಿಯ ಕಟ್ಟಡವಿದು. ಸಂಪೂರ್ಣವಾಗಿ ಗುಲಾಬಿ ಬಣ್ಣದ ಕಲ್ಲಿನಿಂದ ನಿರ್ಮಿಸಿರುವುದು.

ಆಮೇಲೆ ನಾವು ರಾಮ ನಿವಾಸ ಗಾರ್ಡನ್ ಮತ್ತು ಚಿಡಿಯಾಂ ಘರ್ (ಹಕ್ಕಿಗಳ ಮನೆ) ನೋಡಿದೆವು. ಚಿಡಿಯಾಂ ಘರ್‌ನಲ್ಲಿ ವಿವಿಧ ಜಾತಿಗಳ, ರಂಗುರಂಗಿನ ವರ್ಣಮಯ ಸಣ್ಣ ದೊಡ್ಡ ಹಕ್ಕಿಗಳು ನೈಸರ್ಗಿಕ ರೀತಿಯ ಪರಿಸರದಲ್ಲಿ ಸ್ವಚ್ಛಂದವಾಗಿ ತಿರುಗಾಡಿ, ಹಾರಾಡಿಕೊಂಡಿದ್ದವು. ದೇಶವಿದೇಶಗಳಿಂದ ತಂದಿರುವ ಪ್ರಾಣಿಗಳು ಕೂಡ ಅಲ್ಲಿ ಕಾಣಲು ಸಿಗುತ್ತವೆ. (ಕರ್ನಾಟಕದ ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿರುವ ಹಾಗೆ.)

ನಾವು ಅಕ್ಟೋಬರ್ ೧೭ರ ಮುಂಜಾನೆ ಮದ್ರಾಸ್ ಕೆಫೆಯಲ್ಲಿ ಉಪಹಾರ ಸೇವಿಸಿ, ಆ ನಗರದ ನಡುಭಾಗದಲ್ಲಿರುವ ಅರಮನೆಯನ್ನು ನೋಡಲು ಹೋದೆವು. ಅದು ಭಾರತೀಯ ಮತ್ತು ಮೊಗಲ್ ವಾಸ್ತುಶೈಲಿಯಲ್ಲಿದ್ದು ಬಹಳ ಸುಂದರವಾಗಿದೆ. ಸ್ವಚ್ಛತೆಯನ್ನು ಕಾಪಾಡಿಕೊಂಡು ಅದನ್ನು ಬಹಳ ನಿರ್ಮಲವಾಗಿ ಇಡಲಾಗಿದೆ. ಆಮೇಲೆ ನಾವು ದೆಹಲಿಗೆ ಹೋಗುವ ಬಸ್ ಹತ್ತಿಕೊಂಡು ಸಂಜೆ ಐದು ಗಂಟೆಗೆ ದೆಹಲಿ ತಲುಪಿದೆವು.

ಮರುದಿನ, ಅಂದರೆ ಅಕ್ಟೋಬರ್ ೧೮, ರಮ್ಜಾನದ ರಜಾದಿನ. ವೆಂಕಟರಮಣ ನಮಗೆ ಒಂದು ಕಾರು ನೀಡಿದ್ದರಿಂದ ನಾವು ಮಧ್ಯಾಹ್ನ ೧ ಗಂಟೆಗೆ ಊಟ ಮಾಡಿ ಹರಿದ್ವಾರ, ಹೃಷಿಕೇಶದ ಪ್ರವಾಸಕ್ಕೆ ಹೊರಟೆವು. ನಮ್ಮೊಂದಿಗೆ ಜನಾರ್ದನ ಭಟ್(ಜನ್ನೂ) ಇದ್ದನು. (ನಾವು ಹರಿದ್ವಾರ ನೋಡಿ, ಊರಿಗೆ ಬರುವಷ್ಟರಲ್ಲಿ ಅವನಿಗೆ ಸಿಂಡಿಕೇಟ್ ಬ್ಯಾಂಕ್ ಹರಿದ್ವಾರ ಶಾಖೆಗೆ ಮೆನೆಜರ್ ಆಗಿ ನೇಮಕಾತಿಯಾದುದು ಒಂದು ಆಕಸ್ಮಿಕ.) ದಾರಿಯಲ್ಲಿ ಮೀರತ್, ರೂರ್ಕಿ ಪಟ್ಟಣಗಳಾದ ಅನಂತರ ಸಂಜೆ ೬.೩೦ಕ್ಕೆ ಹರಿದ್ವಾರವನ್ನು ತಲುಪಿದೆವು. ಆಗ ಕತ್ತಲೆಯಾಗಿದ್ದರಿಂದ ನಮಗೆ ಸಿಂಡಿಕೇಟ್ ಬ್ಯಾಂಕ್‌ನ್ನು ಹುಡುಕುವುದು ಸ್ವಲ್ಪ ಕಷ್ಟವಾಯಿತು. ಹೀಗಾಗಿ ನಾವು ಮೆನೆಜರ್ ಶ್ರೀ ಕೆ.ಜೆ. ಭಟ್‌ರ ಮನೆಗೆ ಹೋದೆವು ಅವರ ಮನೆ ಹರಿದ್ವಾರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ಇತ್ತು. ಅವರು ಹೊರಗೆ ಹೋಗಿದ್ದರಿಂದ ನಾವು ಅಲ್ಲಿಯ ಆಶ್ರಮದ ಸ್ವಾಮಿಗಳನ್ನು ಭೇಟಿಯಾದೆವು. ನಾವು ಕೊಂಕಣಿ ಭಾಷೆಯಲ್ಲಿ ಮಾತನಾಡುವುದನ್ನು ಕೇಳಿ ಸ್ವಾಮೀಜಿ ನಮ್ಮಲ್ಲಿ ಕೊಂಕಣಿಯಲ್ಲಿಯೇ ಮಾತನಾಡಿದರು. ಅವರು ಪೂರ್ವಾಶ್ರಮದಲ್ಲಿ ಸುಜೀರ್ ಕುಟುಂಬದವರು. ಅವರ ಸೋದರಿಯನ್ನು ಬಂಟವಾಳಕ್ಕೆ ಮದುವೆ ಮಾಡಿಕೊಡಲಾಗಿತ್ತು. ಸ್ವಾಮೀಜಿಯವರು ತಮ್ಮ ಶಾಲಾ ದಿನಗಳಲ್ಲಿ ಬಂಟವಾಳಕ್ಕೆ ಹೋಗಿ ಬರುತ್ತಿದ್ದರಿಂದ ಅವರಿಗೆ ನನ್ನ ತಂದೆಯವರ ಪರಿಚಯ, ನಮ್ಮ ಮನೆ ನೇತ್ರಾವತಿ ನದಿ ತೀರದಲ್ಲಿ ಇದ್ದುದು ಗೊತ್ತಿತ್ತು. ಅವರು ನಮ್ಮೊಂದಿಗೆ ಬಂಟವಾಳದ ಕುರಿತು ತುಂಬಾ ಮಾತನಾಡಿದರು. ನಮಗೆ ಕುಡಿಯಲು ಬಿಸಿ ಹಾಲು, ತಿನ್ನಲು ಸೇಬು ಇತ್ಯಾದಿ ಫಲವಸ್ತುಗಳನ್ನು ನೀಡಿದರು. ಅಲ್ಲಿ ಹಸುಗಳ ದೊಡ್ಡ ಕೊಟ್ಟಿಗೆ ಇದೆ. ಮುಂಜಾನೆ ಐದು ಗಂಟೆಗೆ ಆಶ್ರಮದಿಂದ ಸುಮಾರು ೪೦೦-೫೦೦ ಜನರಿಗೆ ಒಂದೊಂದು ತಂಬಿಗೆ ಹಾಲು ಉಚಿತವಾಗಿ ಹಂಚಲಾಗುತ್ತದೆ. ಆಶ್ರಮದ ಉಸ್ತುವಾರಿಯಲ್ಲಿ ಶಾಲೆ, ಕಾಲೇಜುಗಳನ್ನು ನಡೆಸಲಾಗುತ್ತದೆ.

ನಾವು ಆಶ್ರಮದಲ್ಲಿದ್ದಾಗ ಕೆ.ಜೆ. ಭಟ್ ಬಂದು ನಮ್ಮನ್ನು ಅವರ ಮನೆಗೆ ಕರೆದುಕೊಂಡು ಹೋದರು. ಅವರ ಪತ್ನಿಯೂ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಅವರ ತಂದೆ, ತಾಯಿಯೂ ಅವರ ಜೊತೆ ಅದೇ ಮನೆಯಲ್ಲಿದ್ದರು. ಆದರೂ ಅವರು ದೊಡ್ಡ ಮನಸ್ಸು ಮಾಡಿ ನಮಗೆ ರಾತ್ರಿಯೂಟ ಮತ್ತು ಮಲಗಲು ಅವರ ಮನೆಯಲ್ಲಿಯೇ ವ್ಯವಸ್ಥೆ ಮಾಡಿದರು.

ಅಕ್ಟೋಬರ್ ೧೯ರಂದು ನಮ್ಮ ಬಿಡುವಿಲ್ಲದ ತಿರುಗಾಟ ಪ್ರಾರಂಭವಾಯಿತು. ಭಾರತದೇಶದ ಅತ್ಯಂತ ಪವಿತ್ರ ಕ್ಷೇತ್ರ ಹರಿದ್ವಾರ. ನಾವು ಬೆಳಗ್ಗೆ ಗಂಗಾನದಿಯಲ್ಲಿ ಸ್ನಾನ ಮಾಡಿ 'ಹರ್ ಕೀ ಪೌರಿ'ಗೆ ಹೋದೆವು. ಅಲ್ಲಿ ಸಾವಿರಾರು ಯಾತ್ರಿಕರು ನದಿಯಲ್ಲಿ ಸ್ನಾನ ಮಾಡಿ ಪುನೀತರಾದ ಭಾವನೆಯಿಂದ ಮರಳುತ್ತಿದ್ದರು. ಅಲ್ಲಿ ಒಂದು ಬೆಟ್ಟವಿದೆ. ಆ ಬೆಟ್ಟದ ಮೇಲೆ ಮಾನಸಾ ದೇವಿಯ ಗುಡಿ ಇದೆ. ತಿರುಪತಿಕ್ಷೇತ್ರದ ಹಾಗೆ ಬಹು ಎತ್ತರದಲ್ಲಿರುವ ಆ ಬೆಟ್ಟದ ಮೇಲೆ ಕಾಲ್ನಡಿಗೆಯಲ್ಲಿಯೇ ಸಾಗುವ ಭಕ್ತರಿದ್ದಾರೆ. ಆದರೂ ನಾವು ರೋಪ್‌ವೇಯಲ್ಲಿ ಕುಳಿತು ಬೆಟ್ಟ ಹತ್ತಿ ಶ್ರೀ ದೇವಿಯ ದರ್ಶನ ಮಾಡಿ ಬಂದೆವು. ಕೆಳಗೆ ಬಂದ ಬಳಿಕ 'ಭಾರತಮಾತಾ ಭವನ' ನೋಡಲು ಹೋದೆವು. ಅದು ಏಳು ಮಹಡಿಗಳ ಅತಿ ಸುಂದರ ಭವ್ಯ ಭವನ. ಅದರ ಒಂದೊಂದು ಮಹಡಿಯಲ್ಲಿ ಒಂದೊಂದು ವಿಶೇಷವಿದೆ. ಒಂದು ಮಹಡಿಯಲ್ಲಿ ದೇವರ ವಿಗ್ರಹಗಳು, ಇನ್ನೊಂದು ಮಹಡಿಯಲ್ಲಿ ದೇವಿಯರ ವಿಗ್ರಹಗಳು, ಮೇಲೆ ಇರುವ ಮಹಡಿಗಳಲ್ಲಿ ರಾಷ್ಟ್ರ ಪುರುಷರ ವಿಗ್ರಹಗಳು, ಹೀಗೆ ಅಲ್ಲಿ ಬೇರೆ ಬೇರೆ ಮಹಡಿಗಳಲ್ಲಿ ವಿವಿಧ ವಿಗ್ರಹಗಳನ್ನು ಸ್ಥಾಪಿಸಲಾಗಿದೆ.

ಮಹಾಭಾರತ ಮಹಾಕಾವ್ಯವನ್ನು ರಚಿಸಿದ ಶ್ರೀ ವೇದವ್ಯಾಸ ಮುನಿ ಶ್ರೀ ಕಾಶೀಮಠ ಸಂಸ್ಥಾನದ ಆರಾಧ್ಯ ದೇವರು. ವೇದವ್ಯಾಸರಿಗೆ ದೇಶದಲ್ಲಿ ಎಲ್ಲಿಯೂ ಗುಡಿ ಇಲ್ಲದ್ದರಿಂದ ಶ್ರೀ ಕಾಶೀಮಠ ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಶ್ರೀ ವೇದವ್ಯಾಸರಿಗೆ ಹರಿದ್ವಾರದಲ್ಲಿ ದೇವಾಲಯವನ್ನು ನಿರ್ಮಿಸುವ ನಿರ್ಧಾರ ಕೈಗೊಂಡಿದ್ದರು. ಈ ಉದ್ದೇಶಕ್ಕಾಗಿ ಹರಿದ್ವಾರ ಕ್ಷೇತ್ರದಲ್ಲಿ ಸಪ್ತಋಷಿ ಆಶ್ರಮವಿರುವ ಕಡೆ ಅಲ್ಲಿಯ ಟ್ರಸ್ಟಿನ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಗಂಗಾನದಿ ತೀರದಲ್ಲಿ ೭ ಎಕ್ರೆ ಜಾಗವನ್ನು ಖರೀದಿಸಿ, ೧೯೭೭ರಲ್ಲಿ ಬಂಟವಾಳದಲ್ಲಿ ಶ್ರೀ ಗುರುವರ್ಯರ

ಚಾತುರ್ಮಾಸ ವ್ರತದ ದಿನಗಳಲ್ಲಿ ಶ್ರೀ ಗುರುವರ್ಯರು ಸಮಸ್ತ ಶಿಷ್ಯವೃಂದಕ್ಕೆ ಶ್ರೀ ವೇದವ್ಯಾಸ ಮಂದಿರ, ಅಲ್ಲಿ ಶ್ರೀ ವೇದವ್ಯಾಸರ ಮತ್ತು ಅವರ ನಾಲ್ವರು ಶಿಷ್ಯರುಗಳ(ಪೈಲಿ, ವೈಶಂಪಾಯನ, ಜೈಮಿನಿ, ಸುಮಂತು) ವಿಗ್ರಹ ಪ್ರತಿಷ್ಠಾಪನೆ, ಮತ್ತು ಭೇಟಿ ನೀಡುವ ಭಕ್ತಜನರಿಗೆ ಮತ್ತು ಶಿಷ್ಯವರ್ಗಕ್ಕೆ ಹರಿದ್ವಾರದಲ್ಲಿ ಉಳಕೊಳ್ಳುವ ವ್ಯವಸ್ಥೆ ನಡೆಸಲು ಮಠದ ಸ್ಥಾಪನೆ ಮಾಡುವ ವಿಷಯವನ್ನು ಬಹಿರಂಗಪಡಿಸಿದ್ದರು ಮತ್ತು ಸಪ್ತಋಷಿ ಆಶ್ರಮದ ಹತ್ತಿರ ೭ ಎಕರೆ ಜಾಗ ಖರೀದಿಸಿದ ವಿಷಯವನ್ನೂ ತಿಳಿಸಿದ್ದರು.

ಹೀಗಾಗಿ ನಾವು ಹರಿದ್ವಾರಕ್ಕೆ ಹೋದ ಸಂದರ್ಭದಲ್ಲಿ ಆ ಜಾಗ ನೋಡಲು ಹೋದೆವು. ಆಗ ನಿರ್ಮಾಣ ಕಾರ್ಯವಿನ್ನೂ ಪ್ರಾರಂಭವಾಗಿರಲಿಲ್ಲ. ಆದರೂ ನಮಗೆ ಶ್ರೀ ವೇದವ್ಯಾಸ ಮಂದಿರವಾಗುವ ಜಾಗವನ್ನು ನೋಡಿದ ಸಂತೋಷ ಸಿಕ್ಕಿತು.

ಅಲ್ಲಿಂದ ನಾವು ಲಕ್ಷ್ಮಣ ಝೂಲಾ ನೋಡಲು ಹೋದೆವು. ಬಳಿಕ ಹೃಷಿಕೇಶ ಆಶ್ರಮವನ್ನು ನೋಡಿದೆವು. ಅಲ್ಲಿ ಧಾರ್ಮಿಕ ಕಾರ್ಯಗಳಿಗೆ ಬೇಕಾಗುವ ಕೆಲವು ವಸ್ತುಗಳನ್ನು ಖರೀದಿಸಿದೆವು. ಶ್ರೀ ಗೀತಾಶ್ರಮ, ಸ್ವರ್ಗಾಶ್ರಮಗಳನ್ನು ನೋಡಿದೆವು. ಹಿಂದೂಸ್ಥಾನದ ವಿವಿಧೆಡೆಗಳಿಂದ ಲಕ್ಷಾಂತರ ಭಕ್ತಜನರು ಅಲ್ಲಿಗೆ ಬಂದು ಗಂಗಾ ಸ್ನಾನ ಮಾಡಿ ಪುಣ್ಯ ಸಂಪಾದಿಸಿದ ಸಂತೃಪ್ತ ಭಾವನೆಯನ್ನು ಹೃದಯದಲ್ಲಿ ತುಂಬಿಕೊಳ್ಳುತ್ತಿದ್ದರು.

ನಾವು ಅಕ್ಟೋಬರ್ ೨೧ರಂದು ದೆಹಲಿಯಲ್ಲಿ ಜನ್ನೂ ಭಟ್ ಕೆಲಸ ಮಾಡುವ ಶಾಖೆ, ಭಾರತಪಿತ ಮಹಾತ್ಮಾ ಗಾಂಧೀಜಿಯವರ ಸಮಾಧಿ(ರಾಜಘಾಟ್), ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿ ಶ್ರೀ ಪಂಡಿತ ಜವಾಹರಲಾಲ್ ನೆಹರೂ ಸಮಾಧಿ(ಶಾಂತಿವನ) ಮತ್ತು ಲಾಲಬಹಾದ್ದೂರ್ ಶಾಸ್ತ್ರಿಯವರ ಸಮಾಧಿ ಇರುವ ವಿಜಯ್ ಘಾಟ್ ಸಂದರ್ಶಿಸಿದೆವು. ಗಾಂಧಿ ಸ್ಮಾರಕ ಭವನಕ್ಕೆ ಹೋಗಿ ಗಾಂಧೀಜಿಯವರ ಮೂರ್ತಿ, ಮತ್ತು ಕೆಲವು ಪುಸ್ತಕಗಳನ್ನು, ಸ್ಮರಣಿಕೆಗಳನ್ನು ಖರೀದಿಸಿದೆವು. ಆಮೇಲೆ ಕೆಂಪು ಕೋಟೆ, ಜಾಮಾ ಮಸ್ಜಿದ್, ಕುತುಬ್ ಮಿನಾರ್ ನೋಡಿ, ಬಳಿಕ ಸರೋಜಿನಿ ಮಾರ್ಕೆಟಿಗೆ ಹೋಗಿ ಚಿ. ಮಾಧವ, ಚಿ. ದಿನ್ನು ಮತ್ತು ಚಿ. ಪ್ರಿಯಾಂಕಾಳಿಗೆ ಬಟ್ಟೆ ಖರೀದಿ ಮಾಡಿದೆವು.

ಮಹಾತ್ಮಾ ಗಾಂಧಿ ವಸ್ತುಸಂಗ್ರಹಾಲಯವು ನೋಡಲೇ ಬೇಕಾದ ರೀತಿಯದು. ಅದನ್ನು ತುಂಬಾ ಸ್ವಚ್ಛವಾಗಿ ಮತ್ತು ವ್ಯವಸ್ಥಿತವಾಗಿ ಇಡಲಾಗಿದೆ. ಅಲ್ಲಿ ಮಹಾತ್ಮಾಗಾಂಧಿಯವರು ರವೀಂದ್ರನಾಥ ಠಾಗೋರ ಮತ್ತು ಬರ್ನಾಡ್ ಶಾರ ಜೊತೆ ಕುಳಿತು ಹರಟೆ ಹೊಡೆಯುವ ಚಿತ್ರವಿದೆ. ಬಿರ್ಲಾ ಕುಟುಂಬದವರು ದೇಶದ ಬೇರೆ ಬೇರೆ ನಗರಗಳಲ್ಲಿ ನಿರ್ಮಿಸಿದಂತೆ ದೆಹಲಿಯಲ್ಲಿಯೂ ಶ್ರೀ ಲಕ್ಷ್ಮೀನಾರಾಯಣ ದೇವಾಲಯುವನ್ನು ನಿರ್ಮಿಸಿದ್ದಾರೆ. ಇದು ಬಿರ್ಲಾ ಮಂದಿರವೆಂದೇ ಪ್ರಸಿದ್ಧವಾಗಿದೆ. ಮೌನವಾಳುವ ಈ ದೇವಾಲಯದೊಳಗೆ ದೇವರುಗಳ ವಿಗ್ರಹಗಳು ತುಂಬಾ ಸುಂದರವಾಗಿ ಮತ್ತು ಆಕರ್ಷಕವಾಗಿ ಇವೆ. ಈ ಕಟ್ಟಡಕ್ಕೆ ಬಿಳಿ ಚಂದ್ರಶಿಲೆಯನ್ನು ಬಳಸಲಾಗಿದೆ. ದೆಹಲಿಗೆ ಬಂದವರು ಬಿರ್ಲಾ ಮಂದಿರಕ್ಕೆ ಭೇಟಿ ನೀಡದೆ ಹೋಗುವುದಿಲ್ಲ. ಅಲ್ಲಿಯ ಶಾಂತ ವಾತಾವರಣ ಭಕ್ತರ ಮನಸ್ಸಿಗೆ ಪ್ರಸನ್ನತೆಯನ್ನು ನೀಡುತ್ತದೆ. ದೆಹಲಿಯ ಕೆಂಪು ಕೋಟೆಯು ಭವ್ಯ, ಆಕರ್ಷಕ ಮತ್ತು ಸದೃಢ ಕಟ್ಟಡಗಳ ಸಮುಚ್ಚಯ. ಅದನ್ನೂ ನೋಡಿ ಮನೆಗೆ ಬಂದೆವು.

ಮರುದಿನ ಬಾಬಣ್ಣ ಕಾರಿನ ವ್ಯವಸ್ಥೆ ಮಾಡಿ ನಮ್ಮನ್ನು ಆಗ್ರಾ ಪ್ರವಾಸಕ್ಕೆ ಕರೆದೊಯ್ದನು. ನಮ್ಮ ಈ ಪ್ರವಾಸವು ಯಶಸ್ವಿಯಾಗಲು ಬಾಬಣ್ಣ ತುಂಬಾ ಶ್ರಮ ಪಟ್ಟಿದ್ದಾನೆ. ತುಂಬ ಹಣವನ್ನೂ ಖರ್ಚು ಮಾಡಿದ್ದಾನೆ. ನಾವು ವೆಂಕಟರಮಣನ ಮನೆಯಿಂದ ಬೆಳಗ್ಗೆ ೮ ಗಂಟೆಗೆ ಬಾಬಣ್ಣ ತಂದ ಕಾರಿನಲ್ಲಿ ಹೊರಟೆವು. ಆಗ್ರಕ್ಕೆ ಹೋಗುವಾಗ ಮಥುರಾ ಕ್ಷೇತ್ರ ಸಿಗುತ್ತದೆ. ಅಲ್ಲಿಯ ಶ್ರೀ ಕೃಷ್ಣ ದೇವಾಲಯವು ಭವ್ಯವಾಗಿದೆ; ಶ್ರೀ ಕೃಷ್ಣನ ಮೂರ್ತಿಯು ಸುಂದರವಾಗಿ, ಭಕ್ತರನ್ನು ಆಕರ್ಷಿಸುವ ರೀತಿಯಲ್ಲಿದ್ದು, ಭಕ್ತರ ಹೃದಯದಲ್ಲಿ ಧನ್ಯತಾ ಭಾವವನ್ನು ಮೂಡಿಸುತ್ತದೆ. ಇಲ್ಲಿ ಗೈಡ್‌ಗಳು ದೊರೆಯುತ್ತಾರೆ. ಅವರು ನಮ್ಮನ್ನು ಕರೆದುಕೊಂಡು ಹೋಗಿ ಶ್ರೀ ಕೃಷ್ಣ ಪರಮಾತ್ಮ ಹುಟ್ಟಿದ್ದು, ಕಾರಾಗೃಹದಲ್ಲಿ ಇದ್ದದ್ದು, ಬೆಳೆದದ್ದು ಹೀಗೆ ಪುರಾಣದಲ್ಲಿ ಉಲ್ಲೇಖಿತವಾಗಿರುವ ಎಲ್ಲಾ ಜಾಗಗಳನ್ನು ತೋರಿಸುತ್ತಾರೆ. ಅವರಿಗೆ ಹಣ ನೀಡಬೇಕು. ಇಲ್ಲಿಯೂ ಬಿರ್ಲಾ ಮನೆತನದವರು ತುಂಬಾ ಹಣ ಖರ್ಚು ಮಾಡಿ ಭವನ ಮತ್ತು ಮೂರ್ತಿಗಳನ್ನು ನಿರ್ಮಿಸಿದ್ದಾರೆ.

ಮಥುರಾದಿಂದ ಮರಳಿ ಹೋಗುವಾಗ ಆಗ್ರಾದ ಬಳಿ ಸಿಕಂದರ ಲೋದಿಯ ಅರಮನೆ ಇದೆ. ಅದು ಸಿಕಂದರ ಲೋದಿಯು ಮೊಗಲ್ ರಾಜರು ಭಾರತಕ್ಕೆ ಬರುವ ಮೊದಲೇ ಕಟ್ಟಿಸಿದ್ದ ಭವ್ಯ ಮತ್ತು ಮಜಬೂತಾಗಿರುವ ಅರಮನೆ. ಅನಂತರ ನಾವು ಆಗ್ರಾ ಕೋಟೆಯನ್ನು ನೋಡಿದೆವು. ಆ ಮೇಲೆ

ಜಗತ್ತಿನಲ್ಲಿಯೇ ಅತ್ಯಂತ ಸುಂದರ ನಿರ್ಮಿತಿಯೆಂದು ಪ್ರಸಿದ್ಧವಾಗಿರುವ ತಾಜಮಹಲ್ ನೋಡಲು ಹೋದೆವು. ಇದನ್ನು ಮೊಗಲ ಅರಸ ಷಾಹಜಹಾನನು ತನ್ನ ಪ್ರೀತಿಯ ಪತ್ನಿ ಮುಮ್ತಾಜಳ ನೆನಪಿಗಾಗಿ ಕಟ್ಟಿಸಿದ್ದಾನೆ. ಅಲ್ಲಿ ಅವಳ ಸಮಾಧಿ ಇದೆ. ಇದನ್ನು ಕಾಣಲು ದೇಶವಿದೇಶಗಳಿಂದ ಲಕ್ಷಾಂತರ ಪ್ರವಾಸಿಗರು ಬರುತ್ತಾರೆ. ಅದರಲ್ಲಿಯೂ ಹುಣ್ಣಿಮೆಯ ರಾತ್ರಿ ಚಂದ್ರಮನ ಶೀತಲ ಕಿರಣಗಳು ತಾಜಮಹಲಿನ ಮೇಲೆ ಬಿದ್ದಾಗ ಅದು ಇನ್ನೂ ಸುಂದರವಾಗಿ ಮತ್ತು ಮನೋಹರವಾಗಿ ಕಾಣುತ್ತದೆ. ಇದರಿಂದಾಗಿ ನಾವು ಹೋದಾಗ ಸಂಜೆಹೊತ್ತು ಜನಜಂಗುಳಿ ಬಹಳ ಇತ್ತು. ನಾವು ಸ್ವಲ್ಪ ಬೇಗನೆ ಹೊರಟು ಅಲ್ಲಿಂದ ದೆಹಲಿಗೆ ಬಂದೆವು. ನಮಗೆ ತಾಜಮಹಲಿನ ವೀಕ್ಷಣೆಯು ತುಂಬಾ ಸಂತೋಷದ ಅಪೂರ್ವ ಸಂದರ್ಭವಾಗಿತ್ತು. ಆ ಪ್ರವಾಸವನ್ನು ನಾನು ಈ ಜನ್ಮದಲ್ಲಿ ಮರೆಯುವಂತಿಲ್ಲ.

ನೇಪಾಳದಲ್ಲಿ

ನಾನು ಮತ್ತು ಸಾವಿತ್ರಿ ಅಕ್ಟೋಬರ್ ೨೨ ರಂದು, ಮಾಧವ ಮತ್ತು ದಿನೇಶರನ್ನು ವೆಂಕಟರಮಣನ ಮನೆಯಲ್ಲಿ ಬಿಟ್ಟು ನೇಪಾಳಕ್ಕೆ ಹೊರಟೆವು. ದೆಹಲಿ ವಿಮಾನ ನಿಲ್ದಾಣದಿಂದ ಬೆಳಗ್ಗೆ ೯.೩೦ಕ್ಕೆ ಹೊರಟು, ೧೧ ಗಂಟೆಗೆ ಕಟ್ಮಂಡು ತಲುಪಿದೆವು. ಅಲ್ಲಿ ನಾನು ಸಾವಿತ್ರಿಯ ಬಳಿ ಕೊಂಕಣಿಯಲ್ಲಿ ಮಾತನಾಡುವುದನ್ನು ಕೇಳಿದ ಒಬ್ಬ ಮಹಿಳೆ ನಮ್ಮ ಹತ್ತಿರ ಬಂದು ತಾನು ವೇದಮೂರ್ತಿ ಶ್ರೀ ಅನಂತಕೃಷ್ಣ ಶಾಸ್ತ್ರಿಯವರ (ಸೋಮಯಾಜಿ) ಪತ್ನಿಯೆಂದು ಸ್ವಪರಿಚಯ ಮಾಡಿ, ನಾವು ಯಾರೆಂದು ಕನ್ನಡದಲ್ಲಿ ಕೇಳಿದರು. ಶಾಸ್ತ್ರಿಯವರು ಪ್ರಸಿದ್ಧ ಪಶುಪತಿನಾಥ ದೇವಾಲಯದ ಪುರೋಹಿತರು. ನಾವು ಪಶುಪತಿನಾಥ ದೇವಾಲಯಕ್ಕೆ ಹೋಗುವವರಿದ್ದೇವೆ ಎಂದು ಅವರಿಗೆ ತಿಳಿಸಿದಾಗ, 'ನೀವು ದೇವರನ್ನು ಕಾಣಲು ಹೋದಾಗ ನನ್ನ ಪತಿಯನ್ನು ಮಾತನಾಡಿಸಿ ನಿಮ್ಮ ಹೆಸರು ತಿಳಿಸಿಬಿಡಿ. ಅವರು ನಿಮ್ಮ ಜೊತೆ ಯಾರನ್ನಾದರೂ ಕಳುಹಿಸಿ ಉತ್ತಮ ವ್ಯವಸ್ಥೆ ಮಾಡಿಕೊಡುತ್ತಾರೆ. ದೇವಸ್ಥಾನಕ್ಕೆ ಹೋಗಿ ಶ್ರೀ ಪಶುಪತಿನಾಥನ ದರ್ಶನ ಮಾಡಿ ನಮ್ಮ ಮನೆಗೆ ಬನ್ನಿ' ಎಂದು ಒತ್ತಾಯ ಮಾಡಿದರು. ನಮಗೆ ತುಂಬಾ ಸಂತೋಷವಾಯಿತು. ದೇವರೇ ಅವರನ್ನು ಕಳುಹಿಸಿರಬೇಕೆಂದು ನನಗೆ ಅನಿಸಿತು.

ಆಮೇಲೆ ನಾವು ಕಾರಿನಲ್ಲಿ ಬ್ಲೂ ಸ್ಟಾರ್ ಹೋಟೇಲಿಗೆ ಹೋದೆವು. ಅಲ್ಲಿ ದಿನಕ್ಕೆ ೧೪೫ ಡಾಲರ್ ಬಾಡಿಗೆ. ಭಾರತದ ೧೦ ರೂಪಾಯಿ ನೇಪಾಳದ ೧೫ ರೂಪಾಯಿಗೆ ಸಮಾನ(ಆ ದಿನಗಳಲ್ಲಿ). ಬ್ಲೂ ಸ್ಟಾರ್ ಉತ್ತಮ ಸೌಕರ್ಯಗಳಿದ್ದ ಹೊಟೇಲ್. ಅದರ ಹತ್ತಿರದಲ್ಲಿಯೇ ಬೆಂಗಳೂರು ಕಾಫಿ ಹೌಸ್ ಇತ್ತು(ಉಡುಪಿ ಬ್ರಾಹ್ಮಣರ ಹೊಟೇಲು). ಅಲ್ಲಿ ನಮಗೆ ಬೆಂಗಳೂರಿನ ಶ್ರೀ ಸಂತೋಷ ಅಗರವಾಲ್ ಭೇಟಿಯಾದರು. ಅವರು ನಮ್ಮನ್ನು ತಮ್ಮ ಮಳಿಗೆಗೆ ಕರೆದೊಯ್ದರು; ನಮಗೆ ಕಟ್ಮಂಡು ನಗರವನ್ನು ಸುತ್ತಾಡಿಸಲು ಅವರ ಜನವನ್ನು ಕಳುಹಿಸಿಕೊಟ್ಟರು. ಕಟ್ಮಂಡು, ನೇಪಾಳದ ರಾಜಧಾನಿ-ಯಾಗಿದ್ದರಿಂದ ಇಲ್ಲಿ ಸುಂದರ ವಾಸ್ತುವಿನ ಪ್ರಾಚೀನ ಅರ್ವಾಚೀನ ಕಟ್ಟಡಗಳು ಇವೆ. ರಸ್ತೆಗಳು ಸ್ವಚ್ಛವಾಗಿವೆ. ಪೊಲೀಸರು ಉತ್ತಮ ರೀತಿಯಿಂದ ವಾಹನ ನಿಯಂತ್ರಣ ಮಾಡುತ್ತಿದ್ದರು.

ಕಟ್ಮಂಡು ಪ್ರವಾಸಿಗಳ ಆಕರ್ಷಣಾ ಕೇಂದ್ರವಾಗಿದ್ದರಿಂದ ಪರದೇಶಗಳಿಂದ ಬರುವ ಪ್ರವಾಸಿಗರು, ಯಾತ್ರಿಕರು ಬಹಳ ಮಂದಿ ಇದ್ದರು. ಸಣ್ಣ, ದೊಡ್ಡ ಅಂಗಡಿಗಳು, ಸೂಪರ್ ಮಾರ್ಕೆಟ್‌ಗಳು ತುಂಬಾ ಇವೆ. ಜನಜಂಗುಳಿ ಬಹಳ. ಆದರೆ ನೇಪಾಳದಲ್ಲಿಯೇ ತಯಾರಾಗುವ ವಸ್ತುಗಳು ಇಲ್ಲವೆಂದೇ ಹೇಳಬಹುದು. ಇಲ್ಲಿ ಭಾರತದ ಉತ್ಪನ್ನಗಳು ದೊರೆಯುವುದು ಕೂಡ ಕಡಿಮೆ.. ಜಪಾನ್ ಮತ್ತು ಚೈನಾ ವಸ್ತುಗಳಿಗೆ ಬೆಲೆ ತುಂಬಾ ಕಡಿಮೆ ಇರುವುದರಿಂದ ಪ್ರವಾಸಿಗರು ಅದನ್ನು ಮುಗಿಬಿದ್ದು ಖರೀದಿಸುತ್ತಿದ್ದರು. ಇಲ್ಲಿ ದರ್ಜಿಯ ಬಳಿ ಹೊಲಿಯುಲು ಸಂಜೆ ಬಟ್ಟೆ ನೀಡಿದರೆ ಮರುದಿನ ಮಧ್ಯಾಹ್ನದೊಳಗೆ ಉಡುಪು ತಯಾರಿಸಿ ನೀಡುತ್ತಾರೆ. ಚಾರ್ಜ್ ಕೂಡ ಕಡಿಮೆ. ನಾನು ಎರಡು ಸೂಟ್ ಬಟ್ಟೆಗಳನ್ನು ಖರೀದಿಸಿ ಅಲ್ಲಿಯೇ ಹೊಲಿಯಲು ನೀಡಿದ್ದೆ. ಆ ದರ್ಜಿ ಮರುದಿನ ಬೆಳಗ್ಗೆಯೇ ಅದನ್ನು ಹೊಲಿದು ನೀಡಿದ.

ಜಗತ್ತಿನ ಏಕೈಕ ಹಿಂದೂ ರಾಷ್ಟ್ರ ನೇಪಾಳ. ಭಾರತ ಸ್ವತಂತ್ರವಾದ ಬಳಿಕ ನೇಪಾಳದಲ್ಲಿ ರಾಣಾ (ನೇಪಾಳ ರಾಜವಂಶ) ವಿರುದ್ಧ ಎರಡು ಬಾರಿ ಕ್ರಾಂತಿ ನಡೆದು, ಭಾರತ ದೇಶವು ಮಧ್ಯೆ ಪ್ರವೇಶಿಸಿ ಅಲ್ಲಿಯ ಪರಿಸ್ಥಿತಿಯನ್ನು ಸಂಭಾಳಿಸಿಕೊಂಡು ಹೋಗಿತ್ತು. ಆಮೇಲೆ ನೇಪಾಳದ ಆರ್ಥಿಕ ವ್ಯವಸ್ಥೆ ನೆಲೆಗೊಳ್ಳಲು ಭಾರತ ನಿರಂತರವಾಗಿ ಆರ್ಥಿಕ ಬೆಂಬಲ ನೀಡುತ್ತಾ ಬಂದಿದೆ. ಏಷ್ಯಾದ ಹಿರಿಯಣ್ಣ ಚೀನಾ ನೇಪಾಳವನ್ನು ನುಂಗಿ ಬಿಡಲು ಮತ್ತು ನೇಪಾಳದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಹಾಳುಗೆಡವಲು ಅವಕಾಶಕ್ಕಾಗಿ ಕಾದುಕೊಂಡಿದೆ. ಅದು ಭಾರತ ಸರಕಾರಕ್ಕೆ ಮತ್ತು ನೇಪಾಳದ ಅರಸ ಹಾಗೂ ಅಲ್ಲಿಯ ಸರಕಾರಕ್ಕೆ ತಿಳಿದೇ ಇದೆ.

ನೇಪಾಳದ ಹೊರವಲಯ ತುಂಬಾ ಕೊಳಕಾಗಿದೆ. ಜನರು ಬೀದಿ ಬದಿಯಲ್ಲಿಯೇ ಬಹಿರ್ದೆಶೆಗೆ ಕೂಡುತ್ತಾರೆ. ಸ್ವಚ್ಛತೆ ಸ್ವಲ್ಪವೂ ಇಲ್ಲ. ಇಲ್ಲಿಯ ಜನರು ಕಡುಬಡವರು. ಚೀನೀ ಆಕ್ರಮಣವಾದ ಸಂದರ್ಭದಲ್ಲಿ ಟಿಬೇಟಿನ ಜನರು ಭಾರತಕ್ಕೆ ಬಂದ ಹಾಗೆ ನೇಪಾಳಕ್ಕೂ ಹೋಗಿದ್ದಾರೆ. ಅಲ್ಲಿ ಟಿಬೇಟಿಯನ್ ಕಾಲೊನಿ ಇದೆ. ಅವರು ಸುಂದರವಾದ ಹಾಸುಗಂಬಳಿ ಇತ್ಯಾದಿ ತಯಾರಿಸುತ್ತಾರೆ. ನಾನು ಅವರಿಂದ ಕೆಲವು ವಸ್ತುಗಳನ್ನು ಖರೀದಿಸಿದೆ.

ನಾವು ಅಕ್ಟೋಬರ್, ೨೩ರಂದು ಕಾರು ಮಾಡಿಕೊಂಡು ಪ್ರಾಚೀನ ಯಾತ್ರಾಸ್ಥಳ ಶ್ರೀ ಪಶುಪತಿನಾಥ ದೇವಾಲಯಕ್ಕೆ ಹೋದೆವು. ಅಲ್ಲಿ ಬಹು ವಿಸ್ತಾರವಾದ ಮತ್ತು ಉದ್ದಗಲದ ಪೌಳಿಗಳು ಇವೆ. ಗರ್ಭಗೃಹದಲ್ಲಿ ಮನುಷ್ಯನಷ್ಟು ಎತ್ತರವಾದ ಮತ್ತು ಸುಮಾರು ೪ ಅಡಿಗಳಷ್ಟು ಅಗಲವಾಗಿರುವ, ಮೇಲಿನಿಂದ ಗೋಲಾಕೃತಿಯಾಗಿ ಕಾಣಿಸುವ ಶಿವಲಿಂಗ ಇದೆ. ನಾವು ಹೋದಾಗ ಅಲ್ಲಿ ೫೦-೬೦ ವೈದಿಕರು ಏಕಕಾಲಕ್ಕೆ ರುದ್ರ ಮಹಾರುದ್ರ ಮಂತ್ರಪಠಣ ನಡೆಸುತ್ತಿದ್ದರು. ೫-೬ ಮಂದಿ ವೈದಿಕರು ಶಿವಲಿಂಗಕ್ಕೆ(ಪಶುಪತಿನಾಥ) ನೀರಿನ ಅಭಿಷೇಕ ಮಾಡುತ್ತಿದ್ದರು. ಆ ಮಂತ್ರಪಠಣ ಮತ್ತು ಅಭಿಷೇಕ ಆಕರ್ಷಕವಾದುದು. ಈ ದೇವಾಲಯದ ಮುಖ್ಯ ಪುರೋಹಿತರು(ವೈದಿಕರು) ವಂಶಪಾರಂಪರ್ಯವಾಗಿ ಕರ್ನಾಟಕದ ಗೋಕರ್ಣ ಮತ್ತು ಉಡುಪಿ ಕ್ಷೇತ್ರದಿಂದ ನೇಮಕಗೊಳ್ಳುವುದು ವಿಶೇಷ.

ನಾನು ಪಶುಪತಿನಾಥ ದೇವಾಲಯಕ್ಕೆ ಬಂದಿರುವ ಸಂದೇಶವನ್ನು ಶ್ರೀ ಅನಂತಕೃಷ್ಣ ಶಾಸ್ತ್ರಿಯವರಿಗೆ (ಸೋಮಯಾಜಿ) ತಲುಪಿಸಿದೆ. ಅವರು ಗರ್ಭಗುಡಿಯಿಂದ ಹೊರಗೆ ಬಂದು, ನನಗೆ ಏನಾದರೂ ಖರೀದಿ ಮಾಡುವುದು ಇದೆಯೇ, ಪಶುಪತಿನಾಥನಿಗೆ ಏನಾದರೂ ಸೇವೆ ಸಲ್ಲಿಸುವುದು ಇದೆಯೇ? ಎಂದು ವಿಚಾರಿಸಿದರು. ನನಗೆ ಎರಡು ರುದ್ರಾಕ್ಷಿ ಮಾಲೆಗಳು ಬೇಕೆಂದು ನಾನು ಅವರಲ್ಲಿ ನಿವೇದಿಸಿದೆ. ಅವರು ತಮ್ಮ ಜನವನ್ನು ಕಳುಹಿಸಿ ಉತ್ತಮ ರುದ್ರಾಕ್ಷಿ ಸಿಗುವ ಜಾಗ ತೋರಿಸುವ ವ್ಯವಸ್ಥೆ ಮಾಡಿದರು. ದೇವಾಲಯದ ಹೊರಭಾಗದಲ್ಲಿರುವ ಅಂಗಡಿಯಿಂದ ಎರಡು ರುದ್ರಾಕ್ಷಿಮಾಲೆಯನ್ನು ಖರೀದಿಸಿ ಶ್ರೀ ಸೋಮಯಾಜಿ ಯವರಿಗೆ ನೀಡಿದೆ. ಅದನ್ನು ಅವರು ಪಶುಪತಿನಾಥ ಲಿಂಗದ ಮೇಲೆ ಇಟ್ಟು ಅಭಿಷೇಕ ಮಾಡಿ, ಪ್ರಾರ್ಥನೆ ಸಲ್ಲಿಸಿ ನನಗೆ ನೀಡಿದರು. ಶ್ರೀ ಪಶುಪತಿನಾಥ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ನಾವು ಶ್ರೀ ಸೋಮಯಾಜಿಯವರ ಮನೆಗೆ ಹೋದೆವು. ಅವರ ಪತ್ನಿ ನಮಗೆ ಫಲಾಹಾರ ಸಿದ್ಧಪಡಿಸಿಟ್ಟಿದ್ದರು. ಅದನ್ನು ಸೇವಿಸಿ, ದೇವಾಲಯದ ಬಳಿ ನಿಲ್ಲಿಸಿದ್ದ ಕಾರನ್ನು ಹತ್ತಿ ಹೊಟೇಲಿಗೆ ಬಂದೆವು. ಅವರ ಮನೆ ಸುಮಾರು ೧೦೦-೧೫೦ವರ್ಷಗಳ ಹಿಂದೆ ಕಟ್ಟಿಸಿರುವುದೆಂದು ಕಾಣುತ್ತದೆ. ಅದು ಅವರಿಗೆ ವಂಶಪಾರಂಪರ್ಯವಾಗಿ ಬಂದಿರಬಹುದು. ಶ್ರೀ ದೇವಾಲಯದ ಪಾರುಪತ್ಯವು ನೇಪಾಳ ದೇಶದ ರಾಜ ಕುಟುಂಬಕ್ಕೆ ಸೇರಿದ್ದಾಗಿದೆ.

ನಾವು ಹೊಟೇಲಿಗೆ ಬಂದು ಊಟ ಮುಗಿಸಿದೆವು. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಆಮೇಲೆ ನ್ಯಾಶನಲ್ ಸೀಡ್ ಫಾರ್ಮ್, ಶ್ರೀ ಬೋಧಿನಾಥ ದೇವಾಲಯ ನೋಡಿ ಮತ್ತೆ ಮಾರ್ಕೆಟಿಗೆ ಹೋದೆವು. ಅಲ್ಲಿ ಹವಳ ಕಡಿಮೆ ಬೆಲೆಗೆ ಸಿಗುವುದೆಂದು ಕೇಳಿ ಅಂಗಡಿಗಳಿಗೆ ಭೇಟಿ ನೀಡಿ ವಿಚಾರಿಸಿದರೆ, ಅದು ಅಗ್ಗವೆಂದು ನಮಗೆ ಕಂಡುಬರಲಿಲ್ಲ. ಹೀಗಾಗಿ ಏನನ್ನೂ ಖರೀದಿಸದೆ, ಚಿ.ವಿದ್ಯಾಳಿಗಾಗಿ ಒಂದೆರಡು ಒಡವೆಗೆ ಬೇಕಾದ ಹರಳುಗಳನ್ನು ತೆಗೆದುಕೊಂಡೆವು. ಹೆಚ್ಚು ಖರೀದಿ ಮಾಡಲು ನಮ್ಮಲ್ಲಿ ಹಣವೂ ಇರಲಿಲ್ಲ.

ನೇಪಾಳದ ಜನ ಮೃದುವಾಗಿ ಮಾತು ಆಡುವವರು. ಇಲ್ಲಿ ವ್ಯಾವಹಾರಿಕ ಭಾಷೆ ಹಿಂದಿಯೇ ಎಂದು ಹೇಳಬಹುದು. ನೇಪಾಳಿ ಭಾಷೆಯೂ ಇದೆ.(೧೯೯೨, ಆಗಸ್ಟ್ ೨೦ರಂದು ನಮ್ಮ ಕೊಂಕಣಿ ಭಾಷೆಯ ಜೊತೆಯಲ್ಲಿ ನೇಪಾಳಿ ಭಾಷೆಯನ್ನೂ ಭಾರತ ಸಂವಿಧಾನದ ೮ನೇ ಅನುಸೂಚಿಯಲ್ಲಿ ಸೇರಿಸಲಾಗಿದೆ. ಇಂಡೋ ಆರ್ಯನ್ ಭಾಷೆಯಾಗಿರುವುದರಿಂದ ನೇಪಾಳಿಯನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗುತ್ತದೆ.)

ನೇಪಾಳದ ನಗರ ಪ್ರದೇಶದ ರಸ್ತೆಗಳು ಚೆನ್ನಾಗಿವೆ. ಚೀನಾದೇಶ ಕಟ್ಮಂಡು ವರ್ತುಲ ರಸ್ತೆಯನ್ನು ನಿರ್ಮಿಸಿದೆ. ಮರ ಮತ್ತು ಲೋಹದ ವಸ್ತುಗಳ ತಯಾರಿಕೆಯನ್ನು ಕಲಿಸಲು ಮತ್ತು ಮಾರಾಟ ಮಾಡಲು ಗುಡ್ ವುಡ್‌ಕ್ರಾಫ್ಟ್ ಇಂಡಸ್ಟ್ರೀಯಲ್ ಎಸ್ಟೇಟ್ ಮತ್ತು ಮೆಟಲ್ ಕ್ರಾಫ್ಟ್ ಎಸ್ಟೇಟ್‌ಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ಕಲಾತ್ಮಕವಾದ ಮತ್ತು ಪಾರಂಪರಿಕ ವಸ್ತು ಸಾಮಾಗ್ರಿಗಳನ್ನು ಉತ್ಪಾದಿಸುತ್ತಾರೆ.

ಅಕ್ಟೋಬರ್ ೨೪ರಂದು ಮಧ್ಯಾಹ್ನ ೨ ಗಂಟೆಗೆ ಕಟ್ಮಂಡು ವಿಮಾನ ನಿಲ್ದಾಣದಿಂದ ಇಂಡಿಯನ್ ಏರ್‌ಲೈನ್ಸ್ ವಿಮಾನದಲ್ಲಿ ದೆಹಲಿಗೆ ಹೊರಟೆವು. ಸಂಜೆ ೩.೩೫ಕ್ಕೆ ದೆಹಲಿ ತಲುಪಿ,

ವೆಂಕಟರಮಣನ ಕಾರಿನಲ್ಲಿ ಅವರ ಮನೆಗೆ ಹೋದೆವು. ನಮ್ಮ ನೇಪಾಳ ಪ್ರವಾಸ ಚೆನ್ನಾಗಿ ನಡೆಯಿತು

ಮುಂಬೈಗೆ ಪ್ರಯಾಣ

ಅಕ್ಟೋಬರ್ ೨೫ ರಂದು ಮುಂಜಾನೆ ವೆಂಕಟರಮಣನ ಕಾರಿನಲ್ಲಿ ನಾವು ದೆಹಲಿಯ ಪಾರ್ಲಿಮೆಂಟ್ ಭವನ, ರಾಷ್ಟ್ರಪತಿ ಭವನ ಇತ್ಯಾದಿ ನೋಡಿದೆವು. ಮಧ್ಯಾಹ್ನ ಊಟ ಮಾಡಿ, ೨ ಗಂಟೆಗೆ ಹೊರಡುವ ರಾಜಧಾನಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಕುಳಿತು ಮುಂಬೈಗೆ ಪ್ರಯಾಣಿಸಿ. ಮರುದಿನ ೧೦.೨೫ಕ್ಕೆ ಮುಂಬಯಿ ಸೆಂಟ್ರಲ್ ರೈಲು ನಿಲ್ದಾಣ ತಲುಪಿದೆವು. ಅಲ್ಲಿಂದ ಟ್ಯಾಕ್ಸಿ ಮಾಡಿ ನೇರವಾಗಿ ವಿದ್ಯಾಳ ಮನೆಗೆ ಹೋದೆವು. ಆ ಮೇಲೆ ಅಲ್ಲಿಂದ ನನ್ನ ಸೋದರಸೊಸೆ ವಿಮಲೂ (ಅನಸೂಯಕ್ಕನ ಮಗಳು) ಮನೆಗೆ ಹೋದೆವು. ಎರಡು ದಿನ ಮುಂಬಯಿಯಲ್ಲಿದ್ದು ಅನೇಕ ಪರಿಚಯಸ್ಥರನ್ನು ಭೇಟಿಯಾಗಿ ಸುಖದುಃಖ ಮಾತನಾಡಿಕೊಂಡೆವು. ಪಾಣೆಮಂಗಳೂರು ಶ್ರೀ ಪಿ.ಎ. ಭಟ್(ಇಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್ ಅಸೋಸಿಯೇಶನ್ ಅಧ್ಯಕ್ಷರು), ನನ್ನ ಭಾವಮೈದ ಶ್ರೀ ಎ.ಎಂ. ಕಾಮತ್, ಕಲ್ಯಾಣದಲ್ಲಿರುವ ಸಾವಿತ್ರಿಯ ಇಬ್ಬರು ಸಹೋದರಿಯರು, ಮತ್ತು ಅವಳ ಸಹೋದರರಾದ ಶ್ರೀನಿವಾಸ ಭಟ್ಟ ಮತ್ತು ಏಕನಾಥ ಭಟ್ಟ(ಗೊಂಡೊ) ಮತ್ತು ನನಗೆ ಹಿಂದೆ ತುಂಬಾ ಸಹಾಯ ಮಾಡಿರುವ ಶ್ರೀ ರಮೇಶ ಪ್ರಭು(ಪಾಣೆಮಂಗಳೂರು) ಮೊದಲಾದ ಸಂಬಂಧಿಕರು ಮತ್ತು ಆತ್ಮೀಯರ ಮನೆಗೆ ಭೇಟಿ ನೀಡಿ, ಮಾತುಕತೆ ನಡೆಸಿ ನವೆಂಬರ್ ೧, ೧೯೮೩ರಂದು ವಿಮಾನದಲ್ಲಿ ಬೆಂಗಳೂರು ತಲುಪಿದೆವು.

ಶ್ರೀ ವೆಂಕಟರಮಣ ಸ್ವಾಮಿಯ ದಯೆಯಿಂದ ನಮ್ಮ ಒಂದು ತಿಂಗಳ ದೆಹಲಿ, ರಾಜಸ್ಥಾನ, ಆಗ್ರಾ, ನೇಪಾಳ, ಹರಿದ್ವಾರ, ಹೃಷಿಕೇಶ, ಮುಂಬಯಿ ಪ್ರವಾಸ ಯಾವುದೇ ತೊಂದರೆಯಿಲ್ಲದೆ, ಅಡ್ಡಿ ಆತಂಕಗಳಿಲ್ಲದೆ ನೆಮ್ಮದಿಯಿಂದ ಕಳೆಯಿತು. ನಾವು ಹೋದೆಡೆಗಳಲ್ಲಿ ನಮಗೆ ಯೋಗ್ಯ ಆತಿಥ್ಯ ಮತ್ತು ಸತ್ಕಾರ ದೊರೆತಿತ್ತು. ಟ್ರಾವೆಲ್ ಕಾರ್ಪೊರೇಶನ್ ಆಫ್ ಇಂಡಿಯಾ ಸಂಸ್ಥೆಯವರು ಪ್ರವಾಸದ ಆಯೋಜನೆಯನ್ನು ಮಾಡಿದ್ದರಿಂದ ಹೊಟೇಲ್, ಟ್ಯಾಕ್ಸಿಗಳ ಉತ್ತಮ ವ್ಯವಸ್ಥೆ ದೊರೆತು, ಪ್ರವಾಸಿ ಆಕರ್ಷಣೆಯ ಪ್ರದೇಶಗಳಿಗೆ ಸುವ್ಯವಸ್ಥಿತವಾಗಿ ಭೇಟಿ ನೀಡಿ ತಿರುಗಾಡಿ ಬರಲು ಸಾಧ್ಯವಾಯಿತು. ಚಿ. ವೆಂಕಟರಮಣ, ಸುಗಂಧಾ, ಜನ್ನು ಮತ್ತು ಬಾಬಣ್ಣ ಇವರೆಲ್ಲರೂ ಪರಿಶ್ರಮಪಟ್ಟದ್ದರಿಂದ ನಮ್ಮ ಪ್ರವಾಸ ಸುಖಪ್ರದವಾಯಿತು ಎಂದು ನಾನು ತಿಳಿಯುತ್ತೇನೆ.

ನನ್ನ ಜೀವಮಾನದಲ್ಲಿ ಇಷ್ಟು ಪ್ರದೇಶಗಳ ಪ್ರವಾಸ ಸುರಳೀತವಾಗಿ, ಯಾವುದೇ ಚಿಂತೆಯಿಲ್ಲದೆ ಆಗಿರುವುದು ಇದೇ ಮೊದಲು. ಚಿ.ಸೌ. ಸಾವಿತ್ರಿಯೂ ಇವತ್ತಿನವರೆಗೆ ಎಲ್ಲಿಯೂ ಹೊರಗೆ ಹೋದವಳೇ ಅಲ್ಲ. ಅವಳಿಗೂ ಹೊಸ ಅನುಭವವಾಯಿತು. ಬೆಂಗಳೂರಿಗೆ ಮರಳಿ ಬಂದು ತಮ್ಮ ಚಿ. ಪ್ರಭಾಕರನ ಮನೆಯಲ್ಲಿ ಆ ವರ್ಷದ ದೀಪಾವಳಿಯನ್ನು ಸಂತೋಷ, ಸಂಭ್ರಮದಿಂದ ಆಚರಿಸಿದೆವು.

ನವೆಂಬರ್ ೩ರಂದು ಬೆಂಗಳೂರಿನಿಂದ ತುಂಬೆಗೆ ಹೊರಟೆವು. ತುಂಬೆಯ ಮನೆಯ ಹೊಸ ನಿರ್ಮಾಣ ಕಾರ್ಯ ಪ್ರಗತಿಯಲ್ಲಿತ್ತು. ನಾವು ಯೋಜನೆ ಹಾಕಿದ ರೀತಿಯಲ್ಲಿ ಸುಮಾರಾಗಿ ಪೂರ್ಣಗೊಂಡಿತ್ತು. ಇನ್ನು ಸ್ವಲ್ಪ ಕೆಲಸ ಮಾತ್ರ ಬಾಕಿ ಇತ್ತು. ಹೀಗಾಗಿ ನನಗೆ ಬೆಂಗಳೂರಿನಿಂದ ತುಂಬೆಗೆ ಆಗಾಗ ಬರಬೇಕಾಗುತ್ತಿತ್ತು.

ನನ್ನ ಊರು ಬಂಟವಾಳದ ದೇವಸ್ಥಾನದಲ್ಲಿ ಕಾರ್ತಿಕ ಏಕಾದಶಿಯ ರಾತ್ರಿ ವಾರ್ಷಿಕ ಮಹಾಸಭೆ ನಡೆಯುತ್ತದೆ. ಇದರಲ್ಲಿ ಊರಿನ ಹತ್ತು ಜನರು (ಅಂದರೆ ಶ್ರೀ ದೇವಸ್ಥಾನದ ಭಜಕವೃಂದ) ಒಟ್ಟು ಸೇರಿ, ಶ್ರೀ ದೇವಸ್ಥಾನದ ವಾರ್ಷಿಕ ಲೆಕ್ಕಪತ್ರಗಳನ್ನು ಓದಿ ಹೇಳುವುದು ಮತ್ತು ಆ ವಿಷಯದ ಕುರಿತು ಚರ್ಚೆ ನಡೆಯುವುದು ಇದೆ. ಅದರ ನಂತರ ಮೊಕ್ತೇಸರರ ನೇಮಕಾತಿ, (ಇದು ಐದು ವರ್ಷಗಳಿಗೆ ಒಮ್ಮೆ ನಡೆಯುವಂತಹದು) ವರ್ಷಾವಧಿ ದೇವರ ಪೂಜೆ, ಪರಿವಾರ ದೇವರ ಪೂಜೆ ಮಾಡುವ ವೈದಿಕರ ನೇಮಕಾತಿ ನಡೆಯುವುದು.(ಅಂದರೆ ದೇವರ ಪೂಜೆಯ ಪರ್ಯಾಯ ಜವಾಬ್ದಾರಿ.) ಇದರಲ್ಲಿ ಬದಲಾವಣೆ ಕಾಣಿಸಿಕೊಳ್ಳುವ ಸಂಭವವೂ ಇರುತ್ತದೆ. ಆಮೇಲೆ ಆಡಳಿತದಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದಿದ್ದರೆ (ವೈದಿಕ, ಧಾರ್ಮಿಕ ಕಾರ್ಯಗಳಲ್ಲಿ) ಆ ಕುರಿತು ಚರ್ಚೆ ನಡೆಯುತ್ತದೆ. ಇದರಲ್ಲಿ ಅನೇಕ ವಿಷಯಗಳು ಕಾಣಿಸಿಕೊಂಡು, ಕೆಲವೊಮ್ಮೆ ತಿಕ್ಕಾಟವೂ ನಡೆಯುತ್ತದೆ. ಈ ವಿರೋಧ ಆ ಹೊತ್ತಿಗೆ ಮಾತ್ರ ಸೀಮಿತ. ಆ ಮೇಲೆ ಎಲ್ಲವೂ ಒಂದು ಸಮ್ಜಾಣಿಕೆಗೆ ಬಂದು ಇತ್ಯರ್ಥವಾಗುತ್ತದೆ. ಮುಂದಿನ ದಿನಗಳಲ್ಲಿ ಕೆಲಸಕಾರ್ಯಗಳು ಸುರಳೀತವಾಗಿ ಮುಂದುವರಿಯಬೇಕೆನ್ನುವ ದೃಷ್ಟಿಯಿಂದ ಈ ಚರ್ಚೆ ನಡೆಯುವುದರಿಂದ ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯಗಳನ್ನು ಮುಕ್ತ ರೀತಿಯಿಂದ ವ್ಯಕ್ತಪಡಿಸುವುದಕ್ಕೆ ಅವಕಾಶವಿರುತ್ತದೆ.

೧೩, ನವೆಂಬರ್ ೧೯೮೩ರಲ್ಲಿ ಕಾರ್ತಿಕ ಏಕಾದಶಿಯ ರಾತ್ರಿ ನಡೆದ ಮಹಾಸಭೆಯಲ್ಲಿ ನಾನು ಶ್ರೀ ದೇವರ ಎದುರಿನಲ್ಲಿ ಇರುವ ಪುರಾತನ ಅಂಬಲ(ಮಂಟಪ) ಮತ್ತು ಮಹಡಿ ಗೋಪುರವನ್ನು ತೆಗೆದು ಹೊಸ ನಿರ್ಮಾಣ ಕಾರ್ಯ ಶುರು ಮಾಡಬೇಕು ಎಂಬ ನಿರ್ಣಯ ಮಂಡಿಸಿದೆ. ಈ ವಿಷಯದಲ್ಲಿ ಚರ್ಚೆಯಾಗಿ ನನ್ನ ನಿರ್ಣಯವು ಸರ್ವಾನುಮತದಿಂದ ಅನುಮೋದನೆ ಪಡೆಯಿತು. ಇದಕ್ಕಿಂತ ಮೊದಲೇ ನಾನು ಶ್ರೀ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಬಂಟವಾಳ ದಾಮೋದರ ಪ್ರಭು, ಊರಿನ ಹಿರಿಯರಾದ ಸರಾಫ ಶ್ರೀ ಬಂಟವಾಳ ವಾಮನ ಅಣ್ಣಪ್ಪ ಬಾಳಿಗ ಮತ್ತು ಶ್ರೀ ಎಂ. ವೇದವ್ಯಾಸ ಪ್ರಭು ಇವರಲ್ಲಿ ಈ ಕುರಿತು ಚರ್ಚೆ ನಡೆಸಿಯೇ ಅದನ್ನು ಸಭೆಯಲ್ಲಿ ಮಂಡಿಸಿದ್ದೆ.

ನಾನು ಯಾರಿಂದ ಒಳ್ಳೆಯದನ್ನು ಪಡೆದಿರುವೆನೋ, ಅವರ ಋಣವನ್ನು ಸಂಪೂರ್ಣ ರೀತಿಯಲ್ಲಿ ತೀರಿಸುವುದು ನನಗೆ ಸಾಧ್ಯವಾಗದಿದ್ದರೂ, ಕೆಲವರ ಸೇವೆಯನ್ನಾದರೂ ಮಾಡುವ ಅವಕಾಶ ನನಗೆ ಸಿಕ್ಕಿರುವುದು ಅದೃಷ್ಟವೆಂದೇ ನನ್ನ ಭಾವನೆ. ನಾನು ಹುಟ್ಟಿದ ಊರು, ನಾನು ಶಿಕ್ಷಣ ಪಡೆದ ವಿದ್ಯಾಸಂಸ್ಥೆ, ನನ್ನ ಊರಿನ ದೇವಾಲಯ, ನನಗೆ ವಿಶೇಷ ಆಶೀರ್ವಾದ ನೀಡುತ್ತಿರುವ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ಮತ್ತು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು, ಅದೇ ರೀತಿ ಶ್ರೀ ಕಾಶೀಮಠ ಸಂಸ್ಥಾನ ಇವೆಲ್ಲವುಗಳಿಗೆ ಸೇವೆ ಸಲ್ಲಿಸುವ ಅವಕಾಶ ನನ್ನ ಜೀವಮಾನದಲ್ಲಿ ನನಗೆ ಸಿಕ್ಕಿರುವುದು ನನ್ನ ಭಾಗ್ಯವೇ ಸರಿ.

ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ, ನಾನು ಹುಟ್ಟಿದ ದಿನದಿಂದ ನನ್ನ ವಿವಾಹವಾಗುವವರೆಗೆ ನಾನು ವಾಸವಾಗಿದ್ದುದು ಬಂಟವಾಳ ನೇತ್ರಾವದಿ ನದಿತೀರದ ಮನೆಯಲ್ಲಿ. ಆ ಪ್ರದೇಶದಲ್ಲಿ ಅನಾದಿಕಾಲದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನವೊಂದು ಇದೆ. ನನ್ನ ತಾಯಿಗೆ ಮಹಾಲಿಂಗೇಶ್ವರ ದೇವರ ಮೇಲೆ ತುಂಬಾ ಭಯ, ಭಕ್ತಿ ಮತ್ತು ವಿಶ್ವಾಸ. ನಮ್ಮ ಮನೆ ದೇವಸ್ಥಾನದ ಹತ್ತಿರ ಕೆಳಭಾಗದಲ್ಲಿ ಇದ್ದುದ್ದರಿಂದ, ನಮ್ಮಮ್ಮ ಶ್ರೀ ಮಹಾಲಿಂಗೇಶ್ವರ ದೇವರ ದರ್ಶನಕ್ಕೆ ಅಥವಾ ಹರಕೆ ತೀರಿಸಲು ಆಗಾಗ ಆ ದೇವಸ್ಥಾನಕ್ಕೆ ಹೋಗುವುದಿತ್ತು. ಹೀಗಾಗಿ ನನಗೆ ಆ ದೇವಸ್ಥಾನದ ವಿಚಾರದಲ್ಲಿ ವಿಶೇಷ ಭಾವನಾತ್ಮಕ ಸಂಬಂಧ ಬೆಳೆದು ಬಂದಿತ್ತು.

ನಾನು ಬೆಂಗಳೂರು ಶೂಲೆ ಶಾಖೆಯಲ್ಲಿ ಮೆನೇಜರ್ ಆಗಿದಾಗ ಒಂದು ದಿನ ಸಂಜೆ ಬಂಟವಾಳದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರು ಹಾಗೂ ನನಗೆ ಪ್ರೌಢಶಾಲೆಯಲ್ಲಿ ಕಲಿಸಿದ ಗುರು ಶ್ರೀ ಬಿ. ರಘುನಾಥ ರಾವ್ ಮತ್ತು ಅವರ ಜೊತೆಯಲ್ಲಿ ಶ್ರೀ ರಘುನಾಥ ಸೋಮಯಾಜಿ ಮತ್ತು ಶ್ರೀ ರಮೇಶ ಸೋಮಯಾಜಿಯವರು ನನ್ನನ್ನು ಭೇಟಿಯಾಗಲು ಬ್ಯಾಂಕಿಗೆ ಬಂದರು. ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಷ್ಟಬಂಧ ಮತ್ತು ಬ್ರಹ್ಮಕಲಶ ಕಾರ್ಯಕ್ರಮ ನಡೆಯುವುದಿತ್ತು. ಅದಕ್ಕೆ ಹಣಸಂಗ್ರಹಕ್ಕಾಗಿ ಅವರು ಬಂದಿದ್ದರು. ನಾನು ನನ್ನ ದೇಣಿಗೆ ನೀಡಿದೆ. ಅವರು ಬೆಂಗಳೂರಿನಲ್ಲಿ ಸಾಕಷ್ಟು ಹಣ ಸಂಗ್ರಹವಾಗಲಿಲ್ಲವೆಂದು ಖೇದ ವ್ಯಕ್ತ ಪಡಿಸಿದರು. ಅದನ್ನು ಕೇಳಿ ನಾನು ನನ್ನ ಶಾಖೆಯ ಕೆಲವು ಶ್ರೀಮಂತ ಗ್ರಾಹಕರನ್ನು ಆಫೀಸಿಗೆ ಕರೆಯಿಸಿ ಒಂದೆರಡು ಗಂಟೆಯೊಳಗೆ ತುಂಬಾ ದೇಣಿಗೆ ಸಂಗ್ರಹ ಮಾಡಿ ನೀಡಿದೆ. ಅವರಿಗೆ ತುಂಬಾ ಸಂತೋಷವಾಯಿತು.

●●

೧೧. ನಮ್ಮ ಮದುವೆಯ ಬೆಳ್ಳಿಹಬ್ಬ ಮತ್ತು ಹೊಸ ಮನೆಯ ನಿರ್ಮಾಣ

ನಮ್ಮ ಹೊಸ ಮನೆಯ ನಿರ್ಮಾಣ ಕಾರ್ಯ ಮುಗಿದ ಕಾರಣವಾಗಿ ಮತ್ತು ನನ್ನ ಹಾಗೂ ಸೌ ಸಾವಿತ್ರಿಯ ಮದುವೆಯ ಬೆಳ್ಳಿಹಬ್ಬದ ಆಚರಣೆಯ ಪ್ರಯುಕ್ತವಾಗಿ ೨೭ ಏಪ್ರಿಲ್, ೧೯೮೪ರಂದು ನಮ್ಮ ಮನೆಯಲ್ಲಿ ಮುಂಜಾನೆ ಶ್ರೀ ಗಣಹೋಮ ಮತ್ತು ಸಂಜೆ ಶ್ರೀ ಸತ್ಯನಾರಾಯಣ ವ್ರತಾಚರಣೆಯನ್ನು ಇಟ್ಟುಕೊಂಡಿದ್ದೆವು. ಈ ಸಮಾರಂಭಕ್ಕೆ ಚಿ. ವಿದ್ಯಾ ಮತ್ತು ಪ್ರಭಾಕರ, ನನ್ನ ತಮ್ಮ ಪ್ರಭಾಕರ ಮತ್ತು ಗೀತಾ, ಪ್ರಜ್ಞಾ, ಪೂರ್ಣಾ, ಶ್ರೀ ವಿಶ್ವನಾಥ ಭಾವ, ಅನಸೂಯಕ್ಕ, ಚಿ. ಶಾಲಿನಿ, ಕೇಶವ ಭಾವ, ಬಸ್ತಿ ಅನಂತಣ್ಣ, ಬಂಟವಾಳ ದೇವಸ್ಥಾನದ ಆಡಳಿತ ಮೊಕ್ತೇಸರ ಬಿ. ದಾಮೋದರ ಪ್ರಭು, ಬಿ. ಶ್ರೀನಿವಾಸ ನಾಯಕ, ಮಂಗಳೂರಿನಿಂದ ಬಸ್ತಿ ವಾಮನ ರಾಮಯ್ಯ ಶೆಣೈ ಮತ್ತು ಸೋದರರು ಕುಟುಂಬ ಸಮೇತ ಬಂದಿದ್ದರಲ್ಲದೆ, ನನ್ನ ತುಂಬಾ ಹಿತೈಷಿಗಳಾದ ಹಿರಿಯರು ಶ್ರೀ ಬಂಟವಾಳ ನಾರಾಯಣ ನಾಯಕ, ಕಸ್ತೂರಿ ಮಂಗೇಶ ಪೈ, ಶ್ರೀ ಏರ್ಯ ಲಕ್ಷ್ಮಿನಾರಾಯಣ ಆಳ್ವ, ಶ್ರೀ ಬಿ. ಅಹ್ಮದ್ ಹಾಜಿ ಮೊಹಿಯುದ್ದೀನ್, ಶ್ರೀ ಕೈತ್ರೋಡಿ ಸದಾಶಿವ ಭಂಡಾರಿ, ಬಿ. ಮಾಧವ ಶ್ರೀಧರ ಭಂಡಾರಿ, ಶ್ರೀ ಎಂ. ವೇದವ್ಯಾಸ ಪ್ರಭು ಮತ್ತು ನನ್ನ ಸಂಬಂಧಿಕರೆಲ್ಲರೂ ಬಂದಿದ್ದರು.

ನಮ್ಮ ತೆಂಗಿನ ತೋಟದ ನಡುವೆ ಇರುವ ಖಾಲಿ ಜಾಗದಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಊಟಕ್ಕೆ ಕುಳಿತವರು ಇದು ಒಂದು 'ವನಭೋಜನ'ವೆಂದು ಹೇಳಿದರು. ನಾನು ಆಹ್ವಾನ ನೀಡಿದ ನನ್ನ ಹಿರಿಯರು, ಹಿತೈಷಿಗಳು, ಮಿತ್ರರು ಮತ್ತು ಕುಟುಂಬ ವರ್ಗದವರು ಹಾಜರಿದ್ದುದರಿಂದ ನನ್ನ ಮನಸ್ಸು ಮತ್ತು ಹೃದಯಗಳಲ್ಲಿ ಸಂತೋಷ ತುಂಬಿತು. ಈ ಸಮಾರಂಭ ನನ್ನ ಬದುಕಿನಲ್ಲಿ ಅವಿಸ್ಮರಣೀಯವಾಗಿಯೇ ಇದೆ. ಮರುದಿನ ೨೮, ಏಪ್ರಿಲ್, ೧೯೮೪ರಂದು ರಾತ್ರಿ ಉಳ್ಳಾಲ್ ರಮೇಶ ಮಲ್ಯ, ಡಾ.ಸಿ.ಆರ್. ಕಾಮತ ಮತ್ತು ಅವರ ಜೊತೆಯಲ್ಲಿ ಇರುವ ಕಣ್ಣಿನ ವೈದ್ಯರೆಲ್ಲರೂ ನಮ್ಮಲ್ಲಿ ಊಟಕ್ಕೆ ಇದ್ದರು.

ಕೆಲವೇ ದಿನಗಳಲ್ಲಿ, ಅಂದರೆ ಮೇ ೧ರಂದು ನಾನು ಮಣಿಪಾಲಕ್ಕೆ ಹೋಗಿ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೆಜರ್ ಶ್ರೀ ಪಿ.ಎಸ್.ವಿ.ಮಲ್ಯರನ್ನು ಭೇಟಿಯಾಗಿ ನನಗೆ ಯಾವುದಾದರೂ ವಿಭಾಗೀಯ ಅಥವಾ ಪ್ರಾದೇಶಿಕ ಕಚೇರಿಗೆ ವರ್ಗಾವಣೆ ನೀಡಬೇಕೆಂದು ಕೋರಿದೆ. ಶ್ರಿ ಮಲ್ಯಾ ಅವರು 'ನಿನ್ನಂತಹ ಅನುಭವಿ ಮತ್ತು ಯಶಸ್ವೀ ಕಾರ್ಯಶೀಲ ಮೆನೇಜರ್‌ಗೆ ವಿಭಾಗೀಯ ಅಥವಾ ಪ್ರಾದೇಶಿಕ ಕಚೇರಿಯಲ್ಲಿ ಕೆಲಸ ಮಾಡುವುದು ಆಗಲಿಕ್ಕಿಲ್ಲ. ನಿನಗೆ ಮೂಡುಬಿದ್ರೆ ಶಾಖೆಗೆ ಮೆನೇಜರ್ ಆಗಿ ವರ್ಗಾವಣೆ ಮಾಡುತ್ತೇನೆ' ಎಂದು ಹೇಳಿದರು. ಅದಕ್ಕೆ ನಾನು ಒಪ್ಪಿಗೆ ತಿಳಿಸಿ ಬೆಂಗಳೂರಿಗೆ ಹೋದೆ.

ಮೇ ೨೧, ೧೯೮೪ರಂದು ಬೆಂಗಳೂರು ಶೂಲೆ ಶಾಖೆಯ ಡಿವಿಜನಲ್ ಮ್ಯಾನೆಜರ್ ಆಗಿ ಅಧಿಕಾರ ಸ್ವೀಕರಿಸಲು ಬಂದ ವ್ಯಕ್ತಿಗೆ ಅಧಿಕಾರ ಹಸ್ತಾಂತರ ಮಾಡಿದೆ. ನನ್ನ ಶಾಖೆಯ ಸಿಬ್ಬಂದಿವರ್ಗದವರು ಮತ್ತು ಅಧಿಕಾರಿಗಳು ನನಗೆ ಬೀಳ್ಕೊಡುಗೆಯ ಸತ್ಕಾರ ನೀಡಿದರು. ಇದೇ ರೀತಿ ಬೇರೆ ಬೇರೆ ಗ್ರಾಹಕ ಕಂಪೆನಿಗಳು ಮಾಲಕರು, ಸಂಸ್ಥೆಗಳವರಿಂದ ಬೀಳ್ಕೊಡುಗೆ, ಸತ್ಕಾರಗಳು ನಡೆದು ನನಗೆ ಉಡುಗೊರೆ ನೀಡಿ ಶುಭ ಹಾರೈಸಲಾಗಿತ್ತು. ಬೆಂಗಳೂರಿನಲ್ಲಿ ಚಿ. ಪಬ್ಬ ಮತ್ತು ಗೀತಾ ನನ್ನನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದರು. ನನ್ನನ್ನು ಅವರ ಹಿರಿಯನೆಂದು ಪರಿಗಣಿಸಿ ನನ್ನ ಸೇವೆಯನ್ನು ಮಾಡಿದ್ದರು. ಇದು ನನಗೆ ಒಂದು ಅಭಿಮಾನದ ಸಂಗತಿಯಾಗಿದೆ.

ಮೂಡುಬಿದಿರೆ ಶಾಖೆ

ನಾನು ೧೯೮೪ರಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಮೂಡುಬಿದಿರೆ ಶಾಖೆಯ ಮೆನೇಜರ್ ಆಗಿ ನಿಯುಕ್ತನಾದೆ. ಆಗಲೇ ನನಗೆ ಪಾಣೆಮಂಗಳೂರು ಶ್ರೀ ದೇವದಾಸ ಶೆಣೈ ಮತ್ತು ಕುಟುಂಬದವರೊಂದಿಗೆ ಆರು ದಿನಗಳ ಕೇರಳ-ಕೊಚ್ಚಿ ಪ್ರವಾಸಕ್ಕೆ ಹೋಗುವ ಅವಕಾಶ ದೊರೆಯಿತು. ಸುಮಾರು ೮೦೦ ವರ್ಷಗಳ ಹಿಂದೆ ಕೊಂಕಣಿ ಜನರು ಗೋವೆಯಿಂದ ಕೊಚ್ಚಿಗೆ ವಲಸೆ ಹೋಗಿದ್ದರು. ಅವರು ಅಲ್ಲಿಯ ಅರಸನ

ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ವಹಿವಾಟುಗಳನ್ನು ನಡೆಸಿ ಶ್ರೀಮಂತರಾಗಿದ್ದರು. ಅವರು ನೆಲೆಯೂರಿದ ಕೇರಳದ ಪಶ್ಚಿಮ ತೀರದ ಹಲವು ಊರುಗಳಲ್ಲಿ ಹರಡಿಕೊಂಡಿದ್ದರು. ಅಲ್ಲದೇ ಮುಂದೆ ೧೬ನೇ ಶತಮಾನದಲ್ಲಿಯೂ ಪೋರ್ತುಗೀಸರ ಕ್ರೂರ ಆಳ್ವಿಕೆಯಿಂದ ಪಾರಾಗಲು ಕೊಂಕಣಿಗಳು ದೊಡ್ಡ ಸಂಖ್ಯೆಯಲ್ಲಿ ಗೋವೆಯಿಂದ ದೋಣಿಯಲ್ಲಿ ಪಯಣಿಸಿ ಕೊಚ್ಚಿಗೆ ಬಂದು ತಲುಪಿದ್ದರು.

ಕೇರಳದ ಪಶ್ಚಿಮ ತೀರದಲ್ಲಿ ಹರಡಿಕೊಂಡಿರುವ ಕೊಚ್ಚಿ ಸಾರಸ್ವತರಿಗೆ ಸೇರಿದ ವೆಂಕಟರಮಣ ಸ್ವಾಮೀ ದೇವಾಲಯವು ಬಹು ದೊಡ್ಡದಿದೆ. ಈ ದೇವಾಲಯ ನಡೆಸುತ್ತಿರುವ ಶಿಕ್ಷಣ ಸಂಸ್ಥೆಯೂ ಇದೆ. ಇಲ್ಲಿಯ ಶಾಲೆಯಲ್ಲಿ ಕೊಂಕಣಿ ಭಾಷೆ ಕಲಿಸುತ್ತಾರೆ. ನಾನು ದೇವದಾಸ ಶೆಣೈಯವರ ಜೊತೆಯಲ್ಲಿ ಕೊಚ್ಚಿ, ತಿರುಚೆಂಡೂರ, ಪಳನಿ, ಮಧುರೆ, ಕಲ್ಲಿಕೋಟೆ, ನೀಲೇಶ್ವರ, ಹೊಸದುರ್ಗ(ಕಾಂಞಂಗಾಡ್) ಇತ್ಯಾದಿ ಊರುಗಳನ್ನು ಸಂದರ್ಶಿಸಿದೆ. ಆಮೇಲೆ ಊರಿಗೆ ಮರಳಿ ಬಂದು ಮೂಡುಬಿದಿರೆ ಶಾಖೆಯ ಅಧಿಕಾರವನ್ನು ಕೈಗೆತ್ತಿಕೊಂಡೆ. ಮೂಡುಬಿದಿರೆಯಲ್ಲಿ ನನ್ನ ಅಭಿಮಾನಿಗಳು ಮತ್ತು ಪರಿಚಯಸ್ಥ ಕೆಲವು ಪುಢಾರಿಗಳು ಇದ್ದರು. ನನ್ನ ಹಿಂದಿನ ಕಾಂಗ್ರೆಸ್ ಸಂಪರ್ಕದ ಶ್ರೀ ಶಿರ್ತಾಡಿ ಧರ್ಮಸಾಮ್ರಾಜ್ಯ(ಮಾಜಿ ಎಂ.ಎಲ್.ಎ.), ಹಿಂದಿನ ಯುವ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಸಹಕಾರಿ ಜಿ. ಮೋಹನ ಶೆಣೈ, ಮತ್ತು ಹೆಚ್. ಉದಯಶಂಕರ ಪ್ರಭು, ರೋಟರಿ ಕಾರ್ಯಕ್ಷೇತ್ರದ ಮೂಲಕ ಪರಿಚಯವಾದ ಕರ್ನಾಟಕ ಸರಕಾರದಲ್ಲಿ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಅಮರನಾಥ ಶೆಟ್ಟಿ, ಮತ್ತು ಡಾ. ಎಲ್.ಸಿ. ಸೋನ್ಸ್ ಮೊದಲಾದವರ ಪರಿಚಯದ ಕಾರಣವಾಗಿ ನನಗೆ ಮೂಡುಬಿದಿರೆಯ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಕೆಲಸಗಳನ್ನು ಮಾಡುವುದು ಸಾಧ್ಯವಾಯಿತು. ರೊಟೇರಿಯನ್ ಪಿ. ಮಾಧವರಾಯ ಭಟ್ಟ, ಉದಯಶಂಕರ ಮತ್ತು ಮೋಹನ ಶೆಣೈಯವರು ನಾನು ಶಾಖೆಯ ಅಧಿಕಾರವನ್ನು ಕೈಗೆ ತೆಗೆದುಕೊಂಡ ದಿನವೇ ಬ್ರಾಂಚಿಗೆ ಬಂದು ನನ್ನನ್ನು ಮೂಡುಬಿದಿರೆ ರೋಟರಿ ಕ್ಲಬ್‌ನ ಸದಸ್ಯನಾಗಬೇಕೆಂದು ವಿನಂತಿಸಿಕೊಂಡರು. ನಾನು ಒಪ್ಪಿಕೊಂಡು ರೋಟರಿ ಸದಸ್ಯನಾದೆ.

ಅದೇ ಸಮಯದಲ್ಲಿ ಮೂಡುಬಿದಿರೆ ಕ್ಷೇತ್ರದಿಂದ ಎರಡು ಮೂರು ಬಾರಿ ಬಹುಮತದಿಂದ ಚುನಾಯಿತರಾಗಿ ಕರ್ನಾಟಕ ಸರಕಾರದಲ್ಲಿ ಮಂತ್ರಿಯಾಗಿ ಜನರ ಪ್ರೀತಿಪಾತ್ರರಾಗಿದ್ದ, ನಿಗರ್ವಿ, ಮೃದುಭಾಷಿ ಶ್ರೀ ಕೆ. ಅಮರನಾಥ ಶೆಟ್ಟಿಯವರು ಒಂದು ದಿನ ನನ್ನನ್ನು ಕರೆಸಿಕೊಂಡು, 'ನಾನು ರೋಟರಿ ಕ್ಲಬ್ ಮತ್ತು ಬೇರೆ ಸಂಸ್ಥೆಗಳ ಮೂಲಕ ಹಲವು ರೀತಿಯ ಕೆಲಸಗಳನ್ನು ಮಾಡಿದ್ದೇನೆ. ಆದರೆ ರೋಟರಿ ಕ್ಲಬ್‌ನಿಂದ ಬಡವರಿಗಾಗಿ ಉಚಿತ ನೇತ್ರ ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸೆಯ ಶಿಬಿರವನ್ನು ಮಾಡುವುದು ನನಗೆ ಸಾಧ್ಯವಾಗಲಿಲ್ಲ. ಅದನ್ನು ನೀವು ಮಾಡಬೇಕು. ಅದಕ್ಕೆ ತಗಲುವ ಎಲ್ಲಾ ಖರ್ಚು ವೆಚ್ಚಗಳ ವ್ಯವಸ್ಥೆಯನ್ನು ನಾನು ಮಾಡುತ್ತೇನೆ' ಎಂದು ಹೇಳಿದರು. ನಾನು ಅದಕ್ಕೆ ಒಪ್ಪಿಕೊಂಡು ಬಂಟವಾಳ ರೋಟರಿ ಕ್ಲಬ್‌ನಲ್ಲಿ ನನ್ನ ಜೊತೆ ಕೆಲಸ ಮಾಡಿಕೊಂಡಿದ್ದ ಶ್ರೀ ಪಿ. ದೇವದಾಸ್ ಶೆಣೈ(ದತ್ತು)ಯೊಂದಿಗೆ ಮಂಗಳೂರಿನ ಡಾ. ಸಿ.ಆರ್.ಕಾಮತ್, ಡಾ. ಆರ್.ಎನ್. ಸುಜೀರ್ ಮೊದಲಾದ ನೇತ್ರತಜ್ಞರೊಂದಿಗೆ ಮೂಡುಬಿದಿರೆಯಲ್ಲಿ ರೋಟರಿ "ಉಚಿತ ನೇತ್ರ ಯಜ್ಞ ಶಿಬಿರ"ವನ್ನು ಸಂಘಟಿಸಿದೆ. ೧೯೮೫-೮೬ನೇ ಇಸವಿಯಲ್ಲಿ ನಾನು ಮೂಡುಬಿದಿರೆ ರೋಟರಿ ಕ್ಲಬ್‌ನ ಅಧ್ಯಕ್ಷನೂ ಆದೆ. ಆ ವರ್ಷವೂ ಶ್ರೀ ಕೆ.ಅಮರನಾಥ ಶೆಟ್ಟಿಯವರ ಸಹಕಾರದಿಂದ ನಾವು ರೋಟರಿ ಉಚಿತ ನೇತ್ರ ಯಜ್ಞ ಶಿಬಿರವನ್ನು ನಡೆಸಿದೆವು. ಆಮೇಲಿನ ವರ್ಷಗಳಲ್ಲಿ ಅಲ್ಲಿಯ ರೋಟರಿ ಕ್ಲಬ್‌ನವರು ಶಿಬಿರಗಳನ್ನು ಆಯೋಜಿಸುತ್ತಾ ಬಂದಿದ್ದಾರೆ.

ನಾವು ಮೂಡುಬಿದಿರೆಯ ಎಲ್ಲ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳನ್ನು ಒಟ್ಟು ಸೇರಿಸಿ ಪ್ರಥಮವಾಗಿ ಸ್ವರಾಜ್ಯ ಮೈದಾನಿನಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದೆವು. ರೇಡಿಯೋ, ಟಿ.ವಿ., ಪೆವಿಲಿಯನ್(ಆಗಷ್ಟೇ ಟಿವಿ ಬಂದಿತ್ತು)ಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನೂ ಪ್ರಾರಂಭಿಸಿದೆವು.

ಆಗ ಮೂಡುಬಿದಿರೆ ಮಹಾವೀರ ಕಾಲೇಜಿನ ಪ್ರಾಂಶುಪಾಲರಾಗಿದ್ದವರು ಶ್ರೀ ಶ್ರೀನಿವಾಸ ಉಪಾಧ್ಯಾಯ. ಅವರು ಕೂಡ ಯಾವುದೇ ಕೆಲಸದ ನಾಯಕತ್ವ ವಹಿಸಿಕೊಂಡು ಕೆಲಸ ಮಾಡುವ ಧೀಮಂತರು ಮತ್ತು ಜನಪ್ರಿಯ ವ್ಯಕ್ತಿ. ಆ ಕಾಲೇಜಿನಲ್ಲಿ ಜಯಪ್ರಕಾಶ ಮಾವಿನಕುಳಿ(ಲೇಖಕ), ಡಾ. ಪುಂಡಿಕಾಯ್ ಗಣಪತಿ ಭಟ್(ಸಂಶೋಧಕ) ಮೊದಲಾದ ಪ್ರಸಿದ್ಧ ಅಧ್ಯಾಪಕರಿದ್ದರು. ೧೯೮೬ನೇ ಇಸವಿಯಲ್ಲಿ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವು ಮೂಡುಬಿದಿರೆಯ ಮಹಾವೀರ ಕಾಲೇಜಿನಲ್ಲಿ ನಡೆಯಿತು. ಆಗ ನಾನು ಸ್ವಾಗತ ಸಮಿತಿಯಲ್ಲಿ ಉಪಾಧ್ಯಕ್ಷನಾಗಿ ಪುಸ್ತಕ ಪ್ರದರ್ಶನದ ವ್ಯವಸ್ಥೆ ಮಾಡಿದೆ. ಈ ಸಮ್ಮೇಳನದಲ್ಲಿ ಡಾ. ಶಿವರಾಮ ಕಾರಂತ, ಡಾ. ಹಾ.ಮಾ.ನಾಯಕ, ಡಾ. ಯು.ಆರ್.ಅನಂತಮೂರ್ತಿ

ಮೊದಲಾದ ಪ್ರಸಿದ್ಧ ಸಾಹಿತಿಗಳು ಮತ್ತು ಧರ್ಮಸ್ಥಳದ ಶ್ರೀ ವೀರೇಂದ್ರ ಹಗ್ಗಡೆಯವರು ಭಾಗವಹಿಸಿದ್ದರು.

೧೯೮೬ನೇ ಇಸವಿಯಲ್ಲಿ 'ತುಳುನಾಡ ಕೇಸರಿ' ಕುಸ್ತಿಪಂದ್ಯ ಮೂಡುಬಿದಿರೆಯಲ್ಲಿ ನಡೆಯಿತು. ಈ ಪಂದ್ಯಕ್ಕೆ ಶ್ರೀ ಕೆ.ಅಮರನಾಥ ಶೆಟ್ಟಿಯವರ ಸಂಪೂರ್ಣ ಸಹಕಾರ ಮತ್ತು ಆರ್ಥಿಕ ಬೆಂಬಲವಿತ್ತು. ನಾನು ಸಂಘಟನಾ ಸಮಿತಿಯಲ್ಲಿ ಸಕ್ರಿಯನಾಗಿದ್ದೆ. ದ.ಕ. ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷರಾದ ಶ್ರೀ ಲೋಕಯ್ಯ ಶೆಟ್ಟಿ(ಕರ್ನಾಟಕದ ಮಾಜಿ ಶಾಸಕರು), ಶ್ರೀ ನಗರ ನಾರಾಯಣ ಶೆಣೈ(ಕಾರ್ಯದರ್ಶಿ) ಇವರು ಕುಸ್ತಿ ನಡೆದ ಮೂರೂ ದಿನಗಳಲ್ಲಿಯೂ ಮೂಡುಬಿದಿರೆಗೆ ಬಂದು ಕುಸ್ತಿ ಪಂದ್ಯಾಟಗಳ ಸಮಯದಲ್ಲಿ ಹಾಜರಿದ್ದರು. ಅವರು ನನ್ನ ಸ್ನೇಹಿತರೂ ಆಗಿದ್ದರು. 'ಮುಂದಿನ ವರ್ಷ ೧೬ನೇ ಕುಸ್ತಿ ಸ್ಪರ್ಧೆಯನ್ನು ಬಂಟವಾಳದಲ್ಲಿ ಆಯೋಜನೆ ಮಾಡೋಣವೇ?' ಎಂದು ಅವರು ನನಗೆ ಆಮಂತ್ರಣ ನೀಡಿದರು. ಆಗ ಅಲ್ಲಿ ಮಾನ್ಯ ಶ್ರೀ ಕೆ. ಅಮರನಾಥ ಶೆಟ್ಟಿಯವರೂ ಉಪಸ್ಥಿತರಿದ್ದರು. ನಾನು ಅವರ ಮಾತಿಗೆ ಒಪ್ಪಿಕೊಂಡೆ. ಹೀಗೆ ೧೯೮೭ನೇ ಇಸವಿ ಮೇ ತಿಂಗಳಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ಆಶ್ರಯದಲ್ಲಿ ಬಂಟವಾಳದಲ್ಲಿ ಕುಸ್ತಿ ಪಂದ್ಯ ನಡೆಯಿತು.

ಬೀಳ್ಕೊಡುಗೆ ಸಮಾರಂಭ

ಸಿಂಡಿಕೇಟ್ ಬ್ಯಾಂಕಿನ ಮೂಡುಬಿದಿರೆ ಶಾಖೆಯಲ್ಲಿ ಶ್ರೀ ಕೆ.ಅಮರನಾಥ ಶೆಟ್ಟಿಯವರ ಪತ್ನಿ ಜಯಶ್ರೀ ಶೆಟ್ಟಿ ಕ್ಲರ್ಕ್ ಆಗಿದ್ದರು. ಅವರು ತುಂಬಾ ಒಳ್ಳೆಯ ಮಹಿಳೆ. ಅವರಿಗೆ ನನ್ನ ಮೇಲೆ ಪಿತೃಸಮಾನ ಗೌರವ, ಅಭಿಮಾನ. ಅವರು ನನ್ನನ್ನು ಆಗಾಗ್ಗೆ ಮನೆಗೆ ಊಟಕ್ಕೆ ಕರೆಯುವುದಿತ್ತು, ಮನೆಯಲ್ಲಿ ಕೋಳಿ ಪಲ್ಯ ಮಾಡಿದರೆ ಅದನ್ನು ತಂದುಕೊಡುವುದಿತ್ತು. ಒಮ್ಮೆ ನಾನು ಬ್ಯಾಂಕಿನ ಸಿಬ್ಬಂದಿಗಳನ್ನು ನನ್ನ ತುಂಬೆ ಮನೆಗೆ ಊಟಕ್ಕೆ ಕರೆದ ಸಂದರ್ಭದಲ್ಲಿ ಜಯಶ್ರೀಯೂ ನನ್ನ ಮನೆಗೆ ಬಂದಿದ್ದರು. ನನ್ನ ಪತ್ನಿ ಸಾವಿತ್ರಿ ಮೇಲೆ ತುಂಬಾ ಪ್ರೀತಿ ಗೌರವ ತೋರಿಸಿದ್ದರು. ನನಗೆ ಪೆನ್ ತುಂಬಾ ಇಷ್ಟವೆಂದು ಸಾವಿತ್ರಿಯಿಂದ ತಿಳಿದುಕೊಂಡು ಮರುದಿನ ಅವರಲ್ಲಿದ್ದ ಚಿನ್ನದ ಶೇಫರ್ ಮತ್ತು ಪಾರ್ಕರ್ ಪೆನ್ನನ್ನು ತಂದು ಜಯಶ್ರಿಯವರು ನನಗೆ ನೆನಪಿನ ಕಾಣಿಕೆಯಾಗಿ ನೀಡಿದ್ದರು.

ಕಳೆದ ಇಪ್ಪತ್ತು ವರ್ಷಗಳಿಂದ ಸಣ್ಣ ದೊಡ್ಡ ಶಾಖೆಗಳಲ್ಲಿ ವ್ಯವಸ್ಥಾಪಕನಾಗಿ ಬೇಕಾದಷ್ಟು ಅನುಭವವನ್ನು ಪಡೆದು ಈಗ ಬ್ಯಾಂಕಿಂಗ್ ಕ್ಷೇತ್ರದಿಂದ ನಿವೃತ್ತನಾಗಲು ನಾಲ್ಕು ವರ್ಷಗಳು ಬಾಕಿ ಉಳಿದಿರುವುದರಿಂದ, ಮುಂದಿನ ಹಾಗೂ ಕೊನೆಯ ನಾಲ್ಕು ವರ್ಷಗಳನ್ನಾದರೂ ವ್ಯವಧಾನದಿಂದ ಕಳೆಯೋಣವೆಂಬ ದೃಷ್ಟಿಯಿಂದ ಆಗ ಸಿಂಡಿಕೇಟ್ ಬ್ಯಾಂಕ್‌ನ ಜನರಲ್ ಮೆನೇಜರ್ ಮತ್ತು ನನ್ನ ಆಪ್ತರೂ ಆಗಿದ್ದ ಶ್ರೀ ಕೆ.ಸಿ.ಪೈ ಮತ್ತು ಚೇರಮನ್ ಶ್ರೀ ಎ. ಕೃಷ್ಣರಾವ್ ಅವರನ್ನು ಭೇಟಿಯಾಗಿ ನನಗೆ ಮಂಗಳೂರಿನ ಡಿವಿಜನಲ್ ಕಚೇರಿಗೆ ವರ್ಗಾವಣೆ ಮಾಡಬೇಕೆಂದು ವಿನಂತಿ ಮಾಡಿಕೊಂಡೆ. 'ನೀವು ಇಷ್ಟು ಕ್ರಿಯಾಶೀಲರಾಗಿದ್ದೀರಿ, ನಿಮಗೆ ಡಿವಿಜನಲ್ ಆಫೀಸಿನಲ್ಲಿ ಬೇಸರ ಬರಬಹುದು, ಸಾಕೆನಿಸಬಹುದು. ನೀವು ಇಷ್ಟಪಡುವುದಾದರೆ ಮಾತ್ರ ಟ್ರಾನ್ಸ್‌ಫರ್ ಕೊಡೋಣ' ಎಂದು ಹೇಳಿದರು.'ನನ್ನ ವೃತ್ತಿ ಜೀವನದ ಕೊನೆಯ ನಾಲ್ಕು ವರ್ಷಗಳನ್ನು ಮಂಗಳೂರು ಡಿವಿಜನಲ್ ಕಚೇರಿ ಅಥವಾ ರೀಜಿನಲ್ ಆಫೀಸಿನಲ್ಲಿ ಕಳೆಯುವುದು ಉತ್ತಮವೆಂದು ನನಗೆ ಅನಿಸುತ್ತಿದೆ' ಎಂದು ಆ ಹಿರಿಯ ಅಧಿಕಾರಿಗಳಿಗೆ ತಿಳಿಸಿದೆ. ಹೀಗಾಗಿ ೧೯೮೮ನೇ ಇಸವಿ ಜೂನ್ ತಿಂಗಳಲ್ಲಿ ನಾನು ಮಂಗಳೂರಿನ ಕದ್ರಿಯ ಭಾರತ ಬೀಡಿ ಕಟ್ಟಡದಲ್ಲಿರುವ ಸಿಂಡಿಕೇಟ್ ಬ್ಯಾಂಕಿನ ಡಿವಿಜನಲ್ ಕಚೇರಿ ಸೇರಿದೆ.

ನಾನು ಮೂಡುಬಿದಿರೆ ಶಾಖೆಯಿಂದ ಮಂಗಳೂರು ಡಿವಿಜನಲ್ ಕಚೇರಿಗೆ ವರ್ಗವಾಗಿ ಹೋಗುವಾಗ, ಬೇರೆ ಬೇರೆ ಕ್ಷೇತ್ರದ ಮುಖಂಡರು ಒಟ್ಟು ಸೇರಿ ಸಮಿತಿ ರಚಿಸಿ ನನಗಾಗಿ ದೊಡ್ಡ ರೀತಿಯಲ್ಲಿ 'ಬೀಳ್ಕೊಡುಗೆ ಸಮಾರಂಭ'ವನ್ನು ನಡೆಸಿದ್ದರು. ಆಗ ಕರ್ನಾಟಕ ಸರಕಾರದಲ್ಲಿ ಧಾರ್ಮಿಕದತ್ತಿ ಸಚಿವರಾಗಿದ್ದ ಶ್ರೀ ಕೆ. ಅಮರನಾಥ ಶೆಟ್ಟಿಯವರು ಅಧ್ಯಕ್ಷರಾಗಿ ಜೈನ ಮಠದ ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿಯವರ ಸನ್ನಿಧಿಯಲ್ಲಿ ಸಮಾರಂಭ ನಡೆಯಿತು. ಮುಖ್ಯ ಅತಿಥಿಗಳಾಗಿ ಉದ್ಯಮಿ ಶ್ರೀ ಕೆ. ವಿಶ್ವನಾಥ ಪ್ರಭು(ನಿರ್ದೇಶಕರು ರಾಜ್ಯ ಆಹಾರ ನಿಗಮ) ಮತ್ತು ಶ್ರೀ ಮಹಾವೀರ ಕಾಲೇಜಿನ ಪ್ರಾಂಶುಪಾಲರಾದ ಡಾ. ಯು. ಶ್ರೀನಿವಾಸ ಉಪಾಧ್ಯಾಯರಿದ್ದರು. ನಾನು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಾತ್ರವಲ್ಲದೆ ರೋಟರಿ ಮತ್ತು ಇತರ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಹೃತ್ಪೂರ್ವಕವಾಗಿ ನೀಡಿದ ಸೇವೆಯನ್ನು ನೆನಪಿಸಿಕೊಳ್ಳಲಾಯಿತು. ನನಗೆ ಮಾನಪತ್ರವನ್ನೂ ನೀಡಿದರು.

ಮೂಡುಬಿದಿರೆಯಲ್ಲಿ ನಡೆದ ಈ ಸಮಾರಂಭಕ್ಕೆ ನನ್ನ ಪತ್ನಿ ಸಾವಿತ್ರಿ ಮತ್ತು ಬಂಟವಾಳದ ನನ್ನ ಕೆಲವು ಅಭಿಮಾನಿಗಳೂ ಬಂದಿದ್ದರು.

೧೨. ಶ್ರೀ ಯಶವಂತ ವ್ಯಾಯಾಮ ಶಾಲೆ- ೨

"ಶ್ರೀ ಎಂ. ಕೃಷ್ಣಪ್ರಭು ಸ್ಮಾರಕ ತುಳುಕೇಸರಿ ಮತ್ತು ತುಳುಕುಮಾರ ಕುಸ್ತಿ ಪಂದ್ಯಾಟ–೧೬"

ನಾವು ಶ್ರೀ ಯಶವಂತ ವ್ಯಾಯಾಮ ಶಾಲೆಯ ಆಶ್ರಯದಲ್ಲಿ 'ಶ್ರೀ ಎಂ. ಕೃಷ್ಣಪ್ರಭು ಸ್ಮಾರಕ ತುಳುಕೇಸರಿ ಮತ್ತು ತುಳುಕುಮಾರ ಕುಸ್ತಿ ಪಂದ್ಯಾಟ– ೧೬'ನ್ನು ಆಯೋಜಿಸುವುದೆಂದು ತೀರ್ಮಾನಿಸಿದೆವು. ನಾನು ಶ್ರೀ ಬಿ. ಶ್ರೀನಿವಾಸ ನಾಯಕ, ಶ್ರೀ ಎಂ. ವೇದವ್ಯಾಸ ಪ್ರಭು, ನಾರಾಯಣ ಕಾಮತಿ, ಮಾಣೂರ ಲಕ್ಷ್ಮಣ ಕಾಮತಿಯವರೊಂದಿಗೆ ಸಮಾಲೋಚನೆ ನಡೆಸಿ ೧೯೮೦ನೇ ಇಸವಿ ಮೇ ತಿಂಗಳಲ್ಲಿ ನಡೆಯಲಿರುವ ೧೬ನೇ ಕುಸ್ತಿ ಪಂದ್ಯದ ತಯಾರಿಯನ್ನು ನಡೆಸಿದೆ. ನಮ್ಮ ಸಮಾಜದ ಪ್ರಸಿದ್ಧ ಕುಸ್ತಿಪಟು ಮಂಗಳೂರು ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆಯ ಸ್ಥಾಪಕರಾಗಿದ್ದು, ಶ್ರೀ ಎಂ. ಸಂಕಪ್ಪ ಶೆಟ್ಟಿ ಅವರಂತಹ ಪ್ರಸಿದ್ಧ ಪೈಲ್ವಾನರನ್ನು ಸಿದ್ಧಗೊಳಿಸಿದ್ದ ನೆನಪಿಗಾಗಿ ಈ ಕುಸ್ತಿಪಂದ್ಯಾಟಕ್ಕೆ 'ದಿ. ಶ್ರೀ ಎಂ. ಕೃಷ್ಣಪ್ರಭು ಸ್ಮಾರಕ ಕುಸ್ತಿ ಪಂದ್ಯಾಟ' ಎಂಬ ಹೆಸರನ್ನಿಟ್ಟೆವು. ಬಂಟವಾಳದ ಎಸ್.ವಿ.ಎಸ್. ಹೈಸ್ಕೂಲ್‌ನ ಎದುರಿನ ಗದ್ದೆಯನ್ನು ಸಮತಟ್ಟಾಗಿಸಿಕೊಂಡು ಅಲ್ಲಿ ಕುಸ್ತಿ ಪಂದ್ಯವನ್ನು ನಡೆಸುವುದೆಂದು ನಿರ್ಧರಿಸಿದೆವು.

ಮಣಿಪಾಲದ ಶ್ರೀ ಕೆ.ಕೆ. ಪೈ ಅವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಶಾಸಕ ಶ್ರೀ ಬಿ. ರಮಾನಾಥ ರೈ, ನಗರ ಸಭಾಧಿಪತಿ ಶ್ರೀ ಪಿ. ದೇವದಾಸ ಶೆಣೈ, ಶ್ರೀ ಬರಂಗೆರೆಗುತ್ತು ಸದಾನಂದ ಪೂಂಜಾ ಸದಸ್ಯರಾಗಿದ್ದರು. ಇವರಲ್ಲದೆ ನನ್ನೊಂದಿಗೆ ಬೊಳಂತೂರು ಲಕ್ಷ್ಮೀನಾರಾಯಣ ಪ್ರಭು, ಶ್ರೀ ಬಿ. ಶ್ರೀನಿವಾಸ ನಾಯಕ, ಶ್ರೀ ಮುಂಡ್ಕೂರ ವೇದವ್ಯಾಸ ಪ್ರಭು, ಶ್ರೀ ಬೊ. ರವಿದಾಸ ಪೈ, ಮತ್ತು ಗೋದೆ ಶಾಲೆಯ ಶ್ರೀ ಪಿ. ಪದ್ಮನಾಭ ಭಂಡಾರಕರ್, ಪಿ. ನಾರಾಯಣ ಕಾಮತ, ಮಾಣೂರ ಲಕ್ಷ್ಮಣ ಕಾಮತ, ಬೊ. ಪ್ರಭಾಕರ ಪ್ರಭು, ಬಿ. ನಾಗೇಂದ್ರ ಬಾಳಿಗ ಮೊದಲಾದವರು ಕೆಲಸ ಮಾಡಿದ್ದರಿಂದ ಕುಸ್ತಿ ಪಂದ್ಯಾಟ ಬಹಳ ಉತ್ತಮ ರೀತಿಯಲ್ಲಿ ಯಶಸ್ಸನ್ನು ಪಡೆಯಿತು. ರಾಷ್ಟ್ರೀಯ ಮಾನ್ಯತೆ ಇದ್ದಂತಹ ಕುಸ್ತಿ ರೆಫ್ರಿ ಶ್ರೀ ಟಿ.ಆರ್. ಸ್ವಾಮಿ ಬಂದಿದ್ದರು. ತುಳುನಾಡಿನ ಖ್ಯಾತ ಕುಸ್ತಿಗುರು ಪೈಲ್ವಾನ್ ಸಂಕಪ್ಪ ಶೆಟ್ಟಿಯವರು ತಮ್ಮ ಶಿಷ್ಯರನ್ನು ಕರೆದುಕೊಂಡು ಬಂದಿದ್ದರು. ಮಂಗಳೂರು, ಉಳ್ಳಾಲ, ಮೂಡುಬಿದಿರೆ, ಮತ್ತು ಉಡುಪಿಯಿಂದ ಸುಮಾರು ಐನೂರಕ್ಕೂ ಹೆಚ್ಚು ಕುಸ್ತಿಪಟುಗಳು ಬಂದಿದ್ದರು. ಅವರಿಗೆ ತಿಂಡಿ, ಊಟ, ಹಾಗೂ ವಸತಿ ವ್ಯವಸ್ಥೆಯನ್ನು ಬೇರೆ ಬೇರೆ ಸಮಿತಿಯವರು ಮಾಡಿದರು. ಇದಲ್ಲದೆ ಗುರುದಾಸ್ ಶೆಣೈ, ಭಾಮಿ ಸುಧಾಕರ ಶೆಣೈ, ಮತ್ತು ಕೆ. ಅಪ್ಪುರಾಯ ಪೈ ಮತ್ತಿತರ ತರುಣರು ಕಾಫಿ, ಚಹಾ, ತಿಂಡಿಯ ಪ್ರತ್ಯೇಕ ಕ್ಯಾಂಟಿನ್ ಮಾಡಿದ್ದರಿಂದ ಊರು, ಪರವೂರಿನಿಂದ ಬಂದ ಕುಸ್ತಿ ಪ್ರಿಯರಿಗೆ ತುಂಬಾ ಅನುಕೂಲವಾಯಿತು.

'ತುಳುಕೇಸರಿ' ಕುಸ್ತಿಯಲ್ಲಿ ವಿಜಯಿಯಾದವರಿಗೆ ಧರ್ಮಸ್ಥಳ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗಡೆಯವರು ನೀಡುವ "ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಪ್ರಶಸ್ತಿ" ದೊರೆಯುತ್ತದೆ. ಕುಸ್ತಿ ಪಂದ್ಯದ ಆಯೋಜನೆಯನ್ನು ನಾವು ಶ್ರೀ ಯಶವಂತ ವ್ಯಾಯಾಮ ಶಾಲೆಯ ವತಿಯಿಂದ ಮಾಡಿದ್ದೆವು. ಕುಸ್ತಿ ಪಂದ್ಯಕ್ಕಾಗಿ ಮೂರು ದಿನವೂ ಕುಸ್ತಿ ಪ್ರಿಯರು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ಮೂರನೆಯ ದಿನ ಸಂಜೆ 'ತುಳುಕೇಸರಿ' ಬಿರುದನ್ನು ಪಡೆದ ಪೈಲ್ವಾನರನ್ನು ಕಟೀಲು ದೇವಸ್ಥಾನದ ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆಯನ್ನು ನಡೆಸಲಾಗಿತ್ತು.

ಆಹ್ವಾನಿತ ಪೈಲ್ವಾನರ ಫಲಾಹಾರ ಮತ್ತು ಊಟಕ್ಕಾಗಿ ಅಪ್ಪಟ ಕೊಂಕಣಿ ತಿಂಡಿ ಮತ್ತು ಪಲ್ಯಗಳು, ಸಿಹಿತಿಂಡಿಗಳನ್ನು ತಯಾರಿಸಲಾಗಿತ್ತು ಮತ್ತು ಅವರು ಅದನ್ನು ಹಸಿವಿನಿಂದ ತಿನ್ನುವುದು, ಊಟಮಾಡುವುದು ನೋಡುವುದೇ ಕಣ್ಣಿಗೆ ಒಂದು ಹಬ್ಬವಾಗಿತ್ತು. ಮೂರು ದಿನ ಕಳೆದು ಅವರು ಹಿಂತಿರುಗುವಾಗ

ಕಣ್ಣಿನಿಂದ ಆನಂದಬಾಷ್ಪಗೆರೆದು ಹೋದರು. ಅವರಲ್ಲಿ ಪ್ರತಿಯೊಬ್ಬರೂ ನನಗೆ ಹಸ್ತಲಾಘವ ನೀಡಿ ಹೋಗಿದ್ದಾರೆ.

ವ್ಯಾಯಮ ಶಾಲೆಯ ವಿದ್ಯಾರ್ಥಿಗಳಿಂದ ಕಾಶಿ ಯಾತ್ರೆ

೧೯೮೭ರಲ್ಲಿ ನಾನು ಮಂಗಳೂರು ಕದ್ರಿ ಶಾಖೆಯಲ್ಲಿ ಮೆನೇಜರ್ ಆಗುವ ೪-೫ ತಿಂಗಳು ಮೊದಲೇ ಕಾಶೀ ಕ್ಷೇತ್ರದಲ್ಲಿ ಕಾಶೀಮಠದ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಶಿಷ್ಯ ಸ್ವೀಕಾರ ಮಾಡುವ ವಿಚಾರವನ್ನು ಎಲ್ಲ ಶಿಷ್ಯವರ್ಗಕ್ಕೆ ತಲುಪಿಸಲಾಗಿತ್ತು. ಹೀಗಾಗಿ ನಾವು ಅಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ಮಲ್ಲಕಂಬ ಪ್ರದರ್ಶನ ಮತ್ತು ಇತರ ವ್ಯಾಯಾಮ ಪ್ರದರ್ಶನ ನೀಡುವ ವಿಚಾರವಾಗಿ ಶ್ರೀ ಗುರುವರ್ಯರ ಬಳಿ ನಿವೇದಿಸಲು ಹೋಗಿದ್ದೆವು. ೧೯೪೪ನೇ ಇಸವಿಯಲ್ಲಿ ಮೂಲ್ಕಿ ಶ್ರೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಶ್ರೀ ಸುಕೃತೀಂದ್ರ ಸ್ವಾಮೀಜಿಯವರು ಶ್ರೀ ಸುಧೀಂದ್ರತೀರ್ಥರನ್ನು ಶಿಷ್ಯ ಸ್ವೀಕಾರ ಮಾಡುವ ಸಮಾರಂಭದ ದಿನಗಳಲ್ಲಿ ನಮ್ಮ ಗೋದೆ ಶಾಲೆಯ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನ ನಡೆದಿತ್ತು. ಆ ಕಾರ್ಯಕ್ರಮದಲ್ಲಿ ನಾನೂ ಪಾಲುಗೊಂಡಿದ್ದೆ. ಅದನ್ನು ಈಗ ಶ್ರೀ ಗುರುವರ್ಯರಿಗೆ ತಿಳಿಸಿ ಕಾಶಿಯಲ್ಲಿ ನಡೆಯಲಿರುವ ಶಿಷ್ಯ ಸ್ವೀಕಾರದ ಸಂದರ್ಭದಲ್ಲಿಯೂ ಗೋದೆಶಾಲೆಯ ವಿದ್ಯಾರ್ಥಿಗಳಿಂದ ವ್ಯಾಯಾಮ ಪ್ರದರ್ಶನವನ್ನು ನಡೆಸಲು ನಮಗೆ ಅವಕಾಶ ನೀಡಿ ಆಶೀರ್ವಾದಿಸಬೇಕೆಂದು ನಾನು ನಿವೇದನೆ ಮಾಡಿದ್ದೆ. ಅದಕ್ಕೆ ಶ್ರೀ ಗುರುವರ್ಯರು ಸಂತೋಷದಿಂದ ಒಪ್ಪಿಕೊಂಡು ಪ್ರಸಾದ ನೀಡಿ ಆಶೀರ್ವದಿಸಿದ್ದರು. ಕಾಶಿಗೆ ಹೋಗಿ ಬರುವ ಪ್ರಯಾಣಕ್ಕೆ ರೈಲ್ವೇ ರಿಸರ್ವೇಶನ್ ಮಾಡಿಸುವುದಕ್ಕೆ ಮತ್ತು ಟಿಕೇಟಿನಲ್ಲಿ ನಮಗೆ ರಿಯಾಯಿತಿ ದರ ಸಿಗುವುದಕ್ಕೆ ಆ ದಿನಗಳಲ್ಲಿ ಪ್ರಾದೇಶಿಕ ರೈಲ್ವೇ ಬೋರ್ಡಿನ ಸದಸ್ಯರಾಗಿದ್ದ ಶ್ರೀ ಎಂ. ಬಾಲಕೃಷ್ಣ ಕಾಮತ್(ಬಾಲ್ಲು) ಅವರು ತುಂಬ ಸಹಾಯ ಮಾಡಿದರು. ಮಲ್ಲಕಂಬ ಮತ್ತು ಇತರ ಉಪಕರಣಗಳನ್ನು ತೆಗೆದುಕೊಂಡು ವ್ಯಾಯಾಮ ಶಾಲೆಯ ೪೦ ವಿದ್ಯಾರ್ಥಿಗಳು ಮತ್ತು ವ್ಯಾಯಾಮ ಗುರುಗಳಾದ ಶ್ರೀ ಉಳ್ಳಾಲ ವಾಸುದೇವ ಕಿಣಿ, ಶ್ರೀನಿವಾಸ ನಾಯಕ್, ಎಂ.ವೇದವ್ಯಾಸ ಪ್ರಭು ಮತ್ತು ನಾನು ೧೯೮೭ನೇ ಇಸವಿ ಜುಲೈ ೩೦ರಂದು ಬೆಳಿಗ್ಗೆ ರೈಲಿನಲ್ಲಿ ಬನಾರಸಿಗೆ ಹೊರಟು, ಆಗಸ್ಟ್ ೬ರಂದು ಬೆಳಿಗ್ಗೆ ಬನಾರಸ್ ತಲುಪಿದೆವು. ರೈಲು ನಿಲ್ದಾಣದಿಂದ ಬೇರೆ ವಾಹನದಲ್ಲಿ ಕಾಶೀಮಠಕ್ಕೆ ಹೋದೆವು. ಅದೇ ದಿನ ರಾತ್ರಿ ಯಶವಂತ ವ್ಯಾಯಾಮ ಶಾಲೆಯ ಮಲ್ಲಕಂಬ ವ್ಯಾಯಾಮ ಪ್ರದರ್ಶನವಿತ್ತು.

ಮರುದಿನ ೭ನೇ ತಾರೀಖಿನಂದು ದೀಕ್ಷಾ ಸಮಾರಂಭ. ನಾವೆಲ್ಲರೂ ಕಾಶಿ ಶ್ರೀ ವಿಶ್ವನಾಥನ ದರ್ಶನ ಪಡೆದೆವು. ಅನಂತರ ಗಂಗಾನದಿ ತೀರದಲ್ಲಿರುವ ಕಾಶೀಮಠದಲ್ಲಿ ಶಿಷ್ಯಸ್ವೀಕಾರ ನಡೆಯಿತು. ಅದೇ ದಿನ ನಾವು ಸಾರನಾಥ, ಬನಾರಸ ಹಿಂದೂ ವಿಶ್ವವಿದ್ಯಾಲಯ, ತುಳಸಿ ಮಾನಸ ದೇವಾಲಯ ಮತ್ತು ಕಾಶಿಪಟ್ಟಣ ನೋಡಲು ಹೋದೆವು. ಮಂಗಳೂರು ನಿರ್ಮಲಾ ಟ್ರಾವೆಲ್ಸ್‌ನ ಶ್ರೀ ಸಿ. ಉಪೇಂದ್ರ ಕಾಮತರು(ಉಪ್ಪಿ) ಸೇವೆಯ ರೂಪದಲ್ಲಿ ನಮಗಾಗಿ ಬಸ್ಸಿನ ವ್ಯವಸ್ಥೆಯನ್ನು ಮಾಡಿದ್ದರು.

ಮರುದಿನ ೮ನೇ ತಾರೀಖು, ಶನಿವಾರ. ಆ ದಿನ ಬೆಳಗ್ಗೆ ರೈಲಿನಲ್ಲಿ ದೆಹಲಿಗೆ ಹೊರಟೆವು. ೯ರಂದು ಮುಂಜಾನೆ ದೆಹಲಿ ತಲುಪಿದೆವು. ಅಲ್ಲಿ ಸಿಂಡಿಕೇಟ್ ಬ್ಯಾಂಕ್ ಡೆಪ್ಯುಟಿ ಜನರಲ್ ಮ್ಯಾನೆಜರ್ ಆಗಿದ್ದವರು ನನ್ನ ಬಂಟವಾಳದ ಸಹಪಾಠಿ, ಶ್ರೀ ಬಿ. ಪುಂಡಲೀಕ ಬಾಳಿಗ. ನಾವು ಅವರ ನೇತೃತ್ವದಲ್ಲಿ ಮತ್ತು ಡಿವಿಜನಲ್ ಮ್ಯಾನೆಜರ್ ಶ್ರೀ ಕೆ.ವಿ. ಭಂಡಾರಿ, ಮೂಲ್ಕಿ ಕೃಷ್ಣ ಕಾಮತಿ, ಉಡುಪಿ ಕೃಷ್ಣ ಭಟ್ ಇವರ ಸಹಕಾರದಿಂದ ಆ ಸಂಜೆ ದೆಹಲಿಯಲ್ಲಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ವಿದ್ಯಾರ್ಥಿಗಳ ಮಲ್ಲಕಂಬ ಮತ್ತು ವ್ಯಾಯಾಮ ಪ್ರದರ್ಶನವನ್ನು ನೀಡಿದೆವು. ನಮ್ಮ ದೆಹಲಿಯ ಖರ್ಚು ಸಿಂಡಿಕೇಟ್ ಬ್ಯಾಂಕ್‌ವತಿಯಿಂದ ನಡೆಯಿತು. ಆಗ ದೆಹಲಿಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಮ್ಯಾನೆಜರ್ ಆಗಿದ್ದ ನನ್ನ ತಮ್ಮ ಜಿ. ವೆಂಕಟರಮಣನು ನಮ್ಮ ವಸತಿ ವ್ಯವಸ್ಥೆಯನ್ನು ಅವನ ಮನೆಯ ಹತ್ತಿರವಿದ್ದ ಗೆಸ್ಟ್‌ಹೌಸ್‌ನಲ್ಲಿ ಮಾಡಿದ್ದರಿಂದ ಮತ್ತು ಬಂದು ಹೋಗುವ ವ್ಯವಸ್ಥೆಯನ್ನೂ ಅವನೇ ನಡೆಸಿದ್ದರಿಂದ ನಮ್ಮ ದೆಹಲಿ ದರ್ಶನ ಉತ್ತಮ ರೀತಿಯಿಂದ ನಡೆಯಿತು. ಮರುದಿನ ಸೋಮವಾರ ನಾವು ಕುತುಬ್ ಮಿನಾರ್, ಕಾತ್ಯಾಯನಿ ದೇವಾಲಯ, ಇಂದಿರಾಗಾಂಧಿ ಸ್ಮೃತಿಭವನ, ಪಾಲಿಕಾಬಜಾರ್, ಮಹಾತ್ಮಾಗಾಂಧಿ ಸಮಾಧಿ ಇತ್ಯಾದಿ ಸ್ಥಳಗಳನ್ನು ನೋಡಿದೆವು. ೧೧ನೇ ತಾರೀಖು ಮಂಗಳವಾರದಂದು ಕೇರಳ ಎಕ್ಸ್‌ಪ್ರೆಸ್‌ನಲ್ಲಿ ದೆಹಲಿಯಿಂದ ಹೊರಟು ಗುರುವಾರದ ದಿನ ಅಂದರೆ ೧೩ರಂದು ರಾತ್ರಿ ಮಂಗಳೂರು ತಲುಪಿದೆವು.

ಬಂಟವಾಳ ಜಿ.ಎಸ್.ಬಿ. ಸಮಾಜ ಸೇವಾ ಸಂಘ

ನಾನು ೧೯೮೮ರಲ್ಲಿ ಮೂಡುಬಿದಿರೆ ಶಾಖೆ ಸೇರಿದೆನಾದರೂ, ನಾನು ಇರುತ್ತಿದ್ದುದು ತುಂಬೆಯ ನನ್ನ

ಮನೆಯಲ್ಲಿ. ಹೀಗಾಗಿ ನನಗೆ ಬಂಟವಾಳ ಶ್ರೀ ವೆಂಕಟರಮಣ ದೇವಾಲಯ, ಶ್ರೀ ಯಶವಂತ ವ್ಯಾಯಾಮ ಶಾಲೆ ಮತ್ತು ಎಸ್.ವಿ.ಎಸ್. ವಿದ್ಯಾಸಂಸ್ಥೆಗಳ ಕೆಲಸಗಳಲ್ಲಿ ತೊಡಗಿಕೊಂಡಿರುವುದು ಸಾಧ್ಯವಾಯಿತು.

ಅದೇ ಸಮಯದಲ್ಲಿ ನಾವು ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮಿಜಿಯುವರ ಆಶೀರ್ವಾದದೊಂದಿಗೆ ೧೯೮೫ನೇ ಇಸವಿಯಲ್ಲಿ ಜಿ.ಎಸ್.ಬಿ. ಸಮಾಜ ಸೇವಾ ಸಂಘವೆಂಬ ಒಂದು ಸಂಸ್ಥೆಯನ್ನು ವ್ಯಾಯಾಮ ಶಾಲೆಯಲ್ಲಿ ಉದ್ಘಾಟಿಸಿದೆವು. ಬಂಟವಾಳ ಸಮಾಜದ ಹಿರಿಯರಾದ ಶ್ರೀ ಬಿ. ನರಸಿಂಹ ಚರ್ಡಪ್ಪ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಯಿತು. ಸೇವಾಸಂಘದ ವತಿಯಿಂದ ಸಮಾಜದ ಗಣತಿ, ಸಾಮೂಹಿಕ ಬ್ರಹ್ಮೋಪದೇಶ, ಹೆಣ್ಣುಮಕ್ಕಳಿಗೆ ಹೊಲಿಗೆ ಕಲಿಸುವ ಕೇಂದ್ರ, ವಿವಾಹ ಮಾಹಿತಿಕೇಂದ್ರ, ಮಹಿಳೆಯರಿಗಾಗಿ ಶ್ರೀ ಲಲಿತ ಸಹಸ್ರನಾಮ ಲಕ್ಷಾರ್ಚನ, ಆರೋಗ್ಯ ತಪಾಸಣೆ, ಸಮಾಜದ ಬಡ ಹೆಣ್ಣು ಮಕ್ಕಳ ಮದುವೆ ಇತ್ಯಾದಿ ಬಹಳ ಸಮಾಜಮುಖೀ ಕಾರ್ಯಕ್ರಮಗಳನ್ನು ನಾವು ಯಶಸ್ವಿಯಾಗಿ ನೆರವೇರಿಸಿದ್ದೆವು.

ಗಾಯತ್ರಿ ಜಪ ಯಜ್ಞ

ವೇದಮೂರ್ತಿ ಶ್ರೀ ಬಿ. ಬಾಬ ಆಚಾರ್ಯರ ಮುಖಂಡತ್ವದಲ್ಲಿ ನಡೆದ ಮಹತ್ವಪೂರ್ಣ ಕಾರ್ಯಕ್ರಮವಾದ ಶ್ರೀ ಗಾಯತ್ರಿ ಜಪ ಯಜ್ಞದಲ್ಲಿ ಒಂದು ತಿಂಗಳು ಅನ್ನಾಹಾರದಲ್ಲಿ ನಿಯಂತ್ರಣ ಮಾಡಿ ಬೆಳಗ್ಗೆ, ಸಂಜೆ ಗಾಯತ್ರಿ ಮಂತ್ರಪಠಣ ಮಾಡುವುದು ಮತ್ತು ಕೊನೆಯ ದಿನ ವೈದಿಕರು ಸೇರಿ ಹೋಮ, ಹವನ, ಜಪಯಜ್ಞ ಮಾಡುವುದಿತ್ತು. ಗಾಯತ್ರಿ ಮಂತ್ರಪಠಣದಿಂದ ದೇಹ ಮತ್ತು ಮನಸ್ಸಿನ ಮೇಲೆ ತುಂಬಾ ಪರಿಣಾಮ ಕಂಡು ಬಂತು. ಇದರಲ್ಲಿ ಬಂಟವಾಳದ ಮತ್ತು ಸುತ್ತಮುತ್ತಲಿನ ಊರುಗಳ ನೂರಕ್ಕೂ ಅಧಿಕ ತರುಣರು ಮತ್ತು ಹಿರಿಯರು ಭಾಗವಹಿಸಿದ್ದರು

ಎನ್.ಆರ್. ಬಂಟವಾಳಕಾರ್ ಕೊಂಕಣಿ ನಾಟಕೋತ್ಸವ

ಎನ್.ಆರ್. ಬಂಟವಾಳಕಾರ್ ಸ್ಮರಣಾರ್ಥ ೩ ದಿನಗಳ ಕೊಂಕಣಿ ನಾಟಕೋತ್ಸವವನ್ನು ಜಿ.ಎಸ್.ಬಿ. ಸೇವಾ ಸಂಘದ ವತಿಯಿಂದ ಬಂಟವಾಳ ಪ್ರೌಢಶಾಲೆಯ ರಂಗಮಂದಿರದಲ್ಲಿ ನಡೆಸಲಾಯಿತು. ೧೯೮೬ರ ಮಾರ್ಚ್ ೨೩ರಂದು ಸಂಜೆ ಬಂಟವಾಳ ಶ್ರೀ ದೇವಾಲಯದಲ್ಲಿ ಮೊಕ್ಕಾಂ ಹೂಡಿದ್ದ ಗೋಕರ್ಣ ಜೀವೋತ್ತಮ ಪರ್ತಗಾಳಿ ಮಠಾಧೀಶ ಶ್ರೀ ವಿದ್ಯಾಧಿರಾಜ ಸ್ವಾಮೀಜಿಯುವರು ಈ ನಾಟಕೋತ್ಸದ ಉದ್ಘಾಟನೆಯನ್ನು ನೆರವೇರಿಸಿದರು. ಮೊದಲ ದಿನ ಅನಂತ ಮಾಸ್ತರ ಮತ್ತು ಪಂಗಡದವರ ನಾಟಕ ಇತ್ತು. ಮುಂದಿನ ಎರಡು ದಿನಗಳಲ್ಲಿ ಮುಂಬೈಯ ಕೊಂಕಣಿ ತ್ರಿವೇಣಿ ಕಲಾ ಸಂಗಮದ ವತಿಯಿಂದ ನಾಟಕಗಳು ನಡೆದವು.

ಮುಂಬೈಯ ತ್ರಿವೇಣಿ ಕಲಾ ಸಂಗಮ ಸಂಸ್ಥೆಯು ನಾಟಕ ಕ್ಷೇತ್ರದಲ್ಲಿ ತುಂಬಾ ಪ್ರಸಿದ್ಧವಾಗಿರುವ ಸಂಸ್ಥೆ. ಈ ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನಾಟಕ ಪ್ರದರ್ಶನವನ್ನು ಮೊದಲು ನೀಡಿದ್ದು ಬಂಟವಾಳದಲ್ಲಿ. ನಾವು 'ಎನ್.ಆರ್. ಬಂಟವಾಳಕಾರ್ ನಾಟಕೋತ್ಸವಕ್ಕೆ ಸಂಬಂಧಿಸಿದಂತೆ ಒಂದು ಸ್ಮರಣ ಸಂಚಿಕೆಯನ್ನು ಪ್ರಕಟಿಸಿದೆವು. ಈ ಸಂಚಿಕೆಗೆ 'ನಾಟಕದ ನಾಣ್ಣು' ಮಾಮರ ಮಿತ್ರ ಡಾ. ಶಿವರಾಮ ಕಾರಂತರು ತಮ್ಮ ನೆನಪಿನ ಒಂದು ಲೇಖನವನ್ನು ಬರೆದು ನೀಡಿದ್ದರು. (ಶ್ರೀ ಶಿವರಾಮ ಕಾರಂತರು ಮತ್ತು ನಾಟಕದ ನಾಣ್ಣು ಮಾಮ ಇವರು ಮೂವತ್ತರ ದಶಕದಲ್ಲಿ ಒಟ್ಟಿಗೆ ಸೇರಿ ಒಂದು ನಾಟಕ ಕಂಪನಿಯನ್ನು ನಡೆಸಿದ್ದರು. ಅದರ ಕುರಿತು ಕಾರಂತರು ತಮ್ಮ ಆತ್ಮಚರಿತ್ರೆ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಗ್ರಂಥದಲ್ಲಿ ಬರೆದಿದ್ದಾರೆ. ನನಗೆ ಅದನ್ನು ಓದಿದ ನೆನಪು ಇತ್ತು). ನಾಟಕೋತ್ಸವ ಜಯಪ್ರದವಾಯಿತು. ಈ ಎಲ್ಲಾ ಕಾರ್ಯಕ್ರಮಗಳಿಂದ ಸಂಗ್ರಹವಾದ ಹಣದಲ್ಲಿ ಉಳಿದ ಹಣವನ್ನು ಇತ್ತೀಚಿಗೆ ಬಂಟವಾಳದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಜಿ.ಎಸ್.ಬಿ. ಸೇವಾಸಂಘಕ್ಕೆ ವಂತಿಗೆಯಾಗಿ ನೀಡಲಾಗಿದೆ.

●●

೧೩. ಯಶವಂತ ವ್ಯಾಯಮ ಶಾಲೆ-೩ : ಕೆ.ಎಂ.ಸಿ. ವೈದ್ಯಕೀಯ ಶಿಬಿರ

೧೯೮೮ನೇ ಇಸವಿ ಜುಲೈ ತಿಂಗಳಲ್ಲಿ ನಾನು ಮಂಗಳೂರಿನ ಡಿವಿಜನಲ್ ಕಚೇರಿಗೆ ಹೋಗಿ ಕೆಲಸಕ್ಕೆ ಹಾಜರಾದೆ. ಕೆಲವೇ ದಿನಗಳಲ್ಲಿ ಕಸ್ತೂರಬಾ ಮೆಡಿಕಲ್ ಕಾಲೇಜಿನ ಪ್ರಪ್ರಥಮ ಆಸ್ಪತ್ರೆ ಮಂಗಳೂರು ಬಿಜೈಯಲ್ಲಿ ಪ್ರಾರಂಭಗೊಂಡಿತು. ಇದರ ಉದ್ಘಾಟನಾ ಸಮಾರಂಭಕ್ಕೆ ನನಗೂ ಆಹ್ವಾನವಿತ್ತು. ಆ ಸಮಾರಂಭಕ್ಕೆ ಮಣಿಪಾಲಿನಿಂದ ಶ್ರೀ ಟಿ.ರಮೇಶ ಪೈ ಬಂದಿದ್ದರು. ಅವರು ನನ್ನನ್ನು ಹತ್ತಿರ ಕರೆದು, 'ನೋಡಿ ಬಸ್ತೀ, ನಾವು ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಯಿಂದ ಬಡವರಿಗಾಗಿ ಆರೋಗ್ಯ ತಪಾಸಣೆ ಮಾಡಲು ವೈದ್ಯರ ಗುಂಪಗಳನ್ನು ಕಳುಹಿಸಿ ಬೇರೆ ಬೇರೆ ಊರುಗಳಲ್ಲಿ "ಔಟ್ ರೀಚ್ ಸ್ಪೆಶಲಿಸ್ಟ್ ಕ್ಲಿನಿಕ್" ಶಿಬಿರ ಮಾಡುತ್ತೇವೆ. ಅಲ್ಲಿ ನಮ್ಮ ವೈದ್ಯರು ಆಸ್ಪತ್ರೆಯಿಂದ ಬಂದು ರೋಗಿಗಳ ತಪಾಸಣೆಯನ್ನು ನಡೆಸಿ ಅವರಿಗೆ ಔಷಧಿಯನ್ನೂ ನೀಡುತ್ತಾರೆ. ಅದಕ್ಕೆ ಹಣ ನೀಡಬೇಕಾಗಿಲ್ಲ. ಇನ್ನು ಎಕ್ಸರೇ, ರಕ್ತ, ಹೃದಯ ಸಂಬಂಧಿ ಕಾಯಿಲೆಗಳಿಗಾಗಿ ವಿಶೇಷ ಪರೀಕ್ಷೆಯನ್ನು ನಡೆಸಲು ಮಂಗಳೂರು ಬಿಜೈ ಆಸ್ಪತ್ರೆಗೆ ಬರಲು ಕಾರ್ಡ್ ನೀಡುತ್ತೇವೆ. ಅಲ್ಲಿ ಅವರಿಗೆ ವೈದ್ಯಕೀಯ ಪರೀಕ್ಷೆ ಮತ್ತು ಇರಲು ವಾರ್ಡ್ ಕೋಣೆಯನ್ನೂ, ಆಹಾರ ಮತ್ತು ಚಿಕಿತ್ಸೆಗಳನ್ನು ಧರ್ಮಾರ್ಥವಾಗಿ ನೀಡುತ್ತೇವೆ. ಹೀಗೆ ಕಾರ್ಕಳ, ಶಿರ್ವ ಇತ್ಯಾದಿ ಊರುಗಳಲ್ಲಿ ಈಗಾಗಲೇ ಶಿಬಿರಗಳು ನಡೆಯುತ್ತಾ ಬಂದಿವೆ. ನೀವು ಬಂಟವಾಳದಲ್ಲಿ ಈ "ಔಟ್ ರೀಚ್ ಸ್ಪೆಶಲಿಸ್ಟ್ ಕ್ಲಿನಿಕ್" ಆಯೋಜಿಸುವುದಾದರೆ, ನಾನು ಮಂಗಳೂರು ಬಿಜೈಯಿಂದ ವೈದ್ಯರನ್ನು ಮತ್ತು ಸಹಾಯಕರನ್ನು ವಾರಕ್ಕೆ ಒಂದು ಬಾರಿ ಬಂಟವಾಳಕ್ಕೆ ಕಳುಹಿಸಿಕೊಡುತ್ತೇನೆ. ನಿಮಗೆ ಇದನ್ನು ಮಾಡುವುದು ಸಾಧ್ಯವಿದ್ದರೆ ನನಗೆ ತಿಳಿಸಿ' ಎಂದು ಹೇಳಿದರು.

ನಾನು ಅದೇ ರೀತಿ ಶ್ರೀ ಯಶವಂತ ವ್ಯಾಯಾಮ ಶಾಲೆಯ ಕಾರ್ಯಕಾರಿ ಸಮಿತಿಯ ಮುಂದೆ ಕೆ.ಎಂ.ಸಿ. ಆಸ್ಪತ್ರೆಯ ವತಿಯಿಂದ ನಡೆಸಲಿರುವ 'ಔಟ್ ರೀಚ್ ಸ್ಪೆಶಲಿಸ್ಟ್ ಕ್ಲಿನಿಕ್' ವಿಚಾರ ಪ್ರಸ್ತಾಪ ಮಾಡಿ, ಈ ಶಿಬಿರ ಮಾಡುವುದರಿಂದ ಬಂಟವಾಳ ತಾಲೂಕಿನ ಅಸಂಖ್ಯಾತ ಬಡ ಕುಟುಂಬಗಳ ರೋಗಿಗಳಿಗೆ ಧರ್ಮಾರ್ಥ ವೈದ್ಯಕೀಯ ಸೇವೆಯ ಸೌಲಭ್ಯ ದೊರೆಯುವುದು ಎಂದು ಹೇಳಿದೆ. ಅಲ್ಲಿ ಸೇರಿದ ಸದಸ್ಯರು ಶಿಬಿರವನ್ನು ನಡೆಸುವ ನಿರ್ಣಯವನ್ನು ಕೈಗೊಂಡರು. ಶಿಬಿರದ ವಿಚಾರವಾಗಿ ಬಹು ಸಂಖ್ಯೆಯಲ್ಲಿ ನೋಟೀಸ್ ಇತ್ಯಾದಿ ಮಾಡಿ, ಬಂಟವಾಳ ತಾಲೂಕಿನ ಬೀಡಿ ಶಾಖೆಗಳ ಗುತ್ತಿಗೆದಾರರಿಗೆ, ಅವರ ಶಾಖೆಯ ಬೀಡಿ ಕಾರ್ಮಿಕರಿಗೆ, ಅದೇ ರೀತಿ ಹಂಚು ಕಾರ್ಖಾನೆ, ಮರದ ಗಿರಣಿ, ದೇವಸ್ಥಾನ, ಮಸೀದಿ, ಇಗರ್ಜಿ ಮೊದಲಾದೆಡೆ ಹಂಚುವ ಮೂಲಕ ವ್ಯಾಪಕ ಪ್ರಚಾರ ಸಿಗುವಂತೆ ಮಾಡಿದೆವು.

ಆಗಸ್ಟ್ ೩, ೧೯೮೯, ಗುರುವಾರದ ದಿನ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಮಂಗಳೂರು ಕೆ.ಎಂಸಿ ವತಿಯಿಂದ ಔಟ್ ರೀಚ್ ಸ್ಪೆಶಲಿಸ್ಟ್ ಕ್ಲಿನಿಕ್‌ನ್ನು ಮಣಿಪಾಲದ ಶ್ರೀ ಟಿ. ರಮೇಶ ಪೈಯವರು ಉದ್ಘಾಟನೆ ಮಾಡಿದರು. ಸಮಾರಂಭದ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಬಿ. ಸಂಕಪ್ಪ ರೈ, ಶ್ರೀ ಬಿ. ಅಹಮದ್ ಹಾಜಿ ಮೊಹಿದ್ದೀನ್, ಕುಲಪತಿ ಶ್ರೀ ಯು. ವಾಸುದೇವ ಕಿಣಿ ಭಾಗವಹಿಸಿದರು. ಆ ದಿನ ಶಿಬಿರದಲ್ಲಿ ಭಾಗವಹಿಸಿದವರ ಸಂಖ್ಯೆ ಸುಮಾರು ೩೦೦.

ಪ್ರಾರಂಭದ ಕೆಲವು ವಾರಗಳಲ್ಲಿ ೨೫೦-೩೦೦ ಬಡರೋಗಿಗಳು ಬರುವುದಿತ್ತು. ಆಮೇಲಿನ ದಿನಗಳಲ್ಲಿ ವಾರಕ್ಕೆ ೪೦೦ವರೆಗೆ ಜನರು ಬರುವ ಹಾಗೆ ಆಯಿತು. ಈ ಸುದ್ದಿ ಮಣಿಪಾಲದ ಡಾ. ಟಿ. ರಾಮದಾಸ್ ಪೈಯವರಿಗೆ ತಲುಪಿತೆಂದು ಕಾಣುತ್ತದೆ. ಒಂದೆರಡು ವರ್ಷ ಕಳೆದ ಬಳಿಕ ಮಂಗಳೂರಿಗೆ ಬಂದ ಡಾ. ರಾಮದಾಸ್ ಪೈಯವರು ನನ್ನನ್ನು ಹತ್ತಿರ ಕರೆದು, 'ಹೌದೋ ಬಸ್ತೀ, ಬಂಟವಾಳದಲ್ಲಿ ಶಿಬಿರ ಚೆನ್ನಾಗಿ ನಡೆಯುತ್ತಿದೆಯಂತೆ. ನೀನು ಒಂದು ಜಾಗ ಹುಡುಕಿ ೫೦ ಹಾಸಿಗೆಗಳು ಹಿಡಿಯುವಂತಹ ಒಂದು ಕಟ್ಟಡ ಕಟ್ಟಿಸಿಕೊಡು. ನಾವು ಅಲ್ಲಿ ಒಂದು ಆಸ್ಪತ್ರೆ ನಡೆಸೋಣ' ಎಂದು ಆದೇಶ ನೀಡಿದರು.

ನಾನು ಅದನ್ನು ಮನಗಂಡು ಬಂಟವಾಳದ ವ್ಯಾಯಾಮ ಶಾಲೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆಸ್ಪತ್ರೆ ಪ್ರಾರಂಭಿಸುವ ವಿಚಾರ ತಿಳಿಸಿದೆ. ಅದಕ್ಕಾಗಿ 'ಶ್ರೀ ವೆಂಕಟರಮಣ ಸ್ವಾಮಿ ಮೆಡಿಕಲ್ ಟ್ರಸ್ಟ್'ನ ಸಂವಿಧಾನವನ್ನು ರಚಿಸಿ ನೋಂದಣಿ ಮಾಡುವುದೆಂದು ನಿರ್ಣಯಿಸಲಾಯಿತು. ಇದರ ಗೌರವಾಧ್ಯಕ್ಷರಾಗಿ ಶ್ರೀ ಕೆ.ಕೆ.ಪೈ, ಅಧ್ಯಕ್ಷರಾಗಿ ಬಸ್ತಿ ವಾಮನ ಶೆಣೈ, ಉಪಾಧ್ಯಕ್ಷರಾಗಿ ಶ್ರೀ ಎಂ.ವೇದವ್ಯಾಸ ಪ್ರಭು, ಟ್ರಸ್ಟಿಗಳಾಗಿ ಬಂಟವಾಳ ನಾರಾಯಣ ನಾಯಕ(ಎಂ.ಎಲ್.ಸಿ.), ಶ್ರೀ ಎಂ. ರಂಗ ಪೈ, ಬಿ. ಶ್ರೀನಿವಾಸ ನಾಯಕ, ಶ್ರೀ ಪಿ. ನಾರಾಯಣ ಕಾಮತ(ಕಾರ್ಯದರ್ಶಿ), ಮಾಣೂರ ಲಕ್ಷ್ಮಣ ಕಾಮತ, ಬೊಳಂತೂರು ಪ್ರಭಾಕರ ಪ್ರಭು ಮೊದಲಾದವರು ಇರುವಂತಹ ಒಂದು ಸಮಿತಿಯನ್ನು ರಚಿಸಲಾಯಿತು. ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಬಳಿ ಆಶೀರ್ವಾದ ಪಡೆದು ಆಮೇಲೆ ದೇಣಿಗೆ ಸಂಗ್ರಹಿಸುವ ಕೆಲಸ ಪ್ರಾರಂಭಿಸಿದೆವು. ಇಬ್ಬರು ಮೂರು ಮಂದಿ ಹತ್ತು ಲಕ್ಷ ರೂಪಾಯಿ ನೀಡುವುದಾಗಿ ಆಶ್ವಾಸನೆ ನೀಡಿದರು. ಅದಲ್ಲದೆ ಬಂಟವಾಳದ ಲೊರೆಟ್ಟೊ ಪದವಿನಲ್ಲಿರುವ ಶ್ರೀ ದೇವಸ್ಥಾನದ ಜಾಗದಲ್ಲಿ ಮತ್ತು ಅದಕ್ಕೆ ತಾಗಿಕೊಂಡಿದ್ದ ಕ್ರಿಶ್ಚಿಯನ್ ಸಹೋದರರು ನೀಡುವ ಜಾಗದಲ್ಲಿ ಆಸ್ಪತ್ರೆಯ ಕಟ್ಟಡವನ್ನು ನಿರ್ಮಿಸುವುದು ಹೇಗೆಂದು ಕೆಲಸ ಮುಂದೆ ಹೋಗುತ್ತಲೇ ಇತ್ತು. ಆದರೆ ಊರಿನ ಕೆಲವು ಮಂದಿ ಬೇರೆ ಬೇರೆ ಕಾರಣಗಳನ್ನು ಮುಂದಿಟ್ಟು ಅಪಪ್ರಚಾರ ಪ್ರಾರಂಭಿಸಿದ್ದರಿಂದ ನಾನು ಆಸ್ಪತ್ರೆ ನಿರ್ಮಿಸುವ ಕೆಲಸವನ್ನು ಮುಂದುವರಿಸಲಿಲ್ಲ. ಬಂಟವಾಳದಲ್ಲಿ ಒಂದು ಆಸ್ಪತ್ರೆ ಮತ್ತು ನಮ್ಮ ಶ್ರೀ ವೆಂಕಟರಮಣ ಸ್ವಾಮೀ ದೇವರ ಹೆಸರಿನಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಸ್ಥಾಪಿಸುವ ಕಾರ್ಯ ನಮ್ಮದೇ ಊರಿನ ಜನರ ಮತ್ಸರದಿಂದ ಸಾಧ್ಯವಾಗಲಿಲ್ಲ. ಹೀಗೆ ನಾನು ಬಂಟವಾಳದಲ್ಲಿ ಎರಡು ಸಮಾಜಮುಖಿ ಯೋಜನೆಗಳಿಗೆ ತಿಲಾಂಜಲಿ ನೀಡಿದೆ.

ಆದರೆ ನಾನು ನಂಬಿಕೊಂಡು ಬಂದಿರುವ ಬಂಟವಾಳದ ಅಧಿದೈವ ಶ್ರೀ ತಿರುಮಲ ವೆಂಕಟರಮಣಸ್ವಾಮಿ ಮತ್ತು ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸಾಮೀಜಿಯವರ ಆಶೀರ್ವಾದದಿಂದ ನನ್ನ ಮುಖಂಡತ್ವದಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾದ ವಿಶ್ವ ಕೊಂಕಣಿ ಕೇಂದ್ರದ ಸ್ಥಾಪನೆ ಮತ್ತು ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿ ಯೋಜನೆಯಂತಹ ಮಹಾನ್ ಕೆಲಸಗಳು ನಡೆಯುತ್ತಿರುವುದು ನನ್ನಲ್ಲಿ ಜೀವನದ ಸಾರ್ಥಕ್ಯದ ಭಾವನೆಗಳನ್ನು ಹುಟ್ಟಿಸಿವೆ.

●●

೧೪. ಬ್ಯಾಂಕ್‌ನಿಂದ ನಿವೃತ್ತಿ ಪಡೆಯುವ ಮೊದಲು

೧೯೮೮ರ ನವರಾತ್ರಿ ದಿನಗಳಲ್ಲಿ ಚಿ. ಮಾಧವನ 'ಬಸ್ತಿ ಗ್ಲಾಸ್ ಆಂಡ್ ಪ್ಲೈವುಡ್ಸ್' ಅಂಗಡಿಯು ಬಿ.ಸಿ.ರೋಡಿನ ಪಿಂಟೊ ಕಾಂಪ್ಲೆಕ್ಸ್ ನಲ್ಲಿ ಪ್ರಾರಂಭವಾಯಿತು. ಮರುವರ್ಷ ಅವನ ಮದುವೆ ನನ್ನ ಸೋದರಸೊಸೆ ಚಿ.ಸೌ. ಗೌರಿಯೊಂದಿಗೆ ನಡೆಯಿತು. ಈಗ ಅವನ ಮಗ ಚಿ. ಮಿಲಿಂದ ಇಂಟಿರಿಯರ್ ಡಿಸ್ಯೆನಿಂಗ್ ಮಾಡಿ ತಂದೆಯ ವ್ಯವಹಾರದಲ್ಲಿ ಸೇರಿಕೊಂಡಿದ್ದಾನೆ. ಅವನ ಮಗಳು ಚಿ. ತುಳಸಿ(ನನ್ನ ಅಜ್ಜಿಯ ಹೆಸರು ಅವಳದು) ಶಾಲೆಗೆ ಹೋಗುತ್ತಿದ್ದಾಳೆ. ಚಿ. ಮಾಧವ ಈಗ ಬಂಟವಾಳ ರೋಟರಿ ಕ್ಲಬ್‌ನ ಸದಸ್ಯನಾಗಿ ಸೇವಾಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾನೆ.

ಈ ನಡುವೆ ಡಿವಿಜನಲ್ ಆಫೀಸಿನಲ್ಲಿ ಕೆಲಸ ಮಾಡಿಕೊಂಡಿರುವಾಗಲೇ, ನಾನು ಕದ್ರಿ ಶಾಖೆಯಲ್ಲಿ ಆರು ತಿಂಗಳು ತಾತ್ಕಾಲಿಕ ನೆಲೆಯಲ್ಲಿ ಮೆನೇಜರ್ ಆಗಿದ್ದೆ. ಆ ಮೇಲೆ ಬೇರೆ ಮೆನೇಜರ್ ಬಂದಿದ್ದರಿಂದ ನಾನು ಮತ್ತೆ ಡಿವಿಜನಲ್ ಆಫೀಸಿಗೆ ಬಂದೆ. ೩೦, ಏಪ್ರಿಲ್, ೧೯೯೨ರವರೆಗೆ ಕೆಲಸ ಮಾಡಿ ನನ್ನ ೩೦ ವರ್ಷಗಳ ಬ್ಯಾಂಕಿಂಗ್ ಸೇವೆಯಿಂದ ನಿವೃತ್ತನಾದೆ. ನನ್ನ ಬೀಳ್ಕೊಡುಗೆಯ ಸಮಾರಂಭಕ್ಕೆ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ.ಜಿ. ಮಲ್ಯಾ ಅವರು ಬಂದು ನನಗೆ ಶುಭ ಕೋರಿದರು. ಆಮೇಲಿನ ದಿನಗಳಲ್ಲಿ ಶ್ರೀ ಕೆ.ಜಿ. ಮಲ್ಯಾ ಮಾಮರು ನನಗೆ ಅನೇಕ ಕೆಲಸಗಳಲ್ಲಿ ನೆರವಾಗಿದ್ದಾರೆ.

ವಿಶೇಷವೇನೆಂದರೆ, ನಿವೃತ್ತನಾದ ಬಳಿಕ ನನ್ನ ಆಸ್ತಿಪಾಸ್ತಿ ನೋಡಿಕೊಳ್ಳುವುದು, ಬಂಟವಾಳದ ಶ್ರೀ ದೇವಸ್ಥಾನ, ಸಮಾಜ, ವ್ಯಾಯಾಮ ಶಾಲೆಯ ಕೆಲಸ ಮಾಡಿಕೊಂಡಿರುವುದು ಮತ್ತು ಚಿ. ಮಾಧವನಿಗೆ ಅವನ ವ್ಯವಹಾರದಲ್ಲಿ ಸಹಾಯ ಮಾಡಿ ಶಾಂತರೀತಿಯಿಂದ ಜೀವನ ಸಾಗಿಸುವುದು ನನ್ನ ಬಯಕೆಯಾಗಿತ್ತು. ಆದರೆ ನಾನು ನಿವೃತ್ತನಾಗುವ ಎರಡು ದಿನ ಮೊದಲು ಅಂದರೆ ಎಪ್ರಿಲ್ ೨೮ರಂದು ಕೊಂಕಣಿ ಮಹಾವಿದ್ವಾಂಸರಾದ ಶ್ರೀ ಪೌಲ್ ಮೊರಾಸ್ ಬಾಬರು ಬ್ಯಾಂಕ್‌ಗೆ ಬಂದು ನನ್ನನ್ನು ಭೇಟಿಯಾಗಿ, "ರಾಜ್ಯದಲ್ಲಿ ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಲೋಕವೇದಗಳ ಅಭಿವೃದ್ಧಿಗಾಗಿ ಒಂದು ಅಕಾಡೆಮಿಯ ಸ್ಥಾಪನೆಯಾಗಬೇಕೆಂದು ಕರ್ನಾಟಕ ಸರಕಾರದ ಬಳಿ ಕೋರಿಕೆಯನ್ನು ಸಲ್ಲಿಸಲು ಕೊಂಕಣಿ ಭಾಷಾ ಮಂಡಲವು 'ಕೊಂಕಣಿ ಜಾಥಾ' ಚಳವಳಿಯನ್ನು ಪ್ರಾರಂಭಿಸಿದೆ, ಇದಕ್ಕೆ ನಿಮ್ಮ ಸಹಾಯ ಬೇಕು ಮತ್ತು ನೀವು ಚಳವಳಿಯಲ್ಲಿ ಪಾಲುಗೊಂಡು ನಮ್ಮ ಜೊತೆ ಕೆಲಸ ಮಾಡಬೇಕು" ಎಂದು ಹೇಳಿದರು. ನಾನು ಅದಕ್ಕೆ ಒಪ್ಪಿಕೊಂಡೆ ಮತ್ತು ನಿವೃತ್ತನಾದ ಬಳಿಕ ಸಂಪೂರ್ಣವಾಗಿ ಈ ಕೆಲಸದಲ್ಲಿ ಮಗ್ನನಾದೆ.

'ಕೊಂಕಣಿ ಜಾಥಾ' ಎಂಬ ಚಳವಳಿಯ ಮೂಲಕ ಕೊಂಕಣಿ ಚಳವಳಿಯಲ್ಲಿ ಸೇರಿಕೊಂಡ ನಾನು ಈಗ ಕೊಂಕಣಿ ಮಹಾಸಾಗರದಲ್ಲಿ ಪ್ರಯಾಣ ಬೆಳೆಸುತ್ತಿದ್ದೇನೆ. ನನ್ನ ಪ್ರಯಾಣ ಇನ್ನು ಎಷ್ಟು ದಿನ ಇರುವುದು, ಮತ್ತು ಅದು ನನ್ನನ್ನು ಎಲ್ಲಿಗೆ ಕೊಂಡೊಯ್ಯುತ್ತದೆ ಎನ್ನುವುದು ಆ ಪರಮಾತ್ಮನಿಗೇ ಗೊತ್ತು.

●●

ಭಾಗ - ೩

ಭಾಷಾರಂಗ

೧೫. ಕೊಂಕಣಿ ಭಾಷಾ ಮಂಡಳ ಕರ್ನಾಟಕ - ೧

ಕೊಂಕಣಿ ಭಾಷಾ ಮಂಡಳ ೧೯೭೫ನೇ ಇಸವಿಯಲ್ಲಿ ಮಂಗಳೂರಿನಲ್ಲಿ ಪ್ರಾರಂಭವಾಯಿತು. ಮಾನ್ಯ ಮೊ. ಅಲೆಕ್ಸಾಂಡರ್ ಡಿಸೋಜ, ಫಾ. ಮಾರ್ಕ ವಾಲ್ದರ್, ಚಾ.ಪ್ರಾ. ಡಿಕೋಸ್ತ, ಬಿ.ವಿ. ಬಾಳಿಗ, ಜಿ.ಜಿ. ವಾಸುದೇವ ಪ್ರಭು ಅವರಂತಹ ಕೊಂಕಣಿ ಧುರೀಣರು ಕೊಂಕಣಿ ಭಾಷಾ ಸೇವಾ ದೃಷ್ಟಿಯಿಂದ ಈ ಸಂಘಟನೆಯನ್ನು ಪ್ರಾರಂಭಿಸಿದ್ದರು. ಇದರ ಕಾರ್ಯಸ್ಥಾನವು ಮೊದಲು ಕೊಡಿಯಾಲಬೈಲಿನ 'ರಾಕ್ಣೊ' ಕೊಂಕಣಿ ವಾರ ಪತ್ರಿಕೆಯ ಕಚೇರಿಯಲ್ಲಿ ಇತ್ತು. ಅನಂತರ ಸಣ್ಣ ಪ್ರಮಾಣದಲ್ಲಿ ಕೊಂಕಣಿ ಕಾರ್ಯ ನಡೆಯುತ್ತಲೇ ಇತ್ತು. ೧೯೭೬ನೇ ಇಸವಿಯಲ್ಲಿ ಕೊಂಕಣಿ ಭಾಷಾ ಮಂಡಳವು ಅಖಿಲ ಭಾರತ ಕೊಂಕಣಿ ಪರಿಷತ್ತಿನ ೧೧ನೇ ಅಧಿವೇಶನವನ್ನು ಮಂಗಳೂರಿನ ಮಿಲಾಗ್ರಿಸ್ ಇಗರ್ಜಿಯ ವಠಾರದಲ್ಲಿ ಆಯೋಜಿಸಿತ್ತು.

ಮಣಿಪಾಲದ ಶ್ರೀ ಕೆ.ಕೆ. ಪೈ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಇದರಿಂದ ಗೋವೆಯ ಮತ್ತು ಮಂಗಳೂರಿನ ಕೊಂಕಣಿ ಭಾಷಿಕರ ನಡುವೆ ಸಂಬಂಧ ಬೆಳೆದು ಬರಲು ಸುಲಭವಾಯಿತು ಮತ್ತು ಆಗಿನ ಕೊಂಕಣಿ ಸಾಹಿತಿಗಳಾದ ಡಾ. ವಿ.ಜೆ.ಪಿ ಸಲ್ದಾನ(ಖಡಾಪ), ಎ.ಟಿ. ಲೋಬೊ, ಚಾ.ಫ್ರಾ. ಡಿಕೋಸ್ತಾ, ಬಿ.ವಿ. ಬಾಳಿಗ ಇವರ ಕುರಿತು ಮತ್ತು ಇವರ ಸಾಹಿತ್ಯದ ಕುರಿತು ಗೋವೆಯವರಿಗೆ ಮತ್ತು ಇತರ ರಾಜ್ಯದ ಕೊಂಕಣಿ ಭಾಷಿಕರಿಗೆ, ಕಾರ್ಯಕರ್ತರಿಗೆ ಪರಿಚಯವಾಗಿ ಮುಂದೆ ಉತ್ತಮ ಸಂಬಂಧ ಬೆಳೆದು ಬಂತು.

೧೯೮೩ನೇ ಇಸವಿಯಲ್ಲಿ ಶ್ರೀ ಬಿ.ದಾಮೋದರ ಪ್ರಭು ಅವರು ಅಧ್ಯಕ್ಷರಾಗಿದ್ದಾಗ ಕೊಂಕಣಿ ಭಾಷಾ ಮಂಡಳ ಎರಡನೆಯ ಬಾರಿ ಅಖಿಲ ಭಾರತ ಕೊಂಕಣಿ ಪರಿಷದ್ ಅಧಿವೇಶನವನ್ನು ಬೆಂಗಳೂರಿನಲ್ಲಿ ಸಂಘಟಿಸಿದ್ದರಿಂದ ಕರ್ನಾಟಕದ ರಾಜಧಾನಿ ಮತ್ತು ಮೈಸೂರು ಪ್ರದೇಶದಲ್ಲಿ ಕೂಡ ಕೊಂಕಣಿ ಚಳವಳಿ ಹರಡಿಕೊಳ್ಳುವಂತಾಯಿತು. ನಾನು ೧೯೮೫ನೇ ಇಸವಿಯ ಬಳಿಕ ೪-೫ ವರ್ಷ ಕೊಂಕಣಿ ಭಾಷಾ ಮಂಡಳದ ಕಾರ್ಯಕಾರೀ ಸಮಿತಿಯ ಸದಸ್ಯನಾಗಿದ್ದೆನು. ಆಗ ನಾನು ಮೂಡುಬಿದಿರೆಯಲ್ಲಿ ಸಿಂಡಿಕೇಟ್ ಬ್ಯಾಂಕನ ಶಾಖಾ ಮೆನೇಜರ್ ಆಗಿದ್ದರಿಂದ ನನಗೆ ಕೊಂಕಣಿ ಭಾಷಾ ಮಂಡಳದಲ್ಲಿ ಹೆಚ್ಚು ಕಾರ್ಯ ನಡೆಸುವುದು ಸಾಧ್ಯವಾಗಿರಲಿಲ್ಲ. ಆದರೆ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಕುರಿತು ಮತ್ತು ಅದರ ಕಾರ್ಯ ವ್ಯಾಪ್ತಿಯ ಕುರಿತು ನನಗೆ ತಿಳಿವಳಿಕೆ ಇತ್ತು. ಆ ಕಾಲದಲ್ಲಿ ಶ್ರೀ ಜಿ.ಜಿ. ವಾಸುದೇವ ಪ್ರಭು, ಲಾರೆನ್ಸ್ ಲೋಬೊ ಸಕ್ರಿಯರಾಗಿದ್ದುದು ನನಗೆ ನೆನಪಿದೆ.

೧೯೮೭-೮೮ ರ ಅವಧಿಯಲ್ಲಿ ಕರ್ನಾಟಕ ಸರಕಾರ ತುಳು ನಿಘಂಟು ಮತ್ತು ಕೊಂಕಣಿ ನಿಘಂಟು ತಯಾರಿಸಲು ಪ್ರತ್ಯೇಕವಾಗಿ ಒಂದೊಂದು ಲಕ್ಷ ರೂಪಾಯಿ ಅನುದಾನ ಘೋಷಿಸಿತ್ತು. ಕೊಂಕಣಿ ನಿಘಂಟು ಮಾಡಲು ಕೊಂಕಣಿ ಭಾಷಾ ಮಂಡಳಕ್ಕೆ ೧ ಲಕ್ಷ ರೂಪಾಯಿ ಅನುದಾನ ಬಂದಿತ್ತು. ಆದರೆ ಆಗ ಕೊಂಕಣಿ ನಿಘಂಟು ಯೋಜನೆಯನ್ನು ನಡೆಸಲು ಸಂಪನ್ಮೂಲ ವ್ಯಕ್ತಿಗಳು ಇಲ್ಲದ್ದರಿಂದ ಆ ಯೋಜನೆಯನ್ನು ಸಂತ ಅಲೋಶಿಯಸ್ ಕಾಲೇಜಿಗೆ ನೀಡಲಾಯಿತು. ಮುಂದೆ ಅಲ್ಲಿಯೂ ಬೇರೆ ಬೇರೆ ಕಾರಣಗಳಿಂದ ನಿಘಂಟು ಕಾರ್ಯ ಮುಂದುವರಿಯಲಿಲ್ಲ.

೧೯೯೦ನೇ ಇಸವಿಯಲ್ಲಿ ಕೊಂಕಣಿಯ ಮಹಾ ಧುರೀಣರಾದ ಶ್ರೀ ಪೌಲ್ ಮೊರಾಸ್ ಅವರು ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷರಾದ ಬಳಿಕ ಅವರು ಕಾರವಾರದಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನವನ್ನು ನಡೆಸಿದ್ದರು. ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಭಾಷೆ, ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗಾಗಿ ಕರ್ನಾಟಕ ರಾಜ್ಯ ಸರಕಾರವು ಕೊಂಕಣಿ ಅಕಾಡೆಮಿಯನ್ನು ಸ್ಥಾಪಿಸಬೇಕು ಮತ್ತು ಭಾರತದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಕೊಂಕಣಿ ಭಾಷೆ ಸೇರ್ಪಡೆಯಾಗಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸುವ ಠರಾವಿಗೆ ಅನುಮೋದನೆ

ಪಡೆಯಲಾಗಿತ್ತು. ಮುಂದೆ ೧೯೯೨ನೇ ಇಸವಿ ಏಪ್ರಿಲ್ ತಿಂಗಳ ೨೮ ರಂದು ಮಾನ್ಯ ಶ್ರೀ ಮೊರಾಸ್ ನನ್ನನ್ನು ಭೇಟಿಯಾಗಿ ಅವರು ಕೊಂಕಣಿ ಭಾಷೆಯ ಪ್ರಗತಿಗಾಗಿ ಮಾಡಿದ ಕೆಲಸಗಳನ್ನು ನನಗೆ ತಿಳಿಸಿದರು ಮತ್ತು ನಾನು ಕೊಂಕಣಿ ಜಾಥಾ ಚಳವಳಿಯಲ್ಲಿ ಪೂರ್ಣ ರೀತಿಯಿಂದ ತೊಡಗಿಸಿಕೊಳ್ಳಬೇಕೆಂದು ವಿನಂತಿಸಿದರು. ಇದರಿಂದಾಗಿ ನಾನು ಕೊಂಕಣಿ ಚಳವಳಿಯಲ್ಲಿ ಹೆಜ್ಜೆ ಇಡುವ ಹಾಗಾಯಿತು. ಅನಂತರ ಬಹುಶಃ ನನ್ನ ಬದುಕು ಕೊಂಕಣಿ ಕಾರ್ಯದಲ್ಲಿಯೇ ಪೂರ್ಣವಾಗಿ ಸಕ್ರಿಯವಾಯಿತು ಎಂದು ಹೇಳಬಹುದು.

೧೯೯೨ನೇ ಇಸವಿ ಮೇ ತಿಂಗಳಿಂದ ಕೊಂಕಣಿ ಜಾಥಾದ ಸಂಘಟನೆಯನ್ನು ನಡೆಸಲು ನಾವೆಲ್ಲರೂ ಒಟ್ಟುಗೂಡಿ ಕೆಲಸ ಮಾಡಿದೆವು. ಅದು ಯಶಸ್ವಿಯಾಗಿ ಮುಂದೆ ನಾವು ಬೆಂಗಳೂರಿಗೆ ತೆರಳಿ ಕರ್ನಾಟಕ ಸರಕಾರಕ್ಕೆ ಕೊಂಕಣಿ ಭಾಷಾ ಮಂಡಳದ ವತಿಯಿಂದ ಶ್ರೀ ಪೌಲ್ ಮೊರಾಸ್ ಅವರ ನೇತೃತ್ವದಲ್ಲಿ ಮನವಿಯನ್ನು ಒಪ್ಪಿಸಿದೆವು.

ಆ ಕೆಲಸ ನಡೆದ ಕೆಲವೇ ದಿನಗಳಲ್ಲಿ ಶ್ರೀ ಪೌಲ್ ಮೊರಾಸ್ ಅವರ ಅಧ್ಯಕ್ಷಸ್ಥಾನದ ಅವಧಿ ಮುಗಿದಿದ್ದರಿಂದ ಮತ್ತು ಮುಂದೆ ತನಗೆ ಅಧ್ಯಕ್ಷ ಸ್ಥಾನ ಬೇಡವೆಂದು ಅವರು ಹೇಳಿದ್ದರಿಂದ ಕೊಂಕಣಿ ಭಾಷಾ ಮಂಡಳದ ಸದಸ್ಯರು ನನ್ನನ್ನು ಅಧ್ಯಕ್ಷನಾಗಿ ಮಾಡಿದರು. ಅನಂತರದ ದಿನಗಳು ನನ್ನ ಜೀವನದಲ್ಲಿ ಒಂದು ಚರಿತ್ರೆಯಾಗಿ ಉಳಿಯುವುದು ಎಂಬ ನಿರೀಕ್ಷೆ ಆಗ ನನಲ್ಲಿ ಇರಲಿಲ್ಲ.

●●

೧೬. ಕೊಂಕಣಿ ಜಾಥಾ

ನಮ್ಮ "ಕೊಂಕಣಿ ಜಾಥಾ" ಜನಸಂಪರ್ಕದ ಕಾರ್ಯವು ರಾಜ್ಯದಾದ್ಯಂತ ನಡೆದ ಕಾರಣವಾಗಿ ಕೊಂಕಣಿ ಚಳವಳಿಯ ಪ್ರಗತಿಗೆ ಒಂದು ಹೊಸ ದಿಕ್ಕು ಉದಯಿಸಿತೆಂದು ಹೇಳಬಹುದು. ನಾವು ಮಂಗಳೂರಿನಲ್ಲಿ ಮಾತ್ರವಲ್ಲ, ದಕ್ಷಿಣ ಕನ್ನಡದ ಪ್ರತಿಯೊಂದು ತಾಲೂಕು ಕೇಂದ್ರದಲ್ಲಿಯೂ 'ಜಾಥಾ ಮೆರವಣಿಗೆ'ಯನ್ನು ನಡೆಸಿ ಆಯಾಯ ತಾಲೂಕಿನ ತಹಶೀಲದಾರರಿಗೆ ಎರಡು ಬೇಡಿಕೆಗಳಿದ್ದ ವಿನಂತಿ ಪತ್ರವನ್ನು ನೀಡಿ, ಅದನ್ನು ಕರ್ನಾಟಕ ಸರಕಾರಕ್ಕೆ ಮತ್ತು ಕೇಂದ್ರ ಸರಕಾರಕ್ಕೆ ಒಪ್ಪಿಸಿ ಆ ಕುರಿತು ಒತ್ತಾಯ ತರಬೇಕೆಂದು ಘೋಷಿಸಿದೆವು.

ಅದೇ ಸಮಯದಲ್ಲಿ ಉಡುಪಿ ಮಣಿಪಾಲದಲ್ಲಿ ನಡೆಯಲಿದ್ದ ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನದ ಕೊಂಕಣಿ ಪುಸ್ತಕ ಪುರಸ್ಕಾರ ಸಮಾರಂಭಕ್ಕೆ ನಾನು ಮತ್ತು ಶ್ರೀ ಪೌಲ್ ಮೊರಾಸ್ ಹೋದೆವು. ಅಲ್ಲಿ ಗೋವೆಯ ಹಿರಿಯ ಕೊಂಕಣಿ ಮುತ್ಸದ್ದಿಗಳಾದ ಶ್ರೀ ಚಂದ್ರಕಾಂತ ಕೇಣಿಯವರನ್ನು ಭೇಟಿಯಾಗಿ ಕರ್ನಾಟಕದಲ್ಲಿ ನಡೆಯುತ್ತಿರುವ ಕೊಂಕಣಿ ಜಾಥಾ ಚಳವಳಿಯ ವಿಚಾರವಾಗಿ ಮಾಹಿತಿಯನ್ನು ನೀಡಿದೆವು. ಶ್ರೀ ಕೆ.ಕೆ. ಪೈ ಅವರನ್ನೂ ಭೇಟಿಯಾಗಿ ನಮ್ಮ ಕಾರ್ಯಕ್ಕೆ ಅವರ ಬೆಂಬಲವನ್ನು ಕೋರಿದೆವು. ನಾನು ಉಡುಪಿಯಲ್ಲಿ ಶ್ರೀ ಪಿ. ರಬೀಂದ್ರ ನಾಯಕ್, ಕೆನರಾ ಬ್ಯಾಂಕಿನ ಅಂದಿನ ಡಿವಿಜನಲ್ ಮೆನೇಜರ್ ಶ್ರೀ ಎಂ. ಮೋಹನ ಭಂಡಾರಿ, ಎ. ಸುರೇಶ ಕಿಣಿ ಮತ್ತು ಶ್ರೀಮತಿ ಲಿಡ್ವಿನ್ ಪಿಂಟೊ ಅವರನ್ನೂ ಭೇಟಿಯಾಗಿ, ಅವರಿಗೆ ಕೊಂಕಣಿ ಜಾಥಾ ಚಳವಳಿಯ ವಿಷಯವನ್ನು ತಿಳಿಸಿ ಸಹಕಾರ ಬೇಡಿದೆ.

ನಾವು ೧೯೭೨ನೇ ಇಸವಿ ಮೇ ೨೬ ರಂದು ಸಂಜೆ ಮಂಗಳೂರಿನ ಸಿರಿಲ್ ಮಹಲ್‌ನಲ್ಲಿ ಕೊಂಕಣಿ ಜಾಥಾ ಚಳವಳಿಯ ವಿಷಯದಲ್ಲಿ ವಿಶೇಷ ಮಾಹಿತಿ ಒದಗಿಸಿ ಪ್ರಚಾರ ನೀಡುವ ದೃಷ್ಟಿಯಿಂದ" "ಪತ್ರಿಕಾ ಗೋಷ್ಠಿ"ಯನ್ನು ಆಯೋಜಿಸಿದೆವು. ಇದೇ ಸಮಯದಲ್ಲಿ ಶ್ರೀ ಪೌಲ್ ಮೊರಾಸ್, ಎರಿಕ್ ಒಝೆರಿಯೊ ಮತ್ತು ಕೆಲವು ನೇತಾರರು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಕುಮಟ, ಭಟ್ಕಳ ಇತ್ಯಾದಿ ಊರುಗಳಿಗೆ ಭೇಟಿ ನೀಡಿ ಅಲ್ಲಲ್ಲಿನ ಬೇರೆಬೇರೆ ಕೊಂಕಣಿ ಸಮುದಾಯದವರಿಗೆ ಕೊಂಕಣಿ ಜಾಥಾ ಚಳವಳಿ, ಅದರ ಉದ್ದೇಶ ಮತ್ತು ಸಂಘಟನೆಯ ವಿಚಾರವಾಗಿ ಮಾಹಿತಿ ನೀಡಿದ್ದರು. ಜೂನ್ ೧೯ ರಂದು ಮಂಗಳೂರಿನ ಸರ್ಕ್ಯೂಟ್ ಹೌಸ್‌ನಲ್ಲಿ ಕೇಂದ್ರ ಮಂತ್ರಿ ಮಾನ್ಯ ಶ್ರೀಮತಿ ಮಾರ್ಗರೇಟ್ ಆಳ್ವಾ ಅವರನ್ನು ಭೇಟಿಯಾಗಿ "ಕೊಂಕಣಿ ಜಾಥಾ" ಮತ್ತು "ಎಂಟನೆಯ ಅನುಸೂಚಿಯಲ್ಲಿ ಕೊಂಕಣಿ ಭಾಷೆಯ ಸೇರ್ಪಡೆ"ಯ ಕುರಿತು ಅವರ ಬೆಂಬಲವನ್ನು ಕೋರಿ ಬಂದೆವು.

ಅದೇ ದಿನ ಸಂಜೆ ಉಡುಪಿಯ ಕೆನರಾ ಬ್ಯಾಂಕ್ ಡಿವಿಜನಲ್ ಮೆನೇಜರ್ ಶ್ರೀ ಮೋಹನ ಭಂಡಾರಿ ಅವರ ಕಚೇರಿಯ ಸಭಾಂಗಣದಲ್ಲಿ ಉಡುಪಿಯ ಕೊಂಕಣಿ ಕಾರ್ಯಕರ್ತರ ಒಂದು ಸಭೆಯನ್ನು ಆಯೋಜಿಸಿದೆವು. ಶ್ರೀ ಕೆ.ಜಿ. ನಾಯಕ್(ಹೊಟೇಲ್ ಹನುಮಾನ) ಮತ್ತು ಶ್ರೀಮತಿ ಲಿಡ್ವಿನ್ ಪಿಂಟೊ ಅವರ ಸಹಕಾರದಿಂದ ಈ ಸಭೆಗೆ ಉಡುಪಿಯ ಕಾರ್ಯಕರ್ತರು ಬಹುಸಂಖ್ಯೆಯಲ್ಲಿ ಬಂದಿದ್ದರು. ಮಂಗಳೂರಿನಿಂದ ನಾನು, ಕೊಂಕಣಿ ಜಾಥಾ ಸಮಿತಿಯ ನೇತಾರರಾದ ಶ್ರೀಮತಿ ಯುನಿಸ್ ಬ್ರಿಟೊ(ಮೇಯರ್), ಎನ್. ಯೋಗೀಶ್ ಭಟ್(ಕಾರ್ಪೊರೇಟರ್), ಶ್ರೀಮತಿ ಸಿಸಿಲಿಯಾ ಗೋವಿಯಸ್ ಮತ್ತು ಶ್ರೀ ಪಾವ್ಲ ಮೊರಾಸ್ ಹೋಗಿದ್ದೆವು. ಸಭೆಯಲ್ಲಿ ಕೊಂಕಣಿ ಜಾಥಾಗೆ ತುಂಬಾ ಪ್ರೋತ್ಸಾಹ ಹುಟ್ಟಿಕೊಂಡದ್ದು ನಮ್ಮ ಅರಿವಿಗೆ ಬಂತು.

ಉಡುಪಿಯಲ್ಲಿ ಹಿರಿಯರಾದ ಶ್ರೀ ಪಿ. ರಬೀಂದ್ರ ನಾಯಕ್(ಅಧ್ಯಕ್ಷ), ಶ್ರೀ ಕೆ.ಜಿ. ನಾಯಕ(ಕಾರ್ಯಾಧ್ಯಕ್ಷ), ಶ್ರೀಮತಿ ಲಿಡ್ವಿನ್ ಪಿಂಟೊ(ಕಾರ್ಯದರ್ಶಿ), ಶ್ರೀ ಎ. ಸುರೇಶ ಕಿಣಿ(ಖಜಾಂಚಿ)ಯಾಗಿರುವ ಸಮಿತಿಯ ರಚನೆಯಾಯಿತು. ನಾವು ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನದ ವರಿಷ್ಠರಾದ ಶ್ರೀ

ಹೆಚ್.ವಿ. ಕಾಮತರನ್ನು ಭೇಟಿಯಾಗಿ ಕೊಂಕಣಿ ಜಾಥಾಗೆ ಅವರ ಬೆಂಬಲವನ್ನೂ ಕೋರಿದೆವು.

"ಕೊಂಕಣಿ ಜಾಥಾ"ದ ಸ್ಥಳೀಯ ಸಮಿತಿ ರಚನೆಗಾಗಿ ಜೂನ್ ೨೧ರಂದು ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಸಭೆ ಸೇರಿತು. ಎಸ್.ವಿ.ಎಸ್ ವಿದ್ಯಾ ಸಂಸ್ಥೆಯ ಕರಸ್ಪಾಂಡೆಂಟ್ ಶ್ರೀ ಬಿ. ವಿಠಲ ಪ್ರಭು, ಶ್ರೀ ಬೊಳಂತೂರು ಪ್ರಭಾಕರ ಪ್ರಭು, ಪಿ. ನಾರಾಯಣ ಕಾಮತ್, ವಲ್ಲಿ ಪಿಂಟೊ ಇವರುಗಳು ಕೊಂಕಣಿ ಜಾಥಾ ಸಮಿತಿಯ ಕಾರ್ಯವನ್ನು ಬೆಂಬಲಿಸಿ ಮಾತನಾಡಿದರು. ಮಂಗಳೂರಿನಿಂದ ಶ್ರೀ ಪೌಲ್ ಮೊರಾಸ್, ಶ್ರೀ ಕೆ.ಜಿ. ನಾಯಕ್, ಮತ್ತು ಶ್ರೀ ಕುಡ್ವಿ ಜಗದೀಶ ಶೆಣೈಯವರು ಬಂದಿದ್ದರು. ನಾವು ಸಭೆಗೆ ಕೊಂಕಣಿ ಜಾಥಾದ ಉದ್ದೇಶವನ್ನು ವಿವರವಾಗಿ ತಿಳಿಸಿದೆವು.

ನಾನು ಜೂನ್ ೨೩ ರಂದು ಶ್ರೀ ಕೊಲಿನ್ ಡಿ'ಸಿಲ್ವಾ, ಶ್ರೀ ಎಂ. ರಘುನಾಥ ಶೇಟ್, ಶ್ರೀ ಕುಡ್ವಿ ಜಗದೀಶ ಶೆಣೈ ಇವರನ್ನು ಕೂಡಿಕೊಂಡು ಮಂಗಳೂರು ನಗರದ ಭಾರತ ಬೀಡಿ, ಪ್ರಕಾಶ ಬೀಡಿ, ಪಿ.ವಿ.ಎಸ್. ಬೀಡಿ, ಕೆನರಾ ವರ್ಕಶಾಪ್ ಮಾಲಿಕರು ಮತ್ತು ಗಿಲ್ಬರ್ಟ್ ಡಿಸೋಜಾ (ಪುತ್ತೂರು ಸೋಜಾ ಬ್ರದರ್ಸ್) ಮೊದಲಾದ ಕೊಂಕಣಿ ಉದ್ಯಮಿಗಳನ್ನು ಭೇಟಿಯಾಗಿ ಅವರಿಂದ ಧನ ಸಹಾಯ ಬೇಡಿದೆವು. ನಾವು ಕೆನರಾ ಬ್ಯಾಂಕ್, ಕಾರ್ಪೊರೇಶನ್ ಬ್ಯಾಂಕಿನ ಅಧಿಕಾರಿಗಳನ್ನು ಕೂಡ ಭೇಟಿಯಾದೆವು.

ಅನಂತರದ ದಿನಗಳಲ್ಲಿ ಸಂಚಾಲಕಿ ಶ್ರೀಮತಿ ಯುನಿಸ್ ಬ್ರಿಟೊ ಅವರ ಜೊತೆಯಲ್ಲಿ ನಾವು ಬೇರೆ ಬೇರೆ ಉದ್ದಿಮೆದಾರರು ಮತ್ತು ವ್ಯಾಪಾರಿಗಳನ್ನೂ ಭೇಟಿಯಾಗಿ ಧನ ಸಹಾಯ ಕೋರಿದೆವು. ಹೋದೆಡೆಗಳಲ್ಲಿ ನಮಗೆ ಧನ ಸಹಾಯದ ಆಶ್ವಾಸನೆ ದೊರೆಯಿತು, ಇದರಿಂದ ನಮಗೆ ಕೊಂಕಣಿ ಜಾಥಾ ಯಶಸ್ವಿಯಾಗುವುದರಲ್ಲಿ ವಿಶ್ವಾಸ ಹುಟ್ಟಿಕೊಳ್ಳುವ ಹಾಗಾಯಿತು.

ಜೂನ್ ೨೩ರಂದು ಸಂಜೆ 'ಕೊಂಕಣಿ ಜಾಥಾ ಸಮಿತಿ'ಯ ಸಂಚಾಲಕಿ ಶ್ರೀಮತಿ ಯೂನಿಸ್ ಬ್ರಿಟೊ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ನಾನು ಅದುವರೆಗೆ ಬೇರೆ ಬೇರೆ ಊರುಗಳಲ್ಲಿ ನಡೆದ ಸಂಘಟನೆಯ ಮತ್ತು ಆರ್ಥಿಕ ಸಮಿತಿಯ ಕಾರ್ಯ ವಿವರಗಳ ಸ್ಪಷ್ಟನೆಯನ್ನು ನೀಡಿದೆ. ಜೂನ್ ೨೬ರಂದು ನಾನು ಬೆಂಗಳೂರಿಗೆ ಹೋಗಿ ಶ್ರೀ ಪಿ. ದಯಾನಂದ ಪೈ, ಶ್ರೀ ಎ.ಎಲ್. ಕಾಮತ್ ಮೊದಲಾದ ಗೌರವಾನ್ವಿತರನ್ನು ಭೇಟಿಯಾಗಿ ಕೊಂಕಣಿ ಜಾಥಾಗೆ ಅವರ ಸಹಾಯ ಕೋರಿ ಬಂದೆ.

ಶ್ರೀ ಎರಿಕ್ ಒಝೇರಿಯೊ ಅವರು ಸೂಚಿಸಿದ ಕೆಲವು ಉಪಸಮಿತಿಗಳಲ್ಲಿ "ಕ್ರಿಯಾ ಸಮಿತಿ" (ರಟ್ಯಾ ಸಮಿತಿ)ಯೂ ಒಂದು. ನಾವು ಜಾಥಾ ಸಂಘಟನೆಯಲ್ಲಿ ನಡೆಸಿದ ಕಾರ್ಯಗಳಿಗೆ ಮೂರ್ತ ಸ್ವರೂಪ ನೀಡುವುದು ಮತ್ತು ಕೈಗೊಂಡ ನಿರ್ಣಯಗಳು ಕಾರ್ಯರೂಪಕ್ಕೆ ಬರುವಂತೆ ಮುಂದುವರಿಯುವುದು ಈ "ಕ್ರಿಯಾ ಸಮಿತಿ" ಯ ಜವಾಬ್ದಾರಿಯಾಗಿತ್ತು.

ಜೂನ್ ೨೮, ಭಾನುವಾರದ ದಿನ ಮಂಗಳೂರಿನ ಹಂಪನಕಟ್ಟೆಯ ತಾಜಮಹಲ್ ಹೊಟೇಲಿನ ಮಹಡಿಯಲ್ಲಿ ಕೊಂಕಣಿ ಜಾಥಾ ಸಮಿತಿಯ ವತಿಯಿಂದ "ಕ್ರಿಯಾ ಸಮಿತಿ ದಿನ" ನಡೆಯಿತು. ಅಂದು ಕರ್ನಾಟಕ ರಾಜ್ಯದ ದ.ಕ.ಜಿಲ್ಲೆ, ಉಡುಪಿ, ಕುಂದಾಪುರ, ಕುಮಟಾ, ಕಾರವಾರ, ಶಿರಸಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಶಿವಮೊಗ್ಗ, ಮೈಸೂರು, ಬೆಂಗಳೂರು ಮೊದಲಾದೆಡೆಗಳಿಂದ ಉತ್ಸಾಹಿ ಕೊಂಕಣಿ ನೇತಾರರು, ಕಾರ್ಯಕರ್ತರು ಜಾತಿ, ಮತ ಭೇದವಿಲ್ಲದೆ ಕೊಂಕಣಿ ಜಾಥಾದ ಉದ್ದೇಶ ಸಾಧನೆಯಾಗಲೇಬೇಕೆಂಬ ಹಠದಲ್ಲಿ ಬಂದು ಸೇರಿದ್ದರು.

ಅಂದು ಕರ್ನಾಟಕ ರಾಜ್ಯ ಕಾರ್ಮಿಕ ವಿಭಾಗದ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ ಅವರು ದೀಪ ಹಚ್ಚಿ ಸಭೆಯ ಉದ್ಘಾಟನೆಯನ್ನು ನಡೆಸಿದರು. ಡಾ. ವಿ.ಜೆ.ಪಿ. ಸಲ್ಡಾನ(ಖ್ಯಾತ ಕೊಂಕಣಿ ಸಾಹಿತಿ) ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಜಾಥಾದ ಸಂಚಾಲಕಿ ಶ್ರೀಮತಿ ಯೂನಿಸ್ ಬ್ರಿಟೊ ಅವರು ಸ್ವಾಗತಿಸಿ, ಕರ್ನಾಟಕ ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಬಂದಿರುವ ಚಳವಳಿಯ ಕಾರ್ಯಕರ್ತರಿಗೆ 'ಕೊಂಕಣಿ ಜಾಥಾ' ಯಶಸ್ವಿಯಾಗಲು ಬೆಂಬಲ ಕೋರಿದರು. ನಾನು ಕಾರ್ಯದರ್ಶಿಯಾಗಿ ಸೂತ್ರ ಸಂಚಾಲನವನ್ನು ನಡೆಸಿದೆ.

ಮಾನ್ಯ ಶ್ರೀ ಬ್ಲೇಸಿಯಸ್ ಡಿಸೋಜಾ ಅವರು ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಅಕಾಡೆಮಿ ಸ್ಥಾಪನೆ ಮತ್ತು ಭಾರತ ದೇಶದ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಕೊಂಕಣಿ ಭಾಷೆಯ ಸೇರ್ಪಡೆ ಇವುಗಳಿಗೆ ತನ್ನ ಎಲ್ಲಾ ನೆರವು, ಸಹಕಾರ ನೀಡುವುದಾಗಿ ಆಶ್ವಾಸನೆ ನೀಡಿದರು. "ನಾನು ಈ ಎರಡು ಉದ್ದೇಶ ಸಾಧನೆಗಾಗಿ ನಡೆಯುತ್ತಿರುವ ಕೊಂಕಣಿ ಜಾಥಾ ಚಳವಳಿಗೆ ರಾಜ್ಯ ಸರಕಾರದಿಂದ ಯಾವುದೇ ನೆರವು ಬೇಕಾಗಿದ್ದಲ್ಲಿ ನಿಮ್ಮ ಜೊತೆ ನಾನು ಸ್ವತಃ ಬಂದು ಕಾರ್ಯ

ನಡೆಸುತ್ತೇನೆ." ಎಂದು ಅವರು ಬಿಚ್ಚು ಮನಸ್ಸಿನಿಂದ ಘೋಷಣೆ ಮಾಡಿದರು.

ಅನಂತರ ಕೊಂಕಣಿ ಸಾಹಿತಿ, ನಾಟಕಕಾರ ಶ್ರೀ ಚಾ. ಫ್ರಾ. ಡಿಕೋಸ್ತಾ ಅವರು ನೆರೆದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು, "ಈಗ ನಾವು ಕೊಂಕಣಿ ಭಾಷೆ, ಸಂಸ್ಕೃತಿಯ ಅಭಿವೃದ್ಧಿಯನ್ನು ನಡೆಸುವ ದಿಕ್ಕಿನಲ್ಲಿ ಕೊಂಕಣಿ ಅಕಾಡೆಮಿಗಾಗಿ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸುತ್ತಿದ್ದೇವೆ. ಈ ಚಳವಳಿ ಯಶಸ್ವಿಯಾಗಲು ಕಾರ್ಯಕರ್ತರು ಮತ್ತು ಸ್ವಯಂಸೇವಕರು ಟೊಂಕ ಕಟ್ಟಿ, ತನುಮನಧನ ನೀಡಿ ಉದ್ದೇಶ ಈಡೇರುವುದಕ್ಕಾಗಿ ಒಂದೆಡೆ ಸೇರಿ ಏಕಮನಸ್ಸಿನಿಂದ ಕಾರ್ಯ ನಡೆಸುತ್ತಿದ್ದೇವೆ. ಆದರೆ ನೀವು ಒಂದು ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಅದೇನೆಂದರೆ, ಕೊಂಕಣಿ ಜಾಥಾ ಚಳವಳಿ ಯಶಸ್ವಿಯಾಗಿ ಅಕಾಡೆಮಿ ಸ್ಥಾಪನೆಯಾದ ಬಳಿಕ ಕುರ್ಚಿ ಸಿಗಬೇಕೆಂಬ ಕಾರ್ಯತಂತ್ರ ಆಮೇಲೆ ಶುರುವಾಗುವುದು ಇದೆ. ಆಗ ಕಷ್ಟ ನಷ್ಟ ಅನುಭವಿಸಿ ಕೆಲಸ ಮಾಡಿದವರು ಮೂಲೆ ಗುಂಪಾಗುವರು ಮತ್ತು ಚೆನ್ನಾಗಿ ಮಾತನಾಡುವವರು ಕುರ್ಚಿಯಲ್ಲಿ ಕುಳಿತುಕೊಳ್ಳುವರು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ" ಎಂದು ಎಚ್ಚರಿಕೆ ನೀಡಿದರು(ಕರ್ನಾಟಕ ರಾಜ್ಯ ಸರಕಾರವು ಕೊಂಕಣಿ ಅಕಾಡೆಮಿ ಸ್ಥಾಪನೆ ಮಾಡುವ ಘೋಷಣೆ ಮಾಡಿದ ಬಳಿಕ ನನಗೆ ದಿ. ಚಾ.ಫ್ರಾ. ಅವರು ಹೇಳಿದ ಈ ಮಾತುಗಳ ಸತ್ಯದರ್ಶನವಾಯಿತು.)

ಅನಂತರ ಕೊಂಕಣಿ ಜಾಥಾ ಚಳವಳಿಯ ಮುಂದಿನ ಕಾರ್ಯಗಳಿಗೆ ಕ್ರಿಯಾ ಸಮಿತಿಯ ಯೋಜನೆಯ ವಿಚಾರವಾಗಿ ಮತ್ತು ಭವಿಷ್ಯದ ಕಾರ್ಯಗಳನ್ನು ಹೇಗೆ ನಡೆಸಬೇಕೆಂಬ ವಿಚಾರದಲ್ಲಿ ಶ್ರೀ ಎರಿಕ್ ಒಝೇರಿಯೋ ಮಾಹಿತಿ ನೀಡಿದರು. ಇದಕ್ಕೆ ಅಲ್ಲಿ ನೆರೆದ ಎಲ್ಲಾ ಸದಸ್ಯರು ಚಪ್ಪಾಳೆ ತಟ್ಟಿದರು.

ಅದರ ಅನಂತರ ಬೇರೆ ಬೇರೆ ಊರುಗಳಿಂದ ಬಂದ ಪ್ರತಿನಿಧಿಗಳು ಮಾತನಾಡಿದರು. ಹುಬ್ಬಳ್ಳಿಯಿಂದ ಬಂದ ಪ್ರಸಿದ್ಧ ನ್ಯಾಯವಾದಿ ಮತ್ತು ಕೊಂಕಣಿ ಧುರೀಣರಾದ ಶ್ರೀ ಎನ್.ವಿ.ಆರ್. ಪ್ರಭು ಅವರು "ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಕೊಂಕಣಿ ಭಾಷೆಗೆ ಸ್ಥಾನ" ಎಂಬ ವಿಷಯದಲ್ಲಿ ವಿವರವಾಗಿ ಭಾಷಣ ನೀಡಿದರು. ಕೊಂಕಣಿ ವಿದ್ವಾಂಸರಾದ ಶ್ರೀ ಬಿ.ವಿ. ಬಾಳಿಗಾ ಅವರು (ಪಂಚ್ಕದಾಯಿ ಪತ್ರಿಕೆಯ ಸಂಪಾದಕರು, ಕೊಂಕಣಿ ಕವಿ ಮತ್ತು ಸಾಹಿತಿ) ಭಾರತ ದೇಶದಲ್ಲಿ ಮಹಾರಾಷ್ಟ್ರ, ಗೋವಾ, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಪ್ರತಿನಿಧಿಗಳು ಸೇರಿ ಕಾರವಾರದಲ್ಲಿ ೧೯೩೯ನೇ ಇಸವಿಯಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಸ್ಥಾಪನೆಯಾದಂದಿನಿಂದ ನಡೆದು ಬಂದಿರುವ ಕೊಂಕಣಿ ಚಳವಳಿಯ ಮಾಹಿತಿಯನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಆಸೀನರಾಗಿದ್ದ ಭಾರತ ಬೀಡಿ ವರ್ಕ್ಸನ ಅಧ್ಯಕ್ಷರು, ದಾನಿಗಳು ಮತ್ತು ಗೌಡ ಸಾರಸ್ವತ ಸಮಾಜದ ಅಧ್ಯಕ್ಷರೂ ಆಗಿದ್ದ ಶ್ರೀ ಬಿ. ಗಣಪತಿ ಪೈ ಅವರು ಕೊಂಕಣಿ ಜಾಥಾ ಚಳವಳಿಗೆ ಯಶಸ್ಸನ್ನು ಕೋರಿ, ತಾನು ಪೂರ್ಣ ಸಹಾಯ ಮತ್ತು ಸಹಕಾರವನ್ನು ಒದಗಿಸುವುದಾಗಿ ಆಶ್ವಾಸನೆ ನೀಡಿದ್ದರು. ಕೊಂಕಣಿ ಜಾಥಾ ಚಳವಳಿಯ ಅಧ್ಯಕ್ಷರಾದ ಶ್ರೀ ಪೌಲ ಮೊರಾಸರ ಧನ್ಯವಾದ ಸಮರ್ಪಣೆಯೊಂದಿಗೆ ಬೆಳಗಿನ ಅಧಿವೇಶನ ಮುಕ್ತಾಯ ಗೊಂಡಿತು.

ಮಧ್ಯಾಹ್ನ ಎರಡೂವರೆ ಗಂಟೆಗೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಈ ಕಾರ್ಯಕ್ರಮಕ್ಕೆ ಫಾ. ಹೆನ್ರಿ ಡಿ.ಸೋಜಾ(ನಿರ್ದೇಶಕರು, ಸಂದೇಶ ಸಾಂಸ್ಕೃತಿಕ ಪ್ರತಿಷ್ಠಾನ, ಮಂಗಳೂರು) ಸಂಚಾಲಕರಾಗಿದ್ದರು. ಕೊಂಕಣಿ ಜಾಥಾ ಬೆಂಗಳೂರಿಗೆ ಹೋದಾಗ ಅಲ್ಲಿಗೆ ಬೇರೆ ಬೇರೆ ಊರಿನ ಪ್ರತಿನಿಧಿಗಳು ಅವರವರ ಊರಿನಿಂದ ಸಾಕಷ್ಟು ಹೆಚ್ಚು ಕೊಂಕಣಿ ಜನರನ್ನು ಕರೆದುಕೊಂಡು ಬರಬೇಕು ಮತ್ತು ಎಷ್ಟು ಮಂದಿ ಬರುತ್ತಾರೆ ಎಂದು ಮೊದಲೇ ತಿಳಿಸಬೇಕು ಎಂದು ಹೇಳಿದರು.

ಆ ದಿನ ಸಭಾಂಗಣದಲ್ಲಿ ನೆರೆದಿದ್ದ ಕೊಂಕಣಿ ಸಹೋದರರ ಉತ್ಸಾಹ ಉಲ್ಲೇಖನೀಯವಾಗಿತ್ತು. ಪ್ರಾಯಶಃ ಕರ್ನಾಟಕದಲ್ಲಿ ಕೊಂಕಣಿ ಭಾಷೆಯ ಚರಿತ್ರೆಯಲ್ಲಿ ಮೊದಲ ಬಾರಿ ಜಾತಿ ಮತ ಭೇದವಿಲ್ಲದೆ ಕೊಂಕಣಿ ಕಾರ್ಯಕರ್ತರು ಹೀಗೆ ಒಟ್ಟು ಸೇರಿದ್ದರು. ಕೊಂಕಣಿ ಮಾತೆಗಾಗಿ ಯಾವುದೇ ತ್ಯಾಗ ಮಾಡಿ ದೇಶದಲ್ಲಿಯೇ ಉಚ್ಚ ಸ್ಥಾನ ಸಿಗುವ ಹಾಗೆ ಮಾಡುವ ಉತ್ಸಾಹ ಪ್ರತಿಯೊಬ್ಬ ಪ್ರತಿನಿಧಿಯಲ್ಲಿ ಮೇರೆ ಮೀರಿ ಹರಿಯುತ್ತಿದ್ದುದು ಕಂಡುಬಂತು. ಮುಂದೆ ನಾವು ಹೀಗೆಯೇ ಪರಸ್ಪರ ಒಟ್ಟು ಸೇರಿ ನಿಸ್ವಾರ್ಥದಿಂದ ಕೆಲಸ ಮಾಡಿದರೆ ಕೊಂಕಣಿ ಭಾಷೆಯನ್ನು ಪ್ರಗತಿಯೆಡೆಗೆ ಸಾಗಿಸುವ ದಾರಿ ಸಿಗುವುದು ಎಂಬ ವಿಶ್ವಾಸ ನಮ್ಮಲ್ಲಿ ತುಂಬಿತು.

ಆದರೂ "ದಾಲ್ ಮೆ ಕಾಲಾ" ಇದ್ದೇ ಇತ್ತು. ಮಾನ್ಯ ಚಾ.ಪ್ರಾ ಅವರು ಮೇಲೆ ಹೇಳಿದ ಪರಿಸ್ಥಿತಿ ಇದೆ ಎನ್ನುವುದು

ನನ್ನ ಅನುಭವಕ್ಕೆ ಬಂತು. ಕೆಲವು ಮಂದಿ ಮುಂದಿನ ದಿನಗಳಲ್ಲಿ ಕೊಂಕಣಿ ಜಾಥಾಗೆ ಸಿಗಲಿರುವ ಯಶಸ್ಸನ್ನು ಅಂದಾಜಿಸಿ ಲಾಭವನ್ನು ಪಡೆಯಲು ಸಿದ್ಧರಾಗಿಯೇ ಅಲ್ಲಿಗೆ ಬಂದದ್ದು ಕಂಡು ಬರಲಾರಂಭಿಸಿತು. ಅವನಿಗೆ ಆ ಸ್ಥಾನ, ಇವನಿಗೆ ಈ ಸ್ಥಾನ ಸಿಗಬೇಕು ಎನ್ನುವ ಕೂಗು ಕೇಳಿ ಬರುವ ಹಾಗಾಯಿತು.

ಕೊಂಕಣಿ ಭಾಷಾ ಮಂಡಳದಿಂದ ಕೊಂಕಣಿ ಜಾಥಾ ಸಮಿತಿಯನ್ನು ರಚಿಸುವಾಗ, ನಾವು ಆ ಕಾರ್ಯದ ನೇತೃತ್ವವನ್ನು ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಹಾಗೂ ಅನುಭವೀ ಸಾಮಾಜಿಕ ಕಾರ್ಯಕರ್ತರೂ ಆಗಿ ಪ್ರಸಿದ್ಧರಾಗಿದ್ದ ಶ್ರೀಮತಿ ಯುನಿಸ್ ಬ್ರಿಟೊ ಅವರಿಗೆ ವಹಿಸಿದ್ದೆವು. ಅವರು ತನ್ನ ಭುಜಕ್ಕೇರಿದ ಈ ಹೊರೆಯನ್ನು ಬಹಳ ಒಳ್ಳೆಯ ರೀತಿಯಿಂದ ಸಂಭಾಳಿಸಿಕೊಂಡು ಹೋಗುತ್ತಿದ್ದರು. ಆದರೂ, ಆ ದಿನ ಮಧ್ಯಾಹ್ನದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಶ್ರೀ ಹೆನ್ರಿ ಪಿಂಟೋ ಅವರಿಗೂ ಸಂಚಾಲಕರಾಗಿ ಮಾಡಬೇಕೆನ್ನುವುದು ಎತ್ತರದ ಧ್ವನಿಯಲ್ಲಿ ಕೇಳಿಬಂತು. ಅಗತ್ಯವಿಲ್ಲದಿದ್ದರೂ, ನಮ್ಮ ಮುಂದಿನ ಮಹಾ ಸಾಧನೆಯ ಕಾರ್ಯಗಳು ಸುಲಲಿತವಾಗಿ ನಡೆಯಬೇಕೆನ್ನುವ ದೃಷ್ಟಿಯಿಂದ ಅವರ ಮಾತಿನಂತೆ ಶ್ರೀ ಹೆನ್ರಿ ಪಿಂಟೊ ಅವರನ್ನು ಕೊಂಕಣಿ ಜಾಥಾದ ಸಹ ಸಂಚಾಲಕರನ್ನಾಗಿ ನೇಮಿಸುವ ಹಾಗಾಯಿತು.

ಕಾರ್ಯಕ್ರಮದಲ್ಲಿ ಜಾಥಾದ ಉದ್ದೇಶ ಸಾಧನೆಗಾಗಿ ಬೇರೆ ಬೇರೆ ಹೆಜ್ಜೆಗಳನ್ನು ತೆಗೆದುಕೊಳ್ಳುವ ವಿಚಾರದ ಕುರಿತು ಚರ್ಚೆ ನಡೆಯಿತು. ಉಳಿದ ವಿಚಾರಗಳಲ್ಲಿ ಎಲ್ಲರ ಸಹಮತದ ಒಪ್ಪಿಗೆಯೊಂದಿಗೆ ಇಡೀ ದಿನ ಕಾರ್ಯ ನಡೆದದ್ದು "ಜಾಥಾ ಸಮಿತಿ"ಯ ಸದಸ್ಯರಿಗೆ ಮತ್ತು ಎಲ್ಲ ಪ್ರತಿನಿಧಿಗಳಿಗೆ ಸಂತೋಷ ಹಾಗೂ ತೃಪ್ತಿಯನ್ನು ತಂದಿತ್ತು.

ಕೊಂಕಣಿ ಸಮಾಜದ ಜನರು ಹೆಚ್ಚು ಸಂಖ್ಯೆಯಲ್ಲಿರುವ ಊರುಗಳಲ್ಲಿ ಪ್ರತ್ಯೇಕ ಸ್ಥಾನಿಕ ಸಮಿತಿಗಳು ರಚನೆಗೊಂಡವು. ಕಾರವಾರದ ಕೊಂಕಣಿ ನೇತಾರ ಶ್ರೀ ದೀಪಕ ಗಾಂವಕರ, ಕುಂದಾಪುರದ ಶ್ರೀ ಯು.ಎಸ್. ಶೆಣೈ, ಬೆಳಗಾವಿಯ ಶ್ರೀ ವಿ. ವಿ. ಶೆಣೈ, ಮೈಸೂರಿನ ಶ್ರೀ ವಲ್ಲಿ ವಗ್ಗ ಇವರ ಅನುಭವೀ ಸಲಹೆಗಳು ನೆರೆದ ಪ್ರತಿನಿಧಿಗಳಿಗೆ ದೊರೆತವು. ಫಾ.ಹೆನ್ರಿ ಡಿಸೋಜಾ ಅವರು ಮಧ್ಯಾಹ್ನದ ಪ್ರತಿನಿಧಿ ಅಧಿವೇಶನವನ್ನು ಉತ್ತಮ ರೀತಿಯಿಂದ ನಡೆಸಿಕೊಟ್ಟಿದ್ದರು.

"ಕ್ರಿಯಾ ಸಮಿತಿ"ಯನ್ನು ನಿಯೋಜಿಸುವ ವಿಚಾರದಲ್ಲಿ ನೆರೆದ ಸರ್ವ ಸ್ಥಾನೀಯ ಸಮಿತಿಯ ಮುಖಂಡರು ಸಹಕಾರದ ಆಶ್ವಾಸನೆ ನೀಡಿದರು. ನಾವು ಕರೆ ನೀಡಿದ ಪ್ರಕಾರ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲರನ್ನು ಮತ್ತು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಕೊಂಕಣಿ ಭಾಷೆಯನ್ನು ಭಾರತ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಮತ್ತು ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯ ಪ್ರಗತಿಗಾಗಿ ಕೊಂಕಣಿ ಅಕಾಡೆಮಿಯನ್ನು ಸ್ಥಾಪಿಸಬೇಕೆಂಬ ಬೇಡಿಕೆ ಪತ್ರವನ್ನು ನೀಡಲು ಕೊಂಕಣಿ ಜಾಥಾ ಬೆಂಗಳೂರಿಗೆ ಹೋದಾಗ, ಸ್ಥಾನೀಯ ಪ್ರತಿನಿಧಿಗಳು ದೊಡ್ಡ ಸಂಖ್ಯೆಯಲ್ಲಿ ಬೆಂಗಳೂರಿನಲ್ಲಿ ಒಟ್ಟು ಸೇರಿ ಸರಕಾರಕ್ಕೆ ನಾವು ಬೇಡಿಕೆ ಪತ್ರವನ್ನು ನೀಡುವಾಗ ನಮ್ಮ ಜೊತೆಯಲ್ಲಿ ಇರಬೇಕೆಂಬ ಕರೆ ನೀಡಿದೆವು. ಆ ಕರೆಗೆ ಪ್ರತಿನಿಧಿಗಳು ಏಕಕಂಠದಿಂದ ಬೆಂಬಲ ಸೂಚಿಸಿದ್ದರು.

ಆ ದಿನ ಬೆಂಗಳೂರಿನಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕೊಂಕಣಿ ಸಂಘ, ಸಂಸ್ಥೆಗಳ ಒಂದು ಫೆಡರಲ್ ಸಂಸ್ಥೆ ಇರಬೇಕು ಎನ್ನುವುದನ್ನು ಅನುಸರಿಸಿ ಫೆಡರಲ್ ಸಂಸ್ಥೆ ವಿಚಾರವಾಗಿ ನಿರ್ಣಯವನ್ನು ಕೈಗೊಳ್ಳಲು ಶಿರಸಿಯಲ್ಲಿ ಸಭೆ ಕರೆಯಲಾಯಿತು. ಈ ಸಭೆಗೆ ಗೋವೆಯವರು ಕೂಡ ಬಂದಿದ್ದರು. ಅಲ್ಲಿ ಕರ್ನಾಟಕ ರಾಜ್ಯಮಟ್ಟದಲ್ಲಿ ಸಂಸ್ಥೆಯನ್ನು ನಡೆಸಿಕೊಂಡು ಬರುವ ವಿಚಾರದಲ್ಲಿ ನಿರ್ಣಯವಾಯಿತು. ಇದಕ್ಕೆ ಸಂವಿಧಾನವನ್ನು ಕುಮಟೆಯ ಶ್ರೀ ಅರುಣ ಉಭಯಕರರು ತಯಾರಿಸಿದ್ದರು. ಆದರೂ ಈ ಸಂಸ್ಥೆ ಮಾತ್ರ ತಲೆಯೆತ್ತಲೇ ಇಲ್ಲ. ಮುಂದೆ ಬೆಂಗಳೂರಿನ ಶ್ರೀ ಹೆನ್ರಿ ಪಿಂಟೊ ಅವರು ತಮ್ಮ ನೇತೃತ್ವದಲ್ಲಿ ಸಂಸ್ಥೆಯನ್ನು ನಡೆಸಿದರಾದರೂ, ಆ ಸಂಸ್ಥೆ ಯಾವುದೇ ಕಾರ್ಯವನ್ನು ನಡೆಸದೆ ತನ್ನಷ್ಟಕ್ಕೆ ಅವನತಿಯನ್ನು ಹೊಂದಿತು.

●●

೧೭. ಕೊಂಕಣಿ ಸಂಭ್ರಮ – ೧೯೯೩

ಕೇಂದ್ರ ಸರಕಾರವು ಕೊಂಕಣಿ ಭಾಷೆಯನ್ನು ಸಂವಿಧಾನದ ೮ನೇ ಅನುಸೂಚಿಯಲ್ಲಿ ಸೇರಿಸಿದ ಚಾರಿತ್ರಿಕ ದಿನ ೧೯೯೨ನೇ ಇಸವಿ ಆಗಸ್ಟ್ ೨೦ನೇ ತಾರೀಖು. ಈ ದಿನದ ನೆನಪಿಗಾಗಿ ೧೯೯೩ನೇ ಇಸವಿ ಆಗಸ್ಟ್ ೧೭ ರಿಂದ ೨೦ ರವರೆಗೆ ನಾಲ್ಕು ದಿನಗಳ ಕಾಲ "ಕೊಂಕಣಿ ಸಂಭ್ರಮ-೧೯೯೩" ಎಂಬ ಹೆಸರಿನಲ್ಲಿ ಕಾರ್ಯಕ್ರಮವನ್ನು ನಡೆಸಲಾಗಿತ್ತು ದಿನಾಂಕ ೧೭, ೧೮, ಮತ್ತು ೧೯ ರಂದು ಮಂಗಳೂರಿನ ಪುರಭವದಲ್ಲಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗಾಗಿ ಕೊಂಕಣಿ ಸಂಗೀತ, ನಾಟಕ ಇತ್ಯಾದಿ ಸ್ಪರ್ಧೆಗಳನ್ನು ನಡೆಸಲಾಗಿತ್ತು. ೨೦ರಂದು ಪುರಭವನದಲ್ಲಿ ಮಾನ್ಯ ಶ್ರೀ ಕೆ.ಕೆ.ಪೈ, ಶ್ರೀ ಬ್ಲೇಸಿಯಸ್ ಡಿಸೋಜಾ ಮತ್ತು ಶ್ರೀಮತಿ ಯೂನಿಸ್ ಬ್ರಿಟ್ಟೊ(ಮಹಾನಗರಪಾಲಿಕಾ ಮೇಯರ್) ಇವರ ನೇತೃತ್ವದಲ್ಲಿ "ಕೊಂಕಣಿ ಸಂಭ್ರಮ" ಕಾರ್ಯಕ್ರಮ ಜರಗಿತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ನಡೆದಿದ್ದವು. ಖ್ಯಾತ ಗಾಯಕರಾದ ಪುತ್ತೂರು ನರಸಿಂಹ ನಾಯಕರು ದೆಹಲಿಯಿಂದ ಮಂಗಳೂರಿಗೆ ಬಂದು ಕೊಂಕಣಿ ಸಂಗೀತ ಕಾರ್ಯಕ್ರಮ ನೀಡಿದ್ದರು. ಮಾನ್ಯ ಶ್ರೀ ಬಿ. ಗಣಪತಿ ಪೈ(ಭಾರತ ಬೀಡಿ) ಮತ್ತು ಹಿರಿಯ ಕೊಂಕಣಿಗರಾದ ಮಾ. ಮೊನ್ಸಿಂಜರ್ ಅಲೆಕ್ಸಾಂಡರ್ ಡಿಸೋಜಾ ಅವರನ್ನು ಸನ್ಮಾನ ಮಾಡಿ ಗೌರವಿಸಲಾಯಿತು. ಈ ಕಾರ್ಯಕ್ರಮವನ್ನು ಸಂಘಟಿಸಿದ್ದಕ್ಕಾಗಿ ಕೊಂಕಣಿ ಸಮುದಾಯದವರಿಂದ ನಮಗೆ ಪ್ರಶಂಸೆ ದೊರೆಯಿತು. ಮಂಗಳೂರು ಆಕಾಶವಾಣಿಯವರು ಮತ್ತು ಬೆಂಗಳೂರು ದೂರದರ್ಶನದ ಕಾರ್ಯ ನಿರ್ವಾಹಕರಾದ ಶ್ರೀಮತಿ ಉಷಾ ಕಿಣಿ ಮತ್ತು ಅವರ ತಾಂತ್ರಿಕ ಬಳಗದವರು ಕಾರ್ಯಕ್ರಮವನ್ನು ರೆಕಾರ್ಡ್ ಮಾಡಿ ಸಾದರ ಪಡಿಸಿದ್ದರಿಂದ ಕಾರ್ಯಕ್ರಮಕ್ಕೆ ತುಂಬಾ ಪ್ರಚಾರ ಸಿಗುವಂತಾಯಿತು. ಇದರಿಂದ ಅನಂತರದ ನಾಲ್ಕು ತಿಂಗಳೊಳಗೆ ನಾವು ಉಡುಪಿ, ಕಿನ್ನಿಗೋಳಿ, ಕಾರ್ಕಳ ಮೊದಲಾದ ಊರುಗಳಲ್ಲಿಯೂ ಕೊಂಕಣಿ ಭಾಷಾ ಮಂಡಳದ ಶಾಖೆಗಳನ್ನು ಪ್ರಾರಂಭಿಸಿದೆವು.

ಹುಬ್ಬಳ್ಳಿಯ ಪ್ರಸಿದ್ಧ ಹೊಟೇಲ್ ಉದ್ಯಮಿಗಳಾದ ಶ್ರೀ ಶೇಷಗಿರಿ ಪಾಂಡುರಂಗ ಕಾಮತರ ಉಮೇದಿನಿಂದ ಹುಬ್ಬಳ್ಳಿಯಲ್ಲಿ ಕೊಂಕಣಿ ಭಾಷಾ ಮಂಡಳದ ಶಾಖೆಯ ಉದ್ಘಾಟನೆಯಾಯಿತು ಮತ್ತು ೧೯೯೩ನೇ ಇಸವಿ ಅಕ್ಟೋಬರ್ ೩ನೇ ತಾರೀಖು, ಭಾನುವಾರದ ದಿನ ಶ್ರೀ ಕೆ.ಎನ್. ರಾವ್, ದಾಂಡೇಲಿ ಇವರ ಅಧ್ಯಕ್ಷತೆಯಲ್ಲಿ "ಅಖಿಲ ಭಾರತ ಕೊಂಕಣಿ ಕವಿ ಸಮ್ಮೇಳನ"ದ ಉದ್ಘಾಟನೆಯು ಹುಬ್ಬಳ್ಳಿಯ "ರಂಗಪ್ಪ ಪಾಂಡುರಂಗ ಕಾಮತ ಸಭಾಗೃಹ"ದಲ್ಲಿ ನಡೆಯಿತು. ಮುಂಬೈಯ ಪ್ರಸಿದ್ಧ ಕೊಂಕಣಿ ಸಾಹಿತಿ, ಕವಿ ಶ್ರೀ ಜೆ.ಬಿ. ಮೊರಾಯಸ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು, ಕೊಂಕಣಿ ಭಾಷೆಯ ಶ್ರೇಷ್ಠ ಕವಿ ಮತ್ತು ಕೇಂದ್ರ ಸಾಹಿತ್ಯ ಅಕಾದೆಮಿ ಸದಸ್ಯರಾಗಿದ್ದ ಡಾ. ಮನೋಹರರಾಯ ಲಕ್ಷ್ಮಣರಾವ್ ಸರದೇಸಾಯಿ(ಗೋವಾ) ಅಧ್ಯಕ್ಷರಾಗಿದ್ದ ಈ ಕವಿ ಸಮ್ಮೇಳನದಲ್ಲಿ ಜೆ.ಬಿ. ಮೊರಾಯಸ್, ಜೆ.ಬಿ. ಸಿಕ್ವೇರಾ, ಕೊಚ್ಚಿ ಅನಂತ ಭಟ್, ಬಿ.ವಿ.ಬಾಳಿಗ, ವಿ.ಜೆ.ಪಿ. ಸಲ್ಡಾನಾ ಮೊದಲಾದವರು ಭಾಗವಹಿಸಿದ್ದರು. ಶ್ರೀ ನಾಗೇಶ ಕರಮಲಿ, ಉದಯ ಭೆಂಬ್ರೆ ಅವರೂ ಹಾಜರಿದ್ದರು. ಈ ಕಾರ್ಯಕ್ರಮದ ಎಲ್ಲಾ ಸಿದ್ಧತೆಗಳನ್ನು ಕಾರ್ಯದರ್ಶಿ ಶ್ರೀ ಎಡ್ವಿನ್ ಜೆ. ಎಫ್. ಡಿಸೋಜಾ ನಡೆಸಿದ್ದರಿಂದ, ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಮಧ್ಯಾಹ್ನ ಊಟದ ಅನಂತರ ಕೊಂಕಣಿ ಲೇಖಕರ ಶಿಬಿರವೂ ನಡೆಯಿತು. ಇದರಲ್ಲಿ ಡಾ. ದಯಾನಂದ ಶಾನಭಾಗ, ಧಾರವಾಡ ಇವರು ದಿಕ್ಸೂಚಿ ಭಾಷಣ ನೀಡಿದರು. ಕೊಂಕಣಿ ಭಾಷೆಯ ಪ್ರಸಿದ್ಧ ನಾಟಕಕಾರರು ಮತ್ತು ಸಾಹಿತಿಗಳು ಪಾಲ್ಗೊಂಡದ್ದರಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

೧೮. ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ - ೧೯೯೫

ಕೊಂಕಣಿ ಭಾಷಾ ಮಂಡಳ ಸಂಸ್ಥೆಯ ೨೦ನೇ ಸ್ಥಾಪನಾ ದಿನದ ಆಚರಣೆಯ ಸಮಾರಂಭವು ಜನವರಿ ೧, ೧೯೯೪ ರಂದು ನಡೆಯಿತು. ಅಂದು ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದ ಖ್ಯಾತ ಕೊಂಕಣಿ ಮಹನೀಯರಿಗೆ ಸನ್ಮಾನವಿತ್ತು. ಮರುದಿನ ಭಾನುವಾರ, ಅಂದರೆ ಜನವರಿ ೨ ರಂದು ನಾವು ಸನ್ಮಾನಿತರ ಮತ್ತು ಮಂಗಳೂರು ಹಾಗೂ ಉಡುಪಿಯ ಕಾರ್ಯಕರ್ತರ ಸಭೆ ಕರೆದು, ಕೊಂಕಣಿ ಭಾಷಾ ಮಂಡಳದ ವತಿಯಿಂದ ೧೯೯೫, ಡಿಸೆಂಬರ್ ತಿಂಗಳಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸುವುದಾಗಿ ಅವರ ಮುಂದೆ ಘೋಷಿಸಿದೆವು. ಈ ಕಾರ್ಯಕ್ಕೆ ಅವರ ನೆರವು, ಸಹಕಾರ ಮತ್ತು ಮಾರ್ಗದರ್ಶನವನ್ನು ಕೋರಿದೆವು. ಅಲ್ಲಿ ನೆರೆದವರೆಲ್ಲರೂ ಅದಕ್ಕೆ ಒಪ್ಪಿಕೊಂಡು ತಮ್ಮ ಬೆಂಬಲವನ್ನು ಸೂಚಿಸಿದರು.

ಅದೇ ದಿನ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಗ್ರಂಥಾಲಯಗಳಲ್ಲಿ ಕೊಂಕಣಿ ಸಾಹಿತ್ಯ ಕೃತಿಗಳನ್ನು ಇಡಲು ಮತ್ತು ಕರ್ನಾಟಕ ಸರಕಾರವು ಕೊಂಕಣಿ ಸಾಹಿತ್ಯ ಗ್ರಂಥಗಳನ್ನು ಖರೀದಿಸಲು ಗ್ರಂಥಾಲಯ ನಿರ್ದೇಶಕರು ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರನ್ನು ಭೇಟಿಯಾಗಿ, ಅವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿದೆವು. ಅವರಿಗೆ ಕೊಂಕಣಿ ಸಮುದಾಯದ ಶಾಲೆಗಳ ಹೆಸರಿನ ಪಟ್ಟಿಯನ್ನೂ ನೀಡಿದೆವು. ಅದರಿಂದ ಹೆಚ್ಚು ಪ್ರಯೋಜನವಾಗದಿದ್ದರೂ, ಅದರ ಅನಂತರ ಪ್ರತೀ ವರ್ಷ ಕೆಲವು ಕೊಂಕಣಿ ಗ್ರಂಥಗಳನ್ನು ಸರಕಾರಿ ಇಲಾಖೆಯವರು ಮತ್ತು ಶಾಲೆಯವರು ಖರೀದಿಸುವ ವ್ಯವಸ್ಥೆ ನಡೆಯಿತು. ನಾನು ಮುಂದೆ ಕೊಂಕಣಿ ಅಕಾಡೆಮಿಯ ವತಿಯಿಂದಲೂ ಈ ಪ್ರಯತ್ನವನ್ನು ಮುಂದುವರಿಸಿದ್ದೆ.

ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಗಾಗಿ ಫೆಬ್ರವರಿ ೬, ೧೯೯೪ರಂದು ಮಂಗಳೂರಿನ ತಾಜಮಹಲ್ ಹೋಟೇಲಿನ ಮಹಡಿಯ ಮೇಲೆ ಎರಡನೆಯ ಸಭೆಯನ್ನು ಕರೆಯಲಾಗಿತ್ತು. ಈ ಸಭೆಗೆ ಡಾ.ಟಿ.ಎಂ.ಎ.ಪೈ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಟಿ. ರಮೇಶ ಪೈ ಮತ್ತು ಬೆಂಗಳೂರು ದೂರದರ್ಶನದ ಕಾರ್ಯ ನಿರ್ವಾಹಕಿ ಶ್ರೀಮತಿ ಉಷಾ ಕಿಣಿ, ಹಿರಿಯ ಸಾಹಿತಿ ಶ್ರೀ ಕೆ.ಎನ್. ರಾವ್, ದಾಂಡೇಲಿ ಮತ್ತು ಜಿಲ್ಲೆಯ ಬೇರೆ ಬೇರೆ ಊರುಗಳಿಂದ ಪ್ರತಿನಿಧಿಗಳು ಬಂದಿದ್ದರು. ಕೊಂಕಣಿ ಭಾಷಾ ಮಂಡಳದ ವತಿಯಿಂದ ಸಿದ್ಧಗೊಳಿಸಿದ್ದ ಕಾರ್ಯಸೂಚಿ ಪತ್ರವನ್ನು ಮಂಡಿಸಲಾಯಿತು. ಕೆಲವು ಸೂಚನೆಗಳು ಬಂದು ಉತ್ತಮ ಪ್ರತಿಕ್ರಿಯೆ ಕಂಡುಬಂತು.

ಗೋವೆಯ ಮಾಪುಸಾದಲ್ಲಿ ನಡೆದ ೧೨ನೇ ಅಖಿಲ ಭಾರತ ಕೊಂಕಣಿ ಸಮ್ಮೇಳನದ ಅಧ್ಯಕ್ಷರಾಗಿ ಕೊಂಕಣಿ ವಿದ್ವಾಂಸರಾದ ಶ್ರೀ ಬಿ.ವಿ. ಬಾಳಿಗಾ ಅವರು ಆಯ್ಕೆಗೊಂಡಿದ್ದರು. ಆ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಗೋವೆ ಸರಕಾರದ ಕಾನೂನು ಸಚಿವರಾದ ಶ್ರೀ ಲೂಯಿಜಿನೊ ಫೆಲೇರೊ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅವರು ಕೊಂಕಣಿ ಹೋರಾಟಗಾರರು. ಆ ಸಮಾರಂಭದಲ್ಲಿ ನೆರೆದ ಸಾವಿರಾರು ಜನರ ಸಮ್ಮುಖದಲ್ಲಿ ನಾನು ಮಂಗಳೂರಿನಲ್ಲಿ ನಡೆಯಲಿರುವ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ೨೦ ನಿಮಿಷಗಳ ಭಾಷಣ ನೀಡಿದೆ. ನನ್ನ ಮಾತು ಶ್ರೀ ಲುಯಿಜಿನ್ ಫೆಲೇರೊ ಅವರಿಗೆ ತುಂಬಾ ಇಷ್ಟವಾಗಿರಬೇಕು. ಅವರು ತಮ್ಮ ಭಾಷಣದಲ್ಲಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ತಮ್ಮ ಮತ್ತು ಗೋವೆ ಸರಕಾರದ ಸಹಾಯ ಮತ್ತು ಸಹಕಾರದ ಆಶ್ವಾಸನೆಯನ್ನು ನೀಡಿದರು. ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಗೋವೆಯಲ್ಲಿ ತುಂಬಾ ಪ್ರಚಾರ ದೊರೆಯಿತು. (ಮಂಗಳೂರಿನ ನವರತ್ನ ಹೋಟೇಲಿನ ಕಟ್ಟಡದಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಕಚೇರಿಯ ಉದ್ಘಾಟನೆಯನ್ನು ನಡೆಸಲು ನಾವು ನೀಡಿದ ಆಮಂತ್ರಣವನ್ನು ಸ್ವೀಕರಿಸಿ ಶ್ರೀ ಲೂಯಿಜಿನ್ ಅವರು ಬಂದಿದ್ದರು. ಇವತ್ತಿಗೂ ಅವರ ಮತ್ತು ನನ್ನ ನಡುವೆ ಸ್ನೇಹ ಮತ್ತು ಅಭಿಮಾನ ಅದೇ ರೀತಿ ಉಳಿದು ಬೆಳೆದು ನಿಂತಿದೆ.)

ಶ್ರೀ ಬಿ.ವಿ. ಬಾಳಿಗಾರ ಅಧ್ಯಕ್ಷತೆಯಲ್ಲಿ ನಡೆದ ೧೨ನೇ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದಲ್ಲಿ ವಿಶ್ವ

ಕೊಂಕಣಿ ಸಮ್ಮೇಳನಕ್ಕೆ ತುಂಬಾ ಪ್ರಚಾರ ದೊರತದ್ದು ಮಾತ್ರವಲ್ಲ, ನಮಗೆ ಬೇರೆ ರಾಜ್ಯಗಳ ಯುವ ಹಾಗೂ ಉತ್ಸಾಹಿ ಕೊಂಕಣಿಪ್ರೇಮಿಗಳ ಮತ್ತು ಕಾರ್ಯಕರ್ತರ ಬೆಂಬಲವೂ ದೊರೆಯಿತು. ಇದರಿಂದ ಕರ್ನಾಟಕದಲ್ಲಿರುವ ನಮಗೆ ಮುಂದಿನ ದಿನಗಳಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಒಟ್ಟುಗೂಡಿ ಕೊಂಕಣಿ ಕಾರ್ಯಗಳನ್ನು ನಡೆಸುವುದಕ್ಕೆ ಅವಕಾಶ ದೊರೆಯುವಂತಾಯಿತು. ಮುಖ್ಯವಾಗಿ ವಿಶ್ವ ಕೊಂಕಣಿ ಸಮ್ಮೇಳನದ ಸಂಘಟನೆಯ ಕಾರ್ಯದಲ್ಲಿ ನಮಗೆ ಗೋವೆಯಲ್ಲಿ ಕೆಲಸ ಮಾಡುವ ನೇತಾರರ ಮತ್ತು ಕಾರ್ಯಕರ್ತರ ಒಂದು ಗುಂಪೇ ದೊರೆಯುವ ಹಾಗಾಯಿತು.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಗಳಿಗಾಗಿ ಪ್ರತಿ ತಿಂಗಳು ತಾಜಮಹಲ ಹೊಟೇಲಿನ ಸಭಾಗೃಹದಲ್ಲಿ ಕೊಂಕಣಿ ಪ್ರೇಮಿಗಳ, ಅಭಿಮಾನಿಗಳ ಮತ್ತು ಕಾರ್ಯಕರ್ತರ ಸಭೆ ನಡೆಯುತ್ತಿತ್ತು. ಆ ಸಭೆಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನ ನಡೆಸುವ ಸಮಿತಿಗಳ ಸಂಘಟಕರು ಅವರವರ ಸಮಿತಿಯ ವತಿಯಿಂದ ನಡೆದ ಸಿದ್ಧತಾ ಕಾರ್ಯಗಳು ಮತ್ತು ಮುಂದಿನ ದಿನಗಳಲ್ಲಿ ಯೋಜಿಸಲಾದ ಕಾರ್ಯಗಳ ವಿವರಗಳನ್ನು ಮಂಡಿಸುವ ಪದ್ಧತಿ ಇತ್ತು. ಈ ಸಭೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕಾರ್ಯಕರ್ತರು ಉತ್ಸಾಹದಿಂದ ಪಾಲುಗೊಳ್ಳುತ್ತ ಅವರ ಸೂಚನೆಗಳನ್ನು ನೀಡುತ್ತಿದ್ದರು ಮತ್ತು. ನಮ್ಮ ಈ ಮಹಾ ಯೋಜನೆಗೆ ಬೆಂಬಲ ಮತ್ತು ತನು ಮನ ಧನಗಳ ಆಶ್ವಾಸನೆ ನೀಡುತ್ತಿದ್ದರು.

ಇದೇ ರೀತಿ ನಡೆದ ತಿಂಗಳ ಸಭೆಯೊಂದಕ್ಕೆ ಮಂಗಳೂರಿನ ಮಹಾದಾನಿ, ಪಿ.ವಿ.ಎಸ್. ಬೀಡಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಧುಸೂದನ ಡಿ. ಕುಶೆಯವರು ಬಂದಿದ್ದರು. ನಮ್ಮ ಯೋಜನೆ, ಶ್ರದ್ಧೆ ಮತ್ತು ಸ್ವಯಂಸ್ಫೂರ್ತಿಯಿಂದ ನಡೆಸುವ ಕಾರ್ಯಗಳನ್ನು ನೋಡಿ ಸಭೆ ಅಂತ್ಯಗೊಳ್ಳುವ ಸಮಯದಲ್ಲಿ ಎದ್ದು ನಿಂತು ವಿಶ್ವ ಕೊಂಕಣಿ ಸಮ್ಮೇಳನಕ್ಕೆ ತಮ್ಮ ದೇಣಿಗೆಯಾಗಿ ಒಂದು ಲಕ್ಷ ರೂಪಾಯಿ ಘೋಷಿಸಿದರು. ಇದೇ ರೀತಿ ವಿಶ್ವ ಕೊಂಕಣಿ ಕೇಂದ್ರದ ಯೋಜನೆಯನ್ನು ಕೈಗೆತ್ತಿಕೊಂಡಾಗ ತಾನು ಇನ್ನೂ ಒಂದು ಲಕ್ಷ ರೂಪಾಯಿ ನೀಡುವುದಾಗಿ ಘೋಷಿಸಿದರು. ಅದು ನಮಗೆ ತುಂಬಾ ಹೆಮ್ಮೆಯ ವಿಚಾರವಾಗಿ ಉಳಿಯಿತು. ಇದರಿಂದಾಗಿ ದಿನಗಳು, ತಿಂಗಳುಗಳು ಸರಿಯುತ್ತಿರುವಾಗ ನಮ್ಮಲ್ಲಿ ಉತ್ಸಾಹ ಮೂಡಿಸುವ, ಭರವಸೆ ನೀಡತಕ್ಕಂತಹ ಪತ್ರಗಳು ದೇಶ ವಿದೇಶದ ಕೊಂಕಣಿ ಜನರಿಂದ ಬರಲಾರಂಭಿಸಿ ನಮಗೆ ಬೆಳಕು ಕಂಡು ಬರಲಾರಂಭಿಸಿತು.

ಚಿ. ದಿನೇಶನ ವಿವಾಹ

ನನ್ನ ಕಿರಿಮಗ ಚಿ. ದಿನೇಶನ ವಿವಾಹವನ್ನು ದೆಹಲಿಯ ಭಾರತೀಯ ಅಂಕೆಸಂಖ್ಯಾ ವಿದ್ಯಾಲಯದ ಶ್ರೀ ಕುಂಬಳೆ ಶಂಕರ ನಾಯಕರ ಮಗಳು ಶೋಭಾ ಜೊತೆಯಲ್ಲಿ ನಡೆಸುವುದೆಂದು ನಾವು ೧೯೯೨ರಲ್ಲಿಯೇ ನಿರ್ಣಯಿಸಿದ್ದೆವು. ಆದರೆ ಚಿ. ದಿನೇಶನ ವ್ಯಾಪಾರದ ಪರಿಸ್ಥಿತಿ, ನಮ್ಮ ಅಳಿಯ ಪ್ರಭಾಕರ ಕಿಣಿಯ ಮನೋವೃತ್ತಿಯ ಕಾರಣದಿಂದಾಗಿ ಹಣದ ಪರಿಸ್ಥಿತಿ ತುಂಬಾ ಕೆಟ್ಟು ಹೋಗಿದ್ದರಿಂದ ಮದುವೆಯನ್ನು ಎರಡು ವರ್ಷ ಕಳೆದ ನಂತರವೇ ನಡೆಸುವುದೆಂದು ಮಾತುಕತೆಯಾಗಿತ್ತು. ೧೯೯೪ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಶ್ರೀ ಶಂಕರ ನಾಯಕ್ ಮತ್ತು ಅವರ ಪತ್ನಿ ಶ್ರೀಮತಿ ಸಾವಿತ್ರಿ ನಮ್ಮ ಮನೆಗೆ ಬಂದು ಇದೇ ವರ್ಷ ಮದುವೆ ನಡೆಯಬೇಕು ಎಂದು ತಿಳಿಸಿದ್ದರಿಂದ ಮತ್ತು ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲದ್ದರಿಂದ, ನಮ್ಮ ಎರಡು ಕುಟುಂಬದವರು ಮಾತ್ರ ಗೋವೆಗೆ ಹೋಗಿ ಕುಲದೇವರಾದ ಶ್ರೀರಾಮನಾಥ ಕ್ಷೇತ್ರದಲ್ಲಿ ಸಣ್ಣ ಪ್ರಮಾಣದಲ್ಲಿ ಮೇ ೨೯ರಂದು ವಿವಾಹ ನಡೆಸುವುದೆಂದು ನಿರ್ಣಯಿಸಿದೆವು.

ಅದೇ ರೀತಿ ೨೯ ಮೇ, ೧೯೯೪ರ ಭಾನುವಾರ ಸಂಜೆ ಗೋಧೂಳಿ ಲಗ್ನದಲ್ಲಿ ಚಿ. ದಿನೇಶನ ವಿವಾಹ ಚಿ.ಸೌ. ಶೋಭಾ ಜೊತೆಯಲ್ಲಿ ವಿಧ್ಯುಕ್ತವಾಗಿ ಶ್ರೀ ಶಾಂತೇರಿ ಲಗ್ನ ಮಂಟಪದಲ್ಲಿ ನಡೆಯಿತು. ನನ್ನ ಸಹೋದರರು ಮತ್ತು ಸಹೋದರಿಯರು, ಅವರ ಮಕ್ಕಳು ಶ್ರೀರಾಮನಾಥ ದೇವಳ ಬಂದು ತಲುಪಿ ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದರು. .

ಮರುದಿನ ಮುಂಜಾನೆ ನಮ್ಮ ಕುಲದೇವರುಗಳ ಭೇಟಿ ನಡೆಸಿ ಮಂಗಳೂರಿಗೆ ಹೊರಟೆವು. ರಾತ್ರಿ ೭.೪೫ ಗಂಟೆಗೆ ಹೊಸ ಮದುಮಕ್ಕಳಿಗೆ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಆಶೀರ್ವಾದ ಪಡೆದು ಮನೆಗೆ ಹೋಗಿ ತಲುಪಿದೆವು.

ಕೊಂಕಣಿ ಲೇಖಕರ ಕಾರ್ಯಾಗಾರ

ನನಗೆ ಅದೇ ರಾತ್ರಿ ಬಸ್ಸಿನಲ್ಲಿ ಬೆಂಗಳೂರಿಗೆ ಹೋಗುವುದಿತ್ತು. ಕೊಂಕಣಿ ಭಾಷಾ ಮಂಡಳ, ಮಂಗಳೂರು ಮತ್ತು ಕೊಂಕಣಿ ಭಾಷಾ ಮಂಡಳ, ಬೆಂಗಳೂರು ಇವರ ಜಂಟಿ ಸಹಯೋಗದಲ್ಲಿ ೧೯೯೪ನೇ ಇಸವಿ, ಮೇ ೩೧ರಿಂದ ಜೂನ್ ೨ ರವರೆಗೆ ಬೆಂಗಳೂರಿನ ಇಂಡಿಯನ್ ಇನ್‌ಟಿಟ್ಯೂಟ್

ಆಫ್ ಮ್ಯಾನೆಜ್‌ಮೆಂಟಲ್ಲಿ ಮೂರು ದಿನಗಳ ಕೊಂಕಣಿ ಲೇಖಕರ ಕಾರ್ಯಾಗಾರ ನಡೆಯುವುದಿತ್ತು. ಕಾರ್ಯಾಗಾರದಲ್ಲಿ ಪಾಲುಗೊಳ್ಳುವವರು ಮತ್ತು ಆಹ್ವಾನಿತರು ಇದೇ ಸಂಸ್ಥೆಯಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಿದವರು ನಿವೃತ್ತ ಕರ್ನಲ್ ಎ.ಎಂ. ಕಾಮತರು. ಕಾರ್ಯಾಗಾರದ ಉದ್ಘಾಟನೆ ಮಾನ್ಯ ಸಚಿವರಾದ ಶ್ರೀ ಬ್ಲೇಸಿಯಸ್ ಡಿಸೋಜಾ ಅವರಿಂದ ನಡೆಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ.ವಿ. ಬಾಳಿಗ ವಹಿಸಿದ್ದರು. ರಾಜ್ಯ ಪತ್ರಾಗಾರದ ನಿರ್ದೇಶಕರಾಗಿದ್ದ ಡಾ. ಕೆ. ಸೂರ್ಯನಾಥ ಕಾಮತರು ಉಪಸ್ಥಿತರಿದ್ದರು. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಧಾರವಾಡದ ಡಾ. ದಯಾನಂದ ಎಂ. ಶಾನಭಾಗ(ತತ್ವಶಾಸ್ತ್ರ ವಿದ್ವಾಂಸರು), ಮಂಗಳೂರಿನ ಬೆನೆಟ್ ಪಿಂಟೊ(ಜಾನಪದ), ಎಡ್ವಿನ್ ಜೆ.ಎಫ್. ಡಿಸೋಜಾ (ಕಥೆಗಾರರು ಮತ್ತು ಕಾದಂಬರಿಕಾರರು), ಡಾ. ವಿಲಿಯಂ ಡಿಸಿಲ್ವಾ (ಧ್ವನಿಮಾ ವ್ಯವಸ್ಥೆ), ಹಾಗೂ ಸಂತೋಷ ಕುಮಾರ್ ಗುಲ್ವಾಡಿ (ಪತ್ರಕರ್ತರು), ಡಾ. ವಿಲಿಯಂ ಮಾಡ್ತಾ (ಭಾಷಾಶಾಸ್ತ್ರ) ಭಾಗವಹಿಸಿದರು.

ಜೂನ್ ೨ರ ಸಂಜೆ ಯವನಿಕಾ ಸಭಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪೊಲೀಸ್ ನಿರ್ದೇಶಕರಾದ ಶ್ರೀ ಎಫ್.ಟಿ.ಆರ್. ಕೊಲಾಸೊ ಮತ್ತು ಅಧ್ಯಕ್ಷನಾಗಿ ನಾನು ವೇದಿಕೆಯಲ್ಲಿದ್ದೆವು.

ಶ್ರೀ ಯು.ಎಸ್. ಶೆಣೈ ಕುಂದಾಪುರದ ಓರ್ವ ಸಮರ್ಥ ಯುವಕರು. ಅವರು ಮತ್ತು ಅವರ ಸಂಗಾತಿಗಳು ಅಲ್ಲಿ ೧೮ ಕೊಂಕಣಿ ಸಮಾಜದ ಜನರನ್ನು, ಕಾರ್ಯಕರ್ತರನ್ನು ಒಂದೆಡೆ ಸೇರಿಸಿದ್ದಾರೆ. ಶೆಣೈ ಕಾಣಲು ಹಸನ್ಮುಖಿ ಹಾಗೂ ಶಾಂತ ಸ್ವಭಾವದ ವ್ಯಕ್ತಿ. ಕುಂದಪ್ರಭ ಎಂಬ ದೈನಿಕ ಪತ್ರಿಕೆಯ ಸಂಪಾದಕರಾಗಿರುವ ಇವರು ರೋಟರಿ, ಲಾಯನ್ಸ್, ಕನ್ನಡ ಸಂಘ ಮೊದಲಾದ ಸಂಸ್ಥೆಗಳೊಂದಿಗೆ ಉತ್ತಮ ಸಂಪರ್ಕವನ್ನು ಇಟ್ಟುಕೊಂಡು, ಕುಂದಾಪುರದಲ್ಲಿ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಎಲ್ಲರೊಂದಿಗೆ ಬೆರೆತು ಕೆಲಸ ಮಾಡುತ್ತಾ ಸ್ನೇಹ ಬೆಳೆಸಿಕೊಳ್ಳುತ್ತಾರೆ.

ಮೇ ೧, ೧೯೯೪ ದು ಸಂಜೆ ಉದ್ಘಾಟನೆಗೊಂಡ "ಜೈ ಕೊಂಕಣಿ" ಎಂಬ ಹೊಸ ಕೊಂಕಣಿ ಮಾಸಪತ್ರಿಕೆಯ ಸಂಪಾದಕರಾಗಿದ್ದವರು ಶ್ರೀ ಶೆಣೈಯವರು. ಈ ಪತ್ರಿಕೆಯಲ್ಲಿ ಕೆ.ಎನ್.ರಾವ್ ದಾಂಡೇಲಿ ಹಾಗೂ ಇತರ ಕೊಂಕಣಿ ಲೇಖಕರು ಬರೆದ ಲೇಖನಗಳು ಪ್ರಕಟಗೊಳ್ಳುವುದಿತ್ತು.

ಚಿ. ದಿನೇಶನ ಮದುವೆ ಮತ್ತು ಬೆಂಗಳೂರಿನಲ್ಲಿ ನಡೆದ ಮೂರು ದಿನಗಳ ಕೊಂಕಣಿ ಲೇಖಕರ ಕಾರ್ಯಾಗಾರ(ಮೇ ೩೧ರಿಂದ ಜೂನ್ ೨ರವರೆಗೆ) ಮತ್ತು ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ಕೊಂಕಣಿ ಕಲಿಕೆಯ ಪ್ರಾರಂಭ ಇವೇ ಮೊದಲಾದ ಕಾರ್ಯಭಾರಗಳ ಕಾರಣದಿಂದಾಗಿ ನಾನು ಬೇರೆ ಯಾವುದೇ ಕೆಲಸದ ಕಡೆಗೆ ಗಮನವನ್ನು ಹರಿಸಿರಲಿಲ್ಲ.

ಜೂನ್ ೧೮ರಂದು ಮೊಹಿಯುದ್ದೀನ್ ಎಜ್ಯುಕೇಶನಲ್ ಟ್ರಸ್ಟ್ ವತಿಯಿಂದ ತುಂಬೆ ಕಾಲೇಜಿನಲ್ಲಿ ಬಿ.ಬಿ.ಎಮ್. ಕೋರ್ಸ್ ಪ್ರಾರಂಭಗೊಳ್ಳುವುದರಲ್ಲಿತ್ತು. ಮಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ.ಎಂ.ಐ. ಸವದತ್ತಿಯವರು ಬಿ.ಬಿ.ಎಮ್. ಕೋರ್ಸ್‌ನ ಉದ್ಘಾಟನೆಯನ್ನು ನಡೆಸಿದ್ದರು. ಬಂಟವಾಳ ತಾಲೂಕಿನ ವಿದ್ಯಾರ್ಥಿಗಳಿಗೆ ಬಿ.ಬಿ.ಎಮ್. ಕಲಿಯುವ ಸದವಕಾಶವನ್ನು ಒದಗಿಸಿ ಕೊಡುವುದು ನಮ್ಮ ಉದ್ದೇಶವಾಗಿತ್ತು. ಆದರೆ ಅಗತ್ಯವಿರುವಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದೊರೆಯದೆ ಮುಂದೆ ಈ ಕೋರ್ಸ್ ನಿಂತು ಹೋಗುವ ಹಾಗಾಯಿತು.

೧೯೯೪ ಜುಲೈ ೧೦ರಂದು ಅಮೇರಿಕಾದಿಂದ ಬಂದ ನನ್ನ ತಮ್ಮ ಚಿ. ಗಣಪತಿಯ ಮಗ ಚಿ. ಅಶ್ವಿನನ ಉಪನಯನವು ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ಕಲ್ಯಾಣ ಮಂಟಪದಲ್ಲಿ ಜರಗಿತು. ಈ ಸಮಾರಂಭಕ್ಕೆ ಉಡುಪಿ, ಮಣಿಪಾಲ, ಮಂಗಳೂರು ಮತ್ತು ಬಂಟವಾಳದಿಂದ ಚಿ. ಗಣಪತಿಯ ಪರಿಚಯಸ್ಥರು ಮತ್ತು ನನ್ನ ಸ್ನೇಹ ಬಳಗದವರು ಎಲ್ಲರೂ ಬಂದಿದ್ದರು. ಮಳೆಗಾಲದ ದಿನ, ಒಂದೇ ಸವನೆ ಮಳೆ ಸುರಿಯುತ್ತಿದ್ದರೂ ಸಮಾರಂಭ ಚೆನ್ನಾಗಿ ನಡೆಯಿತು. ಆದರೆ ಮರುದಿನ ನೇತ್ರಾವತಿ ನದಿಯಲ್ಲಿ ಪ್ರವಾಹ ಬಂದದ್ದರಿಂದ, ಗಣಪತಿಗೆ ತನ್ನ ನೆಂಟರಿಷ್ಟರ ಮನೆಗೆ ಭೇಟಿ ನೀಡುವುದು ಸಾಧ್ಯವಾಗದೆ, ಅವನು ಕಾರಿನಲ್ಲಿ ನೇರವಾಗಿ ಚಿಕ್ಕಮಗಳೂರಿಗೆ ಹೋಗುವಂತಾಯಿತು. ಅವನಿಗೆ ಮತ್ತು ಅವನ ಹೆಂಡತಿ ಮಕ್ಕಳಿಗೆ ಎಲ್ಲಿಯೂ ತಿರುಗಾಡಿಕೊಂಡು ಬರುವುದು ಸಾಧ್ಯವಾಗಲಿಲ್ಲ.

ನನ್ನ ವೈಯಕ್ತಿಕ ಕಾರ್ಯಗಳನ್ನು ಹಿಂದೆ ಸರಿಸಿ, ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಮುಹೂರ್ತ ಸಮಾರಂಭವನ್ನು ನಡೆಸಿ ಸಮ್ಮೇಳನದ ಕಾರ್ಯವನ್ನು ಪ್ರಾರಂಭಿಸುವ ಗಳಿಗೆ ಹತ್ತಿರ ಬಂತು. ನನ್ನಲ್ಲಿ ದೇವರು ತುಂಬಿದ ಸಂಘಟನಾ ಶಕ್ತಿ, ಚಾತುರ್ಯ, ಕೈಗೆತ್ತಿಕೊಂಡ ಕೆಲಸದಲ್ಲಿ ಬದ್ಧತೆ, ನಿಷ್ಕಾಮಕರ್ಮ

ಮನೋಭಾವ, ಇವು ಎಲ್ಲರಿಗೂ ತಿಳಿಯುವ ಸುಸಂದರ್ಭ. ಜಗತ್ತಿನಾದ್ಯಂತ ಹಂಚಿ ಹೋಗಿರುವ, ಬೇರೆ ಬೇರೆ ಭೂಭಾಗಗಳಲ್ಲಿರುವ, ಭಾರತದ ಉದ್ದಗಲದಲ್ಲಿರುವ ಎಲ್ಲಾ ರಾಜ್ಯಗಳಲ್ಲಿರುವ ಕೊಂಕಣಿ ಜನರನ್ನು ಜಾತಿ, ಧರ್ಮ, ಮತ್ತು ಆಡುಭಾಷೆಯ ಭೇದವಿಲ್ಲದೆ ಒಟ್ಟುಗೂಡಿಸುವ ಮಹಾಸಂದರ್ಭ ನನ್ನ ಜೀವನದಲ್ಲಿ ಒದಗಿ ಬಂತು. ಪುಟ್ಟ ಕೆರೆಯೊಂದರಲ್ಲಿ ಈಜಿಕೊಂಡು ಇದ್ದಂತಹ ನನಗೆ ಸಪ್ತಸಾಗರಗಳಲ್ಲಿ ಈಜಾಡುವ ದಿನಗಳು ಹತ್ತಿರ ಬಂದವು. ಶ್ರೀ ಕೆ.ಕೆ. ಪೈ ಅವರಂತಹ ಮಹಾನ್ ಕೊಂಕಣಿ ಹಿರಿಯರ ಮತ್ತು ಧುರೀಣರ ಸಹಾಯವನ್ನೂ ಪಡೆದುಕೊಂಡು ಈ ಮಹಾಕಾರ್ಯವನ್ನು (ವಿಶ್ವ ಕೊಂಕಣಿ ಸಮ್ಮೇಳನ) ನಡೆಸುವಂತಾಯಿತು. ವಿಶ್ವ ಕೊಂಕಣಿ ಸಮ್ಮೇಳನದ ಪ್ರಕ್ರಿಯೆಯಲ್ಲಿ ಇಡೀ ಕೊಂಕಣಿ ಸಮುದಾಯವನ್ನು ತೊಡಗಿಸಿಕೊಳ್ಳುವ ಒಂದು ಸುಸಂಧಿಯೂ ದೊರೆಯಿತು.

ನಾನು ಈ ಕಾರ್ಯವನ್ನು ಕೈಗೆತ್ತಿಕೊಂಡಾಗ, ವಿಶ್ವ ಕೊಂಕಣಿ ಸಮ್ಮೇಳನದ ಗಾತ್ರ ಮತ್ತು ವ್ಯಾಪ್ತಿ ಇಷ್ಟು ಅಗಾಧ ಮತ್ತು ವಿಸ್ತಾರವಾಗಿ ಇರಬಹುದೆಂದು ಯಾರೂ ತಿಳಿದುಕೊಂಡಿರಲಿಲ್ಲ. ನಾನು ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ಶ್ರೀ ಕೆ.ಕೆ.ಪೈ ಅವರಲ್ಲಿ ಮೊದಲ ಬಾರಿ ಪ್ರಸ್ತಾಪಿಸಿದಾಗ, "ನೋಡು ವಾಮನ ಶೆಣ್ಯೆ, ನೀನು ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸಲು ಹೊರಟಿದ್ದೀ, ಹೌದು. ನಮ್ಮ ಕೊಂಕಣಿ ಜನರು ದೇಶ ವಿದೇಶಗಳಲ್ಲಿ ವಾಸ್ತವ್ಯ ಹೂಡಿಕೊಂಡು ಇದ್ದಾರೆ. ಈ ಕಾರ್ಯದಲ್ಲಿ ಅವರನ್ನೂ ಒಳಗೊಳ್ಳುವುದು ಇರುತ್ತದೆ. ಅದರ ಕುರಿತು ನೀನು ಯೋಚಿಸಿದ್ದೀಯಾ?" ಹೀಗೆ ಅವರು ಕೇಳಿದ್ದರು. "ಅದನ್ನು ನಾನು ತಿಳಿದುಕೊಂಡಿದ್ದೇನೆ. ನೀವು ನನಗೆ ಆಶೀರ್ವಾದ ಮಾಡಿ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದು ನಮಗೆ ಮಾರ್ಗದರ್ಶನ ಕೊಡುವುದಕ್ಕೆ ಒಪ್ಪಿಗೆ ನೀಡಿ. ನಾವು ಈ ಸಮ್ಮೇಳನವನ್ನು ಚಾರಿತ್ರಿಕವಾಗಿ ನಡೆಸುತ್ತೇವೆ," ಎಂದು ನಾನು ಉತ್ತರ ನೀಡಿದೆ. ಅವರು ಒಪ್ಪಿಕೊಂಡದ್ದು ಮಾತ್ರವಲ್ಲ, ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನದಿಂದ ಐದು ಲಕ್ಷ ರೂ ದೇಣಿಗೆಯನ್ನು ಕೂಡ ನೀಡಿದರು.

ನಾವು ಆಗ ಕೇಂದ್ರ ಸರಕಾರದಲ್ಲಿ ಸಚಿವರಾಗಿದ್ದ ಶ್ರೀಮತಿ ಮಾರ್ಗರೇಟ್ ಆಳ್ವಾರನ್ನು ಭೇಟಿಯಾಗಿ, ಅವರು ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಸಮಿತಿಯ ಗೌರವ ಚೇಯರ್ ಪರ್ಸನ್ ಆಗಿ ನಮಗೆ ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಂಡಾಗ, ಅವರು ಅದಕ್ಕೆ ಬಿಚ್ಚು ಮನಸ್ಸಿನಿಂದ ಒಪ್ಪಿಕೊಂಡದ್ದು ನಮಗೆ ದೊಡ್ಡ ಪ್ರಮಾಣದಲ್ಲಿ ಧೈರ್ಯ ಮೂಡಿಸಿತು. ಶ್ರೀಮತಿ ಆಳ್ವಾ ಅವರು ಕೊಂಕಣಿ ಭಾಷೆ ಸಂವಿಧಾನದ ೮ನೇ ಅಧಿಸೂಚಿಯಲ್ಲಿ ಸೇರ್ಪಡೆಯಾಗಲು ಮತ್ತು ನಾಗರಿಲಿಪಿಯಲ್ಲಿ ಬರೆಯಲಾಗುವ ಕೊಂಕಣಿ ರಾಷ್ಟ್ರಭಾಷೆಯಲ್ಲಿ ಒಂದಾಗಿ ಗುರುತಿಸಿಕೊಳ್ಳಲು ಪ್ರಯತ್ನಿಸಿದವರು ಮತ್ತು ಕೊಂಕಣಿ ಜನರ ಮತ್ತು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಧ್ಯೇಯ ಜಯಪ್ರದವಾಗಲು ಕಾರಣರಾದ ಕೊಂಕಣಿ ಮಹಿಳೆ. ಅವರು ಒಪ್ಪಿಗೆ ಸೂಚಿಸಿದ್ದರಿಂದ, ನಾವು ಅವರನ್ನು ವಿಶ್ವ ಕೊಂಕಣಿ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಆರಿಸಿದೆವು. ಅಧ್ಯಕ್ಷರಾಗಿದ್ದವರು ಶ್ರೀ ಕೆ.ಕೆ. ಪೈ ಅವರು.

ಕೇಂದ್ರ ಕಾರ್ಯಕಾರೀ ಸಮಿತಿಯ ರಚನೆಯಾಗಿ, ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನಾಗಿದ್ದ ನಾನು ಮುಖ್ಯ ಸಂಚಾಲಕನಾದೆ. ಶ್ರೀ ಎಡ್ವಿನ್ ಜೆ.ಎಫ್. ಡಿಸೋಜಾ ಕಾರ್ಯದರ್ಶಿ(ಆಮೇಲೆ ಲೋಬೋ), ಶ್ರೀ ಕುಡ್ಪಿ ಜಗದೀಶ ಶೆಣೈ(ಖಜಾಂಚಿ), ಶ್ರೀ ಬಿ.ವಿ. ಬಾಳಿಗ(ಪರಿಸಂವಾದ ಸಮಿತಿ), ಶ್ರೀ ಎರಿಕ್ ಒಝೇರಿಯೊ (ಸಾಂಸ್ಕೃತಿಕ ಕಾರ್ಯಾವಳಿ ಸಮಿತಿ), ಶ್ರೀ ಬಿ. ದಾಮೋದರ ಪ್ರಭು(ಸ್ಮರಣ ಸಂಚಿಕೆ), ಶ್ರೀ ವಿಲಿಯಂ ಡಿಸೋಜ(ಸಾರಿಗೆ ಸಮಿತಿ), ಶ್ರೀ ಕೆ.ಪಿ. ನಾಯಕ್(ಊಟ ಉಪಹಾರ ಸಮಿತಿ), ಶ್ರೀ ಲೂಯಿ ಪಿಂಟೊ(ವೇದಿಕೆ ಮತ್ತು ವಸ್ತು ಪ್ರದರ್ಶನ ಸಮಿತಿ), ಶ್ರೀ ವೆಂಕಟೇಶ್ ಬಾಳಿಗ(ಪ್ರಚಾರ ಮತ್ತು ಪ್ರಸಾರ), ಮತ್ತು ಶ್ರೀ ಎಂ. ರಘುನಾಥ ಶೇಟ್(ವಿಶ್ವ ಕೊಂಕಣಿ ಕೇಂದ್ರ ನಿರ್ಮಾಣ ಸಮಿತಿ) ಆಯಾಯ ಸ್ಥಾನಕ್ಕೆ ನಿಯುಕ್ತರಾದರು. ವಿಶ್ವ ಕೊಂಕಣಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸುವ ಜವಾಬ್ದಾರಿ ಸಂಚಾಲನ ಸಮಿತಿಯ ಹೆಗಲ ಮೇಲೆ ಇತ್ತು.

ಕಾರ್ಯದರ್ಶಿಯಾಗಿದ್ದ ಶ್ರೀ ಎಡ್ವಿನ್ ಜೆ.ಎಫ್. ಡಿಸೋಜಾ ಅವರು, ವಿಶ್ವ ಕೊಂಕಣಿ ಸಮ್ಮೇಳನದ ತಯಾರಿ, ಕೇಂದ್ರ ಕಚೇರಿಯಲ್ಲಿ ಮತ್ತು ವಿವಿಧೆಡೆಗಳಲ್ಲಿ ನಡೆದಿರುವ ಕಾರ್ಯಗಳ ವಿವರಗಳು, ಇವು ಎಲ್ಲರಿಗೂ ತಿಳಿಯುವಂತಾಗಲು ಪತ್ರಿಕೆಯೊಂದನ್ನು ಪ್ರಾರಂಭಿಸುವ ವಿಚಾರವನ್ನು ನನ್ನ ಬಳಿ ಪ್ರಸ್ತಾಪಿಸಿದರು. ಅದಕ್ಕೆ ನಾನು ಒಪ್ಪಿಗೆ ಸೂಚಿಸಿದೆ. ಹೀಗಾಗಿ ಅವರ ಸಂಪಾದಕತ್ವದಲ್ಲಿ "ವಿಶ್ವ ಕೊಂಕಣಿ ವಾರ್ತಾ ಪತ್ರ"ವನ್ನು ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸುವ ವ್ಯವಸ್ಥೆ ನಡೆಯಿತು. ಮೊದಲು ೧೫೦೦ ಪ್ರತಿಗಳನ್ನು ಪ್ರಕಟಿಸಲಾಯಿತು. ಆಮೇಲೆ ಅದು ಹೆಚ್ಚುತ್ತಾ ಹೋಗಿ ೫೦೦೦ ಪ್ರತಿಗಳನ್ನು

ಪ್ರಕಟಿಸಿ ದೇಶ, ವಿದೇಶದಲ್ಲಿರುವ ಕೊಂಕಣಿ ಜನರಿಗೆ, ಸಂಘ ಸಂಸ್ಥೆಗಳಿಗೆ ಕಳುಹಿಸಿಕೊಡುವ ಹಾಗಾಯಿತು. ವಾರ್ತಾಪತ್ರವನ್ನು ಅಂಚೆಯಲ್ಲಿ ಕಳುಹಿಸಲು ನಮಗೆ ರಿಯಾಯಿತಿಯೂ ದೊರೆತಿತ್ತು.

ವಿಶ್ವ ಕೊಂಕಣಿ ಸಮ್ಮೇಳನದ 'ಮುಹೂರ್ತ ಸಮಾರಂಭವು' (Launching Ceremony) ಆಗಸ್ಟ್ ೨೭, ೧೯೯೪, ಶನಿವಾರದ ದಿನ ಸಂಜೆ ಮಂಗಳೂರಿನ ಪಿ.ವಿ.ಎಸ್. ಕಲಾಕುಂಜದಲ್ಲಿ ಜರಗಿತು. ಈ ಸಮಾರಂಭದ ಅಧ್ಯಕ್ಷರಾಗಿ ಕರ್ನಾಟಕ ರಾಜ್ಯ ಸರಕಾರದ ಸಚಿವರಾಗಿದ್ದ ಶ್ರೀ ಬ್ಲೇಸಿಯಸ್ ಡಿಸೋಜಾ ಅವರು ಮತ್ತು ಮುಖ್ಯ ಅತಿಥಿಗಳಾಗಿ ಗೋವಾ ಸರಕಾರದಲ್ಲಿ ಶಿಕ್ಷಣ ಸಚಿವರಾಗಿದ್ದ ಮಾನ್ಯ ಶ್ರೀ ವಿನಯ ಕುಮಾರ ಉಸಗಾಂವಕರ್ ಭಾಗವಹಿಸಿದರು. ಕೊಂಕಣಿ ಸಂಸ್ಕೃತಿಯ ದ್ಯೋತಕವಾಗಿ ಅಡಿಕೆ ಮರವನ್ನು ಎತ್ತಿ ನಿಲ್ಲಿಸಿ ಉದ್ಘಾಟನೆಯನ್ನು ನಡೆಸಲಾಗಿತ್ತು.

ಮುಹೂರ್ತ ನಡೆದ ಬಳಿಕ ವಿಶ್ವ ಕೊಂಕಣಿ ಸಮ್ಮೇಳನದ ಕೆಲಸಕ್ಕೆ ವೇಗ ಬಂತು. ನನ್ನ ಕರೆಯನ್ನು ಮನ್ನಿಸಿ ಮುಂಬೈಯಿಂದ ಶ್ರೀ ಜೆ.ಬಿ. ಸಿಕ್ವೇರಾ ಮತ್ತು ಶ್ರೀ ಜೆ.ಬಿ. ಮೊರಾಯಸ್ ಅವರು ಮುಹೂರ್ತ ಸಮಾರಂಭಕ್ಕೆ ಬಂದಿದ್ದರು. ಮುಂಬೈ ಭಾರತ ದೇಶದ ಆರ್ಥಿಕ ರಾಜಧಾನಿ. ಇನ್ನೂರು ವರ್ಷಗಳ ಹಿಂದೆಯೇ ಕರ್ನಾಟಕದ ಕರಾವಳಿಯಿಂದ ಮತ್ತು ಗೋವಾ ರಾಜ್ಯದಿಂದ ಕೊಂಕಣಿ ಜನರು ಮುಂಬೈಗೆ ಹೋಗಿ ನೆಲೆಸಿ ಅಲ್ಲಿ ವ್ಯಾಪಾರ ವಹಿವಾಟು ನಡೆಸಿ ಶ್ರೀಮಂತರಾಗಿದ್ದರು. ಕೊಂಕಣಿ ಭಾಷೆಯ ವಿಚಾರವಾಗಿ ಅವರು ಸಕ್ರಿಯರಾಗಿದ್ದರು. ಗೋವೆ ಸ್ವತಂತ್ರವಾಗುವವರೆಗೆ ಅಖಿಲ ಭಾರತ ಕೊಂಕಣಿ ಅಧಿವೇಶನವು ಮುಂಬೈಯಲ್ಲಿಯೇ ನಡೆಯುವುದಿತ್ತು. ಕೊಂಕಣಿ ಚಳವಳಿಯ ಪಿತಾಮಹ ಶೆಣೈ ಗೊಂಯಬಾಬ, ಬಾಕಿಬಾಬ ಬೋರಕರ, ಶ್ರೀ ಆರ್.ವಿ. ಪಂಡಿತ, ಸುಮಿತ್ರ ಮಂಗೇಶ ಕತ್ರೆ ಮೊದಲಾದ ಮಹನೀಯರು ಮುಂಬೈಯಲ್ಲಿ ಕೊಂಕಣಿ ಚೈತನ್ಯವನ್ನು ಜೀವಂತವಾಗಿ ಇಟ್ಟವರು. ಹೀಗಾಗಿ, ನನ್ನ ನಿರೀಕ್ಷೆಯಲ್ಲಿ ಮುಂಬೈಯಿಂದ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಅಗಾಧ ಬೆಂಬಲ ದೊರೆಯಲಿತ್ತು.

ಮುಹೂರ್ತ ಸಮಾರಂಭಕ್ಕೆ ಬಂದಿದ್ದ ಶ್ರೀ ಜೆ.ಬಿ. ಸಿಕ್ವೇರಾ ಅವರು ಮುಂಬೈ ಪ್ರಾದೇಶಿಕ ಸಮಿತಿಯ ಮುಖ್ಯಸ್ಥರಾಗಿ ಶ್ರೀ ಎಸ್.ವಿ. ಪಿಕಳೆ ಅವರ ಹೆಸರನ್ನು ಸೂಚಿಸಿದರು. ಶ್ರೀ ಪಿಕಳೆಯವರು ಮುಂಬೈಯ ಪ್ರಸಿದ್ಧ ಹಾಗೂ ಪ್ರತಿಷ್ಠಿತ ಸುಪ್ರೀಂ ಕೋರ್ಟ್ ನ್ಯಾಯವಾದಿ ಮತ್ತು ಆದಾಯಕರ ಸಲಹೆಗಾರರಾಗಿದ್ದವರು. ನಾನು ಮುಂಬೈಗೆ ಹೋದಾಗ ಶ್ರೀ ಪಿಕಳೆಯವರನ್ನು ಭೇಟಿಯಾಗಿ, ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಅವರ ಬೆಂಬಲ ಮತ್ತು ಮಾರ್ಗದರ್ಶನ ಕೋರಿದೆ. ಅವರು ನಮ್ಮ ಯೋಜನೆಗೆ ಸಮ್ಮತಿಸಿ, ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಹತ್ತು ಲಕ್ಷ ರೂಪಾಯಿ ಸಂಗ್ರಹಿಸಿ ಕೊಡುವುದಾಗಿ ತಿಳಿಸಿದ್ದು ಮಾತ್ರವಲ್ಲ, ಅದೇ ರೀತಿ ಮಾಡಿ ತೋರಿಸಿದರು ಕೂಡ. ಅಲ್ಲದೆ ಸಮ್ಮೇಳನದ ಕಚೇರಿಗಾಗಿ ಸುಮಾರು ಒಂದೂವರೆ ವರ್ಷಗಳವರೆಗೆ ಮಾಹಿಮ್ ಸರಸ್ವತೀ ವಿದ್ಯಾಮಂದಿರದಲ್ಲಿ ದೊಡ್ಡದೊಂದು ವಾತಾನುಕೂಲಿ ಕೋಣೆ, ಅದರಲ್ಲಿ ಒಂದು ದೂರವಾಣಿ, ಬೆರಳಚ್ಚು ಯಂತ್ರ ಮತ್ತು ಓರ್ವ ಗುಮಾಸ್ತನ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದರು. ಆ ಕಚೇರಿಯ ಜವಾಬ್ದಾರಿಯನ್ನು ನಿಭಾಯಿಸಿದವರು ಶ್ರೀ ಜೆ.ಬಿ. ಮೊರಾಯಸ್. ಹಣ ಸಂಗ್ರಹ ಕಾರ್ಯದಲ್ಲಿ ಶ್ರೀ ಪಿಕಳೆಯವರಿಗೆ ನೆರವಾದವರು ಶ್ರೀ ಜೆ.ಬಿ. ಸಿಕ್ವೇರಾ, ಉಲ್ಲಾಸ ಕಾಮತ ಮತ್ತು ಇತರ ಮಹನೀಯರು. ಹೀಗಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಮುಂಬೈಯಿಂದ ಸುಮಾರು ಮುನ್ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಬಂದಿದ್ದರು. ಅಲ್ಲಿಂದ ಸ್ಮರಣ ಸಂಚಿಕೆಗೆ ಜಾಹೀರಾತು ಕೂಡ ಬಹಳ ದೊರೆತಿತ್ತು.

ಕೊಂಕಣಿಯ ತೌರೂರಾಗಿರುವ ಗೋವೆಯಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಮುಖ್ಯಸ್ಥರಾದ ಶ್ರೀ ನಾಗೇಶ ಕರಮಲಿ, ಡಾ. ತಾನಾಜಿ ಹಳರಣಕರ, ಶ್ರೀ ರಾಜು ನಾಯಕ್ ನೇತೃತ್ವವನ್ನು ವಹಿಸಿಕೊಂಡಿದ್ದರು. ಅನಿರೀಕ್ಷಿತವಾಗಿ ಗೋವೆ ಸರಕಾರದ ಸಚಿವ ಮಾನ್ಯ ಶ್ರೀ ಲಿಯೊಜಿನ್ ಫೆಲೆರೊ, ವಿಧಾನ ಸಭಾಧಿಪತಿ ಮಾನ್ಯ ಶ್ರೀ ತೊಮಾಜಿನ ಕಾರಡೊಸೊ ಇವರೂ ವಿಶೇಷ ರೂಪದಿಂದ ಬೆಂಬಲ ನೀಡಿದ್ದರು.

ಉಡುಪಿ, ಕುಂದಾಪುರ, ಹೊನ್ನಾವರ, ಕುಮಟಾ, ಕಾರವಾರ ಅಲ್ಲದೆ ಶಿರಸಿ, ಕಾರ್ಕಳ ಇತ್ಯಾದಿ ಊರುಗಳಲ್ಲಿ ಪ್ರಾದೇಶಿಕ ಸಮಿತಿಗಳು ರಚನೆಗೊಂಡಿದ್ದವು. ಬಂಟವಾಳ, ಪುತ್ತೂರು, ಉಪ್ಪಿನಂಗಡಿ, ಜಾಲ್ಸೂರು, ಸುಳ್ಯ, ಮಡಿಕೇರಿ, ವಿರಾಜಪೇಟೆ, ಗುಂಡ್ಲುಪೇಟೆ ಮೊದಲಾದ ಊರುಗಳಲ್ಲಿಯೂ ಪ್ರಾದೇಶಿಕ ಸಮಿತಿಗಳನ್ನು ಸಂಘಟಿಸಲಾಗಿತ್ತು.

ವೈಯಕ್ತಿಕ ನೆಲೆಯಲ್ಲಿ ನನ್ನ ಆರ್ಥಿಕ ತೊಂದರೆಗಳು ಹೆಚ್ಚುತ್ತಾ ಹೋಗುತ್ತಿದ್ದವು. ಅದನ್ನು ಹೇಳುವ ಹಾಗಿಲ್ಲ. ಒಮ್ಮೊಮ್ಮೆ ಕಾಫಿ ಸೇವಿಸಲು ಅಥವಾ ಊಟ ಮಾಡುವುದಕ್ಕೂ ಕಿಸೆಯಲ್ಲಿ

ಹಣ ಇಲ್ಲದ ಪರಿಸ್ಥಿತಿ ಇರುತ್ತಿತ್ತು. ಚಿ. ದಿನೇಶನಲ್ಲಿಯೂ ಹಣವಿಲ್ಲದೆ, ಒಂದು ದಿನ(೧೮.೮.೧೯೯೪) ನಾವಿಬ್ಬರೂ ಮಧ್ಯಾಹ್ನದ ಊಟವನ್ನೂ ಮಾಡದೆ ಸಂಜೆ ಬೇಗನೆ ಮಂಗಳೂರಿನಿಂದ ಹೊರಟು ತುಂಬೆಗೆ ಹೋಗಿ ಮನೆಯಲ್ಲಿ ಕಾಫಿ ಕುಡಿದದ್ದೂ ಇದೆ. ಆಗ "ಈ ಕಷ್ಟದಿಂದ ಪಾರು ಮಾಡು ದೇವರೇ" ಎಂದು ನಾನು ಶ್ರೀ ವೆಂಕಟರಮಣ ಸ್ವಾಮಿಯ ಬಳಿ ಬೇಡಿಕೊಳ್ಳುವುದಿತ್ತು.

ಬೆಂಗಳೂರಿನಲ್ಲಿ ಶ್ರೀ ಪಿ. ದಯಾನಂದ ಪೈ ಮತ್ತು ರೊನಾಲ್ಡ್ ಕೊಲಾಸೊ ಅವರನ್ನು ಗೌರವಾಧ್ಯಕ್ಷರನ್ನಾಗಿ ಮಾಡಿ ಪ್ರಾದೇಶಿಕ ಸಮಿತಿಯನ್ನು ರಚಿಸಲಾಗಿತ್ತು. ಶ್ರೀಮತಿ ವೆರೋನಿಕಾ ಕೊಯಲ್ಲೊ, ಶ್ರೀಮತಿ ಲತಾ ಯು. ಪೈ ಮತ್ತು ಹೆನ್ರಿ ಪಿಂಟೊ ಅವರು ಸಮಿತಿಯ ನೇತೃತ್ವವನ್ನು ವಹಿಸಿಕೊಂಡಿದ್ದರು.

ಶಿರಸಿಯಲ್ಲಿ ಶ್ರೀ ವಿ.ಎಸ್. ಸೋಂದೆ, ಸಾಗರದಲ್ಲಿ ನಾ. ಡಿಸೋಜಾ, ಶಿವಮೊಗ್ಗದಲ್ಲಿ ಡಾ. ಅಶೋಕ ಪೈ, ಡಾ. ಸುರೇಶ ಇಸಳೂರ, ಪಿ.ಪಿ. ನಾಯಕ್. ಬಿ.ಎನ್. ಕಾಮತ್ ಇವರು ಪ್ರಾದೇಶಿಕ ಸಮಿತಿಯ ಮುಖಂಡ ರಾಗಿದ್ದರು.

ಜೂನ್ ೨೫ರಂದು ಹುಬ್ಬಳ್ಳಿಯಲ್ಲಿ ಶ್ರೀ ಶೇಷಗಿರಿ ಪಾಂಡುರಂಗ ಕಾಮತ್ ಅವರ ನೇತೃತ್ವದಲ್ಲಿ ಮತ್ತು ಧಾರವಾಡದಲ್ಲಿ ಶ್ರೀ ದ.ಪ. ಗಾಂವಕರ ಮತ್ತು ಶ್ರೀ ಜಕ್ರೆಬೆಟ್ಟು ವಾಸುದೇವ ಶೆಣೈ ಅವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿಗಳು ರಚನೆಯಾಗಿದ್ದವು.

ಕುಂದಾಪುರದಲ್ಲಿ ಶ್ರೀ ಯು.ಎಸ್. ಶೆಣೈ ಮತ್ತು ಖಾರ್ವಿ ಸಮಾಜದ ಮುಖಂಡರ ಮತ್ತು ಶ್ರೀ ಜಾನ್ ಲೋಬೊ ಅವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿ ರಚನೆಯಾಗಿ ಬಹಳ ಕಾರ್ಯಗಳು ನಡೆದಿದ್ದವು. ಉಡುಪಿಯಲ್ಲಿ ಹಿರಿಯರಾದ ಶ್ರೀ ರಬೀಂದ್ರ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಮಿತಿ ರಚನೆಗೊಂಡು ಶ್ರೀಮತಿ ಲಿಡ್ವಿನ್ ಪಿಂಟೊ ಕಾರ್ಯದರ್ಶಿಯಾಗಿ ಕೆಲಸಗಳು ನಡೆಯುತ್ತಿದ್ದವು. ಮೂಲ್ಕಿಯಲ್ಲಿ ರೆ.ಫಾ. ಮಾರ್ಟಿಸ್, ಅದೇ ರೀತಿ ಮಡಂತ್ಯಾರ, ಬೆಳ್ತಂಗಡಿ, ಉಪ್ಪಿನಂಗಡಿ ಮತ್ತು ಪುತ್ತೂರಿನಲ್ಲಿಯೂ ಪ್ರಾದೇಶಿಕ ಸಮಿತಿಗಳು ರಚನೆಯಾಗಿದ್ದವು.

ಈ ನಡುವೆ ಏಳು ದಿನಗಳ ವಿಶ್ವ ಕೊಂಕಣಿ ಸಮ್ಮೇಳನದ ಉದ್ಘಾಟನೆ, ಸಭಾ ಕಾರ್ಯಕ್ರಮ, ಪರಿಸಂವಾದ, ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿಗಳ ದೃಶ್ಯ ಮತ್ತು ಶ್ರವ್ಯ ಚಿತ್ರೀಕರಣವನ್ನು ನಡೆಸುವ ಸಲುವಾಗಿ ಶ್ರೀ ಜೆ.ಬಿ. ಸಿಕ್ವೇರಾ ಅವರ ಮಾರ್ಗದರ್ಶನದಲ್ಲಿ ಖ್ಯಾತ ಚಲನಚಿತ್ರ ಮತ್ತು ಟಿ.ವಿ. ಚಿತ್ರಣಕಾರರಾದ ಶ್ರೀ ಉದಯಶಂಕರ ಪಾಣಿ ಅವರಿಗೆ ಜವಾಬ್ದಾರಿಯನ್ನು ವಹಿಸಿಕೊಡಲಾಗಿತ್ತು.

ಜೂನ್ ೨೧ ರಂದು ಶ್ರೀಮತಿ ಗಿರಿಜಾ ಮಂಗ್ತಾನಿ(ಇವರು ಮೂಲತಃ ಮೂಡುಬಿದಿರೆಯವರು) ಅವರ ಅಧ್ಯಕ್ಷತೆಯಲ್ಲಿ ಅಹಮದಾಬಾದಿನಲ್ಲಿ ಪ್ರಾದೇಶಿಕ ಸಮಿತಿ ರಚನೆಗೊಂಡಿತ್ತು. ಸಿಂಡಿಕೇಟ್ ಬ್ಯಾಂಕ್‌ನ ಡೆಪ್ಯೂಟಿ ಜನರಲ್ ಮೆನೇಜರ್ ಶ್ರೀ ಕೆ.ಜಿ. ಮಲ್ಯಾ ಅವರ ಪ್ರೋತ್ಸಾಹದಿಂದ ಶ್ರೀ ಕೆ.ಸಿ. ಪ್ರಭು ಅವರು ಈ ಕಾರ್ಯ ನಡೆಸಿದ್ದರು. ನಾವು ಶ್ರೀ ಕೆ.ಜಿ. ಮಲ್ಯಾರ ಮನೆಯಲ್ಲಿಯೇ ಉಳಿದುಕೊಂಡಿದ್ದೆವು. ಅವರ ಕಾರಿನಲ್ಲಿಯೇ ಅಲ್ಲೆಲ್ಲಾ ಓಡಾಟ ನಡೆಸಿದ್ದೆವು.

ಯಲ್ಲಾಪುರದಲ್ಲಿ ಶ್ರೀ ಮಹೇಶ ನಾಯಕ್ ಮತ್ತು ರವಿ ಶಾನಭಾಗರ ನೇತೃತ್ವದಲ್ಲಿ, ಅಂಕೋಲೆಯಲ್ಲಿ ಶ್ರೀ ವಿಠೋಬಾ ನಾಯಕ್ ಮತ್ತು ಶ್ರೀ ಮಾರುತಿ ನಾಯಕ್, ಶ್ರೀ ವಿಠಳದಾಸ ಕಾಮತರ ನೇತೃತ್ವದಲ್ಲಿ, ಕುಮಟೆಯಲ್ಲಿ ಅರುಣ ಉಭಯಕರ, ಡಾ. ಶಿವರಾಮ ಕಾಮತ, ನಾಗೇಶ ಶಾನಭಾಗ ಇವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿಗಳು ರಚನೆಗೊಂಡಿದ್ದವು.

ನಮ್ಮ ಕಾರ್ಯಗಳಿಗೆ ದೇವರ ದಯೆ ಪೂರ್ಣ ಪ್ರಮಾಣದಲ್ಲಿತ್ತು. ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಮಾನ್ಯ ಶ್ರೀ ದೇವೇಗೌಡರ ಮಂತ್ರಿಮಂಡಳದಲ್ಲಿ ಶ್ರೀ ಆರ್.ವಿ. ದೇಶಪಾಂಡೆಯವರು ಮಹತ್ವದ ಖಾತೆಯ ಸಚಿವರಾಗಿ ನೇಮಕಗೊಂಡರು. ಅವರ ಶಿಫಾರಸಿನಿಂದ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಕರ್ನಾಟಕ ಸರ್ಕಾರದಿಂದ ೧೦ ಲಕ್ಷ ರೂ ದೇಣಿಗೆ ದೊರೆಯುವಂತಾಯಿತು. ರಾಜ್ಯ ಸರಕಾರದ ವಿವಿಧ ಖಾತೆಗಳಿಂದ ನಮ್ಮ ಬೇಡಿಕೆಗಳು ಮಾನ್ಯ ಮುಖ್ಯಮಂತ್ರಿ ಶ್ರೀ ದೇವೇಗೌಡರ ಕೈಗೆ ತಲುಪಬೇಕಾದರೆ ನಾನು ತುಂಬಾ ಕಷ್ಟಪಡಬೇಕಾಗಿ ಬಂತು. ಅನೇಕ ಬಾರಿ ಬೆಂಗಳೂರಿಗೆ ಹೋಗಿ ವಿಧಾನಸೌಧದ ಮೆಟ್ಟಲುಗಳನ್ನು ಹತ್ತಿ ಇಳಿಯಬೇಕಾಗಿ ಬರುತ್ತಿತ್ತು. ರಾತ್ರಿ ೧೦-೧೧ ಗಂಟೆಗಳವರೆಗೆ ಖಾತೆಯ ಮಂತ್ರಿಗಳ ಕಚೇರಿಯ ಮುಂದೆ ಕಾದು ಕುಳಿತುಕೊಳ್ಳಬೇಕಾಗುತ್ತಿತ್ತು. ಶ್ರೀ ದೇಶಪಾಂಡೆಯವರ ಆಜ್ಞೆ ಕೂಡ ಅದೇ ರೀತಿ ಇರುತ್ತಿತ್ತು, "ಶೆಣೈಮಾಮ್, ನೀವು ಅವರಿವರ ಬಾಗಿಲು ಕಾಯಬೇಕಾಗುತ್ತದೆ. ನಿಮ್ಮ ಕಡತ ಎಲ್ಲಿದೆ ಎನ್ನುವುದನ್ನು ನನಗೆ ತಿಳಿಸಬೇಕು. ನಾನು ಆ ಖಾತೆಯ

ವರಿಷ್ಠ ಅಧಿಕಾರಿಯನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಹೇಳುತ್ತೇನೆ. ನೀವು ಅವರ ಹಿಂದೆ ಬಿದ್ದರೆ ಮಾತ್ರ ನಿಮ್ಮ ಕೆಲಸ ಆಗುತ್ತದೆ." ದೇಶಪಾಂಡೆಯವರು ತಿಳಿಸಿದ್ದನ್ನು ನಾನು ಕಷ್ಟಕರ ಕೆಲಸವೆಂದು ತಿಳಿಯದೆ ಇದ್ದುದರಿಂದ ಸರಕಾರ ವತಿಯಿಂದ ೭ ಲಕ್ಷ ರೂ ಸಿಗುವಂತಾಯಿತು.

ಅದಲ್ಲದೆ. ನಾನು ದೆಹಲಿಗೆ ಹೋಗಿ ಶ್ರೀ ಎನ್.ಜೆ. ಕಾಮತರ ನೆರವಿನಿಂದ ರೈಲ್ವೇ ಸಚಿವರಾಗಿದ್ದ ಮಾನ್ಯ ಶ್ರೀ ಸುರೇಶ್ ಕಲ್ಮಾಡಿಯವರನ್ನು ಭೇಟಿಯಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಬರಲಿರುವ ಪ್ರತಿನಿಧಿಗಳಿಗೆ ರೈಲ್ವೇ ಪ್ರಯಾಣ ವೆಚ್ಚದಲ್ಲಿ ಶೇಕಡ ೫೦ ರಿಯಾಯಿತಿಯನ್ನು ಪಡೆದಿದ್ದೆ.

ವಿಶ್ವ ಕೊಂಕಣಿ ಸಮ್ಮೇಳನ ಕಾರ್ಯಾಲಯ

ಕಳೆದ ಐದು ವರ್ಷಗಳಿಂದ ಕೊಂಕಣಿ ಭಾಷಾ ಮಂಡಳದ ಕಚೇರಿ ಶ್ರೀ ಕೆ.ಜಿ. ನಾಯಕರ ಹನುಮಾನ್ ಹೊಟೇಲಿನ ಮಹಡಿಯ ಮೇಲೆ ಕಾರ್ಯ ನಿರ್ವಹಿಸುತ್ತಿತ್ತು. ವಿಶ್ವ ಕೊಂಕಣಿ ಸಮ್ಮೇಳನದ ಅಗಾಧ ಹಾಗೂ ವಿಸ್ತಾರವಾದ ಕಾರ್ಯಕ್ಕೆ ಬೇರೆ ಕಚೇರಿಯ ಅಗತ್ಯವಿದೆ ಎಂಬುದು ಕಂಡು ಬಂದದ್ದರಿಂದ, ಶ್ರೀ ಎಂ. ರಘುನಾಥ ಶೇಟ್ ಅವರು ತಮ್ಮ ಮಾಲಕತ್ವದ ನವರತ್ನ ಪ್ಯಾಲೆಸ್ ಹೊಟೇಲಿನ ತಳಮಹಡಿಯಲ್ಲಿದ್ದ ಒಂದು ದೊಡ್ಡ ಕೋಣೆಯನ್ನು ನೀಡಿದ್ದರು. ಅಲ್ಲಿಗೆ ನಾವು ಕಚೇರಿಯನ್ನು ಬದಲಾಯಿಸಿ ಕೊಂಡೆವು.

ಏಪ್ರಿಲ್ ೨೯, ೧೯೯೫ ರ ಶನಿವಾರ ಸಂಜೆ ಶುಭ ಮುಹೂರ್ತದಲ್ಲಿ ಗೋವೆ ಸರಕಾರದಲ್ಲಿ ಶ್ರೀ ಲಿಯೋಜಿನ್ ಫೆಲೆರೊ ಮಂಗಳೂರಿಗೆ ಬಂದು ದೀಪ ಹಚ್ಚಿ ನವರತ್ನ ಪ್ಯಾಲೇಸ್‌ನ ತಳಮಹಡಿಯ ಕೋಣೆಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯಾಲಯವನ್ನು ಉದ್ಘಾಟಿಸಿದರು. ಮಾನ್ಯ ಲಿಯೋಜಿನ್ ಬಾಬ್ ಪ್ರಸಿದ್ಧ ಕೊಂಕಣಿ ಹೋರಾಟಗಾರರು. ಕೊಂಕಣಿ ಗೋವೆಯ ರಾಜ್ಯಭಾಷೆಯಾಗಲು ತುಂಬಾ ಕೆಲಸ ಮಾಡಿದ್ದ ನೇತಾರರು. ಮಂಗಳೂರಿನ ಭೇಟಿಯ ಬಳಿಕ ಅವರು ನನಗೆ ತುಂಬಾ ಹತ್ತಿರದವರಾದರು. ನನ್ನ ಮೇಲೆ ತುಂಬಾ ಪ್ರೀತಿ ಮತ್ತು ವಿಶ್ವಾಸ ಇಟ್ಟಿದ್ದರು. ನಾವು ವಿಶ್ವ ಕೊಂಕಣಿ ಸಮ್ಮೇಳನದ ಪೂರ್ವ ಸಿದ್ಧತೆ ನಡೆಸುವ ಸಮಯದಲ್ಲಿ ಗೋವೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಮಗೆ ಸರಕಾರಿ ಅತಿಥಿಗೃಹದಲ್ಲಿ ತಂಗುವ ವ್ಯವಸ್ಥೆಯನ್ನೂ ಮಾಡುತ್ತಿದ್ದರು. ಆ ದಿನಗಳಲ್ಲಿ ಎರಡು ಬಾರಿ ಗೋವೆಯ ಸರಕಾರೀ ಸಚಿವಾಲಯದ ಅವರ ಚೇಂಬರ್‌ನಲ್ಲಿ ಪತ್ರಿಕಾ ಗೋಷ್ಠಿ ಕರೆದು ಅವರು ಗೋವೆಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಪ್ರಚಾರ ನೀಡಿದ್ದಾರೆ.

ಆಮೇಲಿನ ದಿನಗಳಲ್ಲಿಯೂ ನಾವು ಕರೆದ ಸಮಯದಲ್ಲಿ, ವಿಶ್ವ ಕೊಂಕಣಿ ಸಮ್ಮೇಳನದ ಉದ್ಘಾಟನಾ ಕಾರ್ಯದಲ್ಲಿ ಭಾಗಿಯಾಗಿ ನಮ್ಮೊಂದಿಗೆ ಶ್ರೀ ಲಿಯೋಜಿನ ಫೆಲೆರೊ ಎರಡು ದಿನಗಳ ಕಾಲ ಇದ್ದರು. ಆನಂತರ ೨೦೦೫ನೇ ಇಸವಿಯಲ್ಲಿ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾದ ಕೊಂಕಣಿ ಚಳವಳಿಯ ಪಿತಾಮಹರೆಂಬ ಖ್ಯಾತಿಯ ಮಾನ್ಯ ಶ್ರೀ ಶೆಣೈ ಗೊಂಯಬಾಬ(ವಾಮನ ರಘುನಾಥ ವರ್ದೆ ವಾಲಾವಲೀಕರ) ಶತಮಾನೋತ್ತರ ಬೆಳ್ಳಿಹಬ್ಬ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮಕ್ಕೂ ಶ್ರೀ ಲಿಯೋಜಿನ ಫೆಲೊರೊ ಬಂದಿದ್ದರು.

ನಮಗೆ ನವದೆಹಲಿಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಪ್ರಾದೇಶಿಕ ಸಮಿತಿಯನ್ನು ರಚಿಸುವುದಕ್ಕಾಗಿ ಅಲ್ಲಿ "ಕೊಂಕಣೀಸ್ ಆಫ್ ನ್ಯೂ ಡೆಲ್ಲಿ" ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್.ಜೆ. ಕಾಮತ(ನಿವೃತ್ತ ಐಎಎಸ್ ಅಧಿಕಾರಿ), ಪೊಲೀಸ್ ಆಯುಕ್ತರಾದ ಶ್ರೀ ಮೆಕ್ಸ್‌ವೆಲ್ ಪಿರೇರಾ ಕಾಮತ, ಶ್ರೀಮತಿ ಇಂದು ನಾಗರಕಟ್ಟೆ ಇವರುಗಳು ತುಂಬಾ ಕಾರ್ಯ ನಡೆಸಿದ್ದಾರೆ. ವಿಶ್ವ ಕೊಂಕಣಿ ಸಮ್ಮೇಳನದ ಮಾಹಿತಿ ಪತ್ರದ ಬಿಡುಗಡೆಯು ಜೂನ್ ೨, ೧೯೯೫ರಂದು ಆಗಿನ ಕೇಂದ್ರ ಸಚಿವೆ ಶ್ರೀಮತಿ ಮಾರ್ಗರೇಟ್ ಆಳ್ವಾ ಅವರ ಮನೆಯಲ್ಲಿ ನಡೆದಿತ್ತು. ಈ ಸಮಾರಂಭದಲ್ಲಿ ಶ್ರೀಮತಿ ಆಳ್ವ ಅವರು ಮಾಹಿತಿ ಪತ್ರದ ಬಿಡುಗಡೆ ಮಾಡಿದ್ದರು. ಶ್ರೀ ಆಸ್ಕರ್ ಫೆರ್ನಾಂಡಿಸ್ (ಲೋಕಸಭಾ ಸದಸ್ಯರು) ಉಪಸ್ಥಿತರಿದ್ದರು.

ಶ್ರೀಮತಿ ಆಳ್ವಾರ ನೆರವಿನಿಂದ ಜೂನ್ ೨, ೧೯೯೫ರಂದು ನಾವು ಕೇಂದ್ರ ಮಾನವ ಸಂಪನ್ಮೂಲ ಖಾತೆಯ ಸಚಿವರಾದ ಮಾನ್ಯ ಶ್ರೀ ಮಾಧವರಾವ್ ಸಿಂಧ್ಯಾ ಅವರನ್ನು ಭೇಟಿಯಾಗಿ, ಅವರ ಖಾತೆಯಿಂದ ಧನ ಸಹಾಯ ಕೋರಿ ನಿವೇದನಾ ಪತ್ರವನ್ನು ನೀಡಿದೆವು. "ನನಗೆ ಕೊಂಕಣಿ ಭಾಷೆಯ ಕುರಿತು ಮಾಹಿತಿ ಇದೆ. ನನ್ನ ಅಜ್ಜಿ ಕೊಂಕಣಿ ಇದ್ದರು" ಎಂದು ಸಿಂಧ್ಯಾ ಹೇಳಿದರು ಮತ್ತು ಕೇಂದ್ರ ಸರಕಾರದ ವತಿಯಿಂದ ಧನ ಸಹಾಯ ನೀಡುವುದಾಗಿ ಮಾತು ಕೊಟ್ಟರು.

ಅದೇ ಸಮಯದಲ್ಲಿ ನಮ್ಮ ಕೆಲಸಕ್ಕೆ ಉತ್ತೇಜನ ನೀಡಲು ಶ್ರೀ ಕೆ.ಕೆ.ಪೈಯವರು ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನದ

ವತಿಯಿಂದ ೫ ಲಕ್ಷ ರೂ ಮಂಜೂರು ಮಾಡಿದರು. ಕೆನರಾ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಶ್ರೀ ಜೆ.ವಿ. ಶೆಟ್ಟಿಯವರು ಮಂಗಳೂರಿಗೆ ಬಂದು ನಮ್ಮ ಕಾರ್ಯವಿಧಾನ ಮತ್ತು ವ್ಯಾಪ್ತಿಯ ಮಾಹಿತಿ ಪಡೆದು, "ನಮ್ಮ ಬ್ಯಾಂಕ್‌ನ ಸ್ಥಾಪಕರ (ಶ್ರೀ ಅಮ್ಮೆಂಬಳ್ ಸುಬ್ಬರಾಯ ಪೈ) ಮಾತೃಭಾಷೆ ಕೊಂಕಣಿಯಾಗಿದ್ದರಿಂದ ಕೆನರಾ ಬ್ಯಾಂಕ್‌ನ ವತಿಯಿಂದ ೫ ಲಕ್ಷ ರೂ ದೇಣಿಗೆ ನೀಡುತ್ತೇನೆ," ಎಂದು ಹೇಳಿದರು. ಕಾರ್ಪೊರೇಶನ್ ಬ್ಯಾಂಕ್‌ನ ವತಿಯಿಂದ ಅಧ್ಯಕ್ಷರಾದ ಶ್ರೀ ರಾಮಮೂರ್ತಿಯವರು ೩ ಲಕ್ಷ ರೂ, ಬೆಂಗಳೂರಿನ ಶ್ರೀ ಪಿ. ದಯಾನಂದ ಪೈಯವರು ೨ ಲಕ್ಷ ರೂ, ರೊನಾಲ್ಡ್ ಕೊಲಾಸೊ ೧ ಲಕ್ಷ ರೂ, ಮುಂಬೈಯ ಶ್ರೀ ಎನ್.ಎಸ್. ರಾವ್(ಪೆಸ್ಟ್ ಕಂಟ್ರೋಲ್ ಆಫ್ ಇಂಡಿಯಾ) ೧ ಲಕ್ಷ ರೂ, ಪಿ.ವಿ.ಎಸ್. ಬೀಡಿ ಅಧ್ಯಕ್ಷರಾದ ಶ್ರೀ ಮಧುಸೂಧನ ಡಿ. ಕುಶೆಯವರು ೧ ಲಕ್ಷ ರೂ ನೀಡಿ ತುಂಬಾ ಪ್ರೋತ್ಸಾಹ ನೀಡಿದ್ದರು. ಶ್ರೀ ಆರ್.ವಿ. ದೇಶಪಾಂಡೆಯವರು ಮುಖ್ಯಮಂತ್ರಿ ಶ್ರೀ ದೇವೇಗೌಡರಲ್ಲಿ ಮಾತನಾಡಿ ೭ ಲಕ್ಷ ರೂ ನೀಡಿದ್ದರಿಂದ ಚಾರಿತ್ರಿಕ ವಿಶ್ವ ಕೊಂಕಣಿ ಸಮ್ಮೇಳನ ಅಭೂತಪೂರ್ವ ರೀತಿಯಿಂದ ಜರಗುವಂತಾಯಿತು.

ಬೆಂಗಳೂರು ಪ್ರಾದೇಶಿಕ ಕಚೇರಿ ರಚನೆಯಾದ ಬಳಿಕ ಮರುದಿನ ಮೈಸೂರಿನಲ್ಲಿಯೂ ಶ್ರೀ ಎಂ. ಜಗನಾಥ ಶೆಣೈ, ಪ್ರಕಾಶ ಕಾಮತ, ವಲ್ಲಿ ವಗ್ಗಾ ಇವರ ನೇತೃತ್ವದಲ್ಲಿ ಜುಲೈ ೧೫ರಂದು ಪ್ರಾದೇಶಿಕ ಸಮಿತಿ ರಚನೆಗೊಂಡಿತ್ತು. ಆಮೇಲೆ ಗೋಣಿಕೊಪ್ಪಲಿನ ಶ್ರೀ ಕಾಮತಿಯವರ ಉತ್ಸಾಹದಿಂದ ವಿರಾಜಪೇಟೆಯಲ್ಲಿ ಸಮಿತಿ ರಚನೆಗೊಂಡಿತು.(ವಿರಾಜಪೇಟೆ ಕ್ರೈಸ್ತ ಬಾಂಧವರ ಚಾರಿತ್ರಿಕ ಮಹತ್ವದ ಪ್ರದೇಶ. ಇನ್ನೂರು ವರ್ಷಗಳ ಹಿಂದೆ ಟಿಪ್ಪೂ ಸುಲ್ತಾನನು ಮಂಗಳೂರಿನ ಕ್ರೈಸ್ತ ಜನರು ಬ್ರಿಟಿಷರನ್ನು ತಮ್ಮ ಧರ್ಮದವರು ಎಂಬುದಾಗಿ ಭಾವಿಸಿಕೊಂಡು ಅವರಿಗೆ ಸಹಾಯ ಮಾಡುತ್ತಿದ್ದಾರೆ ಎಂಬ ಸಂದೇಹದಿಂದ ೧೬ ಸಾವಿರ ಕ್ರೈಸ್ತರ ಕೈಕಟ್ಟಿ ಕಾಲ್ನಡಿಗೆಯಲ್ಲಿ ಶ್ರೀರಂಗಪಟ್ಟಣಕ್ಕೆ ಕರೆದೊಯ್ಯುತ್ತಿರುವಾಗ, ಅವರಲ್ಲಿ ಕೆಲವರು ಕೊಡಗಿನ ಕಾಡಿನ ನಡುವೆ ಇರುವ ವಿರಾಜಪೇಟೆಗೆ ಬಂದು ನೆಲೆಸಿದ್ದರು ಎಂಬುದು ಚಾರಿತ್ರಿಕ ಮಹತ್ವದ ವಿಚಾರವಾಗಿ ಉಳಿದಿದೆ.)

ನಾವು ವಿರಾಜಪೇಟೆಯಿಂದ ಮಡಿಕೇರಿಗೆ ಬಂದೆವು. ಆದರೆ ಅಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಬಗ್ಗೆ ವಿಶೇಷ ಆಸಕ್ತಿ ಕಂಡು ಬರಲಿಲ್ಲ. ಹೀಗಾಗಿ ಅಲ್ಲಿ ನಮಗೆ ಪ್ರಾದೇಶಿಕ ಸಮಿತಿಯನ್ನು ರಚಿಸುವುದು ಸಾಧ್ಯವಾಗಲಿಲ್ಲ.

ಜುಲೈ ೫ ರಂದು ಭಟಕಳಕ್ಕೆ ಹೋಗಿ ಅಲ್ಲಿಯ ನವಾಯತ ಮುಖಂಡರ ನೇತೃತ್ವದಲ್ಲಿ ಮತ್ತು ಹೊನ್ನಾವರದಲ್ಲಿ ಶ್ರೀ ವಿಷ್ಣು ಬಾಳಿಗ, ವಿಲಿಯಂ ಗೊನ್ಸಾಲ್ವಿಸ್, ಆರ್.ಜಿ. ಶಾನಭಾಗ ಇವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿಯನ್ನು ರಚಿಸಿದೆವು. ಜುಲೈ ೯ ರಂದು ಮುಂಜಾನೆ ಹೈದರಾಬಾದ್‌ನಲ್ಲಿ ಡಾ.ಕೆ. ರಮೇಶ ಪೈ ಅವರ ಅಧ್ಯಕ್ಷತೆಯಲ್ಲಿ ಶ್ರೀ ಮೋಹನ ಹೆಮ್ಮಾಡಿ, ವಾಮನ ರಾವ್ ಇವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿ ರಚನೆಗೊಂಡಿತು.

ಜುಲೈ ೧೨ರಂದು ಕಿನ್ನಿಗೋಳಿಯಲ್ಲಿ ಶ್ರೀ ಶಾಂತಾರಾಮ ರಾವ್, ಜೊಸ್ಸಿ ಪಿಂಟೊ ಇವರ ನೇತೃತ್ವದಲ್ಲಿ, ಜುಲೈ ೧೫ರಂದು ಮಡಂತ್ಯಾರ, ಬೆಳ್ತಂಗಡಿ, ಉಪ್ಪಿನಂಗಡಿ ಮತ್ತು ಪುತ್ತೂರಿನಲ್ಲಿ ಪ್ರಾದೇಶಿಕ ಸಮಿತಿಗಳು ರಚನೆಗೊಂಡವು.

ಜುಲೈ ೧೫ ಮತ್ತು ೧೬ರಂದು ಶ್ರೀ ಬಿ.ವಿ. ಬಾಳಿಗ, ದಾಮೋದರ ಪ್ರಭು, ಲಾರೆನ್ಸ್ ಲೋಬೊ ಇವರು ಕಲ್ಲಿಕೋಟೆ, ಎರ್ನಾಕುಲಂ ಊರುಗಳಿಗೆ ಹೋಗಿ ಅಲ್ಲಿ ಪ್ರಾದೇಶಿಕ ಸಮಿತಿಯನ್ನು ರಚಿಸಿ ಬಂದರು.

ಜುಲೈ ೧೭ರಂದು ಕಾಸರಗೋಡಿನಲ್ಲಿ ಶ್ರೀ ಕಾಸರಗೋಡು ಚಿನ್ನಾ, ಬಾಬೂಜಿ ಭಟ್ ಇವರ ನೇತೃತ್ವದಲ್ಲಿ, ಕಣ್ಣಾನೂರಿನಲ್ಲಿ ಶ್ರೀ ಬಿ. ಮಾಧವ ಬಾಳಿಗ, ವಿ.ಎಸ್. ಶೆಣೈ(ಸಚ್ಚಿದಾನಂದ ಶೆಣೈ) ಇವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿ ರಚನೆಗೊಂಡಿತು.

ಜುಲೈ ೨೧ ರಂದು ಚಿಕ್ಕಮಂಗಳೂರಿನಲ್ಲಿ ವಕೀಲರಾದ ಶ್ರೀ ಪಿ.ಹೆಚ್. ಪಿಂಟೊ(ಈಗ ಅವರು ಬದುಕಿಲ್ಲ), ಮತ್ತು ನನ್ನ ಸೋದರಳಿಯ ಶ್ರೀ ದೇವದಾಸ್ ಹೆಗ್ಡೆಯವರು ಸೇರಿ ಬಹಳ ಉತ್ಸಾಹದಿಂದ ಪ್ರಾದೇಶಿಕ ಸಮಿತಿಯನ್ನು ರಚಿಸಿದ್ದರು.

ಜುಲೈ ೨೭ರಂದು ನಾವು ಗೋವೆಗೆ ತೆರಳಿ ಮುಖ್ಯಮಂತ್ರಿ ಮಾನ್ಯ ಶ್ರೀ ಪ್ರತಾಪಸಿಂಗ ರಾಣೆಯವರನ್ನು ಭೇಟಿಯಾಗಿ ಸಹಾಯ ಕೋರಿದೆವು. ಅನಂತರ ಮಾನ್ಯ ಶ್ರೀ ಲಿಯೋಜಿನ್ ಫೆಲೆರೋರ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಯಿತು. ವಿಧಾನಸಭಾ ಅಧ್ಯಕ್ಷರಾದ ಮಾನ್ಯ ಶ್ರೀ ತೊಮೋಜಿನೊ ಕಾರ್ಡೊಝೊ ಕೂಡ ಉಪಸ್ಥಿತರಿದ್ದರು.

ಜುಲೈ ೩೦ರಂದು ಭಾನುವಾರ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕಾಶೀಮಠದಲ್ಲಿ ಶ್ರೀ ಪಿ. ದಯಾನಂದ ಪೈಯವರು ಆಸಕ್ತಿ ತೋರಿ ಒಂದು ಬೃಹತ್ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅಲ್ಲಿ ನಾನು ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ಮಾತನಾಡಿದೆ. ಅದರಿಂದ ಪ್ರಭಾವಿತರಾದ ಅನೇಕ ಪುರುಷರು ಮತ್ತು ಮಹಿಳೆಯರು ತಾವು ಪ್ರತಿನಿಧಿಗಳಾಗಿ

ಸಮ್ಮೇಳನದಲ್ಲಿ ಭಾಗಿಯಾಗುತ್ತೇವೆಂದು ತಿಳಿಸಿದರು.

ಅದೇ ದಿನ ಬೆಂಗಳೂರು ದೂರದರ್ಶನದ ಶ್ರೀಮತಿ ಉಷಾ ಕಿಣಿಯವರನ್ನು ಭೇಟಿಯಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ವಿಸ್ತೃತ ಸ್ವರೂಪ ನೀಡುವ ನಮ್ಮ ಕಾರ್ಯವೈಖರಿಯನ್ನು ತಿಳಿಸಿದೆವು. ಅವರು ದೂರದರ್ಶನದ ನಿರ್ದೇಶಕರ ಬಳಿ ನನ್ನನ್ನು ಕರೆದುಕೊಂಡು ಹೋದರು. ನಾವು ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ಮಾತುಕತೆ ನಡೆಸಿದೆವು. ಅವರು ಶ್ರೀಮತಿ ಉಷಾ ಕಿಣಿಯವರಿಗೆ ಸಮ್ಮೇಳನದ "ಕರ್ಟನ್ ರೈಸರ್" ಕಾರ್ಯಕ್ರಮವನ್ನು ಮಾಡಲು ಅನುಮತಿ ನೀಡಿದರು. ಶ್ರೀ ಗಿಲ್ಬರ್ಟ್ ಮಿನೆಜಸ್, ಲತಾ ಯು. ಪೈ, ಕೋಟ ನರಸಿಂಹ ಪೈ, ಸುಧಾಕರ ಶೆಣೈಯವರು ತುಂಬಾ ಉತ್ಸಾಹದಿಂದ ಬೆಂಗಳೂರಿನಲ್ಲಿ ಸಮ್ಮೇಳನಕ್ಕೆ ಪ್ರಚಾರ ನೀಡಿ ಕಾರ್ಯ ನಡೆಸಿದ್ದರು.

ನಾನು ಬೆಂಗಳೂರಿನಿಂದ ಜುಲೈ ೩೧ರಂದು ಮದ್ರಾಸಿಗೆ ಹೋದೆ. ಅಲ್ಲಿ ಕೊಂಕಣಿ ರೇಡಿಯೋ ನಾಟಕ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದೆವು. ಕೆನರಾ ಬ್ಯಾಂಕ್‌ನ ಡಿವಿಜನಲ್ ಮೆನೆಜರ್ ಆಗಿದ್ದ ಶ್ರೀ ಮೋಹನ ಭಂಡಾರಿಯವರು ಮದ್ರಾಸಿನಲ್ಲಿ ಶ್ರೀ ಯು.ಎನ್. ಬಾಳಿಗಾ ಅವರ ಹಿರಿತನದಲ್ಲಿ ಕಾಶೀಮಠದಲ್ಲಿ ಸಭೆ ಕರೆದರು. ಅಲ್ಲಿಂದ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಬಹಳ ಮಂದಿ ಪ್ರತಿನಿಧಿಗಳು ಬರುವ ಉತ್ಸಾಹ ತೋರಿ ಬಂತು. ಹಾಗೆ ಅವರು ಬಂದಿದ್ದರು ಕೂಡ.

ಈ ಎಲ್ಲದರ ನಡುವೆಯೂ ನನಗೆ ಅಗತ್ಯದ ಅನೇಕ ಬೇರೆ ಕಾರ್ಯಗಳನ್ನು ಸಂಯೋಜಿಸುವುದು ಇತ್ತು. ಆದುದರಿಂದ ನಾವು ಬೇರೆ ಬೇರೆ ಪ್ರಾದೇಶಿಕ ಉಪಸಮಿತಿಗಳ ಸಂಚಾಲಕರ ಮತ್ತು ಸದಸ್ಯರ ಸಭೆ ಕರೆಯುವುದೆಂದು ನಿರ್ಣಯಿಸಿದೆವು. ಕೇಂದ್ರೀಯ ಮುಖ್ಯ ಸಮಿತಿಯ ಸಭೆ ಕರೆದು ಉಳಿದಿರುವ ಕೆಲಸಗಳು, ಹಣದ ಸಂಗ್ರಹ ಕಾರ್ಯ ಮತ್ತು ಪ್ರಸಾರ, ಪ್ರಚಾರದ ವ್ಯವಸ್ಥೆ ಸ್ಪಷ್ಟಪಡಿಸುವ ಅಗತ್ಯ ಇತ್ತು.

ನಾವು ಬೇರೆ ಬೇರೆ ಊರುಗಳಿಗೆ ಹೋಗಿ ವಿಶ್ವ ಕೊಂಕಣಿ ಸಮ್ಮೇಳನದ ವಿಚಾರವನ್ನು ತಿಳಿಸಿ ಅಲ್ಲಿಯ ಜನರಲ್ಲಿ ಉತ್ಸಾಹ ತುಂಬಿದೆವು. ಅದಕ್ಕಾಗಿ ದೆಹಲಿಯಿಂದ ಕೊಚ್ಚಿಯವರೆಗೆ ರಚನೆಗೊಂಡಿರುವ ೭೫ ಪ್ರಾದೇಶಿಕ ಸಮಿತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ದೇಶ ವಿದೇಶಗಳಲ್ಲಿ ನಡೆದ ಕಾರ್ಯಗಳನ್ನು ತಿಳಿಸುವುದಕ್ಕೆ ಮತ್ತು ಮಂಗಳೂರಿನಲ್ಲಿ ಮುಖ್ಯ ಸಮಿತಿಯು ಮಾಡಿರುವ ಕಾರ್ಯದ ವರದಿಯನ್ನು ನೀಡುವುದಕ್ಕೆ, ಎಲ್ಲಕ್ಕಿಂತ ಮುಖ್ಯವಾಗಿ ಇನ್ನು ಮುಂದೆ ನಡೆಸಬೇಕಾದ ಕಾರ್ಯಗಳ ಪಟ್ಟಿಯನ್ನು ತಯಾರಿಸುವುದಕ್ಕಾಗಿ ಒಂದು ಕಾರ್ಯಾಗಾರವನ್ನು ಆಯೋಜಿಸಿದೆವು. ಆಗಸ್ಟ್ ೬ ರಂದು ಮಂಗಳೂರಿನ ಹಂಪನ ಕಟ್ಟೆಯಲ್ಲಿರುವ ತಾಜಮಹಲ್ ಹೊಟೇಲಿನ ಸಭಾಭವನದಲ್ಲಿ ಪ್ರಾದೇಶಿಕ ಸಮಿತಿ ಮುಖ್ಯಸ್ಥರ ಸಭೆಯನ್ನು ಆಯೋಜಿಸಿದೆವು.

ದೆಹಲಿಯಿಂದ ಕೊಚ್ಚಿಯವರೆಗೆ ಇರುವ ಕೊಂಕಣಿ ಜನರನ್ನು, ಸಂಘ, ಸಂಸ್ಥೆಗಳನ್ನು ಒಂದೆರಡು ಬಾರಿ ಭೇಟಿ ನೀಡಿ, ಅವರಲ್ಲಿ ಕೊಂಕಣಿ ಮಾತೃಭಾಷೆಯ ಕುರಿತು ಇರುವಂತಹ ಪ್ರೀತಿ, ಅಭಿಮಾನವನ್ನು ಬೆಳೆಸುವುದು, ಅದೇ ರೀತಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ಮಾಹಿತಿ ನೀಡಿ ಉತ್ಸಾಹ ಬರಿಸುವುದು ಮತ್ತು ಅದರಿಂದ ಜಗತ್ತಿನ ಎಲ್ಲೆಡೆ ಹಂಚಿಹೋಗಿರುವ ಕೊಂಕಣಿ ಸಹೋದರ, ಸಹೋದರಿಯರನ್ನು ಒಟ್ಟುಗೂಡಿಸಿ ನಮ್ಮ ಕೊಂಕಣಿ ಸಮಾಜದ ಮೂಲವನ್ನು (ಬೇರುಗಳನ್ನು) ಹುಡುಕಿ ತೆಗೆದು ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಮತ್ತು ಜಾನಪದದ ಪ್ರಗತಿಗಾಗಿ ಹೆಜ್ಜೆ ಇಡುವುದು ನಮ್ಮ ಉದ್ದೇಶವಾಗಿತ್ತು. ಇದರಿಂದ ದೂರದೃಷ್ಟಿಯ ನಿರ್ಣಯ ಕೈಗೊಳ್ಳುವ ವಿಚಾರದಲ್ಲಿ ಉತ್ತೇಜನ ಮೂಡಿತು.

ಆಗಸ್ಟ್ ೭ರಂದು ವಿಶ್ವ ಕೊಂಕಣಿ ಸಮ್ಮೇಳನದ ಪ್ರಾದೇಶಿಕ ಪ್ರತಿನಿಧಿಗಳ ಸಭೆ ನಡೆದು, ಅದುವರೆಗೆ ಕೇಂದ್ರೀಯ ಕಾರ್ಯಸಮಿತಿ ಮತ್ತು ಪ್ರಾದೇಶಿಕ ಸಮಿತಿಗಳ ವತಿಯಿಂದ ನಡೆದ ಕೆಲಸ ತಿಳಿದು ಬಂತು. ಅದೇ ರೀತಿ ಮುಂದಿನ ನಾಲ್ಕು ತಿಂಗಳಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ತಿರುಗಾಟದಲ್ಲಿ ಮಾಡಬೇಕಾಗಿರುವ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದೂ ನಿಶ್ಚಯವಾಯಿತು. ವಿಶ್ವ ಕೊಂಕಣಿ ಸಮ್ಮೇಳನ ಚಾರಿತ್ರಿಕವಾಗಿ ಯಶಸ್ಸನ್ನು ಹೊಂದಬೇಕು ಎನ್ನುವ ಭಾವನೆಯನ್ನು ಹೃದಯದಲ್ಲಿ, ಮನಸ್ಸಿನಲ್ಲಿ ತುಂಬಿಕೊಂಡು ಸಭೆಗೆ ಬಂದ ಪ್ರತಿನಿಧಿಗಳು ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿದರು.

ಪರ್ಯಟನ ಸಮಿತಿಯ ಮುಖ್ಯಸ್ಥರಾದ ಶ್ರೀ ವಿಲಿಯಂ ಡಿ'ಸೋಜಾ ಅವರು ನಮ್ಮ ವಿಮಾನ ಪ್ರಯಾಣಕ್ಕೆ ವಿಶೇಷ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದರು. ಇದರಿಂದ ನಮಗೆ ಮುಂಬೈ, ನವದೆಹಲಿಗೆ ವಿಮಾನದಲ್ಲಿ ಹೋಗಿ ಬರಲು ರಿಯಾಯತಿ ದೊರೆತು ತುಂಬಾ ಅನುಕೂಲವಾಯಿತು. ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗಾಗಿ ವಿಲಿಯಮ್ ಡಿಸೋಜಾ ಅವರು ಪ್ರಯಾಣ

ಪತ್ರವನ್ನು ಸಿದ್ಧಗೊಳಿಸಿ ಅದನ್ನು ಪ್ರತಿನಿಧಿ ಸಭೆಯಲ್ಲಿ ಹಂಚಿದರು. ಈ ಪ್ರಯಾಣ ಪತ್ರದಲ್ಲಿ ಮಂಗಳೂರಿಗೆ ಬರುವವರಿಗೆ ಹೊಟೇಲಿನ ಮಾಹಿತಿ ಮತ್ತು ವಿವಿಧ ಪ್ರವಾಸೀ ತಾಣಗಳ ಮಾಹಿತಿಯನ್ನು ನೀಡಲಾಗಿತ್ತು.

ವಿಶ್ವ ಕೊಂಕಣಿ ಸಮ್ಮೇಳನಕ್ಕಾಗಿ ತಿರುಗಾಟ (ಭೊಂವ್ಡಿ)

ವಿಶ್ವ ಕೊಂಕಣಿ ಸಮ್ಮೇಳನದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವುದು ಮತ್ತು ಸಮ್ಮೇಳನಕ್ಕೆ ಹೆಚ್ಚೆಚ್ಚು ಪ್ರತಿನಿಧಿಗಳು ಬರಬೇಕು ಎಂಬ ಕಾರಣಕ್ಕಾಗಿ ವ್ಯಾಪಕ ಪ್ರಚಾರವನ್ನು ನೀಡುವ ವಿಶ್ವ ಕೊಂಕಣಿ (ಸಮ್ಮೇಳನ) ತಿರುಗಾಟ ಯೋಜನೆಯನ್ನು ರೂಪಿಸಲಾಗಿತ್ತು. ಸಾಂಸ್ಕೃತಿಕ ಕಾರ್ಯಕಾರಿ ಸಮಿತಿಯ ಮುಖ್ಯಸ್ಥರಾದ ಎರಿಕ್ ಒಝೆರಿಯೊರ ನೇತೃತ್ವದಲ್ಲಿ ಏಳು ಜನರ ಒಂದು ಗುಂಪು ದೆಹಲಿಯಿಂದ ಕೊಚ್ಚಿಯವರೆಗೆ ಇರುವಂತಹ ಪ್ರಾದೇಶಿಕ ಸಮಿತಿಗಳ ಕೇಂದ್ರಗಳಿಗೆ ಭೇಟಿ ನೀಡಿ ಕೊಂಕಣಿ ಹಾಡುಗಳು, ಸಂಗೀತ ಮತ್ತು ಭಾಷಣದ ಕಾರ್ಯಕ್ರಮಗಳನ್ನು ನೀಡಿ ವಿಶ್ವ ಕೊಂಕಣಿ ಸಮ್ಮೇಳನದ ಸಂದೇಶವನ್ನು ಕೊಂಕಣಿ ಜನರಿಗೆ ತಲುಪಿಸುವುದು ಮತ್ತು ಅವರನ್ನು ಸಮ್ಮೇಳನಕ್ಕೆ ಆಮಂತ್ರಿಸುವುದು ಈ ತಿರುಗಾಟದ ಉದ್ದೇಶವಾಗಿತ್ತು. ಅದಕ್ಕಾಗಿ "ತಿರುಗಾಟ ತೇರು"(ಭೊಂವ್ಡಿ ತೇರು) ಎಂಬ ವಾಹನದಲ್ಲಿ ಶ್ರೀ ಒಝೆರಿಯೊ ಮತ್ತು ೭ ಜನರ ಪಂಗಡ ಅವರೊಡನೆ ಹೊರಡುವುದು ಎಂದು ನಿಶ್ಚಯವಾಯಿತು. ಈ ತಿರುಗಾಟ ಕಾರ್ಯಕ್ರಮಕ್ಕೆ ಸುಮಾರು ೨ ಲಕ್ಷ ರೂ ಖರ್ಚಾಗಬಹುದೆಂದು ನಮ್ಮ ಅಂದಾಜಾಗಿತ್ತು. ಮುಂಬೈಯಿಂದ ಬಂದ ಶ್ರೀ ಜೆ.ಬಿ. ಸಿಕ್ವೇರಾ ಮತ್ತು ಕೊಲಿನ ಡಿಸಿಲ್ವಾ ಅವರ ಪ್ರಯತ್ನದಿಂದ ಆ ದಿನಗಳಲ್ಲಿ ಪ್ರಸಿದ್ಧವಾಗಿದ್ದ "ಮೆಹನಾ" ಸಂಸ್ಥೆಯ ಮುಖ್ಯಸ್ಥರು ವಿಶ್ವ ಕೊಂಕಣಿ ತಿರುಗಾಟಕ್ಕೆ ಆರ್ಥಿಕ ಸಹಯೋಗ ನೀಡಲು ಒಪ್ಪಿಕೊಂಡರು. ಅದು ನಮಗೆ ದೊಡ್ಡ ಪ್ರಮಾಣದಲ್ಲಿ ನೆರವಿಗೆ ಬಂತು. ಅದೇ ರೀತಿ ಸಂಯೋಜಕರಾಗಿ ಶ್ರೀ ಲೂಯಿ ಪಿಂಟೊ ಇದ್ದುದರಿಂದ ತಿರುಗಾಟ ಯಶಸ್ವಿಯಾಗುವುದಕ್ಕೆ ಸಾಧ್ಯವಾಯಿತು.

ಶ್ರೀ ಎರಿಕ್ ಒಝೆರಿಯೊ ಮತ್ತು ಅವರ ಗುಂಪಿನವರು "ತಿರುಗಾಟ"ದಲ್ಲಿ ದೇಶ ವಿದೇಶಗಳಿಗೆ ಹೋಗಿ ಕೊಂಕಣಿ ಜನರಿಗೆ ವಿಶ್ವ ಕೊಂಕಣಿ ಸಮ್ಮೇಳನದ ಸಂಘಟನೆಯ ವಿಚಾರವಾಗಿ ಮಾಹಿತಿಯನ್ನು ನೀಡಿ, ಮಂಗಳೂರಿನಲ್ಲಿ ಡಿಸೆಂಬರ್ ೧೬ ರಿಂದ ೨೨ ರವರೆಗೆ ನಡೆಯಲಿರುವ ಸಮ್ಮೇಳನಕ್ಕೆ ಆಮಂತ್ರಣ ನೀಡಿ ಬಂದರು. ಇನ್ನು ನಾವು ಅದುವರೆಗೆ ರೂಪಿಸಿದಂತಹ ಪ್ರಾದೇಶಿಕ ಸಮಿತಿಗಳ ಪದಾಧಿಕಾರಿಗಳು ಮತ್ತು ಇತರ ಕೊಂಕಣಿ ಧಾರ್ಮಿಕ, ಸಾಂಸ್ಕೃತಿಕ ಮಂಡಳಿಯ ವರಿಷ್ಠರು, ಅವರವರ ಊರುಗಳಿಗೆ ತಿರುಗಾಟ ಬಂದಾಗ ಅವರನ್ನು ಸ್ವಾಗತಿಸಿ, ಅವರಿಗೆ ಇರಲು ವ್ಯವಸ್ಥೆ ನಡೆಸಿ, ಅವರು ಕಾರ್ಯಕ್ರಮ ನೀಡಲು ಅನುಕೂಲ ಮಾಡಿದ್ದರಿಂದ, ಅದುವರೆಗೆ ಯಾವುದೇ ಭಾಷೆಯವರು ನಡೆಸದೇ ಇದ್ದಂತಹ ಈ ನೂತನ ಪ್ರಯೋಗ(ಭೊಂವ್ಡಿ) ತುಂಬಾ ಯಶಸ್ವಿಯಾಯಿತು ಮತ್ತು ಲೋಕಪ್ರಿಯವೂ ಆಯಿತು. ಪ್ರಾರಂಭದಲ್ಲಿ ನಾವು ಅಂದಾಜಿಸಿದ ಖರ್ಚು ೨ ಲಕ್ಷವಿದ್ದರೆ, ಒಟ್ಟು ಖರ್ಚಾದ ಮೊತ್ತ ೨.೮ ಲಕ್ಷ ರೂ. ಆದರೂ ಅದು ಯೋಗ್ಯ ರೀತಿಯದ್ದಾಯಿತೆಂದು ಜನರ ಅಭಿಪ್ರಾಯವಾಗಿತ್ತು.

ಸೆಪ್ಟೆಂಬರ್ ೯, ಶನಿವಾರದ ದಿನ ಸಂಜೆ ೪ ಗಂಟೆಗೆ ಮಂಗಳೂರು ರಥಬೀದಿ ಶ್ರೀ ಗೋಕರ್ಣ ಮಠದ ವಿದ್ಯಾಧಿರಾಜ ಸಭಾಗೃಹದಲ್ಲಿ ಮಾನ್ಯ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು "ತಿರುಗಾಟ"ದ ಉದ್ಘಾಟನೆಯನ್ನು ಮಾಡಿ "ತಿರುಗಾಟದ ತೇರಿ"ಗೆ ಹಸಿರು ನಿಶಾನೆ ತೋರಿಸಿದ್ದರು. ಅಲ್ಲಿಂದ ಮೊದಲು ಮಂಗಳೂರು ಮಹತೋಭಾರ ಶ್ರೀ ವೀರ ವೆಂಕಟೇಶ ದೇವಸ್ಥಾನಕ್ಕೆ ತೆರಳಿ ದೇವರಲ್ಲಿ ಆಶೀರ್ವಾದ ಬೇಡಲಾಯಿತು. ನಮ್ಮೊಂದಿಗೆ ೨-೩ ಮಂದಿ ಪಾದ್ರಿಯವರು ಕೂಡ ಇದ್ದರು. ಆಗ ಶ್ರೀ ದೇವಸ್ಥಾನದ ಮೊಕ್ತೇಸರರು ಉದಾರ ಮನಸ್ಸನ್ನು ತೋರಿದ್ದು ವಿಶೇಷವಾಗಿ ಉಲ್ಲೇಖಿಸುವ ಅಗತ್ಯ ಇದೆ. ಅವರು ನಮ್ಮ ಜೊತೆ ಬಂದಿದ್ದ "ತಿರುಗಾಟ"ದ ನೇತಾರರಾದ ಶ್ರೀ ಎರಿಕ್ ಒಝೆರಿಯೊ ಮತ್ತು ಅವರ ಸಂಗಾತಿಗಳನ್ನು, ಅದೇ ರೀತಿ ಕ್ರೈಸ್ತ ಪಾದ್ರಿಗಳನ್ನು ಮತ್ತು ಇತರ ಜನರನ್ನು ಶ್ರೀ ದೇವಸ್ಥಾನದ ಒಳಗೆ ಕರೆದೊಯ್ದು "ತಿರುಗಾಟ"ದ ಯಶಸ್ಸಿಗಾಗಿ ದೇವಸ್ಥಾನದ ವೈದಿಕರಿಂದ ಶ್ರೀ ವೀರ ವೆಂಕಟೇಶನಲ್ಲಿ ಪ್ರಾರ್ಥನೆ ಮಾಡಿ ಪ್ರಸಾದವನ್ನು ನೀಡಿದರು.

ಮರುದಿನ ನಾನು ಮುಂಜಾನೆಯೇ ಕೇರಳದ ಕಣ್ಣಾನೂರಿಗೆ ಹೋದೆನು. ಅಲ್ಲಿ ಶ್ರೀ ಬಿ. ಮಾಧವ ಬಾಳಿಗ ಮತ್ತು ಶ್ರೀ ಜಿ.ಎಸ್. ಕಾಮತ್ ಅವರ ನೇತೃತ್ವದಲ್ಲಿ ಪ್ರಾದೇಶಿಕ ಸಮಿತಿಯ ಸಭೆ ನಡೆಯಿಸಿ ರಾತ್ರಿ ಊರಿಗೆ ಹಿಂತಿರುಗಿ ಬಂದೆ. ತಿರುಗಾಟ ಕಾರ್ಯಕ್ರಮದ ದಿನಗಳಲ್ಲಿ ನನಗೆ ನನ್ನದೇ ಜವಾಬ್ದಾರಿಯ ಕೆಲಸಗಳು ಇದ್ದುದರಿಂದ ನಾನು ಕೆಲವು ಊರುಗಳಿಗೆ ಮಾತ್ರ ಹೋಗಿದ್ದೆ.

ಸೆಪ್ಟೆಂಬರ್ ೧೩ ರಂದು ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ಶ್ರೀ ಪಿ. ದಯಾನಂದ ಪೈ ಅವರ ನೇತೃತ್ವದಲ್ಲಿ ಭೊಂವ್ಡಿ ಕಾರ್ಯಕ್ರಮ ನಡೆದಿತ್ತು.

ವಿಶ್ವ ಕೊಂಕಣಿ ಸಮ್ಮೇಳನದ ಸಮಿತಿಯ ಗೌರವ ಅಧ್ಯಕ್ಷರಾದ ಶ್ರೀಮತಿ ಮಾರ್ಗರೇಟ್ ಆಳ್ವಾರು ನಡೆಸಿದ ವ್ಯವಸ್ಥೆಯಿಂದಾಗಿ ಸೆಪ್ಟೆಂಬರ್ ೨೨ರಂದು ಬೆಂಗಳೂರು ರಾಜಭವನದಲ್ಲಿ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆ, ಶ್ರೀ ಕೆ.ಕೆ. ಪೈ, ಶ್ರೀ ದಯಾನಂದ ಪೈ ಮತ್ತು ನಾವು(ಶ್ರೀ ಕುಡ್ವಿ ಜಗದೀಶ ಶೆಣೈ, ಕೊಲಿನ್ ಡಿಸಿಲ್ವಾ, ಶಿವಮೊಗ್ಗದ ಹೆಚ್. ಮುರಳೀಧರ ಕಾಮತ್) ಆಗ ಬೆಂಗಳೂರಿಗೆ ಬಂದಿದ್ದ ಸನ್ಮಾನ್ಯ ರಾಷ್ಟ್ರಪತಿ ಡಾ. ಶಂಕರದಯಾಳ ಶರ್ಮ ಅವರನ್ನು ಭೇಟಿಯಾಗಿ ಡಿಸೆಂಬರ್ ೧೨ರಂದು ಮಂಗಳೂರಿನಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಉದ್ಘಾಟನೆಯನ್ನು ನಡೆಸಬೇಕೆಂದು ಕೋರಿಕೆ ಪತ್ರವನ್ನು ನೀಡಿದೆವು. "ನನಗೆ ಕೊಂಕಣಿ ಭಾಷೆಯ ಕುರಿತು ಗೊತ್ತಿದೆ. ಶ್ರೀ ಶ್ರೀನಿವಾಸ ಮಲ್ಯ, ಹೆಚ್.ವಿ. ಕಾಮತ್ ಇವರನ್ನು ನಾನು ಬಲ್ಲೆ. ಉದ್ಘಾಟನಾ ಸಮಾರಂಭಕ್ಕೆ ಬರಲು ಪ್ರಯತ್ನಿಸುತ್ತೇನೆ," ಎಂದು ಸನ್ಮಾನ್ಯ ಶ್ರೀ ಶಂಕರ ದಯಾಳ ಶರ್ಮಾ ನಮಗೆ ತಿಳಿಸಿದರು.

ಸೆಪ್ಟೆಂಬರ್ ೨೩ ರಂದು ನವದೆಹಲಿಯಲ್ಲಿ ನಡೆಯಲಿರುವ "ಕೊಂಕಣಿ ಹಬ್ಬ" ಮತ್ತು "ಕೊಂಕಣಿ ತಿರುಗಾಟ" ಕಾರ್ಯಕ್ರಮದಲ್ಲಿ ಭಾಗವಹಿಸುವ ಸಲುವಾಗಿ ನಾವು ಬೆಂಗಳೂರಿನಿಂದಲೇ ವಿಮಾನದಲ್ಲಿ ದೆಹಲಿಗೆ ಹೋದೆವು. ನಾನು "ಕೊಂಕಣಿ ಹಬ್ಬ" ಮತ್ತು "ಕೊಂಕ್ಣಿ ಭೊಂವ್ಡಿ" ಕುರಿತಾಗಿ ಮಾತನಾಡಿದೆ. ಶ್ರೀಮತಿ ಮಾರ್ಗರೇಟ್ ಆಳ್ವಾ ಅವರೂ ಚೆನ್ನಾಗಿ ಮಾತನಾಡಿದರು.

ಮರುದಿನ ನಾವು ಶ್ರೀ ಕುಡ್ವಿ ಜಗದೀಶ ಶೆಣೈ ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿಯವರೊಂದಿಗೆ ಕಾರಿನಲ್ಲಿ ಹರಿದ್ವಾರಕ್ಕೆ ಹೋದೆವು. ಅಲ್ಲಿ ವ್ಯಾಸ ಮಂದಿರದಲ್ಲಿ ನೆಲೆಸಿದ್ದ ಶ್ರೀ ಕಾಶೀಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರನ್ನು ಭೇಟಿಯಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಆಶೀರ್ವಾದ ಪಡೆದೆವು. ನಮ್ಮೊಂದಿಗೆ ಶ್ರೀ ಗುರುವರ್ಯರು ಸುಮಾರು ಒಂದೂವರೆ ತಾಸು ಮಾತನಾಡಿ ಕುಳಿತಿದ್ದರು. ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸುವುದು ತುಂಬಾ ಸಂತೋಷದ ವಿಚಾರವೆಂದು ಅವರು ತಿಳಿಸಿದರು. ಭವಿಷ್ಯದ ದಿನಗಳಲ್ಲಿ ಕೊಂಕಣಿ ಭಾಷೆಯ ಪ್ರಗತಿಗಾಗಿ ನಡೆಸತಕ್ಕಂತಹ ಕಾರ್ಯಗಳ ಕುರಿತು ಕೂಡ ಅವರು ಮಾರ್ಗದರ್ಶನ ನೀಡಿದರು. ನಾವು ಬೇಡಿದ್ದ ಸಂದೇಶ ಪತ್ರವನ್ನು ಸ್ವಾಮೀಜಿಯವರು ಪ್ರಸಾದ, ಮಂತ್ರಾಕ್ಷತೆಯೊಂದಿಗೆ ನೀಡಿ ಒಳ್ಳೆಯದಾಗಲಿ ಎಂದು ಹಾರೈಸಿದರು. ಆ ಸಂದೇಶ ಪತ್ರದ ೫೦೦೦೦ ಪ್ರತಿಗಳನ್ನು ಮುದ್ರಿಸಿ ಶ್ರೀ ಎರಿಕ್ ಒಝೇರಿಯೊ ಕೈಗೆ ನೀಡಿ, ಅವರು ತಿರುಗಾಟದ ಸಂದರ್ಭದಲ್ಲಿ ಸಂದರ್ಶಿಸಿದ ಊರುಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಹಂಚುವ ವ್ಯವಸ್ಥೆ ಮಾಡಿದೆವು.

ನಾವು ಸಂಜೆ ಡೆಹ್ರಾಡೂನ್ ಮತ್ತು ಮಸ್ಸೂರಿಗೆ ಹೋಗಿ, ಅಲ್ಲಿಂದ ದೆಹಲಿಗೆ ಹೊರಟೆವು. ಆದರೆ ದಾರಿಯಲ್ಲಿ ರಸ್ತೆ ತಡೆ ಇದ್ದ ಕಾರಣ ಕಸೋಳಿ ಎಂಬ ಊರಿನಲ್ಲಿ "ಚಿತ್ತಲ ಗ್ರಾಂಡ್ ಹೊಟೇಲ್"ನಲ್ಲಿ ರಾತ್ರಿ ಉಳಿದೆವು. ಆ ಹೊಟೇಲ್ ಮಾಲಿಕರು ನಮ್ಮಿಂದ ಹಣ ಪಡೆಯದೆ ಆತಿಥ್ಯ ನೀಡಿದ್ದು ಒಂದು ವಿಶೇಷ.

ಸೆಪ್ಟೆಂಬರ್ ೨೬ ರಂದು ಶ್ರೀ ಎನ್.ಜೆ. ಕಾಮತರ ಜೊತೆಯಲ್ಲಿ ನಾವು ಕೇಂದ್ರ ರೈಲ್ವೇ ಸಚಿವರಾದ ಶ್ರೀ ಸುರೇಶ್ ಕಲ್ಮಾಡಿ(ಉಡುಪಿಯ ಆರೂರು ಕುಟುಂಬಕ್ಕೆ ಸೇರಿದವರು) ಅವರನ್ನು ಭೇಟಿಯಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕಾಗಿ ಬೇರೆ ಬೇರೆ ಪ್ರದೇಶಗಳಿಂದ ಮಂಗಳೂರಿಗೆ ಬರಲಿರುವ ಪ್ರತಿನಿಧಿಗಳಿಗೆ ರೈಲ್ವೇ ಪ್ರಯಾಣ ದರದಲ್ಲಿ ರಿಯಾಯತಿ ಕೊಡಬೇಕೆಂದು ಕೋರಿಕೆ ಪತ್ರವನ್ನು ನೀಡಿದೆವು. ಅವರು ಪ್ರೀತಿ, ವಿಶ್ವಾಸದಿಂದ ಮಾತನಾಡಿ ಎಷ್ಟು ರಿಯಾಯತಿ ಬೇಕೆಂದು ಕೇಳಿದರು. ನಾವು ೫೦% ಎಂದು ಹೇಳಿದಾಗ, ಕೂಡಲೇ ಅವರು ಅದಕ್ಕೆ ಒಪ್ಪಿಕೊಂಡು ಪತ್ರ ನೀಡುವೆನೆಂದು ತಿಳಿಸಿದರು. ಅವರ ಪತ್ರದ ಪ್ರತಿಯನ್ನು ನಾವು ಎಲ್ಲಾ ಪ್ರಾದೇಶಿಕ ಸಮಿತಿಯ ನೇತಾರರಿಗೆ ಕಳುಹಿಸಿಕೊಟ್ಟೆವು. ಇದರಿಂದ ಸಮ್ಮೇಳನಕ್ಕೆ ಬರಲಿರುವ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿತು.

ಮರುದಿನ ನಾನು ದೆಹಲಿಯಿಂದ ಮುಂಬೈಗೆ ಬಂದೆ. ಅಲ್ಲಿ ಶ್ರೀ ಎಸ್.ವಿ. ಪಿಕಳೆಯವರು ಪ್ರಾಚೀನ ಹಾಗೂ ಪ್ರಖ್ಯಾತ ಯಾಚ್ ಕ್ಲಬ್ ನಲ್ಲಿ ಪತ್ರಿಕಾಗೋಷ್ಠಿ ಆಯೋಜಿಸಿದ್ದರು. ಅಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಪತ್ರಿಕಾ ಸಂಪಾದಕರಾದ ಶ್ರೀ ಎಮ್.ವಿ. ಕಾಮತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈಗ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಮುಖ್ಯ ಅತಿಥಿಯಾಗಿ ಯಾರನ್ನು ಕರೆಯುವುದು ಎಂಬ ವಿಚಾರವಾಗಿ ತುಂಬಾ ಚರ್ಚೆ ನಡೆಯಿತು. ಅಂತಿಮವಾಗಿ ಕರ್ನಾಟಕ ಸರಕಾರದ ಮುಖ್ಯಮಂತ್ರಿ ಮಾನ್ಯ ಶ್ರೀ ದೇವೇಗೌಡರನ್ನು ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಆಹ್ವಾನಿಸುವುದೆಂದು ನಿರ್ಧಾರವಾಯಿತು. ಮಾನ್ಯ ಶ್ರೀ ಆರ್.ವಿ. ದೇಶಪಾಂಡೆಯವರು ನಮ್ಮನ್ನು ಶ್ರೀ ದೇವೇಗೌಡರಲ್ಲಿಗೆ ಕರೆದುಕೊಂಡು ಹೋಗಿ ಅವರು ಬರುವುದನ್ನು ನಿಗದಿಪಡಿಸಿದರು. ಅದೇ ರೀತಿ ಸರಕಾರದ ವತಿಯಿಂದ ಸಮ್ಮೇಳನಕ್ಕೆ ೭ ಲಕ್ಷ ರೂ ಧನಸಹಾಯ ದೊರೆಯುವಂತೆಯೂ

ಆಯಿತು. ಆಮೇಲೆ ನಾವು ಮಾನ್ಯ ಶ್ರೀಮತಿ ಮಾರ್ಗರೇಟ್ ಆಳ್ವಾರನ್ನು ಉದ್ಘಾಟನಾ ಸಮಾರಂಭದ ಅಧ್ಯಕ್ಷರಾಗುವಂತೆ ವಿನಂತಿಸಿದೆವು. ಅವರು ಅದಕ್ಕೆ ಒಪ್ಪಿಕೊಂಡರು.

ಪ್ರಚಾರ ಸಮಿತಿಯ ಸಂಚಾಲಕರಾಗಿದ್ದ ಶ್ರೀ ವೆಂಕಟೇಶ ಬಾಳಿಗ ಶ್ರಮಪಟ್ಟು ಬೃಹತ್ ಪ್ರಮಾಣದಲ್ಲಿ ಪ್ರಚಾರ ಕಾರ್ಯದ ಸಂಘಟನೆಯನ್ನು ನಡೆಸಿದರು. ಇದರಿಂದಾಗಿ, ಕನ್ನಡ, ಇಂಗ್ಲಿಷ್, ಮಲೆಯಾಳಿ ಮಾಧ್ಯಮದಲ್ಲಿಯೂ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಅಗಾಧ ರೀತಿಯಿಂದ ಪ್ರಚಾರ ದೊರೆಯಿತು. "ತರಂಗ" ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಸಂತೋಷಕುಮಾರ ಗುಲ್ವಾಡಿಯುವರು ತರಂಗ ವಾರಪತ್ರಿಕೆಯಲ್ಲಿ ವಿಶೇಷ ಪುರವಣಿಯನ್ನು ಪ್ರಕಟಿಸಿ ಕೊಂಕಣಿ ಸಮ್ಮೇಳನದ ಸಂಪೂರ್ಣ ಮಾಹಿತಿಯನ್ನು ನೀಡಿದರು.

ದಕ್ಷಿಣ ಕನ್ನಡ ಜಿಲ್ಲಾ ದೂರಸಂಪರ್ಕ ಇಲಾಖೆಯ ಜನರಲ್ ಮೆನೆಜರ್ ಆಗಿದ್ದ ಶ್ರೀ ಕೆ.ರಾಮ ಅವರು ಸಮ್ಮೇಳನದ ಚಪ್ಪರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗಾಗಿ ಪ್ರತ್ಯೇಕ "ಮಾಧ್ಯಮ ಕೇಂದ್ರ" ಮತ್ತು "ಟೆಲಿಪ್ರಿಂಟಿಂಗ್" ವ್ಯವಸ್ಥೆ ಮಾಡಿದ್ದರಿಂದ ದೇಶ ವಿದೇಶಗಳಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ವರದಿ ಬಂತು. ಉದಯವಾಣಿ ಪತ್ರಿಕೆಯಲ್ಲಿ ಪ್ರತಿದಿನದ ಸಮ್ಮೇಳನದ ವರದಿ, ಭಾಷಣ ಇತ್ಯಾದಿಗಳನ್ನು ನೀಡಿದ ಅನ್ನು ಮಂಗಳೂರು ಅವರು ಊಟ ಉಪಹಾರದ ವಿವರಗಳನ್ನೂ ನೀಡಿ ಪ್ರಚಾರ ಒದಗಿಸಿದ್ದರು.

ಊಟ–ಉಪಹಾರ ಸಮಿತಿಯ ಸಂಚಾಲಕರಾಗಿದ್ದ ಶ್ರೀ ಕೆ.ಜಿ. ನಾಯಕರು (ಹನುಮಾನ್ ಹೊಟೇಲ್) ೨೭೦ ಬಗೆಯ ವಿಧದ ಅಪ್ಪಟ ಕೊಂಕಣಿ ತಿಂಡಿಗಳು, ಪಲ್ಯಗಳು, ದೋಸೆಗಳು ಇತ್ಯಾದಿಗಳನ್ನು ತಯಾರಿಸಿ ಪ್ರತಿನಿಧಿಗಳಿಗೆ ಬಡಿಸಿದ್ದರು. ಈ ವಿಚಾರವಾಗಿ ಜನರು ಈಗಲೂ ಅದನ್ನು ನೆನಪಿಸಿಕೊಂಡು ಶ್ಲಾಘನೆ ಮಾಡುತ್ತಾರೆ.

ಪ್ರದರ್ಶನ ವಿಭಾಗದಲ್ಲಿ ಶ್ರೀ ಲೂಯಿ ಪಿಂಟೊ ಅವರು ಬೇರೆ ಬೇರೆ ಕೊಂಕಣಿ ಸಮಾಜದ ಸಾಂಸ್ಕೃತಿಕ, ಕಲಾ ಮತ್ತು ಔದ್ಯೋಗಿಕ ವಿಷಯಗಳ ಪ್ರದರ್ಶನದ ಪ್ರತ್ಯೇಕ ವಿಭಾಗವನ್ನೇ ಏರ್ಪಡಿಸಿದ್ದರು. ಅಡವಿ ಖಾತೆಯವರನ್ನು ಸಂಪರ್ಕಿಸಿ ಚಿಕ್ಕ ಮಕ್ಕಳನ್ನು, ವಿದ್ಯಾರ್ಥಿಗಳನ್ನು ಆಕರ್ಷಿಸುವ "ವನ್ಯ ಮೃಗ ವಿಭಾಗ"ವನ್ನು ಮಾಡಿ ಅಲ್ಲಿ ಮರ ಗಿಡಗಳನ್ನು ಪ್ರದರ್ಶಿಸಿದ್ದರು. ವಸ್ತು ಪ್ರದರ್ಶನದ ವ್ಯಾಪಾರ, ವ್ಯವಹಾರ ವಿಭಾಗವು ೪೫ ದಿನಗಳವರೆಗೆ ನಡೆದಿತ್ತು.

ನಮ್ಮ ಪ್ರದರ್ಶನ ಮಳಿಗೆಯಲ್ಲಿ ಆಗ ಹೊಸ ಪರಿಕಲ್ಪನೆಯೆನಿಸಿದ ಬೆಂಗಳೂರಿನ "ದೋಸಾ ಕ್ಯಾಂಪ್" ಇತ್ತು. ಇದರಲ್ಲಿ ೪೬ ವಿಧದ ದೋಸೆಗಳು ದೊರೆಯುತ್ತಿದ್ದವು. ಪ್ರಾರಂಭದಲ್ಲಿ ಈ ಮಳಿಗೆಯಲ್ಲಿ ಹೆಚ್ಚು ವ್ಯಾಪಾರವಾಗದಿದ್ದರೂ, "ದೋಸಾ ಕ್ಯಾಂಪ್" ವಿಚಾರವಾಗಿ ಶ್ರೀ ವೆಂಕಟೇಶ್ ಬಾಳಿಗರು ಪತ್ರಿಕಾಗೋಷ್ಠಿಯನ್ನೇ ಆಯೋಜಿಸಿದ್ದರಿಂದ ಮತ್ತು ಈ ಕುರಿತು ಪತ್ರಿಕೆಗಳಲ್ಲಿ ವಿಶೇಷ ವರದಿ ಬಂದದ್ದರಿಂದ, ಆಮೇಲಿನ ದಿನಗಳಲ್ಲಿ ದೋಸೆ ಕ್ಯಾಂಪ್‌ನ ವ್ಯಾಪಾರ ಹೆಚ್ಚಿತು. ಈ ಮಳಿಗೆಯ ಎದುರು ಜನರು ಉದ್ದನೆಯ ಕ್ಯೂ ನಿಲ್ಲುವ ದೃಶ್ಯ ಸಾಮಾನ್ಯವಾಯಿತು.

ನಾವು ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದಲ್ಲಿ "ವಿಶ್ವ ಕೊಂಕಣಿ ರತ್ನ ಪ್ರಶಸ್ತಿ"ಯನ್ನು ಐದು ಮಂದಿ ಕೊಂಕಣಿಗರಿಗೆ ಮತ್ತು ಸಂಸ್ಥೆಗೆ ನೀಡುವುದೆಂದು ನಿರ್ಣಯ ಕೈಗೊಂಡಿದ್ದೆವು. ಜಾಗತಿಕ ಮಟ್ಟದಲ್ಲಿ ಕೊಂಕಣಿ ಸಾಹಿತ್ಯ, ಸಂಸ್ಕೃತಿ, ಜಾನಪದ ಕ್ಷೇತ್ರಕ್ಕೆ ಮತ್ತು ಎರಡು ಕೊಂಕಣಿ ಸಂಸ್ಥೆಗಳಿಗೆ ಮಾನ್ಯತೆ ನೀಡಿ ಸನ್ಮಾನಿಸುವುದೆಂದು ನಿರ್ಧರಿಸಿದೆವು. ಲಾಬಿಂಗ ತುಂಬಾ ಪ್ರಮಾಣದಲ್ಲಿ ನಡೆಯಿತು. ತರಂಗ ಪತ್ರಿಕೆಯ ಸಂಪಾದಕ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರ ನೇತೃತ್ವದಲ್ಲಿ ಶ್ರೀ ಪಿ. ದಯಾನಂದ ಪೈ, ರೊನಾಲ್ಡ್ ಕೊಲಾಸೊ, ಶ್ರೀ ನಾ. ಡಿಸೋಜಾ (ಕನ್ನಡದ ಪ್ರಸಿದ್ಧ ಸಾಹಿತಿ) ಮತ್ತು ಜುಬೇರ್ ಮುಸ್ಬಾ ಸದಸ್ಯರಾಗಿ ಇರುವ ಸಮಿತಿಯನ್ನು ರಚಿಸಲಾಗಿತ್ತು. ಶ್ರೀ ಕೊಲಾಸೊ ಮತ್ತು ಶ್ರೀ ದಯಾನಂದ ಪೈಯವರು ಮೇಲೆ ಉಲ್ಲೇಖಿಸಿದ ೫ ವಿಶ್ವ ಕೊಂಕಣಿ ರತ್ನ ಪ್ರಶಸ್ತಿಯಲ್ಲದೆ, ೧೫ ಬೇರೆ ಬೇರೆ ಪ್ರಸಿದ್ಧ ವ್ಯಕ್ತಿಗಳಿಗೆ ಮತ್ತು ಸಂಘ ಸಂಸ್ಥೆಗಳಿಗೂ ಪ್ರಶಸ್ತಿ ನೀಡಬೇಕೆಂದು ತಿಳಿಸಿದ್ದಕ್ಕೆ ನಾನು ಒಪ್ಪಿಕೊಂಡೆ.

ನಾನು ಮಂಗಳೂರಿಗೆ ಬಂದ ಬಳಿಕ ಕುಂದಾಪುರದಲ್ಲಿ ಶ್ರೀ ಯು.ಎಸ್. ಶೆಣ್ಯೆಯವರು ಸಂಘಟಿಸಿದ್ದ ಸಮಾರಂಭಕ್ಕೆ ಹೋಗಿದ್ದೆ. ಹಿಂದೆ ಬರುವಾಗ ಕೋಟದಲ್ಲಿ ವಾಸವಾಗಿರುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಕೆ. ಶಿವರಾಮ ಕಾರಂತರನ್ನು ಭೇಟಿಯಾಗಿ, ಡಿಸೆಂಬರ್ ೧೬ರಂದು ಬೆಳಗ್ಗೆ ನಡೆಯಲಿರುವ ವಿಶ್ವ ಕೊಂಕಣಿ ಸಾಹಿತ್ಯ ಗೋಷ್ಠಿಗಳ ಉದ್ಘಾಟನೆಯನ್ನು ನಡೆಸಿಕೊಡಬೇಕೆಂದು ವಿನಂತಿ ಮಾಡಿದೆ. ಅವರು ಅದಕ್ಕೆ ಒಪ್ಪಿಕೊಂಡರು.

ಮರುದಿನ, ನವೆಂಬರ್ ೧೭ರಂದು ಶ್ರೀ ಸುರೇಶ ಪ್ರಭು (ಲೋಕಸಭಾ ಸದಸ್ಯರು) ಅವರು ಕರೆ ಮಾಡಿದ್ದರಿಂದ ನಾನು ವೆಂಕಟೇಶ್ ಬಾಳಿಗ ಅವರೊಂದಿಗೆ ಗೋವೆಗೆ ಹೋದೆ. ಅಲ್ಲಿ

ಶ್ರೀ ಎಸ್.ವಿ. ಪಿಕಳೆ ಮತ್ತು ಇನಕಮ್ ಟ್ಯಾಕ್ಸ್ ಕಮಿಷನರ್ ಶ್ರೀ ಜೆ.ಕೆ. ರಾವ್ ಅವರನ್ನು ಭೇಟಿಯಾದೆವು. ಆಮೇಲೆ ವಸಂತರಾವ್ ಡೆಂಪೊ ಮತ್ತು ಇತರ ದೊಡ್ಡ ವ್ಯಾಪಾರಿಗಳು, ಕೈಗಾರಿಕೋದ್ಯಮಿಗಳನ್ನು ಕೂಡ ಭೇಟಿಯಾದೆವು. ಅವರು ಸಮ್ಮೇಳನಕ್ಕೆ ಧನ ಸಹಾಯ ನೀಡುವುದಾಗಿ ಆಶ್ವಾಸನೆ ನೀಡಿದರು.

ಅದೇ ದಿನ ಶ್ರೀ ರಾಜು ನಾಯಕ್ ನನ್ನ ಸಂದರ್ಶನ ಪಡೆದಿದ್ದರು. ಇದು ಗೋವೆಯ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಗೋವೆಯಲ್ಲಿ ವಿಸ್ತೃತ ಪ್ರಚಾರ ದೊರೆತಿತ್ತು. ಮಂಗಳೂರಿಗೆ ಹಿಂತಿರುಗಿ ಬರುವಾಗ ಕಾಣಕೋಣದಲ್ಲಿ ಪರ್ತಗಾಳಿ ಮಠಕ್ಕೆ ಹೋಗಿ ಗೋಕರ್ಣ ಜೀವೊತ್ತಮ ತೀರ್ಥ ಸ್ವಾಮೀಜಿಯವರನ್ನೂ ಭೇಟಿಯಾಗಿ ಆಶೀರ್ವಾದ ಪಡೆದೆವು. ಅದೇ ರಾತ್ರಿ ಮನೆಗೆ ಬಂದು ತಲುಪಿದೆವು.

ಡಿಸೆಂಬರ್ ೮ ರಂದು ಬೆಳಗ್ಗೆ ಬೆಂಗಳೂರು ದೂರದರ್ಶನದ ಶ್ರೀಮತಿ ಉಷಾ ಕಿಣಿ ಮತ್ತು ಸಿಬ್ಬಂದಿ ವರ್ಗದವರು ಕ್ಯಾಮರಾ ಇತ್ಯಾದಿ ತೆಗೆದುಕೊಂಡು ಬಂದಿದ್ದರು. ಅವರು ವಿಶ್ವ ಕೊಂಕಣಿ ಸಮ್ಮೇಳನದ ತಯಾರಿ, ವ್ಯವಸ್ಥೆ, ನನ್ನ ಮತ್ತು ಇತರ ಸಮಿತಿಯ ಅಧ್ಯಕ್ಷರುಗಳ ಸಂದರ್ಶನ, ಸಮ್ಮೇಳನ ನಡೆಯಲಿರುವ ಮಂಗಳಾ ಕ್ರೀಡಾಂಗಣ ಮತ್ತು ಇತರ ವಿಷಯಗಳ ಕುರಿತು ಮಾಹಿತಿ ಪಡೆದು ಬೆಂಗಳೂರು ದೂರದರ್ಶನದಲ್ಲಿ ಎರಡರೆಡು ಬಾರಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ "ಕರ್ಟನ್ ರೇಸರ್" ಕಾರ್ಯಕ್ರಮವನ್ನು ಪ್ರಸಾರ ಮಾಡಿದರು. ಶ್ರೀಮತಿ ಕಿಣಿಯವರು ಆ ಕಾರ್ಯಕ್ರಮವನ್ನು ಗೋವೆಯ ಪಣಜಿ ಕೇಂದ್ರಕ್ಕೂ ಕಳುಹಿಸಿಕೊಟ್ಟದ್ದರಿಂದ, ಅಲ್ಲಿಯ ದೂರದರ್ಶನದಲ್ಲಿಯೂ ಅದು ಪ್ರಸಾರಗೊಂಡಿತು. ಇದರಿಂದ ಕರ್ನಾಟಕ ರಾಜ್ಯದ ಅನೇಕ ಜಿಲ್ಲೆಗಳಿಂದ ಸಾವಿರಾರು ಪ್ರತಿನಿಧಿಗಳು ಸಮ್ಮೇಳನಕ್ಕೆ ಬರಲು ಸ್ಫೂರ್ತಿ ದೊರೆಯಿತು. ಬೆಂಗಳೂರು ದೂರದರ್ಶನ ಮತ್ತು ಶ್ರೀಮತಿ ಉಷಾ ಕಿಣಿಯವರ ಈ ಉಪಕ್ರಮಕ್ಕಾಗಿ ಅವರಿಗೆ ದೇವರು ಒಳ್ಳೆಯದು ಮಾಡಲಿ.

ನನಗೆ ಕೊಂಕಣಿ ಸಮ್ಮೇಳನದ ಕಚೇರಿಯಲ್ಲಿ ಹಗಲು ರಾತ್ರಿ ಮಾಡುವ ಕಾರ್ಯಗಳಿದ್ದವು. ಅದನ್ನು ಮುಗಿಸುವಷ್ಟರಲ್ಲಿ ಮತ್ತು ಪರವೂರಿಗೆ ಹೋಗಿ ಬಂದಾಗಲೂ ರಾತ್ರಿ ತುಂಬಾ ತಡವಾಗುತ್ತಿತ್ತು. ಅದನ್ನು ಮನಸಿನಲ್ಲಿಟ್ಟುಕೊಂಡು ಸಮಿತಿಯ ಇತರ ಸದಸ್ಯರು ನನಗೆ ಅವರ ಕಾರಿನಲ್ಲಿ ನಡುರಾತ್ರಿಯಾದರೂ ತುಂಬೆಗೆ ಕರೆತಂದು ಬಿಟ್ಟು ಹೋಗುತ್ತಿದ್ದರು. ಆದರೆ ಇಷ್ಟೆಲ್ಲಾ ತೊಂದರೆಗಳು ಬೇಡವೆಂದು ಸಂಚಾಲಕರು ತಿಳಿಸಿ ನನಗೆ ಒತ್ತಾಯ ಮಾಡಿದ್ದರಿಂದ ನಾನು ಡಿಸೆಂಬರ್ ೧೧ರಿಂದ ನವರತ್ನಾ ಹೊಟೇಲಿನಲ್ಲಿ ಇರತೊಡಗಿದೆ.

ಡಿಸೆಂಬರ್ ೧೪ ರಿಂದಲೇ ಪ್ರತಿನಿಧಿಗಳು ಮಂಗಳೂರಿಗೆ ಬರಲಾರಂಭಿಸಿದ್ದರು. ಅವರಿಗೆ ತಂಗಲು ನಾವು ಬೇರೆ ಬೇರೆ ಹಾಲ್‌ಗಳನ್ನು ಕಾದಿರಿಸಿಕೊಂಡಿದ್ದೆವು. ಕೆಲವರ ಬೇಡಿಕೆಗೆ ಅನುಗುಣವಾಗಿ ನಾವು ಅವರಿಗೆ ಹೊಟೇಲಿನಲ್ಲಿ ಇರುವ ವ್ಯವಸ್ಥೆ ಮಾಡಿದೆವು.

ಸಮ್ಮೇಳನ ಪ್ರಾರಂಭಗೊಳ್ಳುವ ಮೊದಲು ಎರಡು ದಿನ ಹಗಲು ಮತ್ತು ರಾತ್ರಿ ಮಂಗಳಾ ಕ್ರೀಡಾಂಗಣದಲ್ಲಿ ಪೂರ್ವ ತಯಾರಿ ತಾಲೀಮು ಇತ್ತು. ಕಾರ್ಯಕರ್ತರಲ್ಲಿ ಬಹಳ ಉತ್ಸಾಹ ಕಂಡು ಬರುತ್ತಿತ್ತು. ೧೦೦-೧೨೫ ಹಾಡುಗಾರರು(ಗಾಯಕರು ಮತ್ತು ಗಾಯಕಿಯರು) ಒಂದೆಡೆ ನಿಂತು ಪ್ರಾರ್ಥನಾ ಗೀತೆಯನ್ನು ಸಾದರಪಡಿಸುತ್ತಿದ್ದರು. ಸಂಚಾಲನಾ ಸಮಿತಿಯವರು ಆಗಾಗ ಒಟ್ಟು ಸೇರುತ್ತಿದ್ದುದರಿಂದ ಕೆಲಸಕಾರ್ಯಗಳು ಮುಗಿಯುತ್ತಾ ಬಂದಿದ್ದವು.

ಕೊಂಕಣಿ ಸಮಾಜದ ಚರಿತ್ರೆಯಲ್ಲಿಯೇ ಪ್ರಥಮ ಬಾರಿಗೆ ನಡೆಯಲಿರುವ ವಿಶ್ವಕೊಂಕಣಿ ಸಮ್ಮೇಳನ ದಿನವೂ ಬಂತು. ನಾವು ಎರಡು ವರ್ಷಗಳಿಂದ ನಿದ್ದೆ, ಹಸಿವು, ಸಂಸಾರ ತಾಪತ್ರಯ, ಮರೆತು ನಡೆಸಿದಂತಹ ಕಾರ್ಯಗಳ ನಿಶ್ಚಿತ ಫಲ ಕಾಣುವ ಮುಹೂರ್ತ ಬಂತು. ನನ್ನ ಬದುಕಿನ ಅಮೃತ ಗಳಿಗೆ ಬಂತು.

ಚಾರಿತ್ರಿಕ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ದಿನ ನಾನು ಮುಂಜಾನೆಯೇ ಬಂಟವಾಳಕ್ಕೆ ಹೋಗಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ಫಲಪುಷ್ಪ(ತೆಂಗಿನಕಾಯಿ, ಬಾಳೆಹಣ್ಣು, ಹೂ) ನೀಡಿ, ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಯಶಸ್ಸಿಗಾಗಿ ಆಶೀರ್ವಾದ ಪಡೆದೆ. ಆ ಮೇಲೆ ಅಲ್ಲಿಂದ ಮಂಗಳೂರಿಗೆ ಬಂದು, ನಾನು, ಕುಡ್ಪಿ ಜಗದೀಶ ಶೆಣೈ, ವೆಂಕಟೇಶ ಬಾಳಿಗ, ರಘುನಾಥ ಶೇಟ್, ಲೂಯಿ ಪಿಂಟೊ, ವಿಲಿಯಂ ಡಿಸೋಜಾ ಇವರೊಂದಿಗೆ ಮಂಗಳೂರಿನ ರಥಬೀದಿಯ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ತೆರಳಿ, ಶ್ರೀ ದೇವರಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಯಶಸ್ಸಿಗಾಗಿ ಪ್ರಾರ್ಥಿಸಿ ಆಶೀರ್ವಾದ ಪಡೆದು ಬಂದೆ.

ಕೇಂದ್ರ ಸಚಿವೆ, ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷೆ, ಮತ್ತು ವಿಶ್ವ ಕೊಂಕಣಿ ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷೆಯೂ ಆಗಿರುವ ಮಾನ್ಯ ಶ್ರೀಮತಿ ಮಾರ್ಗರೇಟ್ ಆಳ್ವಾ, ಸಮ್ಮೇಳನದ ಉದ್ಘಾಟನೆಯನ್ನು ನಡೆಸಲಿರುವ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ದೇವೇಗೌಡರು, ಮಾನ್ಯ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆ, ಶ್ರೀ ಜಯಪ್ರಕಾಶ ಹೆಗ್ಡೆ, ಕೇಂದ್ರ ರೈಲ್ವೇ ಸಚಿವರಾಗಿದ್ದ ಮಾನ್ಯ ಶ್ರೀ ಸುರೇಶ ಕಲ್ಮಾಡಿ, ಶಾಸಕ ಶ್ರೀ ಯೋಗೀಶ ಭಟ್, ಶ್ರೀ ಕೆ.ಕೆ. ಪೈ ಇವರು ಮಧ್ಯಾಹ್ನವೇ ಬಂದು ನಮ್ಮ ಜೊತೆಯಲ್ಲಿದ್ದರು(ಶ್ರೀ ಪೈ ಮಾಮರು ಏಳು ದಿನಗಳಲ್ಲಿಯೂ ಮಣಿಪಾಲದಿಂದ ಬಂದು ನಮ್ಮ ಜೊತೆಯಲ್ಲಿಯೇ ಇರುತ್ತ ಮಾರ್ಗದರ್ಶನ ಮಾಡುತ್ತಲಿದ್ದರು).

ಗಲ್ಫ್ ದೇಶಗಳಿಂದ ೪೦ ಮಂದಿ ಪ್ರತಿನಿಧಿಗಳು ಬಂದಿದ್ದರು. ದುಬೈಯಲ್ಲಿರುವ ಶ್ರೀ ಉಲ್ಲಾಸ ಡಿಸೋಜಾ ಕಾಮತ ಮತ್ತು ಇತರರು ಅಲ್ಲಿ ತುಂಬಾ ಪ್ರಚಾರ ನೀಡಿದ್ದರು. ಇದೇ ರೀತಿ ಉತ್ತರ ಅಮೇರಿಕೆಯಲ್ಲಿ ಶ್ರೀ ವಸಂತ ಭಟ್ ಅವರು ತಮ್ಮ "ಖಬರ" ಪತ್ರಿಕೆಯಲ್ಲಿ ಪ್ರಚಾರ ನೀಡಿದ್ದನ್ನು ಮರೆಯುವ ಹಾಗಿಲ್ಲ.

ಡಿಸೆಂಬರ್ ೧೬ ರಂದು ಬೆಳಗ್ಗೆ ನಾವು ಪ್ರತಿನಿಧಿಗಳ ನೋಂದಣಿ ಪ್ರಾರಂಭಿಸಿದ್ದೆವು. ಬಂದ ಪ್ರತಿನಿಧಿಗಳು ಮದುವೆಯ ಸಭಾಂಗಣ, ಶಾಲಾ ಸಭಾಂಗಣ, ಮತ್ತು ಹೊಟೇಲುಗಳಲ್ಲೆಲ್ಲಾ ತುಂಬಿಕೊಂಡರು. ಲೂಯಿ ಪಿಂಟೋ ಮತ್ತು ಅವರ ಸಂಗಾತಿಗಳ ನಿರ್ಮಾಣದ ಕೆನರಾ ಬ್ಯಾಂಕ್ ಪ್ರಾಯೋಜನೆಯ "ಅಮ್ಮೆಂಬಳ್ ಸುಬ್ಬರಾವ್ ಪೈ" ವೇದಿಕೆ ಅತ್ಯಂತ ಸುಂದರವಾಗಿ ಅಲಂಕೃತಗೊಂಡಿತ್ತು. ವಿಸ್ತೃತ ರೂಪದಲ್ಲಿ ಒಟ್ಟು ಮೂರು ವೇದಿಕೆಗಳನ್ನು ನಿರ್ಮಿಸಲಾಗಿತ್ತು.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ ಉದ್ಘಾಟನೆಗೊಳ್ಳುವ ಮೊದಲು ಮಂಗಳೂರಿನ ನೆಹರೂ ಮೈದಾನಿನಿಂದ ಹೊರಟ ಮೆರವಣಿಗೆ ಬಹು ಆಕರ್ಷಕ ಹಾಗೂ ಅಪರೂಪದ್ದಾಗಿತ್ತು. ಕೊಂಕಣಿ ಭಾಷೆಯನ್ನಾಡುವ ಜನರು, ಕಲಾಕಾರರು, ಕೊಂಕಣಿ ಸಮಾಜದ ಸಾಂಸ್ಕೃತಿಕ ಮುಖವನ್ನು ಪರಿಚಯ ಮಾಡಿ ಕೊಡವಂತಹ ದೃಶ್ಯಾವಳಿಗಳಿಂದ, ಅದರಲ್ಲಿಯೂ ಗಲ್ಫ್ ರಾಷ್ಟ್ರಗಳಿಂದ ಬಂದ ಗುಂಪು ಅರಬೀ ವೇಷಭೂಷಣ ಧರಿಸಿ ಪ್ರದರ್ಶನ ನೀಡಿದ್ದರು. ಮೆರವಣಿಗೆಯು ಸ್ವರ್ಗದ ದೇವತೆಗಳು ಭೂಮಿಗಿಳಿದು ಬಂದು ನೋಡುವ ರೀತಿಯಲ್ಲಿತ್ತು ಎಂದರೆ ಅತಿಶಯೋಕ್ತಿಯಲ್ಲ.

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರು ಮತ್ತು ಇತರ ಗಣ್ಯರು ಹೆಚ್ಚು ವಿಳಂಬ ಮಾಡದೆ ಸಂಜೆ ೬ ಗಂಟೆಗೆ ಸರಿಯಾಗಿ ವಿಶ್ವ ಕೊಂಕಣಿ ಸಮ್ಮೇಳನದ ಮಂಟಪಕ್ಕೆ ಬಂದು ತಲುಪಿದ್ದರು. ಅದೇ ಸಮಯಕ್ಕೆ ಮೆರವಣಿಗೆಯೂ ಅಲ್ಲಿಗೆ ಬಂದು ತಲುಪಿತ್ತು. ಎಲ್ಲಿ ನೋಡಿದರಲ್ಲಿ ಜನಸಾಗರ. ಪ್ರಾರಂಭದಲ್ಲಿ ನೂರು ಕೊಂಕಣಿ ಗಾಯಕ, ಗಾಯಕಿಯರು ತಮ್ಮ ತುಂಬು ಕಂಠಗಳಿಂದ ಹಾಡಿದ ಸ್ವಾಗತ ಗೀತೆ ನೆರೆದವರನ್ನೆಲ್ಲಾ ರೋಮಾಂಚನಗೊಳಿಸಿತು.

ನಾನು ನನ್ನ ಸ್ವಾಗತ ಭಾಷಣದಲ್ಲಿ ಕೊಂಕಣಿ ಭಾಷೆ, ಸಂಸ್ಕೃತಿ, ಸಾಹಿತ್ಯದ ಮೇಲೆ ನಡೆದ ಪೋರ್ತುಗೀಸ್ ರಾಜಸತ್ತೆಯ ದುರಾಕ್ರಮಣ, ಅದರಿಂದ ನಮ್ಮ ಪೂರ್ವಜರು ಗೋವೆ ಬಿಟ್ಟು ಹೋಗಬೇಕಾದ ಪರಿಸ್ಥಿತಿ ಉಂಟಾಗಿರುವುದು, ಆನಂತರ ಅವರು ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯ ಪರಂಪರೆಗಳನ್ನು ಉಳಿಸುವ ಸಲುವಾಗಿ ತಮ್ಮ ಮೂಲನೆಲೆ ಬಿಟ್ಟು ಉತ್ತರದ ಮಹಾರಾಷ್ಟ್ರ ಕೊಂಕಣ ಪ್ರದೇಶ, ಕರ್ನಾಟಕದ ಪಶ್ಚಿಮ ಕರಾವಳಿ ಪ್ರದೇಶ, ಕೇರಳದಲ್ಲಿ ಮಲಬಾರಿನಿಂದ ಕೊಚ್ಚಿಯ ತನಕ ಇರುವ ಪ್ರದೇಶಗಳಲ್ಲಿ ನೆಲೆ ನಿಂತದ್ದು, ಆನಂತರ ಅಲ್ಲಿ ಕೊಂಕಣಿ ಸಮಾಜದ ಅಸ್ತಿತ್ವವನ್ನು ತೋರಿಸುವ ಸಲುವಾಗಿ ನಡೆಸಿದ ಕಾರ್ಯಗಳನ್ನು ವಿವರಿಸಿ ಹೇಳಿದೆ. ಆಮೇಲೆ ಶೆಣೈ ಗೊಂಯಬಾಬ ಅವರು ಪ್ರಾರಂಭಿಸಿದ ಕೊಂಕಣಿ ಚಳವಳಿ, ಮಾಧವ ಮಂಜುನಾಥ ಶಾನಭಾಗರು ನಾಲ್ಕೂ ರಾಜ್ಯಗಳಲ್ಲಿನ ಕೊಂಕಣಿ ಜನರನ್ನು, ಸಮಾಜಗಳನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಕಾರವಾರದಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತನ್ನು ಸ್ಥಾಪಿಸಿದ್ದು, ಕೊಂಕಣಿ ಸ್ವತಂತ್ರ ಭಾಷೆಯೆಂದು ಕೇಂದ್ರ ಸಾಹಿತ್ಯ ಅಕಾದೆಮಿ ಘೋಷಿಸಿದ್ದು, ಗೋವೆಗೆ ಸ್ವತಂತ್ರ ರಾಜ್ಯದ ಸ್ಥಾನಮಾನ ದೊರೆತು ಕೊಂಕಣಿ ಗೋವೆಯ ರಾಜಭಾಷೆಯಾಗಿ ಘೋಷಿಸಲ್ಪಟ್ಟದ್ದು, ಭಾರತದೇಶದ ೮ನೇ ಅಧಿಸೂಚಿಯಲ್ಲಿ ಕೊಂಕಣಿ ಭಾಷೆಯ ಸೇರ್ಪಡೆಯಾಗಿ, ಕೊಂಕಣಿಗೆ ರಾಷ್ಟ್ರೀಯ ಭಾಷೆಯ ಸ್ಥಾನಮಾನ ದೊರೆತದ್ದುದನ್ನು ಪ್ರಸ್ತಾಪ ಮಾಡಿದ್ದೆ.

ಆಮೇಲೆ ನಾವು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ, ಭಾರತದ ವಿವಿಧ ರಾಜ್ಯಗಳಲ್ಲಿ, ಮುಖ್ಯವಾಗಿ ಮಹಾರಾಷ್ಟ್ರ, ಗೋವೆ, ಕರ್ನಾಟಕ, ಮತ್ತು ಕೇರಳ ರಾಜ್ಯಗಳಲ್ಲಿ ಹರಡಿಕೊಂಡಿರುವ ಹಿಂದೂ, ಮುಸ್ಲಿಂ, ಮತ್ತು ಕ್ರೈಸ್ತ ಕೊಂಕಣಿ ಬಾಂಧವರನ್ನು ಒಂದೇ ಮಂಟಪಕ್ಕೆ ಕರೆತರುವಂತೆ ಮಾಡಲು ದೇಶ ವಿದೇಶಗಳಲ್ಲಿ ೭೫ ಪ್ರಾದೇಶಿಕ ಸಮಿತಿಗಳನ್ನು ರಚಿಸಿ, ವಿಸ್ತೃತ ಪ್ರಚಾರವನ್ನು ನೀಡಿ, ೫೦೦೦ ಪ್ರತಿನಿಧಿಗಳು ಈ ವಿಶ್ವ ಕೊಂಕಣಿ ಸಮ್ಮೇಳನದಲ್ಲಿ ಭಾಗಿಯಾಗಲು ಕಳೆದ ಎರಡು

ವರ್ಷಗಳಲ್ಲಿ ನಡೆಸಿದ ಕಾರ್ಯ ಶ್ರಮವನ್ನು ತಿಳಿಸಿದೆ. ಆಮೇಲೆ ವೇದಿಕೆಯಲ್ಲಿ ಆಸೀನರಾಗಿರುವ ಮುಖ್ಯ ಅತಿಥಿಗಳಿಗೆ ಮತ್ತು ನೆರೆದ ಸಭಿಕರಿಗೆ, ಮಾಧ್ಯಮದ ಮಹನೀಯರಿಗೆ ಸ್ವಾಗತ ನೀಡಿದೆ.

ಆಮೇಲೆ ಮುಖ್ಯ ಅತಿಥಿಗಳಾಗಿದ್ದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್. ಡಿ. ದೇವೇಗೌಡರು ಸರಸ್ವತಿ ನದಿಯ ನೀರನ್ನು ವೇದಿಕೆಯ ಮುಂದಿರುವ ಜಾಗದಲ್ಲಿ ಸುರಿದಾಗ, ಅದು ಕೆಳಗಿನಿಂದ ನೀರಿನ ಕಾರಂಜಿಯಾಗಿ ಮೇಲೆ ಚಿಮ್ಮಿತು. ಸರಸ್ವತಿ ನದಿ ಅಳಿದರೂ, ನಾವು ಕೊಂಕಣಿ ಜನರು ಅಳಿಯುವುದಿಲ್ಲ ಎಂಬುದನ್ನು ಹೀಗೆ ಸಾಂಕೇತಿಕವಾಗಿ ತೋರಿಸಲಾಯಿತು. (ಅಹಮದಾಬಾದಿನ ಪ್ರಾದೇಶಿಕ ಸಮಿತಿಯವರು ದ್ವಾರಕೆಯ ಬಳಿ ಇರುವ ಸರಸ್ವತಿ ನದಿಯ ನೀರನ್ನು ಕೊಡದಲ್ಲಿ ತಂದಿದ್ದರು.)

ಅನಂತರ ಪ್ರತಿಯೊಂದು ಕೊಂಕಣಿ ಸಮಾಜದ ಕಲಾಕಾರರು ೩–೪ ನಿಮಿಷಗಳ ಅವಧಿಯ ಸಾಂಸ್ಕೃತಿಕ ದೃಶ್ಯದ ಪ್ರದರ್ಶನಗಳನ್ನು ನೀಡಿದರು. ಅದರಲ್ಲಿ ಕುಡುಮಿ, ಖಾರ್ವಿ, ಸಿದ್ಧಿ, ನವಾಯಿತ, ಸಾರಸ್ವತ, ದೈವಜ್ಞ ಇತ್ಯಾದಿ ಎಲ್ಲಾ ಕೊಂಕಣಿ ಸಮಾಜದವರ ಸಾಂಸ್ಕೃತಿಕ ಪ್ರದರ್ಶನವಿತ್ತು.

ಅದನ್ನು ನೋಡಿ ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರಿಗೆ ಆಶ್ಚರ್ಯ ಮತ್ತು ಸಂತೋಷವಾಗಿತ್ತು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ "ಇಲ್ಲಿ ನಾನು ಮಿನಿ ಭಾರತವನ್ನು ಕಂಡೆ. ನೀವು ಕೊಂಕಣಿಗರು ಅಲ್ಪಸಂಖ್ಯಾತರು ಆಗಿದ್ದರೂ, ಭಾರತದೇಶದ ಮತ್ತು ಕರ್ನಾಟಕ ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಹಾಗೂ ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಗೆ ನೀಡಿದ ದೇಣಿಗೆಯು ಮಹತ್ವದ್ದಾಗಿದೆ. ನಿಮಗೆ ಏನೇ ಬೇಕಿದ್ದರೂ, ನಾನು ಅದನ್ನು ಮಂಜೂರು ಮಾಡುವೆ" ಎಂಬುದಾಗಿ ಘೋಷಿಸಿದರು. ಆಗಲೇ ನಾನು, "ಮನೆಗೆ ಬಂದ ಅತಿಥಿಗಳಲ್ಲಿ ಬೇಡಿಕೆ ಸಲ್ಲಿಸುವುದು ಕೊಂಕಣಿ ಜನರ ಸಂಸ್ಕೃತಿ ಅಲ್ಲ. ಆವಶ್ಯಕತೆ ಇದ್ದಾಗ ನಾವು ನಿಮ್ಮ ಬಳಿ ಬರುತ್ತೇವೆ," ಎಂದು ಹೇಳಿದೆ. ಆಮೇಲೆ ಸಚಿವರಾದ ಶ್ರೀ ಸುರೇಶ ಕಲ್ಮಾಡಿಯವರು ನಾಲ್ಕು ಒಳ್ಳೆಯ ಮಾತುಗಳನ್ನಾಡಿದರು. ಆಮೇಲೆ ಇತರ ಗಣ್ಯರ, ಅಧ್ಯಕ್ಷೆ ಶ್ರೀಮತಿ ಮಾರ್ಗರೇಟ್ ಆಳ್ವಾರ ಭಾಷಣಗಳು ನಡೆದವು. ಇದನ್ನೆಲ್ಲಾ ಸಂಘಟಿಸಿದ್ದ ನನ್ನ ಕುರಿತು ಎಲ್ಲರೂ ಪ್ರಶಂಸೆಯ ಮಾತುಗಳನ್ನಾಡಿದರು.

ಮರುದಿನ, ಡಿಸೆಂಬರ್ ೧೭ ರಂದು ಬೆಳಗ್ಗೆ ಸಮ್ಮೇಳನದ ವಿಚಾರ ಸಂಕಿರಣ ಪ್ರಾರಂಭವಾಯಿತು. ಲೋಕಸಭಾ ಸದಸ್ಯರಾಗಿದ್ದ ಶ್ರೀ ಸುರೇಶ ಪಿ. ಪ್ರಭು ಧ್ವಜಾರೋಹಣ ಮಾಡಿದರು. ಆಮೇಲೆ ಪ್ರಸಿದ್ಧ ಸಾಹಿತಿ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆಗಿರುವ ಕೋಟ ಶಿವರಾಮ ಕಾರಂತರು ದೀಪ ಹಚ್ಚಿ ವಿಚಾರ ಸಂಕಿರಣದ ಉದ್ಘಾಟನೆ ನಡೆಸಿದರು. ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರು, ಖ್ಯಾತ ವಿಜ್ಞಾನಿಗಳೂ ಹಾಗೂ ಮಾಜಿ ಉಪಕುಲಪತಿಗಳೂ ಆಗಿದ್ದ ಡಾ. ಕಾಶೀನಾಥ ಮಹಾಲೆಯವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಪುಸ್ತಕ ಲೋಕಾರ್ಪಣೆಯನ್ನು ಮುಂಬೈಯ ಶ್ರೀ ಎನ್.ಎಸ್. ರಾವ್ ಅವರು ನಡೆಸಿದರೆ, ಧ್ವನಿಸುರುಳಿಯ ಬಿಡುಗಡೆಯನ್ನು ಬೆಂಗಳೂರಿನ ಶ್ರೀ ಪಿ. ದಯಾನಂದ ಪೈಯವರು ನಡೆಸಿದರು. ವಿಚಾರ ಸಂಕಿರಣ ಸಮಿತಿಯ ಸಂಚಾಲಕರಾಗಿದ್ದವರು ಶ್ರೀ ಬಿ.ವಿ. ಬಾಳಿಗಾ (ಕೊಂಕಣಿ ಸಾಹಿತ್ಯ ಅಕಾಡೆಮಿಯ ನೂತನ ಅಧ್ಯಕ್ಷರು). ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗೋವೆಯ ಶಿಕ್ಷಣ ಮಂತ್ರಿ ಹಾಗೂ ನಮಗೆ ತುಂಬಾ ನೆರವು ನೀಡಿದ್ದ ಮಾನ್ಯ ಶ್ರೀ ಲಿಯೋಜಿನೊ ಫೆಲೆರೊ ಉದ್ಘಾಟಿಸಿದರು.

ಡಿಸೆಂಬರ್ ೧೮, ಸೋಮವಾರ ಬೆಳಗ್ಗೆ ವಿಚಾರ ಸಂಕಿರಣ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸಂಜೆ ೬ ಗಂಟೆಗೆ ದೇಶ ವಿದೇಶಗಳ ಪ್ರಾದೇಶಿಕ ಸಮಿತಿಗಳ ಮುಖ್ಯಸ್ಥರಿಗೆ ಸನ್ಮಾನವಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕರ್ನಾಟಕದ ರಾಜ್ಯದ ಮಾಜಿ ಸಚಿವರೂ, ನವಾಯಿತ ಸಮಾಜದ ಮುಖಂಡರೂ ಆಗಿದ್ದ ಮಾನ್ಯ ಶ್ರೀ ಎಸ್.ಎಂ. ಯಾಹ್ಯಾ ಅವರು ಈ ಸನ್ಮಾನವನ್ನು ನಡೆಸಿದರು.

ಇದೇ ರೀತಿ ಆರು ದಿನಗಳ ಕಾಲ ವಿಚಾರ ಸಂಕಿರಣಗಳು ನಡೆದ ಬಳಿಕ ಪ್ರತಿದಿನ ಸಂಜೆ ಶ್ರೀ ಎರಿಕ್ ಒಝೋರಿಯೋರ ಮಾರ್ಗದರ್ಶನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಚೆನ್ನಾಗಿ ನಡೆದವು. ಇದು ಜನರ ಮನಸ್ಸಿಗೆ, ಹೃದಯಕ್ಕೆ ತುಂಬಾ ಹಿಡಿಸಿತು. ಸಮ್ಮೇಳನದಲ್ಲಿ ನೀಡಲಾದ ಅಪ್ಪಟ ಕೊಂಕಣಿ ಊಟ–ಉಪಹಾರ ರುಚಿಕರವಾಗಿ, ಆರೋಗ್ಯಕರವಾಗಿ ಎಲ್ಲರ ಗಮನವನ್ನು ಸೆಳೆಯಿತು. ಪ್ರತಿಯೊಂದೂ ವಿಭಾಗಗಳ ಕಾರ್ಯಕರ್ತರು ನಡೆಸಿದ್ದ ವ್ಯವಸ್ಥೆಯ ಕುರಿತು ಮಾಧ್ಯಮದಿಂದ ಅತ್ಯುತ್ತಮ ಪ್ರತಿಕ್ರಿಯೆ ಮತ್ತು ವರದಿಗಳು ಬಂದವು.

ಆದರೆ ನಮಗೆ ಕೊನೆಯ ಎರಡು ದಿನಗಳು ತುಂಬಾ ತಲೆನೋವನ್ನುಂಟು ಮಾಡಿದ್ದವು. ಮಂಗಳೂರು ರಿಫೈನರಿ

ಪೆಟ್ರೋಲಿಯಂ ಲಿ. ಸಂಸ್ಥೆಯವರು ಪೈಪ್ ಲೈನ್ ಹಾಕುವ ವಿಚಾರವಾಗಿ ಮೊಗವೀರರು ವಿರೋಧವನ್ನು ವ್ಯಕ್ತಪಡಿಸಿ ಮಂಗಳೂರು ಬಂದ್ ಘೋಷಿಸಿದ್ದರು. ಇದರಿಂದ ಜನರಿಗೆ ಸಮ್ಮೇಳನಕ್ಕೆ ಬಂದು ಹೋಗಲು ತುಂಬ ತೊಂದರೆಗಳಾದವು. ಆದರೂ ಈ ಸಂದರ್ಭವನ್ನು ನಮ್ಮ "ಸಂಕಷ್ಟ ನಿರ್ವಹಣಾ ಸಮಿತಿ"ಯು ತುಂಬಾ ಜಾಣತನದಿಂದ ನಿಭಾಯಿಸಿ ಪರಿಹರಿಸಿಕೊಂಡಿತು. ಆ ಎರಡು ದಿನಗಳಲ್ಲಿ ಹಗಲು ನಡೆಯಲಿದ್ದ ವಿಚಾರ ಸಂಕಿರಣ ಮತ್ತು ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಊರ್ವಾ ಕೆನರಾ ಪ್ರೌಢಶಾಲೆಯಲ್ಲಿ ನಡೆಸಲಾಯಿತು.

ಕೊನೆಯ ದಿನ, ಡಿಸೆಂಬರ್ ೨೭ರಂದು ನಿರ್ಣಯಗಳ ಕೈಗೊಳ್ಳುವಿಕೆ, ಚರ್ಚೆಗಳು ನಡೆಯಲಿದ್ದವು. ಅದರಲ್ಲಿ ನಾನು ಮಂಡಿಸಿದ "ವಿಶ್ವದಾದ್ಯಂತ ಹರಡಿಕೊಂಡಿರುವ ಕೊಂಕಣಿ ಜನಸಮುದಾಯದ, ಕೊಂಕಣಿ ಸಾಹಿತ್ಯ, ಸಂಸ್ಕೃತಿ ಮತ್ತು ಜನಪದದ ಪರಿಪೂರ್ಣ ಬೆಳವಣಿಗೆಗಾಗಿ ಮಂಗಳೂರಿನಲ್ಲಿ ವಿಶ್ವ ಕೊಂಕಣಿ ಕೇಂದ್ರ ಸ್ಥಾಪನೆಯಾಗಬೇಕು" ಎಂಬ ಠರಾವು ಸರ್ವಾನುಮತದಿಂದ ಅಂಗೀಕಾರವಾಯಿತು.

"ಕೊಂಕಣಿ ಭಾಷೆಗೆ ಲಿಪಿ ಯಾವುದು?" ಈ ಕುರಿತು ತುಂಬಾ ಅಭಿಪ್ರಾಯಗಳು ವ್ಯಕ್ತಗೊಂಡವು. ಈಗ ವಿವಿಧ ರಾಜ್ಯಗಳಲ್ಲಿ ಕೊಂಕಣಿಗೆ ವಿವಿಧ ಲಿಪಿಗಳು ಬಳಕೆಯಾಗುವುದರಿಂದ, ಇನ್ನು ೧೦-೧೫ ವರ್ಷಗಳ ಬಳಿಕ ಮಾಧ್ಯಮ ಲಿಪಿಯಾಗಿ ದೇವನಾಗರಿ ಬಳಕೆಯಾಗಬೇಕು. ಇದರಿಂದ ದೇಶದ ನಾಲ್ಕೂ ರಾಜ್ಯಗಳಲ್ಲಿರುವ (ಮಹಾರಾಷ್ಟ್ರ, ಗೋವ, ಕೇರಳ ಮತ್ತು ಕರ್ನಾಟಕ) ಮತ್ತು ಹೊರರಾಜ್ಯಗಳಲ್ಲಿರುವವರು ರಚಿಸಿದ ಕೊಂಕಣಿ ಸಾಹಿತ್ಯವನ್ನು ಎಲ್ಲರೂ ಓದಲು, ಆಸ್ವಾದಿಸಲು ಮತ್ತು ಸಂಶೋಧನೆ ನಡೆಸಲು ಸುಲಭವಾಗುವುದು ಎಂಬ ನಿರ್ಣಯವಾಯಿತು.

ಸಂಜೆಯ ಸಮಾರೋಪ ಸಮಾರಂಭವು ಅತೀ ಉತ್ತಮ ಹಾಗೂ ಮನೋರಂಜನಕಾರಿಯಾಗಿ ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ಧರ್ಮಪ್ರಾಂತ್ಯದ ಗೌರವಾನ್ವಿತ ಬಿಷಪರಾದ ಡಾ. ಬಾಜಿಲ್ ಸಾಲ್ವಡೋರ್ ಡಿಸೋಜಾ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದವರು ಮಣಿಪಾಲ ವಿಶ್ವವಿದ್ಯಾಲಯದ ಮಾನ್ಯ ಉಪಕುಲಪತಿಗಳಾದ ಡಾ. ಬಿ.ಎಂ. ಹೆಗ್ಡೆ ಮತ್ತು ಕೇಂದ್ರ ಸಚಿವರಾದ ಶ್ರೀ ಆಸ್ಕರ ಫೆರ್ನಾಂಡಿಸ್, ಈ ಸಮಾರಂಭದಲ್ಲಿ "ವಿಶ್ವ ಕೊಂಕಣಿ ಸಾಹಿತ್ಯರತ್ನ" ಬಿರುದು ಕೊಂಕಣಿ ಭಾಷೆಯ ಮಹಾನ ಸಾಹಿತಿ ಶ್ರೀ ರವೀಂದ್ರ ಕೆಳೇಕರ್ ಅವರಿಗೆ, "ವಿಶ್ವ ಕೊಂಕಣಿ ಕಲಾರತ್ನ" ಬಿರುದು ಮಂಗಳೂರಿನ ಶ್ರೀ ಎರಿಕ್ ಒಝೊರಿಯೋ ಅವರಿಗೆ(ವಿಶ್ವ ಕೊಂಕಣಿ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕಾರಿ ಸಮಿತಿಯ ಸಂಚಾಲಕರು), "ವಿಶ್ವ ಕೊಂಕಣಿ ಲೋಕವೇದ ರತ್ನ" ಬಿರುದು ಬೆಂಗಳೂರಿನ ಕೀರ್ತನಕೇಸರಿ ಶ್ರೀ ಭದ್ರಗಿರಿ ಅಚ್ಯುತದಾಸಜೀ ಅವರಿಗೆ ಸಂದಿತು. ಇದೇ ರೀತಿ "ವಿಶ್ವ ಕೊಂಕಣಿ ಸಮಾಜ ಸೇವಾರತ್ನ" ಪ್ರಶಸ್ತಿಯನ್ನು ಮಣಿಪಾಲದ "ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನ"ಕ್ಕೆ, "ವಿಶ್ವ ಕೊಂಕಣಿ ಸಂಘಟನಾ ರತ್ನ" ಪ್ರಶಸ್ತಿಯನ್ನು "ಗೋವಾ ಕೊಂಕಣಿ ಭಾಷಾ ಮಂಡಳ"ಕ್ಕೆ ನೀಡಲಾಯಿತು. ಇದಲ್ಲದೆ ಕೊಂಕಣಿ ಭಾಷೆಯ ಪ್ರಸಿದ್ಧ ೧೫ ವ್ಯಕ್ತಿಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಸನ್ಮಾನ ನೀಡಿ ಗೌರವಿಸಲಾಗಿತ್ತು.

ನನ್ನ ತಿಳುವಳಿಕೆಗೆ ಬಾರದೆ ವ್ಯವಸ್ಥಾಪಕ ಸಮಿತಿಯವರು ನನ್ನನ್ನು "ವಿಶ್ವ ಕೊಂಕಣಿ ಸರದಾರ" ಬಿರುದು ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಮಾರಂಭದಲ್ಲಿ ನೆರೆದ ೧೦-೧೫ ಸಾವಿರ ಜನರು ಎದ್ದು ನಿಂತು ನನಗೆ ಜೈಕಾರ ಹಾಕಿದ್ದು, ನನ್ನ ಮಟ್ಟಿಗೆ ನಿಜವಾಗಿಯೂ ಅಭಿಮಾನದ ವಿಷಯವಾಗಿತ್ತು.

ಸಮಾರಂಭ ಮುಕ್ತಾಯವಾದ ಬಳಿಕ ಶ್ರೀ ಲೂಯಿ ಪಿಂಟೋರ ನೇತೃತ್ವದಲ್ಲಿ ಪಟಾಕಿ, ಗರ್ನಾಲು, ಆಕಾಶಬಾಣ ಸಿಡಿಸುವ ಪ್ರದರ್ಶನವಿತ್ತು. ಆಗಸವಿಡೀ ವರ್ಣರಂಜಿತವಾಗಿ ಹೊಳೆದು, ಜನರಿಗೆ ಅದು ಆಕರ್ಷಣೀಯವಾಗಿ ಪರಿಣಮಿಸಿ ಆನಂದವನ್ನು ಉಂಟು ಮಾಡಿತು.

ನಾನು ಕಾರ್ಯಕ್ರಮ ಮುಗಿಸಿ ವೇದಿಕೆಯಿಂದ ಕೆಳಗಿಳಿದಾಗ ಅನೇಕ ಮಂದಿ ನನ್ನನ್ನು ತಬ್ಬಿ ಹಿಡಿದು ಪ್ರೀತಿಯಿಂದ ಕೈಕುಲುಕಿ, ಅವರ ಪ್ರಶಂಸೆ, ಪ್ರೀತಿ ಮತ್ತು ವಿಶ್ವಾಸಗಳನ್ನು ವ್ಯಕ್ತಪಡಿಸಿದ್ದರು. ಡಾ. ರಾಮದಾಸ್ ಎಂ. ಪೈ ಅವರು ಮುಂದಿನ ವಿಶ್ವ ಕೊಂಕಣಿ ಕೇಂದ್ರ ಯೋಜನೆಗೆ ಅವರ ಸಂಪೂರ್ಣ ಬೆಂಬಲವಿದೆ ಎಂದು ಆಶ್ವಾಸನೆ ನೀಡಿದರು.

ಇವೆಲ್ಲದರಿಂದ ನನಗೆ ಕಳೆದ ಎರಡು ವರ್ಷಗಳಲ್ಲಿ ನಡೆಸಿದ ಅಪಾರ ಶ್ರಮಕ್ಕೆ ಫಲ ದೊರೆತ ಅನುಭವವಾಯಿತು. ಬೇರೆ ಬೇರೆ ಊರುಗಳ ಪ್ರತಿನಿಧಿಗಳು ನನ್ನ ಜೊತೆ ನಿಂತು ಭಾವಚಿತ್ರ ತೆಗೆಯಿಸಿಕೊಂಡರು. ನನ್ನ ಜೀವನದ ಅತೀ ಉನ್ನತ

ಹಂತವನ್ನು ತಲುಪಿದ ಧನ್ಯತಾ ಭಾವನೆ ನನ್ನಲ್ಲಿ ಉಂಟಾಯಿತು.

ಮರುದಿನ, ಡಿಸೆಂಬರ್ ೨೩ರಂದು ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳನ್ನು ಮತ್ತು ಆಮಂತ್ರಿತ ಅತಿಥಿಗಳನ್ನು ಅವರವರ ಊರುಗಳಿಗೆ ತಲುಪಿಸುವ ಕಾರ್ಯವಿತ್ತು. ಜಗತ್ಪ್ರಸಿದ್ಧರಾಗಿದ್ದ ಸಂಸ್ಕೃತ, ಇಂಗ್ಲಿಷ್ ವಿದ್ವಾಂಸರಾದ ಡಾ. ಬಿ.ಆರ್. ಶರ್ಮಾ (ಹೈದರಾಬಾದ್) ಅವರು ೪-೫ ದಿನಗಳ ಕಾಲ ಮಂಗಳೂರಿನಲ್ಲಿರುವ ಅಪೇಕ್ಷೆ ವ್ಯಕ್ತಪಡಿಸಿದರು. ಅವರಿಗೆ ಧರ್ಮಸ್ಥಳ, ಬಂಟವಾಳ, ಮಣಿಪಾಲ ಹಾಗೂ ಅವರ ಜನ್ಮಸ್ಥಳ ಕಾಸರಗೋಡಿನ ಬಳಿ ಇರುವ ನೀಲೇಶ್ವರ ಬೆಳ್ಳಿಕೋತ ಊರಿಗೆ ಭೇಟಿ ನೀಡುವ ಬಯಕೆ ಇದ್ದುದರಿಂದ ನಾವು ಅವರಿಗೆ ೪ ದಿನಗಳಿಗೆ ಕಾರು ನೀಡಿ ಪ್ರವಾಸದ ಸೌಲಭ್ಯವನ್ನು ಕಲ್ಪಿಸಿದ್ದೆವು.

ಇನ್ನು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯಕ್ಕಾಗಿ ಜಾಗ ನೋಡುವ ಕೆಲಸವಿತ್ತು. ಕೊಂಕಣಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಂಡ ಸೊಭಾಣ ಸಂಸ್ಥೆ ಮತ್ತು ವಿಶ್ವ ಕೊಂಕಣಿ ಸಮಿತಿ ಜೊತೆಗೂಡಿ ಒಂದೇ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾಪ ಬಂದಿತ್ತು. ಆದರೆ ಅವರಿಗೆ ಮಹಾಕಾಳಿ ಪಡ್ಪಿನಲ್ಲಿ ಶ್ರೀ ಕೆಸ್ತಲಿನೊ ಸಹೋದರರು ಉದಾರವಾಗಿ ಜಾಗವನ್ನು ದಾನವಾಗಿ ನೀಡಿದ್ದರಿಂದ ಮಾಂಡ ಸೋಭಾಣ ಸಂಸ್ಥೆಯವರು ಅವರ "ಕಲಾಂಗಣ"ದ ನಿರ್ಮಾಣವನ್ನು ಪ್ರತ್ಯೇಕವಾಗಿ ನಡೆಸುವುದೆಂಬ ತೀರ್ಮಾನ ಕೈಗೊಂಡರು. ಅದರ ಸಿದ್ಧತೆಯನ್ನು ಅವರ ಸಮಿತಿಯವರು ಮುಂದುವರಿಸಿದರು.

ಮಾಂಡ ಸೋಭಾಣದವರು "ಕಲಾಂಗಣ"ವನ್ನು ಪ್ರತ್ಯೇಕವಾಗಿ ನಿರ್ಮಿಸುವ ತೀರ್ಮಾನ ಕೈಗೊಂಡಿದ್ದರಿಂದ, ನನಗೆ ಅಥವಾ ನಮ್ಮ ವಿಶ್ವ ಕೊಂಕಣಿ ಸಮ್ಮೇಳನದ ಅನ್ಯ ಕಾರಭಾರಿಗಳಿಗೂ, ಕಲಾಂಗಣದ ಸುಂದರ ಕಟ್ಟಡ ತಲೆಯೆತ್ತಿ ನಿಲ್ಲುವ ಕಾರಣಕ್ಕಾಗಿ ನಾವು ಅವರಿಂದ ಪ್ರತ್ಯೇಕವಾಗಿ ಇರುವುದು ಸಾಧ್ಯವಾಗಲಿಲ್ಲ. ಯಾಕೆಂದರೆ, ೧೯೭೨ನೇ ಇಸವಿಯಲ್ಲಿ ಕೊಂಕಣಿ ಜಾಥಾ ಚಳವಳಿಯನ್ನು ಆಯೋಜಿಸಿದಾಗ ಮತ್ತು ಆನಂತರ ಕೊಂಕಣಿ ಅಕಾಡೆಮಿ ಸ್ಥಾಪನೆಯ ಕಾರ್ಯ ಸುಲಲಿತವಾಗಿ ನಡೆಯುವುದರಲ್ಲಿಯೂ ನಾವು ಜೊತೆಗೂಡಿ ಇದ್ದುದರಿಂದ ನಮಗೆ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಯೋಜನೆ ಮತ್ತು ಕಲಾಂಗಣ ಯೋಜನೆಯ ನಡುವೆ ಪ್ರತ್ಯೇಕತೆಯನ್ನು ತೋರುವುದು ಸಾಧ್ಯವಾಗಲಿಲ್ಲ.

ಅದಲ್ಲದೆ, ಅಲ್ಲಿಯವರೆಗೆ, ಅಂದರೆ ಕೊಂಕಣಿ ಜಾಥಾ, ವಿಶ್ವ ಕೊಂಕಣಿ ಸಮ್ಮೇಳನ ಅಥವಾ ಕೊಂಕಣಿ ಅಕಾಡೆಮಿಯನ್ನು ಪ್ರಾರಂಭಿಸುವ ಯಾವುದೇ ಕಾರ್ಯದಲ್ಲಿ ತೊಡಗಿಕೊಳ್ಳದೇ ಬೇರೆಯಾಗಿ ಉಳಿದಿದ್ದವರು, ನಮಗಿಂತಲೂ ಹೆಚ್ಚಾಗಿ ಮಾಂಡ ಸೋಭಾಣ ಕಾರಭಾರಿಗಳ ಬಗ್ಗೆ ಟೀಕೆ, ನಿಂದೆ ನಡೆಸುತ್ತಿದ್ದ ಕೆಲವು ಕೊಂಕಣಿ ಕ್ರೈಸ್ತ ಲೇಖಕರು ಆಮೇಲೆ ಕೆಲವೇ ವಾರಗಳಲ್ಲಿ ನಮ್ಮ ಮೇಲೆಯೂ ಜಾತಿ ವಿಷ ಕಾರತೊಡಗಿದರು. ಅವರಿಗೂ ನಾನು ಅವರವರ ಸ್ಥಾನ ತೋರಿಸಬೇಕಾಗಿದ್ದ ಸಂದರ್ಭವೂ ಬಂದಿತ್ತು. ಕ್ರೈಸ್ತ ಸಮಾಜದಲ್ಲಿ ಉತ್ತಮ ಸ್ಥಾನಮಾನ ಇದ್ದವರು, ವಿಚಾರವಂತರು, ನನ್ನ ಮತ್ತು ನನ್ನ ಸಂಗಾತಿಗಳ ಮೇಲೆ ಬಹಳ ಅಭಿಮಾನ ಮತ್ತು ವಿಶ್ವಾಸ ಇಟ್ಟುಕೊಂಡವರು ಇದ್ದುದರಿಂದ ನಮ್ಮ ಕಾರ್ಯಗಳಿಗೆ ಯಾವ ತೊಂದರೆಗಳೂ ಅಥವಾ ತಡೆಗಳೂ ಉಂಟಾಗಲಿಲ್ಲ.

●●

೧೯. ಕೊಂಕಣಿ ಭಾಷಾ ಮಂಡಳ, ಕರ್ನಾಟಕ(ರಿ) - ೨

ಕೊಂಕಣಿ ಭಾಷಾ ಮಂಡಳದ ವಾರ್ಷಿಕ ಸಭೆ ಡಿಸೆಂಬರ್ ೨೨, ೧೯೯೬ರಲ್ಲಿ ನಡೆದಿತ್ತು. ಇದುವರೆಗೆ ಯಾವುದೇ ಕೊಂಕಣಿ ಕಾರ್ಯಗಳಲ್ಲಿ ಸೇರಿಕೊಂಡಿರದ, ಹಣ ನೀಡದೆ ದೂರವಿದ್ದುಕೊಂಡು ಟೀಕೆ ಮಾತ್ರ ಮಾಡುತ್ತಿದ್ದಂತಹ ಕೆಲವು ಕೊಂಕಣಿ ಲೇಖಕರು ನಮ್ಮ ಗಮನಕ್ಕೆ ಬಾರದೆ ಜಾತಿವಾದದ ಕಾರ್ಡ್ ಉಪಯೋಗಿಸಿ ನಾವು ಬೆಂಬಲ ನೀಡಿದ್ದ ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯಕರ್ತರನ್ನು ಸೋಲಿಸಿದರು. ಅವರಲ್ಲಿ ಹಿರಿಯರಾಗಿದ್ದು ಕೊಂಕಣಿ ಭಾಷೆ, ಸಾಹಿತ್ಯದ ಕಾರ್ಯ ನಡೆಸಿ ಪಂಚ್ಕಾದಾಯಿ ಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದ ಮತ್ತು ವಿಶ್ವ ಕೊಂಕಣಿ ಸಮ್ಮೇಳನದ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿಕೊಟ್ಟಂತಹ ಕೊಂಕಣಿ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಬಿ.ವಿ. ಬಾಳಿಗ ಅವರನ್ನೂ ಜಾತಿಕಾರ್ಡ್ ಉಪಯೋಗಿಸಿ ಸೋಲಿಸಿದರು. ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯಕರ್ತರಾಗಿದ್ದ ಶ್ರೀ ಲೂಯಿ ಪಿಂಟೊ, ವೆಂಕಟೇಶ ಬಾಳಿಗ ಅವರನ್ನೂ ಸೋಲಿಸಿದರು.

ಪತ್ರಿಕೆಗಳಿಗೆ ವಾರ್ಷಿಕ ವರದಿಯನ್ನು ನೀಡಿದಾಗ 'ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ಸೋತ ಸದಸ್ಯರಲ್ಲಿ ಕೊಂಕಣಿ ಅಕಾಡೆಮಿ ಅಧ್ಯಕ್ಷರಾದ ಶ್ರೀ ಬಿ.ವಿ. ಬಾಳಿಗ ಅವರೂ ಒಬ್ಬರು' ಎನ್ನುವ ವರದಿ ನೀಡಿ ಅವಮಾನ ಮಾಡಿದರು. ಇಂತಹ ಒಂದು ವಿಡಂಬನೆಯನ್ನು ನಾನು ಇದುವರೆಗೆ ನೋಡಿದ್ದೇ ಇಲ್ಲ. ಕೊಂಕಣಿ ಜಾಥಾ, ಆಮೇಲೆ ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯಗಳಲ್ಲಿ ದೂರವಾಗಿ ಇರಬಹುದು, ಹಣ ನೀಡುವುದರಲ್ಲಿಯೂ ಇರಬಹುದು, ಯಾವುದಕ್ಕೂ ಸೇರದೆ ದೂರ ನಿಂತ ಈ ಮಹಾಶಯರು ಈಗ ಕೊಂಕಣಿ ಭಾಷಾ ಮಂಡಳಕ್ಕೆ ದೊರೆತ ಕೀರ್ತಿ ಮತ್ತು ಒಟ್ಟು ಸೇರಿದ ಹಣದ ಬಲದಿಂದ, ತಾವು ಮೆರೆಯಬಹುದೆಂಬ ನೀಚ ದೃಷ್ಟಿಯಿಂದ ಕೊಂಕಣಿ ಭಾಷಾ ಮಂಡಳವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಏಕೈಕ ಉದ್ದೇಶದಿಂದ ಜಾತೀವಾದದ ಅವರ "ಕ್ರಿಶ್ಚಿಯನ್ ಕಾರ್ಡ್"ನ್ನು ಉಪಯೋಗಿಸಲು ಪ್ರಯತ್ನ ನಡೆಸಿದ್ದರು. ಪ್ರತಿಭಾವಂತ ಹಾಗೂ ಜಾತ್ಯಾತೀತ ಕ್ರಿಶ್ಚಿಯನ್ ಹಿರಿಯರು ಇವರ (ಜಾತಿವಾದಿಗಳ) ಖಂಡನೆ ಮಾಡಿದ್ದು ಒಂದು ಉತ್ತಮ ವಿಚಾರ.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಧ್ಯೇಯ ವಾಕ್ಯವೇ "ಭಾಷೆಯ ಮೂಲಕ ಭಾವೈಕ್ಯತೆ" ಎಂಬುದಾಗಿತ್ತು. ಆ ಧ್ಯೇಯವನ್ನು ಸಾರ್ಥಕಗೊಳಿಸಲು "ವಿಶ್ವ ಕೊಂಕಣಿ ಕೇಂದ್ರ" ಎಂಬ ಸಂಸ್ಥೆಯನ್ನು ಸ್ಥಾಪಿಸಲು ನಾವು ಯೋಜನೆಯನ್ನು ಹಮ್ಮಿಕೊಂಡಿದ್ದೆವು. ಆ ಸಂಸ್ಥೆಯ ಮೂಲಕ ಜಗತ್ತಿನಲ್ಲಿರುವ ಬೇರೆ ಬೇರೆ ಜಾತಿ, ಮತ, ಪಂಥ, ವಿವಿಧ ಭಾಷಾ ಶೈಲಿಯ ಕೊಂಕಣಿ ಜನರನ್ನು ಒಟ್ಟಿಗೆ ಸೇರಿಸಲು ಕಾರ್ಯ ನಡೆಸಬೇಕು ಎಂದು ವಿಶ್ವ ಕೊಂಕಣಿ ಕಾರ್ಯಕರ್ತರು, ಮುಖಂಡರು ಆಲೋಚಿಸಿದ್ದರು. ಆದರೆ ನಮ್ಮ ಈ ತತ್ವ ಮತ್ತು ಆದರ್ಶಕ್ಕೆ ಮೂಲಸ್ಥಾನದಲ್ಲಿಯೇ ಜಾತಿವಾದದ ಕೊಡಲಿಯೇಟು ಬಿದ್ದದ್ದು ಕಂಡುಬಂದದ್ದರಿಂದ ನಾನು "ವಿಶ್ವ ಕೊಂಕಣಿ ಸಂಘಟನೆ"ಯ ಇನ್ನೊಂದು ಸಂಸ್ಥೆಯನ್ನು ಪ್ರತ್ಯೇಕವಾಗಿ ಸ್ಥಾಪಿಸುವ ಕಾರ್ಯದಲ್ಲಿ ಮುಂದುವರಿಯುವ ಪ್ರಯತ್ನ ನಡೆಸಲಿಲ್ಲ.

ಆದರೂ, ನಾವು ಕೊಂಕಣಿ ಭಾಸ್ ಆನಿ ಸಂಸ್ಕೃತಿ ಪ್ರತಿಷ್ಠಾನದ ಸಂವಿಧಾನವನ್ನು ನೋಂದಣಿ ಮಾಡಿದ ಕಾರಣಕ್ಕಾಗಿ ಎರಡು ಬಾರಿ ಕೊಂಕಣಿ ಭಾಷಾ ಮಂಡಳದ ಸರ್ವಸದಸ್ಯರ ಸಭೆಯನ್ನು ಸೇರಿಸಿದ್ದೆವು. ಅದರಲ್ಲಿ ಬೇಕಾದ ಸುಧಾರಣೆಯನ್ನು ನಡೆಸಿ ಸಂವಿಧಾನಕ್ಕೆ ಅನುಮೋದನೆ ಪಡೆದು, ನೋಂದಣಿ ಮಾಡುವುದೆಂದು ನಿರ್ಣಯ ಕೈಗೊಳ್ಳಲಾಯಿತು ಮತ್ತು ನೋಂದಣಿಯನ್ನು ನಡೆಸಲಾಯಿತು.

ನಾವು ಜಾತಿ ಮತ ಭೇದವಿಲ್ಲದೆ ಜಗತ್ತಿನಲ್ಲಿರುವ ಎಲ್ಲಾ ಕೊಂಕಣಿ ಜನರನ್ನು ಒಟ್ಟು ಸೇರಿಸುವ ವಿಶ್ವ ಕೊಂಕಣಿ ಸಮ್ಮೇಳನವನ್ನು ಮಂಗಳೂರಿನಲ್ಲಿ ಯಶಸ್ವಿಯಾಗಿ ಸಂಘಟಿಸಿದ ಒಂದೇ ವರ್ಷದಲ್ಲಿ ಮತ್ತೆ ನಾವು ಜಾತಿವಾದಕ್ಕೆ ಬಲಿಪಶುವಾದದ್ದು ಕೊಂಕಣಿ ಸಂಘಟನಾ ಕಾರ್ಯಕ್ಕೆ ದೊಡ್ಡ

ಪೆಟ್ಟಾಗಿ ಪರಿಣಮಿಸಿತು. ಆ ನಾಚಿಕೆಗೇಡಿನ ಪರಿಸ್ಥಿತಿಯಿಂದ ಹೊರಬರಲು ನಮಗೆ, ಅಂದರೆ ವಿಶೇಷವಾಗಿ ನನಗೆ ೩-೪ ವರ್ಷಗಳೇ ಬೇಕಾದವು.

ವಿಶ್ವ ಕೊಂಕಣಿ ಸಮ್ಮೇಳನದ ಖರ್ಚಿನ ಕಡತವನ್ನು ವೈಯಕ್ತಿಕವಾಗಿ ನೋಡಲು ಬರುವಂತೆ ಈ ವಿರೋಧಿಗಳಿಗೆ ಆಹ್ವಾನ ನೀಡಲಾಯಿತು. ಅವರು ಬಂದು ಆಯಾಯ ಸಮಿತಿಯ ಸಂಚಾಲಕರ ಸಮಕ್ಷಮ ಕುಳಿತುಕೊಂಡೇ ಬಿಲ್ಲುಗಳ ವಿಷಯದಲ್ಲಿ ಕೇಳಿದ ಪ್ರಶ್ನೆಗಳಿಗೆ ಅಲ್ಲಿಯೇ ಸಂಚಾಲಕರು ಉತ್ತರ ನೀಡಿದರು. ಹೀಗಾಗಿ ಆನಂತರ ಅವರು ಲೆಕ್ಕಪತ್ರ ಸರಿ ಇದೆ ಎಂದು ದಿನಾಂಕ ೧೮-೫-೧೯೯೭ರಲ್ಲಿ ನಡೆದ ಸಭೆಯ ಮುಂದೆ ಮುಕ್ತವಾಗಿ ಹೇಳುವ ಹಾಗಾಯಿತು. ಅವರು ಸಭೆಯಲ್ಲಿ ಮುಖ ಕಪ್ಪು ಮಾಡಿಕೊಂಡು ಕುಳಿತಿದ್ದರು.

ಹಾಗಿದ್ದರೂ, ಆಗಾಗ ನಂಜು ಕಾರುವ ಅವರ ಬುದ್ಧಿಯಂತೂ ಇದ್ದೇ ಇತ್ತು. ಮುಖ್ಯವಾಗಿ ಮಾಂಡ ಸೋಭಾಣದ ಗುರಿಕಾರರ ಮೇಲೆ ಇದ್ದ ಅವರ ನಂಜು ನನ್ನ ಮೇಲೆ ತೆಗೆಯುವ ಅವರ ಸ್ವಭಾವವನ್ನು ಆ ಮೇಲೆಯೂ ಅವರು ಬಹಿರಂಗವಾಗಿ ತೋರಿಸುತ್ತಲೇ ಇದ್ದರು. ಆದರೂ ನ್ಯಾಯ, ನೀತಿ ತಿಳಿದವರು, ಅವರಿಗೆ ಯಾವುದೇ ಬೆಲೆ ನೀಡದೆ, ನನ್ನ ಕಾರ್ಯದ ಕುರಿತು ಮತ್ತು ಜಾತಿವಾದದ ವಿರುದ್ಧ ನನ್ನ ಅಭಿಪ್ರಾಯವನ್ನು ಯಾವಾಗಲೂ ಮಾನ್ಯ ಮಾಡುತ್ತಾ ಇದ್ದಾರೆ.

ನಮ್ಮ ವಿರುದ್ಧ ಸೆಪ್ಟೆಂಬರ್ ೧೨, ೧೯೯೮ರ ಉದಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಓದಿ, ನಮಗೆ ಬೇರೆ ಬೇರೆ ಊರಿನ ಕೊಂಕಣಿ ಮುಖಂಡರ ಮತ್ತು ಕಾರ್ಯಕರ್ತರ ದೂರವಾಣಿ ಕರೆಗಳು ಬರುವುದು ಪ್ರಾರಂಭವಾಯಿತು. ಸೆಪ್ಟೆಂಬರ್ ೧೩ರಂದು ಕೊಂಕಣಿ ಜಾಥಾ ಸಮಯದಲ್ಲಿ ಕೊಂಕಣಿ ಅಕಾಡೆಮಿ ಆಗಬೇಕೆಂದು ಸರಕಾರದ ಮೇಲೆ ಒತ್ತಡ ತಂದು ಚಳವಳಿ ಮಾಡಿದವರು, ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿ ನಮ್ಮೊಂದಿಗೆ ಸೇರಿ ಕೆಲಸ ಮಾಡಿದವರು, ತಮ್ಮ ತಮ್ಮ ಊರುಗಳಲ್ಲಿ ಕೊಂಕಣಿ ಅಕಾಡೆಮಿ ಕಾರ್ಯಕ್ರಮಗಳನ್ನು ನಡೆಸಿ, ಸರಕಾರ ನೀಡಿದ ಅಕಾಡೆಮಿ ಸಾರ್ಥಕವಾಗುವ ಕೆಲಸ ಮಾಡಿದ ಕಾರ್ಯಕರ್ತರು, ಕೊಂಕಣಿ ಸಾಹಿತಿ ಮತ್ತು ಕಲಾವಿದರು ಊರು ಪರವೂರುಗಳಿಂದ ಕೊಂಕಣಿ ಅಕಾಡೆಮಿ ಕಚೇರಿಗೆ ಬಂದಿದ್ದರು. ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷರು ಕೊಂಕಣಿ ಅಕಾಡೆಮಿಯ ವಿರುದ್ಧ ಬಹಿರಂಗವಾಗಿ ವೈಯಕ್ತಿಕ ನಂಜನ್ನು ಕಾರಿದ ವಿಚಾರವಾಗಿ ಬಂದಿದ್ದ ಕೊಂಕಣಿ ಮುಖಂಡರು ಸಿಟ್ಟು ವ್ಯಕ್ತಪಡಿಸಿದರು.

ಇದೇ ರೀತಿ ಬೇರೆ ಬೇರೆ ಕೊಂಕಣಿ ಸಮಾಜದ ಹಿರಿಯರು ಕೂಡ ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷರ ಪತ್ರಿಕಾ ಪ್ರಕಟಣೆಯಿಂದಾಗಿ ಕೊಂಕಣಿ ಭಾಷಾಭಿವೃದ್ಧಿಯ ಕಾರ್ಯಕ್ಕೆ ತಡೆ ಬರಬಹುದು, ಇದರಿಂದಾಗಿ ಕೊಂಕಣಿ ಭಾಷೆ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯಗಳ ಪ್ರಗತಿಗೆ ಅಡಚಣೆ ಉಂಟಾಗಬಹುದು ಎಂದು ಅದಕ್ಕೆ ವಿರೋಧ ವ್ಯಕ್ತಪಡಿಸಿ ಪತ್ರಿಕೆಗೆ ಜಂಟಿ ಹೇಳಿಕೆ ನೀಡಿದರು. ಭಾಷಾ ಮಂಡಳದ ಕಾರ್ಯಕಾರಿ ಸಮಿತಿಯ ಸದಸ್ಯರು ಕೂಡ ಸಮಿತಿಯ ಕಾರಭಾರಿಗಳಲ್ಲಿ ವಿಚಾರಿಸದೆ, ಸಮಿತಿ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸದೆ ಈ ರೀತಿ ಪತ್ರಿಕೆಗೆ ಪ್ರಕಟಣೆ ನೀಡಿದ್ದನ್ನು ಖಂಡಿಸಿದರು. ಇದರಿಂದಾಗಿ ಕೊಂಕಣಿ ಭಾಷಾ ಮಂಡಳದ ಕಾರ್ಯಕಾರಿಣಿ ಸಭೆ ಮುಂದಿನ ೬-೭ ತಿಂಗಳುಗಳಲ್ಲಿ ನಡೆಯಲೇ ಇಲ್ಲ.

ಕೆಲವು ವರ್ಷಗಳ ಕಾಲ ಭಾಷಾ ಮಂಡಳದ ಕಾರ್ಯವೂ ಸ್ಥಗಿತಗೊಂಡಿತ್ತು. ಆಮೇಲೆ ಒಮ್ಮೆ ಫಾ. ಮಾರ್ಕ್ ವಾಲ್ಡರರು ನನ್ನೊಂದಿಗೆ, "ಹೀಗೆ ನಡೆಯುವುದು ಸರಿಯಲ್ಲ. ನೀವು ಶ್ರೀ ಜೆ.ಎಲ್.ಡಿಸೋಜಾ ಅವರೊಂದಿಗೆ ಕೂಡಿ ಭಾಷಾ ಮಂಡಳವನ್ನು ಪುನರ್ಜೀವಗೊಳಿಸಬೇಕು" ಎಂದು ಹೇಳಿದರು. ಅವರ ಈ ಮಾತಿನಿಂದ ಕೊಂಕಣಿ ಭಾಷಾ ಮಂಡಳದ ಕಾರ್ಯವನ್ನು ನಾನು ಮುಂದುವರಿಸುವುದು ಸಾಧ್ಯವಾಯಿತು. ಆಮೇಲೆ ಬೇರೆ ಬೇರೆ ಕಾರ್ಯಕರ್ತರು ಮುಂದೆ ಬಂದು ಈಗ ಭಾಷಾ ಮಂಡಳದಿಂದ ಕೊಂಕಣಿ ಕಾರ್ಯ ನಡೆಯುತ್ತಲೇ ಇದೆ.

ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷರ ಮತ್ತು ಅವರ ೨-೩ ಸಂಗಾತಿಗಳ ಪತ್ರಿಕಾ ಪ್ರಕಟಣೆಯಿಂದಾಗಿ, ಒಂದು ಹೊಸ ವಾತಾವರಣ ಜಾಗೃತವಾಯಿತು. ಕೊಂಕಣಿ ಚಳವಳಿಯು ಜಾತ್ಯಾತೀತ ವಾದದ ನೆಲೆಗಟ್ಟಿನ ಮೇಲೆ ನಿರ್ಮಾಣಗೊಂಡಿರುವಂತಹದು. ಕೊಂಕಣಿ ಜಾಥಾ, ವಿಶ್ವ ಕೊಂಕಣಿ ಸಮ್ಮೇಳನ, ಅನಂತರ ಕೊಂಕಣಿ ಅಕಾಡೆಮಿಯ ಕಾರ್ಯಗಳಿಂದ ಅದು ಇನ್ನಷ್ಟು ಸದೃಢವಾಗತೊಡಗಿತು. ನನ್ನ ಕೊಂಕಣಿ ಅಕಾಡೆಮಿ ಅಧ್ಯಕ್ಷ ಸ್ಥಾನದ ಕಾಲಾವಧಿಯು ಸೆಪ್ಟೆಂಬರ್ ೩೦, ೧೯೯೮ರಂದು ಮುಗಿಯುವುದರಲ್ಲಿತ್ತು. ಮುಂದಿನ ಅವಧಿಗೆ ಅಧ್ಯಕ್ಷನಾಗಿ ನಾನು ಮುಂದುವರಿಯು ವುದಿಲ್ಲವೆಂದು ಹೇಳಿದರೂ, ಕೊಂಕಣಿ ಭಾಷಾ ಮಂಡಳದ

ಅಧ್ಯಕ್ಷರ ವರ್ತನೆಯಿಂದಾಗಿ, ನನ್ನ ಕ್ರೈಸ್ತ ಬಾಂಧವರು, ಅದರಲ್ಲಿ ಮುಖ್ಯವಾಗಿ ಶ್ರೀ ಲೂಯಿ ಪಿಂಟೊ ಮತ್ತು ಆಗ ರಾಕ್ಣೊ ಪತ್ರಿಕೆಯ ಸಂಪಾದಕರಾಗಿದ್ದ ಫಾ. ಸ್ಯಾಮುವೆಲ್ ಸಿಕ್ವೇರ ಅವರು ನಾನೇ ಅಧ್ಯಕ್ಷಪದದಲ್ಲಿ ಮುಂದುವರಿಯಬೇಕೆಂದು ಒತ್ತಾಯ ಮಾಡಿದರಲ್ಲದೆ, ಸರಕಾರಕ್ಕೆ ನನ್ನ ಹೆಸರನ್ನು ಮುಂದಿನ ಅವಧಿಗೆ ಶಿಫಾರಸು ಕೂಡ ಮಾಡಿದರು. ಹೀಗಾಗಿ ನನಗೆ ಮುಂದಿನ ಮೂರು ವರ್ಷಗಳಿಗೆ ಮತ್ತೆ ಕೊಂಕಣಿ ಅಕಾಡೆಮಿ ಅಧ್ಯಕ್ಷಪದ ಸಿಗುವ ಹಾಗಾಯಿತು. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನವೆಂಬರ್ ೧೪, ೧೯೯೮ರಂದು ನನ್ನನ್ನು ಅಧ್ಯಕ್ಷನಾಗಿ (ಮರು)ನೇಮಕ ಮಾಡಿದ ಪತ್ರ ಬಂತು. ಇತರ ಹನ್ನೊಂದು ಮಂದಿ ಸದಸ್ಯರ ನೇಮಕವೂ ಆಯಿತು.

ಕೊಂಕಣಿ ಭಾಷೆಯನ್ನು ಸಂವಿಧಾನದ ೮ನೇ ಅನುಸೂಚಿಯಲ್ಲಿ ಸೇರ್ಪಡೆಗೊಳಿಸುವ ವಿಧೇಯಕವನ್ನು ಕೇಂದ್ರ ಸರಕಾರವು ಲೋಕಸಭೆಯಲ್ಲಿ ಮಂಡಿಸಿ, ಅದು ೧೯೯೨ ನೇ ಇಸವಿ, ಆಗಸ್ಟ್ ೨೦ರಂದು ಸರ್ವಾನು ಮತದಿಂದ ಅನುಮೋದನೆ ಪಡೆದ ಕಾರಣವಾಗಿ, ಕೊಂಕಣಿಯು ರಾಷ್ಟ್ರೀಯ ಭಾಷೆಗಳಲ್ಲಿ ಒಂದಾಗಿ ಪರಿಗಣಿತವಾಗಿತ್ತು. ಹೀಗಾಗಿ ಈ ದಿನವು ಕೊಂಕಣಿ ಭಾಷಿಕರ ಪಾಲಿಗೆ ಮಹಾನ್ ದಿನವಾಗಿದೆ. ಜಗತ್ತಿನಾದ್ಯಂತ ಹಂಚಿ ಹೋಗಿರುವ ಕೊಂಕಣಿಗಳು ಮತ್ತು ಅಖಿಲ ಭಾರತ ಕೊಂಕಣಿ ಪರಿಷತ್ ಆಗಸ್ಟ್ ೨೦ನ್ನು ರಾಷ್ಟ್ರೀಯ ಮಾನ್ಯತಾ ದಿನವೆಂದು ಘೋಷಿಸುವ ನಿರ್ಣಯವನ್ನು ೨೦೦೬ನೇ ಇಸವಿಯಲ್ಲಿ ಕೈಗೊಂಡಿತ್ತು. ಈ ಕಾರಣದಿಂದ ಕೊಂಕಣಿ ಮಾನ್ಯತಾ ದಿನದಂದು ಕೊಂಕಣಿ ಭಾಷಾ ಮಂಡಳವು ಮಂಗಳೂರಿನಲ್ಲಿ ಸುಮಾರು ೨೫ ಶಾಲೆಗಳ, ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ವಿಶೇಷ ಕ್ವಿಜ್ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸುತ್ತದೆ. ನಾವು ಕೊಂಕಣಿ ಪ್ರತಿಷ್ಠಾನದ ವತಿಯಿಂದ ಅವರಿಗೆ ಬೆಂಬಲ ನೀಡುತ್ತೇವೆ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಯುವ ಜನಾಂಗಕ್ಕೆ ಕೊಂಕಣಿ ಭಾಷೆಯ ಕುರಿತು ಹೆಚ್ಚಿನ ಮಾಹಿತಿ, ಅನುಭವ ದೊರೆಯುವುದು ಸಾಧ್ಯವಾಗಿದೆ. ಇದಲ್ಲದೆ ಬೇರೆ ಬೇರೆ ಕೊಂಕಣಿ ಸಂಸ್ಥೆಗಳು ಗೋವೆ, ಮುಂಬೈ, ಕರ್ನಾಟಕದ ಕಾರವಾರ, ಕುಮಟ, ಕುಂದಾಪುರ, ಉಡುಪಿ ಇತ್ಯಾದಿ ಊರುಗಳಲ್ಲಿಯೂ ಕೊಂಕಣಿ ಮಾನ್ಯತಾ ದಿನವನ್ನು ಆಚರಿಸುತ್ತಾ ಬಂದಿವೆ.

●●

೨೦. ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತರ ವಿದ್ಯಾಸಂಸ್ಥೆಗಳ ಸಂಘ

ಸುಮಾರು ನೂರೈವತ್ತು ವರ್ಷಗಳ ಹಿಂದೆಯೇ ಕರ್ನಾಟಕ ರಾಜ್ಯದಲ್ಲಿ, ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೊಂಕಣಿ ಭಾಷಿಕ ಸಮುದಾಯದವರು ತಮ್ಮ ಧಾರ್ಮಿಕ ಸಂಸ್ಥೆಗಳು ಮತ್ತು ಸಾಮಾಜಿಕ ಸಂಸ್ಥೆಗಳ ಮೂಲಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಸೇವೆ ನೀಡಿದ್ದು ಇದೆ. ಆದರೂ ಕರ್ನಾಟಕ ರಾಜ್ಯದಲ್ಲಿ ಸರಕಾರದ ವತಿಯಿಂದ ನಡೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳಿಗೆ ಲಭ್ಯವಿರುವ ಸೌಲಭ್ಯಗಳು ಮತ್ತು ಸವಲತ್ತುಗಳು ಕೊಂಕಣಿ ಸಮುದಾಯದವರ ವಿದ್ಯಾಸಂಸ್ಥೆಗಳಿಗೆ ದೊರೆಯದೆ, ಆಡಳಿತ ವರ್ಗದವರು ಕಷ್ಟ, ನಷ್ಟ ಅನುಭವಿಸುವುದು ಸಾಮಾನ್ಯವಾಗಿತ್ತು. ಈ ಕಾರಣಕ್ಕಾಗಿ, ಸಂಘಟನಾ ರೂಪದಲ್ಲಿ ತಮ್ಮ ಹಕ್ಕನ್ನು ಸರಕಾರದ ಮುಂದೆ ಮಂಡಿಸಿ ಸರಕಾರ ನೀಡುವ ಸೌಲಭ್ಯಗಳನ್ನು ಪಡೆಯುವ ಪ್ರಯತ್ನವಾಗಿ ಮಂಗಳೂರಿನ ಖ್ಯಾತ ಸಮಾಜ ಮುಖಂಡರಾಗಿದ್ದ ಶ್ರೀ ಕುಂದಾಪುರ ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ "ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತರ ವಿದ್ಯಾಸಂಸ್ಥೆಗಳ ಸಂಘ" ಜನ್ಮ ತಾಳಿತು.

ಆ ಮೇಲಿನ ದಿನಗಳಲ್ಲಿ ಈ ಸಂಘವು ಕರ್ನಾಟಕದ, ವಿಶೇಷವಾಗಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿರುವ ವಿದ್ಯಾಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ದೊರೆಯ ಬೇಕಾಗಿರುವ ಸೌಲಭ್ಯ, ಇತ್ಯಾದಿ ವಿಚಾರಗಳಲ್ಲಿ ಕಾರ್ಯ ನಡೆಸುತ್ತಾ ಬಂದಿದೆ. ಸಂಘದ ಅಧ್ಯಕ್ಷರಾಗಿದ್ದ ಶ್ರೀ ವಿಶ್ವನಾಥ ಕಾಮತರ ದೇಹಾಂತ್ಯವಾದ ಬಳಿಕ, ಈಗ ಡಾ. ಮೋಹನ ಪೈ ಅವರು ಸಂಘದ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ.

ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ, ಸಂಘದ ಕಾರ್ಯದರ್ಶಿ ಡಾ. ಕಸ್ತೂರಿ ಮೋಹನ ಪೈಯವರ ಸಹಕಾರದಿಂದ ಮಂಗಳೂರಿನ ಶ್ರೀನಿವಾಸ ಪಾಠಶಾಲೆಯ ಸಭಾಗೃಹದಲ್ಲಿ ಶಾಲೆಯಲ್ಲಿ ರಾಜ್ಯ ಮಟ್ಟದ ಶಾಲಾ ಶಿಕ್ಷಕರಿಗಾಗಿ ಕೊಂಕಣಿ ಕಲಿಸುವ ತರಬೇತಿ ಕಾರ್ಯಾಗಾರವನ್ನು ನಡೆಸಿದ್ದು ಇದೆ. ಇದೇ ರೀತಿ ಕೆನರಾ ಪ್ರೌಢಶಾಲೆಯು ಸಹಕಾರ ಅಥವಾ ಅಕಾಡೆಮಿಯಿಂದ ಆರ್ಥಿಕ ನೆರವು ಪಡೆಯದೆ, ಶಾಲೆಯಲ್ಲಿ ಕೊಂಕಣಿ ಕಲಿಸಲು ಪಠ್ಯಪುಸ್ತಕಗಳನ್ನು ಸ್ವಂತ ಖರ್ಚಿನಲ್ಲಿ ಪ್ರಕಟಿಸಿದ್ದೂ ಇದೆ.

ಶಾಲೆಯಲ್ಲಿ ಕೊಂಕಣಿ ಕಲಿಕೆ ಪ್ರಾರಂಭವಾಗಲು ನಾನು ಸರಕಾರದೊಂದಿಗೆ ಪ್ರಯತ್ನ ನಡೆಸುತ್ತಿದ್ದಾಗ, ಡಾ. ಮೋಹನ್ ಪೈಯವರು ನನ್ನೊಂದಿಗೆ ಬೆಂಗಳೂರಿಗೆ ಬಂದು ಸಹಕಾರ ನೀಡಿದ್ದಾರೆ. ಕೊಂಕಣಿ ಪಠ್ಯಪುಸ್ತಕಗಳು ದೇವನಾಗರಿ ಮತ್ತು ಕನ್ನಡ ಲಿಪಿಯಲ್ಲಿಯೂ ಇರುವ ವಿಚಾರದಲ್ಲಿ ಸರಕಾರದ ಒಪ್ಪಿಗೆ ಪಡೆಯಲು ಡಾ. ಮೋಹನ್ ಪೈಯವರು ಮುಖಂಡತ್ವ ವಹಿಸಿದ್ದರು. ಇದಲ್ಲದೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿರುವ ಶಾಲೆಗಳ ಆಡಳಿತ ವರ್ಗವನ್ನು ಭೇಟಿಯಾಗುವುದು, ಸಭೆ ಕರೆಯುವುದು ಇತ್ಯಾದಿ ಕಾರ್ಯಗಳಲ್ಲಿ ನಾವಿಬ್ಬರೂ ಜೊತೆಗೂಡಿ ಕೆಲಸ ಮಾಡಿದ್ದೇವೆ. ಈಗ ಶಾಲೆಯಲ್ಲಿ ಕೊಂಕಣಿ ಕಲಿಸುವುದಕ್ಕೆ ಸರಕಾರದಿಂದ ಅನುಮೋದನೆ ದೊರೆತಿದೆ.

ಶ್ರೀ ಬಿ.ವಿ. ಬಾಳಿಗಾ (ಪಂಚ್ಕಾದಾಯಿ ಸ್ಥಾಪಕರು)

ಪಂಚ್ಕಾದಾಯಿ ಕೊಂಕಣಿ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿರುವ ಶ್ರೀ ಬಿ.ವಿ. ಬಾಳಿಗ ಅಥವಾ ಬಂಟವಾಳ ವಾಸುದೇವ ಬಾಳಿಗ ಕೊಂಕಣಿ-ಕನ್ನಡ ಲೇಖಕರು, ನಾಟಕಕಾರರು, ಮತ್ತು ಸಂಗೀತಕಾರರು. ಯುವ ವಯಸ್ಸಿನಲ್ಲಿ ವಿ.ಎಸ್. ಕುಡ್ವಾರ "ನವಭಾರತ" ಕನ್ನಡ ದೈನಿಕ ಮತ್ತು "ಸಾರಸ್ವತ" ಕೊಂಕಣಿ ವಾರಪತ್ರಿಕೆಯ ಸಹ ಸಂಪಾದಕರಾಗಿ ಕೆಲಸ ಮಾಡಿದ್ದರಿಂದ, ಅನಂತರ ಅವರು ಸ್ವಂತದ್ದಾಗಿ "ಪಂಚ್ಕಾದಾಯಿ" ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು. ಆಗ ನಾನು ಅವರಿಗೆ ಬಂಟವಾಳ, ಪಾಣೆಮಂಗಳೂರು ಮತ್ತು ಜೋಡುಮಾರ್ಗದಿಂದ ಅನೇಕರನ್ನು ಪತ್ರಿಕೆಗೆ ಚಂದಾದಾರ ರನ್ನಾಗಿ ಮಾಡಿಕೊಟ್ಟಿದ್ದೆ. ಪಂಚ್ಕಾದಾಯಿಯ ವಾರ್ಷಿಕ ದೀಪಾವಳಿ ಸಂಚಿಕೆಗೆ ಜಾಹೀರಾತುಗಳನ್ನೂ ಕೊಡಿಸುತ್ತಿದ್ದೆ.

ಕೊಂಕಣಿಯ ಪ್ರಥಮ ಸಂಸ್ಥೆ ಕೊಂಕಣಿ ಭಾಷಾ ಮಂಡಳ ಮಂಗಳೂರಿನಲ್ಲಿ ಸ್ಥಾಪನೆಯಾಗುವುದರಲ್ಲಿ ಬಾಳಿಗರು ಕೊಂಕಣಿ ಕ್ರೈಸ್ತರು ಮತ್ತು ಸಾರಸ್ವತರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಿದ್ದರು. ೧೯೬೪ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಗೋವೆಯ ಮಾಪುಸಾದಲ್ಲಿ ನಡೆದ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ ಬಿ.ವಿ. ಬಾಳಿಗ ಆಯ್ಕೆಗೊಂಡಿದ್ದರು. ಆಮೇಲೆ ೧೯೬೬ನೇ ಇಸವಿಯಲ್ಲಿ ಮಂಗಳೂರಿನಲ್ಲಿ ನಡೆದ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ವಿಚಾರಗೋಷ್ಠಿ ಸಮಿತಿಯ ಸಂಚಾಲಕರಾಗಿಯೂ ಅವರು ಉತ್ತಮ ಕೆಲಸ ನಿರ್ವಹಿಸಿದ್ದಾರೆ.

೧೯೯೪ರಲ್ಲಿ ರಾಜ್ಯ ಸರಕಾರವು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪದಾಧಿಕಾರಿಗಳ ಪಟ್ಟಿಯನ್ನು ಪ್ರಕಟಿಸಿದಾಗ ಶ್ರೀ ಬಿ.ವಿ. ಬಾಳಿಗರು ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಆದರೆ ಆಗ ತನಗೆ ಆ ಸ್ಥಾನ ಬೇಡವೆಂದು ಶ್ರೀಯುತರು ಹೇಳಿದ್ದರು. ಆದರೆ ನಾನು ಅವರ ಹಿರಿತನಕ್ಕೆ ಗೌರವ ನೀಡಿ ಅವರ ಹೆಸರನ್ನು ಸೂಚಿಸಿದ್ದೆ. ಒಂದೂವರೆ ವರ್ಷಗಳ ಬಳಿಕ ವಯಸ್ಸಿನ ಕಾರಣವಾಗಿ ಅವರು ದೈಹಿಕವಾಗಿ ನಿಶ್ಯಕ್ತರಾಗಿದ್ದರಿಂದ, ತನಗೆ ಅಕಾಡೆಮಿಯ ಅಧ್ಯಕ್ಷಸ್ಥಾನ ಬೇಡವೆಂದು ನಮ್ಮ ಬಳಿ ಹೇಳಿದ್ದರು. ಹೀಗಾಗಿ ಅವರ ಸ್ಥಾನದಲ್ಲಿ ನಾನು ಅಕಾಡೆಮಿ ಅಧ್ಯಕ್ಷನಾಗಿ ಆಯ್ಕೆಯಾದೆ.

ಶ್ರೀ ಬಾಳಿಗರು ಕೊಂಕಣಿ ಭಾಷೆಯಲ್ಲಿ ಅನೇಕ ಕವಿತೆಗಳನ್ನು ಬರೆದಿದ್ದಾರೆ, ನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾರೆ. ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ್ದ ಅವರು "ತಪಸ್ವಿನಿ" ಚಲನಚಿತ್ರದಲ್ಲಿಯೂ ಕಾಣಿಸಿಕೊಂಡಿದ್ದಾರೆ. ಭಗವದ್ಗೀತೆಯನ್ನು ಕೊಂಕಣಿಗೆ ಅನುವಾದಿಸಿ ಸ್ವತಃ ಪ್ರಕಟಿಸಿದ್ದಾರೆ.

ಪಂಚ್ಕಾದಾಯಿ ಪತ್ರಿಕೆಯ ಬೆಳ್ಳಿಹಬ್ಬದ ಸಂದರ್ಭದಲ್ಲಿ ನಾವು ಶ್ರೀ ಕೆ.ಕೆ. ಪೈ ಅವರ ಆದೇಶದಂತೆ ಮಂಗಳೂರಿನ ಸಿ.ವಿ.ನಾಯಕ್ ಸಭಾಂಗಣದಲ್ಲಿ ದೊಡ್ಡ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ಆಮೇಲೆ ಬಾಳಿಗರು ಇಳಿ ವಯಸ್ಸಿನ ಕಾರಣದಿಂದಾಗಿ ಪಂಚ್ಕಾದಾಯಿ ಮಾಸಿಕ ಪತ್ರಿಕೆಯನ್ನು ಮಣಿಪಾಲದ ಕೊಂಕಣಿ ಭಾಷೋದ್ಧಾರ ಟ್ರಸ್ಟ್‌ಗೆ ಹಸ್ತಾಂತರಿಸಿದರು.

ಅವರ ಮರಣ ೨೦೦೫ನೇ ಇಸವಿ, ಡಿಸೆಂಬರ್ ೧೭ರಂದು ಸಂಭವಿಸಿತು. ಅವರ ಅಂತಿಮ ಯಾತ್ರೆಯಲ್ಲಿ ನಾನು ಮತ್ತು ಅನೇಕ ಕೊಂಕಣಿ ಕಾರ್ಯಕರ್ತರು ಭಾಗವಹಿಸಿದ್ದೆವು. ಕೊಂಕಣಿ ಭಾಷಾ ಮಂಡಳದಲ್ಲಿ ಅವರ ಮರಣದ ಶೋಕಾಚರಣೆ ನಡೆಸಿದ್ದೆವು. ಕೊಂಕಣಿ ಅಕಾಡೆಮಿ, ಕೊಂಕಣಿ ಅಲ್ಪಸಂಖ್ಯಾತರ ಸಂಸ್ಥೆ ಮತ್ತು ಇತರ ಸಂಸ್ಥೆಗಳು ಕೂಡ ಶೋಕಸಭೆಯನ್ನು ನಡೆಸಿದ್ದವು.

ಶ್ರೀ ಯು. ಲಕ್ಷ್ಮಣ

ಬಂಟವಾಳ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಯು. ಲಕ್ಷ್ಮಣ ಅವರಿಗೆ ನನ್ನ ಮೇಲೆ, ನನ್ನ ಕುಟುಂಬದ ಮೇಲೆ ತುಂಬಾ ಅಭಿಮಾನ ಮತ್ತು ವಿಶ್ವಾಸವಿತ್ತು. ಅವರು ನನ್ನ ಕಷ್ಟ ಕಾಲದಲ್ಲಿ ಒದಗಿ ಬರುತ್ತಿದ್ದ ವ್ಯಕ್ತಿಯಾಗಿದ್ದರು. ನನ್ನ ಚಿಕ್ಕ ಮಗ ಚಿ. ದಿನೇಶನ ಕಾಲೇಜು ಶಿಕ್ಷಣ ಮುಗಿದ ಕೂಡಲೇ ಅವರು ನಮ್ಮ ತುಂಬೆಯ ಮನೆಗೆ ಬಂದು ಚಿ. ದಿನೇಶನನ್ನು ಜೀವ ವಿಮಾ ನಿಗಮ ಪ್ರತಿನಿಧಿಯಾಗುವಂತೆ ಆಗ್ರಹಪಡಿಸಿದ್ದರು. ಹೀಗಾಗಿ ದಿನೇಶನಿಗೆ ಜೀವವಿಮಾ ಪ್ರತಿನಿಧಿಯಾಗಿ ಉದ್ಯೋಗ ದೊರೆತಿತ್ತು. ಶ್ರೀ ಯು. ಲಕ್ಷ್ಮಣರು ತುಂಬಾ ಶ್ರಮಪಟ್ಟು ಮಾರ್ಗದರ್ಶನ ನೀಡಿದ್ದರಿಂದ ದಿನೇಶನ ಜೀವವಿಮಾ ವ್ಯವಹಾರ ವೃದ್ಧಿಗೊಂಡಿತ್ತು. ಅವನಿಗೆ ಮೊದಲ ೮ ತಿಂಗಳೊಳಗೆ ೯೬ ಲಕ್ಷ ರೂ ವ್ಯವಹಾರವಾಗಿತ್ತು. ಇದರಲ್ಲಿ ನನ್ನ ಆಪ್ತಮಿತ್ರರಾದ ಶ್ರೀ ಬಿ. ಅಹಮದ್ ಹಾಜೀ ಮೊಹಿಯುದ್ದೀನರು ನನ್ನ ಮೇಲಿನ ಅಭಿಮಾನದಿಂದ ಅವರ ಮೂವರು ಗಂಡುಮಕ್ಕಳ ಹೆಸರಿನಲ್ಲಿ ಚಿ. ದಿನೇಶನಿಗೆ ೧೦ ಲಕ್ಷ ರೂ.ಗಳ ೩ ಪಾಲಿಸಿಗಳನ್ನು (ಒಟ್ಟು ೩೦ ಲಕ್ಷ ರೂ ಮೌಲ್ಯದ ಪಾಲಿಸಿಗಳು) ನೀಡಿದ್ದರು. ಅನಂತರ ನಾವು ಮುಂಬೈಗೆ ಹೋದಾಗ, ಅಲ್ಲಿ ನನ್ನ ಭಾವ ಶ್ರೀ ಎ.ಎಂ. ಕಾಮತರ ಮಕ್ಕಳು ೩೫ ಲಕ್ಷ ರೂ ಮೊತ್ತದ ಪಾಲಿಸಿ ನೀಡಿದ್ದರು ಊರಿನಲ್ಲಿ ಶ್ರೀ ವೇದವ್ಯಾಸ ಪ್ರಭು ಮೊದಲಾದ ನನ್ನ ಮಿತ್ರರು ಬಹಳ ನೆರವು ನೀಡಿದ್ದರಿಂದ ೮ ತಿಂಗಳೊಳಗೆ ೯೬ ಲಕ್ಷ ರೂ ಗಳ ಜೀವವಿಮಾ ವ್ಯವಹಾರ ನಡೆದಿತ್ತು. ಆಗ ನಮಗೆ ಸಿಕ್ಕಿದ ಕಮಿಶನ್ ಹಣದಲ್ಲಿ ನಾವು ಬ್ಯಾಂಕಿನಿಂದ ಸಾಲ ಪಡೆಯದೆ ಮಾರುತಿ ಒಮ್ನಿ ಕಾರು ಖರೀದಿಸಿದೆವು. ಅದರ ಮುಂದಿನ ವರ್ಷಗಳಲ್ಲಿಯೂ ಚಿ. ದಿನೇಶನ ಜೀವ ವಿಮಾ ವ್ಯವಹಾರ ಉತ್ತಮ ರೀತಿಯಿಲ್ಲಿ ನಡೆಯಬಹುದಿತ್ತು.

ಆದರೆ ದುರಾದೃಷ್ಟವಶಾತ್ ನಮ್ಮ ಅಳಿಯ ಶ್ರೀ ಪ್ರಭಾಕರ ಕಿಣಿ ಮಂಗಳೂರಿಗೆ ಬಂದು ಅವನ ಏರಕಂಡಿಶನರ್ ವ್ಯಾಪಾರದಲ್ಲಿ ಚಿ. ದಿನೇಶನನ್ನು ಸೇರಿಸಿದ್ದರಿಂದ, ನಮಗೆ ಇತ್ತ ಕಡೆ ಜೀವವಿಮಾ ವ್ಯವಹಾರವನ್ನು ನಡೆಸುವುದು ಸಾಧ್ಯವಾಗಲಿಲ್ಲ, ಅತ್ತ ಕಡೆ ಏರಕಂಡಿಶನರ್ ವ್ಯಾಪಾರವೂ ಸರಿಯಾಗಿ ನಡೆಯದೆ ನಾವು ಕಷ್ಟನಷ್ಟಗಳನ್ನು ಅನುಭವಿಸಬೇಕಾದ ದಿನಗಳು ಎದುರಾದವು. ನನ್ನ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ಮಾರಾಟ ಮಾಡುವ ಸಂದರ್ಭ ಕೂಡ ಒದಗಿ ಬಂತು. ಚಿ. ದಿನೇಶನಿಗೆ ವಿವಾಹವಾದ ಬಳಿಕ ಅವನು ತುಂಬೆ ಬಿಟ್ಟು ದೆಹಲಿಗೆ ಹೋಗಿ ಅವನ ಮಾವನ ಮನೆಯಲ್ಲಿ ಇರಬೇಕಾದ ದಿನಗಳು ಬಂದವು.

ಆ ಬಳಿಕ ಶ್ರೀ ಲಕ್ಷ್ಮಣರು ನನ್ನನ್ನು ಜೀವ ವಿಮಾ ಪ್ರತಿನಿಧಿಯಾಗಿ ನೇಮಕ ಮಾಡಿದರು. ಆದರೆ ನನ್ನ ಕೊಂಕಣಿ ಭಾಷಾ ಕಾರ್ಯಗಳ ಕಾರಣದಿಂದ ನನಗೂ ಜೀವವಿಮಾ ವ್ಯವಹಾರವನ್ನು ಮುಂದುವರಿಸುವುದಕ್ಕೆ ಸಮಯಾವಕಾಶ ದೊರೆಯದೇ ಅದು ನಿಂತು ಹೋಯಿತು.

ನನ್ನ ಕಷ್ಟದ ದಿನಗಳಲ್ಲಿ ನನ್ನಿಂದ ಬಡ್ಡಿ ಪಡೆಯದೆ ಸಾಲ ನೀಡಿ ನನ್ನ ಮಾನವನ್ನು ಕಾಪಾಡಿದ ಶ್ರೀ ಯು. ಲಕ್ಷ್ಮಣರನ್ನು ನಾನು ಎಂದಿಗೂ ಮರೆಯಲಾರೆ. ಅವರ ಪತ್ನಿಯೂ ತುಂಬಾ ಒಳ್ಳೆಯವರು. ಶ್ರೀ ಲಕ್ಷ್ಮಣ ದಂಪತಿಗಳಿಗೆ ಮಕ್ಕಳಿರಲಿಲ್ಲ. ಅವರು ತಮ್ಮ ಇಳಿವಯಸ್ಸಿನಲ್ಲಿ ಒಬ್ಬ ಹೆಣ್ಣುಮಗಳನ್ನು ದತ್ತಕ ತೆಗೆದುಕೊಂಡಿದ್ದರು. ಲಕ್ಷ್ಮಣರ ಪತ್ನಿ ತೀರಿಕೊಂಡ ಬಳಿಕ ಆ ಹೆಣ್ಣುಮಗಳು ಅವರ ತಂಗಿಯ ಮನೆಯಲ್ಲಿದ್ದಳು. ಲಕ್ಷ್ಮಣರು ತೀರಿಕೊಂಡ ಬಳಿಕ ಆಕೆ ಎಲ್ಲಿದ್ದಾಳೆ ಎನ್ನುವ ಸುದ್ದಿ ತಿಳಿದಿಲ್ಲ. ಈ ಕುರಿತು ಅವರ ಶಿಷ್ಯರೆಂದು ಕರೆಯಿಸಿಕೊಳ್ಳುತ್ತಿದ್ದ ಜೀವವಿಮಾ ನಿಗಮದ ಅಧಿಕಾರಿ ಶ್ರೀ ನಾವೂರ ಹರಿಶ್ಚಂದ್ರ ಭಟ್ಟರಿಗೂ ಮಾಹಿತಿ ಇಲ್ಲ. ಶ್ರೀ ಭಟ್ ಅವರು ಕೂಡ ನನಗೆ ತುಂಬಾ ಸಹಾಯ ನೀಡಿದ್ದಾರೆ. ಅದನ್ನು ನಾನು ಮರೆಯುವ ಹಾಗಿಲ್ಲ.

●●

೨೧. ತುಂಬೆ ವಿದ್ಯಾಸಂಸ್ಥೆಗಳು

ನಮ್ಮ ತುಂಬೆ ವಿದ್ಯಾಸಂಸ್ಥೆಯ ದಶಮಾನೋತ್ಸವವು ಡಿಸೆಂಬರ್ ೨೬, ೧೯೯೭ರಂದು ವೈಭವಯುತವಾಗಿ ಜರಗಿತ್ತು. ಈ ಸಮಾರಂಭದಲ್ಲಿ ಧರ್ಮಸ್ಥಳದ ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆ, ರಾಜ್ಯ ಸರಕಾರದ ಸಚಿವರಾಗಿದ್ದ ಶ್ರೀ ಬಿ.ಎ. ಮೊಯಿದ್ದೀನ್, ಕೇರಳ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಅಬ್ದುಲ ರೆಹಮಾನ್, ಶ್ರೀ ಯೆನಪೊಯಾ ಅಬ್ದುಲ ಕುಂಞ್ಞಿ ಮೊದಲಾದವರು ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಹೆಗ್ಗಡೆಯವರಿಗೆ ಸಮರಂಭದ ವ್ಯವಸ್ಥೆ, ಸೇರಿದ ಜನರು ಮತ್ತು ಕಾರ್ಯಕ್ರಮ ತುಂಬಾ ಮೆಚ್ಚುಗೆಯಾಗಿತ್ತು. ಹತ್ತು ವರ್ಷಗಳ ಹಿಂದೆ ತುಂಬೆ ಸುಬ್ಬರಾವ್ ಅವರ ಅಂಗಡಿಯ ಮಹಡಿಯ ಮೇಲೆ ಬರೀ ೮ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿದ್ದ ತುಂಬೆ ಕನ್ನಡ ಮಾಧ್ಯಮ ಪ್ರೌಢಶಾಲೆಯು ಈಗ ೧೨೦೦ ವಿದ್ಯಾರ್ಥಿಗಳು ಕಲಿಯುತ್ತಿರುವ ಇಂಗ್ಲಿಷ್ ಮಾಧ್ಯಮ ಶಾಲೆ, ಪದವಿಪೂರ್ವ ಕಾಲೇಜು ಇತ್ಯಾದಿಗಳಿಂದ ತುಂಬಾ ಬೆಳೆದು ನಿಂತಿದೆ. ಇದರಿಂದ ತುಂಬೆ ಪರಿಸರದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯುವಂತಾಗಿದೆ. ಇದು ವೈಯಕ್ತಿಕವಾಗಿ ನನಗೆ ಅಭಿಮಾನದ ಸಂಗತಿಯಾಗಿದೆ.

ತುಂಬೆಯಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಸ್ತಾವ

ಆ ಕಾಲದಲ್ಲಿಯೇ ಮೊಹಿಯುದ್ದೀನ್ ಎಜ್ಯುಕೇಶನ ಟ್ರಸ್ಟ್ ವತಿಯಿಂದ ತುಂಬೆಯಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವ ಯೋಜನೆಯೊಂದನ್ನು ಶ್ರೀ ಬಿ. ಅಹ್ಮದ ಹಾಜೀ ಮೊಹಿಯುದ್ದೀನ್ ಮತ್ತು ನಾನು ರೂಪಿಸಿದ್ದೆವು. ಈ ಕುರಿತು ನಾನು ಬೆಂಗಳೂರಿಗೆ ಹೋಗಿ ತಾಂತ್ರಿಕ ಶಿಕ್ಷಣ ನಿರ್ದೇಶಕರಾಗಿದ್ದ ಶ್ರೀ ಪಿ.ವಿ. ಭಂಡಾರಿಯವರನ್ನು ಭೇಟಿಯಾಗುತ್ತಿದ್ದೆ. ಶ್ರೀ ಭಂಡಾರಿ ಯವರು ನನಗೆ ಅನೇಕ ಸಲಹೆ, ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನ ನೀಡಿದ್ದರು.

ತಾಂತ್ರಿಕ ಮಹಾವಿದ್ಯಾಲಯದ ಸ್ಥಾಪನೆಗೆ ಅನೇಕ ಸಿದ್ಧತೆಗಳು ಬೇಕಾಗಿದ್ದವು. ಕನಿಷ್ಟ ೪೦ ಎಕರೆ ಜಾಗ, ಸುಮಾರು ೨ ಕೋಟಿ ರೂ ಹಣದ ಅಗತ್ಯವಿತ್ತು. ಶ್ರೀ ಅಹ್ಮದ ಹಾಜಿಯವರ ಬಳಿ ಖರೀದಿಸಿದ ಜಾಗವೇನೋ ಇತ್ತು. ಹಣ ಸಂಗ್ರಹಿಸುವುದೂ ಅವರಿಗೆ ದೊಡ್ಡ ಕಾರ್ಯವೇನೂ ಆಗಿರಲಿಲ್ಲ. ಆದರೆ ಅದಕ್ಕಾಗಿ ಅರ್ಜಿ ತಯಾರಿಸುವುದು, ದೆಹಲಿ, ಬೆಂಗಳೂರಿಗೆ ಹೋಗಿ ಸಚಿವರನ್ನು, ನಿರ್ದೇಶಕರನ್ನು ಮತ್ತು ಅಧಿಕಾರಿಗಳನ್ನು ಭೇಟಿಯಾಗುವುದು ಇತ್ಯಾದಿ ಕಾರ್ಯಗಳನ್ನು ನಾನು ನಡೆಸಬೇಕಾಗಿತ್ತು. ಅದಕ್ಕಾಗಿ ತುಂಬಾ ಮಾಹಿತಿ, ದಾಖಲೆಗಳನ್ನು ಸಂಗ್ರಹಿಸಿ ಯೋಜನೆ ತಯಾರಿಸಿ ಇಡುವ ಕಾರ್ಯವನ್ನು ನಾನು ಮಾಡಿದೆ. ನಾವು ಭಟ್ಕಳ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರ ಸಲಹೆಯನ್ನೂ ಪಡೆದಿದ್ದೆವು.

ಎ.ಐ.ಸಿ.ಟಿ.ಇ. ಪರಿವೀಕ್ಷಣಾ ಗುಂಪಿನವರು ಸ್ಥಳ ವೀಕ್ಷಣೆಗೆ ಹಾಗೂ ಆರ್ಥಿಕ ಸ್ಥಿತಿಗತಿ, ಉಪನ್ಯಾಸಕರು, ತಜ್ಞರ ಸೌಲಭ್ಯಗಳು ಇತ್ಯಾದಿ ಮಾಹಿತಿ ಸಂಗ್ರಹಕ್ಕಾಗಿ ಬಂದಿದ್ದರು. ಅವರಿಗೆ ನಾವು ತಾಂತ್ರಿಕ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ನಾವು ನಡಿಸಿದ ಪೂರ್ವ ತಯಾರಿಯ ಕುರಿತು ತಿಳಿವಳಿಕೆ ನೀಡಿದೆವು. ಅವರು ಎ.ಐ.ಸಿ.ಟಿ.ಇ. ಸಮಿತಿಗೆ ಶಿಫಾರಸು ಮಾಡಿದರು. ಕರ್ನಾಟಕ ರಾಜ್ಯದಿಂದ ಬಂದಿರುವ ೨೮ ಅರ್ಜಿಗಳಲ್ಲಿ ೮ ಸಂಸ್ಥೆಗಳ ಅರ್ಜಿಗಳಿಗೆ ಮಾತ್ರ ಪರವಾನಗಿ ನೀಡುವಂತೆ ಸಮಿತಿಯು ಕರ್ನಾಟಕ ಸರಕಾರಕ್ಕೆ ಶಿಫಾರಸು ಮಾಡಿತ್ತು. ಆ ಎಂಟು ಸಂಸ್ಥೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕೆನರಾ ಪ್ರೌಢಶಾಲಾ ಅಸೋಸಿಯೇಶನ್ ಮತ್ತು ನಮ್ಮ ಬಿ.ಎ. ಗ್ರೂಪ್ ಈ ಎರಡು ಸಂಸ್ಥೆಗಳ ಹೆಸರನ್ನು ಶಿಫಾರಸು ಮಾಡಲಾಗಿತ್ತು.

ಹಾಗಿದ್ದರೂ, ಆಗಿನ ಮುಖ್ಯಮಂತ್ರಿ ಶ್ರೀ ಎಸ್. ಬಂಗಾರಪ್ಪನವರು ಇದ್ದಕ್ಕಿದ್ದಂತೆ ಈ ೮ ಸಂಸ್ಥೆಗಳ ಶಿಫಾರಸನ್ನು ರದ್ದುಪಡಿಸಿ, ತಮ್ಮ ಇಷ್ಟದಂತೆ ೧೨ ಬೇರೆ ಸಂಸ್ಥೆಗಳನ್ನು ಆಯ್ಕೆ ಮಾಡಿದ್ದರು. ಈ ವಿಚಾರ ನ್ಯಾಯಾಲಯಕ್ಕೆ ಹೋಗಿದ್ದರಿಂದ ಮಾನ್ಯ ಬಂಗಾರಪ್ಪನವರು ಆಯ್ಕೆ ಮಾಡಿದ್ದ

ಸಂಸ್ಥೆಗಳ ಇಂಜಿನಿಯರಿಂಗ್ ಕಾಲೇಜುಗಳು ಪ್ರಾರಂಭವಾಗಲಿಲ್ಲ. ಮುಂದೆ ೨೦೦೧ರಲ್ಲಿ ಕೆನರಾ ಪ್ರೌಢಶಾಲಾ ಅಸೋಸಿಯೇಶನ್ ವತಿಯಿಂದ ತುಂಬೆಯ ಹತ್ತಿರವೇ ಬೆಂಜನ ಪದವು ಎಂಬ ಊರಿನಲ್ಲಿ(ಇದು ಬಂಟವಾಳ ತಾಲೂಕಿನಲ್ಲಿದೆ) ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಯಿತು. ಕೆನರಾ ಪ್ರೌಢಶಾಲಾ ಅಸೋಸಿಯೇಶನ್ ಅಲ್ಪಸಂಖ್ಯಾತ(ಕೊಂಕಣಿ) ಭಾಷಾ ಸಂಸ್ಥೆಯಾಗಿದ್ದರಿಂದ ಇಲ್ಲಿ ಕೊಂಕಣಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೋಟಾ ಪ್ರಾಪ್ತವಾಗಿದೆ.

ಅನಂತರ, ೨೦೦೪ರಲ್ಲಿ ಮೊಹಿಯುದ್ದೀನ ವಿದ್ಯಾಸಂಸ್ಥೆಯ ವತಿಯಿಂದ ತುಂಬೆ ಐ.ಟಿ.ಐ. ಡಿಪ್ಲೊಮಾ ಕಾಲೇಜು ಪ್ರಾರಂಭವಾಗಿ ಬಂಟವಾಳ ತಾಲೂಕಿನಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಸೌಲಭ್ಯ ದೊರೆಯಿತು.

೨೨. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ

ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಭಾಷೆ, ಸಂಸ್ಕೃತಿ, ಸಾಹಿತ್ಯ ಮತ್ತು ಲೋಕವೇದಗಳ ಬೆಳವಣಿಗೆಗಾಗಿ ಕೊಂಕಣಿ ಅಕಾಡೆಮಿಯ ಸ್ಥಾಪನೆಯಾಗಬೇಕು ಎಂಬ ಕಾರಣಕ್ಕಾಗಿ ಕೊಂಕಣಿ ಭಾಷಾ ಮಂಡಳದ ಆಶ್ರಯದಲ್ಲಿ "ಕೊಂಕಣಿ ಜಾಥಾ ಚಳವಳಿ"ಯನ್ನು ನಡೆಸಿ ಕರ್ನಾಟಕ ರಾಜ್ಯದ ರಾಜ್ಯಪಾಲರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಬೆಂಗಳೂರಿಗೆ ಹೋಗಿ ಮನವಿ ಪತ್ರ ನೀಡಿದ್ದೆವು. ಅನಂತರ ಈ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಬೆಳವಣಿಗೆಯಾಗಿರಲಿಲ್ಲ. ಶ್ರೀ ದೇವರ ಕೃಪೆ ಎನ್ನುವ ಹಾಗೆ ನಮ್ಮ ಕಾರ್ಕಳದ ಜನಪ್ರತಿನಿಧಿ ಶ್ರೀ ಎಂ. ವೀರಪ್ಪ ಮೊಯಿಲಿ ರಾಜ್ಯದ ಮುಖ್ಯಮಂತ್ರಿಗಳಾದರು ಮತ್ತು ನಾನು ಅದೇ ಸಮಯದಲ್ಲಿ ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನೂ ಆಗಿ ಆಯ್ಕೆಯಾಗಿದ್ದೆ.

ನಾನು, ಶ್ರೀ ಬಿ. ಗಣಪತಿ ಪೈ ಮತ್ತು ಬೆಂಗಳೂರಿನ ಶ್ರೀ ರೊನಾಲ್ಡ್ ಕೊಲಾಸೊ ಅವರ ನೆರವು ಪಡೆದು ಬೆಂಗಳೂರಿನಲ್ಲಿ ಮಾನ್ಯ ಶ್ರೀ ವೀರಪ್ಪ ಮೊಯಿಲಿ ಅವರನ್ನು ಭೇಟಿಯಾಗಿ ನಮ್ಮ ಮನವಿ ಪತ್ರವನ್ನು ಮತ್ತೊಮ್ಮೆ ಕರ್ನಾಟಕ ಸರಕಾರಕ್ಕೆ ತಲುಪಿಸುವ ನಿರ್ಧಾರ ತೆಗೆದುಕೊಂಡೆ. ಡಿಸೆಂಬರ್ ೧೬, ೧೯೯೩ರಂದು ಬೆಳಗ್ಗೆ ಮುಖ್ಯಮಂತ್ರಿಗಳ ಗೃಹ ಕಚೇರಿಯಲ್ಲಿ ಅವರನ್ನು ಭೇಟಿಯಾಗುವ ಕಾರ್ಯಕ್ರಮವನ್ನು ರೂಪಿಸಿದೆ. ಆಮೇಲೆ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೈಸೂರು ಮತ್ತು ಬೆಂಗಳೂರಿನ ಕೊಂಕಣಿ ಭಾಷಿಕ ಧುರೀಣರಿಗೆ ದೂರವಾಣಿ ಕರೆ ಮಾಡಿ, ಪತ್ರ ಬರೆದು ಬೆಂಗಳೂರಿಗೆ ಬರುವಂತೆ ತಿಳಿಸಿದೆ.

ನಮ್ಮೊಂದಿಗೆ ಆಗಿನ ಕರ್ನಾಟಕ ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನೇತಾರ ಶ್ರೀ ಆರ್.ವಿ. ದೇಶಪಾಂಡೆ, ಬಂಟವಾಳ ನಾರಾಯಣ ನಾಯಕ್(ಎಂ.ಎಲ್.ಸಿ.), ಮೊ. ಅಲೆಗ್ಸಾಂಡರ್ ಡಿಸೋಜಾ, ಡಾ. ವಿ.ಜೆ.ಪಿ. ಸಲ್ಡಾನಾ, ಬೆಳಗಾವಿಯ ಶ್ರೀ ವಿ.ವಿ. ಶೆಣೈ, ಬಿ. ಗಣಪತಿ ಪೈ, ರೊನಾಲ್ಡ್ ಕೊಲಾಸೊ, ಕೊಲಿನ್ ಡಿಸಿಲ್ವಾ, ಪಿ. ರಬೀಂದ್ರ ನಾಯಕ್ (ಉಡುಪಿ), ಕುಡ್ವಿ ಜಗದೀಶ ಶೆಣೈ, ಎಂ. ರಘುನಾಥ ಶೇಟ್, ಡಾ. ಕಸ್ತೂರಿ ಮೋಹನ ಪೈ, ಮಧುಸೂಧನ ಡಿ. ಕುಶೆ, ಉಮೇಶ ಶೆಣೈ (ಕಾರ್ಕಳ) ಮೊದಲಾದವರು ಇದ್ದರು. ಮಾನ್ಯ ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪ ಮೊಯಿಲಿಯವರಿಗೆ ನಾನು ನಮ್ಮ ನಿವೇದನ ಪತ್ರವನ್ನು ಓದಿ ಹೇಳಿದೆ. ತಾನು ಖಂಡಿತವಾಗಿಯೂ ಕರ್ನಾಟಕ ಸರಕಾರದ ವತಿಯಿಂದ ಕೊಂಕಣಿ ಅಕಾಡೆಮಿ ನೀಡುತ್ತೇನೆ ಎಂದು ಅವರು ಆಶ್ವಾಸನೆ ನೀಡಿದರು.

ಅದೇ ಸಮಯದಲ್ಲಿ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು, "ಶ್ರೀ ವಾಮನ ಶೆಣೈಯವರೇ, ನಿಮ್ಮ ಕೊಂಕಣಿ ಭಾಷೆಗೆ ಅಕಾಡೆಮಿ ಕೊಟ್ಟರೆ, ತುಳು ಭಾಷೆಗೂ ಅಕಾಡೆಮಿ ಕೊಡುವುದು ಬೇಡವೋ?" ಎಂದು ಕೇಳಿದರು. ಅದಕ್ಕುತ್ತರವಾಗಿ ನಾನು, "ಖಂಡಿತವಾಗಿಯೂ ಕೊಡಬೇಕು. ತುಳು ಭಾಷೆಯೂ ನಮ್ಮ ಭಾಷೆಯೇ" ಎಂದು ಹೇಳಿದೆ. ಅದು ಅವರಿಗೆ ಸಂತೋಷವನ್ನು ತಂದಿತು. ಅನಂತರ ಶ್ರೀ ರೊನಾಲ್ಡ್ ಕೊಲಾಸೊ, ಶ್ರೀ ಆರ್.ವಿ. ದೇಶಪಾಂಡೆ ಅವರಿಂದಲೂ ಹೇಳಿಸಿ ಮುಖ್ಯಮಂತ್ರಿಗಳ ಬೆನ್ನು ಹತ್ತಿದೆ. ಆ ಕಾರಣಕ್ಕಾಗಿ ಶ್ರೀ ಬಿ.ವಿ. ಬಾಳಿಗ, ಶ್ರೀ ಕುಡ್ವಿ ಜಗದೀಶ ಶೆಣೈ ಮತ್ತು ನಾನು ೪–೫ ಬಾರಿ ಬೆಂಗಳೂರಿಗೆ ಹೋಗಬೇಕಾಗಿ ಬಂದಿತ್ತು. ಅದಲ್ಲದೆ ಮುಖ್ಯಮಂತ್ರಿ ಶ್ರೀ ಮೊಯಿಲಿ ದ.ಕ. ಜಿಲ್ಲೆಗೆ ಬಂದಾಗಲೂ ನಾನು ಶ್ರೀ ಪೌಲ ಮೊರಾಸ್ ಮತ್ತು ಲಾರೆನ್ಸ್ ಲೋಬೋ ಅವರನ್ನು ಜೊತೆಗೂಡಿಸಿಕೊಂಡು ಮಂಗಳೂರಿನ ಸರ್ಕ್ಯೂಟ್ ಹೌಸ್, ಕಾರ್ಕಳ ಇತ್ಯಾದಿ ಊರುಗಳಿಗೂ ಹೋಗಿ ಅವರನ್ನು ಭೇಟಿಯಾಗುವುದಿತ್ತು. ಹೀಗಾಗಿ ೧೯೯೪ನೇ ಇಸವಿ ಮಾರ್ಚ್ ತಿಂಗಳಲ್ಲಿ ನಡೆದ ರಾಜ್ಯ ವಿಧಾನಸಭಾ ಬಜೆಟ್ ಅಧಿವೇಶನದಲ್ಲಿ ಶ್ರೀ ಮೊಯಿಲಿಯವರು ಕೊಂಕಣಿ ಭಾಷೆಯ ಬೆಳವಣಿಗೆಗಾಗಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಕರ್ನಾಟಕ

ಸರಕಾರದ ಅಧೀನ ಸಂಸ್ಥೆಯಾಗಿ ರಚಿಸುವ ಘೋಷಣೆ ಮಾಡಿದರು.

ಹೀಗಿರುವಾಗ, ನಮ್ಮ ಕೊಂಕಣಿ ಕಾರ್ಯಗಳಿಗೆ ತುಂಬಾ ಸಹಾಯ, ಸಹಕಾರ ನೀಡುವ ಬೆಂಗಳೂರಿನ ರೊನಾಲ್ಡ್ ಕೊಲಾಸೊ ಅವರು ನನಗೆ ದೂರವಾಣಿ ಕರೆ ಮಾಡಿ, "ಡಾ. ವಿ.ಜೆ.ಪಿ ಸಲ್ಡಾನ ಹಾಗೂ ಬೆಂಗಳೂರಿನ ಶ್ರೀ ಹೆನ್ರಿ ಪಿಂಟೋ ಅವರು ಕೊಂಕಣಿ ಅಕಾಡೆಮಿಗೆ ಸದಸ್ಯರಾಗಿ ನೇಮಕ ಮಾಡಲು ಬೇರೆ ಬೇರೆ ಪಟ್ಟಿಗಳನ್ನು ನೀಡಿದ್ದಾರೆ, ಇದರಿಂದ ತೊಡಕು, ಗೊಂದಲಗಳು ಉಂಟಾಗಬಹುದು ಸಧ್ಯ ಕೊಂಕಣಿ ಅಕಾಡೆಮಿ ಸ್ಥಾಪನೆಯ ಘೋಷಣೆ ಹಿಂದೆ ಸರಿಯಬಹುದು" ಎಂಬ ಮುನ್ಸೂಚನೆಯನ್ನು ನೀಡಿ, ನಾವು ಸರ್ವಸಮ್ಮತ ಪಟ್ಟಿಯನ್ನು ತಯಾರಿಸಿ ಮಾನ್ಯ ಮುಖಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರಿಗೆ ನೀಡಬೇಕೆಂದು ತಿಳಿಸಿದರು. ನಾನು ಇದಕ್ಕೆ ಒಪ್ಪಿಕೊಂಡೆ.

ಕೊಂಕಣಿ ಭಾಷಾ ಮಂಡಳದ ವತಿಯಿಂದ ನಾನು, ಶ್ರೀ ಬಿ.ವಿ. ಬಾಳಿಗಾ ಮತ್ತು ಶ್ರೀ ಎರಿಕ್ ಒಝೇರಿಯೊ ಅವರು ೩೧ ಮಾರ್ಚ್, ೧೯೯೪ರಂದು ಬೆಂಗಳೂರಿಗೆ ತೆರಳಿ ಶ್ರೀ ರೊನಾಲ್ಡ್ ಕೊಲಾಸೊ ಅವರ ಕಚೇರಿಗೆ ಹೋದೆವು. ಅಲ್ಲಿ ಡಾ. ವಿ.ಜೆ.ಪಿ. ಸಲ್ಡಾನ, ಹೆನ್ರಿ ಪಿಂಟೊ, ಎ.ವಿ. ರೇಗೊ, ಕೋಟ ವೈಕುಂಠ ಪೈ, ಮತ್ತು ವಲ್ಲಿ ವಗ್ಗ (ಮೈಸೂರು) ಇದ್ದರು. ಶ್ರೀ ರೊನಾಲ್ಡ್ ಕೊಲಾಸೊ ಅವರು ವಿಷಯವನ್ನು ವಿವರವಾಗಿ ಮಂಡಿಸಿದರು. ಆಮೇಲೆ ನಾನು ಪ್ರಸ್ತುತ ಕೊಂಕಣಿ ಅಕಾಡೆಮಿಯಲ್ಲಿ ಎಲ್ಲ ಕೊಂಕಣಿ ಜಾತಿ ಮತದವರಿಗೆ ಸದಸ್ಯರಾಗಲು ಸಮಾನ ಅವಕಾಶ ಮಾಡಿ ಕೊಡಬೇಕು, ಅದಲ್ಲದೆ ಕುಡುಮಿ, ಖಾರ್ವಿ, ಸಿದ್ಧಿ ಮತ್ತು ನವಾಯತ ಸಹೋದರರಿಗೆ ಒಂದೊಂದು ಪ್ರತಿನಿಧಿತ್ವದ ಅಗತ್ಯವಿರುವುದನ್ನು ತಿಳಿಸಿದೆ. ಅಲ್ಲಿ ನೆರೆದವರು ಅದಕ್ಕೆ ಸಮ್ಮತಿಸಿದರು.

ವೈಯಕ್ತಿಕವಾಗಿ ನನಗೆ ಕೊಂಕಣಿ ಅಕಾಡೆಮಿಯ ಸದಸ್ಯತ್ವ ಬೇಡವೆಂದು ನಾನು ಸಭೆಗೆ ತಿಳಿಸಿದೆ. ಕೊಂಕಣಿಗಾಗಿ ಯಾವಾಗಲೂ ಧನಸಹಾಯ ನೀಡುತ್ತಿದ್ದ ಬೆಂಗಳೂರಿನ ಶ್ರೀ ಎ.ವಿ. ರೇಗೊ (ಈಗ ದಿವಂಗತರು) ಅವರೂ ನನ್ನ ಹಾಗೆ ಅಕಾಡೆಮಿ ಸದಸ್ಯತ್ವ ಬೇಡವೆಂದು ತಿಳಿಸಿದರು. ನಾವೇ ಸ್ವತಃ ಸದಸ್ಯತ್ವ ಬೇಡವೆಂದು ತಿಳಿಸಿದ್ದರಿಂದ, ಉಳಿದವರಿಗೆ ತಮ್ಮ ತಮ್ಮ ಹೆಸರಿಗಾಗಿ ಒತ್ತಾಯ ಮಾಡಲು ಆ ಸಭೆಯಲ್ಲಿ ಸಾಧ್ಯವಾಗಲಿಲ್ಲ. ಹೀಗಾಗಿ ಡಾ. ವಿ.ಜೆ.ಪಿ. ಸಲ್ಡಾನ ಅಧ್ಯಕ್ಷರಾಗಿ, ಮಂಗಳೂರಿನಿಂದ ಹಿರಿಯರೂ ಕವಿ, ಸಾಹಿತಿಗಳೂ ಆಗಿರುವ ಶ್ರೀ ಬಿ.ವಿ. ಬಾಳಿಗ, ಶ್ರೀ ಎರಿಕ್ ಒಝೇರಿಯೊ ಮತ್ತು ಇತರ ೨೦ ಮಂದಿಯ ಹೆಸರು ಸೂಚಿತವಾಯಿತು. ಆ ಪಟ್ಟಿಯನ್ನು ಶ್ರೀ ಕೊಲಾಸೊ ಅವರು ಮಾನ್ಯ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರಿಗೆ ನೀಡುವುದು ಮತ್ತು ಶೀಘ್ರದಲ್ಲಿಯೇ ಕೊಂಕಣಿ ಅಕಾಡೆಮಿಯನ್ನು ಸರಕಾರ ಘೋಷಿಸುವಂತೆ ಒತ್ತಾಯ ಮಾಡುವುದು ಎಂದು ನಿರ್ಧಾರವಾಯಿತು.

ಕರ್ನಾಟಕ ಸರಕಾರವು ಕೊಂಕಣಿ ಅಕಾಡೆಮಿಯನ್ನು ರಚಿಸುವುದಕ್ಕಾಗಿ ಶ್ರೀ ರೊನಾಲ್ಡ್ ಕೊಲಸೊ ಅವರು ತುಂಬಾ ಕಾರ್ಯಗಳನ್ನು ನಡೆಸಿದ್ದಾರೆ. ಅದೇ ರೀತಿ ನಾನು ಕೂಡ ಶ್ರೀ ವೀರಪ್ಪ ಮೊಯ್ಲಿಯವರನ್ನು ಮಂಗಳೂರಿನಲ್ಲಿ, ಕಾರ್ಕಳದಲ್ಲಿ ಮತ್ತು ಬೆಂಗಳೂರಿಗೆ ಹೋಗಿಯೂ ಬೆನ್ನಟ್ಟಿದ್ದರಿಂದ ಕೊಂಕಣಿ ಅಕಾಡೆಮಿ ರಚನೆಯ ಘೋಷಣೆಯನ್ನು ೧೯೯೪ರಲ್ಲಿ ಕರ್ನಾಟಕ ಸರಕಾರ ಮಾಡಿತ್ತು.

ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿಯೂ ನಾನು ಕೊಂಕಣಿ ಅಕಾಡೆಮಿಯ ಕೆಲಸ ಪ್ರಾರಂಭಿಸುವ ಕಡೆಗೆ ಗಮನವನ್ನು ನೀಡಿದ್ದೆ. ಹೀಗಾಗಿ ವಿಶ್ವ ಕೊಂಕಣಿ ಸಮ್ಮೇಳನವಾದ ಎರಡು ತಿಂಗಳಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ದ.ಕ.ಜಿಲ್ಲಾ ಉಪನಿರ್ದೇಶಕರಾದ ಶ್ರೀ ಬಿ.ಜಿ. ನಾಯಕ್ ಇವರು ಕೊಂಕಣಿ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ನೇಮಕಗೊಳ್ಳಲು ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ನಾಗೇಂದ್ರರು ಸಮ್ಮತಿಸಿ, ಶ್ರೀ ಬಿ.ಜಿ. ನಾಯಕ್ ಅವರಿಗೆ ಆದೇಶ ನೀಡಿದ್ದರು. ಅಕಾಡೆಮಿಯ ಕಾರ್ಯವನ್ನು ಪ್ರಾರಂಭಿಸಲು ಕಚೇರಿಯ ಅಗತ್ಯವಿತ್ತು. ವಿಶ್ವ ಕೊಂಕಣಿ ಸಮ್ಮೇಳನದ ಕಚೇರಿ ಇರುವ ಶ್ರೀ ರಘುನಾಥ ಶೇಟರ ನವರತ್ನ ಪ್ಯಾಲೆಸ್ ಹೊಟೇಲಿನ ಜಾಗದಲ್ಲಿಯೇ ಅದನ್ನು ಪ್ರಾರಂಭಿಸಲು ಅವರು ಅನುಮತಿ ನೀಡಿದರು. ಹೀಗಾಗಿ ಶ್ರೀ ಬಿ.ವಿ. ಬಾಳಿಗಾರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಕಚೇರಿ ಕಾರ್ಯ ನಿರ್ವಹಿಸಲು ಪ್ರಾರಂಭವಾಯಿತು. ಅಕಾಡೆಮಿಯ ಪ್ರಥಮ ಅಧ್ಯಕ್ಷರಾಗಿದ್ದ ಡಾ. ವಿ.ಜೆ.ಪಿ. ಸಲ್ಡಾನಾ ಅವರಿಗೆ ಆಡಳಿತದ ಅನುಭವ ಇಲ್ಲದುದರಿಂದ ಕಚೇರಿಯ ಕೆಲಸವನ್ನು ಪ್ರಾರಂಭಿಸುವುದು ಅವರಿಂದ ಸಾಧ್ಯವಾಗಿರಲಿಲ್ಲ. ಅದನ್ನು ನಾನು ನನ್ನ ಸಾರ್ವಜನಿಕ ಸಂಪರ್ಕದ ಅನುಭವದಿಂದ ಸಾಧ್ಯವಾಗಿಸಿದೆ.

ಕೊಂಕಣಿ ಸಾಹಿತ್ಯ ಅಕಾಡೆಮಿಯ ಘೋಷಣೆ ಆಗಿದ್ದರೂ, ಅದಕ್ಕೆ ಆಡಳಿತ ಕಚೇರಿ, ರಿಜಿಸ್ಟ್ರಾರ್ ಮತ್ತು ಸರಕಾರದಿಂದ

ನೀಡಲ್ಪಡುವ ಅನುದಾನ (೧.೫ ಲಕ್ಷ ರೂ)ವನ್ನು ಸರಕಾರ ನೀಡದ್ದರಿಂದ, ಅಧ್ಯಕ್ಷರಾದ ಶ್ರೀ ಬಿ.ವಿ. ಬಾಳಿಗ ಮತ್ತು ನಾನು ಎರಡು ಬಾರಿ ಬೆಂಗಳೂರಿಗೆ ಹೋಗಿ ಶ್ರೀ ಆರ್.ವಿ. ದೇಶಪಾಂಡೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮತ್ತು ನಿರ್ದೇಶಕರಾದ ಮುದ್ದುಕೃಷ್ಣ ಅವರನ್ನು ಭೇಟಿಯಾಗಿದ್ದೆವು. ನಮ್ಮ ಪ್ರಯತ್ನದಿಂದ ತಾತ್ಕಾಲಿಕವಾಗಿ ವಿಶ್ವ ಕೊಂಕಣಿ ಸಮ್ಮೇಳನದ ಕಚೇರಿಯನ್ನೇ ಬಳಸಿಕೊಂಡು, ದ.ಕ. ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಿಗೆ ರಿಜಿಸ್ಟ್ರಾರ ಆಗಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಟ್ಟು, ಕೊಂಕಣಿ ಅಕಾಡೆಮಿಯ ಕೆಲಸವನ್ನು ಪ್ರಾರಂಭಿಸಲಾಯಿತು

೧೯೯೬ನೇ ಇಸವಿಯುದ್ದಕ್ಕೂ ವಿಶ್ವ ಕೊಂಕಣಿ ಸಮ್ಮೇಳನದ ಲೆಕ್ಕಪತ್ರ ಪರಿಶೀಲನೆ, ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಮೂರ್ತ ಸ್ವರೂಪ ನೀಡುವಿಕೆ, ಹಾಗೂ ವಿಶ್ವ ಕೊಂಕಣಿ ಕೇಂದ್ರಕ್ಕಾಗಿ ಜಾಗದ ಹುಡುಕಾಟ ಇತ್ಯಾದಿ ಕಾರ್ಯಗಳನ್ನು ನಡೆಸುವುದು ಇತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶ್ರೀ ನಾಗೇಂದ್ರ, ರಾಮಚಂದ್ರ ಮತ್ತು ನಿರ್ದೇಶಕರಾದ ಶ್ರೀ ಮುದ್ದುಕೃಷ್ಣ ಇವರ ಸಹಕಾರದಿಂದ ಮಂಗಳೂರಿನಲ್ಲಿ ಕೊಂಕಣಿ ಸಾಹಿತ್ಯ ಅಕಾಡೆಮಿಯ ಕಚೇರಿ ಸ್ಥಾಪನೆಯಾಗಿ, ಅದಕ್ಕೆ ರಿಜಿಸ್ಟ್ರಾರ್ ಮತ್ತು ಸಿಬ್ಬಂದಿ ನೇಮಕಗೊಳ್ಳುವ ಕಾರ್ಯ ಅತಿ ಶೀಘ್ರದಲ್ಲಿ ನಡೆಯಿತು. ಸರಕಾರದ ವತಿಯಿಂದ ಸಿಗುವ ಅನುದಾನ ಇತ್ಯಾದಿಗಳನ್ನು ಅವರು ಬೇಗ ಮಂಜೂರು ಮಾಡಿದರು. ಹೀಗಾಗಿ ಶ್ರೀ ಬಾಳಿಗಾರ ಅಪೇಕ್ಷೆಯಂತೆ ಹಾಗೂ ಅವರಿಗೆ ಸರಕಾರಿ ನಿಯಮದ ಅನುಗುಣವಾಗಿ ಕಾರ್ಯ ನಡೆಸುವ ಅನುಭವ ಇಲ್ಲದ್ದರಿಂದ ಅಕಾಡೆಮಿಯ ಎಲ್ಲಾ ಕೆಲಸಗಳಿಗೆ ನಾನೇ ಭುಜ ನೀಡಬೇಕಾಗಿ ಬಂತು.

ನಾನು ಅಕಾಡೆಮಿಗೆ ಹಿಂದಿನ ಪರಿಸ್ಥಿತಿ ಮರುಕಳಿಸ ಬಾರದೆಂದು ಆಗಾಗ ಬೆಂಗಳೂರಿಗೆ ಹೋಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವರಿಷ್ಠರನ್ನು ಮತ್ತು ಸ್ಥಳೀಯ ಕೊಂಕಣಿ ಅಕಾಡೆಮಿಯ ಸದಸ್ಯರನ್ನು, ಕಾರ್ಯಕರ್ತರನ್ನು ಭೇಟಿಯಾಗಿ ಕೊಂಕಣಿ ಅಕಾಡೆಮಿಯ ಕಾರ್ಯ ಸುಲಲಿತವಾಗಿ ನಡೆಯುವಂತೆ ಮಾಡಿದೆ. ಶ್ರೀ ಬಿ.ವಿ. ಬಾಳಿಗರಿಗೆ ವಯಸ್ಸಾಗಿದ್ದರಿಂದ ಓಡಾಟವೆಲ್ಲಾ ನನ್ನ ಪಾಲಿಗೆ ಬಂತು. ಆದರೆ ಹಿಂದಿನ ಅಕಾಡೆಮಿಯ ಪರಿಸ್ಥಿತಿ ಈ ಬಾರಿ ಕಾಣಿಸಿಕೊಳ್ಳಲಿಲ್ಲ.

ಕರ್ನಾಟಕ ಕೊಂಕಣಿ ಅಕಾಡೆಮಿಯು ಕೊಂಕಣಿ ಭಾಷಾ ಮಂಡಳದ ಸಹಯೋಗದೊಂದಿಗೆ ಫೆಬ್ರವರಿ ೧ ಮತ್ತು ೨, ೧೯೯೫ ರಂದು ಕೊಂಕಣಿ ಲೋಕವೇದದ ತುಲನಾತ್ಮಕ ಅಧ್ಯಯನದ ವಿಚಾರ ಸಂಕಿರಣವನ್ನು ಕುಂದಾಪುರದ ಶೆರೊನ್ ಹೋಟೇಲಿನಲ್ಲಿ ಆಯೋಜಿಸಿತ್ತು. ಪ್ರಸಿದ್ಧ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕರಾದ ಶ್ರೀ ಶಿವರಾಮ ಕಾರಂತರು ದೀಪ ಬೆಳಗಿ ವಿಚಾರ ಸಂಕಿರಣದ ಉದ್ಘಾಟನೆಯನ್ನು ನಡೆಸಿಕೊಟ್ಟರು. ಅವರು ಮಾತನಾಡುತ್ತಾ, "ನಾನು ಬಂಗಾಳ, ಆಸ್ಸಾಂ ಇತ್ಯಾದಿ ಉತ್ತರಾಂಚಲ ರಾಜ್ಯಗಳಿಗೆ ಭೇಟಿ ನೀಡಿದಾಗ ಆ ರಾಜ್ಯದ ಭಾಷೆಗಳಲ್ಲಿ ಅನೇಕ ಕೊಂಕಣಿ ಪದಗಳನ್ನು ಕೇಳಿದ್ದೆ. ಈ ಕುರಿತು ನೀವು ತಜ್ಞರ ಮೂಲಕ ಸಂಶೋಧನೆ ನಡೆಸುವುದು ಉತ್ತಮ" ಎಂದು ಹೇಳಿದರು. ಗೋವೆಯಿಂದ ಕೊಂಕಣಿ ಮಹಾಕವಿ ಡಾ. ಮನೋಹರರಾಯ ಸರದೇಸಾಯಿ, ಶ್ರೀಮತಿ ಜಯಂತಿ ನಾಯಕ, ಬೆಂಗಳೂರಿನಿಂದ ಡಾ. ಜ್ಯೋತ್ಸ್ನಾ ಕಾಮತ್ ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಒಂದು ಯೋಜನೆ: "ನಾವು ಕೊಂಕಣಿ – ನಾವು ಒಂದು ಸಮಾಜ"(ಆಮೀ ಕೊಂಕಣಿ–ಆಮೀ ಏಕ ಸಮಾಜ). ಬೇರೆ ಬೇರೆ ಊರುಗಳಲ್ಲಿ ಕೊಂಕಣಿ ಮಾತನಾಡುವ ಬೇರೆ ಬೇರೆ ಸಮಾಜಗಳನ್ನು ಒಟ್ಟುಗೂಡಿಸಿ ಆಯಾಯ ಸಮಾಜದ ಸಾಂಸ್ಕೃತಿಕ, ಸಾಮಾಜಿಕ, ಜಾನಪದ, ಮತ್ತು ನೃತ್ಯದ ಕಾರ್ಯಕ್ರಮಗಳನ್ನು ನಡೆಸುವುದು ಇದರ ಉದ್ದೇಶವಾಗಿತ್ತು. ಈ ಯೋಜನೆಯ ಅಂಗವಾಗಿ ಬೆಳಗಾವಿ ನಗರದಲ್ಲಿ ಕೊಂಕಣಿ ಧುರೀಣರಾದ ಶ್ರೀ ವಿ.ವಿ. ಶೆಣೈ ಅವರ ನೇತೃತ್ವದಲ್ಲಿ "ಆಮೀ ಕೊಂಕಣಿ – ಆಮೀ ಗೌಡ ಸಾರಸ್ವತ ಸಮಾಜ" ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ನವಾಯಿತರ ಮೂಲಸ್ಥಾನವಾಗಿರುವ ಭಟ್ಕಳದಲ್ಲಿ "ಆಮೀ ಕೊಂಕಣಿ–ಆಮೀ ನವಾಯಿತ", ಯಲ್ಲಾಪುರದಲ್ಲಿ "ಆಮೀ ಕೊಂಕಣಿ–ಆಮೀ ಸಿದ್ಧಿ", ಮತ್ತು ಗುರುಪುರ ಎಡಪದವಿನಲ್ಲಿ "ಆಮೀ ಕೊಂಕಣಿ–ಆಮೀ ಕುಡಂಬಿ" ಕಾರ್ಯಕ್ರಮವನ್ನು ನಡೆಸಿದೆವು.

ಹೀಗಿರುವಾಗಲೇ, ಕೆನರಾ ಪ್ರೌಢಶಾಲೆಯ ಸ್ಥಾಪಕರಾದ ದಿ. ಅಮ್ಮೆಂಬಳ್ ಸುಬ್ರಾಯ ಪೈ ಸಂಸ್ಮರಣ ಸಪ್ತಾಹದಲ್ಲಿ ಏಳೂ ದಿನಗಳಲ್ಲಿ ಕೊಂಕಣಿ ಕಾರ್ಯಕ್ರಮಗಳು ಮತ್ತು ಕೊಂಕಣಿ ಭಾಷೆಯ ಏಳು ಗ್ರಂಥಗಳ ಪ್ರಕಟಣೆ ಮತ್ತು ಬಿಡುಗಡೆ ಕಾರ್ಯಕ್ರಮ ಕೆನರಾ ಪ್ರೌಢಶಾಲಾ ಅಸೋಸಿಯೇಶನ್ನಿನ ಕಾರ್ಯದರ್ಶಿ ಶ್ರೀ ಕೇಪುಳ ದಿನೇಶ ನಾಯಕರ ನೇತೃತ್ವದಲ್ಲಿ

ವಿಜೃಂಭಣೆಯಿಂದ ಜರಗಿತ್ತು. ಅದಲ್ಲದೆ ನಾನು ನೀಡಿದ ಸೂಚನೆಯ ಮೇರೆಗೆ ಅವರು ಕೊಂಕಣಿ ಡಿಪ್ಲೊಮಾ ತರಗತಿಯನ್ನು ಶ್ರೀ ರಾಘವೇಂದ್ರ ರಾವ್ ಅವರ ನೇತೃತ್ವದಲ್ಲಿ ಪ್ರಾರಂಭಿಸಿದರು.

ಕಾರ್ಕಳದಲ್ಲಿ ಶಾಲಾ ಅಧ್ಯಾಪಕರಾಗಿದ್ದ ಶ್ರೀ ಪಿ. ವಾಮನ ಪ್ರಭು ಹಿಂದಿ, ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರು. ಅವರು ಮಹಾಕವಿ ಕಾಳಿದಾಸನ ರಘುವಂಶ ಕಾವ್ಯವನ್ನು ಕೊಂಕಣಿಗೆ ಅನುವಾದಿಸಿದ್ದರು. ಅದನ್ನು ಪ್ರಕಟಿಸಬೇಕೆಂದು ನನ್ನಲ್ಲಿ ಕೋರಿದಾಗ, ನಾನು ಅದಕ್ಕೆ ಸಮ್ಮತಿಸಿ ಕೊಂಕಣಿ ಅಕಾಡೆಮಿ ವತಿಯಿಂದ ಮಂಗಳೂರು ಪ್ರೆಸ್‌ನಲ್ಲಿ ಅದನ್ನು ಮುದ್ರಿಸಿದ್ದೆ.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷನಾಗಿ

೧೯೯೫ರಲ್ಲಿ ಹೊಸದಾಗಿ ಕೊಂಕಣಿ ಅಕಾಡೆಮಿಯ ರಚನೆಯಾದಾಗ, ಕರ್ನಾಟಕ ರಾಜ್ಯ ಕೈಗಾರಿಕಾ ಮಂತ್ರಿಯಾಗಿದ್ದ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆಯವರಲ್ಲಿ ೧೯೯೫-೯೮ರ ಅವಧಿಗೆ ಅಕಾಡೆಮಿ ಅಧ್ಯಕ್ಷರಾಗಿ ಕೊಂಕಣಿಯ ಪ್ರಮುಖ ಸಾಹಿತಿ ಶ್ರೀ ಬಿ.ವಿ. ಬಾಳಿಗರ ಹೆಸರನ್ನು ನಾನು ಸೂಚಿಸಿದ್ದೆ. ಆಗ ಅವರು, "ಶ್ರೀ ಬಿ.ವಿ. ಬಾಳಿಗಾ ಜನಪ್ರಿಯ ಹಾಗೂ ದೊಡ್ಡ ಲೇಖಕರು ನಿಜ. ಆದರೆ ವಯಸ್ಸು ಹೆಚ್ಚಾಗಿರುವುದರಿಂದ ಅಕಾಡೆಮಿಯ ಕೆಲಸವನ್ನು ನಡೆಸುವುದು ಅವರಿಂದ ಸಾಧ್ಯವಾಗಲಿಕ್ಕಿಲ್ಲ. ನೀವೇ ಅಧ್ಯಕ್ಷರಾಗಿ, ಬಾಳಿಗರನ್ನು ಸದಸ್ಯರನ್ನಾಗಿಸಿ ಹೊಸ ಸಮಿತಿಯನ್ನು ರಚಿಸೋಣ" ಎಂದು ಹೇಳಿದರು. ಅದಕ್ಕುತ್ತರವಾಗಿ "ನನಗೆ ಬೇಡ. ಶ್ರೀ ಬಾಳಿಗರು ಅಧ್ಯಕ್ಷರಾಗಲಿ. ನಾನು ಕೆಲಸ ಮಾಡುತ್ತೇನೆ," ಎಂದು ನಾನು ಹೇಳಿದ್ದೆ. ಹೀಗಾಗಿ ಶ್ರೀ ಬಾಳಿಗರನ್ನು ಕೊಂಕಣಿ ಅಕಾಡೆಮಿಯ ಅಧ್ಯಕ್ಷರಾಗಿ, ನಾನು, ಶ್ರೀ ವಲ್ಲಿವಗ್ಗ, ಎರಿಕ್ ಒಝುರಿಯೊ, ಪ್ರೊ. ಅಂದ್ರಾದೆ(ಕಾರವಾರ) ಮುಂತಾದ ೮ ಮಂದಿಯನ್ನು ಸದಸ್ಯರನ್ನಾಗಿ ನೇಮಿಸಿ ಸರಕಾರ ಕೊಂಕಣಿ ಅಕಾಡೆಮಿಯನ್ನು ಘೋಷಿಸಿತ್ತು. ಈ ಸುದ್ದಿ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಪ್ರಸಾರವಾಯಿತು.

೧೯೯೪ನೇ ಇಸವಿಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಕಾರ್ಯಗಳು ಪ್ರಾರಂಭವಾದ ಸಮಯದಲ್ಲಿಯೇ ಆಗ ಸಚಿವೆಯಾಗಿದ್ದ ಶ್ರೀಮತಿ ಬಿ.ಟಿ. ಲಲಿತಾ ನಾಯಕರು ಕೊಂಕಣಿ, ತುಳು, ಕೊಡವ ಮತ್ತು ಉರ್ದು ಅಕಾಡೆಮಿಯನ್ನು ರಚಿಸಬಾರದೆಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅದೇ ಸಮಯದಲ್ಲಿ ಮಣಿಪಾಲದ ಡಾ. ರಾಮದಾಸ ಎಂ. ಪೈಯವರು ನನಗೆ ದೂರವಾಣಿ ಕರೆ ಮಾಡಿ, ನನ್ನನ್ನು ಅಕಾಡೆಮಿ ಆಫ್ ಜನರಲ್ ಎಡ್ಯುಕೇಶನ್ನಿನ ಉನ್ನತ ಆಡಳಿತಾಂಗದ ಸದಸ್ಯರನ್ನಾಗಿ ನೇಮಕ ಮಾಡಿದ ಮಾಹಿತಿಯನ್ನು ನೀಡಿದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಬಿ.ವಿ. ಬಾಳಿಗರಿಗೆ ಅವರ ವಯಸ್ಸಿನ ಕಾರಣದಿಂದ ಅಕಾಡೆಮಿ ಕಚೇರಿಗೆ ನಿಯಮಿತವಾಗಿ ಬರುವುದಾಗಲೀ, ಪರವೂರಿನಲ್ಲಿ ನಡೆಯುವ ಸಭೆ, ಸಮಾರಂಭಗಳಲ್ಲಿ ಭಾಗವಹಿಸುವುದಾಗಲೀ ಸಾಧ್ಯವಾಗುತ್ತಿರಲಿಲ್ಲ. "ನನಗೆ ಸಾಧ್ಯವಿಲ್ಲ, ನೀನು ಹೋದರೆ ಸಾಕು," ಎಂದು ಅವರು ನನ್ನಲ್ಲಿ ಹೇಳುತ್ತಿದ್ದರು. ಹೀಗಾಗಿ ಸುಮಾರು ಒಂದುವರೆ ವರ್ಷಗಳವರೆಗೆ ಅಕಾಡೆಮಿಯ ಸದಸ್ಯನಾಗಿದ್ದು ಅಕಾಡೆಮಿಯ ಕೆಲಸಗಳನ್ನೆಲ್ಲಾ ನಾನೇ ಮಾಡುತ್ತಿದ್ದೆ. ಇದರಿಂದ ಅಕಾಡೆಮಿಯ ಸ್ಥಾಯೀ ಸಮಿತಿಯ ಸದಸ್ಯರು ನಾನೇ ಅಧ್ಯಕ್ಷನಾಗಬೇಕೆಂದು ಒತ್ತಾಯಪಡಿಸುತ್ತಿದ್ದರು. ಆಮೇಲೆ ನಾವು ಶ್ರೀ ಬಾಳಿಗರ ಮನೆಗೆ ಹೋಗಿ ಅವರಿಗೆ ವಸ್ತುಸ್ಥಿತಿಯನ್ನು ವಿವರಿಸಿದೆವು. ಆಗ ಬಾಳಿಗರು, "ನನಗೆ ಅಧ್ಯಕ್ಷ ಪದವಿ ಬೇಡ, ನೀನೇ ಮಾಡು ಎಂದು ಮೊದಲೇ ಹೇಳಿದ್ದೆ, ಈಗ ನನ್ನ ರಾಜಿನಾಮೆ ನೀಡುತ್ತೇನೆ, ನೀನು ಅಕಾಡೆಮಿ ಅಧ್ಯಕ್ಷನಾಗಿ ಕೆಲಸ ಮುಂದುವರಿಸು," ಎಂದು ನನ್ನಲ್ಲಿ ಹೇಳಿ ರಾಜಿನಾಮೆ ಪತ್ರ ಬರೆದು ನನಗೆ ಶುಭ ಕೋರಿದರು. ನಾವು ಅವರ ರಾಜಿನಾಮೆ ಪತ್ರವನ್ನು ಮತ್ತು ಅಧ್ಯಕ್ಷಸ್ಥಾನಕ್ಕೆ ನನ್ನ ಹೆಸರನ್ನು ಶಿಫಾರಸು ಮಾಡಿದ ಸ್ಥಾಯಿ ಸಮಿತಿಯ ಪತ್ರವನ್ನು ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿಕೊಟ್ಟೆವು.

ಏಪ್ರಿಲ್ ೧೭, ೧೯೯೭ ರಲ್ಲಿ ನನ್ನನ್ನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿ ನೇಮಕಾತಿ ಮಾಡಿದ ಪತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಂತು. ಶ್ರೀ ಬಾಳಿಗರ ಮತ್ತು ನನ್ನ ಅಭಿಮಾನಿಗಳು ಅವರ ಬೀಳ್ಕೊಡುಗೆ ಸಮಾರಂಭ ಮತ್ತು ನನ್ನ ಅಭಿನಂದನಾ ಸಮಾರಂಭವನ್ನು ಮೇ ೫ರಂದು ಮಂಗಳೂರಿನ ತಾಜಮಹಲ್ ಹೊಟೇಲಿನಲ್ಲಿ ನಡೆಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಣಿಪಾಲದ ಶ್ರೀ ಕೆ.ಕೆ.ಪೈ, ಶ್ರೀ ಮಧುಸೂದನ ಡಿ. ಕುಶೆ ಮತ್ತು ಮೊ. ಅಲೆಗ್ಸಾಂಡರ್ ಡಿಸೋಜ ಅವರು ಭಾಗವಹಿಸಿದ್ದರು. ಸಮಾರಂಭ ಬಹಳ ಚೆನ್ನಾಗಿಯೇ ನಡೆದಿತ್ತು.

ನನಗೆ ಬಾಲ್ಯದಿಂದಲೂ ತುಳು, ಕೊಂಕಣಿ ಮತ್ತು ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಇತ್ತು. ಬೇರೆ ಬೇರೆ ಭಾಷೆ, ಸಂಸ್ಕೃತಿ ಹಾಗೂ ಜಾತಿ, ಮತಗಳ ಜನರಲ್ಲಿ ಸಾಮರಸ್ಯ, ಬಾಂಧವ್ಯ

ಬೆಳೆಸುವ ಕೆಲಸ ಮಾಡುವುದರಲ್ಲಿ ಉತ್ಸಾಹವಿತ್ತು. ಅಕಾಡೆಮಿ ಅಧ್ಯಕ್ಷನಾದ ಬಳಿಕ ನನ್ನ ಆ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಹುರುಪು ಬಂತು ಮತ್ತು ನಾನು ಅವುಗಳನ್ನು ಸಾಧಿಸುವಂತಾಯಿತು.

ಜುಲೈ ೨೭ ರಂದು ಭಾನುವಾರ ಕರ್ನಾಟಕ ಕೊಂಕಣಿ ಅಕಾಡೆಮಿ ಮತ್ತು ತುಳು ಅಕಾಡೆಮಿಯ ಜಂಟಿ ಆಶ್ರಯದಲ್ಲಿ "ತುಳು-ಕೊಂಕಣಿ ಭಾಷಾ ಬಾಂಧವ್ಯ"ವೆಂಬ ಕಾರ್ಯಕ್ರಮ-ವನ್ನು ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಆಯೋಜಿಸಲಾಗಿತ್ತು. ಆಗ ತುಳು ಅಕಾಡೆಮಿಯ ಅಧ್ಯಕ್ಷರಾಗಿದ್ದವರು ಡಾ. ವಿವೇಕ ರೈಯವರು. ಖ್ಯಾತ ಕನ್ನಡ ಮತ್ತು ತುಳು ಸಾಹಿತಿ ಹಾಗೂ ಜಾನಪದ ವಿದ್ವಾಂಸರಾದ ಶ್ರೀ ವಿವೇಕ ರೈಯವರು ಈ ಕಾರ್ಯಕ್ರಮದ ಕುರಿತು ತುಂಬಾ ಉತ್ಸಾಹ ತೋರಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ನಡೆಸಿಕೊಟ್ಟರು. ಪ್ರಸಿದ್ಧ ಸ್ವಾತಂತ್ರ್ಯ ಸೇನಾನಿ ಶ್ರೀ ಡಾ. ಅಮ್ಮೆಂಬಳ ಬಾಳಪ್ಪ ಮತ್ತು ಸಂತ ಭದ್ರಗಿರಿ ಅಚ್ಯುತದಾಸರನ್ನು ಸನ್ಮಾನಿಸಲಾಗಿತ್ತು. ಮಣಿಪಾಲದ ಶ್ರೀ ಕೆ.ಕೆ. ಪೈಯವರ ಉಪಸ್ಥಿತಿ ಇತ್ತು. ಪತ್ರಕರ್ತ ಶ್ರೀ ಕೆ. ಬಾಳಕೃಷ್ಣ ಗಟ್ಟಿಯವರು ಪ್ರಬಂಧ ಮಂಡಿಸಿದರು. ಸಭಾ ಕಾರ್ಯಕ್ರಮ ಮುಗಿದ ಬಳಿಕ ಶ್ರೀ ಅಚ್ಯುತದಾಸರಿಂದ ತುಳು ಹರಿಕಥೆ, ಶ್ರೀ ಗೋಪಾಲ ಗೌಡರ ನೇತೃತ್ವದಲ್ಲಿ ಎಡಪದವು ಕುಡುಬಿಗಳಿಂದ ಗುಮಟ್ ಮತ್ತು ಕೋಲಾಟದ ಪ್ರದರ್ಶನವಿತ್ತು.

ಆಗಸ್ಟ್ ೨ ರಂದು ಅಕಾಡೆಮಿಯ ವತಿಯಿಂದ ಶಿವಮೊಗ್ಗೆಯ ಕುವೆಂಪು ರಂಗಮಂದಿರದಲ್ಲಿ "ಕೊಂಕಣಿ ಲೋಕವೇದ"ದ ಕುರಿತು ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಅನಂತರ ಕುಂದಾಪುರದ ಬಾಳಕೃಷ್ಣ ಪೈ(ಕುಳ್ಳಪ್ಪು) ಇವರ ಪಂಗಡದವರ "ತೀನಿ ರತ್ನ" (ಮೂರು ರತ್ನಗಳು) ಎಂಬ ನಾಟಕ ಪ್ರದರ್ಶನ ನಡೆಯಿತು. ಈ ಕಾರ್ಯಕ್ರಮವನ್ನು ಆಯೋಜಿಸುವುದರಲ್ಲಿ ಹೆಚ್ಚಿನ ಉತ್ಸಾಹ ತೋರಿಸಿದವರು ಶ್ರೀ ಎಂ. ಮಾಧವ ಪೈ ಮತ್ತು ಶ್ರೀ ಪ್ರಕಾಶ ಪ್ರಭು. ನಾನು ಹಿಂದೆ ಶಿವಮೊಗ್ಗೆಯಲ್ಲಿ ಬ್ಯಾಂಕ್ ಮೆನೇಜರ್ ಆಗಿ ಕಾರ್ಯನಿರ್ವಹಿದ್ದರಿಂದ, ನನ್ನನ್ನು ಭೇಟಿಯಾಗಲು ಬಂದಿದ್ದ ಅಲ್ಲಿಯ ಪ್ರಮುಖ ನಾಗರಿಕರು ಈ ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ಅದರ ಯಶಸ್ಸಿಗೆ ಕಾರಣರಾದರು.

ಆಗಸ್ಟ್ ೮ರಂದು ಕುಂದಾಪುರದಲ್ಲಿ ಅಕಾಡೆಮಿ ವತಿಯಿಂದ "ಕೊಂಕಣಿ ಭಾಷೆ ಮತ್ತು ಸಾಹಿತ್ಯ"ದ ಕುರಿತು ಚರ್ಚಾಗೋಷ್ಠಿಯನ್ನು ಆಯೋಜಿಸಲಾಗಿತ್ತು. ಶ್ರೀ ಎಡ್ವಿನ್ ಜೆ.ಎಫ್. ಡಿಸೋಜಾ, ಡಾ. ಕೆ. ಅಶೋಕ ಪೈ, ಶ್ರೀ ಕೆ.ಎನ್. ರಾವ್ ದಾಂಡೇಲಿ, ಇವರಿಂದ ಉಪನ್ಯಾಸಗಳು ನಡೆದಿದ್ದವು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎನ್. ಯೋಗೀಶ್ ಭಟ್ ಅವರು ನಡೆಸಿಕೊಟ್ಟಿದ್ದರು. ಈ ಕಾರ್ಯಕ್ರಮದ ನೇತೃತ್ವ ಶ್ರೀ ಯು.ಎಸ್. ಶೆಣೈ ಅವರದ್ದಾಗಿತ್ತು.

ಭಾರತದ ಸ್ವಾತಂತ್ರ್ಯದ ಸುವರ್ಣ ಜಯಂತಿ ವರ್ಷದಲ್ಲಿ ಕರ್ನಾಟಕ ಸರಕಾರವು ರಾಜ್ಯದಲ್ಲಿರುವ ಮತ್ತು ರಾಜ್ಯದ ಹೊರಗೆ ಇರತಕ್ಕಂತಹ ಕನ್ನಡ ಸಂಸ್ಥೆಗಳಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸಿತ್ತು. ಅದೇ ರೀತಿ ಸರಕಾರದ ಅಧೀನವಿರುವ ಭಾಷಾ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳು ವಿವಿಧ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಸರಕಾರ ಆದೇಶವನ್ನು ಹೊರಡಿಸಿತ್ತು. ನಾವು ಕೊಂಕಣಿ ಅಕಾಡೆಮಿಯವರು ನಮ್ಮದೇ ಕಾರ್ಯಕ್ರಮಗಳನ್ನು, ಇತರ ಅಕಾಡೆಮಿಗಳ ಜೊತೆ ಸೇರಿ ಬೇರೆ ಕಾರ್ಯಕ್ರಮಗಳನ್ನು ನಡೆಸಿದೆವು.

ಬೆಂಗಳೂರಿನಲ್ಲಿ ನಾಟಕ ತರಬೇತಿ ಶಿಬಿರ

ಆಗಸ್ಟ್ ೧೮ರಂದು ಬೆಂಗಳೂರಿನ ಕೆನರಾ ಯೂನಿಯನ್ ಸಭಾಂಗಣದಲ್ಲಿ ಕರ್ನಾಟಕದಲ್ಲಿರುವ ಕೊಂಕಣಿ ರಂಗ ಕಲಾವಿದರಿಗಾಗಿ ನಾಟಕ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಪ್ರಸಿದ್ಧ ಉದ್ಯಮಿ ಶ್ರೀ ಪಿ. ದಯಾನಂದ ಪೈಯವರು ದೀಪ ಬೆಳಗಿ ಶಿಬಿರದ ಉದ್ಘಾಟನೆ ನಡೆಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಜಗದ್ವಿಖ್ಯಾತ ರಂಗ ತರಬೇತಿದಾರ ಶ್ರೀ ಜಯದೇವ ಹಟ್ಟಂಗಡಿಯವರು ಮುಂಬೈಯಿಂದ ಬಂದು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆ ಬೆಳಕಿನ ವ್ಯವಸ್ಥೆ ಮತ್ತು ಪ್ರಸಾದನದ ಕುರಿತು ಪ್ರಸಿದ್ಧ ನಟ, ಕನ್ನಡ-ಕೊಂಕಣಿ ರಂಗಕರ್ಮಿ ಶ್ರೀ ಕಾಸರಗೋಡು ಚಿನ್ನಾ ಅವರು ಮಾರ್ಗದರ್ಶನ ನೀಡಿದ್ದರು.

ಆಗಸ್ಟ್ ೨೦ ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕೊಂಕಣಿ ಕಲಾ ಉತ್ಸವವನ್ನು ನಡೆಸಿದೆವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದರ ಉಪಸ್ಥಿತಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾನ್ಯ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ಮುಖ್ಯ ಅತಿಥಿಗಳಾಗಿದ್ದರು. ವಿವಿಧ ಪಂಗಡಗಳ ಕಲಾ ಪ್ರದರ್ಶನಗಳನ್ನು ನೋಡಿ ಸಚಿವರು, ಪ್ರೇಕ್ಷಕರು ಮತ್ತು ನಾಟಕ ತರಬೇತಿಯ ಅಭ್ಯರ್ಥಿಗಳು ಸಂತೋಷಪಟ್ಟದ್ದು ವ್ಯಕ್ತವಾಯಿತು.

ನವೆಂಬರ್ ೨ರಂದು ಶಿರಸಿಯಲ್ಲಿ "ಆಮೀ ಕೊಂಕಣಿ– ಆಮೀ ದೈವಜ್ಞ" ಕಾರ್ಯಕ್ರಮವನ್ನು ನಡೆಸಿದೆವು. ಕೊಂಕಣಿ ಅಕಾಡೆಮಿ ಸದಸ್ಯರಾದ ಪ್ರೊ. ಎನ್.ಎಸ್. ವರ್ಣೇಕರ್ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ನಡೆಸಿದರು. ಗೋವೆಯಲ್ಲಿ ವಾಸವಾಗಿದ್ದ ಸಮಯದಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಮತ್ತು ದೈವಜ್ಞ ಬ್ರಾಹ್ಮಣರ ನಡುವೆ ಮದುವೆ ಸಂಬಂಧ(ನೆಂಟಸ್ತಿಕೆ) ನಡೆಯುತ್ತಿತ್ತು ಎಂಬ ಚಾರಿತ್ರಿಕ ವಿಚಾರವನ್ನು ನನ್ನ ಚಿಕ್ಕಪ್ಪನವರಾದ ಶ್ರೀ ದಿ. ಬಸ್ತಿ ಪುಂಡಲೀಕ ಶೆಣೈ ಅವರು ತಮ್ಮ ಸಂಶೋಧನಾ ಗ್ರಂಥ "ಗೌಡ ಸಾರಸ್ವತ ಬ್ರಾಹ್ಮಣ ಚರಿತ್ರಾ"ದಲ್ಲಿ ಉಲ್ಲೇಖಿಸಿರುವುದನ್ನು ನಾನು ತಿಳಿಸಿದಾಗ, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ದೈವಜ್ಞ ಬಂಧುಗಳಿಗೆ ಅದು ತುಂಬಾ ಮೆಚ್ಚುಗೆಯಾಯಿತು.

ಮೈಸೂರಿನ ಕ್ಯಾಥೊಲಿಕ್ ಕೇಂದ್ರದಲ್ಲಿ ನಾವು ಆಯೋಜಿಸಿದ್ದ ಎರಡು ದಿನಗಳ "ಕೊಂಕಣಿ ಭಾಷಾಂತರ ಕಾರ್ಯಾಗಾರ"ದಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳ ಸಾಹಿತಿಗಳು ಭಾಗವಹಿಸಿದ್ದರು.

ಡಿಸೆಂಬರ್ ೨೮ರಂದು ಭಾನುವಾರ ಸಂಜೆ ಕೊಂಕಣಿ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು. ಇದರಲ್ಲಿ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಪ್ರಸಿದ್ಧ ಕನ್ನಡ ಸಾಹಿತಿ ಡಾ. ಜವರೇ ಗೌಡರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ೧೯೯೭ ಸ್ವಾತಂತ್ರ್ಯ ಸುವರ್ಣ ಜಯಂತಿಯ ವರ್ಷವಾಗಿದ್ದರಿಂದ ಸ್ವಾತಂತ್ರ್ಯಯೋಧರೂ, ಕೊಂಕಣಿ ಲೇಖಕರೂ ಆಗಿರುವ ಶ್ರೀ ಕೆ.ಎನ್. ರಾವ್, ದಾಂಡೇಲಿ ಅವರಿಗೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಜನವರಿ ೧೧, ೧೯೯೮ ಭಾನುವಾರದ ದಿನ ಕಾರವಾರದ ಸದಾಶಿವಗಡದಲ್ಲಿ "ಕೊಂಕಣಿ ಸಂಸ್ಕೃತಿ ಉತ್ಸವ"ವನ್ನು ನಡೆಸಿದೆವು. ಪ್ರಾರಂಭದಲ್ಲಿ ಗೋಷ್ಠಿ ನಡೆದು ಆಮೇಲೆ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು. ಗೋವೆಯಿಂದ ಪ್ರಸಿದ್ಧ ಸಾಹಿತಿ ಶ್ರೀ ಉದಯ ಬೆಂಬ್ರೆ ಬಂದಿದ್ದರು. ಶ್ರೀಮತಿ ಉಷಾ ರಾಣೆಯವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಬಂದಿದ್ದ ಬೆಂಗಳೂರು ದೂರದರ್ಶನದ ಶ್ರೀ ಉಷಾ ಕಿಣಿ ಮತ್ತು ಅವರ ತಂತ್ರಜ್ಞರು ಸದಾಶಿವಗಡದಲ್ಲಿ ಲೋಕನೃತ್ಯಗಳ ದೃಶ್ಯ–ಶ್ರವ್ಯ ರೆಕಾರ್ಡ್ ಮಾಡಿದ್ದರು. ಇದು ಆಮೇಲೆ ಬೆಂಗಳೂರು ದೂರದರ್ಶನದಲ್ಲಿ ಪ್ರದರ್ಶಿತಗೊಂಡಿತು.

೬೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಮಂಗಳೂರಿನಲ್ಲಿ ನಡೆದಿತ್ತು. ಇದರ ಉದ್ಘಾಟನೆಯನ್ನು ಕಡಲತೀರದ ಭಾರ್ಗವರೆಂದೇ ಪ್ರಸಿದ್ಧರಾಗಿದ್ದ ಕನ್ನಡದ ಉದ್ದಾಮ ಸಾಹಿತಿ ಶಿವರಾಮ ಕಾರಂತರು ಮಾಡಬೇಕಿತ್ತು. ಆದರೆ ಅವರು ಡಿಸೆಂಬರ್ ೯ರಂದು ತಮ್ಮ ೯೬ನೇ ವಯಸ್ಸಿನಲ್ಲಿ ದೈವಾಧೀನರಾಗಿದ್ದರಿಂದ, ಸಮ್ಮೇಳನವನ್ನು ಉದ್ಘಾಟಿಸುವ ಮೊದಲು ಅವರ ಧ್ವನಿ ಮುದ್ರಣವನ್ನು ಕೇಳಿಸಲಾಗಿತ್ತು. ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಾಯೋಜನೆಯನ್ನು ನಡೆಸಿದ್ದ ಕೊಂಕಣಿ ಸಾಹಿತ್ಯ ಅಕಾಡೆಮಿ, ಅಲ್ಲಿ ತನ್ನ ಪುಸ್ತಕ ಮಾರಾಟ ಮಳಿಗೆಯನ್ನು ತೆರೆದಿತ್ತು.

ಇದೇ ರೀತಿ ಪ್ರತಿವರ್ಷ ನಡೆಯುತ್ತಿರುವ ಕರಾವಳಿ ಉತ್ಸವದಲ್ಲಿಯೂ ನಾವು ಕೊಂಕಣಿ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಕಾಡೆಮಿಯಿಂದ ಪ್ರಾಯೋಜನೆ ನೀಡಿದ್ದೇವೆ. ಪುತ್ತೂರು ನರಸಿಂಹ ನಾಯಕರ ಕೊಂಕಣಿ ಸಂಗೀತ ಕಾರ್ಯಕ್ರಮ ಹಾಗೂ ಶ್ರೀ ಜೋಕಿಂ ಪಿರೇರಾ ಅವರ ಪಂಗಡದ ಗುಮ್ಮಟ ವಾದನ ಕಾರ್ಯಕ್ರಮವನ್ನು ನಡೆಸಿದ್ದೇವೆ.

ಕೊಂಕಣಿ ಅಕಾಡೆಮಿಯ ಕಚೇರಿಯು ಕೊಂಕಣಿ ಭಾಷಾ ಮಂಡಳವಿರುವ ಹೊಟೇಲ್ ನವರತ್ನ ಪ್ಯಾಲೇಸಿನ ಕೆಳ ಅಂತಸ್ತಿನಲ್ಲಿ ಕಾರ್ಯ ನಿರ್ವಹಿಸುತಿತ್ತು. ನಾನು ಕೊಂಕಣಿ ಅಕಾಡೆಮಿಗಾಗಿ ಮಂಗಳೂರು ಮಹಾನಗರ ಪಾಲಿಕೆಯ ಕಟ್ಟಡದಲ್ಲಿ ಜಾಗ ನೀಡಬೇಕೆಂದು ಪ್ರಯತ್ನ ನಡೆಸಿದ್ದೆ. ಈ ಪ್ರಯತ್ನ ಜುಲೈ ೩, ೧೯೯೮ರಲ್ಲಿ ಕೈಗೂಡಿತು. ಸಿಬ್ಬಂದಿಗಳ ಕಾರ್ಯನಿರ್ವಹಣೆಗೆ ಮತ್ತು ಕಡತಗಳನ್ನು ಇಡುವುದಕ್ಕೆ ಸಾಕಷ್ಟು ವಿಶಾಲ ಜಾಗ ದೊರೆಯಿತು. ಮಹಾನಗರ ಪಾಲಿಕೆಯ ಮೇಯರ್ ಶ್ರೀಮತಿ ಹಿಲ್ಡಾ ಆಳ್ವಾ, ಮಂಗಳೂರಿನ ಶಾಸಕರಾಗಿದ್ದ ಶ್ರೀ ಎನ್. ಯೋಗೀಶ್ ಭಟ್ ಹಾಗೂ ಶ್ರೀಮತಿ ಜ್ಯೂಡಿತ್ ಮಸ್ಕರೇಞಸ್ ಇವರ ಉಪಸ್ಥಿತಿಯಲ್ಲಿ ಅಕಾಡೆಮಿ ಕಚೇರಿಯ ಉದ್ಘಾಟನೆ ನಡೆಯಿತು. ಕಚೇರಿಯ ಆವರಣದಲ್ಲಿಯೇ ಸಣ್ಣ ಪುಟ್ಟ ಸಭಾ ಕಾರ್ಯಕ್ರಮಗಳನ್ನು ನಡೆಸುವುದು ಸಾಧ್ಯವಾಯಿತು.

ಫೆಬ್ರವರಿ ೧೩, ೨೦೦೦, ಭಾನುವಾರದ ದಿನ ಬೆಂಗಳೂರು ಮಿಥಿಕ್ ಸೊಸೈಟಿಯ ಅಧ್ಯಕ್ಷರೂ, ಕೊಂಕಣಿ ಅಕಾಡೆಮಿಯ ಸದಸ್ಯರೂ ಅಗಿದ್ದ ಪ್ರಸಿದ್ಧ ಚರಿತ್ರೆಕಾರ ಡಾ. ಸೂರ್ಯನಾಥ ಕಾಮತರ ನೇತೃತ್ವದಲ್ಲಿ "ಕೊಂಕಣಿ ಸಾಹಿತ್ಯದಲ್ಲಿ ಮಹಿಳೆಯರ

ಧ್ವನಿ" ಎಂಬ ವಿಚಾರಗೋಷ್ಠಿಯನ್ನು ಆಯೋಜಿಸಿದ್ದೆವು. ಪ್ರಖ್ಯಾತ ನೃತ್ಯ ವಿದುಷಿ ಶ್ರೀಮತಿ ಮಾಯಾ ರಾವ್ (ಕೊಂಕಣಿ ಭಾಷಿಕರು) ಅವರು ಉದ್ಘಾಟನೆ ನಡೆಸಿದ್ದ ಈ ಗೋಷ್ಠಿಯ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಅ.ರಾ. ಚಂದ್ರಹಾಸ ಗುಪ್ತರು ನಿರ್ವಹಿಸಿದ್ದರು. ಗೋಷ್ಠಿಯ ಪ್ರಬಂಧಗಳನ್ನು ಗೋವೆಯ ಡಾ. ಕಿರಣ್ ಬುಡ್ಕುಳೆ, ಡಾ. ಮಾಧವಿ ಸರದೇಸಾಯಿ, ಬೆಂಗಳೂರಿನ ಡಾ. ಜ್ಯೋತ್ಸ್ನಾ ಕಾಮತ್, ಮತ್ತು ಮಂಗಳೂರಿನ ಕ್ಯಾಥರಿನ ರಾಡ್ರಿಗಸ್ ಮಂಡಿಸಿದ್ದರು

ಕರ್ನಾಟಕ ಕೊಂಕಣಿ ಅಕಾಡೆಮಿಯ ಪ್ರಥಮ ಅಧ್ಯಕ್ಷರಾಗಿದ್ದ ಖ್ಯಾತ ಕೊಂಕಣಿ ಸಾಹಿತಿ ಡಾ. ವಿ.ಜೆ.ಪಿ. ಸಲ್ದಾನ(ಖಡಪ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದವರು) ತೀರಿಕೊಂಡಾಗ ಅವರ ಗೌರವಾರ್ಥವಾಗಿ ಅಕಾಡೆಮಿ ಕಚೇರಿಯನ್ನು ಮುಚ್ಚಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ನಾವು ಹೋಗಿದ್ದೆವು. ಅವರು ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ಬಹಳ ಸಮಯದವರೆಗೆ ಅವರಿಗೆ ಕಾರ್ಯ ಪ್ರಾರಂಭಿಸುವುದು ಸಾಧ್ಯವಾಗಿರಲಿಲ್ಲ. ಹೀಗಾಗಿ ಅಕಾಡೆಮಿ ಸದಸ್ಯರು ರಾಜಿನಾಮೆ ನೀಡಿದ್ದರು.

ಕಾರವಾರದಲ್ಲಿ ಗೋಷ್ಠಿ

ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ ಆಗಿದ್ದ ಡಾ. ವಿಲಿಯಂ ಮಾಡ್ತಾ ಮತ್ತು ಕೇರಳದ ಕೊಚ್ಚಿಯ ಶ್ರೀ ಎನ್ ಪುರುಷೋತ್ತಮ ಮಲ್ಯ ಇವರ ನೇತೃತ್ವದಲ್ಲಿ ಡಿಸೆಂಬರ್ ೨೨ರಂದು ಬೆಳಗ್ಗೆ ಕಾರವಾರದಲ್ಲಿ "ವಿದ್ಯಾಕ್ಷೇತ್ರದಲ್ಲಿ ಕೊಂಕಣಿ ಕಲಿಕೆಯ ಅಗತ್ಯ" ಎಂಬ ವಿಷಯದ ಕುರಿತು ವಿಚಾರ ಸಂಕಿರಣ ನಡೆಯಿತು. ಗೋವೆ ಮತ್ತು ಕರ್ನಾಟಕ ಸರಕಾರದ ವಿದ್ಯಾ ಇಲಾಖೆಯ ಮುಖ್ಯಸ್ಥರು, ಕೆನರಾ ಪ್ರೌಢಶಾಲೆ, ಕ್ಯಾಥೊಲಿಕ್ ಬೋರ್ಡ್ ಆಫ್ ಎಡ್ಯುಕೇಶನ್, ಗೋವಾ ಕೊಂಕಣಿ ಅಕಾಡೆಮಿ, ಕೊಂಕಣಿ ಪ್ರಚಾರ ಸಭಾ ಕೊಚ್ಚಿ, ಮೊದಲಾದ ಸಂಸ್ಥೆಗಳು ಬೆಂಬಲ ನೀಡಿದ್ದರಿಂದ ಈ ವಿಚಾರ ಸಂಕಿರಣ ಯಶಸ್ವಿಯಾಗಿ ನಡೆಯಿತು. ಅನಂತರ ಕರ್ನಾಟಕ ರಾಜ್ಯದಲ್ಲಿರುವ ಶಾಲೆಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಹಂತದಲ್ಲಿ ಕೊಂಕಣಿ ಕಲಿಕೆಯನ್ನು ಪ್ರಾರಂಭಿಸಲು ಕೊಂಕಣಿ ಸಾಹಿತ್ಯ ಅಕಾಡೆಮಿ ಹೆಜ್ಜೆ ಇಡುವುದೆಂದು ನಿರ್ಧಾರವಾಯಿತು. ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆಯ ಸಚಿವರಾಗಿದ್ದ ಶ್ರೀ ಬಿ. ಸೋಮಶೇಖರ್ ಭಾಗವಹಿಸಿದ್ದರು. ಮಣಿಪಾಲದಿಂದ ಡಾ. ಹೆಚ್. ಶಾಂತಾರಾಮ್ ಬಂದಿದ್ದರು. ಶ್ರೀ ಸೋಮಶೇಖರ್ ಅವರು ಶಾಲೆಯಲ್ಲಿ ಕೊಂಕಣಿ ಕಲಿಕೆಯ ಪ್ರಯತ್ನ ನಡೆಸುವುದು ಬೇಡವೆಂದು ಸೂಚಿಸಿದರು. ಆದರೆ ಶಾಲೆಯಲ್ಲಿ ಕೊಂಕಣಿ ಕಲಿಕೆಯ ಅವಕಾಶ ಯಾಕೆ ಬೇಕು ಎನ್ನುವುದನ್ನು ಡಾ. ಶಾಂತಾರಾಮ್ ಅವರು ವಿವರವಾಗಿ ತಿಳಿಸಿದರು. ಇದರಿಂದ ನಮಗೆ ಶಾಲೆಯಲ್ಲಿ ಕೊಂಕಣಿ ಕಲಿಕೆಯನ್ನು ಅನುಷ್ಠಾನಗೊಳಿಸುವುದು ಹೇಗೆ ಮತ್ತು ಅದಕ್ಕೆ ಯಾವ ರೀತಿಯ ಸಿದ್ಧತೆಗಳ ಅಗತ್ಯವಿದೆ ಎಂಬುದರ ಕುರಿತು ಉತ್ತಮ ಮಾಹಿತಿ ದೊರೆಯಿತು. ಅನಂತರ ನಾನು ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥೆಯ ಅಧಿಕಾರಿಗಳ ಮಾರ್ಗದರ್ಶನ ಪಡೆದು ಈ ನಿಟ್ಟಿನಲ್ಲಿ ಕೆಲಸವನ್ನು ಮುಂದುವರಿಸಿದೆ.

ಕಾರವಾರದ ವಿಚಾರ ಸಂಕಿರಣದಲ್ಲಿ ಕೊಂಕಣಿ ಕಲಿಕೆಯ ಕುರಿತು ಪಡೆದ ಮಾಹಿತಿಯನ್ನು ಅಲ್ಲಿಗೆ ಕೈಬಿಡದೆ, ಆ ಪ್ರಕ್ರಿಯೆಯನ್ನು ಮುಂದುವರಿಸುವ ಕಾರ್ಯವನ್ನು ನಾನು ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಕೈಗೆತ್ತಿಕೊಂಡೆ. ಆಗ ಶಾಲೆಯಲ್ಲಿ ಶಿಕ್ಷಣ ನೀಡಬೇಕಾದರೆ, ಮುಖ್ಯವಾಗಿ ಶಿಕ್ಷಕರನ್ನು ತಯಾರಿಗೊಳಿಸುವ ಅಗತ್ಯ ಇದೆ ಎಂಬ ವಿಚಾರ ತಿಳಿದು ಬಂತು. ಅದಕ್ಕಾಗಿ ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಯ ಸಂಘದ ಸಹಕಾರದಿಂದ ಜುಲೈ ೮ ಮತ್ತು ೯, ೨೦೦೦ ಇಸವಿಯಲ್ಲಿ "ಶಾಲೆಯಲ್ಲಿ ಕೊಂಕಣಿ ಕಲಿಸಲು ಕೊಂಕಣಿ ಶಿಕ್ಷಕರಿಗೆ ತರಬೇತಿ ಶಿಬಿರ"ವನ್ನು ಶ್ರೀನಿವಾಸ ಪಾಠಶಾಲೆಯಲ್ಲಿ ನಡೆಸಲಾಯಿತು. ಶಿಬಿರಾರ್ಥಿಗಳಿಗೆ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳಾಗಿ ಮೈಸೂರಿನಿಂದ ಭಾರತೀಯ ಭಾಷಾ ಸಂಸ್ಥಾನದ ಶ್ರೀ ಯದುರಾಜನ್ ಮತ್ತು ಗೋವೆಯಿಂದ ಫಾ. ಪ್ರತಾಪ ನಾಯ್ಕ್ ಬಂದಿದ್ದರು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಸುಮಾರು ೩೦ ಮಂದಿ ಅಧ್ಯಾಪಕರು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಅವರಿಗೆ ತರಬೇತಿದಾರರಿಂದ ಸ್ವಾನುಭವದ ಉತ್ತಮ ಮಾರ್ಗದರ್ಶನ ದೊರೆಯಿತು. ಭಾರತೀಯ ಭಾಷಾ ಸಂಸ್ಥಾನವು ಶಿಕ್ಷಣ ನೀಡಲು ರೂಪಿಸಿದ ಪುಸ್ತಕಗಳ ಕುರಿತು ಮತ್ತು ಗೋವೆಯಲ್ಲಿನ ಕೊಂಕಣಿ ಶಿಕ್ಷಣದ ಕುರಿತು ಉತ್ತಮ ಮಾಹಿತಿಯನ್ನೊಳಗೊಂಡ ಉಪನ್ಯಾಸಗಳನ್ನು ಅವರು ನೀಡಿದ್ದರು.

ಜುಲೈ ೨೯, ೨೦೦೧ರಂದು ಶ್ರೀ ಯದುರಾಜನ್ ನಿರ್ದೇಶನದಲ್ಲಿ ಕೊಂಕಣಿ ಪಠ್ಯಪುಸ್ತಕ ರಚನೆಗಾಗಿ ಅಧ್ಯಾಪಕರ

ಕಾರ್ಯಾಗಾರವನ್ನು ನಡೆಸಲಾಗಿತ್ತು. ಶ್ರೀ ಯದುರಾಜನ್ ಅವರು ತಿಳಿಸಿದಂತೆ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನವು ಇತರ ಭಾಷೆಗಳ ಶಿಕ್ಷಣಕ್ಕಾಗಿ ನಡೆಸಿದ ಕಾರ್ಯಗಳನ್ನು ಮತ್ತು ಅನುಭವಗಳನ್ನು ನಾವು ಕೊಂಕಣಿ ಪಠ್ಯ ಪುಸ್ತಕ ರಚನೆಗೆ ಮಾರ್ಗದರ್ಶಿಕವಾಗಿ ಮಾಡಿಕೊಂಡೆವು.

ಸೆಪ್ಟೆಂಬರ್ ೯ ರಂದು ಕೊಂಕಣಿ ಪಠ್ಯ ಪುಸ್ತಕ ರಚನಾ ಸಮಿತಿಯ ಸಭೆಯನ್ನು ಕೊಂಕಣಿ ಅಕಾಡೆಮಿಯ ಕಚೇರಿಯಲ್ಲಿ ಕರೆಯಲಾಗಿತ್ತು. ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಉಪ ನಿರ್ದೇಶಕರಾಗಿದ್ದ ಶ್ರೀ ಯದುರಾಜನು ಈ ಸಭೆಯಲ್ಲಿ ಭಾಗವಹಿಸಿದ್ದರು. ಅವರ ಮಾರ್ಗದರ್ಶನದಲ್ಲಿ ಕಾರವಾರ, ಕುಮಟ, ಕುಂದಾಪುರ, ಮತ್ತು ಮಂಗಳೂರಿನಿಂದ ಬಂದ ಅಧ್ಯಾಪಕರೊಂದಿಗೆ ಚರ್ಚೆಯನ್ನು ನಡೆಸಿ ಶಾಲೆಯಲ್ಲಿ ಕೊಂಕಣಿ ಕಲಿಕೆಯ ಪಠ್ಯಪುಸ್ತಕ ತಯಾರಿಯ ಕಾರ್ಯವನ್ನು ಪ್ರಾರಂಭಿಸಿದೆವು.

ಕೊಂಕಣಿ ಭಾಷಾ ಕಲಿಕೆಗೆ ಶಾಲೆಗಳಲ್ಲಿ ಶೈಕ್ಷಣಿಕ ಅವಕಾಶ ನೀಡಬೇಕೆಂದು ನಾವು ಬಹಳ ವರ್ಷಗಳಿಂದ ಕರ್ನಾಟಕ ರಾಜ್ಯ ಸರಕಾರದ ಮುಂದಿಟ್ಟ ಕೋರಿಕೆಯನ್ನು ಮನ್ನಿಸಿದ ರಾಜ್ಯ ಶಿಕ್ಷಣ ಇಲಾಖೆಯು ೨೦೦೫ನೇ ಇಸವಿಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಯ ಸಂಘದ ವರಿಷ್ಠರಿಗೆ ಸೂಚನೆಯನ್ನು ಕಳುಹಿಸಿಕೊಟ್ಟಿತು. ಅದೇ ರೀತಿ ನಾವು ಪಠ್ಯ ಪುಸ್ತಕಗಳನ್ನು ತಯಾರಿಸಿ ಸರಕಾರದ ಶಿಕ್ಷಣ ಇಲಾಖೆಗೆ ಕಳುಹಿಸಿಕೊಟ್ಟೆವು. ಆ ಸಮಿತಿಯ ಸದಸ್ಯರು ಮಂಗಳೂರಿಗೆ ಬಂದಾಗ, ಡಾ. ಮೋಹನ ಪೈ ಮತ್ತು ಸಂಗಾತಿಗಳು ಸೇರಿ ಅವರಿಗೆ ತಾವು ಸಿದ್ಧಗೊಳಿಸಿದ ಪಠ್ಯಪುಸ್ತಕಗಳ ಕುರಿತು ಮಾಹಿತಿ ನೀಡಿದ್ದರಿಂದ ಆ ವರ್ಷದಿಂದಲೇ ಸರಕಾರ ಕೊಂಕಣಿ ಪಠ್ಯಪುಸ್ತಕಗಳನ್ನು ಪ್ರಕಟಿಸಿ ಶಾಲೆಗಳಿಗೆ ಅದನ್ನು ಕಳುಹಿಸುವ ವ್ಯವಸ್ಥೆಯನ್ನು ನಡೆಸಿತು. ಇದರಿಂದ ಶಾಲೆಯಲ್ಲಿ ಕೊಂಕಣಿಯನ್ನು ಅಧಿಕೃತವಾಗಿ ಕಲಿಸುವುದಕ್ಕೆ ಆಧಾರ ದೊರೆಯಿತು. ನಮ್ಮೆಲ್ಲರ ಪ್ರಯತ್ನಕ್ಕೆ ಕೊನೆಗೂ ಫಲ ದೊರೆಯಿತು.

ಫೆಬ್ರವರಿ ೨೭, ೨೦೦೦ ರಂದು ಭಾನುವಾರ ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ಕೊಂಕಣಿ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಸಿದ್ಧ ಗಾಯಕರಾದ ಪುತ್ತೂರು ನರಸಿಂಹ ನಾಯಕರಿಗೆ ಸನ್ಮಾನವಿತ್ತು. ಬಳಿಕ ಅವರು ಕೊಂಕಣಿ ಸುಗಮ ಸಂಗೀತ ಕಾರ್ಯಕ್ರಮವನ್ನೂ ನೀಡಿದ್ದರು.

ಆ ಮೇಲಿನ ದಿನಗಳಲ್ಲಿ ಶಾಲೆಯಲ್ಲಿ ಕೊಂಕಣಿ ಕಲಿಸುವಿಕೆಯ ಕುರಿತು ಕೊಂಕಣಿ ಶಾಲೆಗಳ ಆಡಳಿತ ವರ್ಗದವರೊಂದಿಗೆ ಸಭೆಗಳು, ಭಾರತೀಯ ಭಾಷಾ ಸಂಸ್ಥಾನದ ನೆರವಿನಿಂದ ಶಾಲಾ ಅಧ್ಯಾಪಕರಿಗೆ ತರಬೇತಿ ಶಿಬಿರದ ಆಯೋಜನೆ ಇತ್ಯಾದಿ ಕಾರ್ಯಗಳು ನಡೆಯುತ್ತಿದ್ದವು.

ಕೊಂಕಣಿ ಪ್ರಸಿದ್ಧ ವ್ಯಕ್ತಿಗಳ ಲೇಖನಮಾಲೆಯ ಸರಣಿಯಲ್ಲಿ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ನಾಟಕ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿರುವ ಪ್ರಸಿದ್ಧ ೧೮ ಕೊಂಕಣಿ ಸಾಧಕರ ಜೀವನ ಚಿತ್ರಣವನ್ನು ನೀಡುವ ಕಿರು ಪ್ರಕಟಣೆಗಳನ್ನು ಅಕಾಡೆಮಿ ಬೆಳಕಿಗೆ ತಂದಿತು.

ಸೇತು ಯೋಜನೆ

ಸುಮಾರು ಐದು ಶತಮಾನಗಳ ಹಿಂದೆ ಗೋವೆಯ ನಿವಾಸಿಗಳಾಗಿದ್ದ ನಮ್ಮ ಪೂರ್ವಜರು ಪರದೇಶಿಯರ ಆಕ್ರಮಣದ ಕಾರಣದಿಂದಾಗಿ ಗೋವೆ ಬಿಟ್ಟು ಮಹಾರಾಷ್ಟ್ರದ ಕೊಂಕಣ ಪ್ರದೇಶ, ಕೆಳಗೆ ಕಾರವಾರ(ಉ.ಕ.), ದ.ಕ. ಜಿಲ್ಲೆ, ಮಲಬಾರ, ಕೊಚ್ಚಿಯವರೆಗೆ ವಲಸೆ ಬಂದು ನೆಲೆಸಿದ್ದರಿಂದ ಕೊಂಕಣಿಯ ವಿವಿಧ ಪ್ರಾದೇಶಿಕ ಉಪಭಾಷೆಗಳು ದಿನನಿತ್ಯದ ವ್ಯವಹಾರದಲ್ಲಿ ಹುಟ್ಟಿಕೊಂಡಿದ್ದವು. ಇನ್ನು ಬರವಣಿಗೆಯಲ್ಲಿ ಕೇರಳದಲ್ಲಿ ನೆಲೆಸಿದ್ದವರು ಮಲೆಯಾಳಿ ಲಿಪಿಯನ್ನು, ಕರ್ನಾಟಕ-ದಲ್ಲಿರುವವರು ಕನ್ನಡ ಲಿಪಿಯ ಬಳಕೆಯನ್ನು ಪ್ರಾರಂಭಿಸಿದ್ದರು. ಪೋರ್ತುಗೀಸರು ಗೋವೆಯಲ್ಲಿ ಪೋರ್ತುಗೀಸ್ ಮತ್ತು ಮರಾಠಿ ಮಾಧ್ಯಮದ ಶಿಕ್ಷಣವನ್ನು ಜಾರಿಗೊಳಿಸಿದ್ದರಿಂದ ಅಲ್ಲಿ ಅನುಕ್ರಮವಾಗಿ ರೋಮಿ ಮತ್ತು ನಾಗರಿ ಲಿಪಿಗಳು ಬಳಕೆಗೆ ಬಂದವು. ಇದರಿಂದ ಕೊಂಕಣಿ ಸಾಹಿತ್ಯವು ಪ್ರಾದೇಶಿಕತೆಯನ್ನು ಅನುಸರಿಸಿ ಮಲೆಯಾಳಿ, ಕನ್ನಡ, ರೋಮಿ ಮತ್ತು ನಾಗರಿ ಲಿಪಿಗಳಲ್ಲಿ ಬೆಳೆದು ಬಂತು. ಈ ಕಾರಣವಾಗಿ ಒಂದು ಪ್ರದೇಶದವರು ಮತ್ತೊಂದು ಪ್ರದೇಶದ ಕೊಂಕಣಿ ಸಾಹಿತ್ಯವನ್ನು ಓದಿ ಆಸ್ವಾದಿಸುವುದಕ್ಕೆ ತಡೆಯುಂಟಾಯಿತು. ಉದಾಹರಣೆಗೆ ಕರ್ನಾಟಕದ ಕೊಂಕಣಿ ಸಾಹಿತ್ಯವನ್ನು(ಕನ್ನಡ ಲಿಪಿಯಲ್ಲಿರುವುದು) ಗೋವೆಯವರು ಓದಿ ತಿಳಿದುಕೊಳ್ಳುವುದು ಅಸಾಧ್ಯವಾಯಿತು. ಈ ಅಂತರವನ್ನು ಕಡಿಮೆ ಮಾಡಲು, ಮತ್ತು ಗೋವೆಯ ಮತ್ತು ಕರ್ನಾಟಕದ ಕೊಂಕಣಿ

ಸಾಹಿತಿಗಳನ್ನು ಹತ್ತಿರ ತಂದು ಲಿಪಿ ಮತ್ತು ಉಪಭಾಷೆಯ ಭೇದವನ್ನು ಅಳಿಸಿ ಹಾಕಲು ನಾನು ಗೋವೆಯ ಹಿರಿಯ ಸಾಹಿತಿ, ಪತ್ರಿಕೋದ್ಯಮಿ ಹಾಗೂ ಕೊಂಕಣಿ ಚಳವಳಿಯ ನೇತಾರರಾಗಿದ್ದ ಶ್ರೀ ಉದಯ ಬೆಂಬ್ರೆಯವರ ಬಳಿ ಮಾತುಕತೆ ನಡೆಸಿ, ಅಕಾಡೆಮಿಯ ವತಿಯಿಂದ ಒಂದು ಚರ್ಚಾ ಗೋಷ್ಠಿಯನ್ನು ಮಾರ್ಚ್ ೨೩, ೧೯೯೮ರಲ್ಲಿ ಮಂಗಳೂರಿನ ಮಿಶನ್ ಕಂಪೌಂಡಿನಲ್ಲಿರುವ "ಸಹೋದಯ ಸಭಾಶಾಲೆ"ಯಲ್ಲಿ ನಡೆಸಿದ್ದೆ. ಇದರಲ್ಲಿ ಭಾಗವಹಿಸಲು ಗೋವೆಯ ಅಸ್ಮಿತಾಯ್ ಪ್ರಕಾಶನದ ಡಾ. ಅರವಿಂದ ಭಾತಿಕರ್ ಹಾಗೂ ಮಂಗಳೂರು, ಕುಮಟಾ, ಕಾರವಾರದ ಕೊಂಕಣಿ ಸಾಹಿತಿಗಳು ಬಂದಿದ್ದರು. ಎರಡು ದಿನಗಳ ಕಾಲ ನಡೆದ ಗೋಷ್ಠಿಯಲ್ಲಿ ಎರಡೂ ರಾಜ್ಯಗಳಲ್ಲಿಯೂ ಪರಸ್ಪರ ಸಾಹಿತ್ಯಕ ಸಂಬಂಧವನ್ನು ಬೆಳೆಸಿಕೊಳ್ಳುವುದರ ಕುರಿತು ವಿಷಯ ಮಂಡನೆ ನಡೆಯಿತು. ಮುಂದೆ ಇದೇ ರೀತಿಯ ಚರ್ಚಾಗೋಷ್ಠಿಯನ್ನು ಗೋವಾ ಕೊಂಕಣಿ ಅಕಾಡೆಮಿಯ ವತಿಯಿಂದ ಗೋವೆಯಲ್ಲಿ ನಡೆಸುವುದು ಮತ್ತು "ಸೇತು" ಪ್ರಕ್ರಿಯೆಯನ್ನು ಮುಂದುವರಿಸುವುದೆಂದು ತೀರ್ಮಾನ ಕೈಗೊಳ್ಳಲಾಯಿತು.

ಇದೇ ರೀತಿ ಏಪ್ರಿಲ್ ೨೧, ೧೯೯೮ರಂದು ಗೋವಾ ಕೊಂಕಣಿ ಅಕಾಡೆಮಿ ವತಿಯಿಂದ "ಸೇತು" ಪ್ರಕ್ರಿಯೆಯ ಎರಡನೆಯ ಸಭೆ ಮಡಗಾಂವನಲ್ಲಿ ಸೇರಿತ್ತು. ಇದರಲ್ಲಿ ಭಾಗವಹಿಸಲು ಮಂಗಳೂರಿನಿಂದ ನಾನು, ಎಡ್ವಿನ್ ಜೆ.ಎಫ್. ಡಿಸೋಜಾ, ಎರಿಕ್ ಒಝೇರಿಯೊ, ಶಿವಮೊಗ್ಗದಿಂದ ಎಂ. ಮಾಧವ ಪೈ ಮತ್ತು ಕುಮಟೆಯಿಂದ ಡಾ. ಶಿವರಾಮ ಕಾಮತ್ ಹೋಗಿದ್ದೆವು. ಸಭೆಯಲ್ಲಿ ವಿಷಯ ಪ್ರಸ್ತಾವನೆಯನ್ನು ಅಸ್ಮಿತಾಯ್ ಪ್ರಕಾಶನದ ಡಾ. ಅರವಿಂದ ಭಾತಿಕರ್(ನಿವೃತ್ತ ಪೋರ್ಟ್ ನಿರ್ದೇಶಕರು) ಮಂಡಿಸಿದರು. ಆಮೇಲೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಿತು. ಮುಂದಿನ ದಿನಗಳಲ್ಲಿ ಜಂಟಿಯಾಗಿ ಕಾರ್ಯಕ್ರಮಗಳನ್ನು ನಡೆಸುವುದೆಂದು ನಿರ್ಣಯವಾಯಿತು.

೨೦೦೧ ನೇ ಇಸವಿಯಲ್ಲಿ ಅಕಾಡೆಮಿ ಅಧ್ಯಕ್ಷರ ೩ ವರ್ಷಗಳ ಅವಧಿ ಮುಕ್ತಾಯಗೊಂಡಿತು. ನಾನು ಕೊಂಕಣಿ ಭಾಷಾ ಮಂಡಳದ ಸಭೆ ಕರೆದು ಕೊಂಕಣಿ ಭಾಷೆಯ ಹಿರಿಯ ಧುರೀಣರೂ, ರಾಕ್ಣೊ ಪತ್ರಿಕೆಯ ಮಾಜಿ ಸಂಪಾದಕರೂ ಆಗಿದ್ದ ಮೊ. ಅಲೆಕ್ಸಾಂಡರ್ ಡಿಸೋಜ ಅವರ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪತ್ರ ಕಳುಹಿಸಿದೆ. ಈ ದಿಕ್ಕಿನಲ್ಲಿ ಸತತ ಪ್ರಯತ್ನವನ್ನೂ ನಡೆಸಿದೆ. ಅಂದರೆ, ನಾನು ೪-೫ ಬಾರಿ ಬೆಂಗಳೂರಿಗೆ ಹೋಗಿ ಸರಕಾರದ ಅಧಿಕಾರಿಗಳನ್ನು ಭೇಟಿಯಾಗಿದ್ದರಿಂದ, ಮೊ. ಅಲೆಕ್ಸಾಂಡರ್ ಡಿಸೋಜ ಅಕಾಡೆಮಿ ಅಧ್ಯಕ್ಷರಾಗಿ ನೇಮಕಗೊಂಡರು. ಅವರು ಅಕಾಡೆಮಿಯ ವ್ಯವಹಾರ, ವ್ಯವಸ್ಥೆ ಇತ್ಯಾದಿಗಳಿಗೆ ನನ್ನನ್ನೇ ಆಧರಿಸಿಕೊಂಡಿದ್ದರಿಂದ, ನನಗೆ ಅಕಾಡೆಮಿಯನ್ನು ಬಿಟ್ಟರೂ ಬಿಡದಂತೆ ಇರುವ ಹಾಗಾಯಿತು.

೨೦೦೪, ಆಗಸ್ಟ್ ತಿಂಗಳಲ್ಲಿ ಕೊಂಕಣಿ ಅಕಾಡೆಮಿಗೆ ಮುಂದಿನ ಮೂರು ವರ್ಷಗಳಿಗೆ ಅಧ್ಯಕ್ಷರು ಮತ್ತು ಸದಸ್ಯರ(೧೨ ಮಂದಿ) ಹೆಸರನ್ನು ಸರಕಾರಕ್ಕೆ ಸೂಚಿಸುವುದಿತ್ತು. ನಾನು ಅಧ್ಯಕ್ಷಪದಕ್ಕೆ ಶ್ರೀ ಎರಿಕ್ ಒಝೇರಿಯೊ ಹೆಸರನ್ನು ಸೂಚಿಸಿದೆ ಮತ್ತು ಬೆಂಗಳೂರಿಗೆ ಹೋಗಿ ರೊನಾಲ್ಡ್ ಕೊಲಾಸೊ ಅವರನ್ನು ಭೇಟಿಯಾಗಿ ಹೊಸ ಅಧ್ಯಕ್ಷರು ಮತ್ತು ಸದಸ್ಯರ ಹೆಸರುಗಳಿದ್ದ ಪಟ್ಟಿಯನ್ನು ತೋರಿಸಿದೆ. ಅದನ್ನು ನೋಡಿ ಕೊಲಾಸೊ, "ನಿಯಮದ ಪ್ರಕಾರ ಈ ಬಾರಿ ಜಿ.ಎಸ್.ಬಿ. ಅಧ್ಯಕ್ಷರಾಗಬೇಕಲ್ಲ. ಅದನ್ನು ಯಾಕೆ ಬದಲಾಯಿಸಿದಿರಿ?" ಎಂದು ನನ್ನಲ್ಲಿ ಕೇಳಿದರು. ಅದಕ್ಕೆ ನಾನು "ಡಾ. ಕಸ್ತೂರಿ ಮೋಹನ ಪೈ ಅರ್ಹ ಅಭ್ಯರ್ಥಿ ಆಗಿದ್ದರು. ಆದರೆ ಅವರಿಗೆ ಅಧ್ಯಕ್ಷರಾಗಿ ಕಾರ್ಯ ನಡೆಸಲು ಸಮಯ ಸಿಗುವುದಿಲ್ಲವೆಂದು ಹೇಳಿದ್ದರಿಂದ ಕೊಂಕಣಿ ಅಕಾಡೆಮಿಯ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ನಾನು ಎರಿಕ್ ಒಝೇರಿಯೊ ಹೆಸರನ್ನು ಸೂಚಿಸಿದ್ದೇನೆ," ಎಂದು ಹೇಳಿದೆ. ಅವರ ಒಪ್ಪಿಗೆ ಪಡೆದ ಬಳಿಕ ಮಾನ್ಯ ಶ್ರೀ ವೀರಪ್ಪ ಮೊಯಿಲಿ, ಶ್ರೀ ಆರ್.ವಿ. ದೇಶಪಾಂಡೆ ಮತ್ತು ಶ್ರೀ ಯೋಗೀಶ್ ಭಟ್(ಶಾಸಕರು) ಇವರನ್ನೂ ಭೇಟಿಯಾಗಿ ಪಟ್ಟಿ ನೀಡಿದೆ. ನಾನು ನೀಡಿದ ಕೊಂಕಣಿ ಭಾಷಾ ಮಂಡಳದ ಪಟ್ಟಿಯನ್ನು ಶಿಫಾರಸಿನೊಂದಿಗೆ ಕಳುಹಿಸಿಕೊಡುವಂತೆ ತಿಳಿಸಿದೆ.

ಆ ಮೇಲೆ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯಸ್ಥರನ್ನೂ ಭೇಟಿಯಾಗಿ ಈ ಕುರಿತು ಮಾತನಾಡಿದೆ. ಆದರೆ ಮುಂದಿನ ದಿನಗಳಲ್ಲಿ ಕ್ರೈಸ್ತ ಸಹೋದರರು ಮತ್ತು ಗುರುಗಳ ವತಿಯಿಂದ ಶ್ರೀ ಎರಿಕ್ ಒಝೇರಿಯೊ ಹೆಸರಿಗೆ ವಿರೋಧ ವ್ಯಕ್ತಗೊಂಡು, ಅವರು ಬೇರೊಬ್ಬ ಮುಖ್ಯ ಲೇಖಕರ ಹೆಸರನ್ನು ಸೂಚಿಸಿ ಸರಕಾರಕ್ಕೆ ಕಳುಹಿಸಿಕೊಟ್ಟರು. ಆದರೂ, ಅಂತಿಮವಾಗಿ ನಾನು ಸೂಚಿಸಿದ ಎರಿಕ್ ಒಝೇರಿಯೊ ಹೆಸರನ್ನೇ ಸರಕಾರ ಘೋಷಿಸಿತು. ಈ ಕಾರಣದಿಂದ ನಾನು ಮುಂದೆ ಅನೇಕ ಸಮಸ್ಯೆಗಳನ್ನು ಅನುಭವಿಸಬೇಕಾಗಿ ಬಂತು. ದೇವರ ದಯೆಯಿಂದ ಅಖಿಲ ಕೊಂಕಣಿ ಸಮಾಜಕ್ಕೆ ನನ್ನ

ಮೇಲೆ ನಂಬಿಕೆ ಇದ್ದುದರಿಂದ ವಿಶ್ವ ಕೊಂಕಣಿ ಕೇಂದ್ರ ದರ್ಶನದ ಕುರಿತಾಗಿ, ಅಥವಾ ಬೇರೆ ಬೇರೆ ಜಾತಿ ಧರ್ಮದ ಕೊಂಕಣಿ ಸಮಾಜದ ಜನರನ್ನು ಒಟ್ಟುಗೂಡಿಸಿ ಒಂದೆಡೆ ಸೇರಿಸಬೇಕೆನ್ನುವ ನನ್ನ ಪ್ರಯತ್ನಕ್ಕೆ, ಅಥವಾ ಜಗತ್ತಿನಾದ್ಯಂತ ವಾಸ್ತವ್ಯ ಹೂಡಿರುವ ಕೊಂಕಣಿ ಜನರಲ್ಲಿ ಮೂಡಿಸಿದ ಪ್ರೀತಿ ಮತ್ತು ವಿಶ್ವಾಸಕ್ಕೆ ಧಕ್ಕೆ ತರುವುದು ಯಾರಿಂದಲೂ ಸಾಧ್ಯವಾಗಲಿಲ್ಲ.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ದಶಮಾನೋತ್ಸವ

೨೦೦೪ರಲ್ಲಿ ಕೊಂಕಣಿ ಅಕಾಡೆಮಿಯು ದಶಮಾನೋತ್ಸವ ನಡೆಯಲಿದ್ದುದರಿಂದ ಅಧ್ಯಕ್ಷರು ನಮ್ಮನ್ನು ಕರೆಯಿಸಿ ಸಭೆ ನಡೆಸಿದ್ದರು. ನಾನು ಎಲ್ಲಾ ರೀತಿಯಿಂದ ನನ್ನ ಸಹಾಯ, ಸಹಕಾರ ನೀಡಿ ದಶಮಾನೋತ್ಸವದ ಕಾರ್ಯಕ್ರಮ ಉತ್ತಮ ರೀತಿಯಲ್ಲಿ ನಡೆಯುವ ಪ್ರಯತ್ನ ಮಾಡಿದ್ದೆ. ಅದೇ ರೀತಿ ಕೊಂಕಣಿ ಭಾಷಾ ಮಂಡಳ ಮತ್ತು ಕೊಂಕಣಿ ಪ್ರತಿಷ್ಠಾನದ ವತಿಯಿಂದಲೂ ನನಗೆ ತುಂಬಾ ಕಾರ್ಯಗಳನ್ನು ನಡೆಸುವ ಅವಕಾಶ ಒದಗಿ ಬಂದಿತ್ತು.

ಅಕಾಡೆಮಿಯ ದಶಮಾನೋತ್ಸವವು ಮೇ ೨೬ ಮತ್ತು ೨೭, ಈ ಎರಡು ದಿನ ಮಂಗಳೂರಿನ ಪುರಭವನದಲ್ಲಿ ತುಂಬಾ ಉತ್ಸಾಹದಿಂದ ಅರ್ಥಪೂರ್ಣವಾಗಿ ಜರಗಿತು. ೨೬ ರಂದು ಸಂಜೆ ಐದೂವರೆ ಗಂಟೆಗೆ ಮಂಗಳೂರು ಕ್ರೈಸ್ತ ಧರ್ಮ ಪ್ರಾಂತ್ಯದ ಧರ್ಮಾಧ್ಯಕ್ಷರಾದ ಗೌರವಾನ್ವಿತ ಬಿಷಪ್ ಡಾ. ಅಲೋಶಿಯಸ್ ಪೌಲ್ ಡಿಸೋಜ (ಅವರು ನಮ್ಮ ಬಂಟವಾಳ ಎಸ್.ವಿ.ಎಸ್. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದವರು) ಅವರಿಂದ ಸಮಾರಂಭದ ಉದ್ಘಾಟನೆ ನಡೆಯಿತು. ಮಂಗಳೂರಿನ ಶಾಸಕರಾಗಿದ್ದ ಶ್ರೀ ಯೋಗೀಶ್ ಭಟ್ ಮುಖ್ಯ ಅತಿಥಿಗಳಾಗಿದ್ದರು. ಮರುದಿನ ೨೭ ರಂದು ಕೊಂಕಣಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಗೋಷ್ಠಿಗಳು ಮತ್ತು ಕಾರ್ಯಕ್ರಮಗಳು ನಡೆದಿದ್ದವು. ಸಂಜೆಯ ಸಮಾರೋಪ ಸಮಾರಂಭದಲ್ಲಿ ನಾನು ಅಧ್ಯಕ್ಷನಾಗಿದ್ದೆ. ಮಣಿಪಾಲದ ಡಾ. ಹೆಚ್. ಶಾಂತಾರಾಮ್ ಅವರು ಮುಖ್ಯ ಅತಿಥಿಗಳಾಗಿದ್ದರು.

ಕೊಂಕಣಿ ಅಕಾಡೆಮಿಯ ಗ್ರಂಥ ಪ್ರಕಾಶನ

ಇಡೀ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಕೊಂಕಣಿ ಭಾಷಿಕ ಹಿರಿಯರು ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದರು. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಅಥವಾ ಯಾವುದೇ ಇತರ ಕ್ಷೇತ್ರಗಳಲ್ಲಿ ನಮ್ಮ ಕೊಂಕಣಿ ಭಾಷಿಕರು ಬಹಳ ಕೆಲಸ ಮಾಡಿ ಆಯಾ ಕ್ಷೇತ್ರದಲ್ಲಿ ದೇಶದಾದ್ಯಂತ ಹೆಸರುವಾಸಿಗಳಾಗಿದ್ದಾರೆ. ಅಂತಹ ಪ್ರಸಿದ್ಧ ವ್ಯಕ್ತಿಗಳನ್ನು ಸ್ಮರಿಸಿ, ಮುಂದಿನ ಪೀಳಿಗೆಗೆ ಅವರ ಹಾಗೂ ಅವರ ಸೇವಾಕ್ಷೇತ್ರಗಳ ನೆನಪನ್ನು ನಿರಂತರವಾಗಿ ಉಳಿಸಿಕೊಳ್ಳುವ ರೀತಿಯಿಂದ ಗ್ರಂಥಗಳನ್ನು ಪ್ರಕಟಿಸುವುದು ನಮ್ಮ ಕರ್ತವ್ಯ ಎಂಬ ದೃಷ್ಟಿಯಲ್ಲಿ ಕೊಂಕಣಿ ಅಕಾಡೆಮಿಯ ವತಿಯಿಂದ "ಮಹಾ ಮಾನೆಸ್ತ ಲೇಖನ ಮಾಲಾ" ಎಂಬ ಗ್ರಂಥ ಸರಣಿಯನ್ನು ಪ್ರಾರಂಭಿಸುವ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಈ ಯೋಜನೆಯಲ್ಲಿ ಒಟ್ಟು ಹದಿನಾರು ಕಿರು ಪುಸ್ತಿಕೆಗಳು ಬೆಳಕಿಗೆ ಬಂದವು. ಇದರಿಂದ ಕೊಂಕಣಿ ಭಾಷೆಯ ಸಣ್ಣ ಸಣ್ಣ ಬರೆವಣಿಗೆಗಳಿಗೆ ಪ್ರೋತ್ಸಾಹ ನೀಡಿದಂತಾಯಿತು. ಈ ಲೇಖನ ಮಾಲಿಕೆಯಲ್ಲಿ ದ.ಕ., ಉಡುಪಿ, ಉ.ಕ. ಜಿಲ್ಲೆಗಳ ಮತು ಕರ್ನಾಟಕದ ಇತರ ಜಿಲ್ಲೆಗಳ ಪ್ರಸಿದ್ಧ ಕೊಂಕಣಿ ಮಹಾ ವ್ಯಕ್ತಿಗಳ ಜೀವನ ಚರಿತ್ರೆಗಳು ಪ್ರಕಟಗೊಂಡವು. ಇದೇ ರೀತಿ ರಾಜ್ಯದ ಚಿಕ್ಕ, ದೊಡ್ಡ ಲೇಖಕರನ್ನು ಪರಿಚಯಿಸಿದಂತೆಯೂ ಆಯಿತು.

ಕೊಂಕಣಿ ಸಮಾಂತರ ಶಬ್ದಕೋಶ

ನಾನು ಕೊಂಕಣಿ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ "ಕೊಂಕಣಿ ಸಮಾಂತರ ಶಬ್ದಕೋಶ"ವೆಂಬ ಅಪರೂಪದ ಒಂದು ಶಬ್ದಕೋಶದ ಸಿದ್ಧತೆಗೆ ಕೈಹಾಕಿದ್ದೆ. ಅದಕ್ಕೆ ಮೂಲ ಕಾರಣ, ನಾನು ವಿಶ್ವ ಕೊಂಕಣಿ ಸಮ್ಮೇಳನದ ಸಂಘಟನೆಯ ಕಾರ್ಯದಲ್ಲಿ ಪೂರ್ವ ನಿಯೋಜಿತವಾಗಿದ್ದ ರೀತಿಯಲ್ಲಿ ಮುಂಬೈಯಿಂದ ಪುಣೆಗೆ ಹೋಗಿದ್ದಾಗ ಅಲ್ಲಿ ಒಂದು ಪುಸ್ತಕದಂಗಡಿಗೆ ಭೇಟಿ ನೀಡಿದ್ದೆ. ಅಲ್ಲಿ ನನಗೆ ಪುಣೆಯ ಮೆಹತಾ ಪಬ್ಲಿಷಿಂಗ್ ಹೌಸ್ ಸಂಸ್ಥೆ ಪ್ರಕಟಿಸಿದ "ಹದಿನಾರು ಭಾರತೀಯ ಭಾಷೆಗಳ ಶಬ್ದಕೋಶ" ಎಂಬ ಅಪರೂಪದ ಗ್ರಂಥ ಕಾಣಲು ಸಿಕ್ಕಿತ್ತು. ಆ ದಿನಗಳಲ್ಲಿ, ಅಂದರೆ ಭಾರತೀಯ ಸಂವಿಧಾನದ ೮ನೇ ಅನುಸೂಚಿಯಲ್ಲಿ ಸ್ವೀಕೃತವಾಗಿದ್ದ ಹದಿನಾರು ಭಾಷೆಗಳ ಶಬ್ದಕೋಶ ಅದಾಗಿತ್ತು. ಅದರಲ್ಲಿ ಭಾರತದ ರಾಷ್ಟ್ರಭಾಷೆ ಹಿಂದಿಯ ಪದಗಳಿಗೆ ಉಳಿದ ಹದಿನೈದು ಭಾಷೆಗಳ ಅರ್ಥ ನೀಡಲಾಗಿತ್ತು. ಈ ಶಬ್ದಕೋಶಕ್ಕೆ ದೇಶದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದರು ಶ್ಲಾಘನೆ ಮಾಡಿದ್ದರು. ಈ ಗ್ರಂಥವನ್ನು ಪುಣೆಯ ಶ್ರೀ ವಿಶ್ವನಾಥ ದಿನಕರ ನರವಣಿಯವರು ಸಂಪಾದಿಸಿ, ತ್ರಿವೇಣಿ ಸಂಗಮ, ಮುಂಬೈ ಈ ಸಂಸ್ಥೆಯವರು ಇದರ ಪ್ರಾಯೋಜನೆ ನಡೆಸಿದ್ದರು. ನಾನು ಈ ಶಬ್ದಕೋಶವನ್ನು ಖರೀದಿಸಿದ್ದೆ.

ಆ ಶಬ್ದಕೋಶವನ್ನು ನೋಡಿದಾಗ ಇದೇ ರೀತಿ ಕೊಂಕಣಿ ಭಾಷೆಯಲ್ಲಿಯೂ ಒಂದು ಶಬ್ದಕೋಶವನ್ನು ರಚಿಸಬೇಕೆಂಬ ವಿಚಾರ ನನ್ನ ಮನಸ್ಸಿನಲ್ಲಿ ಹೊಳೆದಿತ್ತು. ಕೊಂಕಣಿ ಭಾಷಿಕರಲ್ಲಿ ಇರುವಂತಹ ವಿಭಿನ್ನ ಪ್ರಾದೇಶಿಕ, ಸಾಂಸ್ಕೃತಿಕ ಉಪಭಾಷೆಗಳ ಶಬ್ದಸಂಗ್ರಹ ನಡೆಸಿ ಅದನ್ನು ಗ್ರಂಥ ರೂಪದಲ್ಲಿ ಪ್ರಕಟಿಸಬಹುದು ಎಂದು ನನಗೆ ಕಂಡಿತು. ಹೀಗಾಗಿ ಅಕಾಡೆಮಿ ಅಧ್ಯಕ್ಷನಾಗಿದ್ದಾಗ ಅಮೂಲ್ಯ ಸಾಹಿತ್ಯ ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಪ್ರಾರಂಭಿಸಿ, ಅದರಲ್ಲಿ "ಕೊಂಕಣಿ ಸಮಾಂತರ ಶಬ್ದಕೋಶ" ರಚನೆಯನ್ನು ಕೈಗೆತ್ತಿಕೊಂಡಿದ್ದೆ. ಕೊಂಕಣಿ ಭಾಷೆಯನ್ನಾಡುವ ವಿವಿಧ ಪ್ರದೇಶಗಳ, ಸಮಾಜದ ಪ್ರತಿನಿಧಿಗಳನ್ನು ಒಟ್ಟು ಸೇರಿಸಿ ಕುಮಟಾದ ಕೊಂಕಣಿ ನೇತಾರ ಶ್ರೀ ಅರುಣ ಉಭಯಕರ, ಡಾ. ಶಿವರಾಮ ಕಾಮತ್ ಇವರ ಸಹಕಾರದಿಂದ ತಿಂಗಳಲ್ಲಿ ಎರಡು ಬಾರಿ ಕುಮಟೆಯಲ್ಲಿ ಶಬ್ದಸಂಗ್ರಹ ನಡೆಸುವುದು ಮತ್ತು ಅದನ್ನು ಪ್ರಕಟಿಸುವುದು ಈ ಯೋಜನೆಯ ಕಾರ್ಯವಾಯಿತು.

ನಾನು ಮೈಸೂರಿಗೆ ಬೇರೊಂದು ಕಾರ್ಯಕ್ಕಾಗಿ ಹೋಗಿದ್ದಾಗ, ಅಲ್ಲಿ ಭಾರತೀಯ ಭಾಷಾ ಸಂಸ್ಥಾನದ (ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್) ನಿರ್ದೇಶಕರಾದ ಡಾ. ಉದಯ ನಾರಾಯಣ ಸಿಂಗ್ ಅವರನ್ನು ಭೇಟಿಯಾಗಿದ್ದೆ. ಆಗ "ಕೊಂಕಣಿ ಸಮಾಂತರ ಶಬ್ದಕೋಶ"ದ ಕುರಿತು ಅವರಲ್ಲಿ ಪ್ರಸ್ತಾಪಿಸಿದಾಗ ಅವರಿಗೆ ಅದನ್ನು ಕೇಳಿ ತುಂಬಾ ಸಂತೋಷವಾಗಿ, "ಮಿಸ್ಟರ್ ಶೆಣೈ ನಾವು ಮಾಡಬೇಕಾಗಿರುವ ಕಾರ್ಯವನ್ನು ನೀವು ಮಾಡುತ್ತಿದ್ದೀರಿ" ಎಂದು ಅವರು ಹೇಳಿದರಲ್ಲದೆ, "ಈ ಯೋಜನೆಯಲ್ಲಿ ನೀವು ಭಾಷಾ ಸಂಸ್ಥಾನವನ್ನು ಸಹಯೋಗದಲ್ಲಿ ಯಾಕೆ ತೊಡಗಿಸಿಕೊಳ್ಳಬಾರದು? ಹಾಗೆ ಮಾಡಿದರೆ ನಮ್ಮ ಸಂಸ್ಥೆಯ ಪರವಾಗಿ ನಾನು ನಿಮಗೆ ಧನಸಹಾಯ ನೀಡುತ್ತೇನೆ" ಎಂದರು. ಅದಕ್ಕೆ ನಾನು, ಶಬ್ದಕೋಶದ ಶಬ್ದಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆಗೆ ಸುಮಾರು ಎರಡೂವರೆ ಲಕ್ಷ ರೂ ಬೇಕಾಗಬಹುದು ಎಂದು ಅವರಲ್ಲಿ ಹೇಳಿದೆ. ಹಾಗಿದ್ದರೆ ಭಾಷಾ ಸಂಸ್ಥಾನದ ವತಿಯಿಂದ ಸಧ್ಯಕ್ಕೆ ಎಪ್ಪತ್ತೈದು ಸಾವಿರ ರೂ ನೀಡುವುದಾಗಿಯೂ, ಶಬ್ದಕೋಶದಲ್ಲಿ ತಮ್ಮ ಸಂಸ್ಥೆಯ ಹೆಸರನ್ನು ಸಹಯೋಗದಲ್ಲಿ ಉಲ್ಲೇಖಿಸಬೇಕೆಂದು ಅವರು ತಿಳಿಸಿದಾಗ, ನಾನು ಅದಕ್ಕೆ ಒಪ್ಪಿಕೊಂಡೆ. ಇದರಿಂದ "ಕೊಂಕಣಿ ಸಮಾಂತರ ಶಬ್ದಕೋಶ" ಪ್ರಕಟವಾಗಿ ಜನಪ್ರಿಯವಾಯಿತು. ನಾನು ಅಮೇರಿಕ, ದುಬಾಯಿ ಇತ್ಯಾದಿ ದೇಶಗಳಿಗೆ ಹೋದಾಗಲೂ ಅಲ್ಲಿಗೂ ಕೊಂಡುಹೋದ ಈ ಶಬ್ದಕೋಶದ ಪ್ರತಿಗಳು ಮಾರಾಟವಾಗಿವೆ.

ಇದೇ ರೀತಿ ಶ್ರೀ ಗೋಪಾಲ ಗೌಡರು ಕೊಂಕಣಿ ಸಮಾಜದ ಕುಡುಂಬಿ ಸಮುದಾಯದ ಜಾನಪದ ಸಂಗೀತ ಮತ್ತು ನೃತ್ಯದ ಕುರಿತು ಬರೆದ ಗ್ರಂಥವನ್ನು ಅಕಾಡೆಮಿ ಪ್ರಕಟಿಸಿದೆ. ಆಮೇಲೆ ಪ್ರಸಿದ್ಧ ಗುಮಟಾ ಕಲಾವಿದರಾದ ಶ್ರೀ ಜೋಕಿಮ್ ಪಿರೇರಾ ಸಂಗ್ರಹಿಸಿದ ಕ್ರೈಸ್ತ ಕೊಂಕಣಿ ಸಹೋದರರ ಗುಮಟಾ ಹಾಡುಗಳ ಕೊಂಕಣಿ ಜಾನಪದ ನೃತ್ಯ, ಸಂಗೀತದ ಕುರಿತಾದ ಗ್ರಂಥವನ್ನೂ ಅಕಾಡೆಮಿ ಪ್ರಕಟಿಸಿದೆ. ಮೇ ೧೨, ೨೦೦೦ ಇಸವಿಯಲ್ಲಿ ಮಂಗಳೂರಿನ ಶ್ರೀನಿವಾಸ ಪಾಠಶಾಲೆಯಲ್ಲಿ ೪ ಗ್ರಂಥಗಳ ಬಿಡುಗಡೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರು ನಡೆಸಿಕೊಟ್ಟಿದ್ದರು. ಈ ಕಾರ್ಯಕ್ರಮದಲ್ಲಿ ಇತಿಹಾಸತಜ್ಞ, ಸಂಶೋಧಕ ಡಾ. ಸೂರ್ಯನಾಥ ಕಾಮತ್ ಅವರನ್ನು ಸನ್ಮಾನಿಸಲಾಗಿತ್ತು.

ಆಗಿನ ಕಾಲದಲ್ಲಿ ಕೊಂಕಣಿ ಅಕಾಡೆಮಿಗೆ ಸರಕಾರದಿಂದ ವಾರ್ಷಿಕ ಅನುದಾನದ ರೂಪದಲ್ಲಿ ಏಳು ಲಕ್ಷ ರೂ ಮಾತ್ರ ದೊರೆಯುತ್ತಿತ್ತು. ಹೀಗಾಗಿ ಹೆಚ್ಚು ಗ್ರಂಥಗಳನ್ನು ಪ್ರಕಟಿಸುವುದು ಸಾಧ್ಯವಾಗಿರಲಿಲ್ಲ. ಗ್ರಂಥ ಪ್ರಕಾಶನವಲ್ಲದೆ ವಾರ್ಷಿಕ ಪ್ರಶಸ್ತಿ, ಪುಸ್ತಕ ಪುರಸ್ಕಾರ, ಗೋಷ್ಠಿ, ಕಾರ್ಯಾಗಾರ, ಮತ್ತು ಕೊಂಕಣಿ ಸಂಘ, ಸಂಸ್ಥೆಗಳಿಗೆ ಸಹಾಯಧನ ನೀಡಿ ಪ್ರಾಯೋಜಿಸುವ ಕಾರ್ಯಕ್ರಮಗಳು ಇದ್ದವು.

ಶ್ರೀಮತಿ ವಸಂತಿ ಆರ್ ನಾಯಕ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ವಿದೂಷಿ. ಸುಗಮ ಸಂಗೀತ, ಭಕ್ತಿಗೀತೆಗಳು ಮತ್ತು ಕೊಂಕಣಿ ಸಂಗೀತ ಕ್ಷೇತ್ರದಲ್ಲಿಯೂ ರಾಜ್ಯಮಟ್ಟದಲ್ಲಿ ಹೆಸರು ಪಡೆದವರು. ಅವರಿಗೆ ರಾಜ್ಯಸರ್ಕಾರ, ಕೊಂಕಣಿ ಅಕಾಡೆಮಿ ಮತ್ತು ಅನೇಕ ಸಂಘ, ಸಂಸ್ಥೆಗಳಿಂದ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ. ಅವರು "ಸ್ವರಶ್ರೀ ಸಂಗೀತ ಶಾಲೆ"ಯನ್ನು ಪ್ರಾರಂಭಿಸಿ ಎಳೆಯ ವಯಸ್ಸಿನ ವಿದ್ಯಾರ್ಥಿಗಳಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಭಕ್ತಿ ಗೀತೆಗಳನ್ನು ಕಲಿಸುತ್ತಿದ್ದಾರೆ. ಪ್ರತೀ ವರ್ಷ ಮೇ ತಿಂಗಳ ಶಾಲಾ ರಜಾ ದಿನಗಳಲ್ಲಿ "ಅಂಕುರ" ಹೆಸರಿನಲ್ಲಿ ೧೦-೧೫ ದಿನಗಳ ಕಾರ್ಯಾಗಾರವನ್ನು ನಡೆಸಿ ಸಂಗೀತ ಮತ್ತು ಇತರ ವಿಷಯಗಳಲ್ಲಿ ವೃತ್ತಿ ಶಿಕ್ಷಣ ತರಬೇತಿ ನೀಡುತ್ತಿದ್ದಾರೆ. ಶ್ರೀಮತಿ ವಸಂತಿ ನಾಯಕ್ ನನ್ನ ಕೊಂಕಣಿ ಕಾರ್ಯಕ್ರಮಗಳಲ್ಲಿ

ಉತ್ಸಾಹದಿಂದ ಭಾಗವಹಿಸಿ ನನಗೆ ತುಂಬಾ ಬೆಂಬಲ ನೀಡುತ್ತಿದ್ದರು.

೨೦೦೧ನೇ ಇಸವಿಯಲ್ಲಿ ಎಲ್ಲಾ ಭಾಷಾ ಅಕಾಡೆಮಿಗಳನ್ನು(ಕೊಂಕಣಿ, ತುಳು, ಕೊಡವ ಮತ್ತು ಉರ್ದು) ಪ್ರತ್ಯೇಕವಾಗಿ ನಡೆಸದೆ ಅವುಗಳನ್ನು ಕನ್ನಡ ಸಾಹಿತ್ಯ ಅಕಾಡೆಮಿಯಲ್ಲಿ ಸೇರಿಸಿಕೊಳ್ಳುವ ವಿಚಾರ ಸರಕಾರದ ಮುಂದೆ ಬಂದಿತ್ತು. ಆ ಸಮಯದಲ್ಲಿ ನಾನು ಹಾಗೆ ನಡೆಯಬಾರದು, ಕೊಂಕಣಿ ಅಕಾಡೆಮಿಯ ಅಸ್ತಿತ್ವ ಪ್ರತ್ಯೇಕವಾಗಿ ಉಳಿಯಬೇಕು ಎಂದು ಸರ್ಕಾರಕ್ಕೆ ವಿನಂತಿ ಪತ್ರವನ್ನು ಕಳುಹಿಸಿಕೊಟ್ಟಿದ್ದೆ. ಅದೇ ರೀತಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತು ಮಾನ್ಯ ಶ್ರೀ ಆರ್.ವಿ.ದೇಶಪಾಂಡೆಯವರೊಂದಿಗೆ ಮಾತುಕತೆ ನಡೆಸಿದ ಫಲವಾಗಿ ಸರಕಾರದಿಂದ ನಾನು ಕೊಂಕಣಿ ಅಕಾಡೆಮಿಯನ್ನು ಉಳಿಸಿಕೊಳ್ಳುವ ಹಾಗಾಯಿತು. ಈ ಕಾರ್ಯಕ್ಕಾಗಿ ನಾನು ಮಾನ್ಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರೊಂದಿಗೆ ಪತ್ರ ವ್ಯವಹಾರವನ್ನೂ ನಡೆಸಿದ್ದೆ.

೨೦೦೪ನೇ ಇಸವಿಯಲ್ಲಿ ಮೊ. ಅಲೆಕ್ಸಾಂಡರ್ ಡಿಸೋಜಾ ಅವರ ನೇತೃತ್ವದಲ್ಲಿ ಗೋವೆಯಿಂದ ಪಠ್ಯಪುಸ್ತಕಗಳನ್ನು ತಂದು, ಅವುಗಳಲ್ಲಿನ ಕೆಲವು ಪ್ರಾದೇಶಿಕ ಪದಗಳನ್ನು ಬದಲಾಯಿಸಿ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಿ, ಕರ್ನಾಟಕ ಸರ್ಕಾರವು ರಾಜ್ಯದ ಶಾಲೆಗಳಲ್ಲಿ ಕೊಂಕಣಿ ಶಿಕ್ಷಣವನ್ನು ಪ್ರಾರಂಭಿಸುವ ಪ್ರಯತ್ನವನ್ನು ನಡೆಸಿತ್ತು.

ಅಕಾಡೆಮಿ ವತಿಯಿಂದ ಕೆಲವು ಮೌಲಿಕ ಗ್ರಂಥಗಳನ್ನು ಪ್ರಕಟಿಸುವ ಯೋಜನೆಯನ್ನು ಹಾಕಿಕೊಂಡಿದ್ದ ನನಗೆ ಸರ್ಕಾರ ನೀಡುತ್ತಿದ್ದ ಅನುದಾನದಿಂದ ಆ ಕಾರ್ಯವನ್ನು ನಡೆಸುವುದು ಸಾಧ್ಯವಾಗುತ್ತಿರಲಿಲ್ಲ. ವಾರ್ಷಿಕ ಅನುದಾನದ ರೂಪದಲ್ಲಿ ಅಕಾಡೆಮಿ ಪಡೆಯುತ್ತಿದ್ದ ಏಳು ಲಕ್ಷ ರೂಪಾಯಿಗಳಲ್ಲಿ ಕಚೇರಿ ಬಾಡಿಗೆ, ನೌಕರರ ವೇತನ ಮತ್ತು ಇತರ ಖರ್ಚುವೆಚ್ಚಗಳು ನಡೆಯಬೇಕಿತ್ತು. ಹೀಗಾಗಿ ನಾನು ಕೆಲವು ಗ್ರಂಥಗಳ ಪ್ರಕಟಣೆಗೆ ಡಾ. ಟಿ. ಎಂ. ಎ.ಪೈ ಪ್ರತಿಷ್ಠಾನ, ಶ್ರೀ ಪಿ. ದಯಾನಂದ ಪೈ, ಶ್ರೀ ಎಂ. ಜಗನ್ನಾಥ ಶೆಣೈ, ಮತ್ತು ಕೆನರಾ ಪ್ರೌಢಶಾಲಾ ಅಸೋಸಿಯೇಶನ್ನಿನ ಕಾರ್ಯದರ್ಶಿ ಶ್ರೀ ಕೇಪುಳ ದಿನೇಶ್ ನಾಯಕ ಅವರಿಂದ ಧನ ಸಹಾಯವನ್ನು ಪಡೆದು ಈ ಕಾರ್ಯವನ್ನು ನಡೆಸಿದ್ದೆ.

ಡಾ. ಟಿ.ಎಂ.ಎ.ಪೈ ಪ್ರತಿಷ್ಠಾನವು ಕಳೆದ ೧೦-೧೫ ವರ್ಷಗಳಿಂದ ಅಖಿಲ ಭಾರತ ಕೊಂಕಣಿ ನಾಟಕ ಸ್ಪರ್ಧೆಯನ್ನು ನಡೆಸುತ್ತಾ ಬಂದಿದೆ. ನಾಟಕ ಪ್ರದರ್ಶನ ಉಡುಪಿಯಲ್ಲಿ ನಡೆಯುವುದಿತ್ತು. ಆದರೆ ಅಲ್ಲಿ ಪ್ರೇಕ್ಷಕರು ಕಡಿಮೆ ಇದ್ದುದರಿಂದ, ಶ್ರೀ ಕೆ.ಕೆ.ಪೈ ಹಾಗೂ ಶ್ರೀ ಹೆಚ್.ವಿ. ಕಾಮತರು ಈ ನಾಟಕ ಸ್ಪರ್ಧೆಯನ್ನು ೨೦೦೧ನೇ ಇಸವಿಯಿಂದ ಮಂಗಳೂರಿನಲ್ಲಿ ನಡೆಸುವಂತೆ ಆದೇಶ ನೀಡಿದ್ದರು. ಹೀಗಾಗಿ ೨೦೦೧ನೇ ಇಸವಿಯಲ್ಲಿ ಏಪ್ರಿಲ್ ೨ ರಿಂದ ೧೪ ರವರೆಗೆ ಅಖಿಲ ಭಾರತ ಕೊಂಕಣಿ ನಾಟಕ ಸ್ಪರ್ಧೆಯು ಮಂಗಳೂರಿನ ಶ್ರೀನಿವಾಸ ಪಾಠಶಾಲೆಯಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಮಂಗಳೂರಿನಲ್ಲಿ ಪ್ರಾರಂಭವಾಯಿತು. ಗೋವೆಯಿಂದ ೫, ಮಂಗಳೂರು ಮತ್ತು ಬೆಂಗಳೂರಿನಿಂದ ತಲಾ ಒಂದೊಂದು ನಾಟಕಗಳು ಸ್ಪರ್ಧೆಯಲ್ಲಿ ಭಾಗಿಯಾಗಿದ್ದವು.

೨೦೦೧ನೇ ಇಸವಿ ಏಪ್ರಿಲ್ ೧೫ ರಿಂದ ೨೬ರವರೆಗೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಶ್ರೀ ಯಶವಂತ ವ್ಯಾಯಾಮ ಶಾಲೆಯ ಸಹಯೋಗದೊಂದಿಗೆ ಬಂಟವಾಳದಲ್ಲಿ "ಯೋಗ-ಸಂಸ್ಕಾರ ಶಿಬಿರ"ವನ್ನು ಆಯೋಜಿಸಲಾಗಿತ್ತು. ಈ ಶಿಬಿರವು ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮೀ ಯೋಗಶಾಲೆಯ ಡಾ. ರಾಘವೇಂದ್ರ ಪೈ ಅವರ ಮಾರ್ಗದರ್ಶನದಲ್ಲಿ ನಡೆದಿತ್ತು. ಶಿಬಿರಾರ್ಥಿಗಳಿಗೆ ಉಪನ್ಯಾಸ ನೀಡಲು ಮಂಗಳೂರಿನ ಶ್ರೀ ಹೆಚ್. ರಾಘವೇಂದ್ರ ರಾವ್, ಶ್ರೀಮತಿ ಸುಚಿತ್ರಾ ಶೆಣೈ(ಕೆನರಾ ಪ್ರೌಢಶಾಲೆ, ಉರ್ವಾ), ಶ್ರೀ ಪಿ.ಎನ್. ಕಾಮತ್ (ಕಾರ್ಯದರ್ಶಿ, ಯಶವಂತ ವ್ಯಾಯಾಮ ಶಾಲೆ) ಮತ್ತು ಶ್ರೀಮತಿ ಜಯಶ್ರೀ ಶೆಣೈ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಸುದರ್ಶನ ಕ್ರಿಯಾಯೋಗದ ತಜ್ಞರಾದ ಶ್ರೀಮತಿ ಸುಕನ್ಯಾ ಅವರು ಶಿಬಿರಾರ್ಥಿಗಳಿಗೆ ಬೌದ್ಧಿಕ ಬೋಧನೆ ಮತ್ತು ಯೋಗಾಭ್ಯಾಸವನ್ನು ಕಲಿಸುತ್ತಿದ್ದರು. ನಾನು ಈ ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಗಣೇಶ್ ಟ್ರಾವಲ್ಸ್ ಅವರ ಬಸ್ಸಿನಲ್ಲಿ ಮಂಗಳೂರಿಗೆ ಕರೆದುಕೊಂಡು ಹೋಗಿ ಅವರಿಗೆ ಸಂತ ಅಲೋಶಿಯಸ್ ಕಾಲೇಜು, ಕೆನರಾ ಪ್ರೌಢಶಾಲೆ, ಮಂಗಳೂರು ಕಾರಾಗೃಹ, ಕೊಂಕಣಿ ಅಕಾಡೆಮಿ, ಸೀಮಂತಿನಿಬಾಯಿ ಮ್ಯೂಸಿಯಂ, ಆಕಾಶವಾಣಿ ಕೇಂದ್ರ, ಕದ್ರಿ ಪಾರ್ಕ್, ಸುಲ್ತಾನ ಬತ್ತೇರಿ ಮೊದಲಾದವುಗಳನ್ನು ತೋರಿಸಿ ಬಂದಿದ್ದೆ. ಸಮಾರೋಪ ಸಮಾರಂಭಕ್ಕೆ ಮಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಪೂರ್ಣಕಾಮಾನಂದಜೀ ಮಹಾರಾಜ್ ಅವರು ಬಂದು ಆಶೀರ್ವಚನ ನೀಡಿದ್ದರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಗ್ರಂಥ ಪ್ರಕಟಣೆಗಳು

೧. ಕವಿತಾಮೃತ–ಅಕಾಡೆಮಿ ಪ್ರಕಾಶನ
೨. ಗೊಂಯ್ ಸಾಂಡುನ ಆಯ್ಲಿ ಮಾಂಯ–ಜೋಕಿಮ್ ಪಿರೇರಾ
೩. ಕೊಂಕಣ್ಯಾಲಿ ಕಾವಿಕಲಾ–ಡಾ. ಕೃಷ್ಣಾನಂದ ಕಾಮತ
೪. ಕುಡ್ಮಾಲ್ಯಿ ಗುಮ್ಟಾಂ–ಆನಿ ತೋಣಿಯಾ ಪದಾಂ–ಗೋಪಾಲ ಗೌಡ
೫. ಬಾಕಿಬಾಬ ಬೊರಕಾರ–ಪ್ರಕಾಶ ಥಳಿ (ಲಿಪ್ಯಂತರ)
೬. ಸಿ.ಸಿ.ಎ. ಪೈ (ಸ್ವಾಮಿ ಸುಪ್ರಿಯಾ)–ವಿಲಿಯಂ ಮಾಡ್ತಾ
೭. ಕೊಂಕಣಿ ಕಳೊ–ಅಕಾಡೆಮಿ ಪ್ರಕಾಶನ
೮. ಕೊಂಕಣಿ ಸಮಾಂತರ ಶಬ್ದಕೋಶ–ಅಕಾಡೆಮಿ ಪ್ರಕಾಶನ

ಕೊಂಕಣಿ ಮಹನೀಯರು ಲೇಖನ ಮಾಲೆ

೧. ಲುವಿಸ್ ಮಸರೇಞಸ್–ಗ್ಲೇಡಿಸ್ ರೇಗೊ
೨. ಕಾರ್ನಾಡ ಸದಾಶಿವ ರಾವ್–ವಿಶ್ವ, ಕುಂದಾಪುರ
೩. ಎ.ಟಿ. ಲೋಬೊ–ಗ್ಲೇಡಿಸ್ ರೇಗೊ
೪. ಪಂಜೆ ಮಂಗೇಶ ರಾವ್–ಸಿ. ವಾಸುದೇವ ಭಟ್
೫. ಉಳ್ಳಾಲ ಶ್ರೀನಿವಾಸ ಮಲ್ಯ–ಬಸ್ತಿ ವಾಮನ ಶೆಣೈ
೬. ಅಮ್ಮೆಂಬಳ ಸುಬ್ಬರಾವ್ ಪೈ–ಸಂಧ್ಯಾ ಶೆವಗೂರ
೭. ಚಾ. ಫ್ರಾ. ದಕೋಸ್ತ–ವಿಕ್ಟರ್ ಡಿಸಿಲ್ವಾ
೮. ಮಂಜೇಶ್ವರ ಗೋವಿಂದ ಪೈ ನಾಗರಾಜ ಜವಳಿ
೯. ಪಂಡಿತ ತಾರಾನಾಥ ಸಂಧ್ಯಾ ಶೆವಗೂರ
೧೦. ದಿನಕರ ದೇಸಾಯಿ–ವಾಸುದೇವ ಶಾನುಭಾಗ್
೧೧. ಎಂ.ಎನ್. ಕಾಮತ್–ಲೀಲಾ ಭಟ್
೧೨. ಹಿರಿಯಡ್ಕ ರಾಮರಾಯ ಮಲ್ಯ ಇಂದಿರಾ ನಾಯಕ್
೧೩. ಕರ್ನಾಟಕ ಗಾಂಧಿ ತಿಮ್ಮಪ್ಪ ನಾಯಕ–ವಿಶ್ವ, ಕುಂದಾಪುರ
೧೪. ಡಾ. ಟಿ.ಎಂ.ಪೈ–ಸಿ. ವಾಸುದೇವ ಭಟ್
೧೫. ರೆಂಜಾಳ ಗೋಪಾಲ ಶೆಣೈ–ಅನಿತಾ ಜಿ. ಶೆಣೈ
೧೬. ಬಿಡಾರಂ ಕೃಷ್ಣಪ್ಪ–ಶಾಂತಾರಾಮ ಬಾಳಿಗ

೨೩. ಕೇಂದ್ರ ಸಾಹಿತ್ಯ ಅಕಾದೆಮಿ, ನವದೆಹಲಿ

ಭಾರತ ದೇಶದ ಪ್ರಥಮ ಪ್ರಧಾನ ಮಂತ್ರಿ ಶ್ರೀ ಪಂಡಿತ ಜವಾಹರಲಾಲ ನೆಹರೂ ಅವರು ಜಗದ್ವಿಖ್ಯಾತ ಲೇಖಕರಾಗಿದ್ದವರು. ಭಾರತೀಯ ಸಾಹಿತ್ಯ ಅಂತಾರಾಷ್ಟ್ರೀಯ ಮಟ್ಟವನ್ನು ತಲುಪಲು ಮತ್ತು ದೇಶದ ಬೇರೆ ಬೇರೆ ಭಾಷೆಗಳ ಸಾಹಿತ್ಯ ಪ್ರಗತಿಯನ್ನು ಸಾಧಿಸಲು, ಮತ್ತು ಭಾರತೀಯರಿಗೆ ಬೇರೆ ಬೇರೆ ಭಾಷಾ ಸಾಹಿತಿಗಳ ಪರಿಚಯವಾಗಿ ಅವರ ನಡುವೆ ಉತ್ತಮ ಸಂವಹನ ನಡೆಯುವಂತಾಗಬೇಕು ಹಾಗೂ ಭಾರತೀಯ ಸಾಹಿತ್ಯಕ್ಕೆ ವೈಶಾಲ್ಯ ದೊರೆಯಬೇಕು ಎನ್ನುವ ದೃಷ್ಟಿಯಿಂದ ನೆಹರೂ ಅವರು "ಕೇಂದ್ರ ಸಾಹಿತ್ಯ ಅಕಾಡೆಮಿ" ಎಂಬ ಮಹಾನ್ ಸಂಸ್ಥೆಯನ್ನು ಸ್ಥಾಪಿಸಿದರು.

ಕೊಂಕಣಿ ಸ್ವತಂತ್ರ ಭಾಷೆಯಲ್ಲ, ಅದು ಮರಾಠಿಯ ಉಪಭಾಷೆ ಎಂಬ ವಾದ ಆಕ್ರಮಣಶೀಲ ಮರಾಠಿಯವರದ್ದಾಗಿತ್ತು. ಅದು ಹಾಗಲ್ಲ, ಕೊಂಕಣಿ ಭಾಷೆಯಲ್ಲಿ ಪ್ರಾಚೀನ ಸಾಹಿತ್ಯ ಇದೆ, ಆ ಭಾಷೆಗೆ ಪ್ರತ್ಯೇಕವಾದ ವ್ಯಾಕರಣವೂ ಇದೆ; ಕೊಂಕಣಿ ಭಾಷೆಯಲ್ಲಿ ಅಪಾರ ಪ್ರಮಾಣದ ಅಮೂಲ್ಯ ಸಾಹಿತ್ಯ ರಚನೆಗೊಳ್ಳುತ್ತಿದೆ ಎಂಬ ವಾದವನ್ನು ಅಖಿಲ ಭಾರತ ಕೊಂಕಣಿ ಪರಿಷತ್ತು ಮತ್ತು ಕೊಂಕಣಿಯ ಪ್ರಮುಖ ಲೇಖಕರಾದ ಕೊಚ್ಚಿಯ ಶ್ರೀ ಪುರುಷೋತ್ತಮ ಮಲ್ಯ, ಗೋವೆಯ ಶ್ರೀ ರವೀಂದ್ರ ಕೆಳೇಕಾರ, ಬಾಕಿಬಾಬ ಬೋರ್ಕರ, ರ.ವಿ. ಪಂಡಿತ, ಚಂದ್ರಕಾಂತ ಕೇಣಿ, ಉದಯ ಬೆಂಭ್ರೆ, ಪುಂಡಳೀಕ ನಾಯಕ ಮೊದಲಾದವರು ಸಾಹಿತ್ಯ ಅಕಾದೆಮಿಯ ಮುಂದೆ ಮಂಡಿಸಿದ್ದರು. ಈ ಪ್ರಯತ್ನಗಳಿಂದಾಗಿ, ೧೯೭೬ನೇ ಇಸವಿಯಲ್ಲಿ ಅಕಾದೆಮಿಯ ಅಧ್ಯಕ್ಷರಾಗಿದ್ದ ಬಹುಭಾಷಾತಜ್ಞ ಪಂಡಿತ ಶ್ರೀ ಸುನೀತಕುಮಾರ ಚಟರ್ಜಿಯವರು ಮತ್ತು ಸದಸ್ಯರು "ಮರಾಠಿಯವರ ವಾದ ಸರಿಯಲ್ಲ, ಕೊಂಕಣಿ ಒಂದು ಸ್ವತಂತ್ರ ಭಾಷೆ" ಎಂದು ಕೊಂಕಣಿಗೆ ಮಾನ್ಯತೆಯನ್ನು ನೀಡಿದ್ದರು. ೧೯೭೬ರಲ್ಲಿ ಮಂಗಳೂರಿನಲ್ಲಿ ನಡೆದ ಅ.ಭಾ. ಕೊಂಕಣಿ ಪರಿಷತ್ತಿನ ಅಧಿವೇಶನ ನಡೆಯುತ್ತಿರುವಾಗ ಗೋವೆಯ ಕೊಂಕಣಿ ನೇತಾರರೂ, ವೃತ್ತಿಯಿಂದ ವಕೀಲರೂ ಆಗಿರುವ ಶ್ರೀ ಉದಯ ಬೆಂಭ್ರೆಯವರು ದೆಹಲಿಯಿಂದ ಬಂದು ಈ ಮಹತ್ವಪೂರ್ಣ ಸಿಹಿ ಸುದ್ದಿಯನ್ನು ಪ್ರಕಟಿಸಿದ್ದು ಐತಿಹಾಸಿಕ ಘಟನೆಯಾಗಿದೆ.

ಕೇಂದ್ರ ಸಾಹಿತ್ಯ ಅಕಾದೆಮಿಯು ಭಾರತದ, ಅದರಲ್ಲಿಯೂ ಮುಖ್ಯವಾಗಿ ರಾಷ್ಟ್ರೀಯ ಭಾಷೆಗಳ(ಆಗ ೮ ಭಾಷೆಗಳು ಆಮೇಲೆ ೧೪, ಈಗ ೨೨) ಸಾಹಿತಿಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ೧೯೯೨ನೇ ಇಸವಿ, ಆಗಸ್ಟ್ ೨೦ರಂದು ಲೋಕಸಭೆಯಲ್ಲಿ ಕೊಂಕಣಿ ಭಾಷೆಯನ್ನು ದೇಶದ ಸಂವಿಧಾನದ ೮ನೇ ಅನುಸೂಚಿಯಲ್ಲಿ ಸೇರ್ಪಡೆ ಗೊಳಿಸಿದ್ದರಿಂದ, ರಾಷ್ಟ್ರೀಯ ಭಾಷೆಯಾಗಿ ಕೊಂಕಣಿ ಭಾಷಾ ಸಾಹಿತ್ಯದ ಬೆಳವಣಿಗೆಗಾಗಿ ಸಾಹಿತ್ಯ ಅಕಾದೆಮಿಯು ಬಹಳ ನೆರವು ನೀಡುತ್ತಿದೆ. ಕೊಂಕಣಿ ಪುಸ್ತಕ ಪ್ರಕಾಶನ, ಇತರ ಭಾಷೆಗಳಿಂದ ಕೊಂಕಣಿಗೆ ಸಾಹಿತ್ಯ ಕೃತಿಗಳ ಅನುವಾದ, ಅದೇ ರೀತಿ ಕೊಂಕಣಿ ಭಾಷೆಯ ಉತ್ತಮ ಸಾಹಿತ್ಯ ಕೃತಿಗಳನ್ನು ಅನ್ಯ ಭಾಷೆಗಳಿಗೆ ಅನುವಾದ ಮಾಡಿ ಅದರ ಪ್ರಕಟಣೆ, ಕೊಂಕಣಿ ಸಾಹಿತಿಗಳಲ್ಲಿ ಸಂವಾದ, ಇತರ ಭಾಷಾ ಸಾಹಿತ್ಯದ ಕುರಿತು ವಿಚಾರ ಸಂಕಿರಣ, ಅತ್ಯುತ್ತಮ ಕೊಂಕಣಿ ಕೃತಿ, ಭಾಷಾಂತರ ಕೃತಿ, ಕವಿತಾ ಸಂಗ್ರಹ, ಲೋಕವೇದ ಸಾಹಿತ್ಯಕ್ಕೆ ಪ್ರಶಸ್ತಿ ನೀಡುವಿಕೆ, ಸಾಹಿತಿಗಳಿಗೆ ಪ್ರಶಸ್ತಿ, ಗೌರವ ನೀಡುವಿಕೆ ಮೊದಲಾದುವುಗಳನ್ನು ನಡೆಸುತ್ತಿದೆ.

ಕೊಂಕಣಿ ಪುಸ್ತಕಗಳಿಗೆ ಬಹುಮಾನ ನೀಡುವ ನಿರ್ಣಾಯಕ ಸಮಿತಿಯಲ್ಲಿ ಮೂರು ಮಂದಿ ಕೊಂಕಣಿ ಸಾಹಿತಿಗಳು ಇರುತ್ತಾರೆ. ೨೦೦೩ರಲ್ಲಿ ನಾನು ಅಕಾದೆಮಿಯ ಪುಸ್ತಕ ಬಹುಮಾನ ಆಯ್ಕೆ ಸಮಿತಿಯ ಸದಸ್ಯನಾಗಿದ್ದೆ. ಅಕಾದೆಮಿಯವರು ಸುಮಾರು ೧೬ ಗ್ರಂಥಗಳನ್ನು ಪರಿಶೀಲನೆಗೆ ಕಳುಹಿಸಿಕೊಟ್ಟಿದ್ದರು. ಡಿಸೆಂಬರ್ ೧೨, ೨೦೦೩ರಲ್ಲಿ ಗೋವೆಯಲ್ಲಿ ನಡೆದ ಜ್ಯೂರಿ ಸದಸ್ಯರ ಸಭೆಯಲ್ಲಿ ಹಾಜರಾಗಿದ್ದೆ. ಹೀಗೆ ರಾಷ್ಟ್ರೀಯ ಪುರಸ್ಕಾರ ನೀಡುವ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವ ಅವಕಾಶವೂ ನನಗೆ ದೊರೆತಿತ್ತು.

ಕೇಂದ್ರ ಸಾಹಿತ್ಯ ಅಕಾಡೆಮಿಯು ೨೦೧೫ರಲ್ಲಿ ಕೊಂಕಣಿ ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಿರುವ ಕಾರಣಕ್ಕಾಗಿ ವಿಶ್ವಕೊಂಕಣಿ ಕೇಂದ್ರಕ್ಕೆ ಸಾಹಿತ್ಯಕ ಸಂಸ್ಥೆಯಾಗಿ ಮಾನ್ಯತೆಯನ್ನು ನೀಡಿದೆ.

●●

೨೪. ನವದೆಹಲಿಯಲ್ಲಿ ಕೊಂಕಣಿ ಕಲಾ ಉತ್ಸವ

ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯನ್ನು ನಡೆಸುತ್ತಿದ್ದ ದಿನಗಳಲ್ಲಿ ನನಗೆ ೪-೫ ಬಾರಿ ದೆಹಲಿಗೆ ತೆರಳುವ ಸಂದರ್ಭಗಳು ಒದಗಿ ಬಂದಿದ್ದವು. ಆಗ ಅಲ್ಲಿ "ನ್ಯೂ ಡೆಲ್ಲಿ ಕೊಂಕಣೀಸ್" ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್.ಜೆ. ಕಾಮತ್(ನಿವೃತ್ತ ಐ.ಎ.ಎಸ್. ಅಧಿಕಾರಿ), ಪೊಲೀಸ್ ಆಯುಕ್ತರಾದ ಮೆಕ್ಸವೆಲ್ ಪಿರೇರಾ ಕಾಮತ, ಸಾರಸ್ವತ ಸಂಸ್ಕೃತಿ ಭವನದ ಅಧ್ಯಕ್ಷರಾದ ಶ್ರೀ ಕೆ. ಗೋಪಾಲ್ ಇವರು ಪರಿಚಯವಾಗಿದ್ದರು. ಈ ಮಹನೀಯರಿಗೆ ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯ ಕುರಿತು ಅಪಾರ ಅಭಿಮಾನ ಮತ್ತು ಉತ್ಸಾಹ ಇರುವುದು ನನ್ನ ಗಮನಕ್ಕೆ ಬಂದಿತ್ತು. ಹೀಗಾಗಿ ದೆಹಲಿಯಲ್ಲಿ ದೊಡ್ಡ ಪ್ರಮಾಣದ ಕೊಂಕಣಿ ಸಾಂಸ್ಕೃತಿಕ ಕಲಾ ಉತ್ಸವನ್ನು ನಡೆಸಬೇಕು ಎನ್ನುವ ಬಯಕೆ ನನ್ನಲ್ಲಿ ಹುಟ್ಟಿಕೊಂಡಿತು. ನಾನು ಶ್ರೀ ಕಾಮತರಿಗೆ ಪತ್ರ ಬರೆದು ಅವರ ಅಭಿಪ್ರಾಯ ಕೇಳಿದೆ. ಅವರು ನನಗೆ ಆಶಾದಾಯಕ ಪತ್ರವನ್ನು ಬರೆದರು.

ಹೀಗಾಗಿ ನಾನು ಕೊಂಕಣಿ ಅಕಾಡೆಮಿಯ ವತಿಯಿಂದ ದೆಹಲಿಯಲ್ಲಿ ಮೂರು ದಿನಗಳ ಕೊಂಕಣಿ ಕಲಾ ಉತ್ಸವನ್ನು ಆಯೋಜಿಸುವುದೆಂಬ ನಿರ್ಣಯ ಕೈಗೊಂಡೆ. ಅದಕ್ಕಾಗಿ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಸಾಂಸ್ಕೃತಿಕ ನೃತ್ಯ, ಸಂಗೀತ ಮತ್ತು ಜಾನಪದ ಕಲಾವಿದರನ್ನು ಕರೆದುಕೊಂಡು ದೆಹಲಿಯಲ್ಲಿ ಪ್ರದರ್ಶನ ನೀಡುವುದೆಂದು ನಿರ್ಧಾರವಾಯಿತು. ಈ ಕಾರಣಕ್ಕಾಗಿ ಪೂರ್ವಭಾವೀ ಸಿದ್ಧತೆಯಲ್ಲಿ ಕಲಾ ಉತ್ಸವಕ್ಕೆ ಅಗತ್ಯವಿರುವ ಸಭಾ ಭವನ, ಕಲಾ ಪಂಗಡಗಳ ವಸತಿ ವ್ಯವಸ್ಥೆ, ಅವರ ಊಟ ಉಪಹಾರ, ಅಲ್ಲಿಯ ಓಡಾಟಗಳಿಗೆ ಸಾರಿಗೆ ವ್ಯವಸ್ಥೆ, ಪ್ರಚಾರ ವ್ಯವಸ್ಥೆ, ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಿಗೆ ಆಮಂತ್ರಿಸಬೇಕಾದ ಮುಖ್ಯ ಅತಿಥಿಗಳು ಇತ್ಯಾದಿ ಕುರಿತು ಚರ್ಚಿಸಲು ಅಲ್ಲಿನ ಕೊಂಕಣಿ ನೇತಾರರನ್ನು ಭೇಟಿ ಮಾಡುವ ಉದ್ದೇಶದಿಂದ ನಾನು ದೆಹಲಿಗೆ ಹೋಗಿದ್ದೆ. ಕೊಂಕಣಿ ಉತ್ಸವದ ಮಾಹಿತಿ ಪತ್ರವನ್ನು ತಯಾರಿಸಲು ಮಂಗಳೂರಿನ ಶ್ರೀ ಮಹೇಶ ನಾಯಕರಿಗೆ ತಿಳಿಸಿದ್ದೆ. ಕಲಾ ಉತ್ಸವದ ದೂರದರ್ಶನ ಪ್ರಸಾರಕ್ಕಾಗಿ ಶ್ರೀಮತಿ ಉಷಾ ಕಿಣಿಯವರಲ್ಲಿಯೂ ಮಾತನಾಡಿದ್ದೆ. ಕಾರ್ಯಕ್ರಮದ ಪ್ರಾಯೋಜಕತೆಗಾಗಿ ಬೇರೆ ಬೇರೆ ಬ್ಯಾಂಕುಗಳ ಮತ್ತು ವ್ಯಾಪಾರೀ ಸಂಸ್ಥೆಗಳಿಗೆ ಪತ್ರವನ್ನೂ ಕಳುಹಿಸಿದ್ದೆ.

ದೆಹಲಿ ಕಲಾ ಉತ್ಸವಕ್ಕೆ ಬೇಕಾಗಿರುವ ಸಿದ್ಧತೆಗಳನ್ನು ನಡೆಸಿ ಆಗಸ್ಟ್ ೮, ೧೯೯೬ರಂದು ಭಾನುವಾರ ಬೆಳಗ್ಗೆ ಶ್ರೀ ಎರಿಕ್ ಒಝೇರಿಯೊ ಮತ್ತು ಊಟ ಉಪಹಾರದ ಜವಾಬ್ದಾರಿ ವಹಿಸಿದ್ದ ಶ್ರೀ ಪ್ರಕಾಶ ಪ್ರಭು ಅವರೊಂದಿಗೆ ರಾಜಧಾನಿ ಎಕ್ಸ್ ಪ್ರೆಸ್ ರೈಲಿನಲ್ಲಿ ದೆಹಲಿಗೆ ಪ್ರಯಾಣಿಸಿದೆ. ಮರುದಿನ ಅಲ್ಲಿಗೆ ತಲುಪಿ, ಅದೇ ದಿನ ಸಂಜೆ ಶ್ರೀ ಕೈವಲ್ಯ ಮಠದಲ್ಲಿ ದೆಹಲಿಯ ಕೆಲವು ಮುಖಂಡರನ್ನು ಭೇಟಿಯಾಗಿ ಪೂರ್ವ ಸಿದ್ಧತೆಗಳ ವಿವರಗಳನ್ನು ನೀಡಿದೆ. ಅಲ್ಲಿ ಕೊಂಕಣಿ ಸಾರಸ್ವತ ಮತ್ತು ದೆಹಲಿ ಕೊಂಕಣಿ ಕ್ಯಾಥೊಲಿಕ್ ಸಭೆಯ ಅಧ್ಯಕ್ಷರು ಮತ್ತು ಕಾರ್ಯಕರ್ತರು ಭೇಟಿಯಾಗಿದ್ದರು. ಆ ಸಮಯದಲ್ಲಿ ದೆಹಲಿಯಲ್ಲಿ ಕರ್ನಾಟಕ ರಾಜ್ಯದ ಪ್ರಚಾರಾಧಿಕಾರಿಯಾಗಿದ್ದ ಶ್ರೀ ಆರ್. ನಾಗೇಶ್ ಅವರು ನನ್ನ ಮಗ ಜಿ. ದಿನೇಶನ ಒಳ್ಳೆಯ ಸ್ನೇಹಿತರಾಗಿದ್ದರು. ಅವರು ನಮ್ಮ ಈ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿದ್ದು ನಾನು ಇವತ್ತಿಗೂ ಮರೆತಿಲ್ಲ.

ನಮಗೆ ದೆಹಲಿ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರಾದ (ಆರ್ಥಿಕ) ಮಾನ್ಯ ಶ್ರೀ ಕೆ.ಪಿ. ಲಕ್ಷ್ಮಣ ರಾವ್ ಅವರಿಂದ ಆರ್ಥಿಕ ಬೆಂಬಲ ದೊರೆತು ಕಲಾ ಉತ್ಸವವನ್ನು ಯಶಸ್ವಿಯಾಗಿ ನಡೆಸುವುದು ಸಾಧ್ಯವಾಗಿತ್ತು. ಈ ಉತ್ಸವದ ಉದ್ಘಾಟನಾ ಸಮಾರಂಭಕ್ಕೆ ದೆಹಲಿಯ ಸನ್ಮಾನ್ಯ ರಾಜ್ಯಪಾಲರಾಗಿದ್ದ ಶ್ರೀ ಕಪೂರ್ ಮತ್ತು ಕೇಂದ್ರ ಸರಕಾರದ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಸುರೇಶ ಪಿ. ಪ್ರಭು ಬರುವಂತಾಗಲು ಶ್ರೀ ಲಕ್ಷ್ಮಣ ರಾವ್ ಅವರೇ ಕಾರಣ. ಅದಲ್ಲದೆ ದೆಹಲಿಯ ಪ್ರತಿಷ್ಠಿತ ಮಾವಲಣಕರ ಸಭಾಂಗಣ(ಹವಾ ನಿಯಂತ್ರಿತ)ದ ವ್ಯವಸ್ಥೆ,

ಬ್ಯಾಂಕ್ ಮತ್ತು ಇತರ ವಿತ್ತ ಸಂಸ್ಥೆಗಳ ಪ್ರಾಯೋಜಕತ್ವ, ಸಾರಿಗೆ ವ್ಯವಸ್ಥೆ ಹೀಗೆ ಅನೇಕ ರೀತಿಯಿಂದ ಶ್ರೀ ಲಕ್ಷ್ಮಣ ರಾವ್ ಅವರು ನಮಗೆ ನೆರವಾಗಿದ್ದರಿಂದ ನಮ್ಮ ಎಷ್ಟೋ ಒತ್ತಡಗಳು ಕಡಿಮೆಯಾಗಿದ್ದವು. ಶ್ರೀ ಗೋಪಾಲ ಹಾಗೂ ಶ್ರೀ ಎನ್.ಜೆ. ಕಾಮತರ ನೆರವಿನಿಂದ ದೆಹಲಿಯ ಸಾರಸ್ವತ ಸಂಸ್ಕೃತಿ ಭವನದ ವ್ಯವಸ್ಥಾಪಕರು ೧೩೦ ಮಂದಿ ಕಲಾವಿದರಿಗೆ ೪-೫ ದಿನಗಳ ಕಾಲ ಅಲ್ಲಿ ತಂಗುವ ವ್ಯವಸ್ಥೆ, ಅವರ ಊಟ ಉಪಹಾರಗಳ ಜವಾಬ್ದಾರಿ ಇತ್ಯಾದಿ ನಿರ್ವಹಿಸಿದ್ದರಿಂದ ನಮಗೆ ಕೊಂಕಣಿ ಅಕಾಡೆಮಿಯ ವತಿಯಿಂದ ಧನ ವಿನಿಯೋಗದ ಭಾರ ತುಂಬಾ ಕಡಿಮೆಯಾಗಿತ್ತು.

ಇದಲ್ಲದೆ ೧೩೦ ಕಲಾವಿದರ ಮಂಗಳೂರು-ದೆಹಲಿ ಪ್ರಯಾಣದ ವ್ಯವಸ್ಥೆಯೂ ನಡೆಯಬೇಕಾಗಿತ್ತು. ಆಗ ಕೊಂಕಣಿ ರೈಲ್ವೇ ನಷ್ಟದಲ್ಲಿ ನಡೆಯುತ್ತಿದ್ದುದರಿಂದ ಮಂಗಳೂರಿನಲ್ಲಿ ರೈಲ್ವೇ ಅಧಿಕಾರಿಗಳು ಕಲಾವಿದರ ಪ್ರಯಾಣ ವೆಚ್ಚದಲ್ಲಿ ರಿಯಾಯಿತಿ ನೀಡುವುದು ಸಾಧ್ಯವಿಲ್ಲವೆಂದು ಹೇಳಿದ್ದರು. ಆದರೆ ದೇವರ ದಯೆಯಿಂದ ಆಗಷ್ಟೇ ನಿವೃತ್ತರಾಗಿದ್ದ ರೈಲ್ವೇ ಮಂಡಳಿಯ ಅಧ್ಯಕ್ಷ ಶ್ರೀ ಎನ್. ರವೀಂದ್ರ ಎಂಬ ಕೊಂಕಣಿ ಮಹನೀಯರೊಬ್ಬರು ದೆಹಲಿಯ ಟ್ರಾಯ್(ಟಿ.ಆರ್.ಎ.ಐ.)ನ ನಿರ್ದೇಶಕರಾಗಿ ದೆಹಲಿಯಲ್ಲಿಯೇ ಇದ್ದರು. ಅವರು ನಮಗಾಗಿ ಕೊಂಕಣಿ ರೈಲ್ವೆಯ ಅಧ್ಯಕ್ಷರಿಗೆ ದೂರವಾಣಿ ಕರೆ ಮಾಡಿ, "ಕರ್ನಾಟಕದಿಂದ ನನ್ನ ಭಾಷಿಕ ಬಂಧುಗಳು ಬರುತ್ತಿದ್ದಾರೆ, ಅವರಿಗೆ ನೀವು ರಿಯಾಯಿತಿ ನೀಡಲೇಬೇಕು" ಎಂದು ಹೇಳಿದರು. ಅವರು ಹೀಗೆ ಹೇಳಿದ್ದರಿಂದ ನಮಗೆ ರೈಲ್ವೇ ಟಿಕೇಟಿನಲ್ಲಿ ಶೇಕಡ ೬೦ ರಿಯಾಯಿತಿ ದೊರೆತು, ಆ ಖರ್ಚು ಕೂಡ ತುಂಬಾ ಕಡಿಮೆಯಾಯಿತು.

ಆಗಸ್ಟ್ ೪ರಂದು ದೆಹಲಿ ಕರ್ನಾಟಕ ಭವನದಲ್ಲಿ ಕೊಂಕಣಿ ಸಂಘದ ಮುಖ್ಯಸ್ಥರೊಂದಿಗೆ ಸಭೆ ಇತ್ತು. ಅಲ್ಲಿ ಶ್ರೀ ಕೆ.ಪಿ. ಲಕ್ಷ್ಮಣ ರಾವ್ ಅವರು ತಾನು ದೆಹಲಿಯಲ್ಲಿ ಜರಗುವ ಕೊಂಕಣಿ ಕಲಾ ಉತ್ಸವದ ಖರ್ಚು ವೆಚ್ಚಗಳ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಕಾರ್ಯ ನಿರ್ವಹಿಸುತ್ತೇನೆ ಎಂದು ತಿಳಿಸಿದರು. ಆಮೇಲೆ ಅಲ್ಲಿ ಮಾತನಾಡಿದವರೂ ತುಂಬಾ ಉತ್ಸಾಹ ತೋರಿಸಿದ್ದರು. ಹೀಗಾಗಿ ೧೯೯೮ನೇ ಇಸವಿ ಸೆಪ್ಟೆಂಬರ್ ೪ ರಿಂದ ೬ ರವರೆಗೆ ೩ ದಿನಗಳ ಕಾಲ ನಡೆದ "ದೆಹಲಿ ಕೊಂಕಣಿ ಕಲಾ ಉತ್ಸವ" ನಾವು ಯೋಚಿಸಿದ ರೀತಿಯಲ್ಲಿಯೇ ಉತ್ತಮವಾಗಿ ನಡೆಯಿತು. ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಮಾನ್ಯ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರೂ ದೆಹಲಿಗೆ ಬಂದು ಉತ್ಸವದಲ್ಲಿ ಪಾಲುಗೊಂಡಿದ್ದರು. ಶ್ರೀ ರೊನಾಲ್ಡ್ ಕೊಲಾಸೊ ಅವರೂ ವಿಶೇಷವಾಗಿ ಬಂದಿದ್ದರು.

ನೂರ ಮೂವತ್ತು ಕಲಾವಿದರನ್ನು ಒಂದೇ ದಿನ ದೆಹಲಿಗೆ ಕರೆದುಕೊಂಡು ಹೋಗುವುದು, ಅಲ್ಲಿ ಅವರ ಊಟ ಉಪಹಾರದ ವ್ಯವಸ್ಥೆ ನಡೆಸುವುದು ಇವೆಲ್ಲಾ ಬಹಳ ಕಷ್ಟದ ಮತ್ತು ಖರ್ಚಿನ ಬಾಬತ್ತು ಆಗಿದ್ದುದರಿಂದ, ಅದಕ್ಕಾಗಿ ನಾನು ವಿಶೇಷ ಯೋಜನೆಯೊಂದನ್ನು ರೂಪಿಸಿ ೩ ದಿನಗಳ ಕಾರ್ಯಕ್ರಮಗಳಿಗೆ ಕಲಾವಿದರ ೩ ಬೇರೆ ಬೇರೆ ತಂಡಗಳನ್ನು ಮಾಡಿದೆ.

ಮೊದಲ ದಿನದ ಪ್ರದರ್ಶನ ನೀಡಲು ಬರುವ ೪೦ ಮಂದಿ ಕಲಾವಿದರ ತಂಡವನ್ನು ಸೆಪ್ಟೆಂಬರ್ ೧ರಂದು ಮಂಗಳೂರಿನಿಂದ ನೇತ್ರಾವತಿ ಎಕ್ಸ್‌ಪ್ರೆಸ್‌ಲ್ಲಿ ಹೊರಡಿಸಿ, ಅವರು ೩ನೇ ತಾರೀಖಿನಂದು ದೆಹಲಿಗೆ ಬಂದು ತಲುಪುವ ಹಾಗೆ ಮಾಡುವುದು. ಆ ದಿನ ಆ ತಂಡದವರು ಪೂರ್ಣ ವಿಶ್ರಾಂತಿ ಪಡೆದು ಮರುದಿನ ಅಂದರೆ ೪ ರಂದು ಅವರು ತಮ್ಮ ಸಾಂಸ್ಕೃತಿಕ ಕಲಾ ಪ್ರದರ್ಶನ ನೀಡುವುದು. ಸೆಪ್ಟೆಂಬರ್ ೫ ರಂದು ತಂಡದವರಿಗೆ ದೆಹಲಿಯ ಲೋಕಸಭಾ ಭವನ, ಜಂತರ ಮಂತರ, ಮಹಾತ್ಮಾ ಗಾಂಧಿಯವರ ಸಮಾಧಿ, ಕೆಂಪುಕೋಟೆ, ಕುತುಬ್ ಮಿನಾರ್, ಇಂಡಿಯಾ ಗೇಟ್ ಇತ್ಯಾದಿಗಳನ್ನು ತೋರಿಸಿ, ಸೆಪ್ಟೆಂಬರ್ ೬ ರಂದು ಅವರು ಮರಳಿ ರೈಲಿನಲ್ಲಿ ಮಂಗಳೂರಿಗೆ ಹೊರಡುವುದು. ಇದೇ ರೀತಿ ಎರಡನೆಯ ತಂಡದವರು ಸೆಪ್ಟೆಂಬರ್ ೨ ರಂದು ಮಂಗಳೂರಿನಿಂದ ರೈಲಿನಲ್ಲಿ ಹೊರಟು ಸೆಪ್ಟೆಂಬರ್ ೪ ರಂದು ದೆಹಲಿ ತಲುಪಿ, ೫ ರಂದು ಪ್ರದರ್ಶನ ನೀಡಿ, ೬ ರಂದು ದೆಹಲಿ ವೀಕ್ಷಣೆ ನಡೆಸಿ, ೭ರಂದು ರೈಲಿನಲ್ಲಿ ಅವರು ಮಂಗಳೂರಿಗೆ ಹೊರಡುವುದು. ಇದೇ ರೀತಿ ಮೂರನೆಯ ತಂಡದವರು ಕೂಡ ಸೆಪ್ಟೆಂಬರ್ ೩ ರಂದು ಹೊರಟು ಬಂದು, ಸೆಪ್ಟೆಂಬರ್ ೮ ರಂದು ಮಂಗಳೂರಿಗೆ ಮರಳಿ ಹೋಗುವ ವ್ಯವಸ್ಥೆ ಮಾಡಿದ್ದರಿಂದ ದೆಹಲಿಯಲ್ಲಿ ನಮ್ಮ ಪೋಷಕರಿಗೆ ಶ್ರಮ ಮತ್ತು ಹಣ ಈ ಎರಡರ ಉಳಿತಾಯವೂ ಆಯಿತು. ಅಷ್ಟು ಮಾತ್ರವಲ್ಲ ಕಲಾವಿದರಿಗೂ ಶ್ರಮ ತುಂಬಾ ಕಡಿಮೆಯಾಯಿತು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಎಲ್ಲಾ ಕಲಾವಿದರಿಗೆ ರೈಲು ಪ್ರಯಾಣ, ಊಟ, ವಸತಿ, ದೆಹಲಿ ದರ್ಶನ ಇತ್ಯಾದಿ

ಎಲ್ಲಾ ವ್ಯವಸ್ಥೆಗಳನ್ನು ನಾವೇ ಮಾಡಿ, ಅವರಿಗೆ ಗೌರವ ಧನವನ್ನೂ ನೀಡಿ ಸಂತೋಷಪಡಿಸಿದೆವು. ಈ ಕಲಾವಿದರು ಅನುಕೂಲಸ್ಥರಲ್ಲ. ಹೀಗಾಗಿ ಅವರಿಗೆ ದೆಹಲಿಗೆ ಹೋಗಿ ಬರುವುದು, ಅಥವಾ ದೆಹಲಿಗೆ ಭೇಟಿ ನೀಡುವ ಅವಕಾಶ ಒದಗಿ ಬರುವುದು ಬಹಳ ಕಡಿಮೆ. ಈ ಕಾರ್ಯಕ್ರಮ ದಿಂದಾಗಿ ಅವರಿಗೆ ದೆಹಲಿಯಲ್ಲಿ ಪ್ರದರ್ಶನ ನೀಡುವುದು ಮತ್ತು ದೆಹಲಿ ದರ್ಶನವನ್ನು ಕೈಗೊಳ್ಳುವ ಭಾಗ್ಯ ದೊರೆಯಿತು. ಈ ನಿಟ್ಟಿನಲ್ಲಿ ಹೆಚ್ಚಿನ ಕಲಾವಿದರು ನನ್ನ ನೆರವನ್ನು ಈಗಲೂ ನೆನಪಿಸಿಕೊಳ್ಳುತ್ತಿದ್ದಾರೆ.

ಯಾವುದೇ ಸಂಸ್ಥೆಯ ವತಿಯಿಂದ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕಲಾವಿದರನ್ನು ಒಟ್ಟುಗೂಡಿಸಿ, ದೆಹಲಿಯಲ್ಲಿ ಯಶಸ್ವಿಯಾಗಿ ಕಾರ್ಯಕ್ರಮವನ್ನು ನಡೆಸಿದ ಉದಾಹರಣೆ ಸಿಗಲಾರದು. ಈ ಕಲಾ ಉತ್ಸವದಲ್ಲಿ ಕುಡುಂಬಿ, ಸಿದ್ಧಿ, ಖಾರ್ವಿ ತಂಡಗಳ ನೃತ್ಯ ಪ್ರದರ್ಶನ, ಕುಂದಾಪುರದ ಶ್ರೀ ಗಣೇಶ ಬೊಂಬೆಮೇಳದ ಬೊಂಬೆಯಾಟ, ಅಂಕೋಲೆಯ ಗೋವಿಂದ ನಾರಾಯಣ ಮಹಾಲೆಯವರ ಗುಂಮ್ಟಾ ಪಾಂಗ, ನಾಟ್ಕುಳೆ, ಶ್ರೀಮತಿ ವಸಂತಿ ಆರ್. ನಾಯಕ್ ಮತ್ತು ಶ್ರೀ ಎರಿಕ್ ಒಝೊರಿಯೊ ಅವರ ಸಂಗೀತ, ಶಿರಸಿ ವಾಸುದೇವ ಶಾನಭಾಗ್ ತಂಡದವರ "ಪಾರಿಜಾತ" ಸಂಗೀತ ನೃತ್ಯರೂಪಕವಿತ್ತು. ಹೀಗೆ ಕಾರ್ಯಕ್ರಮ ವೈವಿಧ್ಯಪೂರ್ಣವಾಗಿ, ಶಿಸ್ತುಬದ್ಧವಾಗಿ ಯಶಸ್ವಿಯಾಗಿ ನಡೆದು ದೆಹಲಿಯ ಕೊಂಕಣಿ ಜನರ ಅಪಾರ ಪ್ರಶಂಸೆಗೆ ಪಾತ್ರವಾಗಿತ್ತು.

ಮಂಗಳೂರಿನಿಂದ ಬಂದ ಮಿತ್ರ ಶ್ರೀ ಪ್ರಕಾಶ ಪ್ರಭು ಅವರು ಸಭಾಭವನದ ಹೊರಭಾಗದಲ್ಲಿ ರಾತ್ರಿ ಕೊಂಕಣಿ ಊಟದ ಉತ್ಸವವನ್ನು ಆಯೋಜಿಸಿದ್ದರಿಂದ, ಕಾರ್ಯಕ್ರಮ ವೀಕ್ಷಿಸಲು ಬಂದವರಿಗೆ, ಕಲಾವಿದರಿಗೆ ಉತ್ತಮ ರುಚಿಕರ ಊಟ ದೊರೆಯುವಂತಾಗಿತ್ತು. ದೆಹಲಿಯ ಈ ಕಾರ್ಯಕ್ರಮವೂ ನನ್ನ ಬದುಕಿನಲ್ಲಿ ವಿಶಿಷ್ಟ ಹಾಗೂ ಮಹತ್ವಪೂರ್ಣ ಘಟನೆ ಮಾತ್ರವಲ್ಲ ಸಾಹಸವಾಗಿಯೂ ಪರಿಣಮಿಸಿದೆ. ದೆಹಲಿಯಲ್ಲಿ ನೆಲೆಸಿದ ಊರು, ಪರವೂರುಗಳ ಜನರೂ ಈ ಕಾರ್ಯಕ್ರಮಕ್ಕೆ ಬಂದು ಸಂತೋಷ ವ್ಯಕ್ತಪಡಿಸಿದ್ದಾರೆ.

●●

೨೫. ಶಾಲೆಯಲ್ಲಿ ಕೊಂಕಣಿ ಕಲಿಕೆ

ಕರ್ನಾಟಕದ ಶಾಲೆಗಳಲ್ಲಿ ಕೊಂಕಣಿ ಕಲಿಕೆಯ ಯೋಜನೆಯನ್ನು ಕಾರ್ಯಗತಗೊಳಿಸುವ ಕುರಿತು ಗೋವೆಯ ಮುಖಂಡರು ಹಿಂದೊಮ್ಮೆ ಪ್ರಸ್ತಾಪಿಸಿದ್ದರು. ೧೯೯೩ನೇ ಇಸವಿ, ಫೆಬ್ರವರಿ ೪ರಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ. ವಿಶ್ವನಾಥ ಕಾಮತರನ್ನು (ಮಂಗಳೂರು ಮಾಜಿ ನಗರ ಸಭಾಧ್ಯಕ್ಷರು) ಭೇಟಿಯಾಗಿ ಶಾಲೆಯಲ್ಲಿ ಕೊಂಕಣಿ ಕಲಿಯುವ ವಿಚಾರದ ಕುರಿತು ರೂಪರೇಷೆಯನ್ನು ಸಿದ್ಧಪಡಿಸಲು ಶಾಲಾ ಮುಖ್ಯಸ್ಥರ ಚರ್ಚಾಗೋಷ್ಠಿಯನ್ನು ಆಯೋಜಿಸಲಾಗಿತ್ತು. ಇದರಲ್ಲಿ ಕ್ಯಾಥೊಲಿಕ್ ಬೋರ್ಡ್ ಆಫ್ ಎಜ್ಯುಕೇಶನ್ನಿನ ಕಾರ್ಯದರ್ಶಿಯವರೂ ಭಾಗಿಯಾಗಿದ್ದರು.

ದಿನಾಂಕ ೧೯-೨-೧೯೯೯ರಂದು ಶುಕ್ರವಾರ, ಸಂತ ಅಲೋಷಿಯಸ್ ಕಾಲೇಜಿನ ಪ್ರಾಂಶುಪಾಲರಾದ ವಂದನೀಯ ಫಾ. ನಲಪತಿ ಅವರ ಉತ್ಸಾಹದಿಂದ ಕೊಂಕಣಿ ಡಿಪ್ಲೊಮಾ ಕೋರ್ಸ್ ಪ್ರಾರಂಭವಾಯಿತು ಅವರ ವಿನಂತಿಯಂತೆ ನಾನು ಶ್ರೀ ಬಿ.ವಿ. ಬಾಳಿಗ, ವಾಮನ ಪ್ರಭು ಮೊದಲಾದವರನ್ನು ಆ ಕೋರ್ಸ್‌ನ ಅಧ್ಯಾಪಕ ವೃಂದದಲ್ಲಿ ಭಾಗಿಯಾಗುವಂತೆ ಮತ್ತು ಕ್ರೈಸ್ತರಲ್ಲದವರೂ ಡಿಪ್ಲೊಮಾ ಕೋರ್ಸ್ ಮಾಡುವಂತೆ ಪ್ರೇರೇಪಿಸಿದ್ದು ಯಶಸ್ವಿಯಾಗಿತ್ತು. ದಿ. ಬೆನೆಟ್ ಪಿಂಟೊ ಅವರು ಆ ಕೋರ್ಸ್‌ನ ನೇತೃತ್ವವನ್ನು ವಹಿಸಿದ್ದರಿಂದ ಅದು ಹಲವು ವರ್ಷಗಳವರೆಗೆ ವ್ಯವಸ್ಥಿತವಾಗಿ ಮತ್ತು ಉತ್ತಮ ರೀತಿಯಿಂದ ನಡೆದು ಬಂದಿತ್ತು.

ಕೊಂಕಣಿ ಭಾಷಾ ಮಂಡಳಿಯ ವತಿಯಿಂದ "ಶಾಲೆಯಲ್ಲಿ ಕೊಂಕಣಿ ಕಲಿಕೆ" ಎಂಬ ವಿಷಯದ ಕುರಿತು ವಿಚಾರ ಸಂಕಿರಣವೊಂದು ಕೆನರಾ ಪ್ರೌಢಶಾಲೆಯಲ್ಲಿ ಫೆಬ್ರವರಿ ೨೧, ೧೯೯೩ರಲ್ಲಿ ನಡೆದಿತ್ತು. ಮುಖ್ಯ ಅತಿಥಿಗಳಾಗಿ ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನದ ವತಿಯಿಂದ ಶ್ರೀ ಕೆ.ಕೆ.ಪೈ, ಶ್ರೀ ಕೆ. ವಿಶ್ವನಾಥ ಕಾಮತ್, ಕ್ಯಾಥೊಲಿಕ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ವಂದನೀಯ ವಿ. ಸಿರಿಲ್ ಡಿಸೋಜಾ ಭಾಗವಹಿಸಿದ್ದರು. ಕೇರಳ ಮತ್ತು ಗೋವೆಯ ಶಾಲೆಗಳ ಶಿಕ್ಷಣದ ಕುರಿತು ಮಾಹಿತಿ ನೀಡಲು ಪಯ್ಯನೂರು ರಮೇಶ ಪೈ ಮತ್ತು ಫಾ. ಪ್ರತಾಪ ನಾಯಕ್ ಬಂದಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಕೊಂಕಣಿ ಅಧ್ಯಾಪಕರು ಭಾಗವಹಿಸಿದ್ದರು.

ಈ ಎಲ್ಲಾ ಪ್ರಯತ್ನಗಳಿಂದ ಕೆನರಾ ಪ್ರೌಢಶಾಲೆಯಲ್ಲಿ ಕೊಂಕಣಿ ತರಗತಿಗಳು ಪ್ರಾರಂಭಗೊಂಡವು. ಇದರ ಉದ್ಘಾಟನೆಯನ್ನು ಶ್ರೀ ಬಿ.ವಿ. ಬಾಳಿಗ ದೀಪ ಬೆಳಗಿ ನಡೆಸಿದರು. ಕರ್ನಾಟಕದ ಕೊಂಕಣಿ ಶಾಲೆಗಳಲ್ಲಿ ಕೊಂಕಣಿ ಕಲಿಕೆ ಪ್ರಾರಂಭಗೊಳ್ಳಲು ಇದು ಮೊದಲ ಮೆಟ್ಟಿಲಾಯಿತು.

ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಯ ಸಂಘದ ವತಿಯಿಂದ ಪ್ರಥಮ ಕೊಂಕಣಿ ಪ್ರಾಥಮಿಕ ಪಠ್ಯಪುಸ್ತಕದ ಬಿಡುಗಡೆಯು ಅಧ್ಯಕ್ಷರಾದ ಶ್ರೀ ವಿಶ್ವನಾಥ ಕಾಮತರಿಂದ ಮೇ ೧, ೧೯೯೪ರ ಬೆಳಗ್ಗೆ ಮಂಗಳೂರಿನಲ್ಲಿ ನಳಂದಾ ಸಭಾಗೃಹದಲ್ಲಿ ನಡೆದಿತ್ತು.

ಅದೇ ವರ್ಷ ಮೇ ೧೬ರಂದು ಶ್ರೀ ಲಾರೆನ್ಸ್ ಲೋಬೊ ಅವರೊಂದಿಗೆ ಸಂತ ಅಲೋಶಿಯಸ್ ಕಾಲೇಜಿನ ರೆಕ್ಟರ್ ಫಾ. ಲಿಯೋ ಡಿಸೋಜಾ ಅವರನ್ನು ಭೇಟಿಯಾದೆವು. ಅವರು ಡಾ. ಹೆಚ್. ನರಸಿಂಹಯ್ಯ ಅಧ್ಯಕ್ಷರಾಗಿದ್ದ ರಾಜ್ಯ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿದ್ದರು. ಅವರಿಗೆ ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಯ ಸಂಘ ಪ್ರಕಟಿಸಿದ ಪ್ರಥಮ ತರಗತಿಯ ಪಠ್ಯಪುಸ್ತಕದ ಎರಡು ಪ್ರತಿಗಳನ್ನು ನೀಡಿ ನಮ್ಮ ಬೇಡಿಕೆಯನ್ನು ಸಮಿತಿ ಸ್ವೀಕರಿಸಿ ಶಾಲೆಯಲ್ಲಿ ಕೊಂಕಣಿ ತರಗತಿ ಪ್ರಾರಂಭಿಸಲು ಮಾನ್ಯತೆ ದೊರೆಯುವಂತೆ ಪ್ರಯತ್ನಿಸಬೇಕೆಂದು ವಿನಂತಿಸಿದೆವು.

೨೬. ಸಾಮೂಹಿಕ ಜಿ.ಎಸ್.ಬಿ. ವಿವಾಹ

ಮೈಸೂರಿನಲ್ಲಿರುವ ಶ್ರೀ ಬಂಟವಾಳ ಸುಬ್ರಾಯ ಬಾಳಿಗರ "ಷಷ್ಠಿಪೂರ್ತಿ ಶಾಂತಿ" ಕಾರ್ಯಕ್ರಮವು ಅರ್ಥಪೂರ್ಣವಾಗಿ ನಡೆಯಬೇಕೆಂಬ ತಮ್ಮ ಬಯಕೆಯನ್ನು ಅವರ ಅಳಿಯ ಹಾಗೂ ನನ್ನ ಅಭಿಮಾನಿಯಾಗಿದ್ದ ಶ್ರೀ ಯೋಗೀಶ್ ಡಾಂಗೆ ಅವರು ನನ್ನ ಬಳಿ ವ್ಯಕ್ತಪಡಿಸಿದ್ದರು. ಅದಕ್ಕೆ ನಾನು ಅವರಲ್ಲಿ ನಮ್ಮ ಸಮಾಜದಲ್ಲಿ ಪ್ರಥಮ ಬಾರಿಗೆ "ಸಾಮೂಹಿಕ ಜಿ.ಎಸ್.ಬಿ. ವಿವಾಹ" ನಡೆಸಿದರೆ ಉತ್ತಮ ಎಂಬ ನನ್ನ ಅಭಿಪ್ರಾಯವನ್ನು ತಿಳಿಸಿದೆ. ಅವರು ಅದಕ್ಕೆ ಸಮ್ಮತಿಸಿದರು.

ನಾವು ಆಗ ಕೋಟೇಶ್ವರ ದೇವಸ್ಥಾನದಲ್ಲಿ ಮೊಕ್ಕಾಂ ಹೂಡಿದ್ದ ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರನ್ನು ಭೇಟಿಯಾಗಿ "ಸಾಮೂಹಿಕ ಜಿ.ಎಸ್.ಬಿ. ವಿವಾಹ" ಯೋಜನೆಯನ್ನು ಪ್ರಸ್ತಾಪಿಸಿದೆ. ಅವರು ಅದಕ್ಕೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿ ಆಶೀರ್ವದಿಸಿದರು. ಅದರ ಜೊತೆಗೇ ಸ್ವಾಮೀಜಿಯವರು ನಮ್ಮ ಸಮಾಜದ ಜನರು ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿ ವಿವಾಹವಾಗಲು ಮುಂದೆ ಬರುವುದರ ಕುರಿತು ಸಂದೇಹ ವ್ಯಕ್ತಪಡಿಸಿದರು. ಅದು ಸತ್ಯವೆಂದು ನಮಗೆ ಕೊನೆಗೆ ಕಂಡು ಬಂತು.

ಶ್ರೀ ಸುಬ್ರಾಯ ಬಾಳಿಗರು ಸಾರಸ್ವತ ಸಮಾಜದ ಯುವಕ ಯುವತಿಯರ ವಿವಾಹಕ್ಕಾಗಿ ಮೈಸೂರಿನಲ್ಲಿ ಒಂದು ಬಹಳ ಉತ್ತಮವಾದ ವಿವಾಹ ಗೃಹವನ್ನು ನಿಗದಿಪಡಿಸಿದ್ದರು. ನಾವು ಕೊಚ್ಚಿಯಿಂದ ಮುಂಬೈಯವರೆಗೆ ಇರುವ ದೇವಸ್ಥಾನಗಳಿಗೆ ಮತ್ತು ಮಹಿಳಾ ವೃಂದಗಳಿಗೆ "ಸಾಮೂಹಿಕ ವಿವಾಹ ಯೋಜನೆ"ಯ ಮಾಹಿತಿಯನ್ನು ಕಳುಹಿಸಿಕೊಟ್ಟು, ವಿವಾಹಕ್ಕಾಗಿ ಮೈಸೂರಿಗೆ ಬರುವ ಎರಡೂ ಕಡೆಗಳ ಮದುವೆ ದಿಬ್ಬಣದ ೧೫-೧೫ ಜನರಿಗೆ ಮೈಸೂರಿಗೆ ಬಂದು ಹೋಗುವ ಪ್ರಯಾಣದ ವೆಚ್ಚ(ರೈಲು/ಬಸ್), ಮೈಸೂರಿನಲ್ಲಿ ತಂಗುವ ವ್ಯವಸ್ಥೆ, ಮದುಮಗಳಿಗೆ ಚಿನ್ನದ ಬಳೆ, ಕಿವಿಗೆ ಬೆಂಡೋಲೆ, ಮೂಗುಬೊಟ್ಟು, ಉಂಗುರ, ಕರಿಮಣಿ, ಮಂಗಳಸೂತ್ರ, ಧಾರೆ ಸೀರೆ, ಮದುಮಗನಿಗೆ ಉಂಗುರ ಮತ್ತು ಉಡುಪು ಇಷ್ಟನ್ನು ಶ್ರೀ ಬಾಳಿಗರ ವತಿಯಿಂದ ನೀಡುವುದಾಗಿ ತಿಳಿಸಿದ್ದೆವು.

ಆದರೂ, ಕೇವಲ ಆರು ಜೋಡಿ ಮದುಮಕ್ಕಳು ಮಾತ್ರ ಮದುವೆಯಾಗಲು ಮೈಸೂರಿಗೆ ಬಂದಿದ್ದರು. ಶ್ರೀ ಗುರುವರ್ಯರು ಹೇಳಿದ ಮಾತು ಸತ್ಯವೆಂದು ನಮಗೆ ಅರಿವಾಯಿತು. ಆದರೂ ನಾವು ಮಾಡಿದ ಪ್ರಯತ್ನಕ್ಕೆ ದುಃಖವಾಗಲಿಲ್ಲ. ನಮ್ಮ ಸಮಾಜ ಬಾಂಧವರು ಸಾಲಸೋಲ ಮಾಡಿಯಾದರೂ ಮದುವೆ ನಡೆಸಲು ತಯಾರಿರುವರೇ ಹೊರತು ಇಂತಹ ಕ್ರಿಯಾತ್ಮಕ ವಿಚಾರದಲ್ಲಿ ಮುಂದುವರಿಯ ಲಾರರು ಎಂಬುದು ನನ್ನ ಅನುಭವಕ್ಕೆ ಬಂತು.

ಭಾವ ವಿಶ್ವನಾಥ ಹೆಗ್ಡೆ ಮತ್ತು ಅನಸೂಯ ಅಕ್ಕ

ನನ್ನ ಅನಸೂಯ ಅಕ್ಕ ಮತ್ತು ವಿಶ್ವನಾಥ ಭಾವನವರ ವಿವಾಹ ಜರಗಿದಾಗ (೨೫-೧೨-೧೯೪೭) ನಾನಿನ್ನೂ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಯಾಗಿದ್ದೆ. ಅನಸೂಯಕ್ಕ ನೆಂದರೆ ಪ್ರೀತಿಯಿಂದ ಹರಿಯುತ್ತಿರುವ ನದಿ. ಅವರಲ್ಲಿ ದಯೆ, ದಾಕ್ಷಿಣ್ಯ, ಪ್ರೀತಿ, ಕಷ್ಟದಲ್ಲಿ ಇರುವವರಿಗೆ ನೆರವು ನೀಡಲು ಧಾವಿಸುವ ಉದಾರ ಮನಃಸ್ಥಿತಿ ತುಂಬಿತ್ತು. ಅವರಿಗೆ ತಕ್ಕ ಸಂಗಾತಿ ವಿಶ್ವನಾಥ ಭಾವ. ಅವರೂ ತುಂಬಾ ಉದಾರ ಹೃದಯದ ಮನುಷ್ಯರು. ಅವರದ್ದು ಯಾವಾಗಲೂ ನ್ಯಾಯ ರೀತಿಯಿಂದ ನಡೆಯುವ ನಿಷ್ಕಳಂಕ ಸ್ವಭಾವ, ತನಗೆ ಕೆಟ್ಟದು ಬಯಸಿದವರಿಗೆ, ಕೆಟ್ಟದು ಮಾಡಿದವರಿಗೆ ಕೂಡ ಒಳ್ಳೆಯದನ್ನು ಬಯಸುವ ವ್ಯಕ್ತಿ. ಯಾರು ಏನೇ ತಿಳಿದುಕೊಳ್ಳಲಿ, ಮಾಡಲಿ ಅವರು ಮಾತ್ರ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಅನಸೂಯಕ್ಕ ದಯಾಮಯ ನದಿಯಾದರೆ, ವಿಶ್ವನಾಥ ಭಾವ ದಯಾಸಾಗರ.

ಚಿಕ್ಕಮಗಳೂರು ಬಸ್ ನಿಲ್ದಾಣದಲ್ಲಿ ಅನೇಕ ವರ್ಷಗಳಿಂದ ಹೋಟೇಲ್ ನಡೆಸುತ್ತಾ ಬಂದಿದ್ದ ರಾಮಕೃಷ್ಣಪ್ಪ

ಎಂಬ ನಮ್ಮದೇ ಸಮಾಜದ ಉದ್ಯಮಿಯೊಬ್ಬರು, ತಮಗೆ ವಯಸ್ಸಾಗಿದ್ದರಿಂದ ಇನ್ನು ಮುಂದೆ ತನಗೆ ಹೊಟೇಲ್ ವ್ಯಾಪಾರ ಬೇಡವೆಂದು ನನ್ನ ತಂದೆಯವರಿಗೆ ಪತ್ರ ಬರೆದಿದ್ದರು ಮತ್ತು ನೀವೇ ಈ ಹೊಟೇಲನ್ನು ಖರೀದಿಸಿ ನನ್ನನ್ನು ಮುಕ್ತಗೊಳಿಸಬೇಕೆಂದು ತಿಳಿಸಿದ್ದರು. ಇದು ಸುಮಾರು ೧೯೪೯ನೇ ಇಸವಿಯಲ್ಲಿ ನಡೆದ ಘಟನೆ. ಆ ದಿನಗಳಲ್ಲಿ ವಿಶ್ವನಾಥ ಭಾವ ಮತ್ತು ಅವರ ಹಿರಿಯಣ್ಣ ಕೇಶವ ಹೆಗ್ಡೆಯವರು ಮುಂಬೈಯ ರತನ್ ಸಿ. ಖೋನಾ ಎಂಬವರಲ್ಲಿ ನೌಕರಿ ಮಾಡಿಕೊಂಡಿದ್ದರು. ಅದು ಕೈತುಂಬಾ ಸಂಬಳ ಬರುವ ಕೆಲಸವಾಗಿರಲಿಲ್ಲ. ಆಗ ಅನಸೂಯಕ್ಕನಿಗೆ ಇಬ್ಬರು ಗಂಡುಮಕ್ಕಳು ಹುಟ್ಟಿದ್ದರು(ಉಮಾನಾಥ ಮತ್ತು ದೇವದಾಸ). ಕೇಶವ ಭಾವನವರಿಗೂ ಇಬ್ಬರು ಮಕ್ಕಳು. ಹೀಗೆ ಮುಂಬೈಯಲ್ಲಿ ಅವರ ಸಂಸಾರ ಬೆಳೆಯುತ್ತಲಿತ್ತು. ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂಬುದು ನನ್ನ ತಂದೆಯವರಿಗೆ ತಿಳಿದೇ ಇತ್ತು.

ಹೀಗಾಗಿ, ಚಿಕ್ಕಮುಗಳೂರು ರಾಮಕೃಷ್ಣನವರ ಪ್ರಸ್ತಾಪವನ್ನು ನನ್ನ ತಂದೆ ಸ್ವೀಕರಿಸಿ, ಕೇಶವ ಮತ್ತು ವಿಶ್ವನಾಥ ಭಾವನವರಿಗೆ ಪತ್ರ ಬರೆದು "ನೀವು ಮುಂಬೈ ನೌಕರಿ ಬಿಟ್ಟು ಬನ್ನಿ. ನಾನು ನಿಮಗೆ ಚಿಕ್ಕಮಗಳೂರಿನಲ್ಲಿ ಹೊಟೇಲ್ ಮಾಡಿಕೊಡುವೆ" ಎಂದು ತಿಳಿಸಿದರು. ಅವರು ನನ್ನ ತಂದೆಯವರ ಪತ್ರಕ್ಕೆ ಸಮ್ಮತಿಸಿ, ನೌಕರಿ ಬಿಟ್ಟು, ಹೊಟೇಲ್ ವ್ಯಾಪಾರ ಮಾಡಲು ಚಿಕ್ಕಮಗಳೂರಿಗೆ ಸಂಸಾರ ಸಮೇತ ಬರುವ ಸಿದ್ಧತೆ ನಡೆಸಿದರು.

ಆಗ ಬಂಟವಾಳದಲ್ಲಿ ನಮ್ಮ ಮೊಡರ್ನ್ ಕೆಫೆ ಹೊಟೇಲ್ ತುಂಬಾ ಪ್ರಸಿದ್ಧವಾಗಿತ್ತು. ವ್ಯಾಪಾರ ಬಹಳ ಜೋರಾಗಿ ಲಾಭದಾಯಕವಾಗಿ ನಡೆಯುತ್ತಿತ್ತು. ನನ್ನ ತಂದೆಯವರಲ್ಲಿ ಭಾವನವರಿಗೆ ಹೊಟೇಲ್ ಪ್ರಾರಂಭಿಸಲು ಅಗತ್ಯವಿರುವ ಹಣಬಲ ಮತ್ತು ಜನಬಲವೂ ಇತ್ತು. ಹೀಗಾಗಿ, "ಕೆನರಾ ಕಾಫಿ ಹೊಟೇಲ್" ಎಂಬ ಹೆಸರಿನಲ್ಲಿ ನಮ್ಮ ವಿಶ್ವನಾಥ ಭಾವನವರು ಚಿಕ್ಕಮಗಳೂರಿನಲ್ಲಿ ಹೊಟೇಲ್ ಉದ್ಯಮ ಪ್ರಾರಂಭಿಸಿದರು. ಹೊಟೇಲಿನಲ್ಲಿ ಕಾಫಿ, ಚಹಾ, ಮತ್ತು ತಿಂಡಿಗಳನ್ನು ತಯಾರಿಸಲು ನಮ್ಮ ತಂದೆಯವರು ೨-೩ ಮಂದಿ ಕೆಲಸಗಾರರನ್ನು ಚಿಕ್ಕಮಗಳೂರಿಗೆ ಕಳುಹಿಸಿಕೊಟ್ಟರು. ಹೀಗಾಗಿ ಕೆನರಾ ಕಾಫಿ ಹೊಟೇಲಿಗೆ ಪ್ರಾರಂಭದಿಂದಲೇ ಒಳ್ಳೆಯ ವ್ಯಾಪಾರ ಮತ್ತು ಒಳ್ಳೆಯ ಹೆಸರು ಬಂತು. ಇದು ನನ್ನ ಭಾವನವರ ಮನಸ್ಸಿನಲ್ಲಿ ಯಾವಾಗಲೂ ಸ್ಥಿರವಾಗಿ ನೆಲೆ ನಿಂತಿತ್ತು. ಹೀಗಾಗಿ ಅವರಿಗೆ ನನ್ನ ತಂದೆ ಮತ್ತು ನನ್ನ ತಾಯಿಯವರ ಮೇಲೆ ವಿಶೇಷ ಗೌರವ ಮತ್ತು ಆದರದ ಭಾವಗಳಿದ್ದವು.

ಕೆಲವು ವರ್ಷಗಳ ಬಳಿಕ ನಮ್ಮ ಹೊಟೇಲ್ ವ್ಯಾಪಾರದ ಸ್ಥಿತಿ ಕೆಡಲಾರಂಭಿಸಿತು. ಕಷ್ಟ ನಷ್ಟಗಳು ಬಂದವು. ನನ್ನ ತಂದೆಯವರ ಕೊನೆಯ ದಿನಗಳಲ್ಲಿ ಅವರ ಆರೋಗ್ಯ ಕೆಟ್ಟಿತ್ತು. ಅವರು ಹಾಸಿಗೆ ಹಿಡಿದಿದ್ದಾಗ ಅನಸೂಯಕ್ಕ ಮತ್ತು ವಿಶ್ವನಾಥ ಭಾವನವರು ನಮಗೆ ತುಂಬಾ ಸಹಾಯ ಮಾಡಿದ್ದರು. ನನ್ನ ತಂದೆಯವರ ಮರಣದ ಬಳಿಕ(೧೯೫೭), ನನ್ನ ತಂಗಿ ವಸಂತಿಯ ವಿವಾಹದ ಸಮಯದಲ್ಲಿ ಭಾವನವರೇ ಅವರ ದೊಡ್ಡ ಬ್ಯೂಕ್ ಕಾರಿನಲ್ಲಿ ನಮ್ಮನ್ನು (ನಾನು, ನನ್ನ ಪತ್ನಿ ಸಾವಿತ್ರಿ, ನನ್ನ ತಾಯಿ, ಅನಸೂಯಕ್ಕ, ವಸಂತಿ ಮತ್ತು ವಾಸು ಚಿಕ್ಕಪ್ಪ) ಮುಂಬೈಗೆ ಕರೆದುಕೊಂಡು ಹೋಗಿದ್ದರು. ಹೀಗಾಗಿ ನಮಗೆ ಇಷ್ಟು ಜನರಿಗೆ ಮುಂಬೈಗೆ ಹೋಗಿ ಬರುವ ಖರ್ಚಿನ ಉಳಿತಾಯವಾಗಿತ್ತು.

ಅನಂತರ ನನ್ನ ತಮ್ಮ ವೆಂಕಟರಮಣ ಮತ್ತು ಪ್ರಭಾಕರನ ಶಿಕ್ಷಣದ ಸಮಯದಲ್ಲಿ, ಮತ್ತು ಇನ್ನೂ ಅನೇಕ ಸಂದರ್ಭಗಳಲ್ಲಿ ವಿಶ್ವನಾಥ ಭಾವನವರು ನಮ್ಮ ಸಹಾಯಕ್ಕೆ ಬಂದಿದ್ದಾರೆ. ಅದನ್ನು ನಾನು ಮತ್ತು ನನ್ನ ಕುಟುಂಬ ಎಂದಿಗೂ ಮರೆಯಲಾರೆವು. ನಾವು ಅವರಿಗೆ ಎಷ್ಟು ಋಣಿ ಎಂಬುದನ್ನು ತಿಳಿಸುವುದಕ್ಕೆ ಪದಗಳು ಸಿಗುತ್ತಿಲ್ಲ.

ಅಂತಹ ಧರ್ಮಿಷ್ಠ, ದಯಾಳು ವಿಶ್ವನಾಥ ಹೆಗಡೆಯವರು ೧೯೭೭ನೇ ಇಸವಿ, ಜನವರಿ ೮ ರಂದು ನಮ್ಮನ್ನಗಲಿದರು. ಅವರ ಅಂತ್ಯಕ್ರಿಯೆಯಲ್ಲಿ ನಾವೆಲ್ಲರೂ ಭಾಗಿಯಾಗಿದ್ದೆವು. ಅನಂತರ ಸ್ವಲ್ಪ ವರ್ಷಗಳಲ್ಲಿ(೨೦೦೫) ನಮ್ಮ ಅನಸೂಯಕ್ಕ ನವರೂ ವೃದ್ಧಾಪ್ಯದಿಂದ ತೀರಿಕೊಂಡರು.

೨೭. ಪ್ರಥಮ ಅಮೇರಿಕಾ ಮತ್ತು ಇಂಗ್ಲೆಂಡ್ ಪ್ರವಾಸ

೧೯೯೬ನೇ ಇಸವಿಯಲ್ಲಿ ನನ್ನ ದುರ್ಭಿಕ್ಷದ ಕಾಲದಲ್ಲಿಯೂ ನನಗೆ ಅಮೇರಿಕೆಯಲ್ಲಿ ಜರುಗಲಿದ್ದ ಪ್ರಥಮ "ಉತ್ತರ ಅಮೇರಿಕಾ ಕೊಂಕಣಿ ಸಮ್ಮೇಳನ"ದ ಉದ್ಘಾಟನೆಯನ್ನು ನಡೆಸಿ ಕೊಡಬೇಕೆಂದು ಶ್ರೀ ವಸಂತ ಭಟ್ (ಖಬರ್ ತ್ರೈಮಾಸಿಕ ಪತ್ರಿಕೆಯ ಸಂಪಾದಕರು) ಅವರಿಂದ ಕೋರಿಕೆ ಪತ್ರ ಬಂತು. ಆ ಕಾರ್ಯ ಕೊಂಕಣಿ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಅಗತ್ಯವೆಂಬ ದೃಷ್ಟಿಯಿಂದ ನಾನು ಅಮೇರಿಕೆಗೆ ಹೋಗುವುದೆಂದು ತೀರ್ಮಾನಿಸಿದೆ. ಶ್ರೀ ಕುಡ್ವಿ ಜಗದೀಶ ಶೆಣೈ ಹಾಗೂ ಶ್ರೀ ಏರಿಕ್ ಒಝೇರಿಯೋ ಅವರನ್ನು ಜೊತೆಗೆ ಕರೆದುಕೊಂಡು ಹೋಗುವುದೆಂದು ನಿಶ್ಚಯಿಸಿದೆ. (ನಮ್ಮೊಂದಿಗೆ ಇದ್ದ ಶ್ರೀ ಕುಡ್ವಿ ಜಗದೀಶ ಶೆಣೈಯವರು ತಮ್ಮ ಖರ್ಚಿನಲ್ಲಿಯೇ ಬರುವುದಾಗಿ ತಿಳಿಸಿದ್ದರು.) ಹೀಗಾಗಿ ನಾವು ಜುಲೈ ೩, ೧೯೯೬ ರಂದು ಮಧ್ಯಾಹ್ನ ೧೨.೩೦ರ ಅಭಿಜಿನ್ ಮಹೂರ್ತದಲ್ಲಿ ಬಜ್ಪೆ ವಿಮಾನ ನಿಲ್ದಾಣದಿಂದ ಉತ್ತರ ಅಮೇರಿಕೆಗೆ ವಿಮಾನದಲ್ಲಿ ಹೊರಟು, ಮೊದಲು ಮುಂಬೈ ತಲುಪಿ, ಅಲ್ಲಿಂದ ಮಧ್ಯರಾತ್ರಿ ಹನ್ನೊಂದೂವರೆ ಗಂಟೆಗೆ ದೆಹಲಿ, ಲಂಡನ್ ಮಾರ್ಗವಾಗಿ ನ್ಯೂಯಾರ್ಕ್‌ಗೆ ಹೊರಡುವ (ಒಂದು ದಿನದ ಪ್ರಯಾಣ) ವಿಮಾನ ಹತ್ತಿದೆವು

ಮರುದಿನ ನಾವು ಸ್ಥಳೀಯ ಸಮಯ ಸಂಜೆ ೪ ಗಂಟೆಗೆ ಅಮೇರಿಕೆಯ ನ್ಯೂಯಾರ್ಕ್ ವಿಮಾನ ನಿಲ್ದಾಣ ತಲುಪಿದೆವು. ನಮ್ಮನ್ನು ಸ್ವಾಗತಿಸಲು ನನ್ನ ಷಡ್ಡಕ ಮೆಕ್ಸನ್‌ರ ಅಳಿಯ ರವಿ ಶೆಣೈ ವ್ಯಾನ್ ತೆಗೆದುಕೊಂಡು ಬಂದಿದ್ದರು. ಅವರು ನಮ್ಮನ್ನು ಹತ್ತಿರದ ನ್ಯೂಜರ್ಸಿಯಲ್ಲಿದ್ದ ತಮ್ಮ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ರವಿಯ ಪತ್ನಿ ಶಾರದಾ(ನನ್ನ ಪತ್ನಿ ಚಿ.ಸೌ ಸಾವಿತ್ರಿಯ ಅಕ್ಕ ಸುಶೀಲ ಅವರ ಮಗಳು) ಇದ್ದಳು. ರವಿ ಕಿನ್ನಿಗೋಳಿಯ ಪ್ರತಿಷ್ಠಿತ ಶೆಣೈ ಕುಟುಂಬಕ್ಕೆ ಸೇರಿದವರು, ಸದಾ ನಗುವ ಉದಾರಿ ಸದ್ಗೃಸ್ಥರು. ಅವರ ಮನೆಯಲ್ಲಿ ನಾವು ನಾಲ್ಕು ದಿನ ಇದ್ದೆವು. ರವಿ ಮತ್ತು ಶಾರದಾ ಅನ್ಯೋನ್ಯ ಜೋಡಿ. ಅಲ್ಲಿಯೇ ಅಕ್ಕಪಕ್ಕದ ಊರುಗಳಲ್ಲಿ ಶಾರದಾಳ ತಂಗಿಯಂದಿರಾದ ಸುಮನ, ಶೋಭಾ ಮತ್ತು ಕ್ಯಾಲಿಫೋರ್ನಿಯಾದ ಸಾನ್ ಫ್ರಾನ್ಸಿಸ್ಕೋದಲ್ಲಿ ವಿದ್ಯಾ ನೆಲೆಸಿದ್ದರು. ಇವರೆಲ್ಲರೂ ಸದ್ಗುಣಿ ಗೃಹಿಣಿಯರಾಗಿದ್ದು, ತಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ತಿಳಿವಳಿಕೆಯನ್ನು ನೀಡಿದ್ದಾರೆ.

ಜುಲೈ ೫ರಂದು ಬೆಳಗ್ಗೆ ಹ್ಯೆಸ್ಟೌನ್ ಸಭಾಂಗಣದಲ್ಲಿ "ಉತ್ತರ ಅಮೇರಿಕಾ ಕೊಂಕಣಿ ಸಮ್ಮೇಳನ" ನಡೆಯಲಿತ್ತು. ಭಾರತದಿಂದ ಶ್ರೀ ಕೆ.ಕೆ.ಪೈ, ಶ್ರೀ ಟಿ. ರಮೇಶ ಪೈ, ಶ್ರೀ ಆರ್.ಪಿ. ಬಾಳಿಗಾ, ಮುಂಬೈಯ ಶ್ರೀ ಎನ್.ಎಸ್. ರಾವ್ ಮೊದಲಾದ ಹಿರಿಯರು ಬಂದಿದ್ದರು. ದೀಪ ಹಚ್ಚುವುದರ ಮೂಲಕ ನಾಕಾ(ನಾರ್ತ್ ಅಮೇರಿಕನ್ ಕೊಂಕಣಿ ಅಸೋಶಿಯೇಶನ್) ವತಿಯಿಂದ ನಡೆಯಲಿರುವ ಪ್ರಥಮ ಉತ್ತರ ಅಮೇರಿಕಾ ಕೊಂಕಣಿ ಸಮ್ಮೇಳನದ ಉದ್ಘಾಟನೆಯನ್ನು ನಡೆಸಲು ನನ್ನನ್ನು ಆಮಂತ್ರಿಸಲಾಗಿತ್ತು. ಅಲ್ಲಿ ಪ್ರಸ್ತಾವನಾ ಭಾಷಣವೂ ನನ್ನದೇ ಆಗಿತ್ತು. ನಾನು ೧೯೯೪ ರಿಂದ ೧೯೯೫ ರ ಡಿಸೆಂಬರ್‌ವರೆಗೆ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಆಯೋಜನೆಗೆ ನಡೆಸಲಾಗಿದ್ದ ಪೂರ್ವ ತಯಾರಿ, ಆಮೇಲೆ ಬೃಹತ್ ಪ್ರಮಾಣದಲ್ಲಿ ನಡೆದ ವಿಶ್ವ ಸಮ್ಮೇಳನ, ಈ ಕಾರಣದಿಂದ ಕೊಂಕಣಿ ಭಾಷೆ, ಸಂಸ್ಕೃತಿ ಮತ್ತು ಸಮುದಾಯದ ಮೇಲೆ ಉಂಟಾಗಿರುವ ಪರಿಣಾಮ ಇತ್ಯಾದಿ ಕುರಿತು ಮಾತನಾಡಿದೆ. ಅಲ್ಲಿ ನೆರೆದವರು ನನ್ನ ಭಾಷಣ ಕೇಳಿ ಸಂತೋಷಪಟ್ಟು, ನನ್ನನ್ನು ಅಭಿನಂದಿಸಿದರು.

"ನಾಕಾ" ಸಮ್ಮೇಳನಕ್ಕೆ ಅಮೇರಿಕ ಮತ್ತು ಕೆನಡಾ ದೇಶದಲ್ಲಿ ಮತ್ತು ಇತರ ರಾಜ್ಯಗಳಲ್ಲಿ ನೆಲೆಸಿದ್ದ ಕೊಂಕಣಿ ಜನರು ಬಂದಿದ್ದರು. ಸಮ್ಮೇಳನದಲ್ಲಿ ಸುಮಾರು ೭೦೦ ಪ್ರತಿನಿಧಿಗಳು ಭಾಗವಹಿಸಿದ್ದರು.(ಈಗ ಪ್ರತಿನಿಧಿಗಳ ಸಂಖ್ಯೆ ೨೦೦೦ಕ್ಕಿಂತ ಹೆಚ್ಚಾಗಿದೆ.) ಆಮೇಲೆ ನಾಕಾ ಸಮ್ಮೇಳನವನ್ನು ೧೯೯೮, ೨೦೦೦, ೨೦೦೨, ೨೦೦೪ ಮತ್ತು ೨೦೦೬

ಇಸವಿಯಲ್ಲಿ ನಡೆಸಲಾಗಿದೆ. ೨೦೦೪ರಲ್ಲಿ ಲಾಸ್ ಏಂಜಲಿಸ್‌ನಲ್ಲಿ ಜರಗಿದ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಡಾ. ಕಾಸರಗೋಡು ರಾಮದಾಸ್ ಕಾಮತಿಯವರಿದ್ದರು. ಅವರು ನನಗೆ ಆಮಂತ್ರಣ ನೀಡಿದ್ದರಿಂದ ನಾನು, ಶ್ರೀ ಕುಡ್ಪಿ ಜಗದೀಶ ಶೆಣೈ ಮತ್ತು ಅವರ ಪತ್ನಿ ಹಾಗೂ ಶ್ರೀ ರಘುನಾಥ ಶೇಟ್ ಮತ್ತು ಅವರ ಪತ್ನಿ ಸಮ್ಮೇಳನದಲ್ಲಿ ಭಾಗವಹಿಸಿದ್ದೆವು.

ಜುಲೈ ೬, ೧೯೯೬ರಂದು ಉತ್ತರ ಅಮೇರಿಕಾ ಕೊಂಕಣಿ ಸಮ್ಮೇಳನದ ಕಾರ್ಯಕ್ರಮವಾಗಿ ವಿಚಾರ ಸಂಕಿರಣವನ್ನು ನಡೆಸಲಾಗಿತ್ತು. ಅದೇ ದಿನ ಶ್ರೀಮತಿ ನೀನಾ ಪಡುಕೋಣೆ, ಶ್ರೀಕರ್, ಬೆಂಗಳೂರು ಮತ್ತು ನಿರ್ಮಲಾ ಬೆಂಗಳೂರು(ಇವರು ಮೂಲತಃ ಬಂಟವಾಳದವರು) ಪಂಗಡವರ "ಸುಬ್ಬಣ್ಣಾಲೊ ಆಯ್ತಾರು"(ಸುಬ್ಬಣ್ಣನ ಭಾನುವಾರ) ಎಂಬ ಕೊಂಕಣಿ ನಾಟಕದ ಪ್ರದರ್ಶನ ಇತ್ತು(ಈ ನಾಟಕವನ್ನು ವಿಶ್ವ ಕೊಂಕಣಿ ಸಮ್ಮೇಳನದಲ್ಲಿ ದೆಹಲಿ ಕೊಂಕಣಿ ಸಂಘದವರು ಪ್ರದರ್ಶಿಸಿದ್ದರು). ನಮಗೆ ಶ್ರೀ ಎಂ. ವಾಸುದೇವ ನಾಯಕ್(ಚಿ. ಪ್ರಜ್ಞಾಳ ಭಾವ, ಬೆಂಗಳೂರಿನ ಎಂ.ಆರ್. ನಾಯಕರ ಅಣ್ಣ) ಅವರ ಮನೆಯಲ್ಲಿ ರಾತ್ರಿ ಊಟಕ್ಕೆ ಆಹ್ವಾನ ಇತ್ತು.

ಆ ದಿನ ನಾವು ಚಿ. ಗಣಪತಿಯ ಆದೇಶದ ಪ್ರಕಾರ ಕೆಲವು ಕೊಂಕಣಿ ಮಹನೀಯರನ್ನು ಭೇಟಿಯಾಗಿ, ಅವರವರ ಊರುಗಳಿಗೆ ಹೋಗುವ ಮತ್ತು ಅಲ್ಲಿ ಸ್ಥಳೀಯ ಕೊಂಕಣಿ ಜನರನ್ನು ಒಂದೆಡೆ ಸೇರಿಸಿ ಕೊಂಕಣಿ ಭಾಷೆ, ಸಂಸ್ಕೃತಿ ಮತ್ತು ಇತರ ವಿಚಾರಗಳ ಕುರಿತು ಮಾತನಾಡುವ ಕಾರ್ಯಕ್ರಮವನ್ನು ಆಯೋಜಿಸುವ ಬಗ್ಗೆ ಮತ್ತು ಆಯಾ ಊರಿನಲ್ಲಿ ಯಾವ್ಯಾವ ದಿನ ಯಾರ ಯಾರ ಮನೆಯಲ್ಲಿ ಸೇರುವುದು ಎಂಬುದರ ಕುರಿತು ವಿಚಾರ ವಿನಿಮಯ ನಡೆಸಿ ಅಮೇರಿಕೆಯ ಪ್ರವಾಸ ಕಾರ್ಯಕ್ರಮವನ್ನು ರೂಪಿಸಿದೆವು. ಅನೇಕ ರಾಜ್ಯಗಳಲ್ಲಿರುವ ಕೊಂಕಣಿಗರು ತಮ್ಮ ತಮ್ಮ ಊರಿಗೆ ಬರುವಂತೆ ಬರಲು ನಮಗೆ ಆಮಂತ್ರಣ ನೀಡಿದರು. ಅದರಲ್ಲಿ ನಾವು ಕೆಲವು ಊರುಗಳನ್ನು ಆಯ್ಕೆ ಮಾಡಿ, ಅಲ್ಲಿಗೆ ಹೋಗಿ ಮುಟ್ಟುವ ದಿನವನ್ನು ನಿರ್ಧರಿಸಿ, ಕಾರ್ಯಕ್ರಮದ ಸ್ವರೂಪವನ್ನು ವಿವರವಾಗಿ ರೂಪಿಸಿದೆವು. ವಿಮಾನ ಕಚೇರಿಗೆ ಹೋಗಿ ನಮ್ಮ ಪ್ರವಾಸದ ದಿನವನ್ನು ನೋಂದಾಯಿಸಿದೆವು (ನಾವು ಇಲ್ಲಿಂದ ಹೋಗುವಾಗಲೇ ಅಮೇರಿಕೆಯಲ್ಲಿನ ನಮ್ಮ ತಿರುಗಾಟಕ್ಕಾಗಿ ಟಿಕೇಟುಗಳನ್ನು ಶ್ರೀ ವಿಲಿಯಂ ಡಿಸೋಜಾ ನಮ್ಮ ಕೈಗೆ ನೀಡಿದ್ದರು). ಮರುದಿನ ಕೆನಡಾ ದೇಶಕ್ಕಾಗಿ ವೀಸಾ ಪಡೆಯಲು ಕೆನಡಾದ ದೂತವಾಸಕ್ಕೆ ಹೋದೆವು. ಆದರೆ ಶ್ರೀ ಏರಿಕ್ ಒರ್ಝುರಿಯೋ ಅವರು ತಮ್ಮ ಪ್ರವಾಸದ ಉದ್ದೇಶವನ್ನು "ಕೊಂಕಣಿ ಚಟುವಟಿಕೆಗಳು" ಎಂದು ಉಲ್ಲೇಖಿಸಿದ ಕಾರಣವಾಗಿ ನಮಗೆ ವೀಸಾ ನೀಡಲು ಅವರು ನಿರಾಕರಿಸಿದರು. ಹೀಗಾಗಿ ಆ ಪ್ರವಾಸದಲ್ಲಿ ನಮಗೆ ಕೆನಡಾ ದೇಶಕ್ಕೆ ಹೋಗುವುದು ಸಾಧ್ಯವಾಗಲಿಲ್ಲ(ಆಮೇಲೆ ೨೦೦೪ನೇ ಇಸವಿಯಲ್ಲಿ ನಮ್ಮ ಅಮೇರಿಕಾ ಪ್ರವಾಸದ ಸಂದರ್ಭದಲ್ಲಿ ನಾವು ಕೆನಡಾ ದೇಶಕ್ಕೆ ಹೋಗಿದ್ದೆವು). ಇದರಿಂದ ನಮಗೆ ತುಂಬಾ ಬೇಸರವಾಯಿತು. ಆದರೆ ಮಾಡುವುದೇನು?

ರವಿ ನಮಗೆ ನ್ಯೂಯಾರ್ಕ್‌ಗೆ ಕರೆದುಕೊಂಡು ಹೋಗಿ ರಾಕ್‌ಫೆಲ್ಲರ್ ಸೆಂಟರ್, ಯು.ಎನ್.ಓ. ತೋರಿಸಿದರು. ಯುಎನ್‌ಓ ಭವನದಲ್ಲಿ ನೆಹರೂ ಮತ್ತು ಇಂದಿರಾಗಾಂಧಿ ಪರಸ್ಪರ ಮಾತನಾಡುತ್ತಿರುವ ದೃಶ್ಯವನ್ನು ತೋರಿಸುತ್ತಾರೆ. ವರ್ಲ್ಡ್ ಟ್ರೇಡ್ ಸೆಂಟರ್‌ನ ಟವರ್ಸ್ ತುದಿಯಲ್ಲಿರುವ ಮಹಡಿಗೆ (೧೦೭ ಮತ್ತು ೧೦೯ ಮಹಡಿಗಳಿರುವ) ಹೋಗಲು ಇರುವ ಬೃಹತ್ ಲಿಫ್ಟ್ ಹತ್ತಿ ಹೋಗಿ ಸುತ್ತಮುತ್ತ ಹರಡಿಕೊಂಡಿದ್ದ ನ್ಯೂಯಾರ್ಕ್ ನಗರದ ದೃಶ್ಯಾವಳಿಗಳನ್ನು ನೋಡಿದೆವು.(ಈ ಕಟ್ಟಡಗಳು ೨೦೦೧ನೇ ಇಸವಿಯಲ್ಲಿ ಭಯೋತ್ಪಾದಕರ ವಿಮಾನದಾಳಿಗೆ ಸಿಕ್ಕಿ ಧ್ವಂಸವಾದವು.) ಚಾರಿತ್ರಿಕವಾಗಿ ಪ್ರಸಿದ್ಧವಾಗಿರುವ ಸಂಯುಕ್ತ ರಾಷ್ಟ್ರಗಳ ಸಂಘದ(ಯುಎನ್‌ಓ) ಸುಂದರ ಕಟ್ಟಡವನ್ನು ವೀಕ್ಷಿಸಬೇಕೆಂಬ ನನ್ನ ಕನಸು ಹೀಗೆ ನನಸಾಯಿತು.

ಜುಲೈ ೯ನೇ ತಾರೀಖಿನಂದು ಮೆಕ್ಸನ್‌ರ ಮಗಳು ಶೋಭಾ ಮತ್ತು ಸುಮನ ನಮ್ಮನ್ನು ಅವರ ಕಾರಿನಲ್ಲಿ ಲಿಬರ್ಟಿ ಪಾರ್ಕ್ ಬಳಿ ತಲುಪಿಸಿದ್ದರು. ನಾವು ದೋಣಿಯಲ್ಲಿ ಲಿಬರ್ಟಿ ಪುತ್ಥಳಿ ಬಳಿ ಹೋದೆವು. ಆ ಪುತ್ಥಳಿಯನ್ನು ಹತ್ತಿ ಮೇಲೆ ಹೋಗಿ ನೋಡಿ ಬರಲು ಸುಮಾರು ಎರಡು ಕಿ.ಮೀ ನಷ್ಟು ಕ್ಯೂನಲ್ಲಿ ನಿಂತು ಟಿಕೇಟ್ ಖರೀದಿಸಬೇಕಾಗುತ್ತದೆ.

ಅಮೇರಿಕಾ ಮತ್ತು ಇತರ ಐರೋಪ್ಯ ರಾಷ್ಟ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಚಾರಿತ್ರಿಕ ಮತ್ತು ವೈಭವೋಚಿತ ಕಟ್ಟಡಗಳು, ಸುಂದರ ತೋಟಗಳು, ಕಲಾ ಗ್ಯಾಲರಿಗಳು, ಗ್ರಂಥಾಲಯಗಳು ಇರುತ್ತವೆ. ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ವೀಕ್ಷಣೆಗೆ ಹಣ ನೀಡಿ ಪ್ರವೇಶ ಪತ್ರ ಖರೀದಿಸಬೇಕಾಗುತ್ತದೆ. ಹಾಗಿದ್ದರೂ, ಅಂತಹ ಕಡೆಗಳಲ್ಲಿ ಸುತ್ತಮುತ್ತಲಿನ ಪರಿಸರ ತುಂಬಾ ಆಕರ್ಷಕವಾಗಿರುತ್ತದೆ. ಅಲ್ಲಲ್ಲಿ ಉಪಹಾರಗೃಹಗಳು,

ವಿಶ್ರಾಂತಿ ಸ್ಥಳಗಳು, ಶುಚಿತ್ವವನ್ನು ಕಾಪಾಡಿಕೊಂಡು ಬರಲು ಕಸದ ಡಬ್ಬಿಗಳು ಮತ್ತು ಮೂತ್ರಿಗಳು ಇರುತ್ತವೆ. ಸ್ಥಳದ ವಿವರಗಳನ್ನು ನೀಡುವ ಪುಸ್ತಿಕೆಗಳು ಮತ್ತು ಭಾವಚಿತ್ರಗಳನ್ನು ಮಾರಾಟ ಮಾಡುವ ವ್ಯವಸ್ಥೆಯೂ ಇರುತ್ತದೆ.

ನಾವು ನ್ಯೂಜೆರ್ಸಿಯಲ್ಲಿದ್ದಾಗ ನ್ಯೂಯಾರ್ಕ್‌ನಲ್ಲಿರುವ "ನಾಕಾ"ದ ಸಂಸ್ಥಾಪಕ ಟ್ರಸ್ಟಿ ಶ್ರೀಮತಿ ನೀನಾ ಪಡುಕೋಣೆಯವರ ಆಮಂತ್ರಣವನ್ನು ಸ್ವೀಕರಿಸಿ ಅವರ ಮನೆಗೆ ಹೋಗಿದ್ದೆವು.. ಅಲ್ಲಿ ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಕಾರ್ಯಗಳ ಬೆಳವಣಿಗೆಯ ಕುರಿತು ಚರ್ಚೆಗಳನ್ನು ನಡೆಸಿದ್ದೆವು. ವಿಶ್ವ ಕೊಂಕಣಿ ಸಮ್ಮೇಳನದ ತಯಾರಿ ಮತ್ತು ಏಳು ದಿನಗಳ ಕಾರ್ಯಕ್ರಮದ ವಿಡಿಯೋ ಟೇಪ್ ಪ್ರತಿಯನ್ನು(ಶ್ರೀ ಉದಯಶಂಕರ ಪಾಣಿಯವರು ಸಿದ್ಧಪಡಿಸಿದ್ದ) ಶ್ರೀಮತಿ ಪಡುಕೋಣೆಯವರಿಗೆ ನೀಡಿದೆವು. ನಾವು ಅದಕ್ಕೆ ೧೮ ಅಮೇರಿಕನ್ ಡಾಲರ್ ಬೆಲೆಯನ್ನು ನಿಗದಿಪಡಿಸಿದ್ದೆವು. ಆದರೆ ಹೆಚ್ಚು ಪ್ರತಿಗಳು ಮಾರಾಟವಾಗಿರಲಿಲ್ಲ. (ಶ್ರೀ ವಸಂತ ಭಟ್ ಅವರು ಖಬರ್ ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತಲಿದ್ದರೂ ಕೂಡ.)

ನಾವು ಜುಲೈ ೧೦ ರಂದು ರವಿ ಮತ್ತು ಶಾರದಾ ದಂಪತಿಗಳ ಮನೆಯಿಂದ ಹೊರಟು ನ್ಯೂಯಾರ್ಕ್ ವಿಮಾನ ನಿಲ್ದಾಣದಿಂದ ಪಿಟ್ಸ್ ಬರ್ಗ್‌ಗೆ ಹೋಗಿ ಅಲ್ಲಿಂದ ಡೆಟ್ರಾಯಿಟ್‌ಗೆ ಪ್ರಯಾಣಿಸಿದೆವು. ಅಲ್ಲಿ ನಮ್ಮನ್ನು ಬಂಟ್ವಾಳದ ಹಿರಿಯರಾದ ಭಾಂಗರಾ ವಾಮನ ಬಾಳಿಗರ ಮೊಮ್ಮಗ ಡಾ. ಬಿ. ಶ್ರೀನಿವಾಸ ಬಾಳಿಗ ನಮ್ಮನ್ನು ಸ್ವಾಗತಿಸಿ ಅವರ ಮನೆಗೆ ಕರೆದುಕೊಂಡು ಹೋದರು. ಮರುದಿನ ನಮ್ಮನ್ನು ಡಾ. ಶ್ರೀನಿವಾಸ ಬಾಳಿಗರು ಹೆನ್ರಿ ಫೋರ್ಡ್ ಮ್ಯೂಸಿಯಂ ವೀಕ್ಷಣೆಗೆ ಕರೆದುಕೊಂಡು ಹೋದರು. ದಿ. ಹೆನ್ರಿ ಫೋರ್ಡ್ ಕಾರು ಕಂಡುಹಿಡಿದ ಸಂಶೋಧಕರೆಂದು ಪ್ರಸಿದ್ಧರಾಗಿದ್ದಾರೆ. ಮ್ಯೂಸಿಯಂನಲ್ಲಿ ಅವರು ಸಂಶೋಧಿಸಿ ರಸ್ತೆಯಲ್ಲಿ ಚಲಾವಣೆಗೆ ತಂದ ಪ್ರಥಮ ಮೂಲ ಕಾರು, ಹಾಗೂ ಆ ಮೇಲಿನ ವರ್ಷಗಳಲ್ಲಿ ಬಂದ ಅದರ ಅವತರಣಿಕೆಗಳಿದ್ದವು. ಇವಲ್ಲದೆ ಇತರ ಭೌಗೋಳಿಕ, ಚಾರಿತ್ರಿಕ ವಿಷಯಗಳ ಸ್ಮರಣಿಕೆಗಳನ್ನು ಕೂಡ ಪ್ರದರ್ಶನಕ್ಕೆ ಇಡಲಾಗಿದೆ. ಪ್ರಾಚೀನ ಪಿಂಗಾಣಿ ಪಾತ್ರೆಗಳು, ರೈಲು ಮತ್ತು ವಿಮಾನಗಳ ಚಿನ್ನದ ಮಾದರಿಗಳು, ೨೦೦-೩೦೦ ವರ್ಷಗಳಷ್ಟು ಹಿಂದಿನ ಪೀಠೋಪಕರಣಗಳನ್ನು ಪ್ರವಾಸಿಗರ ಗಮನವನ್ನು ಸೆಳೆಯುವ ರೀತಿಯಲ್ಲಿ ಜೋಡಿಸಿ ಇಡಲಾಗಿದೆ. ಈ ಪ್ರದರ್ಶನ ವಿಭಾಗವು ಸುಮಾರು ೪-೫ ಎಕರೆಗಳಷ್ಟು ಪ್ರದೇಶದಲ್ಲಿ ಹರಡಿಕೊಂಡಿದೆ. ಡಾ. ಬಾಳಿಗರು ತಮ್ಮ ಮನೆಯಲ್ಲಿ ರಾತ್ರಿಯೂಟಕ್ಕಾಗಿ ಹಲವಾರು ಕೊಂಕಣಿ ಜನರನ್ನು ಕರೆದಿದ್ದರು. ನಾವು ಊಟ ಮುಗಿದ ಬಳಿಕ ಶ್ರೀ ಎಂ.ಪಿ. ಕಾಮತ್ (ಮಂಜೇಶ್ವರ) ಅವರ ಮನೆಗೆ ಭೇಟಿ ನೀಡಿ ಅಲ್ಲಿ ಮಾತುಕತೆ ನಡೆಸಿ ಹಿಂತಿರುಗಿದೆವು.

ಜುಲೈ ೧೨ ರಂದು ಡಾ. ಶ್ರೀನಿವಾಸ ಬಾಳಿಗರ ಮನೆಯಿಂದ ಹೊರಟು ಪಿಟ್ಸ್‌ಬರ್ಗ್‌ಗೆ ಬಂದೆವು. ಪಿಟ್ಸ್‌ಬರ್ಗ್‌ನಿಂದ ವಿಮಾನದಲ್ಲಿ ಪ್ರಯಾಣಿಸಿ ಸಂಜೆ ೪.೪೫ ಗಂಟೆಗೆ ಶಿಕಾಗೋ ತಲುಪಿದೆವು.(ಉತ್ತರ ಅಮೇರಿಕೆಯ ಪೂರ್ವ ಕರಾವಳಿ ಮತ್ತು ಶಿಕಾಗೋಗೆ ಒಂದು ಗಂಟೆಯ ಸಮಯ ವ್ಯತ್ಯಾಸ ಇದೆ) ನಮ್ಮನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಶ್ರೀ ಶ್ರೀಕರ್ ಮತ್ತು ನಿರ್ಮಲಾ ಬೆಂಗಳೂರು ಬಂದಿದ್ದರು. ನಾವು ಅವರ ಮನೆಯಲ್ಲಿ ಎರಡು ದಿನಗಳ ಕಾಲ ತಂಗಿದ್ದೆವು. ಈ ವಿಚಾರಶೀಲ ದಂಪತಿ ಜೋಡಿಯಲ್ಲಿ ನಿರ್ಮಲಾಗೆ ಮನೆಗೆ ಬಂದ ಅತಿಥಿಗಳಿಗೆ ತರಹವಾರಿ ತಿಂಡಿ, ಊಟ, ಸಿಹಿ ತಯಾರಿಸಿ ನೀಡುವ ಖಯಾಲಿ. ಶ್ರೀಕರ ಗಂಭೀರ ಪ್ರಕೃತಿಯ ಗಂಡಸಾಗಿದ್ದರೂ, "ಸುಬ್ಬಣ್ಣಾಲೊ ಆಯತಾರು" ಹಾಸ್ಯ ನಾಟಕದಲ್ಲಿ ಸುಬ್ಬಣ್ಣನ ಪಾತ್ರವನ್ನು ತುಂಬಾ ಚೆನ್ನಾಗಿ ನಿರ್ವಹಿಸಿದವರು. ಅವರ ಇಬ್ಬರು ಮಕ್ಕಳು ನಿತೀಶ್ ಮತ್ತು ಸಮೀರ ಓದುವುದರಲ್ಲಿ, ಕ್ರೀಡೆಗಳಲ್ಲಿ ತುಂಬಾ ಜಾಣರು.

ಜುಲೈ ೧೩ರಂದು ಶ್ರೀಕರ ಭಾವನವರು ನಮ್ಮನ್ನು ಶಿಕಾಗೋದಲ್ಲಿ ನೆಲೆಸಿರುವ ಶ್ಯಾಮ ಅಮಲಾಡಿ ಅವರ ಮನೆಯಲ್ಲಿ ನಡೆಯಲಿರುವ ಕೊಂಕಣಿಗರ ಸಭೆಗೆ ಕರೆದುಕೊಂಡು ಹೋದರು. ಅಲ್ಲಿ ಸೇರಿದವರು ವಿಶ್ವ ಕೊಂಕಣಿ ಕೇಂದ್ರ ಯೋಜನೆ ಬಗ್ಗೆ ಉತ್ಸಾಹ ತೋರಿಸಿದರು. ಆ ಸಭೆಗೆ ಆಸ್ಟಿನ್ ಡಿಸೋಜಾ ಪ್ರಭು ಬಂದಿದ್ದರು.

ಇಪ್ಪತ್ತು ವರ್ಷಗಳ ಹಿಂದೆ ಮಂಗಳೂರಿನಲ್ಲಿದ್ದಾಗ ಆಸ್ಟಿನ್ ಕೊಂಕಣಿ ಕ್ಷೇತ್ರದಲ್ಲಿ ಬಹಳ ಕೆಲಸ ಮಾಡುತ್ತಿದ್ದ ಯುವಕ. ತನ್ನ ಸಂಪಾದಕತ್ವದಲ್ಲಿ ಮೂರು ಪತ್ರಿಕೆಗಳನ್ನು ಒಂದೇ ಬಾರಿ ಪ್ರಕಟಿಸುವ ಸಾಹಸ ತೋರಿದ ವ್ಯಕ್ತಿ. ಶ್ರೀ ಬಿ.ವಿ. ಬಾಳಿಗ, ಬಂಟವಾಳ ದಾಮೋದರ ಪ್ರಭು, ಮತ್ತು ಫಾ. ಮಾರ್ಕ್ ವಾಲ್ಡರ್ ಅವರೊಂದಿಗೆ ಕೊಂಕಣಿ ಭಾಷಾ ಮಂಡಳದಲ್ಲಿಯೂ ಕಾರ್ಯದರ್ಶಿಯಾಗಿ ಕೆಲಸ ನಡೆಸಿದ್ದ ಕೊಂಕಣಿಪ್ರೇಮಿ. ಆಸ್ಟಿನ್ ನಮಗೆ ಅಲ್ಲಿಯ ಲಯನ್ಸ್ ಕ್ಲಬ್ ಸದಸ್ಯರನ್ನು ಭೇಟಿ ಮಾಡಿಸಿದರು. ವಿಶ್ವ ಕೊಂಕಣಿ ಸಮ್ಮೇಳನದಲ್ಲಿ ನಾಯಕತ್ವ

ವಹಿಸಿದ್ದ ಕಾರಣಕ್ಕಾಗಿ ನನ್ನ ಕುರಿತು ಆಸ್ಟಿನ್‌ಗೆ ತುಂಬಾ ಅಭಿಮಾನ. ಅವರು ನಮ್ಮನ್ನು ತನ್ನ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಕೊಂಕಣಿ ಜನರನ್ನು ಸೇರಿಸಿ ಸಭೆಯನ್ನು ನಡೆಸಿ ನಮಗೆ ಸನ್ಮಾನ ಮಾಡಿದರು. ಎರಡು ವರ್ಷಗಳ ಬಳಿಕ ಆಸ್ಟಿನ್ ಶಿಕಾಗೊ ಲಯನ್ಸ್ ಗವರ್ನರ್ ಆದರು.

ಶ್ರೀಕರ ರಾವ್ ಅವರು ನಮ್ಮನ್ನು ಶಿಕಾಗೊ ಶ್ರೀ ವೆಂಕಟರಮಣ ಸ್ವಾಮೀ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಅದೊಂದು ಭವ್ಯ ಕಟ್ಟಡ, ಅಲ್ಲಿಯ ವಾತಾವರಣ ತುಂಬಾ ನಿರ್ಮಲ ಹಾಗೂ ಮೌನಭರಿತ. ಬಹಳ ಸುಂದರವಾದ ಮೂರ್ತಿಗಳ ಪ್ರತಿಷ್ಠಾಪನೆ ಅಲ್ಲಿಯ ವಿಶೇಷ. ಅಲ್ಲಿಗೆ ಭಕ್ತಜನರು ಬಹಳ ಸಂಖ್ಯೆಯಲ್ಲಿ ಬರುತ್ತಾರೆ. ಆಮೇಲೆ ನಾವು ಮಿಚಿಗನ್ ಸರೋವರ ನೋಡಲು ಹೋದೆವು. ಅದು ಸರೋವರವೆಂದು ಕರೆಯಿಸಿಕೊಂಡರೂ, ಸಾವಿರಾರು ಎಕರೆಗಳಷ್ಟು ವಿಸ್ತೀರ್ಣ ಜಾಗದಲ್ಲಿ ಹರಡಿಕೊಂಡಿದೆ. ಇಲ್ಲಿಂದಲೇ ಶಿಕಾಗೋ ನಗರಕ್ಕೆ ನೀರು ಪೂರೈಕೆಯಾಗುತ್ತದೆ. ಆಮೇಲೆ ನಾವು ಬಹಾಯಿ ದೇವಾಲಯಕ್ಕೆ ಹೋದೆವು. ಅದು ಕೂಡ ಸುಂದರವಾದ ಕಟ್ಟಡ. ಜಗತ್ತಿನ ಎಲ್ಲೆಡೆಗಳಲ್ಲಿ ಬಹಾಯಿ ಚಳವಳಿ ಪ್ರಾರಂಭಗೊಂಡ ಬಳಿಕ ಅವರ ದೇವಾಲಯಗಳು ಭಾರತವೂ ಸೇರಿದಂತೆ, ಅನೇಕ ದೇಶಗಳಲ್ಲಿ ನಿರ್ಮಾಣಗೊಂಡಿವೆ. ಇಸ್ಲಾಂ ಧರ್ಮದಂತೆ ಬಹಾಯಿಯವರಲ್ಲಿಯೂ ಮೂರ್ತಿ ಪೂಜೆ ಇಲ್ಲ. ಶಾಂತಿ ಸಂದೇಶ ಸಾರುವುದು ಅವರ ಉದ್ದೇಶ.

ಜುಲೈ ೧೪ರಂದು ಭಾನುವಾರ ಬೆಳಗ್ಗೆ ೯.೩೦ಕ್ಕೆ ಆಸ್ಟಿನ್ ಡಿಸೋಜ ಪ್ರಭು ಅವರು ಬಂದು ಅವರ ಕಾರಿನಲ್ಲಿ ನಮ್ಮನ್ನು ಶ್ರೀಕರ ಬೆಂಗಳೂರು ಅವರ ಮನೆಯಿಂದ ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋದರು. ನಾವು ದಾರಿಯಲ್ಲಿ ವಿಶ್ವದಲ್ಲಿಯೇ ಅತಿ ಎತ್ತರದ ಸಿಯರ್ಸ್ ಟವರ್ ನೋಡಿದೆವು. ಅಲ್ಲಿ ಮೇಲೆ ಹತ್ತಿ ಹೋಗಲು ಲಿಫ್ಟ್ ಇದೆ. ಹಣ ನೀಡಿ, ಟಿಕೇಟ್ ಪಡೆದು ಲಿಫ್ಟ್ ಬಳಿ ಹೋಗುವುದೆಂದರೆ ತುಂಬಾ ಸಮಯ ಹಿಡಿಯುತ್ತದೆ. ಆದರೆ ೬೦ ಸೆಕೆಂಡ್ ಒಳಗೆ ೧೧೩ ಮಹಡಿಗಳನ್ನು ಏರಿ ಹೋಗಬಹುದು. ಮೇಲೆ ನಿಂತು ನೋಡಿದರೆ ಇಡೀ ನಗರದ ದೃಶ್ಯ ಕಾಣಲು ಸಿಗುತ್ತದೆ. ಸಿಯರ್ಸ್ ಟವರ್ ನೋಡಲು ಪ್ರತಿದಿನ ಸಾವಿರಾರು ಪ್ರವಾಸಿಗರು ಬರುತ್ತಾರೆ. ಅಲ್ಲಿಂದ ನಾವು ನಿಲ್ದಾಣಕ್ಕೆ ಹೋಗಿ ವಿಮಾನ ಹತ್ತಿದೆವು. ಪಿಟ್ಸ್‌ಬರ್ಗ್ ಮಾರ್ಗವಾಗಿ ಎಂಟು ಗಂಟೆ ಪ್ರಯಾಣಿಸಿ ಸ್ಯಾನ್‌ಫ್ರಾನ್ಸಿಸ್ಕೊ ತಲುಪಿದೆವು.

ಅಲ್ಲಿ ನಮ್ಮನ್ನು ಸ್ವಾಗತಿಸಲು ನನ್ನ ಷಡ್ಡಕ ಮೆಕ್ಸನ್ ಕಾಮತರ ಅಳಿಯ ವಿದ್ಯಾಳ ಗಂಡ ವಿಶ್ವನಾಥ ನಾಯಕ್(ಕಿರಣ್) ಬಂದಿದ್ದರು. ಅವರೊಂದಿಗೆ ಅವರ ತಂದೆಯವರೂ ಇದ್ದರು. ವಿಮಾನ ನಿಲ್ದಾಣದಿಂದ ಕಿರಣರ ಮನೆಗೆ ಹೋಗುವ ದಾರಿಯಲ್ಲಿ ಸಿಲಿಕಾನ್ ವ್ಯಾಲಿ ಕಾಣಲು ಸಿಗುತ್ತದೆ. ಸಿಲಿಕಾನ್ ವ್ಯಾಲಿ ಜಪಾನಿ ಕಂಪೆನಿಯವರದು. ಅಲ್ಲಿ ಅನೇಕ ಮಂದಿ ಕೊಂಕಣಿ ಹಾಗೂ ಭಾರತೀಯ ಇಂಜಿನಿಯರುಗಳು ಕೆಲಸ ಮಾಡುತ್ತಿದ್ದಾರೆ. ನಾವು ವಿದ್ಯಾಳ ಮನೆ ತಲುಪಿದ ಬಳಿಕ ಊಟ ಮುಗಿಸಿ ವಿಶ್ರಾಂತಿ ಪಡೆದೆವು.

ಸ್ಯಾನ್‌ಫ್ರಾನ್ಸಿಸ್ಕೊ, ಕ್ಯಾಲಿಫೋರ್ನಿಯಾ ರಾಜ್ಯದ ಪ್ರಮುಖ ನಗರ. (ಇದೇ ನಗರದಲ್ಲಿ ನಾಕಾದ ೫ನೇ ಸಮ್ಮೇಳನ ೨೦೦೪ರಲ್ಲಿ ನಡೆದಿತ್ತು. ಆ ಸಮ್ಮೇಳನದಲ್ಲಿ ನನ್ನೊಂದಿಗೆ ಕುಡ್ವಿ ಜಗದೀಶ ಶೆಣೈ ಮತ್ತು ರಘುನಾಥ ಶೇಟ್ ಕೂಡ ಭಾಗವಹಿಸಿದ್ದರು.) ಕ್ಯಾಲಿಫೋರ್ನಿಯಾದಲ್ಲಿ ಬಾಬುರಾವ್ ಎಂಬ ದೊಡ್ಡ ದಾನಿ ಹಾಗೂ ಕೈಗಾರಿಕೋದ್ಯಮಿ ಒಬ್ಬರು ಇದ್ದಾರೆ. ನಾವು ಅಲ್ಲಿಗೆ ಹೋದಾಗ ಅವರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದರು. ಹೀಗಾಗಿ ಅವರನ್ನು ಭೇಟಿಯಾಗುವುದು ನಮಗೆ ಸಾಧ್ಯವಾಗಲಿಲ್ಲ. (೨೦೦೪ನೇ ಇಸವಿಯಲ್ಲಿ ಅವರು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣಕ್ಕಾಗಿ ಒಂದು ಸಾವಿರ ಡಾಲರ್ ದಾನ ನೀಡಿದ್ದಾರೆ.)

ಮರುದಿನ ಜುಲೈ ೧೫ರಂದು, ಕಿರಣ್ ಮತ್ತು ವಿದ್ಯಾ ತಮ್ಮ ಕಚೇರಿ ಕೆಲಸಕ್ಕೆ ಹೋಗಿದ್ದರಿಂದ, ನಾವು ಮನೆಯಲ್ಲಿಯೇ ಉಳಿದು ಟಿವಿಯಲ್ಲಿ ಚಲನಚಿತ್ರಗಳನ್ನು ವೀಕ್ಷಿಸಿದೆವು. ಸಂಜೆ ಕಿರಣ್ ಮನೆಗೆ ಬಂದ ಬಳಿಕ ನಮ್ಮನ್ನು ಅವರ ಕಾರಿನಲ್ಲಿ ಸುತ್ತಾಡಿಸಲು ಕರೆದುಕೊಂಡು ಹೋದರು. ನಾವು ಗೋಲ್ಡನ್ ಗೇಟ್ ಸೇತುವೆ, ಚೈನಾ ಟೌನ್, ಬೇ ಏರಿಯಾ ನೋಡಿದೆವು. ಇಲ್ಲಿಯ ವಿಶೇಷವೇನೆಂದರೆ, ಸಮುದ್ರದ ನೀರು ಮಧ್ಯಾಹ್ನದವರೆಗೆ ಆವಿಯಾಗಿ ಮೇಲೇರಿ ಹೋಗಿ, ಸಂಜೆ ಹೊತ್ತಿಗೆ ನಗರದ ಮೇಲೆ ಮೋಡ ಕಟ್ಟಿ ಇಳಿದು ಬರುತ್ತದೆ. ಹೀಗಾಗಿ ಸಂಜೆಯ ಬಳಿಕ ನಗರದಲ್ಲಿ ವಾತಾನುಕೂಲ ವಾತಾವರಣವಿರುತ್ತದೆ. ಇದರಿಂದ ಇಲ್ಲಿಯ ಜನರಿಗೆ ಏರ್‌ಕಂಡಿಷನರ್ ಅಗತ್ಯ ಬೀಳುವುದಿಲ್ಲ.

ಮರುದಿನ ಜುಲೈ ೧೬ರಂದು ಕಿರಣ್ ಮತ್ತು ವಿದ್ಯಾ ನಮ್ಮನ್ನು ಪರಿಚಯಿಸಲು ಸ್ಯಾನ್‌ಫ್ರಾನ್ಸಿಸ್ಕೊ ಮತ್ತು ಕ್ಯಾಲಿಫೋರ್ನಿಯಾದ ಕೊಂಕಣಿ ಜನರನ್ನು ತಮ್ಮ ಮನೆಗೆ ಸಂಜೆ ಹೊತ್ತು ಕರೆದಿದ್ದರು. ಅಲ್ಲಿ ಸೇರಿದ ಜನರಿಗೆ ನಾವು

ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸಿದುದರ ಕುರಿತು ಮತ್ತು ಅದರ ಪರಿಣಾಮ ಏನು ಎಂಬ ವಿಚಾರವಾಗಿ ತುಂಬಾ ಮಾಹಿತಿ ನೀಡಿ, ಅವರಲ್ಲಿ ನಮ್ಮ ಕಾರ್ಯದ ಕುರಿತು ಅಭಿಮಾನ ಮತ್ತು ಉತ್ಸಾಹ ಮೂಡುವಂತೆ ಮಾಡಿದೆವು.

ಜುಲೈ ೧೭ ರಂದು ವಿದ್ಯಾಳು ನಿಗದಿ ಪಡಿಸಿದ ಟ್ಯಾಕ್ಸಿಯಲ್ಲಿ ನಾವು ಸುತ್ತಾಡಲು ಹೋದೆವು. ಅಲ್ಲಿಯ ಟ್ಯಾಕ್ಸಿ ಚಾಲಕರು ನಮ್ಮ ದೇಶದ ದೊಡ್ಡ ಕಂಪೆನಿಗಳ ಉನ್ನತ ಅಧಿಕಾರಿಗಳ ಹಾಗೆ ಕಾಣುತ್ತಾರೆ. ಅವರು ನೀಟಾಗಿ ಸೂಟು ಧರಿಸಿ ಡ್ಯೂಟಿಗೆ ಹಾಜರಾಗುತ್ತಾರೆ. ಅವರ ಮಾತು ತುಂಬಾ ನಯ. ದಾರಿಯಲ್ಲಿ ನಾವು ಸಾಂತಾಕ್ರೂಜ್ ನೋಡಿದೆವು. ಅದು ಸಮುದ್ರತೀರದಲ್ಲಿರುವ ಪ್ರದೇಶ. ಆಮೇಲೆ ಮೊಂಟೆಸ್ಸರಿಯಲ್ಲಿ ಬಹು ಸುಂದರವಾದ ಮತ್ಸ್ಯಾಗಾರವನ್ನು ನೋಡಿದೆವು. ಅಲ್ಲಿ ಸಮುದ್ರವಾಸಿ ಮೀನುಗಳ ಚಲನವಲನಗಳನ್ನು ನಾವು ಕಾಣುವುದು ಸಾಧ್ಯ. ಅಲ್ಲಿ ದೊಡ್ಡ ದೊಡ್ಡ ಗಾತ್ರದ ಮೀನುಗಳನ್ನು ಸಾಕಿದ್ದಾರೆ, ಮೀನುಗಳ ಕುರಿತಾದ ಸಂಶೋಧನಾ ಕೇಂದ್ರವೂ ಇದೆ. ಆ ಕುರಿತು ನಮಗೆ ಸಾಕ್ಷ್ಯಚಿತ್ರವನ್ನು ತೋರಿಸುತ್ತಾರೆ. ಮುಂದೆ ಸುಮಾರು ಹದಿನೇಳು ಮೈಲಿಗಳಷ್ಟು ಉದ್ದದ ರಸ್ತೆ ಸಮುದ್ರದ ಹತ್ತಿರದಿಂದಲೇ ಸಾಗುತ್ತದೆ. ಅದನ್ನು ಬೇ ಏರಿಯಾ ಎಂದು ಕರೆಯುತ್ತಾರೆ. ಅಲ್ಲಿ ವಿವಿಧ ದೇಶಗಳ ರಾಜರು, ಶೇಕ್‌ರವರು, ಕೈಗಾರಿಕೋದ್ಯಮಿಗಳು ಮತ್ತು ಬಿಲಿಯಾಧಿಪತಿಗಳು ಮನೆ ಕಟ್ಟಿ ನೆಲೆಸಿದ್ದಾರೆ. ಆ ಸಮುದ್ರತೀರದಲ್ಲಿ ಮಲಗಿಕೊಂಡಿರುವ ಸಮುದ್ರಸಿಂಹಗಳು ನೂರಾರು ಸಂಖ್ಯೆಯಲ್ಲಿ ಕಾಣಲು ಸಿಗುತ್ತವೆ. ಅವುಗಳು ದೊಡ್ಡದಾಗಿ ಬಾಯಿಬಿಟ್ಟು ಕೂಗಿದರೆ, ಆ ಸಿಂಹನಾದಕ್ಕೆ ನಮಗೆ ಮೈ ನಡುಕ ಬರುತ್ತದೆ. ಆದರೆ ಅವುಗಳ ಮೈ ಮೇಲೆ ತುಂಬಾ ಹಕ್ಕಿಗಳು ಅಡ್ಡಾಡುತ್ತಾ ಕೀಟಗಳನ್ನು ಭಕ್ಷಿಸುತ್ತಿರುತ್ತವೆ.

ಆ ದಿನ ಸಂಜೆ ನಮ್ಮನ್ನು ಅರುಣ ಕಾಮತ್ ಮತ್ತು ಸುಜಾತಾ ದಂಪತಿಗಳು ತಮ್ಮ ಮನೆಗೆ ಕರೆದುಕೊಂಡು ಹೋದರು. ಸುಜಾತ ಕಾರ್ಕಳದ ರಾಮರಾಯ ಕಾಮತರ ಮಗಳು. ನಾವು ಅವರ ಮನೆಯಲ್ಲಿ ರಾತ್ರಿ ಊಟ ಮುಗಿಸಿದೆವು ಅವರು ನಮ್ಮನ್ನು ವಿಮಾನ ನಿಲ್ದಾಣಕ್ಕೆ ಮುಟ್ಟಿಸಿದರು. ಸುಮಾರು ೯.೧೫ ಗಂಟೆಗೆ ಲಾಸ್ ಏಂಜಲೀಸ್ ತಲುಪಿ ಅಲ್ಲಿ ಜಯದೇವ ರಾವ್ ಅವರ ಮನೆಯಲ್ಲಿ ತಂಗಿದೆವು.

ಜುಲೈ ೧೮ರಂದು ಲಾಸ್ ಏಂಜಲೀಸ್‌ನ ಜಗದ್ವಿಖ್ಯಾತ ಯೂನಿವರ್ಸಲ್ ಸ್ಟುಡಿಯೋಗೆ ಭೇಟಿ ನೀಡಿದೆವು. ಅಲ್ಲಿ ತುಂಬಾ ಹಳೆಯ ಚಲನಚಿತ್ರಗಳನ್ನು ವೀಕ್ಷಿಸಿದೆವು. ಪುರಾತನ ಕಾಲದ ಸಿನೆಮಾ ಸೆಟ್ಟಿಂಗ್ಸ್ ನೋಡಿದೆವು. ನಮ್ಮನ್ನು ಟ್ರಾಮ್ ಬಸ್ಸಲ್ಲಿ ಕುಳ್ಳಿರಿಸಿ ಬೇರೆ ಬೇರೆ ಸೆಟ್ಟಿಂಗ್‌ಗಳನ್ನು ತೋರಿಸುತ್ತಾರೆ. ಸ್ಟುಡೀಯೋ ಪ್ರವೇಶಿಸಲು ಟಿಕೇಟ್ ಖರೀದಿಸಬೇಕಾಗುತ್ತದೆ. ಅಲ್ಲಿ ಕಿಂಗ್‌ಕಾಂಗ್, ಜ್ಯುರಾಸಿಕ್ ಪಾರ್ಕ್‌ನ ಡೈನೊಸೊರಸ್ ಇತ್ಯಾದಿ ದೈತ್ಯ ಪ್ರಾಣಿಗಳನ್ನು, ಫಿಲ್ಮ್ ಚಿತ್ರೀಕರಣದ ಜಾಗವನ್ನು ತೋರಿಸುತ್ತಾರೆ. ಅಲ್ಲಿ ಸಿನೆಮಾದಲ್ಲಿ ಕಾಣುವ ರೈಲು ಸೇತುವೆ, ವಿಮಾನ ಹಾರಾಟದ ಸೆಟ್ಟಿಂಗ್ಸ್ ಇವೆ. ಅವೆಲ್ಲವನ್ನೂ ನೋಡಿದಾಗ ಭಯವೆನಿಸುತ್ತದೆ. ನಾವು ವಾಟರ್ ವಾರ್, ಆನಿಮಲ್ ಶೋ, 'ದಿ ವೈಲ್ಡ್ ವೈಲ್ಡ್ ವೈಲ್ಡ್ ವೆಸ್ಟ್' ಸಿನೆಮಾ ಪ್ರದರ್ಶನಗಳನ್ನು ನೋಡಿದೆವು. ಪ್ರವೇಶ ದ್ವಾರದಲ್ಲಿ ಟಿಕೇಟ್ ಖರೀದಿಸಿದಾಗಲೇ, ಸ್ಟುಡಿಯೋ ಒಳಗೆ ಎಲ್ಲೆಲ್ಲಿ ಏನೇನು ಕಾಣಲು ಸಿಗುತ್ತದೆ, ಒಳಗೆ ಯಾವ್ಯಾವ ಚಿತ್ರಗಳನ್ನು ತೋರಿಸಲಾಗುತ್ತದೆ ಎಂಬ ಮಾಹಿತಿಯುಳ್ಳ ಬ್ರೋಷರನ್ನು (ಕರಪತ್ರವನ್ನು) ನೀಡಲಾಗುತ್ತದೆ.

ನಾವು ರಾತ್ರಿ ಜಯದೇವ ರಾವ್ ಅವರ ಮನೆಯಲ್ಲಿ ಊಟ ಮಾಡಿ ಜಯದೇವ(ಸಾಯಿನಾಥ) ಚಂದಾವರ ಅವರ ಮನೆಯಲ್ಲಿ ರಾತ್ರಿ ಕಳೆಯಲು ಹೋದೆವು. ಮರುದಿನ ಬೆಳಗ್ಗೆ ನಮ್ಮ ಉಪಹಾರ ಮುಗಿದ ಬಳಿಕ ಚಂದಾವರರ ಪತ್ನಿ ನಮ್ಮನ್ನು ಅವರ ಕಾರಿನಲ್ಲಿ ಸುತ್ತಾಡಲು ಕರೆದುಕೊಂಡು ಹೋದರು. ಅವರು ನಮಗೆ ಲಾಸ್ ಏಂಜಲಿಸ್‌ನ ಶ್ರೀ ಬಾಲಾಜಿ ದೇವಾಲಯ, ಮಾಲಿಯಿ ಪ್ರದೇಶ, ಸೂರ್ಯಾಸ್ತಮದ ದೃಶ್ಯ ಹಾಗೂ ಹಾಲಿವುಡ್ ಸ್ಟುಡಿಯೋ ತೋರಿಸಿದರು. ಯೂನಿವರ್ಸಲ್ ಸ್ಟುಡಿಯೋದ ಹಾಗೆ ಹಾಲಿವುಡ್ ಸ್ಟುಡಿಯೋ ವ್ಯಾಪ್ತಿ ತುಂಬಾ ವಿಸ್ತಾರವಾದುದು. ಅಲ್ಲಿ ಗ್ರೆಗರಿ ಪೆಕ್ ಅವರಂತಹ ಪ್ರಸಿದ್ಧ ನಟ ನಟಿಯರ ಹಳೆಯ ಚಿತ್ರಗಳು, ಸೆಟ್ಟಿಂಗ್ಸ್ ಕಾಣಲು ಸಿಗುತ್ತದೆ. ಇಲ್ಲಿಯ ಮತ್ತೊಂದು ವಿಶೇಷವೇನೆಂದರೆ, ಹಾಲಿವುಡ್ ನಗರದಲ್ಲಿ ವಾಕ್ ಆಫ್ ಫೇಮ್ ರಸ್ತೆ ಇರುವುದು. ಅಲ್ಲಿ ನಾವು ನಡೆದು ಹೋಗುವ ದಾರಿಯಲ್ಲಿ ನಮ್ಮ ಕಾಲ ಕೆಳಗಿನ ಇಟ್ಟಿಗೆಗಳ ಮೇಲೆ ಪ್ರಸಿದ್ಧ ಹಾಲಿವುಡ್ ನಟ ನಟಿಯರ ಹೆಸರುಗಳನ್ನು ಸಿಮೆಂಟಿನಲ್ಲಿ ಬರೆಯಲಾಗಿದೆ.

ಆಮೇಲೆ ನಾವು ಗ್ರಿಫಿತ್ ಫಾರ್ಮ್ ಮತ್ತು ಜಗತ್ತಿನಲ್ಲಿಯೇ ಜನಪ್ರಿಯವಾಗಿರುವ ಗ್ರಿಫಿತ್ ನಕ್ಷತ್ರಾಲಯವನ್ನು ಮತ್ತು ಗ್ರೀಕ್ ನಾಟಕ ಮಂದಿರವನ್ನು ನೋಡಿದೆವು.

ಇವೆಲ್ಲವನ್ನೂ ನೋಡಿ ಮನೆಗೆ ತಲುಪಿದಾಗ ರಾತ್ರಿಯಾಗಿತ್ತು. ಅಲ್ಲಿಂದ ಜಯದೇವರೊಂದಿಗೆ ನಾವು ಶ್ರೀ ಮೋಹನ್ ರಾವ್ ಅವರ ಮನೆಗೆ ಹೋದೆವು. ಅಲ್ಲಿ ರಾವ್ ಅವರ ಪತ್ನಿ ಸುಮನಾ ರಾವ್ ನಮಗೆ ಕಾಫಿ, ತಿಂಡಿ ನೀಡಿದರು. ಅದರಿಂದ ಊಟ ಮಾಡಿದ್ದಕ್ಕಿಂತ ಜಾಸ್ತಿ ನಮ್ಮ ಹೊಟ್ಟೆ ತುಂಬಿತು. ಅವರ ಮನೆಯಲ್ಲಿ ಸೇರಿದ್ದ ಸುಮಾರು ೧೦-೧೨ ಕೊಂಕಣಿ ಜನರ ಮುಂದೆ ನಾವು ಬಂದ ಉದ್ದೇಶ, ನಮ್ಮ ಸಾಧನೆ ಹಾಗೂ ಭವಿಷ್ಯದ ವಿಶ್ವ ಕೊಂಕಣಿ ಕೇಂದ್ರ ಯೋಜನೆ ಮತ್ತು ಅದರ ದರ್ಶನದ ಕುರಿತು ವಿವರವಾಗಿ ತಿಳಿಸಿ ಅವರ ಬೆಂಬಲ ಕೋರಿದೆವು.

ಲಾಸ್ ವೇಗಸ್‌ನಿಂದ ನನ್ನ ತಮ್ಮ ಚಿ. ಗಣಪತಿಯು ಡಾ. ಕಾಸರಗೋಡು ರಾಮದಾಸ್ ಕಾಮತ್ ಅವರನ್ನು ಕರೆದುಕೊಂಡು ಅಲ್ಲಿಗೆ ಬಂದಿದ್ದನು. ಹೀಗಾಗಿ ನಾವು ಅವರೊಂದಿಗೆ ಲಾಸ್ ವೇಗಾಸ್‌ಗೆ ಪ್ರಯಾಣ ಮಾಡಿದೆವು. ದಾರಿಯಲ್ಲಿ ನಮಗೆ ಡಾ. ರಾಮದಾಸ್ ಕಾಮತ್ ಅವರ ಮನೆಯಲ್ಲಿ ಫಲಹಾರವಾಯಿತು. ಅಲ್ಲಿ ತುಸು ಹೊತ್ತು ವಿಶ್ರಾಂತಿ ಪಡೆದು ನಾವು ಪ್ರಯಾಣ ಮುಂದುವರಿಸಿದೆವು.

ಜುಲೈ ೨೧ರಂದು ನನ್ನ ತಮ್ಮ ಚಿ. ಗಣಪತಿ ಸ್ವತಃ ಕಾರು ನಡೆಸಿಕೊಂಡು ನಮ್ಮನ್ನು ಲಾಸ್ ವೇಗಾಸ್‌ಗೆ ಕರೆದುಕೊಂಡು ಹೋದನು. ನಗರ ತಲುಪಲು ಇನ್ನೂ ಇಪ್ಪತ್ತೈದು ಮೈಲಿ ಇರುವಾಗಲೇ ಅದರ ಪ್ರಕಾಶಮಾನವಾದ ಬೆಳಕು ಗೋಚರಿಸಿತು. ಲಾಸ್ ವೇಗಾಸ್ ಒಂದು ಮರುಭೂಮಿ. ಇತ್ತೀಚಿಗಿನ ವರ್ಷಗಳಲ್ಲಿ ಅದಕ್ಕೆ ಜಗತ್ತಿನ ಅತ್ಯಂತ ದೊಡ್ಡ "ಜುಗಾರಿ ಕಟ್ಟೆ"(ಕ್ಯಾಸಿನೊ) ಎಂಬ ಖ್ಯಾತಿ ಬಂದಿದೆ. ಅಮೇರಿಕೆಯ ಒಂದು ವಿಶೇಷವೇನೆಂದರೆ, ಅಲ್ಲಿ ಜಗತ್ತಿನಲ್ಲಿಯೇ ಅತೀ ದೊಡ್ಡದಾದ, ಅತೀ ಎತ್ತರದ, ಅತೀ ಸುಂದರವಾದ, ಅತೀ ವಿಸ್ತಾರದ, ಅತೀ ವೈಭವಪೂರಿತ ಹೀಗೆ ವಿಶೇಷಣಗಳನ್ನು ಪಡೆದ ವಿಚಾರಗಳನ್ನು ಹೊಂದಿರುವುದು. ಸುಮಾರು ೨೦೦ ವರ್ಷಗಳ ಹಿಂದೆ ಅಮೇರಿಕೆಗೆ ಬಂದ ಬ್ರಿಟಿಷರು ಮತ್ತು ಯುರೋಪಿಯನರು ಅವರ ಕಾರ್ಯಕ್ಷಮತೆ, ಶಿಸ್ತು, ಶ್ರಮ, ಧ್ಯೇಯ, ನಿಷ್ಠೆ, ಕಷ್ಟ ಸಹಿಷ್ಣುತೆ ಇತ್ಯಾದಿ ಗುಣವನ್ನು ಅಳವಡಿಸಿಕೊಂಡದ್ದರಿಂದ, ಇವತ್ತಿನ ದಿನ ಜಗತ್ತಿನಲ್ಲಿಯೇ ಅತಿ ಶ್ರೀಮಂತ ದೇಶವಾಗಿ ಅದು ಜಗತ್ತಿನ ಶಿಖರದ ತುದಿಯನ್ನು ತಲುಪಿದೆ. ರಾಜಕೀಯವಾಗಿ ನಾವು ಅಮೇರಿಕೆಯ ಧ್ಯೇಯ ಧೋರಣೆಗಳನ್ನು ಮಾನ್ಯ ಮಾಡದೆ ಇರಬಹುದು.

ಲಾಸ್ ವೇಗಾಸ್, ಅಮೇರಿಕೆಯ ಮಾತ್ರವಲ್ಲ ಜಗತ್ತಿನಲ್ಲಿಯೇ ಅತ್ಯಂತ ಪ್ರಖ್ಯಾತ ಹಾಗೂ ದೊಡ್ಡ ಜುಗಾರಿ ಕಟ್ಟೆ (ಕ್ಯಾಸಿನೊ)ಗಳಿರುವ ನಗರ. ಅಲ್ಲಿ ೪೦೦೦-೫೦೦೦ ಕೋಣೆಗಳಿರುವ ಅನೇಕ ಹೊಟೇಲುಗಳು ಇವೆ. ಸಾಮಾನ್ಯವಾಗಿ ಅಲ್ಲಿಗೆ ಬರುವವರು ಜೂಜಾಡುವವರು ಮತ್ತು ಈ ಜೂಜಾಡುವವರನ್ನು ನೋಡಲು ಬರುವ ನಮ್ಮಂತಹ ಸಾಮಾನ್ಯ ಜನರು. ನಾವೂ ಕಡಿಮೆ ಮೊತ್ತದ ಹಣವನ್ನು(೫, ೧೦ ಡಾಲರ್) ಹಾಕಿ ಜೂಜಾಟದಲ್ಲಿ ನಮ್ಮ ಅದೃಷ್ಟವನ್ನು ಪರೀಕ್ಷಿಸಬಹುದು. ಆದರೆ ಶುಕ್ರವಾರ ರಾತ್ರಿಯಿಂದ ಭಾನುವಾರದವರೆಗೆ ಕ್ಯಾಸಿನೋದಲ್ಲಿ ಅದೃಷ್ಟ ಪರೀಕ್ಷೆ ಮಾಡುವುದಕ್ಕೆ, ಆನಂದ ಅನುಭವಿಸುವುದಕ್ಕಾಗಿ ಲಕ್ಷಗಟ್ಟಳೆ ಶ್ರೀಮಂತ ಜನರು ದೂರ ದೂರದಿಂದ ಕಾರಿನಲ್ಲಿ ಬರುತ್ತಾರೆ. ಗಲ್ಫ್ ರಾಷ್ಟ್ರಗಳ ಶೇಕ್‌ರು ದುಬಾರಿ ಅರಬ್ ವಿಮಾನದಲ್ಲಿ ಬಂದು ಅಲ್ಲಿಯ ಹೊಟೇಲಿನಲ್ಲಿ ಉಳಿದು ಆಮೋದ ಪ್ರಮೋದಗಳನ್ನು ಮತ್ತು ಹಣದಾಟದ ಸಂತೋಷವನ್ನು ಅನುಭವಿಸಿ ಸ್ವದೇಶಗಳಿಗೆ ಮರಳುತ್ತಾರೆ.

ಅಲ್ಲಿಯ ಹೊಟೇಲುಗಳಲ್ಲಿ ಕೆಲವು ಆಟಗಳನ್ನು, ಸಿನೇಮಾ ಮತ್ತು ಲೇಸರ್ ದೃಶ್ಯಾವಳಿಗಳನ್ನು ಹಣ ನೀಡದೆ ವೀಕ್ಷಿಸಬಹುದು. ಈ ಪ್ರದರ್ಶನದ ಸಮಯವನ್ನು ಮೊದಲೇ ತಿಳಿಸುತ್ತಾರೆ. ಹೀಗಾಗಿ ನಾವು ಆ ಸಮಯಕ್ಕೆ ಸರಿಯಾಗಿ ಆಯಾ ಹೊಟೇಲುಗಳ ಒಳಗೆ ಅಥವಾ ಹೊಟೇಲುಗಳ ಮುಂದೆ ಹಾಜರಿದ್ದರೆ ಸಿನೆಮಾ, ನಾಟಕ, ಆಟ ಇತ್ಯಾದಿಗಳನ್ನು ಹಣವಿಲ್ಲದೆ ನೋಡಬಹುದು.

ಕ್ಯಾಸಿನೊ ನೋಡಿದ ಬಳಿಕ ನಾವು ಟ್ರೆಶರ್ ಐಲ್ಯಾಂಡ್ ಹೊಟೇಲಿಗೆ ಹೋದೆವು. ಆ ಹೊಟೇಲಿನ ಮುಂಭಾಗದಲ್ಲಿ ಜಲಪಾತವನ್ನು ನಿರ್ಮಿಸಲಾಗಿದೆ. ನಿಗದಿತ ಸಮಯದಲ್ಲಿ ಆ ಜಲಪಾತದ ಒಳಗಿನಿಂದ ದೊಡ್ಡ ಸದ್ದಿನೊಂದಿಗೆ ಭೂಕಂಪನವಾಗಿ, ಬೆಂಕಿ ಸಹಿತ ಲಾವಾರಸ ಕುದಿದು ಹೊರಹೊಮ್ಮುವ ದೃಶ್ಯ ನಮ್ಮ ಮುಂದೆ ಕಂಡುಬರುತ್ತದೆ. ಆಗ ಆ ಬೆಂಕಿಯ ಕಿಡಿ ಅಥವಾ ಲಾವಾರಸದ ತೊಟ್ಟು ನಮ್ಮ ಮೈಮೇಲೆ ಬೀಳಬಹುದೆಂಬ ಆತಂಕ ನಮ್ಮಲ್ಲಿ ಹುಟ್ಟಿ ಭಯದಿಂದ ಎದೆ ಹೊಡೆದುಕೊಳ್ಳುತ್ತದೆ. ಇದೇ ರೀತಿ ಸ್ವಾಭಾವಿಕವೆಂಬಂತೆ ಪ್ರಾಕೃತಿಕ ದೃಶ್ಯಗಳನ್ನು ಕಾಣಿಸುವ ಮತ್ತೊಂದು ಹೊಟೇಲಿನಲ್ಲಿ ಪಶು ಪಕ್ಷಿ ಸಂಗ್ರಹಾಲಯವನ್ನು ನೋಡಿದೆವು. ಇಲ್ಲಿ ಅನೇಕ ವಿಧದ ಬಣ್ಣಬಣ್ಣದ ಪಕ್ಷಿಗಳನ್ನು, ಸಿಂಹ, ಹುಲಿ, ಮೊಲ ಇತ್ಯಾದಿ ಪ್ರಾಣಿಗಳನ್ನು ಸಾಕಿ ಇಡಲಾಗಿದೆ.

ಇದಕ್ಕಿಂತಲೂ ಆಕರ್ಷಕವೆನಿಸುವ ಮತ್ತೊಂದು ದೊಡ್ಡ ಹೊಟೇಲ್ ಇದೆ. ಈ ಹೊಟೇಲಿನ ಮಧ್ಯದಿಂದಲೇ ನೇರವಾದ ರಸ್ತೆಯೊಂದು ಹಾದು ಹೋಗುತ್ತದೆ. ಆ ರಸ್ತೆಯ ಮೇಲೆ ಪ್ರಕಾಶವಾನವಾದ ಕೃತಕ ಆಕಾಶವನ್ನು ನಿರ್ಮಿಸಲಾಗಿದೆ. ಲೇಸರ್ ಕಿರಣಗಳನ್ನು ಬಳಸಿ ಈ ಆಕಾಶದ ಮೇಲೆ ಚಂದ್ರ ಮತ್ತು ನಕ್ಷತ್ರಮಂಡಳವನ್ನು ಕೃತಕವಾಗಿ ನಿರ್ಮಿಸಲಾಗಿದೆ. ಆ ರಸ್ತೆಯಲ್ಲಿ ಯಾರು ಬೇಕಾದರೂ ಆಚೆ ಈಚೆ ನಡೆದು ಹೋಗಬಹುದು. ಆ ರಸ್ತೆಯ ಮೇಲೆ ವಾಹನಗಳು ಕೂಡ ಓಡಾಡುತ್ತವೆ. ಅದು ಒಂದು ಬೇರೆಯೇ ವಿಶ್ವವಾಗಿದೆ. ಈ ಬೀದಿಯಲ್ಲಿ ಕೃತಕ ನಿರ್ಮಿತಿಗಳ ವೀಕ್ಷಣೆಗಾಗಿಯೇ ಸುಮಾರು ೨೦–೨೫ ಸಾವಿರ ಜನರು ಸೇರುತ್ತಾರೆ ಮತ್ತು ಮಕ್ಕಳಿಂದ ಹಿಡಿದು ಗಂಡಸರು, ಮಹಿಳೆಯರು ಎಲ್ಲರೂ ಈ ಹೊಟೇಲಿನ ಕ್ಯಾಸಿನೋದಲ್ಲಿ ಹಣ ಹೂಡಿ ಆಟವಾಡುತ್ತಾರೆ. ಮತ್ತೊಂದು ಹೊಟೇಲಿನಲ್ಲಿ ಸರ್ಕಸ್ ಪ್ರದರ್ಶನವಿತ್ತು. ಅದು ವೇಳಾಪಟ್ಟಿಗೆ ಅನುಗುಣವಾಗಿ ನಡೆಯುತ್ತಿತ್ತು. ಹೀಗೆ ಪ್ರತಿಯೊಂದು ಕ್ಯಾಸಿನೋದಲ್ಲಿ ವಿವಿಧ ರೀತಿಯ ಆಕರ್ಷಣೀಯ ಹಾಗೂ ಚಮತ್ಕಾರಿಕ ಆಟಗಳನ್ನು ಕಾಣಬಹುದಾಗಿದೆ.

ಕೆಲವು ಹೊಟೇಲುಗಳಲ್ಲಿ ಕ್ಯಾಸಿನೋದಲ್ಲಿ ಜೂಜು ಆಡುವವರಿಗೆ ಮಾತ್ರವಲ್ಲ, ಪ್ರವಾಸಿಗರಿಗೂ ಉಪಹಾರ ಗೃಹಗಳು, ಕಾಫಿ ಬಾರ್, ಶಾಪಿಂಗ್ ಕಾಂಪ್ಲೆಕ್ಸ್ ಇತ್ಯಾದಿ ಇವೆ. ಇಂತಹ ಹೊಟೇಲುಗಳು ನೂರಾರು ಸಂಖ್ಯೆಯಲ್ಲಿ ಇವೆ. ಅಮೇರಿಕೆಯ ಯಾವುದೇ ಹೊಟೇಲಿನಲ್ಲಿ ಸಸ್ಯಾಹಾರ, ಮಾಂಸಾಹಾರ ಎಂಬ ಭೇದವಿಲ್ಲ. ಬಾರ್ ಕೂಡ ತೆರೆದಿರುತ್ತದೆ. ಗಂಡಸರು, ಹೆಂಗಸರು ಎಂಬ ಭೇದವೂ ಇಲ್ಲ. ಹೀಗಾಗಿ ಜನರು ಆಮೋದ ಪ್ರಮೋದದಲ್ಲಿ ಸಮಯ ಕಳೆಯುವುದನ್ನು ನಾವು ಕಾಣುತ್ತೇವೆ.

ಡಾ. ರಾಮದಾಸ್ ಕಾಮತರ ತಮ್ಮ ಡಾ. ಸುಂದರೇಶ ಕಾಮತರು ರಾತ್ರಿ ನಮ್ಮನ್ನು ಊಟಕ್ಕೆ ಕರೆದಿದ್ದರು. ಅಲ್ಲಿ ಕೆಲವು ಕೊಂಕಣಿ ಅತಿಥಿಗಳೂ ಬಂದಿದ್ದರು. ಅವರನ್ನು ಉದ್ದೇಶಿಸಿ ನಾವು ಭಾಷಣ ಮಾಡಿದೆವು. ಅದರಿಂದ ಅವರಿಗೆ ಕೊಂಕಣಿ ಭಾಷೆ, ಸಂಸ್ಕೃತಿ, ಜಾನಪದ ಇತ್ಯಾದಿ ವಿಚಾರದಲ್ಲಿ ಆಸಕ್ತಿ ಹುಟ್ಟಿರುವುದು ಕಂಡು ಬಂತು.

ನಾವು ಜುಲೈ ೨೨, ಸೋಮವಾರ ರಾತ್ರಿ ವಿಮಾನದಲ್ಲಿ ಒರ್ಲಾಂಡೊಗೆ ಹೊರಟೆವು. ಒರ್ಲಾಂಡೊ ಅಮೇರಿಕೆಯ ಪೂರ್ವ ಕರಾವಳಿಯ ಆಚೆ ಬದಿ ಇದೆ. ನಾವು ಮರುದಿನ ಅಂದರೆ ಮಂಗಳವಾರ ಬೆಳಗ್ಗೆ ಹತ್ತು ಗಂಟೆಗೆ ಒರ್ಲಾಂಡೊ ವಿಮಾನ ನಿಲ್ದಾಣಕ್ಕೆ ತಲುಪಿದೆವು. ನಮ್ಮನ್ನು ಸ್ವಾಗತಿಸಲು ಶ್ರೀ ಬಿ.ಹೆಚ್.ಗೋಪಾಲಕೃಷ್ಣ ಪೈ ಬಂದಿದ್ದರು. ಅವರು ನನಗೆ ಸಣ್ಣಂದಿನಿಂದ ಪರಿಚಯ(ಅವರ ಹಿರಿಯರು ಬಂಟವಾಳದವರು. ಅವರ ತಂದೆ ಶ್ರೀ ಬಿ.ಹೆಚ್. ನಾಗೇಶ ಪೈ ನನ್ನ ತಂದೆಯವರ ಖಾಸಾ ಸ್ನೇಹಿತರು). ನಾವು ಅವರ ಮನೆ ತಲುಪಿದಾಗ ಅವರ ಪತ್ನಿ ಇರಲಿಲ್ಲ. ಆಕೆ ಎ.ಟಿ. ಆಂಡ್ ಟಿ. ಯಲ್ಲಿ ಉನ್ನತ ಹುದ್ದೆಯಲ್ಲಿದ್ದು, ಯಾವುದೋ ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿದ್ದವರು ಮರುದಿನ ಹಿಂತಿರುಗಿ ಬಂದರು. ಈ ದಂಪತಿಗಳ ಆತಿಥ್ಯದ ಕುರಿತು ಇಡೀ ಅಮೇರಿಕೆಯಲ್ಲಿ ಗೌರವದ ಭಾವನೆ ಇದೆ. ಅವರ ಮನೆ ತುಂಬಾ ದೊಡ್ಡದು. ಮನೆ ಮುಂದೆ ವಿಸ್ತಾರವಾದ ಒಂದು ಸರೋವರ. ಅದರಲ್ಲಿ ಯಾಂತ್ರಿಕ ದೋಣಿಯಲ್ಲಿ ಕುಳಿತು ವಿಹರಿಸಬಹುದು. ನಾವು ಅವರ ಮನೆಯಲ್ಲಿ ಮೂರು ದಿನ ಇದ್ದೆವು. ಪ್ರತಿದಿನ ಡಾ. ಪೈಯವರು ನಮ್ಮನ್ನು ಬೆಳಗ್ಗೆ ಕಾರಿನಲ್ಲಿ ಡಿಸ್ನಿ ಲ್ಯಾಂಡ್‌ಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದರು. ಸಂಜೆ ನಾವು ಕರೆ ಮಾಡಿದ ಮೇಲೆ ಬಂದು ನಮ್ಮನ್ನು ಅವರ ಮನೆಗೆ ಕೊಂಡೊಯ್ಯುತ್ತಿದ್ದರು.

ಡಿಸ್ನಿ ಲ್ಯಾಂಡ್‌ನಲ್ಲಿ ೧೭೫ ಡಾಲರ್ ಮತ್ತು ತೆರಿಗೆ ನೀಡಿದರೆ ವೀಕ್ಷಣೆಗೆ ಪಾಸ್ ನೀಡುತ್ತಾರೆ. ನಾವು ನಾಲ್ಕು ದಿನಗಳಿಗೆ ಸೀಸನ್ ಪಾಸ್ ಖರೀದಿಸಿದ್ದೆವು. ಪ್ರತಿದಿನ ನಾವು ಬೆಳಗ್ಗೆ ೯.೩೦ ರಿಂದ ರಾತ್ರಿ ೧೦.೩೦ರವರೆಗೆ ಒಳಗೆಲ್ಲಾ ತಿರುಗಾಡಿ ವಿವಿಧ ದೃಶ್ಯಗಳನ್ನು ನೋಡಿ ಹಿಂತಿರುಗುತ್ತಿದ್ದೆವು. ಸುಮಾರು ಹತ್ತು ದಿನಗಳ ಕಾಲ ನೋಡಿದರೂ ಸಾಲದಷ್ಟು ಪ್ರಮಾಣದಲ್ಲಿ ವೈವಿಧ್ಯಮಯವಾಗಿ ಡಿಸ್ನಿ ಲ್ಯಾಂಡ್ ಇದೆ. ಡಿಸ್ನಿ ಲ್ಯಾಂಡ್ ಓರ್ವ ಮಂತ್ರದ್ರಷ್ಟಾರರ ಚಿಂತನೆಯ ಫಲವಾಗಿದೆ. ಅದನ್ನು ಅವರು ರೂಪಿಸಿದ ಕುರಿತು ಒಂದು ಕತೆ ಅಥವಾ ಕಾದಂಬರಿಯನ್ನೇ ಬರೆಯಬಹುದು.

ಮೊದಲು ನಾವು ಎಪಿಸಿಒಟಿ ವಿಭಾಗವನ್ನು ನೋಡಿದೆವು. ಅದು ವಿಶ್ವವಿಖ್ಯಾತವಾಗಿದೆ. ಅಲ್ಲಿ ಒ.ಆರ್.ಐ ಜೋನ್ಸ್ ಮತ್ತು ಎ.ಟಿ ಆಂಡ್ ಟಿ ಯವರ 'ಸ್ಪೇಸ್‌ಶಿಪ್ ಅರ್ಥ್ ಜೋನ್ಸ್' ನೋಡಿದೆವು. ಇದರಲ್ಲಿ ಭೂಮಿಯ ಹೊರಗೆ ಇರುವ ಮಂಡಲದಲ್ಲಿ ಪ್ರವಾಸ ಮಾಡಿದ ಅನುಭವ ದೊರೆಯುತ್ತದೆ. ಮೇಲಿನಿಂದ ಭೂಮಿಯನ್ನು ನೋಡುವುದು ರೋಮಾಂಚನಕಾರಿ. ದಿ ಲುರಿಂಗ್ ಸಿಯರ್ಸ್, ನೆಸ್ಲೆ ಅವರ "ದಿ ಲ್ಯಾಂಡ್"ನಲ್ಲಿ ಭೂಮಿಯ ಮೇಲಿರುವ ವಿವಿಧ ಪ್ರದೇಶಗಳು,

ಪ್ರಾಣಿಗಳು ಇತ್ಯಾದಿಗಳನ್ನು ತೋರಿಸುತ್ತಾರೆ. ನಾವು ಕಲ್ಪನಾ ಲೋಕವೊಂದರಲ್ಲಿ ವಿಹರಿಸಿದೆವು ಎನ್ನಬಹುದು.

ಡಿಸ್ನಿ ಲ್ಯಾಂಡ್‌ನಲ್ಲಿ ಮೆಕ್ಸಿಕೊ, ನಾರ್ವೆ, ಚೀನಾ, ಫ್ರಾನ್ಸ್, ಜರ್ಮನಿ, ಇಟೆಲಿ, ಜಪಾನ್, ಮೊರೊಕ್ಕೊ, ಕೆನಡಾ ಮತ್ತು ಇತರ ರಾಷ್ಟ್ರಗಳ ಅಂಗಡಿಗಳು(ಸ್ಟಾಲ್) ಇವೆ. ಅವುಗಳಲ್ಲಿ ಆಯಾಯ ದೇಶಗಳ ಸಂಸ್ಕೃತಿಯ ಕುರಿತಾದ ಸಂಗೀತ, ನೃತ್ಯ, ನಾಟಕಗೃಹಗಳು, ಪುಸ್ತಕದಂಗಡಿಗಳು, ಆ ದೇಶಗಳ ಚಾರಿತ್ರಿಕ ಹಾಗೂ ಸಮಕಾಲೀನ ಚಕ್ರವರ್ತಿಗಳ, ರಾಜರುಗಳ ವರ್ಣಚಿತ್ರಗಳು, ಉಡುಪುಗಳು, ಪಿಂಗಾಣಿ ಪಾತ್ರೆಗಳು, ಇತ್ಯಾದಿಗಳ ಪ್ರದರ್ಶನ ಇರುತ್ತದೆ. ಅನೇಕ ಕಡೆಗಳಲ್ಲಿ ಚಲನಚಿತ್ರ ಪ್ರದರ್ಶನವಿದೆ. ಅದರ ವೇಳಾಪಟ್ಟಿ ಇರುತ್ತದೆ. ನಾವು ನಮಗೆ ಬೇಕಾದ ಚಿತ್ರವನ್ನು ಅದರ ನಿಗದಿತ ಸಮಯದಲ್ಲಿ ವೀಕ್ಷಿಸಬಹುದು. ಸೀಸನ್ ಪಾಸ್ ಇರುವುದರಿಂದ ಚಲನಚಿತ್ರ ಪ್ರದರ್ಶನಕ್ಕೆ ಪ್ರತ್ಯೇಕವಾಗಿ ಟಿಕೇಟ್ ಖರೀದಿಸಬೇಕಾಗಿಲ್ಲ. ಈ ಸ್ಟಾಲ್‌ಗಳ ಹೊರಗೆ ಮತ್ತು ಒಳಗೆ ಗಾಯಕರು ಆಯಾ ದೇಶದ ಹಾಡುಗಳನ್ನು ಹೇಳುತ್ತಾ, ನೃತ್ಯ ಮಾಡುತ್ತಾ ಇರುತ್ತಾರೆ. ಅಲ್ಲಿಗೆ ಬರುವ ವೀಕ್ಷಕರು ಅವರನ್ನು ನೋಡಲಿ, ಬಿಡಲಿ ಆ ಕುರಿತು ಸ್ವಲ್ಪವೂ ಚಿಂತೆ ಹಚ್ಚಿಕೊಳ್ಳದೇ ಅವರು ತಮ್ಮದೇ ಲೋಕದಲ್ಲಿ ವಿಹರಿಸಿದಂತೆ ಇರುತ್ತಾರೆ.

ಇಷ್ಟು ವಿಸ್ತಾರವಾದ ಪ್ರದೇಶದಲ್ಲಿ ಬೇರೆ ಬೇರೆ ದೇಶಗಳ ಪ್ರದರ್ಶನಕ್ಕೆ ನಿಗದಿತ ಜಾಗವಿದ್ದರೂ, ಅಲ್ಲಿ ನಮ್ಮ ದೇಶದ ಒಂದೇ ಒಂದು ಸ್ಟಾಲ್ ಇರದಿರುವುದು ನೋಡಿ ನನಗೆ ತುಂಬಾ ಅವಮಾನವೆನಿಸಿತು. ಈ ನ್ಯೂನತೆಯಿಂದ ನನಗೆ ದುಃಖವೂ ಉಂಟಾಯಿತು.

ಡಿಸ್ನಿ ಲ್ಯಾಂಡ್‌ನಲ್ಲಿ ಇಡೀ ದಿನ ತಿರುಗಾಡಿ ಕೊಂಡಿದ್ದರೂ, ಸಮಯ ಕಳೆದದ್ದೇ ತಿಳಿಯುವುದಿಲ್ಲ. ನಾವು ಒಳಗೆ ಸುತ್ತಾಡಿ ರಾತ್ರಿಯ ಹತ್ತು ಗಂಟೆಯಾದಾಗ ಜನರಲ್ ಇಲೆಕ್ಟ್ರಿಕಲ್ಸ್‌ನ ಲೇಸರ್ ಪ್ರದರ್ಶನ, ಮತ್ತು ಸುಡುಮದ್ದು ಪ್ರದರ್ಶನದ ವಿಭಾಗದ ಬಳಿ ಬಂದು ಮುಟ್ಟಿದೆವು. ನಾವು ಆ ಜಾಗ ತಲುಪಿದಾಗ ಕೆಲವೇ ಕೆಲವು ಮಂದಿ ಇದ್ದರಾದರೂ, ಲೇಸರ್ ಶೋ ಪ್ರಾರಂಭವಾಗುವಷ್ಟರಲ್ಲಿ ಸಾವಿರಾರು ವೀಕ್ಷಕರು ಅಲ್ಲಿ ಸೇರಿದರು. ಅದು ನಡೆಯುವುದು ಒಂದು ವಿಶಾಲವಾದ ಕೆರೆಯ ತೀರದಲ್ಲಿರುವ ವಿಸ್ತಾರವಾದ ಜಾಗದಲ್ಲಿ. ಆಗಸದ ಮೇಲೆ ಮೈಲಿಗಟ್ಟಳೆ ವಿಸ್ತಾರದಲ್ಲಿ ಲೇಸರ್ ಮೂಡಿಸುವ ವೈವಿಧ್ಯಮಯ ಚಿತ್ರ ನಮ್ಮ ಕಲ್ಪನೆಗೂ ಮೀರಿದ್ದಾಗಿರುತ್ತದೆ. ಲಕ್ಷಗಟ್ಟಳೆ ಡಾಲರ್ ಬೆಲೆಯ ಸುಡುಮದ್ದುಗಳನ್ನು ಸುಟ್ಟು ಹಾಕಲಾಗುತ್ತದೆ. ಈ ಪ್ರದರ್ಶನ ಮುಗಿದ ಬಳಿಕ ನಾವು ಗೋಪಾಲಕೃಷ್ಣ ಪೈಯವರ ಕಾರಿನಲ್ಲಿ ಅವರ ಮನೆಗೆ ಹಿಂತಿರುಗಿ ಊಟ ಮುಗಿಸಿ ಮಲಗಿದೆವು.

ಎರಡನೆಯ ದಿನ ಡಿಸ್ನಿ ಲ್ಯಾಂಡ್‌ನಲ್ಲಿ ಮ್ಯಾಜಿಕ್ ಕಿಂಗಡಮ್, ಆನಿಮೇಟೆಡ್ ಮೃಗ ಪಕ್ಷಿಗಳು, ಮಕ್ಕಳು ಸಂತೋಷದಿಂದ ಹಾಡುತ್ತಾ ಕುಣಿಯುವುದನ್ನು, ಹಾರಾಡುವುದನ್ನು ನೋಡಿದೆವು. ಟಾಮ್ ಸರ್ವೆ ಐಲ್ಯಾಂಡ್, ರೇಲ್‌ಬೋರ್ಡ್, ಪಿಶಾಚಿಗಳ ಲೋಕ, ಲೆಜೆಂಡ್ ಆಫ್ ದಿ ಲಿಂಕಿಂಗ್ ಇತ್ಯಾದಿ, ಚಿತ್ರಗಳಾದ ಸ್ನೋವೈಟ್ ಸಾಹಸಗಳು, ಕಾಸಲ್ ಪೋರಕೋರ್ಟ್ ಸ್ಟೇಜ್, ದಿ ಎಕ್ಸ್ಟ್ರಾ ಟೆರೆಸ್ಟ್ರಿಯಲ್, ಏಲಿಯನ್ ಎನ್‌ಕೌಂಟರ್, ಹಾಗೂ ಗ್ಯಾಲಕ್ಸಿ ಪ್ಯಾಲೆಸ್ ಥಿಯೇಟರ್ ಇತ್ಯಾದಿ ಅದ್ಭುತ ಮನರಂಜನೀಯ ಥಿಯೇಟರ್‌ಗಳನ್ನು, ಸ್ಟಾಲ್ಸ್‌ಗಳನ್ನು ನೋಡಿದೆವು. ತಮ್ಮ ಪ್ರವಾಸದಿಂದ ಹಿಂತಿರುಗಿದ ಶ್ರೀಮತಿ ಶಾಂತಿ ಪೈ ಅವರು ರುಚಿಕಟ್ಟಾಗಿ ಮಾಡಿ ಬಡಿಸಿದ ಅಡುಗೆಯನ್ನು ಖುಷಿಪಟ್ಟು ತಿಂದು ವಿಶ್ರಾಂತಿ ಪಡೆದೆವು.

ಮೂರನೆಯ ದಿನ, ಅಂದರೆ ಜುಲೈ ೨೬ರಂದು ನಾವು ಮತ್ತೆ ಡಿಸ್ನಿ ಲ್ಯಾಂಡ್‌ಗೆ ಹೋಗಿ ಎಂ.ಜಿ.ಎಂ. ಸ್ಟೂಡಿಯೋಗೆ ಭೇಟಿ ನೀಡಿದೆವು. ಅಲ್ಲಿ ಗೆಸ್ಟ್ ಇನ್‌ಫಾರ್ಮೇಶನ್ ಬೋರ್ಡ್ ನೋಡಿದೆವು. ದಿ ಮ್ಯಾಜಿಕ್ ಆಫ್ ದಿ ಡಿಸ್ನಿ ಅನಿಮೇಟರ್, ವಾಯೆಜ್ ಆಫ್ ದಿ ಲಿಟಲ್ ಮರಮೇಡ್, ಹಂಬಕ್ ಆಫ್ ನೊತ್ರಡೇಮ್, ಇಂಡಿಯಾನಾ ಜೋನ್ಸ್, ಮಾನಸ್ಟರ್, ಸೌಂಡ್ ಶೋ, ಸೂಪರ್ ಸ್ಟಾರ್ ಟಿಲೆವಿಶನ್, ದಿ ಗ್ರೇಟ್ ಮೂವಿ ರೈಡ್ ಇತ್ಯಾದಿ ನೋಡಿದೆವು. ಒಳಗೆ ಸುತ್ತಾಡಿಸಲು ನೂರಾರು ಬಸ್ಸುಗಳು ಇರುತ್ತವೆ. ಬಸ್ ನಿಲ್ದಾಣವೂ ಇದೆ. ನಾವು ಯಾವುದೇ ಬಸ್ಸಿನಲ್ಲಿ ಹತ್ತಿ, ಇಳಿದು ನಮಗೆ ನೋಡಬೇಕಾದ ಜಾಗಗಳಿಗೆ ಹೋಗಿ ನೋಡಿಬರಬಹುದು. ಹಣ ನೀಡಿ ಟಿಕೇಟ್ ಖರೀದಿಸಬೇಕಾಗಿಲ್ಲ. ಹಸಿವಾದರೆ ಹೊಟ್ಟೆ ತುಂಬಿಸಲು ಅಲ್ಲಲ್ಲಿ ಕ್ಯಾಂಟಿನ್, ಕೆಫೆಟೇರಿಯಾಗಳು ಇವೆ. ಸಸ್ಯಾಹಾರ(ಇಡ್ಲಿ, ಅಂಬಡೆ ಇತ್ಯಾದಿ), ಮಾಂಸಾಹಾರ, ಪಿಜ್ಜಾ, ಬರ್ಗರ್, ಕಟಲೇಟ್, ಬಿಸ್ಕತ್ತುಗಳು, ಬ್ರೆಡ್ ಇತ್ಯಾದಿ ದೊರೆಯುತ್ತದೆ. ಜ್ಯೂಸ್, ಕಾಫಿ, ಟೀ ಮತ್ತು ಕೊಕೋಕೋಲಾದಂತಹ ಲಘುಪಾನೀಯಗಳು ಸಿಗುತ್ತವೆ. ಅಲ್ಲಿಯೇ ತಿಂಡಿ ತಿಂದು ಕೈ ತೊಳೆದು ಹೊರಗೆ ಬರಬಹುದು. ನಾವು ಸಂಜೆ ಐದು ಗಂಟೆಯೊಳಗೆ ಪೈ ಯವರ ಕಾರಿನಲ್ಲಿ ಮನೆಗೆ ಹಿಂತಿರುಗಿ ಬಂದು ಸ್ನಾನ ಮಾಡಿ ತುಸು ವಿಶ್ರಾಂತಿ ಪಡೆದೆವು. ಅಂದು

ರಾತ್ರಿ ಒರ್ಲೆಂಡೊದ ಕೊಂಕಣಿ ಜನರು ಮನೆಗೆ ಬಂದಿದ್ದರು. ಅವರೊಂದಿಗೆ ರಾತ್ರಿಯೂಟ ಮುಗಿಸಿದ ಬಳಿಕ ನಾವು ಅಮೇರಿಕೆಗೆ ಬಂದ ಉದ್ದೇಶಗಳನ್ನು ತಿಳಿಸಿದೆವು. ಆಹ್ವಾನಿತರು ತುಂಬಾ ಉತ್ಸಾಹ ತೋರಿಸಿದರು. ನಮ್ಮ ಈ ಕಾರ್ಯಕ್ರಮ ರಾತ್ರಿ ಒಂದು ಗಂಟೆಗೆ ಮುಗಿಯಿತು.

ಜುಲೈ ೨೭ರಂದು ನಾವು ಪೈಯವರ ಮನೆಯಲ್ಲಿಯೇ ಉಳಿದೆವು. ಈ ದಂಪತಿಗಳ ಪೂರ್ವಾಶ್ರಮದ ಪ್ರೇಮದ ಕತೆಯನ್ನು ಕೇಳುತ್ತಾ ಸಂತೋಷದಿಂದ ಸಮಯ ಕಳೆದೆವು. ಶ್ರೀಮತಿ ಶಾಂತಿ ಪೈಯವರು ನಮಗೆ ಒಳ್ಳೆಯ ಅಡುಗೆ ಮಾಡಿ ಬಡಿಸಿದರು. ಅಂದು ಮಧ್ಯಾಹ್ನ ೩ ಗಂಟೆಗೆ ಡಾನ್ ಶೆಣೈ(ಉದಯ ಶೆಣೈ) ನಮ್ಮನ್ನು ವಿಮಾನ ನಿಲ್ದಾಣಕ್ಕೆ ತಲುಪಿಸಿದರು. ನಾವು ಸಂಜೆ ೫ ಗಂಟೆಗೆ ಅಮೆರಿಕಾ ರಾಷ್ಟ್ರಕೂಟದ ರಾಜಧಾನಿ ವಾಷಿಂಗಟನ್ ತಲುಪಿದೆವು. ಅಲ್ಲಿ ನಮ್ಮನ್ನು ಶ್ರೀ ರಘುರಾಮ ಪ್ರಭು ಅವರು ಸ್ವಾಗತಿಸಿ ಅವರ ಮನೆಗೆ ಕರೆದುಕೊಂಡು ಹೋದರು. ಅವರ ಮನೆಯಲ್ಲಿದ್ದ ಶ್ರೀ ಆರ್.ಡಿ. ಪೈ(ಪ್ರಭು ಅವರ ಪತ್ನಿಯ ತಂದೆ) ಮತ್ತು ತಾಯಿ ನಮ್ಮೊಂದಿಗೆ ಕೊಂಕಣಿ ಭಾಷೆ, ಇತಿಹಾಸಗಳ ಕುರಿತು ಮಾತನಾಡುತ್ತಾ ಕುಳಿತರು. ಆ ಮಹಿಳೆಗೆ ಹಳೆಯ ಕೊಂಕಣಿ ಹಾಡುಗಳು ತಿಳಿದಿದ್ದವು. ಅವರು ನಮ್ಮ ಮುಂದೆ ಅದನ್ನು ಹಾಡಿ ತೋರಿಸಿದರು.

ಜುಲೈ ೨೮, ಭಾನುವಾರ ಬೆಳಗ್ಗೆ ಉಪಹಾರ ಸೇವಿಸಿ ನಾವು ಬಾಲ್ಟಿಮೋರ್, ಬೇ ಬಂದರ್ ಮತ್ತು ಪ್ರಾಣಿ ಸಂಗ್ರಹಾಲಯ ವೀಕ್ಷಿಸಲು ಹೋದೆವು. ಅಲ್ಲಿ ಜಿರಾಫೆ ಮತ್ತು ಜೀಬ್ರಾಗಳನ್ನು, ಅಮೇರಿಕಾ ಖಂಡದ ಸ್ಥಳೀಯ ಪ್ರಾಣಿ, ಪಕ್ಷಿಗಳನ್ನು ನೋಡಿದೆವು. ಉಳಿದವು ಮೈಸೂರು ಜೂನಲ್ಲಿ ಇರುವಂತಹವುಗಳೇ ಆಗಿದ್ದವು.

ಸಂಜೆ ೫ ಗಂಟೆಗೆ ಶ್ರೀ ಪ್ರಭುಗಳ ಮನೆಯಲ್ಲಿ ಕೊಂಕಣಿ ಸಮಾಜದ ಸದಸ್ಯರ ಸಭೆಯನ್ನು ನಡೆಸಲಾಯಿತು. ಸಭೆಗೆ ಮೂವತ್ತೈದು ಮಂದಿ ಬಂದಿದ್ದರು. ನಾವು ನಮ್ಮ ಭಾಷಣವನ್ನು ಮಾಡಿದ ಬಳಿಕ ಪ್ರಶ್ನೋತ್ತರ ನಡೆಯಿತು. ಅದರಿಂದ ಅಲ್ಲಿ ನೆರೆದವರಿಗೆ ಕೊಂಕಣಿ ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯದ ಕುರಿತು ಅನೇಕ ಮಾಹಿತಿ ನೀಡುವುದು ಸಾಧ್ಯವಾಯಿತು. ರಾತ್ರಿಯೂಟ ಮುಗಿದ ಬಳಿಕ ಸಭೆ ಮುಕ್ತಾಯಗೊಂಡಿತು.

ಅಮೇರಿಕೆಯಲ್ಲಿರುವ ಕೊಂಕಣಿ ಸಮಾಜದಲ್ಲಿ ಬೆಳೆದು ಬಂದಿರುವ ಅತ್ಯುತ್ತಮ ಹಾಗೂ ಸಹಕಾರಿ ನಡವಳಿಕೆ ಯಾವುದೆಂದರೆ, ಒಂದು ಪ್ರದೇಶದ ಜನರು ಯಾವುದೇ ಮನೆಯಲ್ಲಿ ಸಭೆಯನ್ನು ಆಯೋಜಿಸಿದರೆ, ಅದರಲ್ಲಿ ಭಾಗವಹಿಸಲು ಬರುವವರು ತಮ್ಮ ಮನೆಮಂದಿಗಳನ್ನೆಲ್ಲಾ ಕರೆದುಕೊಂಡು ಬರುತ್ತಾರೆ. ಸಭಾ ಆಹ್ವಾನ ಒಬ್ಬರಿಗೆ ಸೀಮಿತವಾಗಿ ಇರುವಂತಹದು ಅಲ್ಲ. ಬರುವವರು ೧೦೦–೧೫೦ ಮೈಲಿ ದೂರದಿಂದ ಬರಬೇಕಾಗುತ್ತದೆ. ಹೀಗಾಗಿ ಬಂದವರಿಗೆ ಮೊದಲು ಬೆಳಗಿನ ಉಪಹಾರವಿರುತ್ತದೆ. ಆಮೇಲೆ ಸಭೆ ಮುಗಿದ ಬಳಿಕ ಊಟ. ಇಂಡಿಯಾದಲ್ಲಿ ಇರುವ ಹಾಗೆ ಅಲ್ಲಿಯ ಮನೆಯವರು ೨೦–೨೫ ಜನರಿಗೆ ಅಡುಗೆ ಮಾಡಬಹುದಾದ ದೊಡ್ಡ ದೊಡ್ಡ ಪಾತ್ರೆಗಳನ್ನು ಸಂಗ್ರಹಿಸಿ ಇಡುವುದಿಲ್ಲ. ಇನ್ನು ಆಹ್ವಾನಿತರು ತಮ್ಮ ತಮ್ಮ ಮನೆಗಳಲ್ಲಿ ಬೇರೆ ಬೇರೆ ವಿಧಗಳ ತಿಂಡಿ, ಪಲ್ಯ, ಉಪ್ಪಿನಕಾಯಿ ತಯಾರಿಸಿ ಪ್ಯಾಕ್ ಮಾಡಿಯೇ ತರುತ್ತಾರೆ. ಅದು ಅಲಿಖಿತ ವ್ಯವಸ್ಥೆ. ಹೀಗಾಗಿ ಆತಿಥ್ಯ ನೀಡುವ ಮನೆಯ ಯಜಮಾನ ಅಥವಾ ಯಜಮಾನಿ "ನೀವು ನಮ್ಮ ಮನೆಗೆ ಊಟಕ್ಕೆ ಬರಬೇಕು" ಎಂದು ಕರೆ ಮಾಡಿದಾಗಲೇ, ಆಯಾ ಮನೆಯವರು "ನಾವು ಏನನ್ನು ತಯಾರಿಸಿ ತರಬೇಕು?" ಎಂದು ಸಹಜವಾಗಿಯೇ ಕೇಳುತ್ತಾರೆ. ಅಥವಾ "ನಾವು ಇಂತಿಂತಹ ಪಲ್ಯ ಅಥವಾ ದೋಸೆ ಅಥವಾ ಸಿಹಿತಿಂಡಿ ತಯಾರಿಸಿ ತರುತ್ತೇವೆ" ಎಂಬುದಾಗಿ ಅವರೇ ಸ್ವತಃ ತಿಳಿಸುತ್ತಾರೆ ಅಥವಾ "ಯಾವುದನ್ನು ಮಾಡಿ ತಂದರೆ ಸಾಕು ಎಂದು ಆತಿಥೇಯರೇ ವಿನಂತಿಸಿಕೊಳ್ಳುತ್ತಾರೆ. ಮನೆಗೆ ಬರುವ ಬೇರೆ ಬೇರೆ ಮಂದಿ ತರುವ ಖಾದ್ಯಗಳು ಒಂದೇ ರೀತಿಯದ್ದಾಗಿ ಇರುವುದು ಬೇಡ ಎನ್ನುವ ಕಾಳಜಿಯಿಂದ ಈ ಪೂರ್ವ ಸಿದ್ಧತೆಗಳು ನಡೆಯುತ್ತವೆ. ಇದು ಒಂದು ಉತ್ತಮ ಸಹಕಾರಿ ಹಾಗೂ ನಿರುಪದ್ರವಿ ವ್ಯವಸ್ಥೆ. ಆತಿಥೇಯರಿಗೂ ಸಭೆ ನಡೆಸುವುದು ಹೆಚ್ಚಿನ ಹೊರೆ ಅಥವಾ ಅನಾನುಕೂಲತೆ ಎನಿಸುವುದಿಲ್ಲ. ಈ ರೀತಿಯ ಪದ್ಧತಿಯ ಮೂಲಕ ಅಮೇರಿಕೆಯಲ್ಲಿರುವ ಕೊಂಕಣಿ ಸಮಾಜದವರು ವರ್ಷದಲ್ಲಿ ೩–೪ ಬಾರಿ ಬೇರೆ ಬೇರೆ ಮನೆಗಳಲ್ಲಿ ಒಟ್ಟು ಸೇರುತ್ತಾರೆ.

ಜುಲೈ ೨೯, ಸೋಮವಾರ ನಾವು ವಾಷಿಂಗಟನ್ ಡಿಸಿ ನಗರ ದರ್ಶನಕ್ಕಾಗಿ ಹೊರಟು ನಿಂತೆವು ಶ್ರೀ ಆರ್.ಡಿ. ಪೈ ಅವರ ಕಾಲಿಗೆ ವಂದಿಸಿ, ಆಶೀರ್ವಾದ ಪಡೆದು ನಮ್ಮ ಲಗ್ಗೇಜನ್ನು ಹಿಡಿದುಕೊಂಡು, ಶ್ರೀ ರಘುರಾಮ ಪ್ರಭು ಅವರ ಕಾರಿನಲ್ಲಿ ಹೊರಟೆವು. ಕಾಂಗ್ರೆಸ್ ಅಧಿವೇಶನ ನಡೆಯುವ

ಕ್ಯಾಪಿಟಲ್ ಹಾಲ್ ಅಮೇರಿಕೆಯ ರಾಜಧಾನಿಯ ಪ್ರಮುಖ ಕೇಂದ್ರ. ಅಲ್ಲಿ ಅಧ್ಯಕ್ಷರ ನಿವಾಸ ಸ್ಥಾನ ವೈಟ್ ಹೌಸ್ ಇದೆ. ಸ್ವಾತಂತ್ರ್ಯ ಸ್ಮಾರಕ(ಸುಮಾರು ೫೦೦ ಅಡಿ ಎತ್ತರ) ಮತ್ತು ಸ್ಮಿತ್‌ಸೋನಿಯನ್ ವಸ್ತುಸಂಗ್ರಹಾಲಯದ ಸಂಕೀರ್ಣವಿದೆ. ಈ ಸಂಕೀರ್ಣವು ಎಷ್ಟೋ ಕಿಮೀ ವ್ಯಾಪ್ತಿ ಪ್ರದೇಶದಲ್ಲಿ ಹರಡಿಕೊಂಡಿದೆ.

ಇಂಗ್ಲೆಂಡಿನಲ್ಲಿ ಸ್ಮಿತ್ ಎಂಬ ಪ್ರಸಿದ್ಧ ನ್ಯಾಯವಾದಿ ಇದ್ದನು. ಅವನ ಉಪಪತ್ನಿಯ ಮಗ ಕೂಡ ಪ್ರಸಿದ್ಧ ನ್ಯಾಯವಾದಿ. ಈತ ಅಂತ್ಯಕಾಲದಲ್ಲಿ ತನ್ನ ಎಲ್ಲಾ ಆಸ್ತಿಪಾಸ್ತಿಗಳನ್ನು ಅಮೇರಿಕೆಯಲ್ಲಿ ವಸ್ತುಸಂಗ್ರಹಾಲಯ ವೊಂದರ ಸ್ಥಾಪನೆಗೆ ಮೀಸಲಿಟ್ಟು ಮರಣ ಶಾಸನ ಬರೆದಿಟ್ಟಿದ್ದನು. ಹೀಗಾಗಿ ಸ್ಮಿತ್ ಮಗನ ಆಸ್ತಿಯನ್ನು ಮಾರಾಟ ಮಾಡಿ ಆ ಹಣವನ್ನು ಅಮೇರಿಕೆಯ ಸರಕಾರದ ವಶಕ್ಕೆ ಒಪ್ಪಿಸಲಾಯಿತಂತೆ. ಪ್ರಾರಂಭದಲ್ಲಿ ಒಂದು ವಸ್ತುಸಂಗ್ರಹಾಲಯ ವಾಗಿ ಇದ್ದದ್ದು, ಕಳೆದ ನೂರು ವರ್ಷಗಳಲ್ಲಿ ಅದಕ್ಕೆ ಬೇರೆ ಬೇರೆ ವಸ್ತುಸಂಗ್ರಹಾಲಯಗಳು ಸೇರ್ಪಡೆಗೊಂಡು ಅದು ಸಂಕೀರ್ಣವಾಗಿ ಹಲವು ಎಕರೆ ಜಮೀನಿನಲ್ಲಿ ಬೆಳೆದು ನಿಂತಿದೆ. ಇದರ ಹೊರದ್ವಾರದಲ್ಲಿರುವ ಅಮೃತಶಿಲೆಯ ಫಲಕದಲ್ಲಿ "ಮಿ......ಸ್ಮಿತ್, ಇಲ್‌ಲೀಗಲ್ ಸನ್ ಆಫ್ ಮಿ..... ಸ್ಮಿತ್ ಡೊನೇಟಡ್ ಮ್ಯೂಸಿಯಂ" ಎಂದು ಕೆತ್ತಲಾಗಿದೆ. ಇದು ವಿಶೇಷ ಆಕರ್ಷಣೆಯ ಪ್ರದೇಶವಾಗಿದೆ.

ನಾವು ವಾಷಿಂಗಟನ್ ನಗರದಲ್ಲಿ ಸುತ್ತಾಡಿದ ಬಳಿಕ ಊಟ ಮುಗಿಸಿ ಪ್ರಭು ಅವರ ಕಾರಿನಲ್ಲಿಯೇ ವಿಮಾನ ನಿಲ್ದಾಣಕ್ಕೆ ಹೋದೆವು. ಅಲ್ಲಿ ವಿಮಾನ ಹತ್ತಿ ಸಂಜೆ ಐದು ಗಂಟೆಗೆ ನ್ಯೂಯಾರ್ಕ್‌ನ ಲಗಾರ್ಡಿಯಾ ತಲುಪಿದೆವು. ಅಲ್ಲಿ ನಮ್ಮನ್ನು ಸ್ವಾಗತಿಸಲು ರವಿ ಶೆಣೈ ಬಂದಿದ್ದರು. ನಾವು ಅವರ ಮನೆಗೆ ಹೋದಾಗ, ನನ್ನ ಚಿಕ್ಕಮ್ಮನವರ ಮಗ ಅನಂತ ಭಟ್ಟರ ಮಗ ಸಂದೇಶ್ ಭಟ್(ಐಬಿಎಮ್ ನ ಇಲೆಕ್ಟ್ರೋನಿಕ್ ಇಂಜಿನಿಯರ್) ಕೂಡ ಅಲ್ಲಿಗೆ ಬಂದರು. ನಾವು ಒಟ್ಟಿಗೆ ಊಟ ಮಾಡಿದೆವು. ರವಿ–ಶಾರದಾ ದಂಪತಿಗಳಿಗೆ ನಮ್ಮ ಅಮೇರಿಕಾ ಪ್ರವಾಸದ ಉದ್ದೇಶವನ್ನು ವಿವರಿಸಿದೆವು.

ನಮ್ಮ ಮುಂದಿನ ಪ್ರಯಾಣ ಲಂಡನ್‌ಗೆ. ನ್ಯೂಯಾರ್ಕ್‌ನಿಂದ ಲಂಡನ್‌ಗೆ ಏಳು ಗಂಟೆಗಳ ಪ್ರಯಾಣ. ಮರುದಿನ ನಾವು ರಾತ್ರಿ ಏಳು ಗಂಟೆಗೆ ಹೊರಡುವ ವಿಮಾನದಲ್ಲಿ ಕುಳಿತೆವು.

ಲಂಡನ್ ನಗರದಲ್ಲಿ

ಜುಲೈ ೩೧, ೧೯೯೬ ರಂದು ಬುಧವಾರ ಬೆಳಗ್ಗೆ ಎಂಟು ಗಂಟೆಗೆ ನಾವು ಲಂಡನ್ ಹಿತ್ರೂ ವಿಮಾನ ನಿಲ್ದಾಣವನ್ನು ತಲುಪಿದೆವು. ಅಲ್ಲಿ ನಮ್ಮನ್ನು ಸ್ವಾಗತಿಸಲು ಶ್ರೀ ಇ.ವಿ. ಗೋಪಾಲಕೃಷ್ಣ ಶೆಣೈ ಬಂದಿದ್ದರು. ಕಳೆದ ಮೂವತ್ತು ವರ್ಷಗಳಿಂದ ಲಂಡನ್ ನಿವಾಸಿಯಾಗಿದ್ದರೂ, ಗೋಪಾಲಕೃಷ್ಣ ಶೆಣೈಗೆ ಲಂಡನ್‌ನಲ್ಲಿ ಸುತ್ತಾಡುವುದು ಅಷ್ಟೊಂದು ತಿಳಿದಿರಲಿಲ್ಲ. ಹೀಗಾಗಿ ಅವರು ನಮ್ಮನ್ನು ಶ್ರೀಮತಿ ಶೀಲಾ ಗೊಲ್ಲರಕೇರಿ ಎಂಬ ಒಂಟಿ ಮಹಿಳೆಯ ಮನೆಯಲ್ಲಿ "ಪೇಯಿಂಗ್ ಗೆಸ್ಟ್" ಆಗಿ ಇರುವ ವ್ಯವಸ್ಥೆ ಮಾಡಿದರು. ಆಕೆ ಬ್ಯಾಂಕ್ ಆಫ್ ಬರೋಡಾದ ಲಂಡನ್ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ, ನಮಗೆ ಬೆಳಗಿನ ಉಪಹಾರ ಮತ್ತು ರಾತ್ರಿಯೂಟ ತಯಾರಿಸಿ ಇಡುತ್ತಿದ್ದರು. ಶ್ರೀ ಶೆಣೈಯವರು ನಮಗೆ ಎಲ್ಲಿ ಏನು ಸಿಗುತ್ತದೆ ಎಂಬ ಮಾಹಿತಿ ನೀಡಿರಲಿಲ್ಲ. ಇದರಿಂದ ಮಧ್ಯಾಹ್ನ ಮತ್ತು ಸಂಜೆ ಹೊಟ್ಟೆ ತುಂಬಿಸುವುದೇ ನಮಗೆ ಫಜೀತಿಯಾಗಿ ಪರಿಣಮಿಸಿತು. ನಮ್ಮೊಂದಿಗೆ ಬಂದಿದ್ದ ಕುಡ್ವಿ ಜಗದೀಶ ಶೆಣೈ ಅವರ ತಮ್ಮ ಡಾ. ನರಹರಿ ಶೆಣೈ ಅವರಲ್ಲಿ ಇರಲು ಹೋಗಿದ್ದರು. ಇಲ್ಲಿ ನಮ್ಮನ್ನು ಕೇಳುವವರೇ ಇಲ್ಲದ ಹಾಗಾಯಿತು.

ಆಗಸ್ಟ್ ೧ ರಂದು ಶೆಣೈಯವರು ಬಂದು ನಮ್ಮನ್ನು ಸಿಂಡಿಕೇಟ್ ಬ್ಯಾಂಕಿನ ಲಂಡನ್ ಶಾಖೆಯ ಮೆನೆಜರ್ ಶ್ರೀ ಡಿ. ಚಂದ್ರಕಾಂತ ಪೈ ಬಳಿ ಕರೆದುಕೊಂಡು ಹೋದರು. ಶ್ರೀ ಪೈಯವರು ಮಂಗಳೂರಿನ ಡೊಂಗರಕೇರಿಯವರು. ನಾವು ಅವರಲ್ಲಿಗೆ ಹೋಗಿ ತಲುಪಿದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಶ್ರೀ ಪೈಯವರು ಮೀಟಿಂಗ್‌ನಲ್ಲಿದ್ದರು. ಆದರೂ ಅವರು ತಮ್ಮ ಅಧಿಕಾರಿಯೊಬ್ಬರನ್ನು ನಮ್ಮೊಂದಿಗೆ ಕಳುಹಿಸಿದರು. ನಾವು ಹೌಸ್ ಆಫ್ ಕಾಮನ್ಸ್(ಜಗತ್ತಿನ ಲೋಕಸಭೆಗಳ ಮಾತೆ), ಪಾರ್ಲಿಮೆಂಟ್ ಹೌಸ್ ಬೀದಿ, ಬ್ರಿಟನ್ ಪ್ರಧಾನ ಮಂತ್ರಿಗಳ ಸರಕಾರಿ ನಿವಾಸಸ್ಥಾನ, ೧೦ ಡೌನಿಂಗ್ ಸ್ಟ್ರೀಟ್, ಇಂಗ್ಲೆಂಡ್ ಚರ್ಚಿನ ಆರ್ಚ್ ಬಿಷಪ್ ವಾಸಿಸುವ ವೆಸ್ಟ್ ಮಿನಿಷ್ಟರ್ ಏಬೇ ಇತ್ಯಾದಿ ನೋಡಿದೆವು. ಆಮೇಲೆ ಪಾರ್ಲಿಮೆಂಟ್ ಸ್ಕ್ವೇರ್‌ನಲ್ಲಿದ್ದ ಬ್ಯಾಂಕ್ ಆಫ್ ಬರೋಡಾ ಶಾಖೆಗೆ ಹೋಗಿ ಶ್ರೀಮತಿ ಶೀಲಾ ಗೊಲ್ಲರಕೇರಿ ಅವರೊಂದಿಗೆ ಬ್ರಿಟಿಶ್ ರೈಲಿನಲ್ಲಿ ಅವರ ಮನೆಗೆ ಹಿಂತಿರುಗಿದೆವು.

ನಗರ ಪ್ರಯಾಣಿಕರಿಗಾಗಿ ಬ್ರಿಟಿಶ್ ರೈಲು, ಟ್ಯೂಬ್ ರೈಲು(ತಳನೆಲದಲ್ಲಿ), ಬಸ್ಸುಗಳು ಇತ್ಯಾದಿ ಸಾರಿಗೆ ಸೌಲಭ್ಯಗಳಿವೆ.

ಮುಂಜಾನೆ ೯.೩೦ ಗಂಟೆಯ ಬಳಿಕ ೩.೯೦ ಪೌಂಡ್‌ನೀಡಿ ಟಿಕೇಟ್ ಖರೀದಿಸಬೇಕು. ಅದಕ್ಕಿಂತ ಮೊದಲಾದರೆ ಹತ್ತು ಪೌಂಡ್ ನೀಡಬೇಕಾಗುತ್ತದೆಯಂತೆ.

ಮನೆಗೆ ಬಂದ ಬಳಿಕ ಶ್ರೀಮತಿ ಗೊಲ್ಲರಕೇರಿ ನೀಡಿದ ಊಟ ಮುಗಿಸಿ ಮಲಗಿದೆವು. ಆದರೆ ನಿದ್ದೆ ಬರಲಿಲ್ಲ. ಹೀಗಾಗಿ ಮರುದಿನ ಎಲ್ಲಿಯೂ ಹೋಗದೆ ಮನೆಯಲ್ಲಿಯೇ ಉಳಿದೆವು. ನಾವಿದ್ದ ಮನೆ ಮಿಡಲ್ಸ್. ಅದು ಜಿಲ್ಲಾ ಪ್ರದೇಶವಾಗಿದ್ದರೂ, ನಮ್ಮೊಂದಿಗೆ ಮಾತನಾಡಲು ಅಥವಾ ನಮ್ಮನ್ನು ಕರೆದುಕೊಂಡು ಹೋಗಲು ಯಾರೂ ಬರಲಿಲ್ಲ. ಶ್ರೀ ಶೆಣೈಯವರು ಅವರ ಮನೆಗೆ ರಾತ್ರಿಯೂಟಕ್ಕೆ ಬರುವಂತೆ ತಿಳಿಸಿದರಾದರೂ, ಅವರಿಗೆ ಕಳೆದ ರಾತ್ರಿ ಜ್ವರ ಬಂದ ಕಾರಣ ಆ ಕಾರ್ಯಕ್ರಮವೂ ರದ್ದಾಯಿತು. ಅಮೇರಿಕೆಯಲ್ಲಿ ನಮ್ಮವರು ನೀಡಿದ ಆತಿಥ್ಯದಿಂದ ಹೆಚ್ಚಾದ ದೇಹದ ತೂಕ ಇಲ್ಲಿ ಕಡಿಮೆಯಾಗುವ ಹಾಗೆ ಕಂಡಿತು.

ಆಗಸ್ಟ್ ೩ರಂದು ಲಂಡನ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಕೊಂಕಣಿಗರ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀ ಬಾಳಕೃಷ್ಣ ಶೆಣೈ ಅವರು ಸಾರಸ್ವತ ಸಮಾಜದ ವಾರ್ಷಿಕ ಸಭೆ ಮತ್ತು ಕ್ರೀಡಾ ದಿನವನ್ನು ಜೊತೆಯಲ್ಲಿ ಸಂಘಟಿಸಿದ್ದರು. ಇದಲ್ಲದೆ ಕೆನರಾ ಕ್ಯಾಥೊಲಿಕ್ ಅಸೋಸಿಯೇಶನ್ ಸದಸ್ಯರು ಕೂಡ ಅಲ್ಲಿ ಇದ್ದುದರಿಂದ ಕೊಂಕಣಿ ಜನರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಶ್ರೀ ಶೆಣೈಯವರು ಸ್ವಾಗತ ಮಾಡಿದ ಬಳಿಕ ನಾನು ಮತ್ತು ಎರಿಕ್ ಒಝೆರಿಯೊ ಮಾತನಾಡಿದೆವು. ಕ್ರೈಸ್ತ ಸಹೋದರರು ಕೂಡ ಉತ್ಸಾಹದಿಂದ ಮಾತನಾಡಿ ನಮಗೆ ಸನ್ಮಾನ ಮಾಡಿದರು.

ನನ್ನ ತಮ್ಮ ಟಿ. ಗಣಪತಿಯ ಸ್ನೇಹಿತ ಶ್ರೀ ಜೈನಾರಾಯಣ ಭಟ್ಟ(ಬೆಹರಿನ್) ಅಲ್ಲಿಗೆ ಬಂದಿದ್ದರು. ಅವರು ಸಂಜೆ ನಮ್ಮನ್ನು ಅವರ ಮನೆಗೆ ಕರೆದುಕೊಂಡು ಹೋದರು. ಜೈನಾರಾಯಣ ತುಂಬಾ ಉತ್ಸಾಹಶಾಲಿ ವ್ಯಕ್ತಿ. ಇವರು ಮಂಗಳೂರಿನ ಸಿಟಿ ಬೇಕರಿಯ ದಿನೇಶ್ ಪ್ರಭು ಅವರ ಭಾವಮೈದುನ. ಅಲ್ಲದೆ ಅಮೇರಿಕೆಯ ಖಬರ್ ಪತ್ರಿಕೆಯ ವಸಂತ ಭಟ್ಟರ ತಮ್ಮ. ಅವರಿಗೆ ಸಂಗೀತದಲ್ಲಿ ಆಸಕ್ತಿ ಇತ್ತು. ಜರ್ಮನಿ ಮೊದಲಾದ ದೇಶಗಳಿಗೆ ಹೋಗಿ ಬರುತ್ತಿರುತ್ತಾರೆ. ಅವರು ನಮಗೆ ಅಲ್ಲಿಯ ಗಾರ್ಡನ್, ಮಾರ್ಕೆಟ್ ಇತ್ಯಾದಿ ತೋರಿಸಿದರು. ಆಮೇಲೆ ರಾತ್ರಿಯೂಟ ಮುಗಿದ ಬಳಿಕ ನಮ್ಮನ್ನು ಮನೆಗೆ ತಲುಪಿಸಿ ಹೋದರು.

ಭಾನುವಾರದ ಸಭಾ ಕಾರ್ಯಕ್ರಮದಲ್ಲಿ ಪರಿಚಯವಾಗಿದ್ದ ಕುಡ್ಗಿ ಶ್ರೀ ಎಸ್.ಎಸ್. ಕಾಮತ್ ಮತ್ತು ಅವರ ಪತ್ನಿ ಶ್ರೀಮತಿ ಸುಮಿತ್ರಾ ಅವರು ನಮ್ಮನ್ನು ಅವರ ಕಾರಿನಲ್ಲಿ ಸುತ್ತಾಡಲು ಕರೆದುಕೊಂಡು ಹೋದರು. ನಾವು ಅವರೊಂದಿಗೆ ಪಾರ್ಲಿಮೆಂಟ್ ಹೌಸ್ ಸ್ಕ್ವೇರ್, ಟ್ರಫಲ್ಗಾರ ಸ್ಕ್ವೇರ್, ಬ್ರಿಟಿಶ್ ವೀರ ನೆಲ್ಸನರ ಪ್ರತಿಮೆ ಇರುವ ಜಾಗ ಇತ್ಯಾದಿ ನೋಡಿದೆವು.

ನಾವು ಅದೇ ದಿನ ಸಂಜೆ ಶ್ರೀ ಲೂಯಿಸ್ ನೊರನ್ಹಾರ ಮನೆಗೆ ಭೇಟಿ ನೀಡಿದೆವು. ಅವರು ನಮ್ಮನ್ನು ಗ್ರೀನ್ ವಿಚ್ ವಿಲ್ಲೇಜಿಗೆ ಕರೆದುಕೊಂಡು ಹೋದರು. ಅಲ್ಲಿ ಜಗತ್ತಿನ ಕೇಂದ್ರ ಬಿಂದು ಮೆರೆಡಿಯನ್ ಇದೆ. ಬಹು ಅಲ್ಪಸಂಖ್ಯಾತರಾಗಿರುವ ಬ್ರಿಟಿಷರು ಅವರ ದೇಶಪ್ರೇಮ, ಶಿಸ್ತು, ಕಷ್ಟಸಹಿಷ್ಣುವಿಕೆ ಮತ್ತು ರಾಜತಂತ್ರದಿಂದ, ಬಹು ದೊಡ್ಡ ಹಾಗೂ ಪ್ರಾಚೀನ ಶ್ರೀಮಂತ ರಾಷ್ಟ್ರವೆನಿಸಿದ ಭಾರತದೇಶವನ್ನು ಮಾತ್ರವಲ್ಲ ಜಗತ್ತಿನ ಇತರ ದೊಡ್ಡ, ವಿಶಾಲ ಹಾಗೂ ಸಣ್ಣಪುಟ್ಟ ದೇಶಗಳನ್ನು ಕೂಡ ಆಕ್ರಮಿಸಿ ತಮ್ಮ ವಶಪಡಿಸಿಕೊಂಡಿದ್ದರು. ಅಲ್ಲದೆ ಎಷ್ಟೋ ದೇಶಗಳ ಧನ ಸಂಪತ್ತನ್ನು ಮತ್ತು ಅತಿ ಅಮೂಲ್ಯ ವಸ್ತುಗಳನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿದರು. ದೇಶ ಯಾವುದೇ ಆಗಿದ್ದರೂ, ಅಲ್ಲಿ ಅವರದೇ ಬ್ರಿಟಿಶ್ ಕಾನೂನು, ಅಧಿಕಾರ, ಶಿಕ್ಷಣ, ವಾಣಿಜ್ಯ ಮತ್ತು ಆಡಳಿತ ವ್ಯವಸ್ಥೆಗಳನ್ನು ಜಾರಿಗೆ ತಂದಿದರು. ಇದಲ್ಲದೆ, ಪೂರ್ವ ಮತ್ತು ಪಶ್ಚಿಮ ಎಂದು ವಿಭಜಿಸುವ ರೇಖೆಯನ್ನು ಗ್ರೀನ್‌ವಿಚ್ ವಿಲೇಜಿನ ಒಂದು ಗೋಡೆಯ ಮೇಲೆ ಎಳೆದು ಜಗತ್ತಿನ ಕೇಂದ್ರ ಬಿಂದು ಇದು, ಎಂಬುದಾಗಿ ಹಾಗೂ ಜಗತ್ತಿನ ಪೂರ್ವ ಭಾಗ ಮತ್ತು ಪಶ್ಚಿಮ ಭಾಗ ಇಲ್ಲಿಂದ ಪ್ರಾರಂಭಗೊಳ್ಳುತ್ತದೆ ಎಂಬುದಾಗಿಯೂ ಗೆರೆ ಎಳೆದು ಚಲಾವಣೆಗೆ ತಂದಿದ್ದಾರೆ. ಇದು ಬ್ರಿಟಿಶರ ಕ್ಷಾತ್ರತೇಜದ ಜ್ವಲಂತ ಉದಾಹರಣೆಯಾಗಿ ನನಗೆ ಕಂಡಿತು. ಆಮೇಲೆ ಕುಟ್ಟಿ ಸ್ಕ್ವೇರ್, ಬೋಟಿ ಇತ್ಯಾದಿ ನೋಡಿ ಲೂಯಿಸ್ ಅವರ ಮನೆಯಲ್ಲಿಯೇ ರಾತ್ರಿಯೂಟ ಮುಗಿಸಿದೆವು.

ಆಗಸ್ಟ್ ೫, ಸೋಮವಾರ ಬೆಳಗ್ಗೆ ನಾವು ಸಿಂಡಿಕೇಟ್ ಬ್ಯಾಂಕಿನ ಶ್ರೀ ಡಿ.ಸಿ. ಪೈ ಅವರ ಕಚೇರಿಗೆ ಹೋದೆವು. ಅವರು ನಮ್ಮನ್ನು ವಿಕ್ಟೋರಿಯಾ ಸ್ಟೇಶನ್ನಿಗೆ ಕರೆದುಕೊಂಡು ಹೋಗಿ ಬಸ್ಸಿನ ವ್ಯವಸ್ಥೆ ಮಾಡಿಕೊಟ್ಟರು. ನಾವು ಆ ಬಸ್ಸಿನಲ್ಲಿ ಲಂಡನ್ ಸುತ್ತಾಡಿದೆವು. ನ್ಯಾಶನಲ್ ಆರ್ಟ್ ಗ್ಯಾಲೆರಿ, ಲಂಡನ್ ಟವರ್, ಮ್ಯಾಡಮ್ ಟುಸ್ಸಾಡ್ಸ್, ಹೈಡ್ ಪಾರ್ಕ್ ಮತ್ತು ಅಲ್ಲಿಯ ಪ್ರಸಿದ್ಧ ಸೋಪ್ ಬಾಕ್ಸ್ ಕಾರ್ನರ್(ಭಾಷಣಕ್ಕೆ ಪ್ರಸಿದ್ಧ), ಸೈಂಟ್

ಜೇಮ್ಸ್ ಪಾರ್ಕ್, ದಿ ಮೊನ್ಯುಮೆಂಟ್(ಲಂಡನ್ ನಗರಕ್ಕೆ ಬೆಂಕಿ ಹತ್ತಿಕೊಂಡು ಸಂಪೂರ್ಣ ಸುಟ್ಟು ಹೋಗಿದ್ದಾಗ ಅಲ್ಲಿ ಉಳಿದಿದ್ದ ಅವಶೇಷಗಳನ್ನು ಇಲ್ಲಿ ಸಂರಕ್ಷಿಸಿ ಇಡಲಾಗಿದೆ. ಇದರ ಸ್ಮಾರಕವಾಗಿ ಒಂದು ಕಂಬವನ್ನು ನಿರ್ಮಿಸಿದ್ದಾರೆ.) ಇತ್ಯಾದಿ ನೋಡಿದೆವು.

ಮ್ಯಾಡವ್ ಟುಸ್ಸಾಡ್ಸ್ ಲಂಡನ್ನಿನ ಬಹು ಆಕರ್ಷಣೀಯ ಕೇಂದ್ರ. ಇದು ಫ್ರೆಂಚ್ ಚಳವಳಿಯ ಕಾಲದಲ್ಲಿ ಫ್ರಾನ್ಸ್ ದೇಶದಿಂದ ಇಂಗ್ಲೆಂಡಿಗೆ ಬಂದ ಅನಾಥ ಮಹಿಳೆಯೊಬ್ಬರು ನಿರ್ಮಿಸಿದ ಮನುಷ್ಯ ಗಾತ್ರದ ಮಯಣದ ಬೊಂಬೆಗಳ ಸಂಗ್ರಹಾಲಯ(ವ್ಯಾಕ್ಸ್ ಮ್ಯೂಸಿಯಂ). ಇಲ್ಲಿ ೧೯ನೇ ಮತ್ತು ೨೦ನೇ ಶತಮಾನದ ಪ್ರಸಿದ್ಧ ಚಾರಿತ್ರಿಕ ಪುರುಷರ ಮತ್ತು ಮಹಿಳೆಯರ ಮೇಣದ ಪ್ರತಿಮೆಗಳನ್ನು ನಿರ್ಮಿಸಿ ಇಡಲಾಗಿದೆ. ಅದರಲ್ಲಿ ಚರ್ಚಿಲ್, ಮರ್ಲಿನ್ ಮನ್ರೊ, ಅಬ್ರಹಾಂ ಲಿಂಕನ್‌ರಿಂದ ಹಿಡಿದು ಇಂದಿರಾಗಾಂಧಿ (ಈಗ ಅಮಿತಾಬ್ ಬಚ್ಚನ್, ಐಶ್ವರ್ಯ ರೈ)ವರೆಗೆ ಮೇಣದ ಪ್ರತಿಮೆಗಳು ಇವೆ. ಅದರ ಕತೆ ತುಂಬಾ ದೊಡ್ಡದಾಗಿದೆ. ಆ ವಿವರಗಳು ಪ್ರವಾಸ ಕಥನದಲ್ಲಿ ಅಳವಡಿಕೆಯಾಗಲು ಉಚಿತವಾಗಿವೆ. ಇದು ನನ್ನ ಜೀವನ ಕಥನ ಮಾತ್ರವಾಗಿರುವುದರಿಂದ ಹೆಚ್ಚಿನ ವಿವರಗಳನ್ನು ಇಲ್ಲಿ ನೀಡುವುದು ಸಾಧ್ಯವಾಗಿಲ್ಲ. ಹಾಗಿದ್ದರೂ ಜಾಗತಿಕ ಪ್ರವಾಸ ಕೈಗೊಳ್ಳುವವರಿಗೆ ಅದರ ಅಗತ್ಯವಿರುತ್ತದೆ. ನ್ಯಾಶನಲ್ ಗ್ಯಾಲರಿಯಲ್ಲಿ ಸುಮಾರು ಹದಿನೈದನೆಯ ಶತಮಾನದಿಂದ ಜಗದ್ವಿಖ್ಯಾತ ಚಿತ್ರ ಕಲಾವಿದರು ರಚಿಸಿದ ವರ್ಣರಂಜಿತ ಚಿತ್ರಗಳು ಇವೆ.

ನನ್ನ ಆಪ್ತ ಬಂಧು ಶಿವಮೊಗ್ಗೆಯ ಶ್ರೀ ಹೆಚ್.ಜಿ. ಮುರಳೀಧರ ಕಾಮತರು ನೀಡಿದ ಶ್ರೀ ಗಣಪತಿ ವಿಗ್ರಹ ಮತ್ತು ನಿನ್ನೆ ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ಖರೀದಿಸಿದ್ದ ಸ್ಮರಣಿಕೆಯೊಂದನ್ನು ಶ್ರೀ ಡಿ.ಸಿ. ಪೈ ಅವರಿಗೆ ನೀಡಿದೆ.

ಮರುದಿನ ಆಗಸ್ಟ್ ೭ರಂದು ಮುಂಜಾನೆ ೫.೩೦ಕ್ಕೆ ನಾವು ಲಂಡನ್ ಹಿತ್ರೊ ವಿಮಾನ ನಿಲ್ದಾಣದಿಂದ ವಿಮಾನದಲ್ಲಿ ಹೊರಟೆವು. ಮುಂಬೈ ತಲುಪಿದಾಗ ರಾತ್ರಿ ಗಂಟೆ ೧೨.೩೦. ಇಮಿಗ್ರೇಶನ್ ಮುಗಿಸಿ ಹೊರಗೆ ಬರುವಾಗ ಶ್ರೀ ಕುಡ್ವಿ ಜಗದೀಶ್ ಶೆಣೈ ಅವರ ಭಾವ ಶ್ರೀ ಎಸ್.ಎಸ್. ಭಟ್ ನಮಗಾಗಿ ಕಾದು ನಿಂತಿದ್ದರು. ನಾವು ಅವರ ಕಾರಿನಲ್ಲಿ ಮತ್ತು ಇನ್ನೊಂದು ಟ್ಯಾಕ್ಸಿ ಮಾಡಿಕೊಂಡು ಅವರ ಮನೆಗೆ ಹೋದೆವು. ಅಲ್ಲಿ ಜಗದೀಶ ಶೆಣೈ ಅವರ ಸಹೋದರಿ ನಮಗಾಗಿ ಬಿಸಿ ಬಿಸಿ ಇಡ್ಲಿ, ಸಾಂಬಾರ್, ಫಲಾಹಾರ ಸಿದ್ಧಪಡಿಸಿದ್ದರು. ಅದನ್ನು ಹೊಟ್ಟೆ ತುಂಬಾ ತಿಂದು ಮಲಗಿದೆವು. ಮರುದಿನ ಬೆಳಗ್ಗೆ ಹತ್ತೂವರೆ ಗಂಟೆಗೆ ವಿಮಾನದಲ್ಲಿ ಹೊರಟು ಮಧ್ಯಾಹ್ನ ಹನ್ನೆರಡೂವರೆಗೆ ಮಂಗಳೂರು ತಲುಪಿದೆವು. ಈ ರೀತಿ ನನ್ನ ಪ್ರಥಮ ವಿದೇಶಿ ಪ್ರವಾಸ ಮುಕ್ತಾಯಗೊಂಡಿತು.

ಅಮೇರಿಕೆಯ ಬೇರೆ ಬೇರೆ ಊರುಗಳಲ್ಲಿ ಪರಿಚಯವಿಲ್ಲದ ಹೊಸ ಹೊಸ ವ್ಯಕ್ತಿಗಳು ನಮಗೆ ಹಾರ್ದಿಕ ಸ್ವಾಗತವನ್ನು ನೀಡಿ, ಸುತ್ತುಮುತ್ತಲಿನ ಪ್ರೇಕ್ಷಣೀಯ ತಾಣಗಳನ್ನು, ಚಾರಿತ್ರಿಕ ಹಾಗೂ ವಿಶಿಷ್ಟತೆಯನ್ನು ಹೊಂದಿರುವ ಕಟ್ಟಡಗಳನ್ನು ತೋರಿಸಿ, ಅವರವರ ವಾಸಸ್ಥಾನಗಳಲ್ಲಿರುವ ಭಾರತೀಯರನ್ನು ಕರೆಯಿಸಿ ನಮ್ಮ ಕೊಂಕಣಿ ಕಾರ್ಯಕ್ಕೆ ಬೆಂಬಲ ನೀಡಲು ಸಭಾ ಕಾರ್ಯಕ್ರಮ ಇತ್ಯಾದಿ ವ್ಯವಸ್ಥೆಗಳನ್ನು ನಡೆಸಿ ಕೊಟ್ಟದ್ದರಿಂದ ನಮ್ಮ ಈ ಪ್ರವಾಸವು ಅರ್ಥಪೂರ್ಣ ಹಾಗೂ ಜಯಪ್ರದವಾಗಿದೆ ಎಂದು ನಾನು ಭಾವಿಸುತ್ತೇನೆ.

ಊರಿಗೆ ಮರಳಿದ ಬಳಿಕ ಮಂಗಳೂರೂ ಸೇರಿದಂತೆ, ಇಲ್ಲಿಯ ವಿವಿಧ ಊರುಗಳಲ್ಲಿ ನನ್ನ "ಅಮೇರಿಕೆಯ ಪ್ರವಾಸ ಮತ್ತು ಕೊಂಕಣಿ ಪ್ರಸಾರ" ಎಂಬ ವಿಷಯದಲ್ಲಿ ಭಾಷಣ ಕಾರ್ಯಕ್ರಮಗಳು ನಡೆದಿದ್ದವು.

"ಖಬರ್" ಪತ್ರಿಕೆಯ ಶ್ರೀ ವಸಂತ ಭಟ್

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿ ಮಣಿಪಾಲದ ಶ್ರೀ ಟಿ. ರಮೇಶ್ ಪೈ ಅವರನ್ನು ಭೇಟಿಯಾಗಿ ಅಮೇರಿಕಾ, ಇಂಗ್ಲೆಂಡ್, ಯುರೋಪ್, ಮತ್ತು ಆಸ್ಟ್ರೇಲಿಯಾದಲ್ಲಿರುವ ಅವರ ಪರಿಚಿತ ಕೊಂಕಣಿ ಜನರ ಹೆಸರು ಮತ್ತು ವಿಳಾಸದ ಪಟ್ಟಿ ಮಾಡಿ ಕೊಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಂಡಿದ್ದೆ. ಶ್ರೀ ರಮೇಶ ಪೈಯವರು ತಕ್ಷಣ ಆ ಪಟ್ಟಿಯನ್ನು ನನಗೆ ಕಳುಹಿಸಿಕೊಟ್ಟರಲ್ಲದೆ, ಅಮೇರಿಕೆಯಲ್ಲಿ ಪ್ರಕಟವಾಗುತ್ತಿದ್ದ "ಖಬರ್" ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ವಸಂತ ಭಟ್‌ರ ಪರಿಚಯವನ್ನೂ ತಿಳಿಸಿದರು. ನಾನು ವಿಳಂಬ ಮಾಡದೆ ಶ್ರೀ ವಸಂತ ಭಟ್ ಅವರಿಗೆ ಡಿಸೆಂಬರ್ ೧೯೯೫ರಲ್ಲಿ ಮಂಗಳೂರಿನಲ್ಲಿ ನಡೆಯಲಿರುವ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ವಿವರಗಳನ್ನು ನೀಡಿ ಪತ್ರ ಬರೆದೆ (ಆ ಕಾಲದಲ್ಲಿ ಇಮೇಲ್ ಸೌಲಭ್ಯ ಇರಲಿಲ್ಲ). ಅದಕ್ಕೆ ಶ್ರೀ ವಸಂತ ಭಟ್‌ರು ನನಗೆ ಉತ್ತರ ನೀಡುತ್ತಾ, ಸಮ್ಮೇಳನದ ಕುರಿತು ತ್ರೈಮಾಸಿಕ ವರದಿ

ಕಳುಹಿಸಿಕೊಟ್ಟರೆ ತಾನು ಅದನ್ನು "ಖಬರ್" ಪತ್ರಿಕೆಯಲ್ಲಿ ಪ್ರಕಟಿಸುವುದಾಗಿಯೂ, ತನ್ನ ಪತ್ರಿಕೆ ಅಮೇರಿಕೆಯಲ್ಲಿರುವ ಸಾವಿರಕ್ಕೂ ಮಿಕ್ಕಿದ ಕೊಂಕಣಿ ಜನರನ್ನು ತಲುಪುವುದಾಗಿಯೂ ತಿಳಿಸಿದರು. ಇದರ ಬಳಿಕ ನಾನು ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯ ವರದಿ ಹಾಗೂ ಕೊಂಕಣಿ ಸಮಾಜದಲ್ಲಿ ನಡೆದ ವಿಶೇಷ ಘಟನೆಗಳನ್ನು "Khabbar from Kular" (ಕೌರಿನ ಸುದ್ದಿ) ಎಂಬ ಶೀರ್ಷಿಕೆಯಲ್ಲಿ ಬರೆದು ಕಳುಹಿಸಿಕೊಡುತ್ತಿದ್ದೆ. ಈ ಅಂಕಣವು ೧೯೯೪ನೇ ಇಸವಿಯಿಂದ ಇವತ್ತಿಗೂ ಪ್ರಕಟವಾಗುತ್ತಲೇ ಇದೆ.

ಇಷ್ಟು ಮಾತ್ರವಲ್ಲ, ಶ್ರೀ ವಸಂತ ಭಟ್‌ಅವರು ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ, ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ, ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣದ ದಿನಗಳು ಹಾಗೂ ಈಗ ವಿಶ್ವ ಕೊಂಕಣಿ ಕೇಂದ್ರ ನಡೆಸುತ್ತಿರುವ ಘನ ಕಾರ್ಯಗಳ ಕುರಿತು ತಮ್ಮ ಸಂಪಾದಕೀಯದಲ್ಲಿ ಬರೆದು, ಪ್ರಚಾರ ನೀಡಿ ವಿಶೇಷ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಶ್ರೀ ವಸಂತ ಭಟ್‌ರು "ಖಬರ್" ಪತ್ರಿಕೆಯನ್ನು ಪ್ರಾರಂಭಿಸಿದ ಬಳಿಕ ಅಮೇರಿಕೆಯಲ್ಲಿರುವ ಕೊಂಕಣಿ ಜನರು ಪತ್ರ, ದೂರವಾಣಿಯ ಮೂಲಕ, ಈಗ ಇಂಟರ್‌ನೆಟ್ ಮೂಲಕ ಅಲ್ಲಿ ಪರಸ್ಪರ ಸಂಪರ್ಕ ಇಟ್ಟುಕೊಳ್ಳುವುದು ಸುಲಭ ಸಾಧ್ಯವಾಗಿದೆ. ಇಷ್ಟು ಮಾತ್ರವಲ್ಲ ಅಮೇರಿಕೆಯಲ್ಲಿ ನಡೆಯುತ್ತಿರುವ ಕೊಂಕಣಿ ಜನರ ಕಾರ್ಯಕ್ರಮಗಳು, ಅವರ ವೃತ್ತಿ ಬಡ್ತಿಗಳು, ವರ್ಗಾವಣೆಗಳು, ಅವರ ವಿಳಾಸ ಬದಲಾವಣೆ, ಅವರ ಮಕ್ಕಳ ಉನ್ನತಿ, ಮದುವೆ-ಮುಂಜಿ ಸಮಾರಂಭಗಳು, ಸಂಬಂಧಿಕರ ಮರಣ ಇತ್ಯಾದಿ ಸುದ್ದಿಗಳು ಖಬರ್ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಇಂತಹ ಒಂದು ಘನ ಕಾರ್ಯವನ್ನು ಶ್ರೀ ವಸಂತ ಭಟ್ ನಡೆಸುತ್ತಾ ಬಂದಿದ್ದಾರೆ. ಅವರ ಈ ಪತ್ರಿಕೆ ನಿಯಮಿತವಾಗಿ ಪ್ರಕಟಗೊಂಡು ಕ್ಲುಪ್ತ ಸಮಯದಲ್ಲಿ ಅಂಚೆ ಕಚೇರಿ ತಲುಪುವಂತೆ ಮಾಡುವುದರಲ್ಲಿ ಅವರ ಪತ್ನಿ ಶ್ರೀಮತಿ ಪೂರ್ಣಿಮಾ ಮತ್ತು ಅವರ ಮಕ್ಕಳ ಶ್ರಮವೂ ಇದೆ. ಖಬರ್ ಪತ್ರಿಕೆಯು ಶ್ರೀ ವಸಂತ ಭಟ್ ಅವರ ಕೌಟುಂಬಿಕ ಹವ್ಯಾಸವಾಗಿ ಮುಂದುವರಿದು ಬಂದಿದೆ. ಖಬರ್ ಪತ್ರಿಕೆಯಲ್ಲಿ ಬೆಳಕಿಗೆ ಬಾರದ ಕಾರ್ಯಕ್ರಮ ಅಮೇರಿಕೆಯಲ್ಲಿ ನಡೆದಿಲ್ಲ ಎಂಬ ಉಕ್ತಿಯೇ ಇದೆ.

ವಸಂತ ಭಟ್ ಅವರ ಪ್ರಾಮಾಣಿಕ ಪ್ರಯತ್ನ ಮತ್ತು ಖಬರ್ ಪತ್ರಿಕೆಯಿಂದಾಗಿ ಅಮೇರಿಕೆಯಲ್ಲಿರುವ ಕೊಂಕಣಿ ಜನರಲ್ಲಿ ನಾವು ಒಟ್ಟಾಗಿ ಬಾಳೋಣ ಎನ್ನುವ ಉತ್ಕಟತೆ ಮೂಡಿದೆ. ಇದರಿಂದ ಉತ್ತರ ಅಮೇರಿಕಾ ಕೊಂಕಣಿ ಸಂಸ್ಥೆ "ನಾಕಾ"(ನಾರ್ತ್ ಅಮೇರಿಕನ್ ಕೊಂಕಣಿ ಅಸೋಸಿಯೇಶನ್) ಜನ್ಮ ತಾಳಿದೆ. ನಾಕಾ ಸಂಸ್ಥೆಯವರು ೧೯೯೬ನೇ ಇಸವಿಯಲ್ಲಿ ಪ್ರಥಮ ನಾಕಾ ಸಮ್ಮೇಳನವನ್ನು ಸಂಘಟಿಸಿದ್ದಾರೆ(ಅವರಿಗೆ ನಮ್ಮ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ ಸ್ಫೂರ್ತಿಯಾಗಿತ್ತು). 'ನಾಕಾ'ದ ಆಹ್ವಾನದ ಮೇಲೆ ಅಮೇರಿಕಾಗೆ ತೆರಳಿದ್ದ ನಾನೇ ಸ್ವತಃ ಈ ಪ್ರಥಮ ಸಮ್ಮೇಳನದ ಉದ್ಘಾಟನೆಯನ್ನು ದೀಪ ಹಚ್ಚುವುದರ ಮೂಲಕ ನಡೆಸಿದ್ದೆ. ನಾನು, ಶ್ರೀ ಕುಡ್ವಿ ಜಗದೀಶ್ ಶೆಣೈ ಹಾಗೂ ಏರಿಕ್ ಒಝುರಿಯೊ ಅತಿಥಿಗಳಾಗಿ ನಾಕಾ ಸಮ್ಮೇಳನದಲ್ಲಿ ಭಾಗವಹಿಸಿದ್ದೆವು. ಇದರ ಬಳಿಕ ನಾಕಾ ಸಮ್ಮೇಳನವು ಉತ್ತರ ಅಮೇರಿಕೆಯಲ್ಲಿ ೭ ಬಾರಿ, ಕೆನಡಾದಲ್ಲಿ ೧ ಬಾರಿ ನಡೆದಿತ್ತು. ನಾನು ೧೯೯೬, ೨೦೦೪ ಮತ್ತು ೨೦೧೨ರಲ್ಲಿ ನಡೆದ ಸಮ್ಮೇಳನಗಳಿಗೆ ಅತಿಥಿಯಾಗಿ ಭಾಗವಹಿಸಿದ್ದೆ. ಈ ಶ್ರಮದಾಯಕ ಕಾರ್ಯಕ್ಕೆ ಈಗಲೂ ಶ್ರೀ ವಸಂತ ಭಟ್ ಹಾಗೂ ಖಬರ್ ಪತ್ರಿಕೆ ಮುಖ್ಯ ಪ್ರಚೋದಕಗಳಾಗಿ ಇವೆ.

ವಸಂತ ಭಟ್ ಅವರ ಪತ್ನಿ ಶ್ರೀಮತಿ ಪೂರ್ಣಿಮಾ ಬಾಲ್ಯದಲ್ಲಿ ಬಂಟವಾಳದ ಶಾಲೆಯಲ್ಲಿ ಶಿಕ್ಷಣ ಪಡೆದವರು. ಈ ದಂಪತಿಗಳು ಮಂಗಳೂರಿಗೆ ಬಂದಾಗಲೆಲ್ಲಾ ವಿಶ್ವ ಕೊಂಕಣಿ ಕೇಂದ್ರಕ್ಕೆ ತಪ್ಪದೆ ಭೇಟಿ ನೀಡುತ್ತಾರೆ. ಅವರು ವಿಶ್ವ ಕೊಂಕಣಿ ಕೇಂದ್ರಕ್ಕೆ ದೊಡ್ಡ ದೇಣಿಗೆಯನ್ನೂ ನೀಡಿದ್ದಾರೆ. ಪ್ರತಿವರ್ಷವೂ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಗೂ ದಾನ ನೀಡುತ್ತಿದ್ದಾರೆ. ವಸಂತ ಭಟ್ ನನ್ನ ಕೊಂಕಣಿ ಕಾರ್ಯಗಳ ಪ್ರಮುಖ ಭಾಗವಾಗಿದ್ದಾರೆ.

●●

೨೮. ಜೀವ ವಿಮಾ ಪ್ರತಿನಿಧಿಯಾಗಿ

ಬಂಟವಾಳ ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಅಧಿಕಾರಿ ಶ್ರೀ ಯು. ಲಕ್ಷ್ಮಣ(೧೯೯೮ರಲ್ಲಿ ಇವರಿಂದಲೇ ಚಿ. ದಿನೇಶನಿಗೆ ಜೀವ ವಿಮಾ ಪ್ರತಿನಿಧಿತ್ವ ದೊರೆತಿತ್ತು.) ಮತ್ತು ಆಗಿನ ಜೀವ ವಿಮಾ ಅಧಿಕಾರಿ ಶ್ರೀ ನಾವೂರು ಹರಿಶ್ಚಂದ್ರ ಭಟ್ ಅವರು ನಮ್ಮ ಮನೆಗೆ ಬಂದು ಚಿ. ದಿನೇಶನು ವಿಮಾ ವ್ಯವಹಾರ ನಡೆಸುವುದನ್ನು ನಿಲ್ಲಿಸಿದ್ದರಿಂದ ನಾನು ಪ್ರತಿನಿಧಿಯಾಗಿ ಕೆಲಸ ಮಾಡಬೇಕೆಂದು ಒತ್ತಾಯ ಮಾಡಿದರು. ನನ್ನ ಆಗಿನ ಆರ್ಥಿಕ ಕಷ್ಟದ ಆತಂಕದ ದಿನಗಳಲ್ಲಿ ಹಣ ಕೈಸೇರುವ ಯಾವುದೇ ದಾರಿ ಕಾಣಿಸದೇ ಇದ್ದುದರಿಂದ ನಾನು ಅವರ ಸೂಚನೆಯನ್ನು ಸ್ವೀಕರಿಸಿದೆ ಮತ್ತು ಜೀವವಿಮಾ ಪ್ರತಿನಿಧಿಯಾದೆ. ಆದರೆ ಇದನ್ನೂ ಹೆಚ್ಚು ಕಾಲ ಮುಂದುವರಿಸುವುದು ನನ್ನಿಂದ ಸಾಧ್ಯವಾಗಲಿಲ್ಲ. ನನಗೆ ಬಿಸಿನೆಸ್ ನೀಡಲು ಯಾರೂ ನಿರಾಕರಿಸುತ್ತಿರಲಿಲ್ಲ. ಆದರೆ ಸ್ವತಃ ನನಗೇ ಅಭಿಮಾನಿಗಳ ಬಳಿ ಹೋಗುವುದು, ಹೋಗಿ ಅವರಲ್ಲಿ ವಿಮಾ ಪಾಲಿಸಿ ಕೇಳುವುದು, ಅಥವಾ ಅವರು ಮುಂದೆ ಯಾವುದಾದರೂ ದಿನ ಅಥವಾ ತಿಂಗಳಲ್ಲಿ ಪಾಲಿಸಿ ನೀಡುವುದಾಗಿಯೂ, ಆಗ ನೀವು ಬನ್ನಿ ಎಂದು ಹೇಳಿದರೆ, ಅವರು ಹೇಳಿದ ದಿನ ಅವರಲ್ಲಿಗೆ ಹೋಗಿ ನೆನಪಿಸುವುದು ಸಾಧ್ಯವಾಗುತ್ತಿರಲಿಲ್ಲ. ನನಗೆ ಕೊಂಕಣಿ ಅಕಾಡೆಮಿ ಮತ್ತು ಕೊಂಕಣಿ ಪ್ರತಿಷ್ಠಾನದ ಪ್ರಾರಂಭಿಕ ಸಂಘಟನೆ ಮತ್ತು ತಳಹದಿಯ ಕಾರ್ಯಗಳನ್ನು ನಡೆಸುವುದು ಇದ್ದುದರಿಂದ ಎಲ್ಲಿಗೂ ಹೋಗುವುದಕ್ಕೆ, ಜನರನ್ನು ಭೇಟಿಯಾಗಿ ವ್ಯವಹಾರ ಕುದುರಿಸುವುದಕ್ಕೆ ಸಮಯವೇ ಸಿಗುತ್ತಿರಲಿಲ್ಲ. ಹೀಗಾಗಿ ನನ್ನ ಜನಸಂಪರ್ಕದ ಅಥವಾ ನನ್ನ ಕಾರ್ಯಶಕ್ತಿಯ ಪ್ರಮಾಣಕ್ಕೆ ಅನುಗುಣವಾಗಿ ವಿಮಾ ವ್ಯವಹಾರವನ್ನು ನಡೆಸುವುದು ನನಗೆ ಸಾಧ್ಯವಾಗಲಿಲ್ಲ. ವರ್ಷಕ್ಕೆ ೧೦-೧೨ ಪಾಲಿಸಿಗಳನ್ನು ಮಾಡುವುದು ಕೂಡ ಕಷ್ಟಕರವಾಯಿತು. ಜೊತೆಗೆ ನಮ್ಮ ಕೊಂಕಣಿ ಕಾರ್ಯಗಳಿಗಾಗಿ ಅನೇಕ ಅಭಿಮಾನಿಗಳ ಬಳಿ ಹೋಗಿ ಧನ ಸಹಾಯ ಬೇಡುವುದು ಇದ್ದುದರಿಂದ, ಮತ್ತೆ ನನ್ನ ವೈಯಕ್ತಿಕ ಲಾಭದ ವ್ಯವಹಾರಕ್ಕಾಗಿ ಹೋಗುವುದು ನನಗೆ ಬೇಡವೆಂದು ತೋರುತ್ತಿತ್ತು. ಅವರೇನಾದರೂ ಕೆಟ್ಟದಾಗಿ ಯೋಚಿಸಬಾರದು ಅಲ್ಲವೇ? ಇದರಿಂದ ಕೊಂಕಣಿ ಕಾರ್ಯಕ್ಕೆ ಧಕ್ಕೆ ಬರಬಹುದೆಂದು ನನಗೆ ಅನಿಸುತ್ತಿತ್ತು. ಹೀಗಾಗಿ ನನ್ನ ವಿಮಾ ವ್ಯವಹಾರ ದೊಡ್ಡ ಪ್ರಮಾಣದಲ್ಲಿ, ಅಂದರೆ ನನಗೆ ಇದ್ದಂತಹ ಸಾರ್ವಜನಿಕ ಸಂಪರ್ಕ ಮತ್ತು 'ಇಮೇಜ್'ನ ಕಾರಣದಿಂದ ಆಗಬೇಕಾಗಿದ್ದ ಪ್ರಮಾಣದಲ್ಲಿ ಆಗಲಿಲ್ಲ.

ಇದಲ್ಲದೆ, ನನ್ನ ಹತ್ತಿರದ ಸ್ನೇಹಿತರ, ಸಂಬಂಧಿಕರ ಬಳಿ ಕೇಳುವುದಕ್ಕೆ ನನಗೆ ದಾಕ್ಷಿಣ್ಯವೆನಿಸುತ್ತಿತ್ತು. ಹಾಗಿದ್ದರೂ, ಒಂದು ವಿಶಿಷ್ಟ ಘಟನೆಯನ್ನು ನಾನು ಇಲ್ಲಿ ಹೇಳಬೇಕು.

ನನ್ನ ಸಾರ್ವಜನಿಕ ಸಾಮಾಜಿಕ ಕಾರ್ಯಗಳ ಕುರಿತು, ಅದರಲ್ಲಿಯೂ ಕೊಂಕಣಿ ಮಾತೃಭಾಷೆಯ ಪ್ರಗತಿಗಾಗಿ ನಾನು ನಡೆಸುತ್ತಿರುವ ಕಾರ್ಯಗಳ ಕುರಿತು ವಿಶೇಷ ಗೌರವ ಮತ್ತು ಅಭಿಮಾನವನ್ನು ಇಟ್ಟುಕೊಂಡಿರುವ ಬೆಂಗಳೂರಿನ ಉದ್ಯಮಿ ಹಾಗೂ ಮಹಾ ದಾನಿ ಶ್ರೀ ಪಿ. ದಯಾನಂದ ಪೈಯವರಲ್ಲಿ ನಾನು ಇನ್ಶೂರೆನ್ಸ್ ಪಾಲಿಸಿ ನೀಡಬೇಕೆಂದು ಹೇಳಿದಾಗ, ನನ್ನ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಂಡ ಅವರು ಐವತ್ತು ಲಕ್ಷ ಮೊತ್ತದ ಇನ್ಶೂರೆನ್ಸ್ ಪಾಲಿಸಿ ಮಾಡುವಂತೆ ತಿಳಿಸಿದರು. ಆಗ ನಾನು ವಾರ್ಷಿಕ ಅಥವಾ ಅರ್ಧ ವಾರ್ಷಿಕ ಕಂತಿನಲ್ಲಿ ಪ್ರೀಮಿಯಮ್ ಕಟ್ಟಿದರೆ ತುಂಬಾ ಡಿಸ್ಕೌಂಟ್ ಸಿಗುತ್ತದೆ ಎಂದು ಅವರಲ್ಲಿ ಹೇಳಿದೆ. ಆಗ ದಯಾನಂದ ಪೈಯವರು ನನ್ನಲ್ಲಿ, "ಶೆಣೈಮಾಮ್, ನನಗೆ ಯಾವುದೇ ಡಿಸ್ಕೌಂಟ್ ಬೇಡ. ತಿಂಗಳು ತಿಂಗಳು ಪ್ರೀಮಿಯಮ್ ಕಟ್ಟುವಂತಾಗಬೇಕು. ಇದರಿಂದ ನಿಮಗೆ ಪ್ರತಿ ತಿಂಗಳು ನಿವೃತ್ತಿ ವೇತನ ದೊರೆಯುವ ಹಾಗೆ ಕಮಿಶನ್ ಬರುವ ಹಾಗಿದ್ದರೆ ನನಗೆ ಸಂತೋಷವಾಗುತ್ತದೆ" ಎಂದು ಹೇಳಿ ನಾನು ನೀಡಿದ ಅರ್ಜಿಯಲ್ಲಿ ಸಹಿ ಹಾಕಿ ಮೂರು ತಿಂಗಳ ಮುಂಗಡ ಪ್ರೀಮಿಯಮ್ ತುಂಬಲು ಚೆಕ್ ಕೂಡ ನೀಡಿದ್ದರು.

ಆದರೆ ಜೀವ ವಿಮಾ ನಿಗಮದ ಆಗಿನ ನಿಯಮದ ಪ್ರಕಾರ ಅವರ ಪಾಲಿಸಿ ಪ್ರಸ್ತಾಪ ಪೂರ್ಣ ರೀತಿಯಲ್ಲಿ ಸ್ವೀಕೃತವಾಗದೆ ಅದು ಕಾರ್ಯಾಗತವಾಗಲಿಲ್ಲ. ಅದರಿಂದ ನನಗೆ ತುಂಬಾ ನಷ್ಟವೂ ಆಯಿತು. ಆಮೇಲೆ ನಾನು ವಿಮಾ ಏಜೆನ್ಸಿಯನ್ನು ಬಿಟ್ಟುಬಿಟ್ಟೆ. ಶ್ರೀ ಕುಡ್ಪಿ ಜಗದೀಶ ಶೆಣೈ, ಬೆಂಗಳೂರಿನ ಶ್ರೀ ಗಣೇಶ ಬಾಳಿಗ, ದೆಹಲಿಯ ಶ್ರೀ ಪಿ. ಮಾಧವರಾಯ ಪೈ, ಶ್ರೀ ಜೆ.ಎಲ್. ಡಿಸೋಜಾ, ಶ್ರೀ ರೊನಾಲ್ಡ್ ಕೊಲಾಸೊ ಮೊದಲಾದವರು ನಾನು ಕೇಳಿದ ತಕ್ಷಣವೇ ನನಗೆ ದೊಡ್ಡ ಮೊತ್ತದ ಪಾಲಿಸಿ ನೀಡಿದ್ದನ್ನು ನಾನು ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ.

ಜೀವನದಲ್ಲಿ ಮತ್ತೆ ಕಷ್ಟದ ದಿನಗಳು

ಭಾರತದಲ್ಲಿರುವ ಸಿಂಡಿಕೇಟ್ ಬ್ಯಾಂಕಿನಲ್ಲಿ, ಅದೇ ರೀತಿ ಬೇರೆ ಬ್ಯಾಂಕುಗಳಲ್ಲಿ ಪೆನ್ಶನ್ ಸ್ಕೀಮ್ ಅನುಷ್ಠಾನಕ್ಕೆ ಬಂದಿರಲಿಲ್ಲ. ಅದು ಜಾರಿಗೆ ಬಂದದ್ದು ೧೯೯೬ನೇ ಇಸವಿ ಮಾರ್ಚ್ ತಿಂಗಳಿಂದ. ನನಗೆ ಮೊದಲ ಮಾರ್ಚ್ ತಿಂಗಳ ಪೆನ್ಶನ್ನಿನ ಮೊದಲ ಕಂತು ಮಾರ್ಚ್ ೧೫, ೧೯೯೬ರಲ್ಲಿಯೇ ಸಿಕ್ಕಿತ್ತು. ಆದರೆ ಏಪ್ರಿಲ್ ೨ನೇ ತಾರೀಖಿನಂದು ಪಾಣೆಮಂಗಳೂರು ಶಾಖೆಯ ಮೆನಜರ್ ನನಗೆ ಫೋನ್ ಮಾಡಿ ೧೯೯೩ನೇ ಇಸವಿ ನವೆಂಬರ್ ತಿಂಗಳಿಗಿಂತ ಮೊದಲು ನಿವೃತ್ತಿ ಹೊಂದಿದವರಿಗೆ ಪೆನ್ಶನ್ ಸ್ಕೀಮ್ ಅನ್ವಯಿಸುವುದಿಲ್ಲವೆಂದು ತಿಳಿಸಿದರು. ಇದರಿಂದ ಮುಂದೆ ಪೆನ್ಶನ್ ಸಿಗುವುದಿಲ್ಲವಾದದ್ದು ಮಾತ್ರವಲ್ಲ, ಮಾರ್ಚ್ ತಿಂಗಳಲ್ಲಿ ದೊರೆತಿದ್ದ ಪೆನ್ಶನ್ ಮೊತ್ತ ರೂ ೪೯೮೮/–ನ್ನು ಮತ್ತೆ ಬ್ಯಾಂಕಿಗೆ ತುಂಬಬೇಕಾಗಿ ಬಂತು. ಹೀಗೆ ಎಲ್ಲರಿಗೂ ದೊರೆತ ಭಾಗ್ಯವೊಂದು ನನಗೆ ಇಲ್ಲವಾಯಿತು.

ಆಗಿನ ದಿನಗಳು ಅತ್ಯಂತ ಕಠಿಣ ದಿನಗಳಾಗಿದ್ದವು. ಇತ್ತ ಕಡೆ ಚಿ. ಮಾಧವನ ಅಂಗಡಿ ವ್ಯಾಪಾರದ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಅತ್ತ ಕಡೆ ಚಿ. ದಿನೇಶನ ಅಂಗಡಿಯ ಹಣದ ಪರಿಸ್ಥಿತಿಯಂತೂ ಚಿಂತಾಜನಕವಾಗಿತ್ತು. ನಾನು ನಮ್ಮ ಬೇರೆ ಸಂಪಾದನೆಯಿಂದ ಆ ಅಂಗಡಿಯನ್ನು ನಡೆಸುತ್ತಿದ್ದೆ. ಹೀಗಾಗಿ ಎಲ್ಲಾ ನಿವೃತ್ತ ಸಿಬಂಧಿಗಳಿಗೆ ದೊರೆಯುವ ಪೆನ್ಶನ್ ನನಗೆ ಮಾತ್ರ ದೊರೆಯದಂತೆ ಆಗಿರುವುದು ವಿಧಿ ಸಂಕಲ್ಪವೆಂದುಕೊಂಡು ನನಗೆ ತುಂಬಾ ದುಃಖವಾಯಿತು. 'ದುರ್ಭಿಕ್ಷ ಕಾಲದಲ್ಲಿ ಅಧಿಕ ಮಾಸ ಬಂದ ಹಾಗೆ' ಆಯಿತು. ಆದರೂ ನನ್ನ ಆರಾಧ್ಯ ದೈವ ಶ್ರೀ ವೆಂಕಟರಮಣ ಸ್ವಾಮಿಯ ಮೇಲೆ ಇದ್ದಂತಹ ವಿಶ್ವಾಸ ಕಡಿಮೆಯಾಗಲಿಲ್ಲ. ಆ ದೇವರು ನನ್ನನ್ನು ಮತ್ತು ನನ್ನ ಮಕ್ಕಳನ್ನು ಈ ದಯನೀಯ ಪರಿಸ್ಥಿತಿಯಿಂದ ಪಾರು ಮಾಡುತ್ತಾನೆ ಎಂಬ ನಂಬಿಕೆ ಇತ್ತು.

ಆ ಸಮಯದಲ್ಲಿ ನಾನು ನನ್ನ ದಿನಚರಿಯಲ್ಲಿ "ಕೆಟ್ಟಿರುವ ಪರಿಸ್ಥಿತಿ ಇನ್ನೂ ಕೆಡುವುದರ ಕಡೆಗೆ ಸಾಗುತ್ತಿದೆ. ತಲೆ ಬಿಸಿಯಾಗುತ್ತಲಿದೆ. ಆರ್ಥಿಕ ಪರಿಸ್ಥಿತಿಯಲ್ಲಿ ಕತ್ತಲೆ ದಟ್ಟವಾಗಿ ತುಂಬಿಕೊಳ್ಳುತ್ತಲಿದೆ. ತಲೆ ಕೆಟ್ಟು ಹೋಗಿದೆ. ಏನು ಮಾಡುವುದೆಂದೇ ತೋಚುತ್ತಿಲ್ಲ. ಒಟ್ಟಾರೆ ಭಯ ಭಯವೆನಿಸುತ್ತದೆ. ಎತ್ತ ನೋಡಿದರೂ ಕತ್ತಲೆಯಲ್ಲದೆ ಬೆಳಕು ಗೋಚರವಾಗುತ್ತಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿ ನಿಕೃಷ್ಟಾವಸ್ಥೆಗೆ ತಲುಪಿದೆ. ಇದಲ್ಲದೆ ಬ್ಯಾಂಕ್ ಸಾಲವನ್ನು ತೀರಿಸುವ ದಾರಿಯೇ ಕಾಣುತ್ತಿಲ್ಲ. ಉಳಿದ ಸಾಲಗಳು ಕೂಡ ಹಾಗೆಯೇ ಇವೆ" ಹೀಗೆ ಒಮ್ಮೆ ಬರೆದಿದ್ದೆ.

ಇದೇ ಹೊತ್ತಿನಲ್ಲಿ ಸಿಂಡಿಕೇಟ್ ಬ್ಯಾಂಕಿನಿಂದ ಚಿ. ದಿನೇಶನ ಅಂಗಡಿಗಾಗಿ ಪಡೆದ ಸಾಲವನ್ನು ತುಂಬುವ ಸಮಯ ಬಂತು. ಇಲ್ಲದಿದ್ದರೆ ನ್ಯಾಯಾಲಯಕ್ಕೆ ಹೋಗುವ ಪರಿಸ್ಥಿತಿ. ಆಗ ನಮ್ಮ ಶ್ರೀ ಜೆ. ಸುಬ್ರಾಯ ಭಟ್ ಭಾವನವರು ಮೂರು ಲಕ್ಷ ರೂ ಸಾಲ ನೀಡಿದ್ದರಿಂದ ಬ್ಯಾಂಕಿಗೆ ಆ ಮೂರು ಲಕ್ಷ ರೂ ತುಂಬಿ ಬ್ಯಾಂಕ್ ಸಾಲ ತೀರಿಸಲಾಯಿತು. ಮುಂದೆ ನಾನು ಶ್ರೀ ಸುಬ್ರಾಯ ಭಾವನವರಿಗೆ ನನ್ನ ತುಂಬೆಯ ತೋಟದಲ್ಲಿ ೩೫ ಸೆಂಟ್ಸ್ ಜಾಗವನ್ನು ಮಾರಿ ಅವರ ಸಾಲವನ್ನೂ ತೀರಿಸಿದೆ. ಈಗ ನನಗೆ ಎಲ್ ಐ ಸಿಯ ಕಮಿಷನ್‌ನಿಂದ ಜೀವನ ಸಾಗಿಸುವ ಒಂದೇ ದಾರಿ ಉಳಿದಿತ್ತು.

ಸೆಪ್ಟೆಂಬರ್ ೯, ೧೯೯೬ರಲ್ಲಿ ಚಿ. ದಿನೇಶನ ಪತ್ನಿ ಚಿ. ಶೋಭಾ ದೆಹಲಿಯ ತನ್ನ ತೌರುಮನೆಯಲ್ಲಿ ಗಂಡುಮಗುವಿಗೆ ಜನ್ಮ ನೀಡಿದಳು. ನಾವು ಮಗುವಿಗೆ ಆನಂದ ಎಂದು ನಾಮಕರಣ ಮಾಡಿದೆವು.

ಈ ಸಮಯದಲ್ಲಿ ನನ್ನ ಆರ್ಥಿಕ ಪರಿಸ್ಥಿತಿ ತುಂಬಾ ಕೆಟ್ಟದ್ದಾಗಿದ್ದುದನ್ನು ಮೊದಲೇ ಬರೆದಿದ್ದೇನೆ. ಚಿ. ಮಾಧವನ ಮತ್ತು ಚಿ. ದಿನೇಶನ ವ್ಯಾಪಾರ ವ್ಯವಹಾರದಲ್ಲಿಯೂ ಕಷ್ಟದ ಪರಿಸ್ಥಿತಿ ಇದ್ದುದರಿಂದ, ಹಾಗೂ ತತ್ಕಾಲದಲ್ಲಿ ಈ ಪರಿಸ್ಥಿತಿಯಿಂದ ಹೊರಗೆ ಬರಲು ಬೆಳಕು ಕಾಣದೆ ಹಣದ ದೃಷ್ಟಿಯಿಂದ ತುಂಬಾ ಕಷ್ಟದಲ್ಲಿ ಇದ್ದೆನು. ಆದರೂ ಆ ದಿನಗಳಲ್ಲಿ ಶ್ರೀ ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರು ಬಂಟವಾಳದಲ್ಲಿ ನೀಡಿದ್ದ ಪ್ರವಚನ

ವೊಂದರಲ್ಲಿ ಉಪದೇಶ ನೀಡುವಾಗ ಹೇಳಿದ ಹಾಗೆ, ನಮ್ಮ ಆರಾಧ್ಯ ದೈವ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವರ ಮೇಲಿದ್ದ ಅನನ್ಯ ವಿಶ್ವಾಸ ಯಾವುದೇ ಕಾರಣಕ್ಕಾಗಿ ಕಡಿಮೆ ಆಗಿರಲಿಲ್ಲ. ಇಷ್ಟೆಲ್ಲಾ ಕಷ್ಟಗಳನ್ನು ಆ ದೇವರು ನನ್ನ ಪರೀಕ್ಷೆ ಮಾಡುವುದಕ್ಕಾಗಿಯೇ ನೀಡಿದ್ದಾನೆ ಮತ್ತು ಆ ದೇವರೇ ನನ್ನನ್ನು ಈ ಸಂಕಷ್ಟದಿಂದ ಪಾರು ಮಾಡುತ್ತಾನೆ ಎಂಬ ವಿಶ್ವಾಸ ಇತ್ತು. ಆ ವಿಶ್ವಾಸದ ನಿಮಿತ್ತವಾಗಿಯೇ ನನ್ನ ಅನೇಕ ಹಿತೈಷಿಗಳು – 'ಆ ಜ್ಯೋತಿಷಿಗೆ ಜಾತಕ ತೋರಿಸಿ, ಮತ್ತೊಬ್ಬ ಜೋತಿಷಿಗೆ ಕೈ ತೋರಿಸಿ ಭವಿಷ್ಯ ತಿಳಿದುಕೊಳ್ಳುವಂತೆ, ಕವಡೆ ಹಾಕಿ ಪ್ರಶ್ನೆ ಕೇಳಿದರೆ ಒಳ್ಳೆಯದು, ಇಂತಿಂತಹ ದೇವಳಗಳ ದರ್ಶನದಲ್ಲಿ ಭವಿಷ್ಯ ತಿಳಿಸುತ್ತಾರೆ, ಮುಂದಿನ ದಿನಗಳಲ್ಲಿ ಯಾವಾಗ ಈ ಕತ್ತಲೆಯಿಂದ ಹೊರಗೆ ಬರುತ್ತೇನೆ ಎಂದು ಕೇಳಿ ನೋಡು'– ಮುಂತಾದ ಸಲಹೆ ಸೂಚನೆಗಳನ್ನು ನೀಡಿದ್ದರೂ, ನನಗೆ ಮಾತ್ರ ಅವರ ಸಲಹೆಯಂತೆ ಜಾತಕ ತೋರಿಸುವುದಾಗಲೀ, ಹಸ್ತ ಸಾಮುದ್ರಿಕೆ ನೋಡುವುದಾಗಲೀ ಅಥವಾ ದೈವ ದರ್ಶನಕ್ಕೆ ಹೋಗುವುದಾಗಲೀ ಮನಸ್ಸಿಗೆ ಬರಲಿಲ್ಲ. ಏನೇ ಆದರೂ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ದೇವರೇ ನನಗೆ ಈಗ ಬಂದಂತಹ ಆರ್ಥಿಕ ಸಂಕಟದಿಂದ ಪಾರು ಮಾಡುತ್ತಾನೆ ಎಂಬ ಧ್ಯೇಯ ವಾಕ್ಯ ಮನಸ್ಸಿಗೆ ಬರುತ್ತಿತ್ತೇ ವಿನಹ ಬೇರೆ ಯಾವುದೇ ದೇವರಿಗೆ ಅಥವಾ ದೈವಗಳ 'ದರ್ಶನಗಳಿಗೆ' ಹೋಗುವ ಮನಸ್ಸಾಗುತ್ತಿರಲಿಲ್ಲ.

ಒಂದು ದಿನ ಮುಂಜಾನೆ ನಾಲ್ಕು ಗಂಟೆಗೆ ನನ್ನ ಅತ್ಯಂತ ಪ್ರಿಯ ಸ್ನೇಹಿತ, ಹಿತೈಷಿ ಹಾಗೂ ಕಷ್ಟಕ್ಕೆ ಒದಗುವ, ಬಂಟವಾಳ ಸಮಾಜದ ಮುಖಂಡರಾದ ಶ್ರೀ ಎಂ. ವೇದವ್ಯಾಸ ಪ್ರಭು ತಮ್ಮ ಮಗ ವಿನಾಯಕನ ಬಳಿ ನಾನು ತಕ್ಷಣ ಸ್ನಾನ ಮಾಡಿ ಹೊರಟು ಕಾರಿನಲ್ಲಿ ಬರಬೇಕು, ಪರವೂರಿಗೆ ಹೋಗುವುದು ಇದೆ ಎಂದು ತಿಳಿಸಿ ನಮ್ಮ ಮನೆಗೆ ಕಾರು ಕಳುಹಿಸಿಕೊಟ್ಟಿದ್ದರು. ನಾನು ಕೂಡ ವೆದ್ದು ಭಾವನವರು ಅವರ ಜೊತೆಯಲ್ಲಿ ಯಾವುದೋ ಒಳ್ಳೆಯ ಕೆಲಸಕ್ಕೆ ಪರವೂರಿಗೆ ಪ್ರಯಾಣ ಮಾಡಲು ನನಗೆ ಕಾರು ಕಳುಹಿಸಿಕೊಟ್ಟಿರಬೇಕು ಎಂದುಕೊಂಡು ಬೇಗ ಬೇಗ ಸ್ನಾನ ಮಾಡಿ ಬಟ್ಟೆ ತೊಟ್ಟು ಅವಸರದಿಂದ ಹೊರಟು ಹೋದೆ.

ಬಂಟವಾಳದಲ್ಲಿರುವ ಅವರ ಮನೆಗೆ ಹೋದ ಬಳಿಕವೇ ನನಗೆ ಇವತ್ತು ವೆದ್ದು ಭಾವನವರ ಜೊತೆಯಲ್ಲಿ ಚಿಕ್ಕಮಗಳೂರಿನ ಕೊಪ್ಪಕ್ಕೆ ಹೋಗುವುದು ಇದೆ ಎಂದು ತಿಳಿದು ಬಂತು. ಕಾರಿನಲ್ಲಿ ಕುಳಿತು ಹೋಗುತ್ತಿರುವಾಗ ಅವರು ತಮ್ಮ ಯಾವುದೋ ಒಂದು ಯೋಜನೆಯ ವಿಚಾರವಾಗಿ ಪ್ರಸ್ತಾಪಿಸಲು ಕೊಪ್ಪ ಊರಿನ ಪ್ರಸಿದ್ಧ ಜ್ಯೋತಿಷಿಗಳ ಬಳಿ ಹೋಗುತ್ತಿದ್ದೇನೆ, ಅವರ ಬಳಿ ನನ್ನ ಕಷ್ಟವೂ ಯಾವಾಗ ನಿವಾರಣೆಯಾಗುತ್ತದೆ ಹೀಗೆ ಪ್ರಶ್ನೆ ಕೇಳೋಣ ಎಂದುಕೊಂಡು ನನ್ನನ್ನು ಜೊತೆಗೂಡಿಸಿ ಕರೆದುಕೊಂಡಿದ್ದೇನೆ ಎಂದು ತಿಳಿಸಿದರು. ನನ್ನ ಆಪ್ತಮಿತ್ರರಾದ ಶ್ರೀ ವೆದ್ದು ಭಾವನವರಿಗೆ ನನ್ನ ಮೇಲೆ ಅಷ್ಟೊಂದು ಕಳಕಳಿ ಇದ್ದುದರಿಂದ, ನನ್ನ ಕಷ್ಟ ನಿವೃತ್ತಿಯಾಗಬೇಕು ಎಂಬ ಉತ್ತಮ ಉದ್ದೇಶವನ್ನು ಇಟ್ಟುಕೊಂಡು, ನನ್ನನ್ನೂ ಜ್ಯೋತಿಷಿಗಳ ಬಳಿ ಕರೆದುಕೊಂಡು ಹೋಗುತ್ತಿದ್ದಾರೆ ಎಂದು ನನಗೆ ನಂಬಿಕೆ ಬಂತು. ಇಲ್ಲದಿದ್ದರೆ ನಮ್ಮವರು ಎಂದುಕೊಂಡವರು ಈ ರೀತಿ ಮಾಡುವರೇ?

ಅಂದು ಸೆಪ್ಟೆಂಬರ್ ೨೨, ೧೯೯೬, ಭಾನುವಾರ, ಕೊಪ್ಪ ನಿವಾಸಿಯಾಗಿದ್ದ ಶ್ರೀ ಆಗುಂಬೆ ಶ್ಯಾಮಸುಂದರ ಎಂಬ ಜ್ಯೋತಿಷಿಗಳ ಬಳಿ ಜಾತಕ ತೋರಿಸಿ ಪ್ರಶ್ನೆ ಇಡಲಾಯಿತು. ಅವರು ಪ್ರಶ್ನೆ ಇಟ್ಟು, "ನಿಮಗೆ ನಿಮ್ಮ ಜೀವನದ ಅತಿ ಕಷ್ಟಕಾಲ ಬಂದಿದೆ. ನೀವು ಇದುವರೆಗೆ ಯಾರಿಗೂ ನಿಮ್ಮ ಜಾತಕವನ್ನು ತೋರಿಸಿಲ್ಲವೇ? ಪ್ರಶ್ನೆ ಇಡುವುದು ಅಥವಾ ದೈವ ದರ್ಶನಕ್ಕೆ ಹೋಗಿ ಕೇಳಿದ್ದು ಇಲ್ಲವೇ? ನಿಮ್ಮ ಜಾತಕ ನೋಡಿದರೆ ಮತ್ತು ಪ್ರಶ್ನೆಯಲ್ಲಿ ಏನನ್ನು ಹೇಳಲಾಗುತ್ತದೆ ಎಂದರೆ ನೀವು ಈ ದಿನಗಳಲ್ಲಿ ಊರು ಬಿಟ್ಟು ಓಡಿ ಹೋಗಬೇಕಿತ್ತು. ನೀವು ಇಂತಹ ಕಷ್ಟಗಳ ನಿವೃತ್ತಿಗಾಗಿ ಯಾಕೆ ಪ್ರಯತ್ನಪಟ್ಟಿಲ್ಲ? ಪ್ರಶ್ನೆಯಲ್ಲಿ ತುಂಬಾ ಕಠಿಣ ಪರಿಸ್ಥಿತಿ ಕಾಣುತ್ತಿದೆ," ಎಂದು ಹೇಳಿದರು.

ಅದಕ್ಕೆ ನಾನು ಹೀಗೆ ಹೇಳಿದೆ, "ನನಗೆ ಪ್ರಾಯ ಬಂದಾಗ ನಮ್ಮ ಊರಿನಲ್ಲಿ ಒಮ್ಮೆ ಶ್ರೀ ಕಾಶೀಮಠ ಗುರುವರ್ಯರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ಅವರ ಪ್ರವಚನದಲ್ಲಿ, 'ನಿಮ್ಮ ಬಂಟವಾಳ ಊರಿನ ಹಿರಿಯರು ಪ್ರಾಚೀನ ಕಾಲದಿಂದ ಇಲ್ಲಿ ದೇವಸ್ಥಾನವನ್ನು ಕಟ್ಟಿ, ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ವಿಗ್ರಹವನ್ನು ಕಾಶೀಮಠದ ಗುರುವರ್ಯರಿಂದ ಪ್ರಾಣ ಪ್ರತಿಷ್ಠೆ ಮಾಡಿಸಿ ಸ್ಥಾಪನೆ ಮಾಡಿದ್ದಾರೆ. ನೀವು ಈ ದೇವರಿಗೇ ಅನನ್ಯ ಶರಣಾಗತಿ ಬಂದು ಶ್ರದ್ಧೆ, ಭಕ್ತಿಯಿಂದ ಆರಾಧನೆ ನಡೆಸಿಕೊಂಡು ಬರಬೇಕು. ನಿಮ್ಮ ಕುಟುಂಬದ, ಊರಿನ ಜನರ ರಕ್ಷಣೆಯನ್ನು ಆ ದೇವರೇ ಮಾಡುವನು. ಆ ದೇವರಲ್ಲದೆ ಬೇರೆ ಯಾವುದೇ ದೇವರು ಅಥವಾ ದೈವಗಳು ನಿಮಗೆ ರಕ್ಷಣೆ ನೀಡರು. ನಿಮಗೆ ಆ ದೇವರೇ ಸುಖ, ಸಂತೋಷವನ್ನು ನೀಡುವನು ಮತ್ತು ಕಷ್ಟ ಬಂದ ಕಾಲದಲ್ಲಿ

ಅದನ್ನೂ ಆ ದೇವರೇ ನಿಮ್ಮನ್ನು ಪರೀಕ್ಷೆ ಮಾಡಲು ಕಷ್ಟವನ್ನು ನೀಡಿದ್ದಾನೆ ಎಂದು ತಿಳಿದು, ಹೇ ದೇವರೇ! ನಿನಗೇ ನಾನು ಶರಣು ಬಂದಿದ್ದೇನೆ. ನನ್ನನ್ನು ಈ ಕಷ್ಟ, ಸಂಕಷ್ಟಗಳಿಂದ ಪಾರು ಮಾಡು' ಎಂದು ಬೇಡಿ ನಿವೃತ್ತಿ ಪಡೆಯಲು ನೋಡಬೇಕು. ಆ ದೇವರು ಖಂಡಿತವಾಗಿಯೂ ನಿಮಗೆ ಬಂದ ಕಷ್ಟದಿಂದ ನಿಮ್ಮನ್ನು ಪಾರು ಮಾಡುತ್ತಾನೆ. ಈ ದೇವರು ಪಾರು ಮಾಡದ್ದಿದ್ದರೆ ಬೇರೆ ಯಾವುದೇ ಊರಿನ ದೇವರು ಅಥವಾ ದೈವ ಪಾರು ಮಾಡುವುದಿಲ್ಲ – ಯಾಕೆಂದರೆ ಅಲ್ಲಿರುವ ದೇವರು ಕೂಡ ಇವನೇ. ಹೀಗಾಗಿ ನಿಮಗೆ ಕಷ್ಟ ಬಂದ ಸಮಯದಲ್ಲಿ ಈ ದೇವರ ಮೇಲೆ ಇದ್ದಂತಹ ನಿಷ್ಠೆಯನ್ನು ತೊರೆದು, ಬೇರೆಡೆ ಕಷ್ಟ ನಿವಾರಣೆ ಆಗಬಹುದು ಎಂಬ ಚಂಚಲತೆ ಬರಬಾರದು. ಅದು ಒಳ್ಳೆಯದಲ್ಲ," ಹೀಗೆ ಹೇಳಿದ್ದು ನನ್ನ ಮನಸ್ಸಿನಲ್ಲಿ ದೃಢವಾಗಿ ಛಾಪು ಮೂಡಿಸಿದೆ. ಹೀಗಾಗಿ ನನ್ನ ಕಷ್ಟ ನಿವಾರಣೆ ಮಾಡುವುದಕ್ಕೆ ನಾನು ನನ್ನ ದೇವರ ಬಳಿಯೇ ಶರಣು ಹೋಗುವೆನಲ್ಲದೆ, ನನಗೆ ಬೇರೆ ಯಾವುದೇ ಆಲೋಚನೆ ಎಂದಿಗೂ ಬಂದಿರುವುದಿಲ್ಲ" ಎಂದು ಆ ಜ್ಯೋತಿಷಿಗೆ ಹೇಳಿದೆ.

ಅವರಿಗೆ ತುಂಬಾ ಆಶ್ಚರ್ಯವಾಯಿತು. ಅವರು ವಿಸ್ಮಯಪಟ್ಟು "ನಿಮ್ಮ ಧೈರ್ಯ ಮತ್ತು ವಿಶ್ವಾಸಕ್ಕೆ ನಾನು ಮನ್ನಣೆ ನೀಡುತ್ತೇನೆ. ಯಾಕೆಂದರೆ ಬೇರೆ ಯಾರೇ ಆಗಿದ್ದರೂ ಹೆದರಿಕೊಂಡು ಇರುವಂತಹ ಸಮಯದಲ್ಲಿ ನೀವು ದಿನ ಕಳೆಯುತ್ತಿದ್ದೀರಿ. ಆದರೂ ನಿಮಗೆ ಒಂದು ಚಿಕ್ಕ ನಿವಾರಣೆಯನ್ನು ಹೇಳುತ್ತೇನೆ. ನೀವು ನವರಾತ್ರಿ ದಿನಗಳಲ್ಲಿ ನಿಮ್ಮ ಮನೆಗೆ ವೈದಿಕರನ್ನು ಕರೆಯಿಸಿಕೊಂಡು ಶ್ರೀದುರ್ಗಾ ನಮಸ್ಕಾರ ಮಾಡಿಸಬೇಕು" ಎಂದು ಹೇಳಿದರು. ಅದಕ್ಕೆ ನಾನು ಏನು ಹೇಳಿದೆನೆಂದರೆ, "ಅವೆಲ್ಲವನ್ನು ಮಾಡಲು ನನಗೆ ಆರ್ಥಿಕವಾಗಿ ಸಾಧ್ಯವಾಗದು. ಅಲ್ಲದೆ ನನ್ನ ಮನೆ ಇರುವುದು ಬಂಟವಾಳದಿಂದ ಅನತಿ ದೂರದಲ್ಲಿರುವ ತುಂಬೆ ಎಂಬ ಗ್ರಾಮಾಂತರ ಪ್ರದೇಶದಲ್ಲಿ. ನವರಾತ್ರಿ ದಿನಗಳಲ್ಲಿ "ಶ್ರೀದುರ್ಗಾ ನಮಸ್ಕಾರ" ವ್ರತಕ್ಕೆ ಬೇಕಾಗಿರುವ ವೈದಿಕರು ಬಂಟವಾಳ ದೇವಾಲಯದಿಂದ ಬರಲಾರರು. ಹೀಗಾಗಿ ಯಾವುದಾದರೂ ಸಣ್ಣ ವ್ರತ ಇತ್ಯಾದಿ ಕಾರ್ಯಗಳನ್ನು ಮಾಡಬಹುದು" ಎಂದು ಹೇಳಿದೆ. ಅದಕ್ಕೆ ಅವರು "ಅದು ಹೌದು. ನೀವು ಯಾರಾದರೂ ಒಬ್ಬ ವೈದಿಕರನ್ನು ಮನೆಗೆ ಕರೆಯಿಸಿ ಒಂಬತ್ತು ದಿನಗಳ ಕಾಲ ಶ್ರೀ ದುರ್ಗಾಪಾರಾಯಣ ನಡೆಸಿದರೆ, ನಿಮ್ಮ ಭಕ್ತಿ, ನಂಬಿಕೆಗಳಿಗೆ ಆ ದೇವರು ಸಲ್ಲುತ್ತಾನೆ ಮತ್ತು ನಿಮ್ಮ ಕಷ್ಟದ ದಿನಗಳು ಕಳೆದು ಬೆಳಕು ಬರುವುದು" ಎಂದು ಹೇಳಿದರು. ಶ್ರೀ ದುರ್ಗಾಪಾರಾಯಣದ ಮಂಗಳ ಕಾರ್ಯಕ್ಕೆ ವೈದಿಕರಿಗೆ ಧೋತಿ ಮತ್ತು ಅವರ ಪತ್ನಿಗೆ ಸುಹಾಸಿನಿಯರ ಮಂಗಳ ದ್ರವ್ಯ ಮತ್ತು ಪುಟ್ಟ ಹುಡುಗಿಯರಿಗೆ ಉಡುಗೊರೆ ನೀಡುವುದು ಇದೆ. ಆ ದಿನಗಳಲ್ಲಿ ನನಗೆ ಅದು ಹೆಚ್ಚು ಕಷ್ಟವಾಗಲಾರದು ಎಂದು ಜ್ಯೋತಿಷಿ ತಿಳಿಸಿದರು.

ಹೀಗಾಗಿ ಆ ವರ್ಷ ನವರಾತ್ರಿ ದಿನಗಳಲ್ಲಿ, ಅಂದರೆ ಅಕ್ಟೋಬರ್ ೧೩, ೧೯೬೭ರಿಂದ ಒಂಬತ್ತು ದಿನಗಳ ಕಾಲ ನಮ್ಮ ಪುರೋಹಿತರಾದ ವೇದಮೂರ್ತಿ ಶ್ರೀ ಮುರಳೀಧರ ಭಟ್ ಸಂಜೆ ಹೊತ್ತು ನಮ್ಮ ಮನೆಗೆ ಬಂದು ಶ್ರೀ ದುರ್ಗಾದೇವಿಯ ಸ್ತೋತ್ರ ಪಾರಾಯಣ ಮಾಡಿ ಹೋಗುತ್ತಿದ್ದರು. ಅದು ಇಂದಿಗೂ ನವರಾತ್ರಿ ದಿನಗಳಲ್ಲಿ ಚಲಾವಣೆಯಲ್ಲಿ ಇದೆ. ಕೊನೆಯ ದಿನ ಶ್ರೀ ಗಣಹೋಮ, ಪಾರಾಯಣ ಮತ್ತು ಹೊಸತು ಊಟ ಮಾಡುವ ಕಾರ್ಯಕ್ರಮ ಮಾಡುತ್ತೇವೆ. ಹೊಸತು ಊಟವೆಂದರೆ ಬಂಟವಾಳದ ಶ್ರೀ ದೇವರ ಹೊಲದಿಂದ ತೆನೆ ಬಿಟ್ಟ ಭತ್ತದ ಎಳೆಸಸಿಗಳನ್ನು ತಂದು ಅದಕ್ಕೆ ಪೂಜೆ ಮಾಡಿ, ಪೂಜಿಸಿದ ಸಸಿಗಳನ್ನು ಅಕ್ಕಿ ತುಂಬಿಸಿಡುವ ಪಾತ್ರೆಗೆ, ಮುಂಬಾಗಿಲಿನ ಚೌಕಟ್ಟಿಗೆ ಮತ್ತು ಬೀರುವಿಗೆ ಕಟ್ಟಿ, ಹೊಸ ಅಕ್ಕಿಯ ಅನ್ನ ಮಾಡಿ ಊಟ ಮಾಡುವುದು.

ಆ ವರ್ಷದ ದಿನಚರಿಯಲ್ಲಿ ೭–೮ ಬಾರಿ, "ಕೈಯಲ್ಲಿ ನಯಾಪೈಸೆ ಕೂಡ ಇಲ್ಲವಾಗಿದೆ, ನಮ್ಮ ಹಣದ ಪರಿಸ್ಥಿತಿ ಕತ್ತಲೆಯಲ್ಲಿ ಇದೆ" ಎಂದು ಬರೆದಿರುವುದು ಇದೆ. ಯಾವುದೇ ದಿಕ್ಕಿನಿಂದ ಬೆಳಕು ಕಾಣಿಸದೆ, "ಹೇ ವೆಂಕಟರಮಣಾ ನಮ್ಮನ್ನು ಈ ಪರಿಸ್ಥಿತಿಯಿಂದ ಪಾರು ಮಾಡು" ಎಂದು ಬೇಡಿ ಬರೆದಿರುವುದು ಕಾಣುತ್ತದೆ. ಅಂತಹ ಕಠಿಣ ಪರಿಸ್ಥಿತಿಯಲ್ಲಿ ಆ ದಿನಗಳು ಸಾಗಿದ್ದವು.

ಬದುಕಿನ ಕಷ್ಟ ನಿವಾರಣೆ

ಪ್ರಾಯಶಃ, ಬದುಕಿನಲ್ಲಿದ್ದ ಕಷ್ಟ ಪರಿಹಾರವಾಗುವ ದಿನಗಳು ಬಂದವು ಎಂದು ತೋರುತ್ತದೆ. ಜುಲೈ ೯, ೧೯೬೮ರಂದು ಜೋಡುಮಾರ್ಗ ಶ್ರೀ ಮರಕಡ ಶ್ರೀನಾಥ ಪ್ರಭು ಅವರ ಮನೆಯಲ್ಲಿ "ಶ್ರೀ ಲಕ್ಷ್ಮೀನಾರಾಯಣ ಹೃದಯ" ಹವನ ಇತ್ತು. ನನಗೂ ಅವರಲ್ಲಿ ಪೂರ್ಣಾಹುತಿ ಮತ್ತು ಆರತಿಗೆ ಬರುವಂತೆ ಆಮಂತ್ರಣವಿತ್ತು. ಅಲ್ಲಿ ಉತ್ತರ ಕನ್ನಡ ಜಿಲ್ಲೆಯ ಮಾದನಗೇರಿ ಶ್ರೀ ಮಹಾಲಸಾ ದೇವಿ(ಮ್ಹಾಳಶಿ)ಯ ದೇವಸ್ಥಾನದ ಸಿಂಹಪುರುಷನ ದರ್ಶನ ಕಾರ್ಯಕ್ರಮ ಇತ್ತು. ನಾನು ಈ ರೀತಿಯ ದರ್ಶನವನ್ನು(ದೈವ ಆವಾಹನೆ)

ನೋಡುವುದು ಪ್ರಥಮ ಬಾರಿಗೆ. ಶ್ರೀನಾಥ ಭಾವನವರು ನನ್ನಲ್ಲಿ ಶ್ರೀ ದೇವಿಯಲ್ಲಿ ಏನಾದರೂ ಕೇಳುವುದಿದ್ದರೆ ಕೇಳಬಹುದು ಎಂದರು. ಆಗ ನಾನು ನನ್ನ ಕಷ್ಟವನ್ನು ದರ್ಶನದಲ್ಲಿ ನಿರೂಪಿಸಿದೆ. ಆಗ ದರ್ಶನದಲ್ಲಿ, "ಈ ವರ್ಷದ ಕಾರ್ತಿಕ ಮಾಸ ಬರುವುದರೊಳಗೆ ನಿನ್ನ ಎಲ್ಲಾ ಕಷ್ಟಗಳು ನಿವಾರಣೆ ಹೊಂದಿ ಸಾಲ ತೀರುತ್ತದೆ. ಕಾರ್ತಿಕದಲ್ಲಿ ಗೋಕರ್ಣದ ಬಳಿ ಇರುವ ಮಾದನಗೇರಿ ದೇವಸ್ಥಾನಕ್ಕೆ ಹೋಗಿ ೧೦೧ ತೆಂಗಿನಕಾಯಿಗಳನ್ನು ನೀಡಬೇಕು" ಎಂಬ ಅಭಯ ದೊರೆತದ್ದು ನನ್ನ ಭಾಗ್ಯ.

ಶ್ರೀದೇವಿಯ ಅಭಯ ಸಿಕ್ಕಿದ ಕೆಲವೇ ದಿನಗಳಲ್ಲಿ, ಆಗಸ್ಟ್ ೧, ೧೯೯೮ರಂದು ನನ್ನ ಓರ್ವ ಅಭಿಮಾನಿ ಶ್ರೀ ಬಿ. ಅಣ್ಣಪ್ಪ ಹೆಗ್ಡೆಯವರು(ವೇದವ್ಯಾಸ ಪ್ರಭು ಅವರ ಸೋದರಳಿಯ) ನಮ್ಮ ಅಂಗಡಿಯನ್ನು ಖರೀದಿಸಿದ್ದರಿಂದ ನಮ್ಮ ಚಿ. ದಿನ್ನುವಿನ ಅಂಗಡಿಯು ಸಾಲ ತೀರಿಸುವಂತಾಯಿತು.

ಅದಲ್ಲದೆ, ನನ್ನ ೩.೫ ಎಕರೆ ಜಮೀನಿನಲ್ಲಿ ೩೦ ಸೆಂಟ್ಸ್ ಜಾಗವನ್ನು ನಮ್ಮ ಶ್ರೀ ಜೆ. ಸುಬ್ರಾಯ ಭಟ್ಟ ಭಾವನವರಿಗೆ ಮಾರಾಟ ಮಾಡಿ, ಸಿಂಡಿಕೇಟ್ ಬ್ಯಾಂಕ್ ಸಾಲವನ್ನು ತೀರಿಸಲು ಅವರಿಂದ ಪಡೆದ ಸಾಲದ ಋಣದಿಂದಲೂ ಮುಕ್ತನಾದೆ. ಹೀಗಾಗಿ ಬದುಕಿನಲ್ಲಿ ಒಮ್ಮೆ ಯಾವುದೇ ಸಾಲ ಇಲ್ಲದ ಹಾಗೆ ಭಾಸವಾಗತೊಡಗಿತು. ಶ್ರೀ ಮಹಾಲಸಾ ದೇವಿಯ ಸಿಂಹಪುರುಷನ ದರ್ಶನದಲ್ಲಿ ಹೇಳಿದ ಅಭಯದಿಂದ ಹಣದ ಪ್ರಶ್ನೆಯು ಬಹುತೇಕ ತಿಳಿಯಾಗತೊಡಗಿತು. ಬದುಕಿನಲ್ಲಿ ನಿಶ್ಚಿಂತೆಯ ಭಾವ ಮೂಡಿತು. ನನ್ನ ಆರಾಧ್ಯ ದೇವರಾದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಬಳಿ ೧೯೯೩ರಿಂದ ಬೇಡಿ ಬಂದದ್ದರಿಂದ ಆ ದೇವನು ನನ್ನನ್ನು ಋಣಮುಕ್ತನಾಗಿ ಮಾಡಿದನೆಂಬ ನಂಬಿಕೆ ಸ್ಥಿರವಾಯಿತು.

ನಮ್ಮ ತೋಟದ ತೆಂಗಿನಮರಗಳಿಗೆ ಬಾವಿಯ ನೀರು ಸಾಕಾಗುತ್ತಿರಲಿಲ್ಲ. ಅದಕ್ಕಾಗಿ ಬೋರವೆಲ್ ತೆಗೆಸಿದರೆ ಉತ್ತಮವೆಂದು ನಮ್ಮ ನೆರೆಮನೆಯ ಸಂಜೀವರು ತಿಳಿಸಿದ್ದರು. ನನಗೆ ಅದು ಸರಿಯೆಂದು ಕಂಡಿತು. ಅದಕ್ಕಾಗಿ ಮಂಗಳೂರು ರಥಬೀದಿಯ ಕಾರ್ಪೊರೇಶನ್ ಬ್ಯಾಂಕಿನಲ್ಲಿ ಮಾತನಾಡಿ ೨೧,೦೦೦ ಸಾವಿರ ಸಾಲ ಪಡೆದು ಬೋರವೆಲ್ ತೆಗೆಸಿದೆ. ಸುಮಾರು ೬೦ ಅಡಿ ಆಳಕ್ಕೆ ಹೋಗುವಷ್ಟರಲ್ಲಿ ಬಹಳ ರಭಸದಿಂದ ನೀರು ಉಕ್ಕಿ ಬಂತು.

ಹೀಗಿರುವಾಗಲೇ ಬ್ಯಾಂಕಿನಲ್ಲಿ ೧೯೯೩ಕ್ಕಿಂತ ಮೊದಲು ಸ್ವಯಂ ನಿವೃತ್ತಿ ಪಡೆದ ಸಿಬಂದಿಗಳಿಗೂ ನಿವೃತ್ತಿ ವೇತನವನ್ನು ಬ್ಯಾಂಕ್ ನೀಡಬೇಕೆಂದು ಸರ್ವೋಚ್ಚ ನ್ಯಾಯಾಲಯದಿಂದ ಆದೇಶ ಬಂದಿರುವ ಸಂತಸದ ಸುದ್ದಿ ಕೇಳಿ ಬಂತು. ಜುಲೈ ೧೧, ೨೦೦೦ ರಂದು ನನಗೆ ಬರಬೇಕಾಗಿದ್ದ ನಿವೃತ್ತಿವೇತನದ ಬಾಕಿ ಹಣವನ್ನು ಸಿಂಡಿಕೇಟ್ ಬ್ಯಾಂಕ್ ಬಂಟವಾಳ ಶಾಖೆಯಲ್ಲಿರುವ ನನ್ನ ಎಸ್‌ಬಿ ಖಾತೆಗೆ ಜಮಾ ಮಾಡಲಾಗಿತ್ತು. ನಾನು ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ಹದಿನೈದು ಪವನು ಚಿನ್ನದ ಕಾಣಿಕೆ ನೀಡಿದೆ. ಜೀವಮಾನದಲ್ಲಿ ಒಮ್ಮೆ ಚಿ.ಸೌ. ಸಾವಿತ್ರಿ, ಗೌರಿ ಮತ್ತು ಶೋಭಾರಿಗೆ ಚಿನ್ನದ ಆಭರಣಗಳನ್ನು ಖರೀದಿಸಿ ನೀಡಿದೆ. ಶ್ರೀ ಯು. ಲಕ್ಷ್ಮಣ ಅವರಲ್ಲಿ ಪಡೆದಿದ್ದ ಒಂದು ಲಕ್ಷ ರೂ ಸಾಲವನ್ನು ತೀರಿಸಿದೆ. ನನ್ನ ಬೇರೆ ಆಪ್ತಮಿತ್ರರಿಗೆ ನೀಡಬೇಕಾಗಿದ್ದ ಸಾಲವನ್ನೂ ತೀರಿಸಿ, ಜೀವಮಾನದಲ್ಲಿ ಮೊದಲ ಬಾರಿ ಋಣಮುಕ್ತನಾದೆ. ಇದರ ಅನಂತರ ನನಗೆ ಯಾರಿಂದಲೂ ಸಾಲ ಪಡೆಯಬೇಕಾದ ಆವಶ್ಯಕತೆ ಬರಲಿಲ್ಲ ಮತ್ತು ಯಾರಿಗಾದರೂ ಅಥವಾ ಯಾವುದಾದರೂ ಒಳ್ಳೆಯ ಕಾರ್ಯಗಳಿಗೆ, ದೇವಸ್ಥಾನಗಳಿಗೆ, ಅನಾಥಾಶ್ರಮ, ಬಾಲಕಾಶ್ರಮಗಳಿಗೆ ಅಲ್ಪಸ್ವಲ್ಪ ಹಣ ನೀಡಿ ವರ್ಷಕ್ಕೆ ಕಡಿಮೆ ಎಂದರೂ ೪೦-೫೦ ಸಾವಿರ ರೂಪಾಯಿ ದಾನ ಧರ್ಮ ಮಾಡುವುದು ನನಗೆ ಸಾಧ್ಯವಾಗಿದೆ. ಇದು ನನ್ನ ಆರಾಧ್ಯ ದೈವ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಹಾಗೂ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಆಶೀರ್ವಾದವೆಂದು ನನ್ನ ನಂಬಿಕೆ. ನನಗೆ ತುಂಬಾ ಕಷ್ಟಕರ ಕಾಲ ಬಂದಿದ್ದರೂ, ನೆರವಿಗೆ ಬರುವ ಆಪತ್‌ಬಾಂಧವರು ಇದ್ದುದರಿಂದ ನನ್ನ ಕಷ್ಟದ ಹೊರೆ ಕಡಿಮೆಯಾಯಿತು. ಇದೇ ಸಂದರ್ಭದಲ್ಲಿ ಡಿಸೆಂಬರ್ ೨೨, ೨೦೦೦ ದಂದು ತಿರುಪತಿಯಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ಕಲ್ಯಾಣೋತ್ಸವದ ಸೇವೆಯನ್ನೂ ಮಾಡಿಸಿದೆ.

ಬಂಟವಾಳ ನಾರಾಯಣ ನಾಯಕ

ಪ್ರತಿ ವರ್ಷ ನವೆಂಬರ್ ೧೪, ಪಂಡಿತ ಜವಾಹರಲಾಲ ನೆಹರೂ ಅವರ ಜನ್ಮದಿನವನ್ನು "ಮಕ್ಕಳ ದಿನಾಚರಣೆ"ಯಾಗಿ ಆಚರಿಸಲಾಗುತ್ತದೆ. ಅದೇ ರೀತಿ "ಸಹಕಾರ ದಿನ"ವಾಗಿಯೂ ಆಚರಿಸುವುದು ಇದೆ. ದ.ಕ. ಜಿಲ್ಲೆಯಲ್ಲಿ ಸಹಕಾರ ತತ್ವ ಮತ್ತು ಚಳವಳಿಯನ್ನು ಪುತ್ತೂರಿನ ಮೊಳಹಳ್ಳಿ ಶಿವರಾವ್ ಅವರು ೧೯೨೨ನೇ ಇಸವಿಯಲ್ಲಿ ಪ್ರಾರಂಭಿಸಿದವರು. ಅವರ ನಂತರ ಆ ಚಳವಳಿಯನ್ನು ಮುಂದುವರಿಸಿ, ಅದನ್ನು ಜಿಲ್ಲಾ ಮತ್ತು

ರಾಜ್ಯ ಮಟ್ಟದಲ್ಲಿ ವಿಸ್ತರಿಸಿದವರು ಶ್ರೀ ಬಂಟವಾಳ ನಾರಾಯಣ ನಾಯಕರವರು. ಅವರು ಜಿಲ್ಲೆಯ(ಅವಿಭಜಿತ ದ.ಕ.ಜಿಲ್ಲೆ) ಹಳ್ಳಿ ಹಳ್ಳಿಗಳಿಗೆ ತಿರುಗಾಡಿ ಸಹಕಾರ ಸಂಘ, ಸಹಕಾರ ಸೊಸೈಟಿ ಮತ್ತು ಸಹಕಾರಿ ಬ್ಯಾಂಕ್ ಸ್ಥಾಪಿಸಿದರು. ಶ್ರೀ ಟಿ.ಎ.ಪೈ ಅವರ ನೇತೃತ್ವದಲ್ಲಿ ದ.ಕ. ಜಿಲ್ಲಾ ರೈತ ಸಹಕಾರಿ ಸೊಸೈಟಿಯನ್ನೂ ಸ್ಥಾಪಿಸಿದರು. ಅವರು ಜಿಲ್ಲೆಯ ರೈತಾಪಿ ಜನರಿಗಾಗಿ, ಸಾಗುವಳಿಕಾರರಿಗಾಗಿ, ಕೃಷಿ ಕಾರ್ಮಿಕರಿಗಾಗಿ ಕುಂದಾಪುರದಿಂದ ಕಾಸರಗೋಡಿನ ಗಡಿಯವರೆಗೆ, ಶಿರಾಡಿ, ಚಾರ್ಮಾಡಿ ಗಡಿಗಳಿಂದ ಮಂಗಳೂರು ಕೇಂದ್ರದವರೆಗೆ ಇರುವ ಪ್ರತಿಯೊಂದು ಊರುಗಳಲ್ಲಿ, ಹಳ್ಳಿಗಳಲ್ಲಿ ಗುಡ್ಡ ಪರ್ವತಗಳಲ್ಲಿ ತಿರುಗಾಡಿಕೊಂಡು ಜನಸಾಮಾನ್ಯರ ಮನಸ್ಸಿನಲ್ಲಿ ಸಹಕಾರ ತತ್ವದ ಬೀಜವನ್ನು ಬಿತ್ತಿ, ಅದು ಮೊಳಕೆ ಒಡೆದು ಸಸಿಯಾಗಿ ಬೆಳೆಯುವಂತೆ ಮಾಡಿದವರು. "ರೈತಾಪಿ ಜನರ ಕಷ್ಟಗಳಿಗೆ, ನೈಸರ್ಗಿಕ ಮತ್ತು ಕೌಟುಂಬಿಕ ಸಮಸ್ಯೆಗಳಿಗೆ ಸಹಕಾರಿ ತತ್ವದಿಂದ ಮಾತ್ರ ಪರಿಹಾರ ಸಾಧ್ಯ" ಎನ್ನುವ ಮಾಹಿತಿಯನ್ನು ನೀಡಿ, ಅವರಲ್ಲಿ ಧೈರ್ಯ ತುಂಬಿ, ಅವರು ಸಹಕಾರಿ ಚಳವಳಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವಂತೆ ಮಾಡಿದ್ದಾರೆ.

ನಾರಾಯಣ ನಾಯಕ್ ಅವರಿಗೆ ಸರಕಾರ ಎಂ.ಎಲ್.ಸಿ ಸ್ಥಾನ ನೀಡಿ ಗೌರವಿಸಿದೆ. ಅವರು ಕರ್ನಾಟಕ ರಾಜ್ಯ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಕುಂದಾಪುರ ಶ್ರೀ ಬಿ.ಎಸ್. ಆಚಾರ್, ಶಿರ್ತಾಡಿ ಧರ್ಮಸಾಮ್ರಾಜ್ಯ, ಮಾಣಿ ಶಿವರಾವ್, ಕಾರ್ಕಳ ಎನ್.ಎಮ್. ಕುಮಾರ್ ಅವರಂತಹ ಪ್ರಸಿದ್ಧ ಸಹಕಾರಿ ಮುಖಂಡರನ್ನು ರೂಪಿಸಿದವರು ಅವರೇ. ಹೀಗಾಗಿ ಇವತ್ತಿಗೂ ದ.ಕ. ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಸಹಕಾರಿ ತತ್ವ ಚಳವಳಿಯ ಕಾರ್ಯಕರ್ತರು ದಿ. ನಾರಾಯಣ ನಾಯಕರು ತೋರಿದ ದಾರಿಯಲ್ಲಿಯೇ ಮುಂದುವರಿಯುತ್ತಿದ್ದಾರೆ. ಈ ಪ್ರದೇಶದಲ್ಲಿ ಇವತ್ತಿಗೂ ಸಹಕಾರಿ ಚಳವಳಿಯು ಸುದೃಢವಾಗಿ ನಡೆಯುತ್ತಿದೆ.

ನನ್ನ ತಂದೆಯವರ ಮೇಲೆ ಶ್ರೀ ನಾರಾಯಣ ನಾಯಕ್ ಅವರಿಗೆ ತುಂಬಾ ಅಭಿಮಾನ, ವಿಶ್ವಾಸ ಇದ್ದುದರಿಂದ ನನ್ನ ಮೇಲೆಯೂ ಅವರು ವಿಶ್ವಾಸವಿಟ್ಟು ನನ್ನ ಸಾರ್ವಜನಿಕ, ಸಾಮಾಜಿಕ ಕಾರ್ಯಗಳಲ್ಲಿ ಬೆನ್ನು ತಟ್ಟಿ, ನಾನು ಬದುಕಿನಲ್ಲಿ ಒಬ್ಬ ನಾಯಕನಾಗಿ ಮೂಡಿ ಬರಲು ನೀಡಿದ ಪ್ರೋತ್ಸಾಹವನ್ನು ನಾನು ಮರೆಯುವ ಹಾಗೆ ಇಲ್ಲ. ಶ್ರೀ ನಾರಾಯಣ ನಾಯಕರಿಂದಾಗಿಯೇ ನನಗೆ ಶ್ರೀ ಟಿ.ಎ.ಪೈ ಅವರ ಸಂಪರ್ಕ ಬಂದಿತ್ತು. ಈ ನಿಮಿತ್ತವಾಗಿಯೇ ಶ್ರೀ ಟಿ.ಎ.ಪೈ ಅವರು ನನ್ನ ಕಷ್ಟದ ದಿನಗಳಲ್ಲಿ, ಕತ್ತಲೆಯಲ್ಲಿ ಸೂರ್ಯಕಿರಣ ಮೂಡಿ ಬಂದ ಹಾಗೆ, ನನಗೆ ಬೆಳಕು ನೀಡಿ ನನ್ನ ಬದುಕು ಅಭಿವೃದ್ಧಿ ಹೊಂದಿತು.

ನನ್ನಂತಹ ನೂರು, ಸಾವಿರ ಜನರಿಗೆ ದಿ. ನಾರಾಯಣ ನಾಯಕರು ಆಧಾರಸ್ತಂಭವಾಗಿದ್ದರು. ನನ್ನ ಯೂತ್ ಕಾಂಗ್ರೆಸ್ ದಿನಗಳಿಂದ ಪ್ರಾರಂಭಗೊಂಡು ಸಿಂಡಿಕೇಟ್ ಬ್ಯಾಂಕಿನ ವೃತ್ತಿ ಜೀವನದಲ್ಲಿ, ಸಾಮಾಜಿಕ ಕಾರ್ಯಗಳಲ್ಲಿ, ಅವರ ಮತ್ತು ನನ್ನ ಸಂಬಂಧ ಅವರ ಕೊನೆಯ ದಿನದವರೆಗೆ ಉಳಿದು ಬಂದಿರುವುದು ನನ್ನ ಸೌಭಾಗ್ಯ.

ನವೆಂಬರ್ ೧೪, ೧೯೯೭ರಂದು 'ಸಹಕಾರಿ ದಿನಾಚರಣೆ'ಯಂದು ಬೆಳಗ್ಗೆ ದ.ಕ, ಜಿಲ್ಲಾ ಮುಖ್ಯ ಕಚೇರಿಯ ಹೊರಭಾಗದಲ್ಲಿರುವ ಧ್ವಜಸ್ತಂಭದಲ್ಲಿ ಸಹಕಾರಿ ಧ್ವಜದ ಆರೋಹಣವನ್ನು ಮಾಡಿ ಕೆಳಗೆ ಇಳಿದು ಬರುವಾಗಲೇ ಹೃದಯ ಸ್ತಂಭನದಿಂದ ಅವರ ಸಾವು ಸಂಭವಿಸಿತು. ಈ ಸುದ್ದಿಯನ್ನು ಕೇಳಿ ನಾನು ಮಂಗಳೂರಿಗೆ ಓಡಿದೆ ಮತ್ತು ಉಡುಪಿ, ಮಂಗಳೂರು, ಬಂಟವಾಳ, ಪುತ್ತೂರು ಇತ್ಯಾದಿ ಊರುಗಳ ಅವರ ಅಭಿಮಾನಿಗಳಿಗೆ ದೂರವಾಣಿ ಕರೆ ಮಾಡಿ ವಿಷಯವನ್ನು ತಿಳಿಸಿದೆ. ದ.ಕ.ಜಿಲ್ಲಾ ಸಹಕಾರಿ ಬ್ಯಾಂಕಿನ ವತಿಯಿಂದ ಉಭಯ ಜಿಲ್ಲೆಗಳಲ್ಲಿರುವ ಸಹಕಾರಿ ಬ್ಯಾಂಕ್ ಮತ್ತು ಇತರ ಸಹಕಾರಿ ಕಚೇರಿಗಳಿಗೆ ಕರೆ ಮಾಡಿ ಸುದ್ದಿ ತಿಳಿಸಿದೆ. ಹೀಗಾಗಿ ಸಂಜೆಯೊಳಗೆ ರಾಜಕೀಯ, ಸಾಮಾಜಿಕ ಮತ್ತು ಸಹಕಾರಿ ಕ್ಷೇತ್ರದ ಮುಖಂಡರು ಮತ್ತು ಸಹಕಾರಿ ಮತ್ತು ಸಾಮಾಜಿಕ ಕ್ಷೇತ್ರದ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಬಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸಿ ಹೋಗಿದ್ದರು. ಮಂಗಳೂರಿನಲ್ಲಿ ಅವರ ಮೃತದೇಹವನ್ನು ಬೋಳಾರ ಸ್ಮಶಾನಕ್ಕೆ ಕರೆದುಕೊಂಡು ಹೋದಾಗಲೂ ಸಾವಿರಾರು ಜನ ನೆರೆದಿದ್ದರು. ಅದರ ಎಲ್ಲಾ ಜವಾಬ್ದಾರಿಯನ್ನು ನಾನೇ ಸ್ವತಃ ವಹಿಸಿಕೊಂಡಿದ್ದೆ. ಸಂಜೆ ಗಂಟೆ ೬.೪೫ಕ್ಕೆ ಅಂತ್ಯ ಯಾತ್ರೆ ಮುಗಿದು ವಿಧಿವತ್ತಾಗಿ ಅಂತಿಮ ಸಂಸ್ಕಾರ ನಡೆಯಿತು. ಹೀಗೆ ಗಾಂಧಿಯುಗದ ಕೊನೆಯ ಕೊಂಡಿ ಮಂಗಳೂರಿನಲ್ಲಿ ಕಳಚಿ ಬಿತ್ತು.

ಶ್ರೀ ನಾರಾಯಣ ನಾಯಕರ ಮನಸ್ಸಿನಲ್ಲಿ ಯಾವಾಗಲೂ ಬೇರೆಯವರ ಒಳಿತನ್ನು ಬಯಸುವುದೇ ಇರುತ್ತಿತ್ತು. ಅವರ ಬಾಯಿಯಿಂದ ಯಾವುದೇ ವ್ಯಕ್ತಿಯ ಕುರಿತು ಅವರ ಮುಂದೆ ಅಥವಾ ಹಿಂದೆ ಕೆಟ್ಟ ಮಾತು ಬರುತ್ತಿರಲಿಲ್ಲ. ಒಂದು ವೇಳೆ

ಯಾರಾದರೂ ಬೇರೆಯವರ ವಿಚಾರದಲ್ಲಿ ಸಿಟ್ಟು ಬಂದು ಕೆಟ್ಟ ಮಾತುಗಳನ್ನು ಅಥವಾ ಅಪಶಬ್ದ ಆಡಿದರೆ, ಅವರು ಹಾಗೆ ಮಾತನಾಡಬೇಡ ಎಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದರು. ನನ್ನ ಜೀವನದಲ್ಲಿ ಪ್ರಭಾವ ಬೀರಿದ ಮಹಾನ ವ್ಯಕ್ತಿಗಳಲ್ಲಿ ದಿವಂಗತ ಬಂಟವಾಳ ನಾರಾಯಣ ನಾಯಕ್ ಅವರೂ ಒಬ್ಬರು.

ಅವರಿಗೆ ಅರವತ್ತು ವರ್ಷ ತುಂಬಿದಾಗ ಜಿಲ್ಲೆಯ ಪ್ರತಿಯೊಂದು ನಗರ ಮತ್ತು ಬಡಾವಣೆಯಲ್ಲಿ ಸ್ಥಳಿಯ ಸಂಘ, ಸಂಸ್ಥೆಗಳ ನೇತಾರರು ಸೇರಿ ಅವರಿಗೆ ಸನ್ಮಾನ ಮಾಡಿರುವುದು ನನಗೆ ಗೊತ್ತಿದೆ. ಬಂಟವಾಳದಲ್ಲಿಯೂ ನಾವು ಸರ್ವ ಜಾತಿ, ಮತದ ಮುಖಂಡರು ಒಟ್ಟಾಗಿ ಅವರಿಗೆ ಸನ್ಮಾನ ಮಾಡಿದ್ದೆವು. ೧೯೬೨ ಮತ್ತು ೧೯೬೭ನೇ ಇಸವಿಯಲ್ಲಿ ಶ್ರೀ ವೈಕುಂಠ ಬಾಳಿಗರು ಶಾಸಕ, ಮಂತ್ರಿ ಮತ್ತು ವಿಧಾನಸಭೆಯ ಸಭಾಪತಿಯಾಗಿದ್ದ ಸಮಯದಲ್ಲಿ ಬಂಟವಾಳ ಮತ್ತು ಬೆಳ್ತಂಗಡಿ ಕ್ಷೇತ್ರದಲ್ಲಿ ಶ್ರೀ ಬಂಟವಾಳ ನಾರಾಯಣ ನಾಯಕರಿಗೇ ವಿಧಾನ ಸಭಾ ಟಿಕೇಟ್ ನೀಡಬೇಕು ಎನ್ನುವ ಒತ್ತಾಯ ಇತ್ತು. ಆದರೂ ವೈಕುಂಠ ಬಾಳಿಗರ ನಿಷ್ಠಾವಂತ ಅನುಯಾಯಿಯಾಗಿದ್ದ ಶ್ರೀ ನಾರಾಯಣ ನಾಯಕರು ಆ ಬೇಡಿಕೆಯನ್ನು ನಿರಾಕರಿಸಿದ್ದರಿಂದ ಶ್ರೀ ಬಾಳಿಗರೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಗೊಳ್ಳುವ ಹಾಗಾಯಿತು. ಅಂತಹ ನಿಷ್ಕಾಮಕರ್ಮಿ ಶ್ರೀ ಬಂಟವಾಳ ನಾರಾಯಣ ನಾಯಕರು.

●●

೨೯. ಕರ್ನಾಟಕದಲ್ಲಿ ಬ್ಯಾರಿ ಅಕಾಡೆಮಿ

ದಕ್ಷಿಣ ಕನ್ನಡದಲ್ಲಿರುವ ಮುಸ್ಲಿಮ್ ಜನರನ್ನು ಬ್ಯಾರಿಗಳು ಎಂದು ಕರೆಯುತ್ತಾರೆ. ಅವರು ಮಲೆಯಾಳಿ, ತುಳು ಮತ್ತು ಕನ್ನಡ ಶಬ್ದಗಳು ಸಮ್ಮಿಲಿತಗೊಂಡಿರುವ ಬ್ಯಾರಿ ಭಾಷೆಯನ್ನು ಆಡುತ್ತಾರೆ. ಅವರ ಧಾರ್ಮಿಕ ಗುರುಗಳು (ಮೌಲವಿ) ಕೇರಳದಿಂದ ಬಂದು ಅವರಿಗೆ ಧರ್ಮ ಬೋಧನೆ, ಸಂಸ್ಕಾರ ನೀಡುತ್ತಾರೆ. ಹೀಗಾಗಿ ಬ್ಯಾರಿ ಭಾಷೆಯಲ್ಲಿ ಮಲೆಯಾಳಿ ಭಾಷೆಯ ಪ್ರಭಾವ ಹೆಚ್ಚು. ಬ್ಯಾರಿ ಸಮುದಾಯ ನಮ್ಮ ಗೌಡ ಸಾರಸ್ವತರ ಹಾಗೆ ವ್ಯಾಪಾರ, ವ್ಯವಹಾರ ಮಾಡಿಕೊಂಡಿರುವವರು. ಅವರಲ್ಲಿ ಬಡತನ ಹೆಚ್ಚು. ಹೀಗಾಗಿ ಮನೆಯಲ್ಲಿ ಬೀಡಿ ಕಟ್ಟಿ ಜೀವನ ಸಾಗಿಸುತ್ತಾರೆ. ೨೦-೨೫ ವರ್ಷಗಳ ಹಿಂದೆ ಅವರಲ್ಲಿ ವಿದ್ಯಾಭ್ಯಾಸ ಇರಲಿಲ್ಲ. ಇತ್ತೀಚೆಗೆ ಬ್ಯಾರಿ ಸಮುದಾಯದ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಶಿಕ್ಷಣ ಪಡೆಯಲು ದೊಡ್ಡ ಸಂಖ್ಯೆಯಲ್ಲಿ ಮುಂದೆ ಬರುತ್ತಿದ್ದಾರೆ. ಹಲವು ಮಂದಿ ವೈದ್ಯರು, ಇಂಜಿನಿಯರುಗಳು, ವಕೀಲರು, ಕೈಗಾರಿಕೋದ್ಯಮಿಗಳಾಗಿದ್ದಾರೆ. ಕೆಲವರು ಗಲ್ಫ್ ರಾಷ್ಟ್ರಗಳಿಗೆ ಹೋಗಿ ಅಲ್ಲಿ ಕೆಲಸಕ್ಕೆ ಸೇರಿ ಊರಿಗೆ ಹಣ ಕಳುಹಿಸಿ ಕೊಡುತ್ತಿದ್ದಾರೆ. ಹೀಗಾಗಿ ಬ್ಯಾರಿಗಳ ಸಮುದಾಯಗಳಲ್ಲಿ ಬಡತನ ಕಡಿಮೆಯಾಗುತ್ತಾ ಬಂದಿದೆ. ಶಿಕ್ಷಣ ಸಿಕ್ಕಿದ್ದರಿಂದ ಶ್ರೀಮತಿ ಸಾರಾ ಅಬೂಬಕ್ಕರ್, ಫಕೀರ ಮಹಮ್ಮದ ಕಟಪಾಡಿ ಅವರಂತಹ ಉತ್ತಮ ಕನ್ನಡ ಸಾಹಿತಿಗಳು ಕಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಕೊಂಕಣಿ, ತುಳು, ಕೊಡಗು ಭಾಷಾ ಅಕಾಡೆಮಿಯ ಹಾಗೆ ಬ್ಯಾರಿ ಭಾಷೆಗೂ ಅಕಾಡೆಮಿ ಬೇಕು ಎಂಬ ಭಾವ ಅವರಲ್ಲಿ ಮೂಡಿತ್ತು.

ಹೀಗಾಗಿ ಜುಲೈ ೨೬, ೨೦೦೦ ದಿನ ಸರಕಾರದಿಂದ ಬ್ಯಾರಿ ಅಕಾಡೆಮಿಯನ್ನು ಪಡೆಯಲು ಮಾರ್ಗದರ್ಶನಕ್ಕಾಗಿ ಕೆಲವು ಮುಸ್ಲಿಂ ಬ್ಯಾರಿ ತರುಣರು ನನ್ನ ಬಳಿಗೆ ಬಂದಿದ್ದರು. ನಾನು ಅವರಿಗೆ ನಾವು ಕೊಂಕಣಿ ಅಕಾಡೆಮಿಯನ್ನು ಸರಕಾರದಿಂದ ಪಡೆಯಲು "ಕೊಂಕಣಿ ಜಾಥಾ" ನಡೆಸಿರುವುದು, ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದ ಬಳಿಕ ನಾನು ಒಂದು ಶಿಷ್ಟಮಂಡಳವನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ ಪ್ರತ್ಯೇಕ ವಿನಂತಿ ಪತ್ರವನ್ನು ನೀಡಿದ್ದು, ಅನಂತರ ಶ್ರೀ ಮೊಯಿಲಿಯವರು ಬೆಂಗಳೂರಿನಲ್ಲಿದ್ದಾಗ ಮತ್ತು ಊರಿಗೆ ಬಂದಾಗ ಅವರನ್ನು ಭೇಟಿಯಾಗಿ ಅಕಾಡೆಮಿಯ ಅಗತ್ಯವನ್ನು ಅವರಿಗೆ ಮನಗಾಣಿಸಿ ಮತ್ತೆ ಮತ್ತೆ ನೆನಪಿಸಿದ ವಿಚಾರವನ್ನು ಅವರಿಗೆ ತಿಳಿಸಿದೆ. ನಾನು ಸರಕಾರಕ್ಕೆ ನೀಡಿದ ನಿವೇದನಾ ಪತ್ರದ ಪ್ರತಿಯನ್ನು ಅವರಿಗೆ ನೀಡಿದೆ. ಇಷ್ಟು ಮಾಹಿತಿಯನ್ನು ನೀಡಿ ಅವರಿಗೆ ನನ್ನ ಸಂಪೂರ್ಣ ಬೆಂಬಲ ಇರುವುದಾಗಿ ಭರವಸೆ ನೀಡಿ, ಒಳ್ಳೆಯದಾಗಲಿ ಎಂದು ಹಾರೈಸಿ ಅವರನ್ನು ಬೀಳ್ಕೊಂಡೆ.

ಅನಂತರವೂ ಬ್ಯಾರಿಗಳ ಮುಖಂಡರು ಎರಡು ಮೂರು ಬಾರಿ ನನ್ನ ಬಳಿ ಬಂದಿದ್ದರು. ಬ್ಯಾರಿ ಸಮುದಾಯದ ಮುಖಂಡರಾಗಿದ್ದ ನನ್ನ ಮಿತ್ರ ಶ್ರೀ ಬಿ.ಎ. ಮೊಯಿದ್ದಿನರು ಕರ್ನಾಟಕ ಸರಕಾರದಲ್ಲಿ ಮಂತ್ರಿಗಳಾದ ಬಳಿಕ ಒಮ್ಮೆ ನಾವು ಅವರ ಬಳಿ ಈ ವಿಚಾರವಾಗಿ ಮಾತನಾಡಿ ಕರ್ನಾಟಕದಲ್ಲಿ ಬ್ಯಾರಿ ಅಕಾಡೆಮಿ ಸ್ಥಾಪಿಸಲು ಒತ್ತಾಯ ಮಾಡಿದ್ದೂ ಇದೆ. ಅನಂತರ ಬ್ಯಾರಿ ಸಮುದಾಯದ ಕೆಲವು ಉತ್ಸಾಹಿ ಕಾರ್ಯಕರ್ತರು ಶ್ರಮ ಪಟ್ಟಿದ್ದರಿಂದ ಇತ್ತೀಚೆಗೆ, ಅಂದರೆ ೨೦೦೮ರಲ್ಲಿ ಕರ್ನಾಟಕ ಸರಕಾರವು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸುವ ಘೋಷಣೆ ಮಾಡಿದೆ.

●●

೩೦. ಕೊಂಕಣಿಗರ ಕಾವಿಕಲೆ

ಗೋವೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಅನೇಕ ದೇವಾಲಯಗಳ, ಅರಮನೆಗಳ ಮತ್ತು ಶ್ರೀಮಂತರ ಮನೆಗಳ ಗೋಡೆಗಳ ಮೇಲೆ, ಬಾಗಿಲಿನ ಚೌಕಟ್ಟಿನ ಮೇಲೆ ಕಾವಿಕಲೆಯ ಚಿತ್ರಗಳು ಕಾಣಲು ಸಿಗುತ್ತವೆ. ಅಮೇರಿಕೆಯಲ್ಲಿ ಉನ್ನತ ಶಿಕ್ಷಣ ಪಡೆದು ಬಂದ ಕೊಂಕಣಿ ಭಾಷಿಕರಾದ ಹೊನ್ನಾವರದ ಡಾ. ಕೃಷ್ಣಾನಂದ ಕಾಮತರು ಬಹಳ ಶ್ರಮಪಟ್ಟು ಕಾವಿಕಲೆಯ ಚಿತ್ರಗಳನ್ನು ಕೆಮರಾದಲ್ಲಿ ಸೆರೆ ಹಿಡಿದು ಕೊಂಕಣ ಪ್ರದೇಶದ ಈ ವಿಶಿಷ್ಟ ಕಲಾ ಪ್ರಕಾರದ ವಿಷಯದಲ್ಲಿ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿ ಅದನ್ನು ಆರ್ಕಿಯಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾಗೆ ಒಪ್ಪಿಸಿದ್ದರು. ಆ ಪ್ರಬಂಧಕ್ಕೆ ಮಾನ್ಯತೆ ನೀಡಿದ ಆರ್ಕಿಯಾಲಾಜಿಕಲ್ ಸೊಸೈಟಿಯವರು ಈ ದೇಶೀಯ ವಿಶಿಷ್ಟ ಪ್ರಕಾರಕ್ಕೆ ಅಂತರಾಷ್ಟ್ರೀಯ ಪ್ರಚಾರ ಸಿಗಬೇಕೆಂಬ ಉದ್ದೇಶದಿಂದ ಬೇರೆ ಬೇರೆ ದೇಶಗಳಲ್ಲಿ ನಡೆಯಲಿದ್ದ ವಿಚಾರ ಗೋಷ್ಠಿಗಳಲ್ಲಿ 'ಕಾವಿಕಲೆ'ಯ ಕುರಿತು ವಿಷಯ ಮಂಡನೆಯನ್ನು ಮಾಡಲು ಡಾ. ಕಾಮತ್ ಅವರನ್ನು ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿದ್ದರಿಂದ ಡಾ. ಕಾಮತರು ಕಾವಿಕಲೆಯ ಕುರಿತು ನಡೆಸಿದ ಸಂಶೋಧನೆಗೆ ದೇಶ ವಿದೇಶಗಳಲ್ಲಿ ಬಹಳ ಪ್ರಶಂಸೆ ದೊರೆಯಿತು. ಅದರ ಕುರಿತು ಡಾ. ಕಾಮತರು "ಕಾವಿಕಲೆ" ಎಂಬ ಕನ್ನಡ ಗ್ರಂಥವನ್ನು ಪ್ರಕಟಿಸಿದ್ದರು.

ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ ಡಾ. ಸೂರ್ಯನಾಥ ಕಾಮತರ ಸೂಚನೆಯ ಪ್ರಕಾರ ಡಾ. ಕೃಷ್ಣಾನಂದ ಕಾಮತರನ್ನು ಬೆಂಗಳೂರಿನಲ್ಲಿರುವ ಅವರ ಮನೆಯಲ್ಲಿ ಭೇಟಿಯಾಗಿ "ಕಾವಿಕಲೆ" ಗ್ರಂಥವನ್ನು ಅವರು ಕೊಂಕಣಿ ಭಾಷೆಗೆ ಅನುವಾದಿಸಿ ಕೊಡಬೇಕೆಂದು ವಿನಂತಿ ಮಾಡಿದೆ. ಅದಕ್ಕೆ ಒಪ್ಪಿಕೊಂಡ ಡಾ. ಕಾಮತರು ಆ ಗ್ರಂಥವನ್ನು ಕೊಂಕಣಿಗೆ ಅನುವಾದಿಸಿ ನೀಡಿದರು. ಅದನ್ನು ನಾವು "ಕೊಂಕಣ್ಯಾಲಿ ಕಾವಿಕಲಾ" ಎಂಬ ಹೆಸರಿನಲ್ಲಿ ಅಕಾಡೆಮಿ ವತಿಯಿಂದ ಪ್ರಕಟಿಸಿದೆವು.

ಆಮೇಲೆ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ನಡೆದಾಗ ಅಂಕೋಲೆಯ ಶ್ರೀ ಎನ್.ಡಿ. ಮಹಾಲೆ ಅವರನ್ನು ಕರೆಯಿಸಿ, ಅವರಿಂದ ವಿಶ್ವ ಕೊಂಕಣಿ ಕೇಂದ್ರದ ಗೋಡೆಗಳ ತುಂಬಾ ಕಾವಿಕಲಾ ಚಿತ್ರವನ್ನು ಬಿಡಿಸಿದ್ದೇವೆ. ಅದಕ್ಕೆ ತುಂಬಾ ಪ್ರಶಂಸೆ ದೊರೆತಿವೆ.

ಕಾವಿಕಲೆ ಪ್ರಕಾರವನ್ನು ಪುನರುಜ್ಜೀವಗೊಳಿಸುವ ಸಲುವಾಗಿ ಕಾವಿಕಲೆಯನ್ನು ಕಲಿಸುವ ಶಾಲೆಯನ್ನು ಪ್ರಾರಂಭಿಸುವಂತೆ ಶ್ರೀ ಮಹಾಲೆಯವರಲ್ಲಿ ಹೇಳಿದ್ದೇನೆ. ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆ. ವಿಶ್ವ ಕೊಂಕಣಿ ಕೇಂದ್ರ ಸುಲಲಿತವಾಗಿ ಕಾರ್ಯ ಪ್ರಾರಂಭಿಸಿದ ಬಳಿಕ ಹೊನ್ನಾವರದಲ್ಲಿ ಕೊಂಕಣಿ ಕಾವಿಕಲಾ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸುವ ಬಯಕೆ ನನಗೆ ಇದೆ.

೩೧. ಬಸ್ತಿ ಪ್ರಕಾಶನ

ನನಗೆ ಚಿಕ್ಕಂದಿನಿಂದಲೇ ಕತೆ, ಕಾದಂಬರಿ, ನಾಟಕ, ಕವನ ಮತ್ತು ಹಾಸ್ಯ ಸಾಹಿತ್ಯಗ್ರಂಥಗಳನ್ನು ಓದುವ ಅಭಿರುಚಿ ಇತ್ತು. ನನ್ನ ತಂದೆ ಬಸ್ತಿ ಮಾಧವ ಶೆಣೈಯವರ ತಮ್ಮ ಮತ್ತು ನಾವು ಕಲಿತ ಎಸ್.ವಿ.ಎಸ್. ಪ್ರೌಢಶಾಲೆಯಲ್ಲಿ ಗ್ರಂಥಪಾಲಕರಾಗಿದ್ದ ನನ್ನ ಚಿಕ್ಕಪ್ಪ ಬಸ್ತಿ ಪುಂಡಳೀಕ ಶೆಣೈ(ಸಂಶೋಧಕರು) ಅವರ ಪ್ರೋತ್ಸಾಹದಿಂದ ನನಗೆ ಪುಸ್ತಕಗಳನ್ನು ಓದುವುದು, ಖರೀದಿಸುವುದು, ಕತೆ, ಲೇಖನ, ಪ್ರಬಂಧಗಳನ್ನು ಬರೆಯುವ ಹವ್ಯಾಸವೂ ಬೆಳೆದು ಬಂದಿತ್ತು. ನಾನು ಶಾಲೆಯಲ್ಲಿ ಇರುವಾಗಲೇ "ಶಶಿಕಿರಣ" ಎಂಬ ಕೈಬರೆಹದ ಪತ್ರಿಕೆಯ ಪ್ರಕಾಶನ ಮಾಡುತ್ತಿದ್ದ ವಿಚಾರವನ್ನು ಈಗಾಗಲೇ ಹೇಳಿದ್ದೇನೆ.

ಮುಂದೆ ನನ್ನ ಮಾತೃಭಾಷೆ ಕೊಂಕಣಿಯಲ್ಲಿ ಉತ್ತಮ ಸಾಹಿತ್ಯ ಪ್ರಕಾಶನ ಮಾಡುವ ಸಾಹಸ ಕಾರ್ಯಕ್ಕೂ ನಾನು ಕೈ ಹಾಕಿದ್ದೆ. ೧೯೮೮ನೇ ಇಸವಿಯಲ್ಲಿ, ನಾನು ಸಿಂಡಿಕೇಟ್ ಬ್ಯಾಂಕಿನಲ್ಲಿ ಇರುವಾಗಲೇ ಬಸ್ತಿ ಪ್ರಕಾಶನದ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಪ್ರಾರಂಭಿಸಿದೆ. ಮೊದಲ ಕೃತಿಯಾಗಿ "ಆಧುನಿಕ ತೆನ್ನಾಲಿರಾಮು ಮಾಟ್ಟುಪಯ್ಯಾ" ಎಂಬ ಲಘು ಹಾಸ್ಯದ ಸಣ್ಣಕತೆಗಳ ಪುಸ್ತಕವನ್ನು ಬೆಳಕಿಗೆ ತರಲು ಶ್ರೀ ಬಂಟವಾಳ ದಾಮೋದರ ಪ್ರಭು ಮತ್ತು ಶ್ರೀನಿವಾಸ ಪಾಠಶಾಲೆಯ ಆಡಳಿತ ಸಮಿತಿಯ ಉತ್ಸಾಹಿ ಕಾರ್ಯದರ್ಶಿ ಡಾ. ಕಸ್ತೂರಿ ಮೋಹನ ಪೈ ಅವರು ನೆರವು ನೀಡಿದ್ದರು.

ಆಮೇಲೆ ೧೯೯೫ನೇ ಇಸವಿಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನದ ಸಮಯದಲ್ಲಿ ಪ್ರಸಿದ್ಧ "ತರಂಗ" ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಸಂತೋಷಕುಮಾರ ಗುಲ್ವಾಡಿಯವರು ಸಂಗ್ರಹಿಸಿದ್ದ ಪಾರಂಪರಿಕ ಕೊಂಕಣಿ ಬಾಳ ಗೀತೆಗಳನ್ನು "ತಾ ತಾ ತಿಂಗಣ" ಹೆಸರಿನಲ್ಲಿ ಪ್ರಕಟಿಸಿದೆ.

ಆಕಾಶವಾಣಿ ನಿರ್ದೇಶಕರಾಗಿ ನಿವೃತ್ತರಾದ ಖ್ಯಾತ ಕನ್ನಡ ಲೇಖಕಿ ಶ್ರೀಮತಿ ಜ್ಯೋತ್ಸ್ನಾ ಕಾಮತ ಅವರು ಪ್ರಸಿದ್ಧ ಮೇಧಾವೀ ಛಾಯಾ ಚಿತ್ರಗ್ರಾಹಕರಾಗಿದ್ದ ಡಾ. ಕೃಷ್ಣಾನಂದ ಕಾಮತರ ಪತ್ನಿ. ಈ ದಂಪತಿಗಳು ಉತ್ತರ ಕನ್ನಡ ಜಿಲ್ಲೆಯವರು. ಇವರ ಪುತ್ರ ವಿಕಾಸ ಕಾಮತ್ ಅಮೇರಿಕೆಯ ನಿವಾಸಿಯಾಗಿದ್ದು ಅವರ "ಕೊಂಕಣಿ ಪೊಟಪೌರಿ" ವೆಬ್‌ಸೈಟ್ ಜನಪ್ರಿಯವಾಗಿದೆ. ಪ್ರತಿದಿನ ಸಾವಿರಾರು ಜನರು ಈ ಅಂತರ್ಜಾಲ ತಾಣಕ್ಕೆ ಭೇಟಿ ನೀಡುತ್ತಾರೆ. ಡಾ. ಜ್ಯೋತ್ಸ್ನಾ ಕಾಮತರ ಕನ್ನಡ ಕೃತಿಗೆ ರಾಜ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಅವರು ಧಾರವಾಡ, ಮೈಸೂರು, ಬೆಂಗಳೂರು ಆಕಾಶವಾಣಿ ಕೇಂದ್ರಗಳಲ್ಲಿ ನಿರ್ದೇಶಕರಾಗಿ ಕೆಲಸ ಮಾಡುತ್ತಿರುವಾಗಲೇ ಕೊಂಕಣಿ ಭಾಷೆಯ ಅನೇಕ ಲೋಕಗೀತೆಗಳನ್ನು ಸಂಗ್ರಹಿಸಿದ್ದರು. ಇದಲ್ಲದೆ, ನಾನು ಕೊಂಕಣಿ ಅಕಾಡೆಮಿ ಅಧ್ಯಕ್ಷನಾಗಿದ್ದಾಗ ಡಾ. ಕೃಷ್ಣಾನಂದ ಕಾಮತರ "ಕಾವಿಕಲಾ" ಸಂಶೋಧನಾ ಕೃತಿಯನ್ನು ಕೊಂಕಣಿ ಭಾಷೆಗೆ ಅನುವಾದಿಸುವಂತೆ ವಿನಂತಿಸಿಕೊಂಡಾಗ ಅವರೇ ಅದನ್ನು ಕೊಂಕಣಿಗೆ ಅನುವಾದಿಸಿ ನೀಡಿದ್ದರು. ಅದನ್ನು ನಾನು "ಕೊಂಕಣ್ಯಾಲಿ ಕಾವಿಕಲಾ" ಎಂಬ ಹೆಸರಿನಲ್ಲಿ ಪ್ರಕಟಿಸಿದ್ದೆ. ಈ ಕಾರಣದಿಂದಾಗಿ ನಾವು ಸಾಹಿತ್ಯ ಕ್ಷೇತ್ರದಲ್ಲಿ ಜೊತೆಗೂಡಿ ಕೆಲಸ ಮಾಡುವಂತಾಗಿತ್ತು.

ಶ್ರೀಮತಿ ಜ್ಯೋತ್ಸ್ನಾ ಕಾಮತರು ತಾನು ಸಂಗ್ರಹಿಸಿದ್ದ "ಕೊಂಕಣಿ ಓವ್ಯೋ ಸಂಗ್ರಹ"ವನ್ನು ನಾನು ಪ್ರಕಾಶನ ಮಾಡಿದರೆ ಒಳ್ಳೆಯದು ಎಂಬ ಅಭಿಪ್ರಾಯವನ್ನು ನನ್ನೊಡನೆ ವ್ಯಕ್ತಪಡಿಸಿದ್ದರು. ಅದಕ್ಕೆ ನಾನು ಒಪ್ಪಿ ಈ ಗ್ರಂಥವನ್ನು ಬಸ್ತಿ ಪ್ರಕಾಶನದ ವತಿಯಿಂದ ಪ್ರಕಟಿಸುವುದಾಗಿ ಮತ್ತು ಮಂಗಳೂರಿನ ಪ್ರಸಿದ್ಧ ಮುದ್ರಣಾಲಯ "ಕೋಡವರ್ಡ್"ನಲ್ಲಿ ಮುದ್ರಿಸುವುದಾಗಿ ಶ್ರೀಮತಿ ಕಾಮತರಿಗೆ ತಿಳಿಸಿದೆ. ಹೀಗೆ ಡಾ. ಜ್ಯೋತ್ಸ್ನಾ ಕಾಮತರ "ಸುರಗ್ಯಾಸರ"(ಕೊಂಕಣಿ ಮದುವೆ ಹಾಡುಗಳು) ಗ್ರಂಥ ಬಹು ಸುಂದರವಾಗಿ ಬೆಳಕಿಗೆ ಬಂತು.

ಆ ದಿನಗಳಲ್ಲಿ ದುಬಾಯಿಯಲ್ಲಿದ್ದ ಭಟ್ಕಳ ಕೊಂಕಣಿ ನವಾಯತ ಯುವ ಕವಿ ಶಬ್ಬಿರ ಬಯ್‌ದಾ ಎಂಬವರು ತಮ್ಮ ನವಾಯತೀ ಕೊಂಕಣಿ ಕವಿತೆಗಳ ಸಂಗ್ರಹ "ಚಿಂದಿಯಾಂಚೆ ಗೊಂಬೆ"ಯನ್ನು ಪ್ರಕಟಿಸುವಂತೆ ಕೋರಿದಾಗ,

ನಾನು ಅದಕ್ಕೆ ಒಪ್ಪಿ ಬಸ್ತಿ ಪ್ರಕಾಶನದ ವತಿಯಿಂದ ಆ ಗ್ರಂಥವನ್ನು ಬೆಳಕಿಗೆ ತಂದಿದ್ದೇನೆ.

ನನ್ನ ಬಸ್ತಿ ಪ್ರಕಾಶನದ "ಸುರಗ್ಯಾಸರ" ಮತ್ತು "ಚಂದಿಯಾಂಚೆ ಗೊಂಬೆ" ಈ ಎರಡೂ ಗ್ರಂಥಗಳನ್ನು ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಫೆಬ್ರವರಿ ೧೯, ೨೦೦೫ರಲ್ಲಿ ನಡೆದ ೧೭ನೇ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಬಿಡುಗಡೆ ಮಾಡಿದೆ. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸರಕಾರದ ಮಾನ್ಯ ಮಂತ್ರಿ ಶ್ರೀ ಆರ್.ವಿ. ದೇಶಪಾಂಡೆ ಅಧ್ಯಕ್ಷರಾಗಿ, ಕನ್ನಡದ ಪ್ರಸಿದ್ಧ ಸಾಹಿತಿ ಮತ್ತು ಜಾನಪದತಜ್ಞರಾದ ಡಾ. ಚಂದ್ರಶೇಖರ ಕಂಬಾರರು ಮುಖ್ಯ ಅತಿಥಿಗಳಾಗಿ ವೇದಿಕೆಯ ಮೇಲೆ ಇದ್ದರು. ಆಗ ಅಮೇರಿಕೆಯಿಂದ ಬಂದಿದ್ದ ಶ್ರೀ ವಿಕಾಸ ಕಾಮತರು ತುಂಬಾ ಉತ್ಸಾಹ ತೋರಿಸಿದ್ದುದರಿಂದ "ಸುರಗ್ಯಾಸರ" ಬಹಳ ಚೆನ್ನಾಗಿ ಪ್ರಕಟವಾಗಿದೆ. ಆಗ ನಾನು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷನಾಗಿಯೂ ಇದ್ದೆ.

ಭಕ್ತಾ ಆರ್. ಕಾಂಞಂಗಾಡ್ ಬಹಳ ವರ್ಷಗಳಿಂದ ಪಂಚ್ಕಾದಾಯಿ ಮಾಸಿಕ ಪತ್ರಿಕೆಯಲ್ಲಿ ಕೊಂಕಣಿ ಕತೆಗಳನ್ನು, ಲೇಖನಗಳನ್ನು ಪ್ರಕಟಿಸುತ್ತಿದ್ದ ಲೇಖಕರು. ಅವರಿಗೆ ತಮ್ಮ ಕತೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ಬಯಕೆ ಇತ್ತು. ಅದನ್ನು ಅವರು ನನ್ನ ಬಳಿ ಪ್ರಸ್ತಾಪಿಸಿದಾಗ, ಕೊಂಕಣಿ ಸಾಹಿತ್ಯಕ್ಕೆ ನನ್ನ ದೇಣಿಗೆಯಾಗಿ "ಸುಗಂಧಿಲೆಂ ದುಃಖ" ಎಂಬ ಹೆಸರಿನಲ್ಲಿ ಅವರ ಕಥಾ ಸಂಕಲನವನ್ನೂ ಬಸ್ತಿ ಪ್ರಕಾಶನದ ವತಿಯಿಂದ ಪ್ರಕಟಿಸಿದೆ. ಫೆಬ್ರವರಿ ೧೬, ೨೦೦೭ ರಂದು ನಡೆದ ಈ ಪುಸ್ತಕದ ಬಿಡುಗಡೆ ಕಾರ್ಯಕ್ರಮಕ್ಕೆ ಡಾ. ತಾನಾಜಿ ಹಳರಣಕರ್ ಮತ್ತು ಶ್ರೀಮತಿ ಜಯಶ್ರೀ ಶಾನಭಾಗ ಬಂದಿದ್ದರು. ಶ್ರೀ ಕೆ. ಗೋಕುಲದಾಸ್ ಪ್ರಭು ಅವರು ಪುಸ್ತಕದ ಕುರಿತು ಪ್ರಸ್ತಾವನೆ ಮಾಡಿದ್ದರು. ಇದು ದೇವನಾಗರಿ ಲಿಪಿಯಲ್ಲಿ ಇದ್ದುದರಿಂದ ಗೋವಾ ಕೊಂಕಣಿ ಅಕಾಡೆಮಿಯವರು ಇದರ ನೂರು ಪ್ರತಿಗಳನ್ನು ಖರೀದಿಸಿದ್ದರು.

ನನ್ನ ಚಿಕ್ಕಪ್ಪ ಶ್ರೀ ಬಸ್ತಿ ಪುಂಡಲೀಕ ಶೆಣೈ ಅವರು ತಮ್ಮ ಜೀವಿತ ಕಾಲದಲ್ಲಿ ಸಾವಿರಕ್ಕೂ ಮಿಕ್ಕಿ ಕೊಂಕಣಿ ಶಬ್ದಗಳ ಸಂಗ್ರಹ ಮಾಡಿಟ್ಟಿದ್ದರು. ಅದನ್ನು ಗ್ರಂಥ ರೂಪದಲ್ಲಿ ಪ್ರಕಟಿಸುವುದು ಅವರಿಗೆ ಸಾಧ್ಯವಾಗಿರಲಿಲ್ಲ. ಅದನ್ನು ನಾನು ಪ್ರಕಟಿಸಿದೆ.

ಶ್ರೀ ಎಂ. ಮಾಧವ ಪೈ ಓರ್ವ ಭಾಷಾ ವಿಜ್ಞಾನಿ ಮತ್ತು ಸಂಶೋಧಕರು. ಅವರಿಗೆ ಕನ್ನಡ ಭಾಷೆಯ ವ್ಯಾಕರಣ, ಜೊತೆಗೆ ಸಂಸ್ಕೃತ, ಹಿಂದಿ, ಪ್ರಾಕೃತ, ಪಾಲಿ ಭಾಷೆಗಳ ಜ್ಞಾನವೂ ಇದೆ. ಅವರ "ಕೊಂಕಣಿ(ತದ್ಭವ)–ಸಂಸ್ಕೃತ ಶಬ್ದಕೋಶ"ವನ್ನು ಬಸ್ತಿ ಪ್ರಕಾಶನದ ವತಿಯಿಂದ ಪ್ರಕಟಿಸಿದ್ದೆ. ಸುರಗ್ಯಾಸರ ಕೃತಿಯನ್ನು ಪ್ರಕಟಿಸುವಾಗ ಡಾ. ಟಿ.ಎಂ.ಎ.ಪೈ ಪ್ರತಿಷ್ಠಾನ, ಶ್ರೀ ಪಿ. ದಯಾನಂದ ಪೈ ಹಾಗೂ ಶ್ರೀ ಪ್ರದೀಪ ಪೈ ಅವರು ನೀಡಿದ ಸಹಾಯವನ್ನು ನಾನು ಮರೆಯುವಂತಿಲ್ಲ.

ಬರೀ ಓವಿಗಳನ್ನು(ಹೋವಿಗಳು), ಹುಮಣ್ಯೋ (ಒಗಟುಗಳು)ಗಳನ್ನು ಬರೆದಿಟ್ಟುಕೊಂಡರೆ ಸಾಕೇ? ಆ ಪ್ರಾಚೀನ ಸಾಂಪ್ರದಾಯಿಕ ರಚನೆಗಳನ್ನು ಹಾಡಿನ ರೂಪದಲ್ಲಿ ಹೇಳುವುದು ಬೇಡವೇ? ಇಂದಿನ ದಿನಗಳಲ್ಲಿ ವಿವಾಹ ಸಂದರ್ಭದಲ್ಲಿ ಹೋವಿ, ಒಗಟುಗಳನ್ನು ಹೇಳುವ ಪದ್ಧತಿಯೇ ಇಲ್ಲವಾಗುವ ಪರಿಸ್ಥಿತಿ ಇರುವಾಗ, ಅದನ್ನು ಕಾಪಾಡಿಕೊಂಡು ಮುಂದಿನ ಜನಾಂಗಕ್ಕೆ ಅದನ್ನು ತಲುಪಿಸುವ ಒಂದು ಯೋಜನೆಯನ್ನು ನಾನು ಕೈಗೆತ್ತಿಕೊಂಡೆ. ಅದಕ್ಕಾಗಿ ಧಾರವಾಡ ಆಕಾಶವಾಣಿಯ ಹಿರಿಯ ಹಾಗೂ ಪ್ರಸಿದ್ಧ ಸಂಗೀತ ವಿದೂಷಿ ಶ್ರೀಮತಿ ಅನುರಾಧಾ ಧಾರೇಶ್ವರರ ನೇತೃತ್ವದಲ್ಲಿ ಬೆಂಗಳೂರಿನ ಶ್ರೀ ಕಾಶೀಮಠದಲ್ಲಿ ಅಧ್ಯಕ್ಷರಾದ ಶ್ರೀ ಪಿ. ದಯಾನಂದ ಪೈ ಹಾಗು ಕಾರ್ಯಕಾರಿ ಸಮಿತಿಯ ಪೂರ್ಣ ಸಹಕಾರ ಪಡೆದು ಮಹಿಳೆಯರಿಗಾಗಿ ಏಳು ದಿನಗಳ "ಒವ್ಯೊ ಹುಮಣ್ಯೋ ಕಾರ್ಯಾಗಾರ"ವನ್ನು ನಡೆಸಲಾಯಿತು.

ಉತ್ತರ ಕನ್ನಡ ಜಿಲ್ಲೆ, ಉಡುಪಿ, ಕುಂದಾಪುರ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬೆಂಗಳೂರಿನ ಮಹಿಳಾ ಸಮಾಜದ ೩೦ ಮಹಿಳೆಯರು ಶ್ರೀಮತಿ ಅನುರಾಧಾ ಧಾರೇಶ್ವರರ ಸಮರ್ಥ ಮಾರ್ಗದರ್ಶನದಲ್ಲಿ ಈ ಕಾರ್ಯಾಗಾರದಲ್ಲಿ ಪಾಲುಗೊಂಡು ಅದನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. ಬೆಂಗಳೂರಿನ ಸ್ಟುಡಿಯೋದಲ್ಲಿ ಈ ಹಾಡುಗಳ ಧ್ವನಿ ಮುದ್ರಣವನ್ನು ಮಾಡಿ "ಒವ್ಯೊ ಗಾಂವ್ಪುಂಯಾ"(ಹೋವಿ ಹಾಡೋಣ) ಎಂಬ ಸಿಡಿಯನ್ನು ಸಿದ್ಧಪಡಿಸಲಾಯಿತು. ಆಮೇಲೆ "ಒವಿ ದರ್ಶನ್" ಎಂಬ ಡಿವಿಡಿ ಹಾಗೂ ವಿಸಿಡಿ ಮಾಡಿಯೂ ಬೆಳಕಿಗೆ ತಂದೆವು.

ನಾನು ಕನ್ನಡ ಮತ್ತು ಕೊಂಕಣಿಯಲ್ಲಿ ಬರೆದ ಕೆಲವು ಕಥೆಗಳು ಇದ್ದವು. ಅದನ್ನು ನಾನು ಕೊಂಕಣಿ ಭಾಷೆಯಲ್ಲಿ "ಎಮಿಲಿ" ಹೆಸರಿನಲ್ಲಿ ಪ್ರಕಟಿಸಿದೆ. ಹೀಗೆ ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಪ್ರಕಾಶಕನಾಗಿಯೂ ದೇಣಿಗೆ ನೀಡುವ ಕಾರ್ಯವನ್ನು ನಡೆಸುವ ಭಾಗ್ಯ ಮತ್ತು ಸುಸಂಧಿಯೂ ನನಗೆ ದೊರೆತಿದೆ.

ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ "ಕೊಂಕಣಿ ಮಹಾ ಮಾನೆಸ್ತ" ಲೇಖನ ಮಾಲಿಕೆಯ ಹೆಸರಿನಲ್ಲಿ ಕೊಂಕಣಿ ಸಮಾಜದ ಪ್ರಸಿದ್ಧ ಮಹಾ ಪುರುಷರ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನು ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೆ. ಆಗ ೧೮ ಕೊಂಕಣಿ ಮಹಾಪುರುಷರ ಜೀವನ ಚರಿತ್ರೆಗಳು ಸಣ್ಣ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದವು. ಅದರಲ್ಲಿ "ದಕ್ಷಿಣ ಕನ್ನಡ ಜಿಲ್ಲಾ ಅಭಿವೃದ್ಧಿಯ ಪಿತಾಮಹರು" ಎಂದೇ ಪ್ರಸಿದ್ಧರಾಗಿದ್ದ ಶ್ರೀ ಉಳ್ಳಾಲ ಶ್ರೀನಿವಾಸ ಮಲ್ಯ ಅವರ ಜೀವನ ಚರಿತ್ರೆಯನ್ನು ನಾನು ಕೊಂಕಣಿಯಲ್ಲಿ ಬರೆದಿದ್ದೆ. ಈ ಪುಸ್ತಕವನ್ನು ಮಂಗಳೂರು ಆಕಾಶವಾಣಿಯ ಅಧಿಕಾರಿ, ತುಳು ಮಾತೃಭಾಷಿಕರಾಗಿರುವ ಕನ್ನಡ ಮತ್ತು ಕೊಂಕಣಿ ಭಾಷೆಯ ಅಭಿಮಾನಿಗಳಾದ ಶ್ರೀ ಮುದ್ದು ಮೂಡುಬೆಳ್ಳೆಯವರು ತುಳು ಭಾಷೆಗೆ ಅನುವಾದಿಸಿದ್ದರು. "ಉಳ್ಳಾಲ ಶ್ರೀನಿವಾಸ ಮಲ್ಯೆರ್" ಎಂಬ ಹೆಸರಿನ ಈ ಪುಸ್ತಕದ ಪ್ರಕಾಶನವನ್ನೂ ನಾನೇ ಮಾಡಿದೆ.

ಕೊಂಕಣಿ ಭಾಷೆಯನ್ನು ಹಿಂದು, ಮುಸ್ಲಿಂ ನವಾಯತ್ ಮತ್ತು ಕ್ರೈಸ್ತರು ಬಳಸುತ್ತಾರೆ. ಇದರಲ್ಲಿ ಭಟ್ಕಳದ ನವಾಯತರು ಮಾತನಾಡುವ ಕೊಂಕಣಿ ಉಪಭಾಷೆಯಲ್ಲಿ ಪಾರಸಿ ಪದಗಳು ಹೆಚ್ಚು ಇವೆ. ಅವರು ಕೊಂಕಣಿಯನ್ನು ಪಾರ್ಸಿ ಲಿಪಿಯಲ್ಲಿ ಮತ್ತು ಉರ್ದು ಮಾದರಿಯಲ್ಲಿ(ಬಲದಿಂದ ಎಡಕ್ಕೆ) ಬರೆಯುತ್ತಾರೆ. ಅವರಲ್ಲಿ ಸಾಹಿತಿಗಳು ಕಡಿಮೆ. ಅಬ್ದುರ ರಹಿಮಾನ್ ಇರ್ಷಾದ ಎಂಬ ಮಹನೀಯರೊಬ್ಬರು ಸುಮಾರು ೨೦-೨೫ ವರ್ಷಗಳಿಂದ ಕೊಂಕಣಿ ಭಾಷೆಯ "ನಕ್ಷ ನವಾಯತ" ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು ಬಿಟ್ಟರೆ ಬೇರೆ ಬರೆಹಗಾರರು ಇಲ್ಲವೆಂದೇ ಹೇಳಬಹುದು.

ಮುಂಬೈಯ ದಿ. ಸುರಕುಂಡ ಅಣ್ಣಾಜಿ ರಾವ್ ಅವರ "ಪೊರಣೆ ಕೊಂಕಣಿ ಸಾಹಿತ್ಯ ಕೃತ್ಯೊ"(ಹಳೆ ಕೊಂಕಣಿ ಸಾಹಿತ್ಯ ಕೃತಿಗಳು) ಎಂಬ ಪುಸ್ತಕವನ್ನು ಪುನರ್ ಮುದ್ರಿಸುವ ಅವಕಾಶವೂ ನನಗೆ ದೊರೆತಿತ್ತು. ಅದನ್ನೂ ನಾನು ಬಸ್ತಿ ಪ್ರಕಾಶನದ ವತಿಯಿಂದ ಬೆಳಕಿಗೆ ತಂದಿದ್ದೇನೆ.

ಕನ್ನಡ ಭಾಷೆಯ ಪ್ರಥಮ "ರಾಷ್ಟ್ರಕವಿ" ಎಂಬ ಉತ್ತುಂಗ ಪ್ರಶಸ್ತಿಯಿಂದ ಪುರಸ್ಕೃತರಾಗಿದ್ದ ಮಂಜೇಶ್ವರ ಗೋವಿಂದ ಪೈಯವರ ಜೀವನ ಚರಿತ್ರೆಯನ್ನು ಡಾ. ಕಯ್ಯಾರ ಕಿಂಞ್ಞಣ್ಣ ರೈ ಅವರು ಕನ್ನಡದಲ್ಲಿ ರಚಿಸಿದ್ದರು. ಇದನ್ನು ಕೇರಳ ಸರಕಾರ ಮಲೆಯಾಳಿ ಭಾಷೆಗೆ ಅನುವಾದಿಸಿ ಕೇರಳ ವಿಶ್ವವಿದ್ಯಾಲಯದ ಪಠ್ಯಪುಸ್ತಕವನ್ನಾಗಿ ಮಾಡಿತ್ತು. ಇದೇ ಪುಸ್ತಕವನ್ನು ಕಾಸರಗೋಡಿನ ಶ್ರೀ ಎ. ನರಸಿಂಹ ಭಟ್ ಎಂಬ ಮಹನೀಯರು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದರು. ಆದರೆ ಆ ಭಾಷಾಂತರ ಕೃತಿಯು ಸುಮಾರು ಹತ್ತು ವರ್ಷಗಳಿಂದ ಪ್ರಕಟವಾಗದೆ ಮೂಲೆ ಸೇರಿತ್ತು.

ಈ ವಿಚಾರವನ್ನು ಶ್ರೀ ಕಯ್ಯಾರ ಕಿಂಞ್ಞಣ್ಣ ರೈಯವರು ನನ್ನನ್ನು ವೈಯಕ್ತಿಕವಾಗಿ ಭೇಟಿ ಮಾಡಿದ ಸಂದರ್ಭದಲ್ಲಿ ನನ್ನ ಬಳಿ ಪ್ರಸ್ತಾಪಿಸಿ "ನೀವು ಈ ಗ್ರಂಥವನ್ನು ಬೆಳಕಿಗೆ ತರಬೇಕು" ಎಂದು ವಿನಂತಿಸಿಕೊಂಡಿದ್ದರು. ಹೀಗಾಗಿ ಈ ಇಂಗ್ಲಿಷ್ ರೂಪಾಂತರ ಕೃತಿ "ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ" ಹೆಸರಿನಲ್ಲಿ ಬಸ್ತಿ ಪ್ರಕಾಶನದ ಮೂಲಕ ಬೆಳಕಿಗೆ ಬಂತು. ಅದನ್ನು ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಮಂಗಳೂರಿನ ನಲಂದಾ ಸಭಾಗೃಹದಲ್ಲಿ ಬಿಡುಗಡೆ ಮಾಡಿದ್ದರು. ಆ ಸಮಾರಂಭದಲ್ಲಿ ಶ್ರೀ ಕಯ್ಯಾರ ಕಿಂಞ್ಞಣ್ಣ ರೈ ಹಾಜರಿದ್ದು ನನಗೆ ಆಶೀರ್ವಾದ ಮಾಡಿದ್ದಾರೆ.

ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವ ಪ್ರಥಮವಾಗಿ ಕಮ್ಯೂನಿಸ್ಟ್ ಪಕ್ಷದ ಸಂಘಟನೆಯನ್ನು ನಡೆಸಿ ಕಾರ್ಮಿಕ ಚಳವಳಿಯ ಮುಖಂಡತ್ವವನ್ನು ವಹಿಸಿದ್ದ, ಪ್ರಸಿದ್ಧ ಕಮ್ಯೂನಿಸ್ಟ್ ನೇತಾರ ಶ್ರೀ ಎ. ಶಾಂತಾರಾಮ ಪೈ ಅವರ ಕನ್ನಡ ಜೀವನ ಚರಿತ್ರೆಯನ್ನು ನಾನೇ ಕೊಂಕಣಿಗೆ ಅನುವಾದಿಸಿ ಬಸ್ತಿ ಪ್ರಕಾಶನದಲ್ಲಿ ಪ್ರಕಟಿಸಿದ್ದೇನೆ. ಈ ಪುಸ್ತಕವನ್ನು ದಿ. ಶಾಂತಾರಾಮ ಪೈ ಅವರ ಹಿಂದಿನ ಕಾಲೇಜು ಸಹಪಾಠಿ ಶ್ರೀ ಕೆ.ಕೆ. ಪೈ ಮತ್ತು ಶ್ರೀ ಬಿ.ವಿ. ಕಕ್ಕಿಲಾಯ(ಇವರು ಕೂಡ ಕಮ್ಯೂನಿಸ್ಟ್ ಪಕ್ಷದ ಮುಖಂಡರಲ್ಲಿ ಒಬ್ಬರು) ಮಂಗಳೂರಿನಲ್ಲಿ ಬಿಡುಗಡೆ ಮಾಡಿದ್ದರು.

ಬಾಳ ಗೀತೆಗಳು (ಕೊಂಕಣಿ ಲೋಕ ಸಂಗೀತ)

ಕೊಂಕಣಿ ಭಾಷಿಕರಲ್ಲಿ ಲೋಕ ಸಾಹಿತ್ಯ(ಜಾನಪದ), ಸಂಗೀತ ಮತ್ತು ನೃತ್ಯಗಳು ತುಂಬಾ ಇವೆ. ಬೇರೆ ಬೇರೆ ಕೊಂಕಣಿ ಸಮಾಜದಲ್ಲಿ ವಿವಿಧ ಉಪಭಾಷೆಗಳ ಬಾಳ ಗೀತೆಗಳು, ಸಂಗೀತ, ಕುಣಿತಗಳು ಇವೆ. ವಿಭಿನ್ನ ವೃತ್ತಿಗೆ ಅನುಗುಣವಾಗಿ (ವೃತ್ತಿ ಸಂಬಂಧಿ) ಅನೇಕ ವಿಧದ ಹಾಡುಗಳೂ, ಕುಣಿತಗಳೂ ಇವೆ. ಮಗು ಹುಟ್ಟಿದಂದಿನಿಂದ ಅನಂತರದ ಹಂತಗಳಲ್ಲಿ ನಡೆಯುವ ಸಂಸ್ಕಾರಗಳಿಗೆ ಸಂಬಂಧಿಸಿದ ವೈವಿಧ್ಯಪೂರ್ಣ ಹಾಡುಗಳು, ಸಂಗೀತ ಚಲಾವಣೆಯಲ್ಲಿ ಇವೆ. ಕೊಂಕಣಿ ಬಾಲಜಗತ್ತು ವಿಸ್ತಾರವಾದುದು. ಈ ಪ್ರಕಾರದ ಬಾಲಸಾಹಿತ್ಯವನ್ನು ಸಂಗ್ರಹಿಸಿ, ಅದಕ್ಕೆ ಸಂಗೀತ ಮತ್ತು ನೃತ್ಯ ಸಂಯೋಜನೆಯನ್ನು ನಡೆಸಿ ದೃಶ್ಯ ಶ್ರಾವ್ಯ ರೂಪದಲ್ಲಿ ಸಿಡಿಯಾಗಿ

ಮುದ್ರಿಸಿಕೊಳ್ಳುವುದು ಅಥವಾ ದಾಖಲೀಕರಿಸುವುದು ಅಗತ್ಯವಾಗಿದೆ. ಜಗತ್ತಿನಲ್ಲಿ ತ್ವರಿತ ಗತಿಯಿಂದ ಸಾಂಸ್ಕೃತಿಕ ಮತ್ತು ಸಾಮಾಜಿಕ ನಡವಳಿಕೆಗಳಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತಿರುವ ಈ ಸಂಕ್ರಮಣ ಕಾಲದಲ್ಲಿ ಈ ಪಾರಂಪರಿಕ ಸಾಹಿತ್ಯವನ್ನು ಒಂದೆಡೆ ಕಲೆ ಹಾಕಿ ಕೂಡಿಡುವುದು ಇಂದಿನ ಅಗತ್ಯಗಳಲ್ಲಿ ಒಂದು. ನಾನು ಈ ವಿಚಾರವಾಗಿ ತುಂಬಾ ಚಿಂತನೆಯನ್ನು ನಡೆಸಿ ಬಾಲಗೀತೆಗಳ ಪಾರಂಪರಿಕ ಸಾಹಿತ್ಯ ಸಂಗ್ರಹವನ್ನು ನಡೆಸಿ ದೃಶ್ಯ ಶ್ರಾವ್ಯ ಸಿಡಿ ರೂಪದಲ್ಲಿ ಬೆಳಕಿಗೆ ತರುವುದೆಂದು ತೀರ್ಮಾನಿಸಿದೆ (ಈಗಾಗಲೇ ನನ್ನ ಬಸ್ತಿ ಪ್ರಕಾಶನದ ವತಿಯಿಂದ ಸಂತೋಷ ಕುಮಾರ್ ಗುಲ್ವಾಡಿಯವರು ಸಂಪಾದಿಸಿದ್ದ ಬಾಳಗೀತೆಗಳ ಸಂಗ್ರಹ "ತಾ ತಾ ತಿಂಗಣ"ವನ್ನು ಪ್ರಕಟಿಸಿದ್ದೆ).

ಅದೇ ದಿನಗಳಲ್ಲಿ ಬೆಂಗಳೂರು ದೂರದರ್ಶನದ ಕಾರ್ಯನಿರ್ವಾಹಕರಾದ ಶ್ರೀಮತಿ ಉಷಾ ಕಿಣಿಯವರು ಬೇರೊಂದು ಕಾರ್ಯಕ್ರಮದ ಛಾಯಾಗ್ರಹಣಕ್ಕಾಗಿ ಮಂಗಳೂರಿಗೆ ಬಂದಿದ್ದರು. ಅವರಿಗೆ ನಾನು ಸಂಗ್ರಹಿಸಿ ಇಟ್ಟಿದ್ದ ಸಾಹಿತ್ಯ ಮತ್ತು ನಡೆಸಿದ ಸಿದ್ಧತೆಯ ಕುರಿತು ತಿಳಿಸಿದೆ. ಅದನ್ನು ನೋಡಿ ಅವರು ತುಂಬಾ ಪ್ರಶಂಸೆ ವ್ಯಕ್ತಪಡಿಸಿದರು. ಆಮೇಲೆ ನಾನು ಮಂಗಳೂರಿನ ಪ್ರಸಿದ್ಧ ಸಮಾಜ ಸೇವಕಿ ಶ್ರೀಮತಿ ಮಾಲತಿ ಕಾಮತ ಮತ್ತು ಅವರ ಪಂಗಡದ ಮಹಿಳೆಯರಿಗೆ ತಿಳಿಸಿ ಬೇರೆ ಬೇರೆ ಕಾರ್ಯಕ್ರಮದ ಚಿತ್ರೀಕರಣ ನಡೆಸುವ ಮಾಹಿತಿಯನ್ನು ನೀಡಿದೆ. ಅವರು ಅದಕ್ಕೆ ಸಮ್ಮತಿಸಿ, ಮಂಗಳೂರಿನಲ್ಲಿ ಕೆಲವು ಬಾಲಗೀತೆಗಳನ್ನು ಹಾಡುವ ದೃಶ್ಯದ ಚಿತ್ರೀಕರಣಕ್ಕೆ ವ್ಯವಸ್ಥೆ ಮಾಡಿಕೊಟ್ಟು ನೆರವಾದರು. ಇದರಲ್ಲಿ ಕೆಲವು ದೃಶ್ಯಗಳ ಚಿತ್ರೀಕರಣವನ್ನು ನಮ್ಮ ಬಸ್ತಿ ಗಾರ್ಡನ್ಸ್‌ನಲ್ಲಿಯೂ ನಡೆಸಿದೆವು. ಈ ಕಾರ್ಯಕ್ರಮ ಬೆಂಗಳೂರು ದೂರದರ್ಶನದಿಂದ ೨೫, ಏಪ್ರಿಲ್ ೨೦೦೩ರಂದು ಪ್ರಸಾರವಾಯಿತು. ಇದಕ್ಕೆ ಎಲ್ಲಾ ಕಡೆಗಳಿಂದ ಪ್ರಶಂಸೆಯೂ ದೊರೆಯಿತು. ಆ ಮೇಲೆಯೂ ಈ ಕಾರ್ಯಕ್ರಮ ಅನೇಕ ಬಾರಿ ಮರುಪ್ರಸಾರಗೊಂಡಿದೆ. ಇದರ ಸಿಡಿಗೆ ಅಪಾರ ಬೇಡಿಕೆ ಇದೆ.

ಆ ವರ್ಷ ಶ್ರೀ ಪಿ. ದಯಾನಂದ ಪೈ ಅವರ ನೆರವಿನಿಂದ ಬೆಂಗಳೂರಿನಲ್ಲಿ "ಕೊಂಕಣಿ ಬಾಳ ಗೀತೆ ಕಾರ್ಯಾಗಾರ"ವನ್ನು ಆಯೋಜಿಸಿ ಕೊಂಕಣಿ ಹೆಣ್ಣುಮಕ್ಕಳಿಗೆ ಮತ್ತು ಮಹಿಳೆಯರಿಗೆ ನಾನು ೧೯೯೫ರಲ್ಲಿ ಬಸ್ತಿ ಪ್ರಕಾಶನದಿಂದ ಪ್ರಕಟಿಸಿದ್ದ ಶ್ರೀ ಸಂತೋಷ ಕುಮಾರ್ ಗುಲ್ವಾಡಿಯವರ ಸಂಪಾದಕತ್ವದ "ತಾ ತಾ ತಿಂಗಣ" ಪುಸ್ತಕದಲ್ಲಿರುವ ಬಾಳ ಗೀತೆಗಳನ್ನು ಕಲಿಸಿ ಹಾಡುವ ತರಬೇತಿ ಮತ್ತು ಅದರ ಚಿತ್ರೀಕರಣವೂ ನಡೆದಿದೆ.

ಹೀಗೆ ಬಸ್ತಿ ಪ್ರಕಾಶನದ ಹೆಸರಿನಲ್ಲಿ ಕೊಂಕಣಿ ಭಾಷಾ ಸಾಹಿತ್ಯದ ಸೇವೆಯನ್ನು ಮಾಡುವ ಉತ್ತಮ ಅವಕಾಶ ನನಗೆ ದೊರೆತಿತ್ತು.

ಬಸ್ತಿ ಪ್ರಕಾಶನ ಪ್ರಕಟಿಸಿದ ಗ್ರಂಥಗಳು

೧ ಆಧುನಿಕ ತೆನ್ನಾಲಿರಾಮು ಮಾಟ್ಟುಪಯ್ಯಾ–ಬಸ್ತಿ ವಾಮನ ಶೆಣ್ಯೈ, ೧೯೮೮

೨ ತಾ ತಾ ತಿಂಗಣ ಕೊಂಕಣಿ ಬಾಳಗೀತಾಂ–ಸಂಗ್ರಹ : ಸಂತೋಷ ಕುಮಾರ ಗುಲ್ವಾಡಿ, ೧೯೯೫

೩ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ–ಮೂಲ ಇಂಗ್ಲಿಶ್: ಶ್ರೀ ಕಯ್ಯಾರ ಕಿಞ್ಞಣ್ಣ ಅನು: ಎ. ನಾರಾಯಣ, ೨೦೦೧

೪ ಕರ್ನಾಟಕಾಂತ ಉಲೊವಚೆ ಕೊಂಕಣಿ ಶಬ್ದ ಸಂಗ್ರಹ –ಬಸ್ತಿ ಪುಂಡಲೀಕ ಶೆಣ್ಯೈ, ೨೦೦೨

೫ ಎಮಿಲಿ, (ಕೊಂಕಣಿ ಲ್ಹಾನ್ ಕಾಣಿಯೊ)–ಬಸ್ತಿ ವಾಮನ ಶೆಣ್ಯೈ, ೨೦೦೪

೬ ಚಿಂದಯಾಂಚೆ ಗೊಂಬೆ–ಶಬ್ಬೀರ್ ಬಾಯ್ವಾ, ೨೦೦೫

೭ ಸುರಗ್ಯಾಸರ–ಡಾ.ಜ್ಯೋತ್ಸ್ನಾ ಕಾಮತ್, ೨೦೦೫

೮ ಕೊಂಕಣಿ (ತದ್ಭವ) ಸಂಸ್ಕೃತ ಶಬ್ದಕೋಶ– ಎಂ. ಮಾಧವ ಪೈ, ೨೦೦೬

೯ ಸುಗಂಧಿಲೆಂ ದುಃಖ–ಭಕ್ತಾ, ಆರ್. ಕಾಂಞ್ಞಗಾಡ, ೨೦೦೭

೧೦ ಪೊರನೆ ಕೊಂಕಣಿ ಸಾಹಿತ್ಯ–ಸುರಕುಂಡ ಅಣ್ಣಾಜಿರಾವ್, ೨೦೦೭

೧೧ ಉಳ್ಳಾಲ ಶ್ರೀನಿವಾಸ ಮಲ್ಯರ (ತುಳು)–ಮೂಲ: ಬಸ್ತಿ ವಾಮನ ಶೆಣ್ಯೈ–ಅನು: ಮುದ್ದು ಮೂಡುಬೆಳ್ಳೆ (ತುಳು), ೨೦೦೭

೧೨ ಹಸನ್ಮುಖೀ ಝುಜಾರಿ ಕಾಮ್ರೆಡ್–ಶಾಂತಾರಾಮ ಪೈ, –ಮೂಲ: ವಿ. ಕುಕ್ಯಾನ–ಅನು: ಬಸ್ತಿ ವಾಮನ ಶೆಣ್ಯೈ, ಜಯಶ್ರೀ ಶೆಣ್ಯೈ, ೨೦೦೭

೧೩ ಅಮೃಥ ಮಂಥನ (ಕನ್ನಡ)–ಬಸ್ತಿ ವಾಮನ ಶೆಣ್ಯೈ, ೨೦೧೦

●●

೩೨. ಬಸ್ತಿ ವಿಜನ್ಸ್

ಕೊಂಕಣಿ ಒವ್ಯೋ(ಹೋವಿಗಳ) ಕಾರ್ಯಾಗಾರ

ಡಾ. ಜ್ಯೋತ್ಸ್ನಾ ಕಾಮತರ "ಸುರಗ್ಯಾಸರ" ಗ್ರಂಥದಲ್ಲಿ ಅವರು ಸಂಗ್ರಹಿಸಿದ್ದ ಅನೇಕ ಕೊಂಕಣಿ ಹೋವಿಗಳು ಲಿಖಿತ ರೂಪದಲ್ಲಿದ್ದವು. ಆದರೆ, ಹೋವಿಗಳನ್ನು ಪರಂಪರಾಗತ ರಾಗಗಳಲ್ಲಿ ಹಾಡಲು ಲಿಖಿತ ಸಾಹಿತ್ಯವಷ್ಟೇ ಸಾಕಾಗುವುದಿಲ್ಲ. ಮಹಿಳೆಯರು ಆ ಹೋವಿಗಳನ್ನು ಪಾರಂಪರಿಕ ರಾಗಗಳಲ್ಲಿ, ಸ್ವರಗಳಲ್ಲಿ ಹಾಡಲು ಅವರಿಗೆ ತರಬೇತಿ ಬೇಕು ಎನ್ನುವುದು ನನಗೆ ಹೊಳೆಯಿತು. ಈ ವಿಚಾರವನ್ನು ನಾನು ಶ್ರೀಮತಿ ಕಾಮತರಲ್ಲಿ ತಿಳಿಸಿ, ಹೋವಿಗಳನ್ನು ಪಾರಂಪರಿಕ ರಾಗಗಳಲ್ಲಿ ಹೇಳುವ ಒಂದು ಕಾರ್ಯಾಗಾರವನ್ನು ನಡೆಸಿದರೆ ಉತ್ತಮವೆಂದು ಹೇಳಿದೆ. ಆಗ ಶ್ರೀಮತಿ ಕಾಮತರು ಧಾರವಾಡ ಆಕಾಶವಾಣಿಯಲ್ಲಿ ಭಾರತದಲ್ಲಿಯೇ ಪ್ರಥಮ ಬಾರಿ "ಜಾಯಜೂಯ" ಕೊಂಕಣಿ ಕಾರ್ಯಕ್ರಮವನ್ನು ಪ್ರಾರಂಭಿಸಿದ ಹಿರಿಯ ಕಲಾವಿದೆ ಶ್ರೀಮತಿ ಅನುರಾಧಾ ಧಾರೇಶ್ವರರಿಗೆ ಹೋವಿಗಳ ಪಾರಂಪರಿಕ ರಾಗ ಹಾಡಲು ಬರುತ್ತದೆ, ಅವರನ್ನು 'ಹೋವಿ' ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಪಾಲುಗೊಳ್ಳಲು ವಿನಂತಿಸಬಹುದು ಎಂದು ಹೇಳಿದರು. ಇದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಭುಜದ ಮೇಲಿದ್ದ ಭಾರ ಕೆಳಗಿಳಿಸಿದ ಅನುಭವವಾಯಿತು. ಕಾರ್ಯಾಗಾರದಲ್ಲಿ ಭಾಗಿಯಾಗುವ ಅಭ್ಯರ್ಥಿಗಳು ಹೋವಿ ಹಾಡುವುದನ್ನು ಸ್ಟುಡಿಯೋದಲ್ಲಿ ರೆಕಾರ್ಡ್ ಮಾಡುವುದರ ಕುರಿತು ನೆರವು ಮತ್ತು ಮಾರ್ಗದರ್ಶನ ನೀಡುವಂತೆ ಖ್ಯಾತ ಗಾಯಕರಾದ ಪುತ್ತೂರು ನರಸಿಂಹ ನಾಯಕರ ಬಳಿ ಕೇಳಿದಾಗ ಅವರು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡು, ನಮ್ಮನ್ನು ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯಲ್ಲಿರುವ ಪಾರೇಖ ರಿಕಾರ್ಡಿಂಗ್ ಸ್ಟುಡಿಯೋಗೆ ಕರೆದುಕೊಂಡು ಹೋದರು. ಶ್ರೀ ಪಾರೇಖ ಸ್ಟುಡಿಯೋ ಮಾಲಿಕರು ಕೂಡ ನಮಗೆ ಸಹಕಾರ ನೀಡುವುದಾಗಿ ಮತ್ತು ಕಡಿಮೆ ಖರ್ಚಿನಲ್ಲಿ ರೆಕಾರ್ಡಿಂಗ್ ಮಾಡಿ ಕೊಡುವುದಾಗಿ ಭರವಸೆ ನೀಡಿದರು.

ಹೀಗಾಗಿ ನಾನು ಬೆಂಗಳೂರು ಮಲ್ಲೇಶ್ವರಂನಲ್ಲಿರುವ ಕಾಶೀಮಠದ ಅಧ್ಯಕ್ಷರಾದ ಶ್ರೀ ಪಿ. ದಯಾನಂದ ಪೈಯವರನ್ನು ಭೇಟಿಯಾಗಿ ಹೋವಿ ಕಾರ್ಯಾಗಾರದ ವಿಷಯವನ್ನು ಅವರಿಗೆ ತಿಳಿಸಿ, ಅದರಲ್ಲಿ ಭಾಗಿಯಾಗಲು ಬೇರೆ ಬೇರೆ ಊರುಗಳಿಂದ ಬರುವ ಮಹಿಳೆಯರಿಗೆ ಕಾಶೀಮಠದಲ್ಲಿ ೬ ದಿನ ನಿಲ್ಲುವ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿದಾಗ ಅವರು ತಮ್ಮ ಪೂರ್ಣ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು.

ಮೇಲೆ ತಿಳಿಸಿದ ಎಲ್ಲಾ ವ್ಯವಸ್ಥೆಗಳಾದ ಬಳಿಕ ಹೋವಿ ಕಾರ್ಯಾಗಾರವು ಏಪ್ರಿಲ್ ೧೯, ೨೦೦೪ರ ಬೆಳಗ್ಗೆ ಗಂಟೆ ೧೦.೩೦ಕ್ಕೆ ಖ್ಯಾತ ಕೊಂಕಣಿ ಹಿರಿಯರಾದ ಶ್ರೀ ಭದ್ರಗಿರಿ ಸರ್ವೋತ್ತಮ ಪೈ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ದೂರದರ್ಶನದ ಕಾರ್ಯನಿರ್ವಾಹಕಿ ಶ್ರೀಮತಿ ಉಷಾ ಕಿಣಿಯವರು ದೀಪ ಹಚ್ಚುವ ಮೂಲಕ ಬೆಂಗಳೂರಿನ ಮಲ್ಲೇಶ್ವರಂ ಕಾಶೀಮಠದಲ್ಲಿ ಉದ್ಘಾಟನೆಗೊಂಡಿತು. ನಾವು ಬೇರೆ ಬೇರೆ ಪತ್ರಿಕೆಗಳಲ್ಲಿ ಮಾಹಿತಿ ನೀಡಿದ್ದರಿಂದ ಮತ್ತು ವಿವಿಧ ಕೊಂಕಣಿ ಸಂಘ, ಸಂಸ್ಥೆಗಳಿಗೆ ಮೊದಲೇ ತಿಳಿಸಿದ್ದರಿಂದ ಕಾರವಾರ, ಕುಮಟಾ, ಶಿರಸಿ, ಹೊನ್ನಾವರ, ಕುಂದಾಪುರ, ಉಡುಪಿ, ಶಿವಮೊಗ್ಗಾ, ಮಂಗಳೂರು, ಬಂಟವಾಳ ಮತ್ತು ಬೆಂಗಳೂರಿನಿಂದ ಸುಮಾರು ೪೦ ಮಹಿಳೆಯರು ಬಂದು ಈ ಹೋವಿ ಕಾರ್ಯಾಗಾರದಲ್ಲಿ ೬ ದಿನಗಳ ಕಾಲ ಭಾಗವಹಿಸಿದ್ದಾರೆ. ಡಾ. ಜ್ಯೋತ್ಸ್ನಾ ಕಾಮತರ ನಿರ್ದೇಶನ ಮತ್ತು ಶ್ರೀಮತಿ ಅನುರಾಧಾ ಧಾರೇಶ್ವರರ ಮಾರ್ಗದರ್ಶನದಲ್ಲಿ ಕಾರ್ಯಾಗಾರ ಯಶಸ್ವಿಯಾಯಿತು. ಆಮೇಲೆ ನಾನು ಪಾರೇಖ ರಿಕಾರ್ಡಿಂಗ್ ಸ್ಟುಡಿಯೋಗೆ ಹೋಗಿ ಆಡಿಯೊ, ವಿಡಿಯೋ ರೆಕಾರ್ಡಿಂಗ್ ಮಾಡಿದೆ. ಶ್ರೀ ಪುತ್ತೂರು ನರಸಿಂಹ ನಾಯಕರು ನಮ್ಮೊಂದಿಗೆ ಇದ್ದುದರಿಂದ ನಮಗೆ ತುಂಬಾ ಸಹಾಯವಾಯಿತು.

ಏಪ್ರಿಲ್ ೨೪, ೨೦೦೫ ರಂದು ಭಾನುವಾರದ ದಿನ ಸಂಜೆ ಕಾಶೀಮಠದಲ್ಲಿ ಕಾರ್ಯಾಗಾರದ ಸಮಾರೋಪ ಸಮಾರಂಭ ನಡೆಯಿತು. ಈ ಸಮಾರಂಭದಲ್ಲಿ ಶ್ರೀ ಮತ್ತು

ಶ್ರೀಮತಿ ಪಿ. ದಯಾನಂದ ಪೈ ಹಾಗೂ ಶ್ರೀ ಮತ್ತು ಶ್ರೀಮತಿ ಕೆ.ಪಿ. ಲಕ್ಷ್ಮಣ ರಾವ್(ಸರಕಾರದ ಕಾರ್ಯದರ್ಶಿ) ಹಾಜರಿದ್ದರು.

ಹೋವಿ ಕಾರ್ಯಾಗಾರದಲ್ಲಿ ಪಾಲುಗೊಂಡು ತರಬೇತಿ ಪಡೆದ ಮಹಿಳೆಯರು, ಈ ಕಾರ್ಯಾಗಾರದ ನಿಮಿತ್ತವಾಗಿಯೇ ಅವರವರ ಊರುಗಳಲ್ಲಿ ನಡೆಯುವ ಮದುವೆ ಅಥವಾ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಕೊಂಕಣಿ ಪ್ರಾಚೀನ ಪದ್ಧತಿಯನ್ನು ಜೀವಂತವಾಗಿ ಉಳಿಸುವ ಪ್ರಯತ್ನವನ್ನು ನಡೆಸುತ್ತಿದ್ದಾರೆ ಎಂಬುದು ನನಗೆ ತುಂಬಾ ಸಂತೋಷ ನೀಡಿದ ವಿಚಾರ.

ಕೊಂಕಣಿ ಹೋವಿ ಕಾರ್ಯಾಗಾರದ ಫಲವಾಗಿ ಈಗ 'ಬಸ್ತಿ ವಿಜನ್ಸ್' ಹೆಸರಿನಲ್ಲಿ ನಾವು "ಕೊಂಕಣಿ ಒವ್ಯೊ" ಸಿಡಿಯನ್ನು ತಯಾರಿಸಿ ಸಾಂಸ್ಕೃತಿಕ ಕಾರ್ಯಕ್ರಮದ ಅಭಿರುಚಿ ಇರುವವರಿಗೆ ಅದನ್ನು ತಲುಪಿಸುತ್ತಿದ್ದೇವೆ.

ಬಸ್ತಿ ವಿಜನ್ಸ್ ಹೆಸರಿನಲ್ಲಿ ರೂಪಿಸಿದ "ಒವಿ ದರ್ಶನ" ಕಾರ್ಯಕ್ರಮವನ್ನು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡಲು ದೂರದರ್ಶನದ ಅಧಿಕಾರಿಗಳು ಸಮ್ಮತಿಸಿ, ಕಾರ್ಪೊರೇಶನ್ ಬ್ಯಾಂಕಿನವರು ಈ ಕಾರ್ಯಕ್ರಮವನ್ನು ಪ್ರಾಯೋಜಿಸಲು ಒಪ್ಪಿಕೊಂಡದ್ದರಿಂದ, ಫೆಬ್ರವರಿ ೨, ೨೦೦೬ರಂದು ರಾತ್ರಿ ೮ ಗಂಟೆಗೆ ಒವಿ ದರ್ಶನ-೧ ಸಿ.ಡಿ. ಪ್ರಸಾರಗೊಂಡದ್ದು ನನಗೆ ತುಂಬಾ ಸಂತೋಷದ ಮತ್ತು ಅಭಿಮಾನದ ವಿಷಯವಾಗಿದೆ. ಈ ಕಾರ್ಯಕ್ರಮವನ್ನು ವೀಕ್ಷಿಸಿದ ಬೇರೆ ಬೇರೆ ಊರಿನ ವೀಕ್ಷಕರು ಮತ್ತು ಶ್ರೋತ್ರಗಳು ಉತ್ತಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

'ತಾ ತಾ ತಿಂಗಣ' ಬಾಳ ಗೀತೆಗಳ ಕಾರ್ಯಾಗಾರ

ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಬೆಂಗಳೂರಿನ ಕಾಶೀಮಠದಲ್ಲಿ ಜೂನ್ ೨೫, ೨೦೦೯ ರಿಂದ ಜೂನ್ ೨೭, ೨೦೦೯ರವರೆಗೆ ೩ ದಿನಗಳ ಕೊಂಕಣಿ ಮಕ್ಕಳ ಬಾಳ ಗೀತೆಗಳ ಕಾರ್ಯಾಗಾರವು ಶ್ರೀಮತಿ ಜ್ಯೋತ್ಸ್ನಾ ಕಾಮತರ ಮಾರ್ಗದರ್ಶನದಲ್ಲಿ ಮತ್ತು ಧಾರವಾಡದ ಶ್ರೀಮತಿ ಚಿತ್ರಾ ಶಿರಾಲಿಯವರ ನಿರ್ದೇಶನದಲ್ಲಿ ನಡೆದಿತ್ತು. ಈ ಕಾರ್ಯಾಗಾರದಲ್ಲಿ ದಾವಣಗೆರೆ, ಶಿರಸಿ, ಕುಮಟಾ, ಹೊನ್ನಾವರ, ಮಂಗಳೂರು, ಬಂಟವಾಳ ಮತ್ತು ಬೆಂಗಳೂರಿನ ಸುಮಾರು ೪೦ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಭಾಗವಹಿಸಿದ್ದರು. ಇದರ ಚಿತ್ರೀಕರಣವನ್ನು ಬೆಂಗಳೂರು ದೂರದರ್ಶನ ಕೇಂದ್ರ ನಡೆಸಿ, ಅನಂತರ ಚಂದನ ವಾಹಿನಿಯಲ್ಲಿ ಇದರ ಪ್ರಸಾರವಾಗಿದೆ.

ಈ ಕಾರ್ಯಾಗಾರಕ್ಕೆ ಬೆಂಗಳೂರು ಕಾಶೀಮಠದ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ತುಂಬಾ ಸಹಾಯ ನೀಡಿದ್ದರು. ಬೆಂಗಳೂರು ಆಕಾಶವಾಣಿಯ ನಿರ್ದೇಶಕರಾದ ಶ್ರೀ ಚೇತನ ಕುಮಾರ್ ಕೂಡ ಬಂದಿದ್ದರು. ಬೆಂಗಳೂರು ದೂರದರ್ಶನದ ಕಾರ್ಯನಿರ್ವಾಹಕರಾದ ಶ್ರೀಮತಿ ಉಷಾ ಕಿಣಿಯವರು ಇದಕ್ಕೆ ತುಂಬಾ ಉತ್ಸಾಹ ತೋರಿದ್ದಾರೆ. ಬಾಳಗೀತೆ ಕಾರ್ಯಕ್ರಮವು ಬೆಂಗಳೂರು ದೂರದರ್ಶನದ ಚಂದನ ವಾಹಿನಿಯಲ್ಲಿ ಜುಲೈ ೧೨, ೨೦೦೯ರಂದು ಮಧ್ಯಾಹ್ನ ೩.೩೦ಕ್ಕೆ ಪ್ರಸಾರವಾಗಿ ಬೇರೆ ಬೇರೆ ಊರುಗಳ ಜನರ ಮೆಚ್ಚುಗೆ ಮತ್ತು ಪ್ರಶಂಸೆಗೆ ಪಾತ್ರವಾಗಿದೆ.

ಬಸ್ತಿ ವಿಜನ್ಸ್ ಹೊರತಂದ ಸಿಡಿಗಳು

೧ ಕೊಂಕಣಿ ಕಲಾ ಉತ್ಸವ, ದೆಹಲಿ, ಬಸ್ತಿ ವಿಜನ್ಸ್ ೧೯೯೮

೨ ಒವ್ಯೊ ಗಾವುಯಾಂ (ಸುರಗ್ಯಾಸರ), ಬಸ್ತಿ ವಿಜನ್ಸ್ ೨೦೦೫

೩ ಕೊಂಕಣಿ ಬಾಳಗೀತಾಂ (ತಾ ತಾ ತಿಂಗಣ), ಬಸ್ತಿ ವಿಜನ್ಸ್ ೨೦೦೯

●●

೩೩. ಬಂಟವಾಳ ಶ್ರೀ ವೆಂಕಟರಮಣ ಸ್ವಾಮಿಗೆ ಬೆಳ್ಳಿ ರಥ

ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ಬೆಳ್ಳಿ ರಥವನ್ನು ಮಾಡಿಸಿ ಒಪ್ಪಿಸಬೇಕೆಂದು ಬಂಟವಾಳ ಶ್ರೀ ವೆಂಕಟರಮಣ ಸ್ವಾಮೀ ದೇವಸ್ಥಾನದಲ್ಲಿ ನಡೆದ ಮಹಾಸಭೆಯಲ್ಲಿ ಆಡಳಿತ ಮೊಕ್ತೇಸರರಾದ ಶ್ರೀ ಮುಂಡ್ಕೂರ ವೇದವ್ಯಾಸ ಪ್ರಭು ಅವರು ಪ್ರಸ್ತಾಪಿಸಿದ ವಿಷಯ ಸರ್ವಾನುಮತದಿಂದ ಅನುಮೋದನೆ ಪಡೆಯಿತು ಎಂದು ಶ್ರೀ ವೇದವ್ಯಾಸ ಪ್ರಭು ನನಗೆ ಮರುದಿನ ತಿಳಿಸಿದರು ಮತ್ತು ತೇರು ನಿರ್ಮಾಣ ಸಮಿತಿಯಲ್ಲಿ ನಾನು ಕಾರ್ಯದರ್ಶಿಯಾಗಿ ಸೇರಿ ಕೆಲಸ ಮಾಡಬೇಕೆಂದು ಹೇಳಿದರು. ದೇವರಿಗೆ, ದೇವಸ್ಥಾನಗಳಿಗೆ ಬೆಳ್ಳಿಯ, ಬಂಗಾರದ ಆಭರಣ, ವಾಹನ ಮಾಡಿಕೊಡುವ ವಿಚಾರಕ್ಕೆ ನನ್ನ ಪ್ರಾಶಸ್ತ್ಯ ಇರುವುದಿಲ್ಲ. ಅದಕ್ಕಿಂತ ಭಕ್ತರಿಗೆ ಅಥವಾ ಊರಿನ ಜನರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ ಸವಲತ್ತು ಒದಗಿಸಿ ಕೊಡುವುದು ಉತ್ತಮವೆಂದು ನನ್ನ ಧೋರಣೆ. ಆದರೂ ಶ್ರೀ ವೆದ್ದು ಭಾವನವರು ನನ್ನ ಆರಾಧ್ಯ ದೇವರ ವೈಭವವನ್ನು ಹೆಚ್ಚಿಸುವ ವಿಷಯ ಹೇಳಿದ್ದರಿಂದ ನಾನು ಬೆಳ್ಳಿ ರಥ ನಿರ್ಮಾಣ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುವೆನೆಂದು ಶ್ರೀ ವೇದವ್ಯಾಸ ಪ್ರಭುಗಳಿಗೆ ನನ್ನ ಒಪ್ಪಿಗೆ ತಿಳಿಸಿದೆ ಮತ್ತು ಕೆಲಸ ಪ್ರಾರಂಭಿಸಿದೆ.

ಮೊದಲು ರಥ ನಿರ್ಮಾಣಕ್ಕಾಗಿ ರಥಶಿಲ್ಪಿಯನ್ನು ಹುಡುಕುವುದು ಮತ್ತು ಈಗ ಇರುವ ಹಳೆಯ ಚಿಕ್ಕ ರಥಕ್ಕೆ(ಪುಷ್ಪರಥ) ಬೆಳ್ಳಿ ತಗಡು ಹೊದೆಸಿ ಮಾಡುವುದೋ ಅಥವಾ ಹೊಸದಾಗಿ ಮರದ ರಥವನ್ನು ನಿರ್ಮಿಸಿ ಅದಕ್ಕೆ ಬೆಳ್ಳಿಯ ತಗಡನ್ನು ಹೊದಿಸುವುದೋ ಎನ್ನುವುದರ ಕುರಿತು ಅಭಿಪ್ರಾಯ ತೆಗೆದುಕೊಳ್ಳುವುದೆಂದು ಆಲೋಚಿಸಿದೆ. ಕೋಟೇಶ್ವರದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಸಿದ್ಧ ರಥಶಿಲ್ಪಿ ಶ್ರೀ ಆಚಾರ್ಯರ ಬಳಿ ಮಾತುಕತೆ ನಡೆಸಲು ಹೋದೆವು. ಅಲ್ಲಿ ನಮ್ಮ ಸಮಾಜದ ಹಿರಿಯರು ಮತ್ತು ಜಿ.ಎಸ್.ಬಿ. ದೇವಸ್ಥಾನ ಸಂಘದ ಅಧ್ಯಕ್ಷರೂ ಆಗಿದ್ದ ಪ್ರಸಿದ್ಧ ಕೋಟೇಶ್ವರ ವಿಠಳ ಮಂಜುನಾಥ ಕಾಮ್ತಿ ಕುಟುಂಬದ ಶ್ರೀ ಕೋಟೇಶ್ವರ ಗೋವಿಂದರಾಯ ಕಾಮತರವರ ಬಳಿ ಹೋದೆವು. ಅವರನ್ನು ಜೊತೆಯಾಗಿಸಿಕೊಂಡು ರಥಶಿಲ್ಪಿ ಶ್ರೀ ಆಚಾರ್ಯರನ್ನು ಭೇಟಿಯಾದೆವು. ಅವರು ಬಂಟವಾಳಕ್ಕೆ ಬಂದು ದೇವಸ್ಥಾನದ ಹಳೆಯ ರಥವನ್ನು ನೋಡಿ, "ಈ ರಥ ಜೀರ್ಣವಾಗಿದೆ. ಇದಕ್ಕೆ ಬೆಳ್ಳಿ ತಗಡು ಅಂಟಿಸಲು, ಜೋಡಿಸಲು ಸಾಧ್ಯವಿಲ್ಲ" ಎಂದು ಹೇಳಿದರು. ಹೀಗಾಗಿ ಹೊಸ ಮರದ ರಥವನ್ನು ನಿರ್ಮಿಸುವ ನಿರ್ಣಯ ಕೈಗೊಂಡು ನಾವು ರಥಶಿಲ್ಪಿ ಆರ್ಚಾಯರ ಉಪಸ್ಥಿತಿಯಲ್ಲಿ ಬೆಳೆದ ಸಾಗವಾನಿ ಮರವೊಂದನ್ನು ಕ್ರಯಕ್ಕೆ ಪಡೆದು ಅವರ ಕಾರ್ಯಾಗಾರಕ್ಕೆ ಮುಟ್ಟಿಸಿದೆವು. ನಾವು ಅವರನ್ನು ಭೇಟಿಯಾಗುವ ಮೊದಲೇ, ಅವರು ಬೇರೆ ದೇವಸ್ಥಾನದ ಮರದ ರಥ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡದ್ದರಿಂದ, ನಮ್ಮ ದೇವಸ್ಥಾನದ ರಥ ತಯಾರಿ ತಡವಾಯಿತು.

ಬೆಳ್ಳಿ ರಥ ನಿರ್ಮಾಣ ಯೋಜನೆಗೆ ಸುಮಾರು ಹತ್ತು ಲಕ್ಷ ರೂಪಾಯಿ ಅಗತ್ಯವಿದೆ ಎಂಬ ಅಂದಾಜು ಬಜೆಟ್‌ನ್ನು ತಯಾರಿಸಿದೆವು. ನಮ್ಮ ಶ್ರೀ ದೇವಸ್ಥಾನದ ಚರಿತ್ರೆ ಮತ್ತು ಬೆಳ್ಳಿ ರಥ ನಿರ್ಮಾಣ ಯೋಜನೆಯ ಮಾಹಿತಿ ಇರುವಂತಹ ಒಂದು ವರ್ಣನಾತ್ಮಕ ಪುಸ್ತಿಕೆಯನ್ನು ಪ್ರಕಟಿಸಿದೆವು.

ಅನಂತರ, ನಮ್ಮ ಊರಿನಲ್ಲಿ ಮತ್ತು ಪರವೂರುಗಳಲ್ಲಿ ವಾಸವಾಗಿರುವ ಬಂಟವಾಳದ ಸ್ಥಿತಿವಂತರ ಮತ್ತು ನಮ್ಮ ಕಾರ್ಯಕ್ಕೆ ಬೆಂಬಲ ನೀಡುವವರ ಒಂದು ಪಟ್ಟಿಯನ್ನು ತಯಾರಿಸಿದೆವು. ಅವರಿಗೆ ಪೂರ್ವ ಮಾಹಿತಿ ನೀಡಲು ಅಂಚೆಯಲ್ಲಿ ಪುಸ್ತಿಕೆಯನ್ನು ಕಳುಹಿಸಿಕೊಟ್ಟೆವು. ಆಮೇಲೆ ನಾನು, ಶ್ರೀ ವೇದವ್ಯಾಸ ಪ್ರಭು, ಬಿ. ಮಾಧವ ಶ್ರೀಧರ ಭಂಡಾರಿ, ಅರ್ಲ ವಿಶ್ವನಾಥ ಪ್ರಭು, ಹೌದಾಳ ಪಾಂಡುರಂಗ ಪೈ ಇವರೊಂದಿಗೆ ಮುಂಬೈ, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಮೈಸೂರು, ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಂಗಳೂರು, ಪುತ್ತೂರು ಇತ್ಯಾದಿ ಊರುಗಳಿಗೆ ಹೋಗಿ ಬಂಟವಾಳಕಾರರನ್ನು ಮತ್ತು ಪರವೂರುಗಳಲ್ಲಿ

ನೆಲೆಸಿರುವ ಬಂಟವಾಳದ ವಿವಾಹಿತ ಹೆಣ್ಣುಮಕ್ಕಳನ್ನು ಮತ್ತು ಗೃಹಸ್ಥರನ್ನು ಭೇಟಿಯಾಗಿ ವಂತಿಗೆಯನ್ನು ಸಂಗ್ರಹಿಸಿದೆವು.

ಒಂದು ಕಿಲೋ ಬೆಳ್ಳಿ ಮತ್ತು ಮಜೂರಿ ಸಹಿತ ಹತ್ತು ಸಾವಿರ ರೂಪಾಯಿ ನೀಡಬೇಕೆಂದು ನಾವು ಬೇಡಿಕೆ ಸಲ್ಲಿಸಿದ್ದೆವು. ಇದಕ್ಕೆ ಉತ್ತಮ ಪ್ರತಿಕ್ರಿಯೆ ಬಂತು. ಕೆಲವೆಡೆಗಳಲ್ಲಿ ಒಬ್ಬೊಬ್ಬ ಶ್ರೀಮಂತರು ಐದು ಕಿಲೋ ಬೆಳ್ಳಿ ಅಥವಾ ಮೂರು ಕಿಲೋ ಬೆಳ್ಳಿ ಪ್ರಮಾಣದಲ್ಲಿ(ಅಂದರೆ ೫೦೦೦೦, ಅಥವಾ ೩೦೦೦೦, ೨೫೦೦೦) ವಂತಿಗೆ ನೀಡಿ ನಮ್ಮ ಯೋಜನೆಗೆ ಬೆಂಬಲ ನೀಡಿದರು. ಅಲ್ಲದೆ ಆಗಾಗ ಕೋಟೇಶ್ವರಕ್ಕೆ ಹೋಗಿ ರಥದ ಕಾರ್ಯದ ಪ್ರಗತಿಯನ್ನು ವೀಕ್ಷಿಸಿ ಬರುವ ಜವಾಬ್ದಾರಿಯೂ ಇತ್ತು. ಈ ಕಾರ್ಯದಲ್ಲಿ ಶ್ರೀ ಕೋಟೇಶ್ವರ ಗೋವಿಂದರಾಯ ಕಾಮತರು ತುಂಬಾ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

ಶ್ರೀ ವೇದವ್ಯಾಸ ಪ್ರಭು ಅವರು ನಮ್ಮ ಮಿತ್ರರಾದ ಮುಂಬೈಯ ಶ್ರೀ ನಂದಕುಮಾರ ಕುಡ್ವ ಅವರ ಮೂಲಕ ಬೆಳ್ಳಿ ತಗಡನ್ನು ತರಿಸಿದರು. ಈ ಬೆಳ್ಳಿ ಹಾಳೆಗಳನ್ನು ಬಹಳ ಎಚ್ಚರಿಕೆಯಿಂದ ತೆಗೆದಿಟ್ಟುಕೊಂಡು, ಬೆಳ್ಳಿ ಕುಶಲಕರ್ಮಿಗಳಿಗೆ ಅದನ್ನು ತೂಗಿ ನೀಡಿ, ಅದರ ಲೆಕ್ಕಪತ್ರವನ್ನಿಡುವ ಕಾರ್ಯವನ್ನು ನಮಗಿಂತಲೂ ಹೆಚ್ಚು ಜಾಗ್ರತೆಯಿಂದ ಶ್ರೀ ಗೋವಿಂದರಾಯ ಕಾಮತರು ನಡೆಸಿ ಕೊಟ್ಟಿದ್ದರು.

ಇದರಿಂದಾಗಿ ನಮ್ಮ ಸಮಿತಿಯ, ಅದರಲ್ಲಿಯೂ ಈ ದೊಡ್ಡ ಕಾರ್ಯವನ್ನು ನಡೆಸಲು ಮುಂದೆ ಬಂದ ಶ್ರೀ ವೇದವ್ಯಾಸ ಪ್ರಭು ಅವರ ಜವಾಬ್ದಾರಿ ಮತ್ತು ತಲೆನೋವು ಎಷ್ಟೋ ಕಡಿಮೆಯಾಯಿತು. ಮುಂಬೈಯ ಶ್ರೀ ನಂದಕುಮಾರ್ ಕುಡ್ವಾ ಅವರು ಕೂಡ ಬೆಳ್ಳಿಯನ್ನು ಕ್ರಯಕ್ಕೆ ಪಡೆದು ಅದರ ಹಾಳೆಗಳನ್ನು ತಯಾರಿಸಿ, ಅದನ್ನು ಬಸ್ಸಿನಲ್ಲಿ ತುಂಬಾ ಶ್ರಮಪಟ್ಟು ಕಳುಹಿಸಿ ನೀಡಿದ ಸೇವೆಯನ್ನು ನಾವು ಮರೆಯುವಂತಿಲ್ಲ.

ನಾನು ಮತ್ತು ವೇದವ್ಯಾಸ ಪ್ರಭು ಬೆಂಗಳೂರು, ಮೈಸೂರು, ಚಿಕ್ಕಮಂಗಳೂರು ಮೊದಲಾದ ಊರುಗಳಿಗೂ ಹೋಗಿ ವಂತಿಗೆ ಸಂಗ್ರಹಿಸಿದ್ದೆವು. ಮರದ ರಥ ಸಿದ್ಧವಾಗಿ ಅದಕ್ಕೆ ಬೆಳ್ಳಿ ಹಾಳೆಗಳನ್ನು ಹೊದೆಸಿದ ಬಳಿಕ ಆ ರಥವನ್ನು ಬಂಟವಾಳಕ್ಕೆ ತರುವ ಕಾರ್ಯವೂ ಇತ್ತು. ಆ ಸಮಯದಲ್ಲಿ ನನಗೆ ರಾಜರ್ಷಿ ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರು ಶ್ರೀ ಕ್ಷೇತ್ರದಲ್ಲಿ ಬಾಹುಬಲಿ ವಿಗ್ರಹವನ್ನು ಸ್ಥಾಪಿಸುವುದಕ್ಕಾಗಿ ಕಾರ್ಕಳದಲ್ಲಿ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶ್ರೀ ರಂಜಾಳ ಗೋಪಾಳ ಶೆಣೈಯವರು ಶಿಲೆಯಲ್ಲಿ ತಯಾರಿಸಿದ ಬೃಹತ್ ಗೊಮ್ಮಟ ವಿಗ್ರಹವನ್ನು "ಮಂಗತರಾಮ್ ಕೇರಿಯರ್" ವಾಹನದಲ್ಲಿ ಧರ್ಮಸ್ಥಳಕ್ಕೆ ತರುವ ಸಮಯದಲ್ಲಿ ವಿಗ್ರಹ ಬರುತ್ತಿದ್ದ ಮಾರ್ಗದುದ್ದಕ್ಕೂ ಆಯಾಯ ಊರಿನ ಜನರು ಅದಕ್ಕೆ ರಾಜೋಚಿತ ಸ್ವಾಗತ ನೀಡಿ ಬೀಳ್ಕೊಂಡು ಅದು ೪೦ ದಿನಗಳ ಅನಂತರ ಧರ್ಮಸ್ಥಳಕ್ಕೆ ತಲುಪಿದ ದೃಶ್ಯವೇ ಕಣ್ಣ ಎದುರಿಗೆ ಕಾಣಿಸಿತು.

ಕೋಟೇಶ್ವರದಿಂದ ಬಂಟವಾಳದವರೆಗೆ ಬೆಳ್ಳಿ ರಥ ಬರುವಾಗಲೂ ಅದೇ ರೀತಿ ಮೆರವಣಿಗೆಯನ್ನು ನಡೆಸಿ ನಮ್ಮ ಸಮಾಜದ ದೇವಾಲಯಗಳ ಎದುರು ಆಯಾ ಊರಿನ ಜನರು ಮತ್ತು ದೇವಾಲಯಗಳ ಆಡಳಿತಗಾರರು ರಥಕ್ಕೆ ಸ್ವಾಗತಗೈದು ರಾಜೋಚಿತವಾಗಿ ಕರೆತರುವ ಒಂದು ಯೋಜನೆ ನನ್ನ ಬುದ್ಧಿಗೆ ಹೊಳೆಯಿತು. ಈ ಯೋಜನೆಯನ್ನು ನಾನು ಶ್ರೀ ವೇದವ್ಯಾಸ ಪ್ರಭು ಮತ್ತು ಇತರ ಸದಸ್ಯರ ಮುಂದೆ ತಿಳಿಸಿದೆ. ಈ ನನ್ನ ಸೂಚನೆ ಬಹಳ ಗೌರವಪೂರ್ವಕವಾಗಿ ಸ್ವೀಕೃತವಾಯಿತು. ಅದಕ್ಕಾಗಿ ನಾನು ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ವೇದವ್ಯಾಸ ಪ್ರಭು ಮತ್ತು ಮೊಕ್ತೇಸರ ಶ್ರೀ ಎಸ್. ವಾಮನ ಪೈ ಅವರೊಂದಿಗೆ ನವೆಂಬರ್ ೨೧, ೧೯೯೭ರಂದು ಕೋಟೇಶ್ವರಕ್ಕೆ ಹೋಗಿ ಶ್ರೀ ಗೋವಿಂದರಾಯ ಕಾಮತರ ಬಳಿ ಮಾತನಾಡಿ ಡಿಸೆಂಬರ್ ೨೪, ೧೯೯೭ರಂದು ಶೃಂಗರಿಸಿದ ಲಾರಿಯ ಮೇಲೆ ಬೆಳ್ಳಿ ರಥವನ್ನು ಇರಿಸಿ ಬಂಟವಾಳಕ್ಕೆ ಮೆರವಣಿಗೆಯಲ್ಲಿ ತರುವುದೆಂದು ತೀರ್ಮಾನಿಸಿದೆವು. ಅನಂತರ, ಮರಳಿ ಬರುವಾಗ ಕೋಟ, ಚೇಂಪಿ, ಬ್ರಹ್ಮಾವರ, ಉಡುಪಿ, ಕಟಪಾಡಿ, ಕಾಪು, ಪಡುಬಿದ್ರಿ, ಮೂಲ್ಕಿ, ಮಂಗಳೂರು ಇತ್ಯಾದಿ ಊರುಗಳಲ್ಲಿ ನಮ್ಮ ಸಮಾಜದ ದೇವಸ್ಥಾನಗಳ ಆಡಳಿತ ಮಂಡಳಿಯವರನ್ನು ಮತ್ತು ಊರಿನ ಪ್ರಮುಖರನ್ನು ಭೇಟಿಯಾಗಿ ನಮ್ಮ ಸಮಾಜದ ದೇವಸ್ಥಾನಗಳಲ್ಲಿ ಸರ್ವ ಪ್ರಥಮ ಬಾರಿ ಬೆಳ್ಳಿ ರಥ ನಿರ್ಮಾಣಗೊಳ್ಳುತ್ತಿರುವುದಾಗಿ ಅವರಲ್ಲಿ ಉತ್ಸಾಹ ತುಂಬಿ, "ಬೆಳ್ಳಿ ರಥ ಬರುವಾಗ ಊರಿನ ದೇವಸ್ಥಾನದ ಬಳಿ ಅಥವಾ ಪುರ ಪ್ರವೇಶವಾಗುವ ಜಾಗದಲ್ಲಿ ಬಹು ಸಂಖ್ಯೆಯಿಂದ ಜನರು ಸೇರುವುದು ಮತ್ತು ಉತ್ತಮ ರೀತಿಯಲ್ಲಿ ಸಂಭ್ರಮದಿಂದ ಸ್ವಾಗತ ನೀಡುವುದು" ಎಂದು ಮಾತನಾಡಿ ನಾವು ಬಂದೆವು.

ಮೆರವಣಿಗೆ ನಡೆಸುವುದಕ್ಕೆ ಉಡುಪಿ ಮತ್ತು ಮಂಗಳೂರಿನ ಜಿಲ್ಲಾಧಿಕಾರಿಗಳ ಮತ್ತು ಪೊಲೀಸ್ ಆಯುಕ್ತರ ಪರವಾನಗಿ ಬೇಕಿತ್ತು. ಅದಕ್ಕಾಗಿಯೂ ನಾನು ಅರ್ಜಿ ಸಲ್ಲಿಸಿದೆ. ಆಮೇಲೆ ಉದಯವಾಣಿ, ಮತ್ತು ಇತರ ಕನ್ನಡ, ಇಂಗ್ಲಿಷ್ ದೈನಿಕ

ಪತ್ರಿಕೆಗಳಲ್ಲಿ ೨೪ರಂದು ನಡೆಯಲಿರುವ ರಥ ಯಾತ್ರೆಯ ಪ್ರಕಟಣೆ ನೀಡಿದೆ. ಇದರಿಂದ ಬೆಳ್ಳಿ ರಥವನ್ನು ನಮ್ಮ ಊರಿಗೆ ತಲುಪಿಸುವ ಕಾರ್ಯದಲ್ಲಿ ಬಹಳ ಜನರಲ್ಲಿ ಹುರುಪು ಮತ್ತು ಉತ್ಸಾಹ ತುಂಬಿಕೊಳ್ಳುವ ಹಾಗಾಯಿತು.

ಆದರೆ ನನಗೆ ಆಶ್ಚರ್ಯ ಮತ್ತು ಆಘಾತ ಉಂಟಾಗುವ ಘಟನೆಯೊಂದು ನಡೆಯಿತು. ನಾನು ಇಚ್ಛಿಸದೆ ಅಥವಾ ನಿರೀಕ್ಷಿಸದೆ, ನನ್ನನ್ನು ರಥ ನಿರ್ಮಾಣ ಸಮಿತಿಯ ಕಾರ್ಯದರ್ಶಿಯಾಗಿ ನೇಮಿಸಿದಾಗ, ಇದು ಶ್ರೀ ವೆಂಕಟರಮಣ ಸ್ವಾಮಿಯ ಸಂಭ್ರಮ ಹೆಚ್ಚಿಸುವ ರೀತಿಯ ಭಾಗ್ಯದ ಕೆಲಸವೆಂದು ನಂಬಿಕೊಂಡು, ಇದಕ್ಕಾಗಿ ನಾನು ಪ್ರಾರಂಭದಿಂದ ಕೊನೆಯವರೆಗೆ ಹಗಲು, ರಾತ್ರಿ ದುಡಿದಿದ್ದೆ. ಆದರೆ ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ವೇದವ್ಯಾಸ ಪ್ರಭು ಮತ್ತು ಇತರ ಮೊಕ್ತೇಸರರು ಅದನ್ನೆಲ್ಲಾ ಮರೆತು, ಬೆಳ್ಳಿ ರಥವನ್ನು ಮೆರವಣಿಗೆಯಲ್ಲಿ ಬಂಟವಾಳಕ್ಕೆ ತರುವ ದಿನದಂದು ನನ್ನನ್ನು ಯಾರೂ ಕರೆಯದೆ, ಅವರ ಪಾಡಿಗೆ ಅವರೆಲ್ಲರೂ ಕೋಟೇಶ್ವರಕ್ಕೆ ಹೋದರು. ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ದಯೆಯಿಂದ ನನ್ನ ಯೋಜನೆಯ ಪ್ರಕಾರವೇ ಬೆಳ್ಳಿ ರಥ ವಿಜೃಂಭಣೆಯಿಂದ, ಪ್ರತೀ ಊರಿನ ಜನರ ಸ್ವಾಗತದೊಂದಿಗೆ ಕಳುಹಿಸಿಕೊಡುವುದರ ಮೂಲಕ ಬಂಟವಾಳಕ್ಕೆ ಬಂದು ತಲುಪಿತು. ಆದರೂ ನನ್ನ ಗೈರು ಹಾಜರಿಯನ್ನು ಯಾರೂ ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ. ಇದರಿಂದ “ಅಯ್ಯೋ, ನನ್ನ ಅವಸ್ಥೆಯೇ” ಎಂದು ಮನಸ್ಸಿನಲ್ಲಿಯೇ ನೊಂದುಕೊಂಡು ನಾನು ಮನೆಯಲ್ಲಿಯೇ ಉಳಿದೆ. ಅದು ಕೂಡ ದೇವರ ಮನಸ್ಸಿನಲ್ಲಿಯೂ ಇದ್ದಿರಬೇಕು ಎಂದುಕೊಂಡು ನನಗೆ ನಾನೇ ಸಮಾಧಾನಪಡಿಸಿಕೊಂಡೆ.

ಅದಾಗಿ ೧೫-೨೦ ದಿನಗಳು ಕಳೆದ ಬಳಿಕ ಶ್ರೀ ವೇದವ್ಯಾಸ ಪ್ರಭು ನನಗೆ ದೂರವಾಣಿ ಕರೆ ಮಾಡಿ ಚಿಕ್ಕಮಗಳೂರಿಗೆ ಧನ ಸಂಗ್ರಹಕ್ಕಾಗಿ ಹೋಗೋಣವೆಂದು ತಿಳಿಸಿದಾಗ, ಅದು ಹೇಗೆ ನನ್ನನ್ನು ಮರೆತುಬಿಟ್ಟಿರಿ ಎಂದು ಅವರನ್ನು ಕೇಳಿಯೇ ಬಿಟ್ಟೆ. ಅದಕ್ಕೆ ಯಾವ ಉತ್ತರವೂ ಸಿಗಲಿಲ್ಲ. ಆದರೂ, ನನಗೆ ಆದಂತಹ ಅವಮಾನವನ್ನು ಮರೆತು ಅವರು ಹೇಳಿದ ಊರುಗಳಿಗೆ ಧನ ಸಂಗ್ರಹಕ್ಕಾಗಿ ಹೋಗಿದ್ದೆ. ನಾನು ಮಾಡುವ ಕಾರ್ಯಗಳು ನನ್ನ ದೇವರು ಶ್ರೀ ವೆಂಕಟರಮಣ ಸ್ವಾಮಿಗೆ ಸಂತೋಷ ತಂದರೆ ಸಾಕು ಎಂದು ನೆನೆಸುತ್ತಾ, ನಿರ್ಲಿಪ್ತ ಭಾವನೆಯಿಂದ ಈ ಕೆಲಸವನ್ನು ಪೂರ್ಣಗೊಳಿಸಿದೆ.

ಜನವರಿ ೧೬, ೧೯೯೪ರಂದು ಶ್ರೀ ವೇದವ್ಯಾಸ ಪ್ರಭು ಮತ್ತು ನಾನು ಮತ್ತೊಮ್ಮೆ ಬೆಳ್ಳಿ ರಥದ ಧನ ಸಂಗ್ರಹಕ್ಕಾಗಿ ಮುಂಬೈಗೆ ಹೋಗಿದ್ದೆವು. ಅಲ್ಲಿ ಬಂಟವಾಳದ ಶ್ರೀ ಕೃಷ್ಣ ಭಟ್ಟರ ನೇತೃತ್ವದಲ್ಲಿ ಮಹಾದಾನಿ ಶ್ರೀ ಜಿ. ಸಂಜೀವ ಶೆಣೈ ಅವರನ್ನು ಭೇಟಿಯಾಗಿದ್ದೆವು.(ಶ್ರೀಯುತ ಸಂಜೀವ ಶೆಣೈಯವರು ತಮ್ಮ ಪತ್ನಿಯ ನೆನಪಿನಲ್ಲಿ ಕೆನರಾ ಪ್ರೌಢಶಾಲೆಯ ನಿರ್ಮಾಣ ಕಾರ್ಯಕ್ಕಾಗಿ ಒಂದು ಕೋಟಿ ರೂ ನೀಡಿದವರು.) ಅವರು ಬೆಳ್ಳಿ ರಥಕ್ಕಾಗಿ ೧ ಲಕ್ಷ ದೇಣಿಗೆ ನೀಡಿದರು. ಆಮೇಲೆ ನಮಗೆ ರಥದ ಪತಾಕೆ ಇತ್ಯಾದಿಗಾಗಿ ಕೋರಬಟ್ಟೆ ಖರೀದಿಸುವುದಿತ್ತು. ಆ ಕಾರ್ಯಕ್ಕಾಗಿ ನಾವು ೩-೪ ದಿನಗಳ ಕಾಲ ಮುಂಬೈಯಲ್ಲಿ ಇರಬೇಕಾಗಿ ಬಂತು.

ಅದೇ ದಿನಗಳಲ್ಲಿ ಬಂಟವಾಳದ ದೇವಸ್ಥಾನದಲ್ಲಿ “ಭಜನ ಗಂಗಾ” ಕಾರ್ಯಕ್ರಮ ನಡೆಯುವುದಿತ್ತು. ಚಿತ್ರಾಪುರ ಶಿರಾಲಿ ಮಠದಲ್ಲಿ ಹೊಸದಾಗಿ ದೀಕ್ಷೆ ಸ್ವೀಕರಿಸಿದ್ದ ಪರಮ ಪೂಜ್ಯ ಶ್ರೀ ಸದ್ಯೋಜ್ಯಾತ ಶಂಕರಾಶ್ರಮ ಸ್ವಾಮೀಜಿಯವರು ಫೆಬ್ರವರಿ ೧, ೧೯೯೪ರ ಭಾನುವಾರದಂದು ಸಂಜೆ ತಮ್ಮ ದಿವ್ಯಹಸ್ತದಿಂದ ದೀಪ ಬೆಳಗುವುದರೊಂದಿಗೆ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಗತ್ಪ್ರಸಿದ್ಧ ಹರಿದಾಸರಾಗಿದ್ದ ಶ್ರೀ ಭದ್ರಗಿರಿ ಅಚ್ಯುತದಾಸರು ಉದ್ಘಾಟನಾ ಭಾಷಣ ಮಾಡಿದರು. ಶ್ರೀ ಗುರುವರ್ಯರು ತಮ್ಮ ಮಧುರ ಹಾಗೂ ಗಂಭೀರ ಧ್ವನಿಯಲ್ಲಿ ಸುಂದರವಾದ ಒಂದು ಭಜನೆ ಗೀತೆಯನ್ನು ಹಾಡಿದರು. ಇದರಿಂದ “ಭಜನ ಗಂಗಾ” ಅಲ್ಲಿ ತುಂಬಿದ ಜನರಲ್ಲಿ ಭಕ್ತಿಭಾವವನ್ನು ಸ್ಫುರಿಸಿತು.

ಈ ಕಾರ್ಯಕ್ರಮಕ್ಕಾಗಿ ಬಂಟವಾಳ ಶ್ರೀ ಯಶವಂತ ವ್ಯಾಯಾಮ ಶಾಲೆಯ ಮತ್ತು ಪೇಟೆಯ ಉತ್ಸಾಹಿ ಯುವಕರಾದ ಶ್ರೀ ಬಿ. ನಾಗೇಂದ್ರ ವಾಸುದೇವ ಬಾಳಿಗ, ಮತ್ತು ಪೈಲೋಡಿ ನಾರಾಯಣ ಕಾಮತಿ, ಶ್ರೀ ಪಿ. ವಸಂತ ಪ್ರಭು ಇವರು ವಿಶೇಷ ಶ್ರಮವಹಿಸಿದ್ದರು. ಫೆಬ್ರವರಿ ೨ ರಿಂದ ಫೆಬ್ರವರಿ ೧೦ರವರೆಗೆ ಒಟ್ಟು ಹತ್ತು ದಿನಗಳ ಕಾಲ ಬೇರೆ ಬೇರೆ ಊರುಗಳ ದೇವಸ್ಥಾನಗಳ ಭಜನಾ ಮಂಡಳಿಯವರಿಂದ ಮತ್ತು ಬೇರೆ ಬೇರೆ ಜಿಲ್ಲೆ, ರಾಜ್ಯಗಳ ಪ್ರಸಿದ್ಧ ಸಂಗೀತಗಾರರಿಂದ ಹಗಲೂ ರಾತ್ರಿ ಪಾಳಿಯಲ್ಲಿ ಭಜನೆ ಕಾರ್ಯಕ್ರಮವಿತ್ತು. ಪುತ್ತೂರು ನರಸಿಂಹ ನಾಯಕ್, ಪುತ್ತೂರು ಪಾಂಡುರಂಗ ನಾಯಕ, ಶ್ರೀಮತಿ ಅನುಪಮಾ ದೇಶಪಾಂಡೆ, ಸಮಾರೋಪದ ದಿನದಂದು ರಾತ್ರಿ ಅಜಿತ ಕಡಕಡೆ ಇವರ ಭಜನ ಸಂಧ್ಯಾ ಕಾರ್ಯಕ್ರಮ ನಡೆದಿತ್ತು. ಆ ಸಮಯದಲ್ಲಿ ಭಜನಾ

ಕಾರ್ಯಕ್ರಮದ ವಿವರಗಳನ್ನು ನೀಡುವ ಸ್ಮರಣಿಕೆಯು "ಭಜನ ಗಂಗಾ" ಹೆಸರಿನಲ್ಲಿ ನನ್ನ ಸಂಪಾದಕತ್ವದಲ್ಲಿ ಮೂಡಿ ಬಂದಿತ್ತು. ಈ ಸ್ಮರಣಿಕೆಯನ್ನು ಶ್ರೀ ರಾಘವೇಂದ್ರತೀರ್ಥರು ಬಿಡುಗಡೆ ಮಾಡಿದ್ದರು.

ಫೆಬ್ರವರಿ ೯, ಸೋಮವಾರ ಬೆಳಗ್ಗೆ ನನ್ನ ಜೀವನದ ಹಲವಾರು ಕಾರ್ಯಗಳಲ್ಲಿ ವಿಶೇಷವಾಗಿದ್ದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಗೆ ವೈಭವದ ಬೆಳ್ಳಿ ರಥ ಸಮರ್ಪಣೆಯನ್ನು ಗಂಟೆ ೧೨.೩೪ರ ಶುಭ ಮುಹೂರ್ತದಲ್ಲಿ ಶ್ರೀ ಕಾಶೀಮಠದ ಶ್ರೀ ಶ್ರೀ ರಾಘವೇಂದ್ರ ತೀರ್ಥ ಸ್ವಾಮೀಜಿಯವರ ದಿವ್ಯಹಸ್ತದಿಂದ ಶ್ರೀ ದೇವರನ್ನು ಬೆಳ್ಳಿ ರಥದ ಪೀಠದಲ್ಲಿ ಕುಳ್ಳಿರಿಸಿ ಆರತಿ ಮಾಡಿ ಸಮರ್ಪಿಸ ಲಾಯಿತು. ನಾವು ಎಂಟು ವರ್ಷಗಳಿಂದ ಪಟ್ಟ ಶ್ರಮ ಸಾರ್ಥಕವಾದ ಭಾವನೆ ನನಗೆ ಬಂತು. ಅನೇಕ ಊರುಗಳಿಂದ ಸಮಾಜ ಬಾಂಧವರು ಬಂದಿದ್ದರು. ನಮ್ಮ ಸಮಾಜದ ದೇವಸ್ಥಾನಗಳಲ್ಲಿ ಬೆಳ್ಳಿ ರಥೋತ್ಸವ ನಿರ್ಮಾಣ ಕಾರ್ಯ ನಡೆಯುತ್ತಿರುವುದು ಇದೇ ಮೊದಲ ಬಾರಿ. ರಾತ್ರಿ ಗೋಪುರೋತ್ಸವ, ಶ್ರೀ ಸ್ವಾಮೀಜಿಯವರ ದಿಗ್ವಿಜಯ, ತಪ್ಪಂಗಾಯಿ ಎಸೆಯುವ ಕಾರ್ಯಕ್ರಮ ಬಹಳ ಮನೋಹರವಾಗಿ ನಡೆಯಿತು. ನನ್ನಲ್ಲಿ ಜೀವನ ಸಾರ್ಥಕವಾದ ಭಾವನೆ ಮೂಡಿತು.

ದ್ವಿತೀಯ ಸಹಸ್ರ ಕುಂಭಾಭಿಷೇಕ

೧೯೭೪ ನೇ ಇಸವಿಯಲ್ಲಿ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಸಹಸ್ರ ಕುಂಭಾಭಿಷೇಕ ನಡೆದ ಬಳಿಕ ೨೦೦೫ನೇ ಇಸವಿ ಡಿಸೆಂಬರ್ ೬ನೇ ತಾರೀಖಿನಂದು ಮತ್ತೊಂದು ಬಾರಿ ಕಾಶೀಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಸಹಸ್ರ ಕುಂಭಾಭಿಷೇಕವು ಬಹಳ ವೈಭವಪೂರ್ವಕವಾಗಿ ನಡೆದಿತ್ತು. ನನಗೆ ವಿಶ್ವ ಕೊಂಕಣಿ ಕೇಂದ್ರ ನಿರ್ಮಾಣ ಕಾರ್ಯ ಜವಾಬ್ದಾರಿ ಇದ್ದುದರಿಂದ ಈ ಕಾರ್ಯದಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವುದು ಸಾಧ್ಯವಾಗಿರಲಿಲ್ಲ. ಆದರೆ, ಶ್ರೀ ವೇದವ್ಯಾಸ ಪ್ರಭು ಅವರ ಅಪೇಕ್ಷೆಯ ಮೇರೆಗೆ ದೇಣಿಗೆ ಸಂಗ್ರಹಕ್ಕಾಗಿ ಮಂಗಳೂರಿನಲ್ಲಿ ಒಂದೆರಡು ಕಡೆಗಳಲ್ಲಿ ಮತ್ತು ಬೆಂಗಳೂರಿನ ಶ್ರೀ ಪಿ. ದಯಾನಂದ ಪೈ, ಶ್ರೀ ಬಿ. ಗಣೇಶ ಬಾಳಿಗ ಮೊದಲಾದ ೪-೫ ಜನರನ್ನು ಭೇಟಿಯಾಗಲು ಮಾತ್ರ ಹೋಗಿದ್ದೆ.

ಶ್ರೀ ಕಾಶೀಮಠದಲ್ಲಿ ಗೊಂದಲ

ಕಾಶೀಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಪಟ್ಟಶಿಷ್ಯ ಶ್ರೀ ರಾಘವೇಂದ್ರತೀರ್ಥರು ಗುರುಗಳೊಂದಿಗೆ ಅಸಮಾಧಾನವಾಗುವ ರೀತಿಯಿಂದ ನಡೆದುಕೊಳ್ಳುವುದು ಸಮಾಜದ ಗಮನಕ್ಕೆ ಬಂದಿತ್ತು. ಇನ್ನು ಹೆಚ್ಚು ಸಮಯ ಇದೇ ರೀತಿ ನಡೆದರೆ, ಪರಿಸ್ಥಿತಿ ಕೈಮೀರಿ ಗುರು-ಶಿಷ್ಯ ಸಂಬಂಧ ಕೆಟ್ಟು ಹೋಗಿ, ಅದು ಗೌಡ ಸಾರಸ್ವತ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂಬ ಗೊಂದಲ ಸಮಾಜದಲ್ಲಿ ಪ್ರಾರಂಭವಾಯಿತು.

ಶಿಷ್ಯ ರಾಘವೇಂದ್ರತೀರ್ಥರಿಗೆ ಇನ್ನೂ ತರುಣ ವಯಸ್ಸು. ಸಂಸ್ಥಾನದಲ್ಲಿ ದೊಡ್ಡ ಪ್ರಮಾಣದ ಹಣ ಸೇರಿಕೊಳ್ಳುವುದು ಮತ್ತು ಗುರುಗಳ ಪಟ್ಟಶಿಷ್ಯರಾಗಿ ಅವರು ಸಮಾಜದ ಶಿಷ್ಯವರ್ಗದ ಮೇಲೆ ಅಪರಿಮಿತ ಧಾರ್ಮಿಕ ಅಧಿಕಾರ ಹೊಂದಿರುವುದು, ಒಂದು ರೀತಿಯಲ್ಲಿ ದುರಂತವಾಯಿತು. ಸಂಸ್ಕೃತದಲ್ಲಿ ಒಂದು ಉಕ್ತಿಯಿದೆ: "ಮನುಷ್ಯರಿಗೆ ತಾರುಣ್ಯ, ಶ್ರೀಮಂತಿಕೆ ಮತ್ತು ನಿರಂಕುಶ ಪ್ರಭುತ್ವ(ಅಧಿಕಾರ) ಇದರಲ್ಲಿ ಯಾವುದೇ ಒಂದು ಪ್ರಾಪ್ತವಾದರೂ, ಅವನು ಹೆಂಡ ಕುಡಿದ ಕೋತಿಯ ಹಾಗೆ ಆಗುವನು." ಈ ಮೂರೂ ಒಂದೇ ಬಾರಿ ಪ್ರಾಪ್ತವಾಯಿತೆಂದರೆ ಹೇಗಾಗಬಹುದು? ಶ್ರೀ ರಾಘವೇಂದ್ರತೀರ್ಥರ ಸ್ಥಿತಿಯೂ ಅದೇ ಆಗಿತ್ತು.

ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ತಾವು ಮಾಡಬಾರದ ಒಂದು ನಿರ್ಣಯವನ್ನು ಕೈಗೊಂಡು, ಸಂಸ್ಥಾನದ ದೇವರಾದ ಶ್ರೀ ವೇದವ್ಯಾಸ, ರಘುಪತಿ ಮತ್ತು ಇತರ ವಿಗ್ರಹಗಳನ್ನು ಮತ್ತು ಮಠದ ಅಧಿಕಾರವನ್ನು ತಮ್ಮ ಈ ಪಟ್ಟಶಿಷ್ಯರಿಗೆ ಹಸ್ತಾಂತರಿಸಿ, ಹರಿದ್ವಾರದಲ್ಲಿರುವ ಶ್ರೀ ವ್ಯಾಸ ಆಶ್ರಮಕ್ಕೆ ಹೋಗಿ ವಿಶ್ರಾಂತ ಜೀವನವನ್ನು ಕಳೆಯುವುದೆಂದು ನಿರ್ಧರಿಸಿದ್ದರು. ಅದು ಸಮಾಜಕ್ಕೆ ಒಳಿತು ಮಾಡುವುದಕ್ಕಿಂತ, ಈ ಮಟ್ಟಿಗೆ ಕೆಡುಕು ಉಂಟಾಗಬಹುದೆಂಬ ಕಲ್ಪನೆ ಶ್ರೀ ಗುರುವರ್ಯರಿಗೆ ಬಂದಿರಲಿಕ್ಕಿಲ್ಲ ಅಥವಾ ಅದು ನಮ್ಮ ಸಮಾಜದ ದೌರ್ಭಾಗ್ಯ ಇರಬಹುದು. ದೇವರ ಪೂಜೆ ಮತ್ತು ಸಂಸ್ಥಾನದ ಅಧಿಕಾರವನ್ನು ಶಿಷ್ಯನಿಗೆ ವಹಿಸಿಕೊಟ್ಟು ಅವರು ಹರಿದ್ವಾರಕ್ಕೆ ಹೋಗಿ ವಿಶ್ರಾಂತ ಜೀವನ ನಡೆಸಬಹುದು ಎಂಬ ಶ್ರೀಗಳ ನಂಬಿಕೆ ಹುಸಿಯಾಯ್ತು

ಇದರಿಂದಾಗಿ, ಸಮಾಜದ ಹಿರಿಯರಿಗೆ, ವರಿಷ್ಠರಿಗೆ, ಉಚ್ಚ ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿಗಳಿಗೆ ಶ್ರೀ ಸುಧೀಂದ್ರತೀರ್ಥ

ಸ್ವಾಮೀಜಿಯವರನ್ನು ಭೇಟಿಯಾಗಲು ಹೋದಾಗಲೆಲ್ಲಾ ದೊರೆಯುತ್ತಿದ್ದ ಪ್ರೀತಿ, ವಿಶ್ವಾಸದ ಮಾತುಗಳು ಅಥವಾ ಸ್ವಾಗತ ದೊರೆಯದಂತಾಯಿತು. ಶಿಷ್ಯವರ್ಗದ ಕುರಿತು ನಿರ್ಲಕ್ಷ್ಯ ತೋರಿಸುವುದು, ಕೆಲವೇ ಜನರನ್ನು ಆಪ್ತ ವಲಯಕ್ಕೆ ಸೇರಿಸಿ ಅವರನ್ನು ಮಾತ್ರ ವಿಶ್ವಾಸಕ್ಕೆ ತೆಗೆದುಕೊಳ್ಳುವುದು, ಅನುಭವೀ ಹಿರಿಯರಿದ್ದಾಗ ಅವರಿಗೆ ಬೇಕೆಂದೇ ತಿರಸ್ಕಾರ ತೋರಿಸುವುದು, ಭೇಟಿಗೆ ಬರುವವರನ್ನು ನಿರ್ಲಕ್ಷಿಸಿ, ಗಂಟೆಗಟ್ಟಳೆ ಅವರನ್ನು ಕಾಯಿಸುವುದು, ಈ ಎಲ್ಲಾ ಕೆಟ್ಟ ನಡವಳಿಕೆಗಳು ಹರಿದ್ವಾರದಲ್ಲಿದ್ದ ಗುರುವರ್ಯರಿಗೆ ತಲುಪುತ್ತಲೇ ಇದ್ದವು.

ಇಂತಹ ದೂರುಗಳು ಹೆಚ್ಚೆಚ್ಚು ಬರತೊಡಗಿದ್ದರಿಂದ ಗುರುವರ್ಯರು ಹರಿದ್ವಾರದಿಂದ ಹೊರಟು ಮುಂಬೈ, ದಕ್ಷಿಣ ಕನ್ನಡ, ಮತ್ತು ಕೇರಳವನ್ನು ಸಂದರ್ಶಿಸುವ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಗುರುವರ್ಯರು ದಕ್ಷಿಣಕ್ಕೆ ಬರುವ ಸ್ವಲ್ಪ ಸಮಯದ ಮೊದಲು ಬಂಟವಾಳದ ಕಾಶೀಮಠದಲ್ಲಿ ಶ್ರೀ ರಾಘವೇಂದ್ರತೀರ್ಥರ ವ್ಯಾಸ ಮಾಸಾಚರಣೆಯ ಮೊಕ್ಕಾಂ ಇತ್ತು. ಆಗ ನಮ್ಮ ಶ್ರೀನಿವಾಸ ನಾಯಕರನ್ನು ಶಿಷ್ಯ ಸ್ವಾಮೀಜಿಯವರು ಮಾತುಕತೆಯಾಡಲು ಕರೆಯಿಸಿಕೊಂಡರಂತೆ. ಹಾಗೆಂದು ಅವರು ನನ್ನಲ್ಲಿ ಮಾರ್ಚ್ ೧೩ರಂದು ಹೇಳಿದ್ದರು. ಅವರು ಅದೇ ದಿನ ಸಂಜೆ ಮಠಕ್ಕೆ ಹೋಗಿ ಶ್ರೀ ರಾಘವೇಂದ್ರ ತೀರ್ಥರನ್ನು ಭೇಟಿಯಾದರಂತೆ. ಆ ಸಮಯದಲ್ಲಿ ಶಿಷ್ಯ ಸ್ವಾಮೀಜಿಯವರು ಅವರಲ್ಲಿ "ಬಂಟವಾಳದವರು ಮುಂದೆ ಬಂದು ನನ್ನ ವಿಚಾರವಾಗಿ ಗುರುವರ್ಯರ ಮನಸ್ಸಿನಲ್ಲಿ ಇರುವ ಭಾವನೆಯನ್ನು ಸರಿಪಡಿಸಬೇಕು. ತನ್ನ ಮತ್ತು ಗುರುಗಳ ನಡುವೆ ಒಗ್ಗಟ್ಟು ತರಬೇಕು. ಇದು ಬಂಟವಾಳ ಸಮಾಜದ ಶಿಷ್ಯವರ್ಗದವರಿಗೆ ಮಾತ್ರ ಸಾಧ್ಯ.ಈ ವಿಚಾರದಲ್ಲಿ ನೀವು ಮುಂದುವರಿಯುವುದು ಉತ್ತಮ," ಎಂದು ಹೇಳಿದರಂತೆ. ಇದನ್ನು ಶ್ರೀನಿವಾಸ ನಾಯಕರು ನನ್ನಲ್ಲಿ ಹೇಳಿದ್ದರು.

ಆಮೇಲೆ ನಾವು ಮಣಿಪಾಲಕ್ಕೆ ಹೋಗಿ ಶ್ರೀ ಕೆ.ಕೆ.ಪೈ, ಡಾ. ಎಸ್.ಜಿ.ಎಸ್. ಪ್ರಭು(ಕೆಎಂಸಿಯ ಪ್ರಸಿದ್ಧ ವೈದ್ಯರು) ಮತ್ತು ಶ್ರೀ ಪಾಂಗಾಳ ರಬೀಂದ್ರ ನಾಯಕರನ್ನು ಭೇಟಿಯಾಗಿ, ಈ ವಿಚಾರದಲ್ಲಿ ಅವರು ಮುಂದುವರಿಯಬೇಕೆಂದು ಕೋರಿದೆವು. ಅವರು ಅದಕ್ಕೆ ಒಪ್ಪಿಕೊಂಡರು. ಹೀಗೆ ಕೆಲವೇ ದಿನಗಳಲ್ಲಿ ಶ್ರೀ ಕೆ.ಕೆ. ಪೈಯವರು ರಾಘವೇಂದ್ರ ತೀರ್ಥರನ್ನು ಭೇಟಿಯಾಗಲು ಹೋದರು. ಆದರೆ ಅವರನ್ನು ೧-೨ ಗಂಟೆಗಳ ಕಾಲ ಕಾಯಿಸಿದ ಶಿಷ್ಯ ಸ್ವಾಮೀಜಿ, ಆಮೇಲೆ ಹೊರಗೆ ಬಂದು ಶ್ರೀ ಕೆ.ಕೆ.ಪೈಯವರು ಹೇಳಿದ್ದನ್ನು ಕೇಳಿ, "ಈ ವಿಚಾರದಲ್ಲಿ ನಾವು ಯಾರಿಗೂ ಮಧ್ಯೆ ಪ್ರವೇಶಿಸಲು ಬಿಡುವುದಿಲ್ಲ. ಅದರ ಕುರಿತು ಮಾತನಾಡುವುದು ಬೇಡ"ವೆಂದು ಹೇಳಿ ತಕ್ಷಣ ತಮ್ಮ ಕೋಣೆಗೆ ಮರಳಿದರಂತೆ. ಸಮಾಜದ ಹಿರಿಯರೂ, ವಯೋವೃದ್ಧರೂ ಆಗಿದ್ದ ಶ್ರೀ ಕೆ.ಕೆ.ಪೈಯವರು ತಲೆಯ ಮೇಲೆ ಕೈಹೊತ್ತು ಮರಳಿ ಬರುವ ಹಾಗಾಯಿತು.

ಹೀಗೆ ಕೆಲವು ದಿನಗಳು ಕಳೆದ ಬಳಿಕ ಗುರುವರ್ಯರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ದಕ್ಷಿಣಕ್ಕೆ ಬಂದ ಸಮಯದಲ್ಲಿ ಶಿಷ್ಯ ಸ್ವಾಮೀಜಿಯವರು ಅವರನ್ನು ಭೇಟಿಯಾಗದೆ, ಅವರ ನಡುವಿನ ತಿಳಿವಳಿಕೆಯ ಅನುಪಸ್ಥಿತಿ ಮತ್ತು ಮತಭೇದ ಬೆಳೆಯುತ್ತಾ ಹೋಯಿತು. ೨೦೦೦ ಇಸವಿಯಲ್ಲಿ ಈ ವಿಚಾರವನ್ನು ಶಿಷ್ಯರು ಕೋರ್ಟಿಗೆ ಕೊಂಡೊಯ್ದರು. ಶ್ರೀ ಗುರುವರ್ಯರು ಈ ಶಿಷ್ಯಸ್ವಾಮೀಜಿಯವರನ್ನು ಪರಿತ್ಯಾಗ ಮಾಡಿ ಬೇರೊಬ್ಬರನ್ನು ಶಿಷ್ಯರಾಗಿ ಸ್ವೀಕರಿಸಿದರು. ಅವರ ಹೆಸರು ಶ್ರೀ ಸಂಯಮೇಂದ್ರ ತೀರ್ಥ ಸ್ವಾಮೀಜಿ.

ನನಗೆ ವೈಯಕ್ತಿಕವಾಗಿ ಪ್ರಾರಂಭದಿಂದಲೂ ಶ್ರೀ ರಾಘವೇಂದ್ರ ತೀರ್ಥರ ಮೇಲೆ ಉತ್ತಮ ಅಭಿಪ್ರಾಯ ಇರಲಿಲ್ಲ. ಅವರ ನಿರಂಕುಶ ಪ್ರಭುತ್ವದ ಧೋರಣೆ, ವಯಸ್ಸಾದವರನ್ನು ಅಥವಾ ಗೌರವಾನ್ವಿತ ಅನುಭವೀ ಹಿರಿಯರನ್ನು ತಿರಸ್ಕಾರದಿಂದ ಕಾಣುವುದು ನನ್ನ ಗಮನಕ್ಕೆ ಬಂದಿತ್ತು. ಈ ಕಾರಣದಿಂದಾಗಿ ನಾನು ಬಂಟವಾಳದಲ್ಲಿ ಶಿಷ್ಯ ಸ್ವಾಮೀಜಿ ಮೊಕ್ಕಾಂ ಇದ್ದ ಸಮಯದಲ್ಲಿ(ಅವರು ವಿದ್ಯಾಭ್ಯಾಸಕ್ಕಾಗಿ ಬಂಟವಾಳದಲ್ಲಿ ಒಂದು ವರ್ಷ ನೆಲೆಸಿದ್ದಾಗ, ಅಥವಾ ಬೇರೆ ಬೇರೆ ಸಮಯದಲ್ಲಿ ಬಂಟವಾಳಕ್ಕೆ ಭೇಟಿ ನೀಡಿದ ಸಂದರ್ಭಗಳಲ್ಲಿ) ಒಮ್ಮೆ ಮಾತ್ರ ಅವರಿಗೆ ಭಿಕ್ಷಾಸೇವೆ ಮಾಡಿದ ಸಂದರ್ಭದಲ್ಲಿ ಭೇಟಿಯಾಗಿದ್ದೆ. ಆಗಲೂ ನನಗೆ ಅವರ ವಿಚಾರವಾಗಿ ಉತ್ತಮ ಅಭಿಪ್ರಾಯ ಮೂಡಿರಲಿಲ್ಲ.

ನಾನು ತಿರುಪತಿಗೆ ಹೋಗಿ ಶ್ರೀ ತಿರುಮಲ ವೆಂಕಟರಮಣ ಸ್ವಾಮೀಯ ಕಲ್ಯಾಣೋತ್ಸವ ಸೇವೆಯನ್ನು ನಡೆಸಿದಾಗಲೂ, ಕಾಶೀಮಠಕ್ಕೆ ಹೋಗದೆ ಕುಟುಂಬಸಮೇತ ಬೇರೊಂದೆಡೆ ಕೋಣೆ ಮಾಡಿ ಇದ್ದೆನು.

ನನ್ನ ವಿಚಾರವಾಗಿ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮಿಜೀಯವರ ಮನಸ್ಸಿನಲ್ಲಿ ದುರಭಿಪ್ರಾಯ ಮೂಡುವ

ರೀತಿಯಿಂದ ನಮ್ಮ ಸಮಾಜದ ಕೆಲವು ಮುಖಂಡರು ಪ್ರಯತ್ನ ನಡೆಸಿದ್ದೂ ಇದೆ. ಆದರೂ ಶ್ರೀ ಗುರುವರ್ಯರಿಗೆ ಅವರ ಕುರಿತಾಗಿ ನನ್ನಲ್ಲಿ ಇರುವ ನಿಷ್ಠೆ, ಶ್ರದ್ಧೆ ಮತ್ತು ಭಕ್ತಿ ವಿಚಾರವಾಗಿ ತುಂಬಾ ವಿಶ್ವಾಸವಿದ್ದುದರಿಂದ ಆ ಮುಖಂಡರ ದಾಳ ನಡೆಯಲಿಲ್ಲ.

ಜನವರಿ ೨೮, ೨೦೦೦ರಂದು ಶುಕ್ರವಾರ ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ ಸಭಾಭವನದಲ್ಲಿ ಭಾರತ ದೇಶದ ಬೇರೆ ಬೇರೆ ರಾಜ್ಯಗಳಿಂದ ಬಂದಂತಹ ಹಿರಿಕಿರಿಯ ಗೌಡ ಸಾರಸ್ವತ ಸಮಾಜದ ಮುಖಂಡರ ಸಭೆಯಲ್ಲಿ ಶ್ರೀ ಕಾಶೀಮಠಾಧೀಶ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು, ಶಿಷ್ಯ ಶ್ರೀ ರಾಘವೇಂದ್ರತೀರ್ಥರ ಅಸಂಗತ ಕಾರ್ಯ, ಅವರು ಗುರುಗಳ ಮತ್ತು ಸಮಾಜದ ಶಿಷ್ಯವೃಂದದ ವಿಷಯದಲ್ಲಿ ನಡೆದುಕೊಳ್ಳುತ್ತಿದ್ದ ರೀತಿ, ಅವರ ಉಡಾಫೆ ಮಾತುಗಳು, ಸಮಾಜ, ದೇವಸ್ಥಾನದ ಆಡಳಿತ ಮತ್ತು ಭಕ್ತಜನರ ಕುರಿತು ಅವರ ಉದಾಸೀನ ಭಾವ, ಈ ಕುರಿತು ತಮಗೆ ಬಂದ ದೂರುಗಳನ್ನು ವಿವರವಾಗಿ ತಿಳಿಸಿದರು. ಅಲ್ಲದೆ ಗುರುವರ್ಯರನ್ನು ಭೇಟಿಯಾಗದೆ ಬೇರೆ ದಾರಿಯಲ್ಲಿ ಹೋಗುತ್ತಿದ್ದ ವಿಚಾರವನ್ನೂ ತಿಳಿಸಿ, "ನಾವು ರಾಘವೇಂದ್ರತೀರ್ಥರನ್ನು ಪದಚ್ಯುತಗೊಳಿಸಿದ್ದೇವೆ" ಎಂದು ಘೋಷಿಸಿದರು. ಇನ್ನು ಮುಂದೆ ರಾಘವೇಂದ್ರ ತೀರ್ಥರಿಗೆ ಯಾವುದೇ ಸ್ಥಾನಮಾನ ಇರುವುದಿಲ್ಲವೆಂದೂ ಉದ್ಗಾರ ತೆಗೆದರು. ಅದನ್ನು ಸೇರಿದ ಸಭೆ ಒಪ್ಪಿಕೊಂಡಿತು. ಇಂತಹ ಒಂದು ಚಾರಿತ್ರಿಕ ಘಟನೆ ನಡೆದದ್ದು ಗೌಡ ಸಾರಸ್ವತ ಸಮಾಜದ ಚರಿತ್ರೆಯಲ್ಲಿ ವಿಶೇಷ ರೀತಿಯಿಂದ ಉಲ್ಲೇಖವಾಗುವುದು.

ಸಮಾಜದ ಏಳಿಗೆಗಾಗಿ ಕಳೆದ ಐವತ್ತು ವರ್ಷಗಳಿಂದ ತ್ರಿಕಾಲ ಪೂಜೆ ಮಾಡಿ ಸಮಾಜದ ಒಳಿತು, ಉತ್ತರೋತ್ತರ ಕಲ್ಯಾಣ ಆಗಬೇಕು ಎಂದು ಶ್ರೀ ವೇದವ್ಯಾಸ ದೇವರಲ್ಲಿ ಅಂತಃಕರಣದಿಂದ ಬೇಡಿಕೊಳ್ಳುವಂತಹ ತಪೋನಿಷ್ಠ ಗುರುವರ್ಯರಿಗೆ ಅವರ ಉತ್ತರ ವಯಸ್ಸಿನಲ್ಲಿ ಈ ವಿಧದ ಒಂದು ಅವಸ್ಥೆ ಪ್ರಾಪ್ತವಾದುದು ನನ್ನ ಹೃದಯಕ್ಕೆ ತುಂಬಾ ನೋವನ್ನು ಉಂಟು ಮಾಡಿದೆ.

ಇದರ ಬಳಿಕ ಸಮಾಜದಲ್ಲಿ ನಡೆಯಬಾರದ ಘಟನೆಗಳು ನಡೆದವು. ಕೆಲವರು ಪರಿತ್ಯಕ್ತ ಸ್ವಾಮೀಜಿಯವರ ಹಿಂದೆ ಹೋದರು. ಸಮಾಜ ಎರಡು ಭಾಗವಾಗಿ ಸಮಾಜದ ಆರೋಗ್ಯ, ಚಿಂತನೆ ಬದಲಾಯಿತು. ಇದಕ್ಕೆ ಕಾರಣರು ಯಾರು ಎನ್ನುವುದನ್ನು ಬರೆಯುವುದು ಸರಿಯಾಗಲಾರದು. ಆದರೂ ಸಮಾಜದ ೯೯% ಶಿಷ್ಯವರ್ಗ ಹಿರಿಯ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜೀಯವರಿಗೆ ನಿಷ್ಠರಾಗಿಯೇ ಇರುವುದು ಒಂದು ಶುಭದಾಯಕ ಸಂಕೇತ.

ಗುರು ಮತ್ತು ಶಿಷ್ಯರ ನಡುವೆ ವ್ಯಾಜ್ಯ(ಶಿಷ್ಯರ ಕಾರಣದಿಂದ) ನ್ಯಾಯಾಲಯದಲ್ಲಿ ನಡೆಯುತ್ತಲೇ ಇತ್ತು. ಅದು ಸಮಾಜದ ದೌರ್ಭಾಗ್ಯ. ೨೦೧೧ರಲ್ಲಿ ರಾಘವೇಂದ್ರತೀರ್ಥರನ್ನು ನಿವೃತ್ತಗೊಳಿಸಿದ ಆದೇಶವೂ ನ್ಯಾಯಾಲಯದಿಂದ ಬಂದಿದೆ.

ಶ್ರೀ ಬಿ. ದಾಮೋದರ ಪ್ರಭು

ಶ್ರೀ ಬಿ. ದಾಮೋದರ ಪ್ರಭು ನಮ್ಮ ಬಂಟವಾಳ ಶ್ರೀ ವೆಂಕಟರಮಣ ಸ್ವಾಮೀ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿದ್ದವರು ಮತ್ತು ಶ್ರೀ ವೆಂಕಟರಮಣ ಕಾಲೇಜಿನ ಸ್ಥಾಪಕರಲ್ಲಿ ಒಬ್ಬರು. ಅವರೊಬ್ಬ ಬಿಚ್ಚು ಮನಸ್ಸಿನ ವ್ಯಕ್ತಿ, ಸಮಾಜದ ಏಳಿಗೆಯ ಕುರಿತಾಗಿ ಅಪ್ಪಟ ಕಾಳಜಿಯುಳ್ಳ, ಉದಾರ ಹಸ್ತದ ಧರ್ಮಿಷ್ಠರು ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಗಾಂಧೀವಾದಿ. ಚಿಕ್ಕ ವಯಸ್ಸಿನಲ್ಲಿ ಕಡುಬಡತನ ಅನುಭವಿಸಿದ್ದ ಶ್ರೀಯುತರು ಮುಂದೆ ಅದನ್ನು ಮರೆಯದೆ ಬಡವರಿಗೆ ಮತ್ತು ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುತ್ತಿದ್ದರು. ಅವರು ಮಾನವತಾವಾದಿಯಾಗಿದ್ದರು; ಮಾತಿನಲ್ಲಿ, ಕಾರ್ಯದಲ್ಲಿ, ಲೆಕ್ಕಪತ್ರ ವ್ಯವಸ್ಥೆಯಲ್ಲಿ ಶಿಸ್ತು ಮತ್ತು ಪಾರದರ್ಶಿಕತೆಯನ್ನು ತೋರುವ ಸ್ವಭಾವದವರು. ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವ ಧೈರ್ಯ ಹೊಂದಿದ್ದ ಅಪರೂಪದ ವ್ಯಕ್ತಿ. ನನಗೆ ಸಾರ್ವಜನಿಕ ಜೀವನದಲ್ಲಿ ಎಷ್ಟೋ ಆದರ್ಶಗಳನ್ನು ತೋರಿದವರು ಶ್ರೀ ದಾಮೋದರ ಪ್ರಭು.

೧೯೭೩ನೇ ಇಸವಿಯವರೆಗೆ ೪೦೦೦-೫೦೦೦ ಮುಡಿ ಅಕ್ಕಿಯ ಗೇಣಿ ಬರುತ್ತಿದ್ದ ಸ್ಥಿತಿವಂತ ಸ್ಥಿತಿಯಲ್ಲಿದ್ದ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ದೇವಸ್ಥಾನದಲ್ಲಿ, ೧೯೭೩ನೇ ಇಸವಿಯಲ್ಲಿ ಕರ್ನಾಟಕ ಸರಕಾರವು "ಉಳುವವನೇ ಹೊಲದೊಡೆಯ"ನೆಂಬ ಕಾನೂನು ಮಾಡಿದ್ದರಿಂದ ದೇವಸ್ಥಾನದ ಭಂಡಾರ(ಖಜಾನೆ) ಖಾಲಿಯಾಗುತ್ತಾ ಹೋಯಿತು. ಆ ಸನ್ನಿವೇಶದಲ್ಲಿ ದೇವಸ್ಥಾನದ ಆಡಳಿತವನ್ನು ಕೈಗೆ ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಆಗ ಶ್ರೀ ದೇವಸ್ಥಾನದಲ್ಲಿ ನಡೆಯುತ್ತಿದ್ದ ಕಾರ್ತಿಕ ಏಕಾದಶಿಯ ಮಹಾಸಭೆಗೆ ಎಲ್ಲಿಂದಲೋ ಬಂದು ಹಾಜರಾಗಿದ್ದ ಶ್ರೀ ದಾಮೋದರ ಪ್ರಭು ಅವರ ಹೆಸರನ್ನು ದೇವಸ್ಥಾನದ ಆಡಳಿತ

ಮೊಕ್ತೇಸರ ಸ್ಥಾನಕ್ಕೆ ಯಾರೋ ಸೂಚಿಸಿದರು. ಅದನ್ನು ಶ್ರೀ ಪ್ರಭು ಅವರು ಒಪ್ಪಿಕೊಂಡದ್ದರಿಂದ ಅವರು ಸರ್ವಾನುಮತದಿಂದ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಚುನಾಯಿತರಾದರು.

ದೇವಸ್ಥಾನದ ಆಡಳಿತವನ್ನು ಕೈಗೆತ್ತಿಕೊಂಡ ಶ್ರೀ ಪ್ರಭುಗಳು ಶ್ರೀ ದೇವಸ್ಥಾನದ ಭಂಡಾರದ ಸ್ಥಿತಿಯನ್ನು ಮತ್ತು ದೈನಂದಿನ ಆಡಳಿತವನ್ನು ಸುಧಾರಿಸುವ ದೃಷ್ಟಿಯಿಂದ "ಶ್ರೀ ವೆಂಕಟರಮಣ ಸ್ವಾಮೀ ಸೇವಾಸಮಿತಿ" ಎಂಬ ಹೆಸರಿನಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸುವುದಕ್ಕಾಗಿ ವಿಶೇಷ ಸಭೆಯೊಂದನ್ನು ಕರೆದಿದ್ದರು. ಆಗ ನಾನು ಪಾಣೆಮಂಗಳೂರು ಸಿಂಡಿಕೇಟ್ ಬ್ಯಾಂಕಿನ ಮೆನೆಜರ್ ಆಗಿದ್ದೆ. ಸಭೆ ನಡೆಯುವ ದಿನ ನಾನು ದೇವಸ್ಥಾನಕ್ಕೆ ಹೋಗಿದ್ದೆ. ನನ್ನನ್ನು ನೋಡಿದ ಪ್ರಭು ಅವರು ಹತ್ತಿರ ಕರೆದು ನನ್ನ ಹೆಸರನ್ನು ಕಾರ್ಯದರ್ಶಿ ಸ್ಥಾನಕ್ಕೆ ಸೂಚಿಸಿದರು. ಅದಕ್ಕೆ ಸಭೆಯಲ್ಲಿದ್ದ ಎಲ್ಲರೂ ಸಮ್ಮತಿಸಿದರು. ಆ ದಿನದಿಂದ ಅವರೊಂದಿಗೆ ಹಗಲಿಗೆ ಹೆಗಲು ನೀಡಿ ಶ್ರೀ ದೇವರ, ದೇವಸ್ಥಾನದ, ಸಮಾಜದ, ಶ್ರೀ ಗುರುವರ್ಯರ ಸೇವೆ ಮಾಡುವ ಅವಕಾಶ ನನಗೆ ದೊರೆಯಿತು.

೧೯೭೩ನೇ ಇಸವಿಯ ಕೊನೆಯಲ್ಲಿ ಶ್ರೀ ವೆಂಕಟರಮಣ ಸ್ವಾಮಿ ದೇವರಿಗೆ ಸಹಸ್ರ ಕುಂಭಾಭಿಷೇಕ ಮಾಡಬೇಕೆಂದು ನಾವು, ಶ್ರೀ ದೇವರ ಭಕ್ತರು ನಿರ್ಣಯಿಸಿದ್ದೆವು. ದೇವರ ದಯೆಯಿಂದ, ಕಾಶೀಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ಸಹಸ್ರ ಕುಂಭಾಭಿಷೇಕ ನಡೆಯಿತು. ಅದಲ್ಲದೆ ಈ ಸಂದರ್ಭದಲ್ಲಿ ಶ್ರೀ ಕೈವಲ್ಯಮಠದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯೂ ಇತ್ತು. ಆ ಕಾರ್ಯಕ್ರಮಕ್ಕಾಗಿ ಧನ ಸಂಗ್ರಹ ಮತ್ತು ಇತರ ಕಾರ್ಯಗಳಲ್ಲಿ ಶ್ರೀ ದಾಮೋದರ ಪ್ರಭು ಅವರ ಜೊತೆಯಲ್ಲಿ ದುಡಿಯುವ ಒಂದು ಚಿನ್ನದ ಅವಕಾಶ ನನಗೆ ದೊರೆತಿತ್ತು. ಶ್ರೀ ದಾಮೋದರ ಪ್ರಭು ಅವರ ಆಡಳಿತದ ಹದಿನೆಂಟು ವರ್ಷಗಳ ಅವಧಿಯಲ್ಲಿ ನಾವು ಶ್ರೀ ಮಹಾವಿಷ್ಣು ಹವನ, ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಚಾತುರ್ಮಾಸ್ಯ ವ್ರತ(೧೯೭೭), ಶ್ರೀ ದೇವಸ್ಥಾನದ ಮುಂಭಾಗದಲ್ಲಿರುವ ಹೊರಗಿನ ಅಂಬಲಗಳ ನವೀಕರಣ ಇತ್ಯಾದಿ ಯೋಜನೆಗಳನ್ನು ಯಶಸ್ವಿಯಾಗಿಸಿದ್ದೆವು. ಇದಲ್ಲದೆ ವಿಶೇಷವಾಗಿ ಶ್ರೀ ಕಾಶೀಮಠ ಸಂಸ್ಥಾನದ ಆರಾಧ್ಯ ದೈವ ಶ್ರೀ ವೇದವ್ಯಾಸರ ೫೦೦೦ ವರ್ಷದ ಒಂದು ವಿಶೇಷ ಸಮಾರಂಭವೂ ವೈಭವಪೂರ್ಣವಾಗಿ ನಡೆದಿತ್ತು. ಈ ಸಮಾರಂಭವನ್ನು ಶ್ರೀ ಗುರುವರ್ಯರ ಚಾತುರ್ಮಾಸ್ಯ ವ್ರತದ ದಿನಗಳಲ್ಲಿ(೧೯೭೭) ನಡೆಸಲಾಗಿದ್ದು, ಊರು, ಪರವೂರುಗಳಿಂದ ಹಲವು ಸಾವಿರದಷ್ಟು ಜನರು ಬಂಟವಾಳಕ್ಕೆ ಬಂದು ಇದರಲ್ಲಿ ಭಾಗವಹಿಸಿದ್ದರು. ಈ ಸಮಾರಂಭದ ಸಮಿತಿಯಲ್ಲಿ ಶ್ರೀ ದಾಮೋದರ ಪ್ರಭು ಅವರ ಜೊತೆ ನಾನು ಮತ್ತು ಕಸ್ತೂರಿ ಮಂಗೇಶ ಪೈ ಕಾರ್ಯದರ್ಶಿಗಳಾಗಿ ದುಡಿದಿದ್ದೆವು.

ಈ ಎಲ್ಲಾ ಮಹತ್ವಪೂರ್ಣ ಕಾರ್ಯಕ್ರಮಗಳಿಂದಾಗಿ ಶ್ರೀ ದೇವರ ಭಂಡಾರ ಹಣ ಮತ್ತು ಶ್ರೀಮಂತಿಕೆಯಿಂದ ಮತ್ತೆ ತುಂಬಿಕೊಳ್ಳುವ ಹಾಗಾಯಿತು. ಅಂತಹ ಧೀಮಂತ ನಾಯಕ ಶ್ರೀ ದಾಮೋದರ ಪ್ರಭು ಅವರ ಜೊತೆ ಹಲವಾರು ಮಹತ್ವಪೂರ್ಣ ಕಾರ್ಯಗಳನ್ನು ನಡೆಸುವ ಅವಕಾಶ ದೊರೆತದ್ದು ನನ್ನ ಭಾಗ್ಯವೆಂದು ನಾನು ತಿಳಿಯುತ್ತೇನೆ.

ಶ್ರೀ ದಾಮೋದರ ಪ್ರಭು ಅವರು ಏಪ್ರಿಲ್ ೩೦, ೨೦೦೧ನೇ ಇಸವಿ ಸೋಮವಾರ ಮುಂಜಾನೆ ಮೂರು ಗಂಟೆಗೆ ಮಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರ ಇಚ್ಛೆಯ ಪ್ರಕಾರ ನಾನು ಅವರ ಅಂತಿಮ ಯಾತ್ರೆಯ ನೇತೃತ್ವ ವಹಿಸಿ, ಅವರ ಮಕ್ಕಳನ್ನು ಒಪ್ಪಿಸಿ, ಅವರ ಮೃತದೇಹವನ್ನು ಬಂಟವಾಳಕ್ಕೆ ತಂದು ಶ್ರೀ ಎಸ್.ವಿ.ಎಸ್. ಪ್ರಾಥಮಿಕ ಶಾಲೆಯ ಸಭಾಂಗಣದಲ್ಲಿ ಸಾರ್ವಜನಿಕ ದರ್ಶನಕ್ಕಾಗಿ ಇರಿಸಿದ್ದೆ. ಆಮೇಲೆ ಬಂಟವಾಳದ ಸ್ಮಶಾನದಲ್ಲಿ ಅಂತ್ಯವಿಧಿ ಜರಗಿ ಅವರ ದೇಹವನ್ನು ಅಗ್ನಿಗೆ ಸಮರ್ಪಿಸಲಾಯಿತು. ಹೀಗೆ ಓರ್ವ ಮಹಾನ್ ನೇತಾರರ ಬದುಕು ಅಂತ್ಯಗೊಂಡಿತು.

ಆ ಸಮಯದಲ್ಲಿ ನಾನು ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದೆನು. ಅದೇ ದಿನಗಳಲ್ಲಿ ನಿಧನ ಹೊಂದಿದ್ದ ಕೊಂಕಣಿ ಭಾಷಾ ವ್ಯಾಕರಣ ತಜ್ಞ ಫಾ. ಸಿ.ಸಿ.ಎ. ಪೈ(ಸ್ವಾಮೀ ಸುಪ್ರಿಯಾ) ಮತ್ತು ಶ್ರೀ ಬಿ. ದಾಮೋದರ ಪ್ರಭು ಅವರ ಕುರಿತು ಅಕಾಡೆಮಿ ವತಿಯಿಂದ ವಿಚಾರ ಸಂಕಿರಣವೊಂದನ್ನು ಹಮ್ಮಿಕೊಂಡಿದ್ದೆವು. ಅದರಲ್ಲಿ ಶ್ರೀ ಬಿ. ದಾಮೋದರ ಪ್ರಭು ಅವರ ಜೊತೆಯಲ್ಲಿ ಕೊಂಕಣಿ ಭಾಷಾ ಮಂಡಳದಲ್ಲಿ ಬಹಳ ಕೆಲಸ ಮಾಡಿದ್ದ ಫಾ. ಮಾರ್ಕ್ ವಾಲ್ಡರ್ ಅವರ ಭಾಷಣವಿತ್ತು. ಇದೇ ಸಂದರ್ಭದಲ್ಲಿ ಈ ಇಬ್ಬರು ಮಹನೀಯರ ವರ್ಣಚಿತ್ರಗಳನ್ನು ಅನಾವರಣ ಮಾಡಿದ್ದೆವು.

●●

೩೪. ಸಾಮಾಜಿಕ ಕ್ಷೇತ್ರದ ನನ್ನ ಸಂಗಾತಿಗಳು

ಬಿ. ಮಾಧವ ಭಂಡಾರಿ

ನನ್ನ ಅತ್ಯಂತ ಪ್ರೀತಿಯ ಶ್ರೀ ಬಿ. ಮಾಧವ ಭಂಡಾರಿ(ದಿ. ಶ್ರೀಧರ ಭಂಡಾರಿಯವರ ಸುಪುತ್ರ) ೧೯೫ನೇ ಇಸವಿ, ಮೇ ೨೬ರಂದು ರಾತ್ರಿ ತೀರಿಕೊಂಡ ಸುದ್ದಿ ಕೇಳಿ ನಾನು ಅಂತ್ಯದರ್ಶನಕ್ಕಾಗಿ ಹೋದೆನು. ಅವರಿಗೆ ನನ್ನ ಮೇಲೆ ತುಂಬಾ ಪ್ರೀತಿ ಮತ್ತು ವಿಶ್ವಾಸವಿತ್ತು. ಅವರು ನನ್ನನ್ನು ಸ್ವಂತ ಸಹೋದರನಿಗಿಂತ ಹೆಚ್ಚು ಪ್ರೀತಿಯಿಂದ ಕಾಣುತ್ತಿದ್ದರು. ನಮ್ಮಿಬ್ಬರಲ್ಲಿ ಕಾಂಗ್ರೆಸ್ ಪಕ್ಷದ ನೀತಿಯ ಕುರಿತು, ಮಹಾತ್ಮಾಗಾಂಧೀ, ಜವಾಹರಲಾಲ್ ನೆಹರೂ ಅವರ ಕುರಿತು ಭಕ್ತಿ, ಉನ್ನತ ಗೌರವ ಸಮಾನ ರೀತಿಯಲ್ಲಿತ್ತು. ಅದೇ ರೀತಿ ಪರಸ್ಪರ ಪ್ರೀತಿ, ವಿಶ್ವಾಸವೂ ಇತ್ತು. ಹೀಗಾಗಿ ನಾವು ಬಹು ಆಪ್ತರಾಗಿದ್ದೆವು. ಅವರು ಒಂದು ಅವಧಿಗೆ ಶ್ರೀ ವೆಂಕಟರಮಣ ಸ್ವಾಮೀ ದೇವಸ್ಥಾನದ ಮೊಕ್ತೇಸರರಾಗಿಯೂ ಇದ್ದವರು. ಆಗಲೇ ಬೆಳ್ಳಿ ರಥದ ನಿರ್ಮಾಣ ಕಾರ್ಯ ನಡೆದದ್ದು.

೧೯೫೬ನೇ ಇಸವಿಯಲ್ಲಿ ನಾನು ನನ್ನ ತಂದೆಯವರ ಕೆನರಾ ಕಾಫಿ ಕ್ಲಬ್ ಹೊಟೇಲನ್ನು ನಡೆಸುತ್ತಿರುವಾಗ ನಾವು ಪಾಲುಗಾರಿಕೆಯಲ್ಲಿ ಹಲ್ವ, ನೇಂದ್ರಬಾಳೆ ಚಿಪ್ಸ್ ಇತ್ಯಾದಿ ತಯಾರಿಸಿ ಮುಂಬೈಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವ ಯೋಜನೆಯನ್ನು ಹಾಕಿಕೊಂಡಿದ್ದೆವು. ನಾನು ಹೊಟೇಲಿನಲ್ಲಿ ತಿಂಡಿ ತಯಾರಿಸುವುದು, ಅದನ್ನು ಮಾಧವಣ್ಣ ಮುಂಬೈಗೆ ತೆಗೆದುಕೊಂಡು ಹೋಗಿ ಮಾರುವುದು(ಅವರು ಹಿಂದೆ ಮುಂಬೈಯುಲ್ಲಿ ೪-೫ ವರ್ಷ ಕೆಲಸ ಮಾಡಿಕೊಂಡಿದ್ದವರು) ಎಂದು ತೀರ್ಮಾನಿಸಿದ್ದೆವು. ಆದರೆ ನಮ್ಮಿಬ್ಬರ ಗ್ರಹಗತಿ ಚೆನ್ನಾಗಿರದೆ ಆ ವ್ಯವಹಾರದಲ್ಲಿ ನಷ್ಟ ಉಂಟಾಯಿತು. ಆದರೂ ನಮ್ಮ ನಡುವಿನ ಪ್ರೀತಿ ವಿಶ್ವಾಸಕ್ಕೆ ಯಾವುದೇ ಧಕ್ಕೆ ಉಂಟಾಗಿರಲಿಲ್ಲ.

ಬಂಟವಾಳ ಶ್ರೀನಿವಾಸ ನಾಯಕ್

ಇವರು ನನ್ನ ಆಪ್ತಮಿತ್ರ ಮತ್ತು ಹಿತೈಷಿ. ನಾವು ಬಂಟವಾಳ ಪರಿಸರದಲ್ಲಿ ಸಾಮಾಜಿಕ(ಮುಖ್ಯವಾಗಿ ಶ್ರೀ ಯಶವಂತ ವ್ಯಾಯಾಮ ಶಾಲೆ), ಧಾರ್ಮಿಕ, ರಾಜಕೀಯ ಹಾಗೂ ನಾಟಕ ಕ್ಷೇತ್ರಗಳಲ್ಲಿ ಜೊತೆಗೂಡಿ ತುಂಬಾ ಕಾರ್ಯಗಳನ್ನು ನಡೆಸಿದ್ದೇವೆ. ಬಾಲ್ಯದಲ್ಲಿಯೇ ನನಗೆ ವ್ಯಾಯಾಮ ಶಾಲೆಯಿಂದಾಗಿ ಅವರ ಸಂಪರ್ಕ ಇತ್ತು. ಆಮೇಲೆ ನಾವು ರಾಜಕೀಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ, ಆಮೇಲಿನ ದಿನಗಳಲ್ಲಿ ಧುರೀಣರಾಗಿ ಕೆಲಸ ಮಾಡಿದ್ದೇವೆ. ಅವರು ೨೦೦೨ನೇ ಇಸವಿ ಜೂನ್ ೧ರಂದು ನಿಧನರಾಗಿದ್ದಾರೆ.

ಮುಂಡ್ಕೂರು ವೇದವ್ಯಾಸ ಪ್ರಭು

ವೆದ್ದು ಭಾವಾಜಿ ಎಂದೇ ಜನಪ್ರಿಯರಾಗಿದ್ದ ಮುಂಡ್ಕೂರು ವೇದವ್ಯಾಸ ಪ್ರಭು ಮೊದಲು ಓರ್ವ ಸಣ್ಣ ವ್ಯಾಪಾರಿ-ಯಾಗಿದ್ದವರು. ಮಂಡ್ಯ, ಶಿವಮೊಗ್ಗ ಮೊದಲಾದ ಊರುಗಳಿಂದ ಅಕ್ಕಿ, ಬೆಲ್ಲ ಇತ್ಯಾದಿ ದಿನಸಿ ವಸ್ತುಗಳನ್ನು ಲಾರಿಯಲ್ಲಿ ಬಂಟವಾಳಕ್ಕೆ ತಂದು ಮಾರಾಟ ಮಾಡುತ್ತಿದ್ದರು.

ಫ್ರಾನ್ಸ್ ಸೈನ್ಯಾಧಿಕಾರಿ ನೆಪೋಲಿಯನ್ ಬೊನೆಪಾರ್ಟ್ ಒಂದು ದ್ವೀಪದ ಮೇಲೆ ಆಕ್ರಮಣ ಮಾಡಿದ ಘಟನೆ "ಅವನು ಬಂದ, ಅವನು ನೋಡಿದ, ಅವನು ಗೆದ್ದ" ಎಂಬ ಉಕ್ತಿಯಾಗಿ ಪ್ರಸಿದ್ಧವಾಗಿದೆ. ಅದೇ ರೀತಿ ವೇದವ್ಯಾಸ ಪ್ರಭು ಅವರಿಗೆ ಆ ದಿನಗಳಲ್ಲಿ ಬಂಟವಾಳದಲ್ಲಿ ದೊಡ್ಡ ವ್ಯಾಪಾರಿಗಳಾಗಿದ್ದ ಶ್ರೀ ಮಾಣೂರ ಮಾಧವ ಕಾಮತರ(ಮಾಣೂರ ಮಾದ್ದು) ಮಗಳೊಂದಿಗೆ ವಿವಾಹವಾಯಿತು. ಆಮೇಲೆ ಅವರು ಬಂಟವಾಳದಲ್ಲಿಯೇ ಖಾಯಂ ಆಗಿ ಸಂಸಾರ ಹೂಡಿದರು.

ವೇದವ್ಯಾಸ ಪ್ರಭು ಅವರಲ್ಲಿ ದಾನಧರ್ಮ ಮಾಡುವ, ತಮಾಷೆಯಾಗಿ ಹರಟೆ ಹೊಡೆಯುವ, ಸ್ವಯಂಸೇವಕನಾಗಿ ದುಡಿಯುವ, ಯುವಕರೊಂದಿಗೆ ಸ್ನೇಹ ಬೆಳೆಸುವ, ಮತ್ತು ಮುಖ್ಯವಾಗಿ ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವ

ಮನೋಧರ್ಮ ಇತ್ತು. ಅದಲ್ಲದೆ ವ್ಯಾಪಾರ ಉದ್ದೇಶದಿಂದ ಬಂಟವಾಳಕ್ಕೆ ಬಂದಿದ್ದ ವೆದ್ದು ಭಾವಾಜಿ ಇಲ್ಲಿಯ ಹೆಣ್ಣುಮಗಳನ್ನು ವಿವಾಹವಾಗಿ ಬಂಟವಾಳದಲ್ಲಿಯೇ ಸ್ಥಿರವಾಗಿ ನೆಲೆಸಿದರಲ್ಲದೆ, ಊರಿನ ಪ್ರತಿಯೊಂದು ವಿಚಾರದಲ್ಲಿಯೂ ಅನಿವಾರ್ಯ ವ್ಯಕ್ತಿಯಾಗಿ ಜನರೊಂದಿಗೆ ಬೆರೆತು ಹೋದರು. ಬಂಟವಾಳದ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ತಮ್ಮ ಕೊನೆಯ ದಿನಗಳವರೆಗೂ ಇದ್ದರು. ಹೀಗೆ ಸಣ್ಣ ವ್ಯಾಪಾರಕ್ಕಾಗಿ ಬಂಟವಾಳಕ್ಕೆ ಕಾಲಿಟ್ಟ ವೆದ್ದು ಭಾವಾಜಿ ದೇವಸ್ಥಾನದ ಆಡಳಿತ ಮೊಕ್ತೇಸರ ಸ್ಥಾನವನ್ನು ತಲುಪಿದ್ದರು.

ನಾನು ಪಾಣೆಮಂಗಳೂರು ಸಿಂಡಿಕೇಟ್ ಬ್ಯಾಂಕ್ ಶಾಖೆಯ ಮೆನೇಜರ್ ಆಗಿದ್ದಾಗ ಬಂಟವಾಳ ಶ್ರೀ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಶ್ರೀ ದಾಮೋದರ ಪ್ರಭು ಆಯ್ಕೆಯಾಗಿದ್ದರು. ಅವರು ದೇವಸ್ಥಾನದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ 'ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ಸೇವಾ ಸಮಿತಿಯ'ನ್ನು ರಚಿಸಿದ್ದರು. ಆ ಸಮಿತಿಯಲ್ಲಿ ಶ್ರೀ ಬಿ. ಮಾಧವ ಭಂಡಾರಿ, ವೇದವ್ಯಾಸ ಪ್ರಭು, ಮತ್ತು ನಾನು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದೇವೆ. ಅನಂತರ ನನ್ನ ಮತ್ತು ವೆದ್ದು ಭಾವಾಜಿಯವರ ಸಂಬಂಧ ಇನ್ನೂ ಆಪ್ತವಾಯಿತು. ನಾವಿಬ್ಬರೂ ಜೊತೆಗೂಡಿಯೇ ಶ್ರೀ ದೇವಸ್ಥಾನದ, ಶ್ರೀ ಕಾಶೀಮಠ ಸಂಸ್ಥಾನದ, ಶ್ರೀ ಯಶವಂತ ವ್ಯಾಯಾಮ ಶಾಲೆಯ ಮತ್ತು ಇತರ ಸಂಘ ಸಂಸ್ಥೆಗಳ ಕಾರ್ಯಗಳನ್ನು ನಡೆಸಿದ್ದೆವು. ಕಾಶಿ ಮತ್ತು ದೆಹಲಿಯಲ್ಲಿ ನಡೆದ ವ್ಯಾಯಾಮ ಶಾಲೆಯ ಪ್ರದರ್ಶನಕ್ಕಾಗಿಯೂ ನಾವು ಒಟ್ಟಿಗೆ ದುಡಿದಿದ್ದೇವೆ.

ನನಗೆ ಬಂಟವಾಳದಿಂದ ಶಿವಮೊಗ್ಗಕ್ಕೆ ವರ್ಗವಾದಾಗ, ಅವರು ನನಗೆ ಶಿವಮೊಗ್ಗದಲ್ಲಿ ಅವರಿಗೆ ತಿಳಿದಿದ್ದ ಅಕ್ಕಿ ಗಿರಣಿಗಳ ಸಾಹುಕಾರರನ್ನು ಪರಿಚಯಿಸಿದ್ದರಿಂದ ಅಲ್ಲಿ ನನ್ನ ಬ್ಯಾಂಕ್ ವ್ಯವಹಾರ ಬೆಳೆಯುವುದಕ್ಕೆ ತುಂಬಾ ಸಹಾಯ ದೊರೆತಿತ್ತು.

ನಾನು ಶಿವಮೊಗ್ಗೆಯಲ್ಲಿದ್ದಾಗ ಅವರು ನನ್ನ ಮನೆಗೇ ಬಂದು ಇರುವುದು ಮತ್ತು ನಾನು ಬಂಟವಾಳಕ್ಕೆ ಹೋದಾಗ ಅವರ ಮನೆಯಲ್ಲಿಯೇ ಇರುವುದು ಇತ್ತು. ನನ್ನ ಪತ್ನಿ ಸಾವಿತ್ರಿ ಅವರಿಗೆ ಅತ್ತಿಗೆ ಸಮಾನರಾಗಿದ್ದರು. ಅವರ ಕೊನೆಯ ದಿನಗಳವರೆಗೆ ನಮ್ಮಿಬ್ಬರ ನಡುವೆ ಬಂಧುತ್ವ, ಮಿತ್ರತ್ವ ಒಂದೇ ರೀತಿಯದ್ದಾಗಿ ಬೆಳೆದು ಬಂದಿತ್ತು. ಈಗ ಅವರ ನೆನಪು ಮಾತ್ರ ಉಳಿದಿದೆ. ಕೊನೆಯ ಎರಡು ವರ್ಷ ಅನಾರೋಗ್ಯದಿಂದ ಬಳಲಿದ ವೇದವ್ಯಾಸ ಪ್ರಭು ೨೦೧೨ರಲ್ಲಿ ಇಹಲೋಕ ತ್ಯಜಿಸಿದರು.

●●

೩೫. ಮಾಂಡ ಸೋಭಾಣ

ಕೊಂಕಣಿ ಸಂಸ್ಕೃತಿ ಕ್ಷೇತ್ರದಲ್ಲಿ ಕಾರ್ಯ ನಡೆಸುತ್ತಿರುವ ಸಂಸ್ಥೆ ಮಾಂಡ ಸೋಭಾಣ. ಇದರ ಮುಖ್ಯ ಕಾರ್ಯಕರ್ತ ರಾಗಿರುವ ಶ್ರೀ ಲೂಯಿ ಪಿಂಟೊ ಮತ್ತು ಎರಿಕ್ ಒಝೇರಿಯೊ ಹಾಗೂ ನಾವು ಒಟ್ಟಿಗೆ ಸೇರಿ "ಕೊಂಕಣಿ ಜಾಥಾ" ಕಾರ್ಯಕ್ರಮದ ದಿನಗಳಲ್ಲಿ, ಆಮೇಲೆ ವಿಶ್ವ ಕೊಂಕಣಿ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿ ಭುಜಕ್ಕೆ ಭುಜ ನೀಡಿ ಕೆಲಸ ಮಾಡಿದ್ದೇವೆ. ಹೀಗಾಗಿ ನಾವು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡಿದ್ದರೂ, ಮಾಂಡ ಸೋಭಾಣ ಸಂಸ್ಥೆಯು ಕಲಾಂಗಣದ ಕೆಲಸವನ್ನು ಆಗಲೇ ಪ್ರಾರಂಭಿಸಿದ್ದರಿಂದ ನಾವು ಅವರಿಗೆ ಪೂರ್ಣ ರೀತಿಯಿಂದ ತನು ಮನ ಧನದ ಬೆಂಬಲವನ್ನು ನೀಡುವುದೆಂದು ನಿರ್ಣಯಿಸಿದ್ದೆವು. ಅಷ್ಟು ಮಾತ್ರವಲ್ಲ ಅದನ್ನು ಕಾರ್ಯರೂಪಕ್ಕೂ ತಂದು ತೋರಿಸಿದೆವು.

ಕಲಾಂಗಣದ ನಿರ್ಮಾಣ ಕಾರ್ಯಕ್ಕೆ ಧನ ಸಹಾಯ ಪಡೆಯಲು ಊರೂರಿಗೆ ಹೋಗಿ ಅಲ್ಲಿಯ ಕೊಂಕಣಿ ಜನರ ಮನೆಗಳಿಗೆ ಭೇಟಿ ನೀಡಿ ಹಣ ಸಂಗ್ರಹಿಸುವ "ಯಾತ್ರಾ" ಎಂಬ ಕಾರ್ಯಕ್ರಮವನ್ನು ಶ್ರೀ ಎರಿಕ್ ಒಝೇರಿಯೋ ಹಾಗೂ ಅವರ ಸಂಗಾತಿಗಳು ಹಮ್ಮಿಕೊಂಡಿದ್ದರು. ಈ ಯಾತ್ರೆಯ ಉದ್ಘಾಟನಾ ಕಾರ್ಯಕ್ರಮವನ್ನು ಮಂಗಳೂರಿನ ರಿಟ್ರೀಟ್ ಹೌಸ್‌ನಲ್ಲಿ ನಡೆಸಲಾಗಿತ್ತು. ಮಂಗಳೂರು ಕ್ರೈಸ್ತ ಧರ್ಮ ಪ್ರಾಂತ್ಯದ ಅಧ್ಯಕ್ಷರೂ, ಅಧಿಕ ಗೌರವಾನ್ವಿತರೂ ಆಗಿರುವ ಬಿಷಪ್ ಡೊ. ಅಲೋಸಿಯಸ್ ಪೌಲ್ ಡಿಸೋಜಾ ಅವರು ಉದ್ಘಾಟನೆಯನ್ನು ನಡೆಸಿದರೆ, ಮಣಿಪಾಲದ ಶ್ರೀ ಕೆ.ಕೆ. ಪೈಯವರ ಗೈರು ಹಾಜರಿಯಲ್ಲಿ ನಾನು ಸಮಾರಂಭದ ಅಧ್ಯಕ್ಷನಾಗಿದ್ದೆ.

ಅನಂತರ ಮಾರ್ಚ್ ೭, ೧೯೯೦ರಂದು ಶುಕ್ರವಾರದ ದಿನ ಈ ಯಾತ್ರಾ ಬಂಟವಾಳಕ್ಕೆ ಬಂದಾಗ, ವಿಕ್ಟೋರಿಯಾ ಪ್ರೆಸ್ ಮಾಲಿಕರಾದ ಶ್ರೀ ಬೊ.ಪ್ರಭಾಕರ ಪ್ರಭು ಮತ್ತು ಶ್ರೀ ವಸಂತ ಪ್ರಭು ಅವರು ಬೆಳಗ್ಗೆಯೇ ಬಂಟವಾಳದ ಸರಹದ್ದಿನಲ್ಲಿ ಅವರನ್ನು ಸ್ವಾಗತಿಸಿ ಬಂಟವಾಳ ಪೇಟೆಯ ಮನೆಮನೆಗಳಿಗೆ ಭೇಟಿ ನೀಡಿ ದೇಣಿಗೆ ಸಂಗ್ರಹಿಸಿದ್ದರು. ನಮ್ಮ ಜನರ ಮನೆಗಳಲ್ಲಿ ಅವರಿಗೆ ಪೂರ್ಣ ಸ್ವಾಗತ ದೊರೆತದ್ದು ಮಾತ್ರವಲ್ಲ ದೊಡ್ಡ ಪ್ರಮಾಣದ ದೇಣಿಗೆಯೂ ಸಿಕ್ಕಿತ್ತು.

ಇದೇ ರೀತಿ ಮೇ ೮, ೧೯೯೦ರಂದು ಯಾತ್ರಾ ಉರ್ವಾದ ಪೆಂಟ್ಲೆಂಡ್ ಪೇಟೆಯ ಮನೆ ಮನೆಗಳಿಗೆ ಹೋದ ಸಮಯದಲ್ಲಿ ಶ್ರೀ ಬಿ. ದಾಮೋದರ ಪ್ರಭು, ಶ್ರೀ ಬಿ.ವಿ. ಬಾಳಿಗ ಮತ್ತು ಶ್ರೀ ವೆಂಕಟೇಶ್ ಬಾಳಿಗರಿಂದ, ಅದೇ ರೀತಿ ರಥಬೀದಿ ವಠಾರದಲ್ಲಿಯೂ ಸಾಕಷ್ಟು ಹಣಸಂಗ್ರಹವಾಗಿತ್ತು. ಹೀಗಾಗಿ ಮೇ ೨೯, ೧೯೯೦ರಂದು ರಿಟ್ರೀಟ್ ಹೌಸ್‌ನಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಎರಿಕ್ ಒಝೇರಿಯೋ ಅವರು, "ಯಾತ್ರ ಹೋಗಿದ್ದ ಊರುಗಳಲ್ಲಿ ಜಿ.ಎಸ್.ಬಿ. ಸಹೋದರರು ನೀಡಿದಷ್ಟು ಧನಸಹಾಯ ಮತ್ತು ಪುರಸ್ಕಾರವನ್ನು ಬೇರೆ ಯಾರೂ ನೀಡಿಲ್ಲ" ಎಂದು ಬಿಚ್ಚು ಮನಸ್ಸಿನಿಂದ ಹೇಳಿದ್ದರು. ಈ ಸಭೆಯಲ್ಲಿ ಮುಂಬೈಯ ಶ್ರೀ ಜೆ.ಬಿ. ಸಿಕ್ವೇರ ಮತ್ತು ಶ್ರೀ ಸಂತೋಷಕುಮಾರ ಗುಲ್ವಾಡಿಯವರು ಮುಖ್ಯ ಅತಿಥಿಗಳಾಗಿದ್ದರು. ಮಂಗಳೂರು ಡಾಯೋಸಿಸ್‌ನ ಚಾನ್ಸಲರ್ ಫಾ. ಡಾ. ಹೆನ್ರಿ ಕಾಸ್ತಲಿನೊ ಅಧ್ಯಕ್ಷತೆ ವಹಿಸಿದ್ದರು.

●●

೩೬. ಶ್ರೀ ಧರ್ಮಸ್ಥಳ ನಡಾವಳಿ

ಧರ್ಮಸ್ಥಳದ ಪ್ರಥಮ ನಡಾವಳಿಯು ೧೯೫೦ನೇ ಇಸವಿಯಲ್ಲಿ, ಮಹಾನ್ ತಪಸ್ವಿ, "ಮಾತನಾಡುವ ಮಂಜುನಾಥ ದೇವರು" ಎಂಬ ಗೌರವಕ್ಕೆ ಪಾತ್ರರಾಗಿದ್ದ ಶ್ರೀ ಮಂಜಯ್ಯ ಹೆಗ್ಗಡೆಯವರ ಆಡಳಿತದ ಕೊನೆಯ ದಿನಗಳಲ್ಲಿ ನಡೆದಿತ್ತು. ಆಗ ನಾನು ನನ್ನ ತಾಯಿಯೊಂದಿಗೆ ಧರ್ಮಸ್ಥಳಕ್ಕೆ ಹೋಗಿದ್ದೆ.

ಎರಡನೆಯ ಬಾರಿ ೨೦೦೫ನೇ ಇಸವಿಯಲ್ಲಿ ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆಯವರ ಆಡಳಿತದ ಅವಧಿಯಲ್ಲಿ ನಡೆದ ನಡಾವಳಿಗೂ ನಾನು ಹೋಗಿದ್ದೆ. ಅಲ್ಲಿ ಲಕ್ಷಕ್ಕೂ ಮಿಕ್ಕಿದ ಜನರು ನೆರೆದಿದ್ದರು. ಸಾಮಾನ್ಯವಾಗಿ ಧರ್ಮಸ್ಥಳ ಮಂಜುನಾಥ ಸ್ವಾಮೀ ದೇವಸ್ಥಾನದಲ್ಲಿ ಹೆಗ್ಗಡೆಯವರು ತಮ್ಮ ಆಡಳಿತದ ಕೊನೆಯ ದಿನಗಳಲ್ಲಿ ಅಲ್ಲಿಯ ಧರ್ಮದೈವಗಳಿಗೆ ನೀಡುವ ಸಂಭ್ರಮದ ನಡಾವಳಿಯು ಒಂದು ಮಹತ್ವದ ಕಾಲಘಟ್ಟವಾಗಿದೆ. ಈ ಬಾರಿಯ ನಡಾವಳಿ ದಿನಗಳಲ್ಲಿ ಹಿಂದುಗಳು ಮಾತ್ರವಲ್ಲ ಕ್ರೈಸ್ತ ಮತ್ತು ಮುಸ್ಲಿಮ್ ಪುರುಷರು ಮತ್ತು ಮಹಿಳೆಯರು ಕೂಡ ಸ್ವಯಂಸೇವಕರಾಗಿ ತುಂಬಾ ಕೆಲಸ ಮಾಡಿರುವುದು ವಿಶೇಷವಾಗಿ ಕಂಡುಬರುತ್ತಿತ್ತು. ಅದು ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆಯವರ ಜನಪ್ರಿಯತೆ ಮತ್ತು ಎಲ್ಲಾ ಧರ್ಮಗಳ ಜನರಿಗೆ ಹೆಗ್ಗಡೆಯವರ ಮೇಲೆ ಇರುವ ಅಭಿಮಾನ ಮತ್ತು ಗೌರವದ ಸಂಕೇತವಾಗಿತ್ತು.

ಭಾಗ – ೪

ಸಾಧನಾರಂಗ

೩೭. ವಿಶ್ವ ಕೊಂಕಣಿ ಕೇಂದ್ರದ ಯೋಜನೆ

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ತಯಾರಿ ನಡೆಸುತ್ತಿದ್ದ ದಿನಗಳಲ್ಲಿ ನನಗೆ ದೆಹಲಿಯಿಂದ ದಕ್ಷಿಣದಲ್ಲಿ ಕೊಚ್ಚಿಯವರೆಗೆ, ಮುಖ್ಯವಾಗಿ ಮುಂಬೈ, ಗೋವಾ, ಕರ್ನಾಟಕ ಮತ್ತು ಕೇರಳದ ಕೊಚ್ಚಿಯವರೆಗಿನ ಪ್ರದೇಶಗಳಲ್ಲಿ ನೆಲೆಸಿದ ಕೊಂಕಣಿ ಭಾಷಿಕರಾದ ಹಿಂದೂ, ಮುಸ್ಲಿಮ್, ಕ್ರೈಸ್ತ ಧರ್ಮದವರು ಮತ್ತು ಬೇರೆಬೇರೆ ಜಾತಿಯವರು, ಬೇರೆಬೇರೆ ಉಪಭಾಷೆಗಳನ್ನು ಆಡುವವರು, ವಿಭಿನ್ನ ಸಂಸ್ಕೃತಿ ಮತ್ತು ಸಂಪ್ರದಾಯದ ಜನರ ಸಂಪರ್ಕ ದೊರೆತಿತ್ತು. ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯಗಳ ಕುರಿತು ಅವರ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿರುವ ಭಾವನೆಗಳು, ನಾವು ಒಂದು ಸಮಾಜವಾಗಿ ಹತ್ತಿರ ಬರಬೇಕು, ನಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬರಬೇಕು ಎನ್ನುವ ಇಚ್ಛೆ ಅವರಲ್ಲಿ ಎದ್ದು ಬರುತ್ತಿದ್ದುದು ಕಾಣಿಸುತ್ತಿತ್ತು. ವಿಶ್ವಸಮ್ಮೇಳನದ ಸಂದರ್ಭದಲ್ಲಿ ಜನರು ಸಾವಿರಾರು ಸಂಖ್ಯೆಯಲ್ಲಿ ಸೇರಿದಾಗ ಈ ವಿಚಾರಕ್ಕೆ ಮೂರ್ತಸ್ವರೂಪ ಬಂತು. ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಕೊಂಕಣಿ ಸಮುದಾಯದ ಭಾಷೆ, ಸಂಸ್ಕೃತಿ ಮತ್ತು ಅಸ್ಮಿತೆಯನ್ನು ಉಳಿಸಿಕೊಂಡು ಬರಲು, ಕೊಂಕಣಿ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜಾನಪದದ ಏಳಿಗೆ ಮತ್ತು ಪ್ರಗತಿಯನ್ನು ಸಾಧಿಸಲು, ಜಾಗತಿಕ ಮಟ್ಟದಲ್ಲಿ 'ವಿಶ್ವ ಕೊಂಕಣಿ ಕೇಂದ್ರ'ವನ್ನು ನಿರ್ಮಿಸಬೇಕು ಎಂಬ ಠರಾವನ್ನು ನಾನು ಮಂಡಿಸಿದೆ. ಈ ಠರಾವು ಸರ್ವಾನುಮತದಿಂದ ಸ್ವೀಕೃತವಾಯಿತು.

ವಿಶ್ವ ಕೊಂಕಣಿ ಕೇಂದ್ರವನ್ನು ನಿರ್ಮಿಸುವ ಠರಾವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನಾಗಿ ನಾನು 'ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನ'(ಕೊಂಕಣಿ ಭಾಸ್ ಆನಿ ಸಂಸ್ಕೃತಿ ಪ್ರತಿಷ್ಠಾನ) ಎಂಬ ಒಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಲು ಒಂದು ಸಂವಿಧಾನವನ್ನು ತಯಾರಿಸಿದೆ. ಎರಡು ಬಾರಿ ಕೊಂಕಣಿ ಭಾಷಾ ಮಂಡಳದ ಸರ್ವ ಸದಸ್ಯರ ಸಭೆ ಕರೆದು ಸಲಹೆ, ಸೂಚನೆಗಳನ್ನು ಪಡೆದೆ. ಅದರ ಅನಂತರ ಕೊಂಕಣಿ ಭಾಷಾ ಮಂಡಳದ ವತಿಯಿಂದ ವಿಶ್ವ ಕೊಂಕಣಿ ಸಮ್ಮೇಳನಕ್ಕಾಗಿ ಖರ್ಚು ಮಾಡಿ ಉಳಿದ ಹಣವನ್ನು ಕೊಂಕಣಿ ಪ್ರತಿಷ್ಠಾನದ ಖಾತೆಗೆ ವರ್ಗಾವಣೆ ಮಾಡಲು ಅನುಮತಿ ಪಡೆದುಕೊಂಡೆ. ಆ ಮೇಲೆ 'ವಿಶ್ವ ಕೊಂಕಣಿ ಕೇಂದ್ರ'ದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವ ನಿರ್ಧಾರವನ್ನು ಕೈಗೊಂಡೆ.

ಇದಕ್ಕಾಗಿ ಮಂಗಳೂರು ನಗರದಲ್ಲಿ ಜಾಗವನ್ನು ಕ್ರಯಕ್ಕೆ ಪಡೆಯುವುದೆಂದು ನಿರ್ಣಯಿಸಿದೆ. ಜಾಗ ಹುಡುಕಿ ಅದರ ಬೆಲೆಯನ್ನು ನಿರ್ಧರಿಸುವ ಕೆಲಸವನ್ನು ಶ್ರೀ ಎಂ. ರಘುನಾಥ ಶೇಟ್ ಅವರಿಗೆ ವಹಿಸಿದೆ. ಬಹಳ ಕಡೆ ಹುಡುಕಿದರೂ ನಮಗೆ ಪ್ರಶಸ್ತ ಜಾಗ ಸಿಗಲಿಲ್ಲ. ನಮಗೆ ವಿಸ್ತಾರವಾದ ಜಾಗದ ಆವಶ್ಯಕತೆ ಇತ್ತು. ಸಣ್ಣ ಸಣ್ಣ ಜಾಗಗಳೆಂದರೆ ೨೦-೨೫ ಸೆಂಟ್ಸ್ ಜಾಗ ದೊರೆಯುತ್ತಿತ್ತಾದರೂ, 'ವಿಶ್ವ ಕೊಂಕಣಿ ಕೇಂದ್ರ'ದ ಯೋಜನೆಯ ಕುರಿತಾದ ನನ್ನ ಕಲ್ಪನೆಯು ಬೇರೆ ರೀತಿಯದ್ದಾಗಿದ್ದರಿಂದ, ನಾನು ೫-೬ ಎಕರೆ ಜಮೀನು ನಮಗೆ ಬೇಕು ಎಂದು ಹೇಳುತ್ತಿದ್ದೆ. ನನ್ನ ಈ ಯೋಜನೆಯನ್ನು ಬೇರೆ ಸದಸ್ಯರಿಗೂ, ಮುಖ್ಯವಾಗಿ ನಮ್ಮ ಹಿರಿಯರು ಮತ್ತು ವಿಶ್ವಕೊಂಕಣಿ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಶ್ರೀ ಕೆ.ಕೆ.ಪೈ ಅವರಿಗೆ ತಿಳಿಸಿ ಹೇಳಿದ್ದರಿಂದ, ಆ ಭವ್ಯ ದೂರಗಾಮೀ ಸ್ವಪ್ನ ಸಿದ್ಧಿಸಲು 'ವಿಶ್ವ ಕೊಂಕಣಿ ಕೇಂದ್ರ'ದ ಯೋಜನೆಗೆ ೫-೬ ಎಕರೆ ಜಾಗ ಬೇಕು ಎನ್ನುವ ನಿರ್ಣಯ ಸ್ವೀಕೃತವಾಯಿತು.

ನಾವು ಜಾಗವನ್ನು ಹುಡುಕುತ್ತಿರುವಾಗ ಶ್ರೀಮತಿ ತೆರೆಜಾ ಬಾಯಿ ಎಂಬವರು ಮಂಗಳೂರಿನ ಶಕ್ತಿನಗರದಲ್ಲಿರುವ ತಮ್ಮ ಜಾಗವನ್ನು ಸೆಂಟ್ಸ್‌ಗೆ ಕೇವಲ ಐದು ಸಾವಿರ ರೂಪಾಯಿಗೆ ನಮಗೆ ನೀಡುವುದಾಗಿ ಹೇಳಿದ್ದರಿಂದ ಆ ಏಳು ಏಕರೆ ಜಾಗವನ್ನು ಖರೀದಿಸುವುದೆಂದು ನಿರ್ಣಯಿಸಿದೆವು(ಆಗ ಸರಕಾರಿ ನೋಂದಣಿ ಕಚೇರಿಯಲ್ಲಿ ಜಾಗದ ನೋಂದಣಿಗೆ ಸೆಂಟ್ಸ್‌ಗೆ ಹದಿನೇಳು ಸಾವಿರ ಇತ್ತು.). ಜಾಗದ ವಿಚಾರವಾಗಿ ಕರಾರು ಮಾಡಿದ ಬಳಿಕ ನಾನು ಕರ್ನಾಟಕ ಸರಕಾರದಲ್ಲಿ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಆರ್.ವಿ. ದೇಶಪಾಂಡೆಯವರನ್ನು

ಭೇಟಿಯಾಗಿ ಜಮೀನು ನೋಂದಣಿ ಹಣದಲ್ಲಿ ಶೇಕಡಾ ೧೦೦ ರಿಯಾಯಿತಿಯನ್ನು ಸರಕಾರದಿಂದ ದೊರೆಯುವಂತೆ ಮಾಡಬೇಕೆಂದು ಕೋರಿದೆ. ಶ್ರೀ ದೇಶಪಾಂಡೆಯವರು ನನ್ನ ವಿನಂತಿಯನ್ನು ಸರಕಾರಕ್ಕೆ ಶಿಫಾರಸು ಮಾಡಿದರು. ಆದರೆ, ಸರಕಾರದೊಂದಿಗೆ ವ್ಯವಹಾರ ನಡೆಸಲು ಮತ್ತು ಮಂಗಳೂರು ಜಿಲ್ಲಾಧಿಕಾರಿ ಮತ್ತು ಬೆಂಗಳೂರಿನ ವಿಧಾನ ಸೌಧದಲ್ಲಿರುವ ಬೇರೆ ಬೇರೆ ವಿಭಾಗಗಳ ವರಿಷ್ಠರನ್ನು ಭೇಟಿಯಾಗಿ ಈ ವಿಚಾರದಲ್ಲಿ ಬೆನ್ನಟ್ಟಬೇಕಾಗಿಯೂ ಬಂದಿತ್ತು. ಇದರಿಂದ ನಮಗೆ ಜಾಗ ಖರೀದಿ ಬೆಲೆಯ ನೋಂದಣಿಯ ಶುಲ್ಕದಲ್ಲಿ ಶೇಕಡ ೫೦ ರಷ್ಟು ರಿಯಾಯಿತಿ ದೊರೆಯಿತು. ಈ ವಿಚಾರದಲ್ಲಿ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆಯವರು ತುಂಬಾ ಸಹಾಯ ಮಾಡಿದ್ದಾರೆ. ಆಗ ಬಂಟ್ವಾಳದ ಶಾಸಕರು ಮತ್ತು ಮಂತ್ರಿಗಳಾಗಿದ್ದ ಶ್ರೀ ಬಿ. ರಮಾನಾಥ ರೈಯವರೂ ನೆರವು ನೀಡಿರುವುದನ್ನು ನಾವು ಮರೆಯುವಂತಿಲ್ಲ.

ಆಮೇಲೆ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿಕೊಳ್ಳಲು ಕೂಡ ಸರಕಾರ ನಮಗೆ ಶೇಕಡಾ ನೂರು ರಿಯಾಯಿತಿ ನೀಡಿತು. ಇನ್ನು ಮಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಾಣದ ಲೈಸೆನ್ಸ್ ಶುಲ್ಕದಲ್ಲಿಯೂ ಹೆಚ್ಚಿನ ರಿಯಾಯಿತಿಯನ್ನು ಪಡೆಯಲು ಕೂಡ ಶ್ರೀ ಆರ್.ವಿ. ದೇಶಪಾಂಡೆಯವರು ಸಹಾಯ ಮಾಡಿದ್ದಾರೆ. ಈ ಎಲ್ಲಾ ಕಾರ್ಯಗಳಿಂದಾಗಿ ನಮಗೆ ೭-೮ ಲಕ್ಷ ರೂಪಾಯಿ ಉಳಿತಾಯವಾಯಿತೆಂದು ಹೇಳಬಹುದು. ಇದಕ್ಕಾಗಿ ನಾವು ಶ್ರೀ ದೇಶಪಾಂಡೆಯವರಿಗೆ ಋಣಿಯಾಗಿದ್ದೇವೆ.

ನಾವು 'ವಿಶ್ವ ಕೊಂಕಣಿ ಕೇಂದ್ರ'ದ ಯೋಜನೆಯ ಕುರಿತು ಒಂದು ಮಾಹಿತಿಪತ್ರವನ್ನು(broucher) ತಯಾರಿಸಿದೆವು. ಮೇ ೧೯, ೨೦೦೨ರಂದು, ಅಂದರೆ ಚಿ. ದಿನೇಶನ ಚಲನಚಿತ್ರ ಪ್ರೊಡಕ್ಷನ್ ನಡೆಯುವ ಸಮಯದಲ್ಲಿ ನಾನು ದೆಹಲಿಗೆ ಹೋಗಿದ್ದಾಗ, ಅಲ್ಲಿ ಸಾರಸ್ವತ ಸಂಸ್ಕೃತಿ ಭವನದಲ್ಲಿ ಉಳಿದುಕೊಂಡಿದ್ದ ಶ್ರೀ ಕಾಶಿಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರಿಗೆ ನಮ್ಮ ಮಾಹಿತಿ ಪತ್ರವನ್ನು ತೋರಿಸಿ ಅವರ ಅಭಿಪ್ರಾಯ ಕೇಳಲು ಹೋದೆನು. ಮಾಹಿತಿ ಪತ್ರವನ್ನು ನೋಡಿ ಸ್ವಾಮೀಜಿಯವರು ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆ ಮಾಹಿತಿ ಪತ್ರವನ್ನು ಪ್ರಕಟಿಸಿ ಅದರ ಅಧಿಕೃತ ಉದ್ಘಾಟನೆ ಮಾಡುವುದೆಂದು ತೀರ್ಮಾನಿಸಿದ ಸಮಯದಲ್ಲಿಯೂ ಶ್ರೀ ಗುರುವರ್ಯರು ಬಂಟವಾಳ ಶ್ರೀ ಕಾಶೀಮಠದಲ್ಲಿ ವಾಸ್ತವ್ಯವಿದ್ದರು. ನಾನು ಶ್ರೀ ಕುಡ್ಪಿ ಜಗದೀಶ ಶೆಣೈ, ವೆಂಕಟೇಶ್ ಬಾಳಿಗ ಮತ್ತು ಪ್ರಭಾಕರ ಪ್ರಭು ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಶ್ರೀ ಗುರುವರ್ಯರಿಗೆ ಮಾಹಿತಿ ಪತ್ರವನ್ನು ತೋರಿಸಿ, ಶ್ರೀ ಸ್ವಾಮೀಜಿಯವರಿಗೆ ಎರಡು ಪ್ರತಿಗಳನ್ನು ನೀಡಿ, ಒಂದು ಪ್ರತಿಯಲ್ಲಿ ಅವರ ಶುಭಾಶೀರ್ವಾದವನ್ನು ಪಡೆದೆ.(ಆ ಸಮಯದಲ್ಲಿ ಮುಂಬೈಯ ವ್ಯಕ್ತಿಯೊಬ್ಬರು ಅನಾವಶ್ಯಕವಾಗಿ ಶ್ರೀ ಗುರುವರ್ಯರಲ್ಲಿ ಶ್ರೀಗಳ ಮೇಲೆ ನನ್ನ ನಿಷ್ಠೆಯ ಕುರಿತು ದುರಭಿಪ್ರಾಯದ ಮಾತುಗಳನ್ನು ಆಡಿದ್ದರು.) ಆದರೂ ಶ್ರೀ ಗುರುವರ್ಯರು ನಮಗೆ ಒಳ್ಳೆಯದಾಗಲಿ ಎಂದು ಆಶೀರ್ವಾದ ನೀಡಿ ಮಾಹಿತಿ ಪತ್ರದಲ್ಲಿ ಹಸ್ತಾಕ್ಷರ ನೀಡಿದರು.

ಆಮೇಲೆ ಕರ್ನಾಟಕ ಸರಕಾರದ ಕೈಗಾರಿಕಾ ಮಂತ್ರಿ ಸನ್ಮಾನ್ಯ ಶ್ರೀ ಆರ್.ವಿ. ದೇಶಪಾಂಡೆಯವರು ಫೆಬ್ರವರಿ ೧೪, ೨೦೦೩ರಂದು ವಿಶ್ವ ಕೊಂಕಣಿ ಸಮ್ಮೇಳನದ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮಾಹಿತಿ ಪತ್ರವನ್ನು ಬಿಡುಗಡೆಗೊಳಿಸಿದರು. ಮಾಹಿತಿ ಪತ್ರದ ಬಿಡುಗಡೆಯೊಂದಿಗೆ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯಕ್ಕಾಗಿ ಹಣ ಸಂಗ್ರಹಿಸುವ ಕಾರ್ಯಕ್ರಮಕ್ಕೂ ಚಾಲನೆ ದೊರೆಯಿತು. ಮೊದಲ ಹಂತದ ಕಾಮಗಾರಿಗೆ ಸುಮಾರು ೧.೫ರಿಂದ ೨ ಕೋಟಿ ರೂಪಾಯಿ ಬೇಕಾಗಬಹುದು ಎಂದು ತಿಳಿದು ನಾವು ಅಂದಾಜು ಪತ್ರವನ್ನು ಸಿದ್ಧ ಮಾಡಿದ್ದೆವು ಮತ್ತು ಎರಡು ವರ್ಷದೊಳಗೆ ಕೆಲಸ ಮುಗಿಸುವುದೆಂದು ತೀರ್ಮಾನಿಸಿದ್ದೆವು. ಆದರೆ ನಮ್ಮದೇ ಕೊಂಕಣಿ ಬಾಂಧವರು ಮತ್ತು ವಿಶ್ವ ಕೊಂಕಣಿ ಕೇಂದ್ರದ ಕೆಲಸ ಮಾಡುವ ಸಂಗಾತಿಗಳು ಕೊಂಕಣಿ ಸಂಸ್ಕೃತಿಯ ಪ್ರಗತಿಯ ಉದ್ದೇಶದಿಂದ ಕಲಾಂಗಣ ನಿರ್ಮಾಣ ಕಾರ್ಯದಲ್ಲಿ ಈಗಾಗಲೇ ಬಹಳ ಮುಂದುವರಿದ್ದರಿಂದ, ನಾವು ಯೋಜಿಸಿದ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯದ ಪ್ರಾರಂಭವನ್ನು ಕೈಗೆತ್ತಿಕೊಳ್ಳಲು ತಡ ಮಾಡಿದೆವು. ಈ ಕಾರಣಕ್ಕಾಗಿ ವಿಶ್ವ ಕೊಂಕಣಿ ಕೇಂದ್ರದ ಶಂಕುಸ್ಥಾಪನೆ ಕಾರ್ಯ ಸೆಪ್ಟೆಂಬರ್ ೫, ೨೦೦೫ ರಂದು ನಡೆಯುವಂತಾಯಿತು.

ದಿವಂಗತ ಉಳ್ಳಾಲ ಶ್ರೀನಿವಾಸ ಮಲ್ಯರನ್ನು 'ನೂತನ ದಕ್ಷಿಣ ಕನ್ನಡ ಜಿಲ್ಲೆಯ ಶಿಲ್ಪಿ' ಎಂದು ನೆನಪಿಸುತ್ತಾ ಗೌರವಿಸುತ್ತಾರೆ. ಅವರ ಶತಾಬ್ಧಿ ಸಮಾರಂಭವನ್ನು ಉತ್ತಮ ರೀತಿಯಲ್ಲಿ ನಡೆಸುವ ಸಲುವಾಗಿ ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಅವರ ಜೀವನ ಚರಿತ್ರೆಯನ್ನು ಬೆಳಕಿಗೆ ತರುವ ಕಾರ್ಯಕ್ರಮವನ್ನು ನವೆಂಬರ್ ೧೦, ೨೦೦೨ರಂದು ಶ್ರೀನಿವಾಸ

ಪಾಠಶಾಲೆಯಲ್ಲಿ ನಡೆಸಲಾಯಿತು. ಶ್ರೀನಿವಾಸ ಮಲ್ಯರ ಜೀವನದ ಕುರಿತು ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಶ್ರೀ ಕೆ.ಕೆ.ಪೈ ಅವರಿಂದ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನೂ ನೀಡಿದ್ದೆವು. ಈ ಕಾರ್ಯಕ್ರಮದಲ್ಲಿ ಜನರು ಬಹು ಸಂಖ್ಯೆಯಲ್ಲಿ ನೆರೆದಿದ್ದರು. ಮಂಗಳೂರಿನ ಮಾಸ್ಟರ್ ಸ್ಟುಡಿಯೋದವರ ಮಂಗಳೂರು ವಾಹಿನಿಯ 'ಮಾಸ್ಟರ್ ಲೀಡರ್ಸ್' ಕಾರ್ಯಕ್ರಮದಲ್ಲಿಯೂ ಉಳ್ಳಾಲ ಶ್ರೀನಿವಾಸ ಮಲ್ಯರ ಜೀವನ ಚರಿತ್ರೆಯನ್ನು ನಾನು ಪ್ರಸ್ತುತಪಡಿಸಿದೆ.

ಗೋವೆಯ ಶ್ರೀ ಚಂದ್ರಕಾಂತ ಕೇಣಿ ಕೊಂಕಣಿ ಭಾಷೆಯ ಶ್ರೇಷ್ಟ ಲೇಖಕರು ಮತ್ತು ಕೊಂಕಣಿ ಚಳವಳಿಯ ಧುರೀಣರು. ಅವರು ಗೋವೆಯಲ್ಲಿ ಕೊಂಕಣಿ ಭಾಷೆಗೆ ಮಾನ್ಯತೆ ದೊರೆಯಲು ತುಂಬಾ ಕೆಲಸ ಮಾಡಿದ್ದಾರೆ. ಅವರ ಕೊಂಕಣಿ ಸಾಹಿತ್ಯ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. ಅವರ ರಾಷ್ಟ್ರಮತ ವಾರಪತ್ರಿಕೆಯು ಹಿಂದೆ ಬಹಳ ಪ್ರಸಿದ್ಧ ಹಾಗೂ ಜನಪ್ರಿಯವಾಗಿತ್ತು. ಚಂದ್ರಕಾಂತ ಕೇಣಿಯವರ ಸಂಪಾದಕತ್ವದಲ್ಲಿ 'ಋತು' ಎಂಬ ಕೊಂಕಣಿ ಕವಿತಾ ತ್ರೈಮಾಸಿಕವು ಗೋವೆಯಿಂದ ಪ್ರಕಟವಾಗುತ್ತಿದ್ದುದು ಕೆಲವು ವರ್ಷಗಳ ಹಿಂದೆ ನಿಂತು ಹೋಗಿತ್ತು. ಶ್ರೀ ಕೇಣಿಯವರು ಶ್ರೀ ಗೋಕುಲದಾಸ ಪ್ರಭು ಅವರಲ್ಲಿ ಕೋರಿಕೆ ಸಲ್ಲಿಸಿದ್ದು ಅದನ್ನು ಗೌರವಿಸಿ ಶ್ರೀ ಗೋಕುಲದಾಸ ಪ್ರಭುರವರು ಮಂಗಳೂರಿನಿಂದ ಮತ್ತೆ 'ಋತು' ತ್ರೈಮಾಸಿಕ ಬೆಳಕಿಗೆ ತಂದರು. ನಾನು ಅದಕ್ಕೆ ಪ್ರೋತ್ಸಾಹ ನೀಡಿದೆ. ಹೀಗಾಗಿ ಆಗಸ್ಟ್ ೧೬, ೨೦೦೫ರಂದು 'ಋತು' ಕೊಂಕಣಿ ಕವಿತಾ ತ್ರೈಮಾಸಿಕ ಬಿಡುಗಡೆಯಾಯಿತು.

ವಿಶ್ವ ಕೊಂಕಣಿ ಕೇಂದ್ರ– ಒಂದು ದರ್ಶನ (Vishwa Konkani Centre - A Vision)

ವಿಶ್ವ ಕೊಂಕಣಿ ಕೇಂದ್ರದ ಕುರಿತು ನನ್ನ ದರ್ಶನವನ್ನು ಬರೆಯುವಂತೆ ೨೦೦೮ರಲ್ಲಿ ನನ್ನನ್ನು ಒತ್ತಾಯಿಸಲಾಯಿತು. ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣದ ಉದ್ದೇಶ ಮತ್ತು ಮುಂದಿನ ಯೋಜನೆಯ ವಿಚಾರವಾಗಿ ನಾನು ವಿಸ್ತೃತವಾಗಿ ವಿವರಗಳನ್ನು ನೀಡಿ ಒಂದು ಚಿಕ್ಕ ಮಾಹಿತಿ ಪುಸ್ತಕವನ್ನು ಪ್ರಕಟಿಸುವುದೆಂದು ನಿರ್ಧರಿಸಿದೆ. ಅದರ ರೂಪರೇಷೆಯ ಸಿದ್ಧತೆಗಾಗಿ ಶ್ರೀ ಮಹೇಶ ನಾಯಕರಿಗೆ ತಿಳಿಸಿದ್ದೆ. ಅವರು ಉತ್ತಮ ರೀತಿಯಿಂದ ಬರೆದು 'ಎ ವಿಶನ್' ಎಂಬ ಪುಸ್ತಿಕೆಯನ್ನು ಸಿದ್ಧಪಡಿಸಿದರು. ಇದು ೫–೬ ಲಕ್ಷ ರೂಪಾಯಿಯ ಬಾಬತ್ತು. ಇದಕ್ಕಾಗಿ ಶ್ರೀ ಪ್ರದೀಪ್ ಪೈ, ಕುಂಬಳೆ ನರಸಿಂಹ ಪ್ರಭು, ಕುಡ್ವಿ ಜಗದೀಶ ಶೆಣೈ ಮತ್ತು ಶ್ರೀ ವೆಂಕಟೇಶ್ ಬಾಳಿಗ ತುಂಬಾ ಶ್ರಮಪಟ್ಟಿದ್ದಾರೆ. ಇದರಿಂದಾಗಿ ಈ ಕಾಫಿ ಟೇಬಲ್ ಗ್ರಂಥವು ತುಂಬಾ ಚೆನ್ನಾಗಿ ವರ್ಣರಂಜಿತವಾಗಿ ಪ್ರಕಟವಾಯಿತು. ಅದರಲ್ಲಿ ನನ್ನ ದರ್ಶನ ಮಾತ್ರವಲ್ಲ ವಿಶ್ವ ಕೊಂಕಣಿ ಸಮ್ಮೇಳನ ಇತ್ಯಾದಿ ಸಂದರ್ಭಗಳ ಭಾವಚಿತ್ರಗಳೂ ಇವೆ.

ಇದು ಪ್ರಕಟವಾಗಬೇಕು ಎಂದು ಯೋಚಿಸುತ್ತಿರುವಾಗಲೇ ಒಂದು ದಿನ ಮಣಿಪಾಲ್ ಪ್ರಿಂಟಿಂಗ್ ಪ್ರೆಸ್‌ನ ನಿರ್ದೇಶಕರಾದ ಶ್ರೀ ಟಿ. ಗೌತಮ ಪೈ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯವನ್ನು ವೀಕ್ಷಿಸಲು ಬಂದಿದ್ದರು. ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಮತ್ತು ನನ್ನ ಯೋಜನೆ ಕುರಿತು ಕೇಳಿ ಅವರಿಗೆ ತುಂಬಾ ಸಂತೋಷವಾಯಿತು. ನಾನು ಅವರಲ್ಲಿ 'ದರ್ಶನ' ಕೃತಿಯ ೫೦೦೦ ಪ್ರತಿಗಳನ್ನು ಉದಯವಾಣಿ ಪ್ರೆಸ್‌ನಲ್ಲಿ ಪ್ರಕಟಿಸುವಂತೆ ಕೋರಿದೆ. ಅವರು ತಾನು ಅದನ್ನು ಉದಾರವಾಗಿ ಪ್ರಕಟಿಸುವುದಾಗಿ ತಕ್ಷಣ ಆಶ್ವಾಸನೆ ನೀಡಿದರು. ಇದರಿಂದ ನಮಗೆ ಪ್ರಕಟಣಾ ವೆಚ್ಚದ ಹೊರೆಯೂ ಕಡಿಮೆಯಾಯಿತು.

ಉತ್ತರ ಅಮೇರಿಕೆಯ ಕೊಂಕಣಿ ಸಮ್ಮೇಳನವು ಲಾಸ್ ಏಂಜಲೀಸ್‌ನಲ್ಲಿ ನಡೆಯುತ್ತಿರುವಾಗ ಈ ಪುಸ್ತಿಕೆಯ ೧೫೦೦ ಪ್ರತಿಗಳನ್ನು ನಾವು ಪ್ರತಿನಿಧಿಗಳಿಗೆ ಹಂಚಲು ಕಳುಹಿಸಿಕೊಟ್ಟೆವು. ಇದರಿಂದ ಅಮೇರಿಕೆಯಲ್ಲಿಯೂ ವಿಶ್ವ ಕೋಂಕಣಿ ಕೇಂದ್ರದ ಯೋಜನೆಗೆ ತುಂಬಾ ಪ್ರಚಾರ ಸಿಕ್ಕಿತು.

ಡಾ. ಪಿ. ದಯಾನಂದ ಪೈ

ಶ್ರೀ ಪಿ. ದಯಾನಂದ ಪೈ ಮೂಲತಃ ಬಂಟವಾಳ ಹತ್ತಿರದ ಪಾಣೆಮಂಗಳೂರಿನವರು. ಆದರೆ ಚಿಕ್ಕಂದಿನಿಂದಲೇ ಮಂಗಳೂರಿನಲ್ಲಿ ಬೆಳೆದವರು. ಕೆನರಾ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪೂರೈಸಿ, ಮೈಸೂರಿನಲ್ಲಿ ಇಂಜಿನಿಯರಿಂಗ್ ಪದವಿ ಶಿಕ್ಷಣ ಪಡೆದವರು. ಅವರ ಪತ್ನಿ ಶ್ರೀಮತಿ ಮೋಹಿನಿ ಪೈ. ಇವರು ಕುಂದಾಪುರದವರು. ಅವರ ಸಣ್ಣ ತಮ್ಮ ಸತೀಶ ಪೈ. ಈ ಇಬ್ಬರು ಸಹೋದರರು ಶ್ರೀ ರಾಮ ಲಕ್ಷ್ಮಣರ ಹಾಗೆ ಪರಸ್ಪರ ಪ್ರೀತಿ, ವಿಶ್ವಾಸದಿಂದ ಇರುತ್ತಾರೆ. ಅವರ ಸಂಸಾರ ಜೊತೆಗೂಡಿಯೇ ಇದೆ. ತಾವು ಶಿಕ್ಷಣವನ್ನು ಪಡೆಯುತ್ತಿರುವಾಗ ಜನರ ಕಷ್ಟಸುಖಗಳನ್ನು ಮನಗಂಡಿದ್ದ ಶ್ರೀ ದಯಾನಂದ ಪೈಯವರು ಈಗ ಬಿಲಿಯಾಧಿಪತಿಯಾಗಿರುವಾಗಲೂ ಸಾಮಾನ್ಯ ಜನರ ಕಷ್ಟಸುಖಗಳಿಗೆ ಸ್ಪಂದಿಸುತ್ತಿದ್ದಾರೆ. ಅವರಿಗೆ

ನಾಟಕ, ವ್ಯಾಯಾಮ, ಕುಸ್ತಿ ಮತ್ತು ಸಾಂಸ್ಕೃತಿಕ, ಶೈಕ್ಷಣಿಕ ವಿಷಯಗಳಲ್ಲಿ ಬಹಳ ಆಸಕ್ತಿ. ಸಾಮಾಜಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ. ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿಯೂ ಉತ್ತಮ ಅಭಿರುಚಿ ಹೊಂದಿದ್ದಾರೆ. ಅವರ ವೃತ್ತಿಪರ ಜಂಜಾಟಗಳ ನಡುವೆಯೂ ನಾಟಕವಾಡಿಸುವುದರಲ್ಲಿ ಅವರು ಆಸಕ್ತಿ ತೋರುತ್ತಾರೆ, ಅಗತ್ಯ ಬಿದ್ದರೆ ನಾಟಕದಲ್ಲಿ ಪಾತ್ರವನ್ನೂ ನಿರ್ವಹಿಸುತ್ತಾರೆ. ಅವರ ಪತ್ನಿಯೂ ಅದೇ ರೀತಿ, ಅವರದೇ ಮನೋಧರ್ಮ-ದವರಾಗಿದ್ದಾರೆ.

ದಯಾನಂದ ಪೈ ಅವರಿಗೆ ಕೊಂಕಣಿ ಭಾಷೆಯ ಮೇಲೆ ತುಂಬಾ ಅಭಿಮಾನ. ಚಿಕ್ಕ ವಯಸ್ಸಿನಿಂದಲೂ ಬಂಟವಾಳ ವಾಸುದೇವ ಬಾಳಿಗಾ(ಕೊಂಕಣಿ ಕಳೊ, ಬಾಳೊ ಮಾಮ) ಅವರ ಕೊಂಕಣಿ ನಾಟಕದ ಹಾಡುಗಳನ್ನು ಕೇಳಿ ಶ್ರೀ ಬಾಳಿಗ ಮಾಮರ ಮೇಲೆ ದಯಾನಂದ ಪೈ ಅವರು ಅಭಿಮಾನ ಹೊಂದಿದ್ದರು. ನಾನು ಕೊಂಕಣಿ ಚಳವಳಿ ಕ್ಷೇತ್ರದಲ್ಲಿ ಮಾಡುವ ಕೆಲಸಗಳನ್ನು ಅವರು ಮನಗಂಡಿದ್ದರು.

೧೯೮೩ರಲ್ಲಿ ನಾನು ಮೊದಲ ಬಾರಿ ದಯಾನಂದ ಪೈ ಅವರನ್ನು ಕೆಂಗಲ್ ಹನುಮಂತಯ್ಯ ಬೀದಿಯಲ್ಲಿದ್ದ ಅವರ ಕಚೇರಿಯಲ್ಲಿ ಭೇಟಿಯಾಗಿದ್ದೆ. ಅದು ಪಾಣೆಮಂಗಳೂರಿನ ಶ್ರೀ ಶಾರದಾ ಪ್ರೌಢಶಾಲೆಯ ಕಟ್ಟಡದ ವಿಸ್ತರಣೆಗೆ ಅವರಿಂದ ಧನಸಹಾಯ ಪಡೆಯುವ ಉದ್ದೇಶದಿಂದ. ಅಧ್ಯಕ್ಷ ಶ್ರೀ ಪಿ. ದೇವದಾಸ ಶೆಣೈ(ದತ್ತು) ಅವರೊಂದಿಗೆ ದಯಾನಂದ ಪೈ ಅವರನ್ನು ಭೇಟಿಯಾಗಿದ್ದೆ. ಅದರ ಅನಂತರ ಬೇರೆ ಬೇರೆ ಸಂದರ್ಭಗಳಲ್ಲಿಯೂ ಧನಸಹಾಯ ಪಡೆಯಲು ಅವರನ್ನು ಭೇಟಿಯಾಗುತ್ತಲಿದ್ದೆನು.

ಮುಂದೆ ನಾನು ಕೊಂಕಣಿ ಜಾಥಾದ ಮುಖಂಡನಾಗಿ ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನಾದ ಬಳಿಕ ಕೊಂಕಣಿ ಚಳವಳಿ ಕ್ಷೇತ್ರದ ಬೆಳವಣಿಗೆ ತುಂಬಾ ವೇಗವನ್ನು ಪಡೆಯಿತು. ನಾನು ನಡೆಸುತ್ತಿರುವ ಕಾರ್ಯಗಳು, ನನ್ನ ನೇತೃತ್ವದಲ್ಲಿ ಜರಗಿದ ಮೊದಲ ವಿಶ್ವ ಕೊಂಕಣಿ ಸಮ್ಮೇಳನ ಇವು ಶ್ರೀ ಪೈಯವರಿಗೆ ತುಂಬಾ ಮೆಚ್ಚುಗೆಯಾದವು. ನಾನು ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಅದಕ್ಕೆ ಅವರಿಂದ ಹಣದ ದೊಡ್ಡ ಪಾಲು ಸಿಗುವಂತಾಯಿತು. ಹೀಗೆ ಕೊಂಕಣಿ ಭಾಷಾ ಕ್ಷೇತ್ರ ಮತ್ತು ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ ಕ್ಷೇತ್ರಗಳಲ್ಲಿ ನನ್ನ ಕಾರ್ಯಗಳು, ಜನರಿಗೆ ಅದರಲ್ಲಿಯೂ ಬಡಜನರ ಕಷ್ಟನಿವಾರಣೆಯ ನನ್ನ ಆಸಕ್ತಿಯನ್ನು ಕಂಡು ಶ್ರೀ ಪೈ ಅವರಿಗೆ ನನ್ನ ವಿಚಾರದಲ್ಲಿ ಒಂದು ವಿಶಿಷ್ಟ ಹಾಗೂ ಉನ್ನತ ಭಾವನೆ ಸೃಷ್ಟಿಯಾಯಿತೆಂದು ಕಾಣುತ್ತದೆ. ನಾನು ಯಾವುದೇ ವಿಷಯವನ್ನು ಅವರ ಮುಂದಿಟ್ಟರೂ, ಇವತ್ತಿಗೂ ಅವರು ಅದಕ್ಕೆ ನಕಾರ ಸೂಚಿಸಿದ್ದು ಇಲ್ಲ.

ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸುವುದೆಂಬ ನಿರ್ಣಯವನ್ನು ಕೈಗೊಂಡು ನಾವು ೧೯೯೫ಳ ಜನವರಿಯಲ್ಲಿ ಕೆಲಸಗಳನ್ನು ಪ್ರಾರಂಭಿಸಿದೆವು. ಆದರೂ, ೧೯೯೫ ಆಗಸ್ಟ್ ತಿಂಗಳವರೆಗೆ ಸಮ್ಮೇಳನ ಸಿದ್ಧತೆಯನ್ನು ನಡೆಸಲು ಅಗತ್ಯವಿದ್ದ ಹಣದ ಸಂಗ್ರಹವಾಗದೆ ತೊಂದರೆಯಾಗಿತ್ತು. ನಾನು ಈ ಅಡಚಣೆಗಳನ್ನು ಪೈ ಅವರಲ್ಲಿ ವ್ಯಕ್ತಪಡಿಸಿದ ಸಮಯದಲ್ಲಿ ತಾನು ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಎರಡು ಲಕ್ಷ ರೂಪಾಯಿ ನೀಡುವುದಾಗಿ ತಿಳಿಸಿ, ಸದ್ಯಕ್ಕೆ ಒಂದು ಲಕ್ಷ ರೂಪಾಯಿಯ ಚೆಕ್ ಬರೆದು ನೀಡಿದರು. ೧೯೯೫, ನವೆಂಬರ್ ತಿಂಗಳಲ್ಲಿ ಒಂದು ಲಕ್ಷ ರೂಪಾಯಿಯ ಮತ್ತೊಂದು ಚೆಕ್ ನೀಡಿ ನನ್ನಲ್ಲಿ ಧೈರ್ಯ ತುಂಬಿದರು.

ಅನಂತರ, ವಿಶ್ವ ಕೊಂಕಣಿ ಸಮ್ಮೇಳನ ಮುಗಿದ ಬಳಿಕವೂ, ೧೯೯೯ ಡಿಸೆಂಬರ್ ತಿಂಗಳಲ್ಲಿ ನಡೆದ ಮೊದಲ ವಿಶ್ವ ಸಾರಸ್ವತ ಸಮ್ಮೇಳನಕ್ಕೂ ಶ್ರೀ ದಯಾನಂದ ಪೈ ಅವರು ಧನ ಸಹಾಯ ನೀಡಿದ್ದರು. ಇಷ್ಟೆಲ್ಲಾ ವಿವರಗಳನ್ನು ಇಲ್ಲಿ ಬರೆಯಲು ಕಾರಣ, ಶ್ರೀ ಪೈಯವರು ನನ್ನ ಮೇಲೆ ಮತ್ತು ನಾನು ಕೈಗೆತ್ತಿಕೊಳ್ಳುವ ಕಾರ್ಯಗಳ ವಿಚಾರವಾಗಿ, ನನ್ನ ಶ್ರದ್ಧೆ, ನಿಷ್ಠೆ ಮತ್ತು ಬದ್ಧತೆಯನ್ನು ಮನಗಂಡು ಅವರು ಕಾಳಜಿಪೂರ್ವಕವಾಗಿ ನನ್ನ ಮೇಲೆ ಉನ್ನತ ಗೌರವವನ್ನು ಬೆಳೆಸಿಕೊಂಡಿರುವುದನ್ನು ಉಲ್ಲೇಖಿಸುವುದಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡುವುದು ಇಲ್ಲಿ ಅಗತ್ಯ.

೨೦೦೦ ಇಸವಿಯಲ್ಲಿ ಶ್ರೀ ಕಾಶೀಮಠ ಸಂಸ್ಥಾನದ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಎಪ್ಪತ್ತೈದನೇ ವರ್ಷದ ವರ್ಧಾಪನ ಸಮಾರಂಭದ ಆಚರಣೆಯು ಬೆಂಗಳೂರಿನ ಮಲ್ಲೇಶ್ವರಂ ಶ್ರೀ ಕಾಶೀಮಠದಲ್ಲಿ ನಡೆಯುವುದರಲ್ಲಿ ಇತ್ತು. ಅದೇ ಸಮಯದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿರುವ ಪ್ರಮುಖ ವ್ಯಕ್ತಿಗಳಿಗೆ ಶ್ರೀ ಗುರುವರ್ಯರ ದಿವ್ಯಹಸ್ತದಿಂದ ಸನ್ಮಾನ ಮಾಡುವುದೆಂದು ಮಠದ ಮುಖ್ಯಸ್ಥರು ನಿರ್ಣಯಿಸಿದ್ದರು. ಆ ಐದು ಮಂದಿ ಪ್ರಮುಖರಲ್ಲಿ ಕೇಂದ್ರ ಸರಕಾರದಲ್ಲಿ ಮಂತ್ರಿಯಾಗಿರುವ ಮಾನ್ಯ ಶ್ರೀ ಸುರೇಶ ಪಿ. ಪ್ರಭು, ಕರ್ನಾಟಕ ಸರಕಾರದಲ್ಲಿ ಮಂತ್ರಿಯಾಗಿದ್ದ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆ, ಮಣಿಪಾಲ

'ಮಾಹೆಯ ಅಧ್ಯಕ್ಷರಾದ ಶ್ರೀ ರಾಮದಾಸ ಎಂ. ಪೈ, ಐಸಿಐಸಿಐ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಶ್ರೀ ಕೆ.ವಿ.ಕಾಮತ್ ಅವರಿದ್ದರು. ಹಾಗೂ ನನ್ನ ಹೆಸರೂ ಇತ್ತು. ಅಷ್ಟು ಉನ್ನತ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ವ್ಯಕ್ತಿಗಳ ಜೊತೆ ನಾನು ಒಬ್ಬ ಯಃಕಶ್ಚಿತ ಮನುಷ್ಯ ಎಂದು ನನಗೆ ಕಂಡಿತ್ತು. ಅದನ್ನು ನಾನು ಶ್ರೀ ದಯಾನಂದ ಪೈ ಅವರಲ್ಲಿ ಹೇಳಿದೆ. ಆಗ ಶ್ರೀ ಪೈಯವರು, "ನೀವು ನಿಮ್ಮ ಜೀವಮಾನದಲ್ಲಿ ನಿಸ್ವಾರ್ಥ ದೃಷ್ಟಿಯಿಂದ ಮಾಡಿರುವ ಉತ್ಕೃಷ್ಟ ಸೇವೆ ಬಹಳ ಅಗಾಧವಾಗಿ ಇರುವುದರಿಂದ ನೀವು ನಿಮ್ಮ ಪತ್ನಿ ಸಹಿತ ಬೆಂಗಳೂರಿಗೆ ಬಂದು ಈ ಸನ್ಮಾನವನ್ನು ಸ್ವೀಕರಿಸಲೇಬೇಕು" ಎಂದು ಹೇಳಿದರು.

ಅದೇ ರೀತಿ, ಜನವರಿ ೧೧, ೨೦೦೦ರಂದು ಸಂಜೆ ಬೆಂಗಳೂರು ಶ್ರೀ ಕಾಶೀಮಠದಲ್ಲಿ ನಡೆದ ಸಮಾರಂಭದಲ್ಲಿ, ಸಮಾಜದ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರು ನನಗೆ ಶಾಲು ಹೊದೆಸಿ, ಹಾರ ಹಾಕಿ, ಫಲ ಮಂತ್ರಾಕ್ಷತೆ ನೀಡಿ ಸನ್ಮಾನ ಮಾಡಿ ಆಶೀರ್ವದಿಸಿದರು. ಅದೇ ರೀತಿ ನನ್ನ ಪತ್ನಿ ಶ್ರೀಮತಿ ಸಾವಿತ್ರಿಗೂ ಸೀರೆ ಮತ್ತು ರವಿಕೆ ಖಣ ನೀಡಿ ಆಶೀರ್ವಾದ ಮಾಡಿದರು.

ನನ್ನ ಆರಾಧ್ಯದೈವ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ಕೃಪಾಕಟಾಕ್ಷದಿಂದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಜಿಯವರ ಆಶೀರ್ವಾದದಿಂದ ಮತ್ತು ನನ್ನ ತಾಯಿ, ನನ್ನ ತಂದೆಯವರು ಸಂಪಾದಿಸಿದ ಪುಣ್ಯದಿಂದ ನನಗೆ ಈ ಸನ್ಮಾನ ದೊರೆಯುವಂತಾಯಿತು ಎಂದು ನಾನು ತಿಳಿಯುತ್ತೇನೆ.

೧೯೯೯, ಡಿಸೆಂಬರ್ ತಿಂಗಳಲ್ಲಿ ಮಂಗಳೂರಿನಲ್ಲಿ ನಡೆದ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನದ ಸಮಾರಂಭದಲ್ಲಿ ಸಾರಸ್ವತ ಸಮಾಜದ ನಾಲ್ಕೂ ಮಠಗಳ ಗುರುವರ್ಯರು ನನಗೆ "ವಿಶ್ವ ಸಾರಸ್ವತ ಸರದಾರ" ಎಂಬ ಬಿರುದು ನೀಡಿ ಆಶೀರ್ವಾದ ಮಾಡಿ, ಸನ್ಮಾನ ಮಾಡಿರುವುದು ಮತ್ತು ಬೆಂಗಳೂರಿನ ಶ್ರೀ ಕಾಶೀಮಠದಲ್ಲಿ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ಅಮೃತಹಸ್ತದಿಂದ ನನಗೆ ಶ್ರೀ ಪಿ. ದಯಾನಂದ ಪೈಯವರು ನೀಡಿದ ಸನ್ಮಾನ ಇವುಗಳನ್ನು ನಾನು ನನ್ನ ಜೀವನದ ಅತ್ಯಂತ ಉನ್ನತ ಸನ್ಮಾನಗಳೆಂದು ತಿಳಿಯುತ್ತೇನೆ.

ಇದರ ಬಳಿಕ ನಾವು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದಾಗ ಶ್ರೀ ಪಿ. ದಯಾನಂದ ಪೈ ಅವರು ತಾನು ಇಪ್ಪತ್ತೈದು ಲಕ್ಷ ರೂಪಾಯಿ ನಮಗೆ ನೀಡುವುದಾಗಿ ಮೊದಲೇ ತಿಳಿಸಿ ನಮ್ಮಲ್ಲಿ ಉತ್ಸಾಹ ತುಂಬಿದರು. ಅದರಿಂದಲೇ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ನನಗೆ ಉತ್ತೇಜನ ದೊರೆಯಿತು. ಅವರು ಮತ್ತು ಅವರ ಪತ್ನಿ ಶ್ರೀಮತಿ ಮೋಹಿನಿ ಪೈಯವರು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣಕ್ಕೆ ತಮ್ಮ ಅಮೃತಹಸ್ತದಿಂದ ಶಿಲಾನ್ಯಾಸ ಮಾಡಿದ್ದರು. ಈ ಸಂದರ್ಭದಲ್ಲಿ ಕೇಂದ್ರ ಮಂತ್ರಿ ಶ್ರೀ ಆಸ್ಕರ್ ಫೆರ್ನಾಂಡಿಸ್ ಮತ್ತು ಕರ್ನಾಟಕ ರಾಜ್ಯಸರಕಾರದಲ್ಲಿ ಮಂತ್ರಿಗಳಾಗಿರುವ ಶ್ರೀ ಆರ್.ವಿ. ದೇಶಪಾಂಡೆ ಉಪಸ್ಥಿತರಿದ್ದರು. ಅನಂತರವೂ ಶ್ರೀ ಪೈಯವರು ನನ್ನ ಹಲವಾರು ಕೊಂಕಣಿ ಭಾಷೆಯ ಮತ್ತು ಇತರ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಕೆಲಸಗಳಿಗೆ ಬಿಚ್ಚು ಮನಸ್ಸಿನಿಂದ ಬೆನ್ನು ತಟ್ಟಿ ಪ್ರೋತ್ಸಾಹ ನೀಡಿದ್ದನ್ನು ನಾನು ಮರೆಯುವ ಹಾಗಿಲ್ಲ.

ಆಮೇಲೆ ಒಂದು ದಿನ ಅವರು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯಕ್ಕೆ ಒಂದು ಕೋಟಿ ರೂ ನೀಡುವುದಾಗಿ ಘೋಷಿಸಿದರು. ಆ ಸಮಯದಲ್ಲಿ ನಮ್ಮ ಹಿರಿಯರಾದ ಶ್ರೀ ಕೆ.ಕೆ. ಪೈ ಅವರು ಅಲ್ಲಿ ಹಾಜರಿದ್ದರು. ಶ್ರೀ ದಯಾನಂದ ಪೈ ಅವರು ನನ್ನ ಮೇಲೆ ಇಟ್ಟಿರುವ ಅಭಿಮಾನ, ವಿಶ್ವಾಸಕ್ಕೆ ನಾನು ನಮೋಃ ಎನ್ನುತ್ತೇನೆ.

೨೦೦೫ನೇ ಇಸವಿ ಡಿಸೆಂಬರ್ ೨೭ ರಂದು ಸಂಜೆ ಬೆಂಗಳೂರಿನ ಅರಮನೆ ಮೈದಾನಿನಲ್ಲಿ ಶ್ರೀ ದಯಾನಂದ ಪೈಯವರ ಪುತ್ರ ಚಿರಂಜೀವಿ ಕಿರಣನ ಮದುವೆಯು ಶ್ರೀ ಕಿಶೋರ್ ಪೈ(ದುಬೈಯಲ್ಲಿರುವ ಕಾಮ್ರೆಡ್ ಶಾಂತಾರಾಮ ಪೈಯವರ ಪುತ್ರ) ಅವರ ಪುತ್ರಿಯೊಂದಿಗೆ ಬಹು ಸಂಭ್ರಮದಿಂದ ನಡೆಯಿತು. ಈ ಮದುವೆಯು ಸಾಮಾನ್ಯವಾಗಿ ರಾಜರ ಕುಟುಂಬಗಳಲ್ಲಿ ನಡೆಯುವುದಕ್ಕಿಂತಲೂ ಹೆಚ್ಚು ವೈಭವದಿಂದ, ಅದ್ದೂರಿಯಾಗಿ ಜರಗಿತು. ಈ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು, ಇತರ ಮಂತ್ರಿವರ್ಯರು, ಸಂಸದರು, ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು. ಸಾಂಸ್ಕೃತಿಕ ಕ್ಷೇತ್ರದ ಕಲಾವಿದರು, ಕ್ರೀಡಾಪಟುಗಳು ಮತ್ತು ಕರ್ನಾಟಕ ಹಾಗೂ ಬೇರೆ ಬೇರೆ ರಾಜ್ಯಗಳಿಂದ ದಯಾನಂದ ಪೈಯವರ ಅಭಿಮಾನಿಗಳು, ಬಾಲಿವುಡ್‌ನ ನಟ, ನಟಿಯರು, ಸಂಗೀತ ನಿರ್ದೇಶಕರು, ನೃತ್ಯಕಲಾವಿದೆಯರು ಭಾಗವಹಿಸಿದ್ದರು. ಭಾರತೀಯ ಹಾಗೂ ಪಾಶ್ಚಾತ್ಯ ಶೈಲಿಯ ಸುಮಾರು ನೂರಾರು ಬಗೆಯ ಊಟ, ತಿಂಡಿಗಳನ್ನು, ಫಲ ತಾಂಬೂಲವನ್ನು, ಐಸ್‌ಕ್ರೀಮ್‌ಗಳನ್ನು ದೊಡ್ಡ ದೊಡ್ಡ ಮೇಜುಗಳಲ್ಲಿ ಬೇರೆ ಬೇರೆ

ಅಡುಗೆ ಪದ್ಧತಿಗಳ ಹೆಸರಿನೊಂದಿಗೆ ಹರಡಿ ಇಡಲಾಗಿತ್ತು. ಇದು ಕೊಂಕಣಿ ಸಮಾಜದ ಶತಮಾನದ ವಿವಾಹ ಕಾರ್ಯಕ್ರಮವೆನಿಸಿತು. ನಾವು ಮಂಗಳೂರಿನಿಂದ ಎರಡು ದಿನ ಮೊದಲೇ ಹೋಗಿದ್ದೆವು.

ರೊನಾಲ್ಡ್ ಕೊಲಾಸೊ

೧೯೯೨ನೇ ಇಸವಿಯಲ್ಲಿ ಒಂದು ದಿನ ಶ್ರೀ ರೊನಾಲ್ಡ್ ಕೊಲಸೊ ಅವರು ನನ್ನ ಮಿತ್ರ ಶ್ರೀ ಕೊಲಿನ್ ಡಿಸಿಲ್ವಾ ಅವರೊಂದಿಗೆ ತುಂಬೆಯಲ್ಲಿರುವ ನಮ್ಮ ಮನೆಗೆ ಬಂದರು. ಆಗ "ಲಿಂಕ್" ಅಮಲು ಸೇವನೆಯ ವಿರೋಧಿ ಚಳವಳಿಯನ್ನು ಸಂಘಟಿಸುವ ವಿಚಾರವಾಗಿ ಬಂಟವಾಳ ಪ್ರದೇಶದಲ್ಲಿ ಪ್ರಚಾರ ಮಾಡಲು ನನ್ನ ಬೆಂಬಲವನ್ನು ಪಡೆಯುವ ಉದ್ದೇಶದಿಂದ ನಮ್ಮಲ್ಲಿಗೆ ಅವರು ಬಂದಿದ್ದರು. ಆಮೇಲೆ ನಮ್ಮ ಬಾಂಧವ್ಯ ಹೆಚ್ಚುತ್ತಾ ಹೋಯಿತು. ಕೊಂಕಣಿ ಜಾಥಾ ನಡೆಸುವುದರಲ್ಲಿ, ಕರ್ನಾಟಕದಲ್ಲಿ ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸುವುದರಲ್ಲಿ, ಕೊಂಕಣಿ ಆಕಾಡೆಮಿಯ ಸ್ಥಾಪನೆ ಹೀಗೆ ಕರ್ನಾಟಕ ರಾಜ್ಯ ಸರಕಾರದಲ್ಲಿ ಬೇಡಿಕೆಯನ್ನು ಇಡಲು ನಡೆಸಲಾದ ಚಳವಳಿಗೆ ರೊನಾಲ್ಡ್ ಕೊಲಾಸೊ ಅವರು ಹೃತ್ಪೂರ್ವಕ ನೆರವು ನೀಡಿದ್ದಾರೆ. ಅವರ ಖಾಸಾ ಮಿತ್ರರಾದ ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರಿಂದ ಅವರ ಮತ್ತು 'ರೋನ್ನಿ ಬಾಬ'ನವರ ಮಿತ್ರತ್ವದಿಂದಾಗಿ ನಮ್ಮ "ಕೊಂಕಣೀ ಜಾಥಾ" ಉದ್ದೇಶವು ಅತಿ ಶೀಘ್ರದಲ್ಲಿ ಸಾರ್ಥಕವಾಗುವುದು ಸಾಧ್ಯವಾಗಿತ್ತು.

ಅನಂತರ ನಡೆದ ಮೊದಲ ವಿಶ್ವ ಕೊಂಕಣಿ ಸಮ್ಮೇಳನದ ನಮ್ಮ ಆಯೋಜನಾ ಕಾರ್ಯದಲ್ಲಿಯೂ ರೋನ್ನಿ ಬಾಬ್ ಅವರಿಂದ ದೊಡ್ಡ ದೇಣಿಗೆ ದೊರೆತಿದೆ. ಆ ಮೇಲಿನ ದಿನಗಳಲ್ಲಿ ದೆಹಲಿಯಲ್ಲಿ ನಡೆದ "ನವದೆಹಲಿ ಕೊಂಕಣಿ ಕಲಾ ಉತ್ಸವ"ಕ್ಕೂ ಅವರು ಧನಸಹಾಯ ನೀಡಿದ್ದೂ ಇದೆ. ಹಾಗಿದ್ದರೂ, ನಾನು ಕೊಂಕಣಿಯ ಹೆಸರಿನಲ್ಲಿ ಜಾತಿವಾದ ಮಾಡುವೆನೆಂಬ ಸಂದೇಹವನ್ನು ಕೆಲವು ಲಿಪಿವಾದಿಗಳು, ಜಾತಿವಾದಿಗಳು ರೋನ್ನಿಬಾಬಾರ ಕಿವಿಯನ್ನು ತುಂಬಿದ್ದು ಇದೆ. (ನನ್ನ ಸತ್ಯ ಮತ್ತು ಧರ್ಮ ನನ್ನನ್ನು ಕಾಪಾಡುತ್ತದೆ ಎಂಬ ವಿಶ್ವಾಸ ನನ್ನಲ್ಲಿತ್ತು). ಈ ಕಾರಣಕ್ಕಾಗಿ ರೋನ್ನಿ ಬಾಬ ಎರಡು-ಮೂರು ವರ್ಷಗಳ ಕಾಲ ನಮ್ಮಲ್ಲಿಂದ ದೂರವೇ ಉಳಿದರು. ಯಾವುದೇ ಪತ್ರಕ್ಕೆ ಅವರು ಉತ್ತರಿಸುತ್ತಿರಲಿಲ್ಲ. ದೂರವಾಣಿಯಲ್ಲಿ ಮಾತನಾಡಲು ಕೂಡ ಸಿಗುತ್ತಿರಲಿಲ್ಲ. ಆದರೂ ಆಗಸದಲ್ಲಿ ಕವಿದಿರುವ ಕಪ್ಪು ಮೋಡ ಗಾಳಿಗೆ ದೂರ ಸರಿದು ಸೂರ್ಯನ ಬೆಳಕಿನಲ್ಲಿ ಆಗಸ ನಿರ್ಮಲವಾಗಿ ಜಗಜಗಿಸುವ ಹಾಗೆ ನನ್ನ ಸತ್ಯ ಮತ್ತು ಧರ್ಮ ನನ್ನನ್ನು ಕಾಪಾಡಿತು.

ಎರಡು ಮೂರು ವರ್ಷಗಳು ಕಳೆದ ಬಳಿಕ ಒಮ್ಮೆ ಶ್ರೀ ರೊನಾಲ್ಡ್ ಕೊಲಾಸೊ ಮಂಗಳೂರಿಗೆ ಬಂದು ನನಗೆ ದೂರವಾಣಿಯಲ್ಲಿ "ನಾವು ಒಮ್ಮೆ ಮಾತನಾಡಲು ಸಿಗೋಣ" ಎಂದು ದೂರವಾಣಿಯಲ್ಲಿ ಕರೆ ಮಾಡಿ ಹೇಳಿದಾಗ ನನಗೆ ಆಶ್ಚರ್ಯ ಮತ್ತು ಸಂತೋಷ ಉಂಟಾಯಿತು. ನಾನು 'ಆಗಲಿ' ಎಂದು ಹೇಳಿದೆ ಮತ್ತು ಅವರ ಮನೆಗೆ ಹೋದೆ ಅಲ್ಲಿ ನಾನು ಅವರಿಗೆ ನಮ್ಮ ಮೇಲೆ ಲಿಪಿವಾದಿಗಳು ಜಾತಿವಾದದ ಆರೋಪ ಮಾಡಿದ ವಿಚಾರವನ್ನು ಮತ್ತು ಬ್ಯಾಂಕ್ ಇತ್ಯಾದಿ ಸಂಸ್ಥೆಗಳಿಗೆ ವಿಶ್ವ ಕೊಂಕಣಿ ಕೇಂದ್ರದ ಯೋಜನೆಗೆ ದೇಣಿಗೆ ನೀಡದ ಹಾಗೆ ಮಾಡಲು ಬರೆದಿರುವ ಪತ್ರ ಇತ್ಯಾದಿಗಳನ್ನು ತೋರಿಸಿದೆ. ನಮ್ಮ ನಡುವೆ ಭಿನ್ನಮತ ಮತ್ತು ಸಂದೇಹ ಸಾರ್ವಜನಿಕವಾಗಬಾರದು ಎನ್ನುವ ಕಾರಣಕ್ಕಾಗಿ ನಾನು ತೆಗೆದುಕೊಂಡಿರುವ ಸಹನೆಯನ್ನೂ ಅವರಿಗೆ ತಿಳಿಸಿದೆ.

ಆ ವಿವರಗಳನ್ನು ಕೇಳಿದ ರೊನಾಲ್ಡ್ ಕೊಲಾಸೊ ಅವರ ಮನಸ್ಸಿನಲ್ಲಿದ್ದ ಸಂದೇಹವನ್ನು ನಿವಾರಿಸಿಕೊಂಡರು ಮತ್ತು ನನ್ನ ವಿಶ್ವ ಕೊಂಕಣಿ ಕೇಂದ್ರ ಮತ್ತು ಕೊಂಕಣಿ ಭಾಷಾ ಕಾರ್ಯಗಳಿಗೆ ಅವರ ಸಂಪೂರ್ಣ ಬೆಂಬಲ ಇರುವುದಾಗಿ ಬಿಚ್ಚು ಮನಸ್ಸಿನಿಂದ ತಿಳಿಸಿದರು. ಅಷ್ಟು ಮಾತ್ರವಲ್ಲ, ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು ಮತ್ತು ನನ್ನ ಕುರಿತು ಮುಕ್ತ ಮನಸ್ಸಿನಿಂದ ಶ್ಲಾಘನೆ ಮಾಡಿದರು.

ಶ್ರೀ ರೊನಾಲ್ಡ್ ಕೊಲಾಸೊ ಅವರು ವಿಶ್ವ ಕೊಂಕಣಿ ಕೇಂದ್ರದ ವಿಶ್ವ ಕೊಂಕಣಿ ಭಾಷಾ ಸಂಸ್ಥಾನ ಮತ್ತು ಸಂಶೋಧನಾ ಕೇಂದ್ರದ ನಿರ್ಮಾಣಕ್ಕಾಗಿ ೩೫ ಲಕ್ಷ ರೂ ನೀಡಿದ್ದಾರಲ್ಲದೆ, ವಿಶ್ವ ಕೊಂಕಣಿ ವಿದ್ಯಾರ್ಥಿ ನಿಧಿಗೆ ಪ್ರತಿವರ್ಷ ೫ ಲಕ್ಷ ರೂ ನೀಡುತ್ತಿದ್ದಾರೆ.

"ಬಸ್ತಿ ಮಾಮ್, ಕೊಂಕಣಿ ಜನರಲ್ಲಿ ನಿಮ್ಮ ವಿಚಾರವಾಗಿ ಪ್ರೀತಿ, ವಿಶ್ವಾಸ ಮತ್ತು ಗೌರವದ ಉನ್ನತ ಸ್ಥಾನವಿದೆ." ಎಂದು ಅವರು ಹೇಳುವುದಿದೆ. ಅವರ ಪತ್ನಿ ಶ್ರೀಮತಿ ಜೇನ್ ಕೊಲಾಸೊ ಅವರು ಕೂಡ ನನ್ನನ್ನು ಹಿರಿಯನಾಗಿ ಗೌರವದಿಂದ ಕಾಣುತ್ತಾರೆ. ಅವರ ಮನೆಗೆ ಹೋದರೆ ಅವರಿಬ್ಬರೂ ತುಂಬಾ ಪ್ರೀತಿ,

ವಿಶ್ವಾಸದಿಂದ ನನ್ನನ್ನು ಸ್ವಾಗತಿಸಿ ಸತ್ಕರಿಸುವುದು ಇದೆ. ಅಂತಹ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಧನ್ಯತಾ ಭಾವ ಮೂಡುತ್ತದೆ.

ಶ್ರೀ ರೊನಾಲ್ಡ್ ಕೊಲಾಸೊ ಅವರು ಕೊಂಕಣಿ ಭಾಷಾ ಸಂಸ್ಥೆಗಳಿಗೆ, ಕ್ರೈಸ್ತ ಬಂಧುಗಳ ಸಂಸ್ಥೆಗಳಿಗೆ ಮಾತ್ರವಲ್ಲ ಹೊಸ ದೇವಾಲಯ, ಇಗರ್ಜಿ, ಮಸೀದಿಗಳ ನಿರ್ಮಾಣ ಕಾರ್ಯಗಳಿಗೂ ಜಾತಿ–ಮತ–ಪಂಥಗಳ ಭೇದವಿಲ್ಲದೆ ಬಿಚ್ಚು ಮನಸ್ಸಿನಿಂದ, ಉದಾರ ಹಸ್ತದಿಂದ ದಾನ ನೀಡುತ್ತಾರೆ. ವಿಶೇಷವಾಗಿ ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ ಸಮಾಜಗಳಿಗೆ, ವಿದ್ಯಾಸಂಸ್ಥೆಗಳಿಗೆ ಅವರ ದೇಣಿಗೆ ಅಪಾರ ಪ್ರಮಾಣದಲ್ಲಿ ಸಲ್ಲುತ್ತಿದೆ.

ನಾನು ೧೯೭೨ರಲ್ಲಿ ಕೊಂಕಣಿ ಭಾಷಾ ಕಾರ್ಯಗಳಲ್ಲಿ, ಚಳವಳಿಯಲ್ಲಿ ಕಾಲಿಟ್ಟ ಸಮಯದಲ್ಲಿ ನನ್ನ ಕೆಲಸ ಮತ್ತು ಯೋಜನೆಯ ವಿಚಾರವಾಗಿ ನನಗೆ ನೆರವು ನೀಡಲು ಯಾರೂ ಮುಂದೆ ಬಂದಿರಲಿಲ್ಲ. ಆ ದಿನಗಳಲ್ಲಿ ನನಗೆ ಕಾಳಜಿಪೂರ್ವಕವಾಗಿ ಬಿಚ್ಚು ಮನಸ್ಸು ಮತ್ತು ಉದಾರ ಹಸ್ತಗಳಿಂದ ಹಣದ ಬೆಂಬಲ ನೀಡಿದ ಕೊಂಕಣಿ ಮಹನೀಯರೆಂದರೆ ಶ್ರೀ ಪಿ. ದಯಾನಂದ ಪೈ ಮತ್ತು ಶ್ರೀ ರೊನಾಲ್ಡ್ ಕೊಲಾಸೊ ಇಬ್ಬರೇ. ನಾನು ಅವರನ್ನು "ಕೊಂಕಣಿ ಮಾತೆಯ ಎರಡು ಕಣ್ಣುಗಳು ನೀವು" ಎಂದು ಹೇಳುವುದುಂಟು.

●●

೩೮. ವಿದೇಶ ಪ್ರವಾಸಗಳು

ದುಬಾಯಿ ಪ್ರವಾಸ

ದುಬಾಯಿಯಲ್ಲಿರುವ ಶ್ರೀ ಉಲ್ಲಾಸ ಡಿಸೋಜಾ ಕಾಮತರ ಆಮಂತ್ರಣವನ್ನು ಸ್ವೀಕರಿಸಿ ಶ್ರೀ ಕುಡ್ವಿ ಜಗದೀಶ ಶೆಣೈ, ರಘುನಾಥ ಶೇಟ್ ಮತ್ತು ನಾನು ಮಾರ್ಚ್ ೧೬, ೨೦೦೪ರಿಂದ ಮಾರ್ಚ್ ೨೬ ೨೦೦೪ ರವರೆಗೆ ದುಬಾಯಿಯಲ್ಲಿ ಇದ್ದೆವು. ಕೊಂಕಣಿ ಭಾಷೆಯ ಪ್ರಸಿದ್ಧ ಕವಿ ಮೆಲ್ವಿನ್ ರಾಡ್ರಿಗಸ್ ಮತ್ತು ಮಂಗಳೂರು ಮತ್ತು ದಾಯ್ಜಿ ದುಬಾಯಿ ಸಂಸ್ಥೆಯವರು ದುಬಾಯಿ ಇಂಡಿಯಾ ಕ್ಲಬ್‌ನಲ್ಲಿ ನನಗೆ ಸನ್ಮಾನ ಮಾಡಿದರು. ಈ ಕಾರ್ಯದಲ್ಲಿ ಶ್ರೀ ಜೆಸಲಿನ್ ಮಸ್ಕರೇಞ್ಞಸ್, ರೋನಿ ಡಿಕುನ್ಹಾ, ಡಾಯನ ಡಿಸೋಜಾ ಮೊದಲಾದವರು ಕೂಡ ಪಾಲುಗೊಂಡಿದ್ದರು. ಸನ್ಮಾನ ಕಾರ್ಯಕ್ರಮದಲ್ಲಿ ಅವರು ನನಗೆ ಒಂದು ಅತ್ಯಂತ ಸುಂದರ ಸ್ಮರಣಿಕೆಯನ್ನು ನೀಡಿ, ನನ್ನ ಕೊಂಕಣಿ ಕೆಲಸದ ಕುರಿತು ತುಂಬಾ ಹೊಗಳಿ ಅಭಿಮಾನ ವ್ಯಕ್ತಪಡಿಸಿದ್ದರು.

ಆ ಮೇಲೆ ನಾವು ದುಬಾಯಿಯಲ್ಲಿ ಕೆಲವು ಕೊಂಕಣಿ ಮುಖಂಡರನ್ನು ಭೇಟಿಯಾದೆವು. ಅವರು ವಿಶ್ವ ಕೊಂಕಣಿ ಕೇಂದ್ರಕ್ಕೆ ಹಣದ ಸಹಾಯ ನೀಡುವುದಾಗಿ ಆಶ್ವಾಸನೆ ನೀಡಿದರು. ಭಟ್ಕಳದ ನವಾಯತ ಮುಸಲ್ಮಾನರ ಮುಖಂಡ ಶ್ರೀ ಎಸ್.ಎಮ್. ಖಲೀಲ್ ಸಾಹೇಬರನ್ನು ಭೇಟಿಯಾದೆವು. ಅವರು ನವಾಯತ ಸಮಾಜದ ವತಿಯಿಂದ ಹಣದ ಸಹಾಯ ನೀಡುವುದಾಗಿ ಆಶ್ವಾಸನೆ ನೀಡಿದರು. ನಾವು ಅಬುದಾಬಿಯಲ್ಲಿ ನನ್ನ ಸೋದರಳಿಯ ಗೋಕುಲದಾಸ ಹೆಗ್ಡೆಯವರಲ್ಲಿಗೆ ಹೋಗಿದ್ದೆವು. ಅಲ್ಲಿ ಡಾ. ಬಿ. ಆರ್. ಶೆಟ್ಟಿಯವರ ಎನ್.ಎಮ್.ಸಿ. ಆಸ್ಪತ್ರೆ ನೋಡಿದೆವು. ನಾವು ದುಬಾಯಿಯಲ್ಲಿ ಯಾವುದಾದರೂ ಸಮಾರಂಭವನ್ನು ಮಾಡುವುದಿದ್ದರೆ, ತಮ್ಮಿಂದ ಏನಾದರೂ ಸಹಾಯ ಬೇಕಾದರೆ ಮಾಡುವುದಾಗಿ ಡಾ. ಬಿ.ಆರ್. ಶೆಟ್ಟಿಯವರು ನಮ್ಮಲ್ಲಿ ಹೇಳಿದರು. ಮಾರ್ಚ್ ೨೨, ೨೦೦೪ರಂದು ಸಂಜೆ ಅಬುದಾಬಿಯ ಇಂಡಿಯಾ ಸೋಶಿಯಲ್ ಸೆಂಟರ್‌ನಲ್ಲಿ ಕೊಂಕಣಿ ಜನರ ಸಭೆ ನಡೆದಿತ್ತು. ಕ್ರಿಶ್ಚಿಯನ್ ಕೊಂಕಣಿ ಸಂಸ್ಥೆಯ ಅಧ್ಯಕ್ಷರಾದ ಲಿಯೊ ರೊಡ್ರಿಗಸ್, ಥಾಮಸ್ ಸಿಕ್ವೇರಾ ಮತ್ತು ಶಿವರಾಮ ನಾಯಕ್(ಸಂಚಾಲಕರು) ಇದ್ದರು.

ಮರುದಿನ ಮತ್ತೆ ದುಬಾಯಿಗೆ ಬಂದಾಗ ಶ್ರೀ ಪಿ.ಎಸ್. ಕಾಮತರ ಮನೆಯಲ್ಲಿ ತಂಗಿದೆವು. ಮಸ್ಕತ್, ಕುವೇಟ್, ದೋಹಾ, ಕತಾರಗೆ ಹೋಗಲು ವೀಸಾ ವ್ಯವಸ್ಥೆ ಆಗದೇ ಇದ್ದುದರಿಂದ ಮಾರ್ಚ್ ೨೬, ೨೦೦೪ರಂದು ಮತ್ತೆ ಭಾರತಕ್ಕೆ ಮರಳಿ ಬರುವುದೆಂದು ನಿರ್ಧರಿಸಿದೆವು.

ಆ ಮೇಲೆಯೂ ಮೂರು ಬಾರಿ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯದ ಹಣ ಸಂಗ್ರಹಕ್ಕಾಗಿ ನಾವು ದುಬಾಯಿಗೆ ಭೇಟಿ ನೀಡಿದ್ದೆವು. ಪ್ರತಿಯೊಂದು ಬಾರಿಯೂ ನನ್ನ ಅಭಿಮಾನಿಯೂ, ನನ್ನ ಚಿಂತನೆಗಳ ಪ್ರೋತ್ಸಾಹಕರೂ ಆಗಿರುವ ಶ್ರೀ ಗೋಕುಲನಾಥ ಪ್ರಭುರವರು ದುಬಾಯಿಯಲ್ಲಿ ವಿಶ್ವ ಕೊಂಕಣಿ ಕೇಂದ್ರದ ಪ್ರಭಾರಿಯಾಗಿ ನಮ್ಮೊಡನಿದ್ದರು. ಅವರು ಈಗಲೂ ಓರ್ವ ಹಿತೈಷಿಯಾಗಿ ನಮ್ಮೊಂದಿಗೆ ದುಡಿಯುತ್ತಲಿದ್ದಾರೆ.

ಎರಡನೆಯ ಬಾರಿ ಶ್ರೀ ಕುಡ್ವಿ ಜಗದೀಶ ಶೆಣೈ ಮತ್ತು ನಾನು ದುಬಾಯಿಗೆ ಹೋಗಿ ಅಲ್ಲಿ ಶ್ರೀ ಎಸ್.ಎಮ್.ರಾವ್ ಮತ್ತು ಅವರ ಸೋದರರು, ಮತ್ತು ಎಸ್.ಎಮ್. ಖಲೀಲ್, ಮೈಕೆಲ್ ಡಿಸೋಜ(ಪುತ್ತೂರು ಸೋಜಾ ಬ್ರದರ್ಸ್) ಮತ್ತು ಕೆಲವು ಕೊಂಕಣಿ ಮುಖಂಡರನ್ನು ಕೂಡ ಭೇಟಿಯಾಗಿ ಬಂದಿದ್ದೆವು. ಅಲ್ಲಿ ನಾವು ಡಾ. ಬಿ.ಆರ್. ಶೆಟ್ಟಿಯವರನ್ನೂ ಭೇಟಿಯಾಗಿದ್ದೆವು. ನಾವು ದುಬಾಯಿಯಲ್ಲಿ ದೇಣಿಗೆ ಸಂಗ್ರಹಕ್ಕಾಗಿ ಕಾರ್ಯಕ್ರಮ ಮಾಡುವುದಾದರೆ ತಾನು ಸಹಾಯ ಮಾಡುವೆನೆಂದು ಅವರು ಹೇಳಿದ್ದರು.

ನಾವು ದುಬಾಯಿಗೆ ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಹೋಗುವುದೆಂದು ನಿಶ್ಚಯಿಸಿದೆವು. ಅದೇ ಸಮಯದಲ್ಲಿ ಮುಂಬೈಯಲ್ಲಿಯೂ ಕೊಂಕಣಿ

ಕೈಗಾರಿಕೋದ್ಯಮಿಗಳು, ಬ್ಯಾಂಕ್ ವರಿಷ್ಠರು ಮತ್ತು ಮುಖ್ಯಸ್ಥರ ಒಂದು ಸಭಾ ಕಾರ್ಯಕ್ರಮವನ್ನು ನಡೆಸಿ ಅವರಿಗೆ ವಿಶ್ವ ಕೊಂಕಣಿ ಕೇಂದ್ರ ದರ್ಶನ ವಿಚಾರವಾಗಿ ಮಾಹಿತಿ ನೀಡಿದೆವು. ಈಗ ಮಂಗಳೂರಿನಲ್ಲಿ ನಡೆಯುತ್ತಿರುವ ನಿರ್ಮಾಣದ ಪ್ರಗತಿಯ ಕುರಿತು ಹಣ ಸಂಗ್ರಹಿಸುವ ನಿಟ್ಟಿನಲ್ಲಿ ನಡೆಸಿದ ಕೆಲಸಗಳು, ಮುಂದೆ ಇರುವ ಕೆಲಸಗಳ ಕುರಿತು ಮಾಹಿತಿ ನೀಡಿ ಅವರಿಗೂ ನಮ್ಮ ಕೆಲಸದ ಕುರಿತು ತಿಳಿವಳಿಕೆ ಬರುವಂತೆ ಮಾಡುವ ಉದ್ದೇಶದಿಂದ ಅಂಧೇರಿಯ ಹೊಟೇಲ್ ಕೊಹಿನೂರ್‌ನ ಸಭಾಗೃಹದಲ್ಲಿ ದಿನಾಂಕ ಸೆಪ್ಟೆಂಬರ್ ೨, ೨೦೦೬ರಂದು ಒಂದು ಸಭಾ ಕಾರ್ಯಕ್ರಮವನ್ನು ಆಯೋಜಿಸಿದೆವು. ಮುಖ್ಯ ಅತಿಥಿಗಳಾಗಿ ಕೊಂಕಣಿ ಭೀಷ್ಮರೆನಿಸಿದ ಶ್ರೀ ಕೆ.ಕೆ.ಪೈ, ಶ್ರೀ ಆರ್.ವಿ. ದೇಶಪಾಂಡೆ, ಮತ್ತು ಮುಂಬೈಯ ಶ್ರೀ ಜೋನ್ ಡಿಸಿಲ್ವಾ, ವಿನ್ಸೆಂಟ್ ಮಥಾಯಸ್ (ಅಧ್ಯಕ್ಷರು, ಕ್ರಿಶ್ಚಿಯನ್ ಚೇಂಬರ್ ಆಫ್ ಕಾಮರ್ಸ್), ಶ್ರೀ ಜಿ.ವಿ.ಮಾಸುರಕಾರ್, ಕಾರ್ಪೊರೇಶನ್ ಬ್ಯಾಂಕ್‌ನ ಶ್ರೀ ಎನ್.ಎನ್. ಪಾಲ್, ಶ್ರೀ ಎಸ್.ವಿ.ಪಿಕಳೆ ಬಂದಿದ್ದರು. ಈ ಕೆಲಸದಲ್ಲಿ ನನಗೆ ಮಹಾನ್ ಕೊಂಕಣಿ ಕವಿ ಶ್ರೀ ಜೆ.ಬಿ. ಸಿಕ್ವೇರಾ ಅವರು ತುಂಬಾ ಸಹಾಯ ಮಾಡಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಇವರಲ್ಲದೆ, ಶ್ರೀ ಮುಕುಂದ ಕಾಮತಿ(ಕೊಹಿನೂರ ಹೊಟೇಲಿನ ಜನರಲ್ ಮೆನೇಜರ್) ಮತ್ತು ನನ್ನ ಆಪ್ತ ಶ್ರೀ ಎನ್.ಎಸ್. ಪ್ರಭು (ಬಾಬಣ್ಣ) ಇವರು ಕೂಡ ತುಂಬಾ ಸಹಾಯ ಮಾಡಿದ್ದಾರೆ.

ಸಂಜೆ ನಡೆದ ಕಾರ್ಯಕ್ರಮವು ಉತ್ತಮ ರೀತಿಯಿಂದ ಯಶಸ್ವಿಯಾಗಿ ನಡೆಯಿತು. ಸುಮಾರು ಹತ್ತು, ಹದಿನೈದು ಲಕ್ಷ ದೇಣಿಗೆ ಸಿಗುವ ನಿರೀಕ್ಷೆಯಿಂದ ಮನಸ್ಸಿಗೆ ಸಂತೋಷವಾಯಿತು. ಶ್ರೀ ವೆಂಕಟೇಶ ಬಾಳಿಗರು ಈ ವಿಚಾರವಾಗಿ ಮಾಹಿತಿ ನೀಡುವ ಸಿ.ಡಿ. ಮಾಡಿ ತಂದಿದ್ದರು. ಈ ಕಾರಣದಿಂದಾಗಿ ಅದರ ಉತ್ತಮ ಪ್ರಭಾವ ನೆರೆದವರ ಮನಸ್ಸಿನಲ್ಲಿ ಉಂಟಾಗುವಂತಾಯಿತು.

ಮುಂಬೈಯಿಂದ ಸೆಪ್ಟೆಂಬರ್ ೪, ೨೦೦೬ ರಂದು, ನಾನು, ಶ್ರೀ ಕೆ.ಕೆ.ಪೈ, ಶ್ರೀ ಕುಡ್ವಿ ಜಗದೀಶ್ ಶೆಣೈ ಮತ್ತು ಶ್ರೀ ರಘುನಾಥ್ ಶೇಟ್‌ರು ಏರ್ ಇಂಡಿಯಾ ವಿಮಾನದಲ್ಲಿ ದುಬಾಯಿಗೆ ಹೊರಟೆವು. ನಮಗೆ ಡಾ. ಬಿ.ಆರ್.ಶೆಟ್ಟಿಯವರು ಅವರ ಹೊಟೇಲ್ 'ಲೋಟಸ್'ನಲ್ಲಿ ನಿಲ್ಲುವ ವ್ಯವಸ್ಥೆ ಮಾಡಿದ್ದರು. ನಮ್ಮ ಬಳಕೆಗಾಗಿ ಅವರ ಬೆಲೆಬಾಳುವ ಕಾರನ್ನು ನೀಡಿದ್ದರು. ಶ್ರೀ ಆರ್.ವಿ. ದೇಶಪಾಂಡೆಯವರು ಮತ್ತು ಶ್ರೀ ಭಟಕಳ್ ಹನುಮಂತ ಪೈ(ಪುತ್ತೂ ಪೈ) ಇವರು ಕೂಡ ಬೇರೆ ವಿಮಾನದಲ್ಲಿ ಹೊರಟು ರಾತ್ರಿ ಬಂದು ತಲುಪಿದರು. ಅವರಿಗೆ ಭಟಕಳ ಮೂಲದ ಪ್ರಸಿದ್ಧ ಉದ್ಯಮಿ ಶ್ರೀ ಸೈಯದ್ ಖಲೀಲ್ ಸಾಹೇಬರು ಬೇರೆ ಹೊಟೇಲಿನಲ್ಲಿ ತಂಗುವ ವ್ಯವಸ್ಥೆ ಮಾಡಿದ್ದರು. ರಾತ್ರಿ ಡಾ. ಬಿ.ಆರ್ ಶೆಟ್ಟಿಯುವರು ಕೆ.ಕೆ.ಪೈಯವರನ್ನು ಭೇಟಿಯಾಗಿ ಬಹಳ ಹೊತ್ತಿನವರೆಗೆ ಮಾತನಾಡುತ್ತಾ ಕುಳಿತಿದ್ದರು. ಡಾ. ಶೆಟ್ಟಿಯವರು ಪೈಯವರ ದೊಡ್ಡ ಅಭಿಮಾನಿ. ಅವರ ಕುರಿತು ಕಾಳಜಿ ಇರುವ ವ್ಯಕ್ತಿ. ಹೀಗಾಗಿ ಪೈಯವರ ಜೊತೆಯಲ್ಲಿ ನಾವು ಬಂದಿದ್ದರಿಂದ ನಮ್ಮ ಹೊಟೇಲ್, ಊಟ ತಿಂಡಿ ಮತ್ತು ಪ್ರವಾಸಕ್ಕಾಗಿ ವಾಹನದ ವ್ಯವಸ್ಥೆ ಎಲ್ಲವನ್ನೂ ಡಾ. ಶೆಟ್ಟಿಯವರೇ ಮಾಡಿದ್ದರು. ಅದಲ್ಲದೆ, ನಮ್ಮ ಸಭಾ ಕಾರ್ಯಕ್ರಮದ ವ್ಯವಸ್ಥೆಯನ್ನೂ ಅವರದೇ ಖರ್ಚಿನಲ್ಲಿ ಮಾಡಿದ್ದರಿಂದ ನಮಗೆ ಹಣದ ಹೊರೆ ಹೆಚ್ಚು ಬೀಳಲಿಲ್ಲ.

ಮರುದಿನ ೫ನೇ ತಾರೀಖಿನಂದು ಮಂಗಳವಾರ, ಬೆಳಗ್ಗೆ ಹತ್ತು ಗಂಟೆಗೆ ನಾವು ಡಾ. ಬಿ.ಆರ್. ಶೆಟ್ಟಿಯವರು ವ್ಯವಸ್ಥೆ ಮಾಡಿದ ಕಾರಿನಲ್ಲಿಯೇ ಅಬುದಾಬಿಗೂ ಹೋದೆವು. ಅಲ್ಲಿ ಡಾ. ಶೆಟ್ಟಿಯವರು ನಮ್ಮನ್ನು ಸ್ವಾಗತಿಸಿ ನಮ್ಮ ಮಧ್ಯಾಹ್ನದ ಊಟದ ವ್ಯವಸ್ಥೆ ನಡೆಸಿದರು. ಅಷ್ಟರೊಳಗೆ ಶ್ರೀ ಆರ್.ವಿ. ದೇಶಪಾಂಡೆ ಮತ್ತು ಶ್ರೀ ಪುತ್ತು ಪೈ ಬಂದರು. ನಾವು ಜೊತೆಯಲ್ಲಿ ದೊಡ್ಡ ಕೈಗಾರಿಕೋದ್ಯಮಿ ಶ್ರೀ ಎಸ್.ಎಮ್. ರಾವ್ ಅವರ ಮನೆಗೆ ಹೋದೆವು. ಅವರೂ ಕೆ.ಕೆ.ಪೈ ಅವರ ದೊಡ್ಡ ಅಭಿಮಾನಿ. ಅವರೊಂದಿಗೆ ಪೈಯವರು ಮತ್ತು ದೇಶಪಾಂಡೆಯವರು ವಿಶ್ವ ಕೊಂಕಣಿ ಕೇಂದ್ರದ ಯೋಜನೆ ಮತ್ತು ಕೊಂಕಣಿ ಮಾತೃಭಾಷೆಯ ಪ್ರಗತಿಗಾಗಿ ನಮ್ಮ ಜವಾಬ್ದಾರಿಯನ್ನು ವಿವರಿಸಿದರು. ಶ್ರೀ ಎಸ್.ಎಂ. ರಾವ್ ಅವರು ವಿಶ್ವ ಕೊಂಕಣಿ ಕೇಂದ್ರಕ್ಕೆ ದೇಣಿಗೆ ನೀಡುವ ವಿಚಾರವಾಗಿ ತನ್ನ ಇಬ್ಬರು ಸಹೋದರರೊಂದಿಗೆ ಕೇಳಿ ಹೇಳುತ್ತೇನೆ ಎಂದು ನಮಗೆ ದೊಡ್ಡ ಆಶ್ವಾಸನೆ ನೀಡಿದರು.

ಅಬುದಾಬಿಯಿಂದ ದುಬಾಯಿಗೆ ಬಂದು ಸಂಜೆ ಮತ್ತು ಮರುದಿನ ನಾವು ತುಂಬಾ ಕೊಂಕಣಿ ಜನರಿಗೆ ದೂರವಾಣಿ ಕರೆ ಮಾಡಿ ೮ನೇ ತಾರೀಖಿನಂದು ಸಂಜೆ ಲೋಟಸ್ ಹೊಟೇಲಿನಲ್ಲಿ ನಡೆಯಲಿರುವ 'ವಿಶ್ವ ಕೊಂಕಣಿ ದರ್ಶನ' ಕಾರ್ಯಕ್ರಮಕ್ಕೆ ಬರುವಂತೆ ಆಮಂತ್ರಣ ನೀಡಿದೆವು. ರಾತ್ರಿ ನಮಗೆ ಶ್ರೀ ಖಲೀಲ್ ಸಾಹೇಬರು ಅವರ ಮನೆಗೆ ಊಟಕ್ಕೆ ಕರೆದಿದ್ದರು. ಅಲ್ಲಿ ತುಂಬಾ ನವಾಯತಿ ಕೊಂಕಣಿ ಜನರು

ಬಂದಿದ್ದರು. ಅಲ್ಲಿ ನಾನು ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ಕುರಿತು ವಿವರಗಳನ್ನು ನೀಡಿ ಅವರ ಬೆಂಬಲ ಕೋರಿದೆ ಮತ್ತು ೮ನೇ ತಾರೀಖಿನಂದು ಸಂಜೆ ನಡೆಯಲಿರುವ ಕಾರ್ಯಕ್ರಮಕ್ಕೆ ಬರುವಂತೆ ವಿನಂತಿಸಿದೆ. ಶ್ರೀ ಕೆ.ಕೆ.ಪೈ ಮತ್ತು ಶ್ರೀ ಆರ್.ವಿ. ದೇಶಪಾಂಡೆಯವರ ಉಪಸ್ಥಿತಿ ಇದ್ದುದರಿಂದ ನವಾಯಿತ ಸಮಾಜದ ದೊಡ್ಡ ದೊಡ್ಡ ಉದ್ಯಮಿಗಳು, ವೈದ್ಯರು, ಚಾರ್ಟಡ್ ಅಕೌಂಟೆಂಟರು, ಇಂಜಿನಿಯರುಗಳು, ಬ್ಯಾಂಕರುಗಳು ಕಾರ್ಯಕ್ರಮಕ್ಕೆ ಬಂದು ಅವರ ಬೆಂಬಲ ವ್ಯಕ್ತಪಡಿಸಿದ್ದು ನಮಗೆ ತುಂಬಾ ಅಭಿಮಾನದ ವಿಚಾರವಾಯಿತು.

ಸೆಪ್ಟೆಂಬರ್ ೮ನೇ ತಾರೀಖಿನಂದು ಸಂಜೆಯ ಕಾರ್ಯಕ್ರಮ ಮತ್ತು ಕಾಕ್‌ಟೇಲ್ ಪಾರ್ಟಿಯನ್ನು ಶ್ರೀ ಪೈ ಅವರ ಗೌರವಾರ್ಥವಾಗಿ ಡಾ. ಬಿ.ಆರ್. ಶೆಟ್ಟಿಯವರು ವ್ಯವಸ್ಥೆ ಮಾಡಿದ್ದರು. ಅವರು ಕುವೈಟ್, ದುಬಾಯಿಯ ಭಾರತದ ರಾಯಭಾರಿಗಳನ್ನು ಮತ್ತು ಕಮೀಶನರನ್ನು ವಿಶೇಷ ಅತಿಥಿಯಾಗಿ ಆಮಂತ್ರಣ ನೀಡಿ ಕರೆದಿದ್ದರು. ಅದು ನಮ್ಮ ಸಭಾ ಕಾರ್ಯಕ್ರಮ ಕಳೆಯೇರಲು ಕಾರಣವಾಯಿತು. ಶ್ರೀ. ಕೆ.ಕೆ. ಪೈ ಅವರಿಗೆ ಸನ್ಮಾನ ಕಾರ್ಯಕ್ರಮವೂ ಇತ್ತು. ಈ ಸಂದರ್ಭದಲ್ಲಿ ಶ್ರೀ ಆರ್.ವಿ. ದೇಶಪಾಂಡೆ, ಶ್ರೀ ಎಸ್.ಎಮ್. ರಾವ್. ಶ್ರೀ ಸೈಯದ್ ಎಂ. ಖಲೀಲ್‌ರು ಮಾತನಾಡಿದರು. ಇದು ಅಲ್ಲಿಗೆ ಬಂದ ಕೊಂಕಣಿಗರ ಮೇಲೆ ತುಂಬಾ ಪರಿಣಾಮ ಬೀರಿತು. ಈ ಕಾರ್ಯಕ್ರಮಕ್ಕಾಗಿ ಶ್ರೀ ಉಲ್ಲಾಸ ಡಿಸೋಜಾ ಕಾಮತ್, ಶ್ರೀ ಗೋಕುಲನಾಥ ಪ್ರಭು ಇವರು ತುಂಬಾ ಪರಿಶ್ರಮ ಪಟ್ಟಿದ್ದರು. ಪತ್ರಿಕಾ ಗೋಷ್ಠಿಯನ್ನೂ ಆಯೋಜಿಸಲಾಗಿತ್ತು.

ಮರುದಿನ ಕೊಂಕಣಿ ಜನರು ಬಹು ಸಂಖ್ಯೆಯಲ್ಲಿ ಹೊಟೇಲಿಗೆ ಬಂದು ಅವರ ದೇಣಿಗೆಯ ಆಶ್ವಾಸನೆ ನೀಡಿದರು. ನಾವು ಹೊರಡುವಾಗ ನಾನು ಶ್ರೀ ಎಸ್.ಎಮ್.ರಾವ್ ಅವರಿಗೆ ಕರೆ ಮಾಡಿದೆ. ಅವರು ತಮ್ಮ ತಾಯಿಯ ಹೆಸರಿನಲ್ಲಿ ವಿಶ್ವ ಕೊಂಕಣಿ ಗ್ರಂಥಾಲಯಕ್ಕೆ ಇಪ್ಪತ್ತೈದು ಲಕ್ಷ ನೀಡುವುದಾಗಿ ತಿಳಿಸಿದರು. ಶ್ರೀ ಮೈಕೆಲ್ ಡಿಸೋಜಾ ಮತ್ತು ಶ್ರೀ ರಾಮದಾಸ್ ಕಿಣಿಯವರು ಐದು ಲಕ್ಷ ನೀಡುವುದಾಗಿ ತಿಳಿಸಿದರು. ಶ್ರೀ ಎಂ. ಕಿಶೋರ್ ಕುಮಾರ್ ಪೈ(ಭಾರತೀಯ ಕಮ್ಯುನಿಸ್ಟ್ ಪಕ್ಷದ ದ.ಕ. ಜಿಲ್ಲಾ ಸಮಿತಿಯ ಸ್ಥಾಪಕರು ಮತ್ತು ಕ್ರಾಂತಿಕಾರಿ ದಿ. ಕಾಮ್ರೆಡ್ ಶಾಂತರಾಮ್ ಪೈಯವರ ಹಿರಿಯ ಮಗ) ಇವರೂ ದೇಣಿಗೆ ನೀಡುವುದಾಗಿ ತಿಳಿಸಿದರು.

೧೦ನೇ ತಾರೀಖಿನಂದು ಭಾನುವಾರ ನಾವು ದುಬಾಯಿಯಿಂದ ಹೊರಟು ಮುಂಬೈಗೆ ರಾತ್ರಿ ತಲುಪಿದೆವು. ಮರುದಿನ ವಿಮಾನದಲ್ಲಿ ಮಂಗಳೂರಿಗೆ ಬಂದು ತಲುಪಿದೆವು.

ಉತ್ತರ ಅಮೇರಿಕೆಯ ಪ್ರವಾಸ- ೨

ಉತ್ತರ ಅಮೇರಿಕೆಯ ಲಾಸ್ ಏಂಜೆಲಿಸ್‌ನಲ್ಲಿ ನಡೆಯಲಿದ್ದ "ನಾರ್ತ್ ಅಮೇರಿಕನ್ ಕೊಂಕಣಿ ಅಸೋಶಿಯೇಶನ್" (ನಾಕಾ)ನ ೫ನೇ ಅಧಿವೇಶನದಲ್ಲಿ ನಾನು ಮುಖ್ಯ ಅತಿಥಿಯಾಗಿ ಭಾಗವಹಿಸಬೇಕು ಮತ್ತು ಕೊಂಕಣಿಯ ರಕ್ಷಣೆಯ ಕುರಿತು ಪವರ್ ಪಾಯಿಂಟ್ ಪ್ರಾತ್ಯಕ್ಷಿಕೆಯನ್ನು ನೀಡಬೇಕೆಂದು ಸಂಘಟನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಕಾಸರಗೋಡು ರಾಮದಾಸ್ ಕಾಮತ್ ಮತ್ತು ಅವರ ಪತ್ನಿ ಉದಯಾ ಅವರಿಂದ ಆಮಂತ್ರಣ ಬಂದಿತ್ತು. ನಾನು, ಶ್ರೀ ಕುಡ್ವಿ ಜಗದೇಶ ಶೆಣೈ ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀಬಾಯಿ ಹಾಗೂ ಶ್ರೀ ಎಂ. ರಘುನಾಥ ಶೇಟ್ ಮತ್ತು ಅವರ ಪತ್ನಿ ಇಷ್ಟು ಮಂದಿ ಜೂನ್ ೨೯, ೨೦೦೪ರಂದು ಬೆಂಗಳೂರು- ಫ್ರಾಂಕ್‌ಫರ್ಟ್ ಲಾಸ್ ಏಂಜಲೀಸ್ ಏರ್ ಇಂಡಿಯಾ ವಿಮಾನದಲ್ಲಿ ರಾತ್ರಿ ಕುಳಿತವರು, ಮರುದಿನ ಮಧ್ಯಾಹ್ನ ಜರ್ಮನಿಯ ಫ್ರಾಂಕ್‌ಫರ್ಟ್ ವಿಮಾನ ನಿಲ್ದಾಣದಲ್ಲಿ ಇಳಿದೆವು. ಅಲ್ಲಿ ವಿಮಾನ ೯೦ ನಿಮಿಷಗಳ ಕಾಲ ನಿಲ್ಲುತ್ತದೆ. ನಾವು ವಿಮಾನ ನಿಲ್ದಾಣವನ್ನು ಮತ್ತು ಅಲ್ಲಿಯ ವ್ಯವಸ್ಥೆಯನ್ನು ನೋಡಿದೆವು. ಅಲ್ಲಿಂದ ಹೊರಟು ಮರುದಿನ ಲಾಸ್ ಏಂಜಲೀಸ್ ನಗರಕ್ಕೆ ಸಂಜೆ ನಾಲ್ಕು ಗಂಟೆಗೆ ತಲುಪಿದೆವು.

ನಮ್ಮನ್ನು ಡಾ. ರಾಮದಾಸ್ ಕಾಮತ್ ಹಾಗೂ ಇತರರು ಹಯಾತ್ ರಿಜನ್ಸಿ ಹೊಟೇಲಿನಲ್ಲಿ ಸ್ವಾಗತಿಸಿದರು. ನಮಗೆ ಅದೇ ಹೊಟೇಲಿನಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಲಾಗಿತ್ತು. ರಾತ್ರಿಯ ಊಟ ಇಂಡಿಯನ್ ರೆಸ್ಟೋರೆಂಟ್‌ನಲ್ಲಿ. ಮರುದಿನ ಪ್ರಾರಂಭವಾಗಲಿರುವ ಸಮ್ಮೇಳನದ ಸಿದ್ಧತೆಗಾಗಿ ಬಂದಿದ್ದ ಸದಸ್ಯರನ್ನು ನಾವು ಭೇಟಿಯಾದೆವು. ಅಮೇರಿಕೆಯ ಬೇರೆ ಬೇರೆ ರಾಜ್ಯಗಳಿಂದ ಮತ್ತು ಕೆನಡಾದಿಂದ ಪ್ರತಿನಿಧಿಗಳು ಬರುತ್ತಲೇ ಇದ್ದರು. ನಾವು ಅವರನ್ನು ಭೇಟಿಯಾಗಿ ಪರಸ್ಪರ ಶುಭ ಹಾರೈಕೆಯನ್ನು ಕೋರುತ್ತ ನಿಂತೆವು. ಅವರಲ್ಲಿ ಅನೇಕ ಮಂದಿ ನನ್ನ ಊರು ಬಂಟವಾಳದವರು ಮತ್ತು ಮಂಗಳೂರಿನ ನಮ್ಮ ಪರಿಚಯಸ್ಥರು, ಸಂಬಂಧಿಕರು ಇದ್ದರು. ಅವರನ್ನು ಭೇಟಿಯಾಗಿ ನಮಗೆ ತುಂಬಾ ಸಂತೋಷವಾಯಿತು. ಮಂಗಳೂರಿನ ಶಾಸಕರಾದ ಶ್ರೀ ಎನ್. ಯೋಗೀಶ್ ಭಟ್ ಅವರೂ ಸಮ್ಮೇಳನಕ್ಕಾಗಿ ಬಂದು ತಲುಪಿದ್ದರು.

ಜುಲೈ ೨, ೨೦೦೪ರಂದು ಸಂಜೆ ೬ ಗಂಟೆಗೆ ಐದನೆಯ ಉತ್ತರ ಅಮೇರಿಕಾ ಕೊಂಕಣಿ ಸಮ್ಮೇಳನದ ಉದ್ಘಾಟನೆ ನಡೆಯಿತು. ಹಿರಿಯರಾದ ಮಣಿಪಾಲದ ಶ್ರೀ ಕೆ.ಕೆ. ಪೈಯವರು ಬಂದಿದ್ದರು. ಅಲ್ಲಿ ಡಾ. ಹುಂಡಿ ಮೋಹನ್ ಕಾಮತ್, ಮೋಹಿನಿ ಕಾಮತ್, ಡೆಟ್ರ್ಯಾಟ್‌ನ ಡಾ. ಶ್ರೀನಿವಾಸ ಬಾಳಿಗ, ಪ್ರಭಾ ಮತ್ತು ಡಾ. ಸುರೇಶ್ ಬಾಳಿಗ, ಪ್ರತಿಭಾ ಇವರು ಭೇಟಿಯಾದರು.

ಮರುದಿನ, ೩ನೇ ತಾರೀಖಿನಂದು ಬೆಳಗ್ಗೆ ನಾವು ಕೊಂಕಣಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಯ ಉದ್ಘಾಟನೆಯನ್ನು ನೆರವೇರಿಸಿದೆವು. ಆಮೇಲೆ ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ಪುಸ್ತಿಕೆಯನ್ನು ಹಂಚಿದೆವು. ಕೊಂಕಣಿ ಪುಸ್ತಕಗಳ ಮಾರಾಟ ಚೆನ್ನಾಗಿ ನಡೆಯಿತು. ಸಂಜೆ ೪.೩೦ಕ್ಕೆ "ಕೊಂಕಣಿ ಭಾಷೆಯ ಉಳಿವು"ನ ಕುರಿತು ನನ್ನ ಪ್ರಾತ್ಯಕ್ಷಿಕಾ ವಿಷಯ ಮಂಡನೆ, ಶಿಕ್ಷಣ ವ್ಯವಸ್ಥೆಯ ವಿವರಗಳನ್ನು ನೀಡುವ ಸಿ.ಡಿ. ದೃಶ್ಯಶ್ರಾವ್ಯ ಕಾರ್ಯಕ್ರಮ ನಡೆಯಿತು. ಕೆಲವರು ಒಳ್ಳೆಯ ದೇಣಿಗೆಯನ್ನೂ ನೀಡಿದರು.

ಮರುದಿನ, ೪ನೇ ತಾರೀಖಿನಂದು ಬೆಳಗ್ಗೆ ನಾನು ಮುಖ್ಯ ಭಾಷಣಕಾರನಾಗಿ ವಿಶ್ವ ಕೊಂಕಣಿ ಕೇಂದ್ರದ ಯೋಜನೆ, ಕೊಂಕಣಿ ಭಾಷೆಗೆ ಕರ್ನಾಟಕದಲ್ಲಿ ಸ್ಥಾನ ದೊರೆಯುವ ಸಲುವಾಗಿ ನಾವು ನಡೆಸಿದ "ಕೊಂಕಣಿ ಜಾಥಾ" ಚಳವಳಿ ಮತ್ತು ಇದರ ಪರಿಣಾಮವಾಗಿ ಕರ್ನಾಟಕ ಸರಕಾರದಿಂದ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯಿಂದಾಗಿ ಕೊಂಕಣಿ ಜನರಿಗೆ ಭಾಷೆಯ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿರುವುದು, ೧೯೯೫ನೇ ಇಸವಿಯಲ್ಲಿ ನಡೆದ ಚಾರಿತ್ರಿಕ ವಿಶ್ವ ಕೊಂಕಣಿ ಸಮ್ಮೇಳನ ಮತ್ತು ಅದರ ಫಲವಾಗಿ ವಿಶ್ವ ಕೊಂಕಣಿ ಕೇಂದ್ರದ ಯೋಜನೆ ಜನ್ಮ ತಾಳಿದ್ದು ಈ ಎಲ್ಲದರ ಕುರಿತು ನಾನು ವಿವರವಾಗಿ ಮಾತನಾಡಿದೆ. ನನ್ನ ಭಾಷಣ ತುಂಬಾ ಸ್ಫೂರ್ತಿದಾಯಕವಾಗಿ ಇತ್ತು ಎಂದು ಅನೇಕ ಮಂದಿ ನನ್ನ ಬಳಿ ಬಂದು ಹಸ್ತಲಾಘವ ನೀಡಿ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೆ, ದೇಣಿಗೆ ನೀಡುವ ಭರವಸೆಯನ್ನೂ ನೀಡಿದರು. ಶ್ರೀಕರ್ ಬೆಂಗಳೂರು ಮತ್ತು ನಿರ್ಮಲಾ ಅವರು ಕೊಂಕಣಿ ಕಲಿಕೆಯ ವಿವರಗಳನ್ನು ರೋಮಿ ಲಿಪಿಯಲ್ಲಿ ತಯಾರಿಸಿದ್ದರು. ಅದರ ಅನೇಕ ನೆರಳುಪ್ರತಿಗಳು ಮಾರಾಟವಾಗಿದ್ದವು. ಇದರಿಂದ ಬಂದಿರುವ ಹಣವನ್ನು ಅವರು ವಿಶ್ವ ಕೊಂಕಣಿ ಕೇಂದ್ರದ ಯೋಜನೆಗೆ ದೇಣಿಗೆಯಾಗಿ ನೀಡಿದರು. ಅವರ ಮನಸ್ಸು ದೊಡ್ಡದು. ನಾವು ೧೯೯೬ರಲ್ಲಿ ಶಿಕಾಗೋಗೆ ಮೊದಲ ಬಾರಿ ಹೋಗಿದ್ದಾಗಲೂ ಅತಿಥಿಗಳಾಗಿ ಅವರ ಮನೆಯಲ್ಲಿ ತಂಗಿದ್ದೆವು.

೫ನೇ ತಾರೀಖಿನಂದು ನನ್ನ ತಮ್ಮ ಚಿ. ಗಣಪತಿಯ ಕಾರಿನಲ್ಲಿ ನಾವು ಲಾಸ್ ವೇಗಾಸ್‌ಗೆ ಹೊರಟೆವು. ನಮ್ಮ ಪ್ರಯಾಣದ ಹಾದಿಯಲ್ಲಿ ಹಲವು ಸಾವಿರದಷ್ಟು ಕಾರುಗಳು ಲಾಸ್ ವೇಗಾಸ್‌ನಿಂದ ಮರಳುತ್ತಿರುವುದನ್ನು ನೋಡಿದೆವು. ನಾಲ್ಕು ದಿನಗಳ ಸುದೀರ್ಘ ರಜೆಗಾಗಿ ಲಾಸ್ ವೇಗಾಸ್‌ಗೆ ಹೋಗಿ ಅಲ್ಲಿಯ ಕ್ಯಾಸಿನೋಗಳಲ್ಲಿ ಜೂಜು ಇತ್ಯಾದಿ ಕ್ರೀಡೆಗಳಲ್ಲಿ ಭಾಗವಹಿಸಿ ಮನರಂಜನೆಯಲ್ಲಿ ತೊಡಗಿಕೊಂಡಿದ್ದವರು ತಮ್ಮ ತಮ್ಮ ಕಾರುಗಳಲ್ಲಿ ಮರಳುತ್ತಿರುವವರು ಲಕ್ಷಗಟ್ಟಳೆ ಇರುವರಂತೆ. ನಾವು ನೋಡುತ್ತಿರುವುದು ಅದನ್ನೇ ಎಂದು ಗಣಪತಿ ಹೇಳಿದ.

ನಮ್ಮೊಂದಿಗಿದ್ದ ಶ್ರೀ ಯೋಗೀಶ್ ಭಟ್, ಮತ್ತು ರಘುನಾಥ ಶೇಟ್ ಅವರು ಡಾ. ಸುಂದರೇಶ ಕಾಮತ್ ಅವರಲ್ಲಿಗೆ ಹೋದರು. ನಾನು ಮತ್ತು ಕುಡ್ಪಿ ಜಗದೀಶ ಶೆಣ್ಯೆ ದಂಪತಿ ಗಣಪತಿಯ ಮನೆಗೆ ಬಂದೆವು.

ಲಾಸ್ ವೇಗಾಸ್ ಜೂಜಾಟದ ಜಾಗತಿಕ ಕೇಂದ್ರವಾಗಿದೆ. ಅಲ್ಲಿ ಪ್ರತಿಯೊಂದು ವಸತಿಗೃಹದಲ್ಲಿ ೪-೫ ಸಾವಿರ ಕೋಣೆಗಳು ಇರುತ್ತವೆ. ಅಲ್ಲಿ ಜೂಜಾಟ ಹಾಗೂ ಐಹಿಕ ಸುಖಭೋಗ ಗಳಿಗಾಗಿ ಅರಬ್ ರಾಷ್ಟ್ರಗಳಿಂದ ವಿಮಾನದಲ್ಲಿ ಬರುವವರು ಅನೇಕರಿದ್ದಾರೆ. ಅಲ್ಲದೆ ಪ್ರವಾಸಿಗರು ಕೂಡ ಲಕ್ಷಲಕ್ಷ ಸಂಖ್ಯೆಯಲ್ಲಿ ಇರುತ್ತಾರೆ. ಅಲ್ಲಿಯ ಕ್ಯಾಸಿನೋಗಳ ಕೀರ್ತಿ ಆ ರೀತಿಯದು. ಅಲ್ಲಿಯ ಹೊಟೇಲುಗಳಲ್ಲಿ ಕ್ಯಾಸಿನೋ, ಊಟ ಉಪಹಾರ ಅಲ್ಲದೆ ಮುಕ್ತ ಮನರಂಜನೆಯ ವ್ಯವಸ್ಥೆ ಕೂಡ ಇದೆ. ವಸತಿಗೃಹದ ಆಡಳಿತ ನಡೆಸುವವರು ಅದಕ್ಕಾಗಿ ಬೇರೆ ಬೇರೆ ಸಮಯವನ್ನು ನಿಗದಿಪಡಿಸಿಕೊಂಡು ಪ್ರಕಟಿಸುತ್ತಾರೆ. ಆಯಾಯ ಸಮಯದಲ್ಲಿ ಆಯಾಯ ಹೊಟೇಲುಗಳ ಒಳಾಂಗಣದಲ್ಲಿ ಅಥವಾ ಹೊರಾಂಗಣದಲ್ಲಿ ಮನರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಸೀಜರ್ ಹೊಟೇಲ್ ತುಂಬಾ ದೊಡ್ಡದು ಹಾಗೂ ಪ್ರಸಿದ್ಧವಾಗಿರುವ ಹೊಟೇಲು. ಅದರ ಪ್ರವೇಶ ದ್ವಾರದಲ್ಲಿಯೇ ಬಿಳಿ ಶಿಲೆಯಲ್ಲಿ ಕೆತ್ತಿರುವ ಉನ್ನತ ಆಸನದಲ್ಲಿ ಕುಳಿತಿರುವ ಜ್ಯೂಲಿಯಸ್ ಸೀಸರನ ಪ್ರತಿಮೆ ಕಾಣಲು ಸಿಗುತ್ತದೆ. ಅವನ ಕೈಯಲ್ಲಿ ದ್ರಾಕ್ಷಾರಸದ ದೊಡ್ಡ ಬಟ್ಟಲು ಇದೆ. ಅವನ ಬಳಿ ಓರ್ವ ಮಂತ್ರಿ ಹಾಗು ಓರ್ವ ಸೈನ್ಯಾಧಿಕಾರಿ ನಿಂತಿದ್ದಾರೆ. ಅಲ್ಲಿ ೨೦ ನಿಮಿಷಗಳ ಅವಧಿಯ ಒಂದು ಪ್ರದರ್ಶನ ನಡೆಯುತ್ತದೆ.

ನಿಗದಿಯಾಗಿರುವ ಸಮುಯವಾಗುತ್ತಿದ್ದಂತೆ ಆ ಪ್ರತಿಮೆಗಳಲ್ಲಿ ತಂತಾನೇ ಚಲನೆ ಪ್ರಾರಂಭವಾಗುತ್ತದೆ. ಸೀಜರನು ದೊಡ್ಡ ಕಂಠದಿಂದ ದ್ರಾಕ್ಷಾರಸವನ್ನು ತರುವಂತೆ ಆಜ್ಞಾಪಿಸುತ್ತಾನೆ. ಹತ್ತಿರ ನಿಂತಿರುವ ದಾಸಿ ಓರ್ವಳು ದ್ರಾಕ್ಷಾರಸದ ಪಾತ್ರೆಯಿಂದ ಸೀಜರನ ಕೈಯಲ್ಲಿರುವ ಬಟ್ಟಲಿಗೆ ಅದನ್ನು ಹಾಕುತ್ತಾಳೆ. ಆಮೇಲೆ ಸೀಜರನು ಆ ಬಟ್ಟಲನ್ನು ಎತ್ತಿ ತುಟಿಯ ಬಳಿ ತೆಗೆದುಕೊಂಡು ಕುಡಿಯುತ್ತಲೇ ಇರುತ್ತಾನೆ. ಆಗ ಅದು ವರೆಗೆ ವಿಗ್ರಹವಾಗಿದ್ದ ನರ್ತಕಿಯೊಬ್ಬಳು ತನ್ನ ಕೈಕಾಲುಗಳನ್ನು ಚಲಿಸುತ್ತಾ ನೃತ್ಯ ಪ್ರಾರಂಭಿಸುತ್ತಾಳೆ. ಪಿಟೀಲು ವಾದಕ ಪಿಟೀಲು ನುಡಿಸುತ್ತಾನೆ. ಅದು ನಡೆಯುತ್ತಿರುವಾಗಲೇ ಮಂತ್ರಿಯು ಯಾವುದೋ ಒಂದು ವಿಷಯದ ಕುರಿತು ತನ್ನಲ್ಲಿಗೆ ಬಂದಿರುವ ದೂರನ್ನು ಸೀಜರನ ಆಸ್ಥಾನದಲ್ಲಿ ಓದಿ ಹೇಳುತ್ತಾನೆ. ಅದನ್ನು ಕೇಳಿ ಸಿಟ್ಟಿಗೇಳುವ ಸೀಜರನು ಆ ವ್ಯಕ್ತಿಗೆ ಗಲ್ಲುಶಿಕ್ಷೆಯನ್ನು ಘೋಷಿಸುತ್ತಾನೆ. ಇತ್ತ ಕಡೆ ನೃತ್ಯ ನಡೆಯುತ್ತಲೇ ಇರುತ್ತದೆ. ಇಪ್ಪತ್ತು ನಿಮಿಷ ಮುಗಿದ ಕೂಡಲೇ ಪುನಃ ಎಲ್ಲವೂ ಸ್ತಬ್ದ ಸ್ಥಿತಿಯನ್ನು ತಲುಪಿ ಮೊದಲು ಹೇಳಿದ ಹಾಗೆ ಪ್ರತಿಮೆಗಳಾಗಿ ಉಳಿಯುತ್ತವೆ.

ಮರುದಿನ ನಮಗೆ ಡಾ. ಸುಂದರೇಶ್ ಕಾಮತ್ ಹಾಗೂ ಜಯಾ(ಕಾಸರಗೋಡು) ಅವರಲ್ಲಿ ಊಟ ಇತ್ತು. ಶಾಸಕರಾದ ಯೋಗೀಶ್ ಭಟ್ ಅವರೂ ಊಟಕ್ಕೆ ಬಂದಿದ್ದರು. ಸುಮಾರು ೨೫–೩೦ ಮಂದಿ ಕೊಂಕಣಿ ಜನರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ನಾನು ಅಲ್ಲಿ ನೆರೆದವರ ಮುಂದೆ ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ಕುರಿತು ಭಾಷಣ ನೀಡಿದೆ. ನಮ್ಮೊಂದಿಗೆ ಕುಡ್ಪಿ ಜಗದೀಶ ಶೆಣೈ, ಎಂ. ರಘುನಾಥ್ ಶೇಟ್ ಮತ್ತು ಅವರ ಕುಟುಂಬದವರೂ ಇದ್ದರು.

ಮಧ್ಯಾಹ್ನ ಅಲ್ಲಿಯ ಒಂದು ದೊಡ್ಡ ಮಾಲ್‌ಗೆ ಭೇಟಿ ನೀಡಿದೆವು. ಅಲ್ಲಿ ಸೂಜಿಯಿಂದ ಲ್ಯಾಪ್ ಟಾಪ್‌ನವರೆಗೆ ಎಲ್ಲವೂ ದೊರೆಯುತ್ತಿತ್ತು. ಆಮೇಲೆ ನಾವು ಬೇರೆಬೇರೆ ಕ್ಯಾಸಿನೋಗಳಿಗೆ ಹೋಗಿ ಕ್ಯಾಸಿನೋ ಒಂದರಲ್ಲಿ ಸಂಜೆ ಸಮುದ್ರಗಳ್ಳರು ದೊಡ್ಡ ತಿಜೋರಿಗಾಗಿ ನಡೆಸುತ್ತಿರುವ ನಕಲಿ ಜಗಳದ ಪ್ರದರ್ಶನವನ್ನು ಕಂಡೆವು. ಅಲ್ಲಿ ಎರಡು ದೊಡ್ಡ ಹೊಟೇಲುಗಳು ಇದ್ದವು. ಇವೆರಡರ ನಡುವೆ ಸುಮಾರು ಅರ್ಧ ಕಿ.ಮೀ. ನಷ್ಟು ಅಂತರ. ಹೊಟೇಲಿನ ಸುತ್ತಲೂ ನೀರು ತುಂಬಿರುವ ಕಂದಕ. ಈ ಎರಡು ಹೊಟೇಲುಗಳನ್ನು ಸುತ್ತುವರಿದು ಒಂದು ದೊಡ್ಡ ಹೊಳೆ ವರ್ತುಲಾಕಾರದಲ್ಲಿ ಹರಿಯುತ್ತಿದೆ. ಅದರಲ್ಲಿ ೩–೪ನೇ ಶತಮಾನದಲ್ಲಿ ಬಳಸುತ್ತಿದ್ದ ನಾವೆಗಳನ್ನು ನಿಲ್ಲಿಸಲಾಗಿದೆ. ಪ್ರದರ್ಶನ ಪ್ರಾರಂಭವಾದ ಕೂಡಲೇ ಆಯಾ ನಾವೆಗಳಲ್ಲಿರುವ ನಾವಿಕರು ಮತ್ತು ಕೆಲಸದಾಳುಗಳು ಚಲಿಸಲಾರಂಭಿಸಿದರು. ಆಮೇಲೆ ಆಚೆ ಬದಿಯಲ್ಲಿದ್ದ ಹೊಟೇಲಿನ ಹೊರಗಿರುವ ನೀರಿನಲ್ಲಿದ್ದ ನಾವೆಯಲ್ಲಿರುವವರಿಂದ ಈ ನಾವೆಯವರಿಗೆ ಬೈಗಳು ಪ್ರಾರಂಭವಾದುದು ಕೇಳಿಬಂತು. "ನಿಮ್ಮಲ್ಲಿರುವ ತಿಜೋರಿಯನ್ನು ನಮ್ಮ ಕೈಗೆ ನೀಡಿ. ಇಲ್ಲದಿದ್ದರೆ ನಾವು ನಿಮ್ಮ ನಾವೆಗಳನ್ನು ಸುಟ್ಟು ಹಾಕುತ್ತೇವೆ," ಈ ರೀತಿ...ಈ ಕಡೆಯಲ್ಲಿರುವ ನಾವೆಯ ನಾವಿಕರು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ ಮತ್ತು ದೊಡ್ಡ ದೊಡ್ಡ ಧ್ವನಿಯಿಂದ ನಿಂದಿಸುತ್ತಾರೆ. ಆ ನಾವೆಗಳಿಂದ ಎಸೆದ ಬೆಂಕಿಯ ದೊಂದಿಗಳು ಈ ನಾವೆಯ ಮೇಲೆ ಬಂದು ಬೀಳುತ್ತವೆ ಮತ್ತು ನಾವೆ ಸುಡಲು ಪ್ರಾರಂಭವಾಗುತ್ತದೆ. ಆದರೂ ಈ ನಾವೆಯವರು ಇದಕ್ಕೆ ಯಾವುದೇ ಗಮನವನ್ನು ನೀಡದೆ ತಮ್ಮಲ್ಲಿದ್ದ ತಿಜೋರಿಯನ್ನು ಬಿಟ್ಟುಕೊಡುವುದಿಲ್ಲ. ಬೆಂಕಿ ಹತ್ತಿಕೊಂಡು ಮೇಲೆರುತ್ತಾ ನಾವೆ ಸುಡುತ್ತಿರುವಾಗಲೇ ನಾವೆಯಲ್ಲಿದ್ದ ನಾವಿಕ ಹಾಗೂ ಕೆಲಸದಾಳುಗಳು ತಿಜೋರಿ ಹಿಡಿದು ಸಮುದ್ರಕ್ಕೆ ಹಾರಿಕೊಳ್ಳುತ್ತಾರೆ. ನಾವೆ ಸುಟ್ಟು ಹೋಗಿ ಪ್ರದರ್ಶನ ಕೊನೆಗೊಳ್ಳುತ್ತದೆ. ಆಮೇಲೆ ನಾವೆಗಳು ಸ್ತಬ್ಧವಾಗಿ ನಿಂತಿರುವ ಮೊದಲ ದೃಶ್ಯವೇ ಕಾಣಿಸಿಕೊಳ್ಳುತ್ತದೆ. ಈ ಪ್ರದರ್ಶನವನ್ನು ಕಾಣಲು ಸೇರಿದ್ದ ಸಾವಿರಾರು ಮಂದಿ ಮಾಮೂಲಿನಂತೆ ಬೇರೆ ಕಡೆಗಳಲ್ಲಿ ನಡೆಯಲಿರುವ ಪ್ರದರ್ಶನವನ್ನು ವೀಕ್ಷಿಸಲು ಚದರಿ ಹೋಗುತ್ತಾರೆ.

ಇದೇ ರೀತಿಯ ಸರದಿಯಲ್ಲಿ ಅನೇಕ ಹೊಟೇಲುಗಳು ಇರುತ್ತವೆ. ಕೆಲವೆಡೆ ಸಿಂಹದ ಆಟ, ಇನ್ನು ಹಲವೆಡೆಗಳಲ್ಲಿ ಸಿನೆಮಾ ಮಂದಿರಗಳು ಇರುತ್ತವೆ. ಅಲ್ಲಿ "ಲಯನ್ ದಿ ಕಿಂಗ್" ಚಿತ್ರವನ್ನು ಮುಕ್ತವಾಗಿ ಪ್ರದರ್ಶಿಸುತ್ತಾರೆ. ಲೇಸರ್ ಕಿರಣಗಳಿಂದ ವಿವಿಧ ದೃಶ್ಯಗಳನ್ನು ಕಾಣಿಸುವ ಪ್ರದರ್ಶನಗಳು ಇರುತ್ತವೆ. ಇವೆಲ್ಲವೂ ಮುಕ್ತವಾಗಿ ನಡೆಯುತ್ತವೆ, ಹಣ ನೀಡಬೇಕಾಗಿಲ್ಲ. ಈ ಪ್ರದರ್ಶನಗಳಿಗೆ ನಿಗದಿಯಾಗಿರುವ ಸಮಯ ಹಾಗೂ ವಿಷಯುದ ಕುರಿತು ಮಾಹಿತಿ ನೀಡುವ ಪುಸ್ತಿಕೆಗಳು ದೊರೆಯುತ್ತವೆ. ಅದನ್ನು ನೋಡಿ ಸಿನೆಮಾ ಮಂದಿರ ಅಥವಾ ಆಯಾ ತಾಣಗಳಿಗೆ ನಿಗದಿತ ಸಮಯಕ್ಕೆ ಹೋದರೆ ಸರಿಯಾದ ಸಮಯಕ್ಕೆ ಪ್ರದರ್ಶನಗಳನ್ನು ಕಾಣಬಹುದು.

ನಾವು ಜುಲೈ ೮ರಂದು ಬೆಳಗ್ಗೆ ಗಣಪತಿಯ ಮನೆಯಿಂದ ಲಾಸ್ ವೇಗಾಸ್ ವಿಮಾನ ನಿಲ್ದಾಣಕ್ಕೆ ಹೋಗಿ, ಅಲ್ಲಿಂದ

ವಿಮಾನದಲ್ಲಿ ಹ್ಯೂಸ್ಟನ್ ನಗರಕ್ಕೆ ಹೋದೆವು. ಅಲ್ಲಿ ನಮಗಾಗಿ ಶ್ರೀ ಸುರೇಶ್ ಶೆಣ್ಯೈ ಕಾದು ಕುಳಿತಿದ್ದರು. ಅವರು ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮೂಲತಃ ಕಾರ್ಕಳದವರಾಗಿರುವ ಸುರೇಶ್ ಶೆಣ್ಯೈ ಮತ್ತು ಅವರ ಪತ್ನಿ ಉಷಾ ಅವರದು ಹ್ಯೂಸ್ಟನ್‌ನಲ್ಲಿ ಚಿನ್ನದ ಅಂಗಡಿ ಇತ್ತು. ಅವರ ಮುಖಂಡತ್ವದಲ್ಲಿ ೨೦೦೨ರಲ್ಲಿ ಉತ್ತರ ಅಮೇರಿಕಾ ಕೊಂಕಣಿ ಅಧಿವೇಶನವು ಹ್ಯೂಸ್ಟನ್ ನಗರದಲ್ಲಿ ಜರಗಿತ್ತು. ಉತ್ತಮ ಗಾಯಕರೂ, ವಾಕ್ಪಟುವೂ ಆಗಿರುವ ಸುರೇಶ್ ಶೆಣ್ಯೈ ಅಲ್ಲಿಯ ಅನೇಕ ಸಾಮಾಜಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳ ಕಾರ್ಯಕಾರಿ ಸಮಿತಿಗಳಲ್ಲಿದ್ದು ಪ್ರಸಿದ್ಧರಾಗಿದ್ದಾರೆ. ಇವರ ಅಣ್ಣ ಡಾ. ವಾಸುದೇವ ಶೆಣ್ಯೈ ಮತ್ತು ಅವರ ಪತ್ನಿ ಶೋಭಾ ಶೆಣ್ಯೈಯವರೂ ಹೂಸ್ಟನ್‌ನಲ್ಲಿಯೇ ಇದ್ದಾರೆ. ನಾನು ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ವಿವರಗಳನ್ನು ನೀಡಿದ್ದರಿಂದ, ಸುರೇಶ್ ಶೆಣ್ಯೈಯವರು ಹ್ಯೂಸ್ಟನ್‌ನಲ್ಲಿರುವ ೨-೩ ಮಂದಿ ಕೊಂಕಣಿಗರಿಗೆ ದೂರವಾಣಿಯ ಮೂಲಕ ವಿಷಯವನ್ನು ತಿಳಿಸಿದ್ದರು. ಅವರಲ್ಲಿಗೆ ಬಂದಿದ್ದ ಖಬರ್ ಪತ್ರಿಕೆಯ ಸಂಪಾದಕ ಶ್ರೀ ವಸಂತ ಭಟ್, ಶ್ರೀ ರಾಮಕೃಷ್ಣ ಪ್ರಭು ಮತ್ತು ಶ್ರೀ ಸುಧೀರ ಗೋಳಿಕೇರಿ ಇವರನ್ನು ನಾವು ಭೇಟಿಯಾದೆವು. ಹ್ಯೂಸ್ಟನ್‌ನಲ್ಲಿ ನಾವು ನ್ಯಾಚುರಲ್ ಸಾಯನ್ಸ್ ಮ್ಯೂಸಿಯಂ ನೋಡಿದೆವು. ಅತೀ ಪ್ರಾಚೀನ ಕಾಲದ ಪ್ರಾಣಿಗಳು, ವೃಕ್ಷರಾಜಿಗಳು, ವಿವಿಧ ಕಾಲಾವಧಿಯ ಕಲ್ಲುಗಳು, ಜೀವಂತ ಇರುವ ಪತಂಗಗಳು, ಈಜಿಪ್ಟ್ ಅರಸರ ಐತಿಹಾಸಿಕ ಸ್ಮಾರಕದ ಪ್ರದರ್ಶನಾಲಯವನ್ನು ನೋಡಿದೆವು. ಆಮೇಲೆ "ಥಿಯೇಟರ್ ಗ್ರೀಕ್" ನೋಡಲು ಹೋದೆವು. ನೀರಿನೊಳಗೆ ಜೀವಿಸುವ ಮೀನು, ತಿಮಿಂಗಿಲ, ಹೂಗಿಡಗಳು, ಮತ್ತು ಇತರ ಜೀವಿಗಳ ಜೀವನ, ಚಲನ ವಲನಗಳನ್ನು ತೋರಿಸುವ ಸುಂದರ ಚಲನಚಿತ್ರವನ್ನು ನೋಡಿದೆವು. ಇದರಲ್ಲಿ ನೀರಿನೊಳಗೆ ಜೀವಿಸುವ ಅದ್ಭುತ ಜಲಚರಗಳ ಜಗತ್ತನ್ನು ವಿಸ್ಮಯಕಾರಿಯಾದ ರೀತಿಯಲ್ಲಿ ಚಿತ್ರಿಸಲಾಗಿದೆ. ಅಲ್ಲಿ ನಾವು ನೋಡಿದ ಗೆಲೇರಿಯಾ ಮಾಲ್‌ನಲ್ಲಿ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳು ಖರೀದಿಗೆ ದೊರೆಯುತ್ತಿದ್ದವು.

ರಾತ್ರಿ ಸುರೇಶ ಶೆಣ್ಯೈಯವರೊಂದಿಗೆ ಮಾತುಕತೆ ನಡೆಸಿದಾಗ, ಅವರಿಂದ ನಾವು ಅನೇಕ ವಿಚಾರಗಳನ್ನು ತಿಳಿದುಕೊಳ್ಳುವಂತಾಯಿತು. ಅವರಿಗೆ ದೇವರ ಮೇಲೆ ನಂಬಿಕೆ ಇದೆ, ಆದರೂ ಅವರು ದೇವರು ಎಂಬ ವಿಚಾರ ಮನುಷ್ಯರ ಸೃಷ್ಟಿ ಎಂಬ ತಮ್ಮ ಅಭಿಪ್ರಾಯವನ್ನು ನಮ್ಮ ಮುಂದೆ ಮುಕ್ತವಾಗಿ ಹೇಳಿದರು. ಹ್ಯೂಸ್ಟನ್‌ನಲ್ಲಿ ನಾಸಾ ಕೇಂದ್ರ ಇದೆ. ಆದರೆ ನಮಗೆ ಸಮಯದ ಅಭಾವ ಇದ್ದುದ್ದರಿಂದ ಅದಕ್ಕೆ ಭೇಟಿ ನೀಡುವುದು ಸಾಧ್ಯವಾಗಲಿಲ್ಲ. ಮರುದಿನ ರಾತ್ರಿ ನಮಗೆ ಡಾ. ವಾಸುದೇವ ಶೆಣ್ಯೈ ಮತ್ತು ಶೋಭಾ ಶೆಣ್ಯೈ ಅವರಲ್ಲಿ ಊಟಕ್ಕೆ ಆಮಂತ್ರಣವಿತ್ತು. ಅವರದು ಶ್ರೀಮಂತ ಕಲಾಭಿರುಚಿಯ ಬಹುದೊಡ್ಡ ಮನೆ. ಶೆಣ್ಯೈ ಅವರಿಗೆ ಜಗತ್ತಿನ ಬಹಳ ಹಳೆಯ ಕಾಲದ ಉತ್ತಮ ವರ್ಗದ ದ್ರಾಕ್ಷಾರಸದ(ಓಲ್ಡ್ ವೈನ್) ಬಾಟಲಿಗಳನ್ನು ಸಂಗ್ರಹಿಸುವ ಹವ್ಯಾಸವಿತ್ತು. ಅದಲ್ಲದೆ ಅವರಲ್ಲಿ ಹಳೆಯ ಚಿತ್ರಗಳು, ಸೈಗಲ್, ಪಂಕಜ ಮಲ್ಲಿಕ್ ಇವರು ನಟಿಸಿದ ಹಿಂದಿಚಿತ್ರಗಳು, ಹಳೆಯ ಚಲನಚಿತ್ರ ಗೀತೆಗಳ ಸಂಗ್ರಹವೂ ಇತ್ತು. ನನಗೆ ಸೈಗಲ್, ಮಹಮ್ಮದ್ ರಫಿ, ಮುಖೇಶ್, ಲತಾ ಮಂಗೇಶ್ಕರ್ ಮೊದಲಾದವರ ಹಳೆ ಚಿತ್ರಗೀತೆಗಳನ್ನು ಕೇಳುವ ಖಯಾಲಿ ಇದ್ದುದರಿಂದ ವಾಸುದೇವ ಶೆಣ್ಯೈ ಅವರ ಮನೆಯಲ್ಲಿ ರಾತ್ರಿ ಕಳೆದದ್ದು ಗೊತ್ತೇ ಆಗಲಿಲ್ಲ.

ಮರುದಿನ, ೧೧ನೇ ತಾರೀಖಿನಂದು ನಾವು ಹ್ಯೂಸ್ಟನ್‌ನಿಂದ ಶಿಕಾಗೋಗೆ ಹೋದೆವು. ಅಲ್ಲಿ ಶ್ರೀಕರ್ ಮತ್ತು ನಿರ್ಮಲಾ ಬೆಂಗಳೂರು ಇವರಲ್ಲಿ ಉಳಿದೆವು. ಕುಡ್ವಿಯವರು ತಮ್ಮ ಪತ್ನಿಯೊಂದಿಗೆ ಡಾ. ವಸಂತ ಮತ್ತು ಕೀರ್ತಿ ಆಚಾರ್ಯ ಅವರಲ್ಲಿ ಇರಲು ಹೋದರು.

ನಾವು ಶಿಕಾಗೋದಲ್ಲಿ ಜಗತ್ತಿನ ಅತೀ ಎತ್ತರದ ಸೀಯರ್ಸ್ ಟವರ್ಸ್‌ಗೆ ಭೇಟಿ ನೀಡಿದೆವು. ಆಮೇಲೆ ಆರ್ಟ್ ಇನ್ಸ್‌ಟಿಟ್ಯೂಟ್‌ಗೆ ಹೋದೆವು. ಅಲ್ಲಿ ಹಳೆಕೋಣೆಗಳು ಎನ್ನುವ ವಿಶಿಷ್ಟ ವಿಭಾಗವೊಂದು ಇದೆ. ಅದರಲ್ಲಿ ೧೦ರಿಂದ ೧೨, ೧೨ರಿಂದ ೧೩, ೧೩ ರಿಂದ ೧೪ನೇ ಶತಮಾನ ಹೀಗೆ ೧೪-೧೫ ಶತಮಾನಗಳ ಕಾಲಾವಧಿಯಲ್ಲಿ ಐರೋಪ್ಯ-ಬ್ರಿಟಿಷ್ ಫ್ರೆಂಚ್ ದೇಶಗಳ ಜನರು ವಾಸವಾಗಿದ್ದ ಮನೆಗಳ ವಿನ್ಯಾಸ, ಪಡಸಾಲೆ, ಮಲಗುವ ಕೋಣೆ ಬಚ್ಚಲುಕೋಣೆ, ಗ್ರಂಥಾಲಯ ಇವುಗಳನ್ನು ಪುಟ್ಟಪುಟ್ಟ ಮನೆಗಳ ಕೋಣೆಗಳ ಆಕೃತಿಗಳಲ್ಲಿ ತಯಾರಿಸಿ ಇಡಲಾಗಿದೆ. ಅದನ್ನು ನೋಡುತ್ತಿದ್ದರೆ, ಯುರೋಪಿನಲ್ಲಿ ೧೦-೧೧ನೇ ಶತಮಾನದಿಂದ ಬೆಳೆದು ಬಂದಿರುವ ಅವರ ಜೀವನ ಪದ್ಧತಿ, ಇರುವಿಕೆ, ವಿಶ್ರಾಂತಿ ಪಡೆಯಲು ಇದ್ದಂತಹ ಶೈಲಿಯ ಪರಿಚಯವಾಗುತ್ತದೆ. ವಿಶಾಲವಾಗಿರುವ ಜಾಗದಲ್ಲಿ ದೊಡ್ಡ ಕಟ್ಟಡವೊಂದರಲ್ಲಿ ಇದನ್ನು ವಿಸ್ತಾರ ನೆಲೆಯಿಂದ ಪ್ರದರ್ಶಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಅಲ್ಲಿ ಪಾರಂಪರಿಕವಾಗಿ ಜನರು ಬಳಸಿ ಬಂದಂತಹ ಪೀಠೋಪಕರಣಗಳು, ಪಾತ್ರಪಗಡಿಗಳು,

ಪರಿಕರಗಳು ಇತ್ಯಾದಿಗಳ ವಸ್ತುನಿಷ್ಠ ಪರಿಚಯ ನಮಗೆ ದೊರೆಯುತ್ತದೆ. ಅಲ್ಲಿಂದ ನಾವು ಯುರೋಪಿನ ಜಗದ್ವಿಖ್ಯಾತ ಚಿತ್ರಕಾರರಾದ ರೆಂಬಾರ್ಟ್, ಪಿಕಾಸೊ, ಬಿಥೋವನ್ ಮೊದಲಾದವರ ಕಪ್ಪು ಬಿಳುಪು ಚಿತ್ರಗಳು, ಪ್ರಕೃತಿದೃಶ್ಯಗಳಿರುವ ಚಿತ್ರಗಳ ಸಂಗ್ರಹ ಇರುವ ಗ್ಯಾಲರಿಗೆ ಹೋದೆವು. ಚಿತ್ರಕಲೆಯ ಈ ಬೃಹತ್ ಗ್ಯಾಲರಿಯಲ್ಲಿ ೧೫-೧೬ನೇ ಶತಮಾನದಲ್ಲಿ ಕುಂಚಬ್ರಹ್ಮರು ಸೃಷ್ಟಿಸಿದ ವರ್ಣಚಿತ್ರಗಳು ಇದೀಗ ತಾನೇ ಬಿಡಿಸಿದ ರೀತಿಯಲ್ಲಿ ಕಂಗೊಳಿಸುವಂತೆ ಆ ಗ್ಯಾಲರಿಯ ವ್ಯವಸ್ಥಾಪಕರು ಅದನ್ನು ಕಾಪಾಡಿಕೊಂಡು ಬಂದಿದ್ದಾರೆ. ಆ ಕಾಲದ ವಲಸಿಗರು ಯುರೋಪಿನಿಂದ ಅಮೇರಿಕೆಗೆ ಬಂದು ಒಂದು ಶತಮಾನದ ಬಳಿಕ ಈ ಚಿತ್ರಗಳನ್ನು ಹುಡುಕಿ ತೆಗೆದು ಈ ಗ್ಯಾಲರಿಯನ್ನು ಸ್ಥಾಪಿಸಿದ್ದಾರೆ. ಅದರಲ್ಲಿಯೂ ಅವರು ಬಹು ವಿಸ್ತಾರವಾಗಿರುವ ಜಾಗವನ್ನು ಖರೀದಿಸಿ ಈ ಗ್ಯಾಲರಿಯನ್ನು ಸ್ಥಾಪಿಸಿದ್ದಾರೆ. ೪-೫ ಮಹಡಿಗಳು ಮತ್ತು ದೊಡ್ಡ ದೊಡ್ಡ ಹಾಲ್‌ಗಳಲ್ಲಿ ಚಿತ್ರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಅಲ್ಲಿರುವ ವರ್ಣಚಿತ್ರಗಳನ್ನು ನೋಡಿದಾಗ ನನಗೆ ಮಂಗಳೂರಿನ ಪ್ರಸಿದ್ಧ ವರ್ಣಚಿತ್ರಕಾರ ಶ್ರೀ ರಾಮದಾಸ್ ಶೇವಗೂರು(ಶೇವಗೂರು ಆರ್ಟ್ಸ್) ನೆನಪಾದರು. ನಾನು ಇಲ್ಲಿಯ ವರ್ಣಚಿತ್ರಗಳ ಕುರಿತು ಪ್ರಕಟಿಸಲಾಗಿದ್ದ ಒಂದು ಪುಸ್ತಕವನ್ನು ಖರೀದಿಸಿ ಮಂಗಳೂರಿಗೆ ತಂದು ಅವರಿಗೆ ನೀಡಿದಾಗ ಅವರಿಗೆ ತುಂಬಾ ಸಂತೋಷವಾಯಿತು. ಈಗ ತಮಗೆ ವಯಸ್ಸಾಗಿದೆಯೆಂದು ಅವರು ಅದನ್ನು ವಿಶ್ವಕೊಂಕಣಿ ಕೇಂದ್ರದ ಗ್ರಂಥಾಲಯಕ್ಕೆ ಮರಳಿ ನೀಡಿದ್ದಾರೆ.

ಅಮೇರಿಕೆಯಲ್ಲಿ ಎಲ್ಲ ವಿಷಯಗಳಿಗೆ ಒಂದು ವಿಶೇಷಣ ನೀಡಿಯೇ ಉಲ್ಲೇಖಿಸುವ ಪದ್ಧತಿ ಇದೆ. ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದು, ಅತ್ಯಂತ ಅಪರೂಪದ್ದು, ಅತ್ಯಂತ ಉದ್ದವಾದದ್ದು, ಅತ್ಯಂತ ಸುಂದರವಾದುದು, ಅತ್ಯಂತ ವೇಗಕಾರಿ ಇತ್ಯಾದಿ ಇತ್ಯಾದಿ. ಅಲ್ಲಿ ಯಾವುದೇ ಒಂದು ವಿಭಾಗ ಅಥವಾ ವಿಷಯವನ್ನು ನೋಡಿ ಬರಲು ಕನಿಷ್ಠ ೪-೫ ತಾಸು ಹಿಡಿಯುತ್ತದೆ. ಅಷ್ಟು ವಸ್ತುಸಂಗ್ರಹ ಮಾಡಿ ಇಡುತ್ತಾರೆ.

ನಮಗೆ ರಾತ್ರಿ ಶಿಕಾಗೋದ ಜನಪ್ರಿಯ ವ್ಯಕ್ತಿ ಡಾ. ರಘು ನಾಯಕರಲ್ಲಿ ಊಟಕ್ಕೆ ಆಮಂತ್ರಣವಿತ್ತು. ಆ ಸಮಯದಲ್ಲಿ ಅಮೇರಿಕೆಯಲ್ಲಿ ಅಧ್ಯಕ್ಷ ಚುನಾವಣೆಯ ತಯಾರಿ ಸಂದರ್ಭ ಹತ್ತಿರವಿತ್ತು. ಹೀಗಾಗಿ ಚುನಾವಣೆಯ ಪ್ರಚಾರಕ್ಕಾಗಿ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿಗೆ ಮತ ಕೋರಲು ಸೆನೆಟರ್ ಮಿ. ಬರ‍್ರಾಕ್ ಒಬಾಮಾ ಅವರು ಡಾ. ರಘು ನಾಯಕರ ಮನೆಗೆ ಬಂದಿದ್ದರು. (ಅನಂತರ ೨೦೦೮ರಲ್ಲಿ ನಡೆದ ಚುನಾವಣೆಯಲ್ಲಿ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿ ಒಬಾಮಾ ಅಧ್ಯಕ್ಷರಾಗಿ ಆಯ್ಕೆಗೊಂಡರು.) ಡಾ. ನಾಯಕರು ನಮ್ಮೊಂದಿಗೆ ಶಿಕಾಗೋದ ಭಾರತೀಯ ನಿವಾಸಿಗಳಿಗೂ ಅವರ ಮನೆಯಲ್ಲಿ ಊಟಕ್ಕೆ ಆಮಂತ್ರಣ ನೀಡಿದ್ದರು. (ಡಾ, ರಘು ನಾಯಕ್ ಅಮೇರಿಕೆಯ ಡೆಮಾಕ್ರಾಟಿಕ್ ಪಕ್ಷದ ಓರ್ವ ವರಿಷ್ಠ ನಾಯಕರಾಗಿದ್ದವರು.)

ಡಾ, ರಘು ನಾಯಕರ ಮನೆಯ ಮುಂದಿನ ವಿಶಾಲ ಅಂಗಣದಲ್ಲಿ ಅನೇಕ ಮಂದಿ ಅಮೇರಿಕ ನಿವಾಸಿ ಭಾರತೀಯರು ನೆರೆದಿದ್ದರು. ಮಿ. ಒಬಾಮಾ ಅವರ ಹತ್ತಿರ ಹೋಗಿ ಹಸ್ತ ಲಾಘವ ನೀಡಿ ಪರಸ್ಪರ ಪರಿಚಯಿಸಿಕೊಂಡರು. ಅನಂತರ ಅವರ ಚುನಾವಣಾ ಭಾಷಣ ನಡೆಯಿತು. ಅವರು ಪಕ್ಷದ ಪ್ರಚಾರಕ್ಕಾಗಿ ಮತ ಮತ್ತು ಹಣವನ್ನು ಕೇಳಿದರು. ಆಮೇಲೆ ಅಲ್ಲಿ ನೆರೆದವರಿಗೆ ಡಾ. ನಾಯಕರ ಮನೆಯಲ್ಲಿ ಊಟ ಇತ್ತು.

ಊಟ ಮುಗಿದ ಬಳಿಕ ಅತಿಥಿಗಳು ನಿರ್ಗಮಿಸಿದರು. ನಾವು ರಘು ನಾಯಕ್ ಮತ್ತು ಅವರ ಮನೆಯವರೊಂದಿಗೆ ಮಾತನಾಡುತ್ತಾ ಕುಳಿತೆವು. ವಿಶ್ವ ಕೊಂಕಣಿ ಕೇಂದ್ರದ ವಿಚಾರ ತಿಳಿಸಿದೆವು. ಡಾ. ರಘು ನಾಯಕರು ಹತ್ತು ಲಕ್ಷ ರೂ ದೇಣಿಗೆ ನೀಡುವುದಾಗಿ ತಿಳಿಸಿದರು. ಮರುದಿನ ಮತ್ತೆ ನಮಗೆ ಇಂಡಿಯನ್ ರೆಸ್ಟೋರೆಂಟಿನಲ್ಲಿ ಮಧ್ಯಾಹ್ನದ ಊಟಕ್ಕೆ ಬರುವಂತೆ ತಿಳಿಸಿದ್ದರು. ಅಲ್ಲಿಗೆ ಬಂದವರಲ್ಲಿಯೂ ವಿಶ್ವ ಕೊಂಕಣಿ ಕೇಂದ್ರದ ಯೋಜನೆ ತಿಳಿಸಿ ಅದಕ್ಕೆ ಸಹಾಯ ನೀಡುವಂತೆ ವಿನಂತಿಸಿಕೊಂಡರು.

ಕೆನಡಾ ಪ್ರವಾಸ

ನಾನು ಜುಲೈ ೧೫ರಂದು ಕೆನಡಾಗೆ ಹೊರಟು ನಿಂತೆ. ನನ್ನ ವೀಸಾ ನನಗೆ ಭಾರತದಲ್ಲಿಯೇ ದೊರೆತಿತ್ತು. ಉಳಿದವರು ಅವರ ವೀಸಾ ಪಡೆಯಲು ಬಫೆಲೋಗೆ ಹೋಗಿ, ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಶ್ರೀ ವಿಲಿಯಂ ಡಿಸೋಜಾರ ನೆರವು ಪಡೆದು ಮರುದಿನ ಕೆನಡಾಕ್ಕೆ ಬಂದು ತಲುಪಿದರು. ಅಲ್ಲಿ ನನ್ನನ್ನು ಸ್ವಾಗತಿಸಲು ಶ್ರೀ ರಘುನಾಥ್ ನಾಯಕ್ ಮತ್ತು ಕಲ್ಲೇಶ ಬಾಳಿಗರು ಬಂದಿದ್ದರು. ರಘುನಾಥ ನಾಯಕರು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಊಟ ಮುಗಿಸಿ, ವಿಶ್ರಾಂತಿ ಪಡೆದ ಬಳಿಕ ನಾಯಕರು

ನನ್ನನ್ನು ತಿರುಗಾಡಲು ಕರೆದುಕೊಂಡು ಹೋದರು. ಕೆನಡಾದ ಅತ್ಯಂತ ಎತ್ತರದ ಎಸ್.ಎನ್. ಟವರ್ಸ್, ಕನವರ್ಟಿಬಲ್ ಸ್ಟೇಡಿಯಂ, ಮತ್ತು ಪ್ರಸಿದ್ಧ ಗಿಫ್ಟ್ ಸ್ಟೋರ್ ತೋರಿಸಿದರು. ಅಲ್ಲಿ ನಾನು ನನ್ನ ಮೊಮ್ಮಗಳು ತುಳಸಿಗಾಗಿ ಕೆಲವು ಗೊಂಬೆಗಳನ್ನು ಖರಿದಿಸಿದೆ.

ಮರುದಿನ, ಟೊರೊಂಟೊವಿನ ಶ್ರೀ ನಾರಾಯಣ ದಾಸ್ ಕಾಮತರು(ಸತೀಶ್) ಬಂದು ನನಗೆ ಟೊರೆಂಟೊ ನಗರದ ವೀಕ್ಷಣೆಗೆ ಕರೆಧುಕೊಂಡು ಹೋದರು. ಮೊದಲು ನಾವು ಅವರು ಆರಾಧಿಸುವ ಶ್ರೀ ದೇವಿಯ ದೇವಾಲಯಕ್ಕೆ ಭೇಟಿ ನೀಡಿದೆವು. ಅದು ಕೆನಡಾದ ಪ್ರಸಿದ್ಧ ಹಿಂದೂ ದೇವಾಲಯ. ಶ್ರೀ ಕಾಮತರು ಈ ದೇವಾಲಯಕ್ಕೆ ದೊಡ್ಡ ಪ್ರಮಾಣದಲ್ಲಿ ದೇಣಿಗೆ, ಕಾಣಿಕೆ ನೀಡುತ್ತಾ ಬಂದಿದ್ದರು. ಅಲ್ಲಿ ದೇವಿಯ ದರ್ಶನ ಮಾಡಿದ್ದರಿಂದ ನಮಗೆ ಆಗಲಿದ್ದ ದೊಡ್ಡ ಅವಘಡವೊಂದರಿಂದ ನಾವು ತಪ್ಪಿಸಿಕೊಂಡು ಬದುಕಿ ಬಂದೆವು.

ಅದು ಏನಾಯಿತೆಂದರೆ, ನಾವು ದೇವಿಯ ದೇವಾಲಯದಿಂದ ಕಲ್ಪನ್ ಗಾರ್ಡನ್ಸ್ ಎಂಬ ಪ್ರದೇಶವನ್ನು ನೋಡಲು ಹೋಗುತ್ತಿದ್ದಾಗ ದಾರಿಯಲ್ಲಿ ನಾರಾಯಣ ದಾಸ್‌ರ ಕಾರಿಗೆ ಹಿಂದಿನಿಂದ ಬೇರೆಯೊಂದು ಕಾರು ಬಂದು ಗುದ್ದಿ, ನಾವು ಕುಳಿತಿದ್ದ ಕಾರು ಆರಡಿ ಮೇಲೆ ಹಾರಿ ಕೆಳಗೆ ಬಿತ್ತು. ಆದರೆ ನಾರಾಯಣ ದಾಸ್ ಅವರದ್ದು ಲಕ್ಸಸ್ ಕಾರ್ ಆಗಿದ್ದರಿಂದ, ಮುಂದೆ ಕುಳಿತಿದ್ದ ನಮಗೆ ಏನೂ ಆಗಲಿಲ್ಲ. ಆ ಅಪಘಾತವು ಅಷ್ಟು ದೊಡ್ಡ ಪ್ರಮಾಣದಲ್ಲಿ ಸಂಭವಿಸಿದರೂ, ನಮಗೆ ಯಾವುದೇ ಗಾಯ ಆಗದೇ ಇದ್ದುದು ಆಶ್ಚರ್ಯದ ಸಂಗತಿ. ನಾನು ನಿಶ್ಚಿಂತೆಯಿಂದ ಕುಳಿತಿರುವುದನ್ನು ನೋಡಿ ನಾರಾಯಣ ದಾಸ್ ಅವರಿಗೆ ಆಶ್ಚರ್ಯವೆನಿಸಿತು. ನಮ್ಮ ಮೇಲೆ ದೇವರ ದಯೆ ಇದೆ, ಹೀಗಾಗಿ ನಮಗೆ ಏನೂ ಆಗಲಿಲ್ಲವೆಂದು ನಾನು ಅವರಲ್ಲಿ ಹೇಳಿದೆ.

ಅಮೇರಿಕಾ, ಕೆನಡಾ ಮತ್ತು ಇತರ ದೇಶಗಳಲ್ಲಿ ಅಪಘಾತ ಎಲ್ಲಿಯೇ ಸಂಭವಿಸಲಿ ಅದನ್ನು ಹತ್ತಿರದ ಪೊಲೀಸ್ ಸ್ಟೇಷನ್‌ಗೆ ತಿಳಿಸಬೇಕು. ಹೀಗಾಗಿ ನಾವು ಹತ್ತಿರದ ಅಂಗಡಿಗೆ ಹೋಗಿ ಪೊಲೀಸ್ ಸ್ಟೇಷನ್‌ಗೆ ಕರೆ ಮಾಡಿದೆವು. ನಾಲ್ಕೈದು ನಿಮಿಷಗಳಲ್ಲಿ ಪೊಲೀಸರು ಬಂದರು. ವೈದ್ಯರು ಬಂದರು. ವಿಮಾ ಕಂಪನಿಯ ಅಧಿಕಾರಿಯೂ ಬಂದರು. ನಮಗೆ ಯಾವ ತೊಂದರೆಯೂ ಆಗದಿರುವುದನ್ನು ನೋಡಿ ಅವರು ನಮ್ಮ ಕಾರಿಗೆ ಗುದ್ದಿದ ಆ ಇನ್ನೊಂದು ಕಾರಿನವರಿಗೆ ಹೆಚ್ಚು ತೊಂದರೆ ನೀಡಲಿಲ್ಲ. ವಿಮಾ ಕಂಪನಿಯವರು ನಾರಾಯಣದಾಸರ ಕಾರನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಸದ್ಯಕ್ಕೆ ನಾವು ಮನೆಗೆ ಹೋಗಲು ಬೇರೊಂದು ಕಾರಿನ ವ್ಯವಸ್ಥೆ ಮಾಡಿದರು. ಅವರು ನೀಡಿದ ಕಾರಿನಲ್ಲಿ ನಾವು ಕಲ್ಪನ್ ಗಾರ್ಡನ್ಸ್‌ಗೆ ಹೋದೆವು.

ಕಲ್ಪನ್ ಗಾರ್ಡನ್ಸ್ ಒಂದು ಹಳ್ಳಿ. ಸುಮಾರು ೧೦೦-೧೫೦ ವರ್ಷಗಳ ಹಿಂದೆ ಟೊರೊಂಟೊ ನಗರ ಹೇಗಿತ್ತು ಅದೇ ರೀತಿ ಕಾಣುವ ವ್ಯವಸ್ಥೆಯನ್ನು ಕಲ್ಪನ್ ಗಾರ್ಡನ್ಸ್‌ನಲ್ಲಿ ಇಡಲಾಗಿದೆ. ಆ ಕಾಲದ ರೈಲು, ರೈಲುಹಳಿಗಳು, ವಿದ್ಯುತ್ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಮನೆ ನಿರ್ಮಾಣ ಹೇಗಿತ್ತು ಎನ್ನುವುದು ಅಲ್ಲಿ ಕಾಣಲು ಸಿಗುವುದು ವಿಶೇಷ. ಅಲ್ಲಿ ನಿಸರ್ಗ ಸದೃಶ್ಯ ಸುಂದರ ವಾತಾವರಣ ಇದೆ. ಪ್ರತಿದಿನ ಸಾವಿರಾರು ಪ್ರವಾಸಿಗರು ಕಾರು, ಬಸ್ ಮಾಡಿ ಅಲ್ಲಿಗೆ ಬರುತ್ತಾರೆ.

ಕಲ್ಪನ್ ಗಾರ್ಡನ್ಸ್‌ನಿಂದ ನಾವು ನಾರಾಯಣದಾಸರ ಮನೆಗೆ ಹೋದೆವು. ನಮ್ಮ ಅಪಘಾತದ ಸುದ್ದಿ ತಿಳಿದು ಅವರ ಪತ್ನಿಗೆ ತುಂಬಾ ದುಃಖವಾಯಿತು. ನಾನೇ ಸ್ವತಃ ಅವರಿಗೆ ನಮ್ಮ ಮೇಲೆ ದೇವರ ದಯೆ ಇದೆ, ಅದಕ್ಕೆ ಯಾವುದೇ ಸಂದೇಹ ಬೇಡವೆಂದು ಸಮಾಧಾನಪಡಿಸಿದೆ. ಊಟ ಮುಗಿದ ಬಳಿಕ ನಾವು ವಿಶ್ರಮಿಸಿದೆವು. ಸಂಜೆ ಶ್ರೀ ಬಾಲಾಜಿ, ಮುರುಘಾ ಗಣಪತಿ ದೇವಾಲಯಗಳನ್ನು ನೋಡಿದೆವು. ಆಮೇಲೆ ನಾರಾಯಣದಾಸ್ ನನ್ನನ್ನು ತಮ್ಮ ಮಾವನ ಮನೆಗೆ ಕರೆದುಕೊಂಡು ಹೋದರು.

ನಾರಾಯಣದಾಸ್‌ರಿಂದ ನಮಗೆ ಒಂದು ಸಾವಿರ ಡಾಲರ್(ಕೆನಡಾ ಡಾಲರ್) ದೇಣಿಗೆ ದೊರೆಯಿತು. ರಾತ್ರಿ ನಾವು ಮತ್ತೆ ಶ್ರೀ ರಘುನಾಥ ನಾಯಕರಲ್ಲಿಗೆ ಹೋದೆವು. ಅಷ್ಟರಲ್ಲಿ ಕುಡ್ವ ಜಗದೀಶ ಶೆಣೈ ಮತ್ತು ರಘುನಾಥ ಶೇಟರು ಕೂಡ ತಮ್ಮ ಸಂಸಾರದೊಂದಿಗೆ ಅಲ್ಲಿಗೆ ಬಂದು ತಲುಪಿದ್ದರು. ಅಲ್ಲಿ ಸಂಜೆ ಸಭಾ ಕಾರ್ಯಕ್ರಮ ನಡೆಯುವುದಿತ್ತು. ಹೀಗಾಗಿ ಟೊರೊಂಟೊದ ಕೊಂಕಣಿ ಜನರು ಅಲ್ಲಿಗೆ ಬಂದರು. ನಾನು ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ವಿಚಾರವಾಗಿ ಪ್ರಸ್ತಾಪಿಸಿ, ಪವರ್ ಪಾಯಿಂಟ್ ಪ್ರೆಸೆಂಟೇಶನ್ ನೀಡಿದೆ. ಅಲ್ಲಿ ಬಂದವರಿಗೆ ಅದು ತುಂಬಾ ಹಿಡಿಸಿತು. ಅವರು ತಮ್ಮ ದೇಣಿಗೆಯನ್ನು ಕಳುಹಿಸಿಕೊಡುವುದಾಗಿ ತಿಳಿಸಿದರು. ಶ್ರೀ ರಘುನಾಥ ಹಾಗೂ ಶ್ರೀಮತಿ ವೀಣಾ ನಾಯಕರು ಉತ್ತಮ ವ್ಯವಸ್ಥೆ ಮಾಡಿದ್ದರು.

ನಯಾಗರಾ ದರ್ಶನ

ನಾವು ಮರುದಿನ ಅಂದರೆ ಜುಲೈ ೧೭ರಂದು ನಮ್ಮವರೇ ಆದ ವಿಲಿಯಂ ಡಿಸೋಜಾ ಅವರ ಮನೆಗೆ ಹೋಗಿ ಉಪಹಾರ ಮುಗಿಸಿದೆವು. ಆಮೇಲೆ ವಿಲಿಯಮ್ ಡಿಸೋಜಾ, ಅವರ ಪತ್ನಿ ಮತ್ತು ನಾದಿನಿ ಹಾಗೂ ರಘುನಾಥ ನಾಯಕ ಅವರೊಂದಿಗೆ ಎರಡು ಕಾರಿನಲ್ಲಿ ನಯಾಗರಾ ಜಲಪಾತ ವೀಕ್ಷಿಸಲು ಹೋದೆವು. ಈ ಜಲಪಾತವನ್ನು ವೀಕ್ಷಿಸಲು ದೇಶ ವಿದೇಶಗಳಿಂದ ಸಾವಿರಾರು ಪ್ರವಾಸಿಗರು ಬರುತ್ತಾರೆ. ನಾವು ಕೆನಡಾ ಕಡೆಯಿಂದ ನಯಾಗರಾ ಜಲಪಾತದ ನೀರು ಧರೆಗೆ ಉರುಳುವುದನ್ನು ನೋಡಿದೆವು. ಇನ್ನೊಂದೆಡೆ ಅಮೇರಿಕೆಯ ಕಡೆಯಿಂದಲೂ ಇದೇ ದೃಶ್ಯ ಕಾಣುವುದೆಂದು ಹೇಳುತ್ತಾರೆ.

ಇಲ್ಲಿ ನಮಗೆ ದೇವರ ಸೃಷ್ಟಿಯ ವೈಚಿತ್ರ್ಯ ಕಾಣಲು ಸಿಗುತ್ತದೆ. ಅಪಾರ ಪ್ರಮಾಣದ ನೀರು ಅತ್ಯಂತ ವೇಗವಾಗಿ ಭೂಮಿಯ ಮೇಲೆ ಧುಮುಕುತ್ತದೆ. ಆದನ್ನು ನೋಡುತ್ತಿದ್ದಾಗ ದೇವನದಿ ಗಂಗೆಯು ಶಿವನ ಜಟೆಯಿಂದ ಕೆಳಗೆ ಇಳಿಯುವಾಗ ಭಗೀರಥನು ತನ್ನ ಶಿರವನ್ನು ನೀಡಿ ಗಂಗೆಯ ನೀರು ನಿಧಾನವಾಗಿ ಇಳಿಯುವಂತೆ ಮಾಡಿದ್ದು ಓದಿದ ನೆನಪಿಗೆ ಬಂತು. ಇಲ್ಲಿಯ ನೀರಿನ ಧಾರೆ ಅಷ್ಟೇ ವೇಗವಾಗಿ ಇಳಿಯುತ್ತಿತ್ತು. ಆ ನೀರಿನ ಸದ್ದು ಎಷ್ಟೋ ಮೈಲಿ ದೂರದವರೆಗೆ ಕೇಳಿ ಬರುತ್ತದೆ. ಜಲಪಾತದ ನೀರಿನ ಹನಿಗಳು ಬೀಸುವ ಗಾಳಿಯಲ್ಲಿ ಸಿಂಪಡಿಸಿಕೊಳ್ಳುತ್ತಾ, ಸುಂದರವಾದ ಕಾಮನಬಿಲ್ಲು ಮೂಡಿ ಬರುವುದು. ಈ ದೃಶ್ಯವನ್ನು ನೋಡುವುದೇ ಒಂದು ಅಲೌಕಿಕ ಅನುಭವ. ಜಲಪಾತದ ನೀರು ಭೂಮಿಯ ಮೇಲೆ ಸುರಿದು ಅಲ್ಲಿ ಪ್ರವಾಹ ರೂಪದಿಂದ ಹರಿಯುತ್ತದೆ. ಅದನ್ನು ಸಮೀಪಿಸುವುದಕ್ಕೂ ಲಾಂಚ್ ವ್ಯವಸ್ಥೆ ಇದೆ. ನಾವು ಲಾಂಚ್‌ನಲ್ಲಿ ಕುಳಿತು ಜಲಪಾತದ ಹತ್ತಿರದವರೆಗೆ ಹೋಗಬಹುದು. ನಮಗೆ ಧರಿಸಿಕೊಳ್ಳಲು ಪ್ಲಾಸ್ಟಿಕ್ ಕೋಟು ಬಾಡಿಗೆಗೆ ನೀಡುತ್ತಾರೆ. ಆದರೂ ಲಾಂಚ್‌ಲ್ಲಿ ಕುಳಿತು ನದಿಯಲ್ಲಿ ತಿರುಗಾಡಿ ಬರುವಾಗ ಮೈಯೆಲ್ಲಾ ಒದ್ದೆ. ಹೊರಗೆ ಬರುವಾಗ ಬಟ್ಟೆ ಬದಲಾಯಿಸುವುದು ಅನಿವಾರ್ಯ.

ನಯಾಗರಾ ನಗರದಲ್ಲಿ ಬಹಳ ಸುಂದರವಾದ ಹೂಗಿಡಗಳ ತೋಟ ಇದೆ. ಸಸ್ಯರಾಶಿಗಳಂತೂ ಅತೀ ಮನೋಹರ. ಇದಲ್ಲದೆ ನಾವು ಹೋದಾಗ ಸಂಜೆ ಹೊತ್ತು. ಮಳೆ ಸುರಿಯುತ್ತಿತ್ತು. ವಿಪರೀತ ಚಳಿ ಬೇರೆ. ಅಲ್ಲಿ ಅನೇಕ ಹೊಟೇಲುಗಳು, ರೆಸ್ಟೋರೆಂಟ್‌ಗಳು, ದೊಡ್ಡ ದೊಡ್ಡ ಅಂಗಡಿಗಳು ಇವೆ. ಎಲ್ಲಾ ತರದ ವಸ್ತುಗಳು ದೊರೆಯುತ್ತವೆ. ರಾತ್ರಿ ನಯಾಗರಾ ಜಲಪಾತದ ಮೇಲೆ ವಿದ್ಯುತ್ ಬೆಳಕು ಬೀಳುವುದನ್ನು ನೋಡಿದಾಗ ರೋಮಾಂಚನವಾಗುತ್ತದೆ. ವರ್ಣರಂಜಿತ ನೀರು ಮನಸ್ಸಿಗೆ ಮುದ ನೀಡುತ್ತದೆ. ಅದನ್ನು ಕಾಣುವ ಭಾಗ್ಯ ನಮಗೆ ದೊರೆಯಿತು. ವಿಲಿಯಂ ಮತ್ತು ಅವರ ಪತ್ನಿ ನಮಗೆ ಉತ್ತಮ ಆತಿಥ್ಯವನ್ನು ನೀಡಿದರು.

ಮರುದಿನ, ಜುಲೈ ೧೮ರಂದು ಬೆಳಗ್ಗೆ ನಾರಾಯಣದಾಸ್ ನಮ್ಮನ್ನು ರಘುರಾಮ ನಾಯಕರಲ್ಲಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ಬೆಳಗಿನ ಉಪಹಾರ ನೀಡಿದರು. ಅಲ್ಲಿ ಹೊಟ್ಟೆತುಂಬಾ ತಿಂದು, ಮನಸ್ಸಿಗೆ ತೃಪ್ತಿಯಾಗುವಷ್ಟು ಮಾತುಕತೆ ನಡೆಸಿ ನಾವು ವಿಮಾನ ನಿಲ್ದಾಣಕ್ಕೆ ಹೋದೆವು. ವಿಲಿಯಮ್ ಅಲ್ಲಿಗೆ ಬಂದು ನಮಗೆ ಸಹಾಯ ಮಾಡಿದರು.

ಮತ್ತೆ ಉತ್ತರ ಅಮೇರಿಕೆಗೆ

ನಾವು ವಿಮಾನದಲ್ಲಿ ಪ್ರಯಾಣಿಸಿ ಅಮೆರಿಕೆಯ ಡಲ್ಲಾಸ್ ತಲುಪಿದೆವು. ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಜನಜಂಗುಳಿ ತುಂಬಾ ಇದ್ದುದರಿಂದ ನಮ್ಮ ಲಗ್ಗೇಜ್ ಬಂದು ತಲುಪಲು ಸುಮಾರು ಒಂದೂವರೆ ಘಂಟೆ ಹಿಡಿಯಿತು. ನಮ್ಮನ್ನು ಸ್ವಾಗತಿಸಲು ಅಲ್ಲಿಯ ನಮ್ಮ ಸ್ನೇಹಿತರಾದ ಶ್ರೀ ರಘುರಾಮ ಪ್ರಭು ತಮ್ಮ ವಾಹನದೊಂದಿಗೆ ಬಂದಿದ್ದರು. ನಾವು ೧೯೯೭ರಲ್ಲಿ ಅಮೇರಿಕೆಗೆ ಭೇಟಿ ನೀಡಿದಾಗಲೂ ಅವರೇ ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು. ಅದೇ ಪ್ರೀತಿ, ವಿಶ್ವಾಸದಿಂದ ಈ ಬಾರಿಯೂ ಅವರು ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಈ ಬಾರಿ ಅವರು ಮತ್ತು ಅವರ ಪತ್ನಿ ರಾಖಿಯವರು ತಮ್ಮ ವಾಸ್ತವ್ಯಕ್ಕಾಗಿ ಖರೀದಿಸಿದ ಮನೆ ದೊಡ್ಡದಿತ್ತು. ಆ ರಾತ್ರಿ ನಾವು ಮಾತುಕತೆಯಾಡುತ್ತಾ, ಊಟ ಮುಗಿಸಿ ಮಲಗಿಕೊಂಡೆವು.

ಮರುದಿನ ರಘುರಾಮ ಪ್ರಭು ಬಂದು ನಮ್ಮನ್ನು ವಾಷಿಂಗಟನ್ ಡಿಸಿ ತೋರಿಸಲು ಕರೆದುಕೊಂಡು ಹೋದರು. ನಾನು ಮೊದಲ ಬಾರಿ ಬಂದಾಗಲೇ ವಾಷಿಂಗಟನ್ ಡಿ.ಸಿ. ನೋಡಿದ್ದೆ. ಆದರೂ ಈ ಬಾರಿ ೯/೧೧ರ ಆತಂತಕಾರಿಗಳ ಕೃತ್ಯದ ಭೀತಿ ಇದ್ದುದರಿಂದ ಅನೇಕ ಕಡೆಗಳಲ್ಲಿ ಸುರಕ್ಷಾ ಕ್ರಮವಿದ್ದ ಕಾರಣ ಸಲೀಸಾಗಿ ಹೋಗಿ ಬರುವುದು ಸಾಧ್ಯವಾಗಲಿಲ್ಲ.

ಸ್ಮಿತ್-ಸೋನಿಯನ್ ಸಂಕೀರ್ಣ ವಲಯಕ್ಕೆ ಭೇಟಿ ನೀಡಿದೆವು. ಅಲ್ಲಿರುವ ಸ್ಮಿತ್‌ಸೋನಿಯನ್ ಜ್ಯೂವಲಾಜಿಕಲ್

ಮ್ಯೂಸಿಯಂನಲ್ಲಿ ಮಿಲಿಯ ವರ್ಷಗಳಿಂದ ಭೂಗರ್ಭದಲ್ಲಿ ವಜ್ರ ಹಾಗೂ ಇತರ ಶಿಲೆಗಳು ಸ್ಥಿತ್ಯಂತರ, ರೂಪಾಂತರ ಹೊಂದಿದ ವಿಧಾನವನ್ನು ಪರಿಚಯಿಸಿಕೊಡುತ್ತಾರೆ. ಅದನ್ನು ನೋಡಿ ಆಮೇಲೆ ಮಾನವ ವಿಕಾಸದ ಮಾಹಿತಿ ನೀಡುವ ಮತ್ತೊಂದು ಮ್ಯೂಸಿಯಂ ನೋಡಿದೆವು.

ಅಲ್ಲಿಂದ ಅಮೇರಿಕೆಯ ಅಧ್ಯಕ್ಷರ ಅಧಿಕೃತ ನಿವಾಸ ವೈಟ್ ಹೌಸ್ ನೋಡಲು ಹೋದೆವು. ಈಗ ಅದನ್ನು ಹಿಂದಿನ ಹಾಗೆ ಹತ್ತಿರದಿಂದ ವೀಕ್ಷಿಸಲು ಬಿಡುವುದಿಲ್ಲ. ದೂರವೇ ನಿಂತುಕೊಂಡು ನೋಡಬೇಕು. ೯/೧೧ರ ಆತಂತಕಾರಿಗಳ ಕುಕೃತ್ಯದ ಕಾರಣವಾಗಿ ಸುರಕ್ಷತಾ ದೃಷ್ಟಿಯಿಂದ ಈ ವಿಧದ ನಿರ್ಬಂಧ ಹಾಕುವಂತಾಗಿದೆ. ಮಾನ್ಯುಮೆಂಟ್ ಕಟ್ಟಡದ ವೀಕ್ಷಣೆಗೆ ಹೋದರೆ, ಅಲ್ಲಿಯೂ ಇದೇ ರೀತಿ ಒಳಗೆ ಹೋಗಿ ನೋಡಲು ಬಿಡಲಿಲ್ಲ. ಅಷ್ಟರಲ್ಲಿ ಸಂಜೆಯಾಗಿ ನಾವು ಶ್ರೀ ರಘುರಾಮ ಪ್ರಭುವಿಗೆ ಕರೆ ಮಾಡಿದೆವು. ಅವರು ೭.೩೦ಕ್ಕೆ ವಾಹನ ತೆಗೆದುಕೊಂಡು ಬಂದರು. ಅವರು ತಂದಿದ್ದ ತಿಂಡಿ ತಿಂದು ಮೆಕಡೊನಾಲ್ಡ್ ಹೋಗಿ ಕಾಫಿ ಕುಡಿದೆವು. ಆಮೇಲೆ ಅವರ ಮನೆಗೆ ಹೋದೆವು.

ಜುಲೈ ೨೧ ರಂದು ಸಂಜೆ ನಾವು ಅಕ್ವೇರಿಯಮ್ ಮ್ಯೂಸಿಯಂ ನೋಡಲು ಹೋಗಿದ್ದಾಗ ಅಲ್ಲಿ ಡಾಲ್ಫಿನ್ ಶೋ ಇತ್ತು. ನೀರಿನ ಕೊಳದಲ್ಲಿ ಡಾಲ್ಫಿನ್‌ಗಳ ಅಟ, ಕಸರತ್ತುಗಳನ್ನು ನೋಡಿದರೆ ಮನಸ್ಸಿಗೆ ಖುಷಿ ಅನಿಸುತ್ತದೆ. ಡಾಲ್ಫಿನ್‌ಗಳು ಮಾತನಾಡಲಾರವು, ಆದರೆ ಅವುಗಳಿಗೆ ಮನುಷ್ಯನಷ್ಟೇ ಬುದ್ದಿ ಇದೆ. ಅವುಗಳು ಫುಟ್‌ಬಾಲ್ ಆಟ ಆಡುವುದು ವಿಸ್ಮಯಕಾರಿ ಸಂಗತಿ. ಇದಲ್ಲದೆ ಅಲ್ಲಿ ಜಲಚರ ಪ್ರಾಣಿಗಳು ಮತ್ತು ಮೀನುಗಳ ಜೀವನ ವಿಧಾನವನ್ನು ನೋಡಿದೆವು. ಚಿತ್ರವಿಚಿತ್ರ ಜೀವಜಂತುಗಳು ನೀರಿನಲ್ಲಿ ಈಜುವುದು, ಆಟವಾಡುವುದು, ಜಗಳವಾಡುವುದು ಇತ್ಯಾದಿ ನೋಡುತ್ತಿದ್ದರೆ ಸಮಯ ಕಳೆದದ್ದು, ಹಸಿವಾದದ್ದು ಗಮನಕ್ಕೆ ಬರುವುದೇ ಇಲ್ಲ. ಅಂತಹ ಒಂದು ವ್ಯವಸ್ಥೆಯನ್ನು ಅಮೇರಿಕನ್ನರು ತಮ್ಮ ಕಾರ್ಯಕ್ಷಮತೆಯಿಂದ ರೂಪಿಸಿದ್ದಾರೆ.

ಜುಲೈ ೨೨ರಂದು ಬೆಳಗ್ಗೆ ೫.೩೦ ಕ್ಕೆ ರಘುರಾಮ ಪ್ರಭು ನಮ್ಮನ್ನು ವಾಷಿಂಗಟನ್ ಡಲ್ಲಾಸ್ ವಿಮಾನ ನಿಲ್ದಾಣಕ್ಕೆ ತಂದು ಬಿಟ್ಟರು. ನಾವು ಬಾಲ್ಟಿಮೋರ್‌ನಿಂದ ನ್ಯೂಯಾರ್ಕ್‌ಗೆ ಬಂದು ತಲುಪಿದೆವು. ಅಲ್ಲಿ ನಮ್ಮನ್ನು ಸ್ವಾಗತಿಸಲು ಶ್ರೀ ದಾಮೋದರ ಬಾಳಿಗ ಬಂದಿದ್ದರು. (ದಾಮೋದರ ಬಾಳಿಗರು ಮುಂಬೈ ಜೆಟ್ ಏರ್‌ವೇಸ್ ಉಪಾಧ್ಯಕ್ಷರಾದ ಶ್ರೀ ಬಿ.ಪಿ. ಬಾಳಿಗರ ತಮ್ಮ. ಅವರು ಮೂಲತಃ ಬಂಟವಾಳದವರು. ಆದರೆ ಅವರ ಹಿರಿಯರು ಕೇರಳದ ತಲ್ಲಿಚೇರಿಗೆ ಹೋಗಿ ಅಲ್ಲಿ ನೆಲೆ ನಿಂತಿದ್ದರು.) ನಾನು, ಕುಡ್ವಿ ಜಗದೀಶ ಶೆಣೈ ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀದೇವಿ ದಾಮೋದರ ಬಾಳಿಗರ ಕಾರಿನಲ್ಲಿ ಅವರ ಮನೆಗೆ ಹೋದೆವು. ಅಲ್ಲಿ ನಾವು ವಿಶ್ರಾಂತಿ ತೆಗೆದುಕೊಳ್ಳುವಾಗ ಬಾಳಿಗ ಮತ್ತು ಅವರ ಪತ್ನಿ ಶ್ರೀಮತಿ ಶೋಭಾ ಬಾಳಿಗ ತಮ್ಮ ತಮ್ಮ ಕಚೇರಿಗೆ ಹೋಗಿದ್ದರು.

ಶೋಭ ಬಾಳಿಗರು ಹೊರಡುವ ಮೊದಲೇ ನಮಗಾಗಿ ರುಚಿಕಟ್ಟಾದ ಅಡುಗೆ ಮಾಡಿ ಇಟ್ಟಿದ್ದರು. ಹೀಗಾಗಿ ನಾವು ನಿಧಾನವಾಗಿ ಸ್ನಾನ ಮಾಡಿ, ಅಡುಗೆ ಬಿಸಿ ಮಾಡಿ ಊಟ ಮಾಡಿದೆವು. ಆಮೇಲೆ ನಿದ್ದೆ ಹೋದೆವು. ಹೀಗೆ ಆ ದಿನ ಕಳೆಯಿತು.

ರಾತ್ರಿ ಬಾಳಿಗರು ಮನೆಗೆ ಬಂದ ಬಳಿಕ ನಾನು ಅವರಿಗೆ ನಮ್ಮ ವಿಶ್ವ ಕೊಂಕಣಿ ಕೇಂದ್ರದ ಯೋಜನೆ ಮತ್ತು ದರ್ಶನವನ್ನು ವಿವರವಾಗಿ ತಿಳಿಸಿದೆ. ದಾಮೋದರ ಬಾಳಿಗರಿಗೆ ಮಾತು ಕಡಿಮೆ. ಆದರೆ ಅವರು ಕ್ರಿಯಾಶೀಲರು. ಶ್ರೀ ವಸಂತ ಭಟ್ ಅವರೊಂದಿಗೆ ಸೇರಿ ನಾಕಾ(ನಾರ್ಥ್ ಅಮೇರಿಕನ್ ಕೊಂಕಣಿ ಅಸೋಸಿಯೇಶನ್) ಸ್ಥಾಪಿಸಿದ್ದಾರೆ. ನಮ್ಮ ಮಾತಿನಿಂದ ಸ್ಫೂರ್ತಿ ಹೊಂದಿದ ಅವರು ಜುಲೈ ೩೧ರಂದು ಅವರ ಮನೆಯಲ್ಲಿಯೇ ಸಭೆ ಆಯೋಜನೆ ಮಾಡುವುದಾಗಿ ತಿಳಿಸಿ, ತಮ್ಮ ಅನೇಕ ಗೆಳೆಯರಿಗೆ ಕರೆ ಮಾಡಿ ಆಮಂತ್ರಿಸಿದರು. ರಾತ್ರಿ ನನಗೆ ನನ್ನ ಚಿಕ್ಕಮ್ಮನ ಮಗ ದಿ. ಅನಂತ ಭಟ್ಟನ ಮಗ ಚಿ. ಸಂದೇಶನ ಕರೆ ಬಂತು.

ಅವನು ದೂರವಾಣಿಯಲ್ಲಿ ತಿಳಿಸಿದಂತೆ ಜುಲೈ ೨೩, ಶುಕ್ರವಾರ ಬಂದು ನಮ್ಮನ್ನು ಬಾಳಿಗರ ಮನೆಯಿಂದ ಕನೆಕ್ಟಿಕಟ್ ನಗರದಲ್ಲಿದ್ದ ತನ್ನ ಮನೆಗೆ ಕರೆದುಕೊಂಡು ಹೋದನು. ದಾರಿಯುದ್ದಕ್ಕೂ ಮಳೆ ಸುರಿಯುತ್ತಿದ್ದುದರಿಂದ ನಾವು ಮನೆ ತಲುಪಿದಾಗ ಸಂಜೆ ಗಂಟೆ ೬.೩೦. ಚಿ. ಸಂದೇಶನ ಪತ್ನಿ ಮತ್ತು ಮಕ್ಕಳು ನೇಹಾ, ನೀತಿ ನಮಗಾಗಿ ಕಾಯುತ್ತಿದ್ದರು. ನನ್ನ ತಮ್ಮ ಚಿ. ಗಣಪತಿಯ ಮಗಳು ಚಿ. ಅಪೂರ್ವ ರಜೆ ಇದ್ದುದರಿಂದ ಸಂದೇಶನ ಮನೆಯಲ್ಲಿದ್ದಳು.

ಮರುದಿನ, ಜುಲೈ ೨೪ರಂದು ನಾವು ಸಂದೇಶನೊಂದಿಗೆ ನ್ಯೂಯಾರ್ಕ್, ಮ್ಯಾನಹಟ್ನ್ ಮೆಡಿಸನ್ ಸ್ಕ್ವೇರ್, ಲಿಬರ್ಟಿ

ಪ್ರತಿಮೆ ನೋಡಿದೆವು. ರಾತ್ರಿ ಎಂಪಾಯರ್ ಸ್ಟೇಟ್ ಕಟ್ಟಡವನ್ನು ವೀಕ್ಷಿಸಿದೆವು. ಅದರ ಹತ್ತಿರವೇ ಆತಂಕವಾದಿಗಳು ನಾಶ ಪಡಿಸಿದ್ದ ವರ್ಲ್ಡ್ ಟ್ರೇಡ್ ಸೆಂಟರ್ ಇದ್ದ ಜಾಗವನ್ನು ನೋಡಿದೆವು. ಕಟ್ಟಡ ನೆಲಸಮವಾಗಿ ಆ ಪ್ರದೇಶ ಈಗ ಮೈದಾನದ ಹಾಗೆ ಆಗಿದೆ. ಎಂಪಾಯರ್ ಸ್ಟೇಟ್ ಕಟ್ಟಡದಲ್ಲಿ ೮೬ ಮಹಡಿಗಳು ಇವೆ. ಅದರ ತುತ್ತತುದಿಯ ಮಹಡಿಯಲ್ಲಿ ನಿಂತು ನೋಡಿದಾಗ, ಅದು ರಾತ್ರಿ ಹೊತ್ತು ಆಗಿದ್ದರಿಂದ ಇಡೀ ನಗರ ಬೆಳಕಿನಲ್ಲಿ ಹೊಳೆಯುತ್ತಿರುವುದು ಕಂಡಿತು. ಅಲ್ಲಿಯೇ ಕೆಳಭಾಗದಲ್ಲಿ ಜನರಲ್ ಇಲೆಕ್ಟ್ರಿಕಲ್ಸ್ ಮತ್ತು ಎಲ್ ಜಿ ಕಂಪೆನಿಗಳ ಪ್ರಧಾನ ಕಚೇರಿಗಳಿರುವ ಕಟ್ಟಡ ಮತ್ತು ಆ ಮಾಯಾನಗರಿಯ ಸುಂದರ ದೃಶ್ಯವೂ ಗೋಚರಿಸಿತು.

ಜುಲೈ ೨೫ರಂದು ನಾವು ಡಾ. ಕುಡ್ಗಿ ರಾಜಾರಾಮ ಶೆಣ್ಯೆಯವರಲ್ಲಿಗೆ ಹೋದೆವು. ಅಲ್ಲಿ ಕೆಲವು ಕೊಂಕಣಿ ಜನರು ಬಂದಿದ್ದರು. ಅವರಿಗೆ ಸಿಡಿ ಪವರ ಪಾಯಿಂಟ್ ಪ್ರೆಸೆಂಟೇಶನ್ ಕಾರ್ಯಕ್ರಮ ನೀಡಿದೆವು. ನಮ್ಮ ವಿಶ್ವ ಕೊಂಕಣಿ ಕೇಂದ್ರ ಯೋಜನೆಗೆ ಉತ್ತಮ ಪ್ರತಿಕ್ರಿಯೆ ಕಂಡು ಬಂತು. ಅಲ್ಲಿ ಸೇರಿದವರು ಅಮೇರಿಕೆಯ ಮಕ್ಕಳಿಗೆ ಬೇಸಿಗೆ ರಜಾ ಶಿಬಿರವನ್ನು ಮಂಗಳೂರಿನ ವಿಶ್ವ ಕೊಂಕಣಿ ಕೇಂದ್ರದಲ್ಲಿ ಆಯೋಜಿಸಿದರೆ ಉತ್ತಮ ಎಂದು ತಿಳಿಸಿದ್ದರಿಂದ ನಾವು ಅದಕ್ಕೆ ಸಮ್ಮತಿಸಿದೆವು. ನನಗೆ ಸಂದೇಶನಿಂದ ಲ್ಯಾಪ್ ಟಾಪ್ ಮತ್ತು ಪ್ರೊಜೆಕ್ಟರ್ ಉಡುಗೊರೆಯಾಗಿ ದೊರೆಯಿತು.

ಜುಲೈ ೨೬, ಸೋಮವಾರ ಸಂದೇಶ ತನ್ನ ಕುಟುಂಬದೊಂದಿಗೆ ನ್ಯೂಜರ್ಸಿಯಲ್ಲಿರುವ ಮುಂಬೈಯ ಮೆಕ್ಸನ್(ಎ.ಎಮ್. ಕಾಮತ್ ಮೆಕ್ಸನ್) ರ ಮಗಳು ಚಿ.ಸೌ. ಶಾರದ ಮತ್ತು ಕಿನ್ನಿಗೋಳಿ ಶ್ರೀ ರವಿ ಶೆಣೈ ಅವರಲ್ಲಿಗೆ ನನ್ನನ್ನು ಕರೆದುಕೊಂಡು ಹೋದನು. ೧೯೯೬ನೇ ಇಸವಿಯಲ್ಲಿಯೂ ನಾವು ಮೊದಲನೇ ಬಾರಿ ಭಾರತದಿಂದ ನ್ಯೂಜರ್ಸಿಗೆ ನೇರವಾಗಿ ಹೋಗಿ ತಲುಪಿದ್ದಾಗ, ನಮ್ಮನ್ನು ವಿಮಾನ ನಿಲ್ದಾಣದಿಂದ ತನ್ನ ಮನೆಗೆ ಕರೆದುಕೊಂಡು ಹೋಗಿದ್ದು ಶ್ರೀ ರವಿ ಶೆಣೈಯೇ.

ರವಿ ಶೆಣೈ ಮನೆಯಲ್ಲಿ ಚೆನ್ನಾಗಿ ವಿಶ್ರಾಂತಿ ಪಡೆದು, ಊಟ ಮುಗಿಸಿದ ಬಳಿಕ ಮಧ್ಯಾಹ್ನ ಮನೆಗೆ ಬಂದಿದ್ದ ರವಿ ಶೆಣೈ ನನ್ನನ್ನು ಅವರ ಕಾರಿನಲ್ಲಿ ಕರೆದುಕೊಂಡು ಹೋಗಿ ನ್ಯೂಯಾರ್ಕನಲ್ಲಿರುವ ಅಸ್ಟ್ರೋನಾಟಿಕಲ್ ಮ್ಯೂಸಿಯಂ ತೋರಿಸಿದರು. ಅಲ್ಲಿ ನಾವು ಹದಿಮೂರು ಬಿಲಿಯ ವರ್ಷಗಳ ಹಿಂದೆ ನಡೆದ 'ಬಿಗ್ ಬಾಂಗ್'ನಿಂದ ಗ್ರಹಮಂಡಲ ಉದ್ಭವಿಸಿ ಬಂದ ಚಿತ್ರ ಪ್ರದರ್ಶನವನ್ನು ನೋಡಿದೆವು. ಮೂರು ಬಿಲಿಯ ವರ್ಷಗಳ ಹಿಂದೆ ಸೂರ್ಯ, ಅನಂತರ ಭೂಮಿ, ಚಂದ್ರರು ಅದರಿಂದ ಹುಟ್ಟಿ ಬಂದಿರುವುದನ್ನು ನೋಡಿದೆವು.

ಅಲ್ಲಿಂದ ಮನೆಗೆ ಹಿಂತಿರುಗುವಾಗ ಮಳೆ ಧಾರಾಕಾರವಾಗಿ ಸುರಿಯಲಾರಂಭಿಸಿತ್ತು. ಹೀಗಾಗಿ ದಾರಿ ಸ್ಪಷ್ಟವಾಗಿ ಕಾಣದೆ ಮುಂದೆ ಪ್ರಯಣಿಸುವುದು ತುಂಬ ತಡವಾಯಿತು. ಶ್ರೀಮತಿ ಶಾರದಾ ಮತ್ತು ಅವರ ಇಬ್ಬರು ಸಹೋದರಿಯರು ಪ್ರಾರಂಭಿಸಿದ್ದ ಎಲಿಗೆಂಟ್ ಆಫೀಸಿಗೆ ಬಂದು, ಅಲ್ಲಿಂದ ಶಾರದಾ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದಳು. ಅಲ್ಲಿ ಅವಳ ಸಹೋದರಿ ಶೋಭಾ ಕೂಡ ಬಂದಿದ್ದಳು. ಹೀಗಾಗಿ ರಾತ್ರಿಯೂಟ ಮುಗಿದ ಬಳಿಕ ಶೋಭಾ ನನ್ನನ್ನು ಫಿಲೆಡೆಲ್ಫಿಯಾದಲ್ಲಿರುವ ಅವರ ಮನೆಗೆ ಕರೆದುಕೊಂಡು ಹೋದಳು.

ಮರುದಿನ, ಜುಲೈ ೨೮ರಂದು ಬೆಳಗಿನ ಉಪಹಾರ ಮುಗಿಸಿ, ಶೋಭಾ ನನ್ನನ್ನು ಫಿಲೆಡೆಲ್ಫಿಯಾ ಸುತ್ತಾಡಿಸಲು ಕರೆದುಕೊಂಡು ಹೋದಳು. ನಾವು ಅಮೇರಿಕೆಯ ಅತ್ಯಂತ ಚಾರಿತ್ರಿಕ 'ಸ್ಕ್ವೆರ್ ಮೈಲ್' ಪ್ರದೇಶ ವೀಕ್ಷಿಸಿದೆವು. ಅಲ್ಲಿ ಅಮೇರಿಕೆಯ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ಚಾರಿತ್ರಿಕ ವಸ್ತುಗಳು, ಮಾಹಿತಿ ನೀಡುವ ಭಿತ್ತಿಪತ್ರಿಕೆಗಳು, ಪತ್ರಾಗಾರ ಇತ್ಯಾದಿ ನೋಡಲು ದೊರೆತವು. ಇಲ್ಲಿರುವ ಲಿಬರ್ಟಿ ಬೆಲ್‌ನ ಸುತ್ತುಮುತ್ತಲಿನ ಸುಮಾರು ಮೂವತ್ತು ಸಾಂಸ್ಕೃತಿಕ ಸಂಘಗಳು ಒಟ್ಟಾಗಿ ಸೇರಿ ವಿಭಿನ್ನ ರೀತಿಯ ಮ್ಯೂಸಿಯಂಗಳನ್ನು ನಿರ್ಮಿಸಿವೆ(ಒಂದು ಸ್ಕ್ವೆರ್ ಮೈಲಿ ಪ್ರದೇಶದಲ್ಲಿ ಎಲ್ಲವೂ ಹತ್ತಿರ ಹತ್ತಿರದಲ್ಲಿಯೇ ಇವೆ). ಹೀಗಾಗಿ ಇವುಗಳನ್ನು ನೋಡಲು ತುಂಬಾ ದೂರ ಕ್ರಮಿಸಬೇಕಾದ ಶ್ರಮ ಇರುವುದಿಲ್ಲ. ಕುಟುಂಬಸಮೇತ ಚಾರಿತ್ರಿಕ, ಕಲಾ, ವಾಸ್ತು ಅಥವಾ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಯೋಗ್ಯವಾದ ಹಾಗೂ ಆಕರ್ಷಕ ವಿನ್ಯಾಸದಲ್ಲಿ ಇದನ್ನು ರೂಪಿಸಲಾಗಿದೆ.

ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯಾಗುವ ಮೊದಲೇ ವಿಲಿಯಂ ಪೆನ್ ಎಂಬಾತನು (ಈತ ೧೬೮೨ನೆ ಇಸವಿಯಲ್ಲಿ ಸ್ವದೇಶ ಲಂಡನ್ ಬಿಟ್ಟು ಅಮೇರಿಕೆಗೆ ಬಂದಿದ್ದನು) ಫಿಲೆಡೆಲ್ಫಿಯಾದಲ್ಲಿ ಆಫ್ರಿಕಾದ ನಿಗ್ರೊ ಜನಾಂಗದ ಗುಲಾಮರು ನಾಗರಿಕ ಸಮಾಜದೊಂದಿಗೆ ಬೆರೆತು ಬಾಳಲು ಅವಕಾಶ ಮಾಡಿಕೊಟ್ಟಿದ್ದನು. ವಿಲಿಯಮ್ ಪೆನ್, ರೆಲಿಜಿಯಸ್ ಸೊಸೈಟಿ ಆಫ್ ಫ್ರೆಂಡ್ಸ್‌ನ ಪ್ರಮುಖ ಸದಸ್ಯನಾಗಿದ್ದವನು. ೧೭೦೧

ಇಸವಿಯ ಚಾರ್ಟರ್ ಆಫ್ ಪ್ರಿವಿಲೇಜಸ್ ಘೋಷಣೆಯನ್ನು ಮಾಡಿದ ಜಾಗಕ್ಕೆ 'ವೆಲಕಮ್ ಪಾರ್ಕ್' ಎಂಬ ಹೆಸರನ್ನು ನೀಡಲಾಗಿದೆ ಮತ್ತು ಆ ಊರಿಗೆ ಪೆನಿಸೆಲ್ವೇನಿಯಾ ಎಂಬ ಹೆಸರನ್ನು ನೀಡಲಾಗಿದೆ. ಪೆನಿಸೆಲ್ವೇನಿಯಾದಲ್ಲಿ ಗಂಟೆ ಬಾರಿಸುವ ಮೂಲಕ ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯನ್ನು ಜಗತ್ತಿಗೆ ಸಾರಲಾಗಿತ್ತು. ಆ ಗಂಟೆಯನ್ನು "ಲಿಬರ್ಟಿ ಬೆಲ್" ಎಂದು ಕರೆದು ಉತ್ತಮ ರೀತಿಯಲ್ಲಿ ಕಾಪಿಡಲಾಗಿದೆ. (ಅದನ್ನು ನೋಡಿದಾಗ ನಾನು ಸಣ್ಣವನಿದ್ದಾಗ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ನನ್ನ ತಂದೆಯವರು ಬಂಟವಾಳದ ಸಿಪಿಸಿ ಕಂಪೆನಿಯ ವಠಾರದಲ್ಲಿ ಸಿಡಿಮದ್ದು ಸಿಡಿಸಿ ಸಂಭ್ರಮಪಟ್ಟುಕೊಂಡದ್ದು ನೆನಪಿಗೆ ಬಂತು.) ೧೮೮೭ ಮತ್ತು ೧೮೪೬ನೇ ಇಸವಿಯಲ್ಲಿ ಸ್ವಾತಂತ್ರ್ಯ ಗಂಟೆಯ ಹೊರಮೈಯಲ್ಲಿ ಬಿರುಕು ಕಾಣಿಸಿಕೊಂಡಿದ್ದರೂ, ಅದನ್ನು ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯ ಪ್ರತೀಕ ಸ್ಮಾರಕವಾಗಿ ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬಂದಿದ್ದಾರೆ.

೧೭೮೩ನೇ ಪ್ಯಾರಿಸ್ ಒಪ್ಪಂದದ ಪ್ರಕಾರ ಇಂಗ್ಲೆಂಡ್ ದೇಶ ಅಮೇರಿಕನ್ ಜನಾಂಗಕ್ಕೆ ಸ್ವಾತಂತ್ರ್ಯವನ್ನು ನೀಡಿತು ಮತ್ತು ಅಮೇರಿಕಾ ಸ್ವತಂತ್ರ ರಾಷ್ಟ್ರವಾಗಿ ಪ್ರತ್ಯೇಕಗೊಂಡಿತು. ಅಮೇರಿಕೆಯಲ್ಲಿ ಬ್ರಿಟಿಶ್ ಸಾಮ್ರಾಜ್ಯದ ಅಧೀನದಲ್ಲಿದ್ದ ಭೂಮಿ ಮತ್ತು ನೌಕಾಬಲವನ್ನು ಬಿಟ್ಟು ಕೊಡಲಾಯಿತು. ಜುಲೈ ೪, ೧೭೭೬ರಲ್ಲಿ ಅಮೇರಿಕೆಯ ಸ್ವಾತಂತ್ರ್ಯ ಘೋಷಣೆಯಾದದ್ದು ಇಲ್ಲಿಯ ಇಂಡಿಪೆಂಡೆನ್ಸ್ ಹಾಲ್‌ನಲ್ಲಿ. ಸ್ವಾತಂತ್ರ್ಯ ದೊರೆತ ಬಳಿಕ ಪ್ರಥಮ ಕಾಂಗ್ರೆಸ್(ಲೋಕಸಭೆ) ಸೇರಿದ್ದು ಕೂಡ ಇಲ್ಲಿಯೇ. ದೇಶದ ಆಡಳಿತ ಪದ್ಧತಿ, ಅಮೇರಿಕಾ ಸಂಯುಕ್ತ ಒಕ್ಕೂಟದಲ್ಲಿ ಇನ್ನೂ ಮೂರು ರಾಜ್ಯಗಳಿಗೆ ಅಧಿಕೃತ ಸ್ಥಾನ ನೀಡುವ ಘೋಷಣೆ, ಪ್ರಥಮ ರಾಷ್ಟ್ರಾಧ್ಯಕ್ಷರಾದ ಜಾರ್ಜ್ ವಾಷಿಂಗಟನ್ ದ್ವಿತೀಯ ಅಧ್ಯಕ್ಷರಾದ ಜಾನ್ ಅಡಾಮ್ಸ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದ ಭವನದ ಹೆಸರು "ಕಾಂಗ್ರೆಸ್ ಭವನ" ಎಂದು ಇದೆ.

೧೭೭೪ನೇ ಇಸವಿಯಲ್ಲಿ ಬ್ರಿಟಿಶ್ ಕಾಲೊನಿಯ ೧೩ ರಾಜ್ಯಗಳು ಒಟ್ಟು ಸೇರಿ ಬ್ರಿಟನ್ನಿನ ರಾಜನ ದುರಾಕ್ರಮಣ ಮತ್ತು ದುರ್ನೀತಿಯ ವಿರುದ್ಧ ಧ್ವನಿ ಎತ್ತಿ ಬ್ರಿಟಿಶ್ ಸರಕಾರಕ್ಕೆ ತಿಳಿವಳಿಕೆ ನೀಡುವ ನಿರ್ಣಯ ತೆಗೆದುಕೊಂಡದ್ದು ಕಾರ್ಪರೆಂಟರಸ್ ಹಾಲ್‌ನಲ್ಲಿ. ಈ ಕಾರ್ಪೆಂಟರ್ ಒಂದು ಖಾಸಗಿ ಕಂಪೆನಿಯಾಗಿದ್ದು, ಅದು ಈಗಲೂ ಆ ಕಟ್ಟಡದಲ್ಲಿಯೇ ಅದರ ಕಚೇರಿಯನ್ನು ಹೊಂದಿ ಕೆಲಸ ನಿರ್ವಹಿಸುತ್ತಿದೆ. ಇದು ಕೂಡ ಒಂದು ಸುಂದರವಾದ ಮತ್ತು ಸುದೃಢ ಕಟ್ಟಡ. ಇದರ ಹತ್ತಿರವೇ ಬೆಂಜಮಿನ್ ಫ್ರಾಂಕಲಿನ್ ನ್ಯಾಯಾಲಯ ಇದೆ. ಇಲ್ಲಿ ಅಮೇರಿಕೆಯ ಸರ್ವ ಪ್ರಥಮ ಮತ್ತು ಎರಡನೆಯ ಬ್ಯಾಂಕಿನ ಮೂಲ ಕಟ್ಟಡವೂ ಇಲ್ಲಿದೆ.

ಹೀಗೆ ಚಾರಿತ್ರಿಕ ಮಹತ್ವವಿರುವ ಅನೇಕ ಕಟ್ಟಡಗಳು ಫಿಲೆಡೆಲ್ಪಿಯಾ ರಾಜ್ಯದ ಪೆನಿಸಿಲ್ವೇನಿಯಾದಲ್ಲಿ ಇವೆ. ನಾವು ಇಲ್ಲಿ ಇಡೀ ದಿನ ಸುತ್ತಾಡಿಕೊಂಡಿದ್ದೆವು. ಅಮೇರಿಕೆಗೆ ಮೊದಲು ಬಂದ ಇಂಗ್ಲಿಶರು ಬೇರೆ ಬೇರೆ ಪ್ರದೇಶಗಳನ್ನು(ಈಗಿನ ಅಮೇರಿಕೆಯಲ್ಲಿರುವ) ಸ್ವಾಧೀನ ಪಡಿಸಿಕೊಂಡು ರಾಜ್ಯ ಸ್ಥಾಪಿಸಿದರು. ಕಾಲಾಂತರದಲ್ಲಿ ಬ್ರಿಟಿಶ್ ಆಡಳಿತದಿಂದ ಮುಕ್ತಿ ಪಡೆದು ಸ್ವತಂತ್ರವಾಗಬೇಕೆಂಬ ಬಯಕೆ ಹುಟ್ಟಿಕೊಂಡಿತು. ಬೇರೆ ಬೇರೆ ರಾಜ್ಯಗಳಲ್ಲಿದ್ದ ಇಂಗ್ಲಿಶರು ಅಥವಾ ಅಮೇರಿಕನರು ಒಟ್ಟು ಸೇರಿ ಸ್ವಾತಂತ್ರ್ಯ ಪಡೆಯಲು ಅಗತ್ಯವಿರುವ ಸಂಘಟಿತ ಕಾರ್ಯಗಳನ್ನು ಪ್ರಾರಂಭಿಸಿದರು. ಅನಂತರ ಸ್ವಾತಂತ್ರ್ಯದ ಘೋಷಣೆ ಫಿಲೆಡೆಲ್ಪಿಯಾದಲ್ಲಿ ಆಗಿತ್ತು. ವಿಲಿಯಂ ಪೆನ್ನನ ದರ್ಶನ ಕಾರ್ಯಗತವಾಗಿದ್ದರಿಂದ ಅವನ ಹೆಸರಿನಲ್ಲಿಯೇ ಪೆನಿಸಲ್ವೇನಿಯಾ ನಗರ ರೂಪುಗೊಂಡಿದೆ. ಅನಂತರ ಕಾಲಕ್ರಮೇಣ ಪ್ರಥಮ ಅಧ್ಯಕ್ಷರಾಗಿದ್ದ ವಾಷಿಂಗಟನ್ನರು ಈಗಿನ ರಾಜಧಾನಿಯನ್ನು ಸ್ಥಳಾಂತರಗೊಳಿಸಿದರು. ಹೀಗಾಗಿ ಈಗಿನ ರಾಜಧಾನಿಗೆ ಅವರ ಹೆಸರು ಬಂದಿದೆ.

ಅಮೇರಿಕೆಯಲ್ಲಿ ಕಾಲಿಟ್ಟ ಬ್ರಿಟಿಶರು ಅಲ್ಲಿಯ ದೈಹಿಕ ಶ್ರಮದ ಕಾರ್ಯಗಳಿಗಾಗಿ ಅಫ್ರೀಕಾದಿಂದ ನಿಗ್ರೋ ಜನಾಂಗದ ಗುಲಾಮರನ್ನು ಕರೆದುಕೊಂಡು ಬಂದಿದ್ದರು. ಅವರಿಗೆ ದೈಹಿಕ ಶ್ರಮದ ಕೆಲಸ ಮಾಡುವುದು ಮತ್ತು ಬಿಳಿಯರ ಸೇವೆಯನ್ನು ಕೈಗೊಳ್ಳುವುದು ಬಿಟ್ಟರೆ ಬೇರೆ ಯಾವುದೇ ಹಕ್ಕು ಬಾಧ್ಯತೆಗಳು ಇರಲಿಲ್ಲ. ಅವರನ್ನು "ಕಪ್ಪು ಜನಾಂಗ" ಅಥವಾ "ನಿಗ್ಗರ್ಸ್" ಎಂದು ಕರೆಯಲಾಗುತ್ತಿತ್ತು. ಅವರಿಗೆ ವಾಸಿಸಲು ಊರ ಹೊರಗೆ ಪ್ರತ್ಯೇಕ ಕಾಲೊನಿಗಳಿದ್ದವು(ಭಾರತದಲ್ಲಿ ಹರಿಜನ ಕೇರಿ ಇದ್ದ ಹಾಗೆ). ಆಮೇಲೆ ಬಿಳಿಯರಲ್ಲಿಯೇ ಕೆಲವು ದಾರ್ಶನಿಕರು ಚಳವಳಿ ನಡೆಸಿದ್ದರಿಂದ ಕ್ರಮೇಣ ಈ ಕಪ್ಪು ಜನಾಂಗಕ್ಕೆ ನಾಗರಿಕ ಹಕ್ಕುಗಳು ಲಭಿಸಿದವು. ಈಗ ಅವರನ್ನು ಆಫ್ರೋ-ಅಮೇರಿಕನ್ ಎಂದು ಕರೆಯಲಾಗುತ್ತದೆ. (ಭಾರತದಲ್ಲಿ ಮಹಾತ್ಮಾ ಗಾಂಧೀಜಿಯವರು ಹರಿಜನರು ಎಂದು ಕರೆದವರನ್ನು ಈಗ ದಲಿತರು ಎಂದು ಗುರುತಿಸಲಾಗುತ್ತದೆ.)

ಅಂತೆಯೇ ಅಮೇರಿಕೆಯಲ್ಲಿರುವ ಭಾರತೀಯರನ್ನು ಅಮೇರಿಕನ್ ಇಂಡಿಯನ್ ಎಂದು ಕರೆಯಲಾಗುತ್ತದೆ.

ಫಿಲೆಡೆಲ್ಫಿಯಾದಲ್ಲಿ ಆಫ್ರೋ-ಅಮೇರಿಕನ್ ಮ್ಯೂಸಿಯಂ ಇದೆ. ಅಲ್ಲಿ ಅವರ ಪ್ರಸಿದ್ಧ ವ್ಯಕ್ತಿಗಳ ವರ್ಣಚಿತ್ರಗಳು, ಕಪ್ಪು-ಬಿಳುಪು ಚಿತ್ರಗಳು, ಅವರ ಸಾಂಸ್ಕೃತಿಕ ಕಲಾತ್ಮಕ ಜೀವನ ಮತ್ತು ಕಾರ್ಯವೈಖರಿಯ ಕುರಿತಾದ ಚಿತ್ರಗಳು, ವಸ್ತುಗಳು ಇತ್ಯಾದಿ ನೋಡಲು ಸಿಗುತ್ತವೆ.

ಐದು ಮಹಡಿಯುಳ್ಳ "ರಾಷ್ಟ್ರೀಯ ಸಂವಿಧಾನ ಕೇಂದ್ರ"ದ ಕಟ್ಟಡದಲ್ಲಿ "ಹೈಟ್ಸ್ ಆಫ್ ಲಿಬರ್ಟಿ" ಶೋ ಪ್ರದರ್ಶನ ಇದೆ. ಇದರಲ್ಲಿ ದೃಶ್ಯ ಶ್ರಾವ್ಯ ಮಾಧ್ಯಮದ ಮೂಲಕ ಅಮೇರಿಕೆಯ ಸ್ವಾತಂತ್ರ್ಯ ಯುದ್ಧ ಮತ್ತು ಚರಿತ್ರೆಯನ್ನು ತೋರಿಸುತ್ತಾರೆ.

ವಾಷಿಂಗಟನ್ ಸ್ಕ್ವೇರ್ ಎಂಬ ಪ್ರದೇಶದಲ್ಲಿ ೧೮, ೧೯, ಮತ್ತು ೨೦ನೇ ಶತಮಾನದ ಕಟ್ಟಡಗಳು ಇವೆ. ವಿಲಿಯಂ ಪೆನ್ ಯೋಜಿಸಿದ್ದ ಐದು ನಗರಗಳ ಸಿಟಿ ಸ್ಕ್ವೆರ್‌ಗೆ ಮೊದಲು ಅರ್ಬನ್ ಪಾರ್ಕ್ ಎಂಬ ಹೆಸರು ಇತ್ತು. ಆಮೇಲೆ ೧೮೮೫ರಲ್ಲಿ ಅಮೇರಿಕೆಯ ಪ್ರಥಮ ಅಧ್ಯಕ್ಷರಾಗಿದ್ದ ಜಾರ್ಜ್ ವಾಷಿಂಗಟನ್ ಅವರ ನೆನಪಿಗಾಗಿ ಇದಕ್ಕೆ ಮರು ನಾಮಕರಣ ಮಾಡಿ "ವಾಷಿಂಗಟನ್ ಸ್ಕ್ವೇರ್" ಎಂದು ಕರೆಯಲಾಗುತ್ತದೆ. ಇಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಕ್ರಾಂತಿಕಾರರು, ನೀಗ್ರೋಗಳು ಮತ್ತು ೧೭೯೩ರಲ್ಲಿ ಜಾಂಡಿಸ್ ಕಾಯಿಲೆಯಿಂದ ಮರಣ ಹೊಂದಿದವರ ಸಮಾಧಿಗಳು ಇವೆ. ಅನಾಮಿಕ ಸ್ವಾತಂತ್ರ್ಯ ಯೋಧರ ಶಿಲಾಲೇಖವಿರುವ ಸಮಾಧಿಗಳನ್ನೂ ಇಲ್ಲಿ ಸ್ಥಾಪಿಸಲಾಗಿದೆ.

ಜುಲೈ ೨೯ರಂದು ನಾನು ಫಿಲೆಡೆಲ್ಫಿಯಾದಿಂದ ನ್ಯೂಜರ್ಸಿಗೆ ಬಂದು, ಅಲ್ಲಿಂದ ಸಂಜೆ ರೈಲಿನಲ್ಲಿ ನ್ಯೂಯಾರ್ಕ್ ತಲುಪಿದೆ. ಅಲ್ಲಿ ನನ್ನನ್ನು ಸೋದರಳಿಯ ಸಂಬಂಧಿ ಬಂಟವಾಳ ಡಾ. ಸುರೇಶ ಬಾಳಿಗರು ಅವರ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಸೇರಿದ್ದವರಿಗೆ ನಾನು ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ಕುರಿತು ಮಾಹಿತಿ ನೀಡಿ ಅವರ ಸಹಕಾರ ಕೋರಿದೆ. ಆಮೇಲೆ ಅಲ್ಲಿ ಬಂದಿದ್ದ ಸಂದೇಶ ಭಟ್ ಮತ್ತು ಅವರ ಕುಟುಂಬದವರೊಂದಿಗೆ ಮತ್ತೆ ಅವರ ಮನೆಗೆ ಹೋದೆನು.

ಜುಲೈ ೩೧ರಂದು ಸಂಜೆ ಶ್ರೀ ದಾಮೋದರ ಬಾಳಿಗರಲ್ಲಿ ನಾಕಾದ ಸಂಸ್ಥಾಪಕ ಮಂಡಳಿಯ ಕೊಂಕಣಿಗರ ಸಭೆ ಇತ್ತು. ಈ ಸಭೆಗೆ ಪುರುಷರು ಮತ್ತು ಮಹಿಳೆಯರು ಬಹು ಸಂಖ್ಯೆಯಲ್ಲಿ ಬಂದಿದ್ದರು. ಅವರಿಗೂ ನಾನು ವಿಶ್ವ ಕೊಂಕಣಿ ಕೇಂದ್ರದ ಯೋಜನೆಯ ಕುರಿತು ಪವರ ಪಾಯಿಂಟ್ ಪ್ರೆಸೆಂಟೇಶನ್ ನೀಡಿದೆ. ಅಲ್ಲಿ ನೆರೆದವರಿಗೆ ಅದು ತುಂಬಾ ಇಷ್ಟವಾಯಿತು.

ಮರುದಿನ, ಆಗಸ್ಟ್ ೧ರಂದು ಶ್ರೀ ದಾಮೋದರ ಬಾಳಿಗರ ಮನೆಯಿಂದ ಜಾನ್ ಎಫ್ ಕೆನಡಿ ವಿಮಾನ ನಿಲ್ದಾಣಕ್ಕೆ ಬಂದೆವು. ಅಲ್ಲಿ ಏರ್ ಇಂಡಿಯಾ ಕೌಂಟರ್‌ನಲ್ಲಿ ಗೋವೆಯ ಶ್ರೀಮತಿ ಪ್ರೆಸಿಲ್ಲಾ ಡಿಸಿಲ್ವಾ ಇದ್ದರು. ಅವರೊಂದಿಗೆ ಮಾತನಾಡಿ ನಾನು ಮತ್ತು ಕುಡ್ಪಿ ಜಗದೇಶ ಶೆಣೈ ದಂಪತಿಗಳು ಕನಿಷ್ಕ ವಿಮಾನವನ್ನೇರಿ ಭಾರತಕ್ಕೆ ಮರುಪ್ರಯಾಣ ನಡೆಸಿದೆವು. ಮುಂಬೈ ತಲುಪಿ ಅಲ್ಲಿಂದ ಮುಂಜಾನೆ ೩.೩೦ ಗಂಟೆಗೆ ಬೆಂಗಳೂರು ಮುಟ್ಟಿದೆವು. ಅಲ್ಲಿಂದ ಮಂಗಳೂರಿಗೆ ರಾತ್ರಿ ಬಸ್ಸು ಹಿಡಿದು ನಾನು ಬೆಳಗ್ಗೆ ತುಂಬೆಯ ಮನೆಗೆ ಬಂದು ತಲುಪಿದೆ.

೩೯. ವಿಶ್ವ ಕೊಂಕಣಿ ಕೇಂದ್ರ ಶಂಕು ಸ್ಥಾಪನೆ

ನಾನು ಬಹಳ ವರ್ಷಗಳಿಂದ ಕಂಡ ಕನಸು ಕಾರ್ಯರೂಪಕ್ಕೆ ಬರುವ ಸಮಯ ಬಂದಿತ್ತು. ಅಂದರೆ, ವಿಶ್ವ ಕೊಂಕಣಿ ಕೇಂದ್ರ ನಿರ್ಮಾಣ ಕಾರ್ಯದ ಶಂಕು ಸ್ಥಾಪನೆಯ ದಿನ ಸನಿಹಕ್ಕೆ ಬಂತು. ಸೆಪ್ಟೆಂಬರ್ ೫, ೨೦೦೫, ಶಿಕ್ಷಕರ ದಿನದಂದು ಬೆಳಗ್ಗೆ ೧೧ ಗಂಟೆಗೆ ಕೊಂಕಣಿ ನೇತಾರರು ಮತ್ತು ಹಿರಿಯರು ಬಂದು ವಿಶ್ವ ಕೊಂಕಣಿ ಕೇಂದ್ರದ ಅಡಿಗಲ್ಲನ್ನಿಡುವ ಸುಮುಹೂರ್ತ ಬಂತು.

ಕೊಂಕಣಿ ಮಹಾದಾನಿ ಶ್ರೀ ಪಿ. ದಯಾನಂದ ಪೈ ಮತ್ತು ಅವರ ಪತ್ನಿ ಶ್ರೀಮತಿ ಮೋಹಿನಿ ಪೈ ಅವರ ಅಮೃತ ಹಸ್ತದಿಂದ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣಕಾರ್ಯಕ್ಕೆ ಅಡಿಗಲ್ಲನ್ನು ಇಡಲಾಯಿತು. ಕೇಂದ್ರ ಸರಕಾರದ ಸಚಿವರಾದ ಸನ್ಮಾನ್ಯ ಶ್ರೀ ಆಸ್ಕರ್ ಫೆರ್ನಾಂಡಿಸ್, ಕರ್ನಾಟಕ ಸರ್ಕಾರದ ಸಚಿವರಾದ ಮಾನ್ಯ ಶ್ರೀ ಆರ್.ವಿ. ದೇಶಪಾಂಡೆ, ಮಾಜಿ ಸಚಿವರಾದ ಮಾನ್ಯ ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ, ಶಾಸಕ ಶ್ರೀ ಎನ್.ಯೋಗೀಶ್ ಭಟ್, ಕಾರ್ಪೊರೇಶನ್ ಬ್ಯಾಂಕ್‌ನ ಆಡಳಿತ ನಿರ್ದೇಶಕರಾದ ಶ್ರೀ ಕೆ. ಗೋಪಾಲಕೃಷ್ಣ, ಮುಂಬೈಯ ದಾನಿ ಶ್ರೀ ಎನ್.ಎಸ್. ರಾವ್, ಕೊಂಕಣಿ ಭಾಷಾಮಂಡಳದ ಅಧ್ಯಕ್ಷರಾದ ಫಾದರ್ ಏರಿಕ್ ಕ್ರಾಸ್ತಾ, ಉಪಾಧ್ಯಕ್ಷರಾದ ಶ್ರೀ ಎಂ. ರಘುನಾಥ ಶೇಟ್ ಮೊದಲಾದವರು ಹಾಜರಿದ್ದು ವೇದಿಕೆ ಶೋಭಿಸಿತು.

ಶ್ರೀ ಪಿ. ದಯಾನಂದ ಪೈ ಅವರು ಮೊದಲ ಕಂತಿನ ರೂಪದಲ್ಲಿ ಇಪ್ಪತ್ತೈದು ಲಕ್ಷ ರೂ ದೇಣಿಗೆಯನ್ನು ಘೋಷಿಸಿದರು. ನಮ್ಮ ಕೊಂಕಣಿ ಪ್ರತಿಷ್ಠಾನದ ಅಧ್ಯಕ್ಷರಾದ ಕೆ.ಕೆ.ಪೈ ಮಾಮರಿಗೆ ದೈಹಿಕ ಅಸೌಖ್ಯವಾಗಿದ್ದರಿಂದ ಅವರು ಕಾರ್ಯಕ್ರಮಕ್ಕೆ ಬಂದಿರಲಿಲ್ಲ. ಅದೇ ರೀತಿ ಮತ್ತೊಬ್ಬ ಕೊಂಕಣಿ ಮಹಾದಾನಿ ಮತ್ತು ನನ್ನನ್ನು ಯಾವಾಗಲೂ ವಿಶ್ವಾಸದಿಂದ ಕಾಣುವ ಶ್ರೀ ರೊನಾಲ್ಡ್ ಕೊಲಾಸೊ ಅವರೂ ಅನ್ಯ ಕೆಲಸದ ಕಾರಣವಾಗಿ ಸಮಾರಂಭಕ್ಕೆ ಬಂದಿರಲಿಲ್ಲ. ಮುಂಬೈ, ಗೋವೆ, ಬೆಳಗಾವಿ, ಉತ್ತರ ಕನ್ನಡ, ಉಡುಪಿ, ಮಂಗಳೂರು ಜಿಲ್ಲೆ, ಕೇರಳ, ಮೈಸೂರು, ಬೆಂಗಳೂರು ಮೊದಲಾದೆಡೆಗಳಿಂದ ಅನೇಕ ಗೌರವಾನ್ವಿತರು ಮತ್ತು ಕೊಂಕಣಿ ಸಮಾಜಗಳ ಮುಖಂಡರು ಬಂದು ತಲುಪಿದರು. ಕಟ್ಟಡ ನಿರ್ಮಾಣದ ಶಂಕು ಸ್ಥಾಪನೆಯ ಸಮಾರಂಭ ಯಶಸ್ವಿಯಾಗಿ, ಬಂದವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ನಮ್ಮ ಕಾರ್ಯಗಳಿಗೆ ಬೆಂಬಲ, ಸಹಾಯ, ಸಹಕಾರ ನೀಡುವುದಾಗಿ ಆಶ್ವಾಸನೆ ನೀಡಿದರು.

ಶಂಕು ಸ್ಥಾಪನೆ ಆಗುವುದರೊಳಗೆ ಕಾರ್ಪೊರೇಶನ್ ಬ್ಯಾಂಕ್ ವಿಶ್ವಕೊಂಕಣಿ ಮ್ಯೂಸಿಯ್‌ಂಗಾಗಿ ಇಪ್ಪತ್ತು ಲಕ್ಷ ರೂಪಾಯಿಯನ್ನು ದೇಣಿಗೆಯಾಗಿ ನೀಡಿತ್ತು. ಬೆಂಗಳೂರಿನ ಶ್ರೀ ರೊನಾಲ್ಡ್ ಕೊಲಾಸೊ ಬಾಬ ಅವರು ಹತ್ತು ಲಕ್ಷ ರೂ ದೇಣಿಗೆಯನ್ನು ಘೋಷಿಸಿದರು. ನಾವು ಕೆನರಾ ಬ್ಯಾಂಕ್ ಮುಖ್ಯಸ್ಥರಲ್ಲಿ ೨೫ ಲಕ್ಷ ದೇಣಿಗೆಗೆ ಕೋರಿಕೆ ಸಲ್ಲಿಸಿದೆವು. ಅದು ನಮಗೆ ೨೦೦೮ನೇ ಇಸವಿಯಲ್ಲಿ ಸಿಕ್ಕಿತು. ಇದೇ ರೀತಿ ಇಷ್ಟರೊಳಗೆ ನಾವು ಕೆಲವು ಮಹಾದಾನಿಗಳನ್ನು ಸಂಪರ್ಕಿಸಿದ್ದೆವು.

ಈ ಸಮಯದಲ್ಲಿ ನಮ್ಮ ಕೊಂಕಣಿ ರಾಜಕಾರಣಿ ಮಾನ್ಯ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ಕರ್ನಾಟಕ ಸರ್ಕಾರದಿಂದ ನಾವು ಖರೀದಿಸಿದ ಜಮೀನನ್ನು ಪ್ರತಿಷ್ಠಾನದ ಹೆಸರಿನಲ್ಲಿ ನೊಂದಾಯಿಸುವ ಸ್ಟಾಂಪ್ ಮೌಲ್ಯದಲ್ಲಿ ಶೇಕಡಾ ೫೦ ರಿಯಾಯಿತಿಯನ್ನು, ಕನ್ವರ್ಶನ್ ಶುಲ್ಕದಲ್ಲಿ ಶೇಖಡ ೧೦೦ರಷ್ಟು ರಿಯಾಯಿತಿಯನ್ನು ಮತ್ತು ಮಂಗಳೂರು ಮಹಾನಗರ ಪಾಲಿಕೆಯಿಂದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದಕ್ಕಾಗಿ ಆಗಿನ ಆಯುಕ್ತರಲ್ಲಿ ಮಾತಾಡಿ ಶುಲ್ಕ ರಿಯಾಯಿತಿಯನ್ನು ಮಾಡಿಸಿ ಕೊಟ್ಟರು. ಇದರಿಂದ ಪ್ರತಿಷ್ಠಾನಕ್ಕೆ ನಾಲ್ಕೈದು ಲಕ್ಷ ರೂ ಉಳಿಯುವಂತೆ ಆಯಿತು. ಇನ್ನು ಮಾನ್ಯ ದೇಶಪಾಂಡೆಯವರು ಗೋವೆಯ ಸರಕಾರದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ದಿಗಂಬರ್ ಕಾಮತರಿಗೆ ಹೇಳಿ ಗೋವೆ ಸರಕಾರದಿಂದ ಹತ್ತು ಲಕ್ಷ ನಗದು ಹಾಗೂ ಹದಿನೈದು ಲಕ್ಷ ರೂಗಳ ಅನುದಾನ ಸಿಗುವ ಹಾಗೆ ಮಾಡಿದ್ದರಿಂದ ನಮಗೆ ಎಷ್ಟೋ ಸಹಾಯವಾಯಿತು.

೪೦. ಅಖಿಲ ಭಾರತ ಕೊಂಕಣಿ ಪರಿಷತ್ತು

ಅಖಿಲ ಭಾರತ ಕೊಂಕಣಿ ಪರಿಷತ್ತು ೧೯೩೯ನೇ ಇಸವಿ ಜುಲೈ ೮ ರಂದು ಕಾರವಾರದಲ್ಲಿ ಸ್ಥಾಪನೆಯಾಗಿರುವ ಸಂಸ್ಥೆ. ಇದನ್ನು ಪ್ರಾರಂಭಿಸಿದವರು ಕೊಂಕಣಿ ಭಾಷಾಪ್ರೇಮಿ ಹಾಗೂ ಸಂಘಟಕರಾದ ನ್ಯಾಯವಾದಿ ಶ್ರೀ ಮಾಧವ ಮಂಜುನಾಥ ಶಾನಭಾಗ್. ಕೊಂಕಣಿ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಅಸ್ಮಿತೆಯ ಪ್ರಗತಿಗಾಗಿ ಮತ್ತು ಮುಂಬೈ, ಗೋವೆ, ಕರ್ನಾಟಕ ಮತ್ತು ಕೇರಳ ರಾಜ್ಯದಲ್ಲಿರುವ ಕೊಂಕಣಿ ಭಾಷಿಕರನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಯಾವುದೇ ಸಾರಿಗೆ ಸಂಪರ್ಕದ ವಾಹನ ಸೌಲಭ್ಯ ಇಲ್ಲದ ದಿನಗಳಲ್ಲಿ ಶ್ರೀಯುತ ಶಾನಭಾಗರು ಸೈಕಲ್, ಎತ್ತಿನ ಬಂಡಿಗಳನ್ನೇರಿ, ಅಥವಾ ಕಾಲ್ನಡಿಗೆಯಲ್ಲಿ ಈ ನಾಲ್ಕೂ ರಾಜ್ಯಗಳ ಮೂಲೆ ಮೂಲೆಗೆ ಹೋಗಿ ಅಲ್ಲಿಯ ಕೊಂಕಣಿ ಸಂಘ, ಸಂಸ್ಥೆಗಳ ನೇತಾರರನ್ನು, ಕಾರ್ಯಕರ್ತರನ್ನು ಭೇಟಿಯಾಗಿ, ಆಗ ಕಾರವಾರದಲ್ಲಿ ನಡೆಯಲಿದ್ದ ಅಧಿವೇಶನದಲ್ಲಿ ಅವರು ಭಾಗಿಯಾಗುವಂತೆ ಮನವೊಲಿಸಿ, ಅದನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ಆ ಅಧಿವೇಶನದಲ್ಲಿ ಊರು ಪರವೂರುಗಳ ಕೊಂಕಣಿ ಪ್ರೇಮಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇದೇ ಅಧಿವೇಶನದಲ್ಲಿ ಕೊಂಕಣಿ ಭಾಷಿಕರನ್ನು ಒಟ್ಟುಗೂಡಿಸುವ ಸಲುವಾಗಿ ಒಂದು ಭಾಷೆ, ಒಂದೇ ಸಮಾಜ(ಕೊಂಕಣಿ ಸಮಾಜ), ಒಂದೇ ಲಿಪಿ(ದೇವ ನಾಗರಿ) ಮತ್ತು ಒಂದೇ ಸಾಹಿತ್ಯ- ಈ ಧ್ಯೇಯ ವಾಕ್ಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿತ್ತು. ಇದರ ಬಳಿಕ ಉಡುಪಿ, ಮಂಗಳೂರು ಮತ್ತು ಮುಂಬೈಯಲ್ಲಿ ಅಧಿವೇಶನಗಳು ನಡೆಯುತ್ತಲಿದ್ದವು. ಗೋವೆ ರಾಜ್ಯಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧಿವೇಶನ ಮತ್ತು ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನಗಳು ಗೋವೆಯಲ್ಲಿಯೂ ನಡೆಯಲಾರಂಭಿಸಿದವು.

೨೩ನೇ ಅಖಿಲ ಭಾರತ ಅಧಿವೇಶನ

ಪ್ರಾರಂಭದಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತು ಎಂದು ಕರೆಯಿಸಿಕೊಳ್ಳುತ್ತಿದ್ದ ಈ ಸಂಸ್ಥೆ ನಂತರದ ದಿನಗಳಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತು ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಇತ್ತೀಚೆಗೆ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧಿವೇಶನ ಮತ್ತು ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನವನ್ನು ಅನುಕ್ರಮವಾಗಿ(ಒಂದು ವರ್ಷದ ಅಂತರದಲ್ಲಿ) ನಡೆಸಿಕೊಂಡು ಬರಲಾಗುತ್ತದೆ. ಇದನ್ನು ಪರಿಷತ್ತು ದೇಶದ ಬೇರೆ ಬೇರೆ ನಗರಗಳಲ್ಲಿ ಸಂಘಟಿಸುವ ಕ್ರಮ ಜಾರಿಯಲ್ಲಿದೆ.

ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತಿನ ೨೩ನೇ ಅಧಿವೇಶನವನ್ನು ಮಂಗಳೂರಿನಲ್ಲಿ ನಮ್ಮ ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ನೇತೃತ್ವದಲ್ಲಿ ನಡೆಸುವುದೆಂದು ತೀರ್ಮಾನವಾಗಿತ್ತು. ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮೊ. ಅಲೆಕ್ಸಾಂಡರ್ ಡಿಸೋಜಾ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಅಧಿವೇಶನದ ಪೂರ್ವಭಾವಿ ಸಿದ್ಧತೆಗಳಿಗಾಗಿ ಪರಿಷತ್ತು ಮತ್ತು ಪ್ರತಿಷ್ಠಾನದ ಸಮಿತಿಗಳ ಜಂಟಿ ಸಭೆಯನ್ನು ಮಂಗಳೂರಿನಲ್ಲಿ ನಡೆಸಲಾಯಿತು. ಬಳಿಕ ನಾನು ಉಡುಪಿ, ಕುಂದಾಪುರ, ಕುಮಟಾ, ಕಾರವಾರ ಮತ್ತು ಗೋವೆಯ ಕೊಂಕಣಿ ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಭೇಟಿಯಾಗಿ ಅಧಿವೇಶನದ ಸಂಘಟನಾ ಕಾರ್ಯವನ್ನು ನಡೆಸಿದೆ. ಮಂಗಳೂರಿನಲ್ಲಿಯೂ ವಿವಿಧ ಕೊಂಕಣಿ ಸಂಘ, ಸಂಸ್ಥೆಗಳ ನೇತಾರರ ಮತ್ತು ಸದಸ್ಯರ ಸಭೆ ನಡೆಸಿ, ಜನರನ್ನು ಸೇರಿಸುವುದು ಮತ್ತು ಪ್ರಚಾರ ನೀಡುವುದು ಇತ್ಯಾದಿ ವ್ಯವಸ್ಥೆಯ ಕಾರ್ಯಗಳನ್ನು ನಡೆಸಿದ್ದೆ.

ಅಖಿಲ ಭಾರತ ಕೊಂಕಣಿ ಪರಿಷತ್ತಿನ ೬೦ನೇ ವರ್ಷದ ಆಚರಣೆಯು ಕೊಂಕಣಿ ಅಕಾಡೆಮಿಯ ಸಹಯೋಗದೊಂದಿಗೆ

ದಿನಾಂಕ ೮-೭-೧೯೯೯ರಂದು ಕಾರವಾರದಲ್ಲಿ ನಡೆದಿತ್ತು. ಪರಿಷತ್ತಿನ ಪ್ರಥಮ ಅಧಿವೇಶನದಲ್ಲಿ(೧೯೩೯) ಭಾಗವಹಿಸಿದ್ದ ಶ್ರೀ ಕೆ.ಎನ್. ರಾವ್ ದಾಂಡೇಲಿ(ಕುಂದಾಪುರ ನರಸಿಂಹ ಕಾಮತಿ) ಅವರು ೬೦ನೇ ವರ್ಷದ ಆಚರಣಾ ಕಾರ್ಯಕ್ರಮವನ್ನು ದೀಪ ಹಚ್ಚುವ ಮೂಲಕ ಉದ್ಘಾಟಿಸಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಕೆ.ಕೆ.ಪೈ(ಮಣಿಪಾಲ), ಶ್ರೀ ಪುಂಡಳೀಕ ನಾಯ್ಕ(ಗೋವೆ), ಜೆ.ಎಂ. ಬಿ. ರಾಡ್ರಿಗಸ್(ಮುಂಬೈ), ಎನ್. ಪುರುಷೋತ್ತಮ ಮಲ್ಯ(ಕೊಚ್ಚಿ) ಹಾಗೂ ಮಾಧವ ಮಂಜುನಾಥ ಶಾನಭಾಗರ(ಸ್ಥಾಪಕರು) ಮಗ ಭಾಗಿಯಾಗಿದ್ದರು. ನಾನು ಮುಖ್ಯ ಅತಿಥಿಯಾಗಿದ್ದೆ.

ಏಪ್ರಿಲ್ ೨೦, ೨೦೦೨ರಂದು ಬೆಳಗ್ಗೆ ೨೩ನೇ ಅಧಿವೇಶನದ ಹೊಸ ಅಧ್ಯಕ್ಷರಾದ ಡಾ. ತಾನಾಜಿ ಹಲರಣಕರರ ಉಪಸ್ಥಿತಿಯಲ್ಲಿ ಕರ್ನಾಟಕ ಸರಕಾರದಲ್ಲಿ ಆಗ ಮಾನ್ಯಮಂತ್ರಿಗಳಾಗಿದ್ದ ಶ್ರೀ ಬಿ. ರಮಾನಾಥ ರೈ ಅವರು ದೀಪ ಹಚ್ಚುವ ಮೂಲಕ ಅಧಿವೇಶನದ ಉದ್ಘಾಟನೆಯನ್ನು ಮಾಡಿದರು. ಎರಡು ದಿನಗಳ ಕಾಲ ವಿವಿಧ ಗೋಷ್ಠಿಗಳು, ವಿಚಾರಸಂಕಿರಣಗಳು ಮತ್ತು ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು . ವಿವಿಧ ವಿಚಾರಗಳ ಠರಾವು ಮಂಡಿಸಲಾಯಿತು.

ಏಪ್ರಿಲ್ ೨೧, ೨೦೦೨, ಭಾನುವಾರ ಸಮಾರೋಪ ಸಮಾರಂಭ. ಇದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಕೆ.ಕೆ. ಪೈ ಅವರು ಬಸ್ತಿ ಪ್ರಕಾಶನದಿಂದ ನಾನು ಪ್ರಕಟಿಸಿದ್ದ ನನ್ನ ಚಿಕ್ಕಪ್ಪ ಶ್ರೀ ಬಸ್ತಿ ಪುಂಡಳೀಕ ಶೆಣೈ ಅವರ "ಕರ್ನಾಟಕಾಂತುಲೆ ಕೊಂಕಣಿ ಶಬ್ದ ಸಂಗ್ರಹ" ಕೃತಿಯನ್ನು ಲೋಕಾರ್ಪಣೆ ಮಾಡಿದರು.

ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತಿನ ಕಾರ್ಯಕಾರಣಿ ಸಭೆಯು ಹೊಸ ಅಧ್ಯಕ್ಷರಾದ ಡಾ. ತಾನಾಜಿ ಹಳರಣಕರರ ಅಧ್ಯಕ್ಷತೆಯಲ್ಲಿ ಮೇ ೯ ರಂದು ಮಂಗಳೂರಿನಲ್ಲಿ ನಡೆಯಿತು. ಆ ಸಭೆಯಲ್ಲಿ ನಾನು ಕಾರ್ಯಾಧ್ಯಕ್ಷನಾಗಿ ಆಯ್ಕೆಗೊಂಡೆ. ಇದರ ನಂತರ ನಿರಂತರವಾಗಿ ಎರಡು ವರ್ಷ ನಾನು ಡಾ. ತಾನಾಜಿ ಮತ್ತು ಶ್ರೀ ಗೋಕುಲದಾಸ ಪ್ರಭು(ಕಾರ್ಯದರ್ಶಿ) ಅವರೊಂದಿಗೆ ಪರಿಷತ್ತಿನ ಕಾರ್ಯಗಳನ್ನು ನಡೆಸುವುದರಲ್ಲಿ ಮಗ್ನನಾದೆ. ಪರಿಷತ್ತಿನ ಕಚೇರಿ ಇರುವುದು ಗೋವೆಯಲ್ಲಿ. ಆದರೆ ಅಲ್ಲಿ ಬದ್ಧತೆಯಿಂದ ಕೆಲಸ ಮಾಡವವರ ಕೊರತೆ ಇದ್ದುದರಿಂದ ಪರಿಷತ್ತನ್ನು ಜೀವಂತವಾಗಿ ಇಡುವ ಜವಾಬ್ದಾರಿ ನಮ್ಮ ಭುಜದ ಮೇಲೆ ಇತ್ತು.

೨೦೦೪ರಲ್ಲಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧಿವೇಶವನ್ನು ಕೇರಳದ ಕಲ್ಲಿಕೋಟೆಯಲ್ಲಿ ನಡೆಸುವುದೆಂದು ನಿರ್ಧಾರ ಕೈಗೊಂಡೆವು. ಅದಕ್ಕಾಗಿ ನಾನು ಡಾ. ತಾನಾಜಿ ಮತ್ತು ಶ್ರೀ ಗೋಕುಲದಾಸ ಪ್ರಭು ಅವರೊಂದಿಗೆ ೫-೬ ಬಾರಿ ಕಲ್ಲಿಕೋಟೆಗೆ ಹೋಗಿ ಅಲ್ಲಿ ಶ್ರೀ ಸುರೇಂದ್ರ ರಾವ್, ಶ್ರೀ ಸಂತೋಷ ಪೈ, ಡಾ. ಬಾಲಗೋಪಾಲ ಪ್ರಭು ಮತ್ತು ಇತರ ನೇತಾರರನ್ನು ಭೇಟಿಯಾಗಿ, ಅಲ್ಲಿ ಕೊಂಕಣಿ ಭಾಷಾ ಮಂಡಳವನ್ನು ಪ್ರಾರಂಭಿಸಿ, ೨೦೦೪, ಫೆಬ್ರವರಿ ೨೪ರಂದು ಪರಿಷತ್ತಿನ ಅಧಿವೇಶನವನ್ನು ನಡೆಸಿದೆವು.

ಪರಿಷತ್ತಿನ ಅಧ್ಯಕ್ಷನಾಗಿ

೨೦೦೪ರಲ್ಲಿ ಕಲ್ಲಿಕೋಟೆಯಲ್ಲಿ ನಡೆದ ಅಧಿವೇಶನಕ್ಕೆ ಕಲ್ಲಿಕೋಟೆಯ ನಿವಾಸಿಗಳು ಮತ್ತು ಕೇರಳದ ವಿವಿಧ ಭಾಗಗಳ ಜನರು ಮಾತ್ರವಲ್ಲ, ಮುಂಬೈ, ಗೋವೆ, ಮಂಗಳೂರು, ಉತ್ತರ ಕನ್ನಡ ಜಿಲ್ಲೆಯಿಂದಲೂ ಅಪಾರ ಸಂಖ್ಯೆಯಲ್ಲಿ ಪ್ರತಿನಿಧಿಗಳು ಬಂದಿದ್ದರು. ಈ ಅಧಿವೇಶನದಲ್ಲಿ ನಾನು ಪರಿಷತ್ತಿನ ಅಧ್ಯಕ್ಷನಾಗಿ ಚುನಾಯಿತನಾದೆ.

ನನ್ನ ಅಧ್ಯಕ್ಷತೆಯ ಅವಧಿಯಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನವು ಫೆಬ್ರವರಿ, ೨೦೦೫ರಲ್ಲಿ ಕುಮಟೆಯಲ್ಲಿ ನಡೆಯಿತು. ಅನಂತರ ೨೦೦೬ರಲ್ಲಿ ಪರಿಷತ್ತಿನ ಬೆಳ್ಳಿಹಬ್ಬವು ಗೋವೆಯ ಪಣಜಿಯಲ್ಲಿ ನಡೆಯಿತು.

ಪರಿಷತ್ತಿನ ಬೆಳ್ಳಿಹಬ್ಬ

ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ ಬಳಿಕ ಸ್ಥಳೀಯ ಸಂಘ, ಸಂಸ್ಥೆಗಳನ್ನು ಪರಸ್ಪರ ಹತ್ತಿರಕ್ಕೆ ತಂದು, ಆಯಾಯ ಪ್ರದೇಶದಲ್ಲಿ ಕೊಂಕಣಿ ಕಾರ್ಯ ಹೆಚ್ಚು ಹೆಚ್ಚು ನಡೆಯಬೇಕೆಂಬ ಉದ್ದೇಶದಿಂದ ಪ್ರಾದೇಶಿಕ ಸಮಿತಿಯನ್ನು ರಚಿಸುವ ಯೋಜನೆಯನ್ನು ಪ್ರಕಟಿಸಿದೆ. ಮೊದಲು ಕೊಚ್ಚಿಯಲ್ಲಿ ಪ್ರಾದೇಶಿಕ ಸಮಿತಿಯನ್ನು ರಚಿಸುವುದಕ್ಕಾಗಿ ನಾನು ಶ್ರೀ ಗೋಕುಲದಾಸ ಪ್ರಭು ಮತ್ತು ಫಾ. ಏರಿಕ್ ಕ್ರಾಸ್ತಾರನ್ನು ಜೊತೆಗೂಡಿಸಿಕೊಂಡು ಕೊಚ್ಚಿಗೆ ಹೋಗಿ ಅಲ್ಲಿಯ ಶ್ರೀ ಸುಕೃತೀಂದ್ರ ಪ್ರಾಚ್ಯ ಸಂಶೋಧನಾ ಕೇಂದ್ರದ ಸಭಾ ಭವನದಲ್ಲಿ ಕೊಚ್ಚಿ-ಎರ್ನಾಕುಲಂನಲ್ಲಿರುವ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ನಡೆಸಿದೆ. ಇದರಲ್ಲಿ ಉತ್ತಮ

ಪ್ರತಿಕ್ರಿಯೆ ಕಂಡು ಬಂತು. ಆದರೆ ಈ ಉತ್ಸಾಹ ಕಾರ್ಯರೂಪಕ್ಕೆ ಬಾರದುದರಿಂದ ಈ ವಿಚಾರದಲ್ಲಿ ಮುಂದುವರಿಯುವುದು ಸಾಧ್ಯವಾಗಲಿಲ್ಲ. ಆಮೇಲೆ ನಾನು ಈ ಯೋಜನೆಯನ್ನು ಬಿಟ್ಟು ಬಿಟ್ಟೆ.

೨೦೦೬ನೇ ಇಸವಿಯಲ್ಲಿ ನಡೆಯಲಿದ್ದ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಬೆಳ್ಳಿಹಬ್ಬದ ಅಧಿವೇಶನದ ಸಿದ್ಧತೆಗಾಗಿ ನಾನು ಶ್ರೀ ಗೋಕುಲದಾಸ ಪ್ರಭು ಮತ್ತು ಡಾ. ತಾನಾಜಿ ಅವರೊಂದಿಗೆ ಮುಂಬೈ, ಗೋವೆ, ಕೊಯಕ್ಕೋಡ್, ಕೊಚ್ಚಿ ಮತ್ತು ಕರ್ನಾಟಕದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿಂಯ ಕೊಂಕಣಿ ಸಂಘ, ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದೆ.

ಕೊಂಕಣಿ ನೇತಾರರು ಹಾಗೂ ಸಂಶೋಧಕ, ಸಂಘಟಕರಾದ ಮಂಗಳೂರಿನ ಶ್ರೀ ಪೌಲ್ ಮೊರಾಸ್ ಅವರನ್ನು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಮುಂದಿನ ಅವಧಿಗೆ ಹಾಗೂ ೨೫ನೇ ವರ್ಷದ ಬೆಳ್ಳಿಹಬ್ಬ ಮಹೋತ್ಸವದ ಅಧಿವೇಶನಕ್ಕೆ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಈ ಬಾರಿಯ ಅಧಿವೇಶನವು ಗೋವೆಯ ರಾಜಧಾನಿ ಪಣಜಿಯಲ್ಲಿರುವ ಗೋವಾ ಕಲಾ ಅಕಾಡೆಮಿಯ ವಠಾರದಲ್ಲಿ ನಡೆಸುವುದೆಂದು ನಿರ್ಧಾರವಾಗಿತ್ತು.

ಫೆಬ್ರವರಿ ೨೦೦೬ರಲ್ಲಿ ನಡೆಯಲಿದ್ದ ಈ ಅಧಿವೇಶನದ ಸಮಯದಲ್ಲಿ ಕೊಂಕಣಿ ಭಾಷೆಯಲ್ಲಿ ರೋಮಿ ಮತ್ತು ಕನ್ನಡ ಲಿಪಿಗಳಿಗೂ ಅಧಿಕೃತ ಲಿಪಿ ಸ್ಥಾನ ದೊರೆಯಬೇಕೆಂಬ ಉದ್ದೇಶದಿಂದ ಕೆಲವು ಕೊಂಕಣಿ ಮುಖಂಡರು ಅಡ್ಡವಾದವನ್ನು ಮಂಡಿಸಿ ಪರಿಷತ್ತಿನ ಅಧಿವೇಶನ ನಡೆಯಲಿರುವ ಗೋವೆಯ ಕಲಾ ಅಕಾಡೆಮಿಯ ಮುಂದೆ ಪ್ರತಿಭಟನಾ ಸಭೆಯನ್ನು ನಡೆಸಿ ಅಧಿವೇಶನಕ್ಕೆ ಭಂಗ ತರಬೇಕೆಂಬ ಯೋಜನೆಯೊಂದನ್ನು ರೂಪಿಸಿಕೊಂಡಿದ್ದರು. ಆದರೆ ಅದು ನಡೆಯದಂತೆ ಗೋವೆಯ ಯುವ ಮುಖಂಡರು ತಡೆಯೊಡ್ಡಿದ್ದರಿಂದ ಪರಿಷತ್ತಿನ ಅಧಿವೇಶನಕ್ಕೆ ಯಾವುದೇ ತೊಂದರೆಯಾಗಲೀ, ಕಷ್ಟಗಳಾಗಲೀ ಎದುರಾಗಲಿಲ್ಲ. ಅದಕ್ಕೆ ಬದಲಾಗಿ ಹೆಚ್ಚು ಪ್ರಚಾರ ಸಿಕ್ಕಿದ್ದರಿಂದ ಮಂಗಳೂರಿನ ಶ್ರೀಮತಿ ಆಕ್ಟೇವಿಯಾ ಅಲ್ಬುಕರ್ಕ್ ಮತ್ತು ಶ್ರೀಮತಿ ಸಿಸಿಲಿಯಾ ಗೋವಿಯಸ್ ಅವರ ನೇತೃತ್ವದಲ್ಲಿ ಮಂಗಳೂರು, ಉಡುಪಿ, ಕುಂದಾಪುರ, ಕುಮಟಾ ಮತ್ತು ಕಾರವಾರ ಮೊದಲಾದ ಊರುಗಳಿಂದ ಸುಮಾರು ೩೦೦-೪೦೦ ಕೊಂಕಣಿ ಪ್ರೇಮಿಗಳು ಗೋವೆಗೆ ಬಂದು ಅಧಿವೇಶನದಲ್ಲಿ ಪಾಲುಗೊಂಡಿದ್ದರು. ಇವರಲ್ಲದೆ ಗೋವೆಯಿಂದಲೂ ಸುಮಾರು ೩೦೦೦ ಮಂದಿ ಬಂದಿದ್ದರು. ಇದರಿಂದ ರೋಮಿ ಮತ್ತು ಕನ್ನಡ ಲಿಪಿ ವಾದಿಗಳ ಪ್ರಯತ್ನಗಳಿಗೆ ವಿರೋಧ ವ್ಯಕ್ತಗೊಂಡದ್ದು ಸ್ಪಷ್ಟವಿತ್ತು. ಅಲ್ಲದೆ ಕೊಂಕಣಿ ಪ್ರೇಮಿಗಳು ಒಟ್ಟಿಗೆ ಸೇರುವುದಕ್ಕೂ ಇದು ಸದವಕಾಶವಾಗಿ ಪರಿಣಮಿಸಿತ್ತು.

ಅಖಿಲ ಭಾರತ ಕೊಂಕಣಿ ಪರಿಷತ್ತಿನ ಬೆಳ್ಳಿಹಬ್ಬ ಮಹೋತ್ಸವದ ಅಧಿವೇಶನವು ಫೆಬ್ರವರಿ ೧೦, ೨೦೦೬ರಂದು ಶುಕ್ರವಾರ ಸಂಜೆ ಗೋವಾ ಕಲಾ ಅಕಾಡೆಮಿಯ ಸಂಕೀರ್ಣದಲ್ಲಿ ನಡೆಯಿತು. ಈ ಅಧಿವೇಶನದ ಉದ್ಘಾಟನೆಯನ್ನು ಗೋವೆಯ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಪ್ರತಾಪ ಸಿಂಗ್ ರಾಣೆಯವರು ನಡೆಸಿದರು. ಅವರು ಮಾತನಾಡುತ್ತಾ, "ಎರಡನೆಯ ವಿಶ್ವ ಕೊಂಕಣಿ ಸಮ್ಮೇಳನವನ್ನು ಗೋವೆಯಲ್ಲಿ ನಡೆಸಿ, ನಾನು ಸರಕಾರದ ವತಿಯಿಂದ ಇಪ್ಪತ್ತೈದು ಲಕ್ಷ ರೂ ನೀಡುತ್ತೇನೆ," ಎಂದು ಘೋಷಿಸಿದ್ದರು(ಆದರೆ ಈ ವಿಚಾರವಾಗಿ ಗೋವೆಯಲ್ಲಿ ಇವತ್ತಿಗೂ ಯಾವುದೇ ಪ್ರತಿಕ್ರಿಯೆ ವ್ಯಕ್ತವಾದುದಿಲ್ಲ). ನಾನು ಪರಿಷತ್ತಿನ ಮುಂದಿನ ಅಧ್ಯಕ್ಷರಾದ ಶ್ರೀ ಪೌಲ್ ಮೊರಾಸ್ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದೆ. ಗೋವೆಯ ಸನ್ಮಾನ್ಯ ರಾಜ್ಯಪಾಲರಾಗಿದ್ದ ಶ್ರೀ ಎಸ್.ಸಿ. ಜಮೀರ್ ಅವರು ನಮಗೆ ಸನ್ಮಾನ ಮಾಡಿದರು.

ಅಧಿವೇಶನದಲ್ಲಿ "ಕೊಂಕಣಿ ಸಾಂಸ್ಕೃತಿಕ ರಾಜ್ಯ ಪರಿಕಲ್ಪನೆ" ಎಂಬ ವಿಚಾರವಾಗಿ ನಡೆದ ಚರ್ಚೆ ಬಹು ವಿಚಾರ ಪ್ರಚೋದಕವಾಗಿತ್ತು. ಸುನಾಪರಾಂತ ಪತ್ರಿಕೆಯ ಸಂಪಾದಕರಾದ ಶ್ರೀ ಸಂದೇಶ ಪ್ರಭುದೇಸಾಯಿಯವರು ಉಪಗ್ರಹವನ್ನು ಬಳಸಿ ಕೊಂಕಣಿ ಟಿವಿ ವಾಹಿನಿಯನ್ನು ಪ್ರಾರಂಭಿಸಬೇಕು ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿದ್ದರು. ಕೊಂಕಣಿ ಸಾಹಿತ್ಯದ ಮಹಾನ್ ಕವಿ ಶ್ರೀ ಮನೋಹರ ದೇಸಾಯಿಯವರ ಕುರಿತಾಗಿ ಸಾಕ್ಷಚಿತ್ರ ಪ್ರದರ್ಶನವಿತ್ತು. ಇದೇ ಸಂದರ್ಭದಲ್ಲಿ ನಡೆದ ಪುಸ್ತಕ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿದ್ದವು.

ನನ್ನೊಂದಿಗೆ ನನ್ನ ಪತ್ನಿ ಸಾವಿತ್ರಿ, ತಂಗಿ ಶಾಲಿನಿ ಇದ್ದರು. ಮುಂಬೈಯಿಂದ ಶ್ರೀ ಜೆ.ಬಿ. ಸಿಕ್ವೇರಾ ಮತ್ತು ಅವರ ಪತ್ನಿ ಬಂದಿದ್ದರು. ಸಾವಿತ್ರಿ ಮತ್ತು ಶಾಲಿನಿಯರನ್ನು ಸಿಕ್ವೇರಾರ ಪತ್ನಿಯೊಂದಿಗೆ ದೇವಾಲಯಗಳನ್ನು ಮತ್ತು ಇಗರ್ಜಿಗಳನ್ನು ನೋಡಲು ಟ್ಯಾಕ್ಸಿ ಮಾಡಿ ಕಳುಹಿಸಿಕೊಟ್ಟಿದ್ದೆ.

●●

೪೧. ಕೊಂಕಣಿ ಅಸ್ಮಿತೆ : ಶೆಣೈ ಗೊಂಯಬಾಬ–೧೨೫ನೇ ಜಯಂತಿ ಆಚರಣೆ

ಶೆಣೈ ಗೊಂಯುಬಾಬ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ ದಿವಂಗತ ವಾಮನರಾವ್ ರಘುನಾಥರಾವ್ ವರ್ದೇ ವಾಲಾವಲಿಕರ್ ಅವರನ್ನು "ಕೊಂಕಣಿ ಚಳವಳಿಯ ಪಿತಾಮಹ"ರೆಂದು ಗುರುತಿಸುತ್ತಾರೆ. ಅವರು ಪ್ರಾರಂಭಿಸಿದ ಕೊಂಕಣಿ ಚಳವಳಿಯ ಕಾರ್ಯಗಳಿಂದ ಮುಂಬೈಯಿಂದ ಹಿಡಿದು ಕೊಚ್ಚಿಯವರೆಗೆ ಹರಡಿಕೊಂಡಿದ್ದ ಕೊಂಕಣಿ ಸಮಾಜದಲ್ಲಿ ಕೊಂಕಣಿ ಮಾತೃಭಾಷೆಯ ಕುರಿತು ಅಭಿಮಾನ ಮತ್ತು ಆಸಕ್ತಿ ಜಾಗೃತವಾಗಿತ್ತು. ೨೦೦೨ನೇ ಇಸವಿಯಲ್ಲಿ ಶೆಣೈ ಗೊಂಯ ಬಾಬ್ ಅವರ ೧೨೫ನೇ ಜನ್ಮ ವರ್ಧಂತಿಯನ್ನು ಕರ್ನಾಟಕದಲ್ಲಿ "ಕೊಂಕಣಿ ಅಸ್ಮಿತೆಯ ವರ್ಷ"ವಾಗಿ ಆಚರಿಸುವುದೆಂದು ನಾವು ಕೊಂಕಣಿ ಭಾಷೆ ಮತ್ತು ಪ್ರತಿಷ್ಠಾನದ ವತಿಯಿಂದ ನಿರ್ಧರಿಸಿ, "ಶೆಣೈ ಗೊಂಯಬಾಬಾಲೆ ಜೀವಿತ್ ಆನಿ ಕಾರ್ಯೆಂ" ಎಂಬ ಕೃತಿಯ ೫೦೦೦ ಪ್ರತಿಗಳನ್ನು ಪ್ರಕಟಿಸಿದೆವು. ಈ ಗ್ರಂಥವನ್ನು ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಉತ್ತರ ಕನ್ನಡ ಜಿಲ್ಲೆ, ಮೈಸೂರು, ಬೆಂಗಳೂರು ಮತ್ತು ಮುಖ್ಯವಾಗಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೊಂಕಣಿ ಜನರ ಆಡಳಿತವಿರುವ ಶಾಲೆಗಳ ವಿದ್ಯಾರ್ಥಿಗಳಿಗೆ ಹಂಚಿ, ಅದರಲ್ಲಿರುವ ವಿಷಯದ ಕುರಿತು ಕ್ವಿಜ್, ಪ್ರಬಂಧ ಮತ್ತು ಭಾಷಣ ಸ್ಪರ್ಧೆಯನ್ನು ಏರ್ಪಡಿಸಿದ್ದೆವು. ಆಮೇಲೆ ಬೇರೆ ಬೇರೆ ಊರುಗಳಲ್ಲಿ ಶೆಣೈ ಗೊಂಯಬಾಬ್ ಅವರ ೧೨೫ನೇ ವರ್ಧಂತಿಯ ಆಚರಣೆಯನ್ನು ಹಮ್ಮಿಕೊಂಡು, ನಾವು ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಬಹುಮಾನ ವಿತರಣ ಕಾರ್ಯಕ್ರಮವನ್ನೂ ನಡೆಸಿದ್ದೆವು. ಇದು ರಾಜ್ಯಮಟ್ಟದ ಯೋಜನೆಯಾಗಿದ್ದರಿಂದ, ಕರ್ನಾಟಕದಲ್ಲಿರುವ ಕೊಂಕಣಿ ಜನರಿಗೆ ಶೆಣೈ ಗೊಂಯಬಾಬ್ ಅವರ ಬದುಕು, ಅವರು ಕೊಂಕಣಿ ಭಾಷೆ, ಸಾಹಿತ್ಯ, ಕಲಾ ಪ್ರಕಾರ ಹಾಗೂ ಲೋಕವೇದ ಇತ್ಯಾದಿ ಕ್ಷೇತ್ರಗಳಲ್ಲಿ ನಡೆಸಿದ ಸಾಧನೆಗಳು ಮತ್ತು ಜನರಲ್ಲಿ ಕೊಂಕಣಿ ಅಸ್ಮಿತೆಯನ್ನು ಜಾಗೃತಗೊಳಿಸಲು, ಅಭಿಮಾನ ಬೆಳೆಸಲು ಹಾಗೂ ಅವರು ಕೈಗೆತ್ತಿಕೊಂಡ ಮತ್ತು ನಡೆಸಿದ ಮಹತ್ವಪೂರ್ಣ ಕೊಂಕಣಿ ಕಾರ್ಯಗಳನ್ನು ತಿಳಿದುಕೊಳ್ಳುವ ಹಾಗಾಯಿತು.

ಡಿಸೆಂಬರ್ ೧, ೨೦೦೨ರಂದು ಮಂಗಳೂರಿನ ಕಲಾಂಗಣದಲ್ಲಿ ಗೋವೆಯ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಲಿಯೋಜಿನ ಫೆಲೆರೊ ಅವರು ಶೆಣೈ ಗೊಂಯಬಾಬರ ವರ್ಣಚಿತ್ರವನ್ನು ಅನಾವರಣಗೊಳಿಸಿದರು ಮತ್ತು ದೀಪ ಹಚ್ಚುವ ಮೂಲಕ "ಶೆಣೈ ಗೊಂಯಬಾಬ ಅಸ್ಮಿತೆಯ ವರ್ಷ"ದ ಉದ್ಘಾಟನೆಯನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಮತ್ತು ಗೋವಾ ರಾಜ್ಯದ ವಿವಿಧ ಊರುಗಳಿಂದ ಬಂದಿದ್ದ ಹದಿನಾಲ್ಕು ಮಂದಿ ಕೊಂಕಣಿ ನೇತಾರರು ಭಾಗವಹಿಸಿದ್ದರು. ಅವರಿಗೆ ನಾನು ಬರೆದ ಶ್ರೀ ಶೆಣೈ ಗೊಂಯಬಾಬರ ಕೃತಿಯನ್ನು ನೀಡಿದೆ.

●●

೪೨. ವಿಶ್ವ ಸಾರಸ್ವತ ಸಮ್ಮೇಳನ

ಸಮ್ಮೇಳನದ ಪೂರ್ವ ಸಿದ್ಧತೆ

೧೯೭೫ನೇ ಇಸವಿಯಲ್ಲಿ ಮುಂಬೈಯ ಪ್ರಸಿದ್ಧ ನ್ಯಾಯವಾದಿಗಳೂ, ಆದಾಯಕರ ಸಲಹೆಗಾರರು ಮತ್ತು ಸರಸ್ವತಿ ವಿದ್ಯಾ ಕೇಂದ್ರದ ಅಧ್ಯಕ್ಷರೂ ಆಗಿದ್ದ ಮಹಾದಾನಿ ಹಾಗೂ ಸಾಮಾಜಿಕ ನೇತಾರ ಶ್ರೀ ಎಸ್.ವಿ. ಪಿಕಳೆಯವರಿಂದ ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘ (All India Saraswat Cultural Association-AISCO) ಮುಂಬೈಯಲ್ಲಿ ಸ್ಥಾಪನೆಯಾಗಿದೆ. ಇದರ ಉದ್ಘಾಟನೆಯನ್ನು ಆಗ ರೈಲ್ವೇ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಟಿ.ಎ.ಪೈಯವರು ನಡೆಸಿ ಶ್ರೀ ಪಿಕಳೆಯವರಿಗೆ ಪ್ರೋತ್ಸಾಹ ನೀಡಿದ್ದರು. (ಮಾನ್ಯ ಶ್ರೀ ಪಿಕಳೆಯವರು ಇತ್ತೀಚಿಗೆ ನಿಧನ ಹೊಂದಿದ್ದಾರೆ.)

ದೇಶದಾದ್ಯಂತ ನೆಲೆಸಿರುವ ಸಾರಸ್ವತ ಸಮುದಾಯವನ್ನು ಒಟ್ಟುಗೂಡಿಸಿ, ಅವರಿಗೆ ನಮ್ಮ ಸಂಸ್ಕೃತಿ, ಸಂಸ್ಕಾರ, ಮತ್ತು ಚರಿತ್ರೆಯ ಹಿರಿತನವನ್ನು ಮನಗಾಣಿಸಿ, ಅವರಲ್ಲಿ ಅಭಿಮಾನ ಬೆಳೆಸಬೇಕೆಂಬುದು ಈ ಸಂಘದ ಮುಖ್ಯ ಉದ್ದೇಶವಾಗಿದ್ದರೆ, ಕಾಶ್ಮೀರಿ ಪಂಡಿತರು, ಪಂಜಾಬ್, ಗುಜರಾತ್, ರಾಜಸ್ಥಾನ, ಮಹರಾಷ್ಟ್ರ, ಕರ್ನಾಟಕ, ಗೋವ ಹಾಗೂ ಕೇರಳ ರಾಜ್ಯಗಳಲ್ಲಿರುವ ಬೇರೆ ಬೇರೆ ಸಾರಸ್ವತ ಸಮುದಾಯದವರನ್ನು ಒಂದೇ ಸಂಸ್ಥೆಯ ಕೆಳಗೆ ಸಂಘಟಿಸುವ ಆಶಯ ಈ ಸಂಘದ್ದಾಗಿತ್ತು.

ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘದ ಪ್ರಥಮ ಅಧಿವೇಶನ ೧೯೭೫ರಲ್ಲಿ, ಎರಡನೆಯ ಅಧಿವೇಶನ ೧೯೭೬ರಲ್ಲಿ ಮುಂಬೈಯಲ್ಲಿ ನಡೆದಿದ್ದರೆ, ಮೂರನೆಯ ಅಧಿವೇಶನವು ೧೯೭೭ರಲ್ಲಿ ಮಂಗಳೂರಿನಲ್ಲಿ ನಡೆದಿತ್ತು. ಆಮೇಲೆ ಸಂಘ ಹೆಚ್ಚು ಕ್ರಿಯಾಶೀಲವಾಗಿ ಇರಲಿಲ್ಲ. ಮಂಗಳೂರು ಅಧಿವೇಶನದಲ್ಲಿ ನಾನು ಭಾಗಿಯಾಗಿದ್ದೆ. ಹೀಗಿರುವಾಗ, ೧೯೯೨ರ ಡಿಸೆಂಬರ್ ಕೊನೆಯ ಭಾಗದಲ್ಲಿ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನವನ್ನು ಮುಂಬೈಯಲ್ಲಿ ನಡೆಸುವುದೆಂದು ಸಂಘದ ಮುಖ್ಯಸ್ಥರು ನಿರ್ಧಾರಿಸಿದ್ದರು. ಸಮ್ಮೇಳನದ ಯಶಸ್ಸಿಗಾಗಿ ಶ್ರೀ ಎಸ್.ವಿ. ಪಿಕಳೆಯವರು ಸಾರಸ್ವತರ ಶ್ರೀ ಕೈವಲ್ಯಮಠ, ಶ್ರೀ ಗೋಕರ್ಣ ಮಠ, ಶ್ರೀ ಕಾಶೀಮಠ ಮತ್ತು ಶ್ರೀ ಚಿತ್ರಾಪುರ ಮಠಾಧೀಶರ ಆಶೀರ್ವಾದ ಮತ್ತು ಫಲ ಮಂತ್ರಾಕ್ಷತೆಯನ್ನು ಪಡೆದು ಪೂರ್ವ ಸಿದ್ದತೆಯನ್ನೂ ನಡೆಸಿದ್ದರು. ಆದರೆ, ೧೯೯೨, ಡಿಸೆಂಬರ್ ೬ ರಂದು ಅಯೋಧ್ಯೆಯ ಬಾಬರಿ ಮಸಿದಿಯನ್ನು ಧ್ವಂಸಗೊಳಿಸಿದ ಪ್ರಕರಣದಿಂದ ದೇಶದಲ್ಲಿ ಆತಂಕಕಾರಿ ಪರಿಸ್ಥಿತಿ ಮೂಡಿತ್ತು. ಈ ಕಾರಣದಿಂದಾಗಿ ಅದೇ ತಿಂಗಳು ನಡೆಯಬೇಕಾಗಿದ್ದ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನವನ್ನು ರದ್ದು ಪಡಿಸಬೇಕಾಗಿ ಬಂತು.

ಅನಂತರ ಸಮ್ಮೇಳನವನ್ನು ೧೯೯೩ರಲ್ಲಿ ನಡೆಸುವುದೆಂದು ತೀರ್ಮಾನಿಸಲಾಯಿತು. ಅದರೆ ೧೯೯೩ರಲ್ಲಿ ಮುಂಬೈಯಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದಿಂದ ಸಮ್ಮೇಳನವನ್ನು ಎರಡನೆಯ ಬಾರಿ ರದ್ದು ಪಡಿಸಬೇಕಾಗಿ ಬಂತು. ಅನಂತರದ ವರ್ಷಗಳಲ್ಲಿ ಸಮ್ಮೇಳನವನ್ನು ನಡೆಸಲು ಮಾನ್ಯ ಪಿಕಳೆಯವರಿಗಾಗಲೀ, ಅಥವಾ ಸಂಘದ ವರಿಷ್ಠರಿಗಾಗಲೀ ಯಾವ ಅಡ್ಡಿ ಎದುರಾಗಿತ್ತೋ ಗೊತ್ತಿಲ್ಲ. ಒಟ್ಟಾರೆ ಆ ಸಮ್ಮೇಳನ ನಡೆಯಲು ಕಾಲ ಕೂಡಿ ಬರಲಿಲ್ಲ ಎಂದು ಹೇಳಬಹುದು.

೧೯೯೫ನೇ ಇಸವಿಯಲ್ಲಿ ಮಂಗಳೂರಿನಲ್ಲಿ ನಡೆದ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನದ ಸಂದರ್ಭದಲ್ಲಿ ನಾನು ಅದರ ಮುಖ್ಯ ಸಂಚಾಲಕನಾಗಿ ಮಾಡಿದ ಕೆಲಸ ಕಾರ್ಯಗಳು ಮತ್ತು ನಾನು ಉತ್ತರದ ದೆಹಲಿಯಿಂದ ಹಿಡಿದು ದಕ್ಷಿಣದ ಕೊಚ್ಚಿಯವರೆಗೆ ಸಂಚರಿಸಿ ವಿವಿಧ ಜಾತಿ, ಮತಗಳಿಗೆ ಸೇರಿದ ಕೊಂಕಣಿ ಜನರನ್ನು ಒಂದೆಡೆ ಸೇರಿಸಿದ್ದು ಶ್ರೀ ಪಿಕಳೆಯವರ ಗಮನಕ್ಕೆ ಬಂದಿರಬೇಕು. ವಿಶ್ವ ಕೊಂಕಣಿ ಸಮ್ಮೇಳನದ ಪೂರ್ವ ತಯಾರಿಯ ಒಂದೂವರೆ ವರ್ಷದ ಕಾಲಾವಧಿಯಲ್ಲಿ ಮಾನ್ಯ ಶ್ರೀ ಪಿಕಳೆಯವರು ಮುಂಬೈಯಲ್ಲಿ ಪ್ರಾದೇಶಿಕ ಸಮಿತಿಯನ್ನು ರಚಿಸಿ ನಮ್ಮ ಸಮ್ಮೇಳನಕ್ಕೆ ಅಪಾರ ನೆರವು ನೀಡಿದ್ದರು. ಅದಲ್ಲದೆ ಸಮ್ಮೇಳನ ನಡೆದಾಗ ಅವರು ಪತ್ನಿ ಸಮೇತರಾಗಿ ಮಂಗಳೂರಿಗೆ ಬಂದು ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಆ

ದಿನಗಳಲ್ಲಿ ನನ್ನಲ್ಲಿದ್ದ ಜನರನ್ನು ಸಂಘಟಿಸುವ ಕಲೆ, ಸಾಮರ್ಥ್ಯವನ್ನು ನೋಡಿ ನನ್ನ ಕುರಿತು ಅವರ ಹೃದಯದಲ್ಲಿ ತುಂಬಾ ಅಭಿಮಾನ ಬೆಳೆಸಿಕೊಂಡು ಬಂದಿದ್ದರು.

೧೯೯೮ರಲ್ಲಿ ಶ್ರೀ ಪಿಕಳೆಯವರು ನನ್ನನ್ನು ಮುಂಬೈಗೆ ಕರೆಯಿಸಿಕೊಂಡಿದ್ದರು. ನಾನು ಶ್ರೀ ಜೆ.ಬಿ. ಸಿಕ್ವೇರಾ ಅವರೊಂದಿಗೆ ಮುಂಬೈಯಲ್ಲಿದ್ದ ಪಿಕಳೆಯವರ ಮನೆಗೆ ಹೋದಾಗ, ಹಿಂದೆ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸಲು ಎಐಎಸ್‌ಸಿಒ ಎರಡು ಬಾರಿ ಪ್ರಯತ್ನ ನಡೆಸಿದರೂ, ಅದು ಸಫಲಗೊಳ್ಳದ್ದರಿಂದ ಈ ಬಾರಿ ನನ್ನ ನೇತೃತ್ವದಲ್ಲಿ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸಿಕೊಡಬೇಕೆಂಬ ಅಭಿಪ್ರಾಯವನ್ನು ಅವರು ನನ್ನಲ್ಲಿ ವ್ಯಕ್ತಪಡಿಸಿದರು.

ಉನ್ನತ ವ್ಯಕ್ತಿತ್ವದ ಮಹಾದಾನಿ, ಮಹಾ ಮಹಿಮರೆನಿಸಿಕೊಂಡಿರುವ ಶ್ರೀ ಎಸ್.ವಿ. ಪಿಕಳೆಯವರು ನನ್ನ ಮೇಲಿರುವ ವಿಶ್ವಾಸದಿಂದ, ತಮ್ಮ ಜೀವಮಾನದಲ್ಲಿ ತಾನು ಸಾಧಿಸಲಾಗದ ಒಂದು ದೊಡ್ಡ ಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ನನ್ನಲ್ಲಿ ವಿನಂತಿಸಿಕೊಂಡಾಗ, ನನಗೆ ಅದನ್ನು ನಿರಾಕರಿಸುವುದು ಸಾಧ್ಯವಾಗಲಿಲ್ಲ. ಅಲ್ಲದೆ, ಸಮ್ಮೇಳನದ ಸಂಪೂರ್ಣ ಖರ್ಚುವೆಚ್ಚಗಳನ್ನು ಎಐಎಸ್‌ಸಿಒ ನೋಡಿಕೊಳ್ಳುವುದೆಂದು ಹೇಳಿದ್ದರಿಂದ ನಾನು ಅವರ ಕೋರಿಕೆಗೆ ಒಪ್ಪಿಕೊಂಡೆ. ಅದಕ್ಕಾಗಿ ಒಂದು ಕಾರ್ಯಸೂಚಿಯನ್ನು ತಯಾರಿಸಿ ನೀಡುವುದಾಗಿ ತಿಳಿಸಿದೆ.

ಇತ್ತೀಚೆಗಷ್ಟೇ ಮಂಗಳೂರಿನಲ್ಲಿ ಒಂದು ಚಾರಿತ್ರಿಕ ಮಟ್ಟದಲ್ಲಿ ವಿಶ್ವ ಕೊಂಕಣಿ ಸಮೇಳನ ನಡೆದದ್ದರಿಂದ, ವಿಶ್ವ ಸಾರಸ್ವತ ಸಮ್ಮೇಳನವನ್ನು ಮುಂಬೈ ಅಥವಾ ಬೆಂಗಳೂರಿನಲ್ಲಿ ನಡೆಸಿದರೆ ಉತ್ತಮವೆಂದು ನಾನು ಆಗಲೇ ಸೂಚನೆಯನ್ನೂ ನೀಡಿದೆ. ಅದಕ್ಕೆ ಶ್ರೀ ಪಿಕಳೆಯವರು ಮುಂಬೈಯಲ್ಲಿ ಈ ವಿಶ್ವ ಸಮ್ಮೇಳನವನ್ನು ನಡೆಸಲು ಇರುವ ತೊಂದರೆಗಳನ್ನು ವಿವರಿಸಿದರು. ಅದಕ್ಕಾಗಿ ನಾವು ಬೆಂಗಳೂರಿನಲ್ಲಿ ನಮ್ಮ ಸಮಾಜದ ನೇತಾರರೂ ಹಾಗೂ ಮಹಾದಾನಿಗಳಾದ ಶ್ರೀ ಪಿ. ದಯಾನಂದ ಪೈ ಅವರನ್ನು ಭೇಟಿಯಾಗಿ ವಿಚಾರ ವಿನಿಮಯ ನಡೆಸುವುದೆಂದು ತಿರ್ಮಾನಿಸಿದೆವು.

ಅದೇ ರೀತಿ ಕೆಲವೇ ದಿನಗಳಲ್ಲಿ, ಅಂದರೆ ಫೆಬ್ರವರಿ ೧೪, ೧೯೯೮ರಂದು ಶನಿವಾರ ನಾವು ಬೆಂಗಳೂರಿಗೆ ಹೋದೆವು. ಪಿಕಳೆಯವರೊಂದಿಗೆ ಬಂಟವಾಳ ಶ್ರೀ ಕೃಷ್ಣ ಸೀತಾರಾಮ್ ಭಟ್ ಅವರೂ ಬಂದಿದ್ದರು. ನಾನು ಮತ್ತು ಪಿಕಳೆಯವರು ಬಂದಿರುವ ವಿಚಾರವನ್ನು ದೂರವಾಣಿಯ ಮೂಲಕ ತಿಳಿಸಿದಾಗ, ಸ್ವತಃ ದಯಾನಂದ ಪೈಯವರೇ ತಮ್ಮ ಕಾರಿನಲ್ಲಿ ನಾವು ಉಳಿದುಕೊಂಡಿದ್ದ ಹೊಟೇಲಿಗೆ ಬಂದು ನಮ್ಮನ್ನು ಭೇಟಿಯಾದರು. ನಾವು ನಮ್ಮ ಕಾರ್ಯ ಯೋಜನೆಯನ್ನು ಅವರಿಗೆ ತಿಳಿಸಿದಾಗ, ಅವರು ಸದ್ಯ ತನಗೆ ಬಿಡುವಿಲ್ಲವೆಂದೂ, ಬೆಂಗಳೂರಿನಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಮ್ಮೇಳನ ನಡೆಸಲು ಕಾರ್ಯಕರ್ತರ ಕೊರತೆ ಇರುವುದನ್ನೂ ತಿಳಿಸಿದರು. ಒಂದು ವೇಳೆ ಮಂಗಳೂರಿನಲ್ಲಿ ಸಮ್ಮೇಳನವನ್ನು ನಡೆಸುವುದಾದರೆ ತಾನು ಎಲ್ಲಾ ರೀತಿಯಲ್ಲಿ ಸಹಕಾರ ನೀಡುವೆ ಎಂದು ಹೇಳಿದರು. ಹೀಗಾಗಿ ಬೆಂಗಳೂರಿನಲ್ಲಿ ವಿಶ್ವ ಸಮ್ಮೇಳನವನ್ನು ನಡೆಸುವುದು ಅಸಾಧ್ಯವೆಂದು ತೀರ್ಮಾನವಾಯಿತು.

ಶ್ರೀ ಪಿಕಳೆಯವರು ಮತ್ತು ಶ್ರೀ ಕೃಷ್ಣ ಭಟ್ಟರು ಮಂಗಳೂರಿನಲ್ಲಿಯೇ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸುವಂತೆ ನನ್ನನ್ನು ಒತ್ತಾಯಪಡಿಸಿದರು. ಅದಕ್ಕೆ ನಾನು ಶ್ರೀ ಕೆ.ಕೆ.ಪೈ ಹಾಗೂ ಸಮಾಜದ ಇತರ ಹಿರಿಯರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಅವರ ಒಪ್ಪಿಗೆ ಪಡೆದು ತಿಳಿಸುವುದಾಗಿ ಹೇಳಿದೆ. ಅವರು ಈ ವಿಷಯವನ್ನು ಎಐಎಸ್‌ಸಿಒ ದ ಕಾರ್ಯಕಾರಿ ಸಮಿತಿಯ ಮುಂದೆ ಇಟ್ಟು ನಿರ್ಣಯ ಕೈಗೊಳ್ಳುವುದಾಗಿ ನನಗೆ ತಿಳಿಸಿದರು.

ಮರುದಿನ ನಾನು ಮಂಗಳೂರಿಗೆ ಹಿಂತಿರುಗಿ ಬಂದು, ಮಣಿಪಾಲದಲ್ಲಿರುವ ಶ್ರೀ ಕೆ.ಕೆ.ಪೈ, ಮಂಗಳೂರಿನಲ್ಲಿರುವ ಶ್ರೀ ಕಸ್ತೂರಿ ಮಂಗೇಶ ಪೈ, ಶ್ರೀ ಎಂ. ರಂಗ ಪೈ, ಭಾರತ ಬೀಡಿಯ ಅಧ್ಯಕ್ಷರಾಗಿದ್ದ ಶ್ರೀ ಬಿ. ಗಣಪತಿ ಪೈ, ಕುಡ್ವಿ ಜಗದೀಶ ಶೆಣೈ, ಡಾ. ಕಸ್ತೂರಿ ಮೋಹನ ಪೈ, ವೆಂಕಟೇಶ ಬಾಳಿಗ ಮೊದಲಾದವರಲ್ಲಿ ಸಮ್ಮೇಳನದ ಪ್ರಸ್ತಾಪ ಮಾಡಿದೆ. ಅವರು ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಲು ತಮ್ಮ ಬೆಂಬಲವನ್ನು ಒದಗಿಸುವುದಾಗಿ ಆಶ್ವಾಸನೆ ನೀಡಿದರು.

ಉಡುಪಿ ಮತ್ತು ಮಂಗಳೂರಿನ ಸಾರಸ್ವತ ಸಮಾಜದ ಹಿರಿಯರ ಸಭೆಯನ್ನು ಮಂಗಳೂರಿನ ಮೈದಾನ ತಾಜಮಹಲ್ ಹೊಟೇಲಿನ ಸಭಾಂಗಣದಲ್ಲಿ ಏಪ್ರಿಲ್ ೪, ೧೯೯೮ರಂದು ಶನಿವಾರದ ದಿನ ನಡೆಸಲಾಯಿತು. ಈ ಸಭೆಗೆ ಅನೇಕ ಮಹನೀಯರು ಬಂದು ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಮಣಿಪಾಲದ ಶ್ರೀ ಕೆ.ಕೆ.ಪೈಯವರು

ವಹಿಸಿಕೊಂಡಿದ್ದರು. ನಾನು ಪ್ರಸ್ತಾವನಾ ಭಾಷಣ ಮಾಡಿದೆ. ಸಭೆಯಲ್ಲಿದ್ದ ಒಂದಿಬ್ಬರು ವ್ಯಕ್ತಿಗಳು ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸುವುದರ ಕುರಿತು ತಮ್ಮ ಅಸಮ್ಮತಿಯನ್ನು ಸೂಚಿಸಿದರಾದರೂ, ಉಳಿದೆಲ್ಲರೂ "ವಿಶ್ವ ಸಾರಸ್ವತ ಸಮ್ಮೇಳನವನ್ನು ಮಂಗಳೂರಿನಲ್ಲಿ ಆಯೋಜಿಸಿದರೆ ದೇಶ ವಿದೇಶಗಳಲ್ಲಿ ನೆಲೆಸಿರುವ, ಕಾಶ್ಮೀರದಿಂದ ಕೊಚ್ಚಿಯವರೆಗೆ ಹರಡಿಕೊಂಡಿರುವ ಸಾರಸ್ವತರಿಗೆ ಮಂಗಳೂರಿಗೆ ಬರುವುದಕ್ಕೆ ಮತ್ತು ನಾವು ಅವರಿಗೆ ಆತಿಥ್ಯವನ್ನು ನೀಡುವುದಕ್ಕೆ ಸುವರ್ಣಾವಕಾಶ ಸಿಗುವಂತಾಗುತ್ತದೆ. ಹೀಗಾಗಿ ಸಮ್ಮೇಳನವನ್ನು ಮಂಗಳೂರಿನಲ್ಲಿ ನಡೆಸಬೇಕು" ಎಂದು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. ಶ್ರೀ ಕೆ.ಕೆ. ಪೈಯವರು ಸವಿಸ್ತಾರವಾಗಿ ಭಾಷಣ ನೀಡಿದರು. ನಾನು ಈ ಕುರಿತು ಮಾಹಿತಿ ನೀಡಿ ಶ್ರೀ ಎಸ್.ವಿ. ಪಿಕಳೆಯವರಿಗೆ ವರದಿ ಕಳುಹಿಸಿ ಕೊಟ್ಟೆ.

ಆ ಮೇಲೆ ಕೆಲವು ದಿನಗಳು ಕಳೆದ ಬಳಿಕ ನನಗೆ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನದ ಸಿದ್ಧತೆ, ವ್ಯವಸ್ಥೆಯ ಕುರಿತು ಕಾರ್ಯಸೂಚಿ ಪತ್ರವನ್ನು(Working Paper) ತಯಾರಿಸಿ ಮುಂಬೈಗೆ ಬಂದು ಎಐಎಸ್‌ಸಿಐ ದ ಕಾರ್ಯಕಾರಿ ಮಂಡಳಿಯ ಮುಂದೆ ಅದನ್ನು ಮಂಡಿಸುವಂತೆ ಶ್ರೀ ಪಿಕಳೆಯವರ ಪತ್ರ ಬಂತು. ಅದಕ್ಕಾಗಿ ನಾನು ೧೯೯೮, ನವೆಂಬರ್ ೧೬ ರಂದು ಮುಂಬೈ ತಲುಪಿ, ಅದೇ ದಿನ ಸಂಜೆ ಶ್ರೀ ಎನ್.ವಿ. ಗುಂಜೀಕರರ "ಅಶ್ವಮೇಧ" ಕಚೇರಿಯಲ್ಲಿ ನಡೆದ ಎಐಎಸ್‌ಸಿಐ ಕಾರ್ಯಕಾರಿ ಮಂಡಳಿಯ ಸಭೆಯ ಮುಂದೆ ನನ್ನ ಕಾರ್ಯಸೂಚಿ ಪತ್ರವನ್ನು ಮಂಡಿಸಿದೆ. ಸಮ್ಮೇಳನಕ್ಕಾಗಿ ಹಣ ಸಂಗ್ರಹಿಸುವ ಎಲ್ಲಾ ಜವಾಬ್ದಾರಿಗಳನ್ನು ಅವರೇ ವಹಿಸಿಕೊಳ್ಳುವುದು ಮತ್ತು ಮಂಗಳೂರಿನಲ್ಲಿ ಕೋರ್ ಕಮಿಟಿಯನ್ನು ರಚಿಸುವುದು ಎಂದು ಸಭೆಯಲ್ಲಿ ನಿರ್ಣಯವಾಯಿತು. ಅದೇ ದಿನ ರಾತ್ರಿ ಶ್ರೀ ವಡಾಲಾ ಮಠದಲ್ಲಿ ಮೊಕ್ಕಾಂ ಹೂಡಿದ್ದ ಶ್ರೀ ಗೋಕರ್ಣ ಪರ್ತಗಾಳಿ ಮಠಾಧೀಶರಾದ ಶ್ರೀ ವಿದ್ಯಾಧೀರಾಜ ಸ್ವಾಮೀಜಿಯವರಲ್ಲಿ ಆಶೀರ್ವಾದ ಮತ್ತು ಫಲ ಮಂತ್ರಾಕ್ಷತೆಯನ್ನು ಪಡೆಯಲಾಯಿತು.

ಮರುವರ್ಷ(೧೯೯೯) ಸಮ್ಮೇಳನದ ಪೂರ್ವ ತಯಾರಿಯಲ್ಲಿಯೇ ಕಳೆಯಿತು. ಸಮ್ಮೇಳನದ ಸಂಘಟನೆಗಾಗಿ ಬೇರೆ ಬೇರೆ ಊರುಗಳಿಗೆ ಹೋಗಿ, ಅಲ್ಲಿರುವ ಸಾರಸ್ವತ ಸಮಾಜದವರನ್ನು ಭೇಟಿಯಾಗಿ, ಅವರಲ್ಲಿ ನಾವೆಲ್ಲರೂ ಒಂದಾಗಬೇಕೆಂಬ ಸಾರಸ್ವತ ತತ್ವವನ್ನು ಉದ್ದೀಪನಗೊಳಿಸಿ, ಅವರು ಸಾರಸ್ವತ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವಂತಾಗಲು ದಶಂಬರ ತಿಂಗಳಲ್ಲಿ ಮಂಗಳೂರಿನಲ್ಲಿ ನಡೆಯಲಿದ್ದ ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಬರುವಂತೆ ಮಾಡುವ ಕಾರ್ಯದಲ್ಲಿ ನಿರತನಾದೆನು. ಈ ಮಹತ್ವಪೂರ್ಣ ಕಾರ್ಯದಲ್ಲಿ ನನಗೆ ಹಿಂದೆ ವಿಶ್ವ ಕೊಂಕಣಿ ಸಮ್ಮೇಳನವನ್ನು ನಡೆಸುವಲ್ಲಿ ದೊರೆತ ಅನುಭವ ಮತ್ತು ಆ ಅನುಭವದ ಪ್ರಭಾವ ತುಂಬಾ ನೆರವಿಗೆ ಬಂತು.

೧೯೯೯, ಫೆಬ್ರವರಿ ೨ರಂದು ಮಂಗಳವಾರ ಸಂಜೆ ಕೆನರಾ ಪ್ರೌಢಶಾಲೆಯ ಮೈದಾನಿನಲ್ಲಿ "ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ"ದ ಪಥಕ್ರಮಣ ವಿಧಿ(Launching Ceremony) ನಡೆಯಿತು. ಇದರಲ್ಲಿ ಮುಖ್ಯ ಅತಿಥಿಗಳಾಗಿ ಕೇಂದ್ರ ಸರಕಾರದ ಸಚಿವರಾಗಿದ್ದ ಮಾನ್ಯ ಶ್ರೀ ಸುರೇಶ ಪಿ. ಪ್ರಭು ಮತ್ತು ಅಧ್ಯಕ್ಷರಾಗಿ ಶ್ರೀ ಎಸ್.ವಿ. ಪಿಕಳೆ ಭಾಗವಹಿಸಿದ್ದರು. ನಾವು ಸಾರಸ್ವತ ಮುನಿಯ ದೊಡ್ಡ ಪ್ರತಿಮೆಯನ್ನು ನಿರ್ಮಿಸಿ ವೇದಿಕೆಯ ಮೇಲೆ ಇರಿಸಿದ್ದೆವು. ಶ್ರೀ ಸುರೇಶ ಪ್ರಭು ಮತ್ತು ಶ್ರೀ ಕೆ.ಕೆ. ಪೈಯವರು ಮಹೂರ್ತದ ಎರಡು ನುಡಿಗಳನ್ನಾಡಿ ಸಮ್ಮೇಳನದ ಘೋಷಣೆ ಮಾಡಿದರು. ಆಮೇಲೆ ಅವರಿಗೆ ಸನ್ಮಾನ ಮಾಡಲಾಯಿತು. ಶಿರಸಿಯ ಶ್ರೀ ವಾಸುದೇವ ಶಾನಭಾಗರ ಕೊಂಕಣಿ ಕಲಾ ಮಂಡಳಿಯ ವತಿಯಿಂದ "ಶ್ರೀಕೃಷ್ಣ ಪಾರಿಜಾತ" ಸಂಗೀತ ನಾಟಕ ಕಾರ್ಯಕ್ರಮವೂ ನಡೆದು ಅಲ್ಲಿ ಸೇರಿದ ಜನರಿಗೆ ಮನರಂಜನೆಯೂ ದೊರಕಿತು. ಮುಹೂರ್ತ ಕಾರ್ಯಕ್ರಮದ ಬಳಿಕ ವಿಶ್ವ ಸಾರಸ್ವತ ಸಮ್ಮೇಳನದ ಕಾರ್ಯಕ್ಕೆ ಚಾಲನೆ ದೊರೆಯಿತು ಎಂದು ಹೇಳಬಹುದು.

ಅಷ್ಟರೊಳಗೆ ನಾನು ಶ್ರೀ ಕೆ.ಕೆ.ಪೈ ಮತ್ತು ಬಿ. ದಾಮೋದರ ಪ್ರಭು, ಕುಡ್ವಿ ಜಗದೀಶ ಶೆಣೈ, ವೆಂಕಟೇಶ ಎನ್. ಬಾಳಿಗ ಹಾಗೂ ಎಂ. ರಂಗ ಪೈ ಅವರೊಂದಿಗೆ ವಿಚಾರ ವಿನಿಮಯ ಮಾಡಿ ವಿಶ್ವ ಸಾರಸ್ವತ ಸಮ್ಮೇಳನವನ್ನು ಸಮರ್ಥ ರೀತಿಯಿಂದ ಹಾಗೂ ಸಂಘಟಿತವಾಗಿ ಅಯೋಜಿಸಿಬೇಕೆಂದು ಕಾರ್ಯಕಾರಿ ಸಮಿತಿಯೊಂದನ್ನು ರಚಿಸಿದ್ದೆ. ಈ ಸಮಿತಿಯ ಚೇರಮನ್ ಶ್ರೀ ಕೆ.ಕೆ. ಪೈ, ಅಧ್ಯಕ್ಷರು ಶ್ರೀ ಎಸ್.ವಿ. ಪಿಕಳೆ, ಉಪಾಧ್ಯಕ್ಷರು ಶ್ರೀ ಎಂ. ರಂಗ ಪೈ, ಮುಖ್ಯ ಸಂಚಾಲಕನಾಗಿ ನಾನು, ಕೋಶಾಧಿಕಾರಿಯಾಗಿ ಶ್ರೀ ಕುಡ್ವಿ ಜಗದೀಶ ಶೆಣೈ, ಕಾರ್ಯದರ್ಶಿ ಶ್ರೀ ವೆಂಕಟೇಶ ಎನ್. ಬಾಳಿಗ ಮತ್ತು ಬಿ. ದಾಮೋದರ ಪ್ರಭು(ಸ್ಮರಣಿಕಾ ಸಮಿತಿ), ಡಾ. ಕಸ್ತೂರಿ ಮೋಹನ ಪೈ(ವಿಚಾರ

ಗೋಷ್ಠಿ), ಶ್ರೀ ಕೆ. ಪ್ರಕಾಶ ಪ್ರಭು(ಊಟ–ಉಪಹಾರ), ಶ್ರೀ ವಿಠೋಬ ಭಂಡಾರಕಾರ ಮತ್ತು ಶ್ರೀಮತಿ ವಸಂತಿ ಆರ್ ನಾಯಕ್(ಸಾಂಸ್ಕೃತಿಕ ಕಾರ್ಯಕ್ರಮ) ಹಾಗೂ ಇತರ ಸದಸ್ಯರನ್ನೂ ಸೇರಿಸಿ ಬೇರೆ ಬೇರೆ ಸಮಿತಿಗಳನ್ನು ರೂಪಿಸಿದೆವು.

ಸಮ್ಮೇಳನದ ಕಚೇರಿಗಾಗಿ ಡಾ. ಕಸ್ತೂರಿ ಮೋಹನ ಪೈಯವರು ತಮ್ಮ 'ಶ್ರೀನಿವಾಸ ಪಾಠಶಾಲೆ'ಯಲ್ಲಿ ದೊಡ್ಡದೊಂದು ಕೋಣೆ ಮತ್ತು ಹಾಲ್ ಬಿಟ್ಟು ಕೊಟ್ಟಿದ್ದರು. ಅದು ನಮ್ಮ ಕೆಲಸ ಕಾರ್ಯಗಳಿಗೆ ತುಂಬಾ ನೆರವಿಗೆ ಬಂತು.

ನಾವು ಎಐಎಸ್‌ಸಿಒ ದಿಂದ ಮುಂಗಡ ರೂಪದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ತರಿಸಿಕೊಂಡಿದ್ದೆವು. ಹೀಗಾಗಿ ನಮಗೆ ಸಮ್ಮೇಳನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸುವುದು ಸಾಧ್ಯವಾಗಿತ್ತು.

ಸಮ್ಮೇಳನದಲ್ಲಿ ಉಪಸ್ಥಿತರಾಗಲು ಸಾರಸ್ವತ ಸಮಾಜದ ನಾಲ್ಕು ಮಠಗಳ ಪೂಜ್ಯ ಸ್ವಾಮೀಜಿಯವರನ್ನು ಮಂಗಳೂರಿಗೆ ಕರೆಯಿಸಿಕೊಳ್ಳುವುದು, ಅವರು ತಂಗುವ ವ್ಯವಸ್ಥೆಯನ್ನು ನೋಡಿಕೊಳ್ಳುವುದು, ಅವರ ಶಿಷ್ಟಾಚಾರ ಕ್ರಮವನ್ನು ಅನುಸರಿಸುವುದು ಇವೆಲ್ಲಾ ಜವಾಬ್ದಾರಿಗಳನ್ನು ನಾನು ಮುಂಬೈಯಲ್ಲಿರುವ ಎಐಎಸ್?ಸಿಒ ದ ಮುಖಂಡರಿಗೇ ವಹಿಸಿಕೊಟ್ಟಿದ್ದೆ. ಇದರಿಂದ ನನ್ನ ಮೇಲೆ ಇದ್ದ ದೊಡ್ಡ ಜವಾಬ್ದಾರಿಯೊಂದು ಕಡಿಮೆಯಾಗಿತ್ತು.

ಸಾರಸ್ವತ ಸಮಾಜಕ್ಕೆ ಸೇರಿದ ದೊಡ್ಡ ದೊಡ್ಡ ಹುದ್ದೆಯಲ್ಲಿರುವ, ಉನ್ನತ ಸ್ಥಾನಗಳನ್ನು ಅಲಂಕರಿಸಿರುವ, ಸಮಾಜಕ್ಕೆ ಮತ್ತು ದೇಶಕ್ಕೆ ಸೇವೆಯನ್ನು ಸಲ್ಲಿಸಿರುವ ಪ್ರಸಿದ್ಧ ಮಹನೀಯರನ್ನು ಸಮ್ಮೇಳನದಲ್ಲಿ ಸನ್ಮಾನಿಸಲು ಅವರ ಪಟ್ಟಿಯೊಂದನ್ನು ತಯಾರಿಸಿ, ಅವರಿಗೆ ಆಮಂತ್ರಣ ಕಳುಹಿಸಿ, ಅವರು ಬಂದಾಗ ಇರಲು ಸೂಕ್ತ ವ್ಯವಸ್ಥೆಯನ್ನು ನಡೆಸುವ ಜವಾಬ್ದಾರಿಯನ್ನು ಕೂಡ ನಾನು ಮುಂಬೈಯಲ್ಲಿರುವ ಎಐಎಸ್‌ಸಿಒ ದ ಮುಖಂಡರಿಗೇ ವಹಿಸಿಕೊಟ್ಟಿದ್ದೆ. ಇದರಿಂದ ನನಗೆ ನನ್ನ ಕೆಲಸ ತುಂಬಾ ಸುಲಭವಾಯಿತು.

೧೯೯೯ರ ಫೆಬ್ರವರಿ ತಿಂಗಳಲ್ಲಿ ಮುಹೂರ್ತ ಸಮಾರಂಭ ಮುಗಿದ ಕೂಡಲೇ, ನಾನು ವಿವಿಧ ಉಪಸಮಿತಿಗಳ ಸಂಚಾಲಕರನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಕರೆದು ಅವರ ಸಮಿತಿಯ ಕೆಲಸ ಹಾಗೂ ಜವಾಬ್ದಾರಿಯನ್ನು ತಿಳಿಯಪಡಿಸಿದ್ದಲ್ಲದೆ, ಅವರು ಈಗಿನಿಂದಲೇ ಕೆಲಸ ಕಾರ್ಯಗಳನ್ನು ಪ್ರಾರಂಭಿಸಬೇಕೆಂದು ಚರ್ಚೆಯನ್ನು ನಡೆಸಿ ಮುಖತಃ ತಿಳಿಸಿದೆ. ಆಮೇಲೆ ಸಮಿತಿ, ಉಪಸಮಿತಿಗಳ ಸಂಚಾಲಕರ ಮತ್ತು ಸದಸ್ಯರನ್ನು ಕರೆಯಿಸಿ ಸಮಾಲೋಚನಾ ಸಭೆಯನ್ನು ನಡೆಸಿದೆ. ಇದರಿಂದ ಅವರು ಸಮಯಕ್ಕೆ ಮೊದಲೇ ತಮ್ಮ ತಮ್ಮ ಸಮಿತಿಗೆ ಸಂಬಂಧಿಸಿದ ಕೆಲಸಗಳನ್ನು ಪ್ರಾರಂಭಿಸಲು, ಹಣದ ಆಯವ್ಯಯ ಪಟ್ಟಿಯನ್ನು ತಯಾರಿಸಿ ಅದನ್ನು ಸಂಘಟನಾ ಸಮಿತಿಯ ಮುಂದೆ ಇಟ್ಟು ಮಂಜೂರಾತಿ ಪಡೆಯುವುದಕ್ಕೆ ಸುಲಭವಾಯಿತು.

ಇದರ ಬಳಿಕ ಸಮ್ಮೇಳನದ ಖರ್ಚುವೆಚ್ಚಗಳ ಅಂದಾಜು ಪತ್ರವನ್ನು ತಯಾರಿಸಿ ಮುಂಬೈ ಮುಖ್ಯ ಕಚೇರಿಗೆ ಕಳುಹಿಸಿಕೊಟ್ಟೆ. ಅದು ತಲುಪಿದ ಬಳಿಕ ನಾನು ಸ್ವತಃ ಮುಂಬೈಗೆ ಹೋಗಿ ಸಮಿತಿಯವರ ಮುಂದೆ ಆಯವ್ಯಯದ ಆ ಅಂದಾಜು ಪತ್ರವನ್ನು ಮಂಡಿಸುವಂತೆ ಅವರು ತಿಳಿಸಿದರು. ಅದೇ ರೀತಿ ನಾನು ಅವರು ಹೇಳಿದಂತೆ ನಡೆದುಕೊಂಡೆ. ಖರ್ಚುವೆಚ್ಚಗಳ ಕೆಲವು ಬಾಬತ್ತುಗಳಲ್ಲಿ ಹೆಚ್ಚು ಕಡಿಮೆ ಮಾಡಿದ ಬಳಿಕ ಅಂದಾಜು ಪತ್ರ ಮಂಜೂರಾಯಿತು.

ಪ್ರಾರಂಭದಲ್ಲಿ ಮುಂಬೈ ಸಾರಸ್ವತ ಸಂಘವು ಸಮ್ಮೇಳನದ ಸಂಪೂರ್ಣ ಖರ್ಚು ವೆಚ್ಚಗಳನ್ನು ತಾನೇ ನೋಡಿಕೊಳ್ಳುವುದಾಗಿ ತಿಳಿಸಿದ್ದರೂ, ಆಮೇಲೆ ಕೆಲವು ಸಮಯ ಕಳೆದ ಬಳಿಕ ಅದು ಅವರಿಂದ ಸಾಧ್ಯವಾಗದು ಎಂದೂ, ಮಂಗಳೂರಿನ ನಮ್ಮ ಕಾರ್ಯಕಾರಿ ಸಮಿತಿಗೆ ಅವರು ಒಟ್ಟು ಹತ್ತು ಲಕ್ಷ ನೀಡುವುದಾಗಿಯೂ, ಉಳಿದ ಖರ್ಚುಗಳಿಗೆ ನಾವೇ ಹಣ ಸಂಗ್ರಹ ಮಾಡಬೇಕೆಂದು ತಿಳಿಸಿದರು. ಅದನ್ನು ಕೇಳಿ ನಾನು ಶ್ರೀ ಕೆ.ಕೆ. ಪೈ, ಕಸ್ತೂರಿ ಮಂಗೇಶ ಪೈ, ಬಿ. ದಾಮೋದರ ಪ್ರಭು ಮತ್ತು ಇತರ ಸಮಿತಿಗಳ ಮುಖ್ಯಸ್ಥರ ಸಭೆ ಕರೆದು ಈ ವಿಚಾರವಾಗಿ ಏನು ಮಾಡಬೇಕೆಂದು ವಿಚಾರಿಸಿದೆ. ಆಗ ಶ್ರೀ ಕೆ.ಕೆ. ಪೈಯವರು, "ನಾವು ಮಂಗಳೂರಿನಲ್ಲಿ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸುತ್ತೇವೆ ಎನ್ನುವುದು ಈಗ ಜಗಜ್ಜಾಹೀರಾಗಿದೆ. ಇಂತಹ ಸಮಯದಲ್ಲಿ ನಾವು ಹಿಂದೆ ಸರಿದರೆ ಮಂಗಳೂರಿಗೆ ಕೆಟ್ಟ ಹೆಸರು ಬರಬಹುದು. ಹೀಗಾಗಿ ಹೇಗಾದರೂ ಮಾಡಿ ನಾವು ಈ ಸಮ್ಮೇಳನವನ್ನು ಜಯಪ್ರದ ಮಾಡಲು ಸೊಂಟಕಟ್ಟಿ ನಿಲ್ಲಬೇಕು ಮತ್ತು ನಮ್ಮ ಕೆಲಸ ಕಾರ್ಯಗಳನ್ನು ಮುಂದುವರಿಸಬೇಕು," ಎಂದು ಹೇಳಿದರು. ಹೀಗಾಗಿ ಸಮ್ಮೇಳನದ ನಮ್ಮ ಕಾರ್ಯಗಳು ಮುಂದುವರಿದವು.

ಫೆಬ್ರವರಿ ೧೮ನೇ ತಾರೀಖಿನಂದು ನಾನು ಮತ್ತು ವೆಂಕಟೇಶ ಬಾಳಿಗರು ಮಂಗಳಾ ಕ್ರೀಡಾಂಗಣದ ಅಧಿಕಾರಿಗಳನ್ನು ಮತ್ತು ಮಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಭೇಟಿಯಾಗಿ ವಿಶ್ವ ಸಾರಸ್ವತ ಸಮ್ಮೇಳನಕ್ಕಾಗಿ

ಡಿಸೆಂಬರ್ ೧೫-೨೫ರವರೆಗೆ ಮಂಗಳಾ ಕ್ರೀಡಾಂಗಣವನ್ನು ಬಳಸಲು ನಮಗೆ ಅವಕಾಶ ಮಾಡಿ ಕೊಡಬೇಕೆಂದು ವಿನಂತಿಸಿದೆವು. ಅವರು ಅದಕ್ಕೆ ಒಪ್ಪಿಗೆ ಸೂಚಿಸಿ ಪರವಾನಗಿ ಪತ್ರವನ್ನು ನೀಡಿದರು. ಇದೇ ರೀತಿ ನಾವು ಊರ್ವಾದ ಸಂಘನಿಕೇತನ ಮತ್ತು ಕೆನರಾ ಪ್ರೌಢಶಾಲೆಗಳಿಗೂ ಪತ್ರ ನೀಡಿ ಅವುಗಳನ್ನು ಕಾದಿರಿಸಿದೆವು.

ನಾನು ಮಾರ್ಚ್ ೩ ರಂದು ಭಾನುವಾರ ಮುಂಬೈಗೆ ಹೋಗಿ ಶ್ರೀ ಸರಸ್ವತಿ ಸದನದಲ್ಲಿ ಸೇರಿದ್ದ ಸಾರಸ್ವತ ಸಂಘದ ಸಮಿತಿ ಸಭೆಯ ಮುಂದೆ ವಿಶ್ವ ಸಾರಸ್ವತ ಸಮ್ಮೇಳನದ ಪೂರ್ಣ ಆಯವ್ಯಯ ಪತ್ರವನ್ನು ಮಂಡಿಸಿದೆ. ಅಲ್ಲಿ ಸೇರಿದ್ದ ಸದಸ್ಯರಲ್ಲಿ ಐಕ್ಯಮತ ಇಲ್ಲದಿರುವುದು ನನ್ನ ಗಮನಕ್ಕೆ ಬಂತು. ಈ ಹಿಂದೆ ಒಪ್ಪಿಕೊಂಡ ವ್ಯವಸ್ಥೆಯನ್ನೂ ಅವರು ಮಾಡಿರಲಿಲ್ಲ. ಹೀಗಾಗಿ ಪ್ರಾದೇಶಿಕ ಸಮಿತಿಗಳನ್ನು (Regional Care Takers) ರಚಿಸುವ ಅಗತ್ಯವನ್ನು ನಾನು ವಿವರವಾಗಿ ಅವರಿಗೆ ತಿಳಿಸಬೇಕಾಗಿ ಬಂತು.

ಮರುದಿನ ಮುಂಬೈಯಿಂದ ಕರ್ಣಾವತಿ ಎಕ್ಸ್‌ಪ್ರೆಸ್ ರೈಲು ಹತ್ತಿ ಅಹಮದಾಬಾದಿಗೆ ಹೋದೆ. ಅಲ್ಲಿ ನನ್ನನ್ನು ಸಿಂಡಿಕೇಟ್ ಬ್ಯಾಂಕಿನ ಡೆಪ್ಯೂಟಿ ಜನರಲ್ ಮೆನೇಜರ್ ಶ್ರೀ ಕೆ.ಜಿ.ಮಲ್ಯಾ ಅವರು ಸ್ವಾಗತಿಸಿದರು. ಅಹಮದಾಬಾದಿ-ನಲ್ಲಿರುವ ಸಬರಮತಿ ಆಶ್ರಮವನ್ನು ನೋಡಿ, ರಾತ್ರಿ ಸಾರಸ್ವತರ ಸಭೆಯನ್ನು ನಡೆಸಿದೆವು. ಈ ಸಭೆಯಲ್ಲಿ ಅಹಮದಾಬಾದ್ ಪ್ರಾದೇಶಿಕ ಸಮಿತಿಯ ರಚನೆಯಾಯಿತು. ಅಲ್ಲಿ ನಾವು ಡಾ. ಟಿ.ಎಂ.ಎ. ಪೈ ಶತಾಬ್ಧಿಯನ್ನೂ ಆಚರಿಸಿದೆವು.

ಇದೇ ರೀತಿ ಮಾರ್ಚ್ ೮ರಂದು ಬರೋಡಾದಲ್ಲಿ ಶ್ರೀ ಎಂ.ಎಸ್. ಕಾಮತ ಮತ್ತು ಡಾ. ಬಾಬಾ ಪೈ ಅವರ ನೇತೃತ್ವದಲ್ಲಿ ಬರೋಡಾ ಪ್ರಾದೇಶಿಕ ಸಮಿತಿ ರಚನೆಯಾಯಿತು. ಅಲ್ಲಿ ನನಗೆ ಚಿಕ್ಕಂದಿನಲ್ಲಿ ಬಂಟವಾಳದಲ್ಲಿ ನೆರೆಮನೆಯಲ್ಲಿದ್ದ ಶ್ರೀ ವಾಸುದೇವ ಬಾಬ ಬಾಳಿಗರ ಮಗಳು ರಮಣಿ ಭಟ್ಟ ಭೇಟಿಯಾದಳು. ಅವಳು ನನ್ನ ಅನುಸೂಯಕ್ಕನವರನ್ನು ಮತ್ತು ನಮ್ಮನ್ನು ನೆನಪಿಸಿಕೊಂಡಳು.

ಮಾರ್ಚ್ ೧೦ ರಂದು ನಾನು ದೆಹಲಿಗೆ ಹೋದೆ. ಅಲ್ಲಿ ಸಾರಸ್ವತ ಸಂಸ್ಕೃತಿ ಭವನದಲ್ಲಿ ಶ್ರೀ ಕೆ.ಪಿ. ಲಕ್ಷ್ಮಣ ರಾವ್, ಶ್ರೀ ಕೆ. ಗೋಪಾಲರ ನೇತೃತ್ವದಲ್ಲಿ ಮತ್ತು ಶ್ರೀ ವಿ.ಎನ್. ಕಬಾಡಿಯವರ ಅಧ್ಯಕ್ಷತೆಯಲ್ಲಿ ದೆಹಲಿ ಪ್ರಾದೇಶಿಕ ಸಮಿತಿಯ ರಚನೆಯಾಯಿತು.

ಮಾರ್ಚ್ ೧೩ರಂದು ಮದ್ರಾಸ್(ಈಗಿನ ಚೆನ್ನೈ) ಕಾಶೀಮಠದಲ್ಲಿ ಮೋಹನ ಭಂಡಾರಿಯವರ ಸಹಕಾರದಿಂದ ಶ್ರೀ ವಿ.ಎನ್. ಬಾಳಿಗರ ನೇತೃತ್ವದಲ್ಲಿ ಚೆನ್ನೈ ಪ್ರಾದೇಶಿಕ ಸಮಿತಿಯ ರಚನೆಯಾಯಿತು. ಮದ್ರಾಸಿನಲ್ಲಿ ನಾನು ಕೊಂಕಣಿ ಭಾಷಾತಜ್ಞ ಹಾಗೂ ಸಂಶೋಧಕ ಡಾ. ಪಿ.ಬಿ. ಜನಾರ್ದನರನ್ನು ಭೇಟಿಯಾದೆ. ಈ ವಿದ್ವಾಂಸರು ಇಂಗ್ಲಿಷ್-ಕೊಂಕಣಿ ಶಬ್ದಕೋಶವನ್ನು ಮಾಡಿದ್ದಾರೆ. ಅವರೊಬ್ಬ ಪ್ರಸಿದ್ಧ ವ್ಯಕ್ತಿ. ಅವರಿಗೆ ಮಣಿಪಾಲದ ಡಾ. ಟಿ.ಎಂ.ಎ. ಪೈ ಪ್ರತಿಷ್ಠಾನವು ಕೊಂಕಣಿ ವಿಶೇಷ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅವರನ್ನು ಕಾಣಬೇಕೆನ್ನುವುದು ನನ್ನ ಬಹುದಿನಗಳ ಆಸೆಯಾಗಿತ್ತು.

ಮಾರ್ಚ್ ೧೭ರಂದು ಮದ್ರಾಸಿನಲ್ಲಿ ರೈಲು ಹತ್ತಿ ಕಲ್ಕತ್ತಾಗೆ ಪ್ರಯಾಣಿಸಿದೆ. ಅಲ್ಲಿ "ದಾಮೋದರ ವ್ಯಾಲಿ ವಿದ್ಯುತ್ ನಿಗಮ"ದ ಆರ್ಥಿಕ ನಿರ್ದೇಶಕರಾಗಿದ್ದ ಬ್ರಿಗೇಡಿಯರ್ ಕಾಮತ್ ಸ್ವಾಗತಿಸಿದರು. ಅವರು ತಮ್ಮ ಅತಿಥಿಗೃಹದಲ್ಲಿ ನನ್ನ ವಸತಿ ವ್ಯವಸ್ಥೆ ಮಾಡಿದ್ದರು. ಸುತ್ತಾಡಲು ನನಗೆ ಕಾರನ್ನೂ ನೀಡಿದ್ದರು.

ಕಲ್ಕತ್ತಾದಲ್ಲಿ ನಾನು ಮದರ್ ತೆರೆಸಾರ ಸಿಸ್ಟರ್ ಆಫ್ ಚ್ಯಾರಿಟೀಸ್‌ನ "ನಿರ್ಮಲ ಹೃದಯ" ಆಶ್ರಮವನ್ನು ನೋಡಿದೆ. ಅಲ್ಲಿ ಕುಷ್ಠರೋಗಿಗಳು ಮತ್ತು ವೃದ್ಧರಿಗೆ ಇರಲು ವ್ಯವಸ್ಥೆ ಇದೆ. ದೇಶ ವಿದೇಶಗಳಿಂದ ಬಂದಿರುವ ಸೇವಾ ಮನೋಭಾವದ ಕಾರ್ಯಕರ್ತರು ಆ ರೋಗಿಗಳ ಮತ್ತು ವೃದ್ಧರ ಆರೈಕೆಯನ್ನು ನಡೆಸುವುದನ್ನು ನೋಡಿದೆ. ಅದನ್ನು ಕಣ್ಣಾರೆ ಕಂಡು, ಮದರ ತೆರೆಸಾಗೆ ಭಾರತ ಸರಕಾರವು "ಭಾರತರತ್ನ" ಪ್ರಶಸ್ತಿಯನ್ನು ನೀಡಿದ್ದು ಸರಿ ಎಂದು ನನಗೆ ಅನಿಸಿತು.

ವಿದೇಶಿ ಮಹಿಳೆ ಮದರ ತೆರೆಸಾ ಭಾರತಕ್ಕೆ ಬಂದು ಸಿಸ್ಟರ್ ಆಫ್ ಚ್ಯಾರಿಟೀಸ್ ಸಂಸ್ಥೆಯನ್ನು ಪ್ರಾರಂಭಿಸಿ, ಅದರ ಮೂಲಕ ರಸ್ತೆಯಲ್ಲಿ ಬಿದ್ದುಕೊಂಡಿದ್ದ ರೋಗಿಗಳನ್ನು ಎತ್ತಿ ಆಶ್ರಮಕ್ಕೆ ಕರೆತಂದು, ಸ್ವತಃ ತನ್ನ ಕೈಯಿಂದಲೇ ಕುಷ್ಠರೋಗಿಗಳನ್ನು ಮತ್ತು ಇತರ ಅನಾಥ ವ್ಯಕ್ತಿಗಳನ್ನು ಉಪಚರಿಸುತ್ತಿರುವುದು ವಿಶೇಷ ಪ್ರಶಂಸೆಗೆ ಪಾತ್ರವಾಗಿರುವುದು ಉಚಿತವಾಗಿಯೇ ಇದೆ. ಆ ರೋಗಿಗಳಿಗೆ ದೇಶ ವಿದೇಶಗಳ ಮಹಿಳೆಯರು ನೀಡುತ್ತಿರುವ ಸೇವೆ ಮತ್ತು ಆಶ್ರಮದ ಶುಚಿತ್ವಕ್ಕೆ ನೀಡುವ ಮಹತ್ವ ನನಗೆ ವಿಶೇಷವೆಂದು ಕಂಡಿತು.

ನಾವು ತೆರೆಸಾರ ಸೇವಾಶ್ರಮದ ಹತ್ತಿರವಿರುವ ಕಾಳಿಮಾತೆಯ ದರ್ಶನಕ್ಕೆ ಹೋದೆವು. ಆ ದೇವಸ್ಥಾನದಲ್ಲಿ ಕೊಳೆ ಮತ್ತು ದುರ್ವಾಸನೆ ತುಂಬಿರುವುದನ್ನು ನೋಡಿ ನಮ್ಮ ಮನಸ್ಸಿಗೆ ತುಂಬಾ ಬೇಸರವಾಯಿತು.

ಬಂಟವಾಳದ ಭಾಂಗರಾ ಮಾಧವ ಬಾಳಿಗರ ಮೊಮ್ಮಗ ಡಾ. ಬಿ. ಭಾಸ್ಕರ ಬಾಳಿಗ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿ ಜನಪ್ರಿಯರಾಗಿದ್ದಾರೆ. ಅವರು ಪ್ರಾರಂಭಿಸಿದ “ಇಂಡಿಯನ್ ಸಾಯನ್ಸ್” ಮಾಸಿಕ ಪತ್ರಿಕೆಗೆ ಯಾವ ವಶೀಲಿಯು ಇಲ್ಲದೆ ೧೯೯೦ರಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಹತ್ತು ಲಕ್ಷ ರೂ ಸಹಾಯ ಧನ ದೊರೆತಿತ್ತು. ಭಾರತದ ವೈಜ್ಞಾನಿಕ ಕ್ಷೇತ್ರದಲ್ಲಿ ಅವರಿಗೆ ಹಿರಿಯ ಸ್ಥಾನವಿದೆ. ನಾನು ಕೊಲ್ಕತ್ತಾದಲ್ಲಿದ್ದಾಗ ಅವರು ನನ್ನನ್ನು ಶ್ರೀ ದಕ್ಷಿಣೇಶ್ವರ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ರಾಮಕೃಷ್ಣ ಪರಮಹಂಸರು ಪೂಜಿಸುತ್ತಿದ್ದ ಶ್ರೀ ಕಾಳಿಕಾ ಮಾತೆಯ ದೇವಸ್ಥಾನ, ಅವರು ವಾಸವಾಗಿದ್ದ ಮನೆ, ಆಮೇಲೆ ಬೇಲೂರ ರಾಮಕೃಷ್ಣ ಮಿಶನ ಆಶ್ರಮ, ಸ್ವಾಮೀ ವಿವೇಕಾನಂದರು ವಾಸವಾಗಿದ್ದ ಜಾಗ ಇತ್ಯಾದಿಗಳನ್ನು ತೋರಿಸಿದ್ದರು.

ಕೊಲ್ಕತ್ತಾದಲ್ಲಿ ಸಾರಸ್ವತರ ಪುಟ್ಟ ಸಭಾಗೃಹವೊಂದಿದೆ. ಅಲ್ಲಿ ಮೇ ೧೫ರಂದು ಶನಿವಾರ ರಾತ್ರಿ ಸಾಪ್ತಾಹಿಕ ಭಜನೆ ಕಾರ್ಯಕ್ರಮ ಮುಗಿದ ಬಳಿಕ ಸಮ್ಮೇಳನದ ಪ್ರಾದೇಶಿಕ ಸ್ವಾಗತ ಸಮಿತಿಯನ್ನು ರಚಿಸಿದೆವು. ಅಲ್ಲಿ ಬಹಳ ವರ್ಷಗಳಿಂದ ನೆಲೆಸಿದ್ದ ಶ್ರೀ ಎನ್.ಆರ್. ಆಚಾರ್ಯ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದೆವು. ನಾನು ೧೬ರಂದು ಕೊರಮಂಡಲ ಎಕ್ಸಪ್ರೆಸ್ ರೈಲಿನಲ್ಲಿ ಹೊರಟು ಮೇ ೧೯ರಂದು ರಾತ್ರಿ ೭ ಗಂಟೆಗೆ ಚೆನ್ನೈ ತಲುಪಿದೆ.

ಎಂದಿನಂತೆ ಚೆನ್ನೈಯಲ್ಲಿ ನನ್ನನ್ನು ಶ್ರೀ ಮೋಹನ ಭಂಡಾರಿಯವರು ಸ್ವಾಗತಿಸಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಶ್ರೀ ಭಂಡಾರಿಯವರ ಅಜ್ಜಿ ರುಕ್ಮಿಣಿ ನನ್ನ ಅಜ್ಜಿಯ ಅಕ್ಕ. ಈ ಸಂಬಂಧಕ್ಕಿಂತಲೂ ಹೆಚ್ಚಾಗಿ ಅವರಲ್ಲಿದ್ದ ನಾಟಕ ಕ್ಷೇತ್ರದ ಬಗೆಗಿನ ಆಸಕ್ತಿ ನಮ್ಮಿಬ್ಬರ ನಡುವೆ ಆತ್ಮೀಯತೆಯನ್ನು ಬೆಸೆದಿದೆ. ಅವರೊಬ್ಬ ರಂಗಕರ್ಮಿ. ಉಡುಪಿಯ ಕೆನರಾ ಬ್ಯಾಂಕಿನಲ್ಲಿ ಡಿವಿಜನಲ್ ಮೆನೇಜರ್ ಆಗಿದ್ದಾಗ ಕೊಂಕಣಿಯಲ್ಲಿ ಅನೇಕ ರೇಡಿಯೋ ನಾಟಕಗಳನ್ನು ಬರೆದು, ನಿರ್ದೇಶಿಸಿ ಪ್ರಸಾರ ಮಾಡಿದ್ದಾರೆ. “ಸಂತ ತುಕಾರಾಮ” ಎಂಬ ಕೊಂಕಣಿ ಸಂಗೀತ ನಾಟಕವನ್ನು ಬರೆದು, ನಿರ್ದೇಶನ ಮಾಡಿ ಪ್ರದರ್ಶನ ನೀಡಿದ್ದಾರೆ. ಇದರ ಪ್ರಯೋಗ ಜಿಲ್ಲೆಯ ಅನೇಕ ಊರುಗಳಲ್ಲಿ ನಡೆದಿದೆ. ಮೋಹನ ಭಂಡಾರಿ ಒಬ್ಬ ನಟರೂ ಹೌದು. ಅವರಿಗೆ ಹಾಡುವುದರಲ್ಲಿಯೂ ಆಸಕ್ತಿ ಇದೆ.

ಭಂಡಾರಿಯವರು ನನ್ನನ್ನು ಚೆನ್ನೈಯಲ್ಲಿದ್ದ ಅವರ ಕನ್ನಡ ಸ್ನೇಹಿತ ಶ್ರೀ ಗೋಪಾಲಕೃಷ್ಣ ಎಂಬವರು ಉದ್ಯೋಗ ಮಾಡುತ್ತಿರುವ ಏಶಿಯಾ ಇನ್ಸಟಿಟ್ಯೂಟ್ ನೋಡಲು ಕರೆದುಕೊಂಡು ಹೋಗಿದ್ದರು. ಅಲ್ಲಿ ನನಗೆ ಈ ಸಂಸ್ಥೆಯ ಸಹಯೋಗದೊಂದಿಗೆ ನಾವು ಕೊಂಕಣಿ ಕುಡುಮಿ, ಖಾರ್ವಿ, ಸಿದ್ಧಿ, ನವಾಯತ್ ಇತ್ಯಾದಿ ಉಪಭಾಷೆಗಳ ಮತ್ತು ಕೊಂಕಣಿ ಲೋಕವೇದದ ಅಧ್ಯಯನ ಮತ್ತು ಸಂಶೋಧನೆಯನ್ನು ನಡೆಸಬಹುದೆಂದು ತಿಳಿದು ಬಂತು. ಭವಿಷ್ಯದಲ್ಲಿ ನಾವು ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಏಶಿಯಾ ಇನ್ಸಟಿಟ್ಯೂಟ್ ಸಹಯೋಗದೊಂದಿಗೆ ಕೊಂಕಣಿ ಲೋಕವೇದದ ಕಾರ್ಯಗಳನ್ನು ನಡೆಸುವ ಸಾಧ್ಯತೆಗಳು ಇರುವುದು ನನಗೆ ಹೊಳೆಯಿತು. ಅದೇ ದಿನ ರಾತ್ರಿ ೧೧ ಗಂಟೆಗೆ ನಾನು ವೆಸ್ಟ್ ಕೋಸ್ಟ್ ರೈಲಿನಲ್ಲಿ ಮಂಗಳೂರಿಗೆ ಹೊರಟು ಮರುದಿನ ಊರು ತಲುಪಿದೆ.

ವಿಶ್ವ ಸಾರಸ್ವತ ಸಮ್ಮೇಳನದ ಉದ್ದೇಶ, ಕಾರ್ಯ ಪ್ರಗತಿ ಇತ್ಯಾದಿ ಮಾಹಿತಿಗಳು ದೇಶ ವಿದೇಶಗಳಲ್ಲಿರುವ ಸಾರಸ್ವತರಿಗೆ ತಿಳಿಸುವ ಉದ್ದೇಶದಿಂದ ಸಮಿತಿಯ ವತಿಯಿಂದ “ವಿಶ್ವ ಸಾರಸ್ವತ” ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸುವ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಇದರ ಸಂಪಾದಕತ್ವವನ್ನು ಕೆನರಾ ಕಾಲೇಜಿನ ಪ್ರೊಫೆಸರ್ ನಾಗರಾಜ ಜವಳಿಯವರಿಗೆ ವಹಿಸಿಕೊಡಲಾಗಿತ್ತು.

ಮೇ ೨೯ ರಂದು ಶನಿವಾರ ಸಂಜೆ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಸ್ಥಾನದಲ್ಲಿ ನೆರೆದ ಸಭೆಯಲ್ಲಿ ಕಾಶೀಮಠದ ಪರಮಗುರು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರ ದಿವ್ಯಹಸ್ತದಿಂದ “ವಿಶ್ವ ಸಾರಸ್ವತ” ಪತ್ರಿಕೆಯ ಬಿಡುಗಡೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ನಾನು ವಿಶ್ವ ಸಾರಸ್ವತ ಸಮ್ಮೇಳನದ ಉದ್ದೇಶ, ಕಾರ್ಯ ರೀತಿ ನೀತಿ, ಪ್ರಗತಿ ಇತ್ಯಾದಿಗಳನ್ನು ವಿವರಿಸಿ ಭಾಷಣ ಮಾಡಿದೆ. ಪತ್ರಿಕೆಯನ್ನು ಬಿಡುಗಡೆ ಮಾಡಿದ ಶ್ರೀ ಗುರುವರ್ಯರು ವಿಶ್ವ ಸಾರಸ್ವತ ಸಮ್ಮೇಳನದ ಪ್ರಸ್ತುತತೆ, ಉದ್ದೇಶ, ಇತ್ಯಾದಿ ಕುರಿತು ಉತ್ತಮ ಉಪದೇಶ ನೀಡಿ ಆಶೀರ್ವದಿಸಿದರು.

ಇದರ ಬಳಿಕ ಸಮ್ಮೇಳನದ ನಮ್ಮ ಕಾರ್ಯಗಳಿಗೆ ವೇಗ ಬಂತು ಎಂದು ಹೇಳಬಹುದು.

ಸಮ್ಮೇಳನ ಕಾರ್ಯಗಳಿಗಾಗಿ ತಿರುಗಾಟ

ಸ್ಥಳೀಯ ಸಾರಸ್ವತ ಸಮಾಜದ ಸೇವಾ ಸಂಘಗಳ ನೆರವಿನಿಂದ ಜೂನ್ ೧೩, ೧೪, ಮತ್ತು ೧೫ ರಂದು ದಾವಣಗೆರೆ, ಶಿವಮೊಗ್ಗ, ತೀರ್ಥಹಳ್ಳಿ, ಶೃಂಗೇರಿ ಮತ್ತು ಕೊಪ್ಪ ಊರುಗಳಲ್ಲಿ ಸಭೆಗಳನ್ನು ಆಯೋಜಿಸಲಾಗಿತ್ತು. ಅಲ್ಲಿ ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನವು ಮಂಗಳೂರಿನಲ್ಲಿ ನಡೆಯಲಿರುವ ವಿಷಯವನ್ನು ತಿಳಿಸಿ, ಸದಸ್ಯರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬಂದು ಭಾಗವಹಿಸಬೇಕೆಂದು ಆಮಂತ್ರಿಸಿದೆವು. ಅಲ್ಲಲ್ಲಿ ಪ್ರಾದೇಶಿಕ ಸಮಿತಿಗಳನ್ನೂ ರಚಿಸಲಾಯಿತು. ಆ ಎಲ್ಲಾ ಊರುಗಳಲ್ಲಿ ಭೇಟಿಯಾಗಿದ್ದ ಸಮಾಜ ಬಾಂಧವರು ಸಮ್ಮೇಳನದ ಕುರಿತು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದರು.

ಇದೇ ರೀತಿ ಜೂನ್ ೨೦ರಂದು ಭಾನುವಾರ ಬೆಳಗ್ಗೆಯೇ ಹೊರಟು ಶಿರಾಲಿ, ಹೊನ್ನಾವರ, ಕುಮಟ ಊರುಗಳಿಗೆ ಹೋಗಿ ಅಲ್ಲಿದ್ದ ಸಾರಸ್ವತ ಸಮಾಜದ ಬಾಂಧವರನ್ನು, ಸಂಸ್ಥೆಗಳ ಪದಾಧಿಕಾರಿಗಳನ್ನು ಭೇಟಿಯಾಗಿ ಬಂದೆ.

ಜೂನ್ ೨೨ ರಂದು ಮಂಗಳವಾರ ರಾತ್ರಿ ಬೆಳಗಾವಿಗೆ ಹೊರಟು, ಮರುದಿನ ಅಲ್ಲಿ ಶ್ರೀ ವಿ.ವಿ. ಶೆಣೈ ಮತ್ತು ಸುಧಾಕರ ಶಾನಭಾಗ (ಸತ್ಕಾರ್ ಹೊಟೇಲಿನವರು)ರೊಂದಿಗೆ ಬೆಳಗಾವಿ ಜಿ.ಎಸ್.ಬಿ ಮಂದಿರಕ್ಕೆ ಭೇಟಿ ನೀಡಿದೆ. ಅಲ್ಲಿ ನಮಗೆ ಮರಾಠಿ ಮಾತನಾಡುವ ಸಾರಸ್ವತರು ಕಾಣಲು ಸಿಕ್ಕಿದ್ದರಲ್ಲದೆ, ಕೊಂಕಣಿ ಮಾತನಾಡುವ ಸಾರಸ್ವತರು ಕಡಿಮೆ ಇರುವುದು ಗಮನಕ್ಕೆ ಬಂತು. ನಮಗೆ ಶ್ರೀ ವಿ.ವಿ. ಶೆಣೈಯವರು "ವಿಶ್ವ ಸಾರಸ್ವತ ಸ್ಮರಣಿಕೆ"ಗೆ ೫೦ ಸಾವಿರ ಮೊತ್ತದ ಜಾಹಿರಾತು ನೀಡುವುದಾಗಿ ತಿಳಿಸಿದರು.

ಮರುದಿನ ಬೆಳಗ್ಗೆ ನಾನು ಶೆಣೈಯವರೊಂದಿಗೆ ಬಸ್ಸಿನಲ್ಲಿ ಧಾರವಾಡಕ್ಕೆ ಹೋದೆ. ಅಲ್ಲಿ ಸಾರಸ್ವತ ಸದನದಲ್ಲಿ ಸಭೆಯನ್ನು ಕರೆಯಲಾಗಿತ್ತು. ಪ್ರಸಿದ್ಧ ನಾಟಕ ರಚನಕಾರರಾದ ಶ್ರೀ ಗಜಾನನ ರಾವ್ ಹೆರಂಜಾಳ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಅನಂತರ ನಾವು ಅಲ್ಲಿಂದ ಹುಬ್ಬಳ್ಳಿಗೆ ಹೋದೆವು. ಪ್ರಸಿದ್ಧ ಕಾಮತ್ ಹೊಟೇಲಿನ ಮಾಲಕರು ಹಾಗೂ ಉದಾರ ದಾನಿಗಳೂ ಆಗಿದ್ದ ಶ್ರೀ ಶೇಷಗಿರಿ ಪಿ. ಕಾಮತರ ನೇತೃತ್ವದಲ್ಲಿ ಹುಬ್ಬಳ್ಳಿಯ ಸರಸ್ವತಿ ಸದನದಲ್ಲಿ ಸಾರಸ್ವತ ಬಾಂಧವರ ಸಭೆ ನಡೆಯಿತು. ಅಂದು ಸಾರಸ್ವತ ದಿನಾಚರಣೆಯೂ ಇದ್ದುದರಿಂದ ಹುಬ್ಬಳ್ಳಿ ನಗರದ ಎಲ್ಲಾ ಸಾರಸ್ವತ ಪುರುಷರು ಮತ್ತು ಮಹಿಳೆಯರು ಅಲ್ಲಿ ನೆರೆದಿದ್ದರು; ನಾನು ಆ ಸಭೆಯನ್ನು ಉದ್ದೇಶಿಸಿ ವಿಶ್ವ ಸಾರಸ್ವತ ಸಮ್ಮೇಳನದ ವಿಷಯವನ್ನು ಪ್ರಸ್ತಾಪಿಸಿ ಮಾತನಾಡಿದೆ. ಆ ಮೇಲೆ ರಾತ್ರಿ ಬಸ್ಸಿನಲ್ಲಿ ಮಂಗಳೂರಿಗೆ ಹೊರಟು ಬಂದೆ.

ವಿಶ್ವ ಸಾರಸ್ವತ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿಯೇ ಶ್ರೀ ವಿ.ಎಸ್. ಕುಡ್ವ ಅವರ ಜನ್ಮಶತಾಬ್ದಿಯ ಕುರಿತು ಶ್ರೀ ವೆಂಕಟೇಶ ಬಾಳಿಗರು ನನಗೆ ತಿಳಿಸಿದ್ದರಿಂದ ನಾನು ಆ ಸಮಾರಾಂಭದ ಜವಾಬ್ದಾರಿಯನ್ನು ಕೂಡ ವಹಿಸಿಕೊಂಡಿದ್ದೆ. ಶ್ರೀ ವಿ.ಎಸ್. ಕುಡ್ವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೋದ್ಯಮಿಯಾಗಿ ಪ್ರಸಿದ್ಧರಾಗಿದ್ದವರು. ಅವರು ಮಂಗಳೂರಿನ ಸಿ.ಪಿ.ಸಿ. ಮತ್ತು ಇತರ ಅನೇಕ ಉದ್ಯಮಗಳ ಮಾಲೀಕರಾಗಿದ್ದು, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಉತ್ತರ ಕರ್ನಾಟಕ ಮೊದಲಾದೆಡೆಗಳಲ್ಲಿ ತಮ್ಮ ಕಂಪನಿಯ ಬಸ್ ಸಂಚಾರವನ್ನು ಪ್ರಾರಂಭಿಸಿ ಜನಪ್ರಿಯರಾಗಿದ್ದವರು. ಅವರು ಆ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಏಕೈಕ ಕನ್ನಡ ದೈನಿಕವೆಂದು ಪ್ರಸಿದ್ಧವಾಗಿದ್ದ "ನವಭಾರತ" ಮತ್ತು "ಸಾರಸ್ವತ ಕೊಂಕಣಿ" ಪತ್ರಿಕೆಯ ಸ್ಥಾಪಕರಾಗಿದ್ದರು. ಹೀಗಾಗಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯ "ಔದ್ಯೋಗೀಕರಣದ ಪಿತಾಮಹ"ರೆಂದು ಗುರುತಿಸುತ್ತಾರೆ. ಅವರು ಮರಣ ಹೊಂದಿದ್ದಾಗ, ಅವರ ಶವಯಾತ್ರೆಯಲ್ಲಿ ಅಪಾರ ಸಂಖ್ಯೆಯ ಜನರು ಪಾಲುಗೊಂಡಿದ್ದರು. (ಅವರು ಸ್ಥಾಪಿಸಿದ ಕಂಪನಿಗಳು ಅವರ ಸಾವಿನ ಬಳಿಕ ಮುಂದುವರಿಯಲು ಸಾಧ್ಯವಾಗದೆ ಮುಚ್ಚಿಕೊಂಡಿವೆ.) ಅಂತಹ ಮಹಾನ್ ವ್ಯಕ್ತಿಯನ್ನು ಸ್ಮರಿಸಿಕೊಳ್ಳಲು ಮಂಗಳೂರಿನಲ್ಲಿ ಯಾರೂ ಮುಂದೆ ಬಾರದ್ದರಿಂದ, ನಾನು ಆ ಕಾರ್ಯದಲ್ಲಿ ಕೈ ಹಾಕಿದ್ದೆ. ಇದರಿಂದ "ವಿ.ಎಸ್. ಕುಡ್ವಾ ಶತಾಬ್ದಿ ಸಮಾರಂಭ" ವು ಶ್ರೀ ಕೆ.ಕೆ. ಪೈ, ಶ್ರೀ ಎಸ್.ವಿ. ಪಿಕಳೆ ಹಾಗೂ ಕುಡ್ವಿ ಜಗದೀಶ ಶೆಣೈ ಅವರ ಉಪಸ್ಥಿತಿಯಲ್ಲಿ ಒಳ್ಳೆಯ ರೀತಿಯಿಂದ ಜರಗಿತ್ತು.

ಜುಲೈ ೪ರಂದು ನಾನು ಶ್ರೀ ಹೆಚ್. ರಾಘವೇಂದ್ರ ರಾವ್ ಅವರೊಂದಿಗೆ ಕಾರಿನಲ್ಲಿ ಶಿರಾಲಿಗೆ ಹೋಗಿ ಶ್ರೀ ಕೆ.ವಿ. ಪ್ರಭು ಅವರನ್ನು ಭೇಟಿಯಾದೆ. ಆಮೇಲೆ ಅಲ್ಲಿಂದ ಕುಮಟಾಗೆ ಹೋಗಿ ಡಾ. ಶಿವರಾಮ ಕಾಮತರನ್ನು ಜೊತೆಗೆ ಕರೆದುಕೊಂಡು ಕಾರವಾರಕ್ಕೆ ಹೋದೆ. ಕಾರವಾರದ ಪ್ರಸಿದ್ಧ ನ್ಯಾಯವಾದಿ

ಶ್ರೀ ಆರ್.ಎಸ್. ಪ್ರಭು ಅವರ ನೇತೃತ್ವದಲ್ಲಿ ಸಾರಸ್ವತರ ಸಭೆ.ನಡೆಯಿತು. ಅಲ್ಲಿ ನೆರೆದ ಅಪಾರ ಸಂಖ್ಯೆಯ ಸಾರಸ್ವತರ ಮುಂದೆ ನಾನು ವಿಶ್ವ ಸಾರಸ್ವತ ಸಮ್ಮೇಳನದ ಆಯೋಜನೆಯ ಕುರಿತು ವಿವರವಾಗಿ ಭಾಷಣ ಮಾಡಿದೆ. ಆಮೇಲೆ ನಾವು ಅಲ್ಲಿಯ ಸರ್ಕ್ಯೂಟ್ ಹೌಸ್‌ನಲ್ಲಿ ಕೊಂಕಣಿ ಕಾರ್ಯ-ಕರ್ತರಾದ ಶ್ರೀ ದೀಪಕ ಗಾಂವಕರರನ್ನು ಭೇಟಿಯಾಗಿ ಅಂಕೋಲೆಗೆ ಹಿಂತಿರುಗಿ ಬಂದೆವು.

ಅಂಕೋಲೆಯಲ್ಲಿ ಶ್ರೀ ಕುಂಡೋದರಿ ದೇವಸ್ಥಾನದ ಸಭಾಗೃಹದಲ್ಲಿ ಸಮಾಜದ ಜನಪ್ರಿಯ ಹಿರಿಯರಾದ ಶ್ರೀ ವಿಠೋಬಾ ಪ್ರಭು ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅಲ್ಲಿಯ ಕಾರ್ಯಕರ್ತರಾದ ಶ್ರೀ ಮಾರುತಿ ನಾಯಕರು ತುಂಬಾ ಚೆನ್ನಾಗಿ ಮಾತನಾಡಿ ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ಪ್ರತಿನಿಧಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಲುಗೊಳ್ಳಬೇಕೆಂದು ಕರೆ ನೀಡಿದರು. ಅಲ್ಲಿಂದ ನಾವು ಸಂಜೆ ಕುಮಟೆಗೆ ಬಂದೆವು.

ಕುಮಟೆಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಾರಸ್ವತ ಸಮಾಜದ ಸಭೆಯನ್ನು ಆಯೋಜಿಸಲಾಗಿತ್ತು. ಶ್ರೀ ನಾಗೇಶ ಶಾನಭಾಗರು(ನಾಗೇಶಣ್ಣ) ಅಧ್ಯಕ್ಷ ಸ್ಥಾನ ವಹಿಸಿದ್ದರು. ಉದ್ಯಮಿ ಶ್ರೀ ಮುರಳೀಧರ ಎಲ್. ಪ್ರಭು ತುಂಬಾ ಚೆನ್ನಾಗಿ ಮಾತನಾಡಿದ್ದರು. ಸಭೆ ಮುಗಿದ ಬಳಿಕ ನಾವು ಮಂಗಳೂರಿಗೆ ಹೊರಟು ಬಂದೆವು.

ಜುಲೈ ೧೧ರಂದು ಭಾನುವಾರ, ಸಾಗರ, ಶಿರಸಿ, ಸಿದ್ದಾಪುರ, ಇತ್ಯಾದಿ ಕಡೆಗಳಲ್ಲಿ ಸಾರಸ್ವತರ ಸಭೆಯನ್ನು ನಡೆಸಿ ಅವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಸಂದೇಶವನ್ನು ತಲುಪಿಸಿ ಬಂದಿದ್ದೆವು. ಇಲ್ಲಿ ಶ್ರೀ ಆರ್.ಜಿ. ಪೈ ಮಂಜೈನ್(ಸಿದ್ದಾಪುರ), ಸುಬ್ಬರಾವ್ ಕಾಸರಕೋಡ, ವಿ.ಎಸ್. ಸೋಂದೆ(ಶಿರಸಿ), ಎನ್.ಜಿ. ಪೈ(ಸಾಗರ) ಮೊದಲಾದ ಮಹನೀಯರು ನೇತೃತ್ವ ವಹಿಸಿಕೊಂಡಿದ್ದರು.

ಜುಲೈ ೧೫ರಂದು ದೆಹಲಿಯ ಸಾರಸ್ವತ ಸಂಸ್ಕೃತಿ ಕೇಂದ್ರದಲ್ಲಿ ಸಭೆ ನಡೆಸಿದೆವು. ಶ್ರೀ ಎನ್.ಜೆ. ಕಾಮತ್, ವಿ.ಎನ್. ಕಬಾಡಿಯವರು ತುಂಬಾ ಉತ್ಸಾಹ ತೋರಿಸಿದ್ದರು. ಅಲ್ಲಿಂದ ನಾನು ಜುಲೈ ೧೭ ರಂದು ಶನಿವಾರ ವಿಮಾನದಲ್ಲಿ ಮುಂಬೈಗೆ ಹೊರಟೆ. ವಿಮಾನದಲ್ಲಿ ನನ್ನ ಲಗ್ಗೇಜನ್ನು ಮೇಲೆ ಇಡುವಾಗ ಎದೆಯಲ್ಲಿ ಛಳಕು ಹೊಡೆದಂತಾಗಿ ನೋವಿನ ಅನುಭವವಾಯಿತು. ಮುಂಬೈ ನಿಲ್ದಾಣ ತಲುಪಿದ ಬಳಿಕ ನಾನು ಶ್ರೀ ಪಿಕಳೆಯವರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಅದಕ್ಕೆ ಅವರು ತಮ್ಮ ಮನೆಗೇ ಬರುವಂತೆ ತಿಳಿಸಿ ಕಾರು ಕಳುಹಿಸಿದರು. ಅವರ ಮನೆಗೆ ಹೋಗಿ ಊಟ ಮುಗಿಸಿದ ಬಳಿಕ ಅವರ ಮಗ ಡಾ. ಹೇಮಂತ ಪಿಕಳೆಯ ಆಸ್ಪತ್ರೆಗೆ ಹೋದೆ. ಅಲ್ಲಿ ಹೃದಯದ ತಪಾಸಣೆ ನಡೆದು ಯಾವ ತೊಂದರೆಯೂ ಇಲ್ಲವೆಂದಾಯಿತು. ನೋವಿಗಾಗಿ ಕೆಲವು ಮಾತ್ರೆಗಳನ್ನು ನೀಡಿದರು. ಸಂಜೆಯೊಳಗೆ ನಾನು ಗುಣಮುಖನಾದೆ.

ಅದೇ ದಿನ ಸಂಜೆ ೭ ಗಂಟೆಗೆ ವಡಾಲಾ ಜೀವೋತ್ತಮ ಮಠದಲ್ಲಿ ನಡೆದ ಸಭೆಯಲ್ಲಿ ಶ್ರೀ ಎಸ್.ವಿ. ಪಿಕಳೆ, ಗಿರೀಶ ಜೋಶಿ (ಕಚ್ಚೀ ಸಾರಸ್ವತ) ಮೊದಲಾದ ನೇತಾರರು ಭಾಗವಹಿಸಿದ್ದರು. ನಾವು ವಿಶ್ವ ಸಾರಸ್ವತ ಸಮ್ಮೇಳನದ ಕುರಿತು ಮಾತುಕತೆ ನಡೆಸಿದೆವು.

ಜುಲೈ ೧೮ ರಂದು ಭಾನುವಾರ ಬೆಳಗ್ಗೆ ಶ್ರೀ ಕೆ.ಜಿ. ಮಲ್ಯರ(ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಡಿ.ಜಿ.ಎಮ್.) ಜೊತೆಯಲ್ಲಿ ನಾನು ಶತಾಬ್ದಿ ಎಕ್ಸಪ್ರೆಸ್ ನಲ್ಲಿ ಪ್ರಯಾಣಿಸಿ ಗುಜರಾತಿನ ಸೂರತ ನಗರಕ್ಕೆ ಹೋಗಿ ತಲುಪಿದೆ. ಅಲ್ಲಿ ಆಯೋಜಿಸಲಾಗಿದ್ದ ಸಾರಸ್ವತ ಸಭೆಯಲ್ಲಿ ತುಂಬಾ ಜನರು ಸೇರಿದ್ದರು. ಬರೋಡದಿಂದ ಶ್ರೀ ಎಮ್.ಎಸ್. ಕಾಮತ್, ಡಾ. ಬಾಬಾ ಪೈ ಬಂದಿದ್ದರು. ನಾವು ಸಭೆಯನ್ನು ಉದ್ದೇಶಿಸಿ ಸಾರಸ್ವತ ಸಮ್ಮೇಳನದ ಕುರಿತು ಮಾತನಾಡಿದೆವು. ಸಭಾ ಕಾರ್ಯ ಮುಗಿದ ಬಳಿ ಊಟ ಮುಗಿಸಿ ಶ್ರೀ ಎಮ್. ಎಸ್. ಕಾಮತರ ಕಾರಿನಲ್ಲಿ ಬರೋಡಾಗೆ ಹೊರಟೆವು. ಬರೋಡಾದಲ್ಲಿ ಸಂಜೆ ಸಭಾ ಕಾರ್ಯಕ್ರಮವಿತ್ತು.

ಬರೋಡಾದಲ್ಲಿ ಮಂಗಳೂರಿನ ಕೊಂಕಣಿ ಸಾರಸ್ವತರು, ಮರಾಠಿ, ಗುಜರಾತಿ ಮತ್ತು ಕಚ್ ಸಾರಸ್ವತರು ಕೂಡಿ ತುಂಬಾ ಜನ ಸೇರಿದ್ದರು. ಅವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಕುರಿತು ವಿವರವಾಗಿ ಮಾಹಿತಿ ನೀಡುವ ಆವಶ್ಯಕತೆ ಇತ್ತು. ಸಭಾ ಕಾರ್ಯ ಮುಗಿದ ಬಳಿಕ ಊಟ ಮುಗಿಸಿ, ರೈಲಿನಲ್ಲಿ ಮುಂಬೈ ಅಭಿಮುಖವಾಗಿ ಪ್ರಯಾಣ ಮುಂದುವರಿಸಿದೆವು.

ಜುಲೈ ೧೯ ರಂದು ಮುಂಜಾನೆ ಮುಂಬೈ ದಾದರ ರೈಲ್ವೇ ಸ್ಟೇಷನ್ ತಲುಪಿ ಅಲ್ಲಿಂದ ನೇರವಾಗಿ ಶ್ರೀ ಪಿಕಳೆಯವರ ಮನೆಗೆ ಹೋಗಿ ವಿಶ್ರಾಂತಿ ಪಡೆದೆ. ಹನ್ನೊಂದು ಗಂಟೆಗೆ ಅಶ್ವಮೇಧ ಕಚೇರಿಯಲ್ಲಿ ಸಾರಸ್ವತ ಸಂಘದ ಕಾರ್ಯಕಾರಿ ಸಭೆ ಇತ್ತು. ಅಲ್ಲಿ ಗುಂಜೀಕರ, ಪಿಕಳೆ, ಜಿ.ವಿ. ಮಾಸೂರಕರ್, ಗಿರೀಶ ಜೋಶಿ, ಉಲ್ಲಾಸ ಕಾಮತ ಮೊದಲಾದವರು

ಭೇಟಿಯಾದರು. ಮುಂಬೈಯಲ್ಲಿ ಪ್ರಾದೇಶಿಕ ಸಮಿತಿ ರಚನೆಗೊಂಡದ್ದು, ಸಾರಸ್ವತರ ನಾಲ್ಕು ಮಠಗಳ ಗುರುವರ್ಯರುಗಳಿಗೆ ೧೬-೧೨-೧೯೯೯ರ ಕಾರ್ಯಕ್ರಮ-ದಲ್ಲಿ ಭಾಗವಹಿಸಲು ಆಮಂತ್ರಣ ನೀಡುವುದು, ೧೭-೧೮ ರಂದು ನಡೆಯಲಿರುವ ವಿಚಾರ ಸಂಕಿರಣದಲ್ಲಿ ಮಂಡನೆಯಾಗಲಿರುವ ವಿಷಯಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಕುರಿತು ವಿವರಗಳನ್ನು ಸಭೆಗೆ ನೀಡಿದೆ. ನಾವು ತಯಾರಿಸಿದ ಕೈಪಿಡಿ ಪುಸ್ತಿಕೆಯನ್ನು (ಬ್ರೋಚರ್) ನೋಡಿ ಶ್ರೀ ಗುಂಜೀಕರ್ ಸಂತೋಷ ವ್ಯಕ್ತಪಡಿಸಿದರು.

ಜುಲೈ ೨೦, ಮಂಗಳವಾರ ಕೊಯ್ನಾ ಎಕ್ಸಪ್ರೆಸ್ ರೈಲಿನಲ್ಲಿ ಪುಣೆಗೆ ಹೋದೆವು. ಅಲ್ಲಿ ಶ್ರೀ ಪ್ರಭಾಕರ ಬಂಟ್ವಾಳರು ನಮಗೆ "ಹೊಟೇಲ್ ಐಶ್ವರ್ಯ"ದಲ್ಲಿ ತಂಗುವ ವ್ಯವಸ್ಥೆ ಮಾಡಿದ್ದರು. ಪ್ರಭಾಕರ ಬಂಟ್ವಾಳ ಮತ್ತು ಬಾಬು ರಾವ್ ಅವರು ಗೌಡ ಸಾರಸ್ವತ, ಚಿತ್ರಾಪುರ, ರಾಜಾಪುರ ಹಾಗೂ ಮರಾಠಿ ಭಾಷಿಕ ಸಾರಸ್ವತರನ್ನು ಸೇರಿಸಿ ಸಭೆ ಕರೆದಿದ್ದರು. ನಾನು ವಿಶ್ವ ಸಾರಸ್ವತ ಸಮ್ಮೇಳನ ನಡೆಯುವುದರ ಕುರಿತು ಮಾಹಿತಿ ನೀಡಿದೆ. ಮರುದಿನ ಮುಂಜಾನೆ ಪ್ರಗತಿ ಎಕ್ಸಪ್ರೆಸ್ ರೈಲಿನಲ್ಲಿ ಕುಳಿತು ೧೧ ಗಂಟೆಗೆ ಮುಂಬೈ ತಲುಪಿದೆವು ಮತ್ತು ನೇರವಾಗಿ ಅಶ್ವಮೇಧ ಕಚೇರಿಗೆ ಹೋಗಿ ಉಳಿದ ಕಾಗದಪತ್ರಗಳನ್ನು ಸಿದ್ಧಪಡಿಸಿದೆವು.

ಸಂಜೆ ಮುಂಬೈ ಸಾರಸ್ವತ ಸಂಘದ ವತಿಯಿಂದಲೇ ಪಂಜಾಬ್, ಕಾಶ್ಮೀರ, ಹರಿಯಾಣ ಇತ್ಯಾದಿ ರಾಜ್ಯಗಳಲ್ಲಿ ನೆಲೆಸಿರುವ ಸಾರಸ್ವತರನ್ನು ಮತ್ತು ಸಾರಸ್ವತ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಆಯಾ ಪ್ರದೇಶಗಳಲ್ಲಿ ಪ್ರಾದೇಶಿಕ ಸಮಿತಿಗಳನ್ನು ರಚಿಸಬೇಕೆಂದು ತಿಳಿಸಿದೆವು. ಮರುದಿನ ನಾನು ಜೆಟ್ ವಿಮಾನದಲ್ಲಿ ಮಂಗಳೂರಿಗೆ ಬಂದೆ.

ವಿಶ್ವ ಸಾರಸ್ವತ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿ ಶ್ರೀ ಉದಯ ನಾಯಕ್ ಎಂಬ ಯುವಕ ನನ್ನನ್ನು ಹುಡುಕಿಕೊಂಡು ಬೆಂಗಳೂರಿನಿಂದ ಮಂಗಳೂರಿಗೆ ಬಂದು, ಸಮ್ಮೇಳನದ ಕಚೇರಿಯಲ್ಲಿ ನನ್ನನ್ನು ಭೇಟಿಯಾಗಿದ್ದರು. ಮೂಲತಃ ಕಟೀಲಿನವರಾದ ಉದಯ ನಾಯಕರು ಉತ್ತರ ಹಿಂದೂಸ್ಥಾನದಲ್ಲಿರುವ ಅನೇಕ ಸಾರಸ್ವತರ ಕುರಿತು ಆಳವಾದ ಅಧ್ಯಯನವನ್ನು, ಅವರ ಜಾತಿ, ಒಳಜಾತಿಗಳ ಕುರಿತು ವಿಶೇಷ ಸಂಶೋಧನೆಯನ್ನು ನಡೆಸಿದ್ದರು. ಉತ್ತರದ ಸಾರಸ್ವತರ ಕುಲ, ಕುಲದೇವರು, ಸಂಸ್ಕಾರ, ವ್ಯಾಪಾರ ವಹಿವಾಟುಗಳು, ಅಲ್ಲಿ ನೆಲೆ ನಿಂತಿರುವ ಸಾರಸ್ವತ ಉದ್ದಿಮೆದಾರರು, ಸಾಹಿತಿಗಳು, ಸಾಮಾಜಿಕ ನೇತಾರರು, ಹೀಗೆ ಸಮಸ್ತ ಮಾಹಿತಿಯನ್ನು ಅವರು ಕಲೆ ಹಾಕಿದ್ದರು. ಇವರಲ್ಲಿ ಕೆಲವು ಮಹನೀಯರ ವೈಯಕ್ತಿಕ ಸಂಪರ್ಕವು ಅವರಿಗೆ ಇತ್ತು.

ಉದಯ ನಾಯಕ್ ಬಂದು ನಮ್ಮನ್ನು ಭೇಟಿಯಾಗಿದ್ದರಿಂದ ಸಮ್ಮೇಳನ ಸಂಘಟನೆಯ ನಮ್ಮ ಕೆಲಸ ಕಾರ್ಯಗಳಿಗೆ ತುಂಬಾ ಬೆಂಬಲ ದೊರೆತಂತಾಗಿತ್ತು. ಕಾಶ್ಮೀರದಿಂದ ನಿರಾಶ್ರಿತರಾಗಿ ಬಂದು ಬೆಂಗಳೂರಿನಲ್ಲಿ ನೆಲೆ ನಿಂತ ಕಾಶ್ಮೀರಿ ಪಂಡಿತರ ಕುರಿತು ಅವರು ತುಂಬಾ ಮಾಹಿತಿ ಸಂಗ್ರಹಿಸಿ ನನಗೆ ನೀಡಿದರು. ಆಗಸ್ಟ್ ೮ ರಂದು ನಾನು ಬೆಂಗಳೂರಿಗೆ ಹೋದಾಗ ಉದಯ ನಾಯಕ್ ನನ್ನನ್ನು ಕಾಶ್ಮೀರಿ ಪಂಡಿತರು ಇರುವ "ಹಿಂದೂಸ್ಥಾನ ಮೆಶಿನ್ ಟೂಲ್ಸ್" ಪ್ರದೇಶಕ್ಕೆ ಕರೆದುಕೊಂಡು ಹೋದರು. ಅಲ್ಲಿ ನಾವು ಕಾಶ್ಮೀರಿ ಪಂಡಿತರ ಸಂಘದ ಅಧ್ಯಕ್ಷರಾದ ಶ್ರೀ ಅಮರನಾಥ ವೈಷ್ಣವಿ ಪಂಡಿತರನ್ನು ಭೇಟಿಯಾದೆವು. ಅವರು ನನಗೆ ತಮ್ಮ ಕೆಲವು ಸದಸ್ಯರನ್ನು ಪರಿಚಯಿಸಿದರು. ಅವರಲ್ಲಿ ನಾನು ಮಾತನಾಡಿ ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ವಿಶ್ವ ಸಾರಸ್ವತ ಸಮ್ಮೇಳನದ ಮಾಹಿತಿಯನ್ನು ನೀಡಿ, ಅವರು ಬಂದು ಅದರಲ್ಲಿ ಭಾಗವಹಿಸುವಂತೆ ಆಮಂತ್ರಣ ನೀಡಿದೆ. ಅದಕ್ಕೆ ಅವರು ನನ್ನಲ್ಲಿ, "ಮುಂದಿನ ಒಂದು ಭಾನುವಾರ ತಮ್ಮ ಸರ್ವ ಸದಸ್ಯರ ಸಭೆಯನ್ನು ಕರೆದು ಸದಸ್ಯರಿಗೆ ವಿಶ್ವ ಸಾರಸ್ವತ ಸಮ್ಮೇಳನದ ವಿಷಯವನ್ನು ತಿಳಿಸುತ್ತೇವೆ, ನೀವು ಆವಶ್ಯವಾಗಿ ಬಂದು ಅದರಲ್ಲಿ ಭಾಗಿಯಾಗಬೇಕು" ಎಂದು ತಿಳಿಸಿದರು. ನಾವು ಅದಕ್ಕೆ ಒಪ್ಪಿಕೊಂಡೆವು. ಅವರು ಕಾಶ್ಮೀರದಲ್ಲಿ ಒಳ್ಳೆಯ ಉದ್ಯೋಗಗಳಲ್ಲಿ, ವ್ಯವಸಾಯಗಳಲ್ಲಿ ತೊಡಗಿಕೊಂಡಿದ್ದವರು. ಪಾಕಿಸ್ತಾನದ ಪ್ರಚೋದನೆಯಿಂದ ಮುಸ್ಲಿಮ್ ತರುಣ ಉಗ್ರವಾದಿಗಳು ಈ ಪಂಡಿತರನ್ನು ಉಟ್ಟ ಬಟ್ಟೆಯಲ್ಲಿ ಹೆಂಡತಿ, ಮಕ್ಕಳ ಸಹಿತ ಕಾಶ್ಮೀರದಿಂದ ಹೊರಗೆ ಓಡಿಸಿದ್ದರು. ನಾನು ಅವರಿಗೆ ನಮ್ಮ ಪೂರ್ವಜರ ಮೇಲೆ, ನಮ್ಮ ಮಾತೃಭಾಷೆ ಮತ್ತು ನಮ್ಮ ಸಂಸ್ಕೃತಿಯ ಮೇಲೆ ಪೋರ್ತುಗೀಸ ಸೈನಿಕರಿಂದ ಮತ್ತು ಪಾದ್ರಿಗಳಿಂದ ನಡೆದ ಅತ್ಯಾಚಾರ, ಅನಾಚಾರ ಮತ್ತು ಬಲಾತ್ಕಾರದ ಕಾರಣದಿಂದ ನಮ್ಮ ಪೂರ್ವಿಕರು ನಿರಾಶ್ರಿತರಾಗಿ ಕರ್ನಾಟಕ ಮತ್ತು ದಕ್ಷಿಣದ ಕೊಚ್ಚಿಯವರೆಗೆ ಓಡಿ ಹೋಗಿ ಅಲ್ಲಿ ನೆಲೆ ನಿಂತ ಕಥೆಯನ್ನು ಹೇಳಿದೆ.

ಇಪ್ಪತ್ತನೆಯ ಶತಮಾನದ ಕೊನೆಯ ಸೂರ್ಯಗ್ರಹಣವು ಆಗಸ್ಟ್ ೧೧, ೧೯೯೯, ಬುಧವಾರ ಸಂಜೆ ೫.೧೦ಕ್ಕೆ ಸಂಭವಿಸಿತು. ನಾವು ಅದನ್ನು ಮನೆಯಲ್ಲಿ ಕುಳಿತು ಟಿವಿ

ಪರದೆಯ ಮೇಲೆ ನೋಡಿದೆವು. ಆಂಧ್ರ ಪ್ರದೇಶದ ಶ್ರೀಕಾಕುಲಂ ಊರಿನಲ್ಲಿ ಅದು ತುಂಬಾ ಸುಂದರ ದೃಶ್ಯವಾಗಿ ಗೋಚರಿಸಿತ್ತು.

ಆಗಸ್ಟ್ ೨೨ ರಂದು ಭಾನುವಾರ ನಾವು ಕುಂದಾಪುರ, ಗಂಗೊಳ್ಳಿ, ಕೋಟೇಶ್ವರಕ್ಕೆ ಹೋಗಿ ಕುಂದಾಪುರದ ತರುಣ ಕಾರ್ಯಕರ್ತರಾದ ಶ್ರೀ ಯು.ಎಸ್. ಶೆಣೈ, ಶ್ರೀ ಕೆ. ರಾಧಾಕೃಷ್ಣ ಶೆಣೈ, ಕೊಟೇಶ್ವರ ಶ್ರೀ ಕೆ. ಗೋವಿಂದರಾಯ ಕಾಮತ್ ಮೊದಲಾದವರನ್ನು ಭೇಟಿಯಾಗಿ, ನಾವು ಅಲ್ಲಿ ಪ್ರಾದೇಶಿಕ ಸಮಿತಿಯನ್ನು ರಚಿಸಿದೆವು.

ಆಗಸ್ಟ್ ೨೯ ರಂದು ಭಾನುವಾರ ಸಂಜೆ ೪.೩೦ಕ್ಕೆ ಬೆಂಗಳೂರಿನ ಎಚ್‌ಎಎಲ್ ಸರ್ಕಲಿನಲ್ಲಿರುವ ಕಾಮತ್ ಹೊಟೇಲಿನಲ್ಲಿ ಕಾಶ್ಮೀರಿ ಪಂಡಿತರ(ಸಾರಸ್ವತ) ಸಭೆಯನ್ನು ಕರೆಯಲಾಗಿತ್ತು. ನನ್ನೊಂದಿಗೆ ಉದಯ ನಾಯಕ್ ಮತ್ತು ಸುಧಾಕರ ಶೆಣೈ ಇದ್ದರು. ಕಾಶ್ಮೀರಿ ಪಂಡಿತರು ಅವರು ಅನುಭವಿಸಿದ್ದ ಮತ್ತು ಈಗ ಅನುಭವಿಸುತ್ತಿರುವ ಕಷ್ಟನಷ್ಟಗಳ ಕುರಿತು ತಿಳಿಸಿದರು. ಅದಕ್ಕೆ ನಾನು, "ನೀವು ನಮ್ಮ ಖರ್ಚಿನಲ್ಲಿ ಬಸ್ ಮಾಡಿಕೊಂಡು ಮಂಗಳೂರಿಗೆ ಬಂದು ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ನಮ್ಮ ಅತಿಥಿಗಳಾಗಿರಬೇಕು. ನೀವು ಪ್ರತಿನಿಧಿ ಶುಲ್ಕವನ್ನಾಗಲೀ, ಇತರ ದೇಣಿಗೆಯನ್ನಾಗಲೀ ನೀಡಬೇಕಾಗಿಲ್ಲ. ವಿಶ್ವ ಸಾರಸ್ವತ ಸಮಿತಿಯ ವತಿಯಿಂದ ನಿಮ್ಮ ವಸತಿ, ಊಟ ಉಪಹಾರದ ವ್ಯವಸ್ಥೆಯನ್ನು ನಡೆಸುತ್ತೇವೆ. ನೀವು ಒಂದು ಸಂಜೆ ನಿಮ್ಮ ಚಹಾ ಮತ್ತು ಯಾವುದಾದರೂ ತಿಂಡಿಯನ್ನು ತಯಾರಿಸಿ ಕೊಡಬೇಕು ಮತ್ತು ನಿಮ್ಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಬೇಕು. ಇಷ್ಟು ಮಾಡಿದರೆ ಸಾಕು. ನೀವು ನಮ್ಮ ಗೌರವಾನ್ವಿತ ಅತಿಥಿಗಳಾಗಿ ಸಮ್ಮೇಳನಕ್ಕೆ ಬರಬೇಕು," ಎಂದು ಹೇಳಿದೆ. ಅದಕ್ಕೆ ಅವರು ಸಂತೋಷದಿಂದ ಒಪ್ಪಿಕೊಂಡರು. ಈ ಕಾಶ್ಮೀರಿ ಪಂಡಿತರ ಮಂಗಳೂರು-ಬೆಂಗಳೂರು ಪ್ರಯಾಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ನಾನು ಉದಯ ನಾಯಕ್ ಮತ್ತು ಸುಧಾಕರ ಶೆಣೈಯವರಿಗೆ ತಿಳಿಸಿದೆ. ಅವರು ಅದಕ್ಕೆ ಒಪ್ಪಿಕೊಂಡರು.

ಸುಮಾರು ೫೦ ಮಂದಿ ಕಾಶ್ಮೀರಿ ಪಂಡಿತರು ಬಂದು ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರ ಪ್ರಯಾಣದ ವ್ಯವಸ್ಥೆಯನ್ನು ನಾವೇ ಮಾಡಿದ್ದೆವು. ಅವರು ಸಮ್ಮೇಳನದ ಮೂರನೆಯ ದಿನ ಅವರ ಪದ್ಧತಿಯಲ್ಲಿ ಚಹಾ ತಯಾರಿಸಿ ಎಲ್ಲರಿಗೂ ನೀಡಿದ್ದರು. ಸಂಜೆ ನಡೆದ ಕಾರ್ಯಕ್ರಮದಲ್ಲಿ ಅವರ ಪುರುಷರು ಮತ್ತು ಮಹಿಳೆಯರು ಸೇರಿ "ನಿಶ್ಚಯ ತಾಂಬೂಲ" ಪ್ರದರ್ಶನ ನೀಡಿದ್ದರು. ನಮ್ಮಲ್ಲಿ ನಡೆಯುವ ನಿಶ್ಚಯ ತಾಂಬೂಲ ಮತ್ತು ಅವರ ನಿಶ್ಚಯ ತಾಂಬೂಲದ ಕಾರ್ಯವಿಧಿಗಳಲ್ಲಿ ಕೆಲವು ಪ್ರಾದೇಶಿಕ ಭಿನ್ನತೆಗಳಿದ್ದರೂ, ಹೆಚ್ಚು ಅಂತರವಿಲ್ಲದಿರುವುದು ನಮಗೆ ಕಂಡಿತು.

ಮಂಗಳೂರಿನಲ್ಲಿ ನಾವು ತೋರಿಸಿದ ಪ್ರೀತಿ, ವಿಶ್ವಾಸಗಳು ಪಂಡಿತ ಜನರಿಗೆ ತುಂಬಾ ಇಷ್ಟವಾಗಿತ್ತು. ಅವರು ನಮ್ಮನ್ನು ತುಂಬಾ ಪ್ರಶಂಸೆ ಮಾಡಿ ಬೆಂಗಳೂರಿಗೆ ಹಿಂತಿರುಗಿದರು. ಇದೇ ರೀತಿ ನಾವು ದೆಹಲಿ ಮತ್ತು ಮುಂಬೈಯಲ್ಲಿದ್ದ ಕಾಶ್ಮೀರಿ ಪಂಡಿತರ ಸಂಘಗಳ ಅಧ್ಯಕ್ಷರಿಗೆ ಮತ್ತು ಮಂಡಳಿಯವರಿಗೆ ಆಮಂತ್ರಣ ನೀಡಿ ಕರೆದಿದ್ದೆವು. ಸಮ್ಮೇಳನದಲ್ಲಿ ಅವರು ತಮ್ಮ ಕುರಿತು ಪ್ರಬಂಧವನ್ನು ಮಂಡಿಸಲು ಅವರಿಗೆ ಅವಕಾಶವನ್ನು ಕೂಡ ನೀಡಿದ್ದೆವು.

* * *

ನಾನು ಸೆಪ್ಟೆಂಬರ ೩, ಶುಕ್ರವಾರ ರಾತ್ರಿ ಗಂಟೆ ೧೧.೩೦ಕ್ಕೆ ನಿಝಾಮುದ್ದೀನ ಲಕ್ಷದ್ವೀಪ ಮಂಗಳಾ ಎಕ್ಸಪ್ರೆಸ್ ರೈಲಿನಲ್ಲಿ ಕುಳಿತು ಭೋಪಾಲಕ್ಕೆ ಪ್ರಯಾಣ ಬೆಳೆಸಿ ಸೆಪ್ಟೆಂಬರ್ ೫ ರಂದು ಭಾನುವಾರ ಮುಂಜಾನೆ ಭೋಪಾಲ ತಲುಪಿದೆ. ಅಲ್ಲಿ ಮಂಗಳೂರು ಬೀಡಿ ವಿತರಕರಾದ ದಿ. ಡಿ.ಎಸ್. ಭಟ್ ಅವರ ಮಗ ಶ್ರೀ ಗೋವಿಂದ ಭಟ್ ನನ್ನನ್ನು ಸ್ವಾಗತಿಸಿ ಅವರ ಮನೆಗೆ ಕರೆದುಕೊಂಡು ಹೋದರು. ದೊಡ್ಡ ಮನೆ, ಅಲ್ಲಿರುವುದು ಅವರು ಮತ್ತು ಅವರ ತಾಯಿ ಮಾತ್ರ. ಬೆಳಗ್ಗೆ ೯ ಗಂಟೆಗೆ ಶ್ರೀ ಕೆ.ಜಿ. ಮಲ್ಯರು ಮುಂಬೈಯಿಂದ ಬಂದು ನನ್ನನ್ನು ಸೇರಿಕೊಂಡರು. ಭೋಪಾಲದಲ್ಲಿ ಕೆನರಾ ಬ್ಯಾಂಕ್ ಎಜಿಎಂ ಆಗಿದ್ದ ಶ್ರೀ ಎಂ. ಸೀತಾರಾಮ ಪ್ರಭು(ಅವರು ಹಿಂದೆ ಬಂಟವಾಳ ಕೆನರಾ ಬ್ಯಾಂಕಿನ ಮೆನೇಜರ್ ಆಗಿದ್ದವರು) ಸಾರಸ್ವತರ ಸಭೆಯನ್ನು ಆಯೋಜಿಸಿದ್ದರು. ಅಲ್ಲಿದ್ದ ಶ್ರೀ ಮಧು ಕೆಂಕರೆ ಎಂಬ ಸಾರಸ್ವತ ಕಾರ್ಯಕರ್ತರು ಮರಾಠಿ ಸಾರಸ್ವತರ ಕುರಿತು ಮಾಹಿತಿ ಸಂಗ್ರಹಿಸಿದ್ದರು. (ಆ ಕುರಿತು ಅವರು ಮಂಗಳೂರಿನಲ್ಲಿ ಸಮ್ಮೇಳನದಲ್ಲಿ ಪ್ರಬಂಧವನ್ನೂ ಮಂಡಿಸಿದ್ದರು.)

ಭೋಪಾಲದ ಜಗತ್ಪ್ರಸಿದ್ಧ ಭಾರತ ಭವನಕ್ಕೆ ನಾವು ಭೇಟಿ ನೀಡಿದೆವು. ನಾಟಕ ಕಲೆಯ ಪ್ರಗತಿಗಾಗಿ ಕೇಂದ್ರ ಸರ್ಕಾರ ಸ್ಥಾಪಿಸಿದ ಸಂಸ್ಥೆ ಇದು. ಈ ಕಟ್ಟಡ ಸಂಕೀರ್ಣವು ಬಹಳ ವಿಸ್ತಾರವಾದ ಜಾಗದಲ್ಲಿ ಹರಡಿಕೊಂಡಿದೆ. ದೇಶ

ವಿದೇಶಗಳಿಂದ ರಂಗಕರ್ಮಿಗಳು ಬಂದು ಇಲ್ಲಿ ನಾಟಕ ಕಾರ್ಯಾಗಾರ, ರೆಪರ್ಟರಿ ಇತ್ಯಾದಿ ನಡೆಸುತ್ತಾರೆ. ನಟನೆ, ನಿರ್ದೇಶನ ವಿಚಾರಗಳಲ್ಲಿ ತರಬೇತಿ ನೀಡುತ್ತಾರೆ. ಕರ್ನಾಟಕದ ಪ್ರಸಿದ್ಧ ರಂಗಕರ್ಮಿ ಶ್ರೀ ಬಿ.ವಿ. ಕಾರಂತರು ಕೆಲ ಸಮಯ ಭಾರತ ಭವನದ ನಿರ್ದೇಶಕರಾಗಿದ್ದರು. ಭೋಪಾಲದಲ್ಲಿ ಪ್ರಾಚೀನ ಗುಹಾಲಯ ಒಂದು ಇದೆ. ನಾವು ಅದನ್ನೂ ನೋಡಿ ಗಣೇಶ ಭಟ್ಟರ ಮನೆಯಲ್ಲಿ ರಾತ್ರಿ ಕಳೆದೆವು.

ಮರುದಿನ ಸೆಪ್ಟೆಂಬರ್ ೬, ಸೋಮವಾರ ಬೆಳಗ್ಗೆ ಟ್ಯಾಕ್ಸಿಯಲ್ಲಿ ಇಂದೋರಿಗೆ ಹೋದೆವು. ಅಲ್ಲಿ ನೂರು ವರ್ಷಗಳ ಹಿಂದೆಯೇ ಸ್ಥಾಪನೆಯಾಗಿರುವ "ಸಾರಸ್ವತ ಬ್ರಾಹ್ಮಣ ಸಮಾಜ" ಇದೆ. ಅವರು ತಮ್ಮ ಸ್ವಂತ ಭವನವನ್ನು ನಿರ್ಮಿಸಿ ವ್ಯವಸ್ಥಿತ ರೀತಿಯಲ್ಲಿ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವರ ಮುಖ್ಯಸ್ಥರಾದ ಶ್ರೀ ಮಧು ಕೆಂಕರೆ ಬಂದು ನಮ್ಮನ್ನು ಭೇಟಿಯಾದರು. ಮಧ್ಯಪ್ರದೇಶ ರಾಜ್ಯದಲ್ಲಿ ಭೋಪಾಲ, ಇಂದೋರ ಮತ್ತು ಉಜ್ಜಯಿನಿ ನಗರದಲ್ಲಿರುವ ಸಾರಸ್ವತ ಸಮಾಜಗಳ ಮುಖ್ಯ ಕಾರ್ಯಕರ್ತರಾಗಿ ಅವರು ವಿಶೇಷ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅವರಲ್ಲಿ ಸಾವಿರಾರು ಸಾರಸ್ವತ ಕುಟುಂಬಗಳ ಕುರಿತು ಕಲೆ ಹಾಕಿದ ಅಂಕಿಸಂಖ್ಯೆ, ಮಾಹಿತಿಗಳು ಸಿಗುತ್ತವೆ.

ಆದರೆ, ಈ ಪ್ರದೇಶದಲ್ಲಿರುವ ಸಾರಸ್ವತರು ಅವರ ಪರಂಪರೆಯನ್ನು ಮರೆತಿದ್ದಾರೆ. ಅವರಿಗೆ ತಮ್ಮ ಪೂರ್ವಜರ ಕುರಿತು ತಿಳಿವಳಿಕೆ ಇಲ್ಲ. ತಮ್ಮ ಕುಲದೇವರು ಮಂಗೇಶಿ ಎನ್ನುವುದು ಬಿಟ್ಟರೆ ತಮ್ಮ ಗುರು, ಮಠ, ಸ್ಮಾರ್ತ ಅಥವಾ ವೈಷ್ಣವ ಮೊದಲಾದ ವಿಚಾರಗಳು ತಿಳಿದಿಲ್ಲ ಎನ್ನುವುದು ನಮಗೆ ಗೊತ್ತಾಯಿತು. ಅವರು ನಮ್ಮನ್ನು ಸ್ವಾಗತಿಸಿ ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಅಲ್ಲಿ ನೆರೆದವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಮಾಹಿತಿ ನೀಡಿ ಪ್ರಾದೇಶಿಕ ಸಮಿತಿಯನ್ನು ರಚಿಸಿದೆವು. ನಾವು ಅಲ್ಲಿಯೇ ರಾತ್ರಿ ಕಳೆದೆವು.

ಮರುದಿನ ಸೆಪ್ಟೆಂಬರ್ ೭, ಮಂಗಳವಾರದ ದಿನ ನಮ್ಮನ್ನು ಮತ್ತು ಮಧು ಕೆಂಕರೆಯವರನ್ನು ಶ್ರೀ ಪ್ರದೀಪ ಮತ್ತು ಶ್ರೀ ಪ್ರಫುಲ್ ಮುಜಂದಾರರು ಅವರ ಕಾರಿನಲ್ಲಿ ಉಜ್ಜಯಿನಿಗೆ ತಲುಪಿಸಿದರು. ಅಲ್ಲಿ ಶ್ರೀ ರಾಮ ಗಣೇಕರ್ ಎಂಬ ಹಿರಿಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ತುಂಬಾ ಜನ ಸೇರಿದ್ದರು. ಡಾ. ಕಾಮತ್ ಎಂಬ ಕಾರವಾರಿ ಸಾರಸ್ವತರೊಬ್ಬರು ತುಂಬಾ ಉಮೇದು ತೋರಿಸಿದರು. ಶ್ರೀಮತಿ ಉತ್ತರಾ ಎಂಬವರು ಚಹ ವ್ಯವಸ್ಥೆ ಮಾಡಿದ್ದರು. ದೇಶದ ಪ್ರಸಿದ್ಧ ೧೨ ಉದ್ಭವ ಲಿಂಗಗಳಲ್ಲಿ ಒಂದು ಲಿಂಗ ಉಜ್ಜಯಿನಿಯ ದೇವಾಲಯದಲ್ಲಿದೆ. ಅದು ಅತಿ ಪುರಾತನ ದೇವಾಲಯ. ಕಾಶೀ ವಿಶ್ವನಾಥ ದೇವಾಲಯದಷ್ಟೇ ಪ್ರಸಿದ್ಧವಾದುದು. ಶ್ರೀ ಕೆಂಕರೆಯವರು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ದೇವಾಲಯವನ್ನು ತೋರಿಸಿದರು. ನಾವು ಅಭಿಷೇಕ, ಪೂಜೆ ಇತ್ಯಾದಿ ಮಾಡಿಸಿದೆವು. ಬಹಳ ದೊಡ್ಡ ದೇವಾಲಯ. ತಿರುಪತಿ ಕ್ಷೇತ್ರದಲ್ಲಿದ್ದಂತೆ ಇದೆ. ಇದರ ಬಳಿಕ ನಾವು ಸಂದೀಪನೀ ಆಶ್ರಮ(ಶ್ರೀ ಕೃಷ್ಣನ ಗುರುಕುಲ) ನೋಡಿದೆವು. ಆಮೇಲೆ ಶ್ರೀರಾಮ್ ಗಣೇಕರರ ಮನೆಯಲ್ಲಿ ಊಟ ಮಾಡಿದೆವು. ಇಂದೋರಿನಿಂದ ನಮ್ಮನ್ನು ಉಜ್ಜಯಿನಿಗೆ ಕರೆತಂದ ಶ್ರೀ ಪ್ರದೀಪ ಹಾಗೂ ಪ್ರಫುಲ್ ಮುಜುಂದಾರರು ನಮ್ಮೊಂದಿಗೆ ಸಂಜೆಯವರೆಗೆ ಇದ್ದು, ಆಮೇಲೆ ೫.೩೦ ಗಂಟೆಗೆ ನಮ್ಮನ್ನು ಮುಂಬೈ ರೈಲು ಹತ್ತಿಸಿ ಹೋದರು. ಈ ಪ್ರವಾಸದಲ್ಲಿ ನಮಗೆ ಅನೇಕ ಉತ್ತಮ ವ್ಯಕ್ತಿಗಳು ಭೇಟಿಯಾಗಿದ್ದರು.

ಸೆಪ್ಟೆಂಬರ್ ೮ ರಂದು ಮುಂಜಾನೆ ಮುಂಬೈ ತಲುಪಿ ಶ್ರೀ ಪಿಕಳೆಯವರ ಮನೆಗೆ ಹೋದೆ. ಆಮೇಲೆ ಹನ್ನೊಂದು ಗಂಟೆಗೆ ಅಶ್ವಮೇಧ ಕಚೇರಿಯಲ್ಲಿ ನಡೆದ ಸಾರಸ್ವತ ಸಂಘದ ಕಾರ್ಯಕಾರಿ ಸಮಿತಿಯ ಮುಂದೆ ನಾನು ನಡೆಸಿದ ಕಾರ್ಯವಿವರಗಳನ್ನು ಮತ್ತು ಪ್ರವಾಸದ ವರದಿಯನ್ನು ಮಂಡಿಸಿದೆ. ಆಮೇಲೆ ತುಂಬಾ ಚರ್ಚೆ ನಡೆಯಿತು. ಅವರ ಪಾಲಿನ ಕೆಲಸದ ಪ್ರಗತಿ ಕುರಿತು ವಿಚಾರಿಸಿದಾಗ, ಅವರು ಏನನ್ನೂ ಮಾಡದಿರುವುದು ತಿಳಿದು ಬಂತು. ಅವರ ಪಾಲಿಗೆ ಸಭೆ ಎಂದರೆ ಬಿಸಿ ಬಿಸಿ ಚರ್ಚೆ ಮಾಡುವುದು ಬಿಟ್ಟರೆ, ಪ್ರತ್ಯಕ್ಷವಾಗಿ ಕೆಲಸ ಮಾಡುವುದು ಅಲ್ಲವೆಂಬುದು ನನಗೆ ಖಚಿತವಾಯಿತು. ಇದೇ ಅಭಿಪ್ರಾಯವನ್ನು ಶ್ರೀ ಕೆ.ಜಿ. ಮಲ್ಯರು ಕೂಡ ವ್ಯಕ್ತಪಡಿಸಿದರು. ಮರುದಿನ ಮುಂಜಾನೆ ನಾನು "ಮುಂಬೈಯಲ್ಲಿ ಇದೇ ರೀತಿ ಕೆಲಸ ಮುಂದುವರಿಯು-ವುದಾದರೆ ತುಂಬಾ ಕಷ್ಟ ಆಗಬಹುದು" ಎಂದು ಶ್ರೀ ಪಿಕಳೆಯವರಲ್ಲಿ ಹೇಳಿ ವಿಮಾನ ಹತ್ತಿ ಮಂಗಳೂರಿಗೆ ಬಂದೆ.

ಮಂಗಳೂರಿನಲ್ಲಿ ಸಂಜೆ ಸಾರಸ್ವತ ಸಮ್ಮೇಳನ ಕಚೇರಿಗೆ ಹೋಗಿ ಅಲ್ಲಿ ನೆರೆದ ಸಂಘಟನಾ ಕಮಿಟಿಯ ಸದಸ್ಯರಲ್ಲಿ ಭೋಪಾಲ, ಇಂದೋರ್, ಉಜ್ಜಯಿನಿ ಪ್ರವಾಸದ ವಿವರಗಳನ್ನು, ಮುಂಬೈ ಸಾರಸ್ವತ ಸಂಘದ ಸಮಿತಿ ಸಭೆಯಲ್ಲಿ ವ್ಯಕ್ತಗೊಂಡ ಬಿಸಿ ವಾತಾವರಣದ ಕುರಿತು ತಿಳಿಸಿದೆ.

ನಾವು ವಿಶ್ವ ಸಾರಸ್ವತ ಸಮ್ಮೇಳನದ ಸಿದ್ಧತೆಯ ದಿನಗಳಲ್ಲಿ ಭೇಟಿ ನೀಡುತ್ತಿದ್ದ ಊರುಗಳಲ್ಲಿ ಸಾರಸ್ವತರ ಗುರುವರ್ಯರು ಇರುವ ಮಠಗಳಿದ್ದರೆ ಅಲ್ಲಿಗೆ ಹೋಗಿ ಆ ಗುರುವರ್ಯರನ್ನು ಭೇಟಿಯಾಗಿ ಅದುವರೆಗೆ ಸಮ್ಮೇಳನಕ್ಕಾಗಿ ನಡೆದ ಕಾರ್ಯಗಳ, ಪ್ರವಾಸದ ವಿವರಗಳನ್ನು, ಸಮ್ಮೇಳನದಲ್ಲಿ ನಡೆಯಲಿರುವ ಕಾರ್ಯಕ್ರಮಗಳ ವಿವರಗಳನ್ನು ವರದಿಯ ರೂಪದಲ್ಲಿ ನೀಡುವ ಕ್ರಮ ಇಟ್ಟುಕೊಂಡಿದ್ದೆ. ಆಗ ಅವರು ನನ್ನಲ್ಲಿ, "ಹಿರಿಯ ಸ್ವಾಮೀಜಿಯವರಲ್ಲಿ, ಅಂದರೆ ಕಾಶೀಮಠದ ಹಿರಿಯ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರನ್ನು ಭೇಟಿಯಾಗಿ ವಿಷಯ ತಿಳಿಸಬೇಕು. ಅವರು ಒಪ್ಪಿಕೊಂಡರೆ ಸರಿ" ಎನ್ನುತ್ತಿದ್ದರು.

ಹೀಗಾಗಿ, ಚಾತುರ್ಮಾಸ ವ್ರತದ ಆಚರಣೆಗಾಗಿ ಕೊಚ್ಚಿಯ ತಿರುಮಲ ದೇವಾಲಯದಲ್ಲಿ ಮೊಕ್ಕಾಂ ಹೂಡಿದ್ದ ಕಾಶೀಮಠದ ಪರಮಗುರು ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರನ್ನು ಭೇಟಿಯಾಗಲು ನಾನು, ಶ್ರೀ ಕೆ.ಜಿ. ಮಲ್ಯ ಅವರ ಜೊತೆಯಲ್ಲಿ ಸೆಪ್ಟೆಂಬರ್ ೧೭ರಂದು ಶುಕ್ರವಾರ ಕೊಚ್ಚಿ ತಲುಪಿದೆ. ನಮ್ಮನ್ನು ಅಲ್ಲಿಯ ಪ್ರಸಿದ್ಧ ನ್ಯಾಯವಾದಿ ಶ್ರೀ ಹೆಚ್.ಬಿ. ಶೆಣೈಯವರ ಮಗ ಶ್ರೀ ಅಶೋಕ ಶೆಣೈಯವರು ಸ್ವಾಗತಿಸಿ, ನಮಗೆ ವುಡಲ್ಯಾಂಡ್ಸ್ ಹೊಟೇಲಲ್ಲಿ ಇರುವ ವ್ಯವಸ್ಥೆ ಮಾಡಿದರು. ನಾವು ತುಸು ಹೊತ್ತು ವಿಶ್ರಾಂತಿ ಪಡೆದು ಆಮೇಲೆ ಸ್ನಾನ ಮುಗಿಸಿ ಗುರುವರ್ಯರನ್ನು ಭೇಟಿಯಾಗಲು ದೇವಾಲಯಕ್ಕೆ ಹೋದೆವು. ಅಲ್ಲಿ ಸ್ವಾಮೀಜಿಯುವರು ಸಂಜೆ ಭೇಟಿಯಾಗುವುದಾಗಿ ತಿಳಿಸಿದ್ದರಿಂದ, ಕೊಚ್ಚಿಯ ಕವಿ ಅನಂತ ಭಟ್ ಮತ್ತು ತಿರುಮಲ ದೇವಾಲಯದ ಕಮಿಟಿ ಅಧ್ಯಕ್ಷರಾಗಿದ್ದ ಶ್ರೀ ಜಯಕುಮಾರ ನಾಯಕ್ ಅವರನ್ನು ಭೇಟಿಯಾಗಿ ವಿಶ್ವ ಸಾರಸ್ವತ ಸಮ್ಮೇಳನದ ವಿವರಗಳನ್ನು ನೀಡಿದೆವು.

ಸಂಜೆ ನಾವು ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವನ್ನು ಭೇಟಿಯಾಗಿ ಸಮ್ಮೇಳನದ ಸಿದ್ಧತಾ ಕಾರ್ಯಗಳ ವಿವರಗಳನ್ನು ನೀಡಿದೆವು. ಮಂಗಳೂರಿನ ಸಂಘಟನಾ ಸಮಿತಿ ನಡೆಸಿದ ಕಾರ್ಯಗಳು, ನಾನು ದೆಹಲಿ, ಗುಜರಾತ, ಕಚ್ಛ್, ಮಧ್ಯಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಪ್ರವಾಸ ನಡೆಸಿ ಪ್ರಾದೇಶಿಕ ಸಮಿತಿಗಳನ್ನು ರಚಿಸಿರುವುದು, ನಾಲ್ಕು ದಿನಗಳ ಸಮ್ಮೇಳನದಲ್ಲಿ ಎರಡು ದಿನ ನಡೆಯಲಿರುವ ಪರಿಸಂವಾದ ಮತ್ತು ಗೋಷ್ಠಿಗಳಲ್ಲಿ ಮಂಡನೆಯಾಗಲಿರುವ ಪ್ರಬಂಧಗಳ ವಿಷಯ ಇತ್ಯಾದಿ ವಿವರವಾಗಿ ತಿಳಿಸಿದೆವು. ಅದಲ್ಲದೆ, ಸಮ್ಮೇಳನದ ಪ್ರಾರಂಭದ ದಿನದಂದು ಮಧ್ಯಾಹ್ನ ೪.೩೦ಕ್ಕೆ ಮಂಗಳೂರು ನೆಹರೂ ಮೈದಾನಿನಿಂದ ಮಂಗಳಾ ಕ್ರೀಡಾಂಗಣದವರೆಗೆ ನಡೆಯಲಿರುವ "ಶೋಭಾ ಯಾತ್ರೆ"ಯಲ್ಲಿ ನಾಲ್ಕೂ ಮಠಗಳ ಸ್ವಾಮೀಜಿಯವರು ರಥಾರೂಢರಾಗಿ ಪಾಲುಗೊಂಡು ಆಮೇಲೆ ವೇದಿಕೆಯಲ್ಲಿ ಆಸೀನರಾಗಿ ಅಲ್ಲಿ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮದ ವಿವರಗಳನ್ನು ನೀಡಿದೆ. ನಾಲ್ಕನೆಯ ದಿನ ಸಮಾರೋಪ ಸಮಾರಂಭದ ಕುರಿತು ನಾವು ಯೋಜಿಸಿದ ವಿವರಗಳನ್ನೂ ಅವರಲ್ಲಿ ನಿವೇದಿಸಿಕೊಂಡೆ.

ನನ್ನ ಮಾತಿಗೆ ಸ್ಪಂದಿಸಿದ ಶ್ರೀ ಗುರುವರ್ಯರು, ತಮ್ಮ ಸಂತೋಷ ಮತ್ತು ಸಮ್ಮತಿಯನ್ನು ತಿಳಿಸಿದರು. ಆದರೆ 'ಮೊದಲ ದಿನ ಸಂಜೆ ನಡೆಯಲಿದ್ದ ಶೋಭಾಯಾತ್ರೆಯಲ್ಲಿ ಮಾತ್ರ ಭಾಗಿಯಾಗಿ ಅಷ್ಟು ದೀರ್ಘ ಅವಧಿಗೆ ರಥದಲ್ಲಿ ಕುಳಿತು ಬರುವುದು ಸಾಧ್ಯವಾಗಲಿಕ್ಕಿಲ್ಲ' ಎಂದು ಅವರು ಹೇಳಿದಾಗ, 'ಶೋಭಾ ಯಾತ್ರೆ ಬರುವ ದಾರಿಯಲ್ಲಿ ಗುರುವರ್ಯರಿಗೆ ಎಲ್ಲಿಯೂ ಆರತಿ, ಹೂಹಾರ ಸಮರ್ಪಣೆ ಮಾಡದೆ, ರಥ ಎಲ್ಲಿಯೂ ನಿಲ್ಲದೆ ನೇರವಾಗಿ ಮಂಗಳಾ ಕ್ರಿಡಾಂಗಣಕ್ಕೆ ಬರುವ ಹಾಗೆ ನಾವು ಸಿದ್ಧತೆ ಮಾಡಿದ್ದೇವೆ. ಅಲ್ಲದೆ ಈ ಶೋಭಾ ಯಾತ್ರೆಯಲ್ಲಿ ರಥಾರೂಢರಾಗಿ ಸಾರಸ್ವತರ ನಾಲ್ಕು ಮಠಗಳ ಸ್ವಾಮೀಜಿಯವರು ಪ್ರಥಮವಾಗಿ ಒಟ್ಟಾಗಿ ಕುಳಿತು ಬರುವ ವೈಭವವನ್ನು ಅನ್ಯ ಸಮಾಜದವರೂ ನೋಡಿ ಸಂತೋಷಪಡುವ ಹಾಗಾಗುತ್ತದೆ' ಎಂದು ನಾವು ಹೇಳಿದೆವು. ಅದನ್ನು ಕೇಳಿ ಸ್ವಾಮೀಜಿಯವರು ತಮ್ಮ ಒಪ್ಪಿಗೆ ಸೂಚಿಸಿದರು. ಅವರು ಒಪ್ಪಿಕೊಂಡಿರುವುದು ನಮ್ಮ ಭಾಗ್ಯವೆಂದು ನಾನು ಆಗ ತಿಳಿದೆ. ಈ ರೀತಿ ನಮ್ಮ ಎಲ್ಲಾ ಕಾರ್ಯಗಳಿಗೂ ಸ್ವಾಮೀಜಿಯವರು ಹೃತ್ಪೂರ್ವಕವಾಗಿ ಆಶೀರ್ವಾದ ಮಾಡಿದರು. ಆಮೇಲೆ ನಾವು ಅವರ ಅಪ್ಪಣೆ ಪಡೆದು ಮಂಗಳೂರಿಗೆ ಹಿಂತಿರುಗಿ ಬಂದೆವು.

* * *

ಅದೇ ಸಮಯದಲ್ಲಿ ಸ್ವಾಮೀಜಿಯವರು ದೂರವಿಟ್ಟಿದ್ದ ಶಿಷ್ಯ ರಾಘವೇಂದ್ರರು ತಿರುಪತಿಯಲ್ಲಿದ್ದರು. ಅವರಿಗೆ ಮುಂಬೈ ಸಾರಸ್ವತ ಸಂಘದ ಅಧ್ಯಕ್ಷರು ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ಉಪಸ್ಥಿತರಿರಲು ವಿನಂತಿ ಪತ್ರ ಕಳುಹಿಸಿದ್ದರು. ಆದರೆ ಅವರು ಸಮ್ಮೇಳನದಲ್ಲಿ ಭಾಗಿಯಾಗಲು ಆಗುವುದಿಲ್ಲವೆಂದು ತಿಳಿಸಿದ್ದರು. ಹೀಗಾಗಿ ಅವರ ಉಪಸ್ಥಿತಿ ಸಮ್ಮೇಳನದಲ್ಲಿ ಇರಲಿಲ್ಲ.

ಸೆಪ್ಟೆಂಬರ್ ೧೮ರಂದು ಶ್ರೀ ಎಸ್.ವಿ. ಪಿಕಳೆ ಮತ್ತು ಗಿರೀಶ ಜೋಶಿಯವರು ಮಂಗಳೂರಿಗೆ ಬಂದಿದ್ದರು. ಅವರು

ಸಂಘಟನಾ ಸಮಿತಿಯೊಂದಿಗೆ ಮಾತುಕತೆ ನಡೆಸಿದರು. ಆಮೇಲೆ ನಾವು ಉಡುಪಿಯ ಶ್ರೀ ಲಕ್ಷ್ಮೀವೆಂಕಟರಮಣ ದೇವಾಲಯದಲ್ಲಿ ಚಾತುರ್ಮಾಸ ವೃತಕ್ಕಾಗಿ ಮೊಕ್ಕಾಂ ಹೂಡಿದ್ದ ಶ್ರೀ ಕೈವಲ್ಯ ಮಠಾಧೀಶರನ್ನು ಮತ್ತು ಅವರ ಶಿಷ್ಯರಾದ ಶ್ರೀ ಶಿವಾನಂದ ಸರಸ್ವತಿ ಸಾಮೀಜಿಯವರನ್ನು ಭೇಟಿಯಾಗಿ ಅವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಕುರಿತು ಮಾಹಿತಿ ನೀಡಿ ಅವರ ಆಶೀರ್ವಾದ ಪಡೆದುಕೊಂಡೆವು.

ನಾವು ಉಡುಪಿಯಿಂದ ಬಸ್ರೂರಿಗೆ ಹೋದೆವು. ಅಲ್ಲಿ ಶ್ರೀ ಮಹಾಲಸಾ ನಾರಾಯಣೀ ದೇವಾಲಯದಲ್ಲಿ ಗೋಕರ್ಣ ಪರ್ತಗಾಳಿ ಮಠಾಧೀಶ ಶ್ರೀ ವಿದ್ಯಾಧಿರಾಜ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು ಮೊಕ್ಕಾಂ ಹೂಡಿದ್ದರು. ಅವರಲ್ಲಿಯೂ ಮಾನ್ಯ ಪಿಕಳೆಯವರು ವಿಶ್ವ ಸಾರಸ್ವತ ಸಮ್ಮೇಳನದ ಸಿದ್ಧತೆ, ನಮ್ಮ ಸಂಘಟನಾ ಪ್ರವಾಸ, ನಾಲ್ಕು ದಿನಗಳ ಕಾಲ ನಡೆಯಲಿರುವ ಸಮ್ಮೇಳನದ ಕಾರ್ಯಕ್ರಮಗಳು ಇತ್ಯಾದಿ ವಿವರಗಳನ್ನು ನೀಡಿದರು. ಶ್ರೀ ಗುರುವರ್ಯರು ಸಂತೋಷ ವ್ಯಕ್ತಪಡಿಸಿ, ನಮಗೆ ಫಲ ಮಂತ್ರಾಕ್ಷತೆಯನ್ನು ನೀಡಿ ಆಶೀರ್ವದಿಸಿದರು.

ಹಿಂದೆ ಬರುವಾಗ ಉಡುಪಿಯಲ್ಲಿ ನಾವು ಶ್ರೀ ಕೆ.ಕೆ. ಪೈಯವರನ್ನೂ ಪಿಕಳೆಯವರ ಕಾರಿನಲ್ಲಿ ಮಂಗಳೂರಿಗೆ ಕರೆ ತಂದೆವು. ಮಂಗಳೂರಿನಲ್ಲಿ ಸಾರಸ್ವತ ಸಮ್ಮೇಳನ ಕಚೇರಿಯಲ್ಲಿ ಬೇರೆ ಬೇರೆ ವಿಚಾರಗಳ ಕುರಿತು ಮಾತುಕತೆ, ಚರ್ಚೆ ನಡೆಸಿದೆವು. "ಶತಮಾನದ ಸಾರಸ್ವತ" ಗ್ರಂಥ ಪ್ರಕಟಣೆಯ ಕುರಿತು ವಿಸ್ತೃತ ಚರ್ಚೆ ನಡೆಯಿತು. ಸಮ್ಮೇಳನಕ್ಕಾಗಿ ಸಂಘನಿಕೇತನವನ್ನು ಬಳಸುವ ನಮ್ಮ ಕೋರಿಕೆಗೆ ಆ ಸಂಸ್ಥೆಯ ಮುಖ್ಯಸ್ಥರು ಸಂತೋಷದಿಂದ ಒಪ್ಪಿಗೆ ನೀಡಿದರು.

ಅಕ್ಟೋಬರ್ ೧೦, ಭಾನುವಾರ ಸಂಜೆ ಗಂಟೆ ೬.೩೦ಕ್ಕೆ "ಸಾರಸ್ವತ–ಭೋಂವಂಡಿ" ಉದ್ಘಾಟನಾ ಕಾರ್ಯಕ್ರಮ ಇತ್ತು. ಸಮ್ಮೇಳನಕ್ಕೆ ಸಾರಸ್ವತ ಬಂಧುಗಳನ್ನು ಆಮಂತ್ರಿಸಲು ಶ್ರೀಮತಿ ವಸಂತಿ ಆರ್. ನಾಯಕ್ ಮತ್ತು ಶ್ರೀ ಹೆಚ್. ರಾಘವೇಂದ್ರ ರಾವ್ ಅವರ ನೇತೃತ್ವದಲ್ಲಿ ಸಾರಸ್ವತರು ಹೆಚ್ಚು ಸಂಖ್ಯೆಯಲ್ಲಿರುವ ಊರುಗಳಿಗೆ ಹೋಗಿ ತಿರುಗಾಟ ತಂಡವು ಹಾಡು ಮತ್ತು ಭಾಷಣ ನೀಡಿ ಬರುವ ಕಾರ್ಯವಿಧಿ ಬಹಳ ಚೆನ್ನಾಗಿ ನಡೆಯಿತು.

೧೯೯೯ನೇ ಇಸವಿ, ಅಕ್ಟೋಬರ್ ೧೩ ರಂದು ಬುಧವಾರ ಬೆಳಗ್ಗೆ ಗಂಟೆ ೧೦.೩೦ಕ್ಕೆ ಶ್ರೀ ಅಟಲ್‌ಬಿಹಾರಿ ವಾಜಪೇಯಿಯವರು ಭಾರತ ದೇಶದ ಪ್ರಧಾನ ಮಂತ್ರಿಗಳಾಗಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿದ್ದರು. ಅವರ ಮಂತ್ರಿಮಂಡಲದಲ್ಲಿ ರಾಜಾಪುರದ ಮಾನ್ಯ ಶ್ರೀ ಸುರೇಶ ಪಿ. ಪ್ರಭು ಮಂತ್ರಿಯಾಗಿ ನೇಮಕಗೊಂಡಿದ್ದರು. ಇದು ಸಾರಸ್ವತ ಸಮಾಜದ ಸಂತೋಷಕ್ಕೆ ಹಾಗೂ ಅಭಿಮಾನಕ್ಕೆ ಕಾರಣವಾಯಿತು. ವಿಶ್ವ ಸಾರಸ್ವತ ಸಮ್ಮೇಳನದ ಮುಹೂರ್ತ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಸನ್ಮಾನ್ಯ ಶ್ರೀ ಸುರೇಶ ಪ್ರಭು ಅವರು ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಕೇಂದ್ರ ಮಂತ್ರಿಗಳಾಗಿ ಬರುವುದು ನಮಗೆ ಅತೀವ ಸಂತೋಷವನ್ನು ಉಂಟು ಮಾಡಿತು.

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಮಾನ್ಯ ಶ್ರೀ ಎಸ್.ಎಮ್. ಕೃಷ್ಣ ಮುಖ್ಯಮಂತ್ರಿಗಳಾದರು. ಅವರ ಮಂತ್ರಿಮಂಡಲದಲ್ಲಿ ನಮ್ಮವರೇ ಆದ ಶ್ರೀ ಆರ್.ವಿ. ದೇಶಪಾಂಡೆಯವರು ಮಂತ್ರಿಗಳಾಗಿ ಪ್ರತಿಜ್ಞೆ ಸ್ವೀಕರಿಸಿದ್ದರು.ಅದು ಕೂಡ ನಮಗೆ ಸಂತೋಷ ನೀಡಿದ ವಿಷಯವಾಗಿತ್ತು. ನಾವು ಮಾನ್ಯ ಶ್ರೀ ದೇಶಪಾಂಡೆಯವರಿಗೂ ವಿಶ್ವ ಸಾರಸ್ವತ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬರುವಂತೆ ಆಮಂತ್ರಣ ನೀಡಿದೆವು.

ಇದೇ ಸಂದರ್ಭದಲ್ಲಿ ಮಂಗಳೂರು ವಿಧಾನಸಭಾ ಕ್ಷೇತ್ರದಿಂದ ಶ್ರೀ ಎನ್. ಯೋಗೀಶ ಭಟ್ ಅವರು ಭಾರತೀಯ ಜನತಾ ಪಕ್ಷದ ವತಿಯಿಂದ ಶಾಸಕರಾಗಿ ಚುನಾಯಿತರಾಗಿದ್ದರು. ಅವರು ಕೂಡ ವಿಶ್ವ ಸಾರಸ್ವತ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಹಾಜರಿದ್ದರು.

ಅಕ್ಟೋಬರ್ ೨೭ರಂದು ರಾತ್ರಿ ನಾನು ಮತ್ತು ಉದಯ ನಾಯಕ್ ಮಂಗಳಾ ಎಕ್ಸಪ್ರೆಸ್ ರೈಲಿನಲ್ಲಿ ದೆಹಲಿಗೆ ಹೊರಟೆವು. ಅಕ್ಟೋಬರ್ ೨೯, ಶುಕ್ರವಾರ ದೆಹಲಿ ತಲುಪಿ ಚಿ. ದಿನ್ನುವಿನ ಮನೆಗೆ ಹೋಗಿ ಸ್ನಾನ ಮುಗಿಸಿ ಉಪಹಾರ ಸೇವಿಸಿದೆವು. ಆಮೇಲೆ ದೆಹಲಿಯ ಶ್ರೀ ವಿ.ಎನ್. ಕಬಾಡಿಯವರ ಕಾರಿನಲ್ಲಿ ನಾನು, ಚಿ. ದಿನ್ನು ಮತ್ತು ಉದಯ ನಾಯಕ್ ರೈಲ್ವೇ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಜೋಧಪುರಕ್ಕೆ ಹೋಗುವ ರೈಲು ಹತ್ತಿದೆವು. ಶನಿವಾರ ೩೦ನೇ ತಾರೀಖಿನಂದು ಜೋಧಪುರ ತಲುಪಿದ ನಮಗೆ ಅಲ್ಲಿಯ ಉದ್ಯಮಿ ಶ್ರೀ ಆರ್.ಕೆ. ಒಝಾರವರು ತಮ್ಮ ಕಂಪೆನಿಯ ಅತಿಥಿಗೃಹದಲ್ಲಿ ಇರುವ ವ್ಯವಸ್ಥೆ ಮಾಡಿದ್ದರು. ಅಲ್ಲಿ ಅವರದೇ ಅಡುಗೆಯವನು ಇದ್ದುದರಿಂದ ನಮಗೆ ಊಟ ತಿಂಡಿಗೆ ಯಾವ ತೊಂದರೆಯೂ ಆಗಲಿಲ್ಲ. ಉಳಿದ ವ್ಯವಸ್ಥೆಯೂ ಬಹಳ ಚೆನ್ನಾಗಿತ್ತು.

ಜೋಧಪುರದ ಸಾರಸ್ವತರು ಮಂಗಳೂರು ಮತ್ತು ಮುಂಬೈಯಿಂದ ಬಂದಿರುವ ನಮಗಾಗಿ ದೊಡ್ಡ ಸಭಾಂಗಣದಲ್ಲಿ ಇಡೀ ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಬಂದವರಿಗೆಲ್ಲಾ ಊಟದ ವ್ಯವಸ್ಥೆಯೂ ಇತ್ತು. ಅವರ ಸ್ವಾಮೀಜಿಯೊಬ್ಬರು ದೀಪ ಹಚ್ಚಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಘನಶ್ಯಾಮಜೀ ಒಝಾ ಮತ್ತು ಅವರ ಸೋದರ ಶ್ರೀ ರಾಮಕುಮಾರ ಒಝಾ ಜೋಧಪುರದ ದೊಡ್ಡ ಕೈಗಾರಿಕೋದ್ಯಮಿಗಳು. ಅವರು ಪ್ರಸಿದ್ಧ ದಾನಿಗಳೂ ಹೌದು. ನಮ್ಮನ್ನು ಬಹಳ ಗೌರವದಿಂದ ಆದರಪೂರ್ವಕವಾಗಿ ನಡೆಸಿಕೊಂಡಿದ್ದರು. ಉದ್ಘಾಟನೆ ನಡೆದ ಬಳಿಕ ಒಝಾ ಅವರಿಂದ ಸ್ವಾಗತ ಭಾಷಣವಾಯಿತು. ಆಮೇಲೆ ಶ್ರೀ ಪಿಕಳೆಯವರು ಮುಂಬೈನ ಎಐಎಸ್‌ಸಿಒ (ಸಾರಸ್ವತ ಸಂಘ) ಕುರಿತು ಮಾಹಿತಿ ನೀಡಿದರು. ಶ್ರೀ ವಿ.ಎನ್. ಕಬಾಡಿಯವರು ಹಿಂದಿಯಲ್ಲಿ ಮಾತನಾಡಿದರು. ನಾನು ಸಭೆಯನ್ನುದ್ದೇಶಿಸಿ ಇಂಗ್ಲಿಷಿನಲ್ಲಿ ಮಾತನಾಡುತ್ತಾ, ವಿಶ್ವ ಸಾರಸ್ವತ ಸಮ್ಮೇಳನ ನಡೆಸುವ ಉದ್ದೇಶ, ಅದರ ಸಿದ್ಧತೆಗಳು, ಸಮ್ಮೇಳನದಲ್ಲಿ ನಡೆಯುವ ಚರ್ಚೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳನ್ನು ನೀಡಿದೆ. ಶ್ರೀ ಕೆ.ಜೆ. ಮಲ್ಯರು ನಮ್ಮ ಗುರುಮಠ, ಕುಲದೇವಸ್ಥಾನ, ಸಂಘ, ಸಂಸ್ಥೆಗಳ ಮಾಹಿತಿ ನೀಡಿದರು. ಊಟವಾದ ಬಳಿಕ ವಿವಿಧ ಗೋಷ್ಠಿಗಳಿದ್ದವು. ಜೋಧಪುರದ ಸಾರಸ್ವತರು ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಅಧಿಕ ಸಂಖ್ಯೆಯಲ್ಲಿ ಮಂಗಳೂರಿಗೆ ಬರಬೇಕೆಂದು ನಾವು ಅವರನ್ನು ವಿನಂತಿಸಿಕೊಂಡೆವು. ಅವರು ದೇಣಿಗೆ ನೀಡಿ ಸಹಾಯ ಮಾಡುವುದಾಗಿ ಆಶ್ವಾಸನೆ ನೀಡಿದರು. ನಾವು ರೈಲಿನಲ್ಲಿ ಸಂಜೆ ೭.೩೦ ಗಂಟೆಗೆ ಜೋಧಪುರದಿಂದ ಹೊರಟವರು ಮರುದಿನ ಮುಂಜಾನೆ ದೆಹಲಿ ತಲುಪಿದೆವು. ಅಲ್ಲಿ ಚಿ. ದಿನ್ನುವಿನ ಮನೆಯಲ್ಲಿ ವಿಶ್ರಾಂತಿ ಪಡೆದೆವು.

ಅಕ್ಟೋಬರ ೩೦, ಭಾನುವಾರ ಬೆಳಗ್ಗೆ ಸ್ನಾನ ಮುಗಿಸಿ ನಾನು, ಉದಯ ನಾಯಕ, ಮತ್ತು ಶೋಭಾ, ಚಿ. ದಿನ್ನುವಿನೊಂದಿಗೆ ಅವನ ಕಾರಿನಲ್ಲಿ ಮಥುರಾಗೆ ಹೋದೆವು. ದೆಹಲಿಯಿಂದ ಮಥುರಾಗೆ(ಕಾರಿನಲ್ಲಿ) ೩ ಗಂಟೆಯ ದಾರಿ. ಮಥುರಾದಲ್ಲಿ ನಮ್ಮನ್ನು ಉದಯ ನಾಯಕರು ಶ್ರೀ ಆರ್.ಸಿ. ಸಾರಸ್ವತ ಎಂಬವರ ಮನೆಗೆ ಕರೆದುಕೊಂಡು ಹೋದರು. ಅವರು ನಮ್ಮನ್ನು ೩–೪ ಸಾರಸ್ವತ ಮುಖಂಡರ ಮನೆಗೆ ಕರೆದುಕೊಂಡು ಹೋದರು. ಅವರಿಗೆ ನಾವು ಸಾರಸ್ವತ ಸಮ್ಮೇಳನಕ್ಕೆ ಬರಲು ಆಮಂತ್ರಣ ನೀಡಿದೆವು. ಆಮೇಲೆ ವೃಂದಾವನಕ್ಕೆ ಹೋದೆವು.

ವೃಂದಾವನದಲ್ಲಿ ಸಾರಸ್ವತ ಮುಖಂಡರಾದ ಶ್ರೀ ಗೋಸ್ವಾಮಿಯವರ ಅಧೀನದಲ್ಲಿರುವ (ಶ್ರೀ ಧರ್ಮಸ್ಥಳ ದೇವಾಲಯವು ಶ್ರೀ ಹೆಗ್ಗಡೆ ಕುಟುಂಬದವರ ಅಧೀನದಲ್ಲಿ ಇರುವ ಹಾಗೆ) "ಬಂಕೆ ಬಿಹಾರಿ ದೇವಾಲಯ"ವಿದೆ. ಶ್ರೀ ಗೋಸ್ವಾಮಿ ತುಂಬಾ ಪ್ರತಿಷ್ಠೆಯ ವ್ಯಕ್ತಿ. ಅವರು ಬೇರೆಯವರ ಕೆಲಸಗಳಿಗೆ, ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಗಳಿಗೆ ನೆರವು, ಸಹಕಾರ ನೀಡುವ ಉದಾರಿ. ಅವರು ನಮ್ಮನ್ನು ವಿಶೇಷ ರೀತಿಯಲ್ಲಿ ಸ್ವಾಗತಿಸಿ, ಶ್ರೀ ಕೃಷ್ಣನ ದರ್ಶನಕ್ಕಾಗಿ ಅವರ ಜನರನ್ನು ನಮ್ಮೊಂದಿಗೆ ಕಳುಹಿಸಿಕೊಟ್ಟರು. ನಮ್ಮ ಕೈಯಲ್ಲಿ ವಿಶೇಷ ಪೂಜಾರತಿ ಮಾಡಿಸಿ, ನಮಗೆ ಹಾರ ಹಾಕಿ, ಶಾಲು ಹೊದೆಸಿ, ಫಲಪುಷ್ಪ ಕೊಡಿಸಿದರು. ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದವರು ಶ್ರೀ ಆರ್.ಸಿ. ಸಾರಸ್ವತರ ಬೀಗರು. ಅಲ್ಲಿಂದ ನಾವು ಅವರ ಮನೆಗೆ ಹೋದೆವು. ಅಲ್ಲಿಯೇ ಊಟ ಮಾಡಿದೆವು. ಹಾಲಿನಿಂದ ತಯಾರಿಸಿದ ಅನೇಕ ವಿಧದ ಸಿಹಿತಿಂಡಿಗಳನ್ನು ನಮಗೆ ನೀಡಲಾಗಿತ್ತು. ಅವರ ಗೋಶಾಲೆ, ದೇವಸ್ಥಾನದ ವತಿಯಿಂದ ನಡೆಯುತ್ತಿರುವ ಶಾಲೆ, ಕಾಲೇಜು ಇತ್ಯಾದಿಗಳನ್ನು ಅವರು ನಮಗೆ ತೋರಿಸಿದರು. ಆಮೇಲೆ "ನೀವು ಎರಡನೆಯ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸುವುದಿದ್ದರೆ, ಅದನ್ನು ವೃಂದಾವನದಲ್ಲಿಯೇ ಮಾಡಬಹುದು, ನನಗೆ ಮೊದಲೇ ತಿಳಿಸಿದರೆ ಎಷ್ಟೇ ಜನ ಬರಲಿ ಅವರಿಗೆಲ್ಲರಿಗೂ ವಸತಿ, ಊಟ ಉಪಚಾರದ ವ್ಯವಸ್ಥೆ, ಸಮ್ಮೇಳನಕ್ಕೆ ತಗಲುವ ಸಂಪೂರ್ಣ ಖರ್ಚುವೆಚ್ಚ ಎಲ್ಲವನ್ನೂ ನಾನೇ ನೋಡಿಕೊಳ್ಳುವೆ" ಎಂದು ನಮ್ಮಲ್ಲಿ ಅವರು ಹೇಳಿದರು. ನಾವು ಅವರಿಂದ ಬೀಳ್ಕೊಂಡು ರಾತ್ರಿ ೮ ಗಂಟೆಗೆ ಮಥುರಾ ತಲುಪಿದೆವು. ಆಮೇಲೆ ಅಲ್ಲಿಂದ ದೆಹಲಿಗೆ ಪ್ರಯಾಣಿಸಿ ರಾತ್ರಿ ೧೧ ಗಂಟೆಗೆ ಚಿ. ದಿನ್ನುವಿನ ಮನೆಗೆ ತಲುಪಿದೆವು.

ನವೆಂಬರ್ ೨, ಮಂಗಳವಾರ ಭಾರತದಲ್ಲಿಯೇ ಪ್ರಸಿದ್ಧರೆನಿಸಿದ ಕೈಗಾರಿಕೋದ್ಯಮಿ ಶ್ರೀ ಎಸ್.ಎನ್.ಪಿ. ಪೂಂಜ್ ಅವರನ್ನು ಭೇಟಿಯಾಗಲು ಶ್ರೀ ಕಬಾಡಿಯವರೊಂದಿಗೆ ಹೋದೆವು. ಹಿಂದೆ ಅವರನ್ನು ಹಲವು ಬಾರಿ ಭೇಟಿಯಾಗಿದ್ದ ಉದಯ ನಾಯಕರಿಗೆ ಅವರ ಪರಿಚಯ ಚೆನ್ನಾಗಿತ್ತು. ಶ್ರೀ ಪೂಂಜರು ಪಂಜಾಬಿ ಸಾರಸ್ವತರು. ದೊಡ್ಡ ದಾನಿಯೆಂದು ಖ್ಯಾತಿ ಪಡೆದವರು. ಅವರು ಸೀತಾಮಡಿ ಎಂಬ ಊರಿನಲ್ಲಿ ಆ ಕಾಲದಲ್ಲಿಯೇ ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಶ್ರೀ

ಸೀತಾರಾಮ ದೇವಾಲಯವನ್ನು ಕಟ್ಟಿಸುತ್ತಿದ್ದರು. "ಆ ದೇವಾಲಯದ ಉದ್ಘಾಟನೆಗೆ ಪ್ರಧಾನಮಂತ್ರಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಕರೆಸುವೆ. ನಿಮಗೂ ಆಮಂತ್ರಣ ಕಳುಹಿಸಿ ಕೊಡುವೆ, ನೀವು ಖಂಡಿತಾ ಬರಬೇಕು" ಎಂದು ನಮ್ಮಲ್ಲಿ ಹೇಳಿದ್ದರು. ವಿಶ್ವ ಸಾರಸ್ವತ ಸಮ್ಮೇಳನಕ್ಕೆ ತಾನು ಬರುತ್ತೇನೆ, ಮತ್ತು ಸಮ್ಮೇಳನದ ಊಟ ಉಪಚಾರಕ್ಕಾಗಿ ಐವತ್ತು ಸಾವಿರ ನೀಡುವುದಾಗಿ ತಿಳಿಸಿ, ನಮಗೆ ಚೆಕ್ ನೀಡಿ, ನಮ್ಮನ್ನು ಬಾಯಿ ತುಂಬಾ ಹೊಗಳಿದರು.

ದೆಹಲಿಯಲ್ಲಿ ಉನ್ನತ ಹುದ್ದೆಯಲ್ಲಿರುವ ಶ್ರೀ ಎನ್.ಹೆಚ್. ಪೈ ಅಂಕೋಲೆಯವರು. ಅವರನ್ನೂ ನಾವು ಭೇಟಿಯಾದೆವು. ಅವರು ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಐವತ್ತು ಸಾವಿರ ದೇಣಿಗೆ ನೀಡಿದರು. ಆಮೇಲೆ ನಾನು ಮತ್ತು ಉದಯ ನಾಯಕ ಊರಿಗೆ ಮರಳಿ ಬಂದೆವು. ಇಲ್ಲಿಗೆ ಬಂದು ಮುಟ್ಟಿದ ಬಳಿಕ ವೃಂದಾವನದ ಶ್ರೀ ಗೋಸ್ವಾಮಿಯವರಿಗೆ, ಮಥುರಾದ ಶ್ರೀ ಆರ್.ಸಿ. ಸಾರಸ್ವತರಿಗೆ, ದೆಹಲಿಯ ಶ್ರಿ ಕಬಾಡಿ ಮತ್ತು ಪೂಂಜ್ ಮೊದಲಾದವರಿಗೆ ಪತ್ರ ಬರೆದು ಕಳುಹಿಸಿಕೊಟ್ಟೆವು.

ನವೆಂಬರ್ ೧೧, ಗುರುವಾರ ಬೆಂಗಳೂರಿನ ಕೆನರಾ ಯೂನಿಯನ್ ಸಭಾಂಗಣದಲ್ಲಿ ಚಿತ್ರಾಪುರ ಸಾರಸ್ವತರು ಮತ್ತು ಕಾಶ್ಮೀರಿ ಪಂಡಿತರ ಸಭೆ ನಡೆದಿತ್ತು. ಅವರು ಅಧಿಕ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ಬರುವುದಾಗಿ ತಿಳಿಸಿದ್ದರು. ಮಾನ್ಯ ಮಂತ್ರಿ ಶ್ರೀ ಆರ್.ವಿ. ದೇಶಪಾಂಡೆಯವರನ್ನು ಭೇಟಿಯಾಗಿ ಅವರು ಪ್ರಾಯೋಜಕರಿಗೆ ಪತ್ರ ಬರೆಯುವಂತೆ ವಿನಂತಿಸಿಕೊಂಡೆವು.

ನವೆಂಬರ್ ೧೩, ಶನಿವಾರ ನಾನು ಶ್ರೀ ರಾಘವೇಂದ್ರ ರಾವ್ ಅವರನ್ನು ಕರೆದುಕೊಂಡು ಡಾ. ಕಸ್ತೂರಿ ಮೋಹನ ಪೈ ಅವರೊಂದಿಗೆ, ಅವರ ಕಾರಿನಲ್ಲಿ ಕುಂದಾಪುರಕ್ಕೆ ಹೋದೆನು. ಅಲ್ಲಿಯ ಶ್ರೀ ವೆಂಕಟರಮಣ ದೇವಾಲಯದಲ್ಲಿ ಸಭೆ ನಡೆಯಿತು. ಕೋಟೇಶ್ವರ ಗೋವಿಂದರಾಯ ವಿಠಳ ಕಾಮತಿ ಮತ್ತು ಯು.ಎಸ್. ಶೆಣೈಯವರು ವಿಶ್ವ ಸಾರಸ್ವತ ಸಮ್ಮೇಳನಕ್ಕೆ ತುಂಬಾ ಉತ್ಸಾಹ ತೋರಿದರು. ಅಲ್ಲಿಂದ ನಾವು ಹೊಸನಗರವಾಗಿ ಶಿವಮೊಗ್ಗಕ್ಕೆ ಹೋಗಿ ರಾತ್ರಿ ಅಲ್ಲಿ ಹೊಟೇಲಲ್ಲಿ ತಂಗಿದೆವು

ನವೆಂಬರ್ ೧೪, ಭಾನುವಾರ ಮುಂಜಾನೆ ೧೧ ಗಂಟೆಗೆ ಶಿವಮೊಗ್ಗೆಯ ಗೌಡ ಸಾರಸ್ವತ ಮಂದಿರದಲ್ಲಿ ಸಭೆ ಇತ್ತು. ಅಲ್ಲಿಗೆ ಕಾರವಾರದಿಂದ ಶ್ರೀ ಆರ್.ಎಸ್. ಪ್ರಭು ಹಾಗೂ ಬೆಳಗಾವಿಯಿಂದ ಶ್ರೀ ವಿ.ವಿ. ಶೆಣೈ ಬಂದಿದ್ದರು. ಬಹಳ ಜನ ಸೇರಿದ್ದರು. ಅವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಮಾಹಿತಿ ನೀಡಿ, ಭಿತ್ತಿಪತ್ರಗಳನ್ನು, ಪ್ರತಿನಿಧಿ ಪುಸ್ತಕಗಳನ್ನು ನೀಡಿದೆವು. ಡಾ. ಕಸ್ತೂರಿ ಮೋಹನ ಪೈ ಮತ್ತು ರಾಘವೇಂದ್ರ ರಾವ್ ಅದೇ ದಿನ ಮಂಗಳೂರಿಗೆ ಮರಳಿದರು. ನಾನು ಮತ್ತು ವಿ.ವಿ. ಶೆಣೈಯವರು ಮೈಸೂರು-ಪಣಜಿ ಬಸ್ಸಿನಲ್ಲಿ ಗೋವೆಗೆ ಹೋದೆವು. ಅಲ್ಲಿಗೆ ದೆಹಲಿಯ ಶ್ರೀ ವಿ.ಎನ್. ಕಬಾಡಿಯವರು ಬಂದಿದ್ದರು. ಹೀಗಾಗಿ ನಾವು ಕೆಲವು ಕುಲದೇವಾಲಯಗಳಿಗೆ ಭೇಟಿ ನೀಡಿ ಸಮ್ಮೇಳನದ ಭಿತ್ತಿಪತ್ರ, ಇತ್ಯಾದಿಗಳನ್ನು ಅವರಿಗೆ ನೀಡಿದೆವು. ಗೋವಾ ಪ್ರಾದೇಶಿಕ ಸಮಿತಿಯ ಶ್ರೀ ಕಡಚೂಡಕರ ಮತ್ತು ಶ್ರೀ ಮಂತ್ರವಾದಿ ಮೊದಲಾದವರನ್ನು ಭೇಟಿ ಮಾಡಿ ಹಣ ಸಂಗ್ರಹ ಮಾಡುವ ವಿಚಾರವಾಗಿ ಅವರೊಂದಿಗೆ ಮಾತನಾಡಿದೆ. ಆಮೇಲೆ ನಾವು ರಾತ್ರಿ ಬಸ್ಸಿನಲ್ಲಿ ಮಂಗಳೂರಿಗೆ ಬಂದೆವು.

ಈ ಪ್ರವಾಸದಲ್ಲಿ ಬಸ್ ಪ್ರಯಾಣದ ಸೌಕರ್ಯ ಚೆನ್ನಾಗಿಲ್ಲದ್ದರಿಂದ ನನಗೆ ಬೆನ್ನು ನೋವು, ಕೆಮ್ಮು ಕಾಡತೊಡಗಿದ್ದವು. ಹೀಗಾಗಿ ಇನ್ನು ಮುಂದೆ ದೀರ್ಘ ಪ್ರವಾಸ ನಡೆಸದೆ, ಮಂಗಳೂರಿನಲ್ಲಿಯೇ ಇದ್ದುಕೊಂಡು ಬೇರೆ ಬೇರೆ ಸಮಿತಿಗಳು ಸರಿಯಾದ ರೀತಿಯಲ್ಲಿ ಕಾರ್ಯ ನಡೆಯುವಂತೆ ನೋಡಿಕೊಳ್ಳುವುದೆಂದು ನಿರ್ಧರಿಸಿದೆ. ಇಲ್ಲದಿದ್ದರೆ ಮಂಗಳೂರಿನಲ್ಲಿ ನಡೆಯಬೇಕಾಗಿರುವ ಸಿದ್ಧತೆ ಮತ್ತು ವ್ಯವಸ್ಥೆ ಯೋಜನೆಯಂತೆ ನಡೆಯಲಾರದು ಎಂದು ಮನದಟ್ಟಾಯಿತು.

ನವೆಂಬರ್ ೨೩ ರಂದು ಮುಂಬೈಯಿಂದ ಎಐಎಸ್‌ಸಿಓ ವತಿಯಿಂದ ಶ್ರೀ ಕೆ.ಜಿ. ಮಲ್ಯ ಮತ್ತು ಉಲ್ಲಾಸ ಕಾಮತರು(ತ್ರಿವೇಣಿ ಸಂಗಮ) ಇಲ್ಲಿಯ ಕಾರ್ಯದ ಪರಿಶೀಲನೆಗೆ ಬಂದಿದ್ದರು. ಅವರಿಗೆ ಇಲ್ಲಿ ನಡೆಸಲಾಗಿರುವ ವ್ಯವಸ್ಥೆಗಳ ಮಾಹಿತಿ ನೀಡಿ, ಸಂಘಟನಾ ಸಮಿತಿಯ ಸಭೆಯಲ್ಲಿ ಪಾಲುಗೊಳ್ಳುವ ಅವಕಾಶವನ್ನೂ ನೀಡಿದೆ.

ನವೆಂಬರ್ ೨೪ ರಂದು ಬೆಂಗಳೂರಿನ ದ್ವಾರಕನಾಥ ಭವನದಲ್ಲಿ ಬೆಂಗಳೂರು ಪ್ರಾದೇಶಿಕ ಸಮಿತಿಯ ಸಭೆ ನಡೆದಿತ್ತು. ಇದರ ನೇತೃತ್ವವನ್ನು ಶ್ರೀ ಪಿ. ದಯಾನಂದ ಪೈಯವರು ವಹಿಸಿಕೊಂಡಿದ್ದರು. ಜನ ತುಂಬಾ ಸೇರಿದ್ದರು. ಶ್ರೀ ಸುಧಾಕರ ಶೆಣೈ ಅವರು ಹೆಚ್ಚಿನ ಉತ್ಸಾಹ ತೋರಿದ್ದರು. ನಾನು ದೂರದರ್ಶನ ಕೇಂದ್ರ, ಕೆನರಾ ಬ್ಯಾಂಕ್ ಮತ್ತು ಇತರ ಸಂಘ, ಸಂಸ್ಥೆಗಳಿಗೂ ಭೇಟಿ ನೀಡಿದೆ.

ಡಿಸೆಂಬರ್ ೧ ರಂದು ನಾನು ಶ್ರೀ ಎ.ಕೆ. ಮಂಜುನಾಥ ಶೆಣೈ ಅವರೊಂದಿಗೆ, ಮಂಗಳೂರಿಗೆ ಆಗಮಿಸಿ ಶ್ರೀ ಸಮಾಧಿ ಮಠದಲ್ಲಿ ಮೊಕ್ಕಾಂ ಹೂಡಿದ್ದ ಶ್ರೀ ಚಿತ್ರಾಪುರ ಶಿರಾಲಿ ಮಠದ ಗುರುವರ್ಯರಾದ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿಯವರನ್ನು ಭೇಟಿಯಾದೆ. ಅದುವರೆಗೆ ವಿಶ್ವ ಸಮ್ಮೇಳನಕ್ಕಾಗಿ ನಡೆದ ಕಾರ್ಯಗಳು, ಸಮ್ಮೇಳನದ ನಾಲ್ಕು ದಿನಗಳಲ್ಲಿ ನಡೆಯಲಿರುವ ಕಾರ್ಯಕ್ರಮಗಳು, ಪರಿಸಂವಾದ, ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ವಿವರಗಳನ್ನು ಸ್ವಾಮೀಜಿಯವರಿಗೆ ನೀಡಿದೆ. ಅವರು ಫಲ ಮಂತ್ರಾಕ್ಷತೆ ನೀಡಿ ಆರ್ಶೀವದಿಸಿ ಸಮ್ಮೇಳನದಲ್ಲಿ ತಾವು ಉಪಸ್ಥಿತರಿರುವುದಾಗಿ ತಿಳಿಸಿದರು.

ಅದೇ ರೀತಿ ಡಿಸೆಂಬರ್ ೨ ರಂದು ಶ್ರೀ ಎ.ಕೆ. ಮಂಜುನಾಥ ಶೆಣೈ ಅವರ ಜೊತೆಯಲ್ಲಿ ಅವರ ಕಾರಿನಲ್ಲಿ ಕಾರ್ಕಳದ ಸಮೀಪವಿರುವ ಎಣ್ಣೆಹೊಳೆ ಶ್ರೀ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಮೊಕ್ಕಾಂ ಹೂಡಿದ್ದ ಶ್ರೀ ಕೈವಲ್ಯ ಮಠಾಧೀಶ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರನ್ನು ಮತ್ತು ಅವರ ಶಿಷ್ಯರನ್ನು ಭೇಟಿಯಾಗಿ, ಅವರಿಗೆ ವಿಶ್ವ ಸಾರಸ್ವತ ಸಮ್ಮೇಳನದ ಕುರಿತು ತಿಳಿಸಿ ಆಶೀರ್ವಾದ ಪಡೆದೆವು. ಆಮೇಲೆ ಅಲ್ಲಿ ನಡೆದ ರಾಜಾಪುರ ಸಾರಸ್ವತರ ಸಭಾ ಕಾರ್ಯಕ್ರಮದಲ್ಲಿಯೂ ಭಾಗಿಯಾಗಿ, ಎಲ್ಲರಿಗೂ ವಿಶ್ವ ಸಾರಸ್ವತ ಸಮ್ಮೇಳನಕ್ಕೆ ಆಮಂತ್ರಣ ನೀಡಿ ಊರಿಗೆ ಮರಳಿದೆವು.

ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ ಉದ್ಘಾಟನೆ

ನನ್ನ ನೇತೃತ್ವದಲ್ಲಿ ವಿಶ್ವ ಮಟ್ಟದ ಎರಡು ಸಮ್ಮೇಳನಗಳು ನಡೆಯಲು ಶ್ರೀ ತಿರುಮಲ ವೆಂಕಟರಮಣ ಸ್ವಾಮಿಯ ವಿಶೇಷ ಆಶೀರ್ವಾದವೇ ಕಾರಣವೆಂದು ನನ್ನ ಬಲವಾದ ನಂಬುಗೆ. ಅದರಲ್ಲಿ ಒಂದು "ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ". ೧೯೯೫ರಲ್ಲಿ ನಡೆದ ಈ ಸಮ್ಮೇಳನಕ್ಕಾಗಿ ಜಗತ್ತಿನ ಎಲ್ಲೆಡೆಗಳಲ್ಲಿ ಹರಡಿಕೊಂಡಿರುವ ೩ ಧರ್ಮಗಳ ಹಿಂದೂ, ಕ್ರೈಸ್ತ, ನವಾಯತ-ಮುಸ್ಲಿಂ ಮತ್ತು ೧೮ ಬೇರೆ ಬೇರೆ ಜಾತಿಗಳ ಕೊಂಕಣಿ ಜನರನ್ನು, ಸಮಾಜಗಳನ್ನು ಒಂದೆಡೆ ಸೇರಿಸಿ, ೨ ದಿನಗಳ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ಎರಡನೆಯದು, "ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ." ೧೯೯೯ರಲ್ಲಿ ನಡೆದ ಈ ಸಮ್ಮೇಳನದಲ್ಲಿ ಒಂದೇ ವೇದಿಕೆಯ ಮೇಲೆ ಸಾರಸ್ವತ ಸಮಾಜದ ನಾಲ್ಕೂ ಧರ್ಮಪೀಠಗಳ ಸ್ವಾಮೀಜಿಗಳ ಉಪಸ್ಥಿತಿಯನ್ನು ಮತ್ತು ಶೈವ, ಮಾಧ್ವ, ಕಾಶ್ಮೀರಿ ಪಂಡಿತ ಮೊದಲಾದ ಬೇರೆ ಬೇರೆ ಸಂಪ್ರದಾಯಗಳಿಗೆ ಸೇರಿದ ಸಾರಸ್ವತರನ್ನು ಹತ್ತಿರ ತಂದು ೪ ದಿನಗಳ ಕಾರ್ಯಕ್ರಮಗಳನ್ನು ಸಂಘಟಿಸುವ ಸುಯೋಗ ನನಗೆ ಪ್ರಾಪ್ತವಾಗಿತ್ತು. ಈ ನಿಮಿತ್ತವಾಗಿ ನನಗೆ "ವಿಶ್ವ ಕೊಂಕಣಿ ಸರದಾರ" ಮತ್ತು "ವಿಶ್ವ ಸಾರಸ್ವತ ಸರದಾರ" ಎಂಬ ಉಪಾಧಿ ಲಭಿಸುವ ಹಾಗಾಗಿತ್ತು. ಇಂತಹ ಭಾಗ್ಯ ಅಥವಾ ಶಕ್ತಿ(ಅವಕಾಶ?) ಎಷ್ಟು ಜನರಿಗೆ ದೊರೆಯುವುದು?

೧೯೯೯ನೇ ಇಸವಿ, ಡಿಸೆಂಬರ್ ೧೫ರ ಮಧ್ಯಾಹ್ನದಿಂದಲೇ ದೂರದ ಗುಜರಾತ, ರಾಜಸ್ತಾನ, ಮಧ್ಯಪ್ರದೇಶ, ಮುಂಬೈ, ಕೊಚ್ಚಿ, ಕೇರಳ ಮೊದಲಾದ ಪ್ರದೇಶಗಳಿಂದ ಸಾರಸ್ವತ ಪ್ರತಿನಿಧಿಗಳು, ಪ್ರಬಂಧವನ್ನು ಮಂಡಿಸುವ ವಿದ್ವಾಂಸರು, ಪಂಡಿತರು, ಚರಿತ್ರೆಕಾರರು, ಸಮಾಜ ವಿಜ್ಞಾನಿಗಳು, ಪತ್ರಕರ್ತರು ಮಂಗಳೂರಿಗೆ ಬರಲಾರಂಭಿಸಿದ್ದರು. ಅವರಿಗೆ ಇರಲು ಸಮಿತಿಯವರು ವ್ಯವಸ್ಥೆಯನ್ನು ನಡೆಸಿದ್ದರು.

ನಾವು ವಿಶ್ವ ಸಾರಸ್ವತ ಸಮ್ಮೇಳನದ ಯಶಸ್ಸಿಗಾಗಿ ಡಿಸೆಂಬರ್ ೧೬, ಗುರುವಾರ ಬೆಳಗ್ಗೆ ಮಂಗಳೂರು ಶ್ರೀ ವೀರ ವೆಂಕಟೇಶ ದೇವರ ದರ್ಶನ ಪಡೆದು ಆಶೀರ್ವಾದ ಬೇಡಿ ಬಂದೆವು. ಶ್ರೀ ಕಾಶೀಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಜಿಯವರು ಕೊಂಚಾಡಿ ಶ್ರೀ ವೆಂಕಟರಮಣ ಶ್ರೀ ಮಹಾಲಸಾ ನಾರಾಯಣ ದೇವಾಲಯದಲ್ಲಿ, ಶ್ರೀ ಕೈವಲ್ಯ ಮಠಾಧೀಶ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಮತ್ತು ಅವರ ಶಿಷ್ಯ ಶ್ರೀ ಶಿವಾನಂದ ಸರಸ್ವತಿ ಸ್ವಾಮೀಜಿ ರಥಬೀದಿಯ ಶ್ರೀ ವೆಂಕಟರಮಣ ದೇವಾಲಯದಲ್ಲಿ, ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಶ್ರೀ ವಿದ್ಯಾಧಿರಾಜ ತೀರ್ಥ ವಡೆರ ಸ್ವಾಮೀಜಿ ಮಂಗಳೂರು ಸ್ವಮಠದಲ್ಲಿ, ಚಿತ್ರಾಪುರ ಶಿರಾಲಿ ಮಠದ ಶ್ರೀ ಸದ್ಯೋಜ್ಯಾತ ಶಂಕರಾಶ್ರಮ ಸ್ವಾಮೀಜಿ ಸಮಾಧಿ ಮಠದಲ್ಲಿ ಮೊಕ್ಕಾಂ ಹೂಡಿದ್ದರು.

ಮುಖ್ಯ ಅತಿಥಿಗಳಾಗಿ ದೆಹಲಿಯಿಂದ ಕೇಂದ್ರ ಸರಕಾರದ ಮಾನ್ಯಮಂತ್ರಿಗಳಾದ ಶ್ರೀ ಸುರೇಶ ಪ್ರಭು ಸಪತ್ನೀಕರಾಗಿ, ಬೆಂಗಳೂರಿನಿಂದ ರಾಜ್ಯಸರ್ಕಾರದ ಮಾನ್ಯಮಂತ್ರಿಗಳಾದ ಶ್ರೀ ಆರ್.ವಿ. ದೇಶಪಾಂಡೆಯವರು, ಮತ್ತು ದೆಹಲಿಯಿಂದ ಉದ್ಯಮಿ ದಾನಿ ಶ್ರೀ ಸತ್ಯನಾರಾಯಣ ಪೂಂಜ್ ವಿಮಾನದಲ್ಲಿ ಬಂದು ಹೊಟೇಲ್ ಮಂಜರೂನದಲ್ಲಿ ತಂಗಿದ್ದರು..

ಸಂಜೆ ನಾಲ್ಕು ಗಂಟೆಗೆ ಮಂಗಳೂರಿನ ಹೃದಯ ಭಾಗದಲ್ಲಿರುವ ನೆಹರೂ ಮೈದಾನಿನಿಂದ ಶೋಭಾಯಾತ್ರೆ

ಪ್ರಾರಂಭವಾಯಿತು. ಸಮಾಜದ ನಾಲ್ಕೂ ಮಠಗಳ ಗುರುವರ್ಯರು ರಥಾರೂಢರಾಗಿ ಕುಳಿತು, ಅವರೊಂದಿಗೆ ಶ್ರೀ ಸುರೇಶ ಪ್ರಭು, ಆರ್.ವಿ. ದೇಶಪಾಂಡೆ, ಶ್ರೀ ಕೆ.ಕೆ. ಪೈ, ಶ್ರೀ ಎಸ್.ವಿ ಪಿಕಳೆ ಮತ್ತು ನಾನು ಇದ್ದೆವು. ಅದೊಂದು ಭವ್ಯ ಹಾಗೂ ಅತಿ ಸುಂದರವಾದ ಶೋಭಾಯಾತ್ರೆಯಾಗಿತ್ತು. ಅದು ಸಾಗಿ ಬರುವ ಹಂಪನಕಟ್ಟೆ ರಸ್ತೆಯನ್ನು ವರ್ಣರಂಜಿತ ಕಮಾನುಗಳಿಂದ, ಪತಾಕೆಗಳಿಂದ ಅಲಂಕರಿಸಲಾಗಿತ್ತು. ರಸ್ತೆಯ ಎರಡೂ ಬದಿಗಳಲ್ಲಿ ಸಾವಿರಾರು ಜನರು ವೀಕ್ಷಕರಾಗಿ ನೆರೆದಿದ್ದರು. ಇಡೀ ಮಂಗಳೂರು ಪೇಟೆ ಜನಸಾಗರದ ಮುಕ್ತಕಂಠದ ಜೈಕಾರ, ವಾದ್ಯಘೋಷ, ಸುಡುಮದ್ದುಗಳಿಂದ ರಾಜರಸ್ತೆಯ ಸ್ವರೂಪವನ್ನು ತಾಳಿತ್ತು. ಭಕ್ತಜನರು ಮಿತಿಮೀರಿದ ಉತ್ಸಾಹವನ್ನು ತೋರಿಸುತ್ತಿದ್ದರೂ, ನಾವು ಗುರವರ್ಯರಿಗೆ ಮಾತು ಕೊಟ್ಟಂತೆ ಒಂದೂವರೆ ಗಂಟೆಯೊಳಗೆ ಶೋಭಾಯಾತ್ರೆ ಮಂಗಳಾ ಸ್ಟೇಡಿಯಮ್ಮಿಗೆ ಬಂದು ತಲುಪಿತ್ತು.

ಆಮೇಲೆ ನಾಲ್ಕೂ ಮಠಗಳ ಗುರುವರ್ಯರು ಮತ್ತು ಮುಖ್ಯ ಅತಿಥಿಗಳು, ಅನಂತರ ಶ್ರೀ ಎಸ್.ವಿ. ಪಿಕಳೆ, ಶ್ರೀ ಕೆ.ಕೆ.ಪೈ, ಶ್ರೀ ಎನ್. ಯೋಗೀಶ ಭಟ್ ಹಾಗೂ ನಾನು ಸುಂದರ, ಅಲಂಕೃತ ವೇದಿಕೆಯನ್ನು (ಈ ವೇದಿಕೆಯ ನಿರ್ಮಾತೃರು ಮೂಡುಬಿದಿರೆಯ ಡಾ. ಮೋಹನ ಆಳ್ವಾ) ಹತ್ತಿದೆವು. ಮೊದಲು ಗುರುವರ್ಯರು, ಆಮೇಲೆ ಮುಖ್ಯ ಅತಿಥಿಗಳು ದೀಪ ಹಚ್ಚುವುದರ ಮೂಲಕ ಸಮ್ಮೇಳನವನ್ನು ಉದ್ಘಾಟಿಸಿದರು. ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳ ಭಾಷಣ ನಡೆಯಿತು. 'ಸಾರಸ್ವತರು ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಆದ್ಯತೆ' ನೀಡಿ ದೇಶಸೇವೆ, ಜನಸೇವೆ ಮಾಡಬೇಕು ಎಂಬುದಾಗಿ ಶ್ರೀ ಸುರೇಶ ಪ್ರಭು, ಶ್ರೀ ಆರ್.ವಿ. ದೇಶಪಾಂಡೆ ಮತ್ತು ಶಾಸಕ ಶ್ರೀ ಎನ್. ಯೋಗೀಶ ಭಟ್ ಕರೆ ನೀಡಿದರು.

ಅನಂತರ, ಜಗತ್ತಿನ ಸಮಸ್ತ ಸಾರಸ್ವತರಿಗೆ ಒಳ್ಳೆಯದಾಗಲಿ ಎಂದು ನಾಲ್ಕು ಮಠಗಳ ಗುರುವರ್ಯರು ಆಶೀರ್ವಾದ ಮಾಡಿ, ನಮ್ಮ ಪೂರ್ವಜರು ಕಾಪಾಡಿಕೊಂಡು ಬಂದಿರುವ ಸಂಸ್ಕೃತಿ, ಸಂಸ್ಕಾರ, ಮತ್ತು ದೇವಾಲಯಗಳನ್ನು ಸಂರಕ್ಷಿಸಬೇಕು ಎಂದು ತಮ್ಮ ಪ್ರವಚನದಲ್ಲಿ ಹೇಳಿದರು. ಹೀಗೆ ಚಾರಿತ್ರಿಕ ವಿಶ್ವ ಸಾರಸ್ವತ ಸಮ್ಮೇಳನದ ಉದ್ಘಾಟನೆ ನೇರವೇರಿತು.

ಮರುದಿನ, ೧೭ನೇ ತಾರೀಖಿನಂದು ಬೆಳಗೆ ಸಮ್ಮೇಳನದ ವಿಚಾರ ಸಂಕಿರಣದ ಉದ್ಘಾಟನೆಯನ್ನು ಕೇಂದ್ರ ಮಂತ್ರಿ ಮಾನ್ಯ ಶ್ರೀ ಸುರೇಶ ಪ್ರಭು ಹಾಗೂ ದೆಹಲಿಯ ಉದ್ಯಮಿ ಶ್ರೀ ಸತ್ಯನಾರಾಯಣ ಪೂಂಜ್ ಅವರು ದೀಪ ಹಚ್ಚುವ ಮೂಲಕ ನಡೆಸಿದರು. ಕಾಶ್ಮೀರದಿಂದ ಹಿಡಿದು ದಕ್ಷಿಣದ ಕೊಚ್ಚಿಯವರೆಗೆ ಇರುವ ಸಾರಸ್ವತರ ವಿಭಿನ್ನ ಸಮಾಜಗಳ ಚರಿತ್ರೆ, ಭೌಗೋಲಿಕತೆ, ಸಾಮಾಜಿಕ, ಸಾಂಸ್ಕೃತಿ ಹಾಗೂ ಸಂಸ್ಕಾರಕ್ಕೆ ಸಂಬಂಧಿಸಿದ ಸಂಸ್ಥೆಗಳು ಮತ್ತು ಪ್ರಸಿದ್ಧ ಸಾರಸ್ವತ ವ್ಯಕ್ತಿಗಳ ಕುರಿತು ಪ್ರಬಂಧಗಳನ್ನು ಮಂಡಿಸಲಾಯಿತು.

ಕಾಶ್ಮೀರಿ ಪಂಡಿತರು ನನ್ನಲ್ಲಿ ವ್ಯಕ್ತಪಡಿಸಿದ್ದ 'ಅವರ ಕಷ್ಟನಷ್ಟಗಳು ಮತ್ತು ಅದಕ್ಕೆ ಪರಿಹಾರ ಒದಗಿಸುವುದು' ಈ ಕುರಿತು ಕೇಂದ್ರ ಸರಕಾರಕ್ಕೆ ನೀಡಿದ ಕೋರಿಕೆ ಪತ್ರವನ್ನು ಶ್ರೀ ಸುರೇಶ ಪ್ರಭು ಅವರಿಗೆ ಹಸ್ತಾಂತರಿಸಲಾಯಿತು. ಆಮೇಲೆ ಅವರ ನಡುವೆ ಮಾತುಕತೆ ನಡೆಯುವ ವ್ಯವಸ್ಥೆಯನ್ನು ನಾನು ಮಾಡಿದ್ದೆ. ಇದರಿಂದ ಕಾಶ್ಮೀರಿ ಪಂಡಿತರಿಗೆ ತುಂಬಾ ಸಂತೋಷವಾಯಿತು ಎಂದು ಬೇರೆ ಹೇಳಬೇಕಾಗಿಲ್ಲ. ಅದೇ ರೀತಿ ಆ ಸಾರಸ್ವತ ಬಂಧುಗಳ ಮಕ್ಕಳಿಗೆ ಮಣಿಪಾಲದ ವಿದ್ಯಾಸಂಸ್ಥೆಗಳಲ್ಲಿಯೂ ಶಿಕ್ಷಣ ಸೌಲಭ್ಯವನ್ನು ಒದಗಿಸುವಂತೆ ಅವರು ಶ್ರೀ ಕೆ.ಕೆ. ಪೈ ಅವರಲ್ಲಿ ವಿನಂತಿಸಿಕೊಂಡರು. ಸಮ್ಮೇಳನ ಮುಗಿದ ಬಳಿಕ ಮಣಿಪಾಲಕ್ಕೆ ಬಂದು ಭೇಟಿಯಾಗುವಂತೆ ಶ್ರೀ ಪೈಯವರು ಅವರಿಗೆ ತಿಳಿಸಿದರು.

ಅದೇ ದಿನ ಸಂಜೆ ಶ್ರೀ ಕೈವಲ್ಯ ಮಠದ ಶಿಷ್ಯರಾದ ಸ್ವಾಮೀ ಶ್ರೀ ಶಿವಾನಂದ ಸರಸ್ವತಿ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಧಾರವಾಡದ ಶ್ರಿ ಗಜಾನನ ರಾವ್ ಹೇರಂಜಾಳ್ ಅವರ ನಿರ್ದೇಶನದಲ್ಲಿ "ಸಾರಸ್ವತ ವೈಭವ" ಎಂಬ ನಾಟಕದ ಪ್ರದರ್ಶನ ತುಂಬಾ ಚೆನ್ನಾಗಿ ನಡೆಯಿತು. ಶ್ರೀ ಪುತ್ತೂರು ನರಸಿಂಹ ನಾಯಕ ಮತ್ತು ಶ್ರೀಮತಿ ಅನುರಾಧಾ ಧಾರೇಶ್ವರರ ಸುಗಮ ಸಂಗೀತ ಕಾರ್ಯಕ್ರಮಗಳೂ ಇದ್ದವು.

ಡಿಸೆಂಬರ್ ೧೮ ರಂದು "ಎಂಟರ್‌ಪ್ರೀನ್ಯೂರ್ ಡಿವಿಜನ್ ಆಫ್ ಸಾರಸ್ವತ್ಸ್" ಎಂಬ ಚರ್ಚಾ ಗೋಷ್ಠಿಯಲ್ಲಿ ಭಾರತದ ದೊಡ್ಡ ದೊಡ್ಡ ಸಾರಸ್ವತ ಉದ್ಯಮಿಗಳು ಭಾಗವಹಿಸಿದ್ದರು. ಮಧ್ಯಾಹ್ನ "ಸಾರಸ್ವತ ಮತ್ತು ಕೊಂಕಣಿ ಭಾಷೆ" ಎಂಬ ವಿಷಯವನ್ನು ಆಧರಿಸಿ ನಾನು ಪ್ರಬಂಧವನ್ನು ಮಂಡಿಸಿದೆ. ಆಮೇಲೆ ಎಐಎಸ್‌ಸಿಐ(ಮುಂಬೈ ಸಾರಸ್ವತ ಸಂಘ) ಕುರಿತು ಶ್ರೀ ಎಸ್.ವಿ. ಪಿಕಳೆಯವರು ಭಾಷಣ ಮಾಡಿದರು(ಅದು ತುಸು ದೀರ್ಘವಾಯಿತು ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು).

ಸಂಜೆ ಶಿರಸಿಯ ಶ್ರೀ ವಾಸುದೇವ ಶಾನಭಾಗರ ಪಂಗಡದ ಸಂಗೀತ ನೃತ್ಯ ಕಾರ್ಯಕ್ರಮ, ಡಾ. ನಂದಕುಮಾರ್ ಪೈಯವರು ನಡೆಸಿಕೊಟ್ಟ ಮಕ್ಕಳ ಕೊಂಕಣಿ ಯಕ್ಷಗಾನ ಪ್ರದರ್ಶನ ಹಾಗೂ ಮುಂಬೈಯ ತ್ರಿವೇಣಿ ಕಲಾಸಂಗಮದವರ "ಲಗ್ನಾಚೆ ಪಿಶ್ಶೆ"(ಮದುವೆಯ ಹುಚ್ಚು) ಎಂಬ ನಾಟಕದ ಪ್ರದರ್ಶನ ನಡೆಯಿತು.

ಮರುದಿನ ಡಿಸೆಂಬರ್ ೧೯, ಭಾನುವಾರ ಬೆಳಗ್ಗೆ ಪ್ರಸಿದ್ಧ ಪತ್ರಕರ್ತರಾದ ಶ್ರೀ ಎಂ.ವಿ. ಕಾಮತರು ದೀಪ ಹಚ್ಚುವ ಮೂಲಕ ಆ ದಿನದ ಸಮಾವೇಶದ ಚರ್ಚಾ ಗೋಷ್ಠಿಗಳ ಉದ್ಘಾಟನೆಯನ್ನು ನಡೆಸಿದರು. ಅದೇ ದಿನ ಸಂಜೆ ನಾಲ್ಕೂ ಸಾರಸ್ವತ ಮಠಗಳ ಸ್ವಾಮೀಜಿಗಳ ಆಶೀರ್ವಚನವಿತ್ತು. ಉತ್ತರ ಹಿಂದೂಸ್ಥಾನದಿಂದ ಬಂದಿರುವ ಸಾರಸ್ವತರಿಗಾಗಿ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರು ಹಿಂದಿಯಲ್ಲಿಯೇ ಆಶೀರ್ವಚನ ನೀಡಿದ್ದರು.

ಸಾರಸ್ವತ ಮಠಾಧೀಶರುಗಳ ಉಪಸ್ಥಿತಿಯಲ್ಲಿ, ಕರ್ನಾಟಕ ಸರಕಾರದ ಮಾನ್ಯಮಂತ್ರಿಗಳಾಗಿದ್ದ ಶ್ರೀ ರಮಾನಾಥ ರೈಯವರ ಹಾಜರಾತಿಯಲ್ಲಿ ನೆರೆದ ಎರಡೂವರೆ ಸಾವಿರ ಸಭಿಕರ ಮುಂದೆ ನನಗೆ "ವಿಶ್ವ ಸಾರಸ್ವತ ಸರದಾರ" ಎಂಬ ಬಿರುದನ್ನು ನೀಡಿ, ಶ್ರೀ ಸಾರಸ್ವತ ಮುನಿಯ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.

ಹೀಗೆ ನನ್ನ ಬದುಕಿನಲ್ಲಿ ಅತ್ಯಂತ ದೊಡ್ಡದೆನಿಸಿದ ಚರಿತ್ರಾರ್ಹ "ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ"ವು ಶ್ರೀ ವೆಂಕಟರಮಣ ಸ್ವಾಮಿಯ ದಯೆಯಿಂದ, ಸಾರಸ್ವತರ ನಾಲ್ಕೂ ಮಠಗಳ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಜರಗಿತು. ಅಖಿಲ ಭಾರತ ಸಾರಸ್ವತ ಸಾಂಕೃತಿಕ ಸಂಘದವರು ವಿಶ್ವ ಸಾರಸ್ವತ ಸಮ್ಮೇಳನವನ್ನು ಮುಂಬೈಯಲ್ಲಿ ನಡೆಸುವುದಕ್ಕಾಗಿ ಎರಡು ಮೂರು ಬಾರಿ ಪ್ರಯತ್ನಿಸಿದರೂ, ಅದು ಅಲ್ಲಿ ನಡೆಯದೆ ಮಂಗಳೂರಿನಲ್ಲಿ ನಡೆಯುವ ಹಾಗಾಯಿತು. ಈ ಮಹಾಕಾರ್ಯವನ್ನು ನಮಗೆ ಹಸ್ತಾಂತರಿಸುವಾಗ ಮುಂಬೈ ಕೇಂದ್ರ ಸಮಿತಿಯವರು ನಮಗೆ ಹತ್ತು ಲಕ್ಷ ರೂ ನೀಡುವುದಾಗಿ ತಿಳಿಸಿದ್ದರು. ಆದರೆ ಕೊನೆಗೆ ಅವರು ನೀಡಿದ್ದು ಒಂಭತ್ತು ಲಕ್ಷ ರೂ ಮಾತ್ರ. ನಾವು ಸ್ಮರಣ ಸಂಚಿಕೆಯನ್ನು ಮಂಗಳೂರಿನಲ್ಲಿ ಪ್ರಕಟಿಸಿ ಅವರಿಗೆ ಕಳುಹಿಸಿಕೊಟ್ಟರೂ, ಅವರು ಮುಂಬೈಯಲ್ಲಿ ಪಡೆದ ಜಾಹೀರಾತಿನ ಹಣವನ್ನು ವಸೂಲಿ ಮಾಡಿ ಮಂಗಳೂರಿಗೆ ಕಳುಹಿಸಿ ಕೊಡದೇ ಇದ್ದುದರಿಂದ ಇಲ್ಲಿ ನಾವು ನಡೆಸಿದ ಬೇರೆ ಬೇರೆ ಕಾರ್ಯಗಳ ಬಿಲ್ ಪಾವತಿಸುವುದು ಕಷ್ಟವಾಗಿ ಪರಿಣಮಿಸಿತ್ತು. ಆ ಸಂದಿಗ್ಧ ಕಾಲದಲ್ಲಿ ಶ್ರೀ ಕೆ.ಕೆ. ಪೈಯವರು ನಮಗೆ ಮಣಿಪಾಲ ಪೈ ಬಳಗದಿಂದ ಎರಡು ಲಕ್ಷ ರೂ ಕೊಡಿಸಿದ್ದರು. ಮತ್ತೂ ಉಳಿದ ಬಾಕಿ ಬಿಲ್‌ಗಳನ್ನು ನಾವು ವಿಶ್ವ ಸಾರಸ್ವತ ಸಮ್ಮೇಳನದ ವಾರ್ಷಿಕೋತ್ಸವವನ್ನು ಆಚರಿಸಿ ಅಲ್ಲಿ ಸಂಗ್ರಹವಾದ ಹಣದಿಂದ ಪಾವತಿಸಿದೆವು.

ವಿಶ್ವ ಸಾರಸ್ವತ ಸಮ್ಮೇಳನದಲ್ಲಿ ಭಾಗಿಗಳಾಗಿದ್ದ ಉತ್ತರ ಭಾರತದ ಜೋಧಪುರ, ರಾಜಸ್ತಾನ, ಗುಜರಾತ್ ಮತ್ತು ಕಾಶ್ಮೀರ ಪಂಡಿತ ಸಾರಸ್ವತರಿಗೆ ದಾಕ್ಷಿಣಾತ್ಯ ಸಾರಸ್ವತರ ಸಮಾಜಗಳ ಧಾರ್ಮಿಕ ವ್ಯವಸ್ಥೆಯ ಕುರಿತು ಹೆಚ್ಚಿನ ಆಸಕ್ತಿ ಮೂಡಿತ್ತು. ಅವರು ಅದನ್ನು ನನಗೆ ಸಮ್ಮೇಳನ ಮುಗಿದ ಬಳಿಕವೂ ಪತ್ರ ಬರೆದು ತಿಳಿಸುತ್ತಿದ್ದರು. ಮತ್ತೊಂದು ಸಮ್ಮೇಳನವನ್ನು ನಡೆಸುವಂತೆ ಕೋರಿಕೆಯನ್ನೂ ಸಲ್ಲಿಸುತ್ತಿದ್ದರು. ಅದನ್ನು ನಾನು ಮುಂಬೈಯ ಸಾರಸ್ವತ ಸಂಘದ ಹಿರಿಯರಿಗೆ ತಿಳಿಸಿದ್ದೆ. ಆದರೂ ಅವರು ಯಾವುದೇ ಉತ್ಸಾಹ ತೋರಿಸಿರಲಿಲ್ಲ. ಅವರ ಅಂತಿಮ ಉದ್ದೇಶ ವಿಶ್ವ ಸಾರಸ್ವತ ಸಮ್ಮೇಳನವನ್ನು ನಡೆಸುವುದು ಮಾತ್ರವೇ ಆಗಿತ್ತು. ಅದರಿಂದ ಉಂಟಾಗಿದ್ದ ಜಾಗತಿಕ ಸಾರಸ್ವತರ ಏಕೀಕರಣದ ಲಾಭವನ್ನು ಪಡೆಯುವುದು ಅಥವಾ ಸಮ್ಮೇಳನವನ್ನು ನಿರಂತರವಾಗಿ ಮುಂದುವರಿಸಿ ಬರುವ ಉದ್ದೇಶ ಅವರಿಗೆ ಇರಲಿಲ್ಲವೆಂಬುದು ನನಗೆ ಮತ್ತು ಇಲ್ಲಿಯ ನನ್ನ ಇತರ ಸಹಕಾರ್ಯಕರ್ತರಿಗೆ ಮನದಟ್ಟಾಯಿತು.

ಕಾಶೀಮಠ ಸಂಸ್ಥಾನಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಚಾತುರ್ಮಾಸವು ೨೦೦೦ ಇಸವಿಯಲ್ಲಿ ಗುಜರಾತಿನ ದ್ವಾರಕೆಯಲ್ಲಿ ನಡೆದಿತ್ತು. ಕಚ್ಛ್ ಸಾರಸ್ವತ ಭವನದಲ್ಲಿ ನಾಲ್ಕು ತಿಂಗಳು ಸ್ವಾಮೀಜಿಯವರ ಮೊಕ್ಕಾಂ ಇತ್ತು. ಆ ದಿನಗಳಲ್ಲಿಯೇ ಸಾರಸ್ವತ ಸಭೆಯೊಂದನ್ನು ಅಲ್ಲಿ ನಡೆಸುವುದು ಮತ್ತು ಶ್ರೀ ಗುರುವರ್ಯರೊಂದಿಗಿನ ಮುಖಾಮುಖಿ ಚರ್ಚೆಗೆ ಉತ್ತರ ಭಾರತದ ಸಾರಸ್ವತರನ್ನು ಕರೆ ತರುವ ಕಾರ್ಯಕ್ರಮವನ್ನು ನಡೆಸುವುದೆಂದು ನಾನು ಶ್ರೀ ಗುರವರ್ಯರಲ್ಲಿ ನಿವೇದಿಸಿಕೊಂಡಿದ್ದೆ. ಅದಕ್ಕೆ ಶ್ರೀ ಗುರುವರ್ಯರು ಒಪ್ಪಿ ಆದೇಶ ನೀಡಿದ್ದರು. ಅದನ್ನು ನಾನು ಮುಂಬೈಯ ಸಾರಸ್ವತ ಮುಖಂಡರಿಗೆ ತಿಳಿಸಿದೆನಾದರೂ, ಅದರ ಕುರಿತು ಅವರು ಯಾವ ಉತ್ಸಾಹವನ್ನೂ ವ್ಯಕ್ತಪಡಿಸಲಿಲ್ಲ. ಹೀಗಾಗಿ ನಾನೇ ಸ್ವತಃ ಮುಂದುವರಿದು ಸೆಪ್ಟೆಂಬರ್ ೧೭, ೨೦೦೦ ರಂದು ಭಾನುವಾರ ದ್ವಾರಕೆಯ ಕಚ್ಛ್ ಸಾರಸ್ವತ ಭವನದಲ್ಲಿ ಸಾರಸ್ವತ ಸಭಾ ಕಾರ್ಯಕ್ರಮವನ್ನು ನಡೆಸುವುದೆಂದು ತೀರ್ಮಾನಿಸಿ,

ಅದನ್ನು ಉತ್ತರ ಭಾರತದ ವಿವಿಧ ಸಾರಸ್ವತ ಸಂಘಗಳಿಗೆ ತಿಳಿಸಿದೆ. ನನ್ನ ಜೊತೆಯಲ್ಲಿ ಬೆಂಗಳೂರಿನ ಉದಯ ನಾಯಕ್ ಇದ್ದರು.

ನಾನು ಮಂಗಳೂರಿನಿಂದ ಹೊರಟು ಸೆಪ್ಟೆಂಬರ್ ೧೬, ಶನಿವಾರ ದ್ವಾರಕೆಗೆ ತಲುಪಿದೆ. ಅಲ್ಲಿ ಶ್ರೀ ಸ್ವಾಮೀಜಿಯವರನ್ನು ಭೇಟಿಯಾಗಿ ವಿಶ್ವ ಸಾರಸ್ವತ ಸಮ್ಮೇಳನದ ಅನಂತರ ನಡೆದ ವಿದ್ಯಮಾನಗಳನ್ನು ಅವರಿಗೆ ತಿಳಿಯಪಡಿಸಿದೆ. ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘದ ಪದಾಧಿಕಾರಿಗಳ ನಿಷ್ಕ್ರಿಯತೆಯನ್ನು ಮತ್ತು ನಾಳೆ ನಡೆಯಲಿರುವ ಸಭೆಯ ಕುರಿತು ಹೇಳಿದೆ.

ಮರುದಿನ ೧೭, ಭಾನುವಾರ ರಾಜಸ್ಥಾನ, ಭುಜ್, ಗಾಂಧಿಧಾಮ, ಪುಷ್ಕರ ಮೊದಲಾದೆಡೆಗಳಿಂದ ಅನೇಕ ಮಂದಿ ಸಾರಸ್ವತರು ಬಂದು ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬರೋಡಾದಿಂದ ಡಾ. ಬಾಬಾ ಪೈ ಬಂದಿದ್ದರು. ಶ್ರೀ ಗುರುವರ್ಯರು ನೆರೆದ ಸಾರಸ್ವತ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ವ್ಯಕ್ತಪಡಿಸಿದ ವಿಚಾರಗಳನ್ನು ಆಲಿಸಿದರು. ಆಮೇಲೆ ತಮ್ಮ ಪ್ರವಚನದಲ್ಲಿ ಉತ್ತಮ ವಿಚಾರಗಳನ್ನು ತಿಳಿಸಿ ಎಲ್ಲರನ್ನೂ ಆಶೀರ್ವದಿಸಿದರು. ಹೀಗೆ ಒಂದು ದಿನದ ಕಾರ್ಯಕ್ರಮ ಮುಕ್ತಾಯಗೊಂಡಿತು. ಅದರೊಂದಿಗೆ ವಿಶ್ವ ಸಾರಸ್ವತ ಸಂಘಟನೆ ನಡೆಸುವ ನನ್ನ ಕಾರ್ಯಕ್ಕೂ ನಾನು ಮುಕ್ತಾಯ ಹಾಡಿದೆ. ಅಖಿಲ ಭಾರತ ಸಾರಸ್ವತ ಸಂಘದ ಪದಾಧಿಕಾರಿಗಳು ವಿಶ್ವ ಸಾರಸ್ವತ ಸಮ್ಮೇಳನಕ್ಕೆ ವ್ಯಕ್ತಗೊಂಡ ಉತ್ಸಾಹದಾಯಕ ಪ್ರತಿಕ್ರಿಯೆಯನ್ನು ಉತ್ತಮ ರೀತಿಯಿಂದ ಬಳಸಿಕೊಂಡಿದ್ದರೆ, ಇಂದು ಅದು ಒಂದು ದೊಡ್ಡ ಸಜೀವ ಸಂಘಟನೆಯಾಗಿ ಮುಂದುವರಿಯುತ್ತಿತ್ತು.

ವಿಶ್ವ ಸಾರಸ್ವತ ಸಮ್ಮೇಳನ ವಾರ್ಷಿಕೋತ್ಸವ

ವಿಶ್ವ ಸಾರಸ್ವತ ಸಮ್ಮೇಳನ ನಡೆದ ಬಳಿಕ ಮುಂಬೈಯ ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘದ ಮುಖಂಡರು ಆ ದಿಕ್ಕಿನಲ್ಲಿ ಕಾರ್ಯಗಳನ್ನು ಮುಂದುವರಿಸದೇ ಇದ್ದುದರಿಂದ, ಕೆಲಸಕಾರ್ಯಗಳು ಸ್ಥಗಿತಗೊಂಡಿದ್ದವು. ಆದರೆ ನನಗೆ ಹೇಗಾದರೂ ಮಾಡಿ ದೊಡ್ಡ ಪ್ರಮಾಣದಲ್ಲಿ ನಡೆಸಿದ ವಿಶ್ವ ಸಾರಸ್ವತ ಸಮ್ಮೇಳನದ ಬಿಸಿಯನ್ನು ಆರಲು ಬಿಡಬಾರದು ಎಂದು ಮನಸ್ಸಿಗೆ ಅನಿಸಿತು. ಮುಂಬೈ ಮುಖಂಡರಿಗೆ ಏನೇ ಹೇಳಿದರೂ ಅದು ನೀರಿನ ಮೇಲೆ ಮಾಡಿದ ಹೋಮವಾಗಿತ್ತು.

ಆ ಕಾರಣಕ್ಕಾಗಿ ವಿಶ್ವ ಸಾರಸ್ವತ ಸಮ್ಮೇಳನವನ್ನು ನೆನಪಿಸಿಕೊಳ್ಳಲು ಪ್ರತಿವರ್ಷ ಮಂಗಳೂರಿನಲ್ಲಿ ದೇಶ ವಿದೇಶಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯ ನಡೆಸಿ ಪ್ರಸಿದ್ಧರಾಗಿರುವ ಸಾರಸ್ವತ ಸಮಾಜದ ಹಿರಿಯರಿಗೆ, ಸಾಧಕರಿಗೆ ಸನ್ಮಾನ ಮಾಡುವ ವಿಚಾರವನ್ನು ನಮ್ಮ ಮಂಗಳೂರು ಸಾರಸ್ವತ ಮುಖಂಡರು ಮತ್ತು ತರುಣರ ಮುಂದೆ ಪ್ರಸ್ತುತಪಡಿಸಿದೆ. ಅದಕ್ಕೆ ಎಲ್ಲರ ಒಪ್ಪಿಗೆಯೂ ದೊರೆಯಿತು. ಹೀಗಾಗಿ ಪ್ರತಿವರ್ಷ ದೇಶ ವಿದೇಶಗಳಲ್ಲಿರುವ ಸಾರಸ್ವತರನ್ನು (ಮುಖ್ಯವಾಗಿ ಉಡುಪಿ, ದ.ಕ ಮತ್ತು ಉ.ಕ. ಜಿಲ್ಲೆಯ ಸಾರಸ್ವತರು) ಮಂಗಳೂರಿಗೆ ಕರೆಯಿಸಿ ಸಮಾರಂಭವೊಂದನ್ನು ಆಯೋಜಿಸುವ ಪದ್ಧತಿಯನ್ನು ಪ್ರಾರಂಭಿಸಿದೆ. ಇದಕ್ಕೆ ಅಭೂತಪೂರ್ವ ಸ್ವಾಗತ ದೊರೆತಿತ್ತು.

ಪ್ರಥಮ ವರ್ಷ, ಅಂದರೆ ೨೦೦೧, ಜನವರಿ ೭ ರಂದು ಮಂಗಳೂರಿನ ಕೆನರಾ ಪ್ರೌಢಶಾಲೆಯ ಅಂಗಳದಲ್ಲಿ ಭವ್ಯ ವೇದಿಕೆಯನ್ನು ನಿರ್ಮಿಸಿ, ಏಳು ಮಂದಿ ಬ್ಯಾಂಕ್ ವರಿಷ್ಠರಿಗೆ ಸನ್ಮಾನ ಮಾಡುವುದೆಂದು ನಿರ್ಧರಿಸಿದ್ದೆವು. ಸಮಾರಂಭದ ಅಧ್ಯಕ್ಷಸ್ಥಾನವನ್ನು ಶ್ರೀ ಕೆ.ಕೆ. ಪೈಯವರು ಅಲಂಕರಿಸಿದ್ದರು. ಲೋಕಸಭಾ ಸದಸ್ಯರೂ, ನಮ್ಮ ಮೇಲೆ ಪ್ರೀತಿ, ವಿಶ್ವಾಸ ಇಟ್ಟಂತಹ ಸಂಸದ ಶ್ರೀ ಸುರೇಶ ಪ್ರಭು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ರಿಜರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ ಶ್ರೀ ವಿಠಲ ಲೀಲಾಧರ, ಐಸಿಐಸಿಐ ಬ್ಯಾಂಕಿನ ಚೇರಮನ್ ಶ್ರೀ ಕೆ.ವಿ. ಕಾಮತ್, ಕೆನರಾ ಬ್ಯಾಂಕಿನ ಚೇರಮನ್ ಶ್ರೀ ಆರ್. ಜೆ. ಕಾಮತ್, ಸಿಂಡಿಕೇಟ್ ಬ್ಯಾಂಕ್ ಚೇರಮನ್ ಶ್ರೀ ಡಿ.ಟಿ. ಪೈ, ಬ್ಯಾಂಕ್ ಆಫ್ ಬರೋಡಾದ ಶ್ರೀ ಪಿ.ಎಸ್. ಶೆಣೈ ಹಾಗೂ ಆಂಧ್ರಾ ಬ್ಯಾಂಕ್ ಚೇರಮನ್ ಶ್ರೀ ಬಿ. ವಸಂತನ್ ಇವರೆಲ್ಲರಿಗೆ ಸನ್ಮಾನ ಮಾಡಲಾಗಿತ್ತು.

ಬ್ಯಾಂಕ್ ರಾಷ್ಟ್ರೀಕೃತವಾಗುವ ಮೊದಲು ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ಕಾರ್ಪೊರೇಶನ್ ಬ್ಯಾಂಕ್ ಮಾತ್ರ ನಮ್ಮದಾಗಿತ್ತು(ಸಾರಸ್ವತರದು). ರಾಷ್ಟ್ರೀಕರಣವಾದ ಬಳಿಕ ಸಾರಸ್ವತರ ನಿಷ್ಠಾವಂತ ಜೀವನ, ಬುದ್ಧಿಮತ್ತೆ, ಮತ್ತು ವೃತ್ತಿಪರತೆಯಿಂದಾಗಿ ಕೇಂದ್ರ ಸರಕಾರದ ವಿತ್ತ ಇಲಾಖೆಯು ಅನೇಕ ಬ್ಯಾಂಕಗಳಲ್ಲಿ ಸಾರಸ್ವತರನ್ನು ಅಧ್ಯಕ್ಷರನ್ನಾಗಿ ನೇಮಕಗೊಳಿಸಿದೆ. ಹೀಗಾಗಿ ಏಕಕಾಲದಲ್ಲಿ ೫-೬ ಬ್ಯಾಂಕ್‌ಗಳಲ್ಲಿ ಸಾರಸ್ವತರು ಅಧ್ಯಕ್ಷಸ್ಥಾನದಲ್ಲಿರುವುದು ಗೌರವದ ವಿಚಾರವಾಗಿದೆ. ಇದು ಬೇರೆ ಸಮಾಜದ ಜನರಿಗೂ ತಿಳಿಯಬೇಕು ಎನ್ನುವ ಉದ್ದೇಶದಿಂದಲೂ ಈ ಪ್ರಥಮ ಬಾರಿಯ ಸನ್ಮಾನ ಸಮಾರಂಭದಲ್ಲಿ ನಾವು ೭ ಮಂದಿ ಬ್ಯಾಂಕ್ ವರಿಷ್ಠರಿಗೆ ಸನ್ಮಾನಿಸಿ ಗೌರವಿಸಿದ್ದೆವು.

ಇದೇ ಸಮಾರಂಭದಲ್ಲಿ ಎಂಭತ್ತರ ಗಡಿಯನ್ನು ತಲುಪಲಿದ್ದ ನಮ್ಮ ಸಮಾಜದ ಹಿರಿಯರಾದ ಶ್ರೀ ಕೆ.ಕೆ. ಪೈ(ಅವರು ಸಿಂಡಿಕೇಟ್ ಬ್ಯಾಂಕಿನ ಚೇರಮನ್ ಆಗಿದ್ದವರು) ಅವರಿಗೂ ವಿಶೇಷ ರೀತಿಯ ಸನ್ಮಾನವನ್ನು ಏರ್ಪಡಿಸಿದ್ದೆವು. ಇದಕ್ಕಾಗಿ ದೆಹಲಿಯಿಂದ ಬಂದ ಶ್ರೀ ಸುರೇಶ ಪ್ರಭು ಅವರು ನನ್ನನ್ನು ತುಂಬಾ ಪ್ರಶಂಸಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಜಿಲ್ಲೆಯ ಕಾಲೇಜು ವಿದ್ಯಾರ್ಥಿಗಳಿಗೆ ಶ್ರೀನಿವಾಸ ಪಾಠಶಾಲೆಯಲ್ಲಿ ವೃತ್ತಿಪರ ತರಬೇತಿಯನ್ನು ನಡೆಸಿದ್ದೆವು. ಇದನ್ನು ಆಯೋಜಿಸಿದವರು ಸಂಸ್ಥೆಯ ಅಧ್ಯಕ್ಷರಾದ ಡಾ. ಕಸ್ತೂರಿ ಮೋಹನ ಪೈ. ಅಭ್ಯರ್ಥಿಗಳಾಗಿ ಭಾಗಿಯಾಗಿದ್ದವರು ಸುಮಾರು ೨೫೦ ವಿದ್ಯಾರ್ಥಿಗಳು.

ಅನಂತರದ ವರ್ಷಗಳಲ್ಲಿ ವಾರ್ಷಿಕೋತ್ಸವದ ಆಚರಣೆಯ ಪ್ರಯುಕ್ತ ಸಾರಸ್ವತ ಸಮಾಜದ ಪ್ರಸಿದ್ಧ ಹಿರಿಯರನ್ನು, ತಮ್ಮ ಕೃತುತ್ವ ಶಕ್ತಿಯಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿ ಹೆಸರುವಾಸಿಯಾಗಿದ್ದ ಪ್ರಸಿದ್ಧ ಸಾರಸ್ವತರಿಗೆ ಸನ್ಮಾನಿಸುವುದು ಒಂದು ಪದ್ಧತಿಯಾಗಿ ಮಂಗಳೂರಿನಲ್ಲಿ ಪ್ರಾರಂಭವಾಯಿತು.

ಪ್ರತಿ ವರ್ಷ ನಾವು ಸಮಾಜದ ವಯೋವೃದ್ಧ, ಜ್ಞಾನವೃದ್ಧ ಹಾಗೂ ಸಮಾಜದ ಒಳಿತಿಗಾಗಿ ಅವಿರತವಾಗಿ ಶ್ರಮಿಸಿ ಕಾರ್ಯ ನಡೆಸುತ್ತಿರುವ ಶ್ರೀ ಕೆ.ಕೆ.ಪೈ ಅವರ ದಿವ್ಯಹಸ್ತದಿಂದ ಸನ್ಮಾನಿತರನ್ನು ಗೌರವಿಸುವುದು ಮಾಡುತ್ತಿದ್ದೆವು. ಆದರೆ ೨೦೦೮ನೇ ಇಸವಿ ಜನವರಿಯಲ್ಲಿ ೮೬ ವರ್ಷ ವಯಸ್ಸಿನ, ನಮ್ಮ ಸಮಾಜದ ಅತ್ಯಂತ ಹಿರಿಯರೂ ಆಗಿದ್ದ ಶ್ರೀ ಕೆ.ಕೆ. ಪೈಯವರಿಗೆ ಮತ್ತು ೮೨–೮೩ ವರ್ಷ ವಯಸ್ಸಿನ ಅಖಿಲ ಭಾರತ ಸಾರಸ್ವತ ಸಾಂಸ್ಕೃತಿಕ ಸಂಘದ ಸಂಸ್ಥಾಪಕರಾಗಿದ್ದ ಶ್ರೀ ಎಸ್.ವಿ. ಪಿಕಳೆಯವರಿಗೆ ಮತ್ತು ಶ್ರೀ ಗುರುದಾಸ್ ವಿ. ಮಾಸುರಕರರಿಗೆ ಸನ್ಮಾನ ಮಾಡುವುದೆಂಬ ತೀರ್ಮಾನ ಕೈಗೊಂಡದ್ದರಿಂದ, ಧರ್ಮಸ್ಥಳದ ರಾಜರ್ಷಿ ಡಾ. ವಿರೇಂದ್ರ ಹೆಗ್ಗಡೆಯವನ್ನು ಕರೆಯಿಸಿ ಅವರ ದಿವ್ಯ ಹಸ್ತದಿಂದ ಈ ವಯೋವೃದ್ಧ ಹಿರಿಯರಿಗೆ ಸನ್ಮಾನ ಮಾಡಲಾಗಿತ್ತು.

ವಾರ್ಷಿಕೋತ್ಸವವನ್ನು ಪ್ರತಿ ವರ್ಷ ಜನವರಿ ತಿಂಗಳಲ್ಲಿ ನಡೆಸುವುದಾದರೂ, ವರ್ಷದ ನಡುವೆ ಯಾರದರೂ ಒಬ್ಬ ವ್ಯಕ್ತಿ ಉನ್ನತ ಹುದ್ದೆಗೆ ಅಥವಾ ಅಧಿಕಾರ ಸ್ಥಾನಕ್ಕೆ ತಲುಪಿದ್ದರೆ ಅವರನ್ನು ನಾವು ಮಂಗಳೂರಿಗೆ ಕರೆಯಿಸಿ ಸನ್ಮಾನ ಮಾಡುವುದಿತ್ತು. ಈ ನಿಮಿತ್ತವಾಗಿ ಮಂಗಳೂರು ಮತ್ತು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಸಮಾಜ ಬಾಂಧವರು ಒಂದೆಡೆ ಸೇರುವುದು ಸಾಧ್ಯವಾಗುತ್ತಿತ್ತು. ಈ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಸಮಾಜದ ಬೇರೆ ಬೇರೆ ಸ್ತರಗಳ, ವೃತ್ತಿ ಬದುಕಿನ ಮಹನೀಯರ ಹೊಗಳಿಕೆ, ಪ್ರಶಂಸೆಗಳು ನನಗೆ ಪ್ರಾಪ್ತವಾಗಿವೆ. ಅಷ್ಟು ಮಾತ್ರವಲ್ಲ ಅವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದು ಸಾಧ್ಯವಾಗಿದೆ.

●●

೪೩. ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿ

ವಿಶ್ವ ಕೊಂಕಣಿ ಕೇಂದ್ರ ಕಟ್ಟಡವನ್ನು ನಿರ್ಮಿಸಿದ ಬಳಿಕ, ಅದನ್ನು ಕಟ್ಟಿದ ಉದ್ದೇಶವನ್ನು ಸಾರ್ಥಕಗೊಳಿಸುವ ಕಾರ್ಯಯೋಜನೆಯೂ ನನ್ನ ಮನಸ್ಸಿಗೆ ಬಂದಿತ್ತು. ಆ ಕುರಿತು ನಾನು ಹೋದೆಡೆಗಳಲ್ಲೆಲ್ಲಾ ಜನರು ನನ್ನನ್ನು ಕೇಳಿದ್ದುಂಟು. ನಾನು ಆ ದಿಕ್ಕಿನಲ್ಲಿ ಯೋಚಿಸಿ ಒಂದು ಯೋಜನೆಯನ್ನು ಸಿದ್ಧಪಡಿಸಿದೆ. ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ಧ್ಯೇಯ, ಧೋರಣೆಗಳು ಮತ್ತು ಭವಿಷ್ಯದ ಕಾರ್ಯಗಳ ಕುರಿತು ಮಾಹಿತಿ ನೀಡುವ ಕೈಪಿಡಿಯೊಂದನ್ನು ಪ್ರಕಟಿಸಿದೆ. ಅದರಲ್ಲಿ ಮೊದಲನೆಯದು ಮತ್ತು ಮಹತ್ವಪೂರ್ಣವಾದುದು "ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿ"ಯ ಸ್ಥಾಪನೆ. ವಿಶ್ವ ಕೊಂಕಣಿ ಕೇಂದ್ರದ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮೂಲಕ ಅತ್ಯುತ್ತಮ ಕೊಂಕಣಿ ಸಾಹಿತ್ಯ ಮತ್ತು ಭಾಷಾಂತರ ಸಾಹಿತ್ಯದ ರಚನೆ ಮತ್ತು ಪ್ರಕಟಣೆ, ಕನ್ನಡ ಲಿಪಿಯಲ್ಲಿರುವ ಕೊಂಕಣಿ ಸಾಹಿತ್ಯವನ್ನು ದೇವನಾಗರಿಗೆ ಲಿಪ್ಯಂತರಗೊಳಿಸುವಿಕೆ ಇತ್ಯಾದಿ ಸಾಹಿತ್ಯಕ ಕೆಲಸಗಳನ್ನು ನಡೆಸಿ ಕೊಂಕಣಿ ಸಾಹಿತ್ಯದ ಮಟ್ಟವನ್ನು ಉನ್ನತಸ್ಥಾನಕ್ಕೆ ಏರಿಸುವುದು ಮತ್ತು ದೇಶ ವಿದೇಶಗಳ ಓದುಗರಿಗೆ ಕೊಂಕಣಿ ಸಾಹಿತ್ಯದ ಪರಿಚಯವನ್ನು ಮಾಡಿಕೊಡುವುದು ಎಂದಿತ್ತು.

ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯಲ್ಲಿ ಭಾರತದ ನಾಲ್ಕೂ ರಾಜ್ಯಗಳ (ಮಹಾರಾಷ್ಟ್ರ, ಗೋವಾ, ಕರ್ನಾಟಕ ಮತ್ತು ಕೇರಳ) ಪ್ರಸಿದ್ಧ ಸಾಹಿತಿಗಳು, ಅಂಕಣಕಾರರು, ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತರು ಸದಸ್ಯರಾಗಿ ಇರುವಂತೆ ಅವರನ್ನು ನಾವು ಆಮಂತ್ರಿಸಿ ವಿಶ್ವ ಕೊಂಕಣಿ ಅಕಾಡೆಮಿಗೆ ನೇಮಕ ಮಾಡಿದ್ದೆವು. ಈ ೧೫ ಮಂದಿ ಸಾಹಿತಿಗಳ ಮೊದಲ ಸಭೆಯನ್ನು ಗೋವಾ ಅಕಾಡೆಮಿಯ 'ದಲ್ಗಾದೊ' ವಾಚನಾಲಯದಲ್ಲಿ ಎರಡು ದಿನಗಳ ಕಾಲ(೧೭–೧೮ ಮೇ, ೨೦೦೬) ನಡೆಸಿದ್ದೆವು. ಅಲ್ಲಿ ಸೇರಿದ್ದ ಸಾಹಿತ್ಯಕಾರರು ಉತ್ತಮ ವಿಚಾರಗಳನ್ನು ಮಂಡಿಸಿ ಅಕಾಡೆಮಿ ಸ್ಥಾಪನೆಯಾಗುವ ಉದ್ದೇಶ ಸಾಧನೆಗಾಗಿ ಯೋಜನೆಯನ್ನು ರೂಪಿಸಿದ್ದರು. ಪ್ರಥಮವಾಗಿ ಶ್ರೀ ರವೀಂದ್ರ ಕೇಳೆಕರರ ಕೊಂಕಣಿ ಲೇಖನಗಳ ಸಂಗ್ರಹವನ್ನು ಇಂಗ್ಲೀಷ್ ಭಾಷೆಗೆ ಅನುವಾದಿಸಿ ಬೆಳಕಿಗೆ ತರುವುದೆಂದು ನಿರ್ಧಾರ ಕೈಗೊಳ್ಳಲಾಯಿತು.

೨೦೦೬ ನವೆಂಬರ್ ೧೧ರ ಸಂಜೆ ಪಣಜಿಯ "ಹೊಟೇಲ್ ನೋವಾ ಗೋವಾ" ಸಮ್ಮೇಳನ ಸಭಾಂಗಣದಲ್ಲಿ ಗೋವಾ ಸರಕಾರದ ವಿದ್ಯಾಮಂತ್ರಿ ಮಾನ್ಯ ಶ್ರೀ ಲಿಯೋಜಿನೊ ಫೆಲೆರೊ ಅವರಿಂದ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಉದ್ಘಾಟನೆಯಾಯಿತು. ಅವರು ನನ್ನ ಯೋಜನೆಯನ್ನು ಮುಕ್ತಕಂಠದಿಂದ ಪ್ರಶಂಸಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಇದರ ನಿರ್ದೇಶಕರಾದ ಡಾ. ಉದಯ ನಾರಾಯಣ ಸಿಂಗರು ನಮಗೆ ಮಾರ್ಗದರ್ಶನ ನೀಡಿದರು. ವೇದಿಕೆಯ ಮೇಲೆ ಕೊಂಕಣಿ ಹಿರಿಯ ಸಾಹಿತಿ ರವೀಂದ್ರ ಕೇಳೆಕರ್ ಗೋವಾ ಕೊಂಕಣಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪುಂಡಳೀಕ ನಾಯ್ಕ್ ಕೂಡ ಉಪಸ್ಥಿತರಿದ್ದರು. ಸಭಿಕರಾಗಿ ಗೋವೆಯ ಪ್ರಸಿದ್ಧ ಲೇಖಕರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. .

ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ರೂಪಿಸಲಾಗಿರುವ ವಿಶ್ವ ಕೊಂಕಣಿ ಅಕಾಡೆಮಿಯ ಪ್ರಥಮ ಪ್ರಕಟಣೆಯಾಗಿ ಕೊಂಕಣಿಯ ಹಿರಿಯ ಸಾಹಿತಿ, ಗಾಂಧೀವಾದಿ ಶ್ರೀ ರವೀಂದ್ರ ಕೇಳೆಕರ ಅವರ "ವೇಳೆ ವಯಲೊ ಘುಲೊ" ಲೇಖನ ಸಂಗ್ರಹವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಬೆಳಕಿಗೆ ತರುವುದೆಂದು ತೀರ್ಮಾನ ಕೈಗೊಳ್ಳಲಾಗಿತ್ತು. ಈ ಅನುವಾದ ಕಾರ್ಯವನ್ನು ಕೊಲ್ಕತ್ತಾದಲ್ಲಿರುವ ಪ್ರಸಿದ್ಧ ಇಂಗ್ಲಿಷ್ ಭಾಷಾ ಅನುವಾದಕಿ ಶ್ರೀಮತಿ ವಿದ್ಯಾ ಪೈಯವರು ಸಮರ್ಥ ರೀತಿಯಿಂದ ಮಾಡಿದ್ದರು. ಈ ಭಾಷಾಂತರವನ್ನು ಮುಂಬೈಯ ಹಿರಿಯ ಪ್ರಕಾಶನ ಸಂಸ್ಥೆ "ಪೊಪ್ಯುಲರ್ ಬುಕ್ ಡಿಪೊ"ವಿನ ಮಾಲಿಕರಾದ ಶ್ರೀ ರಾಮದಾಸ ಭಟ್ಕಳ್ ಅವರಿಗೆ ತೋರಿಸಿದೆ. ತನ್ನ ಮಾತೃಭಾಷೆಯ ಮೇಲಿನ ಪ್ರೀತಿಯಿಂದ ಶ್ರೀ ರಾಮದಾಸರು

ಆ ಇಂಗ್ಲಿಷ್ ಭಾಷಾಂತರ ಕೃತಿಯನ್ನು ತಾನು ಪ್ರಕಟಿಸುವುದಾಗಿ ತಿಳಿಸಿದರು. ಇದರಿಂದ ನನಗೆ ತುಂಬಾ ಸಹಾಯ ದೊರೆಯಿತು. ಯಾಕೆಂದರೆ ಆ ಪುಸ್ತಕ ಪ್ರಕಟಣೆಗೆ ಬಹಳ ಹಣದ ಅಗತ್ಯವಿತ್ತು. ಆ ದಿನಗಳಲ್ಲಿ ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ನಡೆಯುತ್ತಿದ್ದುದರಿಂದ ನಮಗೆ ದೇಣಿಗೆಯಾಗಿ ಎಷ್ಟು ಹಣ ಬಂದರೂ ಅದು ಸಾಲುತ್ತಿರಲಿಲ್ಲ. ಹೀಗಾಗಿ ಶ್ರೀ ರಾಮದಾಸ ಭಟ್ಕಳ್ ಅವರು ತಮ್ಮ ಸಂಸ್ಥೆಯ ವತಿಯಿಂದ ಪ್ರಕಾಶನದ ಹೊರೆಯನ್ನು ವಹಿಸಿಕೊಂಡದ್ದು ನನ್ನ ಪಾಲಿಗೆ ದೊಡ್ಡ ಆಶೀರ್ವಾದವಾಗಿ ಭಾಸವಾಯಿತು..

ಹಲವು ವರ್ಷಗಳ ಹಿಂದೆ, ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ ಮಹಾನ್ ರಾಜಕಾರಣಿ ದಿ. ಉಳ್ಳಾಲ ಶ್ರೀನಿವಾಸ ಮಲ್ಯರ ಜೀವನ ಮತ್ತು ಕಾರ್ಯ ವಿಚಾರವಾಗಿ ಕೊಂಕಣಿಯಲ್ಲಿ ಪುಸ್ತಕ ಬರೆದಿದ್ದೆ. ಆ ಪುಸ್ತಕವನ್ನು ತಾನು ತುಳುವಿಗೆ ಅನುವಾದಿಸುವುದಾಗಿ ಮಂಗಳೂರು ಆಕಾಶವಾಣಿಯ ಶ್ರೀ ಮುದ್ದು ಮೂಡುಬೆಳ್ಳೆಯವರು ನನ್ನಲ್ಲಿ ವಿನಂತಿ ಮಾಡಿದ್ದರು. ಅದನ್ನು ನಮ್ಮ ಬಸ್ತಿ ಪ್ರಕಾಶನದಿಂದ ನಾನು ಪ್ರಕಟಿಸಿದ್ದೆ. ಈ ಗ್ರಂಥದ ಬಿಡುಗಡೆಯನ್ನು ೨೦೦೭ನೇ ಇಸವಿ ಡಿಸೆಂಬರ್ ೮ ರಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಚಾವಡಿಯಲ್ಲಿ ಖ್ಯಾತ ತುಳು ಸಾಹಿತಿ ಶ್ರೀ ಅಮೃತ ಸೋಮೇಶ್ವರ ನಡೆಸಿದ್ದರು.

ಶ್ರೀ ರಾಮದಾಸ ಕಾಮತ ಇನ್‌ಫೋಸಿಸ್ ಕಂಪೆನಿಯ ಹಿರಿಯ ನಿರ್ದೇಶಕರು. ಅವರಿಗೆ ಕೊಂಕಣಿ ಸಾಹಿತ್ಯ, ಸಂಸ್ಕೃತಿ ಮತ್ತು ಜಾನಪದ ಕಲೆಗಳ ಕುರಿತು ವಿಶೇಷ ಪ್ರೀತಿ. ಅವರು ೨೦೦೭, ಡಿಸೆಂಬರ್ ೮ ರಂದು ಶ್ರೀ ಪ್ರದೀಪ ಪೈಯವರ (ಹಾಂಗ್ಯೊ ಐಸಕ್ರೀಮ್) ಕಚೇರಿಗೆ ಬಂದಿದ್ದರು. ಶ್ರೀ ಪ್ರದೀಪ ಪೈಯವರ ಸೂಚನೆಯಂತೆ ನಾನು ಅವರನ್ನು ಭೇಟಿಯಾಗಿ ನಾವು ನಡೆಸುತ್ತಿರುವ ಕೊಂಕಣಿ ಭಾಷೆಗೆ ಸಂಬಂಧಿಸಿದ ಕಾರ್ಯಗಳು ಮತ್ತು "ಬಸ್ತಿ ಪ್ರಕಾಶನ"ದ ವತಿಯಿಂದ ಪ್ರಕಟಿಸಿದ ಡಾ. ಜ್ಯೋತ್ಸ್ನಾ ಕಾಮತರ "ಸುರಗ್ಯಾಸರ"(ಹೋವಿಗಳ ಸಂಗ್ರಹ) ಮತ್ತು ಸಂತೋಷ ಕುಮಾರ ಗುಲ್ವಾಡಿಯವರ "ತಾ ತಾ ತಿಂಗಣ"(ಬಾಲ ಗೀತೆಗಳ ಸಂಗ್ರಹ) ಪುಸ್ತಕಗಳನ್ನು ಮತ್ತು ಅವುಗಳ ಸಿಡಿಗಳನ್ನು ನೀಡಿದೆ. ಆಮೇಲೆ ವಿಶ್ವ ಕೊಂಕಣಿ ಕೇಂದ್ರದ ಉದ್ದೇಶ ಮತ್ತು ಕಟ್ಟಡ ನಿರ್ಮಾಣ ಕಾರ್ಯದ ಕುರಿತು ಮಾಹಿತಿ ನೀಡಿದೆ. ಅದು ಅವರಿಗೆ ತುಂಬಾ ಇಷ್ಟವಾಯಿತು. ಅವರು ಬೆಂಗಳೂರಿಗೆ ಹೋದ ಬಳಿಕ ನಾವು ಕೊಂಕಣಿ ಪ್ರತಿಷ್ಠಾನದ ವತಿಯಿಂದ ಉತ್ತಮ ಸಾಹಿತ್ಯ ಕೃತಿಗಳನ್ನು ಪ್ರಕಟಿಸುವುದಕ್ಕಾಗಿ ೩ ಲಕ್ಷ ರೂಗಳ ಚೆಕ್‌ನ್ನು ಪ್ರದೀಪ ಪೈಯವರಲ್ಲಿ ಕಳುಹಿಸಿಕೊಟ್ಟರು. ಇದರಿಂದ ನಮಗೆ ೪ ಅಮೂಲ್ಯ ಕೊಂಕಣಿ ಸಾಹಿತ್ಯ ಕೃತಿಗಳನ್ನು ಪ್ರಕಟಿಸುವುದು ಮತ್ತು "ಬಾಳ ಗೀತಾಂ" ಕಾರ್ಯಾಗಾರವನ್ನು ನಡೆಸುವುದು ಸುಲಭವಾಯಿತು.

ಈ ಅವಧಿಯಲ್ಲಿ ಡಾ. ಸುನೀತಾ ಬಾಯಿ, ಕೊಚ್ಚಿ ಇವರು ಹಿಂದಿ ಮತ್ತು ಕೊಂಕಣಿಗೆ ಅನುವಾದಿಸಿದ "ಮಹಾಕವಿ ಗೋವಿಂದ ಪೈ" ಮತ್ತು ಶ್ರೀಮತಿ ಶಕುಂತಲಾ ಕಿಣಿಯವರು ಕೊಂಕಣಿಯಿಂದ ಕನ್ನಡಕ್ಕೆ ಅನುವಾದಿಸಿದ ಬಾಕಿಬಾಬ ಬೋರ್ಕರರ ಕವಿತಾ ಸಂಗ್ರಹ "ನೂಪುರ"ವನ್ನು ಪ್ರಕಟಿಸಿದ್ದೇವೆ.

೨೦೧೧ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಂಕಣಿ ಪ್ರತಿಷ್ಠಾನದ ವತಿಯಿಂದ ಶ್ರೀ ಮಾಧವ ಪೈ ರಚಿಸಿದ "ಕನ್ನಡ–ಕೊಂಕಣಿ ರತ್ನಕೋಶ"ದ ಪ್ರಕಟಣೆ ಮತ್ತು "ವಿಶ್ವ ಕೊಂಕಣಿ ಪರಿಚಯ ಕೋಶ"ದ ರಚನೆಯ ಕಾರ್ಯಯೋಜನೆಗೆ ಶ್ರೀ ರಾಮದಾಸ ಕಾಮತರು ಎಂಟು ಲಕ್ಷ ರೂ ದೇಣಿಗೆ ನೀಡಿದರು.

ಈಗ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯಲ್ಲಿ ಶ್ರೀ ಉದಯ ಎಲ್. ಭೆಂಬ್ರೆ(ಅಧ್ಯಕ್ಷರು), ಮತ್ತು ಸದಸ್ಯರಾಗಿ ಶ್ರೀ ಪುಂಡಲೀಕ ನಾಯ್ಕ್, ಡಾ. ತಾನಾಜಿ ಹಳರಣಕರ, ಶ್ರೀಮತಿ ಮಾಧವಿ ಸರದೇಸಾಯಿ(ಇವರು ಇತ್ತೀಚೆಗೆ ತೀರಿಕೊಂಡಿದ್ದಾರೆ), ಶ್ರೀ ಪ್ರಕಾಶ ಆರ್. ವಜರೀಕರ, ಡಾ. ಸಿ.ಎನ್. ಶೆಣೈ, ಫಾದರ ಮಾರ್ಕ್ ವಾಲ್ಡರ್, ಡಾ. ಜಯಶ್ರೀ ಶ್ಯಾನಭಾಗ್, ಶ್ರೀ ಮೆಲ್ವಿನ್ ರಾಡ್ರಿಗಸ್, ಡಾ.ಗೀತಾ ಶೆಣೈ, ಶ್ರೀ ಕೆ. ಗೋಕುಲದಾಸ ಪ್ರಭು, ಶ್ರೀ ಆರ್.ಎಸ್. ಭಾಸ್ಕರ, ಡಾ. ಸುನೀತಾ ಬಾಯಿ, ಶ್ರೀ ಪಯ್ಯನೂರು ರಮೇಶ ಪೈ ಇದ್ದಾರೆ.

ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪ್ರಥಮ ಪ್ರಯತ್ನವಾಗಿ ಪದ್ಮಭೂಷಣ, ವಿಶ್ವ ಕೊಂಕಣಿ ಸಾಹಿತ್ಯರತ್ನ ಶ್ರೀ ರವೀಂದ್ರ ಕೇಳೆಕರರ ಕೊಂಕಣಿ ಲೇಖನ ಸಂಗ್ರಹ "ವೆಳೆ ವಯಲೊ ಘುಲೊ"ವನ್ನು ಶ್ರೀಮತಿ ವಿದ್ಯಾ ಪೈಯವರು ಇಂಗ್ಲಿಷಿಗೆ ಅನುವಾದಿಸಿ, ಅದನ್ನು ಮುಂಬೈಯ ಶ್ರೀ ರಾಮದಾಸ ಭಟ್ಕಳರು "ಕೆಲಿಡೊಸ್ಕೋಪ್" ಎಂಬ ಹೆಸರಿನಿಂದ ತಾವೇ ಸ್ವತಃ ಪ್ರಕಟಿಸಿದ್ದರು. ಈ ಗ್ರಂಥದ ೩೦೦ ಪ್ರತಿಗಳು ಸೆಪ್ಟೆಂಬರ್ ೨೪, ೨೦೦೮ರಂದು ವಿಶ್ವ ಕೊಂಕಣಿ ಕೇಂದ್ರಕ್ಕೆ ಬಂದು ತಲುಪಿದ್ದವು. ಇದರ ಬಿಡುಗಡೆ ಸಮಾರಂಭವು ಸೆಪ್ಟೆಂಬರ

೨೮ರಂದು ಪಣಜಿಯ ಹೊಟೇಲ್ ನೋವಾ ಗೋವಾದ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಗೋವಾ ಮುಖ್ಯಮಂತ್ರಿಗಳಾಗಿದ್ದ ಶ್ರೀ ದಿಗಂಬರ ಕಾಮ್ತಿಯವರು ನಡೆಸಿದರು. ಅಧ್ಯಕ್ಷತೆಯನ್ನು ಶ್ರೀ ಆರ್.ವಿ. ದೇಶಪಾಂಡೆ ನಿರ್ವಹಿಸಿದ್ದರು. ಮೂಲ ಲೇಖಕರಾದ ಶ್ರೀ ರವೀಂದ್ರ ಕೇಳೆಕರರಿಗೆ ಶಾಲು ಹೊದೆಸಿ ಸನ್ಮಾನ ಮಾಡಲಾಯಿತು. ಕಾರ್ಯಕ್ರಮ ತುಂಬಾ ಚೆನ್ನಾಗಿ ನಡೆಯಿತು. ಈ ಕಾರ್ಯದಲ್ಲಿ ಡಾ. ತಾನಾಜಿ ಹಳರಣಕರರು ತುಂಬಾ ಶ್ರಮಪಟ್ಟಿದ್ದರು.

ಹೀಗೆ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ೮ ಗ್ರಂಥಗಳು ಬೆಳಕಿಗೆ ಬಂದವು.

ಅಕ್ಟೋಬರ್ ೧೩, ೨೦೦೯ರಂದು ವಿಶ್ವ ಕೊಂಕಣಿ ಕೇಂದ್ರದಲ್ಲಿ "ಕೊಂಕಣಿ ಥಿಂಕ್ ಟ್ಯಾಂಕ್" ಸದಸ್ಯರ ಸಭೆ ನಡೆಯಿತು. ಗೋವೆಯಿಂದ ಪ್ರಸಿದ್ಧ ಸಾಹಿತಿಗಳಾದ ಉದಯ ಭೆಂಬ್ರೆ, ಪುಂಡಲೀಕ ನಾಯ್ಕ್, ಎನ್. ಶಿವದಾಸ, ಡಾ. ತಾನಾಜಿ ಹಳರಣಕರ, ದಾಮೋದರ ಮಾವಜೊ, ಮಂಗಳೂರಿನಿಂದ ಫಾ. ಮಾರ್ಕ್ ವಾಲ್ಡರ್, ಕೊಚ್ಚಿಯಿಂದ ಡಾ. ಸುನೀತಿ ಬಾಯಿ, ಬೆಂಗಳೂರಿನಿಂದ ಡಾ. ಗೀತಾ ಶೆಣೈ, ನಾಟಕ ಕ್ಷೇತ್ರದ ಖ್ಯಾತ ನಿರ್ದೇಶಕರಾದ ಶ್ರೀಧರ ಕಾಮತ ಬಾಂಬೊಳಿಕರ, ಮುಂಬೈಯಿಂದ ಡಾ. ಸಿ.ಎನ್. ಶೆಣೈ, ಅನಂತ ಅಮ್ಮೆಂಬಳ, ಕುಮಟಾದಿಂದ ಶ್ರೀ ಅರುಣ ಉಭಯಕರ ಮತ್ತು ಡಾ. ಶಿವರಾಮ ಕಾಮತ್ ಬಂದಿದ್ದರು. ಕೊಂಕಣಿ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿ ಮತ್ತು ಲೋಕವೇದಗಳನ್ನು ದೇಶ ವಿದೇಶಗಳಲ್ಲಿ ಪ್ರಚಾರ ಮತ್ತು ಪ್ರಸಾರ ಮಾಡಿ ಜಾಗತಿಕ ಮಟ್ಟದಲ್ಲಿ ಕೊಂಕಣಿ ಭಾಷೆ ಮತ್ತು ಸಮಾಜದ ಪರಿಚಯವನ್ನು ಮಾಡಿಕೊಡುವುದರ ವಿಚಾರವಾಗಿ ಚರ್ಚೆ ನಡೆಯಿತು.

ಇದಲ್ಲದೆ, ವಿಶ್ವ ಕೊಂಕಣಿ ಬಾಲ ಸಾಹಿತ್ಯ ಮಾಲಿಕೆಯಲ್ಲಿ ೮ ಕೊಂಕಣಿ ಪುಸ್ತಕಗಳನ್ನು, ೩೦ ದ್ವಿಭಾಷಿಕ (ಕೊಂಕಣಿ ಮತ್ತು ಇಂಗ್ಲಿಷ್) ಗ್ರಂಥಗಳನ್ನು ಪ್ರಕಟಿಸಲಾಗಿದೆ.

ವಿಶ್ವ ಕೊಂಕಣಿ ಸಾಹಿತ್ಯ ಪ್ರಕಾಶನದ ಕುರಿತು ಬರೆಯುವಾಗ ಅನುವಾದ ಕಾರ್ಯಗಳಿಗೆ–ಕೊಂಕಣಿಯಿಂದ ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಿಗೆ, ಮತ್ತು ಇತರ ಭಾಷೆಗಳಿಂದ ಕೊಂಕಣಿಗೆ ಅನುವಾದಿಸುವುದರಲ್ಲಿ ಶ್ರೀ ಟಿ.ವಿ ಮೋಹನದಾಸ ಪೈ ಅವರು ತುಂಬಾ ಆಸಕ್ತಿ ತೋರಿಸಿದ್ದಾರೆ. ಅನುವಾದ ಕಾರ್ಯಕ್ಕಾಗಿ ತಾನು ಇಪ್ಪತ್ತು ಲಕ್ಷ ರೂ ಕೊಡುವುದಾಗಿ ಆಶ್ವಾಸನೆ ನೀಡಿದ್ದಾರೆ. ಇದು ನಮ್ಮ ಕೊಂಕಣಿ ಸಾಹಿತ್ಯವನ್ನು ಬೆಳೆಸಿಕೊಳ್ಳುವುದಕ್ಕೆ ಮತ್ತು ಕೊಂಕಣಿ ಭಾಷಾ ಸಾಹಿತ್ಯದ ರುಚಿ ಮತ್ತು ಸ್ವಾದವನ್ನು ಅನ್ಯ ಭಾಷಾ ವಾಚಕ ಸಮುದಾಯಕ್ಕೆ ತಲುಪಿಸುವುದಕ್ಕೆ ಮಹತ್ವದ ದೇಣಿಗೆಯಾಗುವುದು.

೨೦೦೬ ರಲ್ಲಿ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯು ಸ್ಥಾಪನೆಯಾದ ಬಳಿಕ ಅನೇಕ ವಿಚಾರ ಸಂಕಿರಣಗಳು, ಕಾರ್ಯಾಗಾರಗಳನ್ನು ನಡೆಸಲಾಗಿದೆ. ಅನುವಾದ ಪ್ರಕ್ರಿಯೆಯ ಮೂಲಕ ಅನೇಕ ಗ್ರಂಥಗಳನ್ನು ಪ್ರಕಟಿಸಲಾಗಿದೆ. ೨೦೧೦ರಲ್ಲಿ ರಾಷ್ಟ್ರೀಯ ಕೊಂಕಣಿ ರಾಮಾಯಣ ಸೆಮಿನಾರ, ೨೦೧೧ರಲ್ಲಿ "ಬಾಕಿಬಾಬ ಶತಿ ಸಮಾರಂಭ", ೨೦೧೨ರಲ್ಲಿ "ಚಂದ್ರಹಾಸ ನಾಟಕದ ಶತಮಾನೋತ್ಸವ"ದ ಪ್ರಯುಕ್ತ ಆ ನಾಟಕದ ಕುರಿತು ಚರ್ಚೆಗಳು, ನಾಟಕ ಪ್ರದರ್ಶನ ಇತ್ಯಾದಿ ನಡೆದಿವೆ.

ಡಾ. ಸುನೀತಿ ಬಾಯಿಯವರು ಅನುವಾದಿಸಿ, ವಿಶ್ವ ಕೊಂಕಣಿ ಅಕಾಡೆಮಿ ಪ್ರಕಟಿಸಿದ "ಮಹಾಕವಿ ಗೋವಿಂದ ಪೈ" ಅನುವಾದ ಕೃತಿಗೆ ೨೦೧೧ರಲ್ಲಿ ನವದೆಹಲಿಯ ಸಾಹಿತ್ಯ ಅಕಾದೆಮಿಯಿಂದ ಗ್ರಂಥ ಪ್ರಶಸ್ತಿ ದೊರೆತಿದೆ.

ಬಾಕಿಬಾಬ ಬೋರಕರ ಜನ್ಮ ಶತಾಬ್ಧಿ

ಬಾಕಿಬಾಬ ಎಂದೇ ಪ್ರಸಿದ್ಧರಾಗಿರುವ ಶ್ರೀ ಬಾಲಕೃಷ್ಣ ಭಗವಂತ ಬೋರಕರರು ಗೋವೆಯ ಪ್ರಸಿದ್ಧ ಕೊಂಕಣಿ ಕವಿ. ಅವರು ಮಾತೃಭಾಷೆ ಕೊಂಕಣಿಯಲ್ಲಿ ಮಾತ್ರವಲ್ಲ, ಮಾರಾಠಿಯಲ್ಲಿಯೂ ಪ್ರಸಿದ್ಧ ಕವಿಯಾಗಿದ್ದವರು. ಅವರು ಮರಾಠಿಯಲ್ಲಿ ಕವಿತೆಗಳನ್ನು ರಚಿಸಲಾರಂಭಿಸಿದ ಬಳಿಕ ಮರಾಠಿ ಜನರ ನಡುವೆ ಅವರು ಎಷ್ಟು ಪ್ರಸಿದ್ಧರು ಮತ್ತು ಜನಪ್ರಿಯರಾದರೆಂದರೆ, ಅವರ ಹೆಸರನ್ನು ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲಾಗಿತ್ತು.

ಆದರೆ ನಡುವೆ ಅವರು ತಮ್ಮ ಮಾತೃಭಾಷೆ ಕೊಂಕಣಿಯ ಕಡೆಗೆ ಒಲವು ತೋರಿದ್ದರಿಂದ ಮರಾಠಿಗರು, ಅದರಲ್ಲಿಯೂ ಮರಾಠಿ ಸಾಹಿತಿಗಳು ಅವರಿಗೆ ಬಹಿಷ್ಕಾರ ಹಾಕಿದರು. ಅವರ ಕುರಿತು ಅಪಪ್ರಚಾರ ನಡೆಸಿದರು. ಅವರಿಗೆ ದೊಡ್ಡ ದೊಡ್ಡ ಪದವಿಗಳನ್ನು ನೀಡುವುದಾಗಿ ಆಮಿಷ ಒಡ್ಡಿದರು. ಆದರೆ ಅವರು ಮಾತ್ರ ಪರಿವರ್ತಿತರಾಗದೆ ಮಾತೃಭಾಷೆಯಲ್ಲಿಯೇ ಕವಿತೆಗಳನ್ನು ಬರೆದು ಪ್ರಕಟಿಸಿದರು. ಅವರಿಗೆ ಕೊಂಕಣಿ ಸಾಹಿತ್ಯ ರಚನೆಗಾಗಿ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ದೊರೆತಿದೆ.

೨೦೧೦, ಜೂನ್ ೧೩ ರಂದು ವಿಶ್ವ ಕೊಂಕಣಿ ಕೇಂದ್ರದಲ್ಲಿ ಬಾಕಿಬಾಬ ಬೋರಕರ ಜನ್ಮಶತಾಬ್ಧಿ ಕಾರ್ಯಕ್ರಮವನ್ನು ಉತ್ತಮ ರೀತಿಯಿಂದ ನಡೆಸಲಾಯಿತು. ಕೊಂಕಣಿ ಭಾಷೆಯ ಖ್ಯಾತ ಕವಿ, ಗೋವಾ ಸ್ವಾತಂತ್ರ್ಯ ಚಳವಳಿಯ ನೇತಾರ ಶ್ರೀ ನಾಗೇಶ ಬಾಬ ಕರಮೆಲಿಯವರು ಬಾಕಿಬಾಬರ ವರ್ಣಚಿತ್ರಕ್ಕೆ ಹೂಹಾರ ಹಾಕಿ ಕಾರ್ಯಕ್ರಮದ ಉದ್ಘಾಟನೆ ನಡೆಸಿದರು. ಗೋವೆಯ ಪ್ರಾಚಾರ್ಯರಾದ ಶ್ರೀ ನಾರಾಯಣ ದೇಸಾಯಿಯವರ ಅಧ್ಯಕ್ಷತೆಯಲ್ಲಿ "ಬಾಕಿಬಾಬ ಸಾಹಿತ್ಯ ಗೋಷ್ಠಿ" ನಡೆಯಿತು. ಶ್ರೀ ರಾಜಯ ಪವಾರ್ ಮತ್ತು ಪ್ರಾ. ಭೂಷಣ ಭಾವೆ ಅವರಿಂದ ಉಪನ್ಯಾಸಗಳು ನಡೆದವು. ಶ್ರೀಮತಿ ಶಕುಂತಲಾ ಕಿಣಿಯವರು ಅನುವಾದಿಸಿದ ಬಾಕಿಬಾಬ ಬೋರಕರರ ಕವಿತಾ ಸಂಗ್ರಹ "ನೂಪುರ"ವನ್ನು ಬಿಡುಗಡೆ ಮಾಡಲಾಯಿತು. ಬಳಿಕ "ಬಾಕಿಬಾಬ ಕವಿತಾ ಸಂಗೀತ" ಕಾರ್ಯಕ್ರಮ ನಡೆಯಿತು. ಉಸ್ತಾದ ರಫೀಕ್ ಖಾನರು ಸಂಗೀತ ಸಂಯೋಜನೆ ಮಾಡಿದ ಸಂಗೀತ ಗೋಷ್ಠಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಂಕಣಿ ಬಾಲ ಸಾಹಿತ್ಯ ಮಾಲಿಕೆಯ ವಾಲ್ಮೀಕಿ, ವ್ಯಾಸ, ವಿಶ್ವಾಮಿತ್ರ, ಪರಶುರಾಮ, ಮಹಾತ್ಮಾ ಗಾಂಧೀಜಿ, ಶೆಣ್ಯೈ ಗೊಂಯಬಾಬ, ಶ್ರೀ ಅಮ್ಮೆಂಬಳ ಸುಬ್ಬರಾವ ಪೈ, ಶ್ರೀ ಪಂಜೆ ಮಂಗೇಶರಾಯ– ಈ ಮಹನೀಯರ ಬದುಕು ಮತ್ತು ಸಾಧನೆಯ ಕುರಿತಾದ ೮ ಪುಸ್ತಕಗಳನ್ನು ಶ್ರೀಮತಿ ಶಾಲಿನಿ ಪಂಡಿತ ಮತ್ತು ಶ್ರೀಮತಿ ಜ್ಯೂಡಿತ್ ಮಸ್ಕರೇಞಸ್(ದಿ. ಲೂವಿಸ್ ಮಸ್ಕರೇಞಸರ ಮಗಳು) ಬಿಡುಗಡೆ ಮಾಡಿದರು.

ವಿಶ್ವ ಕೊಂಕಣಿ ಪರಿಚಯ ಕೋಶ

ವೇದಕಾಲದಿಂದ ಭಾರತದ ಪಶ್ಚಿಮ ಕರಾವಳಿಯು ಸಪ್ತಕೊಂಕಣ, ಕೊಂಕಣ ಕರಾವಳಿ ಇತ್ಯಾದಿ ಹೆಸರಿನಿಂದ ಪ್ರಸಿದ್ಧವಾಗಿ ಚರಿತ್ರೆಯಲ್ಲಿ ದಾಖಲಾಗಿದೆ. ಉತ್ತರದಲ್ಲಿ ಮಹಾರಾಷ್ಟ್ರದ ಥಾನಾ, ರತ್ನಗಿರಿ, ಮಾಳವಾಣ(ಕೊಂಕಣ), ಆಮೇಲೆ ಗೋವೆ, ಕರ್ನಾಟಕ ರಾಜ್ಯದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳು, ಅದೇ ರೀತಿ ದಕ್ಷಿಣದಲ್ಲಿ ಮಲಬಾರ, ಕೊಚ್ಚಿಯವರೆಗಿನ ಪ್ರದೇಶ ಕೊಂಕಣ ಕರಾವಳಿ ಅಥವಾ ಸಪ್ತಕೊಂಕಣ ಹೆಸರಿನಿಂದ ಹರಡಿಕೊಂಡಿದೆ.

ಈ ಕೊಂಕಣ ಕರಾವಳಿಯಲ್ಲಿರುವ ಗೋವೆಯು "ಕೊಂಕಣಿ ಭಾಷೆಯ ತವರು" ಎಂದು ಹೆಸರು ಪಡೆದಿದೆ. ಹದಿನಾರನೆಯ ಶತಮಾನದಲ್ಲಿ ಗೋವೆಯಲ್ಲಿ ನಡೆದ ವಿದೇಶಿ ಆಕ್ರಮಣಕಾರರ ದುರಾಡಳಿತ ಮತ್ತು ಕೊಂಕಣಿ ಮಾತೃಭಾಷೆ, ಸಂಸ್ಕೃತಿ, ಸಂಸ್ಕಾರದ ಮೇಲೆ ನಡೆದ ದೌರ್ಜನ್ಯಗಳಿಂದ ಕೊಂಕಣಿ ಭಾಷಿಕರಾಗಿದ್ದ ಹಿಂದು, ಕ್ರೈಸ್ತ, ಮುಸ್ಲಿಮ್ ನವಾಯತರು ಗೋವೆಯಿಂದ ಉತ್ತರಕ್ಕೆ ಥಾನೆ ಮತ್ತು 'ಕೊಂಕಣ ಪ್ರದೇಶಕ್ಕೆ', ದಕ್ಷಿಣದಲ್ಲಿ ನಗರ ಸಂಸ್ಥಾನ, ಕಾರವಾರ, ಮಂಗಳೂರು, ಮಲಬಾರ ಮತ್ತು ಕೊಚ್ಚಿ ಪ್ರದೇಶಗಳಿಗೆ ದೇಶಾಂತರ ಹೋಗಿ ನೆಲೆಸುವಂತಾಗಿತ್ತು. ಈಗಿನ ಹಾಗೂ ಭವಿಷ್ಯದ ಪೀಳಿಗೆಗೆ ಈ ಪ್ರದೇಶಗಳ ಭೌಗೋಲಿಕ, ಚಾರಿತ್ರಿಕ, ಸಾಂಸ್ಕೃತಿಕ ವಿವರಗಳು, ಅದೇ ರೀತಿ ಇಲ್ಲಿಯ ಪಕ್ಷಿ, ಪ್ರಾಣಿ, ಹೂಗಳು, ಗಿಡ, ಮರಬಳ್ಳಿಗಳು, ವನಸ್ಪತಿಗಳು, ಮತ್ತು ಕೊಂಕಣಿಯ ಪ್ರಸಿದ್ಧ ವ್ಯಕ್ತಿಗಳು, ಸಂಘ, ಸಂಸ್ಥೆಗಳು, ವಿದ್ಯಾಸಂಸ್ಥೆಗಳು, ದೇವಾಲಯಗಳು, ಇಗರ್ಜಿ, ಮಸೀದಿಗಳು, ಜನಪ್ರಿಯ ಊರುಗಳು, ನಗರಗಳು –ಈ ಎಲ್ಲಾ ವಿಷಯಗಳ ವಿಸ್ತೃತ ಮಾಹಿತಿ ಮತ್ತು ಪರಿಚಯವನ್ನು ನೀಡುವ ಕೋಶವನ್ನು ತಯಾರಿಸುವ ಯೋಜನೆಯೊಂದನ್ನು ನಾನು ಕೈಗೆತ್ತಿಕೊಂಡೆ.

ಗೋವೆ ವಿಶ್ವವಿದ್ಯಾಲಯದ ಪ್ರಥಮ ಕೊಂಕಣಿ ವಿಶ್ವಕೋಶದ ಪ್ರಧಾನ ಸಂಪಾದಕರು, ಕೊಂಕಣಿ ವಿಭಾಗದ ಮುಖ್ಯಸ್ಥರು ಹಾಗೂ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರೂ ಆಗಿದ್ದ ಡಾ. ತಾನಾಜಿ ಹಳರಣಕರರನ್ನು ಭೇಟಿಯಾಗಿ ನನ್ನ ಈ ಯೋಜನೆಯ ವಿವರಗಳನ್ನು ಅವರಿಗೆ ನೀಡಿ, 'ವಿಶ್ವ ಕೊಂಕಣಿ ಪರಿಚಯ ಕೋಶ'ದ ರೂಪರೇಷೆಯನ್ನು ಸಿದ್ಧ ಪಡಿಸಿ ನೀಡುವಂತೆ ಅವರಲ್ಲಿ ವಿನಂತಿಸಿದೆ. ಆ ದಿಕ್ಕಿನಲ್ಲಿ ಚೆನ್ನಾಗಿ ಚಿಂತನೆ ನಡೆಸಿದ ಶ್ರೀ ಹಳರಣಕರರು ಮಾಹಿತಿಯನ್ನು ಪಡೆಯುವ ವಿಧಾನ ಮತ್ತು ಯೋಜನೆಯ ಸ್ವರೂಪದ ಕರಡನ್ನು ಸಿದ್ಧ ಪಡಿಸಿ ಅದರ ಒಂದು ಪ್ರತಿಯನ್ನು ನನಗೆ ಕಳುಹಿಸಿಕೊಟ್ಟರು. ನಾನು ಅದನ್ನು ಶ್ರೀ ಕೆ.ಕೆ. ಪೈಯವರಿಗೆ ತೋರಿಸಿ ಅವರಿಂದ ಒಪ್ಪಿಗೆ ಪಡೆದೆ.

೨೦೦೭, ಏಪ್ರಿಲ್ ತಿಂಗಳಲ್ಲಿ ನಡೆದ ವಿಶ್ವ ಕೊಂಕಣಿ ಕೇಂದ್ರದ ಆಡಳಿತ ಮಂಡಳಿಯ ಸಭೆಯಲ್ಲಿ "ವಿಶ್ವ ಕೊಂಕಣಿ ಪರಿಚಯ ಕೋಶ"ದ ಯೋಜನೆಯ ಪ್ರಸ್ತಾಪವನ್ನು ಮಂಡಿಸಿ ೪೦ ಲಕ್ಷ ರೂಪಾಯಿಗಳ ಅಂದಾಜು ಆಯವ್ಯಯ ಪತ್ರಕ್ಕೆ ಸಮ್ಮತಿಯನ್ನು ಪಡೆಯಲಾಯಿತು.

ಆಮೇಲೆ ನಾನು ಮತ್ತು ಡಾ. ಹಳರಣಕರರು ಮೈಸೂರಿಗೆ ಹೋಗಿ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರಾಗಿರುವ

ಡಾ. ಉದಯ ನಾರಾಯಣ ಸಿಂಗರನ್ನು ಭೇಟಿಯಾಗಿ, ವಿಶ್ವ ಕೊಂಕಣಿ ಪರಿಚಯ ಕೋಶದ ಯೋಜನಾ ಪತ್ರವನ್ನು ಅವರಿಗೆ ನೀಡಿದೆವು. ಅವರು ಅದನ್ನು ಸಂತೋಷದಿಂದ ಪಡೆದು ಸಮಿತಿಯ ಮುಂದೆ ಇಟ್ಟು ಆಮೇಲೆ ತಿಳಿಸುವುದಾಗಿ ಹೇಳಿದರು. ಕೆಲವು ತಿಂಗಳು ಕಳೆದ ಬಳಿಕ ಅವರ ಕಚೇರಿಯಿಂದ ನಮಗೆ ಪತ್ರ ಬಂತು. ಅದರಲ್ಲಿ ಪರಿಚಯ ಕೋಶವನ್ನು ಕಾರ್ಯಾಗತ ಮಾಡುವ ಉದ್ದೇಶಕ್ಕಾಗಿ ಕೋಶದ ಸಂಪಾದಕ ಮಂಡಳಿ ಮತ್ತು ಸಿಬ್ಬಂದಿಗಳ ಖರ್ಚುವೆಚ್ಚಗಳಿಗಾಗಿ ಭಾಷಾ ಸಂಸ್ಥಾನದ ವತಿಯಿಂದ ಹತ್ತು ಲಕ್ಷ ರೂ(ವಾರ್ಷಿಕ ರೂ ೩,೩೩,೩೩೩/– ರಂತೆ ೩ ವರ್ಷಗಳಿಗೆ) ನೀಡುವುದಾಗಿ ಅಧಿಕೃತ ಮಾಹಿತಿಯನ್ನು ಇತ್ತು.

ಇದರ ಬಳಿಕ ನಾವು ಮುಂಬೈ, ಗೋವೆ, ಕುಮಟ, ಮಂಗಳೂರು, ಕೊಝಿಕೊಡ್, ಕೊಚ್ಚಿ ಇತ್ಯಾದಿ ಪ್ರಮುಖ ನಗರಗಳಲ್ಲಿ ಕೊಂಕಣಿ ಲೇಖಕರು, ಭಾಷಾತಜ್ಞರು ಮತ್ತು ಕಾರ್ಯಕರ್ತರ ಸಭೆಗಳನ್ನು ನಡೆಸಿ, ಅಲ್ಲಿಯವರಿಗೆ ವಿಶ್ವ ಕೊಂಕಣಿ ಪರಿಚಯ ಕೋಶದ ಸ್ವರೂಪವನ್ನು ವಿವರಿಸಿ ಅವರು ಆಯಾ ಪ್ರದೇಶದ ಖ್ಯಾತ ಕೊಂಕಣಿ ವ್ಯಕ್ತಿಗಳು, ವಿದ್ಯಾ ಸಂಸ್ಥೆಗಳು, ಮರ, ಗಿಡಬಳ್ಳಿಗಳು, ಫಲಪುಷ್ಪಗಳು, ಪ್ರಾಣಿ, ಪಕ್ಷಿಗಳು, ಚಾರಿತ್ರಿಕ ಮತ್ತು ಧಾರ್ಮಿಕ ಕೇಂದ್ರಗಳು ಇತ್ಯಾದಿ ಕುರಿತು ಪರಿಚಯಾತ್ಮಕ ಲೇಖನಗಳನ್ನು ಬರೆದು ಕಳುಹಿಸಿ ಕೊಡಬೇಕೆಂದು ವಿನಂತಿ ಮಾಡಿದೆವು. ಇದರಿಂದ ಅನೇಕರು ನಮಗೆ ಬೇರೆ ಬೇರೆ ವಿಷಯಗಳ ಕುರಿತು ಲೇಖನಗಳನ್ನು ಕಳುಹಿಸಿಕೊಟ್ಟರು.

ವಿಶ್ವ ಕೊಂಕಣಿ ಪರಿಚಯ ಕೋಶದ ಕಾರ್ಯಯೋಜನೆ ಈಗಲೂ ಚಾಲ್ತಿಯಲ್ಲಿದ್ದು, ವಿಶ್ವ ಕೊಂಕಣಿ ಪರಿಚಯ ಕೋಶ ಭಾಗ – ೧(೨೦೧೧) ಮತ್ತು ಭಾಗ –೨(೨೦೧೩) ಈಗಾಗಲೇ ಬಿಡುಗಡೆಯಾಗಿವೆ. ಮೂರನೆಯ ಭಾಗ ಸದ್ಯದಲ್ಲಿಯೇ ಬೆಳಕು ಕಾಣಲಿದೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯ ನಿರ್ದೇಶಕರಾದ ಡಾ. ಉದಯ ನಾರಾಯಣ ಸಿಂಗ್ ನನ್ನ ಆತ್ಮೀಯ ಸ್ನೇಹಿತರಾಗಿದ್ದರು. ಅವರು ತಮ್ಮ ಮಾತೃಭಾಷೆ ಮೈಥಿಲಿ ಮತ್ತು ಕೊಂಕಣಿಯ ನಡುವೆ ಹತ್ತಿರದ ಸಂಬಂಧ ಇರುವುದನ್ನು ನನಗೆ ತಿಳಿಸಿದ್ದರು. 'ಭಾಷಾ ಸಂಸ್ಥಾನದ ಪಶ್ಚಿಮ ವಲಯ ಪ್ರಾದೇಶಿಕ ಕೇಂದ್ರವು ಪುಣೆಯಲ್ಲಿ ಇದೆ. ಆ ಕೇಂದ್ರವನ್ನು ಗೋವೆಯಲ್ಲಿ ಸ್ಥಾಪನೆ ಮಾಡುವ ಪ್ರಯತ್ನವನ್ನು ನೀವು ನಡೆಸಿದರೆ ಅದರಿಂದ ಕೊಂಕಣಿಗೆ ಸಂಬಂಧಿಸಿದ ಕಾರ್ಯಗಳಿಗೆ ತುಂಬಾ ಲಾಭವಾಗಬಹುದು' ಎಂದು ಅವರು ನನ್ನಲ್ಲಿ ತಿಳಿಸಿದ್ದರು. ಈ ಕುರಿತು ನಾನು ಗೋವೆಯ ಮಾಜಿ ಮಂತ್ರಿಗಳಾದ ಶ್ರೀ ಲಿಯೋಜಿನೊ ಫೆಲೆರೊ, ಶ್ರೀ ಉದಯ ಭೆಂಬ್ರೆ, ಕೊಂಕಣಿ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಪುಂಡಳೀಕ ನಾಯ್ಕ, ಡಾ.ತಾನಾಜಿ ಹಳರಣಕರ ಅವರಲ್ಲಿ ಮತ್ತು ೨೦೦೮ರಲ್ಲಿ ಕೊಚ್ಚಿ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧ್ಯಕ್ಷರು ಹಾಗೂ ರಾಜ್ಯಸಭಾ ಸದಸ್ಯರೂ ಆಗಿದ್ದ ಶ್ರೀ ಶಾಂತಾರಾಮ ನಾಯಕರ ಬಳಿ ಹೇಳಿದ್ದೆ. ಅಲ್ಲದೆ ಈ ಕುರಿತು ಸದರಿ ಅಧಿವೇಶನದಲ್ಲಿ ನಿರ್ಣಯ ಸ್ವೀಕೃತವಾಗುವಂತೆಯೂ ಮಾಡಿದ್ದೆ. ಶ್ರೀ ನಾಯಕರು ತಾನು ರಾಜ್ಯಸಭೆಯಲ್ಲಿ ಒಮ್ಮೆ ಈ ಪ್ರಶ್ನೆ ಮಂಡಿಸಿದ್ದೆ ಎಂದು ಹೇಳಿದ್ದರು. ಆದರೆ ಮುಂದೆ ಏನಾಯಿತು ಎಂದು ನಮಗೆ ಮಾಹಿತಿ ಇರಲಿಲ್ಲ. ಆದರೆ ಇತ್ತೀಚಿಗೆ ಅದು ಸಾಧ್ಯವಾಗದು ಎಂಬುದು ನಮಗೆ ತಿಳಿದು ಬಂತು. ಗೋವೆಯವರ ಮತ್ತು ಸರಕಾರದ ಉದಾಸೀನತೆಯಿಂದ ಹೀಗೆ ಆಯಿತೆಂದು ನನ್ನ ಭಾವನೆ.

೨೦೦೭, ಮೇ ೫, ೬ ಮತಮತ್ತು ೭ ಈ ಮೂರು ದಿನಗಳಲ್ಲಿ ಗೋವೆಯ ಕುಡಚಡೆಯಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅದೇ ಸಮಯದಲ್ಲಿ ಮುಂಬೈಯಿಂದ ಡಾ. ಚಂದ್ರಕಾಂತ ಎನ್. ಶೆಣೈ ಮತ್ತು ಅನಂತ ಅಮ್ಮೆಂಬಳ ಅಲ್ಲಿಗೆ ಬಂದಿದ್ದರು. ಅವರೊಂದಿಗೆ ಗೋವಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪುಂಡಳೀಕ ಎನ್. ನಾಯಕರು ಮತ್ತು ಸುನಪರಾಂತ ದಿನಪತ್ರಿಕೆಯ ಸಂಪಾದಕ ಶ್ರೀ ಸಂದೇಶ ಪ್ರಭುದೇಸಾಯ ಮತ್ತು ನಾನು "ಕೊಂಕಣಿ ವಾಹಿನಿ"(ಟೆಲಿವಿಶನ್)ಯೊಂದನ್ನು ಪ್ರಾರಂಭಿಸುವುದರ ಕುರಿತು ಚರ್ಚೆ ನಡೆಸಿದ್ದೆವು. ಮುಂಬೈ, ಗೋವಾ, ಕರ್ನಾಟಕ ಮತ್ತು ಕೇರಳ ರಾಜ್ಯಗಳಲ್ಲಿ ನಡೆಯುವ ಸಾಮಾಜಿಕ, ಸಾಂಸ್ಕೃತಿಕ, ಜಾನಪದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು, ಸುದ್ದಿ ಬಿತ್ತರಿಸುವುದು, ಈ ರೀತಿಯ ೨೪ ಗಂಟೆಗಳ ಪ್ರಸಾರದ ಕೊಂಕಣಿ ವಾಹಿನಿಯ ಕುರಿತು ಅದರ ಸಾಧ್ಯತೆ, ಸಾಧಕಬಾಧಕಗಳು ಇತ್ಯಾದಿ ಕುರಿತು ಮಾತನಾಡಿಕೊಂಡಿದ್ದೆವು. ನಾನು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ಮತ್ತು ಬೇರೆ ಬೇರೆ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಂಡಿದ್ದರಿಂದ ಕೊಂಕಣಿ ವಾಹಿನಿಯ ಕುರಿತು ಗಮನ ಹರಿಸುವುದು ನನಗೆ ಸಾಧ್ಯವಾಗಲಿಲ್ಲ.

ಕನ್ನಡ ಕೊಂಕಣಿ ರತ್ನಕೋಶ

ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವದ ಸಂದರ್ಭದಲ್ಲಿ ರಾಜ್ಯ ಸರಕಾರದ ಅನುದಾನದಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಹಾ.ಮಾ. ನಾಯಕರ ಪ್ರಧಾನ ಸಂಪಾದಕತ್ವದಲ್ಲಿ ಕನ್ನಡ ರತ್ನಕೋಶವನ್ನು ೧೯೭೭ರಲ್ಲಿ ಬಿಡುಗಡೆ ಮಾಡಿತ್ತು. ಈ ಪುಟ್ಟ ನಿಘಂಟು ಸಾಮಾನ್ಯ ಕನ್ನಡಿಗರಿಗೆ ಅದರಲ್ಲಿಯೂ ವಿಶೇಷವಾಗಿ ವಿದ್ಯಾರ್ಥಿಗಳಿಗೆ ತಲುಪಬೇಕೆಂಬ ಉದ್ದೇಶದಿಂದ ಪ್ರಾರಂಭದಲ್ಲಿ ಅದಕ್ಕೆ ಬರೇ ೨ ರೂ ಬೆಲೆಯನ್ನು ನಿಗದಿಪಡಿಸಲಾಗಿತ್ತು. ಆಮೇಲೆ ಹಲವು ಮುದ್ರಣಗಳನ್ನು ಕಂಡಿರುವ ಈ ನಿಘಂಟು ಈಗ ೫ ರೂಗೆ ಲಭ್ಯವಾಗುತ್ತಿದೆ. ಇದರಿಂದ ಹಲವು ಜನರು ಈ ನಿಘಂಟುವನ್ನು ಖರೀದಿಸುವುದು ಸಾಧ್ಯವಾಗಿದೆ. ನಾನು ಕೂಡ ಕನ್ನಡ ರತ್ನಕೋಶದ ೨೫-೩೦ ಪ್ರತಿಗಳನ್ನು ಖರೀದಿಸಿ ನನ್ನ ಸಾಹಿತ್ಯಪ್ರೇಮಿ ಸ್ನೇಹಿತರಿಗೆ, ಎಳೆಯರ ನಾಮಕರಣ, ಉಪನಯನ, ಯುವಜನರ ಮದುವೆ ಇತ್ಯಾದಿ ಸಂದರ್ಭಗಳಲ್ಲಿ ಅದನ್ನು ಉಡುಗೊರೆಯಾಗಿ ನೀಡಿದ್ದೆ.

ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ದಿನಗಳಲ್ಲಿಯೇ ಕನ್ನಡ ರತ್ನಕೋಶದಲ್ಲಿರುವ ಕನ್ನಡ ಪದಗಳಿಗೆ ಕೊಂಕಣಿ ಅರ್ಥ ನೀಡಿ ಕನ್ನಡ-ಕೊಂಕಣಿ ರತ್ನಕೋಶವನ್ನು ಸಿದ್ಧಪಡಿಸಬೇಕೆಂಬ ಉದ್ದೇಶವನ್ನು ಹೊಂದಿದ್ದೆ. ಆದರೆ ನನ್ನ ಅಧ್ಯಕ್ಷಪದದ ಅವಧಿಯಲ್ಲಿ ಸರಕಾರದಿಂದ ದೊರೆಯುತ್ತಿದ್ದ ಅನುದಾನ ಕಡಿಮೆ ಇದ್ದುದರಿಂದ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಾಗಿರಲಿಲ್ಲ. ನನ್ನ ಇತರ ಕಾರ್ಯಗಳ ಕಾರಣಗಳಿಂದಾಗಿ ಮುಖ್ಯವಾಗಿ ವಿಶ್ವ ಕೊಂಕಣಿ ಕೇಂದ್ರದ ಕಟ್ಟಡವನ್ನು ಎತ್ತಿ ನಿಲ್ಲಿಸುವುದಕ್ಕೆ ದೇಶ ವಿದೇಶಗಳಿಗೆ ಸಂಚರಿಸಿ ಎರಡು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಾನು ವ್ಯಸ್ತನಾಗಿದ್ದುದರಿಂದ ನನಗೆ ಕನ್ನಡ-ಕೊಂಕಣಿ ರತ್ನಕೋಶದ ಯೋಜನೆಯನ್ನು ಕೈಗೆ ಎತ್ತಿಕೊಳ್ಳುವುದಕ್ಕೆ ಹಲವು ವರ್ಷಗಳು ಹಿಡಿದವು. ಆದರೂ ಈ ಯೋಜನೆ ನನ್ನ ಮನಸ್ಸಿನಲ್ಲಿ ಚುಚ್ಚುತ್ತಲೇ ಇತ್ತು.

ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ಪ್ರಾರಂಭವಾದ ಬಳಿಕ ಕನ್ನಡ-ಕೊಂಕಣಿ ರತ್ನಕೋಶ ಯೋಜನೆ ಪ್ರಕಟಿಸುವ ನನ್ನ ನಿರ್ಧಾರಕ್ಕೆ ಮೂರ್ತರೂಪ ಒದಗುವ ಅವಕಾಶ ಕೂಡಿ ಬಂತು. ಕನ್ನಡ, ಕೊಂಕಣಿ, ಹಿಂದಿ, ಸಂಸ್ಕೃತ, ಪ್ರಾಕೃತ ಭಾಷಾ ಪಂಡಿತರು, ಹಾಗೂ ಈ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ನಡೆಸಿರುವ ವಿದ್ವಾಂಸರೂ ಆಗಿರುವ ಶ್ರೀ ಎಂ. ಮಾಧವ ಪೈಯವರನ್ನು ನಾನು ಶಿವಮೊಗ್ಗಾದಲ್ಲಿ ಭೇಟಿಯಾದ ಸಂದರ್ಭದಲ್ಲಿ ಈ ಯೋಜನೆಯ ಕುರಿತು ಅವರಲ್ಲಿ ತಿಳಿಸಿದೆ. "ಇದರಲ್ಲಿ ಕನ್ನಡ ರತ್ನಕೋಶ ಮತ್ತು ಇತರ ಕನ್ನಡ ಶಬ್ದಕೋಶಗಳ ಆಧಾರದಿಂದ ಕನ್ನಡ-ಕನ್ನಡ ಶಬ್ದಾರ್ಥ ಮತ್ತು ಅದಕ್ಕೆ ಕೊಂಕಣಿ ಭಾಷೆಯಲ್ಲಿರುವ ವಿವಿಧ ಅರ್ಥಗಳನ್ನು ಪೂರ್ಣ ರೂಪದಲ್ಲಿ ನೀಡುವುದು, ಮತ್ತು ಕನ್ನಡ ಲಿಪಿ ಹಾಗೂ ನಾಗರಿ ಲಿಪಿಗಳನ್ನು(ಕೊಂಕಣಿಯ ಅಧಿಕೃತ ಲಿಪಿ) ಬಳಸುವುದು, ಇದರಿಂದ ಕೊಚ್ಚಿ, ಗೋವ, ಮಹಾರಾಷ್ಟ್ರದಲ್ಲಿರುವ ಕೊಂಕಣಿ ಭಾಷಿಕರು ಮತ್ತು ಕನ್ನಡ ಭಾಷಿಕರು ಕೂಡ ಪರಸ್ಪರ ಕೊಂಕಣಿ ಮತ್ತು ಕನ್ನಡ ಪದಗಳ ಅರ್ಥವನ್ನು ತಿಳಿದುಕೊಳ್ಳುವುದು, ಅವುಗಳನ್ನು ಪರಿಚಯಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಇದರಿಂದ ಉಭಯ ಭಾಷಾ ಬಾಂಧವ್ಯ ಬೆಳೆಯುವುದಕ್ಕೂ ದಾರಿ ಸುಗಮಗೊಳ್ಳುವುದು" ಇದಿಷ್ಟು ನನ್ನ ಮನಸ್ಸಿನಲ್ಲಿದ್ದ ವಿಚಾರ. ಅದನ್ನು ನಾನು ಅವರ ಮುಂದೆ ತಿಳಿಸಿದೆ. ಶ್ರೀ ಮಾಧವ ಪೈಯವರು ದೊಡ್ಡ ಮನಸ್ಸು ಮಾಡಿ ಕನ್ನಡ-ಕೊಂಕಣಿ ರತ್ನಕೋಶ ಪರಿಪೂರ್ಣ ರೀತಿಯಿಂದ ಬೆಳಕಿಗೆ ಬರಲು ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು.

ಶ್ರೀ ಮಾಧವ ಪೈಯವರು ಇರುವುದು ಶಿವಮೊಗ್ಗದಲ್ಲಿ. ಅವರು ಸಹ್ಯಾದ್ರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಅವರು ವೀರಶೈವ ಮಠಗಳ ಸ್ವಾಮೀಜಿಯವರು ವಹಿಸಿಕೊಟ್ಟಿದ್ದ ಹಳೆಗನ್ನಡದಲ್ಲಿರುವ ವೀರಶೈವ ಗ್ರಂಥಗಳನ್ನು ಆಧುನಿಕ ಕನ್ನಡಕ್ಕೆ ರೂಪಾಂತರಿಸುವ ಕಾರ್ಯದಲ್ಲಿ ಬಿಡುವಿಲ್ಲದಷ್ಟು ತೊಡಗಿಕೊಂಡಿರುವವರು. ಆದರೂ, ಮಾತೃಭಾಷೆಯ ಮೇಲಿನ ಪ್ರೀತಿಯಿಂದ ಅವರು ನನ್ನ ಈ ಯೋಜನೆಗೆ ಭುಜ ನೀಡಿದ್ದು ಇಲ್ಲಿ ವಿಶೇಷವಾಗಿ ಉಲ್ಲೇಖವಾಗಬೇಕಾಗಿದೆ.

ಕನ್ನಡ-ಕೊಂಕಣಿ ರತ್ನಕೋಶದ ಕಾರ್ಯ ಮುಗಿಯಲು ಆರು ವರ್ಷಗಳು ಹಿಡಿದಿವೆ. ಶ್ರೀ ಮಾಧವ ಪೈಯವರು ಕನ್ನಡ ಶಬ್ದಗಳಿಗೆ ಕೊಂಕಣಿ ಅರ್ಥವನ್ನು ಕನ್ನಡ ಲಿಪಿಯಲ್ಲಿ ನೀಡಿದ್ದರಾದರೂ, ಮುದ್ರಣಾಲಯದಲ್ಲಿ ಡಿಟಿಪಿ ಮಾಡುವವರು ಅನ್ಯಭಾಷಿಕರಾಗಿದ್ದರಿಂದ ಅವರು ಮಾಡುತ್ತಿದ್ದ ತಪ್ಪುಗಳನ್ನು ಶ್ರೀ ಪೈಯವರು ಪದೇ ಪದೇ ತಿದ್ದಬೇಕಾಗಿ ಬರುತ್ತಿತ್ತು. ಇನ್ನು ದೇವನಾಗರಿ ಲಿಪಿಯಲ್ಲಿರುವ ಶಬ್ದಾರ್ಥಗಳ ಕತೆಯೂ ಇದೇ

ರೀತಿಯದ್ದಾಗಿತ್ತು. ಹೀಗೆ ಪದೇ ಪದೇ ತಿದ್ದುಪಡಿ ಮಾಡುವ ಆವಶ್ಯಕತೆ ಬಿದ್ದುದರಿಂದ ಶ್ರೀ ಪೈಯವರು ಮಂಗಳೂರಿಗೆ ಬಂದು ತಮ್ಮ ಹಿರಿಮಗನ ಮನೆಯಲ್ಲಿ ಕೆಲವು ದಿನ ಇರಬೇಕಾಗಿ ಬಂದಿತ್ತು.

ಆಮೇಲೆ ಅವರು ಒಮ್ಮೆ ಶಿವಮೊಗ್ಗೆಯ ಅವರ ಮನೆಯಲ್ಲಿ ಕಾಲು ಜಾರಿ ಬಿದ್ದು, ಕೈಗೆ ಏಟಾಗಿ ಕೆಲವು ತಿಂಗಳ ಕಾಲ ರತ್ನಕೋಶದ ಕೆಲಸ ಸ್ಥಗಿತಗೊಂಡಿತ್ತು. ಆದರೂ ಶ್ರೀ ಪೈಯವರು ಈ ಎಲ್ಲಾ ಅಡ್ಡಿ ಆತಂಕಗಳಿಂದ ಬೇಸರ ಪಟ್ಟುಕೊಳ್ಳದೆ ದೀಕ್ಷೆ ಹಿಡಿದ ರೀತಿಯಿಂದ ಈ ಕಾರ್ಯವನ್ನು ನಡೆಸಿದ್ದರಿಂದ ಇಂದು ಕನ್ನಡ-ಕೊಂಕಣಿ ರತ್ನಕೋಶ ಬೆಳಕಿಗೆ ಬರುವುದು ಸಾಧ್ಯವಾಗಿದೆ.

ರತ್ನಕೋಶ ಮುದ್ರಣದ ಒಟ್ಟು ಖರ್ಚುವೆಚ್ಚ ಸುಮಾರು ಎಂಟು ಲಕ್ಷದಷ್ಟು ಆಗಬಹುದೆಂಬ ಅಂದಾಜು ನಮಗೆ ಸಿಕ್ಕಿತು. ಇದಕ್ಕೆ ಬೆಂಗಳೂರಿನ ಶ್ರೀ ಯು. ರಾಮದಾಸ ಕಾಮತರು ಆರ್ಥಿಕ ಸಹಾಯ ನೀಡಿದ್ದರಿಂದ, ಮತ್ತು ಮುದ್ರಣಾಲಯದ ಶ್ರೀ ಸುಶೀಲ ಪೈಯವರು ತುಂಬಾ ಕಾಳಜಿಯಿಂದ ಈ ಗ್ರಂಥವನ್ನು ಮುದ್ರಿಸಿದ್ದರಿಂದ ರತ್ನಕೋಶ ತುಂಬಾ ಸುಂದರವಾಗಿ ಮತ್ತು ಅರ್ಥಪೂರ್ಣವಾಗಿ ಬಂತು. ಆಮೇಲೆ ಈ ಯೋಜನೆಗೆ ಕರ್ನಾಟಕ ಸರಕಾರದಿಂದ ಅನುದಾನವೂ ದೊರೆಯಿತು.

ಜೂನ್ ೧೨, ೨೦೧೧ರಲ್ಲಿ ಈ ಗ್ರಂಥದ ಬಿಡುಗಡೆ ಕಾರ್ಯಕ್ರಮವನ್ನು ವಿಶ್ವ ಕೊಂಕಣಿ ಕೇಂದ್ರದಲ್ಲಿ ನಡೆಸಲಾಯಿತು. ಕನ್ನಡದ ಪ್ರಸಿದ್ಧ ಸಾಹಿತಿ ಶ್ರೀಮತಿ ಪದ್ಮಾ ಶೆಣೈಯವರು ಕನ್ನಡ-ಕೊಂಕಣಿ ರತ್ನಕೋಶವನ್ನು ಲೋಕಾರ್ಪಣೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರಿನ ಗಣಪತಿ ಪದವಿಪೂರ್ವ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ಚಂದ್ರಕಲಾ ನಂದಾವರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪ್ರದೀಪ ಕುಮಾರ್ ಕಲ್ಕೂರರು ಉಪಸ್ಥಿತರಿದ್ದರು.

●●

೩೩. ವಿಶ್ವ ಕೊಂಕಣಿ ಅಭಿಯಾನ

ದೆಹಲಿಯಿಂದ ಕೊಚ್ಚಿಯವರೆಗಿನ ವಿವಿಧ ಊರುಗಳಲ್ಲಿ, ನಗರಗಳಲ್ಲಿ ಕೊಂಕಣಿ ಭಾಷಿಕರು ನೆಲೆಸಿದ್ದಾರೆ. ಅವರಿಗೆ ಕೊಂಕಣಿ ಭಾಷೆ, ಸಂಸ್ಕೃತಿ, ಕಲೆ ಮತ್ತು ಲೋಕವೇದದ (ಜಾನಪದ ಸಾಹಿತ್ಯ, ಕಲೆಗಳು) ಕುರಿತು ಮಾಹಿತಿ ನೀಡಿ ಅದರಲ್ಲಿ ಅವರಿಗೆ ಪ್ರೀತಿ ಮತ್ತು ಅಭಿರುಚಿ ಬೆಳೆಸುವ ಉದ್ದೇಶದಿಂದ ಕೊಂಕಣಿ ನಾಟಕ ಮತ್ತು ಯಕ್ಷಗಾನ ಕಲಾವಿದರ ಪಂಗಡಗಳನ್ನು ಕರೆದುಕೊಂಡು ಊರಿಂದೂರಿಗೆ ಹೋಗಿ ಪ್ರದರ್ಶನ ನೀಡುವುದು ಮತ್ತು ಅದರ ಜೊತೆಯಲ್ಲಿಯೇ ಸಾಹಿತ್ಯ ಗೋಷ್ಠಿ, ಅನ್ಯ ಭಾಷಾ ಸಾಹಿತಿಗಳೊಂದಿಗೆ ಸೇರಿ "ಕವಿ ಸಂಧಿ" ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುವುದೆಂದು ನಿರ್ಧರಿಸಿ ಅದಕ್ಕೆ "ವಿಶ್ವ ಕೊಂಕಣಿ ಅಭಿಯಾನ" ಎಂಬ ಹೆಸರನ್ನು ನೀಡಿದ್ದೆವು.

ನವದೆಹಲಿಯಲ್ಲಿ

ಅಕ್ಟೋಬರ್ ೧೨, ೨೦೦೮ರಂದು ಬೆಳಗ್ಗೆ ಹತ್ತು ಗಂಟೆಗೆ ನವದೆಹಲಿಯ ಕನ್ನಡ ಸಂಘದ ಸಭಾಗೃಹದಲ್ಲಿ ಕೊಂಕಣಿ ನೇತಾರರಾದ ಶ್ರೀಮತಿ ಮಾರ್ಗರೇಟ್ ಆಳ್ವಾರು ದೀಪ ಹಚ್ಚಿ ವಿಶ್ವ ಕೊಂಕಣಿ ಅಭಿಯಾನದ ಉದ್ಘಾಟನೆಯನ್ನು ನಡೆಸಿದರು ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಡಾ. ಸುನೀತಾ ಬಾಯಿಯವರು ಹಿಂದಿಗೆ ಅನುವಾದಿಸಿದ "ಮಹಾಕವಿ ಗೋವಿಂದ ಪೈ" ಗ್ರಂಥವನ್ನು ಲೋಕಾರ್ಪಣೆ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಖ್ಯಾತ ಕನ್ನಡ ಭಾಷಾತಜ್ಞ ಹಾಗೂ ಸಂಶೋಧಕರಾದ ಡಾ. ವಿ.ಆರ್. ಪಂಚಮುಖಿಯವರು ವಹಿಸಿಕೊಂಡಿದ್ದರು. ಅವರು ಸಂಸ್ಕೃತ ಮತ್ತು ಕೊಂಕಣಿ ಭಾಷಾ ಅನುಸಂಧಾನದ ಕುರಿತು ಉತ್ತಮ ಭಾಷಣ ನೀಡಿದ್ದರು. ಅನಂತರ ಬಹುಭಾಷಾ ಗೋಷ್ಠಿ ನಡೆದಿತ್ತು.

ದೆಹಲಿ ಕರ್ನಾಟಕ ಸಂಘದ ಭವ್ಯ ಸಭಾಗೃಹದಲ್ಲಿ ಹಿಂದಿ, ಪಾರಸಿ, ಉರ್ದು, ಪಂಜಾಬಿ, ಕನ್ನಡ ಮತ್ತು ಕೊಂಕಣಿ ಸಾಹಿತ್ಯ ಗೋಷ್ಠಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದೆವು. ಕೊಂಕಣಿ ಭಾಷೆಯ ಕುರಿತು ಮಾತನಾಡಲು ಗೋವೆಯಿಂದ ಡಾ. ತಾನಾಜಿ ಹಳರಣಕರರನ್ನು ಕರೆಯಿಸಿಕೊಂಡಿದ್ದೆವು.

ದೆಹಲಿಯ ಕರ್ನಾಟಕ ಸಂಘದ ಸಭಾಗೃಹವು ನಮಗೆ ಸಹಯೋಗದ ಕಾರಣವಾಗಿ ಮುಕ್ತವಾಗಿ ಲಭಿಸಿತ್ತು. ಗೋಷ್ಠಿಯ ಬಳಿಕ ಕಾಸರಗೋಡು ಚಿನ್ನಾರ ನಾಟಕ ಮಂಡಲಿಯ "ಗಾಂಟಿ" ಕೊಂಕಣಿ ನಾಟಕದ ಪ್ರದರ್ಶನವಿತ್ತು.

ಮರುದಿನ ಅಕ್ಟೋಬರ್ ೧೩ ರಂದು ರಾತ್ರಿ ನಾವು ರೈಲಿನಲ್ಲಿ ಹೊರಟು, ಮರುದಿನ ೧೪ರಂದು ಮಧ್ಯಾಹ್ನ ಬರೋಡಾ ತಲುಪಿದೆವು. ಅಲ್ಲಿ ನಮ್ಮನ್ನು ಡಾ. ಬಾಬಾ ಪೈ ಮತ್ತು ಅವರ ಸ್ನೇಹಿತರು ಸ್ವಾಗತಿಸಿದರು. ನಾವು ಜಿಎಸ್‌ಬಿ ಸಮಾಜ ಮಂದಿರಕ್ಕೆ ಹೋಗಿ ಅಲ್ಲಿ ಸ್ನಾನ, ಊಟ ಮುಗಿಸಿ ಸ್ವಲ್ಪ ವಿಶ್ರಾಂತಿ ಪಡೆದೆವು. ರಾತ್ರಿ ಬರೋಡಾದ ಇಂಜಿನಿಯರಿಂಗ ಕಾಲೇಜಿನ ಸಭಾಗೃಹದಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಆಮೇಲೆ "ಗಾಂಟಿ" ನಾಟಕದ ಪ್ರದರ್ಶನವಾಯಿತು.

ಮರುದಿನ ನಾನು ಶ್ರೀ ವೆಂಕಟೇಶ ಬಾಳಿಗರೊಂದಿಗೆ ಮ್ಯೂಸಿಯಂ ಇತ್ಯಾದಿ ನೋಡಿದೆ. ದಿ. ಬಾಬಾ ಬಾಳಿಗರ ಮಗ ದಿ. ವಾಸು ಬಾಳಿಗರ ಮಗಳು ರಮಣಿ ಭಟ್ಟರ ಮನೆಗೆ ಹೋಗಿ ಅವರ ಆಶೀರ್ವಾದ ಪಡೆದು ಬಂದೆ. ಅಲ್ಲಿಂದ ರೈಲಿನಲ್ಲಿ ಪ್ರಯಾಣಿಸಿ ನಾವು ೧೬ರಂದು ಸಂಜೆ ಮಂಗಳೂರು ತಲುಪಿದೆವು.

ಮಹಾರಾಷ್ಟ್ರದಲ್ಲಿ

೨೦೦೮ ರಲ್ಲಿ ದೆಹಲಿಯಿಂದ ಪ್ರಾರಂಭಗೊಂಡ ವಿಶ್ವ ಕೊಂಕಣಿ ಅಭಿಯಾನವು ೨೦೦೯ರ ಮೇ ತಿಂಗಳಲ್ಲಿ ಮತ್ತೆ ಮುಂಬೈಯಿಂದ ಪ್ರಾರಂಭವಾಗಿತ್ತು. ೨೦೦೯ ಜನವರಿ ತಿಂಗಳಲ್ಲಿ ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟನಾ ಸಮಾರಂಭದ ಸಿದ್ಧತೆ

ಇತ್ಯಾದಿ ಕಾರಣಗಳಿಂದ ಅಭಿಯಾನವನ್ನು ಮುಂದೆ ಹಾಕಲಾಗಿತ್ತು.

೨೦೦೮, ಮೇ ೧ ರಂದು ಶುಕ್ರವಾರ ಮಧ್ಯಾಹ್ನ ೨ ಗಂಟೆಗೆ ಮುಂಬೈಯ ಮಾತುಂಗ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಕೇಂದ್ರ ಸಾಹಿತ್ಯ ಅಕಾದೆಮಿಯ ಸಹಯೋಗದೊಂದಿಗೆ "ಬಹುಭಾಷಾ ಸಾಹಿತ್ಯ ಗೋಷ್ಠಿ" ಯುನ್ನು ಆಯೋಜಿಸಲಾಗಿತ್ತು. ಕೊಂಕಣಿ, ಮರಾಠಿ, ಗುಜರಾತಿ, ಸಿಂಧಿ ಸಾಹಿತ್ಯ ಗೋಷ್ಠಿ ಮತ್ತು ಕವಿಗೋಷ್ಠಿಗಳು ಉತ್ತಮ ರೀತಿಯಿಂದ ನಡೆದಿದ್ದವು. ಬಳಿಕ ಶಿವಮೊಗ್ಗಾದ ಕೊಂಕಣಿ ಮಹಿಳೆಯರಿಂದ "ಅಭಿಮನ್ಯು ಕಾಳಗ ಪ್ರಸಂಗ" ಯಕ್ಷಗಾನ ಪ್ರದರ್ಶನ ನಡೆಯಿತು. ಕುಮಟಾ ಮೋಹನ ಧಾರೇಶ್ವರರ ಸಿಂಹ ನೃತ್ಯ ಮತ್ತು ಕಾರವಾರದ ವಸಂತ ಬಾಂದೇಕರರ ಮಿಮಿಕ್ರಿ ಕಾರ್ಯಕ್ರಮವೂ ನಡೆದಿತ್ತು.

ಮುಂಬೈಯ ಪಾಪ್ಯುಲರ್ ಬುಕ್ ಡಿಪೊ ಮಾಲಕರಾದ ಶ್ರೀ ರಾಮದಾಸ ಭಟ್ಕಳರು ದೀಪ ಹಚ್ಚಿ ಕಾರ್ಯಕ್ರಮದ ಉದ್ಘಾಟನೆಯನ್ನು ನಡೆಸಿದ್ದರು. ಕೊಂಕಣಿಯ ಹಿರಿಯ ಸಾಹಿತಿ ಶ್ರೀ ನಾಗೇಶ ಸೊಂದೆಯವರು "ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ: ಜೀವಿತ್ ಆನಿ ಕಾರ್ಯ್" ಕೊಂಕಣಿ ಗ್ರಂಥವನ್ನು ಲೋಕಾರ್ಪಣೆ ಮಾಡಿದ್ದರು. ಫಾ.ಡಾ. ಚಾರ್ಲ್ಸ್ ವಾಜ್, ಕವಿ ಜೆ.ಬಿ. ಸಿಕ್ವೇರ ಮತ್ತು ಡಾ. ಚಂದ್ರಶೇಖರ್ ಎನ್ ಶೆಣೈ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಭಿಯಾನ ಕಾರ್ಯಕ್ರಮಕ್ಕೆ ಬಂದವರನ್ನು ಪಾನಕ ನೀಡಿ ಸ್ವಾಗತಿಸಲಾಗಿತ್ತು.

ಮೇ ೨, ಶನಿವಾರ ಸಂಜೆ ದಹಿಸರ ಶ್ರೀ ಕಾಶೀಮಠದ ಶ್ರೀ ವಿಠಳ ರುಕಮಾಬಾಯಿ ದೇವಾಲಯದ ಶ್ರೀಮದ್ ಮಾಧವೇಂದ್ರ ಸಭಾಭವನದಲ್ಲಿ "ವಿಶ್ವ ಕೊಂಕಣಿ ಅಭಿಯಾನ" ಕಾರ್ಯಕ್ರಮ ನಡೆಯಿತು. ದಹಿಸರ ಕಾಶೀಮಠದ ಹತ್ತಿರವೇ ದಕ್ಷಿಣ ಕನ್ನಡ ಮತ್ತು ಕೊಚ್ಚಿ ಇತ್ಯಾದಿ ಊರುಗಳ ಅನೇಕ ಕೊಂಕಣಿ ಜನರು ನೆಲೆಸಿದ್ದಾರೆ. ಅವರಿಗೆ ನಮ್ಮ ಕಾರ್ಯಕ್ರಮ ತುಂಬಾ ಇಷ್ಟವಾಯಿತು.

ಮೇ ೩, ಭಾನುವಾರ ನವೀ ಮುಂಬೈಯಲ್ಲಿ ವಾಶಿ ಶ್ರೀ ಬಾಲಾಜಿ ಮಂದಿರದ ಆಡಳಿತ ಮಂಡಳಿಯ ಸಹಯೋಗದೊಂದಿಗೆ ಅಲ್ಲಿಯೇ ಹತ್ತಿರದ "ಸಾಯಿ ಮಂದಿರ ಸಭಾಗೃಹ"ದಲ್ಲಿ ಯಕ್ಷಗಾನ ಇತ್ಯಾದಿ ನಡೆದಿತ್ತು. ಜನರು ಬಹುಸಂಖ್ಯೆಯಲ್ಲಿ ನೆರೆದಿದ್ದರು. ಕಾರ್ಯಕ್ರಮ ಚೆನ್ನಾಗಿ ನಡೆದಿತ್ತು. ಅಲ್ಲಿಯ ಸಮಾಜದವರು ಉತ್ತಮ ಸಹಕಾರ ನೀಡಿದ್ದರು.

ನಾನು ಮೇ ೫ ರಂದು ಶ್ರೀ ಜೆ.ಬಿ. ಸಿಕ್ವೇರ ಮತ್ತು ಡಾ. ಸಿ.ಎನ್. ಶೆಣೈ ಅವರೊಂದಿಗೆ ಪುಣೆಗೆ ಹೋದೆ. ಅಲ್ಲಿ ಕಾರ್ಪೊರೇಶನ್ ಬ್ಯಾಂಕಿನ ಎ.ಜಿ.ಎಮ್. ಶ್ರೀ ಜಾನ್ ಡಿಸೋಜಾರ ಕಚೇರಿಯಲ್ಲಿ ವಿವಿಧ ಕೊಂಕಣಿ ಸಮಾಜಗಳ ಜನರು ಸೇರಿದ್ದರು. ಅವರಿಗೆ ವಿಶ್ವ ಕೊಂಕಣಿ ಕೇಂದ್ರದ ಕಾರ್ಯಗಳು, ವಿಶ್ವ ಕೊಂಕಣಿ ಅಭಿಯಾನದ ಉದ್ದೇಶ, ಅದರಲ್ಲಿ ನಡೆಸುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳು ಇತ್ಯಾದಿ ಮಾಹಿತಿ ನೀಡಿದೆವು. ಆದರೆ ಅಲ್ಲಿ ನಮಗೆ ಉತ್ತಮ ಪ್ರತಿಕ್ರಿಯೆ ದೊರೆಯಲಿಲ್ಲ. ಶ್ರೀ ಜಾನ್ ಡಿಸೋಜಾ ಅವರು ಅನೇಕ ವಿಧದ ಸಹಾಯ ಮತ್ತು ಸೌಲಭ್ಯ ನೀಡುವುದಾಗಿ ತಿಳಿಸಿದ್ದರೂ, ಅಲ್ಲಿ ಕಾರ್ಯಕ್ರಮ ನಡೆಸಲು ಯಾವುದೇ ಸೂಚನೆ ನಮಗೆ ಸಿಗಲಿಲ್ಲ.

ನಮ್ಮ ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಮುಂಬೈಯಲ್ಲಿ ನಡೆದ ಅಭಿಯಾನದ ಕಾರ್ಯಕ್ರಮಗಳಲ್ಲಿ ಮುಂಬೈಯ ವಡಾಲಾ ಶ್ರೀರಾಮ ಮಂದಿರದ ಆಡಳಿತ ಮಂಡಳಿ, ಮುಂಬೈ ಕೊಂಕಣಿ ಭಾಷಾ ಮಂಡಳ, ಚಿತ್ರಾಪುರ ಸಾರಸ್ವತ ಸಮಾಜ, ವಾಶಿ ಶ್ರೀ ಬಾಲಾಜಿ ಮಂದಿರದ ಆಡಳಿತ ಮಂಡಳಿ ಮತ್ತು ದಹಿಸರ ಕಾಶೀಮಠದ ಸಮಿತಿ ಹಾಗೂ ಶ್ರೀ ವಿ.ಆರ್. ಕಾಮತ್, ಶ್ರೀ ಎನ್.ಎನ್. ಪಾಲ್, ಡಾ. ಸಿ.ಎನ್. ಶೆಣೈ, ಜಾನ್ ಡಿಸಿಲ್ವಾ, ಜೆ.ಬಿ. ಮೊರಾಯಸ್, ವಿಶ್ವೇಶ್ವರಯ್ಯ ಭವನದ ಆಡಳಿತ ಮಂಡಳಿ, ಮತ್ತು ಖಜಾನದಾರ ಶ್ರೀ ಬಿ.ಜಿ. ನಾಯಕ್, ಶ್ರೀ ಉ. ನರಸಿಂಹ ಕಿಣಿ, ಕಮಲಾಕ್ಷ ಸರಾಫ್, ವಾಶಿ ಶ್ರೀ ಪ್ರಮೋದ ಕಾಮತ, ಬಿ.ಆರ್. ಭಂಡಾರಿ ಇವರೆಲ್ಲರೂ ತುಂಬಾ ಸಹಕಾರ ನೀಡಿದ್ದಾರೆ. ಇದರಿಂದ ಮೂರು ದಿನಗಳ ಕಾಲ ಮುಂಬೈಯಲ್ಲಿ ನಡೆದ ವಿಶ್ವ ಕೊಂಕಣಿ ಅಭಿಯಾನವು ಯಶಸ್ವಿಯಾಗಿ ನೆರವೇರಿತ್ತು.

ಅನಂತರ ಮಳೆಗಾಲ ಬಂದದ್ದರಿಂದ ವಿಶ್ವ ಕೊಂಕಣಿ ಅಭಿಯಾನ ಕಾರ್ಯಕ್ರಮವನ್ನು ಬೇರೆ ಊರುಗಳಲ್ಲಿ ನಡೆಸುವುದು ಸಾಧ್ಯವಾಗಿರಲಿಲ್ಲ. ಮತ್ತೆ ೨೦೦೯, ನವೆಂಬರ್ ತಿಂಗಳಲ್ಲಿ ಶಿವಮೊಗ್ಗದ ಶ್ರೀಮತಿ ಪ್ರತಿಮಾ ದೇವದಾಸ ನಾಯಕ ಮತ್ತು ಪಂಗಡದವರ ಕೊಂಕಣಿ ಮಹಿಳಾ ಯಕ್ಷಗಾನ, ಕುಮಟಾದ ಮೋಹನ ಧಾರೇಶ್ವರರ "ಸಿಂಹ ನೃತ್ಯ"

ಕಾರ್ಯಕ್ರಮದೊಂದಿಗೆ ನವೆಂಬರ್ ೧೩ರಂದು ಸುಳ್ಯಾದ ಶ್ರೀ ದುರ್ಗಾ ಪರಮೇಶ್ವರಿ ಕಲಾಮಂದಿರದಲ್ಲಿ, ೧೪ರಂದು ಪಾಣೆಮಂಗಳೂರು ಶ್ರೀ ವೀರ ವಿಠಲ ದೇವಾಲಯದ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ, ೧೫ರಂದು ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ ವಿಶ್ವ ಕೊಂಕಣಿ ಅಭಿಯಾನ ಯಶಸ್ವಿಯಾಗಿ ನಡೆದಿತ್ತು.

ಆಮೇಲೆ ಶ್ರೀ ಪಿ. ಗಣಪತಿ ನಾಯಕ್, ಪುತ್ತೂರು ಶ್ರೀ ಪಾಂಡುರಂಗ ನಾಯಕ ಮತ್ತು ಶ್ರೀಮತಿ ವತ್ಸಲಾ ನಾಯಕರು ತೋರಿದ ಉತ್ಸಾಹದಿಂದ ಕೊಂಕಣಿ ಅಭಿಯಾನ ನವೆಂಬರ್ ೩೦ರಂದು ಪುತ್ತೂರಿನಲ್ಲಿ ನಡೆದಿತ್ತು. ಇಲ್ಲಿ ಎಡಪದವು ಶ್ರೀ ಗೋಪಾಲ ಗೌಡ ಮತ್ತು ಪಂಗಡದವರ ಕುಡುಮಿ ಗುಮ್ಮಟ ನೃತ್ಯ ಮತ್ತು ವತ್ಸಲಾ ನಾಯಕರು ತರಬೇತಿ ನೀಡಿದ್ದ ಕೊಂಕಣಿ ಮಹಿಳೆಯರ ಮತ್ತು ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತ್ತು. ಜನ ತುಂಬಾ ಸಂಖ್ಯೆಯಲ್ಲಿ ನೆರೆದಿದ್ದರು.

"ವಿಶ್ವ ಕೊಂಕಣಿ ಮಾನ್ಯತಾಯ್" ಸಂಭ್ರಮ

೨೦೧೦ರಲ್ಲಿ "ಕೊಂಕಣಿ ಮಾನ್ಯತಾಯ್ ದಿನದ ಸಂಭ್ರಮ"ವನ್ನು ಕೊಚ್ಚಿ, ಕಲ್ಲಿಕೋಟೆ, ಮಂಗಳೂರು, ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಉತ್ತಮ ರೀತಿಯಿಂದ ನಡೆಸಲು ಶ್ರೀ ಯು. ರಾಮದಾಸ ಕಾಮತರು ದೇಣಿಗೆ ನೀಡಿದ್ದರು. ಹೀಗಾಗಿ "ಸಂಭ್ರಮ"ದ ಕಾರ್ಯವಿಧಿಗಳಲ್ಲಿ ಪ್ರಾಥಮಿಕ ಶಾಲೆಯ(೧-೫ನೇ ತರಗತಿವರೆಗೆ), ಪ್ರೌಢಶಾಲೆಯ(೬-೧೦ನೇ ತರಗತಿವರೆಗೆ) ಮತ್ತು ಕಾಲೇಜು ವಿದ್ಯಾರ್ಥಿಗಳು ನಡೆಸುವ ಕೊಂಕಣಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ದೊಡ್ಡ ಮೊತ್ತದ ಬಹುಮಾನವನ್ನು ಘೋಷಿಸಿದ್ದೆವು. ಇದರಿಂದ ಶಾಲೆ, ಕಾಲೇಜುಗಳ ೫೦೦ ಕೊಂಕಣಿ ವಿದ್ಯಾರ್ಥಿಗಳು ಅಪಾರ ಸಂಖ್ಯೆಯಲ್ಲಿ ಭಾಗಿಯಾಗುವುದು ಸಾಧ್ಯವಾಗಿತ್ತು. ಅಲ್ಲದೆ ಇದರಲ್ಲಿ ಆಯಾ ಊರುಗಳ ಮಹಿಳೆಯರು ಮತ್ತು ಪುರುಷರೂ ಭಾಗಿಯಾಗಿದ್ದುದು ವಿಶೇಷ. ಇದು ಅತ್ಯಂತ ಯಶಸ್ವಿಯಾಗಿ ನಡೆದ ಕಾರ್ಯಕ್ರಮ.

ಅನಂತರ ಐದು ಊರುಗಳಲ್ಲಿ(ಕೊಚ್ಚಿ, ಕಲ್ಲಿಕೋಟೆ, ಮಂಗಳೂರು, ಕುಂದಾಪುರ ಮತ್ತು ಕುಮಟ) ನಡೆದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಶಾಲೆ, ಕಾಲೇಜು ಮತ್ತು ವಿದ್ಯಾರ್ಥಿ ಪಂಗಡದ ವಿದ್ಯಾರ್ಥಿಗಳಿಗೆ ಬೆಂಗಳೂರು ಭಾರತೀಯ ವಿದ್ಯಾಭವನದಲ್ಲಿ "ವಿಶ್ವ ಕೊಂಕಣಿ ಯುವ ಸಂಭ್ರಮ" ಎಂಬ ಕಾರ್ಯಕ್ರಮವನ್ನು ನಡೆಸಲಾಗಿತ್ತು. ವಿಜಯಾ ಬ್ಯಾಂಕಿನ ಚೇರಮನ ಶ್ರೀ ಆಲ್ಬರ್ಟ್ ತೌರೊ, ಕೆನರಾ ಬ್ಯಾಂಕಿನ ಇ.ಡಿ. ಶ್ರೀ ಹೆಚ್.ಎಸ್. ಯು. ಕಾಮತ್, ಹಾಗೂ ಶ್ರೀಯುತರಾದ ಆರ್.ವಿ. ದೇಶಪಾಂಡೆ, ಬೆಂಗಳೂರಿನ ಆರ್ಚ್ ಬಿಷಪ್ ರೈ.ಎ. ಬರ್ನಾರ್ಡ್ ಮೊರಾಸ್, ಬೆಂಗಳೂರು ದೂರದರ್ಶನದ ನಿರ್ದೇಶಕರಾದ ಶ್ರೀ ಮಹೇಶ ಜೋಶಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕೊಂಕಣಿ ಕ್ರೈಸ್ತ ಸಂಘದ ಶ್ರೀ ವೆಲೆರಿಯನ್ ಫೆರ್ನಾಂಡಿಸ್, ಕಾಶೀಮಠ ಸಮಿತಿಯ ಶ್ರೀ ಪಿ.ಆರ್. ನಾಯಕ್, ಮತ್ತು ಶ್ರೀಮತಿ ಶೀಲಾ ನಾಯಕರು ತುಂಬಾ ನೆರವು ಮತ್ತು ಸಹಕಾರ ನೀಡಿದ್ದರಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿತ್ತು. ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ರಾಮದಾಸ ಕಾಮತರು ಕುಮಟೆಯ ಒಬ್ಬ ವಿದ್ಯಾರ್ಥಿ ರಚಿಸಿದ ಚಿತ್ರಕ್ಕೆ ರೂ ಐದು ಸಾವಿರ ನೀಡಿ ಪ್ರೋತ್ಸಾಹಿಸಿದರು.

●●

೪೫. ವಿಶ್ವ ಕೊಂಕಣಿ ಕೇಂದ್ರದ ಗ್ರಂಥ ಪ್ರಕಟಣೆಗಳು

ವಿಶ್ವ ಕೊಂಕಣಿ ಸಾಹಿತ್ಯ

೧. ಕೆಲೈಡೊಸ್ಕೋಪ್ (ಇಂಗ್ಲಿಷ್)–ಮೂಲ: ರವೀಂದ್ರ ಕೇಳೆಕರ್ (ಕೊಂಕಣಿ) ಅನು: ವಿದ್ಯಾ ಪೈ

೨. ಮಹಾಕವಿ ಗೋವಿಂದ ಪೈ(ಹಿಂದಿ)–ಮೂಲ: ಕಯ್ಯಾರ ಕಿಂಞಣ್ಣ ರೈ(ಕನ್ನಡ) ಅನು: ಡಾ.ಸುನೀತಾ ಬಾಯಿ

೩. ಮಹಾಕವಿ ಗೋವಿಂದ ಪೈ(ಕೊಂಕಣಿ)–ಮೂಲ: ಕಯ್ಯಾರ ಕಿಂಞಣ್ಣ ರೈ(ಕನ್ನಡ) ಅನು: ಡಾ.ಸುನೀತಾ ಬಾಯಿ

೪. ಕಮಲಾದೇವಿ ಚಟ್ಟೋಪಾಧ್ಯಾಯ –ಜೀವಿತ್ ಆನಿ ಕಾರ್ಯ (ಕೊಂಕಣಿ)–ಲೇಖಕಿ: ಡಾ. ಜ್ಯೋತ್ಸ್ನಾ ಕಾಮತ

೫. ನೂಪುರ (ಕನ್ನಡ)–ಮೂಲ: ಬಾಕಿಬಾಬ ಬೋರಕರ (ಕೊಂಕಣಿ) ಅನು : ಶಕುಂತಳಾ ಕಿಣಿ

೬. ಕನ್ನಡ – ಕೊಂಕಣಿ ಶಬ್ದಕೋಶ : ಸಂಪಾದಕ: ಶಬ್ದರತ್ನಾಕರ ಎಂ. ಮಾಧವ ಪೈ

೭. ವಿಶ್ವ ಕೊಂಕಣಿ ಪರಿಚಯ ಕೋಶ ಖಂಡ–೧ –(ಕೊಂಕಣಿ) ಪ್ರಸಂಪಾದಕ: ಡಾ. ತಾನಾಜಿ ಕಳರಣಕರ

೮. ದಿ ಕಿಲ್ನ್ (ಇಂಗ್ಲಿಷ್)–ಮೂಲ: ಮಹಾಬಳೇಶ್ವರ ಸೈಲ್(ಹವಠಣ) ಅನು: ವಿದ್ಯಾ ಪೈ

೯. ಕಾಬೂಲಿವಾಲ ಆನಿ ಹೆರ ಕಾಣಿಯೊ(ಕೊಂಕಣಿ) –ಮೂಲ: ರವೀಂದ್ರನಾಥ ಠಾಕೂರ (ಸಣ್ಣ ಕಥೆಗಳು) ಅನು: ಜಯಶ್ರೀ ಶ್ಯಾನಭಾಗ

೧೦. ಚೂಲಾ (ಮಲೆಯಾಳಿ)–ಮೂಲ: ಮಹಾಬಳೇಶ್ವರ ಸೈಲ್ (ಹವಠಣ) ಅನು : ಡಾ. ಸುನೀತಾ ಬಾಯಿ

೧೧. ಬೊಳಂತೂರು ಕೃಷ್ಣ ಪ್ರಭು (ಕನ್ನಡ)–ಲೇಖಕ: ಮಧುಕರ ಮಲ್ಯ

೧೨. ತೆಂಬರೆ (ಕೊಂಕಣಿ) –ಮೂಲ: ಎಂ. ವೀರಪ್ಪ ಮೊಯಿಲಿ (ಕನ್ನಡ) ಅನು : ರಮೇಶ ಲಾಡ

೧೩. ಆಧುನಿಕ ಕೊಂಕಣಿ ಕತೆಗಳು(ಕನ್ನಡ)–ಮೂಲ: ವಿವಿಧ ಲೇಖಕರು(ಕೊಂಕಣಿ) ಸಂಪಾದಕ: ಡಾ. ಗೀತಾ ಶೆಣ್ಯೆ

೧೪. ವೈಶಾಖಿ (ಕೊಂಕಣಿ)–ಮೂಲ: ಮಂಜೇಶ್ವರ ಗೋವಿಂದ ಪೈ(ಕನ್ನಡ) ಅನು: ಎಂ. ಮಾಧವ ಪೈ

೧೫. ಋತು ಸಂಕ್ರಮಣ ಮತ್ತು ಇತರ ಕಥೆಗಳು(ಕನ್ನಡ) –ಮೂಲ : ಗೋಕುಲದಾಸ ಪ್ರಭು(ಕೊಂಕಣಿ) ಅನುವಾದ: ಡಾ. ಗೀತಾ ಶೆಣ್ಯೆ

೧೬. ಒಪೆರಾ ಹೌಸ್ (ಕೊಂಕಣಿ)–ಮೂಲ: ಜಯಂತ ಕಾಯ್ಕಿಣಿ(ಕನ್ನಡ) ಅನು : ರಮೇಶ ಲಾಡ

ವಿಶ್ವ ಕೊಂಕಣಿ ಪರಿಚಯ ಕೋಶ ಖಂಡ ೨ (ಕೊಂಕಣಿ) –ಪ್ರಸಂಪಾದಕ: ಡಾ. ತಾನಾಜಿ ಕಳರಣಕರ

೧೮. ಸಾಯಬಾ ಭೊಗೊಸ ಭಾಗ– ೧(ಕೊಂಕಣಿ) ಖಡಾಪ (ವಿ.ಜೆ.ಪಿ. ಸಲ್ಡಾನ)

೧೯. ಏಕ ಭಿಕ್ಷುಕ ಚಕ್ರವರ್ತಿಲಿ ಕಾಣಿ (ಕೊಂಕಣಿ)–ಬಸ್ತಿ ವಾಮನ ಶೆಣ್ಯೆ

೨೦. ವೈಶಾಖ ಫುಲೊ(ಕೊಂಕಣಿ)–ಪದ್ಮಾ ಶೆಣ್ಯೆ

೨೧. ಅವಿಗೆ(ಕನ್ನಡ)–ಮೂಲ: ಮಹಾಬಳೇಶ್ವರ ಸೈಲ್ (ಹವಠಣ) ಅನು : ಶಾ.ಮಂ. ಕೃಷ್ಣರಾಯ

●●

೪೯. ಧಾರ್ಮಿಕ ಸೌಹಾರ್ದ ಸಮಿತಿ- ೨೦೦೮

೨೦೦೬-೨೦೦೭ ರಲ್ಲಿ ದ.ಕ. ಜಿಲ್ಲೆಯ ಸುರತ್ಕಲ್ ಮತ್ತು ಬಂಟವಾಳ ತಾಲೂಕಿನ ಕೆಲವೆಡೆಗಳಲ್ಲಿ ಆಗಾಗ ಕೋಮು ಗಲಭೆ ನಡೆಯುತ್ತಿತ್ತು ಸಮಾಜದ ವಿಭಿನ್ನ ಸ್ತರಗಳ ಜನರ ನಡುವೆ ಪರಸ್ಪರ ಅರ್ಥೈಸುವಿಕೆ ಇಲ್ಲದೆ ಸಣ್ಣ ಪ್ರಮಾಣದ ಅಂತರ ಮೂಡಿ ಬಂದು, ಆಮೇಲೆ ಅದುವೇ ಅಗಾಧ ಪ್ರಮಾಣದಲ್ಲಿ ಬೆಳೆದು ಜಗಳ, ಗೊಂದಲಗಳು ನಡೆಯುವ ವಾತಾವರಣ ನಿರ್ಮಾಣಗೊಂಡು ಜಿಲ್ಲೆಯಲ್ಲಿದ್ದ ಶಾಂತ ವಾತಾವರಣಕ್ಕೆ ಧಕ್ಕೆ ಬಂದಿತ್ತು. ಇದು ನಾಗರಿಕ ಸಮಾಜದ ಕಳವಳಕ್ಕೆ ಕಾರಣವಾಗಿತ್ತು. ಹೀಗಾಗಿ ಸಮಾಜದ ಶಾಂತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಅಲ್ಪಸಂಖ್ಯಾತರಾಗಿರುವ ಮುಸ್ಲಿಮ್ ಮುಖಂಡರು ಹಿಂದೂ ಮತ್ತು ಕ್ರೈಸ್ತ ಮುಖಂಡರನ್ನು ಭೇಟಿಯಾಗಿ ನಾವೆಲ್ಲರೂ ಒಟ್ಟುಗೂಡಿ ಜಿಲ್ಲೆಯಲ್ಲಿ ಹದಗೆಡುತ್ತಿರುವ ವಾತಾವರಣವನ್ನು ತಿಳಿಯಾಗಿಸುವ, ಪರಸ್ಪರ ಬಂಧುತ್ವವನ್ನು, ವಿಶ್ವಾಸವನ್ನು ಬೆಳೆಸುವ ಪ್ರಯತ್ನವನ್ನು ನಡೆಸಬೇಕೆಂದು ತಿಳಿಸಿದರು. ಜನಾಬ್ ಕೆ.ಎಂ. ಶರೀಫ್ ಮತ್ತು ಅವರ ಯುವ ಸಂಗಾತಿ ಮುಸ್ಲಿಂ ತರುಣರು ಬಂದು ನನ್ನನ್ನು ಭೇಟಿಯಾಗಿದ್ದರು. ಅವರು ಈಗಾಗಲೇ ಹಿಂದೂ ಸಮಾಜದ ಹಿರಿಯ ಸಾಹಿತಿಗಳಾದ ಏರ್ಯ ಲಕ್ಷ್ಮೀನಾರಾಯಣ ಆಳ್ವ, ವಂ.ಫಾ. ಜಾನ್ ಫೆರ್ನಾಂಡಿಸ್, ನವೀನಚಂದ್ರ ಸುವರ್ಣ ಇತ್ಯಾದಿ ಮಹನೀಯರನ್ನು ಭೇಟಿಯಾಗಿ ನನ್ನ ಬಳಿ ಬಂದಿದ್ದರು. ಈ ಮೌಲ್ಯಯುತ ಕಾರ್ಯದಲ್ಲಿ ನಾನೂ ಭಾಗಿಯಾಗಬೇಕೆಂದು ನನ್ನಲ್ಲಿ ಅವರು ತಿಳಿಸಿದರು. ನಾನು ಅದಕ್ಕೆ ಒಪ್ಪಿಕೊಂಡು ಸಮ್ಮತಿ ಸೂಚಿಸಿದೆ. ಈ ಕಾರ್ಯದಲ್ಲಿ ನನ್ನ ಸ್ನೇಹಿತರಾದ ಜನಾಬ್ ಯೆನಪೊಯಾ ಮಹಮ್ಮದ ಕುಂಞ, ಡಾ. ಸಿ.ಪಿ. ಹಬೀಬುರ ರೆಹಮಾನ್(ಯೂನಿಟಿ ಹೆಲ್ತ್ ಕಾಂಪ್ಲೆಕ್ಸ್) ಅವರಂತಹ ಮುಖಂಡರಿದ್ದರು.

ನಾವು ಒಟ್ಟು ಸೇರಿ ಸಭೆ ನಡೆಸಿ "ಧಾರ್ಮಿಕ ಸೌಹಾರ್ದ ಸಮಿತಿ" ಹೆಸರಿನಲ್ಲಿ ಸಮಿತಿಯೊಂದನ್ನು ರಚಿಸಿ, ದ.ಕ. ಜಿಲ್ಲೆಯ ಅನೇಕ ಊರುಗಳಲ್ಲಿ 'ರೇಲ್ಲಿ' ನಡೆಸಿ ಶಾಂತಿ ಸಂದೇಶವನ್ನು ಪ್ರಚರಿಸುವುದೆಂಬ ನಿರ್ಣಯ ಕೈಗೊಂಡೆವು.

ಧಾರ್ಮಿಕ ಸೌಹಾರ್ದ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ವಂ. ಫಾ. ಜಾನ್ ಫೆರ್ನಾಂಡಿಸ್, ಮತ್ತು ನವೀನಚಂದ್ರ ಡಿ. ಸುವರ್ಣ(ಕಾರ್ಯಾಧ್ಯಕ್ಷರು), ಅಜಿತಕುಮಾರ್ ರೈ ಮಾಲಾಡಿ, ಡಾ. ಸಿ.ಪಿ. ಹಬೀಬುರ ರೆಹಮಾನ, ಮುಗಳವಳ್ಳಿ ಕೇಶವ ಧರಣಿ(ಅಧ್ಯಕ್ಷರು, ದಲಿತ ಕಾರ್ಮಿಕರ ಹಿತರಕ್ಷಣಾ ಸಮಿತಿ), ಜನಾಬ್ ಹಸನ ಹಾಜೀ, ವಿಠಲ ಸುವರ್ಣ, ಹಾಜಿ ಮಹಮ್ಮದ ಹನೀಫ್ ಮೊದಲಾದವರು ಉಪಾಧ್ಯಕ್ಷರಾಗಿ, ಹಾಜೀ ಯೆನೊಪೊಯಾ ಮಹಮ್ಮದ ಕುಂಞ ಕೋಶಾಧ್ಯಕ್ಷರು, ಎಂ. ಶರೀಫ ಕಾರ್ಯದರ್ಶಿಯಾಗಿ ಸ್ವಾಗತ ಸಮಿತಿಯನ್ನು ರೂಪಿಸಲಾಯಿತು.

ಮಾರ್ಚ್ ೨೯, ೨೦೦೮, ಶನಿವಾರ ಮಧ್ಯಾಹ್ನ ೩ ಗಂಟೆಗೆ ಜ್ಯೋತಿ ವೃತ್ತದಿಂದ ಹೊರಡಲಿದ್ದ ಶಾಂತಿ ಮೆರವಣಿಗೆಗೆ ಕ್ಯಾಥೊಲಿಕ್ ಧರ್ಮಪ್ರಾಂತದ ಅಧ್ಯಕ್ಷರಾದ ಅತಿ ವಂದನೀಯ ಬಿಷಪ ಡಾ. ಅಲೋಶಿಯಸ್ ಪೌಲ್ ಡಿಸೋಜಾರು ಚಾಲನೆ ನೀಡಿದರು. ಈ ಶಾಂತಿ ಮೆರವಣಿಗೆಯಲ್ಲಿ ಸಾವಿರಾರು ಪುರುಷರು ಮತ್ತು ಮಹಿಳೆಯರು(ಅದರಲ್ಲಿಯೂ ಹೆಚ್ಚಿನವರು ಮುಸ್ಲಿಮ್ ಮಹಿಳೆಯರು) ಶಾಂತಿ ಘೋಷಣೆ ಮಾಡುತ್ತಾ ನೆಹರೂ ಮೈದಾನವರೆಗೆ ನಡೆದು ಬಂದರು.

ಆಮೇಲೆ ಸಂಜೆ ೫ ಗಂಟೆಗೆ ಶ್ರೀ ಬೇಲಿಮಠ ಶ್ರೀ ಶ್ರೀ ಶಿವರುದ್ರ ಸ್ವಾಮೀಜಿಯವರು ಸಭಾ ಕಾರ್ಯಕ್ರಮದ ಉದ್ಘಾಟನೆಯನ್ನು ನಡೆಸಿದರು. ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ವಿದ್ಯಾ ಪ್ರಸನ್ನ ಸ್ವಾಮೀಜಿಯವರು ಮತ್ತು ಇತರ ಹಿಂದೂ, ಮತ್ತು ಇಸ್ಲಾಂ ಧರ್ಮದ ವಿದ್ವಾಂಸರು, ಮುಖಂಡರು ಶಾಂತಿ ಸಂದೇಶ ನೀಡಿ ಭಾಷಣ ಮಾಡಿದರು. ಕೊನೆಯಲ್ಲಿ ಅಖಿಲ ಭಾರತ ಮುಸ್ಲಿಂ ಪರ್ಸನಲ್ ಲಾ ಬೋರ್ಡಿನ ಉಪಾಧ್ಯಕ್ಷರಾದ

ಮೌಲಾನಾ ಮುಹಮ್ಮದ ಸಿರಾಜುಲ ಹಸನ್ ಅವರ ಸಮಾರೋಪ ಭಾಷಣವಿತ್ತು.

ನಾನು ನನ್ನ ಬಾಷಣದಲ್ಲಿ ಬಂಟವಾಳ ಸೀರತ್ ಕಮಿಟಿಯ ಹೆಸರಿನಲ್ಲಿ ಜನಾಬ್ ಬಿ. ಅಹಮದ ಹಾಜೀ ಮೊಹೀಯುದ್ದೀನರು ಸೌಹಾರ್ದ ಕಾರ್ಯವನ್ನು ಪ್ರಾರಂಭಿಸಿದುದು ಮತ್ತು ಆ ಸಮಯದಲ್ಲಿ ನಾನು ಅದಕ್ಕೆ "ಸೀರತ ಚಳವಳಿ" ಎಂಬ ಹೆಸರು ನೀಡಿ ಪ್ರಚಾರ ನಡೆಸಿದ್ದು, ಅದರಿಂದ ತುಂಬೆ ಪರಿಸರದಲ್ಲಿ ಹೇಗೆ ಎಲ್ಲಾ ಜಾತಿ, ಮತದ ಜನರು ಶಾಂತ ರೀತಿಯಿಂದ ಪರಸ್ಪರ ಪ್ರೀತಿ, ವಿಶ್ವಾಸದ ಜೀವನವನ್ನು ನಡೆಸುತ್ತಿದ್ದಾರೆ ಎಂಬುದಾಗಿ ನನ್ನ ಅನುಭವವನ್ನು ತಿಳಿಸಿದೆ.

ಅದರ ಬಳಿಕ ನಾವು ಈ ಸಮಿತಿಯನ್ನು ಖಾಯಂ ಆಗಿ ಇಟ್ಟುಕೊಳ್ಳಲು ಅದಕ್ಕೆ ಸಂವಿಧಾನವನ್ನು ತಯಾರಿಸಿದೆವು ಮತ್ತು ಅದರ ನೋಂದಣಿ ನಡೆಸಿದೆವು. ಈಗಲೂ ಅದರ ಕಾರ್ಯಗಳು ನಡೆಯುತ್ತಲಿವೆ.

●●

೬೭. ವಿಶ್ವ ಕೊಂಕಣಿ ಕೇಂದ್ರ

ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ

೨೦೦೫ನೇ ಇಸವಿಯಲ್ಲಿ ವಿಶ್ವ ಕೊಂಕಣಿ ಕೇಂದ್ರವನ್ನು ನಿರ್ಮಿಸಲು ಬೇಕಾಗಿರುವ ಹಣದ ಸಂಗ್ರಹ ಕಾರ್ಯದಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ಪ್ರಯತ್ನ ನಡೆಸುವ ದಿನ ಹತ್ತಿರ ಬಂತು. ಇದಕ್ಕಾಗಿ ದೇಶದ ಬೇರೆ ಬೇರೆ ಊರುಗಳಿಗೆ ಭೇಟಿ ನೀಡಿ ಕೊಂಕಣಿ ದಾನಿಗಳನ್ನು, ಸಂಘ ಸಂಸ್ಥೆಗಳನ್ನು ಭೇಟಿಯಾಗುವ ಕಾರ್ಯವನ್ನು ಪ್ರಾರಂಭಿಸಿದೆವು.

ಮೊದಲು ವಿಶ್ವ ಕೊಂಕಣಿ ವಸ್ತು ಸಂಗ್ರಹಾಲಯಕ್ಕಾಗಿ ಇಪ್ಪತ್ತು ಲಕ್ಷ ದೇಣಿಗೆಯ ಕೋರಿಕೆ ಪತ್ರವನ್ನು ಸಲ್ಲಿಸಲು ನಾವು ಕಾರ್ಪೊರೇಶನ್ ಬ್ಯಾಂಕಿನ ಚೇರಮನ್ ಶ್ರೀ ಚೆರಿಯನ್ ವರ್ಗೀಸರನ್ನು ಭೇಟಿಯಾದೆವು. ಬ್ಯಾಂಕಿನ ಜನರಲ ಮೆನೆಜರ್ ಶ್ರೀ ಕೆ. ಅಚ್ಯುತ ಪೈ, ಡೆಪ್ಯೂಟಿ ಜನರಲ್ ಮೆನೆಜರ್ ಶ್ರೀ ಬಿ.ಆರ್. ಭಟ್, ಹಾಗೂ ಬ್ಯಾಂಕ್ ಅಧಿಕಾರಿ ಶ್ರೀ ಗೋಕುಲದಾಸ ಪ್ರಭು ಅವರ ಸಹಕಾರದಿಂದ ಕಾರ್ಪೊರೇಶನ್ ಬ್ಯಾಂಕಿನಿಂದ ಇಪ್ಪತ್ತು ಲಕ್ಷ ರೂ ದೇಣಿಗೆ ನೀಡುವ ಪತ್ರ ನಮಗೆ ಬಂತು. ಇದರಿಂದ ಕೆನರಾ ಬ್ಯಾಂಕ್ ಮತ್ತು ಇತರ ಬ್ಯಾಂಕ್ ಮತ್ತು ಸಂಸ್ಥೆಗಳಿಂದ ಮತ್ತು ಕೊಂಕಣಿ ದಾನಿಗಳಿಂದ ದೇಣಿಗೆ ಕೇಳುವ ಧೈರ್ಯ ನಮಗೆ ಬಂತು. ನಾನು ಶ್ರೀ ಕುಡ್ಪಿ ಜಗದೀಶ ಶೆಣೈ ಅವರೊಂದಿಗೆ ಮುಂಬೈ ಮತ್ತು ಬೆಂಗಳೂರಿಗೆ ಹೋಗಿ ಅವರಿವರನ್ನು ಭೇಟಿಯಾಗುವ ಕೆಲಸ ಪ್ರಾರಂಭಿಸಿದೆ. ನಮ್ಮೊಂದಿಗೆ ಶ್ರೀ ಕೆ.ಕೆ. ಪೈ ಅವರು ಕೂಡ ಬೆಂಗಳೂರು ಮತ್ತು ಮುಂಬೈಗೆ ಬಂದಿದ್ದರು.

ಆಗ ಮಂಗಳೂರು ಶ್ರೀ ಗೋಕರ್ಣ ಮಠದಲ್ಲಿ ಮೊಕ್ಕಾಂ ಹೂಡಿದ್ದ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀ ವಿದ್ಯಾಧಿರಾಜ ತೀರ್ಥ ಸ್ವಾಮೀಜಿಯವರನ್ನು ನಾನು ಮತ್ತು ಕುಡ್ಪಿ ಜಗದೀಶ ಶೆಣೈಯವರು ಭೇಟಿಯಾಗಿ, ಅವರು ನಮ್ಮ ವಿಶ್ವ ಕೊಂಕಣಿ ಕೇಂದ್ರದ ಜಾಗಕ್ಕೆ ಬಂದು ಆಶೀರ್ವದಿಸಬೇಕೆಂದು ಕೋರಿದೆವು. ಅದರಂತೆ ಪೂಜ್ಯ ಸ್ವಾಮೀಜಿಯವರು ೨೦೦೪, ಡಿಸೆಂಬರ್ ೯ರಂದು ಗುರುವಾರದ ದಿನ ಬೆಳಗ್ಗೆ ವಿಶ್ವ ಕೊಂಕಣಿ ಕೇಂದ್ರದ ಜಾಗವನ್ನು ಸಂದರ್ಶಿಸಿ ಆಶೀರ್ವದಿಸಿದರು. "ಈ ದಿನ ಸ್ವಾತಿ ನಕ್ಷತ್ರ(ನನ್ನ ನಕ್ಷತ್ರವೂ ಅದೇ). ಹೀಗಾಗಿ ಕಟ್ಟಡ ನಿರ್ಮಾಣ ಕಾರ್ಯ ಸದೃಢವಾಗುವುದು. ಜಾಗ ಮತ್ತು ಆಯ ವಾಸ್ತು ಲಕ್ಷಣದ ಪ್ರಕಾರವೇ ಇದೆ. ಒಳ್ಳೆಯದಾಗುತ್ತದೆ," ಎಂದು ಪೂಜ್ಯ ಸ್ವಾಮೀಜಿಯವರು ತಿಳಿಸಿದರು. ಅವರ ಈ ಆಶೀರ್ವಚನದ ಮಾತುಗಳಿಂದ ನಮಗೆ ಮಾನಸಿಕವಾಗಿ ಧೈರ್ಯ ಸ್ಥೈರ್ಯ ದೊರೆತವು.

ಶ್ರೀ ವಿ.ಆರ್. ಕಾಮತ್(ವಾಮನ ಕಾಮತ) ಮುಂಬೈಯ ಕೊಂಕಣಿ ಸಮಾಜದ ಪ್ರಸಿದ್ಧ ವ್ಯಕ್ತಿ. ಕ್ರಿಯಾಶೀಲ ಸಾಮಾಜಿಕ ಮುಖಂಡರು. ರಿಲಾಯನ್ಸ್ ಕಂಪನಿಯ ಮುಖ್ಯ ಉಪಾಧ್ಯಕ್ಷರಾಗಿದ್ದವರು. ಆದರೆ ಕಾನ್ಸರ್ ಕಾಯಿಲೆಯಿಂದ ಬೇಗನೆ ತೀರಿಕೊಂಡಿದ್ದಾರೆ. ಶ್ರೀ ಕಾಮತರು ಮುಂಬೈ ಬಳಿ ಪನವೇಲ್‌ನಲ್ಲಿ "ಶಾಂತಿಧಾಮ" ಹೆಸರಿನಲ್ಲಿ ದೊಡ್ಡದೊಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಇಲ್ಲಿ ಶಾಲೆ, ಕಾಲೇಜು, ಬಾಲಿಕಾಶ್ರಮ, ವೃದ್ಧಾಶ್ರಮ ಇತ್ಯಾದಿಗಳನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದರು. ನನ್ನ ಕುರಿತು ಅವರಿಗೆ ತುಂಬಾ ಅಭಿಮಾನವಿತ್ತು. ನಾನು ಮುಂಬೈಗೆ ತೆರಳಿದಾಗ ಯಾವಾಗಲೂ ಅವರ ಕಚೇರಿಗೆ ಹೋಗಿ ಅವರನ್ನು ಭೇಟಿಯಾಗುವುದಿತ್ತು. ಆಮೇಲೆ ಅವರು ತಮ್ಮ ಕಾರಿನಲ್ಲಿ ನನ್ನನ್ನು ಹೊಟೇಲಿಗೆ ತಲುಪಿಸುತ್ತಿದ್ದರು. ಜುಲೈ ೧೨, ೨೦೦೯, ಭಾನುವಾರದ ದಿನ ಬಂಟವಾಳದ ಹತ್ತಿರದ ಅಮ್ಮೆಂಬಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಚಾತುರ್ಮಾಸ ವ್ರತದಲ್ಲಿದ್ದ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀ ವಿದ್ಯಾಧಿರಾಜ ತೀರ್ಥ ಸ್ವಾಮೀಜಿಯವರು ಶ್ರೀ ವಿ. ಆರ್. ಕಾಮತರಿಗೆ ಅವರು ನೀಡಿದ ಸಮಾಜ ಸೇವೆ ಮತ್ತು ಶ್ರೀಮಠಕ್ಕೆ ಸಲ್ಲಿಸಿದ ಸೇವೆಗಾಗಿ "ಏಕಲವ್ಯ" ಪ್ರಶಸ್ತಿ ನೀಡಿ ಸನ್ಮಾನಿಸಿದ್ದರು. ಮರುದಿನ ೧೩ರಂದು ಮುಂಬೈಗೆ ಹೋಗುವ ದಾರಿಯಲ್ಲಿ ಅವರು ತಮ್ಮ ಸಂಸಾರ ಸಮೇತರಾಗಿ ತಮ್ಮ ಸ್ನೇಹಿತ, ಮುಂಬೈಯ ಕೈಗಾರಿಕೋದ್ಯಮಿ ಶ್ರೀ ರಾಜನ್ ಭಟ್ಟರನ್ನು ಕರೆದುಕೊಂಡು

ವಿಶ್ವ ಕೊಂಕಣಿ ಕೇಂದ್ರಕ್ಕೆ ಬಂದಿದ್ದರು. ವಿಶ್ವ ಕೊಂಕಣಿ ಕೇಂದ್ರದ ಕಟ್ಟಡ ಮತ್ತು ಅಲ್ಲಿನ ವಿವಿಧ ವ್ಯವಸ್ಥೆಗಳನ್ನು ನೋಡಿ ಅವರು ತುಂಬಾ ಸಂತೋಷಪಟ್ಟು, ತಾನು ವಿಶ್ವ ಕೊಂಕಣಿ ಕೇಂದ್ರಕ್ಕೆ ಒಂದು ಲಕ್ಷ ರೂ ದೇಣಿಗೆ ನೀಡುವುದಾಗಿ ಹೇಳಿದ್ದರು. ಆಮೇಲೆ ಅವರು ಮುಂಬೈಗೆ ಹೋದ ಬಳಿಕ ಅವರಿಗೆ ಕ್ಯಾನ್ಸರ್ ರೋಗ ಪತ್ತೆಯಾಗಿದ್ದರಿಂದ ಆಗಾಗ ಆಸ್ಪತ್ರೆಗೆ ಹೋಗಿ ಬರುವುದರಲ್ಲಿ ಸಮಯ ಕಳೆದಿತ್ತು. ಇದರಿಂದ ಅವರಿಗೆ ತಿಳಿಸಿದಂತೆ ದೇಣಿಗೆಯ ಹಣವನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ಕಳುಹಿಸಿಕೊಡುವುದು ಸಾಧ್ಯವಾಗಿರಲಿಲ್ಲ. ಆದರೆ, ಅವರು ಅದನ್ನು ಮರೆಯದೆ ತಾನು ಸಾಯುವ ಎರಡು ದಿನ ಮೊದಲು ೧ ಲಕ್ಷ ರೂಪಾಯಿಯ ಬ್ಯಾಂಕ್ ಡಿ.ಡಿಯನ್ನು ಶ್ರೀ ಪ್ರದೀಪ ಪೈಯುವರ ಕೈಯಲ್ಲಿ ಕಳುಹಿಸಿಕೊಟ್ಟಿದ್ದರು.

ನಾನು ವೆಂಕಟೇಶ ಬಾಳಿಗರ ಜೊತೆಯಲ್ಲಿ ಜೂನ್ ೩೦, ೨೦೦೮ರಂದು ಬೆಳಗ್ಗೆ ಪುಣೆ ನಗರದಲ್ಲಿರುವ ಬ್ಯಾಂಕ್ ಆಫ್ ಮಹಾರಾಷ್ಟ್ರದ ಪ್ರಧಾನ ಕಚೇರಿಗೆ ಹೋಗಿ, ಅಲ್ಲಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಏಲನ್ ಪಿರೇರಾರನ್ನು ಭೇಟಿಯಾಗಿದ್ದೆ. ಅವರು ತುಂಬಾ ಆತ್ಮೀಯತೆಯಿಂದ ನಮ್ಮನ್ನು ಸ್ವಾಗತಿಸಿದ್ದರು. ಅವರಲ್ಲಿ ನಾನು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣದ ಕುರಿತು ತಿಳಿಸಿ ಬ್ಯಾಂಕಿನಿಂದ ದೇಣಿಗೆಯನ್ನು ನೀಡಬೇಕೆಂದು ಕೋರಿಕೆ ಸಲ್ಲಿಸಿದೆ. ಅವರು ಶೀಘ್ರದಲ್ಲಿಯೇ ವಿಶ್ವ ಕೊಂಕಣಿ ಕೇಂದ್ರಕ್ಕೆ ದೇಣಿಗೆ ರೂಪದಲ್ಲಿ ೫ ಲಕ್ಷದ ಚೆಕ್ ಕಳುಹಿಸಿಕೊಟ್ಟರು.

ವಿಶ್ವ ಕೊಂಕಣಿ ಕೇಂದ್ರ ಪ್ರವೇಶ

ವಿಶ್ವ ಕೊಂಕಣಿ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯವು ಇನ್ನೂ ಪೂರ್ಣವಾಗಿ ಮುಗಿಯದಿದ್ದರೂ, ಅಲ್ಲಿ ಕಚೇರಿ ಕೆಲಸವನ್ನು ಪ್ರಾರಂಭಿಸಲು ಯಾವ ಅಡ್ಡಿಯೂ ಇರಲಿಲ್ಲ. ಹೀಗಾಗಿ ಜುಲೈ ೧೫, ೨೦೦೮, ಮಂಗಳವಾರದಂದು ವೇದಮೂರ್ತಿ ಶ್ರೀ ಬಂಟವಾಳ ಮುರಳೀಧರ ಭಟ್ಟ್ ಮತ್ತು ಶಕ್ತಿನಗರ ದೇವಮಾತಾ ದೇವಾಲಯದ ಧರ್ಮಗುರುಗಳಾದ ವಂ. ಜಯಪ್ರಕಾಶ ಅವರು ಪ್ರಾರ್ಥನೆ ಸಲ್ಲಿಸಿದ ಬಳಿಕ ನಾವು ವಿಶ್ವ ಕೊಂಕಣಿ ಕೇಂದ್ರವನ್ನು ಪ್ರವೇಶಿಸಿದೆವು. ನಮ್ಮೊಂದಿಗೆ ಕಾರ್ಯ ನಡೆಸಿದ್ದ ಕೆಲವು ಕಾರ್ಯಕರ್ತರನ್ನೂ ಆಹ್ವಾನಿಸಿದ್ದೆವು. ನಾವು ವಿಶ್ವ ಕೊಂಕಣಿ ಕೇಂದ್ರದಲ್ಲಿ ಪ್ರವೇಶ ಮಾಡಿದ್ದರಿಂದ ಕಟ್ಟಡದ ಉಳಿದ ನಿರ್ಮಾಣ ಕಾರ್ಯ ಸುಲಲಿತವಾಗಿ ನಡೆಯುವುದು ಸಾಧ್ಯವಾಯಿತು

ಕೆಲವು ದಿನ ಕಳೆದ ಬಳಿಕ ಕೊಂಕಣಿ ಪ್ರತಿಷ್ಠಾನದ ವಿಶ್ವಸ್ಥ ಮಂಡಳಿಯ ಸಭೆ ಪ್ರಥಮ ಬಾರಿ ವಿಶ್ವ ಕೊಂಕಣಿ ಕೇಂದ್ರದಲ್ಲಿ ನಡೆಯಿತು. ಪ್ರತಿಷ್ಠಾನದ ಚೇರಮನ್ ಶ್ರೀ ಕೆ.ಕೆ. ಪೈ ಸಭೆಯಲ್ಲಿ ಉಪಸ್ಥಿತರಿದ್ದರು. ಅಲ್ಲದೆ ಶ್ರೀ ಪಿ. ದಯಾನಂದ ಪೈಯವರೂ ಇದ್ದರು. ಆಗ ಶ್ರೀ ಪ್ರದೀಪ ಪೈಯವರು ನೀಡಿದ ಸೂಚನೆಯ ಮೇರೆಗೆ ನಾನು ಶ್ರೀ ದಯಾನಂದ ಪೈ ಮತ್ತು ಶ್ರೀ ಸತೀಶ ಪೈಯವರು ಟ್ರಸ್ಟ್ ವತಿಯಿಂದ ೧ ಕೋಟಿ ದೇಣಿಗೆ ನೀಡಿ ವಿಶ್ವ ಕೊಂಕಣಿ ಕೇಂದ್ರದ ಪ್ರಧಾನ ಪ್ರವರ್ತಕರು ಆಗಬೇಕೆಂದು ವಿನಂತಿ ಮಾಡಿದೆ. ಶ್ರೀ ಕೆ.ಕೆ. ಪೈಯವರೂ ನನ್ನ ಸೂಚನೆಯನ್ನು ಮಾನ್ಯ ಮಾಡಬೇಕೆಂದು ಶ್ರೀ ದಯಾನಂದ ಪೈಯವರಿಗೆ ತಿಳಿಸಿದರು. ಅದಕ್ಕೆ ಒಪ್ಪಿಕೊಂಡ ಶ್ರೀ ದಯಾನಂದ ಪೈಯವರು ಹಿಂದೆ ಮುಂದೆ ನೋಡದೆ ತಕ್ಷಣ ತಮ್ಮ ದೇಣಿಗೆಯಾಗಿ ೧ ಕೋಟಿ ರೂಪಾಯಿ ಘೋಷಿಸಿಯೇ ಬಿಟ್ಟರು! ಇದು ಅಲ್ಲಿ ಸೇರಿದ ನಮಗೆಲ್ಲರಿಗೂ ತುಂಬಾ, ತುಂಬಾ ಸಂತೋಷವನ್ನು ಉಂಟು ಮಾಡಿತು. (ಈಗಾಗಲೇ ಶ್ರೀಯುತ ಪೈಯವರು ಕೇಂದ್ರಕ್ಕೆ ೨೫ ಲಕ್ಷ ದೇಣಿಗೆ ನೀಡಿದ್ದರು.)

ಹೀಗೆ ವಿಶ್ವ ಕೊಂಕಣಿ ಕೇಂದ್ರದ ಕಟ್ಟಡಕ್ಕೆ ಶ್ರೀ ಪಿ. ದಯಾನಂದ ಪೈ, ಶ್ರೀ ಪಿ. ಸತೀಶ ಪೈ ಹೆಸರು ನೀಡಿದೆವು.

ವಿಶ್ವ ಕೊಂಕಣಿ ಕೇಂದ್ರ ಉದ್ಘಾಟನೆ

ವಿಶ್ವ ಕೊಂಕಣಿ ಕೇಂದ್ರಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಘಟನೆಗಳು ೨೦೦೯ರಲ್ಲಿ ಘಟಿಸಿದವು. ನಾವು ಜನವರಿ ೧೭, ಶನಿವಾರ ಸಂಜೆ ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟನೆಯನ್ನು ನಡೆಸುವುದೆಂದು ನಮ್ಮ ಹಿರಿಯರಾದ ಶ್ರೀ ಕೆ.ಕೆ.ಪೈ ಅವರಲ್ಲಿ ತಿಳಿಸಿಯೇ ನಿರ್ಧಾರ ಕೈಗೊಂಡಿದ್ದೆವು. ಆದರೆ ನಮಗೆ ಇಷ್ಟು ವರ್ಷಗಳಿಂದ ಪ್ರೀತಿ, ಮಮತೆ ಮತ್ತು ವಿಶ್ವಾಸದಿಂದ ಮಾರ್ಗದರ್ಶನ ನೀಡುತ್ತಾ, ನಮ್ಮ ಎಲ್ಲಾ ಕೊಂಕಣಿ ಕಾರ್ಯಗಳಿಗೆ ಆಶೀರ್ವಾದ ನೀಡಿ ಪ್ರೋತ್ಸಾಹ ನೀಡುತ್ತಿದ್ದ ಮಹನೀಯರಾದ ಶ್ರೀ ಕೆ.ಕೆ. ಪೈ ಜನವರಿ ೧೪, ೨೦೦೯ರ ಮಧ್ಯಾಹ್ನ ೧ ಗಂಟೆಗೆ ದೈವಾಧೀನರಾದರು. ಅವರು ಕೆಲವು ದಿನಗಳಿಂದ ಅನಾರೋಗ್ಯದ ಕಾರಣದಿಂದ ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಯಲ್ಲಿದ್ದರು. ಶ್ರೀಯುತ ಪೈಯವರು ಕೊಂಕಣಿ ಸಮಾಜ, ಕೊಂಕಣಿ ಭಾಷೆ ಮತ್ತು ಸಾಹಿತ್ಯಕ್ಕೆ ಬಹಳ ರೀತಿಯಿಂದ ಸಹಾಯ, ಸಹಕಾರಗಳನ್ನು ನೀಡಿ, ಸಮಾಜ

ಪ್ರಗತಿಶೀಲ ದಾರಿಯನ್ನು ಹಿಡಿಯಲು ಮಾರ್ಗದರ್ಶನ ನೀಡುತ್ತಿದ್ದವರು. ಅವರ ಸಾವು ನಮಗೆ ನಿಜವಾದ ಅರ್ಥದಲ್ಲಿ ತುಂಬಲಾಗದ ನಷ್ಟವೆಂದು ಹೇಳಬಹುದು. ಅವರ ಅಂತ್ಯಕ್ರಿಯೆ ಜನವರಿ ೧೫ ರಂದು ಮಧ್ಯಾಹ್ನ ೧ ಗಂಟೆಗೆ ನಡೆಯಲಿತ್ತು. ಅವರ ಮೃತದೇಹವನ್ನು ಸಾರ್ವಜನಿಕರ ದರ್ಶನಕ್ಕಾಗಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಸಭಾಗೃಹದಲ್ಲಿ ಇಡಲಾಗಿತ್ತು. ನಾವು ೧೦-೧೫ ಮಂದಿ ಮಣಿಪಾಲಕ್ಕೆ ಹೋಗಿ ಅವರಿಗೆ ಚರಮಾಂಜಲಿ ನೀಡಿ ಬಂದೆವು. ಇಂದ್ರಾಳಿ ಸ್ಮಶಾನದಲ್ಲಿ ದಹನ ಕ್ರಿಯೆ ನಡೆಯಿತು. ಕೇಂದ್ರ ಮಂತ್ರಿ ಶ್ರೀ ಆಸ್ಕರ್ ಫರ್ನಾಂಡಿಸ್ ಬಂದಿದ್ದರು.

ನಾವು ಕೆ.ಕೆ. ಪೈಯವರ ಎದೆಮಟ್ಟದ ಶಿಲಾ ಪ್ರತಿಮೆಯನ್ನು ವಿಶ್ವ ಕೊಂಕಣಿ ಕೇಂದ್ರದಲ್ಲಿ ಸ್ಥಾಪಿಸಿದ್ದೇವೆ.

ಉದ್ಘಾಟನಾ ಸಮಾರಂಭ

ಜನವರಿ ೧೭ ರಂದು ನಡೆಯಲಿದ್ದ ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಕೆ.ಕೆ. ಪೈಯವರು ಇರಬೇಕಿತ್ತು. ಆದರೆ ಅವರ ಸಾವಿನಿಂದ ಅದು ಸಾಧ್ಯವಾಗಲಿಲ್ಲ. ಆದರೂ ಅವರನ್ನು ನೆನಪಿಸಿಕೊಂಡು ಅವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿಯೇ ನಾವು ವಿಶ್ವ ಕೊಂಕಣಿ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ಪ್ರಾರಂಭಿಸಿದೆವು.

ಸಮಾರಂಭದ ಅಧ್ಯಕ್ಷಸ್ಥಾನವನ್ನು ಕೊಂಕಣಿ ಪ್ರತಿಷ್ಠಾನದ ಚೇರಮನ್(ಎಮಿರೆಟಿಸ್) ಶ್ರೀ ಆರ್.ವಿ. ದೇಶಪಾಂಡೆ ವಹಿಸಿದ್ದರು. ಗೋವೆ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ದಿಗಂಬರ ಕಾಮತರು ಮುಖ್ಯ ಅತಿಥಿಗಳಾಗಿದ್ದರು. ಗೋವೆ ಸರಕಾರದ ಮಾಜಿ ಮುಖ್ಯಮಂತ್ರಿ ಶ್ರೀ ಲಿಯೋಜಿನೊ ಫೆಲೆರೊ ಕೂಡ ಹಾಜರಿದ್ದರು. ಈ ಸಂದರ್ಭದಲ್ಲಿ ಮಣಿಪಾಲದ ಪೈ ಬಂಧುಗಳ ಪರವಾಗಿ ಶ್ರೀಮತಿ ಸಂಧ್ಯಾ ಸತೀಶ ಪೈ ಮತ್ತು ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜೆ.ಎಂ. ಗರ್ಗ್, ದಾನಿ ಶ್ರೀ ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ ಪೈ, ಶ್ರೀ ರೊನಾಲ್ಡ್ ಕೊಲಾಸೊ, ದುಬಾಯಿಯಿಂದ ಬಂದ ಶ್ರೀ ಎಸ್.ಎಮ್. ಖಲೀಂ ಮತ್ತು ಕೊಂಕಣಿ ಭಾಷಾ ಮಂಡಲದ ಅಧ್ಯಕ್ಷ ಫಾ. ಏರಿಕ್ ಕ್ರಾಸ್ತಾ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶ್ರೀ ದಿಗಂಬರ ಕಾಮತರು ಗೋವಾ ಸರಕಾರದ ಪರವಾಗಿ ಪ್ರಥಮ ಕಂತಿನ ರೂಪದಲ್ಲಿ ಹತ್ತು ಲಕ್ಷ ರೂ ಡಿ.ಡಿ. ನೀಡಿ, ನನ್ನ ಕೆಲಸವನ್ನು ತುಂಬಾ ಪ್ರಶಂಸಿದರು. ವೇದಿಕೆಯಲ್ಲಿದ್ದ ಪ್ರತಿಯೊಬ್ಬರೂ ನನ್ನ ದರ್ಶನದ ಕುರಿತು ತಮ್ಮ ಭಾಷಣದಲ್ಲಿ ಉಲ್ಲೇಖಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಒಂದು ಲಕ್ಷಕ್ಕೂ ಅಧಿಕ ದೇಣಿಗೆ ನೀಡಿದವರನ್ನು ಫಲಕ, ಶಾಲು ಮತ್ತು ಫಲಪುಷ್ಪಗಳಿಂದ ಗೌರವಿಸಲಾಯಿತು. ಬೆಂಗಳೂರು ದೂರದರ್ಶನದ ಶ್ರೀಮತಿ ಉಷಾ ಕಿಣಿಯವರ ತಂಡದಿಂದ ಇಡೀ ಸಮಾರಂಭದ ರೆಕಾರ್ಡಿಂಗ್ ನಡೆಯಿತು.

ಆಮೇಲೆ ೨೭ರಂದು ನಡೆದ ಕೊಂಕಣಿ ಪ್ರತಿಷ್ಠಾನದ ಕಾರ್ಯಕಾರೀ ಮಂಡಳಿ ಸಭೆಯಲ್ಲಿ ಶ್ರೀ ಕೆ.ಕೆ. ಪೈ ಅವರ ನಿಧನದಿಂದ ಖಾಲಿಯಾಗಿ ಉಳಿದಿದ್ದ ಸ್ಥಾನದಲ್ಲಿ ಶ್ರೀ ಪಿ. ದಯಾನಂದ ಪೈಯವರನ್ನು ಚೇರಮನ್ ಆಗಿ ನೇಮಕಗೊಳಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು.

ಸಾರಸ್ವತ ಬ್ಯಾಂಕ್

ಸಾರಸ್ವತ ಬ್ಯಾಂಕ್ ಭಾರತದೇಶದ ಪ್ರಥಮ ಸಹಕಾರಿ ಬ್ಯಾಂಕ್. ಅದನ್ನು ಸ್ಥಾಪಿಸಿದವರು ಮುಂಬೈಯಲ್ಲಿದ್ದ ಉತ್ತರ ಕನ್ನಡ ಜಿಲ್ಲೆಯ ಸಾರಸ್ವತರು. ಅನೇಕ ವರ್ಷಗಳ ಹಿಂದೆಯೇ ಸಾರಸ್ವತ ಬ್ಯಾಂಕಿಗೆ ವಿದೇಶಿ ವ್ಯವಹಾರ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್ ಪರವಾನಗಿ ನೀಡಿತ್ತು.

ಕರ್ನಾಟಕದಲ್ಲಿ ಸಾರಸ್ವತ ಬ್ಯಾಂಕಿನ ನಾಲ್ಕು ಶಾಖೆಗಳನ್ನು ಒಂದೇ ಬಾರಿ ಮಂಗಳೂರಿನಲ್ಲಿ ತೆರೆಯುವ ಉದ್ದೇಶದಿಂದ ಸೆಪ್ಟೆಂಬರ್ ೧೯, ೨೦೦೯ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಏಕನಾಥ ಸಿ. ಠಾಕೂರರು ಮಂಗಳೂರಿಗೆ ಬರುವವರಿದ್ದರು. ಆ ಸಂದರ್ಭದಲ್ಲಿ ಅವರು ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಬೇಕೆಂದು ನಾನು ವಿನಂತಿ ಪತ್ರವನ್ನು ಕಳುಹಿಸಿಕೊಟ್ಟೆ. ಅದಕ್ಕೆ ಒಪ್ಪಿಕೊಂಡ ಅವರು ಸೆಪ್ಟೆಂಬರ್ ೨೦ರಂದು ಸಂಜೆ ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಿದರು. ಅವರೊಂದಿಗೆ ಬ್ಯಾಂಕಿನ ಇನ್ನಿಬ್ಬರು ವರಿಷ್ಠ ಅಧಿಕಾರಿಗಳು ಕೂಡ ಇದ್ದರು. ಶ್ರೀ ಠಾಕೂರರು ಹಿಂದೆ ಕಾರ್ಮಿಕ ಸಂಘಟನೆಯಲ್ಲಿ ಕ್ರಿಯಾಶೀಲರಾಗಿದ್ದರಂತೆ. ಹೀಗಾಗಿ ಅವರು ಕೇಂದ್ರ ಸರಕಾರದ ಮಾಜಿ ಮಂತ್ರಿ ಶ್ರೀ ಜಾರ್ಜ್ ಫರ್ನಾಂಡಿಸರ ಶಿಷ್ಯರಾಗಿದ್ದವರು. ಇದರಿಂದ ಅವರಿಗೆ ಕೊಂಕಣಿ ಭಾಷೆಯ ಮೇಲೆ ತುಂಬಾ ಅಭಿಮಾನ. ಅಷ್ಟು ಮಾತ್ರವಲ್ಲ, ಅವರಿಗೆ ಕೊಂಕಣಿಯ ಪ್ರಸಿದ್ಧ ಸಾಹಿತಿಗಳಾದ ಬಾಕಿಬಾಬ್ ಬೋರಕರ, ಡಾ. ಮನೋಹರ ಸರದೇಸಾಯಿ, ಶೆಣ್ಯೆ ಗೊಂಯಬಾಬ್ ಮೊದಲಾದವರ ಪರಿಚಯವೂ ಇತ್ತು.

ವಿಶ್ವ ಕೊಂಕಣಿ ಕೇಂದ್ರದಲ್ಲಿದ್ದ ಜಾರ್ಜ ಫೆರ್ನಾಂಡೀಸರ ವರ್ಣಚಿತ್ರವನ್ನು ನೋಡಿ ಅವರು ತುಂಬಾ ಸಂತೋಷ ಪಟ್ಟುಕೊಂಡು, ಅದಕ್ಕೆ ವಂದಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಬಾಕಿಬಾಬರ ಕವಿತೆಗಳನ್ನು ಹಾಡಲಾಗಿತ್ತು. ನನ್ನ ಸ್ವಾಗತ ಭಾಷಣ ಮುಗಿದ ಕೂಡಲೇ ಶ್ರೀ ಠಾಕೂರರು ನನ್ನ ಕೈಯಿಂದ ಮೈಕ್ ಪಡೆದು ಸಾರಸ್ವತ ಬ್ಯಾಂಕ್ ಪರವಾಗಿ ವಿಶ್ವ ಕೊಂಕಣಿ ಕೇಂದ್ರಕ್ಕೆ ೨೦ ಲಕ್ಷ ರೂ ದೇಣಿಗೆಯನ್ನು ಘೋಷಿಸಿಯೇ ಬಿಟ್ಟರು! ಅಲ್ಲಿ ನೆರೆದಿದ್ದ ನಮಗೆಲ್ಲರಿಗೂ ಆಶ್ಚರ್ಯ ಸಂತೋಷಗಳೆರಡರ ಅನುಭವವಾಯ್ತು.

ಕೆಲವು ದಿನಗಳ ಬಳಿಕ ಶ್ರೀ ಠಾಕೂರರ ಆಹ್ವಾನದ ಮೇರೆ ನಾನು ಮುಂಬೈಗೆ ಹೋಗಿ ಅವರನ್ನು ಭೇಟಿಯಾಗಿದ್ದೆ. ಅಲ್ಲಿ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ನಮ್ಮ "ವಿಶ್ವ ಕೊಂಕಣಿ ಕೇಂದ್ರ ದರ್ಶನ"ಕ್ಕೆ(Vision) ಅವರಿಂದ ತುಂಬು ಪ್ರಶಂಸೆ ದೊರೆಯಿತು. ಅವರು ನನಗೆ ಶಾಲು ಹೊದೆಸಿ, ಫಲಪುಷ್ಪ ನೀಡಿ ಹಾರ ಹಾಕಿ ಸನ್ಮಾನ ಮಾಡಿದರು. ಆಮೇಲೆ ೨೦ ಲಕ್ಷದ ಬ್ಯಾಂಕ್ ಡಿಡಿಯನ್ನು ನನ್ನ ಕೈಗಿತ್ತರು. ಉಳಿದ ಬ್ಯಾಂಕ್ ಅಧಿಕಾರಿಗಳು ಕೂಡ ಬಾಯಿ ತುಂಬಾ ಹೊಗಳಿ, ಭವಿಷ್ಯದಲ್ಲಿಯೂ ವಿಶ್ವ ಕೊಂಕಣಿ ಕೇಂದ್ರಕ್ಕೆ ತಮ್ಮ ಸಹಕಾರವಿರುವುದಾಗಿ ಆಶ್ವಾಸನೆ ನೀಡಿದರು.

●●

ಭಾಗ - ೫

ಮಾನ್ಯತಾ ರಂಗ

೩೮. ಬಸ್ತಿ ವಾಮನ ಶೆಣೈ ಅಮೃತ ಮಹೋತ್ಸವ

೨೦೦೯ನೇ ಇಸವಿ ಅಕ್ಟೋಬರ್ ೧೩ ರಂದು ವಿಶ್ವ ಕೊಂಕಣಿ ಕೇಂದ್ರದ ಚೇಯರಮನ್ ಶ್ರೀ ಪಿ. ದಯಾನಂದ ಪೈಯವರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಷ್ಠಾನದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಪ್ರತಿಷ್ಠಾನದ ವತಿಯಿಂದ "ಶ್ರೀ ಬಸ್ತಿ ವಾಮನ ಶೆಣೈ ಅಮೃತೋತ್ಸವ ಸಮಾರಂಭ"ವನ್ನು ನಡೆಸುವುದೆಂಬ ನಿರ್ಣಯವನ್ನು ಕೈಗೊಳ್ಳಲಾಗಿತ್ತು.

ಪ್ರತಿಷ್ಠಾನದ ಚೇರಮನ್ ಶ್ರೀ ಪಿ. ದಯಾನಂದ ಪೈಯವರ ನೇತೃತ್ವದಲ್ಲಿ ೨೦೧೦ನೇ ಇಸವಿ ಜನವರಿ ೧೭ರಂದು "ಶ್ರೀ ಬಸ್ತಿ ವಾಮನ ಶೆಣೈ ಅಮೃತೋತ್ಸವ ಸಮಾರಂಭ"ವನ್ನು ಬಹಳ ಅದ್ದೂರಿಯಾಗಿ ನಡೆಸಲಾಯಿತು. ಈ ಸಮಾರಂಭಕ್ಕಾಗಿ ನನ್ನ ತಮ್ಮ ಚಿ. ಗಣಪತಿ ಅಮೇರಿಕೆಯ ಲಾಸ್ ವೇಗಾಸ್‌ನಿಂದ, ನನ್ನ ಮಗ ಚಿ. ದಿನ್ನು ದೆಹಲಿಯಿಂದ ಬಂದಿದ್ದರು.

ಆ ದಿನ ಬೆಳಗ್ಗೆ ಗೋವೆಯಿಂದ ಶ್ರೀ ಉದಯ ಭೆಂಬ್ರೆ, ಡಾ. ತಾನಾಜಿ ಹಳರಣಕರ, ಗೋವಾ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಎನ್. ಶಿವದಾಸ, ಶ್ರೀ ಗೋಕುಲದಾಸ ಪ್ರಭು, ಬೆಳಗಾವಿಯಿಂದ ಶ್ರೀ ವಿ.ವಿ. ಶೆಣೈ, ಕೊಚ್ಚಿಯಿಂದ ಶ್ರೀ ಪಯ್ಯನೂರು ರಮೇಶ ಪೈ, ಮುಂಬೈಯಿಂದ ಡಾ. ಚಂದ್ರಕಾಂತ ಎನ್ ಶೆಣೈ ಬಂದಿದ್ದರು. ಇನ್ನೂ ಅನೇಕ ಕೊಂಕಣಿ ನೇತಾರರು ಅಭಿಮಾನಪೂರ್ವಕವಾಗಿ ಕುಮಟ, ಕಾರವಾರ, ಕಲ್ಲಿಕೊಟೆ, ಕಾಸರಗೋಡಿನಿಂದಲೂ ಬಂದಿದ್ದರು.

ಬೆಳಗ್ಗೆ ೧೦ ಗಂಟೆಗೆ ಶ್ರೀ ಟಿ.ವಿ. ರಮಣ ಪೈ ಸಭಾಂಗಣದಲ್ಲಿ "ಭಾಷೆಯ ಮೂಲಕ ಬಾಂಧವ್ಯ" ಎಂಬ ಗೋಷ್ಠಿ ಜರಗಿತ್ತು. ಇದರ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಹಾಗೂ ನನ್ನ ಗುರು ಸಮಾನರಾದ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ವಹಿಸಿದ್ದರು. ಬ್ಯಾರಿ ಅಕಾಡೆಮಿಯ ವತಿಯಿಂದ ಶ್ರೀ ಇಚ್ಲಂಗೋಡ, ತುಳು ಅಕಾಡೆಮಿಯ ವತಿಯಿಂದ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಹಾಗೂ ಗೋವಾ ಕೊಂಕಣಿ ಅಕಾಡೆಮಿಯ ವತಿಯಿಂದ ಶ್ರೀ ಎನ್. ಶಿವದಾಸ್ ಭಾಷಾ ಬಾಂಧವ್ಯದ ಕುರಿತು ಮಾತನಾಡಿದರು. ಮುಂಬೈಯ ಉದ್ಯಮಿ ಶ್ರೀ ಆಲ್ಬರ್ಟ್ ಡಿಸೋಜಾ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷರಾದ ಫಾ. ಎರಿಕ್ ಕ್ರಾಸ್ತಾ, ಅರುಣ ಉಭಯಕರ ಇವರ ಭಾಷಣವೂ ಇತ್ತು.

ಸಂಜೆ ೫ ಗಂಟೆಗೆ ಟಿ.ವಿ. ರಮಣ ಪೈ ಸಭಾಂಗಣದಲ್ಲಿ "ಶ್ರೀ ಬಸ್ತಿ ವಾಮನ ಶೆಣೈ ಅಮೃತೋತ್ಸವ ಸಮಾರಂಭ" ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಪಿ. ದಯಾನಂದ ಪೈ ವಹಿಸಿಕೊಂಡಿದ್ದರು. ರಾಜ್ಯಸಭಾ ಸದಸ್ಯರೂ, ಮಾಜಿ ಕೇಂದ್ರ ಮಂತ್ರಿಗಳೂ ಆಗಿದ್ದ ಶ್ರೀ ಆಸ್ಕರ ಫೆರ್ನಾಂಡಿಸ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶ್ರೀ ಉದಯ ಭೆಂಬ್ರೆಯವರು ಅಭಿನಂದನಾ ಭಾಷಣ ನೀಡಿದರು. ಶ್ರೀ ಗುರುದತ್ತ ಬಂಟವಾಳಕರರು ಸಿದ್ಧಪಡಿಸಿದ್ದ ನನ್ನ ಜೀವನದ ಕುರಿತಾದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಶ್ರೀ ಕೆ.ಜಿ. ಮಲ್ಯರು ತಯಾರಿಸಿದ್ದ "ಮಾನಪತ್ರ"ವನ್ನು ಕಾರ್ಪೊರೇಶನ್ ಬ್ಯಾಂಕಿನ ಜನರಲ್ ಮೆನೆಜರ್ ಶ್ರೀ ಬಿ.ಆರ್. ಭಟ್ಟರು ಓದಿದರು.

ಡಾ. ದಯಾನಂದ ಪೈಯವರು ನನ್ನ ಬದುಕಿನ ಸಾಧನೆ, ನನ್ನ ಕರ್ತೃತ್ವ ಶಕ್ತಿ, ಸಮಾಜಮುಖೀ ಕಾರ್ಯಗಳು ಮತ್ತು ಸಮರ್ಪಣಾ ಭಾವನೆಯ ಕುರಿತು ಮಾತನಾಡಿದರು. "ವಿಶ್ವ ಕೊಂಕಣಿ ಕೇಂದ್ರದ ಸ್ಥಾಪನೆಗಾಗಿ ನಡೆಸಿದ ಕಾರ್ಯಗಳಿಂದಾಗಿ ಬಸ್ತಿ ವಾಮನ ಶೆಣೈ ಕೊಂಕಣಿ ಜಗತ್ತಿನಲ್ಲಿ ಅವಿಸ್ಮರಣೀಯವಾಗಿ ಉಳಿಯುತ್ತಾರೆ" ಎಂದು ಪ್ರಶಂಸಿದರು.

ನಾನು ಬರೆದ, ನನ್ನ ಬದುಕಿನ ಚಿತ್ರಣವನ್ನು ನೀಡುವ "ಅಮೃತ ಮಂಥನ" ಎಂಬ ಹೆಸರಿನ ಪುಟ್ಟ ಗ್ರಂಥವನ್ನು ಡಾ. ದಯಾನಂದ ಪೈಯವರು ಲೋಕಾರ್ಪಣೆ ಮಾಡಿದರು. ಆಮೇಲೆ ಎಲ್ಲೆಡೆಗಳಿಂದ ಬಂದ ಸಂಘ, ಸಂಸ್ಥೆಗಳ ಮುಖಂಡರು,

ಬಂಧುಗಳು, ಸಾಹಿತಿಗಳು ಹಾಗೂ ಸಭೆಯಲ್ಲಿ ನೆರೆದ ಅಭಿಮಾನಿಗಳಿಂದ ನನಗೆ ಮಾಲಾರ್ಪಣೆಯಾಯಿತು.

ನನ್ನ ಭಾಷಣದಲ್ಲಿ ನಾನು ಚಿಕ್ಕಂದಿನಿಂದ ನನ್ನ ಬದುಕಿಗೆ ಒಂದು ಆದರ್ಶವಾಗಿ, ಬಿಚ್ಚು ಮನಸ್ಸಿನಿಂದ ಸಮಾಜ, ಭಾಷೆ, ಕಲೆ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ದುಡಿಯಲು ಸ್ಫೂರ್ತಿ ನೀಡಿದ, ಮಾರ್ಗದರ್ಶನ ನೀಡಿದ, ನನಗೆ ಸಹಾಯ ಮತ್ತು ಆಶೀರ್ವಾದ ನೀಡಿ ಬೆಂಬಲ ಒದಗಿಸಿದ, ಶ್ರೀ ತಿರುಮಲ ವೆಂಕಟರಮಣ ಸ್ವಾಮಿ, ಕಾಶೀ ಮಠಾಧೀಶರಾದ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿ, ನನ್ನ ತಂದೆ ಮತ್ತು ನನ್ನ ತಾಯಿ, ಶ್ರೀ ಟಿ.ಎ.ಪೈ, ಶ್ರೀ ಧರ್ಮಸ್ಥಳ ಡಾ ವೀರೇಂದ್ರ ಹೆಗ್ಗಡೆ, ಶ್ರೀ ಅಹಮ್ಮದ ಹಾಜೀ ಮೊಹಿಯುದ್ದೀನ, ಶ್ರೀ ಕೆ.ಕೆ.ಪೈ, ಬಂಟವಾಳ ನಾರಾಯಣ ನಾಯಕ, ಶ್ರೀ ಆರ್.ವಿ. ದೇಶಪಾಂಡೆ, ಡಾ. ಪಿ. ದಯಾನಂದ ಪೈ, ಶ್ರೀ ರೊನಾಲ್ಡ್ ಕೊಲಾಸೊ ಇವರುಗಳ ಹೆಸರನ್ನು ಉಲ್ಲೇಖಿಸಿ ನಾನು ಅವರಿಗೆ ಚಿರಋಣಿ ಎಂದು ಹೇಳಿದೆ. ಅದೇ ರೀತಿ ಶಾಲಾ ಶಿಕ್ಷಣದಲ್ಲಿ ಕುಡ್ಗಿ ಮಾಧವ ಶೆಣ್ಯೆ, ಶ್ರೀಮತಿ ಸುಶೀಲಾ ಬಾಯಿ, ನಾರಾಯಣ ಪ್ರಭು, ಶ್ರೀ ಬಿ. ಪಾಂಡುರಂಗ ಬಾಳಿಗ, ದಾಸ ಮಾಸ್ತರ, ಅನಂತ ಮಾಸ್ತರ, ಶ್ರೀ ಬಿ. ಶ್ರೀನಿವಾಸ ನಾಯಕ, ಬಿ. ದಾಮೋದರ ಪ್ರಭು, ಶ್ರೀ ಎಂ. ವೇದವ್ಯಾಸ ಪ್ರಭು, ಪಿ. ನಾರಾಯಣ ಕಾಮತ, ಬೊ. ಪ್ರಭಾಕರ ಪ್ರಭು ವೊದಲಾದವರನ್ನೂ ನೆನಪಿಸಿಕೊಂಡು, ಅವರು ನೀಡಿದ ಸಹಾಯ, ಸಹಕಾರಕ್ಕೆ ಕೃತಜ್ಞತೆ ಸೂಚಿಸಿ ಮಾತನಾಡಿದೆ. ಶ್ರೀ ವೆಂಕಟೇಶ ಬಾಳಿಗರು ಧನ್ಯವಾದಗಳನ್ನು ಹೇಳಿದ ಬಳಿಕ ಸವಾರಂಭ ಮುಕ್ತಾಯಗೊಂಡಿತು. ಎಲ್ಲರಿಗೂ ಭೋಜನದ ವ್ಯವಸ್ಥೆ ಇತ್ತು.

ನನ್ನ ಹಿತಚಿಂತಕರಾಗಿರುವ ಡಾ. ಪಿ. ದಯಾನಂದ ಪೈ ಹಾಗೂ ಹಿತೈಷಿಗಳು ಸೇರಿ "ಅಮೃತೋತ್ಸವ" ಸಮಿತಿಯನ್ನು ರಚಿಸಿ ತುಂಬಾ ಕೆಲಸಗಳನ್ನು ಮಾಡಿದ್ದರಿಂದ ಈ ಸಮಾರಂಭ ತುಂಬಾ ಉತ್ತಮ ರೀತಿಯಿಂದ ನಡೆಯಿತು. ಸಮಿತಿಯ ಸದಸ್ಯರಿಗೆ, ಕಾರ್ಯಕರ್ತರಿಗೆ ಮತ್ತು ಸವಾರಂಭದಲ್ಲಿ ಭಾಗಿಯಾಗಿದ್ದವರಿಗೆ ತುಂಬ ಸಂತೋಷವಾಗಿತ್ತು.

ಈ ಸಂದರ್ಭದಲ್ಲಿ ನನಗೆ ೬೦ ವರ್ಷ ತುಂಬಿದಾಗ ಇದ್ದಂತಹ ಪರಿಸ್ಥಿತಿ ನೆನಪಿಗೆ ಬಂತು. ಆಗ ನನಗೆ ನಿವೃತ್ತಿ ವೇತನ ಸಿಗುತ್ತಿರಲಿಲ್ಲ. ಚಿ. ಮಾಧವನ ಅಂಗಡಿ ವ್ಯಾಪಾರ ಸರಿಯಾಗಿ ನಡೆಯದೆ ನಮಗೆ ಕಷ್ಟವಿತ್ತು. ಚಿ. ದಿನ್ನುವಿನ ಅಂಗಡಿಯೂ ಕಷ್ಟನಷ್ಟದಲ್ಲಿ ನಡೆಯುತ್ತಿತ್ತು. ನನ್ನ ಅರವತ್ತರ ಸಂಭ್ರಮವನ್ನು ಆಚರಿಸುವುದು ಸಾಧ್ಯವೇ ಇರಲಿಲ್ಲ. ಮನೆಯಲ್ಲಿ ಒಂದು ದಮ್ಮಡಿಯೂ ಇರಲಿಲ್ಲ. ಆ ದಿನ ರಾತ್ರಿ ನನ್ನ ಮಕ್ಕಳು ಎಲ್ಲಿಂದಲೋ ಸಾಲ ಪಡೆದು ನನಗೆ ಒಂದು ಪ್ಯಾಂಟ್ ಮತ್ತು ಶರ್ಟ್ ಬಟ್ಟೆ ಉಡುಗೊರೆಯಾಗಿ ನೀಡಿದಾಗ ನನ್ನ ಕಣ್ಣುಗಳು ತುಂಬಿ ಬಂದಿದ್ದವು. ಇಷ್ಟು ವರ್ಷ ಬ್ಯಾಂಕ್ ಮೆನೇಜರ್ ಆಗಿ ದುಡಿದು, ಹೋದೆಡೆಗಳಲ್ಲೆಲ್ಲಾ ಸಮಾಜ ಸೇವೆ ನಡೆಸಿ ಗೌರವ ಪಡೆದ ನನಗೆ ಇಂದು ಇಂತಹ ಆರ್ಥಿಕ ಸಂಕಷ್ಟದ ಈ ನಿಕೃಷ್ಟ ಪರಿಸ್ಥಿತಿ ಬಂದಿತ್ತಲ್ಲವೇ? ಎಂದುಕೊಂಡು ಹೊಟ್ಟೆಯೊಳಗಿಂದ ದುಃಖ ಉಕ್ಕಿ ಬಂದಿತ್ತು.

ಆದರೆ ಇಂದು ಡಾ. ಪಿ. ದಯಾನಂದ ಪೈ, ಕುಡ್ವಿ ಜಗದೀಶ ಶೆಣ್ಯೆ, ಪ್ರದೀಪ ಜಿ. ಪೈ ಮತ್ತು ಶ್ರೀ ಬಿ.ಆರ್. ಭಟ್ ಅವರಂತಹ ನನ್ನ ಹಿತೈಷಿಗಳು ನನ್ನ ಮೇಲಿನ ಅಭಿಮಾನ ಮತ್ತು ಪ್ರೀತಿ ವಿಶ್ವಾಸಗಳಿಂದ ಸುಮಾರು ಎಂಟು ಲಕ್ಷ ರೂ ಖರ್ಚು ಮಾಡಿ ಸಮಾರಂಭ ನಡೆಸಿ, ಅಭಿನಂದನಾ ಗ್ರಂಥವನ್ನು ಪ್ರಕಟಿಸಿ, ನನಗಾಗಿ ಪಟ್ಟ ಪರಿಶ್ರಮವನ್ನು ನೆನೆದಾಗ, ನನ್ನ ೬೦ ನೇ ವಯಸ್ಸಿನಲ್ಲಿ ಇದ್ದಂತಹ ಪರಿಸ್ಥಿತಿಯ ಅವಲೋಕವನ್ನು ನಡೆಸಿದಾಗ ಎದೆ ತುಂಬಿ ಬರುತ್ತದೆ. ಈ ಸಮಾರಂಭಕ್ಕಾಗಿ ಶ್ರೀ. ಕೆ.ಜಿ. ಮಲ್ಯಾ, ಶ್ರೀ ವೆಂಕಟೇಶ ಎನ್. ಬಾಳಿಗ, ಗುರುದತ್ತ ಬಂಟವಾಳಕಾರ, ಕುಂಬಳೆ ನರಸಿಂಹ ಪ್ರಭು, ಬೊ. ಪ್ರಭಾಕರ ಪ್ರಭು, ಪಿ. ನಾರಾಯಣ ಕಾಮತಿ, ಚಿ. ಬಾಬಣ್ಣ(ಎನ್. ಸುಧಾಕರ ಪ್ರಭು, ಮೈಸೂರು) ಇವರೆಲ್ಲರೂ ಪಟ್ಟ ಶ್ರಮ ಮರೆಯುವಂತಹದಲ್ಲ.

ಕುವೈಟ್ ತುಳು ಕೂಟ ಪ್ರಶಸ್ತಿ

ನನ್ನನ್ನು ಕುವೈಟ್ ತುಳುಕೂಟದವರು ತಮ್ಮ ಸಂಸ್ಥೆಯ ದಶಮಾನೋತ್ಸದ ಸಮಾರಂಭಕ್ಕೆ ಆಮಂತ್ರಿಸಿದ್ದರು. ನನ್ನ ಜೊತೆಯಲ್ಲಿ ತುಳು, ಬ್ಯಾರಿ, ಕನ್ನಡ ಸಾಹಿತಿಗಳಾದ ಶ್ರೀ ಸೀತಾರಾಮ ಕುಲಾಲ, ಶ್ರೀಮತಿ ಸಾರಾ ಅಬೂಬಕ್ಕರ ಮತ್ತು ಶ್ರೀಮತಿ ಶೆಟ್ಟಿಯವರಿಗೂ ಆಮಂತ್ರಣ ನೀಡಿದ್ದರು. ನಾವು ಅಕ್ಟೋಬರ್ ೧೩, ೨೦೧೦ ರಂದು ಬಜ್ಪೆ ನಿಲ್ದಾಣದಲ್ಲಿ ವಿಮಾನವನ್ನೇರಿ ಮುಂಬೈಗೆ ಹೋಗಿ, ಅಲ್ಲಿಂದ ಕುವೈಟಿಗೆ ಹೋದೆವು.

ಮರುದಿನ, ಅಕ್ಟೋಬರ್ ೧೪ ರಂದು "ಹಡಗು ಸಂಗ್ರಹಾಲಯ"(ಶಿಪ್ ಮ್ಯೂಸಿಯಂ) ನೋಡಲು ಹೋದೆವು. ಅಲ್ಲಿ ಹಿಂದಿನ ಕಾಲದ ಬೇರೆ ಬೇರೆ ಕಾಲಘಟ್ಟಗಳ ಹಡಗುಗಳನ್ನು

ಪ್ರದರ್ಶನಕ್ಕೆ ಇಡಲಾಗಿದೆ. ಆಮೇಲೆ ನಾವು ಕುವೈಟಿನ ಪ್ರೇಕ್ಷಣೀಯ ತಾಣಗಳನ್ನು, ಕಟ್ಟಡಗಳನ್ನು ನೋಡಿದೆವು. ಸಂಜೆ ಅಮೇರಿಕನ್ ಸ್ಕೂಲ್ ಹಾಲ್‌ನಲ್ಲಿ ತುಳು ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ವಿಶೇಷ ಅತಿಥಿಗಳಾಗಿ ಬೆಂಗಳೂರಿನಿಂದ ಶ್ರೀ ಪಿ. ದಯಾನಂದ ಪೈಯವರು ಬಂದಿದ್ದರು. ನಮಗೆ ಜಿಎಸ್‌ಬಿಯವರ ಮಾಸಿಕ ಸತ್ಯನಾರಾಯಣ ವ್ರತ ಸಮಾರಂಭದಲ್ಲಿ ಸನ್ಮಾನವಿತ್ತು.

ಮರುದಿನ ಅಕ್ಟೋಬರ್ ೧೫ರಂದು ಕುವೈಟ್ ತುಳುಕೂಟದ ದಶಮಾನೋತ್ಸವ ತುಂಬಾ ಸಂಭ್ರಮದಿಂದ ನಡೆಯಿತು. ಕುವೈಟಿನಲ್ಲಿರುವ ಭಾರತದ ರಾಯಭಾರಿ ಶ್ರೀ ಮೆಹತಾ, ಅಬುದಾಭಿಯಿಂದ ಶ್ರೀ ಬಿ.ಆರ್. ಶೆಟ್ಟಿ ಮೊದಲಾದವರು ಬಂದಿದ್ದರು. ನಮ್ಮನ್ನು ಶಾಲು ಹೊದೆಸಿ, ಫಲಕ ನೀಡಿ ಸನ್ಮಾನಿಸಲಾಯಿತು. ಆ ಮೇಲೆ ಮಂಗಳೂರಿನಿಂದ ಬಂದಿದ್ದ ಕುದ್ರೋಳಿ ಗಣೇಶರ ಜಾದೂ ವಿಸ್ಮಯ, ಆರ್ಕೆಸ್ಟ್ರಾ, ಹಾಗೂ "ಪಾಣ್ಯೆರೆಲಾ ಅತ್ತ ಪಾಣಂದೆ ಇಪ್ಪೆರೆಲಾ ಅತ್ತ"(ಹೇಳಲೂ ಆಗದು, ಹೇಳದೆ ಇರಲೂ ಆಗದು) ತುಳು ನಾಟಕದ ಪ್ರದರ್ಶನವಿತ್ತು. ತುಳು ಕೂಟದ ಸದಸ್ಯರು ಮೂರು ದಿನಗಳ ಕಾರ್ಯಕ್ರಮಗಳನ್ನು ಅತ್ಯಂತ ಶಿಸ್ತಿನಿಂದ ಅದ್ದೂರಿಯಾಗಿ ನಡೆಸಿದ್ದರು. ನಮ್ಮ ವಿಮಾನ ಪ್ರಯಾಣ ವೆಚ್ಚವನ್ನು ಅವರೇ ಭರಿಸಿದ್ದರು. ಜೊತೆಗೆ ಕುವೈಟಿನಲ್ಲಿ ಇರುವುದಕ್ಕೆ ಅತ್ಯುತ್ತಮ ಹೊಟೇಲಿನ ವ್ಯವಸ್ಥೆ ಮಾಡಿದ್ದರು.

ಕೆಲವು ದಿನಗಳು ಕಳೆದ ಬಳಿಕ ತುಳುಕೂಟದವರು ಮಂಗಳೂರಿಗೆ ಬಂದಾಗ ನಮ್ಮ ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಿದ್ದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ –೨೦೧೦

ರಾಜ್ಯ ಸರಕಾರವು ನವೆಂಬರ್ ೧ ರಂದು ಕರ್ನಾಟಕ ರಾಜ್ಯೋತ್ಸವವನ್ನು ಬಹು ಸಂಭ್ರಮದಿಂದ ಆಚರಿಸುತ್ತದೆ. ಆ ಸಂದರ್ಭದಲ್ಲಿ ಸಾಹಿತ್ಯ, ಕಲೆ, ಶಿಕ್ಷಣ, ಸಮಾಜ ಸೇವೆ ಇತ್ಯಾದಿ ರಂಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಈ ಪ್ರಯುಕ್ತ ೨೦೧೦ನೇ ಇಸವಿಯಲ್ಲಿ ಅಕ್ಟೋಬರ್ ೨೯ ರಂದು ಸಂಜೆ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಹೆಸರುಗಳನ್ನು ಘೋಷಿಸಲಾಗಿತ್ತು. ಅದರಲ್ಲಿ ಮೊದಲ ಹೆಸರು ನಮ್ಮ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷರಾದ ಶ್ರೀ ಪಿ. ದಯಾನಂದ ಪೈಯವರದ್ದಾಗಿತ್ತು. ಇದು ನಮಗೆ ಅತ್ಯಂತ ಸಂತೋಷವನ್ನು ಉಂಟು ಮಾಡಿತ್ತು. ಮರುದಿನ ಅಕ್ಟೋಬರ್ ೩೦ ರಂದು ನನಗೆ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ವಾರ್ತಾ ಕಾರ್ಯದರ್ಶಿಯಾಗಿದ್ದ ಶ್ರೀ ಆರ್.ಪಿ. ಜಗದೀಶರಿಂದ ದೂರವಾಣಿ ಕರೆ ಬಂತು. ಅವರು ಈ ವರ್ಷ ರಾಜ್ಯೋತ್ಸವ ಪ್ರಶಸ್ತಿ ನನಗೆ ಸಂದಿರುವ ಸುದ್ದಿಯನ್ನು ತಿಳಿಸಿದರು, "ನೀವು ನಾಳೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಾಜರಿದ್ದು ಮಾನ್ಯ ಮುಖ್ಯಮಂತ್ರಿಗಳ ಕೈಯಿಂದ ಪ್ರಶಸ್ತಿ ಸ್ವೀಕರಿಸಬೇಕು," ಎಂದು ಅವರು ಹೇಳಿದರು. ನನಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಬೇಕೆಂದು ಸಿಎನ್‌ಎನ್/ಐಬಿಎನ್ ವಾಹಿನಿಯ ಶ್ರೀ ಡಿ.ಪಿ. ಸತೀಶರು ಮುಖ್ಯಮಂತ್ರಿಗೆ ತಿಳಿಸಿದ್ದ ವಿಚಾರ ನನಗೆ ಆಮೇಲೆ ಗೊತ್ತಾಯಿತು. ನಾನು ಅದೇ ದಿನ ಸಂಜೆ ವಿಮಾನದಲ್ಲಿ ಬೆಂಗಳೂರಿಗೆ ಹೋದೆ.

ನವೆಂಬರ್ ೧ ರಂದು ಸಂಜೆ ಗಂಟೆ ೫.೩೦ಕ್ಕೆ ನಾನು ನನ್ನ ತಮ್ಮ ಚಿ. ಪ್ರಭಾಕರ ಮತ್ತು ಗೀತಾರೊಂದಿಗೆ ರವೀಂದ್ರ ಕಲಾಕ್ಷೇತ್ರಕ್ಕೆ ಹೋದೆ. ಹಿಂದಿನ ವರ್ಷ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದ್ದುದರಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿರಲಿಲ್ಲ. ಹೀಗಾಗಿ ಈ ವರ್ಷ ಒಟ್ಟು ೧೮೦ ಸಾಧಕರು ಪ್ರಶಸ್ತಿಯನ್ನು ಸ್ವೀಕರಿಸಲಿದ್ದರು. ಪ್ರತಿಯೊಬ್ಬರಿಗೆ ಪ್ರಶಸ್ತಿ ಫಲಕ, ರೂ ಒಂದು ಲಕ್ಷ ಗೌರವ ಧನ, ೨೦ ಗ್ರಾಂ ಚಿನ್ನದ ಪ್ರಶಸ್ತಿ ಪದಕ ಹಾಗೂ ಪ್ರಯಾಣದ ವೆಚ್ಚವನ್ನು ನೀಡಿ, ಶಾಲು ಹೊದೆಸಿ ಗೌರವಿಸಲಾಯಿತು. ನನ್ನೊಂದಿಗೆ ಶ್ರೀ ಪಿ. ದಯಾನಂದ ಪೈ, ಶ್ರೀ ಭದ್ರಗಿರಿ ಸರ್ವೋತ್ತಮ ಪೈ, ಮತ್ತು ಕುಂದಾಪುರ ಉಪ್ಪಿನಕುದ್ರು ಭಾಸ್ಕರ ಕಾಮತ್(ಗೊಂಬೆಯಾಟ) ಪ್ರಶಸ್ತಿ ಸ್ವೀಕರಿಸಿದ್ದರು.

ಇದು ನಾನು ಊಹಿಸದ ರೀತಿಯಿಂದ ಪ್ರಾಪ್ತವಾಗಿರುವ ಪ್ರಶಸ್ತಿ. ಶ್ರೀ ವೆಂಕಟರಮಣ ಸ್ವಾಮಿ ನೀಡಿದ ಭಾಗ್ಯವಿದು ಎಂದು ನನ್ನ ನಂಬಿಕೆ.

ಬಂಟವಾಳ ರೋಟರಿ ಕ್ಲಬ್ ಪ್ರಶಸ್ತಿ

ನಾನು ೧೯೭೭ರಿಂದ ೧೯೭೮ರವರೆಗೆ ಬಂಟವಾಳ ರೋಟರಿ ಕ್ಲಬ್ ಸದಸ್ಯನಾಗಿ ಅನೇಕ ರೀತಿಯ ಸಮಾಜ ಸೇವಾ ಕಾರ್ಯಗಳನ್ನು ಮಾಡಿದ್ದೆ. ಆದರೆ ೧೯೮೫ರ ಬಳಿಕ ನನಗೆ ಆ ಕ್ಲಬ್ ಜೊತೆ ಸಂಪರ್ಕ ಇಟ್ಟುಕೊಳ್ಳುವುದು ಸಾಧ್ಯವಾಗಿರಲಿಲ್ಲ. ೨೦೧೧ ರಲ್ಲಿ ರೋಟರಿ ಕ್ಲಬ್‌ನವರು

ಬಂಟವಾಳದ ಸಮೀಪವಿರುವ ವಗ್ಗ ಎಂಬ ಊರಿನಲ್ಲಿ ಮಾರ್ಚ್ ೨೬ರಂದು ಕೇಂದ್ರ ಸರಕಾರದ ಮಂತ್ರಿ ಸನ್ಮಾನ್ಯ ಶ್ರೀ ಎಂ ವೀರಪ್ಪ ಮೊಯಿಲಿಯವರ ಹಸ್ತದಿಂದ ನನಗೆ ಪ್ರಶಸ್ತಿ ನೀಡಿ ಸನ್ಮಾನ ಮಾಡಿದರು. ಅದು ಆ ಪರಿಸರದ ಬಡಜನರ ಮನೆಗಳಿಗೆ ವಿದ್ಯುದೀಕರಣವಾದ ಸಂದರ್ಭದಲ್ಲಿ ನಡೆದ ಸಮಾರಂಭವಾಗಿದ್ದರಿಂದ ಜನ ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು.

ಚಿ. ಬಸ್ತಿ ಆನಂದನಿಗೆ "ಪೋಗೊ" ಪ್ರಶಸ್ತಿ

ಚಿ. ದಿನ್ನುವಿನ ಮಗ ಚಿ. ಆನಂದನಿಗೆ 'ಪೋಗೊ' ವಾಹಿನಿಯವರು "ವಿಜ್ ಕಿಡ್" ಪ್ರಶಸ್ತಿ ನೀಡಿದ್ದು ನಮ್ಮ ಬಂಟವಾಳ 'ಬಸ್ತಿ' ಮನೆತನಕ್ಕೆ ತುಂಬಾ ಸಂತೋಷವನ್ನು ಮತ್ತು ಹೆಮ್ಮೆಯನ್ನು ಉಂಟು ಮಾಡಿದೆ. ಈ ಪ್ರಶಸ್ತಿಯಲ್ಲಿ ಅವನಿಗೆ ೧೮ ವರ್ಷ ತುಂಬಿದ ಮೇಲೆ ೫ ಲಕ್ಷ ರೂ ದೊರೆಯುವ ವಿಮೆಯನ್ನು ನೀಡಲಾಗಿತ್ತು. ಪ್ರಶಸ್ತಿ ಸ್ವೀಕರಣಕ್ಕಾಗಿ ಚಿ. ಆನಂದನು ತನ್ನ ತಂದೆ ಮತ್ತು ತಾಯಿಯವರ ಜೊತೆಯಲ್ಲಿ ದೆಹಲಿಯಿಂದ ಮುಂಬೈಗೆ ಹೋಗಿ ಬರುವ, ಮತ್ತು ಮುಂಬೈಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯನ್ನು 'ಪೊಗೊ' ವಾಹಿನಿಯವರೇ ಮಾಡಿದ್ದರು. ನಾವು ಆ ಸಮಾರಂಭವನ್ನು ಡಿಸೆಂಬರ್ ೨೮, ೨೦೦೮ರಂದು ಬೆಳಗ್ಗೆ ಹತ್ತು ಗಂಟೆಗೆ 'ಪೊಗೊ' ವಾಹಿನಿಯಲ್ಲಿ ವೀಕ್ಷಿಸಿ ಸಂತೋಷ ಹೊಂದಿದೆವು. ಇದು ನಮ್ಮ ಕುಟುಂಬಕ್ಕೆ ಗೌರವದ ಸಂದರ್ಭವೂ ಆಗಿತ್ತು.

●●

೬೯. ಟಿ.ವಿ ಮೋಹನದಾಸ ಪೈ

(VISION TVM 2030)

ಶ್ರೀ ಟಿ.ವಿ. ಮೋಹನದಾಸ ಪೈ ಬೆಂಗಳೂರಿನ ಜಗದ್ವಿಖ್ಯಾತ ಇನಫೊಸಿಸ್ ಟೆಕ್ನಾಲಜಿ ಕಂಪನಿಯಲ್ಲಿ ಅತ್ಯುನ್ನತ ಹುದ್ದೆಯಲ್ಲಿದ್ದ ಕೊಂಕಣಿ ಮಹನೀಯರು. ಅವರಲ್ಲಿರುವ ಅಪಾರ ತಿಳಿವಳಿಕೆ ಮತ್ತು ಮುಖಂಡತ್ವದ ಗುಣ ಎಲ್ಲರೂ ಬಲ್ಲರು. ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ನಡೆಯುತ್ತಿದ್ದ ದಿನಗಳಲ್ಲಿ ಅವರಿಂದ ಧನ ಸಹಾಯ ಪಡೆಯುವ ಇಚ್ಛೆಯನ್ನು ನಾನು ಶ್ರೀ ಪ್ರದೀಪ ಪೈಯವರಲ್ಲಿ ವ್ಯಕ್ತಪಡಿಸಿದ್ದೆ. ಈ ವಿಚಾರವನ್ನು ಶ್ರೀ ಪ್ರದೀಪ ಪೈಯವರು ಮೋಹನದಾಸ ಪೈಯವರ ಆತ್ಮೀಯರಾದ ಶ್ರೀ ರಾಮದಾಸ ಕಾಮತರಿಗೆ ತಿಳಿಸಿದ್ದರು. ಆದರೆ ಯೋಗಾಯೋಗ ಕೂಡಿ ಬಂದಿರಲಿಲ್ಲವೆಂದು ಕಾಣುತ್ತದೆ, ಅವರಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತಗೊಂಡಿರಲಿಲ್ಲ.

ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಕಾರ್ಯ ಮುಗಿದು, ನಾವು ಎರಡನೆಯ ಹಂತದ ಕೆಲಸವನ್ನು ಕೈಗೆ ಎತ್ತಿಕೊಳ್ಳಬೇಕೆಂದುಕೊಂಡಿದ್ದ ಸಂದರ್ಭದಲ್ಲಿ ಒಂದು ದಿನ ಶ್ರೀ ರಾಮದಾಸ ಕಾಮತರು ಪ್ರದೀಪ ಪೈಯವರಿಗೆ ದೂರವಾಣಿ ಕರೆ ಮಾಡಿ, "ಶ್ರೀ ಮೋಹನದಾಸ ಪೈಗಳು ಡಿಸೆಂಬರ್ ೩ (೨೦೦೯), ಗುರುವಾರ ಬೆಳಗ್ಗೆ ೮.೩೦ಕ್ಕೆ ವಿಶ್ವ ಕೊಂಕಣಿ ಕೇಂದ್ರವನ್ನು ನೋಡಲು ಬರುವರಿದ್ದಾರೆ," ಎಂದು ತಿಳಿಸಿದರು.

ಅದರಂತೆ ನಾವು ಶ್ರೀ ಮೋಹನದಾಸ ಪೈಯವರನ್ನು ಸ್ವಾಗತಿಸಲು ಬೆಳಗ್ಗೆ ಎಂಟು ಗಂಟೆಗೆ ವಿಶ್ವ ಕೊಂಕಣಿ ಕೇಂದ್ರಕ್ಕೆ ಹೋದೆವು. ಶ್ರೀ ಮೋಹನದಾಸ ಪೈ ಮತ್ತು ಶ್ರೀ ರಾಮದಾಸ ಕಾಮತರು ಸರಿಯಾಗಿ ೮.೩೦ಕ್ಕೆ ಬಂದು ತಲುಪಿದರು. ಶ್ರೀ ಪೈಯವರಿಗೆ ಕೊಂಕಣಿ ಭಾಷೆ, ಸಾಹಿತ್ಯ ಇತ್ಯಾದಿ ಕುರಿತು ಹೆಚ್ಚು ಮಾಹಿತಿ ಇರಲಿಲ್ಲವೆಂದು ಕಾಣುತ್ತದೆ. ಆದರೆ ಅವರಿಗೆ ನಮ್ಮ ಕೇಂದ್ರದ ಭವ್ಯ ಕಟ್ಟಡ ಮತ್ತು ಅದರಲ್ಲಿರುವ ವಿವಿಧ ವಿಭಾಗಗಳನ್ನು ನೋಡಿ ಸಂತೋಷವಾಯಿತು. ವಿಶ್ವ ಕೊಂಕಣಿ ಗ್ರಂಥಾಲಯದಲ್ಲಿ ೨೫೦೦ ಕೊಂಕಣಿ ಗ್ರಂಥಗಳಿರುವುದು ಅವರಿಗೆ ಆಶ್ಚರ್ಯವನ್ನು ಉಂಟು ಮಾಡಿತು. ಅವರು ತಕ್ಷಣ ತಮ್ಮ ತಾಯಿ ಶ್ರೀಮತಿ ವಿಮಲಾ ವಿ. ಪೈಯವರ ಹೆಸರಿನಲ್ಲಿ ವರ್ಷದ ಅತ್ಯುತ್ತಮ ಕೊಂಕಣಿ ಗ್ರಂಥಕ್ಕೆ ಒಂದು ಲಕ್ಷ ರೂಪಾಯಿಯ ಪ್ರಶಸ್ತಿಯನ್ನು ಘೋಷಿಸಿ, ಅದಕ್ಕಾಗಿ ತಾನು ಹತ್ತು ಲಕ್ಷ ರೂ ನೀಡುವುದಾಗಿ ತಿಳಿಸಿದರು.

ಆಮೇಲೆ ನಾವು ಅವರಿಗೆ ವಿಶ್ವ ಕೊಂಕಣಿ ಕೊಂದ್ರದಲ್ಲಿರುವ ಬೋರ್ಡ್ ರೂಮ್, ಕೀರ್ತಿ ಮಂದಿರ(ಹಾಲ್ ಆಫ್ ಫೇಮ್), ವಿಶ್ವ ಕೊಂಕಣಿ ಪ್ರಾಚೀನ ವಸ್ತು ಸಂಗ್ರಹಾಲಯ, ಶ್ರೀ ರೊನಾಲ್ಡ್ ಕೊಲಾಸೊರ ದೇಣಿಗೆಯಾದ ವಿಶ್ವ ಕೊಂಕಣಿ ಭಾಷಾ ಸಂಸ್ಥಾನ (ವರ್ಲ್ಡ್ ಇನ್ಸ್‌ಟಿಟ್ಯೂಟ್ ಆಫ್ ಕೊಂಕಣಿ ಲಾಂಗ್ವೆಜ್ ರೀಸರ್ಚ್ ಆಂಡ್ ಸ್ಟಡೀಸ್), ಮಿನಿ ಕನ್ವೆಶನ್ ಥಿಯೇಟರ್ ಇತ್ಯಾದಿ ತೋರಿಸಿದೆವು. ನಿಮ್ಮ ಮುಂದಿನ ನಿರ್ಮಾಣದ ಯೋಜನೆ ಯಾವುದು ಎಂದು ಅವರು ಕೇಳಿದರು. ನಾನು ಎರಡು ವಸತಿಗೃಹಗಳನ್ನು ನಿರ್ಮಿಸುವ ವಿಚಾರವನ್ನು ವಿವರವಾಗಿ ತಿಳಿಸಿದೆ. ಆಗ ಅವರು ತನ್ನ ತಂದೆ ಮತ್ತು ತಾಯಿಯವರ ಹೆಸರಿನಲ್ಲಿ ಒಂದು ವಸತಿಗೃಹವನ್ನು ತಾನೇ ನಿರ್ಮಿಸಿ ಕೊಡುವುದಾಗಿ ಆಶ್ವಾಸನೆ ನೀಡಿದರು.

ಅದೇ ರೀತಿ ಎರಡು ದಿನಗಳಲ್ಲಿಯೇ ಇನಫೊಸಿಸ್ ಕಂಪೆನಿಯ ಆರ್ಕಿಟೆಕ್ಟ್ 'ಮೆ. ಶೋಭಾ ಡೆವಲಪರ್ಸ್' ಇಂಜಿನಿಯರುಗಳು ಬಂದು ವಸತಿಗೃಹದ ನೀಲಿನಕ್ಷೆ ಪಡೆದು ಹೋದರು. ಆಮೇಲೆ ಶ್ರೀ ಪೈಯವರ ಆದೇಶದಂತೆ ಬೇರೆಯೇ ಒಂದು ರೀತಿಯ ವಿಸ್ತೃತ ನೀಲಿನಕ್ಷೆಯೊಂದನ್ನು ರಚಿಸಿ ನೀಡಿದರು. ನಾವು ೩೨ ಜನರು ಉಳಿದುಕೊಳ್ಳುವ ವಸತಿಗೃಹದ ಯೋಜನೆಯನ್ನು ರೂಪಿಸಿದ್ದೆವು. ಆದರೆ ಅವರು ಅದಕ್ಕೆ ಭಿನ್ನ ರೂಪವನ್ನು ನೀಡಿ ೫೮ ಜನರು ಉಳಿದುಕೊಳ್ಳುವ ವಸತಿಗೃಹದ ಯೋಜನೆಯನ್ನು ರೂಪಿಸಿ ನೀಡಿದರು. ನಾವು ಎರಡು ವಸತಿಗೃಹಗಳಿಗೆ ೮೦ ಲಕ್ಷದ ಅಂದಾಜನ್ನು ಹಾಕಿದ್ದರೆ, ಈಗ ಅವರು ನಿರ್ಮಿಸುವ ವಸತಿಗೃಹದ ಅಂದಾಜು ಖರ್ಚುವೆಚ್ಚ ೩ ಕೋಟಿಯಷ್ಟು ಆಗಿತ್ತು. ಆಮೇಲೆ ಸುತ್ತಮುತ್ತ ಗಿಡ, ಬಳ್ಳಿ,

ಮರಗಳನ್ನು ಬೆಳೆಸುವುದು, ಹೂದೋಟ ನಿರ್ಮಿಸುವುದೂ, ಶ್ರೀ ಮೋಹನದಾಸ ಪೈಯವರ ಯೋಜನೆಯಿಂದಾಗಿ ಕಾರ್ಯಗತವಾಯಿತು.

ವಿಶ್ವ ಕೊಂಕಣಿ ಕೇಂದ್ರಕ್ಕೆ ಪ್ರಥಮ ಬಾರಿ ಭೇಟಿ ನೀಡಿದ್ದ ಸಂದರ್ಭದಲ್ಲಿ ಶ್ರೀ ಪೈಯವರು "ಸಂದರ್ಶಕರ ಪುಸ್ತಕ"ದಲ್ಲಿ ವಿಶ್ವ ಕೊಂಕಣಿ ಕೇಂದ್ರದ ಯೋಜನೆ ಮತ್ತು ನಮ್ಮ ಕಾರ್ಯಗಳನ್ನು ಮುಕ್ತಕಂಠದಿಂದ ಹೊಗಳಿ ಬರೆದದ್ದು ಇದೆ.

ಶ್ರೀಮತಿ ವಿಮಲಾ ವಿ. ಪೈ ವಿಶ್ವ ಕೊಂಕಣಿ "ಅತ್ಯುತ್ತಮ ಕೊಂಕಣಿ ಗ್ರಂಥ ಪ್ರಶಸ್ತಿ"

ಶ್ರೀ ಮೋಹನದಾಸ ಪೈಯವರು ವಿಶ್ವ ಕೊಂಕಣಿ ಕೇಂದ್ರಕ್ಕೆ ಪ್ರಥಮ ಬಾರಿ ಭೇಟಿ ನೀಡಿದ್ದಾಗ ತಮ್ಮ ತಾಯಿ ಶ್ರೀಮತಿ ವಿಮಲಾ ವಿ. ಪೈಯವರ ಹೆಸರಿನಲ್ಲಿ "ಅತ್ಯುತ್ತಮ ಕೊಂಕಣಿ ಗ್ರಂಥ ಪ್ರಶಸ್ತಿ"ಯನ್ನು ನೀಡಿ ಕೊಂಕಣಿ ಸಾಹಿತಿಗಳಿಗೆ ಪ್ರೋತ್ಸಾಹ ನೀಡಬೇಕೆಂದು ತಿಳಿಸಿದ್ದರು. ಅದೇ ರೀತಿ ನಾನು ಕಳೆದ ಮೂರು ವರ್ಷಗಳಲ್ಲಿ ಪ್ರಕಟವಾಗಿರುವ ಕೊಂಕಣಿಯ ಅತ್ಯುತ್ತಮ ಗ್ರಂಥವನ್ನು ಆಯ್ಕೆ ಮಾಡಿ ವಿವರ ಕಳುಹಿಸಿಕೊಡಬೇಕೆಂದು ಹದಿನೈದು ಮಂದಿ ಕೊಂಕಣಿ ವಾಚಕರಿಗೆ, ಗ್ರಂಥ ಪ್ರಕಾಶಕ ಸಂಸ್ಥೆಗಳಿಗೆ ಪತ್ರ ಬರೆದು, ಕರ್ನಾಟಕ, ಗೋವೆ ಮತ್ತು ಕೇರಳದ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ತಿಳಿಸಿದ್ದೆ. ಆಮೇಲೆ ಅವರು ಕಳುಹಿಸಿ ಕೊಟ್ಟ ಗ್ರಂಥಗಳ ಪಟ್ಟಿಯನ್ನು ತಯಾರಿಸಿ, ಕೊಂಕಣಿಯ ಹಿರಿಯ ಸಾಹಿತಿಗಳೂ, ಕೊಂಕಣಿ ಭಾಷಾ ಚಳವಳಿಯ ನೇತಾರರೂ ಆಗಿರುವ ಶ್ರೀ ಉದಯ ಭೆಂಬ್ರೆಯವರ ನೇತೃತ್ವದಲ್ಲಿ ಫಾ. ಮಾರ್ಕ್ ವಾಲ್ಡರ್, ಡಾ. ತಾನಾಜಿ ಹಳರಣಕರ, ಶ್ರೀ ಗೋಕುಲದಾಸ ಪ್ರಭು ಮತ್ತು ಕವಿ ಮೆಲ್ವಿನ್ ರೊಡ್ರಿಗಸ್ ಅವರ ಜ್ಯೂರಿ ಸಮಿತಿಯನ್ನು ರಚಿಸಿ ವರ್ಷದ ಅತ್ಯುತ್ತಮ ಪುಸ್ತಕದ ಆಯ್ಕೆಯನ್ನು ನಡೆಸಬೇಕೆಂದು ವಿನಂತಿ ಮಾಡಿದೆ.

ಹೀಗೆ ೨೦೧೦ರ ಅತ್ಯುತ್ತಮ ಪುಸ್ತಕವಾಗಿ ಕೊಂಕಣಿ ಕಾದಂಬರಿ "ಹವಠಣ" ಆಯ್ಕೆಯಾಯಿತು. ಇದರ ಲೇಖಕರು ಗೋವೆಯ (ಮೂಲತಃ ಕಾರವಾರ ಬಳಿಯ ಮಾಜಾಳಿಯವರು) ಶ್ರೀ ಮಹಾಬಳೇಶ್ವರ ಸೈಲ. ಶ್ರೀಮತಿ ವಿಮಲಾ ವಿ. ಪೈ "ವಿಶ್ವ ಕೊಂಕಣಿ ಪುಸ್ತಕ ಪುರಸ್ಕಾರ" ಪ್ರದಾನ ಸಮಾರಂಭವು ಡಿಸೆಂಬರ್ ೧೮, ೨೦೧೦ರಂದು ಗೋವೆಯ ಮಡಗಾಂವ್ ರವೀಂದ್ರ ಭವನದಲ್ಲಿ ನಡೆಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗೋವೆಯ ಮುಖ್ಯಮಂತ್ರಿ ಮಾನ್ಯ ಶ್ರೀ ದಿಗಂಬರ ಕಾಮತರು ಭಾಗವಹಿಸಿದ್ದರು. ಒಡಿಯಾ ಭಾಷೆಯ ಸಾಹಿತಿ ಪ್ರೊ. ಪ್ರಫುಲ ಕುಮಾರ್ ಮೋಹಂತಿಯವರು ಪ್ರಶಸ್ತಿ ಪ್ರದಾನ ಮಾಡಿದರು. ವೇದಿಕೆಯ ಮೇಲೆ ಡಾ. ಪಿ. ದಯಾನಂದ ಪೈ, ಶ್ರೀ ಉದಯ ಭೆಂಬ್ರೆ, ಶ್ರೀಮತಿ ವಿಮಲಾ ವಿ. ಪೈ ಉಪಸ್ಥಿತರಿದ್ದರು. ಸಮಾರಂಭ ತುಂಬಾ ಸಂಭ್ರಮದಿಂದ ನಡೆದಿತ್ತು.

೨೦೧೦ ರ ಅತ್ಯುತ್ತಮ ಕೊಂಕಣಿ ಪುಸ್ತಕ ಪ್ರಶಸ್ತಿ ಪಡೆದ "ಹವಠಣ" ಕಾದಂಬರಿಯನ್ನು ಶ್ರೀಮತಿ ವಿದ್ಯಾ ಪೈಯವರು "ಕಿಲ್ನ್" ಹೆಸರಿನಲ್ಲಿ ಇಂಗ್ಲಿಷ್ ಭಾಷೆಗೆ, ಡಾ. ಸುನೀತಾ ಬಾಯಿಯವರು "ಚೂಲಾ" ಹೆಸರಿನಲ್ಲಿ ಮಲೆಯಾಳಿ ಭಾಷೆಗೆ, ಶ್ರೀ ಶಾ.ಮಂ. ಕೃಷ್ಣರಾಯರು "ಆವಿಗೆ" ಹೆಸರಿನಲ್ಲಿ ಕನ್ನಡ ಭಾಷೆಗೆ ಅನುವಾದಿಸಿದ್ದಾರೆ. ಈ ಎಲ್ಲಾ ಗ್ರಂಥಗಳನ್ನು ವಿಶ್ವ ಕೊಂಕಣಿ ಕೇಂದ್ರ ಪ್ರಕಟಿಸಿದೆ.

ಶ್ರೀಮತಿ ವಿಮಲಾ ವಿ. ಪೈ ವಿಶ್ವ ಕೊಂಕಣಿ ಅತ್ಯುತ್ತಮ ಕೊಂಕಣಿ ಪುಸ್ತಕ ಪ್ರಶಸ್ತಿ ಸಮಾರಂಭ : ೨೦೧೧

೨೦೧೧ ರ ಅತ್ಯುತ್ತಮ ಕೊಂಕಣಿ ಪುಸ್ತಕ ಪ್ರಶಸ್ತಿ ಗೋವೆಯ ಲೇಖಕರಾದ ಶ್ರೀ ದಾಮೋದರ ಮಾವಜೊರ "ಸುನಾಮಿ ಸೈಮನ್" ಕೊಂಕಣಿ ಕಾದಂಬರಿಗೆ ದೊರೆಯಿತು. ೨೦೧೧ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭದ ಭಾಗವಾಗಿ ಬೆಳಗ್ಗೆ ಟಿ.ವಿ. ರಮಣ ಪೈ ಸಭಾಭವನದಲ್ಲಿ "ಕೊಂಕಣಿ ಪುಸ್ತಕ ಜಾತ್ರಾ"ವನ್ನು ನಡೆಸಲಾಯಿತು. ಇದರ ಉದ್ಘಾಟನೆಯನ್ನು ಶ್ರೀಮತಿ ಸಂಧ್ಯಾ ಪೈ(ತರಂಗ ಪತ್ರಿಕೆಯ ಸಂಪಾದಕರು) ನೆರವೇರಿಸಿದರು.

ವಿಶ್ವ ಕೊಂಕಣಿ ಮಂಡಲ ಗೋಷ್ಠಿ (ದುಂಡು ಮೇಜು ಅಧಿವೇಶನ)

ಅದೇ ದಿನ ಬೆಳಗ್ಗೆ ಕೊಂಕಣಿ ಸಾಹಿತ್ಯ ಕಾರ್ಯ ವಿಧಿಗಳಲ್ಲಿಯೇ ವಿಶಿಷ್ಟ ಹಾಗೂ ವಿಶೇಷವೆನಿಸುವ "ವಿಶ್ವ ಕೊಂಕಣಿ ಮಂಡಲ ಗೋಷ್ಠಿ" (Round table Conference) ಯನ್ನು ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೊಂಕಣಿ ಭಾಷೆಯ ಖ್ಯಾತ ಸಾಹಿತಿಗಳು ಮತ್ತು ಕೊಂಕಣಿ ಭಾಷಿಕ ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳ ಸಾಹಿತಿಗಳ ನಡುವೆ ವಿಚಾರ ವಿನಿಮಯ ನಡೆಯಿತು. ಈ ಗೋಷ್ಠಿಯಲ್ಲಿ ಶ್ರೀ ಎ.ಜಿ. ಗೋಪಾಲಕೃಷ್ಣನ್,

ಶ್ರೀಮತಿ ಸಂಧ್ಯಾ ಎಸ್. ಪೈ(ಲೇಖಕಿ, ಪತ್ರಿಕಾ ಸಂಪಾದಕಿ), ಶ್ರೀ ಗೋಪಾಲಕೃಷ್ಣ ಪೈ(ಕನ್ನಡ ಲೇಖಕರು, ಸಾಹಿತ್ಯ ಅಕಾದೆಮಿ ಪ್ರಶಸ್ತಿ ವಿಜೇತರು), ಶ್ರೀ ಜಯಂತ ಕಾಯ್ಕಿಣಿ(ಕನ್ನಡ ಕವಿ, ಕಥೆಗಾರ ಮತ್ತು ಚಿತ್ರಸಾಹಿತಿ), ಡಾ. ಗೀತಾ ಶೆಣೈ(ಕನ್ನಡ ಲೇಖಕಿ, ಅನುವಾದಕಿ), ಶ್ರೀ ಎನ್. ಶಿವರಾಜ, ಪ್ರೊ. ಸುಧೀರ ತಾಡಕೊಡಕರ, ಶ್ರೀ ಆರ್. ಜಯಪ್ರಕಾಶ ಕೂಳೂರ, ಶ್ರೀ ಶಿವಾನಂದ ಶೆಣೈ, ಶ್ರೀ ಸುರೇಶ ಲೊಟ್ಲಿಕರ, ಮತ್ತು ಶ್ರೀ ವಿ. ಕೃಷ್ಣ ವಾದ್ಯಾರ ಭಾಗವಹಿಸಿದ್ದರು.

ಇವರೊಂದಿಗೆ ಕೊಂಕಣಿಯ ಖ್ಯಾತ ಸಾಹಿತಿಗಳಾದ ಶ್ರೀ ಉದಯ ಭೆಂಬ್ರೆ, ಶ್ರೀ ಪುಂಡಲೀಕ ನಾಯ್ಕ್, ಡಾ. ತಾನಾಜಿ ಹಳರಣಕರ, ಶ್ರೀ ದಾಮೋದರ ಮಾವಜೊ, ಫಾದರ್ ಮಾರ್ಕ್ ವಾಲ್ಡರ್, ಶ್ರೀಮತಿ ಜಯಶ್ರೀ ಶಾನಭಾಗ್, ಡಾ. ಸಿ.ಎನ್. ಶೆಣೈ, ಶ್ರೀ ಆರ್.ಎಸ್. ಭಾಸ್ಕರನ್, ಶ್ರೀ ಪಯನ್ನೂರು ರಮೇಶ ಪೈ, ಕೂಡ್ಲು ಆನಂದ ಶ್ಯಾನಭಾಗ್, ಶ್ರೀ ಹೇಮಾಚಾರ್ಯ, ಶ್ರೀ ಎಚ್.ಎಂ. ಪೆರ್ನಾಳ, ಶ್ರೀಮತಿ ಜ್ಯೂಡಿ ಪಿಂಟೊ ಕೂಡ ಇದ್ದರು. ಜೊತೆಗೆ ಕೊಂಕಣಿ ಭಾಷಿಕ ಅನುವಾದಕರಾದ ಡಾ.ಎಲ್. ಸುನೀತಾ ಬಾಯಿ, ಕೊಂಕಣಿ ಮಾಸಿಕ ಪತ್ರಿಕೆಯ ಸಂಪಾದಕ ಶ್ರೀ ದಿಲೀಪ ಬೋರಕಾರ(ಬಿಂಬ ಪ್ರಕಾಶನ, ಗೋವೆ), ಫಾದರ ಫ್ರಾನ್ಸಿಸ್ ರಾಡ್ರಿಗಸ್(ರಾಕ್ಣೊ, ಮಂಗಳೂರು) ಇದ್ದರು.

ಈ ಗೋಷ್ಠಿ ಸಂಜೆ ೪ ಗಂಟೆಯವರೆಗೆ ನಡೆದು, ಅದರ ಫಲಶ್ರುತಿಯಾಗಿ 'ಕೊಂಕಣಿಯಿಂದ ಸಾಹಿತ್ಯ ಕೃತಿಗಳು ಕನ್ನಡ, ಇಂಗ್ಲಿಷ್, ಹಿಂದಿ ಇತ್ಯಾದಿ ಭಾಷೆಗಳಿಗೆ ಅನುವಾದಗೊಂಡರೆ ದೇಶ, ವಿದೇಶಗಳಿಗೆ ಕೊಂಕಣಿ ಸಾಹಿತ್ಯದ ಪ್ರಚಾರವಾಗುತ್ತದೆ, ಅದೇ ರೀತಿ ಅನ್ಯಭಾಷೆಗಳ ಕೃತಿಗಳು ಕೊಂಕಣಿಗೆ ಅನುವಾದಗೊಂಡರೆ ಕೊಂಕಣಿ ವಾಚಕರಲ್ಲಿ ಸಾಹಿತ್ಯದ ಅಭಿರುಚಿ, ವಿಮರ್ಶಾ ಪ್ರವೃತ್ತಿ ಬೆಳೆಯುತ್ತದೆ, ಈ ದಿಕ್ಕಿನಲ್ಲಿ ವಿಶ್ವ ಕೊಂಕಣಿ ಕೇಂದ್ರ ಮತ್ತು ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯು ಗಮನವನ್ನು ಹರಿಸಿ ಹೆಚ್ಚಿನ ಕಾರ್ಯವನ್ನು ನಿರ್ವಹಿಸಬೇಕು' ಎಂಬ ನಿಲುವು ವ್ಯಕ್ತಗೊಂಡಿತು. ಈ ಗೋಷ್ಠಿಯಿಂದ ಕೊಂಕಣಿ ಸಾಹಿತಿಗಳು ಮತ್ತು ಕೊಂಕಣಿ ಮಾತೃಭಾಷೆಯಾಗುಳ್ಳ ಅನ್ಯ ಭಾಷಿಕ ಸಾಹಿತಿಗಳ ನಡುವೆ ಪರಸ್ಪರ ಪರಿಚಯ, ಮುಖಾಮುಖಿಯಾದದ್ದು ವಿಶೇಷ.

ಇದರ ಬಳಿಕ ವಿಶ್ವ ಕೊಂಕಣಿ ಕೇಂದ್ರವು ಅನುವಾದ ಕಾರ್ಯವನ್ನು ಕೈಗೆತ್ತಿಕೊಂಡು ಮುಂದೆ ಹೆಜ್ಜೆ ಇಟ್ಟಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸಣ್ಣಕತೆ, ಕಾದಂಬರಿ, ಕಾವ್ಯ ಮೊದಲಾದ ಪ್ರಕಾರಗಳಲ್ಲಿ ಕೊಂಕಣಿಯಿಂದ ಕನ್ನಡ, ಇಂಗ್ಲಿಷ್, ಮಲೆಯಾಳಿ ಭಾಷೆಗಳಿಗೆ ಮತ್ತು ಕನ್ನಡದಿಂದ ಕೊಂಕಣಿಗೆ ಅನುವಾದಗಳು ನಡೆದು, ಈ ಎಲ್ಲಾ ಗ್ರಂಥಗಳು ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಪ್ರಕಟಗೊಂಡಿವೆ ಮತ್ತು ವಿದ್ವಾಂಸರಿಂದ ಮೆಚ್ಚುಗೆಯನ್ನು ಗಳಿಸಿವೆ. ಅಲ್ಲದೆ ಹಳೆಯ ನಾಟಕಕೃತಿಗಳ ಹಸ್ತಪ್ರತಿಗಳನ್ನು ಸ್ವತಃ ಲೇಖಕರೇ ವಿಶ್ವ ಕೊಂಕಣಿ ಗ್ರಂಥಾಲಯಕ್ಕೆ ತಲುಪಿಸುತ್ತಿದ್ದಾರೆ.

ಪ್ರಶಸ್ತಿ ಸಮಾರಂಭ

೨೦೧೧ ರ ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರ ಪ್ರದಾನ ಸಮಾರಂಭ ಸಂಜೆ ೫.೩೦ಕ್ಕೆ ಪ್ರಾರಂಭವಾಯಿತು. ಬೆಂಗಳೂರಿನ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರೂ, ಕನ್ನಡದ ಪ್ರಸಿದ್ಧ ಲೇಖಕ, ಅನುವಾದಕರೂ ಆಗಿರುವ ಡಾ. ಪ್ರಧಾನ ಗುರುದತ್ತ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. .

೨೦೧೧ ರ ಅತ್ಯುತ್ತಮ ವಿಶ್ವ ಕೊಂಕಣಿ ಗ್ರಂಥ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಸಾಹಿತಿ ಶ್ರೀ ದಾಮೋದರ ಮಾವಜೊ ಅವರಿಗೆ ಒಂದು ಲಕ್ಷ ರೂ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ, ಶಾಲು ಹೊದಿಸಿ ಫಲಪುಷ್ಪ ನೀಡಿ ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಶ್ರೀಮತಿ ವಿಮಲಾ ವಿ. ಪೈ, ಶ್ರೀ ಟಿ.ವಿ. ಮೋಹನದಾಸ ಪೈ, ಶ್ರೀ ಯು. ರಾಮದಾಸ ಕಾಮತ, ಮತ್ತು ಶ್ರೀ ಉದಯ ಭೆಂಬ್ರೆಯವರು ಆಸೀನರಾಗಿದ್ದರು.

ಶ್ರೀ ಪ್ರಧಾನ ಗುರುದತ್ತರು ಮಾತನಾಡಿ ಕೊಂಕಣಿ ಭಾಷಿಕರು ಕನ್ನಡ ಸಾಹಿತ್ಯಕ್ಕೆ ನೀಡಿದ ದೇಣಿಗೆ ಮಹತ್ವ ಪೂರ್ಣವಾದುದು. ಕೊಂಕಣಿ ಮಾತೃಭಾಷೆಯಾಗಿ ಹೊಂದಿದ್ದ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ, ಪಂಜೆ ಮಂಗೇಶ ರಾವ್, ಯಶವಂತ ಚಿತ್ತಾಲ ಮೊದಲಾದ ಸಾಹಿತಿಗಳು ನಡೆಸಿದ ಕನ್ನಡ ಸಾಹಿತ್ಯಕ ಕಾರ್ಯಗಳನ್ನು ತಿಳಿಸುತ್ತಾ, "ಕೊಂಕಣಿ ಸಾಹಿತ್ಯಕಾರರನ್ನು ಹೊರತುಪಡಿಸಿದರೆ ಕನ್ನಡ ಸಾಹಿತ್ಯ ಶೂನ್ಯ" ಎಂದರು. ಅದಲ್ಲದೆ, ವಿಶ್ವ ಕೊಂಕಣಿ ಕೇಂದ್ರವು ಕೈಗೆತ್ತಿಕೊಂಡಿರುವ ಕೊಂಕಣಿ ಸಾಹಿತ್ಯ ಅಭಿವೃದ್ಧಿ ಕಾರ್ಯಗಳು, ಅದರಲ್ಲಿಯೂ ವಿಶೇಷವಾಗಿ ಅನುವಾದ ಕಾರ್ಯ ತುಂಬಾ

ಪ್ರಶಂಸನೀಯವಾದುದು ಎಂದು ಹೇಳಿದರು. ಶ್ರೀ ಉದಯ ಭೆಂಬ್ರೆಯವರು ಪ್ರಶಸ್ತಿ ದೊರೆತ "ಸುನಾಮಿ ಸೈಮನ್" ಕೃತಿಯ ಲೇಖಕ ಶ್ರೀ ದಾಮೋದರ ಮೌವಜೋರನ್ನು ಅಭಿನಂದಿಸಿದರು. ಅನಂತರ ಶ್ರೀಮತಿ ವಿಮಲಾ ವಿ. ಪೈ ಮತ್ತು ಶ್ರೀ ಟಿ.ವಿ. ಮೋಹನದಾಸ ಪೈಯವರು ಮಾತನಾಡಿದರು.

ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ಮುಂಬಯಿಯ ತ್ರಿವೇಣಿ ಕಲಾ ಸಂಗಮದವರ "ಋಣಾನುಬಂಧ" ಕೊಂಕಣಿ ನಾಟಕದ ಪ್ರದರ್ಶನ ನಡೆಯಿತು. ಹೀಗೆ ಬೆಳಗಿನಿಂದ ರಾತ್ರಿಯವರೆಗೆ ಕಾರ್ಯಕ್ರಮಗಳು ಬಹು ಯಶಸ್ವಿಯಾಗಿ ಜರಗಿದವು. ವಿಶ್ವ ಕೊಂಕಣಿ ಪುಸ್ತಕ ಜಾತ್ರೆಯಲ್ಲಿ ಹಲವು ಪುಸ್ತಕಗಳು ಮಾರಾಟವಾದವು. ಜನರೂ ಬಹಳ ಸೇರಿದ್ದರು.

೨೦೧೨ ರ ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರ ಸಮಾರಂಭ ಡಿಸೆಂಬರ್ ೧೨, ೨೦೧೨, ಬುಧವಾರದ ದಿನ ಮಂಗಳೂರಿನ ಶ್ರೀ ಟಿ.ವಿ. ರಮಣ ಪೈ ಸಭಾಂಗಣದಲ್ಲಿ ಸಂಜೆ ೫.೩೦ಕ್ಕೆ ಜರಗಿತು. ೨೦೧೨ ರ ಅತ್ಯುತ್ತಮ ವಿಶ್ವ ಕೊಂಕಣಿ ಗ್ರಂಥ ಪುರಸ್ಕಾರ ಗೋವೆಯ ಖ್ಯಾತ ಲೇಖಕ, ನಾಟಕಕಾರ ಶ್ರೀ ಪುಂಡಲೀಕ ಎನ್. ನಾಯ್ಕ ಅವರ "ರಂಗಕಾವ್ಯ" ಗ್ರಂಥಕ್ಕೆ ದೊರೆತಿತ್ತು. ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬೆಂಗಳೂರಿನಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಪ್ರಶಸ್ತಿ ಪುರಸ್ಕೃತರಿಗೆ ಒಂದು ಲಕ್ಷ ರೂ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ, ಶಾಲು ಹೊದೆಸಿ ಫಲಪುಷ್ಪ ನೀಡಿ ಸನ್ಮಾನಿಸಿದರು.

ಶ್ರೀ ಪುಂಡಳೀಕ ಎನ್. ನಾಯ್ಕ್ ಅವರು ಒಬ್ಬ ಉತ್ತಮ ಲೇಖಕರು ಮಾತ್ರವಲ್ಲ ಕೊಂಕಣಿ ಚಳವಳಿಯ ನೇತಾರರು, ಕೇಂದ್ರ ಸಾಹಿತ್ಯ ಅಕಾದೆಮಿಯ ಕೊಂಕಣಿ ಭಾಷಾ ಸಮಿತಿಯ ಅಧ್ಯಕ್ಷರು ಹಾಗೂ ಗೋವಾ ಕೊಂಕಣಿ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದವರು.

ಶ್ರೀಮತಿ ವಿಮಲಾ ವಿ. ಪೈ "ವಿಶ್ವ ಕೊಂಕಣಿ ಜೀವಿತ ಸಿದ್ಧಿ ಸಮ್ಮಾನ್"

ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರ ಪ್ರದಾನ ಕಾರ್ಯ ನಡೆದ ಬಳಿಕ "ವಿಮಲಾ ವಿ. ಪೈ ವಿಶ್ವ ಕೊಂಕಣಿ ಜೀವಿತ ಸಿದ್ಧಿ ಸಮ್ಮಾನ"ವನ್ನು ಕೊಂಕಣಿ ಚಳವಳಿಯ ನೇತಾರ, ಲೇಖಕ, ಕವಿ, ನಾಟಕ ಕಲಾವಿದರಾಗಿರುವ ಶ್ರೀ ಉದಯ ಭೆಂಬ್ರೆಯವರಿಗೆ ನೀಡಲಾಯಿತು. ಶ್ರೀಯುತರು ಚಿಕ್ಕ ವಯಸ್ಸಿನಿಂದಲೂ ಕೊಂಕಣಿ ಭಾಷೆ ಮತ್ತು ಸಾಹಿತ್ಯದ ಹಾಗೂ ಗೋವೆಯಲ್ಲಿ ಕೊಂಕಣಿ ಸಮುದಾಯದ ಉತ್ಕರ್ಷಕ್ಕಾಗಿ, ಅವರಲ್ಲಿ ಜಾಗೃತಿಯನ್ನು ಮೂಡಿಸುವುದಕ್ಕಾಗಿ ಶ್ರಮಿಸಿದವರು. ವೃತ್ತಿಯಲ್ಲಿ ನ್ಯಾಯವಾದಿ. ಇವರಿಗೂ ಮುಖ್ಯ ಅತಿಥಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಒಂದು ಲಕ್ಷ ರೂ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ, ಶಾಲು ಹೊದೆಸಿ ಫಲಪುಷ್ಪ ನೀಡಿ ಸನ್ಮಾನಿಸಿದರು. ಆಮೇಲೆ ಪ್ರಶಸ್ತಿ ಪುರಸ್ಕೃತರಾದ ಶ್ರೀ ಉದಯ ಭೆಂಬ್ರೆ ಮಾತನಾಡಿದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಶ್ರೀಮತಿ ವಿಮಲಾ ವಿ. ಪೈ ಅವರ ಸುಪುತ್ರರಾದ ಶ್ರೀ ಟಿ.ವಿ. ಮೋಹನದಾಸ ಪೈಯವರು ಭೆಂಬ್ರೆಯವರ ಅಸ್ಖಲಿತ ವಾಕ್ ಸರಣಿ ಮತ್ತು ಪ್ರಪುಲ್ಲಿತ ವಿಚಾರ ಮಂಡನೆಯಿಂದ ಪ್ರಸನ್ನರಾಗಿ ಅವರ ವಿಚಾರಸರಣಿಯ ಧ್ವನಿ ಮುದ್ರಣ ಮಾಡುವಂತೆ ಸೂಚಿಸಿದರು. ಅದೇ ರೀತಿ ಶ್ರೀ ಪುಂಡಳೀಕ ನಾಯ್ಕರ "ರಂಗ ಕಾವ್ಯ", "ರಂಗ ರಂಜನ" ಮತ್ತು "ರಂಗ ಶಿಲ್ಪ" ಈ ಮೂರು ನಾಟಕ ಗ್ರಂಥಗಳ ೫೦೦ ಪ್ರತಿಗಳನ್ನು ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಖರೀದಿಸಿ ಶಾಲೆ, ಕಾಲೇಜುಗಳು ಗ್ರಂಥಾಲಯಗಳಿಗೆ ತಲುಪಿಸಬೇಕೆಂಬ ಆದೇಶ ನೀಡಿದರು. ಅವರ ಮಾತಿನಂತೆ ನಾವು ಅದನ್ನು ಕಾರ್ಯಗತಗೊಳಿಸಿದ್ದೇವೆ.

ಬಸ್ತಿ ವಾಮನ ಶೆಣೈ "ಸೇವಾ ಪುರಸ್ಕಾರ"

೨೦೧೩ರಲ್ಲಿ ನನ್ನ ೮೦ನೇ ಜನ್ಮ ದಿವಸದ ಸಂದರ್ಭದಲ್ಲಿ ನನ್ನ ಅಭಿಮಾನಿಗಳು ಸೇರಿ ನನಗೆ ಸಾರ್ವಜನಿಕವಾಗಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಬೇಕೆಂದು ನಿರ್ಧರಿಸಿ "ಬಸ್ತಿ ವಾಮನ ಶೆಣೈ ಅಭಿನಂದನಾ ಸಮಿತಿ"ಯನ್ನು ರಚಿಸಿದರು. ಕರ್ನಾಟಕ ಸರಕಾರದಲ್ಲಿ ಅರಣ್ಯ ಖಾತೆ ಸಚಿವರಾಗಿರುವ ಬಂಟವಾಳದವರಾದ ಮಾನ್ಯ ಶ್ರೀ ಬಿ. ರಮಾನಾಥ ರೈಯವರು ಗೌರವ ಅಧ್ಯಕ್ಷರಾಗಿ ನನ್ನ ಅತ್ಯಂತ ಪ್ರೀತಿಯ ಡಾ. ಪಿ. ದಯಾನಂದ ಪೈಯವರು ಅಧ್ಯಕ್ಷರಾಗಿ, ಬಂಟವಾಳ ಶ್ರೀ ತಿರುಮಲ ವೆಂಕಟರಮಣ ದೇವಳದ ಆಡಳಿತ ಮೊಕ್ತೇಸರ ಶ್ರೀ ಮಾಣೂರು ಲಕ್ಷ್ಮಣ ಕಾಮತ(ಕಾರ್ಯಾಧ್ಯಕ್ಷರು), ಬೋಳಂತೂರು ಪ್ರಭಾಕರ ಪ್ರಭು(ಕಾರ್ಯದರ್ಶಿ), ಪೈಲೋಡಿ ನಾರಾಯಣ ಕಾಮತ(ಮುಖ್ಯ ಸಂಚಾಲಕ), ಶ್ರೀ ಪ್ರದೀಪ ಜಿ. ಪೈ (ಹಾಂಗ್ಯೋ ಐಸ್‌ಕ್ರೀಮ್ಸ್), ಶ್ರೀ ಬಿ. ಆರ್. ಭಟ್(ನಿವೃತ್ತ

ಜನರಲ್ ಮೆನೇಜರ್, ಕಾರ್ಪೊರೇಷನ್ ಬ್ಯಾಂಕ್) ಮೊದಲಾದವರನ್ನು ಒಳಗೊಂಡ ಒಂದು ಸ್ವಾಗತ ಸಮಿತಿಯನ್ನು ರಚಿಸಿಕೊಂಡು ನನ್ನ ತವರೂರಾದ ಬಂಟವಾಳದಲ್ಲಿ ನಾನು ಕಲಿತ ಎಸ್.ವಿ.ಎಸ್. ಪ್ರೌಢಶಾಲೆಯ ಮುಂದಿನ ಬಯಲು ಮಂಟಪದಲ್ಲಿ ದಿನಾಂಕ ೧೦-೧೧-೨೦೧೩ ರಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಬೆಳಗ್ಗೆ ೧೦ ಗಂಟೆಯಿಂದ ಮಧ್ಯಾಹ್ನದ ತನಕ ಶ್ರೀ ರಾಮದಾಸ ಕಾಮತ್ ಯು. ಅವರ ನೇತೃತ್ವದಲ್ಲಿ 'Youth in Pulbic Service and Cultural Life Today and Tomorrow' ಎಂಬ ವಿಚಾರ ಸಂಕಿರಣವನ್ನು ಜಿಲ್ಲೆಯ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿತ್ತು. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಮಾನ್ಯ ಡಾ. ಟಿ.ಸಿ. ಶಿವಶಂಕರ ಮೂರ್ತಿ, ಮೂಡಬಿದರೆ ಆಳ್ವಾಸ್ ವಿದ್ಯಾಸಂಸ್ಥೆಗಳ ಸ್ಥಾಪಕ ಡಾ. ಕೆ. ಮೋಹನ ಆಳ್ವಾ, ಖ್ಯಾತ ಸಾಹಿತಿ ಶ್ರೀ ಲಕ್ಷ್ಮೀನಾರಾಯಣ ಆಳ್ವಾ ಮುಂತಾದವರು ಭಾಗವಹಿಸಿ ವಿಚಾರ ಸಂಕಿರಣ ಯಶಸ್ವಿಯಾಗಿ ಜರುಗಿತ್ತು. ಅಲ್ಲದೇ ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಡಾ. ಮೀನಾ ಚಂದಾವರ್ಕರ್ ಅವರು ಬಿಜಾಪುರದಿಂದ ನನ್ನ ಮೇಲಿನ ಅಭಿಮಾನದಿಂದ ಬಂದು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ನನ್ನ ಅಭಿಮಾನಿಗಳಾದ ತುಂಬೆಯ ಶ್ರೀ ಬಿ. ಅಹಮ್ಮದ ಹಾಜೀ ಮೊಹಿಯುದ್ದೀನ ಮತ್ತು ವಿಶ್ವ ಕೊಂಕಣಿ ಕೇಂದ್ರದ ಪ್ರಮುಖ ದಾನಿಗಳಾದ ಶ್ರೀ ಟಿ.ವಿ. ಮೋಹನದಾಸ ಪೈಗಳವರು ತಮ್ಮ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಬಂದು ಬೆಳಗ್ಗಿನಿಂದಲೇ ಆಸೀನರಾಗಿದ್ದರು.

ಸಂಜೆ ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ದೇವಳದಿಂದ ನನ್ನನ್ನು ಮೆರವಣಿಗೆಯಲ್ಲಿ ಶೃಂಗರಿಸಿದ ವಾಹನದಲ್ಲಿ ಸಭಾ ಮಂಟಪಕ್ಕೆ ಕರೆತರಲಾಗಿತ್ತು. ಬಳಿಕ ಜರುಗಿದ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅಭಿನಂದನಾ ಭಾಷಣಗೈದ ಶ್ರೀ ಟಿ.ವಿ ಮೋಹನದಾಸ ಪೈಯವರು ನನ್ನ ವಿಶ್ವ ಕೊಂಕಣಿ ಕೇಂದ್ರ ಯೋಜನೆ, ಸಾರ್ವಜನಿಕ ಕ್ಷೇತ್ರದಲ್ಲಿ ನನ್ನ ಅರ್ಪಣಾ ಭಾವದ ಸೇವೆಗಳನ್ನು ಹೃತ್ಪೂರ್ವಕವಾಗಿ ಹೊಗಳಿದರು ಮತ್ತು ನನ್ನ ಸೇವಾ ಮನೋವೃತ್ತಿಯ ಅಭಿನಂದನೆಗಾಗಿ ಎರಡು ವಾರ್ಷಿಕ "ಬಸ್ತಿ ವಾಮನ ಶೆಣೈ ಸೇವಾ ಪುರಸ್ಕಾರ"ಗಳನ್ನು ಘೋಷಿಸಿದರು. ಈ ಪುರಸ್ಕಾರಗಳು ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ಸೇವ ಸಲ್ಲಿಸಿ ಹೆಸರು ಗಳಿಸಿದ ಒಬ್ಬರು ಕೊಂಕಣಿ ಮಹನೀಯರು ಮತ್ತು ಓರ್ವ ಕೊಂಕಣಿ ಮಹಿಳೆಗೆ ರೂ ಒಂದು ಲಕ್ಷದಂತೆ ೨ ಪುರಸ್ಕಾರಗಳು ವಿಶ್ವ ಕೊಂಕಣಿ ಕೇಂದ್ರದಿಂದ ಕೊಡಲಾಗುವುದು ಎಂದು ಘೋಷಿಸಿದರು. ನೆರೆದ ಸಭಿಕರು ದೀರ್ಘ ಕರತಾಡನದಿಂದ ಈ ಘೋಷಣೆಯನ್ನು ಸ್ವಾಗತಿಸಿದರು.

ಈಗ ಎರಡು ವರ್ಷಗಳಿಂದ ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಮೂರು "ಶ್ರೀಮತಿ ವಿಮಲಾ ವಿ. ಪೈ ವಿಶ್ವ ಕೊಂಕಣಿ ಸಾಹಿತ್ಯ ಪುರಸ್ಕಾರ"ಗಳು ಮತ್ತು ಎರಡು "ಬಸ್ತಿ ವಾಮನ ಶೆಣೈ ಜೀವನ ಸೇವಾ ಪುರಸ್ಕಾರ"ಗಳನ್ನು ನೀಡಲಾಗುತ್ತದೆ. ಈ ಐದು ಪುರಸ್ಕಾರಗಳ ಪ್ರಾಯೋಜಕರಾದ ಶ್ರೀ ಟಿ.ವಿ. ಮೋಹನದಾಸ ಪೈಯವರು ರೂ ೫ ಲಕ್ಷ ನಿಧಿಯನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ನೀಡುತ್ತಿದ್ದಾರೆ.

ಹೀಗೆ ಶ್ರೀ ಟಿ.ವಿ. ಮೋಹನದಾಸ ಪೈಯವರು ವಿಶ್ವ ಕೊಂಕಣಿ ಕೇಂದ್ರದ ಅಭಿವೃದ್ಧಿಗೆ ಮಾತ್ರವಲ್ಲ ಕೊಂಕಣಿ ಸಾಹಿತ್ಯ ಹಾಗೂ ಸಾಹಿತಿಗಳ ಬೆಳವಣಿಗೆಗೆ ಕೂಡ ದೇಣಿಗೆ ನೀಡಿದ್ದಾರೆ. ಕೊಂಕಣಿ ಭಾಷೆಯಲ್ಲಿ ಉತ್ತಮ ಸಾಹಿತ್ಯ ರಚನೆಯಾಗಬೇಕೆಂಬ ಉದ್ದೇಶದಿಂದ ವಿಶ್ವ ಕೊಂಕಣಿ ಸಾಹಿತ್ಯ ಪುಸ್ತಕ ಪ್ರಕಾಶನಕ್ಕೆ, ಕೊಂಕಣಿ ಸಾಹಿತ್ಯವನ್ನು ಇತರ ಭಾರತೀಯ ಭಾಷೆಗಳಿಗೆ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದ ನಡೆಸಿ ಪ್ರಕಟಿಸುವುದಕ್ಕೆ ಅಪಾರ ಹಣದ ಸಹಾಯವನ್ನೂ ನೀಡಿದ್ದಾರೆ.

ಅಷ್ಟು ಮಾತ್ರವಲ್ಲ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಪದ್ಮಭೂಷಣ ಶ್ರೀ ರವೀಂದ್ರ ಕೇಳೆಕರರ ಸಮಗ್ರ ಸಾಹಿತ್ಯ ಕೃತಿಗಳನ್ನು ಖರೀದಿಸಿ, ಅವುಗಳನ್ನು ಕೊಂಕಣಿ ಭಾಷಿಕರ ಆಡಳಿತವಿರುವ ಶಾಲೆ, ಕಾಲೇಜುಗಳ ಗ್ರಂಥಾಲಯಗಳಿಗೆ ದೇಣಿಗೆಯಾಗಿ ನೀಡುವುದಕ್ಕೂ ಧನ ಸಹಾಯ ನೀಡಿದ್ದಾರೆ. ಹೀಗಾಗಿ ನಾವು ರವೀಂದ್ರ ಕೇಳೆಕರರ ಸ್ಮರಣಾರ್ಥ ಅವರ ಕೊಂಕಣಿ ಕೃತಿಗಳನ್ನು ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸುತ್ತಿದ್ದೇವೆ. ಅದೇ ರೀತಿ ೨೦೧೨ರ ಅತ್ಯುತ್ತಮ ಕೊಂಕಣಿ ಪುಸ್ತಕ ಪುರಸ್ಕಾರ ಪಡೆದ ಶ್ರೀ ಪುಂಡಲೀಕ ನಾಯ್ಕರ ಕೃತಿಗಳನ್ನೂ ದೇಣಿಗೆ ರೂಪದಲ್ಲಿ ಕಳುಹಿಸುತ್ತಿದ್ದೇವೆ.

ಶ್ರೀ ಟಿ.ವಿ. ರಮಣ ಪೈ, ಶ್ರೀಮತಿ ವಿಮಲಾ ವಿ. ಪೈ ವಿಶ್ವ ಕೊಂಕಣಿ ವಸತಿಗೃಹ

ಶ್ರೀ ಟಿ.ವಿ. ಮೋಹನದಾಸ ಪೈಯವರ ತಾಯಿ ಶ್ರೀಮತಿ ವಿಮಲಾ ವಿ. ಪೈಯವರು ವಿಶ್ವ ಕೊಂಕಣಿ ವಸತಿಗೃಹದ

ನಿರ್ಮಾಣ ಕಾರ್ಯಕ್ಕೆ ಶಂಕು ಸ್ಥಾಪನೆ ಮಾಡಿದ ದಿನ ಅಕ್ಟೋಬರ್ ೧೧, ೨೦೧೧ರಂದು ನೀಡಿದ ಆದೇಶದಂತೆ ದಿನಾಂಕ ೧೧-೧೧-೨೦೧೧ ರಂದು ಬೆಳಗ್ಗೆ ೧೧.೦೦ ಗಂಟೆ ೧೧ ನಿಮಿಷಕ್ಕೆ ವಸತಿಗೃಹದ ಉದ್ಘಾಟನೆ ನೆರವೇರಿತು.

ಈ ಸಮಾರಂಭದಲ್ಲಿ ಸನ್ಮಾನ್ಯ ಶ್ರೀ ಆರ್.ವಿ. ದೇಶಪಾಂಡೆ, ಡಾ. ಪಿ. ದಯಾನಂದ ಪೈ(ಚೇರಮನ) ಮತ್ತು ಕರ್ನಾಟಕ ವಿಧಾನಸಭೆಯ ಉಪಸಭಾಪತಿ ಶಾಸಕ ಶ್ರೀ ಎನ್. ಯೋಗೀಶ ಭಟ್ ಮುಖ್ಯ ಅತಿಥಿಗಳಾಗಿದ್ದರು. ಇವರೊಂದಿಗೆ ವೇದಿಕೆಯ ಮೇಲೆ ಶ್ರೀಮತಿ ವಿಮಲಾ ವಿ. ಪೈ. ಶ್ರೀ ಟಿ.ವಿ. ಮೋಹನದಾಸ ಪೈ, ಅವರ ಸೋದರ ಶ್ರೀ ರಾಮಚಂದ್ರ ಪೈ, ಹಾಗೂ ಶ್ರೀ ಯು. ರಾಮದಾಸ ಕಾಮತರು ಉಪಸ್ಥಿತರಿದ್ದರು. ಸಂಚಾಲಕರಾಗಿ ಶ್ರೀ ಪ್ರದೀಪ ಪೈ, ಶ್ರೀ ಗಿರಿಧರ ಕಾಮತ, ಶ್ರೀ ಎಂ.ಎನ್. ಪೈ ಯವರು ಉತ್ತಮ ರೀತಿಯಿಂದ ಕಾರ್ಯ ನಿರ್ವಹಿಸಿದ್ದು, ಉದ್ಘಾಟನಾ ಸಮಾರಂಭ ಬಹಳ ವೈಭವೋಚಿತವಾಗಿ ನಡೆಯಿತು. ಅಪಾರ ಸಂಖ್ಯೆಯಲ್ಲಿ ನೆರೆದ ಸಭಿಕರು ಸಂತೋಷಪಟ್ಟಿದ್ದರು. ಕುಂದಾಪುರದಿಂದ ಶ್ರೀ ಕೆ.ಬಿ. ಖಾರ್ವಿಯವರು ತಮ್ಮ ಸಂಗಾತಿಗಳಾಗಿ ನೂರು ಮಂದಿ ಖಾರ್ವಿಯವರನ್ನು ಬಸ್ ಮಾಡಿ ಕರೆದುಕೊಂಡು ಬಂದಿದ್ದರು.

ಶ್ರೀ ಟಿ.ವಿ. ರಮಣ ಪೈ, ಶ್ರೀಮತಿ ವಿಮಲಾ ವಿ. ಪೈ ವಸತಿಗೃಹಕ್ಕೆ ಸುಮಾರು ಮೂರು ಕೋಟಿ ರೂ ಖರ್ಚಾಗಿದೆ. ಈ ಆರ್ಥಿಕ ಹೊರೆಯನ್ನು ಸಂಪೂರ್ಣವಾಗಿ ಶ್ರೀ ಟಿ.ವಿ. ಮೋಹನದಾಸ್ ಪೈ ಒಬ್ಬರೇ ನಿಭಾಯಿಸಿದ್ದಾರಲ್ಲದೆ, ವಸತಿಗೃಹವನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ದೇಣಿಗೆ ರೂಪದಲ್ಲಿ ನೀಡಿದ್ದಾರೆ. ಇದರಿಂದ ನನ್ನ ಕನಸಿನ ವಿಶ್ವ ಕೊಂಕಣಿ ಕೇಂದ್ರದ ಎರಡನೆಯ ಹಂತದ ಯೋಜನೆಯು ಬೇರೆ ಯಾರ ಬಳಿಯೂ ಹಣಕ್ಕಾಗಿ ಕೈ ಚಾಚದ ಹಾಗೆ, ಸುಲಲಿತವಾಗಿ, ಶ್ರೀ ವೆಂಕಟರಮಣ ಸ್ವಾಮಿಯ ಆಶೀರ್ವಾದದಿಂದ ಸಫಲವಾಗಿದೆ.

ವಸತಿಗೃಹದ ಬಳಕೆಯ ಕುರಿತು ಶ್ರೀ ಟಿ.ವಿ ಮೋಹನದಾಸ ಪೈಯವರು ನೀಡಿದ ಆದೇಶ ಹೀಗಿದೆ: "ವಸತಿಗೃಹದ ಕೋಣೆಗಳನ್ನು ಬಾಡಿಗೆಗೆ ನೀಡಬಾರದು. ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ಪಡೆದ ಶಿಕ್ಷಣಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಮೂರು ದಿನಗಳ ತರಬೇತಿ ಶಿಬಿರವನ್ನು ಆಯೋಜಿಸಿ, ಇದರಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ, ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ನಡೆಯುವ ವಿಚಾರಸಂಕಿರಣ, ಸಂಶೋಧನಾ ಕಾರ್ಯಗಳಲ್ಲಿ ಭಾಗಿಯಾಗುವವರಿಗೆ ಮಾತ್ರ ಈ ವಸತಿಗೃಹದಲ್ಲಿ ತಂಗುವ ಅವಕಾಶವನ್ನು ನೀಡಬೇಕು."

ಹೀಗಾಗಿ ವಿಶ್ವ ಕೊಂಕಣಿ ವಸತಿಗೃಹವು ಉನ್ನತ ಮತ್ತು ಸಮಾಜಮುಖಿ ಉದ್ದೇಶಗಳಿಗಾಗಿ ಮಾತ್ರವೇ ಬಳಕೆಯಾಗುತ್ತದೆ.

ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿ

ವಿಶ್ವ ಕೊಂಕಣಿ ಕೇಂದ್ರದ ಸ್ಥಾಪನೆಯ ಉದ್ದೇಶಗಳಿಗೆ ಅನುಗುಣವಾಗಿ ಕೊಂಕಣಿ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಲೋಕವೇದದ ಅಭಿವೃದ್ಧಿ ಯೋಜನೆಗಳು ಮುಂದುವರಿಯುತ್ತಿದ್ದ ಸಂದರ್ಭದಲ್ಲಿ, ಶ್ರೀ ಟಿ.ವಿ ಮೋಹನದಾಸ ಪೈಯವರು ವಿಶ್ವ ಕೊಂಕಣಿ ಕೇಂದ್ರಕ್ಕೆ ಒಂದು ಹೊಸ ದರ್ಶನವನ್ನು ನೀಡಿದರು.

"ಕೊಂಕಣಿ ಸಮುದಾಯದ, ಅದರಲ್ಲಿಯೂ ಮುಖ್ಯವಾಗಿ ಯುವ ವಿದ್ಯಾರ್ಥಿಗಳ ಪ್ರಗತಿಗಾಗಿ ಭವಿಷ್ಯದ ಕೊಂಕಣಿ ಪೀಳಿಗೆ ಉನ್ನತ ಶಿಕ್ಷಣದಿಂದ ಸಾಮಾಜಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಬಲಿಷ್ಠ ಸಮಾಜವಾಗಿ ರೂಪುಗೊಂಡು ದೇಶ, ವಿದೇಶಗಳಲ್ಲಿ ಎದ್ದು ಕಾಣುವಂತಾಗಬೇಕು" ಎಂಬ ಹೊಸ ದೃಷ್ಟಿಕೋನವನ್ನು ಅವರು ನಮ್ಮ ಮುಂದೆ ಪ್ರಸ್ತುತಪಡಿಸಿದರು ಮತ್ತು ಈ ಕುರಿತು ೨೫ ಯೋಜನೆಗಳ ಒಂದು ಪಟ್ಟಿಯನ್ನು ನೀಡಿ ವಿಶ್ವ ಕೊಂಕಣಿ ಕೇಂದ್ರಕ್ಕೆ ಹೊಸದೊಂದು ರೂಪ ನೀಡಿದರು. ನಾವು ಅದಕ್ಕೆ "VISION TVM ೨೦೩೦" ಎಂಬ ಹೆಸರು ನೀಡಿ, ಆ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿದ್ದೇವೆ.

ಮೊದಲನೆಯದಾಗಿ ಶ್ರೀ ಪೈಯವರು ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿರುವ ಕೊಂಕಣಿ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಬೇಕೆಂದು ತಿಳಿಸಿದ್ದರು. ಅಲ್ಲದೆ ಸ್ವತಃ ಅವರೇ ಕೆಲವರಿಂದ ಹಣ ಸಂಗ್ರಹಿಸಿ ೫೦ ಲಕ್ಷ ರೂ ದೇಣಿಗೆಯಾಗಿ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಗೆ ನೀಡಿದರು.

ಹೀಗೆ ಸ್ಥಾಪನೆಗೊಂಡ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಗೆ ಅಧ್ಯಕ್ಷರಾಗಿ ಶ್ರೀ ರಾಮದಾಸ ಯು ಕಾಮತ್, ಕಾರ್ಯದರ್ಶಿಗಳಾಗಿ ಶ್ರೀ ಪ್ರದೀಪ ಜಿ. ಪೈಯವರನ್ನೊಳಗೊಂಡ ಸಮಿತಿಯನ್ನು ರೂಪಿಸಲಾಯಿತು. ವಿದ್ಯಾರ್ಥಿ ವೇತನ ಪಡೆಯುವ ಅರ್ಹತೆಯನ್ನು ಹೀಗೆ ನಿಗದಿಪಡಿಸಲಾಗಿದೆ:

ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ೨.೫ ಲಕ್ಷಕ್ಕಿಂತ ಕಡಿಮೆ ಇರಬೇಕು. ಅವರು ಪಿ.ಯು.ಸಿ.ಯಲ್ಲಿ ಶೇಕಡ ೭೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. ಸಿಇಟಿ ಪರೀಕ್ಷೆಯಲ್ಲಿ ಅವರ ರ್‍ಯಾಂಕ್ ೨೦೦೦೦ದ ಒಳಗೆ ಇರಬೇಕು.

ನಾವು ವಿದ್ಯಾರ್ಥಿವೇತನವನ್ನು ನೀಡುವ ಕುರಿತು ಬೇರೆ ಬೇರೆ ದೈನಿಕ, ವಾರಪತ್ರಿಕೆ ಮತ್ತು ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದೆವು, ಈ ಕುರಿತು ನಮ್ಮ ಅಂತರ್ಜಾಲ ತಾಣದಲ್ಲಿ ವಿವರ ನೀಡಿದೆವು. ಇದರಿಂದ ಮುಂಬೈಯಿಂದ ಕೊಚ್ಚಿಯವರೆಗಿನ ಪ್ರದೇಶಗಳಲ್ಲಿನ ಸುಮಾರು ೫೦೦-೬೦೦ ವಿದ್ಯಾರ್ಥಿಗಳಿಂದ ಅರ್ಜಿಗಳು ಬಂದವು. ಇವುಗಳನ್ನು ವ್ಯವಸ್ಥಿತ ರೀತಿಯಿಂದ ತಪಾಸಣೆ ನಡೆಸಿ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ವೇತನ ದೊರೆಯುವಂತಾಗಬೇಕು ಎಂಬ ದೃಷ್ಟಿಯಿಂದ ಶ್ರೀ ಟಿ.ಡಿ. ಪೈ, ಗಿಲ್ಬರ್ಟ್ ಡಿಸೋಜಾ, ಮತ್ತು ಶ್ರೀ ಸಿ.ಡಿ.ಕಾಮತರು ಸದಸ್ಯರಾಗಿರುವ ಸಮಿತಿಯೊಂದನ್ನು ರಚಿಸಿದೆವು. ಈ ಸಮಿತಿಯ ಶಿಫಾರಸಿನ ಮೇರೆಗೆ ೧೬೦ ಕೊಂಕಣಿ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರೆಯುವಂತಾಯಿತು.

ಕೊಂಕಣಿ ಮಾನ್ಯತಾ ದಿನದಂದು, ಅಂದರೆ ಆಗಸ್ಟ್ ೨೦, ೨೦೧೧ರಂದು ಟಿ.ವಿ ರಮಣ ಪೈ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಅವರ ಹೆತ್ತವರ ಸಮ್ಮುಖದಲ್ಲಿ ವಿದ್ಯಾರ್ಥಿ ವೇತನವನ್ನು ಹಂಚಲಾಯಿತು. ವೇದಿಕೆಯ ಮೇಲೆ ಡಾ.ಪಿ. ದಯಾನಂದ ಪೈ, ಶ್ರೀ ರಾಮದಾಸ ಯು ಕಾಮತ್, ಶಾಸಕರಾಗಿದ್ದ ಶ್ರೀ ಎನ್. ಯೋಗೀಶ ಭಟ್, ದಾನಿ ಶ್ರೀ ಅಮ್ಮೆಂಬಳ ಅಣ್ಣಪ್ಪ ಕಾಮತಿ, ಕೆನರಾ ಪ್ರೌಢಶಾಲಾ ಅಸೋಸಿಯೇಶನ್ ಕಾರ್ಯದರ್ಶಿ ಶ್ರೀ ಎಂ. ಅಣ್ಣಪ್ಪ ಪೈ ಉಪಸ್ಥಿತರಿದ್ದರು. ಆಮೇಲೆ ಊಟದ ವ್ಯವಸ್ಥೆಯಿದ್ದು, ಅದು ಮುಗಿದ ಬಳಿಕ ವಿದ್ಯಾರ್ಥಿಗಳನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಅದರ ಕುರಿತು ಮಾಹಿತಿ ನೀಡಿದೆವು.

೨೦೧೦ ರಲ್ಲಿ ೧೬೦ ವಿದ್ಯಾರ್ಥಿಗಳಿಗೆ ೫೦ ಲಕ್ಷ ರೂ, ೨೦೧೧ ರಲ್ಲಿ ೧೪೦ ವಿದ್ಯಾರ್ಥಿಗಳಿಗೆ ೧.೨೦ ಕೋಟಿ ರೂ ಗಳನ್ನು ವಿದ್ಯಾರ್ಥಿ ವೇತನ ರೂಪದಲ್ಲಿ ಹಂಚಲಾಗಿದೆ. ಇದಲ್ಲದೆ ಕೇರಳದಲ್ಲಿ ಕೊಚ್ಚಿ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೆಲೆಸಿರುವ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿ ಪದವಿ ಶಿಕ್ಷಣ(ಬಿ.ಎ./ಬಿ.ಕಾಂ/ಬಿ.ಎಸ್ಸಿ) ಪಡೆಯುತ್ತಿರುವ ಕೊಂಕಣಿ ವಿದ್ಯಾರ್ಥಿಗಳಿಗೂ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನವನ್ನು ಹಂಚಲಾಗಿದೆ. ಈ ಎರಡೂ ಸಮಾರಂಭಗಳಲ್ಲಿ ಮಾನ್ಯ ಶ್ರೀ ಟಿ.ವಿ. ಮೋಹನದಾಸ ಪೈ ಮತ್ತು ಶ್ರೀ ರಾಮದಾಸ ಯು. ಕಾಮತರು ಭಾಗವಹಿಸಿದ್ದಾರೆ. ನಮ್ಮ ಕಾರ್ಯವು ಅವರಿಗೆ ಸಂತೋಷವನ್ನು ಉಂಟು ಮಾಡಿರುವುದು ಗೋಚರವಾಗಿದೆ.

ಶ್ರೀ ಟಿ.ವಿ. ಮೋಹನದಾಸ ಪೈಯವರು ನೀಡಿದ ಮಾರ್ಗದರ್ಶನದಲ್ಲಿ ಈಗ ವಿಶ್ವ ಕೊಂಕಣಿ ಕೇಂದ್ರವು Beneficiary Orientation Training Program (BOTP) ಕೈಗೆತ್ತಿಕೊಂಡಿದೆ. ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ಪಡೆದವರಲ್ಲಿ ೩೦-೪೦ ಕೊಂಕಣಿ ವಿದ್ಯಾರ್ಥಿಗಳ ಒಂದೊಂದು ಪಂಗಡವನ್ನು ಮಾಡಿ, ಈ ಪ್ರತಿಯೊಂದು ಪಂಗಡವನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ಕರೆಯಿಸಿ ೩ ದಿನಗಳ ಶಿಬಿರವನ್ನು ನಡೆಸಲಾಗುತ್ತಿದೆ. ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಕೊಂಕಣಿ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಯ ಕುರಿತು ಮಾಹಿತಿ ನೀಡಲಾಗುತ್ತದೆ; ಅವರಿಗೆ ವ್ಯಾಕರಣಬದ್ಧವಾಗಿ ಇಂಗ್ಲಿಷನಲ್ಲಿ ಮಾತನಾಡಲು ಕಲಿಸಲಾಗುತ್ತದೆ; ಸಂದರ್ಶನಗಳಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುವಾಗ ಮಾತನಾಡುವ ವೈಖರಿಯನ್ನು ತಿಳಿಸಿ ಹೇಳಲಾಗುತ್ತದೆ; ಇವೆಲ್ಲವನ್ನೂ ತಜ್ಞ ತರಬೇತಿದಾರರ ಮಾರ್ಗದರ್ಶನದಲ್ಲಿ ನಡೆಸಲಾಗುತ್ತದೆ. ಈ ತರಬೇತಿಯ ಉದ್ದೇಶ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಗಿಸಿದ ಬಳಿಕ ಆತ್ಮವಿಶ್ವಾಸ ತುಂಬಿದ ಸಮರ್ಥ ವ್ಯಕ್ತಿಗಳಾಗಿ ರೂಪುಗೊಂಡು ಬದುಕಿನಲ್ಲಿ ಮುಂದುವರಿಯು ವಂತಾಗಬೇಕು ಎನ್ನುವುದಾಗಿದೆ. ಈ ಮೂರು ದಿನಗಳ ಶಿಬಿರದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಿಶ್ವ ಕೊಂಕಣಿ ಕೇಂದ್ರದ ವಸತಿಗೃಹದಲ್ಲಿ ತಂಗುವ ವ್ಯವಸ್ಥೆ, ಊಟ ಉಪಹಾರದ ವ್ಯವಸ್ಥೆಯನ್ನೂ ಮುಕ್ತವಾಗಿ ಒದಗಿಸಲಾಗುತ್ತದೆ.

ಇದರ ಬಳಿಕ ಮುಂದಿನ ಹಂತವಾಗಿ "ಕ್ಷಮತಾ" ಅಥವಾ Konkani Students Higher Achievement Motivation And Training Academy ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ. ಜೊತೆಗೆ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳಿಗೆ ಅವರ ಪಠ್ಯ ವಿಷಯಕವಾಗಿ ಮಾಹಿತಿಯ ಆವಶ್ಯಕತೆ ಇದ್ದರೆ, ಅದಕ್ಕೆ ಪೂರಕ ಮಾಹಿತಿಯನ್ನು ಒದಗಿಸಲು ಶ್ರೀ ಪಿ.ಡಿ. ಶೆಣೈ(ನಿವೃತ್ತ ಕಾರ್ಯದರ್ಶಿ, ಕೇಂದ್ರ ಸರಕಾರದ

ಕಾರ್ಮಿಕ ಮಂತ್ರಾಲಯ) ಅವರ ನೇತೃತ್ವದಲ್ಲಿ Mentorship Program Committee ರೂಪುಗೊಂಡಿದೆ.

ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ಪಡೆದವರ ಶೈಕ್ಷಣಿಕ ಹಾಜರಾತಿ, ಅವರ ನಡತೆಯ ಕುರಿತು ಆಯಾ ವಿದ್ಯಾಸಂಸ್ಥೆಗಳ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ತರಿಸಿಕೊಳ್ಳುವ ವ್ಯವಸ್ಥೆಯೂ ಇದೆ. ಈ ರೀತಿ ವಿಶ್ವ ಕೊಂಕಣಿ ಕೇಂದ್ರದ ವತಿಯಿಂದ ಕೊಂಕಣಿ ವಿದ್ಯಾರ್ಥಿಗಳು ಧನ ಸಹಾಯ ಪಡೆಯುವುದಷ್ಟೇ ಅಲ್ಲ, ಅವರು ಬಿಜಿಟಿಪಿ ಮತ್ತು ಕ್ಷಮತಾ ಯೋಜನೆಗಳ ಫಲಾನುಭವಿಗಳಾಗಿ ತಮ್ಮ ಉನ್ನತ ಶಿಕ್ಷಣವನ್ನು ಪೂರೈಸಿದ ಬಳಿಕ ಓರ್ವ ಪರಿಪೂರ್ಣ ನಾಗರಿಕರಾಗಿ, ಸಮಾಜದ ಮುಂಚೂಣಿಯಲ್ಲಿ ಗುರುತಿಸಿಕೊಳ್ಳುವ ಅರ್ಹತೆಯನ್ನು ಹೊಂದುವರು. ಇಂತಹ ಒಂದು ಸದುದ್ದೇಶದ ಮಹತ್ವಪೂರ್ಣ ದರ್ಶನವನ್ನು ಶ್ರೀ ಟಿ.ವಿ. ಮೋಹನದಾಸ ಪೈಯವರು ನಮ್ಮ ಮುಂದೆ ಪ್ರಸ್ತುತಪಡಿಸಿದ್ದಾರೆ ಮತ್ತು ಈ ಕಾರ್ಯದ ಸಾಫಲ್ಯಕ್ಕಾಗಿ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಯ ಅಧ್ಯಕ್ಷರಾಗಿ ಶ್ರೀ ರಾಮದಾಸ ಯು. ಕಾಮತ್ ಹಾಗೂ ಕಾರ್ಯದರ್ಶಿಗಳಾಗಿ ಶ್ರೀ ಪ್ರದೀಪ ಪೈ, ಶ್ರೀ ಗಿರಿಧರ ಕಾಮತ ಮತ್ತು ಶ್ರೀ ಎಮ್.ಎನ್. ಪೈಯವರು ಅಹರ್ನಿಶಿ ದುಡಿಯುತ್ತಿದ್ದಾರೆ.

ಈ ಯೋಜನೆಯಿಂದ ವಿಶ್ವ ಕೊಂಕಣಿ ಕೇಂದ್ರ ಮತ್ತು ಈ ಕೇಂದ್ರದ ಉದ್ದೇಶ ನಾಲ್ಕೂ ರಾಜ್ಯಗಳಲ್ಲಿರುವ ಕೊಂಕಣಿ ಸಮಾಜದ ಮನೆಮನೆಗೆ ಮತ್ತು ಸಾರ್ವತ್ರಿಕವಾಗಿಯು ಕೊಂಕಣಿ ವ್ಯಕ್ತಿಗಳಿಗೆ ತಲುಪುವಂತಾಗಿದೆ ಎನ್ನುವ ನಂಬಿಕೆ ನನ್ನದು.

ಶ್ರೀ ರಾಮದಾಸ ಯು. ಕಾಮತ್ ಮತ್ತು ಶ್ರೀ ಪ್ರದೀಪ ಜಿ. ಪೈ

"ಆನೆಯೊಂದನ್ನು ಹಿಡಿಯ ಬೇಕಾದರೆ ಮತ್ತೊಂದು ಆನೆ ಬೇಕಾಗುತ್ತದೆ" ಎಂಬ ಪ್ರಚಲಿತ ಹೇಳಿಕೆ ಇದೆ. ಇದನ್ನು ನಾನು ಇಲ್ಲಿ ಯಾಕೆ ಉಲ್ಲೇಖಿಸಿದ್ದೇನೆಂದರೆ, ನನಗೆ ಬೆಂಗಳೂರಿನ ಇನಫೊಸಿಸ್ ಕಂಪನಿಯಲ್ಲಿ ಉನ್ನತ ಅಧಿಕಾರ ಸ್ಥಾನದಲ್ಲಿರುವ ಶ್ರೀ ಟಿ.ವಿ. ಮೋಹನದಾಸ್ ಪೈ ಮತ್ತು ಶ್ರೀ ರಾಮದಾಸ್ ಯು. ಕಾಮತರ ಪರಿಚಯ ಇರಲಿಲ್ಲ. ಅವರನ್ನು ಬಲ್ಲವರು ಕೂಡ ಯಾರೆಂದು ತಿಳಿದಿರಲಿಲ್ಲ. ಅವರಿಬ್ಬರು ಮಹಾದಾನಿಗಳೆಂದು ಮಾತ್ರ ನಾನು ಕೇಳಿ ತಿಳಿದಿದ್ದೆ. ಒಂದು ದಿನ ನನ್ನ ಮೇಲೆ ತುಂಬಾ ಪ್ರೀತಿ ಮತ್ತು ಅಭಿಮಾನವಿರುವ ಶ್ರೀ ಪ್ರದೀಪ ಪೈಯವರಲ್ಲಿ ವಿಶ್ವ ಕೊಂಕಣಿ ನಿರ್ಮಾಣ ಕಾರ್ಯಕ್ಕಾಗಿ ದೇಣಿಗೆ ಕೇಳಲು ಹೋಗಿದ್ದ ಸಮಯದಲ್ಲಿ, ಅವರೊಂದಿಗೆ ಮಾತನಾಡುತ್ತಾ 'ಈ ಇಬ್ಬರು ಮಹನೀಯರನ್ನು ತಿಳಿದವರು ಯಾರಾದರೂ ಇದ್ದರೆ ಅವರ ಮೂಲಕ ದೇಣಿಗೆ ಪಡೆಯಬಹುದಿತ್ತು' ಎಂದು ಹೇಳಿದ್ದೆ. ಆಗ ಶ್ರೀ ಪ್ರದೀಪ ಪೈಯವರು, "ನನಗೆ ರಾಮದಾಸ ಕಾಮತರ ಪರಿಚಯವಿದೆ. ಅವರು ಯಾವಾಗಲಾದರೂ ನನ್ನ ಕಚೇರಿಗೆ ಬರುತ್ತಿರುತ್ತಾರೆ. ಅವರು ಬರುವುದಿದ್ದರೆ ನಿಮಗೆ ತಿಳಿಸುತ್ತೇನೆ. ನೀವೂ ಬನ್ನಿ. ಮೊದಲು ನಾವು ರಾಮದಾಸ ಕಾಮತರ ಬಳಿ ವಿಶ್ವ ಕೊಂಕಣಿ ಕೇಂದ್ರದ ಕುರಿತು ಮಾತನಾಡೋಣ. ಅನಂತರ ಅವರ ಮೂಲಕ ಮೋಹನದಾಸ ಪೈಯವರನ್ನು ಸಂಪರ್ಕಿಸೋಣ," ಎಂದರು

ಅದೇ ರೀತಿ ಕೆಲವೇ ದಿನಗಳಲ್ಲಿ ಶ್ರೀ ರಾಮದಾಸ ಕಾಮತರು ಪ್ರದೀಪ ಪೈಯವರಲ್ಲಿಗೆ ಬಂದರು. ಅದೇ ಸಮಯದಲ್ಲಿ ನನಗೆ ಅಲ್ಲಿಗೆ ಬರುವಂತೆ ಪ್ರದೀಪ ಪೈಯವರು ಫೋನ್ ಮಾಡಿ ಸೂಚನೆ ನೀಡಿದರು. ಆಗ ನಾನು ಸಂತೋಷಕುಮಾರ ಗುಲ್ವಾಡಿಯವರ ಕೊಂಕಣಿ ಬಾಲಗೀತೆಗಳ ಸಂಗ್ರಹ "ತಾ ತಾ ತಿಂಗಣ" ಮತ್ತು ಅದರ ಧ್ವನಿ ಮುದ್ರಿತ ಸಿಡಿ, ಜ್ಯೋತ್ಸ್ನಾ ಕಾಮತರ ಹೋವಿ ಸಂಗ್ರಹ "ಸುರಗ್ಯಾಸರ" ಮತ್ತು ಅದರ ಧ್ವನಿ ಮುದ್ರಿತ ಸಿಡಿ, ಹಾಗೂ ಇತರ ಎರಡು ಗ್ರಂಥಗಳನ್ನು ತೆಗೆದುಕೊಂಡು ಹೋದೆ. ಶ್ರೀ ರಾಮದಾಸ ಕಾಮತರಿಗೆ ಅದುವರೆಗೆ ಕೊಂಕಣಿ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಡೆದ ಕಾರ್ಯಗಳಾಗಲೀ, ವಿಶ್ವ ಕೊಂಕಣಿ ಕೇಂದ್ರದ ಕುರಿತಾದ ನನ್ನ ದರ್ಶನವಾಗಲೀ ತಿಳಿದಿರಲಿಲ್ಲವೆಂದು ಕಾಣುತ್ತದೆ. ನಾನು ಅದನ್ನು ವಿವರವಾಗಿ ಹೇಳಿದಾಗ ಅವರು ಆಶ್ಚರ್ಯಚಕಿತರಾದರು. ಆಮೇಲೆ ಅವರು ಕೊಂಕಣಿ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ನನ್ನ ಬೇರೆ ಯೋಜನೆಗಳ ಕುರಿತು ವಿಚಾರಿಸಿದರು. ನಾನು ಅದನ್ನು ತಿಳಿಸಿದ ಬಳಿಕ ಕೊಂಕಣಿ ಗ್ರಂಥ ಪ್ರಕಾಶನಕ್ಕಾಗಿ ತಮ್ಮ ದೇಣಿಗೆಯನ್ನು ಘೋಷಿಸಿದರು. ಆಮೇಲಿನ ದಿನಗಳಲ್ಲಿ ಶ್ರೀ ಎಂ. ಮಾಧವ ಪೈಯವರು ರಚಿಸಿದ ಕನ್ನಡ–ಕೊಂಕಣಿ ರತ್ನಕೋಶ ಹಾಗೂ ಇನ್ನಿತರ ಕಾರ್ಯಗಳಿಗೆ ಶ್ರೀ ರಾಮದಾಸ ಕಾಮತರು ೮ ಲಕ್ಷ ರೂ ನೀಡಿದ್ದಾರೆ.

ವಿಶ್ವ ಕೊಂಕಣಿ ಕೇಂದ್ರ ಪ್ರಾರಂಭವಾಗಿ ಎಂಟು ತಿಂಗಳು ಕಳೆದ ಬಳಿಕ ಶ್ರೀ ರಾಮದಾಸ ಕಾಮತರು ಪ್ರದೀಪ ಪೈಯವರಿಗೆ ದೂರವಾಣಿ ಕರೆ ಮಾಡಿ, ತಾನು ಶ್ರೀ ಮೋಹನದಾಸ

ಪೈಯವರನ್ನು ವಿಶ್ವ ಕೊಂಕಣಿ ಕೇಂದ್ರಕ್ಕೆ ಕರೆದುಕೊಂಡು ಬರುವುದಾಗಿ ತಿಳಿಸಿದ್ದರು. ಅದೇ ರೀತಿ ಅವರಿಬ್ಬರು ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಿದ್ದರು. ಶ್ರೀ ಮೋಹನದಾಸ ಪೈಯವರು ಕೇಂದ್ರದ ಕಟ್ಟಡ ಹಾಗೂ ಕೊಂಕಣಿ ಭಾಷೆ, ಸಾಹಿತ್ಯ, ಕಲೆ ಮತ್ತು ಜಾನಪದ ಕುರಿತು ನನ್ನ ದರ್ಶನದ ಮಹತ್ವನ್ನು ತಿಳಿದುಕೊಂಡು, ನಮ್ಮ ಕನಸನ್ನು ಸಾಕಾರಗೊಳಿಸಲು ತಮ್ಮ ಕೆಲವು ಯೋಜನೆಗಳನ್ನು ನಮ್ಮ ಮುಂದೆ ಇಟ್ಟರು. ಅದೇ ರೀತಿ ನಾವು ಅದಕ್ಕೆ ಟಿವಿಎಂ–೩೦ ಎಂಬ ಹೆಸರನ್ನಿಟ್ಟು ಕಾರ್ಯಗಳನ್ನು ನಡೆಸುತ್ತಿದ್ದೇವೆ. (ಈಗಾಗಲೇ ಆ ವಿವರಗಳನ್ನು ನೀಡಲಾಗಿದೆ)

ಶ್ರೀ ಮೋಹನದಾಸ ಪೈಯವರು ತಿಳಿಸಿದಂತೆ ನಾವು ಸ್ಥಾಪಿಸಿದ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿ ಯೋಜನೆಗೆ ಶ್ರೀ ರಾಮದಾಸ ಕಾಮತರು ಅಧ್ಯಕ್ಷರಾಗಿ ಮತ್ತು ಶ್ರೀ ಪ್ರದೀಪ ಪೈಯವರು ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ಪ್ರದೀಪ ಪೈ ಅವರಿಗೆ ತಮ್ಮ "ಹಾಂಗ್ಯೊ ಐಸ್‌ಕ್ರೀಮ್" ಉದ್ದಿಮೆಯ ಜವಾಬ್ದಾರಿ ಬೆಟ್ಟದಷ್ಟಿದ್ದರೂ, ಅವರು ನಮ್ಮ ವಿದ್ಯಾರ್ಥಿ ವೇತನ ನಿಧಿಯ ಕಾರ್ಯಕ್ಕಾಗಿ ಹಗಲಿರುಳು ದುಡಿಯುತ್ತಿದ್ದಾರೆ. ಅವರು ಮತ್ತು ಅವರ ಪತ್ನಿ ಶ್ರೀಮತಿ ದೀಪಾ ಪೈಯವರು ನನ್ನನ್ನು ಬಹಳ ಪ್ರೀತಿ, ಗೌರವದಿಂದ ಕಾಣುತ್ತಾರೆ. ಇಂದು ಮಂಗಳೂರಿನಲ್ಲಿ ನಡೆಯುವ ಅನೇಕ ಸಾರ್ವಜನಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶ್ರೀ ಪ್ರದೀಪ ಪೈಯವರಿಂದ ವಿಶ್ವ ಕೊಂಕಣಿ ಕೇಂದ್ರದ ಧ್ಯೇಯಧೋರಣೆಗಳನ್ನು ಕಾರ್ಯರೂಪಕ್ಕೆ ತರುವ ಮಾರ್ಗದಲ್ಲಿ ಧನ ಸಹಾಯ ಸಲ್ಲುತ್ತಿದೆ. ಆದರೆ ಅವರು ಪ್ರಸಿದ್ಧಿಯನ್ನಾಗಲೀ ಅಥವಾ ಸ್ಥಾನಮಾನದ ಅಪೇಕ್ಷೆಯನ್ನಾಗಲೀ ಹೊಂದಿಲ್ಲ.

ಈ ಎಲ್ಲವೂ ಸಾಧ್ಯವಾಗಿರುವುದು ಶ್ರೀ ರಾಮದಾಸ ಕಾಮತರ ಮತ್ತು ಶ್ರೀ ಮೋಹನದಾಸ ಪೈಯವರ ನಿಕಟ ಹಾಗೂ ವಿಶ್ವಾಸದ ಪ್ರತೀಕವಾಗಿ. ರಾಮದಾಸ ಕಾಮತರು ಪ್ರದೀಪ ಪೈಯವರಿಗೆ ಹತ್ತಿರದವರಾಗಿದ್ದರಿಂದ ಇವೆಲ್ಲವೂ ಘಟಿಸಿವೆ ಎಂಬುದು ನನ್ನ ನಂಬಿಕೆ. ಅದು ವಿಶ್ವ ಕೊಂಕಣಿ ಕೇಂದ್ರದ ಮೇಲೆ ಹಾಗೂ ನನ್ನ ಮೇಲೆ ಇರುವಂತಹ ಪರಮಾತ್ಮನ ದಯೆ ಎಂದು ನಾನು ತಿಳಿಯುತ್ತೇನೆ.

●●

೫೦. ವಿಶ್ವ ಕೊಂಕಣಿ ಬಾಲ ನಾಟಕ ತರಬೇತಿ ಮತ್ತು ನಾಟಕ ಪ್ರದರ್ಶನ

ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಬಳಿಕ ವಿಶ್ವ ಕೊಂಕಣಿ ನಾಟಕ ಅಕಾಡೆಮಿಯನ್ನು ಪ್ರಾರಂಭಿಸುವ ನನ್ನ ಯೋಜನೆಗೆ ಸಮಯ ಹಿಡಿಯಿತು, ಆದರೂ, ಕೊಂಕಣಿ ಭಾಷಿಕ ಪುಟ್ಟ ಮಕ್ಕಳಿಗೆ ಮತ್ತು ವಿದ್ಯಾರ್ಥಿಗಳಿಗೆ ಕೊಂಕಣಿ ನಾಟಕದಲ್ಲಿ ಅಭಿನಯಿಸುವ ತರಬೇತಿ ನೀಡಿ "ಬಾಲ ನಾಟಕ" ಗಳನ್ನು ಪ್ರದರ್ಶಿಸುವ ಯೋಜನೆ ಕಾರ್ಯಗತವಾಗುವ ಗಳಿಗೆ ಹತ್ತಿರ ಬಂತು

ಹಲವು ವರ್ಷಗಳಿಂದ ಮಂಗಳೂರಿನಲ್ಲಿ ಚಿಕ್ಕ ಮಕ್ಕಳಿಗೆ ಕನ್ನಡದಲ್ಲಿ ನಾಟಕ ತರಬೇತಿ, ನಾಟಕ ಶಿಬಿರಗಳನ್ನು ನಡೆಸುತ್ತಾ ಬಂದಿರುವ ಶ್ರೀ ಪ್ರಕಾಶ ಶೆಣೈಯವರ ಸಂಪರ್ಕ ನನಗೆ ಲಭಿಸಿತು. ನಾನು ಅವರೊಂದಿಗೆ ಕೊಂಕಣಿ ಭಾಷಿಕ ಮಕ್ಕಳಿಗೆ ನಾಟಕ ತರಬೇತಿ ನೀಡಿ, ಕೊಂಕಣಿ ನಾಟಕ ಪ್ರದರ್ಶನ ನಡೆಸಲು ನನ್ನ ಜೊತೆ ಕೆಲಸ ಮಾಡುವಂತೆ ಅವರಲ್ಲಿ ತಿಳಿಸಿದೆ. ಅದಕ್ಕೆ ಅವರು ಒಪ್ಪಿಕೊಂಡು, ಅವರೊಂದಿಗೆ ಸಹಭಾಗಿಯಾಗಿ ಕೆಲಸ ಮಾಡುತ್ತಿರುವ ಶ್ರೀ ಜಗನ್ ಪವಾರ್ ಎಂಬ ಓರ್ವ ಉತ್ಕೃಷ್ಟ ಕಲಾವಿದ ಹಾಗೂ ನಾಟಕ ತರಬೇತಿದಾರರನ್ನು ಜೊತೆಯಲ್ಲಿ ಕರೆದುಕೊಂಡು ವಿಶ್ವ ಕೊಂಕಣಿ ಕೇಂದ್ರಕ್ಕೆ ಬಂದರು. ನಾನು ಮತ್ತು ಗುರು ಬಾಳಿಗರು ಅವರೊಂದಿಗೆ ಮಾತುಕತೆ ನಡೆಸಿದೆವು. ಹೀಗೆ ಕೊಂಕಣಿ ಮಕ್ಕಳಿಗೆ ಮತ್ತು ಕೊಂಕಣಿ ವಿದ್ಯಾರ್ಥಿಗಳಿಗೆ ನಾಟಕ ತರಬೇತಿ ನೀಡಿ, ನಾಟಕ ಪ್ರದರ್ಶನ ನಡೆಸುವ ಯೋಜನೆಗೆ ತಳಪಾಯ ಹಾಕಲಾಯಿತು.

ಪ್ರಾರಂಭದಲ್ಲಿ ಕೊಂಕಣಿ ಜಾನಪದ ಕಥೆ "ಕುಂಡ್ಯಾಕುರ್ಕುಳ" (ಗೋವೆಯಲ್ಲಿ ಅದು ಕುಂಡ್ಯಾ ಕುಸ್ಕುರ) ವನ್ನು ಆಧರಿಸಿ ಅದಕ್ಕೆ ಸಾಹಿತ್ಯ, ಸಂಭಾಷಣೆಯನ್ನು ಬರೆದು, ನಾಟಕ ರೂಪಕ್ಕೆ ತಂದು ಮಕ್ಕಳಿಗೆ ತರಬೇತಿ ನೀಡಿ, ಪ್ರದರ್ಶನ ನಡೆಸುವುದೆಂದು ನಿರ್ಣಯವಾಯಿತು. ಪ್ರಕಾಶ ಶೆಣೈ ಮತ್ತು ಜಗನ್ ಪವಾರರು ಗುರು ಬಾಳಿಗರೊಂದಿಗೆ ಕುಳಿತು ಸನ್ನಿವೇಶ ಮತ್ತು ಸಂಭಾಷಣೆಗಳನ್ನು ಬರೆದು, ಮಕ್ಕಳಿಗೆ ತರಬೇತಿ ನೀಡಿ ನಾಟಕವನ್ನು ಪ್ರದರ್ಶನಕ್ಕೆ ಸಿದ್ಧಪಡಿಸಿದರು. ಮಂಗಳೂರಿನ ನಲಂದಾ ಸಭಾಂಗಣದಲ್ಲಿ ತರಬೇತಿ ಶಿಬಿರ ಪ್ರಾರಂಭವಾಗಿ ೨೦ ದಿನಗಳು ಕಳೆದ ಬಳಿಕ ಕುಂಡ್ಯಾಕುರ್ಕುಳ ನಾಟಕದ ಪ್ರಥಮ ಪ್ರದರ್ಶನವನ್ನು ಮಂಗಳೂರಿನ ಪುರಭವನದಲ್ಲಿ ಸಾದರಪಡಿಸಲಾಯಿತು. ಕಿಕ್ಕಿರಿದು ನೆರೆದ ಪ್ರೇಕ್ಷಕರಿಂದ ಮತ್ತು ಅಭಿಮಾನಿಗಳಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರೆಯಿತು. ಪ್ರತಿಯೊಬ್ಬರ ಬಾಯಿಯಿಂದಲೂ ನಾಟಕ ಚೆನ್ನಾಗಿದೆ ಎಂಬ ಪ್ರಶಂಸೆಯ ಮಾತು ಕೇಳಿ ಬಂತು. ಹೀಗೆ ನಮಗೆ ಪ್ರಥಮ ಪ್ರಯೋಗದಲ್ಲಿಯೇ ಯಶಸ್ಸು ದೊರೆಯಿತು.

ಅನಂತರ ಈ ನಾಟಕವು ದುಬಾಯಿಯಲ್ಲಿರುವ ಕಾರ್ಕಳದವರೇ ಆದ ಶ್ರೀ ರಾಮದಾಸ ಕಿಣಿಯವರ ಪ್ರಾಯೋಜಕತೆಯಲ್ಲಿ ಕಾರ್ಕಳದಲ್ಲಿ, ಕರ್ನಾಟಕ ಕೊಂಕಣಿ ಅಕಾಡೆಮಿಯ ವತಿಯಿಂದ ಮಂಗಳೂರಿನಲ್ಲಿ ನಡೆದ ಕರಾವಳಿ ಉತ್ಸವದಲ್ಲಿ ಪ್ರದರ್ಶನಗೊಂಡಿತು. ಡಾ. ಪಿ. ದಯಾನಂದ ಪೈಯವರ ಪ್ರಾಯೋಜಕತೆಯಲ್ಲಿ ಬೆಂಗಳೂರಿನ ಕಾಶೀಮಠದಲ್ಲಿ, ಆಮೇಲೆ ವಿಶ್ವ ಕೊಂಕಣಿ ಬಾಲ ನಾಟಕ ಅಭಿಯಾನದ ರೂಪದಲ್ಲಿ ಉಡುಪಿ, ಕುಂದಾಪುರ, ಕಾರವಾರ, ಕುಮಟಾ, ಭಟ್ಕಳ ಮತ್ತು ಉಪ್ಪುಂದ ಹೀಗೆ ಕರಾವಳಿಯುದ್ದಕ್ಕೂ ಬೇರೆ ಬೇರೆ ಊರುಗಳಲ್ಲಿ "ಕುಂಡ್ಯಾಕುರ್ಕುಳ" ನಾಟಕದ ಪ್ರದರ್ಶನಗಳು ನಡೆದವು.

ಮತ್ತೊಂದು ವಿಶೇಷವೇನೆಂದರೆ ಬೆಂಗಳೂರು ದೂರದರ್ಶನ ಕೇಂದ್ರದ ಉಪನಿರ್ದೇಶಕಿ ಶ್ರೀಮತಿ ಉಷಾ ಕಿಣಿಯವರ ಸಹಕಾರದಿಂದ ಈ ನಾಟಕದ ರೆಕಾರ್ಡಿಂಗ್ ದೂರದರ್ಶನದಲ್ಲಿಯೂ ನಡೆದು ಮೇ ೧೫, ೨೦೧೧ ರಲ್ಲಿ ಇದರ ಮೊದಲ ಪ್ರಸಾರ ನಡೆದಿದೆ. ವಿಶ್ವ ಕೊಂಕಣಿ ಕೇಂದ್ರದವರು ಕುಂಡ್ಯಾಕುರ್ಕುಳ ನಾಟಕದ ಸಿಡಿಯನ್ನು ತಯಾರಿಸಿದ್ದರಿಂದ, ಈಗ ದೇಶ, ವಿದೇಶದ ಜನರೂ ಈ ನಾಟಕವನ್ನು ನೋಡಿ ಸಂತೋಷಪಡಬಹುದಾಗಿದೆ.

ಇದರ ಬಳಿಕ ಪ್ರಕಾಶ ಶೆಣೈ ಮತ್ತು ಶ್ರೀ ಜಗನ್ ಪವಾರರು ಗುರು ಬಾಳಿಗರೊಂದಿಗೆ ಸೇರಿ "ಪಾತೊಳಿ ರೂಕು" ಎಂಬ ಮತ್ತೊಂದು ಕೊಂಕಣಿ ಜಾನಪದ ಕಥೆಯನ್ನು ನಾಟಕವಾಗಿ ರೂಪಾಂತರಿಸಿದರು. ಅದಕ್ಕಾಗಿ ಕೊಂಕಣಿ ಮಕ್ಕಳ ಬೇರೆ ಒಂದು ತಂಡಕ್ಕೆ ೨೦ ದಿನಗಳ ತರಬೇತಿಯನ್ನು ನೀಡಲಾಯಿತು. ಇದರ ಮೊದಲ ಪ್ರದರ್ಶನ ಮಂಗಳೂರಿನ ಪುರಭವನದಲ್ಲಿ ನಡೆಯಿತು. ಈ ನಾಟಕಕ್ಕೂ ಪ್ರೇಕ್ಷಕರಿಂದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತಗೊಂಡಿತು. ಆಮೇಲೆ ಇದರ ಪ್ರದರ್ಶನ ಕೊಚ್ಚಿಯ ಟಿ.ಡಿ. ಶಾಲೆಯಲ್ಲಿ, ಅನಂತರ ಮಾಂಡ ಸೋಭಾಣ ಸಂಸ್ಥೆಯ "ವ್ಹಡಿಯನ್ಯಾಚಿ ವಾಚಿ" ಕಾರ್ಯಕ್ರಮದಲ್ಲಿ ಪ್ರದರ್ಶನ ಕಂಡಿದೆ.

ಮದ್ರಾಸಿನ(ಈಗಿನ ಚೆನ್ನೈ) 'ಸಂಯುಕ್ತ ಗೌಡ ಸಾರಸ್ವತ ಸಭಾ' ಕೊಂಕಣಿ ಸಮುದಾಯದ ಹಳೆಯ ಸಂಸ್ಥೆ. ಈ ಸಂಸ್ಥೆಯ ಹೊಸ ಪದಾಧಿಕಾರಿಗಳು ಅನೇಕ ಕಾರ್ಯ ಭಾರಗಳನ್ನು ವಹಿಸಿಕೊಂಡು ಬೇರೆ ಬೇರೆ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ, ಸಭಾದ ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಿಸುವ ನಿರ್ಧಾರ ಕೈಗೊಂಡಿದ್ದರು. ಹೀಗಾಗಿ "ಪಾತೊಳಿ ರೂಕು" ನಾಟಕದ ಪ್ರದರ್ಶನವನ್ನು ಚೆನ್ನೈಯಲ್ಲಿ ನೀಡಬೇಕೆಂದು ಎಸ್‌ಜಿಎಸ್ ಸಭಾದ ಮುಖ್ಯಸ್ಥರಿಂದ ನಮಗೆ ಆಮಂತ್ರಣ ಬಂತು. ಅದರಂತೆ ಈ ನಾಟಕ ಏಪ್ರಿಲ್ ೨೨, ೨೦೧೨ ರಂದು ಎಸ್‌ಜಿಎಸ್ ಸಭಾದ ವೇದಿಕೆಯ ಮೇಲೆ ಯಶಸ್ವಿ ಪ್ರದರ್ಶನವನ್ನು ಕಂಡಿತು. ಈ ಸಂದರ್ಭದಲ್ಲಿ ಸಭಾದವರು ನಮ್ಮ ನಾಟಕ ತಂಡದ ಸದಸ್ಯರಿಗೆ ಎಲ್ಲ ವಿಧದ ಸೌಲಭ್ಯಗಳನ್ನು ಒದಗಿಸಿದ್ದರು. ಎಳೆಯ ಮಕ್ಕಳ ಪ್ರತಿಭೆಯನ್ನು ನೋಡಿದ ಅಲ್ಲಿಯ ಪ್ರೇಕ್ಷಕರು ತುಂಬಾ ಆನಂದ ಪಟ್ಟುಕೊಂಡಿದ್ದರು. ಸಭಾದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರು ಮುಕ್ತಕಂಠದಿಂದ ನಮ್ಮ ನಾಟಕವನ್ನು ಹೊಗಳಿದ್ದಲ್ಲದೆ, ಇದೇ ರೀತಿ ವಿಶ್ವ ಕೊಂಕಣಿ ಕೇಂದ್ರದಿಂದ ಮತ್ತೊಂದು ನಾಟಕವನ್ನು ಚೆನ್ನೈ ಸಭಾಭವನದಲ್ಲಿ ಪ್ರದರ್ಶಿಸುವಂತೆ ಆಹ್ವಾನ ನೀಡಿದ್ದರು.

ಎಸ್‌ಜಿಎಸ್ ಸಭಾದ ಕಾರ್ಯದರ್ಶಿಗಳಾದ ಶ್ರೀ ಪಿ. ಜೆ. ನಾಯಕ್, ಖಜಾಂಚಿಗಳಾದ ಶ್ರೀ ಕೆ.ಪಿ. ಲಕ್ಷ್ಮಣರಾವ್ (ನಾವು ೧೯೮೮ರಲ್ಲಿ ನವದೆಹಲಿಯಲ್ಲಿ ಕೊಂಕಣಿ ಕಲಾ ಉತ್ಸವವನ್ನು ನಡೆಸಿದ ಸಂದರ್ಭದಲ್ಲಿ ಇವರು ನಮಗೆ ತುಂಬಾ ಸಹಾಯ ನೀಡಿರುವುದನ್ನು ಈಗಾಗಲೇ ಉಲ್ಲೇಖಿಸಿದ್ದೇನೆ) ಮತ್ತು ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿಯವರು ನಮ್ಮೊಂದಿಗೆ ಗೌರವಪೂರ್ವಕವಾಗಿ ನಡೆದು ಅವರು ನೀಡಿದ ಆತಿಥ್ಯವನ್ನು ನಾವು ಮರೆಯುವಂತಿಲ್ಲ.

ಆಮೇಲೆ ಜೂನ್ ೯ರಂದು ಬೆಂಗಳೂರಿನ ಕಾಶೀಮಠದಲ್ಲಿ 'ಪಾತೊಳಿ ರೂಕು' ನಾಟಕದ ಪ್ರದರ್ಶನವಾಯಿತು. ಮರುದಿನ ಶ್ರೀಮತಿ ಉಷಾ ಕಿಣಿಯವರ ಸಹಕಾರದಿಂದ ಬೆಂಗಳೂರು ದೂರದರ್ಶನದಲ್ಲಿಯೂ ಇದರ ರೆಕಾರ್ಡಿಂಗ್ ನಡೆಯಿತು ಮತ್ತು ಆ ಮೇಲೆ ಈ ನಾಟಕದ ಪ್ರಸಾರ ಅನೇಕ ಬಾರಿ ನಡೆದಿದೆ.

●●

೫೧. ಚಂದ್ರಹಾಸ ನಾಟಕ ಶತಮಾನೋತ್ಸವ

ಬಂಟವಾಳದ ಶ್ರೀ ಬೊಳಂತೂರ ಕೃಷ್ಣ ಪ್ರಭು (ಪ್ರೆಸ್ ದಾಸಪ್ಪ ಪ್ರಭು) ಅವರು ಕೊಂಕಣಿ ಭಾಷೆಯ ಪ್ರಥಮ ನಾಟಕ "ಚಂದ್ರಹಾಸ"ವನ್ನು ಬರೆದು, ತಮ್ಮ ನಿರ್ದೇಶನದಲ್ಲಿ ಬಂಟವಾಳದಲ್ಲಿ ಅದರ ಪ್ರದರ್ಶನವನ್ನು ಫೆಬ್ರವರಿ ೧೨, ೧೯೧೨ ರಂದು ನೀಡಿದ್ದರು. ಆಮೇಲೆ ಅವರು ಇದೇ ಚಂದ್ರಹಾಸ ಕೊಂಕಣಿ ನಾಟಕವನ್ನು ತಮ್ಮ ವಿಕ್ಟೋರಿಯಾ ಪ್ರೆಸ್‌ನಲ್ಲಿ ಮುದ್ರಿಸಿ ಗ್ರಂಥ ರೂಪದಲ್ಲಿ ಬೆಳಕಿಗೆ ತಂದಿದ್ದರು. ಈ "ಚಂದ್ರಹಾಸ" ನಾಟಕವು ಕೊಂಕಣಿಯ ಪ್ರಥಮ ಮುದ್ರಿತ ನಾಟಕವೆಂದು ಖ್ಯಾತ ನಾಟಕಕಾರ, ಲೇಖಕರಾದ ಗೋವೆಯ ಶ್ರೀ ಪುಂಡಳೀಕ ನಾಯ್ಕರು ಘೋಷಿಸಿದ್ದಾರೆ.

ಆ ಸಮಯದಲ್ಲಿ ಈ ನಾಟಕ ಅತ್ಯಂತ ಜನಪ್ರಿಯವಾಗಿ ಬಂಟವಾಳದಲ್ಲಿ ಮತ್ತು ವಿವಿಧೆಡೆಗಳಲ್ಲಿ ಅನೇಕ ಬಾರಿ ಪ್ರದರ್ಶನವನ್ನು ಕಂಡಿತ್ತು. ಚಂದ್ರಹಾಸ ನಾಟಕದ ಹಾಡುಗಳನ್ನು ಕೇರಳದ ಕೊಚ್ಚಿಯಿಂದ ಕರ್ನಾಟಕದ ಕಾರವಾರದವರೆಗೆ ಜನರು ಹಾಡಿಕೊಳ್ಳುತ್ತಿದ್ದುದನ್ನು ಹಿರಿಯರು ನೆನಪಿಸಿಕೊಳ್ಳುತ್ತಾರೆ. ನಾವು ಶಾಲೆಯಲ್ಲಿರುವಾಗ ಈ ನಾಟಕದ ಪ್ರಯೋಗ ನಡೆಸಿದ್ದೇವೆ. ೨೦೦೮ರಲ್ಲಿ ಶ್ರೀ ಪುಂಡಳೀಕ ನಾಯ್ಕ್ ಮಂಗಳೂರಿಗೆ ಬಂದಿದ್ದಾಗ ನಾವು ಅವರಲ್ಲಿ ಚಂದ್ರಹಾಸ ನಾಟಕದ ಕುರಿತು ತಿಳಿಸಿದ್ದೆವು. ಆಗ ಅವರು ಈ ನಾಟಕದ ಕುರಿತು ತುಂಬಾ ಉತ್ಸಾಹ ತೋರಿಸಿದ್ದರು. ಸ್ವತಃ ಬಂಟವಾಳಕ್ಕೆ ಹೋಗಿ ಬೊಳಂತೂರು ಕೃಷ್ಣಪ್ರಭು ಅವರ ಮನೆ (ಆಗ ಅವರು ಬದುಕಿರಲಿಲ್ಲ) ಮತ್ತು ಅಲ್ಲಿಯ ಶಾಲಾ ಮೈದಾನಿಗೆ ಭೇಟಿ ನೀಡಿ, ಆಮೇಲೆ ನಮ್ಮೊಂದಿಗೆ ಮಾತನಾಡುತ್ತಾ, ೨೦೧೨ನೇ ಇಸವಿ ಫೆಬ್ರವರಿ ೧೨ರಂದು ಚಂದ್ರಹಾಸ ನಾಟಕದ ಶತಮಾನೋತ್ಸವನ್ನು ಆಚರಿಸಬೇಕು ಎಂದು ತಿಳಿಸಿದರು. ಆ ಕುರಿತು ನಾನು ಕೂಡ ತುಂಬಾ ಉತ್ಸಾಹ ತೋರಿಸಿದೆ. ನಾಟಕ ಕಲಾವಿದರು, ಸಾಹಿತ್ಯಕಾರರು, ನಿರ್ದೇಶಕರು ಮತ್ತು ಸಂಗೀತ ಸಂಯೋಜಕರು ಸಭೆ ನಡೆಸಿ, ಚಂದ್ರಹಾಸ ನಾಟಕದ ಶತಮಾನೋತ್ಸವ ಆಚರಣೆಯ ಕುರಿತು ಅವರೊಂದಿಗೆ ಚರ್ಚೆ ನಡೆಸಿದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಹೀಗಾಗಿ ಶ್ರೀ ಪುಂಡಳೀಕ ನಾಯ್ಕರ ಸಂಚಾಲಕತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.

ನಾವು ಅಕ್ಟೋಬರ್ ೧೦, ೨೦೦೯ರಂದು ಬಂಟವಾಳದ ಶ್ರೀ ಯಶವಂತ ವ್ಯಾಯಾಮ ಶಾಲೆಯಲ್ಲಿ "ಕೊಂಕಣಿ ನಾಟಕದ ಮೂಲ ಮತ್ತು ಆಧುನಿಕ ಕೊಂಕಣಿ ರಂಗಭೂಮಿ" ಎಂಬ ವಿಷಯದಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಿದ್ದೆವು. ಇದರ ಉದ್ಘಾಟನೆಯನ್ನು ಕನ್ನಡ ಸಾಹಿತಿ ಏರ್ಯ ಲಕ್ಷ್ಮೀನಾರಾಯಣ ಆಳ್ವಾರು ನಡೆಸಿದ್ದರು. ವೇದಿಕೆಯ ಮೇಲೆ ಗೋವೆಯ ಖ್ಯಾತ ಸಾಹಿತಿಗಳಾದ ಶ್ರೀ ಪುಂಡಳೀಕ ನಾಯ್ಕ್, ಉದಯ ಭೆಂಬ್ರೆ, ಎನ್. ಶಿವದಾಸ, ಶ್ರೀಧರ ಕಾಮತ ಬಾಂಬೊಳಿಕರ, ದಾಮೋದರ ಮಾವಜೊ, ಡಾ. ತಾನಾಜಿ ಹಳರಣಕರ, ಮುಂಬೈಯ ಡಾ. ಸಿ.ಎನ್. ಶೆಣ್ಯೈ, ಮಂಗಳೂರಿನ ಪೌಲ ಮೊರಾಸ್, ಜಯಶ್ರೀ ಶೆಣ್ಯೈ ಮೊದಲಾದವರಿದ್ದರು.

ಮಧ್ಯಾಹ್ನ ಬಂಟವಾಳದ ಕಲಾವಿದರಾದ ಶ್ರೀ ಮಧುಕರ ಮಲ್ಯ, ಪಿ. ವಸಂತ ಪ್ರಭು, ಬೊ. ಪ್ರಭಾಕರ ಪ್ರಭು, ಪಿ. ನಾರಾಯಣ ಕಾಮತ, ಶ್ರೀಮತಿ ಪ್ರೇಮಲತಾ ಪೈ, ಶ್ರೀ ಎಸ್.ಆರ್. ಮಡಿವಾಳ, ಬಿ.ಹೆಚ್. ಜಗದೀಶ ಪೈ, ಜಯಶ್ರೀ ಶೆಣ್ಯೈ, ಕೆ. ನರಸಿಂಹ ಕಾಮತ್, ಜೆ. ಸುರೇಶ ಶೆಣ್ಯೈಯ ವರು ಚಂದ್ರಹಾಸ ನಾಟಕದಲ್ಲಿರುವ ಸಂಭಾಷಣೆ ಮತ್ತು ಮೂಲ ಸಂಗೀತವನ್ನು ಸಾದರ ಪಡಿಸಿದರು.

ಆ ಮೇಲೆ ಚಂದ್ರಹಾಸ ನಾಟಕದ ಶತಮಾನೋತ್ಸವವನ್ನು ಫೆಬ್ರವರಿ ೧೨, ೨೦೧೨ರಂದು ಬಂಟವಾಳದಲ್ಲಿಯೇ ಆಚರಿಸುವುದೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

ಆ ಮೇಲೆ ನಾವು ಎರಡು ಬಾರಿ ಒಟ್ಟು ಸೇರಿ ಶತಮಾನೋತ್ಸವ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಮತ್ತು ಅರ್ಥಪೂರ್ಣವಾಗಿ ನಡೆಸಬೇಕೆಂದು ಯೋಜನೆ ಹಾಕಿಕೊಂಡೆವು. ಅದರಲ್ಲಿ ಮುಖ್ಯವಾಗಿ ಅಳವಡಿಸಿಕೊಳ್ಳಲಾದ

ಅಂಶಗಳೆಂದರೆ: ೧) ಮಕ್ಕಳಿಗೆ ಚಂದ್ರಹಾಸ ನಾಟಕದಲ್ಲಿ ಅಭಿನಯಿಸುವ ತರಬೇತಿ ನೀಡುವುದು ೨) ಈ ನಾಟಕವನ್ನು ಬಂಟವಾಳ, ಮಂಗಳೂರು ಮತ್ತು ಕರ್ನಾಟಕ, ಗೋವೆ, ಕೇರಳ ರಾಜ್ಯಗಳ ವಿವಿಧ ಪ್ರದೇಶಗಳಲ್ಲಿ ಪ್ರದರ್ಶಿಸುವುದು ೩) ಚಂದ್ರಹಾಸ ನಾಟಕದ ಕರ್ತೃ ಶ್ರೀ ಬೊಳಂತೂರು ಕೃಷ್ಣ ಪ್ರಭು ಅವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಪ್ರಕಟಿಸುವುದು, ಹಾಗೂ ೪) ಫೆಬ್ರವರಿ ೧೦ ಮತ್ತು ೧೧, ೨೦೧೨, ಈ ಎರಡು ದಿನಗಳ ಕಾಲ ಕೊಂಕಣಿ ನಾಟಕದ ಕುರಿತು ವಿಶ್ವ ಕೊಂಕಣಿ ಕೇಂದ್ರದಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸುವುದು. ಇದೇ ಸಂದರ್ಭದಲ್ಲಿ "ವಿಶ್ವ ಕೊಂಕಣಿ ನಾಟಕ ಅಕಾಡೆಮಿ"ಯನ್ನು ಸ್ಥಾಪಿಸುವುದೆಂದು ತೀರ್ಮಾನ ಕೈಗೊಳ್ಳಲಾಯಿತು.

೨೦೧೨, ಫೆಬ್ರವರಿ ೧೦ರಂದು ಬೆಳಗ್ಗೆ ೧೦ ಗಂಟೆಗೆ ವಿಶ್ವ ಕೊಂಕಣಿ ಕೇಂದ್ರದ ಶ್ರೀ ಎಂ. ಗೋವಿಂದರಾವ್ ಸಭಾಭವನದಲ್ಲಿ "ಚಂದ್ರಹಾಸ ನಾಟಕ ಶತಮಾನೋತ್ಸವ"ದ ಪ್ರಯುಕ್ತ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆಯಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಸಿದ್ಧ ನಾಟಕಕಾರರಾದ ಶ್ರೀ ಪುಂಡಲೀಕ ನಾಯ್ಕರು ವಹಿಸಿಕೊಂಡಿದ್ದರು. ಗೋವಾ ಕೊಂಕಣಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ದಿಲೀಪ ಬೋರಕರ ಮತ್ತು ಕರ್ನಾಟಕ ಕೊಂಕಣಿ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಚೆನ್ನಾ ಕಾಸರಗೋಡು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಸುಮಾರು ೧೫–೨೦ ಮಂದಿ ರಂಗಕರ್ಮಿಗಳು ಭಾಗವಹಿಸಿ ಕೊಂಕಣಿ ನಾಟಕ ಕ್ಷೇತ್ರದ ಕುರಿತು ಉತ್ತಮ ವಿಚಾರಗಳನ್ನು ಮಂಡಿಸಿದರು. ಆಮೇಲೆ ನಾಟಕಾಸಕ್ತ ಸಭಿಕರಿಂದ ಸಂವಾದವೂ ನಡೆಯಿತು.

ನೂರು ವರ್ಷಗಳ ಹಿಂದೆ ಶ್ರೀ ಬೊಳಂತೂರು ಕೃಷ್ಣಪ್ರಭು ಅವರು ಚಂದ್ರಹಾಸ ನಾಟಕವನ್ನು ಬರೆದು ನಿರ್ದೇಶಿಸಿ ಪ್ರಥಮ ಬಾರಿ ಅದರ ಪ್ರಯೋಗವನ್ನು ಬಂಟವಾಳದಲ್ಲಿ ನಡೆಸಿದ್ದರು. ಹೀಗಾಗಿ ಅದೇ ಜಾಗದಲ್ಲಿ ಈ ನಾಟಕದ ಶತಮಾನೋತ್ಸವನ್ನು ಉದ್ಘಾಟಿಸಿ, ನಾಟಕ ಪ್ರದರ್ಶನ ನೀಡುವುದು ನಮ್ಮ ಉದ್ದೇಶವಾಗಿತ್ತು. ಹೀಗಾಗಿ ನಾವು ವಿಶ್ವ ಕೊಂಕಣಿ ಕೇಂದ್ರದಲ್ಲಿ ವಿಚಾರ ಸಂಕಿರಣದ ಕಾರ್ಯಕ್ರಮ ಮುಗಿದ ಬಳಿಕ ಅದೇ ದಿನ ಸಂಜೆ ಬಂಟವಾಳದ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಳ ಪ್ರಾಥಮಿಕ ಶಾಲೆಯ ರಂಗವೇದಿಕೆಯ ಮೇಲೆ ಚಂದ್ರಹಾಸ ನಾಟಕದ ಶತಮಾನೋತ್ಸವದ ಉದ್ಘಾಟನೆಯನ್ನು ನಡೆಸಿದೆವು. "ತರಂಗ" ಕನ್ನಡ ವಾರಪತ್ರಿಕೆಯ ಸಂಪಾದಕರಾದ ಶ್ರೀಮತಿ ಸಂಧ್ಯಾ ಎಸ್. ಪೈಯವರು ಮಣಿಪಾಲದಿಂದ ಬಂದು ದೀಪ ಹಚ್ಚುವ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕನ್ನಡ ಮತ್ತು ತುಳುವಿನ ಖ್ಯಾತ ಲೇಖಕರೂ, ಕೊಂಕಣಿ ಸಮಾಜದ ಮೇಲೆ ಅಪಾರ ಅಭಿಮಾನ ಹೊಂದಿದವರೂ ಆಗಿರುವ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ ಮತ್ತು ಬಂಟವಾಳ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಶ್ರೀ ಅರ್ಲಾ ಗೋವಿಂದ ಪ್ರಭುಗಳು ಮುಖ್ಯ ಅತಿಥಿಗಳಾಗಿ ವೇದಿಕೆಯ ಮೇಲೆ ಇದ್ದರು. ಬೊಳಂತೂರು ಕೃಷ್ಣಪ್ರಭು ಅವರ ಸುಪುತ್ರ ಶ್ರೀ ಬೊಳಂತೂರು ವಸಂತ ಮಾಧವ ಪ್ರಭು ಮತ್ತು ಮೊಮ್ಮಗ ಶ್ರೀ ಬೊ. ಪ್ರಭಾಕರ ಪ್ರಭು ಅವರೂ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬೊಳಂತೂರು ಕೃಷ್ಣಪ್ರಭು ಅವರ ಜೀವನ ಚರಿತ್ರೆ ಮತ್ತು ಗೋವಾ ಅಕಾಡೆಮಿ ಪ್ರಕಟಿಸಿದ್ದ ಚಂದ್ರಹಾಸ ನಾಟಕದ ನಾಗರಿ ಲಿಪ್ಯಂತರ ಕೃತಿಗಳ ಲೋಕಾರ್ಪಣೆ ನಡೆಯಿತು.

ಆ ಮೇಲೆ ಚಂದ್ರಹಾಸ ನಾಟಕದ ಪ್ರದರ್ಶನ ನಡೆಯಿತು. ಶ್ರೀ ಪ್ರಕಾಶ ಶೆಣೈ ಮತ್ತು ಶ್ರೀ ಜಗನ ಪವಾರರ ನಿರ್ದೇಶನದಲ್ಲಿ ಬಂಟವಾಳದ ಮಕ್ಕಳು ಮತ್ತು ಯುವಜನತೆ ಅಭಿನಯಿಸಿದ ಚಂದ್ರಹಾಸ ನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಬಂಟವಾಳ, ಪಾಣೆಮಂಗಳೂರು ಮತ್ತು ಜೋಡು ಮಾರ್ಗಗಳಿಂದ ಅನೇಕ ಜನರು ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನೂರು ವರ್ಷಗಳ ಹಿಂದೆ ಕೊಂಕಣಿ ನಾಟಕದ ಬೆಳವಣಿಗೆಗಾಗಿ ಶ್ರೀ ಬೊಳಂತೂರು ಕೃಷ್ಣ ಪ್ರಭು ಅವರು ಬಂಟವಾಳದಲ್ಲಿ ಹಾಕಿದ ಅಡಿಗಲ್ಲಿನ ಪರಿಚಯ ಅಂದು ಎಲ್ಲರಿಗೂ ಆಗಿತ್ತು.

ಈ ಎರಡೂ ಕಾರ್ಯಕ್ರಮಗಳು ಬಂಟವಾಳದಲ್ಲಿ ಯಶಸ್ವಿಯಾಗಿ ನಡೆಯಲು ಅಪಾರ ಪರಿಶ್ರಮ ಪಟ್ಟವರೆಂದರೆ ಪೈಲೋಡಿ ನಾರಾಯಣ ಕಾಮತಿ, ಪಿ. ವಸಂತ ಪ್ರಭು, ಪ್ರೊ. ಶ್ರೀಮತಿ ಪ್ರೇಮಲತಾ ಪೈ, ಶ್ರೀ ವಾಣಿಶ್ರೀ ಬಾಳಿಗ ಮತ್ತು ಶ್ರೀಮತಿ ಭಾರತಿ ಕಾಮತ್.

ಮರುದಿನ, ಫೆಬ್ರವರಿ ೧೧ ರಂದು ಸಂಜೆ ಮಂಗಳೂರು ಊರ್ವಾ ಕೆನರಾ ಪ್ರೌಢಶಾಲೆಯ ರಂಗಮಂಚದ ಮೇಲೆ "ವಿಶ್ವ ಕೊಂಕಣಿ ನಾಟಕ ಅಕಾಡೆಮಿ ಉದ್ಘಾಟನೆ"ಯ

ಕಾರ್ಯಕ್ರಮ ನಡೆಯಿತು. ಮಣಿಪಾಲ ರಂಗಭೂಮಿಯ ಸ್ಥಾಪಕ ಅಧ್ಯಕ್ಷರಾದ ಡಾ. ಹೆಚ್. ಶಾಂತಾರಾಮ್ ಅವರಿಂದ ನಾಟಕ ಅಕಾಡೆಮಿಯ ಉದ್ಘಾಟನೆ ಜರಗಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಕೊಂಕಣಿ ಭಾಷಾ ಅಲ್ಪಸಂಖ್ಯಾತೆ ವಿದ್ಯಾಸಂಸ್ಥೆಗಳ ಕಾರ್ಯದರ್ಶಿಗಳಾದ ಡಾ. ಕಸ್ತೂರಿ ಮೋಹನ ಪೈಯವರು ವಹಿಸಿದ್ದರು. ಬಂಟವಾಳದವರಾದ ಮಂಗಳೂರು ಶಾಸಕ ಹಾಗೂ ವಿಧಾನ ಸಭೆಯ ಉಪ ಸಭಾಪತಿ ಶ್ರೀ ಎನ್. ಯೋಗೀಶ ಭಟ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಶುಭ ಹಾರೈಸಿದರು. ಆಮೇಲೆ ಮಂಗಳೂರಿನ ಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ "ಚಂದ್ರಹಾಸ" ಕೊಂಕಣಿ ನಾಟಕದ ಪ್ರದರ್ಶನವಾಯಿತು. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆಯೂ ದೊರೆಯಿತು.

●●

೫೨. ಕೊಡಿಯಾಲ ಖಬರ ಪತ್ರಿಕೆ

ಇವತ್ತು ನಮ್ಮ ಸಮಾಜದಲ್ಲಿ ನಡೆಯುವ ಘಟನೆಗಳು ನಮ್ಮ ಜನರಿಗೇ ತಿಳಿಯದ ಪರಿಸ್ಥಿತಿ ಇದೆ. ಪ್ರತಿಯೊಬ್ಬರೂ ತಮ್ಮದೇ ಕೆಲಸ ಕಾರ್ಯಗಳಲ್ಲಿ ವ್ಯಸ್ತರಾಗಿರುವುದರಿಂದ ಎಲ್ಲಿ ಏನು ಘಟಿಸಿದೆ ಎನ್ನುವುದು ಗೊತ್ತೇ ಆಗುವುದಿಲ್ಲ. ಉದಾಹರಣೆಗೆ ಮಂಗಳೂರಿನ ಮಣ್ಣಗುಡ್ಡೆಯಲ್ಲಿ ನಡೆದ ಘಟನೆ (ಅದು ಒಳ್ಳೆಯದಿರಲಿ ಅಥವಾ ಕೆಟ್ಟದಿರಲಿ) ರಥಬೀದಿಯಲ್ಲಿ ಇರುವವರಿಗೆ ತಿಳಿಯುವುದಿಲ್ಲ. ಬಂಟವಾಳದಲ್ಲಿ ನಡೆದ ಚಿಕ್ಕ ಅಥವಾ ದೊಡ್ಡ ಘಟನೆ ಹತ್ತಿರದ ಮಂಗಳೂರಿನಲ್ಲಿರುವ ಸಮಾಜ ಬಾಂಧವರ ಅರಿವಿಗೆ ಬರುವುದೇ ಇಲ್ಲ. ಇನ್ನು ನಮ್ಮವರಲ್ಲಿ ಕೊಂಕಣಿ ಪತ್ರಿಕೆಯನ್ನು ಓದುವ ಹವ್ಯಾಸ ಕಡಿಮೆಯಾಗಿರುವುದರ ಕುರಿತು ನಾನು ಆಗಾಗ ಡಾ. ಮೋಹನ ಪೈ, ವೆಂಕಟೇಶ ಬಾಳಿಗ ಮೊದಲಾದವರಲ್ಲಿ ತಿಳಿಸಿದ್ದು ಉಂಟು.

ಈ ಹಿನ್ನೆಲೆಯಲ್ಲಿ ಒಂದು ಕೊಂಕಣಿ ಪತ್ರಿಕೆಯನ್ನು ಪ್ರಕಟಿಸಿ, ನಮ್ಮ ಸಮಾಜದಲ್ಲಿ ಎಲ್ಲಿಯಾದರೂ ಯಾವುದಾದರೂ ಒಂದು ಘಟನೆ, ಸಮಾರಂಭ, ಅಥವಾ ನಮ್ಮ ತರುಣರಿಗೆ ಅಥವಾ ವಿದ್ಯಾರ್ಥಿಗಳಿಗೆ ಯಾವುದಾದರೂ ಪ್ರಶಸ್ತಿ, ಬಹುಮಾನ, ಪಾರಿತೋಷಕ ಅಥವಾ ವಿಶೇಷ ಅಂಕಗಳು, ಪ್ರಾವೀಣ್ಯತೆ ದೊರತಿರುವುದರ ಕುರಿತು ಪತ್ರಿಕೆಯಲ್ಲಿ ಸುದ್ದಿ ನೀಡಿದರೆ ಬೇರೆ, ಬೇರೆ, ಊರುಗಳಲ್ಲಿರುವವರಿಗೆ ಪತ್ರಿಕೆಯ ಮೂಲಕ ಮಾಹಿತಿ ಒದಗಿಸಿದಂತೆ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ. ಇದನ್ನೇ ನಾನು ಅವರೊಡನೆ ವ್ಯಕ್ತಪಡಿಸುವುದಿತ್ತು.

ಜಾಹಿರಾತು ವಿಭಾಗದಲ್ಲಿರುವ ಶ್ರೀ ವೆಂಕಟೇಶ ಬಾಳಿಗರು ಧೈರ್ಯ ಮಾಡಿ "ಕೊಡಿಯಾಲ ಖಬರ" ಎಂಬ ಪಾಕ್ಷಿಕ ಪತ್ರಿಕೆಯನ್ನು ಪ್ರಾರಂಭಿಸುವ ನಿರ್ಧಾರ ಕೈಗೊಂಡರು. ಅದರ ಬಿಡುಗಡೆಯನ್ನು ಶ್ರೀ ಕೆ.ಕೆ. ಪೈಯವರು ನಿರ್ವಹಿಸಿದರು. ಆಮೇಲೆ ನಾನು ಮತ್ತು ವೆಂಕಟೇಶ ಬಾಳಿಗರು ಪತ್ರಿಕೆಗೆ ಏಜಂಟರನ್ನು ನೇಮಿಸಲು ಬೇರೆ ಬೇರೆ ಊರುಗಳಿಗೆ ಪ್ರವಾಸ ಹೋಗಿದ್ದುಂಟು. ಆದರೂ ಪ್ರಾರಂಭದಲ್ಲಿ ನಮ್ಮ ಪ್ರಯತ್ನಗಳಿಗೆ ಫಲ ಸಿಕ್ಕಿರಲಿಲ್ಲ. ಅನಂತರ ಶ್ರೀ ಬಾಳಿಗರು ಇನ್ನೂ ಹೆಚ್ಚಿನ ಪ್ರಯತ್ನಗಳನ್ನು ನಡೆಸಿದ್ದರಿಂದ, ಕಳೆದ ನಾಲ್ಕು ವರ್ಷಗಳಿಂದ ಕೊಡಿಯಾಲ ಖಬರ ಪತ್ರಿಕೆಯ ೩೦೦೦ ಪ್ರತಿಗಳು ಪ್ರಕಟವಾಗಿ ದೇಶ, ವಿದೇಶಗಳ ಓದುಗರನ್ನು ತಲುಪುತ್ತಿವೆ. ಇದು ಒಂದು ದೊಡ್ಡ ಸಾಹಸ ಕೃತ್ಯವೆಂದು ಹೇಳಲಡ್ಡಿಯಿಲ್ಲ.

ಶ್ರೀ ವೆಂಕಟೇಶ ಬಾಳಿಗರು ಪತ್ರಿಕೆಯನ್ನು ನಡೆಸುವುದಷ್ಟೇ ಅಲ್ಲ, ಕರ್ನಾಟಕ ಮತ್ತು ಇತರ ರಾಜ್ಯಗಳಲ್ಲಿ ಕೊಂಕಣಿ ಜನರು ಹೆಚ್ಚು ಸಂಖ್ಯೆಯಲ್ಲಿರುವ ಊರುಗಳಲ್ಲಿ ಕೊಂಕಣಿ ಸಾಹಿತ್ಯ ಕಾರ್ಯಾಗಾರ, ವಿಚಾರ ಸಂಕಿರಣ, ಕ್ವಿಜ್, ಸಾಂಸ್ಕೃತಿಕ ಸ್ಪರ್ಧೆಗಳು ಇತ್ಯಾದಿ ನಡೆಸುತ್ತಾ ಬಂದಿದ್ದಾರೆ. ಕೊಡಿಯಾಲ ಖಬರ್ ಪತ್ರಿಕೆಯ ನಾಲ್ಕು ವರ್ಷಗಳ ಸಂಪಾದಕೀಯಗಳನ್ನು ಸೇರಿಸಿ "ಮನಾ ದಾಕೂನ" (ಮನಸ್ಸಿನ ಮೂಲಕ) ಎಂಬ ಹೆಸರಿನಲ್ಲಿ ಗ್ರಂಥವನ್ನು ಬೆಳಕಿಗೆ ತಂದಿದ್ದಾರೆ.

●●

೫೩. ಗುಜರಾತಿನಲ್ಲಿ ಕೊಂಕಣಿ ಜನ

ಗುಜರಾತ ರಾಜ್ಯದ ವಾಪಿ ಜಿಲ್ಲೆಯ ವಲ್ಸಾಡ ಪ್ರದೇಶದಲ್ಲಿ ಅನೇಕ ಕೊಂಕಣಿಗರು ನೆಲೆಸಿದ್ದಾರೆ. ಪ್ರಾಯಶಃ ಅವರು ೧೦೦-೨೦೦ ವರ್ಷಗಳ ಹಿಂದೆ ರತ್ನಾಗಿರಿ ಮಾಳವಣ ಪ್ರದೇಶದಿಂದ ಅಲ್ಲಿಗೆ ವಲಸೆ ಹೋಗಿರಬೇಕು. ಈಗ ಅವರ ಆಡುಭಾಷೆಯಲ್ಲಿ ಕೇವಲ ೨೦% ರಷ್ಟು ಮಾತ್ರ ಕೊಂಕಣಿ ಪದಗಳು ಉಳಿದಿವೆ. ಗುಜರಾತಿನಲ್ಲಿ ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿ ಅಲ್ಲಿಯ ಸರಕಾರದಿಂದ ಅನೇಕ ಸೌಲಭ್ಯಗಳನ್ನು ಪಡೆದು, ಆರ್ಥಿಕ, ಸಾಮಾಜಿಕ ಮತ್ತು ವೃತ್ತಿ ಬದುಕಿನಲ್ಲಿ ಏಳಿಗೆಯನ್ನು ಸಾಧಿಸಿದ್ದಾರೆ. ಅವರಲ್ಲಿ ಒಬ್ಬಿಬ್ಬರು ಸರಕಾರದ ಇಲಾಖೆಗಳಲ್ಲಿ ಮತ್ತು ವಿಶ್ವವಿದ್ಯಾಲಯದಲ್ಲಿ ಉನ್ನತ ಸ್ಥಾನವನ್ನು ತಲುಪಿದ್ದಾರೆ. ಬಿ.ಎ., ಬಿ.ಇಡ್. ಪದವಿ ಶಿಕ್ಷಣ ಪಡೆದು ಶಾಲೆ, ಕಾಲೇಜುಗಳಲ್ಲಿ ಅಧ್ಯಾಪನವನ್ನು ನಡೆಸುವವರೂ ಇದ್ದಾರೆ.

ಇಡೀ ದೇಶದಲ್ಲಿ ಕೊಂಕಣಿ ಭಾಷಿಕರ ಸಂಖ್ಯೆಯನ್ನು ತಿಳಿದುಕೊಳ್ಳಲು ದಶವಾರ್ಷಿಕ ಜನಗಣತಿಯ ಮೇಲೆ ಕಣ್ಣಾಡಿಸಿದಾಗ, ಗುಜರಾತಿನಲ್ಲಿ ೧.೬೦ ಲಕ್ಷ ಮಂದಿ ಕೊಂಕಣಿ ಭಾಷಿಕರು ಇರುವುದು ನಮಗೆ ತಿಳಿದು ಬಂತು. ಆದರೆ ಅವರು ಎಲ್ಲೆಲ್ಲಿ ವಾಸವಾಗಿದ್ದಾರೆ ಎನ್ನುವುದು ನಮಗೆ ಗೊತ್ತಾಗಿರಲಿಲ್ಲ.

ಮೂಲತಃ ಮಂಗಳೂರಿನವರಾಗಿ, ಈಗ ಗುಜರಾತಿನ ವಾಪಿ(ವಲ್ಸಾಡ) ನಗರದಲ್ಲಿ ವಾಸಿಸಿರುವ ಡಾ. ಉಷಾ ಹೆರಂಜಾಳ ಎಂಬವರು ಒಮ್ಮೆ ಮಂಗಳೂರಿಗೆ ಬಂದಿದ್ದಾಗ ನಮ್ಮ ವಿಶ್ವ ಕೊಂಕಣಿ ಕೇಂದ್ರಕ್ಕೆ ಭೇಟಿ ನೀಡಿದ್ದರು. ಆಗ ಅವರು ನನ್ನಲ್ಲಿ ವಲ್ಸಾಡ, ನವಸಾರಿ ಜಿಲ್ಲೆಗಳಲ್ಲಿ ಸುಮಾರು ಒಂದೂವರೆ ಲಕ್ಷ ಕೊಂಕಣಿ ಭಾಷಿಕರು ಇರುವುದಾಗಿಯೂ ಅವರು ಜನಗಣತಿಯಲ್ಲಿ ತಮ್ಮನ್ನು ಅದೇ ರೀತಿ ದಾಖಲಿಸಿರುವುದಾಗಿಯೂ ತಿಳಿಸಿದರು. ಅದನ್ನು ಕೇಳಿ ನಾನು ಒಮ್ಮೆ ಅವರ ಊರಿಗೆ ಭೇಟಿ ನೀಡಿ ನಮ್ಮ ಸಮಾಜ ಬಾಂಧವರನ್ನು ಭೇಟಿಯಾಗುವುದಾಗಿ ತಿಳಿಸಿದೆ.

ಡಾ. ಉಷಾ ಹೆರಂಜಾಳ ಮಣಿಪಾಲದ ಕೆ.ಎಂ.ಸಿ ಮೆಡಿಕಲ್ ಕಾಲೇಜಿನಲ್ಲಿ ಓದಿದ ನೇತ್ರತಜ್ಞೆ, ವಿವಾಹವಾದ ಬಳಿಕ ವಲ್ಸಾಡನಲ್ಲಿ ನೆಲೆಸಿ ಅಲ್ಲಿಯೇ ಚಿಕಿತ್ಸಾಲಯ ನಡೆಸುತ್ತಿದ್ದಾರೆ. ಅದಕ್ಕಿಂತಲೂ ವಿಶೇಷವಾಗಿ ಅವರು ಕಳೆದ ೨೦-೨೫ ವರ್ಷಗಳಿಂದ ವಲ್ಸಾಡ್ ನಗರದ ಸುತ್ತುಮುತ್ತ ೫೦-೬೦ ಮೈಲಿ ಅಂತರದಲ್ಲಿರುವ ಹಳ್ಳಿಪ್ರದೇಶಗಳಿಗೆ ಹೋಗಿ ಬಡವರಿಗಾಗಿ ಸೇವಾ ಮನೋಭಾವದಲ್ಲಿ "ಉಚಿತ ನೇತ್ರ ಚಿಕಿತ್ಸಾ ಶಿಬಿರ"ವನ್ನು ನಡೆಸುತ್ತಾ ಬಂದಿದ್ದಾರೆ. ಅವರ ಪತಿ ಡಾ. ಹೇರಂಜಾಳರು ಕೂಡ ಅರಿವಳಿಕೆ ತಜ್ಞರಾಗಿ ಪತ್ನಿಯೊಂದಿಗೆ ಶಿಬಿರದಲ್ಲಿ ಪಾಲುಗೊಳ್ಳುತ್ತಾರೆ. ಡಾ. ಹೆರಂಜಾಳರು ಅಲ್ಲಿ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದಾರಲ್ಲದೆ, ರೋಟರಿ ಕಾರ್ಯಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಾರೆ.

ಇದುವರೆಗೆ ಸುಮಾರು ೫೦೦-೬೦೦ ನೇತ್ರ ಶಿಬಿರಗಳನ್ನು ನಡೆಸಿರುವ ಡಾ. ಉಷಾ ಹೆರಂಜಾಳ ವಲ್ಸಾಡ ಪ್ರದೇಶದಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿ. ಅವರಲ್ಲಿ ಚಿಕಿತ್ಸೆಗೆ ಬರುವ ಹಳ್ಳಿ ಜನರು ತಮ್ಮ ಭಾಷೆ ಕೊಂಕಣಿ ಎಂದು ಹೇಳುತ್ತಿದ್ದುದನ್ನು ಅವರು ನನಗೆ ತಿಳಿಸಿದ್ದರು. ಹೀಗಾಗಿ ನಾನು ಅವರನ್ನು ಭೇಟಿಯಾಗಲು ಉತ್ಸುಕನಾಗಿ ಡಾ. ಉಷಾ ಹೆರಂಜಾಳರ ಊರಿಗೆ ಹೊರಟು ನಿಂತೆ.

ನಾನು ಮಂಗಳೂರಿನಿಂದ ಹೊರಟು ಮುಂಬೈ ತಲುಪಿ ಅಲ್ಲಿಂದ ಫೆಬ್ರವರಿ ೨೩, ೨೦೧೧ರಂದು ಬೆಳಗ್ಗೆ ಗುಜರಾತಿನ ವಲ್ಸಾಡ್ ಊರು ತಲುಪಿದೆ. ಡಾ. ಉಷಾ ಹೆರಂಜಾಳರು ನನ್ನನ್ನು ಸ್ಟೇಷನ್ನಿನಲ್ಲಿ ಬರಮಾಡಿಕೊಂಡು ಅವರ ಕಾರಿನಲ್ಲಿ ನೇರವಾಗಿ ವೆಸ್ತಾ ಎಂಬ ಊರಿಗೆ(ನವಸಾರಿ) ಕರೆದುಕೊಂಡು ಹೋದರು. ಅಂದು ಅಲ್ಲಿ ಅವರ ನೇತ್ರ ಚಿಕಿತ್ಸಾ ಶಿಬಿರ ನಡೆಯುವುದಿತ್ತು. ಅಲ್ಲಿ ನನಗೆ ಕೊಂಕಣಿ ಭಾಷೆಯನ್ನಾಡುವ ಅನೇಕ ಮಂದಿ ಭೇಟಿಯಾದರು. ನಾನು ಅವರೊಂದಿಗೆ ಮಂಗಳೂರು ಕೊಂಕಣಿಯಲ್ಲಿ ಮಾತನಾಡಿದೆ. ಅವರಿಗೆ ಅದು ಅರ್ಥವಾಗಿರಬಹುದು. ಅವರ ಮಾತಿನಿಂದ ತಿಳಿದು

ಬಂದದ್ದೇನೆಂದರೆ, ಅವರ ಹಿರಿಯರು ಸುಮಾರು ೧೦೦– ೨೦೦ ವರ್ಷಗಳ ಹಿಂದೆ ಗೋವೆಯ ಉತ್ತರ ಭಾಗದಲ್ಲಿರುವ ಕೊಂಕಣ ಪ್ರದೇಶದಿಂದ ಕಾರ್ಮಿಕರಾಗಿ ಗುಜರಾತಿಗೆ ವಲಸೆ ಹೋಗಿದ್ದರು. ಅವರು ಈಗಲೂ ಬಡವರಾಗಿಯೇ ಇದ್ದಾರೆ. ಅವರು ಕೊಂಕಣಿ ಶಿಕ್ಷಣ ಪಡೆಯದೇ ಇದ್ದುದರಿಂದ ಸ್ಥಳೀಯ ಭಾಷೆ ಗುಜರಾತಿಯ ಅನೇಕ ಪದಗಳು ಅವರ ಮಾತಿನಲ್ಲಿ ಬೆರೆತು ಹೋಗಿವೆ. (ಕರ್ನಾಟಕದಲ್ಲಿರುವ ಕೊಂಕಣಿಗರು ಕನ್ನಡ ಪದಗಳನ್ನು ಬಳಸುವ ಹಾಗೆ).

ನಾವು ಅವರ ಮಕ್ಕಳಿಗೆ ಈಗಲೇ ಕೊಂಕಣಿ ಕಲಿಸುವುದನ್ನು ಪ್ರಾರಂಭಿಸಿದರೆ, ಮುಂದಿನ ಪೀಳಿಗೆ ಸಹಜವಾಗಿ ಕೊಂಕಣಿ ಮಾತನಾಡುವುದನ್ನು ಪ್ರಾರಂಭಿಸಬಹುದು ಎಂದು ನನಗೆ ಅನಿಸಿತು. ಡಾ. ಉಷಾ ಹೆರಂಜಾಳರ ಸಹಕಾರದಿಂದ ಆ ಪ್ರದೇಶದಲ್ಲಿ ಅನೇಕ ಕೊಂಕಣಿ ಕಾರ್ಯಗಳನ್ನು ನಡೆಸಬಹುದು ಎಂದು ನನಗೆ ನಂಬಿಕೆ ಬಂತು. ಆ ದಿನ ರಾತ್ರಿ ಡಾ. ಉಷಾ ಅವರ ಮನೆಯಲ್ಲಿ ಸೇರಿದ್ದ ೭೫–೮೦ ಕೊಂಕಣಿ ಭಾಷಿಕ ಮಂದಿಯ ಮುಂದೆ ಈ ವಿಷಯವನ್ನು ತಿಳಿಸಿದಾಗ, ಅದಕ್ಕೆ ತಾವು ಸಹಕಾರ ನೀಡುವುದಾಗಿ ಅವರು ತಿಳಿಸಿದರು.

ಗುಜರಾತಿನಿಂದ ಬಂದ ಬಳಿಕ ನಾನು ಈ ವಿಷಯವನ್ನು ಗೋವೆಯಲ್ಲಿ ನಡೆದ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಕಾರ್ಯಕಾರಿ ಮಂಡಳಿಯ ಮುಂದೆ ಪ್ರಸ್ತಾಪಿಸಿದೆ. ಅಖಿಲ ಭಾರತ ಕೊಂಕಣಿ ಪರಿಷತ್ತು, ಗೋವಾ ಸರಕಾರ, ಗೋವಾ ಕೊಂಕಣಿ ಅಕಾಡೆಮಿ ಮತ್ತು ಕೊಂಕಣಿ ಭಾಸ್ ಆನಿ ಸಂಸ್ಕೃತಿ ಪ್ರತಿಷ್ಠಾನ (ವಿಶ್ವ ಕೊಂಕಣಿ ಕೇಂದ್ರ) ಒಟ್ಟು ಸೇರಿ ಗುಜರಾತಿನಲ್ಲಿರುವ ಆ ಕೊಂಕಣಿ ಜನರನ್ನು ಮತ್ತೆ ಮುಖ್ಯವಾಹಿನಿಗೆ ಕರೆತರಲು ಕಾರ್ಯ ನಿರ್ವಹಿಸುವುದೆಂದು ನಿರ್ಣಯವಾಯಿತು. ಆ ಕಾರ್ಯದ ಸ್ವರೂಪ ಹೀಗಿರುತ್ತದೆ: ೧. ಗುಜರಾತಿನಲ್ಲಿರುವ ಕೊಂಕಣಿ ಜನರ ಮಕ್ಕಳಿಗೆ ಅವರ ಶಾಲಾ ಸಮಯ ಮುಗಿದ ಬಳಿಕ ಒಂದು ಗಂಟೆ ಕೊಂಕಣಿ ಪಾಠ ಹೇಳಿಕೊಡುವುದು(ಹಿಂದೆ ನಮಗೆ ಹಿಂದಿ ಪ್ರಚಾರ ಸಮಿತಿಯವರು ಹಿಂದಿ ತರಗತಿ ತೆಗೆದುಕೊಂಡು ಹಿಂದಿ ಕಲಿಯುವ ಸೌಲಭ್ಯ ನೀಡುತ್ತಿದ್ದರು. ಅದೇ ರೀತಿ ಕೊಂಕಣಿ ತರಗತಿ ಪ್ರಾರಂಭಿಸುವುದು). ೨. ಕೊಂಕಣಿ ಕಲಿಯುವ ಮಕ್ಕಳಿಗೆ ಕೊಂಕಣಿ ಪಠ್ಯಪುಸ್ತಕ, ಸಣ್ಣಕಥೆಗಳ ಸಂಗ್ರಹ, ಕವಿತೆಗಳ ಸಂಗ್ರಹ, ನಾಟಕ ಇತ್ಯಾದಿ ನೀಡಿ ಅವರಲ್ಲಿ ಕೊಂಕಣಿ ಕಲಿಯುವ ಆಸಕ್ತಿ ಮೂಡಿಸುವುದು, ೩. ಅಲ್ಲಿಯ ಶಾಲಾ ಅಧ್ಯಾಪಕರನ್ನು ಗೋವೆಗೆ ಕರೆಯಿಸಿ ಅವರಿಗೆ ಕೊಂಕಣಿ ಕಲಿಸುವುದರ ಕುರಿತು ನಿಶ್ಚಿತ ಅವಧಿಯಲ್ಲಿ ತರಬೇತಿ ನೀಡುವುದು. ಜೊತೆಗೆ ಅವರಿಗೂ ಕೊಂಕಣಿ ಸಂಗೀತ, ನೃತ್ಯ, ನಾಟಕಗಳು ಇತ್ಯಾದಿ ಕುರಿತು ತರಬೇತಿ ನೀಡುವುದು, ೪. ಅಲ್ಲಲ್ಲಿ ಕೊಂಕಣಿ ಗ್ರಂಥಾಲಯಗಳನ್ನು ಸ್ಥಾಪಿಸುವುದು ೫. ವಿವಿಧ ವಿಷಯಗಳಲ್ಲಿ ನಿಯಮಿತ ಸ್ಪರ್ಧಾಕೂಟಗಳನ್ನು ಸಂಘಟಿಸುವುದು, ೬. ಅಲ್ಲಿಯ ಅಧ್ಯಾಪಕರನ್ನು ಮುಖ್ಯ ಅತಿಥಿಗಳಾಗಿ ಕರೆಯಿಸಿಕೊಂಡು ಅವರು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧಿವೇಶ, ಕೊಂಕಣಿ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಿಕೊಡುವುದು. ಈ ಕುರಿತು ನಾನು ಪತ್ರ ವ್ಯವಹಾರ ನಡೆಸಿದ್ದುಂಟು. ಅದನ್ನು ಅಖಿಲ ಭಾರತ ಕೊಂಕಣಿ ಪರಿಷತ್ತಿನ ಕಾರ್ಯಕಾರಿ ಮಂಡಳಿಯವರು ಒಪ್ಪಿಕೊಂಡಿದ್ದರು. ಅದರ ಕುರಿತು ನಾನು ಈಗಲೂ ಅವರಿಗೆ ನೆನಪಿಸಿಕೊಳ್ಳುತ್ತಿದ್ದೇನೆ.

೨೦೧೧ನೇ ಇಸವಿಯಲ್ಲಿ ಕಾರವಾರದಲ್ಲಿ ನಡೆದ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಡಾ. ಉಷಾ ಹೆರಂಜಾಳರು ಪ್ರಬಂಧ ಮಂಡಿಸಿದ್ದರು. ಆದರೆ ಗುಜರಾತಿನಿಂದ ಬರಬೇಕಾಗಿದ್ದ ಸಾಂಸ್ಕೃತಿಕ ಪಂಗಡ ಬಾರದೆ ಹೋಗಿದ್ದುದರಿಂದ, ಅವರಿಗೆ ಇಲ್ಲಿಯ ಜನರನ್ನು ಭೇಟಿ ಮಾಡಿಸಿ ಅವರೊಂದಿಗೆ ಬೆರೆಯಲು ಅವಕಾಶ ಕಲ್ಪಿಸುವುದು ಸಾಧ್ಯವಾಗಲಿಲ್ಲ.

ಆದರೂ, ೨೦೧೨ನೇ ಇಸವಿ ಫೆಬ್ರವರಿ ತಿಂಗಳ ೧೭, ೧೮, ಮತ್ತು ೧೯ ರಂದು ಮುಂಬೈಯಲ್ಲಿ ನಡೆದ ೨೮ನೇ ಅಖಿಲ ಭಾರತ ಕೊಂಕಣಿ ಪರಿಷತ್ತಿನ ಅಧಿವೇಶನದಲ್ಲಿ ಡಾ. ಉಷಾ ಹೆರಂಜಾಳರು ಭಾಗಿಯಾಗಿ, ಗುಜರಾತಿನಲ್ಲಿರುವ ಕೊಂಕಣಿ ಜನರ ಕುರಿತು ವಿಸ್ತೃತ ಮಾಹಿತಿ ನೀಡಿ ಮಾತನಾಡಿದ್ದರು. ಕೆಲವು ಕಾರಣಗಳಿಂದ ಈ ಕಾರ್ಯ ಮುಂದುವರಿಯಲಿಲ್ಲ.

●●

೫೪. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಪ್ರಥಮ ಕೊಂಕಣಿ ಲೇಖಕ ಶ್ರೀ ರವೀಂದ್ರ ಕೇಳೆಕರ

ಶ್ರೀ ರವೀಂದ್ರ ಕೇಳೆಕರ್ ಕೊಂಕಣಿ ಸಾಹಿತ್ಯದ ಪ್ರಸಿದ್ಧ ಲೇಖಕರು ಅವರು ಚಿಂತಕರಾಗಿ, ಬಹುಭಾಷಾ ಪರಿಣತರಾಗಿ ಮತ್ತು ಉತ್ತಮ ವಾಗ್ಮಿಯಾಗಿಯೂ ಪ್ರಸಿದ್ಧರಾಗಿದ್ದವರು. ಅವರಿಗೆ ಕೊಂಕಣಿ ಭಾಷೆಯೊಂದಿಗೆ ಮರಾಠಿ, ಹಿಂದಿ, ಗುಜರಾತಿ, ಇಂಗ್ಲಿಷ್, ಪೋರ್ತುಗೀಸ್ ಭಾಷೆಗಳೂ ತಿಳಿದಿದ್ದವು. ಅವರ ಬರೆವಣಿಗೆಯ ಹರವು ಹಲವು ಭಾಷೆಗಳಲ್ಲಿ ಹರಡಿಕೊಂಡಿದೆ.

ರವೀಂದ್ರ ಕೇಳೆಕರರು ತಮ್ಮ ತಾರುಣ್ಯದಲ್ಲಿ ಪ್ರಸಿದ್ಧ ಗಾಂಧಿವಾದಿ ಕಾಕಾ ಸಾಹೇಬ ಕಾಲೇಲಕರರ ಸಂಪರ್ಕಕ್ಕೆ ಬಂದದ್ದರಿಂದ, ಅವರು ವಾರ್ದಾ ಆಶ್ರಮದಲ್ಲಿ ಕೆಲಕಾಲವಿದ್ದು ಗಾಂಧೀತತ್ವವನ್ನು ರಕ್ತಗತವಾಗಿ ಮಾಡಿಕೊಂಡಿದ್ದರು. ಮುಂದೆ ಆಸ್ಸಾಂ ರಾಜ್ಯದಲ್ಲಿ ಗಾಂಧಿತತ್ವ ಮತ್ತು ದರ್ಶನವನ್ನು ಸಾಮಾನ್ಯ ಜನರಿಗೆ ತಲುಪಿಸುವ ಕಾರ್ಯ ನಡೆಸಿದರು. ನೂರಾರು ಕೊಂಕಣಿ, ಮರಾಠಿ ಲೇಖನಗಳನ್ನು ಬರೆದು ಜನಪ್ರಿಯರಾದರು. ಉತ್ತಮ ಸಾಹಿತ್ಯ ರಚಿಸುವವರನ್ನು ಬೆಳಕಿಗೆ ತರುವ ಉದ್ದೇಶದಿಂದ "ಜಾಗ್" ಪತ್ರಿಕೆಯನ್ನು ಪ್ರಾರಂಭಿಸಿ, ಚಲಾವಣೆಗೆ ತಂದರು. ಜಾಗ್ ಪತ್ರಿಕೆ ಅವರ ಮರಣೋತ್ತರವಾಗಿ ಅವರ ಸೋದರ ಸೊಸೆ ಡಾ. ಮಾಧವಿ ಸರದೇಸಾಯಿ ಅವರ ಸಂಪಾಕತ್ವದಲ್ಲಿ ಪ್ರಕಟವಾಗುತ್ತಿದೆ.

ರವೀಂದ್ರ ಕೇಳೆಕರ್ ಅವರು ಧರಿಸುತ್ತಿದ್ದ ಶುಭ್ರ ಶ್ವೇತ ಉಡುಪಿನ ಹಾಗೆ ಅವರ ಮನಸ್ಸು ಕೂಡ ಸ್ವಚ್ಛ, ನಿರ್ಮಲ. ಕೊಂಕಣಿ ಭಾಷೆ, ಸಾಹಿತ್ಯ ಮತ್ತು ಅದರ ಲಿಪಿ, ಕೊಂಕಣಿ ಸಮಾಜದ ಭವಿಷ್ಯದ ಕುರಿತು ಅವರ ನಿಲುವು ಸರಳ ಹಾಗೂ ಸ್ಪಷ್ಟವಾಗಿರುತ್ತಿತ್ತು. ಅವರ ವೈವಿಧ್ಯಮಯ ವಿಷಯಗಳನ್ನುಳ್ಳ ಲೇಖನಗಳನ್ನು ಸಾಮಾನ್ಯ ಓದುಗರೂ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗಿತ್ತು.

ಜ್ಞಾನಪೀಠ ಪ್ರಶಸ್ತಿ ಭಾರತೀಯ ಸಾಹಿತ್ಯಕಾರರು ರಚಿಸುವ ಉತ್ಕೃಷ್ಟ ಸಾಹಿತ್ಯಕೃತಿಗೆ ಸಲ್ಲುವ ಅತ್ಯುನ್ನತ ಗೌರವವಾಗಿದೆ. ಇದರ ಸ್ಥಾಪಕರು ಶ್ರೀಮಂತ ಉದ್ಯಮಿ, ದಾನಿ ಹಾಗೂ ದಾರ್ಶನಿಕರಾದ ಶ್ರೀ ಶಾಂತಿಪ್ರಸಾದ ಜೈನ್ ಮತ್ತು ಅವರ ಪತ್ನಿ ಶ್ರೀಮತಿ ರಮಾ ಜೈನ್. ಯಾವುದೇ ಭಾರತೀಯ ಭಾಷೆಯಲ್ಲಿ ಉನ್ನತ ಮಟ್ಟದ ಸಾಹಿತ್ಯ ಕೃತಿಯನ್ನು ರಚಿಸಿದ ಲೇಖಕರನ್ನು ಸನ್ಮಾನಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ಶ್ರೀ ರವೀಂದ್ರ ಕೇಳೆಕರರು ಅತ್ಯುತ್ತಮ ಸಾಹಿತ್ಯ ರಚನಕಾರರು ಎಂಬ ಮಾಹಿತಿ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯವರಿಗೆ ತಿಳಿದಿತ್ತು. ಆದರೆ ಶ್ರೀ ಕೇಳೆಕರರ ಸಾಹಿತ್ಯ ಇಂಗ್ಲಿಷ್ ಭಾಷೆಗೆ ಅನುವಾದವಾಗದೆ ಸಮಿತಿಯವರು ಶ್ರೀ ರವೀಂದ್ರರಿಗೆ ಪ್ರಶಸ್ತಿ ನೀಡುವುದರ ಕುರಿತು ಯಾವುದೇ ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಾಗಿರಲಿಲ್ಲ.

ನಾವು ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಶ್ರೀ ರವೀಂದ್ರ ಕೇಳೆಕರರ "ವೆಳೆ ವಯಲ್ಯೋ ಫುಲೊ" ಎಂಬ ಕೊಂಕಣಿ ಲೇಖನಗಳ ಸಂಗ್ರಹವನ್ನು ಇಂಗ್ಲಿಷ್‌ಗೆ ಅನುವಾದಿಸಿ "ಕೆಲೈಡೊಸ್ಕೋಪ್" ಎಂಬ ಗ್ರಂಥವನ್ನು ಪ್ರಕಟಿಸಿದ್ದೆವು. ಅದನ್ನು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯವರಿಗೆ ಕಳುಹಿಸಿಕೊಟ್ಟಿದ್ದೆವು. ಅದನ್ನು ಓದಿ ಶ್ರೀ ಕೇಳೆಕರರ ಸಾಹಿತ್ಯದ ಆಳವನ್ನು ತಿಳಿದುಕೊಂಡ ಸಮಿತಿಯವರು ೨೦೦೮ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಶ್ರೀ ರವೀಂದ್ರ ಕೇಳೆಕರರಿಗೆ ನೀಡಿದ್ದರು. ಲೇಖಕರಿಗೆ ನೀಡಿದ ಮಾನಪತ್ರದಲ್ಲಿ ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಕಟವಾಗಿರುವ ಶ್ರೀಮತಿ ವಿದ್ಯಾ ಪೈಯವರು ಇಂಗ್ಲಿಷಿಗೆ ಅನುವಾದಿಸಿದ ಶ್ರೀ ರವೀಂದ್ರ ಕೇಳೆಕಾರರ "ಕೆಲೈಡೊಸ್ಕೋಪ್" ಗ್ರಂಥದ ಉಲ್ಲೇಖ ಇದೆ.

ಪದ್ಮಭೂಷಣ ಪ್ರಶಸ್ತಿ ಪಡೆದ ಶ್ರೀ ರವೀಂದ್ರ ಕೇಳೆಕರರು ಆಗಸ್ಟ್ ೨೭, ೨೦೧೦ ರಂದು ತಮ್ಮ ೮೫ನೇ ವಯಸ್ಸಿನಲ್ಲಿ ದೈವಾಧೀನರಾಗಿದ್ದರು. ಅವರ ಸಾವಿನ ಸುದ್ದಿಯನ್ನು ಕೇಳಿ ಶ್ರೀ ಟಿ.ವಿ. ಮೋಹನದಾಸ ಪೈಯವರು ಶ್ರೀಯುತರ ಎಲ್ಲಾ ಕೃತಿಗಳನ್ನು ಖರೀದಿಸಿ ಗ್ರಂಥಾಲಯಗಳಿಗೆ ವಿತರಣೆ ಮಾಡಬೇಕೆಂದು ದೂರವಾಣಿಯ ಮೂಲಕ ವಿಶ್ವ ಕೊಂಕಣಿ ಕೇಂದ್ರಕ್ಕೆ ಆದೇಶ ನೀಡಿದ್ದರು. ಅದರಂತೆ ನಾವು ರವೀಂದ್ರರ

ಸೋದರ ಸೊಸೆ ಡಾ. ಮಾಧವಿ ಸರದೇಸಾಯಿ ಹಾಗೂ ಬಿಂಬ ಪ್ರಕಾಶನದ ಶ್ರೀ ದಿಲೀಪ ಬೋರಕರರನ್ನು ಸಂಪರ್ಕಿಸಿ ಶ್ರೀ ಕೇಳೆಕರರ ಎಲ್ಲಾ ಗ್ರಂಥಗಳನ್ನು ಕಳುಹಿಸಿಕೊಡುವಂತೆ ತಿಳಿಸಿದ್ದೆವು. ಅದೇ ರೀತಿ ಆ ಗ್ರಂಥಗಳು ಬಂದು ತಲುಪಿದ ಕೂಡಲೇ, "ಪದ್ಮವಿಭೂಷಣ ಡಾ. ರವೀಂದ್ರ ಕೇಳೆಕರ ಪುಸ್ತಕ ವಿತರಣ ಯೋಜನೆ" ಎಂಬ ಹೆಸರಿನಲ್ಲಿ ಕರ್ನಾಟಕದಲ್ಲಿರುವ ಮತ್ತು ಹೊರ ರಾಜ್ಯಗಳ ಕೊಂಕಣಿ ಜನರ ಆಡಳಿತವಿರುವ ಶಾಲೆಗಳು ಮತ್ತು ಕಾಲೇಜುಗಳಿಗೆ ಆ ಗ್ರಂಥಗಳನ್ನು ಕಳುಹಿಸಿಕೊಟ್ಟಿದ್ದೇವೆ. ಈ ಯೋಜನೆಗಾಗಿ ಶ್ರೀ ಟಿ.ವಿ. ಮೋಹನದಾಸ ಪೈಯವರು ಪ್ರತ್ಯೇಕವಾಗಿ ಐದು ಲಕ್ಷ ರೂ ದೇಣಿಗೆಯಾಗಿ ನೀಡಿದ್ದಾರೆ.

ಅದಮ್ಯ ಚೇತನ ಶ್ರೀ ಆರ್. ವಿ. ದೇಶಪಾಂಡೆ

ಇತ್ತೀಚೆಗಿನ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆಗೈದು ಮುಂಚೂಣಿಯಲ್ಲಿ ಗುರುತಿಸಿಕೊಂಡವರಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ರಾಜಕಾರಣಿ ಶ್ರೀ ರಘುನಾಥ ವಿಶ್ವನಾಥ ರಾವ್ ದೇಶಪಾಂಡೆ ಪ್ರಮುಖರು. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರ ಪ್ರಭಾವಲಯದಲ್ಲಿ ಪ್ರವೇಶ ಪಡೆದ ಬಳಿಕ ಶ್ರೀ ದೇಶಪಾಂಡೆಯವರು ರಾಜಕೀಯ ಕ್ಷೇತ್ರದಲ್ಲಿ ಕಾಲಿಟ್ಟರು. ಎಪ್ಪತ್ತರ ದಶಕದ ಜಯಪ್ರಕಾಶ ನಾರಾಯಣರ ಕ್ರಾಂತಿಯ ಪ್ರಾರಂಭದ ದಿನಗಳಲ್ಲಿ ಅವರು ಅದರಲ್ಲಿ ಪಾಲುಗೊಂಡಿದ್ದರು. ಆಮೇಲೆ ನಿಧಾನವಾಗಿ ಹೆಜ್ಜೆ ಇಡುತ್ತಾ ರಾಜಕೀಯ ಏಣಿಯನ್ನೇರಿದರು. ಹಳಿಯಾಳದ ಶಾಸಕರಾಗಿ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದರು.

ಶ್ರೀ ದೇಶಪಾಂಡೆಯವರು ತಮ್ಮ ಪ್ರಖರ ತಿಳಿವಳಿಕೆ, ಅಸ್ಖಲಿತ ಮಾತುಗಾರಿಕೆ, ತರ್ಕಬದ್ಧ ವಾದ ಸರಣಿಗಳಿಂದ ಕರ್ನಾಟಕ ರಾಜ್ಯದ ರಾಜಕೀಯ ರಂಗದಲ್ಲಿ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ವರ್ಚಸ್ವೀ ನಾಯಕರಾಗಿ, ಸಾರ್ವಜನಿಕ ವಲಯದಲ್ಲಿ ಪ್ರಮುಖ ನೇತಾರರಾಗಿ ಉನ್ನತ ಸ್ಥಾನವನ್ನು ಗಳಿಸಿದ್ದಾರೆ.

ಸನ್ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿಯವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ (೧೯೯೩), ನಾನು ಕೊಂಕಣಿ ಭಾಷಾ ಮಂಡಳದ ಅಧ್ಯಕ್ಷನಾಗಿದ್ದೆ. ರಾಜ್ಯದಲ್ಲಿ ಕೊಂಕಣಿ ಅಕಾಡೆಮಿಯನ್ನು ಸರ್ಕಾರ ಸ್ಥಾಪಿಸಬೇಕೆಂಬ ನಿವೇದನಾ ಪತ್ರವನ್ನು ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿಯವರಿಗೆ ನೀಡುವ ಉದ್ದೇಶದಿಂದ ನಾವು ಪ್ರತಿನಿಧಿಗಳ ನಿಯೋಗದೊಂದಿಗೆ ಹೋಗಿದ್ದೆವು. ಈ ನಿಯೋಗದಲ್ಲಿ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ದೇಶಪಾಂಡೆಯವರು, ಮಂತ್ರಿಗಳಾಗಿದ್ದ ಬ್ಲೇಸಿಯಸ್ ಡಿಸೋಜಾ, ಎಂ.ಎಲ್.ಸಿ. ಶ್ರೀ ನಾರಾಯಣ ನಾಯಕ್ ಹಾಗೂ ಇನ್ನಿತರ ಕೊಂಕಣಿ ಮಹನೀಯರಿದ್ದರು. ನಾನು ನಿವೇದನಾ ಪತ್ರವನ್ನು ಓದಿ ಶ್ರೀ ಮೊಯಿಲಿಯವರ ಕೈಗೆ ಅದನ್ನು ನೀಡಿದೆ. ಆಗ ಶ್ರೀ ದೇಶಪಾಂಡೆಯವರು ಮೊಯಿಲಿಯವರಲ್ಲಿ, "ನೀವು ವಿಧಾನಸಭೆಯಲ್ಲಿ ಕೊಂಕಣಿ ಅಕಾಡೆಮಿ ನೀಡುವುದಾಗಿ ಹೇಳಿ, ನಾನು ಅದನ್ನು ಬೆಂಬಲಿಸುತ್ತೇನೆ," ಎಂದು ದೃಢವಾಗಿ ಹೇಳಿದ್ದು ನನಗೆ ಈಗಲೂ ನೆನಪಿದೆ.

ಎರಡನೆಯದಾಗಿ, ೧೯೯೫ನೇ ಇಸವಿಯಲ್ಲಿ ನಾವು ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನವನ್ನು ಆಯೋಜಿಸಿದ ದಿನಗಳಲ್ಲಿ ಜನತಾದಳ ಸರಕಾರದ ಮುಖ್ಯಮಂತ್ರಿ ಶ್ರೀ ದೇವೇಗೌಡರ ಸಚಿವ ಸಂಪುಟದಲ್ಲಿ ಶ್ರೀ ದೇಶಪಾಂಡೆಯವರು ಮಂತ್ರಿಗಳಾಗಿದ್ದರು. ನಾನು ಅವರನ್ನು ಭೇಟಿಯಾಗಿ, "ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಕರ್ನಾಟಕ ಸರಕಾರದ ವತಿಯಿಂದ ಅನುದಾನ ಕೊಡಿಸಬೇಕು" ಎಂದು ವಿನಂತಿಸಿದಾಗ, ಅವರು ಅದಕ್ಕೆ ಸ್ಪಂದಿಸಿ ಸನ್ಮಾನ್ಯ ಶ್ರೀ ದೇವೇಗೌಡರು ಹತ್ತು ಲಕ್ಷ ರೂ ಅನುದಾನ ನೀಡುವಂತೆ ಪ್ರಭಾವ ಬೀರಿದ್ದು ನಮಗೆ ವಿಶೇಷ ಉತ್ತೇಜನವಾಗಿ ಪರಿಣಮಿಸಿತ್ತು.

"ನಾನು ಕೊಂಕಣಿಗನಾಗಿರಲಿಲ್ಲ, ನನ್ನ ಪತ್ನಿ(ಅವರು ಗೋವೆಯವರು) ನನ್ನನ್ನು ಕೊಂಕಣಿ ಮಾಡಿದ್ದಾರೆ," ಹೀಗೆ ದೇಶಪಾಂಡೆಯವರು ಭಾಷಣದಲ್ಲಿ ಹೇಳುವುದುಂಟು. ಶ್ರೀಮತಿ ದೇಶಪಾಂಡೆ ಓರ್ವ ಆದರ್ಶ, ಮಮತಾಮಯಿ ಭಾರತೀಯ ಮಹಿಳೆ. ಪತಿ ಶ್ರೀ ದೇಶಪಾಂಡೆಯವರು ಅವರ ರಾಜಕೀಯ ಮತ್ತು ಇತರ ಸಾರ್ವಜನಿಕ ಕ್ಷೇತ್ರದ ಕಾರ್ಯಗಳಲ್ಲಿ ಮಗ್ನರಾಗಿ ಸಕ್ರಿಯರಾಗಿರುವಾಗ, ಮನೆ, ಮಕ್ಕಳು, ಸಂಸಾರದ ಸರ್ವ ಜವಾಬ್ದಾರಿಯನ್ನು ಸಂಭಾಳಿಸುತ್ತಿರುವವರು ಶ್ರೀಮತಿ ದೇಶಪಾಂಡೆಯವರದು.

ವಿಶ್ವ ಕೊಂಕಣಿ ಸಮ್ಮೇಳನದ ಬಳಿಕ ನಮ್ಮ ಕೊಂಕಣಿ ಕಾರ್ಯಗಳಲ್ಲಿ ಶ್ರೀ ದೇಶಪಾಂಡೆಯವರು ಹೆಚ್ಚು ಹೆಚ್ಚು ಭಾಗಿಯಾಗುವ ಹಾಗಾಯಿತು. ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣದಲ್ಲಿ ಅವರು ನೀಡಿದ ಸಹಾಯ, ಸಹಕಾರ ಅಪಾರ.

ಶ್ರೀ ಕೆ.ಕೆ. ಪೈಯವರು ದೇಶಪಾಂಡೆಯವರನ್ನು ನಾವು ಚೇರಮನ್(ಎಮಿರಿಟಿಸ್) ಮಾಡುವ ಸೂಚನೆ ನೀಡಿದ್ದರು. ಅದನ್ನು ನಾನು ಸಮಿತಿಯಲ್ಲಿ ಮಂಜೂರು ಮಾಡಿಸಿದೆ. ಈಗ ಶ್ರೀ ಆರ್.ವಿ. ದೇಶಪಾಂಡೆಯವರು ಕೊಂಕಣಿ ಭಾಸ್ ಆನಿ ಸಂಸ್ಕೃತಿ ಪ್ರತಿಷ್ಠಾನದ ವಿಶ್ವಸ್ಥ ಮಂಡಳಿಯ ಹಿರಿಯರಾಗಿ ನಮ್ಮ ಜೊತೆಯಲ್ಲಿದ್ದಾರೆ.

ನಾನು ಕೊಂಕಣಿ ಕಾರ್ಯಗಳಿಗಾಗಿ ಅವರಲ್ಲಿ ಸಹಾಯ ಬೇಡಲು ಹೋದಾಗಲೆಲ್ಲಾ ಶ್ರೀ ದೇಶಪಾಂಡೆ-ಯವರು ತುಂಬಾ ಸಹಾಯ, ಸಹಕಾರದೊಂದಿಗೆ ಮಾರ್ಗದರ್ಶನ ನೀಡಿದ್ದಾರೆ. ೨೦೦೮ರಲ್ಲಿ ನಾವು ವಿಶ್ವ ಕೊಂಕಣಿ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಧನ ಸಂಗ್ರಹ ಮಾಡಲು ದುಬಾಯಿಗೆ ಹೋದಾಗ ಶ್ರೀ ದೇಶಪಾಂಡೆಯವರೂ ನಮ್ಮ ಜೊತೆ ಬಂದಿದ್ದರು. ಅದರಿಂದ ನಮಗೆ ದುಬಾಯಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಂಬಲ ದೊರೆಯುವಂತಾಗಿತ್ತು.

ಶ್ರೀ ರಘುನಾಥ ರಾವ್ ವಿಶ್ವನಾಥ ರಾವ್ ದೇಶಪಾಂಡೆಯವರ ಜನ್ಮಸ್ಥಳ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ. ಅವರ ಪೂರ್ವಜರು ಜಿಲ್ಲೆಯ ದೊಡ್ಡ ಜಮೀನುದಾರರು. ಸಾವಿರಾರು ಎಕರೆ ಭೂಮಿಯ ಮಾಲಕರು. ಅವರ ತಂದೆ ಶ್ರೀ ವಿಶ್ವನಾಥ ರಾವ್ ಬೆಳಗಾವಿ ಜಿಲ್ಲೆಯಲ್ಲಿ ಪ್ರಸಿದ್ಧ ನ್ಯಾಯವಾದಿಯಾಗಿದ್ದವರು. ಶ್ರೀ ರಘುನಾಥ ರಾವ್ ದೇಶಪಾಂಡೆಯವರು ಕೂಡ ತಮ್ಮ ತಾರುಣ್ಯದಲ್ಲಿ ನ್ಯಾಯವಾದಿಯಾಗಿ ವೃತ್ತಿ ನಡೆಸಿಕೊಂಡು ಇದ್ದವರು. ಶ್ರೀಮಂತ, ಕ್ರಿಯಾಶೀಲ ವ್ಯಕ್ತಿತ್ವದ, ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿಯಿದ್ದು ವಿಶಾಲದೃಷ್ಟಿ ಮತ್ತು ಹೃದಯವಂತಿಕೆಯನ್ನು ಹೊಂದಿದ್ದ ಅವರನ್ನು ಆಗ ಕರ್ನಾಟಕದಲ್ಲಿ ಮಾತ್ರವಲ್ಲ ದೇಶದಲ್ಲಿಯೇ ಅಗ್ರಗಣ್ಯ ರಾಜಕೀಯ ನೇತಾರರೆಂದು ಪ್ರಸಿದ್ಧರಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ರಾಜಕೀಯ ರಂಗಕ್ಕೆ ಕರೆಯಿಸಿಕೊಂಡು, ಮೊದಲು ಶಾಸಕರಾಗುವಂತೆ, ಆಮೇಲೆ ಮಂತ್ರಿಮಂಡಲದಲ್ಲಿ ಸೇರಿಸಿ ಶ್ರೀ ದೇಶಪಾಂಡೆಯವರ ಕರ್ತವ್ಯಪರ ಮತ್ತು ಕ್ರಿಯಾಶೀಲ ಗುಣಗಳಿಗೆ ವಿಶಾಲ ವೇದಿಕೆಯನ್ನೇ ಕಲ್ಪಿಸಿಕೊಟ್ಟಿದ್ದರು. ಮುಂದೆ ಅವರು ಶ್ರೀ ಹೆಚ್.ಡಿ. ದೇವೇಗೌಡ, ಧರಮ್ ಸಿಂಗ್ ಇವರ ಮಂತ್ರಿಮಂಡಲ-ದಲ್ಲಿಯೂ ನೇಮಕಗೊಂಡು ತಮ್ಮದೇ ಸ್ವಂತ ವ್ಯಕ್ತಿತ್ವದ ಶಕ್ತಿಯಿಂದ ರಾಜ್ಯದಲ್ಲಿ ಮತ್ತು ದೇಶದಲ್ಲಿ ಕಾಣಿಸಿಕೊಳ್ಳುವ ಹಾಗಾಯಿತು. ವಿಶ್ವ ಕೊಂಕಣಿ ಕೇಂದ್ರದ ಯೋಜನೆ ಸಫಲಗೊಳ್ಳಲು ಶ್ರೀ ದೇಶಪಾಂಡೆಯವರ ಪ್ರಭಾವಲಯ ತುಂಬಾ ಸಹಾಯ ಮಾಡಿದೆ.

೨೦೧೧ ರಲ್ಲಿ ಶ್ರೀ ಆರ್. ವಿ. ದೇಶಪಾಂಡೆಯವರ ಜೀವನ ಚರಿತ್ರೆ "ಅದಮ್ಯ ಚೇತನ" ಬೆಂಗಳೂರಿನಲ್ಲಿ ಬಿಡುಗಡೆಯಾದಾಗ ನಾನು ಆ ಕಾರ್ಯಕ್ರಮದಲ್ಲಿ ಹಾಜರಿದ್ದೆ.

ಪದ್ಮ ವಿಭೂಷಣ ರಾಜರ್ಷಿ ಡಾ. ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು

ನಾನು ಸಣ್ಣವನಿರುವಾಗ ಧರ್ಮಸ್ಥಳದ ಆಗಿನ ಧರ್ಮಾಧಿಕಾರಿ ಪೂಜ್ಯ ಶ್ರೀ ಮಂಜಯ್ಯ ಹೆಗ್ಗಡೆಯವರನ್ನು ಎಲ್ಲರೂ 'ಮಾತನಾಡುವ ಮಂಜುನಾಥ'ನೆಂದೇ ಕರೆಯುತ್ತಿದ್ದರು. ಅದೇ ಪರಂಪರೆಯಲ್ಲಿ ಬೆಳೆದು ಬಂದಿರುವ ಶ್ರೀ ಕ್ಷೇತ್ರದ ಈಗಿನ ಧರ್ಮಾಧಿಕಾರಿ ರಾಜರ್ಷಿ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಜನಸಾಮಾನ್ಯರಿಂದ ಮೊದಲ್ಗೊಂಡು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವವರು ಕೂಡ 'ಮಾತನಾಡುವ ಮಂಜುನಾಥ' ನೆಂದೇ ಭಾವಿಸುತ್ತಾ ನಡೆದುಕೊಳ್ಳುತ್ತಿರುವುದು ಶ್ರೀ ಕ್ಷೇತ್ರದ ವಿಶೇಷ ಕಾರಣಿಕವೆಂದು ನನಗೆ ಭಾಸವಾಗುವುದಿದೆ. ಅದರಲ್ಲೂ ನಮಗೆ ಬಂಟವಾಳದವರಿಗೆ ಅವರು ಬಂಟವಾಳದಲ್ಲಿಯೇ ಹುಟ್ಟಿ ಜೀವನದಿ ನೇತ್ರಾವತಿಯ ದಡದಲ್ಲಿ ಆಡುತ್ತ ಆಡುತ್ತ ಬೆಳೆದು ಬಂದವರು. ಶಾಲಾ ದಿನಗಳನ್ನು ನಮ್ಮ ಊರಿನ ಶಾಲೆಗಳಲ್ಲಿಯೇ ಕಳೆದವರು ಎಂದು ಹೇಳಿಕೊಳ್ಳುವುದೇ ಒಂದು ಹೆಗ್ಗಳಿಕೆ.

ಇಂದು ಡಾ. ವೀರೇಂದ್ರ ಹೆಗ್ಗಡೆಯವರು ಬರೇ ನಮ್ಮವರಾಗಿ ಮಾತ್ರ ಉಳಿಯದೇ ಅವರು ವಿಶ್ವ ವ್ಯಾಪಿಯಾಗಿರುತ್ತಾರೆ. ಶ್ರೀ ಮಂಜುನಾಥ ಸ್ವಾಮಿಯ ಕೃಪೆಯಿಂದ ಅವರು ಶ್ರೀ ಕ್ಷೇತ್ರದ ಆಶ್ರಯದಿಂದ ಜನಸಾಮಾನ್ಯರಿಂದ ಹಿಡಿದು ಜಾಗತಿಕ ಮಟ್ಟದ ಹಿರಿಯ ಪಂಡಿತರಿಗೂ ಉಪಯೋಗವಾಗುವ ಅಭಿವೃದ್ಧಿ ಯೋಜನೆಗಳಿಗೆ ಕೈಯಿಕ್ಕಿ ಮುಂದುವರಿಯುತ್ತ ಗೋಮಟ ಸದೃಶರಾಗಿ ಆಕಾಶಗಾತ್ರಕ್ಕೆ ಏರಿ ಕೀರ್ತಿ ಶಿಖರಗಳನ್ನು ಮುಟ್ಟುತ್ತಲಿರುವುದನ್ನು ನೋಡುತ್ತಲಿದ್ದೇನೆ. ವಿಸ್ಮಿತನಾಗಿದ್ದೇನೆ.

ಶ್ರೀ ಧರ್ಮಸ್ಥಳ ಕ್ಷೇತ್ರದಿಂದ ನಾಡಿನ ಹಲವೆಡೆಗಳಲ್ಲಿ ಹಲವಾರು ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಿಕ ಕಟ್ಟಡಗಳನ್ನು ಕಟ್ಟಿಸುತ್ತಾ ಆಯುರ್ವೇದ ಮತ್ತು ಆಲೋಪತಿ ಕಾಲೇಜುಗಳನ್ನು, ವಿಶ್ವವಿದ್ಯಾಲಯಗಳನ್ನು, ಆಸ್ಪತ್ರೆಗಳನ್ನೂ ಪ್ರಾರಂಭಿಸಿರುತ್ತಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ವತಿಯಿಂದ ಗ್ರಾಮಾಭಿವೃದ್ಧಿ ಯೋಜನೆ

ಮತ್ತು ಧರ್ಮೋತ್ಥಾನ ಟ್ರಸ್ಟ ಮೂಲಕ ಹಳೆಯ ದೇವಸ್ಥಾನಗಳ ಪುನರ್ ನವೀಕರಣ ಹಾಗೂ ಹಲವಾರು ಊರುಗಳಲ್ಲಿ ಸಶಾನಗಳನ್ನು ಜನರಿಗಾಗಿ ಒದಗಿಸಿದ್ದಾರೆ. ನಾಡಿನಾದ್ಯಂತ ಭಜನಾ ಮಂಡಳಿಗಳ ಉದ್ಧಾರಕ್ಕೆ ಅವರು ನೀಡಿದ ಆಶ್ರಯ ಪಂಡಿತರಿಂದ ಪಾಮರರಾದಿಯಾಗಿ ಎಲ್ಲರೂ ಗೌರವಿಸು-ವಂತಹುದು.

ನಮ್ಮ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಧನ ಸಹಾಯಕ್ಕಾಗಿ ಅವರಲ್ಲಿ ನಾನು ಹೋಗಿದ್ದೇನೆ. ನಮ್ಮ ಬಂಟವಾಳದ ಮುಖ್ಯವಾಗಿ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲಿನ ನೂತನ ವಾಚನಾಲಯ ಕಟ್ಟಡ ಕಟ್ಟುವಾಗ ದೇಣಿಗೆಗಾಗಿ ಅವರಲ್ಲಿಗೆ ಹೋಗಿದ್ದೆ ಅವರು ಉದಾರವಾಗಿ ದೇಣಿಗೆ ನೀಡಿದ್ದರು. ಮತ್ತು ಕಟ್ಟಡದ ಉದ್ಘಾಟನೆಗಾಗಿ ಅವರಲ್ಲಿ ವಿನಂತಿಸಿಕೊಂಡಾಗ ಸಂತೋಷದಿಂದ ಒಪ್ಪಿ ಅವರು ಉದ್ಘಾಟನೆಗೂ ಬಂದಿದ್ದರು. ಮತ್ತೊಮ್ಮೆ ಮಲ್ಲಕಂಭ ಖ್ಯಾತಿಯ ಶ್ರೀ ಯಶವಂತ ವ್ಯಾಯಾಮ ಶಾಲೆಯ ಮಂಟಪ ಕಟ್ಟಿಸುವಾಗಲೂ ಧನ ಸಂಗ್ರಹಕ್ಕಾಗಿ ಹೋಗಿದ್ದೆ. ಅವರು ತಕ್ಷಣವೇ ಸ್ಪಂದಿಸಿ ನಾವು ಕೇಳಿದಷ್ಟು ಹಣಕ್ಕೆ ಬ್ಯಾಂಕ ಚೆಕ್ ಬರೆದು ಕೊಟ್ಟದ್ದೂ ಇದೆ. ಆದರೆ ಉದ್ಘಾಟನಾ ಸಮಾರಂಭಕ್ಕೆ ತಾವು ಬರಬೇಕೆಂದು ಕೇಳಿಕೊಂಡಾಗ ಮಾತ್ರ ಅವರು ಹೇಳಿದ ಒಂದು ಮಾತು ನನಗೆ ಇನ್ನೂ ನೆನೆಪಿನಲ್ಲಿ ಉಳಿದಿದೆ. 'ವಾಮನ ಶೆಣೈಯವರೇ ನಿಮ್ಮ ಯಾವುದೇ ಯೋಜನೆಗಳಿಗೂ ದೇಣಿಗೆಗಾಗಿ ಬೇಕಾದರೆ ಬನ್ನಿ ಆದರೆ ಸಮಾರಂಭಗಳಿಗೆ ಮಾತ್ರ ಕರೆಯುವುದು ಬೇಡ. ನನಗೆ ಬೇರೆ ಬೇರೆ ಊರುಗಳಿಗೆ ಆಹ್ವಾನ ನೀಡಿ ಕರೆದಾಗ ಅಲ್ಲಿಗೆ ಹೋಗಲೇ ಬೇಕಾಗುತ್ತದೆ. ಅವರಿಗೆ ಇಲ್ಲವೆನ್ನಲಾಗಲಿಕ್ಕಾಗುವುದಿಲ್ಲ' ಎಂದು ಹೇಳಿದರು.

ಮೇಡಮ್ ಗ್ರೇಸ್ ಪಿಂಟೊ

ಶ್ರೀಮತಿ ಗ್ರೇಸ್ ಪಿಂಟೊ ಓರ್ವ ಅಸಾಮಾನ್ಯ ಕೊಂಕಣಿ ಮಹಿಳೆ ಎಂದು ಹೇಳಬಹುದು. ಮೂಲತಃ ಮಂಗಳೂರಿನವರಾದ ಶ್ರೀಮತಿ ಗ್ರೇಸ್ ಪಿಂಟೊ ತಮ್ಮ ಪತಿ ಶ್ರೀ ಅಗೊಸ್ತಿನ್ ಪಿಂಟೊ ಜೊತೆ ದೆಹಲಿಗೆ ಹೋಗಿ ಅಲ್ಲಿ "ರಾಯನ್ ಇಂಟರನ್ಯಾಶನಲ್" ಸಮೂಹ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಈಗ ದೇಶದ ವಿವಿಧ ನಗರ, ಮಹಾನಗರಗಳಲ್ಲಿ ಮಾತ್ರವಲ್ಲ ಯುರೋಪು ಮತ್ತು ಇತರ ವಿದೇಶಗಳಲ್ಲಿಯೂ ರಾಯನ್ ಇಂಟರನ್ಯಾಶನಲ್ ಸಮೂಹಕ್ಕೆ ಸೇರಿದ ವಿದ್ಯಾಸಂಸ್ಥೆಗಳು ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣ, ಶಿಸ್ತು ಮತ್ತು ಜೀವನದಲ್ಲಿ ಗುಣಾತ್ಮಾಕ ದೃಷ್ಟಿಕೋನವನ್ನು ಬೆಳೆಸುವುದಕ್ಕೆ ತರಬೇತಿ ನೀಡುತ್ತಾ ಜಗದ್ವಿಖ್ಯಾತವಾಗಿವೆ. ಹೀಗಾಗಿ ಶ್ರೀಮತಿ ಗ್ರೇಸ್ ಪಿಂಟೊ ಅವರನ್ನು ಶ್ರೀ ಟಿ.ವಿ ಮೋಹನದಾಸ ಪೈಯವರು "Her Highness" ಎಂದು ಸಂಭೋಧಿಸುವುದು ಇದೆ.

ಶ್ರೀಮತಿ ಗ್ರೇಸ್ ಪಿಂಟೊ ನಮ್ಮ ವಿಶ್ವ ಕೊಂಕಣಿ ಕೇಂದ್ರಕ್ಕೆ ಮಾರ್ಚ್ ೫, ೨೦೧೧ರಂದು ಮಧ್ಯಾಹ್ನ ಬಂದಿದ್ದರು. ಅವರು ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ, ಕೊಂಕಣಿ ಭಾಷೆ ಮತ್ತು ಸಂಸ್ಕೃತಿಗಾಗಿ ನಾವು ಕೈಗೊಂಡಿರುವ ಯೋಜನೆಗಳು, ಅದರಲ್ಲಿಯೂ ವಿಶೇಷವಾಗಿ ಕೊಂಕಣಿ ವಿದ್ಯಾರ್ಥಿಗಳ ಉಚ್ಚ ಶಿಕ್ಷಣಕ್ಕಾಗಿ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಯ ಯೋಜನೆಯನ್ನು ತುಂಬಾ ಪ್ರಶಂಶಿಸಿದರು. ಅವರಿಗೆ ನನ್ನ ಮೇಲೆ ತುಂಬಾ ಅಭಿಮಾನ ಹುಟ್ಟಿಕೊಂಡಿತು.

ಮಣಿಪಾಲದ ಡಾ. ಟಿ. ರಾಮದಾಸ ಪೈಯವರಿಗೆ ಪದ್ಮ ವಿಭೂಷಣ ಪ್ರಶಸ್ತಿ ಬಂದಾಗ ಮತ್ತು ಮಾನ್ಯ ಶ್ರೀ ಎನ್.ಯೋಗೀಶ ಭಟ್ ಕರ್ನಾಟಕ ರಾಜ್ಯ ವಿಧಾನಸಭೆಯ ಉಪ ಸಭಾಪತಿಯಾಗಿ ಚುನಾಯಿತರಾದ ಸಂದರ್ಭದಲ್ಲಿ ನಾವು ಮಂಗಳೂರಿನ ಪುರಭವನದಲ್ಲಿ ಸುಂದರವಾದ ಸಮಾರಂಭವನ್ನು ಆಯೋಜಿಸಿದ್ದೆವು. ಆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀಮತಿ ಗ್ರೇಸ್ ಪಿಂಟೊ ಬಂದಿದ್ದರು. ಆಗ ಅವರು ತಮ್ಮ ಅಸ್ಖಲಿತ ಭಾಷಣವನ್ನು ಕೊಂಕಣಿಯಲ್ಲಿಯೇ ನೀಡಿದ್ದರು. ತಮ್ಮ ಶ್ರೀಮಂತ ಕಂಠದಲ್ಲಿ ದೇಶ ವಿದೇಶದ ವಿದ್ಯಾಕ್ಷೇತ್ರಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಮಾತನಾಡಿದ್ದರು. ವಿಶ್ವ ಕೊಂಕಣಿ ಕೇಂದ್ರದ ನಿರ್ಮಾಣ ಮತ್ತು ಯೋಜನೆಗಳ ಕುರಿತು, ಹಾಗೂ ನನ್ನ ವಿಚಾರವಾಗಿ ಅವರು ತುಂಬಾ ಕಾಳಜಿಪೂರ್ವಕವಾಗಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದರು.

೨೦೧೧ನೇ ಇಸವಿ, ನವೆಂಬರ ೧೦-೧೨ರವರೆಗೆ ಮೂರು ದಿನಗಳ ಕಾಲ ರಾಯನ್ಸ್ ಸಂಸ್ಥೆಯ ವತಿಯಿಂದ ದೆಹಲಿಯಲ್ಲಿ ನಡೆದ "ಅಂತಾರಾಷ್ಟ್ರೀಯ ವಿದ್ಯಾರ್ಥಿ ಸಾಂಸ್ಕೃತಿಕ ಉತ್ಸವ"ದ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸುವಂತೆ ಶ್ರೀಮತಿ ಪಿಂಟೊ ನನಗೆ ಆಮಂತ್ರಣ ನೀಡಿ ದೆಹಲಿಗೆ ಕರೆಯಿಸಿಕೊಂಡಿದ್ದರು. ಅಲ್ಲಿ ನನ್ನನ್ನು ಅವರು ತುಂಬಾ ಪ್ರೀತಿ, ವಿಶ್ವಾಸದಿಂದ ನೋಡಿಕೊಂಡಿದ್ದರಲ್ಲದೆ, ನಮ್ಮ ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿಗೆ ಐದು ಲಕ್ಷ ರೂ ದೇಣಿಗೆ ನೀಡಿದ್ದಾರೆ

ಮೇಡಂ ಗ್ರೇಸ್ ಪಿಂಟೊ ಕೊಂಕಣಿ ಮಹಿಳೆಯರಿಗೆ ಮಾತ್ರವಲ್ಲ ಭಾರತೀಯ ಮಹಿಳೆಯರಿಗೇ ಆದರ್ಶಪ್ರಾಯರಾಗಿದ್ದಾರೆ. ಅವರ ಕರ್ತೃತ್ವ ಶಕ್ತಿಗೆ ನಿದರ್ಶನವಾಗಿ ದೇಶ ವಿದೇಶಗಳ ವಿದ್ಯಾಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ "ರಾಯನ್ ಇಂಟರನ್ಯಾಶನಲ್ ವಿದ್ಯಾಸಂಸ್ಥೆ" ಇದೆ. ಈ ಸಮೂಹ ಸಂಸ್ಥೆಗೆ ಮತ್ತಷ್ಟು ಸಂಖ್ಯೆಗಳು ಸೇರಿಕೊಳ್ಳುತ್ತಾ ಇರುವುದು ಕೊಂಕಣಿ ಭಾಷಿಕರಿಗೆ ಹೆಮ್ಮೆಯ ವಿಚಾರವಾಗಿದೆ.

ಕಲಾ ಪ್ರವೀಣ ರಾಮದಾಸ ಶೇವಗೂರ

ಶ್ರೀ ಶೇವಗೂರ ರಾಮದಾಸ ಕಾಮತ್ ಓರ್ವ ಜನ್ಮಜಾತ ಚಿತ್ರಕಲಾವಿದರು. ಇವರ ತಂದೆ ಶ್ರೀ ಶೇವಗೂರ ಲಕ್ಷ್ಮಣ ಕಾಮತರು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿಯೇ ಮಂಗಳೂರಿನ ರಥಬೀದಿಯಲ್ಲಿ ತಮ್ಮ 'ಶೆವಗೂರ ಆರ್ಟ್ಸ್ ಕಲಾ ಶಾಲೆ'ಯನ್ನು ಪ್ರಾರಂಭಿಸಿ ಪ್ರಸಿದ್ಧರಾಗಿದ್ದರು.

ಶ್ರೀ ರಾಮದಾಸ ಕಾಮತರ ಕಾಲೇಜು ಶಿಕ್ಷಣ ಮಂಗಳೂರಿನಲ್ಲಿ ಮುಗಿದ ಬಳಿಕ ಅವರನ್ನು ಹೆಚ್ಚಿನ ಕಲಾ ತರಬೇತಿಗಾಗಿ ತಂದೆಯವರು ಮುಂಬೈಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಕಳುಹಿಸಿದ್ದರು. ಚಿತ್ರಕಲೆಯ ಪ್ರತಿಭೆ ರಕ್ತಗತವಾಗಿ ಬಂದಿದ್ದ ಶ್ರೀ ರಾಮದಾಸರಿಗೆ ಮುಂಬೈಯ ಪ್ರಸಿದ್ಧ ಕಲಾಶಾಲೆಯ ತರಬೇತಿ ಓರ್ವ ಪರಿಪೂರ್ಣ ಚಿತ್ರಕಲಾವಿದರಾಗಿ ರೂಪುಗೊಳ್ಳಲು ಕಾರಣವಾಯಿತು. ಅವರು ಅಪೂರ್ವ ವರ್ಣಚಿತ್ರಕಾರರಾಗಿ ಮರಳಿ ಬಂದು ಮಂಗಳೂರಿನ ತಮ್ಮ ತಂದೆಯವರ ಕಲಾಶಾಲೆಯನ್ನು ಸೇರಿಕೊಂಡರು ಎಂದು ಹೇಳಬಹುದು.

ಆಮೇಲೆ ಶ್ರೀ ರಾಮದಾಸರು ತಮ್ಮ ಕಲಾನೈಪುಣ್ಯದಿಂದ ತನ್ನ ತಂದೆಯವರ ಹೆಸರನ್ನು ಇನ್ನೂ ಹೆಚ್ಚು ಪ್ರಕಾಶಮಾನವಾಗಿ ಬೆಳೆಸಿದರಲ್ಲದೆ, ತಮ್ಮ ಗ್ರಾಹಕರ ಮತ್ತು ಕಲಾಸಕ್ತರ ಮನಸ್ಸನ್ನೂ ಗೆದ್ದುಕೊಂಡರು. ಅದರಲ್ಲಿಯೂ ವಿಶೇಷವಾಗಿ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಮತ್ತು ಡಾ. ಶಿವರಾಮ ಕಾರಂತರಂತಹ ಉನ್ನತ ವ್ಯಕ್ತಿಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ.

೧೯೯೬ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಿನಲ್ಲಿ ನಡೆಯಲಿದ್ದಾಗ, ಅದರ ಉದ್ಘಾಟನೆಗೆ ಎರಡು ದಿನ ಮೊದಲು ಜಿಲ್ಲೆಯ ಪ್ರಸಿದ್ಧ ಸಾಹಿತಿ ಡಾ. ಶಿವರಾಮ ಕಾರಂತರ ಸಾವು ಸಂಭವಿಸಿತ್ತು. ಹೀಗಾಗಿ ಸಮ್ಮೇಳನದ ಉದ್ಘಾಟನೆಯ ದಿನ ಕೋಟ ಶಿವರಾಮ ಕಾರಂತರ ವರ್ಣಚಿತ್ರ ಅನಾವರಣವನ್ನು ಶ್ರೀ ವೀರೇಂದ್ರ ಹೆಗ್ಗಡೆಯವರು ನಡೆಸಿದ್ದರು. ಕಾರಂತರ ಈ ವರ್ಣಚಿತ್ರವನ್ನು ರಚಿಸಿದ ಕಲಾವಿದ ಶ್ರೀ ರಾಮದಾಸ ಶೆವಗೂರ. ಆ ಚಿತ್ರ ಎಷ್ಟು ಸಹಜವಾಗಿತ್ತೆಂದರೆ ಅಲ್ಲಿ ನೆರೆದ ಸಾವಿರಾರು ಜನರಿಗೆ ಸ್ವತಃ ಕಾರಂತರೇ ಎದ್ದು ಬಂದು ವೇದಿಕೆಯ ಮೇಲೆ ಕುಳಿತುಕೊಂಡಂತೆ ಭಾಸವಾಗಿತ್ತಂತೆ! ಇದರಿಂದ ಹಲವರ ಕಣ್ಣು ತುಂಬಿ ಬಂದದ್ದು ಸುಳ್ಳಲ್ಲ. ಅಂತಹ ಅಭಿಜಾತ ಕಲಾವಿದರು ಶ್ರೀ ಶೇವಗೂರ.

ಶೇವಗೂರ ಶ್ರೀ ರಾಮದಾಸ ಕಾಮತರು ಚಿತ್ರ ಕಲಾವಿದರಾದರೆ ಅವರ ಪತ್ನಿ ಶ್ರೀಮತಿ ಸಂಧ್ಯಾ ಶೇವಗೂರು ಓರ್ವ ಲೇಖಕಿ. ಸಂಖ್ಯೆಯಲ್ಲಿ ಹೆಚ್ಚಿಲ್ಲದಿದ್ದರೂ, ಅವರು ಮೌಲ್ಯಯುತ ಕೃತಿಗಳನ್ನು ರಚಿಸಿದ್ದಾರೆ. ಕೊಂಕಣಿಯಲ್ಲಿ ಸಾಹಿತ್ಯ ರಚಿಸಲು ಪಯತ್ನ ಪಡುತ್ತಿದ್ದರು. ಓರ್ವ ಉತ್ತಮ ಓದುಗರಾಗಿ, ಅನುವಾದಕರಾಗಿ ಅವರಿಗೆ ಹೆಸರಿತ್ತು. ಆದರೆ ನಡುವಯಸ್ಸಿನಲ್ಲಿಯೇ ಕ್ಯಾನ್ಸರ್ ರೋಗಕ್ಕೆ ಅವರು ಬಲಿಯಾದರು. ಅವರು ಸಾಯುವ ನಾಲ್ಕು ದಿನ ಮೊದಲು ನನ್ನನ್ನು ಕಾಣಬೇಕೆಂದು ಪತಿಯ ಬಳಿ ಹೇಳಿ ಕಳುಹಿಸಿದ್ದರು. ಹೀಗಾಗಿ ನಾನು ಅವರನ್ನು ಕಾಣಲು ಅತ್ತಾವರದ ಕೆ.ಎಂ.ಸಿ. ಆಸ್ಪತ್ರೆಗೆ ಹೋಗಿದ್ದೆ. ದೈಹಿಕವಾಗಿ ದುರ್ಬಲವಾಗಿದ್ದರೂ ಆಕೆ ಎದ್ದು ಬಂದು ನನ್ನ ಕಾಲಿಗೆ ವಂದಿಸಿದರು. ತಾನು ಸಾಹಿತ್ಯ ರಚಿಸಲು ಪ್ರೋತ್ಸಾಹ ನೀಡಿದ್ದಕ್ಕಾಗಿ ನನಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅವರ ಮರಣ ಏಪ್ರಿಲ್ ೧೩, ೨೦೧೧ ರಂದು ಸಂಭವಿಸಿತು. ಅವರ ಅಕಾಲಿಕ ಮರಣ ಕೊಂಕಣಿ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ನಷ್ಟವೆಂದು ನಮ್ಮ ತಿಳಿವಳಿಕೆ.

ವಿಶ್ವಕೊಂಕಣಿ ಕೇಂದ್ರದ ಮಹಾನ್ ಸಾಧಕರ ಚಿತ್ರಶಾಲೆ (Hall of Fame)ಯಲ್ಲಿ ಶ್ರೀ ಶೇವಗೂರ ಅವರ ಕಲಾಪ್ರೌಢಿಮೆಯನ್ನು ಕಾಣಬಹುದಾಗಿದೆ.

ಶ್ರೀಮತಿ ಉಷಾ ಕಿಣಿ

ಶ್ರೀಮತಿ ಉಷಾ ಕಿಣಿ ಬೆಂಗಳೂರು ದೂರದರ್ಶನದಲ್ಲಿ ಸಹಾಯಕ ನಿರ್ದೇಶಕಿಯಾಗಿ ಉದ್ಯೋಗದಲ್ಲಿದ್ದಾರೆ. ೧೯೯೨ನೇ ಇಸವಿ ಆಗಸ್ಟ್ ೨೦ರಂದು ಕೇಂದ್ರ ಸರಕಾರ ಲೋಕಸಭೆಯಲ್ಲಿ ಕೊಂಕಣಿ ಭಾಷೆಯನ್ನು ಭಾರತದ ಸಂವಿಧಾನದ ೮ ನೇ ವಿಧಿಯಲ್ಲಿ ಸೇರಿಸಿದ ಕಾರಣವಾಗಿ ದೊರೆತ ೪೨ ಸವಲತ್ತುಗಳಿಂದ ದೂರದರ್ಶನದಲ್ಲಿ ಕೊಂಕಣಿ ಕಾರ್ಯಕ್ರಮ

ಪ್ರಸಾರವಾಗುವುದು ಸಾಧ್ಯವಾಗಿತ್ತು. ಆ ಸಮಯದಲ್ಲಿಯೇ ಶ್ರೀಮತಿ ಉಷಾ ಕಿಣಿಯವರು ಬೆಂಗಳೂರು ದೂರದರ್ಶನದಲ್ಲಿ ಕೆಲಸಕ್ಕೆ ಸೇರಿದ್ದರು. ನಾವು ೧೯೯೩ನೇ ಇಸವಿ, ಆಗಸ್ಟ್ ೨೦ ಮತ್ತು ೨೧ ಈ ಎರಡು ದಿನ "ಕೊಂಕಣಿ ಸಂಭ್ರಮ" ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಮಂಗಳೂರಿನಲ್ಲಿ ಆಚರಿಸಿದ್ದೆವು. ಆ ಕಾರ್ಯಕ್ರಮವನ್ನು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರ ಮಾಡಬೇಕೆಂದು ನಾವು ಬೆಂಗಳೂರು ದೂರದರ್ಶನ ಕೇಂದ್ರದ ನಿರ್ದೇಶಕರನ್ನು ಸಂಪರ್ಕಿಸಿದಾಗ, ಅವರು ಮಂಗಳೂರು ಪುರಭವನದಲ್ಲಿ ನಡೆಯಲಿರುವ ಈ ಸಮಾರಂಭದ ರೆಕಾರ್ಡಿಂಗ್ ಮಾಡಲು ಶ್ರೀಮತಿ ಉಷಾ ಕಿಣಿ ಮತ್ತು ಅವರ ಸಹೋದ್ಯೋಗಿಗಳನ್ನು ಕಳುಹಿಸಿಕೊಟ್ಟಿದ್ದರು. ಇದು ನಮ್ಮ ಮೊದಲ ಪ್ರಯತ್ನ.

ಆ ಸಮಯದಲ್ಲಿ ಮಂಗಳೂರಿಗೆ ಬಂದ ಶ್ರೀಮತಿ ಉಷಾ ಕಿಣಿ ಮತ್ತು ಅವರ ಪಂಗಡದ ತಂತ್ರಜ್ಞರು ನಮಗೆ ಉತ್ತಮ ಸಹಕಾರವನ್ನು ನೀಡಿ ರೆಕಾರ್ಡಿಂಗ್ ಮಾಡಿ ಅದು ದೂರದರ್ಶನದಲ್ಲಿ ಪ್ರಸಾರವಾಗಿತ್ತು. ಆ ಮೇಲೆ ನಾನು ಆಯೋಜಿಸಿದ ಅನೇಕ ಕೊಂಕಣಿ ಕಾರ್ಯಕ್ರಮಗಳನ್ನು (ಸಹಯೋಗದ ಮತ್ತು ಬೇರೆ) ಶ್ರೀಮತಿ ಉಷಾ ಕಿಣಿಯವರು ಪ್ರಸಾರ ಮಾಡಿ ನಮ್ಮ ಕೊಂಕಣಿ ಕಾರ್ಯಕ್ರಮಗಳಿಗೆ ಪ್ರಚಾರ ಸಿಗುವ ಹಾಗಾಗಿತ್ತು.

೧೯೯೫ನೇ ಇಸವಿಯಲ್ಲಿ ವಿಶ್ವ ಕೊಂಕಣಿ ಸಮ್ಮೇಳನ ನಡೆಯುವ ಒಂದು ವಾರದ ಮೊದಲೇ ಶ್ರೀಮತಿ ಉಷಾ ಕಿಣಿಯವರು ದೂರದರ್ಶನ ಪಂಗಡದವರನ್ನು ಕರೆದುಕೊಂಡು ಮಂಗಳೂರಿಗೆ ಬಂದು "ಕರ್ಟೇನ್ ರೈಸರ್" ಚಿತ್ರೀಕರಣ ನಡೆಸಿ, ಅನೇಕ ಬಾರಿ ಅದರ ಪ್ರಸಾರ ಮಾಡಿದ್ದರಲ್ಲದೆ, ಗೋವಾ ದೂರದರ್ಶನದಲ್ಲಿಯೂ ಅದು ಪ್ರಸಾರವಾಗುವ ಹಾಗೆ ನೋಡಿಕೊಂಡಿದ್ದರು. ಇದರಿಂದ ಗೋವೆಯಲ್ಲಿ ಮತ್ತು ಕರ್ನಾಟಕದಲ್ಲಿ ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನಕ್ಕೆ ಅಭೂತಪೂರ್ವ ಪ್ರಚಾರ ದೊರೆತು ಈ ಎರಡೂ ರಾಜ್ಯಗಳ ಮೂಲೆ, ಮೂಲೆಗಳಿಂದ ಕೊಂಕಣಿ ಜನರು ಮತ್ತು ಇತರ ಭಾಷಿಕರು ಸಾವಿರಾರು ಸಂಖ್ಯೆಯಲ್ಲಿ ಬಂದು ಸಮ್ಮೇಳನದಲ್ಲಿ ಭಾಗಿಯಾಗಿ ಸಂತೋಷಪಡುವಂತಾಗಿತ್ತು. ವಿಶ್ವ ಕೊಂಕಣಿ ಸಮ್ಮೇಳನದ ಏಳು ದಿನಗಳ ಕಾರ್ಯಕ್ರಮಗಳನ್ನು ಶ್ರೀಮತಿ ಉಷಾ ಕಿಣಿಯವರು ಬಹಳ ಉತ್ಸಾಹದಿಂದ ಚಿತ್ರೀಕರಣ ನಡೆಸಿ ದೂರದರ್ಶನದಲ್ಲಿ ಪ್ರಸಾರ ಮಾಡಿದ್ದಾರೆ.

೧೯೯೮ ನೇ ಇಸವಿಯಲ್ಲಿ ನಾನು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದಾಗ, ನವದೆಹಲಿಯಲ್ಲಿ ಮೂರು ದಿನಗಳ ಕೊಂಕಣಿ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸಿದ್ದೆ. ಕರ್ನಾಟಕದಿಂದ ೧೩೦ ಕಲಾವಿದರನ್ನು ದೆಹಲಿಗೆ ಕರೆದುಕೊಂಡು ಹೋಗಿ ಅಲ್ಲಿ ಕೊಂಕಣಿ ಸಾಂಸ್ಕೃತಿಕ ಕಲಾ ಪ್ರದರ್ಶನದ ಕಾರ್ಯಕ್ರಮವನ್ನು ನಡೆಸಿದ್ದೆ. ಈ ಮೂರೂ ದಿನಗಳ ಕಾರ್ಯಕ್ರಮದ ಚಿತ್ರೀಕರಣ ನಡೆದು ಅದು ಬೆಂಗಳೂರು ದೂರದರ್ಶನದಲ್ಲಿ ಪ್ರಾಯೋಜಿತ ಕೊಂಕಣಿ ಕಾರ್ಯಕ್ರಮವಾಗಿ ಪ್ರಸಾರವಾಗಿತ್ತು.

ನಾವು ಕರ್ನಾಟಕದ ಕೊಂಕಣಿ ಮಹಿಳೆಯರಿಗಾಗಿ ಆರು ದಿನಗಳ ಕೊಂಕಣಿ ಓವಿ ಸಂಗೀತ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ನಡೆಸಿದ್ದೆವು. ಅದು ದೂರದರ್ಶನದಲ್ಲಿ ಪ್ರಸಾರವಾಗಿದೆ. ಅದೇ ರೀತಿ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರು ಸಂಗ್ರಹಿಸಿ, ನಾನು ಬಸ್ತಿ ಪ್ರಕಾಶನದಲ್ಲಿ ಪ್ರಕಟಿಸಿದ್ದ ಬಾಲಗೀತೆಗಳ ಸಂಗ್ರಹ "ತಾ ತಾ ತಿಂಗಣ"ವನ್ನು ಆಧರಿಸಿಯೂ ಆರು ದಿನಗಳ ಕೊಂಕಣಿ ಬಾಳಗೀತಗಳ ಕಾರ್ಯಾಗಾರವನ್ನು ಬೆಂಗಳೂರು ಕಾಶೀಮಠದಲ್ಲಿ ನಡೆಸಿದ್ದೆವು. ಅದು ಕೂಡ ದೂರದರ್ಶನದಲ್ಲಿ ಪ್ರಸಾರವಾಗಿದೆ.

ಇತ್ತೀಚಿಗೆ ವಿಶ್ವ ಕೊಂಕಣಿ ಬಾಲ ನಾಟಕಗಳಾದ "ಕುಂಡ್ಯಾ ಕುರ್ಕುಳ", "ಪಾತೋಳಿ ರೂಕು", ಮತ್ತು "ಚಂದ್ರಹಾಸ" ಬೆಂಗಳೂರು ಚಂದನ ವಾಹಿನಿಯಲ್ಲಿ ಪ್ರಸರಾಗೊಂಡಿವೆ. ಈ ಎಲ್ಲಾ ಕಾರ್ಯಕ್ರಮಗಳು ಬೆಂಗಳೂರು ದೂರದರ್ಶನದ ಮೂಲಕ ಪ್ರಸಾರಗೊಳ್ಳಲು ಶ್ರೀ ಉಷಾ ಕಿಣಿಯವರು ವೈಯಕ್ತಿಕ ಶ್ರಮವೇ ಕಾರಣವೆಂದು ಹೇಳಬಹುದು.

ಶ್ರೀಮತಿ ಉಷಾ ಕಿಣಿಯವರು ತಮ್ಮ ಮಾತೃಭಾಷೆಯ ಮೇಲಿನ ಪ್ರೀತಿಯಿಂದ ಮೇಲೆ ಉಲ್ಲೇಖಿಸಿದ ಕಾರ್ಯಕ್ರಮಗಳ ಪ್ರಸಾರ ನಡೆಯಲು ಶ್ರಮಪಟ್ಟದ್ದು ಮಾತ್ರವಲ್ಲ, ಅವರು ಮತ್ತು ಅವರ ಪತಿ ಶ್ರೀ ವಸಂತ ಕಿಣಿಯವರು ಬಿಚ್ಚು ಮನಸ್ಸಿನಿಂದ ವಿಶ್ವ ಕೊಂಕಣಿ ಕೇಂದ್ರಕ್ಕೆ ದೇಣಿಗೆಯಾಗಿ ೧ ಲಕ್ಷ ರೂ ನೀಡಿದ್ದಾರೆ ಎಂದು ತಿಳಿಸಲು ನನಗೆ ತುಂಬಾ ಅಭಿಮಾನವೆನಿಸುತ್ತದೆ.

●●

೫೫. ಬಾಳ ಮುಸ್ಸಂಜೆಯಲ್ಲಿ

ಹೌದು, ನಾನು ಈ ಭೂಮಿಯಲ್ಲಿ ಕಾಲಿಟ್ಟ ದಿನದಿಂದ ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ ತುಂಬಾ ಸಂತೋಷ, ಅಭಿಮಾನ ಮತ್ತು ಸಾರ್ಥಕತೆಯ ಭಾವ ಮೂಡಿಬರುತ್ತದೆ, ನಾನು ಹುಟ್ಟಿದ್ದು ವ್ಯರ್ಥವೆನಿಸುವುದಿಲ್ಲ. ಹಾಗೆ ನಾನು ಬಾಲ್ಯದ ವಯಸ್ಸಿನಲ್ಲಿಯೂ ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಮತ್ತು ಆಮೇಲೆ ಬುದ್ಧಿ ಬಲಿತ ತಾರುಣ್ಯದ ವಯಸ್ಸಿನಲ್ಲಿ ಅಥವಾ ಇಳಿವಯಸ್ಸಿನಲ್ಲಿ ಆಗಿರಬಹುದು, ನನಗೆ ಅನಗತ್ಯವೆನಿಸಿದ ಹರಟೆ ಅಥವಾ ಆಮೋದ ಪ್ರಮೋದಗಳಲ್ಲಿ ನಿರತನಾಗಿರುವುದು ಅಥವಾ ಅಗತ್ಯವಿಲ್ಲದ ಕಾರ್ಯಗಳಲ್ಲಿ, ವ್ಯವಹಾರಗಳಲ್ಲಿ ಗಮನ ಹರಿಸಿ ಕಾಲ ಕಳೆಯುವುದು, ಇದಕ್ಕೆಲ್ಲಾ ನನಗೆ ಸಮಯವೇ ಇರಲಿಲ್ಲ. ಇಂತಹ ಒಂದು ಕ್ರಿಯಾತ್ಮಕ ಮತ್ತು ಧನಾತ್ಮಕ ಚಿಂತನೆಯನ್ನು ನನ್ನಲ್ಲಿ ಆ ವೆಂಕಟರಮಣ ಸ್ವಾಮಿ ತುಂಬಿದ್ದರಿಂದ ನನಗೆ ನನ್ನ ಜೀವನದಲ್ಲಿ ಸುಖ, ಸಂತೋಷ ಹಾಗೂ ಸಾರ್ಥಕತೆ ಕಾಣುವಂತಾಗಿದೆ.

ನಾನು ಎಂಬತ್ತರ ಹೊಸ್ತಿಲಿನಲ್ಲಿ ನಿಂತಿರುವ ಈ ದಿನಗಳಲ್ಲಿ ನಾನು ನಡೆಸಿದ ಅನೇಕ ಕಾರ್ಯಗಳು, ಯೋಜನೆಗಳು ಸಫಲವಾಗಿರುವುದನ್ನು ನೆನಪಿಸಿಕೊಂಡಾಗ, ಅದಕ್ಕೆ ಕಿರೀಟಪ್ರಾಯವಾಗಿ ವಿಶ್ವ ಕೊಂಕಣಿ ಕೇಂದ್ರದ ಕಟ್ಟಡವನ್ನು ನೋಡಿದಾಗ, ನನ್ನ ಜೀವನ ವ್ಯರ್ಥವಾಗಲಿಲ್ಲ ಎಂಬ ಭಾವನೆ ನನ್ನಲ್ಲಿ ಹುಟ್ಟುತ್ತದೆ ಮತ್ತು ಸಂತೃಪ್ತಿ ಮೂಡುತ್ತದೆ. ನನ್ನಂತಹ ಕರ್ಮಯೋಗಿಗೆ ಇದಕ್ಕಿಂತ ಬೇರೆ ಏನು ಬೇಕು? ಇದರ ಪ್ರಯೋಜನ ಕೇವಲ ನನಗೆ, ನನ್ನ ಕುಟುಂಬಕ್ಕೆ ಅಥವಾ ನನ್ನ ಸಮಾಜಕ್ಕೆ ಮಾತ್ರವಲ್ಲ, ವಿಸ್ತ್ರತ ಸಮಾಜಕ್ಕೂ ದೊರೆಯುವಂತಾಗುವುದು ಎಂಬುದರಲ್ಲಿ ಇನ್ನೂ ಹೆಚ್ಚಿನ ಧನ್ಯತಾ ಭಾವನೆ ನನ್ನಲ್ಲಿ ಉಕ್ಕಿ ಹರಿಯುತ್ತದೆ.

ಈ ಎಲ್ಲವೂ ಸಾಧ್ಯವಾಗಿರುವುದಕ್ಕೆ ನಾನು ನಂಬಿಕೊಂಡು ಬಂದಂತಹ ನನ್ನ ಆರಾಧ್ಯದೇವರಾದ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ಹಾಗೂ ಗುರುವರ್ಯರಾದ ಶ್ರೀ ಶ್ರೀ ಸುಧೀಂದ್ರ ತೀರ್ಥ ಸ್ವಾಮೀಜಿಯವರ ಆಶೀರ್ವಾದ ಮತ್ತು ನನ್ನ ಕಾರ್ಯಗಳಿಗೆ ಶುಭ ಹಾರೈಸಿ ಶ್ರೀ ಮಂಜುನಾಥ ಸ್ವಾಮಿಯ ಆಶೀರ್ವಾದ ಇದೆ ಎಂದು ಹೇಳುವ ಪದ್ಮವಿಭೂಷಣ ಶ್ರೀ ಧರ್ಮಸ್ಥಳ ಡಾ. ವಿರೇಂದ್ರ ಹೆಗ್ಗಡೆಯವರ ಶುಭ ಕಾಮನೆ ಕಾರಣವೆಂದು ನನ್ನ ನಂಬಿಕೆ. ಅವರ ಆಶೀರ್ವಾದದಿಂದಲೇ, ನಾನು ನನ್ನ ಪಾಲಿನ ಪ್ರತ್ಯಕ್ಷ ದೇವರೆಂದೇ ತಿಳಿಯುವ ಶ್ರೀ ಟಿ.ಎ. ಪೈಯವರು ನನಗೆ ಎಲ್ಲೆಲ್ಲೂ ಕತ್ತಲೆ ಕಾಣುತ್ತಿರುವಾಗ ದಿವ್ಯಜ್ಯೋತಿಯಾಗಿ ದೊರೆತದ್ದು.


ನಾನು ತಪ್ಪು ಮಾಡಿದಾಗ ನನ್ನನ್ನು ಬೈದು ಸರಿದಾರಿ ತೋರುತ್ತಿದ್ದ ಮಾನ್ಯ ಶ್ರೀ ಕೆ.ಕೆ. ಪೈಯವರು, ನಾನು ವಿಶ್ವ ಕೊಂಕಣಿ ಸಮ್ಮೇಳನದ ಯೋಜನೆ, ವಿಶ್ವ ಕೊಂಕಣಿ ಕೇಂದ್ರದ ಸ್ಥಾಪನೆಯನ್ನು ನಡೆಸುತ್ತಿರುವಾಗ "ಮುಂದುವರಿಸು" ಎಂದು ಆರ್ಶೀವದಿಸಿದರು. ಡಾ. ಪಿ. ದಯಾನಂದ ಪೈ, ನನ್ನನ್ನು ಹಿರಿಯನೆಂದು ಪರಿಗಣಿಸುವ ಶ್ರೀ ರೊನಾಲ್ಡ್ ಕೊಲಾಸೊ ಮತ್ತು ಈಗ ವಿಶ್ವ ಕೊಂಕಣಿ ಕೇಂದ್ರ ಯೋಜನೆಯಲ್ಲಿ ನಾನು ಎಲ್ಲವನ್ನೂ ಒಳಗೊಳ್ಳುವಂತೆ ಮಾಡಿದ್ದನ್ನು ಗಮನಿಸಿ ಅದರ ಉಪಯೋಗ ವಿಶ್ವ ಮಟ್ಟದಲ್ಲಿ ಆಗಿ ಮುಂದಿನ ಯುವ ಪೀಳಿಗೆಗೆ ಅದು ಲಭ್ಯವಾಗುವಂತೆ ಮತ್ತು ಆ ಕಾರಣದಿಂದ ನನ್ನ, ಕಾರ್ಯದ ವ್ಯಾಪ್ತಿ ಜಗತ್ತಿದಾದ್ಯಂತ ಹರಡಿಕೊಳ್ಳಲು "ಟಿವಿಎಮ್–೨೦೩೦" ಯೋಜನೆಯ ಗುಚ್ಛವನ್ನೇ ನೀಡಿದ ಶ್ರೀ ಟಿ.ವಿ. ಮೋಹನದಾಸ ಪೈ, ಶ್ರೀ ರಾಮದಾಸ ಕಾಮತ್ ಮತ್ತು ನನ್ನ ಪ್ರೀತಿಯ ಶ್ರೀ ಪ್ರದೀಪ ಪೈಯಂತಹ ವ್ಯಕ್ತಿಗಳು ನನ್ನ ಬದುಕಿನಲ್ಲಿ ನನಗೆ ತೃಪ್ತಿಯನ್ನು ತಂದಿತ್ತ ಶಕ್ತಿಗಳಾಗಿದ್ದಾರೆ.

ಇದರ ನಡುವೆ ನನ್ನ ಅಭಿಮಾನಿಗಳಾದ, ಮುಖ್ಯವಾಗಿ ಮಾಣೂರ ಲಕ್ಷ್ಮಣ ಕಾಮತ್, ಪೈಲೋಡಿ ನಾರಾಯಣ ಕಾಮತ್ ಮತ್ತು ಬೊಳಂತೂರ ಶ್ರೀ ಪ್ರಭಾಕರ ಪ್ರಭು ಅವರು ಸೇರಿ ನನ್ನ ೮೦ನೇ ಹುಟ್ಟುಹಬ್ಬವನ್ನು "ಬಸ್ತಿ ವಾಮನ ಶೆಣೈ–೮೦ರ ಸಂಭ್ರಮ" ಹೆಸರಿನಿಂದ ವಿಜೃಂಭಣೆಯಿಂದ ಆಚರಿಸಿದ್ದಾರೆ. ಈ "ಸಂಭ್ರಮ ಸಮಿತಿ"ಯಲ್ಲಿ ಕರ್ನಾಟಕ ರಾಜ್ಯ

ಸರಕಾರದ ಅರಣ್ಯ ಮತ್ತು ಪರ್ಯಾವರಣ ಮಂತ್ರಿಗಳಾದ ಮಾನ್ಯ ಶ್ರೀ ರಮಾನಾಥ ರೈ, ಗೌರವ ಚೇರಮನ್ ಆಗಿ ಮಹಾದಾನಿ ಹಾಗೂ ನನ್ನ ದೊಡ್ಡ ಅಭಿಮಾನಿಗಳಾದ್ ಡಾ. ಪಿ. ದಯಾನಂದ ಪೈಯವರು ಗೌರವಾಧ್ಯಕ್ಷರಾಗಿ ಮತ್ತು ಬಂಟವಾಳ ಶ್ರೀ ತಿರುಮಲ ವೆಂಕಟರಮಣ ಸ್ವಾಮೀ ದೇವಾಲಯದ ಆಡಳಿತ ಮೊಕ್ತೇಸರರಾದ ಶ್ರೀ ಮಾಣೂರ ಲಕ್ಷ್ಮಣ ಕಾಮತರು ಕಾರ್ಯಾಧ್ಯಕ್ಷರಾಗಿ, ಶ್ರೀ ಪೈಲೋಡಿ ನಾರಾಯಣ ಕಾಮತರು ಸಂಚಾಲಕರಾಗಿ ಮತ್ತು ಶ್ರೀ ಪ್ರಭಾಕರ ಪ್ರಭು ಕಾರ್ಯದರ್ಶಿಗಳಾಗಿ ಉನ್ನತ ಮಟ್ಟದ ಕಾರ್ಯವನ್ನು ನಡೆಸಿದ್ದಾರೆ. ಯುವಜನರಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ಉತ್ಸಾಹ ಮೂಡಿಸುವ ಸಲುವಾಗಿ ಸಮಾರಂಭದ ದಿನ (ನವೆಂಬರ್ ೧೦, ೨೦೧೩) ಬೆಳಗ್ಗೆ ನನಗೆ ಗುರುಸಮಾನರಾದ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರು ವಿಚಾರ ಸಂಕಿರಣವನ್ನು ನಡೆಸಿಕೊಟ್ಟಿದ್ದಾರೆ. ಈ ಎಲ್ಲಾ ವಿಚಾರಗಳು ನನ್ನ ಬದುಕಿನಲ್ಲಿ ಸಾರ್ಥಕದ ಭಾವವನ್ನು ಮೂಡಿಸಿವೆ.

ಇತ್ತೀಚಿಗೆ ನನ್ನ ಆರೋಗ್ಯ ತುಸು ಕುಂದಿದೆ. ಆದರೂ ಜೀವನದಲ್ಲಿ ಲವಲವಿಕೆ ಕಡಿಮೆಯಾಗಿಲ್ಲ. ಯಾವುದೇ ವಿಷಯದಲ್ಲಿ ಮುಂದುವರಿದು ಹೋಗುವುದರಲ್ಲಿ ನಿರುತ್ಸಾಹ, ನಿರಾಶೆ ಕವಿದಿಲ್ಲ; ಉತ್ಸಾಹ, ಧಾವಂತ ಕಡಿಮೆಯಾಗಿಲ್ಲ. ವಿಶ್ವ ಕೊಂಕಣಿ ಕೇಂದ್ರಕ್ಕೆ ಸಂಬಂಧಿಸಿದ ಕೊಂಕಣಿ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಜಾನಪದಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳು, ವಿಶ್ವ ಕೊಂಕಣಿ ವಿದ್ಯಾರ್ಥಿ ವೇತನ ನಿಧಿ, ಕ್ಷಮತಾ ತರಬೇತಿ ಯೋಜನೆಗಳ ಪ್ರಗತಿ ಇವೆಲ್ಲದುದರ ಕುರಿತು ಮನಸ್ಸು ಇನ್ನೂ ಚಿಂತಿಸುತ್ತಲೇ ಇರುತ್ತದೆ. ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೀಗೆ ಮಾಡಬಹುದು, ಹಾಗೆ ಮಾಡಬಹುದು ಎನ್ನುವುದು ಮನಸ್ಸಿಗೆ ಹೊಳೆಯುತ್ತಿರುತ್ತದೆ. ಪ್ರಾಯಶಃ ಹುಟ್ಟಿನಿಂದಲೇ ಬಂದಂತಹ ಈ ಪ್ರವೃತ್ತಿಯು ಪರಿಭ್ರಮಣ ಬದುಕಿನ ಕೊನೆಯವರೆಗೂ ಇರುತ್ತದೆ ಎಂದು ಕಾಣುತ್ತದೆ. ಅದು ನನ್ನ ಆರಾಧ್ಯದೈವ ಶ್ರೀ ತಿರುಮಲ ವೆಂಕಟರಮಣ ಸ್ವಾಮಿ ಒಬ್ಬನೇ ಬಲ್ಲ.

●●





The above testimonium in Konkani Language, is published in "Hortus Indicus Malabaricus", a comprehensive treatise that deals with the medicinal properties of the flora in the Indian state Kerala. The book in Latin was conceived by Hendrik Van Rheede who served as a Governor of Dutch Malabar between 1670 and 1677. The testimonium certifies the authenticity of medicinal information recorded in 12 Volumes. It has been inscribed in Konkani Language, duly signed by Ranga Bhat, Vinayaka Pandit and Appu Bhat, three Konkani Physicians who were the prominent contributors to the stupendous work. Apart from Latin, Malayalam and Arabic, the plant names have also been recorded in Konkani Language in these volumes.



Late Basti Madhav Shenoy Basti Vaman Shenoy's father



Basti Madhav Shenoy sitting with H.H. Swamijis of Sri Kashi Mutt



Basti Vaman Shenoy with Pt. Jawaharlal Nehru during 1962



M.Vishwanath Hegde & Anusuya Hegde - Elder sister of Basti



Elder sister Ma -Anusuya Hegde



Basti with Savitri
& daughter Vidya 1962



Ma Anusuyakka & Vishwanath Hegde Bhavaji Family



Basti with T.A.Pai during 1977



A Photo of S.V.S. High School, Alma Meter Of Basti Vaman Shenoy



MALLAKHAMBA DEMONSTRASTATION AT Y V SHALA BANTWAI



Rotary Eye Camp at Local Fund Hospital in Bantwal in 1974



Inauguration of G.S.B Samaj SHIVMOGGA



During Sendoff ceremony to Sri Basti Vaman Shenoy AT PANEMANGALU



A Public reception held at Bantwal soon after retired from Syndicate BANK



Felicitating Vyayama Guru Ullala Vasudeva Kini at Yashwanth Yvayama Shala



Inauguration of Kulapathi U.A.Kini Mantap Y.V Shala Bantwal



Inuguration of Platinum Jublie of Y.V. Shala by B. Ganapath



Reception given to great bowler Chandrashekar hosted by Basti



BVS inviting Sri Shanker Dayal Sharma President of India



B.V.S Daughter Vidya with Prabhakar Kini Wedding Ceremony



Basti Madhav Shenoy & Basti Gowri Shenoy



Basti with his brother & Sisters at the occassion



Basti Vaman Shenoy with his sisters and brothers



Brother Basti Ganapathy Shenoy Family at Las Vegas , USA-22



Grandson Anand



Grand daughter Tulasi



Bastis Grand son Anand with Pogo Amazing Kids Award 2008



Brahmopadesham of grandson Milind




Basti Vaman Shenoy at Forty years



Brahmopadesh Chi Anand



Basti Vaman mam family during the occassion



ಬಸ್ತಿ ವಾಮನ ಶೆಣೈ
ಮ್ಯಾನೇಜರ್
ಸಿಂಡಿಕೇಟ್ ಬ್ಯಾಂಕ್
ಕೆಂಪೇಗೌಡ ರಸ್ತೆ ಬೆಂಗಳೂರು

ವಿಳಾಸ:- ಮಂಚಿ
(ಬಂಟವಾಳ ತಾಲ್ಲೂಕು)
21-4-1984

ಒಲವಿನ ಬಂಧು,

ನನ್ನ ಜೀವನದ ಅತ್ಯಂತ ಹರ್ಷಮಯವಾದ ಕೆಲವು ಕ್ಷಣಗಳನ್ನು ತಮ್ಮೊಡನೆ ಹಂಚಿಕೊಳ್ಳಲು ಬಯಸಿ ಈ ಓಲೆಯನ್ನು ಬರೆದಿರುವುದಾಗಿದೆ.

ಮೊದಲನೆಯದಾಗಿ, ನನ್ನ ಮತ್ತು ನನ್ನ ಧರ್ಮಪತ್ನಿ ಜಿ. ಸಾವಿತ್ರಿಯ ವಿವಾಹವಾಗಿ ತಾ 27-4-84 ರಂದು 25 ವರ್ಷಗಳು ತುಂಬುತ್ತದೆ, ಅಂದರೆ ನಮ್ಮ ವಿವಾಹದ ಬೆಳ್ಳಿ ಹಬ್ಬದ ಸಂಭ್ರಮ.

ಎರಡನೆಯದಾಗಿ, ಬಂಟವಾಳ ಮಂಗಳೂರು ಹೆದ್ದಾರಿಯಲ್ಲಿರುವ ಮಂಚಿಯಲ್ಲಿ ನನ್ನ ತೋಟ "ಬಸ್ತಿಗಾರ್ಡನ್ಸ್" ನಲ್ಲಿ "ಗೌರಿ-ಮಾಧವ" ನಾಮಾಂಕಿತ ಒಂದು ಚಿಕ್ಕದಾದ ಮನೆಯನ್ನು ಈಗ ತಾನೇ ಕಟ್ಟಿಸಿಯಾಗಿದೆ.


ಮೂರನೆಯದಾಗಿ, ನನ್ನ ಜೀವನದ 50 ವರ್ಷಗಳನ್ನು ಕಂಡ ಸಿಹಿ ಕಹಿಗಳ ಹೊಸೆಯ ಸುಮಧುರ ಅನುಭವ

ಈ ಮೂರು ಸಂತೋಷದ ಆಗರಗಳ ಸಮ್ಮಿಳನವಾಗಿ ಒಂದು ಮಧುರ ಸಂಜೆಯನ್ನು, ನನ್ನ ಬಾಳಿನ ವಿವಿಧ ಹಂತಗಳಲ್ಲಿ, ನನ್ನ ಏಳ್ಗೆಯನ್ನು ಬಯಸಿ, ನನ್ನ ನೆರವಿಗೆ ಬಂದು ಸಹಕರಿಸಿದ ಮತ್ತು ಆರ್ಥಿಕ, ಸಾಮಾಜಿಕ, ಸಾಹಿತ್ಯ, ಧಾರ್ಮಿಕ ಮತ್ತು ವಿದ್ಯಾಕ್ಷೇತ್ರಗಳಲ್ಲಿ ನನ್ನ ಹಲವು ಕನಸುಗಳನ್ನು ನನಸಾಗಿಸಲು ನನ್ನೊಡನೆ ಶ್ರಮಿಸಿದ, ತಮ್ಮಂತಹ ಮಿತ್ರಬಾಂಧವರೊಡನೆ ಕಳೆಯಲು ಆಶಿಸಿರುತ್ತೇನೆ

ಮಂಚಿಯ ನನ್ನ ಬಸ್ತಿಗಾರ್ಡನ್ಸ್ ತೋಟದಲ್ಲಿರುವ "ಗೌರಿ-ಮಾಧವ" ಮನೆಗೆ ತಾವು 27-4-84 ರ ಶುಕ್ರವಾರ ಸಾಯಂಕಾಲ ಅಗತ್ಯವಾಗಿ ಭೇಟಿಕೊಟ್ಟು ನಮ್ಮನ್ನು ಇನ್ನಷ್ಟು ಸಂತುಷ್ಟರನ್ನಾಗಿ ಮಾಡಬೇಕೆಂದು ತಮ್ಮನ್ನು ಆಹ್ವಾನಿಸಲು ನಮಗೆ ಅಭಿಮಾನ ಎನ್ನಿಸುತ್ತದೆ

ಕಾರ್ಯಕ್ರಮ:- ಸಾಯಂ. 6 ಗಂ.ಯಿಂದ ಶ್ರೀ ಸತ್ಯನಾರಾಯಣ
ವ್ರತ ಮತ್ತು ಪೂಜೆ
ರಾತ್ರಿ 8 ಗಂ. ಮಿತ್ರಭೋಜನ

ಇತಿ ತಮ್ಮವನೇ ಆಗಿರುವ
ಬಸ್ತಿ ವಾಮನ ಶೆಣೈ



Basti Vaman Shenoy during Sri Gayatri Japa Yajna 1985--15



H.H. Swamiji with Shri K.K. Pai,Sri Basti and Sri B. Damodar Prabhu



H.H. Sudhindra Thirtha Swamiji Inaugurating Library building



Basti honoured by H.H. Shivanand Saraswathi Swamiji of Kaivalya



BVS was honoured by H.H. Sudhindra Thirtha Swamiji Kashimutt Bangaluru



Smt. Margaret Alva, Hon'ble Minister of State for Parliamentary Affairs, Govt. of India and Honorary Chairperson for the World Konkani Convention '95 Reception Committee addressing a meeting of the Working Group on 9th January 1995



World Konkani Convention Regional Committe Bombay



Dr. B.M. Hegde Conferring Vishwa Konkani Sardar Title DURING WORLD KONKANI CONVENTION 1995




Rashtra Kavi Govind Pais Book released by Sri K.K.Pai



Dharmika Sauhardha Samavesha HELD AT NEHRU MAIDAN MANGALURU



Sri K.K. Pai Releasing Kodial Khabar Konkani Fortnigthtly



BVS with liberty Bell U.S.A



BVS With Mr. & Mrs. Kudpi Jagadish Shenoy near Liberty Statue



Konkani Rastriya Manyataya Day Celebrations

A Sri M. Madav Pai Awarded Shabda Ratnakar





Inauguration of Vishwa Konkani Sahitya Academy -2006



World Konkani Centre Inaugurated By
Honble Chief Minister Sri Digamber Kamath year 17-1-2000



World Institute of Konkani Language Donated and Inaugurated by Sri Ronald Colaco



Shri Eknath Thakur, Chairman Saraswat Co-operative Bank, Mumbai visited W.K.C



Jnanapitha Awardee Dr. Ravindra Kelekar honoured during
World Konkani Cente Inauguration



Hall of Fame Inagurated By Sri Rajdeep Sardesai



The Amrut Mahotsav celebration programme of Basti

Vishwa Konkani Yuva Sambhram was organized at Bharatiya Vidya Bhavan, Bengaluru





Rajyotsava Award Winner Sri Basti with Dr.P. Dayanad Pai, Sri Venkatesh N. Baliga



Prof Rajesh Sachdeva Director-in-Charge of Central Institute released the book



A Shri T. V. Raman Pai and Smt. T. Vimala V. Pai Hostel Block Inauguration



Konkani novelist Mahabaleshwar Sail was presented Smt. Vimala V Pai Puraskar



Smt. Vimala V. Pai Konkani Sahitya Puraskar to Sri Damodar Mauzo Goa



Inuaguration of Centenary Celebration of Konkani Drama



A Releasing book on Swami Vivekananda during the Youth Festival



Bolanthuru Krishna Prabhu - Book Release function



Smt. Vimala V. Pai Vishwa Konkani Best BOOK Award present to Pundalik Nayak Goa



The 'KILN' Book release function



Inauguration Of Vishwa Konkani Nataka Academy in 2012



Mr. Basti Vaman Shenoy being welcomed by Managing Director, Ryan Group of Institutions, Madam Grace Pinto



Managing Director, Ryan Group of Institutions, Madam Grace Pinto sharing a few words with Mr. Basti Vaman Shenoy



GOA KONKANI ACADEMY MADHAV MANJUNATH SAHITYA SEVA PURASKAR CEREMONY



Felicitating Sri Sadanand Gauda Chief Minister of Karnataka

Basti Greets Hon. Sri Manohar Parrikar





'KONKANVERTER, the script conversion utility software for Konkani Language Launched at W.K.C





VISHWA KONKANI SAHITYA SAMAROHA -2015

VISHWA KONKANI AWARDS CEREMONY-2015





A three day workshop on 'Kannada translation of Konkani

Release of Konkani Books at Kashimutt, Bengaluru





Inauguration of Prerana by T.V. Mohandas Pai

Kavita Trust festival at Vishwa Konkani Kendra





TV Mohandas Pai was Honoured at North American



KSHAMATA Camp at World Konkani Centre



Kshamata Ugetin Inaugurated By Ullas Kamath Chief Promoter



Inauguration Kshamata Ugetin Training Camp By Sundeep Bambolkar



World Konkani New Brouchure Released by Mr. Sundeep Bambolkar Mumbai



Asmitay Award Ceremony at Goa 17-06-2016



First Vishwa Saraswat Sammelan, 1999

This Roll of Honour is bestowed by

॥ शुभाशीर्वाद ॥

Their Holinesses at The First Vishwa Saraswat Sammelan, Mangalore on this 16th day of December, 1999.

To,
VISHWA SARASWAT SARDAR
BASTI VAMAN SHENOY


For the distinguished services rendered to the Society at large and Saraswat community in particular and also in recognition of his/her attaining high standards of professional excellence and eminent position in the society and for other meritorious work done for the welfare of the community.

With Blessings,

All India Saraswat Cultural Organisation (AISCO)
All India Saraswat Foundation, Mumbai.



ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್


ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ
ಗವ್ರವ್ ಪ್ರಶಸ್ತಿ-2008
ಸಂಘಟಕ್ ಪ್ರಶಸ್ತಿ
ಮಾನೆಸ್ತ್ ಬಸ್ತಿ ವಾಮನ ಶೆಣೈ
ತುಮಿ ಕೊಂಕ್ಣಿ ಸಂಘಟಕ್ ಶೆತಾಂತ್ ದಿಲ್ಲ್ಯಾ ಅಪಾರ್ ಸೆವೆ ಖಾತಿರ್
ತುಮ್ಕಾಂ ಹೊ ಮಾನ್ ಫಾವೊ ಜಾತಾ.
ಪರ್ಬಿಂ ತುಮ್ಕಾಂ!
ಎನ್. ಹರಿಕುಮಾರ್
ರಿಜಿಸ್ಟ್ರಾರ್
ಕುಂದಾಪುರ ನಾರಾಯಣ ಖಾರ್ವಿ
ಅಧ್ಯಕ್ಷ್
ಕರ್ನಾಟಕ್ ಕೊಂಕಣಿ ಸಾಹಿತ್ ಅಕಾಡೆಮಿ
575 003, : 2453167
E-mail konkanisahityaacademy@yahoo.co.in


Shri Basti Vaman Shenoy


Presented by TULU KOOTA KUWAIT
Tulusparsha 2010



ಕಾಂತಾವರ ಕನ್ನಡ ಸಂಘ
ನಾಲ್ಕನೆಯ
ಮೌಲ್ಯಾಧಾರಿತ ರಾಜಕಾರಣಿ ಉಳ್ಳಾಲ ಶ್ರೀನಿವಾಸ ಮಲ್ಯ
ಅವರನ್ನು ಕುರಿತಾದ ಕೃತಿಯನ್ನು
ಶ್ರೀ ಬಸ್ತಿ ವಾಮನ ಶೆಣೈ
ಅಕ್ಟೋಬರ್
ಕಾಂತಾವರ
ಕನ್ನಡ ಸಂಘ
ಪುರಸ್ಕಾರ



Tulu Koota Kuwait invited Basti Vaman Shenoy and Felicitated




Manapatra of Karnataka Rajyotsava -2010





GSB Sabha Kuwait honoured Basti Vaman Shenoy-2010





Konkanis in Dubai honoured and Felicitated at India House at Dubai



Amruth Mahotsava Celebration



Artist Sri Ramdas Shevgoor with B.V.S Portrait



Sri Dr. P. Dayananda Pai & Sri P. Sathish Pai World Konkani Centre, SHAKTINAGAR MANGALURU



GSB Samaj Bhushan Puraskar



Inauguration of Vishwa Konkani Stree Shakti Mission



Vishwa Konkani Scholarship Award Ceremony



MOU Signing Ceremony



ವಿಶ್ವ ಕೊಂಕಣಿ ಕೇಂದ್ರ

ಕೊಂಕಣಿ ಭಾಸ ಆನಿ ಸಂಸ್ಕೃತಿ, ಪ್ರತಿಷ್ಠಾನ, ವಿಶ್ವ ಕೊಂಕಣಿ ಕೇಂದ್ರ ದಿಂದ ಪ್ರಕಾಶಿಶಲ್ಪಟ್ಟ ಪುಸ್ತಕಗಳು

ನಂ.	ವಿಶ್ವ ಕೊಂಕಣಿ ಸಾಹಿತ್ಯ ಪುಸ್ತಕದ ಹೆಸರು	ಲೇಖಕರ ಹೆಸರು	ಪ್ರಕಟಣೆಯ ವರ್ಷ	ಪುಸ್ತಕದ ಬೆಲೆ
1	ಮಂಜೇಶ್ವರ ಗೋವಿಂದ ಪೈ (ಹಿಂದಿ)	ಶ್ರೀ ಕಯ್ಯಾರ ಕಿಂಜ್ಞಣ್ಣ ರೈ- ಕನ್ನಡ ಹಿಂದಿ ಅನುವಾದ ಡಾ. ಎಲ್. ಸುನೀತಾ ಬಾಯಿ , ಕೊಚ್ಚಿ	2008	200
2	ಮಂಜೇಶ್ವರ ಗೋವಿಂದ ಪೈ (ಕೊಂಕಣಿ)	ಶ್ರೀ ಕಯ್ಯಾರ ಕಿಂಜ್ಞಣ್ಣ ರೈ - ಕನ್ನಡ ಕೊಂಕಣಿ ಅನುವಾದ ಡಾ. ಎಲ್. ಸುನೀತಾ ಬಾಯಿ , ಕೊಚ್ಚಿ	2008	200
3	ಕಮಲಾದೇವಿ ಚಟ್ಟೋಪಾಧ್ಯಾಯ ಜೀವನ ಚರಿತ್ರೆ ಮತ್ತು ಕಾರ್ಯ - ಕೊಂಕಣಿ	ಜ್ಯೋತ್ಸ್ನಾ ಕಾಮತ್ ಬೆಂಗಳೂರು	2009	200
4	ನೂಪುರ ಕೊಂಕಣಿಯ ಮಹಾನ್ ಕವಿ ಶ್ರೀ ಬಾಕಿಬಾಬ ಬೋರಕರ ಅವರ ಆಯ್ದ ಕವಿತೆಗಳ ಕನ್ನಡ ಭಾವಾನುವಾದ (ಕನ್ನಡ)	ಶ್ರೀಮತಿ ಶಕುಂತಲಾ ಆರ್. ಕಿಣಿ ಕನ್ನಡ	2010	100
5	ಕನ್ನಡ –ಕೊಂಕಣಿ ರತ್ನಕೋಶ.	ಶಬ್ದ ರತ್ನಾಕರ ಎಂ. ಮಾಧವ ಪೈ	2011	500
6	ವಿಶ್ವ ಕೊಂಕಣಿ ಪರಿಚಯ ಕೋಶ ಖಂಡ- 1 (ಕೊಂಕಣಿ)	ಡಾ. ತಾನಾಜಿ ಹಳರಣಕರ	2011	200
7	The Kiln (English Novel)	Konkani Novel 'Havthan' by Mahabaleshwar Sail, English Trns. By Vidya Pai, Kolkata	2011	200
8	ಕಾಬೂಲಿವಾಲಾ ಮತ್ತು ಇತರ ಕಥೆಗಳು (ಕೊಂಕಣಿ)	ಶ್ರೀ ರಬೀಂದ್ರನಾಥ ಠಾಗೋರ ಕೊಂಕಣಿ- ಶ್ರೀಮತಿ ಜಯಶ್ರೀ ಶ್ಯಾನಭಾಗ	2011	100
9	Choola (Malayalam Novel) ಚೂಲಾ – ಕಾದಂಬರಿ ಮಳಯಾಳಂ	ಮೂಲ ಕೊಂಕಣಿ ಶ್ರೀ ಮಹಾಬಲೇಶ್ವರ ಸೈಲ್ ಮಳಯಾಳಂ ಅನುವಾದ ಡಾ. ಎಲ್. ಸುನೀತಾ ಬಾಯಿ	2011	200
10	ಕೊಂಕಣಿ ರಂಗ ಭೂಮಿಯ ಆದ್ಯ ಬೊಳಂತೂರು ಕೃಷ್ಣ ಪ್ರಭು (ಕನ್ನಡ)	ಶ್ರೀ. ಬಿ. ಮಧುಕರ ಮಲ್ಯ	2012	50
11	Tembare –(Konkani Novel)	Kannada Novel by Sri M. Veerappa Moly, Konkani Translation by Sri. Ramesh Lad, Goa	2012	150

12	ಆಧುನಿಕ ಕೊಂಕಣಿ ಕತೆಗಳು (ಕನ್ನಡ)	ಡಾ. ಗೀತಾ ಶೆಣೈ	2013	200
13	ವೈಶಾಖ, (ಭಗವಾನ ಬುದ್ಧಾಚೆ ಅಂತಿಮ ದೀಸ) ಎಮ್. ಮಂಜೇಶ್ವರ ಗೋವಿಂದ ಪೈ ಖಂಡ ಕಾವ್ಯ (ಕೊಂಕಣಿ)	ಪ್ರೊ. ಎಮ್. ಮಾಧವ ಪೈ	2013	100
14	ಋತುಸಂಕ್ರಮಣ ಮತ್ತು ಇತರ ಕಥೆಗಳು, (ಕನ್ನಡ)	ಗೀತಾ ಶೆಣೈ	2013	125
15	ಒಪೇರಾ ಹೌಸ್- ಕೊಂಕಣಿ	ಕನ್ನಡ ಸಣ್ಣ ಕಥೆಗಳು ಜಯಂತ ಕಾಯ್ಕಿಣಿ ಕೊಂಕಣಿ ಅನುವಾದ ಶ್ರೀ ರಮೇಶ ಲಾಡ	2013	125
16	ಸಾಯ್ಬಾ ಭೊಗಸ್ – ಕೊಂಕಣಿ ಕಾದಂಬರಿ	ಖಡಾಪ್ (ವಿ.ಜೆ. ಪಿ. ಸಲ್ಡಾನ್ಹಾ)	2013	200
17	ಓರ್ವ ಭಿಕ್ಷುಕ ಚಕ್ರವರ್ತಿ ಆತ್ಮಕಥೆ (ಕೊಂಕಣಿ)	ಬಸ್ತಿ ವಾಮನ ಶೆಣೈ	2013	500
18	ವೈಶಾಖ ಫುಲ್ಲೊ , (ಕೊಂಕಣಿ)	ಪದ್ಮಾ ಶೆಣೈ	2014	150
19	ಆವಿಗೆ ಕನ್ನಡ (ಕಾದಂಬರಿ)	ಮೂಲ ಕೊಂಕಣಿ ಮಹಾಬಳೇಶ್ವರ ಸೈಲ್ ಕನ್ನಡ – ಶಾ.ಮಂ. ಕೃಷ್ಣರಾಯ	2014	120
20	Report of A Socio – Economic Survey of KUDUBIS OF KARNATAKA	Dr. Y . Ravindranath Rao	2014	100
21	Contribution Of Konkani HORTUS INDICUS MALABARICUS (Seminar Papers	Prof. Bhushan Bhave.	2014	250
22	Descriptive Study of Kudubi Dialect (Spoken Bu Kudubi Community of Uttara Kannada , Udupi and Dakshina Kannada District)	Dr. Varija N.	2015	300
23	ವಿಶ್ವ ಕೊಂಕಣಿ ಬಾಲಸಾಹಿತ್ಯ ಮಾಳಾ ಕನ್ನಡ ಲಿಪಿ ಮತ್ತು ದೇವನಾಗರಿ ಲಿಪಿ ಪುಸ್ತಕ 8 ಪುಸ್ತಕಗಳ ಒಂದು ಕಟ್ಟು ೧. ವಾಲ್ಮೀಕಿ	ಶ್ರೀಮತಿ ಚಂದ್ರಮತಿ ಎಸ್. ರಾವ್	2010	20
24	೨. ವ್ಯಾಸ	ಶ್ರೀಮತಿ ಜಯಶ್ರೀ ಶ್ಯಾನಭಾಗ್	2010	20
25	೩. ವಿಶ್ವಾಮಿತ್ರ	ಶ್ರೀಮತಿ ಜಯಶ್ರೀ ಶ್ಯಾನಭಾಗ್	2010	20
26	೪. ಪರಶುರಾಮು	ಶ್ರೀಮತಿ ಜಯಶ್ರೀ ಶ್ಯಾನಭಾಗ್	2010	20
27	೫. ಗಾಂಧೀಜಿ	ಶ್ರೀಮತಿ ಜಯಶ್ರೀ ಶ್ಯಾನಭಾಗ್	2010	20
28	೬. ಶೆಣೈ ಗೋಂಯ್ ಬಾಬ್	ಶ್ರೀಮತಿ ಜಯಶ್ರೀ ಶ್ಯಾನಭಾಗ್	2010	20
29	೭. ಅಮ್ಮೆಂಬಳ ಸುಬ್ಬರಾವ್ ಪೈ	ಶ್ರೀಮತಿ ಸುಚಿತ್ರಾ ಎಸ್. ಶೆಣೈ	2010	20
30	೮. ಪಂಜೆ ಮಂಗೇಶ ರಾವ್	ಶ್ರೀಮತಿ ಜಯಶ್ರೀ ಶೆಣೈ	2010	20

Vishwa Konkani BALASAHITYA Mala - Bi-lingual Books
Konkani (Devnagari Script**) and English**

Sl.No.	Title	Price
1	Tenali Raman Outwits the Thieves	35/=
2	The Clever Son Tales From Jataka	35/=
3	The Boy Who Was a Snake Tales from Panchatantra	35/=
4	Cinderella A Fairy Tale	35/=
5	The Noble Elephant Tales From Hitopadesha	35/=
6	The Sparrows of Agra Tales of Akbar and Birbal	35/=
7	The Loyal Mongoose Tales from Panchatantra	35/=
8	Ganesh A Traditional Tale	35/=
9	The Blue Jackal Tales from Panchatantra	35/=
10	The Wise Rat Tales From Hitopadesha	35/=
11	The Wise Old Bird Tales from Panchatantra	35/=
12	A Tale of Three Fish Tales from Panchatantra	35/=
13	The Ugly Duckling A Fairy Tale	35/=
14	There is Strength in Numbers Tales from Panchatantra	35/=
15	Snow White and the Seven Dwarfs A Fairy Tale	35/=
16	Never Trust a Stranger Tales from Panchatantra	35/=
17	The Proud Crow Tales From Hitopadesha	35/=
18	The Clever Moneylender An Indian Folk Tale	35/=
19	The Devout Beggar An Indian Folk Tale	35/=
20	Rapunzel A Fairy Tale	35/=
21	Tenali Raman and the Learned Man	35/=
22	The Rooster's Ploy An Indian Folk Tale	35/=
23	Tenali Raman and the Proud King	35/=
24	The Mice that Ate Iron Tales from Panchatantra	35/=
25	The Problem of the Mango Tree Tales of Akbar and Birbal	35/=
26	Jesus Christ A Traditional Tale	35/=
27	Where is God? An Indian Folk Tale	35/=
28	Tales Price of a Sweet Smell	35/=
29	The Wicked Raven Tales From Hitopadesha	35/=
30	Tenali Raman and the Proud Priest	35/=



ಕೃತಿಯ ಅನುವಾದಕರಾದ ಡಾ. ಗೀತಾ ಶೆಣೈ ಅವರು ಇಂಗ್ಲಿಷ್, ಕೊಂಕಣಿಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಕೊಂಕಣಿಗೆ ಅನೇಕ ಗ್ರಂಥಗಳನ್ನು ಅನುವಾದಿಸಿದ್ದಾರೆ. ವಚನ ಸಾಹಿತ್ಯ, ಕನಕದಾಸ ಸಾಹಿತ್ಯದ ಬಹುಭಾಷಾ ಅನುವಾದ ಯೋಜನೆಯಲ್ಲಿ ಕೊಂಕಣಿ ಅನುವಾದ ಸಂಪುಟದ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕುವೆಂಪು ವಿಚಾರ ಸಾಹಿತ್ಯವನ್ನು ಕೊಂಕಣಿಗೆ ಅನುವಾದಿಸಿದ್ದಾರೆ. ಸಂಶೋಧನೆಗೆ ಕನ್ನಡ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯಿಂದ ಫೆಲೋಶಿಪ್ ಪಡೆದಿರುವ ಇವರ 'ಕಮಲಾದೇವಿ ಚಟ್ಟೋಪಾಧ್ಯಾಯ - ಬದುಕು ಸಾಧನೆ' ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಾಕಾರದ ಅನುವಾದ ಪುಸ್ತಕ ಬಹುಮಾನ ದೊರೆತಿದೆ.



‘ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ’ ಶ್ರೀ ಬಸ್ತಿ ವಾಮನ ಶೆಣೈ ಅವರ ಆತ್ಮಕಥೆ. ಗೋವೆಯಿಂದ ನಿರಾಶ್ರಿತರಾಗಿ ಹೊರಬಂದು ನಾಡಿನ ವಿವಿಧ ಭಾಗಗಳಲ್ಲಿ-ವಿಶೇಷವಾಗಿ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ-ನೆಲೆ ನಿಂತ ಕೊಂಕಣಿ ಭಾಷಾ ಸಮುದಾಯದವರು ಮಾಡಿದ ಅದ್ಭುತ ಸಾಧನೆಗಳ ಪಕ್ಷಿನೋಟವನ್ನು ನಮ್ಮ ಮುಂದೆ ಇರಿಸುವ ಅದ್ಭುತ ಕಥಾನಕವೇ ಇದಾಗಿದೆ. ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಸೇವೆಯ ಮಹತ್ತರವಾದ ಧ್ಯೇಯೋದ್ದೇಶಗಳಿಗೆ ಒಬ್ಬ ವ್ಯಕ್ತಿ ಕಟಿಬದ್ಧನಾಗಿ ನಿಂತರೆ, ತನ್ನ ಅಚಲ ನಿಷ್ಠೆ, ಸಂಘಟನಾ ಕೌಶಲ, ಸಾಮಾಜಿಕ ಬದ್ಧತೆ ಮತ್ತು ಪ್ರಾಮಾಣಿಕ ಕಾಳಜಿಗಳಿಂದ ಏನನ್ನು, ಏನೆಲ್ಲವನ್ನು ಸಾಧಿಸಬಹುದು ಎಂಬುದಕ್ಕೆ ‘ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ’ಯ ಹಾಗೂ ‘ವಿಶ್ವ ಕೊಂಕಣಿ ಕೇಂದ್ರ’ದ ಸ್ಥಾಪನೆಯ ಹಿಂದಿರುವ ಅವರ ಮಹಾ ಪ್ರಯತ್ನಗಳನ್ನೇ ಸಾಕ್ಷಿಯಾಗಿಸಬಹುದು. ‘ಕೊಂಕಣಿ ಸಾಹಿತ್ಯ ಅಕಾಡೆಮಿ’ಯ ಹಾಗೂ ‘ವಿಶ್ವ ಕೊಂಕಣಿ ಕೇಂದ್ರ’ದ ಅಧ್ಯಕ್ಷರಾಗಿ ಅವರು ಮಾಡಿರುವ ಕೆಲಸ-ಕಾರ್ಯಗಳು ಅವುಗಳ ಉತ್ತರಾಧಿಕಾರಿಗಳಿಗೆ ಮಾದರಿಯಾಗಿ ನಿಲ್ಲತಕ್ಕಂಥವೇ ಆಗಿವೆ. ಇವು ಅವರ ಸಾಧನೆಯ ವಿಜಯವೈಜಯಂತಿಯಾಗಿಯೇ ನಿಲ್ಲುತ್ತವೆ. ಅದರಲ್ಲಿಯೂ ಕೊಡುಗೈ ದಾನಿಗಳಾಗಿರುವ ಶ್ರೀ ದಯಾನಂದ ಪೈ ಮತ್ತು ಸತೀಶ ಪೈ ಅವರ ಹೆಸರನ್ನು ಹೊತ್ತಿರುವ ‘ವಿಶ್ವ ಕೊಂಕಣಿ ಕೇಂದ್ರ’ದ ವಿಚಾರದ ಬಗೆಗಿನ ಅವರ ಸಾಹಸವನ್ನು ಗಮನಿಸಿದಾಗ, ನನಗೆ ‘ರಘುವಂಶ’ದ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ವಿಶ್ವಜಿತ ಯಜ್ಞವನ್ನು ಆಚರಿಸಿ ಬರಿಗೈಯಾಗಿದ್ದ ರಘು ಮಹಾರಾಜನ ಬಳಿಗೆ ಗುರುದಕ್ಷಿಣಾರ್ಥಿಯಾಗಿ ಬಂದ ಬ್ರಹ್ಮಚಾರಿಯೊಬ್ಬನ ಕೋರಿಕೆಯನ್ನು ಈಡೇರಿಸುವ ಸಲುವಾಗಿ, ಕುಬೇರನ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಗುವ ದೃಢ ನಿಶ್ಚಯದಿಂದ ಆ ರಾತ್ರಿಯೇ ಆಯುಧ ಸನ್ನದ್ಧನಾಗಿ ರಥದಲ್ಲಿ ಕುಳಿತ ವಿಚಾರವನ್ನರಿತ ಕುಬೇರ ಸುವರ್ಣವೃಷ್ಟಿಯನ್ನೇ ಮಾಡಿಸಿದನೆಂದು ಕಾಳಿದಾಸ ವರ್ಣಿಸಿದ್ದಾನೆ. ಅಲ್ಲಿ ಅದು ಚಕ್ರವರ್ತಿಯ ಶೌರ್ಯ, ಪ್ರಭಾವಗಳ ಕಥೆಯಾದರೆ, ಇಲ್ಲಿ ಇದು ವಿನೀತನೂ, ಧ್ಯೇಯನಿಷ್ಠನೂ ಆದ ಈ ‘ಭಿಕ್ಷುಕ ಚಕ್ರವರ್ತಿ’ಯ ಸದುದ್ದೇಶಗಳನ್ನು ಅರಿತು ಗೌರವಿಸಿದ ಕುಬೇರ ಸದೃಶ ಕೊಡುಗೈ ದಾನಿಗಳಾದ ಶ್ರೀ ದಯಾನಂದ ಪೈ, ಶ್ರೀ ರೋನಾಲ್ಡ್ ಕೊಲಾಸೊ ಮತ್ತು ಇತರರ ಪ್ರೀತಿಯ ಸುವರ್ಣವೃಷ್ಟಿಯ ಕಥೆಯಾಗಿದೆ. ನೈಜ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮುದಾಯಿಕ ಹಿತಾಸಕ್ತಿಗಳಿಂದ, ಆದರ್ಶ ಧ್ಯೇಯೋದ್ದೇಶಗಳಿಂದ ದಾನಶೀಲರಾದ ಕೊಂಕಣಿ ಬಂಧುಗಳ ಬಳಿಗೆ ವಾಮನ ಶೆಣೈ ಅವರು ಹೋದಾಗ, ಅವರ ಜೋಳಿಗೆಗೆ ಸಹಸ್ರಾಂತರ, ಲಕ್ಷಾಂತರಗಳ ಮಾತಿರಲಿ, ಕೋಟ್ಯಂತರ ರೂಪಾಯಿಗಳ ಸುರಿಮಳೆಯಾದದ್ದು ಆಧುನಿಕ ಯುಗದ ಪವಾಡದಂತೆಯೆ ತೋರುತ್ತದೆ. ಈ ಉದ್ದೇಶಗಳನ್ನಿರಿಸಿಕೊಂಡು ಅವರು ಮಾಡಿದ ದೇಶಯಾನ ಮತ್ತು ವಿದೇಶಯಾನಗಳ ಕಥೆಯೂ ಇದಾಗಿದೆ. ‘ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ’ ಮತ್ತು ‘ಪ್ರಥಮ ವಿಶ್ವ ಸಾರಸ್ವತ ಸಮ್ಮೇಳನ’ವನ್ನು ನಡೆಸಿದ್ದೂ ವಾಮನ ಶೆಣೈ ಅವರ ಕರ್ತೃತ್ವ ಶಕ್ತಿಗೆ ಸಾಕ್ಷಿಯಾಗಿದೆ. ಇದೆಲ್ಲದರಲ್ಲಿ ಸಹಕರಿಸಿದ ನೂರಾರು ಮಂದಿಯ ಸ್ಮಾರಕ ಟಿಪ್ಪಣಿಗಳ ಮತ್ತು ಶಬ್ದಚಿತ್ರಗಳ ಸಂಪುಟವೂ ಇದಾಗಿರುವುದೂ ವಿಶೇಷ ಸಂಗತಿಯೇ ಆಗಿದೆ. ಹೀಗಾಗಿ, ಬಡತನದಿಂದ ಮೇಲೆದ್ದು ನಿಂತ ಶ್ರೀಸಾಮಾನ್ಯನೊಬ್ಬನ ಈ ಆತ್ಮಕಥೆಯಲ್ಲಿ ಇಡೀ ಕೊಂಕಣಿ ಸಮುದಾಯದ ಪಾರ್ಶ್ವಚಿತ್ರವೂ ಮುಪ್ಪುರಿಗೊಂಡು, ಇದೊಂದು ಅಪರೂಪದ ಆತ್ಮಕಥಾನಕವಾಗಿದೆ.

ವಾಮನ ಶೆಣೈ ಅವರ ಸಾಹಿತ್ಯಿಕ ಪ್ರತಿಭೆ ಮತ್ತು ನಿರೂಪಣಾ ಕೌಶಲ್ಯಗಳಿಂದ ಇದೊಂದು ಸ್ವಾರಸ್ಯಕರ ಕಥಾನಕವಾಗಿಯೂ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ‘ಪೂರ್ವರಂಗ’, ‘ಕಾರ್ಯರಂಗ’, ‘ಭಾಷಾರಂಗ’, ‘ಸಾಧನಾರಂಗ’ ಮತ್ತು ‘ಮಾನ್ಯತಾರಂಗ’ವೆಂಬ 5 ಭಾಗಗಳನ್ನು ಒಳಗೊಂಡಿರುವ ಈ ಆತ್ಮಕಥೆ ಈ ಪ್ರಕಾರದಲ್ಲಿನ ಒಂದು ವಿಶಿಷ್ಟ ಕೃತಿಯೂ ಆಗಿ ಪರಿಣಮಿಸಿದೆ. ‘ವಿಶ್ವ ಕೊಂಕಣಿ ಕೇಂದ್ರ’ದಲ್ಲಿ ಕೊಂಕಣಿ ಸಮುದಾಯದ ಮಹಾನ್ ಸಾಧಕರ ಚಿತ್ರಶಾಲೆಯೂ ಇದೆ; ಕೊಂಕಣಿ ಭಾಷಾಸಾಹಿತ್ಯಗಳ ಸಂವರ್ಧನೆಯ ದೃಷ್ಟಿಯಿಂದ ಹೊರತರಲಾಗಿರುವ ಗ್ರಂಥಗಳೂ ಸೇರಿದಂತೆ, ಒಂದು ವಿಶಿಷ್ಟ ಗ್ರಂಥಾಲಯವೂ ಇದೆ. ಭಾರತೀಯ ಭಾಷಾ ಸಾಹಿತ್ಯಗಳ (ಕನ್ನಡ, ಕೊಂಕಣಿ, ಹಿಂದಿ ಇತ್ಯಾದಿ) ಸಾಮರಸ್ಯದ ದೃಷ್ಟಿಯಿಂದ ಈ ಕೇಂದ್ರ ಅನುವಾದ ಕಮ್ಮಟವೂ ಸೇರಿದಂತೆ, ಅನೇಕ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತಿರುವುದೂ ಅಪೇಕ್ಷಣೀಯವಾದ, ಆಶಾದಾಯಕವಾದ ಬೆಳವಣಿಗೆಯೇ ಆಗಿದೆ.

ವಾಮನ ಭೂಮ್ಯಾಕಾಶಗಳನ್ನು ಅಳೆದು ನಿಂತ ಮಹಾಶಕ್ತಿಯಾಗಿ ಬೆಳೆದು ನಿಂತ ಕಥೆ ನಮ್ಮ ಪುರಾಣಗಳಲ್ಲಿ ಕಾಣ ದೊರೆಯುತ್ತದೆ. ವಾಮನ ಶೆಣೈ ಅವರೂ ಈ ಸಮುದಾಯದಲ್ಲಿ ಹಾಗೆ ಬೆಳೆದು ನಿಂತಿರುವ ಮಹಾಚೇತನವೇ ಆಗಿದ್ದಾರೆ. ಪ್ರತಿಯೊಂದು ಸಮುದಾಯಕ್ಕೂ ಇಂಥ ನಿಸ್ಪೃಹ, ಧೀಮಂತ ಸಾಹಿತ್ಯ-ಸಂಸ್ಕೃತಿ ಪ್ರೇಮಿ, ಸಮಾಜ ಸೇವಕ ದೊರೆತಲ್ಲಿ, ನಮ್ಮ ನಾಡು ಹೆಮ್ಮೆಯ ಬೀಡಾಗುವುದರಲ್ಲಿ ಸಂದೇಹವೇ ಇಲ್ಲ. ಇವರಿಗೆ ದೊರೆತಿರುವ ರಾಜ್ಯೋತ್ಸವ ಪ್ರಶಸ್ತಿ, ವಿಶ್ವ ಕೊಂಕಣಿ ಸರದಾರ್ ಪ್ರಶಸ್ತಿ ಮತ್ತು ಇತರ ಪುರಸ್ಕಾರಗಳು ಅರ್ಹ ವ್ಯಕ್ತಿಗೆ ಸಂದ ಗೌರವಗಳೇ ಆಗಿವೆ. ಕೊಂಕಣಿ ಸಮುದಾಯ ಅವರ ‘ಅಮೃತೋತ್ಸವ’ವನ್ನು ಆಚರಿಸಿರುವುದೂ ಕೃತಜ್ಞತೆಯ ಕುರುಹೇ ಆಗಿದೆ. ಇಂಥವರ ಸಂತತಿ ಸಾವಿರವಾಗಲಿ.

ಈ ಅಪೂರ್ವ ಕಥಾನಕವನ್ನು ಕನ್ನಡದಲ್ಲಿಯೇ ಸ್ವತಂತ್ರವಾಗಿ ರಚಿತವಾದ ಕೃತಿಯೋ ಎಂಬಷ್ಟು ಸಹಜ-ಸುಂದರವಾಗಿ ಕನ್ನಡಕ್ಕೆ ತಂದಿರುವ ಡಾ. ಗೀತಾ ಶೆಣೈ ಅವರು ಅಭಿನಂದನಾರ್ಹರಾಗಿದ್ದಾರೆ. ‘ವಿಶ್ವ ಕೊಂಕಣಿ ಕೇಂದ್ರ’ ಮತ್ತು ‘ವಿಶ್ವ ಕೊಂಕಣಿ ಸಾಹಿತ್ಯ ಅಕಾಡೆಮಿ’ಗಳ ಆಶ್ರಯದಲ್ಲಿ ಭಾಷಾ ಸೇತುಬಂಧದ ಇಂಥ ಕಾರ್ಯಗಳು ಇತೋಪ್ಯತಿಶಯವಾಗಿ ನಡೆಯಲಿ ಹಾಗೂ ಡಾ. ಗೀತಾ ಅವರು ಇಂಥ ಕಾರ್ಯಗಳಿಗೆ ಸ್ಫೂರ್ತಿ-ಪ್ರೇರಣೆಗಳ ಕೇಂದ್ರವಾಗಿ ಪರಿಣಮಿಸಲಿ ಎಂದು ಹಾರೈಸುತ್ತೇನೆ.

ಡಾ ಪ್ರಧಾನ ಗುರುದತ್ತ

ISBN 9789382582083

ಕೊಂಕಣಿ ಭಾಸ ಆನಿ ಸಂಸ್ಕೃತಿ ಪ್ರತಿಷ್ಠಾನ
ವಿಶ್ವಕೊಂಕಣಿ ಕೇಂದ್ರ, ಶಕ್ತಿನಗರ,
ಕೊಂಕಣಿಗಾಂವ, ಮಂಗಳೂರು - 575016